ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. | ಮಂಗಳೂರು ತಾ. ೨ನೇ ಎಪ್ರಿಲ್ ೧೯೩೭ (2–4–'37) | ಸಂಚಿಕೆ ೧೨



ಬೊಂಬಾಯಿ ಅಸೆಂಬ್ಲಿಯ ಕಾಂಗ್ರೆಸ್ ನಾಯಕರಾಗಿ ಶ್ರೀ ಖೇರ್ ಇವರನ್ನು ಬಹುಮತದಿಂದ ಚುನಾಯಿಸಿದಕ್ಕೆ ಕೆಲವು ಪತ್ರಿಕೆಗಳು ಜಾತಿಮತಗಳ ವಿಷಯ ಗಳನ್ನು ಮುಂದೆ ತರುವುದು ತುಂಬಾ ಖೇದಾಸ್ಪದದ ವಿಷಯ ನಾನು ಕಾಂಗ್ರೆಸ್ಸಿನ ಅಪ್ಪಣೆಯನ್ನು ಮನ್ನಿಸಿಯೇ ಮನ್ನಿಸುತ್ತೇನೆ—

ಶ್ರೀ ಕೆ ಎಫ್. ನರಿಮೇನ್.

“ಜನರಿಂದ ನಿರಾಕರಿಸಲ್ಪಟ್ಟವರಾಗಲೀ ರಾಜಕೀಯದಿಂದ ಸ್ವತಂತ್ರರಾದವರನ್ನಾಗಲೀ ಹಿಡಕೊಂಡು ಗವರ್ನರರು ಆಡಳಿತ ನೋಡುವುದೆಂದರೆ ಅದೊಂದು ಪ್ರಜಾದ್ರೋಹವಾದಂತೆಯೇ ಸರಿ

ಶ್ರೀ ಸತ್ಯಮೂರ್ತಿ



“ಗವರ್ನರರು ಭರವಸೆಗಳನ್ನು ಕೊಡದೆ, ಕಾಂಗ್ರೆಸ್ ಮುಖಂಡರು ಮಂತ್ರಿಪದವಿಗಳನ್ನು ತಿರಸ್ಕರಿಸಿದುದು ನವರಾಜಶಾಸನಕ್ಕೆ ಬಿದ್ದ ಮೊದಲನೇ ಏಟು ಇಂತಹ ಕೆಲವೇ ಏಟುಗಳಲ್ಲಿ ಈ ಶಾಸನವು ಮುರಿದುಬೀಳುವುದು”

ವಲ್ಲಭಭಾಯಿ ಪಟೇಲ

“ಜನತೆಯ ಮತಗಳಿಗೆ ಅಧಿಕಾರದ ರೂಪವನ್ನು ಕೊಟ್ಟಾಗ, ಆ ಜನತೆಯ ಕೋರಿಕೆಗಳನ್ನು ಪಾಲಿಸಿಕೊಂಡು ಬರುವುದು ಪ್ರತಿ ಸರಕಾರದ ಕರ್ತವ್ಯವಾಗಿದೆ. ಇದಕ್ಕೆ ತಪ್ಪಿದರೆ ಹಾನಿಯುಂಟೆಂದು ಚರಿತ್ರೆಯ ಪುಟಗಳು ಸಾರಿವೆ”

ರೈ ಆನರೆಬಲ್ ಶ್ರೀನಿವಾಸ ಶಾಸ್ತ್ರಿ.

ಮದರಾಸಿನಲ್ಲಿ ಜರಗಿದ ಹಿಂದೀ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾದ

ಶ್ರೀ ಜಮ್ನಾಲಾಲ ಬಜಾಜರು.

[illegible] ಸ್ವರಾಜ್ಯವಿದ್ದರೆ, [illegible] ಗಳ ಸಹಕಾರ [illegible] ಕಾರಣದಿಂದ, [illegible] ಬಹುಮತ ಬಂದಿರುವಲ್ಲಿ ಸಹ, ಮಂತ್ರಿಮಂಡಲ ರಚಿಸಲಾರದು.

ಂ ಂ ಂ

ಅಧಿಕಾರ ಸ್ವೀಕರಿಸುವ ಪ್ರಶ್ನೆಯನ್ನು ಕಾಂಗ್ರೆಸು ಚುನಾವಣೆಗಳಾಗುವ ಮುನ್ನ ತೀರ್ಮಾನಿಸಿದ್ದಿಲ್ಲ. ಚುನಾವಣೆಗಳ ತರುವಾಯವೇ, ಬಹುಮತವಿರುವಲ್ಲಿ ಮಾತ್ರ, ಅಧಿಕಾರ ಸ್ವೀಕರಿಸಬಹುದು; ಇತರ ಯಾವ ಪಕ್ಷಗಳೊಡನೆ ಸೇರದೆಯೆ ಕಾರ್ಯ ನಿರ್ವಹಿಸಬಹುದು ಎಂದು ನಿರ್ಧರಿಸಿತ್ತು.

ಂ ಂ ಂ

ಹಾಗೆ ಮಂತ್ರಿಮಂಡಲ ರಚಿಸುವ ಮೊದಲು, ಚುನಾವಣೆಯಲ್ಲಿ ಜನರಿಗೆ ತಿಳಿಸಿದ್ದ ಕಾರ್ಯಕ್ರಮಗಳನ್ನು ಕೌನ್ಸಿಲಿನಲ್ಲಿ ಮುಂತಂದು ಜಯಶೀಲವಾಗುವುದಕ್ಕೆ ಅಧಿಕಾರ ಸ್ವೀಕಾರವು ಸಹಾಯವಾಗುವುದೇ ಇಲ್ಲವೇ ಎಂಬುದನ್ನು ನಿರ್ಧರಿಸಲು, ಆಯಾ ಪ್ರಾಂತ್ಯದ ಗವರ್ನರರು ಆತಂಕವನ್ನೊಡ್ಡುವರೇ ಇಲ್ಲವೇ ಎಂಬುದನ್ನು ಸಹ ಅವರಿಂದ ತಿಳಿಯಬೇಕೆಂದಾಯಿತು.

ಂ ಂ ಂ ಂ

ಆಕ್ಟಿನಲ್ಲಿರುವಷ್ಟು ಸಲಿಕರಣೆ ಪಡೆದು, ಮಂತ್ರಿಗಳು ನಡೆಯಬೇಕೆಂದಿರುವಾಗ, ಹಾಗಾಗಬಾರದೆಂದು ಗವರ್ನರರು ತಡೆಯಬಹುದು. ಹಾಗೆ ತಡೆವುದೂ ಬಿಡುವುದೂ ಅವರ ಕೈಯಲ್ಲಿದೆ. ಆಕ್ಟಿನ ಮೇರೆ ಮೀರಿ ನಡೆದರೆ ಕೂಡಲೆ ತಡೆಯಬೇಕಾಗಿ ಆಕ್ಟಿನಲ್ಲಿದೆ ಹೊರತು, ಆಕ್ಟಿನ ಉದ್ದೇಶವಾದ ಪ್ರಾಂತಿಕ ಸ್ವರಾಜ್ಯದ ತತ್ವಕ್ಕೆ ಅನುಸಾರ ನಡೆವಾಗ, ಗವರ್ನರರು ಆತಂಕಿಸಬಾರದೆಂದು 'ಆಕ್ಟಿನಲ್ಲಿ' ಇದೆ. ಇದನ್ನು ಓದಿಯೇ ಬ್ರಿಟಿಷರು ಸ್ವರಾಜ್ಯ ಕೊಟ್ಟೇಬಿಟ್ಟಿದ್ದೇವೆ ಎಂದು ಗರ್ಜಿಸುವುದಿತ್ತು. ಇನ್ನೇನು ಚಳವಳಿ ಎನ್ನುವುದೂ ಇತ್ತು. ಇದನ್ನು ನಂಬಬಹುದೇ ಎಂದು ತಿಳಿಯಲು ಈಗಲೇ ಗವರ್ನರರನ್ನು, ಅವರೇ ಆಮಂತ್ರಿಸಿದ ಕಾಂಗ್ರೆಸ್ ಮುಖಂಡರು ಪ್ರಶ್ನೆಮೂಲಕ ತಿಳಿದುಕೊಂಡರು!

ಂ ಂ ಂ

ಸಹಾಯ, ಸಹಕಾರ, ಸಹಾನುಭೂತಿಯಿಂದಲೇ ನಾವು ಮುಂದೆ ರಾಜ್ಯಭಾರ ನಿರ್ವಹಿಸುವವರು! ಎಂದು ವೈಸ್ರಾಯರು ಡಿಲ್ಲಿಯಲ್ಲಿ ಹೇಳಿದ್ದೇ ತಡ, – ಎಲ್ಲ ಪ್ರಾಂತ್ಯಗಳ ಗವರ್ನರರೂ ಇದೇ ರೀತಿ ಭರವಸೆಯನ್ನಿತ್ತು ಮಾತಾಡಿದರು. ಆದರೆ, ಮುಖಂಡರು ಮಂತ್ರಿಮಂಡಲ ರಚಿಸುವ ಮೊದಲು, ತಮಗೆ ವಿಘ್ನಕರವಾಗದಂತಹ ಭರವಸೆ ಕೊಡಿರಿ ಎಂದರು. ಆಗತಾನೆ ರಗಳೆಗಿಟ್ಟಿತು!

ಂ ಂ ಂ

ಜವಾಬುದಾರಿಯ ದೆಸೆಯಿಂದ ಹಾಗೆ ವಾಗ್ದಾನಕೊಡಲು ದಾರಿಯಿಲ್ಲ ಎಂದರು ಒಬ್ಬೊಬ್ಬರೇ ಗವರ್ನರರು. ಗವರ್ನರರ ಮೇಲೆ ಬಹಳ ಜವಾಬ್ದಾರಿಯಿದೆ. ಅದನ್ನು ಪೂರೈಸಲು ಈ ಬಗೆಯ ವಾಗ್ದಾನ ಕೊಡಬರುವುದಿಲ್ಲ. ಆಕ್ಟು ಹೇಳುವ ಮೇರೆಗೆ ನಡೆಯಬೇಕಾದ ಕಾರಣ ಏನು ಮಾಡಲಾದೀತು? ಎಂದರು.

ಂ ಂ ಂ ಂ

ಸಾರಿದ ಸ್ವರಾಜ್ಯ ಎಂಬುದು ಇಷ್ಟೆ. ಮನೆಯಲ್ಲ ನಿಮ್ಮದೇ, ಚಿಂಬುಚೆಂಗಿಗೆ ಮಾತ್ರ ಮುಟ್ಟಬಾರದು; ಜವಾಬ್ದಾರಿ!

ಂ ಂ ಂ ಂ

ಕಾಂಗ್ರೆಸ್ಸಿಗೆ ಅಧಿಕ ಮತ ದೊರೆತಿರುವ ಪ್ರತಿ ಪ್ರಾಂತ್ಯದಲ್ಲೂ ಹೀಗೆಯೆ. ಲಂಡನಿನಿಂದ ಡಿಲ್ಲಿಗೂ, ಡಿಲ್ಲಿಯಿಂದ ಎಲ್ಲ ಗವರ್ನರರಿಗೂ



ದಮ್ಮು ಹೇಗೆ ನಾಶವಾಗುವದು?

ಡಾಕ್ಟರರ ದೃಷ್ಟಿಯು ಖರೇ ಗುಣ ಹೇಗಾಗುವದು ಇದರ ಕಡೆಗೆ ಇರುತ್ತದೆ.

ಡಾಕ್ಟರರನ್ನು ಯಾರೂ ವಂಚಿಸರು.

ಆದುದರಿಂದಲೇ ದಮ್ಮಿನಿಂದ ಜರ್ಜರಿತರಾದ ರೋಗಿಗಳಿಗೆ ನಾನು ಪುರೋಹಿತ ಶ್ವಾಸಹಾರಿಯ ಯೋಜನೆ ಮಾಡಿದ ಕೂಡಲೇ ಗುಣವಾಗುವದಾಗಿ ನನ್ನ ಖಾತ್ರಿಯುಂಟು. ಇದು ನಿಶ್ಚಯ.

ಚಟಕಿ ಹೊಡೆಯುವಷ್ಟರಲ್ಲಿ ದಮ್ಮು ಕಳೆಯುವನು, ದಮ್ಮು ಐದು ಮಿನಿಟಿನಲ್ಲಿ, ಕಾಲು ತಾಸಿನಲ್ಲಿ, ಅರ್ಧ ತಾಸಿನಲ್ಲಿ ಕಡಿಮೆಯಾಗುವದು, ಈ ಹೊಗೆ ಈ ಇಂಜಕ್ಷನ್ ತೆಗೆದುಕೊಂಡ ಕೂಡಲೇ ದಮ್ಮು ಓಡುತ್ತಿತ್ತು. ಹೀಗೆ ಹೇಳುವ ಅನೇಕ ಔಷಧಗಳನ್ನು ಯೋಜಿಸಿ ಅನುಭವ ಪಡೆದಿದ್ದೇನು. ಇವೆಲ್ಲ ದಮ್ಮು ಪೂರ್ಣ ಗುಣವಾಗದೆ ತೀರ ನಿರುಪಯೋಗಿ ಇದ್ದು, ಈ ಔಷಧಗಳಿಂದ ತಿರುಗಿ ಬಂದ ದಮ್ಮು ಬಹಳೇ ತ್ರಾಸದಾಯಕವಿರುವುದೆಂದು ನನ್ನ ನಿಶ್ಚಿತ ಮತವಾಗಿರುತ್ತದೆ.

ದಮ್ಮಿನ ಮೂಲ ಕಾರಣಗಳನ್ನು ಶೋಧಿಸಿ, ಅದರ ಮೇಲೆ ತನ್ನ ಪ್ರಭಾವವನ್ನು ತೋರಿಸಿ ನಿಧಾನವಾದರೂ ನಿಶ್ಚಿತ ಗುಣಕಾರಿಯಾದ ಔಷಧಗಳೇ ದಮ್ಮಿನವರನ್ನು ಉಳಿಸುವವು.

ಪುರೋಹಿತ ಶ್ವಾಸಹಾರಿಯು ದಮ್ಮಿನ ಮೂಲ ಕಾರಣ ಶೋಧಿಸಿ ದಮ್ಮು ಸಂಪೂರ್ಣ ಕಡಿಮೆ ಮಾಡತಕ್ಕ ಔಷಧಗಳಲ್ಲಿ ಅಗ್ರೇಸರವಿರುವದಾಗಿ ನನ್ನ ಅನುಭವವಿದೆ. ದಮ್ಮು, ಧಾಪ ಹತ್ತುವದು, ಮುಂಜಾವಿನ ಕೆಮ್ಮು, ಕಂಠದಾಹ ಮಾಡುವ ಹಳೇ ಕೆಮ್ಮು ಮತ್ತು ಪುಪ್ಪುಸದ ಎಲ್ಲಾ ರೋಗಗಳನ್ನೂ ನಿವಾರಿಸಲು ಪುರೋಹಿತ ಶ್ವಾಸಹಾರಿ ಪ್ಲೇನ ಉಪಯೋಗಿಸಬೇಕು. ಬದ್ಧಕೋಷ್ಠ ಮತ್ತು ಆಮ್ಲಪಿತ್ತ ಹೆಚ್ಚಾದವರು ಶ್ವಾಸಹಾರೀ ಕಂಪೌಂಡ (ಕೆಂಪು ಪ್ಯಾಕಿಂಗ) ಈ ಔಷಧ ತೆಗೆದುಕೊಂಡರೆ ಹೆಚ್ಚು ಲಾಭಕರ.

ಎಲ್ಲ ಸ್ಥಳಗಳ ಕೆಮಿಸ್ಟ, ಸ್ಟೋರ್ಸ್ ಅಂಗಡಿಗಳಲ್ಲಿ ಈ ಔಷಧವು ರೂ. ೩, ರೂ. ೧–೮–೦ ಮತ್ತು ರೂ. ೧ ಹೀಗೆ ಬೇರೆ ಬೇರೆ ಬೆಲೆಯ ಮೂರು ವಿಧ ಪ್ಯಾಕಿಂಗಗಳಲ್ಲಿ ಮಾರಲು ಸಿಗುವದು.

ಮುಂಬಯಿ ಏಜಂಟ್ಸ್–

ಓರಿಯಂಟಲ್ ಮೆಡಿಕಲ್ ಸ್ಟೋರ್ಸ್,

ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ನಂಬ್ರ ೨.

(ಹೊರಗಿನ ಊರುಗಳ ವ್ಯಾಪಾರಿಗಳು ಮುಂಬ್ಯಾ ಏಜಂಟರಿಂದ ಮಾಲು ತರಿಸಬೇಕು)

ಡಾ. ಪುರೋಹಿತ ಫಾರ್ಮಸಿ,

ಕೊಲ್ಹಾಪುರ.

ಸ್ಟೋಕಿಸ್ಟರು:– ಪೋಪ್ಯುಲರ್ ಸ್ಟೋರ್ಸ್,

ಮಂಗಳೂರು.

ಒಂದೇ ಪ್ರಕಾರದ ಒಕ್ಕಣೆಯಿಂದ ಅವರ ಉತ್ತರಗಳು ಹೊರಡುವಂತೆ ಹೇಗೂ ವ್ಯವಸ್ಥೆಯಾಗಿರುವುದನ್ನು ಕಾಣಬಹುದು. ಆಕ್ಟಿನ ಸಲ್ಲಕ್ಷಣಗಳು ವಿಶೇಷವಾಗಿರುವ ಕಾರಣವೇ, ಪ್ರಥಮದಲ್ಲಿ ಅವಲಕ್ಷಣಗಳೆಲ್ಲ ಬೇರೆ ಕಾಣಿಸಿಕೊಳ್ಳುವಂತಾಯಿತು.

ಂ ಂ ಂ ಂ

ಗೃಹಪ್ರವೇಶವಾಗುವುದರೊಳಗೆಯೆ ಮನೆ ಮುರಿದು ಬೀಳುವ ಲಕ್ಷಣಗಳು ಕಾಣುತ್ತಿರುವುದು ಶುಭವೇ! ಪ್ರವೇಶವಾಗಿ ಬೀಡುಗೊಂಡಿದ್ದ ಬಳಿಕ, ಭೂಕಂಪದಂತಾಗಿ ಒಳಗಿದ್ದವರೆಲ್ಲರೂ ಹಾನಿಹೊಂದಬೇಕಾಗಿತ್ತಲ್ಲ! ದೇವರ ದಯೆ! ಕಾಪಾಡಿದನು,–ಎಂದೇ ಈ ಪ್ರಕಟಣೆಗಳನ್ನೋದಿದವರಲ್ಲಿ ಟಿಪ್ಪಣಿದಳಾಗಿವೆ.

ಂ ಂ ಂ ಂ

ಓವಲ್‌ಟಿನ್

ಶಕ್ತಿ, ಚೈತನ್ಯಗಳನ್ನು ಕೊಡುವುದು.

ನಿಮ್ಮ ಶಕ್ತಿ, ಚೈತನ್ಯಗಳನ್ನು ಹುರುಪುಗೊಳಿಸಿರಿ. ದೇಹ ದುರ್ಬಲತೆಯಿಂದಲೂ, ನರಗಳ ಅಶಕ್ತಿಯಿಂದಲೂ ಮತ್ತು ರೋಗರುಜೆಗಳಿಂದಲೂ ನಿಮ್ಮನ್ನು ಕಾದುಕೊಳ್ಳಿರಿ.

ಸರಿಯಾಗಿಯೂ ಸುಖಕರವಾಗಿಯೂ ಇರಬೇಕಾದರೆ ಅದಕ್ಕೆ ಸರಿಯಾದ ಶಕ್ತಿ ಪುಷ್ಟಿಕರ ಆಹಾರವು ಬೇಕು. ಅಂತಹ ಪುಷ್ಟಿಕರ ಆಹಾರವು ಸಾಧಾರಣ ದಿನನಿತ್ಯದ ಆಹಾರದಲ್ಲಿ ಸಿಗಲಾರದು. ಆದರೆ, ಶ್ರೇಷ್ಠ ಆಹಾರ ಪಾನೀಯವಾದ 'ಓವಲ್ಟಿನ್' ನಲ್ಲಿ ಅಂಥ ಶ್ರೇಷ್ಠ ಆಹಾರ ಪದಾರ್ಥಗಳು ಸಮೃದ್ಧಿಯಾಗಿವೆ.

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಆಹಾರ ಪದಾರ್ಥಗಳಾದ ಪಕ್ವ ಬಾರ್ಲಿ ಸತ್ವದಿಂದಲೂ, ದನದ ಸಿಹಿ ಕೆನೆ ಹಾಲಿನಿಂದಲೂ, ತಯಾರಿಸಿದುದರಿಂದ 'ಓವಲ್ಟಿನ್'ನಲ್ಲಿ ಪರಿಪೂರ್ಣ ಪುಷ್ಟಿ ಆಹಾರಗಳನ್ನು ದೇಹಕ್ಕೆ ಬೇಕಾದಂತೆ ಪೂರೈಸಿಕೊಡುತ್ತದೆ. ಇದು ನಿಮ್ಮ ದೇಹದ ಆರೋಗ್ಯ, ಶಕ್ತಿ, ಚೈತನ್ಯಗಳನ್ನು ಹೆಚ್ಚಿಸುತ್ತದೆ. ಅಮೂಲ್ಯ ಪ್ರಕೃತೀಯ ವಿಟಮಿನ್‌ಗಳೂ ಓವಲ್ಟಿನ್‌ನಲ್ಲಿವೆ. ದೇಹದ ಸೌಖ್ಯಕ್ಕಾಗಿ ಓವಲ್ಟಿನ್ನನ್ನು ಸದಾ ಕುಡಿಯಿರಿ. ಬದಲೀಯಗಳನ್ನು ತ್ಯಜಿಸಿರಿ.

ಅನೇಕ ವರ್ಷಗಳ ವರೆಗೆ ಪರಿಶೋಧನೆ ಮಾಡಿದಾಗ, ಓವಲ್ಟಿನ್ನಿನ ಸ್ವಾಭಾವಿಕ ರುಚಿಯು ಎಲ್ಲರ ರುಚಿಗೂ ಒಪ್ಪುವಂತಹುದಾಗಿದೆ ಎಂದು ತಿಳಿಯಲ್ಪಟ್ಟಿದೆ. ಇತರ ಅನುಕರಣೆಗಳಂತೆ ಓವಲ್ಟಿನಿನಲ್ಲಿ ಅಳತೆಯನ್ನು ಹೆಚ್ಚೆಂದು ತೋರಿಸುವುದಕ್ಕಾಗಿ ಮತ್ತು ತಯಾರಿಕೆಯ ಖರ್ಚನ್ನು ಕಡಿಮೆಮಾಡುವುದಕ್ಕಾಗಿಯೂ ಸಕ್ಕರೆಯಂಥಾ ಅನ್ಯ ಪದಾರ್ಥಗಳಿಲ್ಲ. ಸಿಹಿಯು ರುಚಿಗೆ ಸಂಬಂಧಪಟ್ಟಿದ್ದು. ಆದುದರಿಂದ ಓವಲ್ಟಿನ್ನಿಗೆ ಸಕ್ಕರೆಯನ್ನು ಬೇಕಾದರೆ ಮನೆಯಲ್ಲಿ ಉಪಯೋಗಿಸಬಹುದು. ಸಕ್ಕರೆಗೆ ಆಹಾರ ಪಾನೀಯದ ಬೆಲೆ ಪಡೆವೆಂದು ಯಾರೂ ಅದಕ್ಕೆ ಹೆಚ್ಚು ಬೆಲೆಯನ್ನು ಕೊಡಲೊಪ್ಪುವುದಿಲ್ಲ.

'ಓವಲ್‌ಟಿನ್' ಪುಷ್ಟಿಕರ ಆಹಾರ ಪಾನೀಯ

OVALTINE

ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಸಿಗುತ್ತದೆ.

ಏಜಂಟರು:— ಜೇಮ್ಸ್ ರೈಟ್, 85 ಎ, ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/48

ಪದವಿ ಸ್ವೀಕಾರದ ಪ್ರಶ್ನೆಯು ಮುರಿಯಿತು!

ದಿಲ್ಲಿಯಲ್ಲಿ ನೇಶನಲ್ ಕನ್ವೇಶನ್ ಆಗಿ ಹಿಂತಿರುಗಿದ ಮದ್ರಾಸಿನ ಶಾಸನ ಸಭಾ ಸದಸ್ಯರ ಕೊಂಗ್ರೆಸ್ ಮುಖಂಡರಾದ ಶ್ರೀ ರಾಜಗೋಪಾಲಾಚಾರ್ಯರು, ಅಂದೇ ಮಾನ್ಯ ಗವರ್ನರರಿಂದ ಮಂತ್ರಿಮಂಡಳ ರಚಿಸುವ ವಿಚಾರದ ಮಾತುಕತೆಗಳಿಗಾಗಿ ಆಹ್ವಾನಿಸಲ್ಪಟ್ಟಿದ್ದರು.

ಗವರ್ನರರೊಡನೆ ಭೇಟಿ

ಆಹ್ವಾನವನ್ನು ಸ್ವೀಕರಿಸಿ ರಾಜಗೋಪಾಲಾಚಾರ್ಯರು ತಾ 27ರಲ್ಲಿ ಮಾನ್ಯ ಗವರ್ನರರಿಗೆ ಬೇಟಿ ಕೊಟ್ಟರು ಅವರೊಳಗೆ ನಡೆದ ಹತ್ತು ನಿಮಿಷಗಳ ಮಾತುಕತೆಗಳಲ್ಲಿ ಮಂತ್ರಿಮಂಡಳ ರಚನೆಯ ಪ್ರಶ್ನೆಯು ಮುರಿದು ಬಿತ್ತು

ಆಚಾರ್ಯರ ಹೇಳಿಕೆ

ಮಾತುಕತೆಗಳ ಕುರಿತು ಹೇಳುತ್ತಾ ಶ್ರೀ ಆಚಾರ್ಯರು 'ಸೌಹಾರ್ದ ಸಹಕಾರಗಳ ಹೊರತು ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲವೆಂಬ ಭರವಸೆಯನ್ನು ಕೊಡಬೇಕೆಂಬ ಈ ಕೊಂಗ್ರೆಸ್ ಕೇಳಿಕೆಯನ್ನು ಪೂರ್ಣಗೊಳಿಸಲಾರದುದರಿಂದ ಮಂತ್ರಿಮಂಡಳವನ್ನು ರಚಿಸುವ ಜವಾಬ್ದಾರಿಯನ್ನು ಹೊರಲು ನಾನು ಅಸಮರ್ಥನಾಗಿದ್ದೇನೆ ಎಂಬ ಈ ಸಂಗತಿಯನ್ನು ನಾನವರಿಗೆ ತಿಳಿಸುತ್ತೇನೆ '' ಹೀಗೆಂದು ಹೇಳಿದರು

ಗವರ್ನರರು ಭರವಸೆ ಕೊಡಲು ಏಕೆ ಒಪ್ಪಲಿಲ್ಲ

ಹಿಂದೂ ಪತ್ರಿಕಾ ಪ್ರತಿನಿಧಿಗಳ ರಾಜಗೋಪಾಲಾಚಾರ್ಯರನ್ನು ಕುರಿತು ಗವರ್ನರರು ನಿಮ್ಮ ಕೇಳಿಕೆಯನ್ನು ನಿರಾಕರಿಸಲು ಕಾರಣವೇನು? ಎಂದು ಕೇಳಿದಾಗ ಅವರು ಈ ಕೆಳಗಿನಂತೆ ಅಭಿಪ್ರಾಯಪಟ್ಟರು — ಇದರ ಗುಟ್ಟು ಇಷ್ಟೆ ಕೊಂಗ್ರೆಸಿನ ಹಿಂದೆ ಜನತೆಯ ಬೆಂಬಲವು ಎಷ್ಟಿದೆ ಎಂದು ಸರಕಾರಕ್ಕೆ ತಿಳಿಯುವ ಹಾಗೆ ಜನರ ಮಾಡಲಿಲ್ಲ ಚುನಾವಣೆಗಳಲ್ಲಿ ಸರಕಾರಕ್ಕೆ ಜನತೆಯ ಶಕ್ತಿ ... ಗೊತ್ತು ತಿಳಿದುಬಂದಿರಬಹುದು ಆದರೆ ಅದು ಸಂಪೂರ್ಣವಾಗಿ ತಿಳಿಯುವರೆ ಇನ್ನು ಮಾಡಬೇಕಾದ ಕಾರ್ಯಗಳನೇಕವಿವೆ ಆ ಮೇಲೆ ಸರಕಾರವು ತಾನಾಗಿ ಕೊಂಗ್ರೆಸಿನ ಕೇಳಿಕೆಗಳನ್ನು ಸಲ್ಲಿಸುತ್ತದೆ ಉದಾಹರಣೆಗಾಗಿ ಒಂದು ವೇಳೆ ಚುನಾವಣೆಗಳ ನಂತರ ಪತಿ ಒಬ್ಬ ಭಾರತೀಯನ ಮೈನೋಟಿ ಎದೆಯನ್ನು ನೋಡುತ್ತಿದ್ದರೆ, ಗವರ್ನರರಿಗೆ ಇಷ್ಟರ ಮಟ್ಟಿನ ಧೈರ್ಯವು ಎಂದಿಗೂ ಬರುತ್ತಿದ್ದಿಲ್ಲ

"ಈಗ ನಿಮ್ಮ ಮುಂದಿನ ಯೋಜನೆಗಳೇನು?'' ಎಂದು ಹಿಂದೂ ಪತ್ರಿಕಾ ಪ್ರತಿನಿಧಿಗಳು ಅವರನ್ನು ಕೇಳಿದರು

"ನಮ್ಮ ಮುಂದಿನ ಕಾರ್ಯಕಲಾಪಗಳನ್ನು ವಾರ್ಧಾದಲ್ಲಿ ಕೂಡಿದ ವರ್ಕಿಂಗ್ ಕಮಿಟಿಯು ಆಗಲೇ ನಿರ್ಧರಿಸಿರುತ್ತದೆ ಎಂದಿನ ತನಕ ರಾಷ್ಟ್ರೀಯ ಘಟನಾವಳಿಗಳು ಪರಿಹರಿಸಲ್ಪಡುವುದಿಲ್ಲವೊ ಅಂದಿನ ತನಕ ಅವುಗಳು ನಿಲ್ಲಲಾರವು ಎಂದಿನ ತನಕ ಪರಿಹಾರ್ಯ ವಿಷಯಗಳು ಪರಿಹರಿಸಲ್ಪಡುವುದಿಲ್ಲವೊ ಅವುಗಳು ಅಪರಿಹಾರ್ಯ ವಿಷಯಗಳಾಗಿಯೇ ಇರುವುವು ಯಾವ ಸಂಘಟನೆಯನ್ನಾದರೂ ಎದುರಿಸುವ ಕಾರ್ಯಕ್ರಮಗಳು ನಮ್ಮಲ್ಲಿ ಸಿದ್ಧವಾಗಿಯೇ ಇದೆ '' ಎಂದು ಆಚಾರ್ಯರು ಉತ್ತರ ಕೊಟ್ಟರು.

ಭೇಟಿಯ ವಿವರ

ಶ್ರೀ ಆಚಾರ್ಯರು ಬೇಟಿಯ ವಿವರಗಳನ್ನು ವಿಸ್ತಾರವಾಗಿ ತಿಳಿಸಿ, ತಾವು ಕೊಂಗ್ರೆಸ್ಸಿನ ಕೇಳಿಕೆಗಳನ್ನು ಗವರ್ನರರ ಮುಂದಿಟ್ಟಾಗ

ಗವರ್ನರರು ಭರವಸೆ ನೀಯುವದಿಲ್ಲ

ಮದ್ರಾಸಿನಲ್ಲಿ ತಾತ್ಕಾಲಿಕ ಮಂತ್ರಿಮಂಡಲ ಸ್ಥಾಪನೆ

ರಾಷ್ಟ್ರೀಯ ಕನ್ವೇನ್ಶನಿನಿಂದ ಕಳೆದ ವಾರ ಹಿಂತೆರಳಿದ ಶ್ರೀ ಸಿ ರಾಜಗೋಪಾಲಾಚಾರ್ಯರು, ಗವರ್ನರರ ಆಹ್ವಾನದ ಮೇರೆಗೆ ಮಂತ್ರಿಮಂಡಳ ರಚನೆಯ ಮಾತುಕತೆಗಳಿಗಾಗಿ ಅವರನ್ನು ಕಂಡು ಭಾರತ ರಾಷ್ಟ್ರೀಯ ಕೊಂಗ್ರೆಸ್ಸಿನ ಕೇಳಿಕೆಗಳನ್ನು ಅವರಿಗೆ ಸವಿಸ್ತಾರವಾಗಿ ತಿಳಿಸಿದರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲವೆಂಬ ಭರವಸೆಯನ್ನು ಕೊಡಲಾಗುವುದಿಲ್ಲವೆಂದು ಗವರ್ನರರು ತಿಳಿಸಿದ ಪ್ರಕಾರ ಶ್ರೀ ರಾಜಗೋಪಾಲಾಚಾರಿಯವರು ಮಂತ್ರಿಮಂಡಲವನ್ನು ರಚಿಸುವ ಜವಾಬುದಾರಿಯನ್ನು ಹೊರಲು ತಾನು ಅಶಕ್ತರೆಂದರು.

ಅವರು ಅಂತಹ ಭರವಸೆಯನ್ನು ಕೊಡಲಾರೆವೆಂದು ತಿಳಿಸಿದರೆಂದೀಗ ಆಚಾರ್ಯರ ಮಂತ್ರಿಮಂಡಳ ರಚಿಸಲಾರೆವೆಂದು ತಿಳಿಸಿದರೆಂದು ಹೇಳಿದ ಮೇಲೆ ಹೀಗೆಂದರು 'ನಾನು ಗವರ್ನರರಿಗೆ ನನ್ನ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸಿದೆ ಸೆಕ್ರೆಟರಿ ಆಫ್ ಸ್ಟೇಟ್ ಅಥವಾ ವೈಸರಾಯ ಆಕ್ಷೇಪ ... ವ ... ನ್ನು ಇಟ್ಟು ಗವರ್ನರರಿಗೆ ... ವಿಶೇಷಾಧಿಕಾರವನ್ನು ಉಪಯೋಗಿಸಲು ... ಹಕ್ಕನ್ನು ಅವರು ... ರವಾಗಿ ನನಗೆ ಗವರ್ನರ ಭರವಸೆ ಇತ್ತು ನನ್ನ ಅವರೊಳಗೆ ಒಂದು ಸಭ್ಯ ಗಹಸ್ತಿಕೆಯ ಒಪ್ಪಂದವಾಗಬೇಕೆಂದು ಕೇಳಿಕೊಂಡೆ ಅಲ್ಲದೆ ಬಹುಜನತೆ ... ತವಾದ ಕೊಂಗ್ರೆಸ್ ಪಾರ್ಟಿಯ ಮುಂದಿರ ಜನತೆಯ ಪರವಾಗಿ ಕೇಳುವ ಭರವಸೆಗಳನ್ನು ಕೊಡಲು ಗವರ್ನರರಿಗೆ ಅಧಿಕಾರವಿದೆಯೆಂಬ ಈ ವಿಷಯವನ್ನು ನಾನವರಿಗೆ ತಿಳಿಸಿದೆ ನಾವು ಮಂತ್ರಿಗಳಾಗಿ ಜನಹಿತದ ಕಾರ್ಯಗಳನ್ನು ಮಾಡಿ ನಮ್ಮ ಜವಾಬುದಾರಿಗಳನ್ನು ತೃಪ್ತಿಕರವಾಗಿ ನಿರ್ವಹಿಸಬಲ್ಲೆವು ಎಂಬ ಭರವಸೆಯು ಗವರ್ನರರಿಗೆ ಇದ್ದರೆ ಅವರು ನಮಗೆ ತಕ್ಕ ಭರವಸೆಯನ್ನು ಕೊಡಬಹುದಿತ್ತು ಈ ಭರವಸೆಯನ್ನು ಕೊಡುವ ಅಧಿಕಾರವು ಅವರಿಗೆ ಇದೆ ನಮಗೆ ಬೇಕಾದ ಈ ಹಕ್ಕನ್ನು ಅವರು ತಿರಸ್ಕರಿಸುವುದಾದರೆ ನವರಾಜಶಾಸನವನ್ನು ಅವರೇ ನಡೆಸಬೇಕು. ಇದರ ಒಟ್ಟರ್ಥವೆಂದರೆ ಹಿಂದೂಸ್ಥಾನವನ್ನು ಬ್ರಿಟಿಷರು ಇಂಗ್ಲೆಂಡಿನಲ್ಲಿ ಕೂತು ಆಳುವುದೆಂದಾಗುತ್ತದಲ್ಲದೆ ಬೇರೆ ಏನೂ ಕಾಣುವುದಿಲ್ಲ

ಮುಂದುವರಿಯುತ್ತಾ ರಾಜಗೋಪಾಲಾಚಾರ್ಯರು ಹೀಗೆಂದರು

ಬಹು ಸಂಖ್ಯಾಕರಾಗಿ ಚುನಾಯಿತರಾದ ಕೊಂಗ್ರೆಸ್ ಪಂಗಡದವರಿಗೆ ಅಧಿಕಾರವನ್ನು ವಶಪಡಿಸಿ ಸ್ವಾರ್ಥ ಸಾಧನೆಯನ್ನು ಮಾಡುವುದು ಹೆಚ್ಚಿನ ಕೆಲಸವಲ್ಲ ಆದರೆ ನಾವೀಗ ಅಧಿಕಾರ ಕೇಳುವುದು ಜನಾಂಗ ಹಿತದೃಷ್ಟಿಯಿಂದಿರುವುದರಿಂದ, ನಮ್ಮನ್ನು ಚುನಾಯಿಸಿ ಕಳುಹಿಸಿಕೊಟ್ಟ 8 ಮಿಲಿಯ ಮತದಾರರ ಪರವಾಗಿ ನಾವದನ್ನು ಕೇಳಿದೆವು ಈ ಹಕ್ಕು ನಮಗೀಗ ಅಲ್ಲಗಳೆಯಲ್ಪಟ್ಟಿರುತ್ತದೆ

"ಈಗ ನಮ್ಮ ದಾರಿಯು ಸ್ಪಷ್ಟವಾಗಿದೆ ಪಶುಬಲದ ನಗ್ನ ಶಕ್ತಿಯು ಬ್ರಿಟಿಷರ ಮುಂದಿದೆ, ಅದರಿಂದ ಅವರು ರಾಜ್ಯಾಂಗ ರಚನೆಯಿಲ್ಲದೆ ಸರಕಾರವನ್ನು ನಡೆಸಿಕೊಂಡು ಬರಲಿ ಬ್ರಿಟಿಷ ಸರಕಾರದ ಸರ್ವಾಧಿಕಾರದ ದಬ್ಬಾಳಿಕೆಯು ಗುಟ್ಟು ಈಗ ಹೊರಬಿದ್ದಂತಾಗಿದೆ ''

ಸರಕಾರದ ಪ್ರಕಟನೆ

"ಮಾನ್ಯ ಗವರ್ನರರೊಳಗೂ, ಶ್ರೀ ರಾಜಗೋಪಾಲಾಚಾರ್ಯರವರಿಗೂ ಆದ ಮಾತುಕತೆಗಳೊಳಗೆ, ಶ್ರೀ ಆಚಾರ್ಯರು, ಗವರ್ನರರು ವಿಶೇಷಾಧಿಕಾರವನ್ನುಪಯೋಗಿಸುವುದಿಲ್ಲವೆಂಬ ಭರವಸೆಯನ್ನು ಕೊಡಬೇಕೆಂದು ಕೇಳಿದಾಗ, ರಚನಾತ್ಮಕ ಸರಕಾರದ ನೀತಿಗನುಸಾರವಾಗಿ ಅದು ಅಸಾಧ್ಯವೆಂದು ಗವರ್ನರರು ಅವರಿಗೆ ತಿಳಿಸಿ ತಮ್ಮ ಸೌಹಾರ್ದ, ಸಹಕಾರ ಮತ್ತು ಬೆಂಬಲತೆಗಳ ಮೇಲೆ ಅವರು ಭರವಸೆಯನ್ನಿಡಬಹುದೆಂದಾಗ ಆಚಾರ್ಯರು ಮಂತ್ರಿಮಂಡಳ ರಚನೆಯು ತಮ್ಮಿಂದ ಅಸಾಧ್ಯವೆಂದರು ಕೊಂಗ್ರೆಸ್ಸಿನ ಈ ಭರವಸೆಯ ಕೇಳಿಕೆಗಳನ್ನು ಈಯಲು ಗವರ್ನರರಿಗೆ ಸ್ವಂತ ಮನಸ್ಸಿದ್ದರೂ ಬ್ರಿಟಿಷ ಪಾರ್ಲಿಮೆಂಟಿನ ಕಾನೂನಿನ ಅವರನ್ನು ಹಾಗೆ ವರ್ತಿಸಲು ಬಿಡುವುದಿಲ್ಲವೆಂದೂ ಅವರು ತಿಳಿಸಿದರು

'ಈಗ ಕೊಂಗ್ರೆಸ್ಸು ಮಂತ್ರಿಮಂಡಳರಚನೆಗೆ ಒಪ್ಪಿಲವಾದುದರಿಂದ ಮುಂದೆ ಈ ವಿಚಾರವನ್ನು ಪರ್ಯಾಲೋಚಿಸಲಿಕ್ಕಿದೆ ಅಷ್ಟರವರೆಗೆ ಇನ್ನೊಂದುಮಂತ್ರಿಮಂಡಲವು ತಾತ್ಕಾಲಿಕವಾಗಿ ರಚನೆಯಾಗಬೇಕು ಇದು ಶಾಸನ ಸಭೆಯ ನಂಬಿಕೆಗೆ ಪಾತ್ರವಾದದ್ದಾಗಿರಬೇಕು'

ಬೊಂಬಾಯಿಯಲ್ಲಿ

ಮದ್ರಾಸಿನಲ್ಲಿ ನಡೆದ ಪ್ರಕಾರವೆ ಬೊಂಬಾಯಿಯಲ್ಲಿಯೂ ನಡೆಯಿತು ಅಲ್ಲಿಯ ಕಾಂಗ್ರೆಸ್ ಮುಖಂಡರಾದ ಶ್ರೀ ಬಿ ಜಿ ಖೇರ್‌ರವರು ಗವರ್ನರರ ಆಹ್ವಾನದ ಮೇರೆಗೆ ಅವರನ್ನು ಬೇಟಿ ಮಾಡಿ ಯಥಾಪ್ರಕಾರ ಮಾತುಕತೆಗಳಾಗಿ ಗವರ್ನರರ ಭರವಸೆಯನ್ನು ಕೊಡಲೊಪ್ಪದಿದ್ದುದರಿಂದ ಶ್ರೀ ಖೇರರು ಮಂತ್ರಿಮಂಡಳವನ್ನು ರಚಿಸುವುದಿಲ್ಲವಾಗಿ ತಿಳಿಸಿದರು

ಇದೇ ಪ್ರಕಾರ ಒರಿಸ್ಸಾ ಗವರ್ನರರು ಅಲ್ಲಿನ ಕೊಂಗ್ರೆಸ್ ಮುಖಂಡರಾದ ಶ್ರೀ ಬಿಶ್ವನಾಥ ದಾಸರಿಗೆ ಬೇಕಾದಭರವಸೆಯನ್ನು ಕೊಡಲೊಪ್ಪದಿದ್ದುದರಿಂದ ಆ ಪ್ರಾಂತ್ಯದಲ್ಲಿಯೂ ಮಂತ್ರಿಮಂಡಳ ರಚನೆಯ ಯೋಜನೆಯು ಮುರಿದುಬಿದ್ದಿರುತ್ತದೆ

ಮಂತ್ರಿಮಂಡಳ ರಚನೆಯನ್ನು ಕೊಂಗ್ರೆಸ್ ಮುಖಂಡರು ಮಾಡುವುದಿಲ್ಲವೆಂದಾದ ಮೇಲೆ ಆಯಾ ಪ್ರಾಂತ್ಯದ ಗವರ್ನರರುಗಳು ಇತರ ಪಂಗಡದ ಮುಖಂಡರಿಗೆ ಆಹ್ವಾನವಿತ್ತು ಸರಕಾರ ರಚನೆಯಲ್ಲಿ ತಮಗೆ ಸಹಾಯ ನೀಡಬೇಕೆಂದು ಕೇಳಿಕೊಂಡರು.

ಮದ್ರಾಸಿನಲ್ಲಿ ಗವರ್ನರರು ಶ್ರೀ ವಿ ಎಸ್ ಶ್ರೀನಿವಾಸ ಶಾಸ್ತ್ರಿಗಳನ್ನು ಕೇಳಿಕೊಂಡರು ಈಗಿನ ಸಂದರ್ಭಗಳಲ್ಲಿ ಮಂತ್ರಿಮಂಡಳ ರಚನೆಯು ತನಗೆ ಅಸಾಧ್ಯವೆಂದು ಶ್ರೀ ಶಾಸ್ತ್ರಿಗಳು ಗವರ್ನರರಿಗೆ ತಿಳಿಸಿದರು

ಮಾಜಿ ಗವರ್ನರರಾದ ಕೆ ವಿ ರೆಡ್ಡಿಯವರು ಮಂತ್ರಿಮಂಡಳ ರಚಿಸುವರು

ಗವರ್ನರರು ಕೆ ವಿ ರೆಡ್ಡಿಯವರಿಗೆ ಆಹ್ವಾನ ಕಳುಹಿಸಿದರು. ಸರ್ ಕೆ ವಿ ರೆಡ್ಡಿಯವರು ಗವರ್ನರರ ಆಹ್ವಾನದ ಮೇರೆಗೆ ಮಂತ್ರಿಮಂಡಳವನ್ನು ರಚಿಸುವರು

ಬಿಹಾರಿನಲ್ಲಿಯೂ ಶ್ರೀ ಕೃಷ್ಣ ಸಿನ್ಹಾರವರು ಗವರ್ನರರೊಡನೆ ಬೇಟಿ ನಡೆಸಿದಾಗ, ಅವರು ಬೇಕಾದ ಭರವಸೆಗಳನ್ನು ಕೊಡಲು ಸಮರ್ಥಿಸಲಿಲ್ಲವಾದುದರಿಂದ, ಶ್ರೀ ಸಿನ್ಹಾರವರು ಕೊಂಗ್ರೆಸ್ ಅಪ್ಪಣೆಯಂತೆ ಮಂತ್ರಿಮಂಡಲ ರಚನೆಯನ್ನು ಮಾಡುವುದಿಲ್ಲವಾಗಿ ತೀರ್ಮಾನಿಸಿದರು.

ರಾಷ್ಟ್ರಪತಿಗಳ ಪ್ರಕಟನೆ

ಪಂ ಜವಾಹರಲಾಲ ನೆಹರುಗಳು ಒಂದು ಪ್ರಕಟನೆಯಲ್ಲಿ, ಮಂತ್ರಿಮಂಡಳ ರಚನೆಯ ಮಾತುಕತೆಗಳ ಮುರಿತದ ವಿಚಾರ ಹೇಳುತ್ತಾ ಅಲ್ಪ ಸಂಖ್ಯಾತ ಪಂಗಡದ ಮುಖಂಡರಿಗೆ ಗವರ್ನರರು ತಮ್ಮ ವಿಶೇಷಾಧಿಕಾರಗಳಿಂದ ವಶಪಡಿಸಿಕೊಂಡ ಸಂಗತಿಯನ್ನು ಪ್ರಸ್ತಾಪಿಸಿರುವರು ನವರಾಜ ಶಾಸನವು ಒಂದು ಪ್ರಹಸನವೆಂದೂ, ಪ್ರಜಾಪ್ರಭುತ್ವದ ಮುಸುಕಿನಲ್ಲಿರುವ ದಬ್ಬಾಳಿಕೆಯ ಶಾಸನವು ಇದೆಂದೂ ಅವರ ಟೀಕಿಸಿರುತ್ತಾರೆ "ಮಂತ್ರಿಮಂಡಳದ ಮುರಿತದೊಂದಿಗೆ, ನವರಾಜ ಶಾಸನವು ಹಾಕಿಕೊಂಡ ಪ್ರಜಾಪ್ರಭುತ್ವದಪರದೆಯು ಸೀಳಿದಂತಾಗಿ ಅದರ ಅಸಹ್ಯ ರೂಪವು ಕುರುಡನಿಗೂ ಕಾಣುವಂತಾಯಿತು' ಎಂದು ಅವರು ಹೇಳಿರುತ್ತಾರೆ ಮುಂದೆ ವರಿಯುತ್ತಾ ಪಂಡಿತರು "ನಾವು ನವ ರಾಜಶಾಸನದೊಡನೆ ಹೋರಾಡಿ ಅದನ್ನು ಮುರಿಯಲಿದ್ದೇವೆ ಈ ಗುರಿಯಿಟ್ಟು ನಾವೀಗ ಕೆಲಸ ಮಾಡಬೇಕು ಇದರ ಕುರಿತು ನಮ್ಮ ಜವಾಬು ಎಪ್ರಿಲ್ ಮೊದಲನೇ ತಾರೀಕಿನಂದೇ ಬರಬೇಕು'' ಎಂದು ಮುಗಿಸಿರುವರು

ಗವರ್ನರರು ಈಗ ಮಿ। ಮಹಮ್ಮದ್ ಯುನೂಸ್‌ರನ್ನೂ ಸರ್ ಗಣೇಶ್‌ದತ್ ಸಿಂಗರನ್ನೂ ಆಹ್ವಾನಿಸಿದ್ದಾರೆ ಇವರ ತರ್ಪಿನ ಪಂಗಡದ ಬಲವು ಒಟ್ಟು 20 ಇದೆ.

ಸಂಯುಕ್ತ ಪ್ರಾಂತ್ಯ

ಕೊಂಗ್ರೆಸ್ ಪಾರ್ಟಿಯ ಮುಖಂಡರಾದ ಶ್ರೀ ಗೋವಿಂದವಲ್ಲಭ ಪಂತ್‌ರವರು ಅದೇ ಕಾರಣಗಳ ಮೇಲೆ ಮಂತ್ರಿ ಪದವಿಗಳನ್ನು ತಿರಸ್ಕರಿಸಿದರು

ಈಗ ಅಲ್ಲಿನ ಗವರ್ನರರು ಚತ್ಕಾರಿಯ ನವಾಬರನ್ನು ... ಖಲಿಕುಜಾಮನ್‌ರನ್ನು ಆಹ್ವಾನಿಸಿರುವರು. ಖಲಿಕುಜಾಮನ್ ಗವರ ಆಹ್ವಾನವನ್ನು ತಿರಸ್ಕರಿಸುವರೆಂದು ತಿಳಿಯಲಾಗಿದೆ

ಒರಿಸ್ಸಾ

ಇಲ್ಲಿನ ಶಾಸನ ಸಭೆಯ ಮುಖಂಡರಾದ ವಿಶ್ವನಾಥ ದಾಸರು ಮಂತ್ರಿ ಪದವಿಗಳನ್ನು ತಿರಸ್ಕರಿಸಿದರು

ಮಾಜಿ ಗವರ್ನರರಾದ ಶ್ರೀ ರಾಜೇಂದ್ರ ರಾಯರು ಮಂತ್ರಿಮಂಡಳ ರಚನೆಯನ್ನು ಮಾಡುವರಂತೆ

ಬೊಂಬಾಯಿ

ಶ್ರೀ ಖೇರ್‌ರವರ ತಿರಸ್ಕಾರದ ನಂತರ ಅಲ್ಲಿಯ ಗವರ್ನರರು ಸರ್ ಎಂ ಎಂ ಕೆ ಡ್ಡೆಲವಿಯವರನ್ನು ಆಹ್ವಾನಿಸಿದಾಗ ಅವರು ತಮಗೆ ಹೆಚ್ಚಿನ ಬೆಂಬಲ ಸಿಗಲಾರದೆಂದು ತಿರಸ್ಕರಿಸಿರುವರು

ಸರ್ ಡಿ ಬಿ ಕೂಪರ್‌ರವರು ಬೊಂಬಾಯಿಯಲ್ಲಿ ಮಂತ್ರಿಮಂಡಳವನ್ನು ರಚಿಸುವರೆಂದು ತಿಳಿದುಬಂದಿದೆ

ಮಂತ್ರಿಪದವಿ ಪ್ರಶ್ನೆಗಳ ಮುರಿತದ ವಿಚಾರ ಕುರಿತು

ವಲ್ಲಭಭಾಯಿ ಪಟೇಲರು ತಮ್ಮ ಚಿಂತೆಯು ಸ್ವಲ್ಪ ಕಡಿಮೆಯಾಯಿತೆಂದೂ, ನವರಾಜ ಶಾಸನಕ್ಕೆ ಕೊಟ್ಟ ಮೊದಲನೇ ಏಟಿನಿಂದಲೇ ಕೊಂಗ್ರೆಸ್ಸಿಗೆ ನೈತಿಕ ವಿಜಯವುಂಟಾಗಿದೆಯೆಂದೂ ಮತ್ತು ಇಂತಹ ಕೆಲವೇ ಏಟುಗಳಲ್ಲಿ ನವರಾಜ ಶಾಸನವು ಮುರಿದುಬೀಳುವುದೆಂದೂ ಹೇಳಿದರು

Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ರೈಲು ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ಮುಟ್ಟುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ. 2.40
ಕಟಿಲ್	ಸಂಜೆ 5 25	ಬೆಳಗ್ಗೆ 9.25
ಶಾಂಘಾಂಗಾಡ್ ಪೆಸೆಂಜರು	ಬೆ. 8 25	ಮ. 1 20
ಕಾಸರಗೋಡು ಪೆಸೆಂಜರು	ಸಂಜೆ 8 20	

ಬಹಳ ಕಡಿಮೆಯಾದ ಕ್ರಯ.
ಆಟೊಮೆಟಿಕ್ ಅಲಾರಂ ಪಿಸ್ತಲ್



ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕುಂಡಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುತ್ತದು ಇದು ಒಂದು ನಮ್ಮಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದದರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೨ ಬೆಲೆ ಹುಸಿದ ಸ್ಪಾರ್ಕ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತೂಲು ೧೦೦ ತೋಟೆಗಳ ಸಹಿತ ೭—೮—೦ ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,
ನಂ ೩ ಏಬುಟಪ್ಪ ಬೀದಿ ಮದ್ರಾಸು

ಕಳೆದ 30 ವರ್ಷಗಳಿಂದಲೂ
ಎಡೆಬಿಡದೆ ಕನ್ನಡ ನಾಡಿನ ಸೇವೆಮಾಡು
ತ್ತಿರುವ—ಶ್ರೇಷ್ಠ ವಾರಪತ್ರಿಕೆಯಾದ

"ಸ್ವದೇಶಾಭಿಮಾನಿ

ಪತ್ರಿಕೆಗೆ ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ.

ಮೂಡಬಿದ್ರಿ, ಉಡುಪಿ, ಕಟಪಾಡಿ ಮತ್ತು ಚಿಕ್ಕಮಗಳೂರು ಮುಖ್ಯವಾಗಿ ಇನಿತರ ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ವದೇಶಾಭಿಮಾನಿಯ ಬಿಡಿ ಸಂಚಿಕೆಗಳನು ಮಾರಲು ಏಜಂಟರುಗಳು ಬೇಕಾಗಿದ್ದಾರೆ ಶರ್ತಗಳಿಗಾಗಿ ಬರಕೊಳ್ಳಿರಿ

ಸ್ವದೇಶಾಭಿಮಾನಿ ಕಾರ್ಯಾಲಯ,
ರಥಬೀದಿ, ಮಂಗಳೂರು

ಸರಕಾರದಲ್ಲಿ ರಜಿಸ್ಟರಮಾಡಲ್ಪಟ್ಟ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ
ಅರ್ಕಶಫಾ ಅಥವಾ ಆರೋಗ್ಯಬಿಂದು.

ರೋಗದ ನಾಮಗಳು —ಕ್ಷಯ ರೋಗ, ಜಾಂಡಿಸ್ ರೋಗ, ಹಡೆದ ನಂಜು ದಮ್ಮು, ಅತಿಗೈ ಕಾಲರಾ, (ಮ್ಯಾರಿಶ್ಯಾ) ಪ್ಲೇಗು ಇನ್ ಫ್ಲುಯಂಜಾ ಜ್ವರ ಅನೇಕ ಪ್ರಕಾರದ ಜ್ವರ ಗುಲ್ಮರೋಗ, ಮೂಲ ರೋಗ, ಗಂಡುಮಾಲೆ ವಾರಹುಣ್ಣು, ಶಸ್ತ್ರಘಾಯ, ಶಿವಿಶೂಲೆ, ಮೂಗಿನೊಳಗಿನ ತಿನಿಸಿ ಮೊದಲಾದುವುಗಳು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ ಸಣ್ಣ ಕೂಸುಗಳಿಗೆ ಆದ ರೋಗಗಳು ಅರುವಿ, ಮುಟ್ಟುದೋಷ ಹೊಟ್ಟೆ ದೊಡ್ಡದಾಗೋಣ ಕೋಡ ಗೆಜ್ಜು ಮೈ ಹೊರಬೀಳೋಣ, ಮತ್ತು ಡಾಕ್ಟರರಿಗೂ ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವುದು ಬೇಳು ಸರ್ಪ ಕಚ್ಚಿದ್ದಕ್ಕೆ ತತ್‌ಕ್ಷಣ ಗುಣಬರುವದು ಅನೇಕ ರೋಗಗಳಿಗೆ ಒಂದೆ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು ಅಂಥವರು ಒಂದು ಸಾರಿ ತಂದು ಪರೀಕ್ಷಿಸಬೇಕು ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತವೆ

೧। ತೊಲೆ ಬಾಟ್ಲಿ ಒಂದಕ್ಕೆ ರೂ ೨ ನವ ಜನ ಉದ್ದೇಶಿ ೫ ಅ ತೊಲದ ಬಾಟ್ಲಿ ಒಂದಕ್ಕೆ ೮ ಆ ಚಿಕ್ಕ ಬಾಟ್ಲಿ ಒಂದೇ ಸಾರಿ ಒಂದು ಡಜನ್ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು ಟಪಾಲು ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥಾ ಮಾಡಿದೆ ಟಪ್ಪಾಲ ಖರ್ಚು ೧೧ ಆಣೆ. ೧। ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು ಟಪ್ಪಾಲ ಖರ್ಚು ೧೧ ಆಣೆ ಬೀಳುವುದು ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ ಸಣ್ಣ ಬಾಟ್ಲಿ ಒಂದೇ ಬೇಕಾದರ ಅರ್ಧ ಆಗದು ಟಪ್ಪಾಲ ಖರ್ಚು ೮ ಆಣೆ ಒರುವುದು ಕನಿಷ್ಟ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ ಟ ಖರ್ಚು ೮ ಆಣೆ ಬೀಳುವುದು.

ತಿಳಿಯ್ಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು ಬಾ ಯ ಕೂಡ ಕಳಿಸುವೆವು ಔಷಧವು ಖೊಟ್ಟಿಯಾಗಿ ತೋರಿದರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು ನಮ್ಮ ಅರ್ಕಶಫಾದಂತೆ ಬನಾವಟ ಮಾಲು ತಯಾರುಮಾಡುತ್ತಾರೆ ನಮ್ಮ ಫೊಟೊ ಮತ್ತು ಜಾಹಿರಾತ ನೋಡಿ ತಕ್ಕೊಳ್ಳಬೇಕು ಏಜಂಟ ವಗೈರೆ ಯಾರೂ ಇಲ್ಲ ವಸ್ತುಗಳು ಪರೀಕ್ಷೆಮಾಡಿ ತಕೊಳ್ಳಬೇಕು ಬೇಕಾದವರು ತಮ್ಮ ವಿಳಾಸ ಕನ್ನಡ ಮರಾಠಿ, ಇಂಗ್ಲೀಷ ಮುಗಳಲ್ಲಿ ಸ್ಪಷ್ಟ ಬರೆಯಬೇಕು, ತಮ್ಮ ಹೆಸರು ತಂದೆಯ ಹೆಸರು ಅಡ್ಡಹೆಸರು ಇರುವ ಗ್ರಾಮ ಪೋಸ್ಟಾಫೀಸು ತಾಲೂಕು, ಜಿಲ್ಲೆ ಸ್ಟೇಟ ಎಲ್ಲ ಖುಲಾಸ ಬರೆಯಬೇಕು

ನಮ್ಮ ವಿಳಾಸ — ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೊ ಶಹಾಪೂರ [ಬೆಳಗಾಂವಿ]

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

- ಗುಡಪಿಪ್ಪಲಿ — ಮಕ್ಕಳ ಲಿವರ್ ರೋಗಕ್ಕೆ
- ಗರ್ಭಪಾಲ — ಗರ್ಭಶೂಲೆ, ಗರ್ಭಸ್ರಾವಕ್ಕೆ
- ಚಂದ್ರಮಸ್ — ವಾಂತಿಭೇದಿ, ಅತಿಸಾರಕ್ಕೆ
- ಕೃಷ್ಣಾರಕ್ — ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
- ವೃದ್ಧಿಕಾಸವ — ನಿತ್ರಾಣಕ್ಕೆ
- ಮಹಾಮದನ ಕಾಮೇಶ್ವರಿ ಲೇಹ್ಯ — ನಪುಂಸಕತ್ವ, ಧಾತುಕ್ಷೀಣತೆಗೆ
- ಭುವನಾಂಜನ ಪೈನ್‌ಬಾಮ್ — ಶಾರೀರಕ ನೋವುಗಳಿಗೆ
- ರಸಬಿಂದು — ಸ್ತ್ರೀ ಸಂಬಂಧ ವ್ಯಾಧಿಗಳಿಗೆ
- ಹಿಮಸಾಗರ ತೈಲ — ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಸುಶೀಲೆಯು ಸತ್ತಳೇ?

(ಲೇಖಕ:— ಶ್ರೀಯುತ ಕೆ. ಕೇಶವ ಕುಡುವ, ಅಧ್ಯಾಪಕ—ಉಡುಪಿ.)

೧

"ಅಮ್ಮಾ" ಎಂದಳು, ಮುತ್ತಿನಂಥ ಮುದ್ದುಬಾಲೆ ಸುಶೀಲೆ.

"ಸುಶಿ; ಏನಮ್ಮಾ? ನಿನಗೇನು ಬೇಕು? ಮಾತೆಯು ಕೇಳಿದಳು.

"ಅದೇಕಮ್ಮಾ, ನೀನು ನನ್ನನ್ನು ನೋಡಿದೊಡನೆಯೇ ಅಳಲಾರಂಭಿಸುವೆ?

"ಮಗೂ; ಯಾವುದಕ್ಕೆಂದು ಹೇಳಲಮ್ಮಾ, ನಿನ್ನ ಭಾಗ್ಯರವಿಯು ಅಡಗಿದನಲ್ಲಾ.

"ಅಯ್ಯೋ! ನಿನ್ನ ದೌರ್ಭಾಗ್ಯವೇ?" ಎಂದು ಹೇಳುತ್ತಾ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸಿದಳು.

"ಹಾಗೆಂದರೇನಮ್ಮಾ? ಭಾಗ್ಯರವಿಯು ಅಡಗಿದನೆಂದರೆ? ನೀನು ಏನು ಹೇಳುವಿಯೋ ಏನೋ ಮುಗ್ಧೆಯಾದ ಸುಶೀಲೆಯು ನುಡಿದಳು.

"ಮುದ್ದು; ನೀನು ವಿಧವೆಯಮ್ಮಾ, ನಿನಗಿನ್ನು ಗಂಡನಿಲ್ಲ"

"ಗಂಡನೆಂದರೆ ಯಾರಮ್ಮಾ? ನನ್ನ ಗಂಡನಾರು?"

"ಮಗೂ, ಯಾರೆಂದು ಹೇಳಲಿ? ಅಹ. ನಿನಗಾದರೋ ಹೇಗೆ ತಾನೆ ತಿಳಿಯಬೇಕು" ತಾಯಿಯು ಮುಂದಿನ ನುಡಿಗಳನ್ನು ಉಚ್ಚರಿಸಲಿಲ್ಲ.

ಪಾಪ, ಯಾವುದರ ಅರಿವೂ ಇಲ್ಲದ ಆ ಪುಟ್ಟ ಬಾಲೆಗೆ ಗಂಡನೆಂದರೆ ಯಾರು? ವಿಧವೆಯೆಂದರೇನು? ಎಂಬ ವಿಷಯಗಳ ಅರ್ಥವು ತಿಳಿಯುವಂತಿಲ್ಲ. ಅವಳು ತಾಯಿಯೊಡನೆ ಮತ್ತೂ ತರ್ಕಿಸತೊಡಗಿದಳು 'ಅಮ್ಮಾ, ಮುಂಚೆ ನೀನು ನನಗೆ ಪ್ರತಿದಿನವೂ ಬಗೆಬಗೆಯ ಪದಗಳನ್ನು ಕಲಿಸಿಕೊಡುತ್ತಿದ್ದೆ. ಈಗ ನೀನು ನನ್ನೊಡನೆ ಸರಿಯಾಗಿ ಮಾತಾಡುವುದೇ ಇಲ್ಲ. ಒಂದು ಶೋಭಾನೆಯನ್ನು ಕಲಿಸಿಕೊಡಮ್ಮ! ನಾಳೆದು ಅಲ್ಲಿಯ ಮದುವೆಯ ಸಮಯದಲ್ಲಿ ನಾನು ಹೇಳಬೇಡವೆ?'

"ಮಗೂ ವಿಧವೆಯರು ಈ ರೀತಿಯಲ್ಲಿ ಮಾತಾಡಬಾರದು. ಮದುವೆಗೆ ಹೋಗಿ, ಶೋಭಾನೆಯನ್ನು ಹೇಳುವ ಭಾಗ್ಯವು ನಿನ್ನಲ್ಲಿಲ್ಲವಮ್ಮಾ"

"ಅಂದರೆ ಹೊಸ ಸೀರೆಯೂ ಕೂಡ ನನಗೆ ಬೇಡವೆನ್ನುವಿಯೋ?"

ಸುಶೀಲೆ ನೀನು ಶೃಂಗಾರಗಳ ಕಡೆಗೆ ಗಮನ ಕೊಡಬಾರದು. ಹೊಸ ಸೀರೆಯನ್ನುಟ್ಟುಕೊಳ್ಳುವ ಭಾಗ್ಯವನ್ನು ಪರಮಾತ್ಮನು ನಿನಗೆ ದಯಪಾಲಿಸಲಿಲ್ಲ. ಏನು ಮಾಡಲಿ?"

"ಯಾವಾಗ ನೋಡಿದರೂ ನಿನ್ನ ಬಾಯಲ್ಲಿ ಒಂದೇ ಪದ. ಬೇರೆ ಮಾತಾಡಲು ನಿನಗೆ ಗೊತ್ತೇ ಇಲ್ಲ. ವಿಧವೆಯಂತೆ, ಭಾಗ್ಯವಿಲ್ಲವಂತೆ. ನಿನಗೆ ಮಾತ್ರ ಭಾರೀ ಭಾಗ್ಯವಿದೆ. ನೀನು ಮಾತ್ರ ಒಳ್ಳೆಯ ಸೀರೆಯನ್ನುಟ್ಟುಕೊಂಡು—ಚಂದದ ರವಕೆಯನ್ನು ತೊಟ್ಟುಕೊಂಡು ಹಣೆಯ ಮೇಲೆ ಕುಂಕುಮದ ಬೊಟ್ಟನ್ನಿಟ್ಟುಕೊಂಡು ಸಂತೋಷಪಡಬಹುದು. ನಾನು ಮಾತ್ರ ಕೂಡದು. ಅಬ್ಬ! ನೀನೇ"

ರುಕ್ಮಿಣಿಯು ತನ್ನ ಪ್ರೇಮದ ಕುವರಿಯ ಮುಗ್ಧತೆಯನ್ನು ನೋಡಿ ಬಹಳ ವ್ಯಸನಪಟ್ಟಳು. "ಅಯ್ಯೋ! ನನ್ನ ಮುದ್ದುಮಗಳ ಗತಿಯು ಹೀಗಾಗಬೇಕೇ?" ಎಂದುಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು. ಆದರೆ ಮಾಡುವುದಾದರೂ ಏನು?

೨

ಸುಶೀಲೆಯು ಮಂಗಳೂರಿನ ಪ್ರಸಿದ್ಧ ಆಭರಣ ವ್ಯಾಪಾರಿಗಳಾದ ರಾಜೇಂದ್ರರಾಯರ ಪುತ್ರಿಯು. ರುಕ್ಮಿಣಿಯೇ ಸುಶೀಲೆಯ ತಾಯಿ. ಸುಶೀಲೆಗೆ ಬರೀ ಎಂಟು ವರ್ಷ ತುಂಬಿದೊಡನೆಯೇ, ರಾಜೇಂದ್ರರಾಯರು ತನ್ನ ಪತ್ನಿಯ ಉತ್ಕಟೇಚ್ಛೆಯಂತೆ, ಬಸರೂರಿನ ಸುಪ್ರಸಿದ್ಧ ಸಾಹುಕಾರರಾದ ರಾಮಾಚಾರ್ಯರ ಏಕಮಾತ್ರ ಪುತ್ರ ಚಂದ್ರ (ಸಂಪೂರ್ಣ ಹೆಸರು ರಾಮಚಂದ್ರ)ನಿಗೆ ತನ್ನ ಮುದ್ದು ಮಗಳಾದ ಸುಶೀಲೆಯನ್ನು ಕೊಟ್ಟು, ವಿವಾಹ ಮಾಡಿದರು. ಚಂದ್ರನು ಕಳೆದ ನಾಲ್ಕಾರು ತಿಂಗಳುಗಳ ಹಿಂದೆ ಪ್ರೌಢವಿದ್ಯಾಭ್ಯಾಸವನ್ನು ಪಡೆಯುವುದಕ್ಕಾಗಿ ಅದೊಂದು ಕಾಲೇಜಿಗೆ ಸೇರಿದವನಾಗಿದ್ದನು. ಈತನು ಸುಂದರನೂ, ಸುಗುಣನೂ, ಹಿರಿಯರ ಮೇಲೆ—ಪೂಜ್ಯಭಾವವುಳ್ಳವನೂ ಆಗಿದ್ದನು. ಆದ ಪ್ರಯುಕ್ತವೇ ರಾಜೇಂದ್ರರಾಯರು ಈತನನ್ನೇ ವರನನ್ನಾಗಿ ಆರೈಸಿದ್ದರು.

ಆದರೇನು? ಮದುವೆಯಾದ ಬರೀ ಒಂದು ತಿಂಗಳಲ್ಲಿಯೇ ಚಂದ್ರನು ಕಠಿಣ ಜ್ವರದಿಂದ ದೈವಾಧೀನನಾದನು. ಸುಶೀಲೆಯಾಗ ಏನನ್ನೂ ತಿಳಿಯದ ಪುಟ್ಟಬಾಲೆ. ಅವಳಿಗೆ ಮದುವೆಯೆಂದರೇನೆಂಬುದೇ ತಿಳಿದಿದ್ದಿಲ್ಲ. ಅಹ ಬಾಲ್ಯದಲ್ಲಿಯೇ ಮದುವೆಯಾಗಿ ಪತಿಯನ್ನಗಲಿದ ಸುಶೀಲೆಯ ದುರ್ಭಾಗ್ಯವೇ? ವಾಚಕರೇ ಸುಶೀಲೆಯ ಸ್ಥಿತಿಯನ್ನು ನೋಡಿ ನಿಮಗೂ ಅಳುಬರುವುದಿಲ್ಲವೇ?

೩

ಸುಶೀಲೆಯು ಬಾಲ್ಯವನ್ನು ಕಳೆದು ತಾರುಣ್ಯವನ್ನು ಪಡೆದಳು. ಅವಳೀಗ ನವಯೌವನ ಭರಿತೆಯಾದ ತರುಣಿ. ಲಾವಣ್ಯದಿಂದ ತುಂಬಿತುಳುಕುತ್ತಿರುವ ಸುಕುಮಾರಿ. ಅವಳೀಗ ತಾನು ಯಾರೆಂಬುದನ್ನು ತಿಳಿದಿರುವಳು. ಒಮ್ಮೊಮ್ಮೆ ಅವಳು ಮನೆಯೊಳಗಣ ಏಕಾಂತವಾದ ಕೋಣೆಯಲ್ಲಿ ಕೂತುಕೊಂಡು ಏನೇನೊ ಆಲೋಚಿಸುವಳು. ಆಗ ಅವಳು ತನ್ನ ಸ್ಥಿತಿಗತಿಗಳನ್ನು ಸ್ಮರಣೆಗೆ ತಂದುಕೊಂಡು ಕಣ್ಣೀರು ಸುರಿಸುವಳು. ಅಹ ಇಂದು ನನಗೆ ಪತಿ ಇರುತ್ತಿದ್ದರೆ ಅದೆಷ್ಟು ಸುಖವನ್ನನುಭವಿಸುತ್ತಿದ್ದೆನು. ಪತಿಸೇವೆಯನ್ನು ಎಡಬಿಡದ ಭಕ್ತಿಯಿಂದ ಗೈದು ಅದೆಷ್ಟು ಸಂತೋಷವನ್ನು ಪಡುತ್ತಿದ್ದೆನು" ಎಂದೆನ್ನುತ್ತಾ ಮರುಗುವಳು.

ಹೀಗೆಯೇ ಕೆಲವು ದಿನಗಳು ಕಳೆದುವು. ಸುಶೀಲೆಯ ವಿಷಯವಾಗಿ ನೆರೆಕರೆಯ ಜನರು ಏನೇನೋ ಆಡತೊಡಗಿದರು. "ಕಲಿಕಾಲವಪ್ಪಾ, ಕಲಿಕಾಲ, ಇಲ್ಲದಿದ್ದರೆ ಆ ಹುಡುಗಿಯ ಗಂಡ ಸತ್ತು ವರ್ಷ ಎಂಟು ದಾಟಿದರೂ ಇನ್ನೂ ಕೂದಲನ್ನು ಇಟ್ಟುಕೊಂಡು ಹೇಗೆ ಮೆರೆಯುತ್ತಾಳೆ. ಹೆತ್ತವರಿಗಾದರೂ ಬುದ್ಧಿ ಇಲ್ಲವೇ?" ಎಂಬುದಾಗಿ ಜನರು ಬಗೆಬಗೆಯಲ್ಲಿ ಟೀಕಿಸಲಾರಂಭಿಸಿದರು. ಪಾಪ! ಹೆತ್ತವರಾದರೋ ಏನು ಮಾಡಿಯಾರು? ಮಗಳ ಮುಂದೆ ಕೂದಲ ಸಂಸ್ಕಾರದ ಪ್ರಸ್ತಾಪವನ್ನು ಹೇಗೆ ತೆಗೆದಾರು? ನಂತರ ಪುತ್ರಿಯ ಆ ಭಯಂಕರ ರೂಪವನ್ನು ತಮ್ಮ ಕಣ್ಣುಗಳಿಂದ ಹೇಗೆ ನೋಡಿಯಾರು? ಆದರೆ ಮಗಳನ್ನು ಇದೇ ರೀತಿಯಲ್ಲಿ ಮೆರೆಯಬಿಟ್ಟರೆ ಆಸುಪಾಸಿನ ಜನರ ಟೀಕೆಗಳಿಗೆ—ಹೀಯಾಳಿಕೆಗೆ ಬಲಿಬೀಳಬೇಕಾಗುವುದು. ಸಮಾಜದ ಅಪಾಧನೆಗೆ ಗುರಿಯಾಗಬೇಕಾಗುವುದು. ಅವರಿಗೆ ಏನು ಮಾಡುವುದೆಂದು ತಿಳಿಯದಾಯಿತು.

ಈಗೀಗ ಆಸುಪಾಸಿನ ಜನರ ಟೀಕೆಗಳು ವಿಶೇಷವಾಗಿ ಪರಿಣಮಿಸಿದುವು. ಅವರು ರಾಜೇಂದ್ರರಾಯರನ್ನೂ, ಅವರ ಪತ್ನಿಯನ್ನೂ, ಪರಿಪರಿಯಲ್ಲಿ ಹೀಯಾಳಿಸ ತೊಡಗಿದರು. ಪರರ ನಿಂದೆಗೆ ಬಲಿಬಿದ್ದ ರಾಯರು ಯಾವ ರೀತಿಯಲ್ಲಾದರೂ ತನ್ನ ಪುತ್ರಿಗೆ ಸಮಾಧಾನವನ್ನು ಹೇಳಿ ಇನ್ನೂ ಒಂದೆರಡು ದಿನಗಳಲ್ಲಿಯೆ ಗೋಕರ್ಣಕ್ಕೆ ಹೋಗಿ ಮಗಳ ಕೂದಲ ಸಂಸ್ಕಾರ ಕಾರ್ಯವನ್ನು ಅಲ್ಲಿಯೇ ಜರಗಿಸುವುದೆಂದು ಖಚಿತಮಾಡಿಕೊಂಡರು. ಅಂತೆಯೇ ಎರಡು ದಿನಗಳ ತರುವಾಯ ರಾಜೇಂದ್ರರಾಯರು ತನ್ನ ಪುತ್ರಿಯೊಡಗೂಡಿ ತಾನು ಗೋಕರ್ಣಕ್ಕೆ ಹೋಗಿ ಬರುವೆನೆಂದು ಪತ್ನಿಯೊಡನೆ ಹೇಳಿ ತೆರಳಿದರು.

ನಾಲ್ಕೆಂಟು ದಿನಗಳ ತರುವಾಯ ರಾಜೇಂದ್ರರಾಯರು ಗೋಕರ್ಣದಿಂದ ಹಿಂದಿರುಗಿ ಬಂದರು. ಆದರೆ ಅವರೊಂದಿಗೆ ಸುಶೀಲೆಯು ಮಾತ್ರ ಇದ್ದಿಲ್ಲ. ಅವರ ಪತ್ನಿ ರುಕ್ಮಿಣಿಯು ಮಗಳಿಲ್ಲದುದನ್ನು ನೋಡಿ ಪರಮಾಶ್ಚರ್ಯಪಟ್ಟಳು. ಅವಳು ಭಯದಿಂದ 'ಸುಶೀಲೆಯೆಲ್ಲಿ? ಎಂದು ಪತಿಯೊಡನೆ ಕೇಳಿದಳು.

"ಎಲ್ಲಿರುವಳೆಂದು ಹೇಳಲಿ? ಪ್ರಿಯೆ! ಅವಳು ಮೃತಪಟ್ಟಳು"

"ಏನೆಂದಿರಿ? ಸುಶೀಲೆಯು ಮೃತಪಟ್ಟಳೇ? ಅಯ್ಯೋ! ಸುಶೀಲೆ ನನ್ನ ಮುದ್ದು ಸುಶೀಲೆ, ನೀನು ಮೃತಪಟ್ಟೆಯಾ! ನೀನು ಇಹಲೋಕವನ್ನು ತ್ಯಜಿಸಿದೆಯಾ! ನಿನ್ನನಗಲಿದ ನಾನು ಎಂತು ಬದುಕಲಿ!" ಎಂದು ಹೇಳುತ್ತಾ ಬಹಳವಾಗಿ ರೋಧಿಸಿದಳು.

ಸ್ವಲ್ಪ ಸಮಯದ ನಂತರ ರುಕ್ಮಿಣಿಯು "ಅವಳು ಹೇಗೆ ಸತ್ತಳು?" ಎಂದು ಪತಿಯೊಡನೆ ಕೇಳಿದಳು.

ರಾಜೇಂದ್ರರಾಯರು ಐದು ನಿಮಿಷಗಳ ತನಕ ಏನೊಂದೂ ಮಾತಾಡಲಿಲ್ಲ. ನಂತರ ರುಕ್ಮಿಣಿಯನ್ನು ಕಿವಿಯಲ್ಲಿ ಏನನ್ನೋ ಹೇಳತೊಡಗಿದರು. ರುಕ್ಮಿಣಿಯು ತನ್ನ ಪತಿಯ ಮಾತುಗಳನ್ನು ಕೇಳಿ ಅತ್ಯಾಶ್ಚರ್ಯಪಟ್ಟಳು. ಕ್ಷಣಾರ್ಧದಲ್ಲಿ ಅವಳ ದುಃಖವು ಮಾಯವಾಯಿತು. ಅವಳು ಮನದಲ್ಲಿ ಹರ್ಷತೆಯನ್ನು ತಾಳಿದಳು. ಇದೇನಾಶ್ಚರ್ಯ? ಪುತ್ರಿಯ ಮರಣದಿಂದ ಹರ್ಷಚಿತ್ತರಾಗುವ ಹೆತ್ತವರಾದರೂ ಇದ್ದಾರೆಯೇ?

ಹಾಗೆಯೇ ಸ್ವಲ್ಪ ಸಮಯದಲ್ಲಿ ಸುಶೀಲೆಯ ಮರಣದ ವಾರ್ತೆಯು ಊರನ್ನೆಲ್ಲಾ ಹಬ್ಬಿತು. ಇದನ್ನು ಕೇಳಿದ ಎಲ್ಲರೂ ಆಶ್ಚರ್ಯಪಟ್ಟರು.

... ಅವಳು, ಅಪಶಕುನದ ಚಿಹ್ನೆಯಾಗಿ ಮನೆಯ ಮೂಲೆಯಲ್ಲಿ ಕುಳಿತು ಕೊಳ್ಳುವುದರ ಬದಲಾಗಿ ಆತ್ಮಹತ್ಯೆಯೇ ಲೇಸೆಂದು ತಿಳಿದಳೋ, ಏನೋ, ಎಂಬುದಾಗಿ ಹಲವರು ತಮ್ಮಲ್ಲಿಯೇ ಗ್ರಹಿಸಿಕೊಂಡರು. ಇದೇ ರೀತಿಯಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ಮಾತನಾಡ ತೊಡಗಿದರು.

೪

ಹೀಗೆಯೇ ನಾಲ್ಕೆಂಟು ವರ್ಷಗಳು ದಾಟಿದುವು. ಬೆಂಗಳೂರಿನ ಸುಪ್ರಸಿದ್ಧ ಗಾಯಕಿಯೋರ್ವಳು ಮಂಗಳೂರಿಗೆ ತನ್ನ ಪ್ರಥಮ ಆಗಮನವನ್ನಿತ್ತಿರುತ್ತಾಳೆ. ಇವಳು ಗಾನವಿಶಾರದೆಯಂತೆ. ಮಹಾಜನರಿಂದ ಅನೇಕಾನೇಕ ಸುವರ್ಣ ಪದಕಗಳನ್ನು ಬಹುಮಾನ ಪಡೆದಿರುವಳಂತೆ. ಹೆಸರು ಶ್ರೀಮತಿ ರತ್ನಾಬಾಯಿ.

ಇಂದು "ರಾಧಾಕೃಷ್ಣ" ಥಿಯೇಟರಿನಲ್ಲಿ ಗಾಯಕಿಯಾದ ರತ್ನಾಬಾಯಿಯು ರಾತ್ರಿ ೯॥ ಗಂಟೆಗೆ ಸಂಗೀತ ಕಚೇರಿಯನ್ನು ಜರಗಿಸುವಳು. ಮಹಾಜನರಿಗಿಂದು ಸುವರ್ಣಸುಸಂಧಿ. ಅವರ ಪರಮ ಭಾಗ್ಯದಿಂದಲೋ ಎಂಬಂತೆ ರತ್ನಾಬಾಯಿಯು ಮಂಗಳೂರಿಗೆ ಬಂದಿರುತ್ತಾಳೆ. ಅಂದಮೇಲೆ ಎಲ್ಲರೂ ಇಂತಹ ಅಮೂಲ್ಯ ಸಂದರ್ಭವನ್ನು ಕಳಕೊಳ್ಳದೆ ಸರ್ವರೂ ಹೋಗಿ ಪ್ರೋತ್ಸಾಹಿಸಬೇಕಾದುದು ಅತ್ಯಾವಶ್ಯಕವಲ್ಲವೇ?

ರಾತ್ರೆ ಒಂಭತ್ತು ಗಂಟೆಯ ಸಮಯ ವಿದ್ಯುದ್ದೀಪಗಳಿಂದಲಂಕೃತವಾದ ರಾಧಾಕೃಷ್ಣ ಥಿಯೇಟರಿನಲ್ಲಿ ಜನಸ್ತೋಮವು ಕಿಕ್ಕಿರಿದು ನೆರೆದಿದೆ. ಹಲವು ಜನರು ಟಿಕೇಟು ಸಿಗಲಾರದೆ ಹತಾಶರಾಗಿ ಹಿಂದೆರಳಬೇಕಾಯಿತು. ಸ್ವಲ್ಪ ಸಮಯದಲ್ಲಿಯೇ ಸಂಗೀತಕ್ಕಾರಂಭವಾಯ್ತು. ಅಹ! ಎಂತಹ ಮಧುರವಾದ ಗಾನವನ್ನು ಪಾಡುತ್ತಿರುವಳಾಕೆ?

ಪ್ರಿಯ ವಾಚಕರೇ! ಅಲ್ಲಿ ಗಾನವನ್ನು ಪಾಡುತ್ತಿರುವ ಆ ಗಾಯಕಿಯು ಯಾರೆಂದು ಭಾವಿಸಿದಿರಿ? ನಿಜವಾಗಿಯೂ ಆಕೆಯ ಪರಿಚಯವು ನಿಮಗಿಲ್ಲವೇ? ಹಾಗಾದರೆ ಅವಳೇ ನಿಮ್ಮ ಪೂರ್ವ ಪರಿಚಿತಳಾದ ರಾಜೇಂದ್ರರಾಯರ ಪುತ್ರಿ ಸುಶೀಲೆ. ರಾಜೇಂದ್ರರಾಯರು ಗೋಕರ್ಣಕ್ಕೆ ಹೋಗುವೆನೆಂದು ಮನೆಯಲ್ಲಿ ಹೇಳಿ ನೆಟ್ಟಗೆ ಬೆಂಗಳೂರಿಗೆ ತೆರಳಿದರು. ಅಲ್ಲಿಯ ಸುಧಾರಕ ಸಂಘದ ಓರ್ವ ಯುವಕರಿಗೆ ಸುಶೀಲೆಯನ್ನು ಕೊಟ್ಟು ಲಗ್ನ ಮಾಡಿದರು. ಮಾತವಲ್ಲದೆ ಆಕೆಗೆ ರತ್ನಾಬಾಯಿ ಎಂಬ ಹೆಸರನ್ನೂ ಇಟ್ಟರು. ಅಲ್ಲಿ ಫಿಡ್ಲನ್ನು ಬಾರಿಸುತ್ತಿರುವ ಯುವಕನೇ ಸುಶೀಲೆಯ ಇಂದಿನ ಪತಿಯಾಗಿರುವನು. ಅವನು ಗಾನಕಲೆಯಲ್ಲಿ ಯೋಗ್ಯ ರೀತಿಯ ತರಬೇತಿಯನ್ನು ಹೊಂದಿದ್ದನು. ಅವನಿಂದಲೇ ಸುಶೀಲೆಯು ಸಂಗೀತ ಶಿಕ್ಷಣವನ್ನು ಪಡೆದು ಇಷ್ಟು ಪ್ರಾವೀಣ್ಯತೆಯನ್ನು ಪಡೆದಳು. ಅದೋ ನೋಡಿ ಅವಳ ಪೂಜ್ಯ ಜನನೀ ಜನಕರು ಎದುರಿನ ಸೋಪಾದಲ್ಲಿ ಕುಳಿತುಕೊಂಡು, ಮಗಳ ಪಾಂಡಿತ್ಯವನ್ನು ನೋಡಿ ಆನಂದ ಸಾಗರದಲ್ಲಿ ತೇಲಾಡುತ್ತಿರುವರು. ಈಗವಳ ಪರಿಚಯವು ಊರಿನವರಿಗೆ ಆಯಿತೆ? ಈಗೆಲ್ಲಿ ಆ ಮೂಢ ಸಮಾಜದ ಕಟ್ಟು ಕಟ್ಟಳೆಗಳು. ರಾಜೇಂದ್ರರಾಯರು ಸಮಾಜದಿಂದ ಬಹಿಷ್ಕೃತರಾದರೇ?

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH
No 16

Sale Rs 6—15—0
SMART LEVER MOVEMENT
Strong & Durable at Low Price.



UNIQUE OPPORTUNITY ONLY FOR ONE MONTH
Available Roman or Arabic Figures
Plain Silver Dial

Guaranteed for 5 Years — Lever Pocket Watch Rs 1—15—9.

No 12 Chromium 4 Jewels Rs. 8—8—0.
„ 14 „ „ „ „ 10—8—0
„ 15. „ 15 „ „ 12—8—0
„ 17. Rolled Gold 15 „ „ 16—8—0

Rs. 1/- Extra for Radium Dial. Postage & Packing Extra.

BAPALAL & CO. (s) 116, Abdul Rehman Street, Bombay 3.

ಉತ್ತಮವರ್ಗದ ವಾರಪತ್ರಿಕೆಯನ್ನು ಓದಲಿಚ್ಛಿಸುವಿರಾ? ಹಾಗಾದರೆ,

'ಸ್ವದೇಶಾಭಿಮಾನಿ'ಗೆ ಚಂದಾದಾರರಾಗಿರಿ.

ಗಳ ಕ್ರಯ ರೂ. 1—0—0

... ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಬೇರೆ ೪೯ ಫೋಟೋಗಳ ಸಹಿತ ಕೊಡಿದೆ. ಮಲಗುವ ಮನೆಯಲ್ಲಿ ವ್ಯಭಿಚಾರಗಳ ವಿನೋದಗಳು, ವೇಶ್ಯಾಕನ್ಯೆಗಳು ದೋಚಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೪೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂತರೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1 ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್.

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿಕೊಡಬೇಕೇ ಹಾಗಾದರೆ,
ಶಾರದಾ ಛಾಪಖಾನೆ, ಮಂಗಳೂರು,
ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

ESTED- 1931.

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾಧಿಕಾರದ.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳ ಸ್ವಲ್ಪ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ.

ಬರೆದವರು:—ಶ್ರೀ. ಜಿ. ಎನ್. ಲಕ್ಷ್ಮಣ ಶೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಲ್ಲ। ಸೂರ್ಯನೊಳಗಿಲ್ಲ।
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರಾ!"

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯಾರ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೮ನೆಯ ಧಾತು ಸಂವತ್ಸರದ ಫಾಲ್ಗುಣ ಬ। ೭ ಶನಿವಾರದಿಂದ, ಫಾಲ್ಗುಣ ಬ। ೧೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ ಮಾರ್ಚ್ (ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
3	ಶನಿ	೭	೨೯	ಮೂಲ	೨೩	೨೧	
4	ರವಿ	೮	೩೧	ಪೂ.ಷಾಢ	೨೬	೨೨	
5	ಸೋ.	೯	೩೩	ಉ.ಷಾಢ	೨೯	೨೩	
6	ಕುಜ	೧೦	೩೨	ಶ್ರವಣ	೩೧	೨೪	
7	ಬುಧ	೧೧	೩೦	ಧನಿಷ್ಠ	೩೧	೨೫	
8	ಗುರು	೧೨	೨೬	ಶತಭಿಷ	೩೦	೨೬	
9	ಶುಕ್ರ†	೧೩	೨೪	ಪೂ.ಭದ್ರ	೨೮	೨೭	

ಮಂಗಳೂರಿನ ಪೇಟೆಧಾರಣೆ

ಸಾಮಾನುಗಳು	ಇಂದ	ವರೆಗೆ
	ರೂ. ಆ	ರೂ. ಆ
ಬಾಳಿ ಅಕ್ಕಿ ...	3— 6	3— 10
ಮುಸ್ತಿ ...	3— 8	4— 4
ಗುಡ್ಡು ...	3—10	3—14
ಊರ ಅಪ್ಪಲ್ ಬೆಲ್ಲಗೆ ...	4— 0	4— 4
ರಂಗೂನು ಬಿ. ಗೋ. ಗಳ್ಳಿ ...	7 — 0	7— 4
ಎಲ್ಲೂರು ಬಿ. ಮು. ಗಳ್ಳಿ ...	3—12	3—12
ಗೋದಿ ಗೋಣಿ ಗಳ್ಳಿ ...	11 — 0	13— 0
ತೊಗರಿ ಗೋಣಿ ಗಳ್ಳಿ ...	9 — 8	12— 8
ಹುರುಳಿ ಗೋಣಿ ಗಳ್ಳಿ ...	5— 0	5 — 6
ಕಡಲೆ ಗೋಣಿ ಗಳ್ಳಿ ...	8 — 0	12 — 8
ತೊಗರಿಬೇಳೆ ಗೋಣಿ ಗಳ್ಳಿ ...	11— 0	19— 0
ಉದ್ದು ಗೋಣಿ ಗಳ್ಳಿ ...	9— 0	9 — 8
ಹೆಸರು ಗೋಣಿ ಗಳ್ಳಿ ...	7—12	8— 0
ಊರುಬೆಲ್ಲ ಖಂಡಿ ಗಳ್ಳಿ ...	30— 0	32— 8
ಉಪ್ಪು ಗೋಣಿ ಗಳ್ಳಿ ...	4— 2	5— 4
ಕೊಬ್ಬರಿ ಖಂಡಿ ಗಳ್ಳಿ ...	75— 0	84— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳಿ ...	26 — 8	28— 8
ಎಳ್ಳಿಂಡಿ ಖಂಡಿ ಗಳ್ಳಿ ...	26 — 4	27 — 8
ಕೊಬ್ಬರಿ ಎಣ್ಣೆ ಮುಡಿ ಗಳ್ಳಿ ...	6— 0	7 — 0
ಎಳ್ಳೆಣ್ಣೆ ಮುಡಿ ಗಳ್ಳಿ ...	7— 0	7— 0
ಹರಳೆಣ್ಣೆ ಪಟ್ಟಿಗೆ ಗಳ್ಳಿ ...	6— 5	7— 5
ಮೋರಿಸ ಸಕ್ಕರೆ ಮು. ಗಳ್ಳಿ ...	3— 2	3 — 4
ಮೆಣಸು ...	2— 8	5— 0
ಸಾಸಿವೆ ಮುಡಿ ಗಳ್ಳಿ ...	5 — 4	5— 8
ಕಾಳುಮೆಣಸು ಖ. ಗಳ್ಳಿ ...	100— 0	120 0
ಯೋಲಕ್ಕಿಬೀಜ ಮುಡಿಗಳ್ಳಿ ...	80— 0	85— 0
ಗೇರುಬೀಜ ಮು. ಗಳ್ಳಿ ...	3 — 4	8 — 8
ಕಲ್ಪಿಣ ಖಂಡಿ ಗಳ್ಳಿ ...	35— 0	37— 8
ಕಾಂಮ್ಬುಕಗಡು ಮು. ಗಳ್ಳಿ ...	12— 4	12— 8
ಕಾಂಮ್ಬುಕಾತ್ರಗಳು ಮು. ಗಳ್ಳಿ ...	12— 8	14— 0
ಹೀಪಬೆಳ್ಳಿ ಸೇರು ಗಳ್ಳಿ ...	13— 8	15— 0
ಹಿತ್ತಾಳೆ ತಗಡು ಮು. ಗಳ್ಳಿ ...	10— 0	10— 8
ದವಸು ಗಳ್ಳಿ ...	22— 7	22— 8
ಹುಣಿಸೆ ಹುಳಿ ಖಂಡಿ ಗಳ್ಳಿ ...	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳಿ ...	170— 0	180— 0
ಫ್ಲಾಂಟರ್ ಕಾಫಿ ಖಂಡಿ ಗಳ್ಳಿ ...	175— 0	195— 0
ಮಡಿಕೇರಿ ಏಲಕ್ಕಿ ...	50— 0	55 —

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋರಿಕಟ್ಟಾ ಬಜಾರ್, ಮಂಗಳೂರು.

ಹೊಟ್ಟೆನೋವನ್ನು ಎಂದಿಗೂ ಪಳಗಿಸಬೇಡಿ.

ಪ್ರಾರಂಭದಲ್ಲಿ ಕಠಿಣವಾಗಿ ಕಾಣುವ ಬೇನೆಗಳು ಕೇವಲ ಕಡಿಮೆ. ಈ ಕಾಲದಲ್ಲಿ ಹೆಚ್ಚಾಗಿ ವೇದನೆ ಕೊಡುವ ಕಾಯಿಲೆಯೆಂದರೆ ಹೊಟ್ಟೆನೋವು. ಪ್ರಾರಂಭದಲ್ಲಿ ಇದು ಚಿಕ್ಕ ರೀತಿಯಲ್ಲಿ ಶುರು ಆಗುತ್ತದೆ. ಇದು ನಿಮ್ಮನ್ನು ಹೊಟ್ಟೆಯುರಿ, ಪಿತ್ತಬಾಧೆ, ಹೊಟ್ಟೆ ಉಬ್ಬರ, ಮತ್ತು ಅಜೀರ್ಣತೆಗಳ ರೂಪದಲ್ಲಿ ಆಕ್ರಮಿಸುವುದು, ಆದರೆ ಅದರ ಬೇನೆಯೂ ಒಂದೇ. ಅದೇ ಪ್ರಕಾರ ಇದರ ಪರಿಹಾರವೂ ಒಂದೇ ಆಗಿರುತ್ತದೆ. ಇದು ಅಸ್ವಸ್ಥ ಹೊಟ್ಟೆಯ ಬಗ್ಗೆ ಪ್ರಕೃತಿಯ ಒಂದು ಎಚ್ಚರಿಕೆ. ಈ ಹೊಟ್ಟೆಯಲ್ಲಿ ಏನು ಬಿದ್ದರೂ ವೇದನೆ ರೂಪದಲ್ಲಿ ಮಾರ್ಪಡುತ್ತದೆ. ಆದುದರಿಂದಲೇ ನೀವು ಅದನ್ನು ಅಸಡ್ಡೆಯಿಂದ ಕಾಲಹರಣ ಮಾಡಿ ಆ ನೋವನ್ನು, ಎಷ್ಟು ಕಡಿಮೆಯದ್ದರೂ ಪಳಗಿಸಬಾರದು. ಇಂದೇ ಕರ್ತವ್ಯ ಜ್ಞಾನ ಕೈಕೊಂಡು ಅದನ್ನು ದೂರಗೊಳಿಸಲು ಪ್ರಯತ್ನ ಮಾಡಿರಿ. ಪ್ರಖ್ಯಾತವಾದ ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸೇವಿಸಿ ನಿಮ್ಮ ಹೊಟ್ಟೆಗಳನ್ನು ಶುದ್ಧಪಡಿಸಿರಿ. ಇದರಿಂದ ಆಸ್ಪತ್ರೆಗಳ ಖರ್ಚು, ಶಸ್ತ್ರ ಚಿಕಿತ್ಸೆಯ ತೊಂದರೆಗಳನ್ನು ತಪ್ಪಿಸಿರಿ.

ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನ ಅಪ್ರತೀಯ ಶ್ರೇಷ್ಠತ್ವದ ನಿಮಿತ್ತ ... ನಡೆಯುವುದರಿಂದ ... ಪ್ರಚಾರದಲ್ಲಿರುವುದರಿಂದ ಮೋಸಹೋಗಬೇಡಿ. ನೀವು ಸ್ವಲ್ಪ ಅಜಾಗ್ರತೆಯಿಂದ ವರ್ತಿಸಿದರೆಂದರೆ, ಇದೇ ತರದ ತೋರಿಕೆಯ ಕೃತಕ ತರದ ಪೌಡರುಗಳನ್ನು ಕೊಳ್ಳುವ ಸಂದರ್ಭ ಬರಬಹುದು. ಕಮ್ಮಿ ಬೆಲೆಯ ನಿಷ್ಪ್ರಯೋಜಕ ಕೃತಕಗಳು ನಿಮ್ಮನ್ನು ಆಕರ್ಷಿಸಬಹುದು. ಆದರೆ ನಿಮಗೆ ನಿಜವಾಗಿಯೂ ಫಲಕಾರಿಯಾಗುವ ಮೆಕ್ಲೀನ್ ಬ್ರೇಂಡ್ ಸಿಗಬೇಕಾದ್ದರೆ ನೀವು ಇಂತಹ ಕೃತಕಗಳನ್ನು ತೊರೆಯಬೇಕು. ಸೀಸೆಗಳ ಮೇಲೂ ಪೊಟ್ಟಣಗಳ ಮೇಲೂ

Alex. C. Maclean

ಎಂಬ ಸಹಿಯು ಕೆಂಪು ಮುದ್ರೆಯಲ್ಲಿ ಇದೆಯನ್ನೇ ನೋಡಿಕೊಳ್ಳಿರಿ. ಇಂತಹ ಸಹಾಯಕನೆಯು ಕಡಿಮೆ ದರದ ಪರಿಕೀಯ ಮಾಲನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ.



S No 57

Break Pills!

Take To-Night

Prepared by a Sage out of Amber Saffron Gold Musk with Himalayan Drugs recruit lost energy Strength Nervous Debility and all Disorders in Spinal Cord. Regains lost vitality Gives marvellous effect. 60 Pills Rs. 5. Sample 30 Pills Rs. 3. List Free.

Dr. A S. MURTHI. CHICACOLE.

ಬಿಳಿ ತೊನ್ನು ಮತ್ತು ಕುಷ್ಠರೋಗ.

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುವು. ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ. ಇದರಿಂದ ರೋಗವು ವಾಸಿಯಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು. ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರ ಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ಜವಾಬು ಕೆಗೆದುಕೊಳ್ಳಲಾಗಲಿಕ್ಕಿಲ್ಲ.

Vaidyaraj Akil Kishore Ram,
No. 62 P. O. Katrisarai (Gaya)

THE

BANK OF MANGALORE LTD.,

ESTD. 1931 MANGALORE.

Branches:-
Panemangalore, Mudabidri & Padubidri.

Chairman:—Philip J. Chandran, Esq.,
Retd. Dt. Registrar of Joint Stock Companies.

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.
Saving Bank deposit 3½% on daily balances
All kinds of banking business transacted.

U. R. PAI, N. U. PAI, *Managing Directors.*

ಅಹಿಂಸೆಯ ಪ್ರಚಂಡ ಪ್ರಭಾವ.

ಮಹಾತ್ಮರ ಅಖಂಡ ವಿಶ್ವಾಸ

ಜನತೆಯಲ್ಲಿ ಕೊಂಗ್ರೆಸ್ ಭಕ್ತಿ

ಚುನಾವಣೆಗಳಲ್ಲಿ ಕೊಂಗ್ರೆಸ್ಸು ತನಗಿದಿರಾಗಿ ಸ್ಪರ್ಧಿಸಿದ ಪಂಗಡಗಳನ್ನು ಅತ್ಯಧಿಕ ವೋಟುಗಳ ಸಂಖ್ಯೆಯಿಂದ ಪರಾಜಿತಗೊಳಿಸಿದ ಒಂದೇ ವಿಷಯವು, ಜನತೆಗೆ ಕೊಂಗ್ರೆಸಿನ ಮೇಲೆ ಇರುವ ಭಕ್ತಿ ವಿಶ್ವಾಸಗಳನ್ನು ತೋರಿಸುತ್ತದೆ ಕೊಂಗ್ರೆಸು 900 ಉಮೇದುವಾರರುಗಳನ್ನು ಎಲ್ಲಾ ಪ್ರಾಂತ್ಯಗಳ ಚುನಾವಣೆಗಾಗಿ ನಿಲ್ಲಿಸಿದ್ದು ಅದರಲ್ಲಿ 704 ಮಂದಿಗಳು ಬಹುಮತದಿಂದ ಗೆದ್ದಿರುವರು

ಮದ್ರಾಸು ಪ್ರಾಂತ್ಯದಲ್ಲಿದ್ದ 89 82,470 ಮಂದಿ ವೋಟುದಾರರಿದ್ದರು ಅವರ ಪೈಕಿ 35,72,270 ಜನರು ಕೊಂಗ್ರೆಸ್ಸಿಗೆ ತಮ್ಮ ವೋಟುಗಳನ್ನು ಕೊಟ್ಟಿರುವರು

ಬೊಂಬಾಯಿಯಲ್ಲಿ ವೋಟರರ ಸಂಖ್ಯೆ- 34,51,193

ಕೊಂಗ್ರೆಸ್ಸಿಗೆ – 17 25,596 ಸ್ವತಂತ್ರವಾಗಿ ನಿಂತವರಿಗೆ ಒಟ್ಟು 4,31 375 ಮಾತ್ರ ಸಿಕ್ಕಿರುತ್ತದೆ.

ಕೊಂಗ್ರೆಸ್ಸಿಗಾಗಿ ಜನತೆಯ ಮಾಡಿದ ಅದ್ಭುತ ಬಲಿದಾನದ ಕೆಲವು ನಿದರ್ಶನಗಳು ಅತ್ಯಂತ ಹೃದಯದ್ರಾವಕವಾಗಿರುತ್ತವೆ ಅವುಗಳಲ್ಲಿ ಕೆಲವನ್ನು ಈ ಕೆಳಗೆ ಇಲ್ಲಿ ಕೊಟ್ಟಿರುವುದು ವಾಚಕರಿಗೆ ಸರಸವಾಗಬಹುದು.

ಮೆಟ್ಟೂರಿನ ಚುನಾವಣಾ ಅಧಿಕಾರಿಗಳ ಆಶ್ಚರ್ಯಕ್ಕೆ ಅಲ್ಲಿನ ಓರ್ವ ಮುದುಕಿಯು ವೋಟಿನ ಪೆಟ್ಟಿಗೆಯ ಬಳಿ ಹಣ್ಣುಕಾಯಿ ಕರ್ಪೂರಗಳಿಂದ ಪೂಜೆ ಮಾಡುತ್ತಿದ್ದಳಂತೆ

ಸಂಹಸ್ಪೇಟೆನಲ್ಲಿ ಒಬ್ಬ ಮತದಾರ– ಅವನಿಗೆ ಬಾಯಿಲ್ಲ – ಮೂಕ– ಕಿವಿಯಿಲ್ಲ – ಕಿವುಡ– ಆದರೆ ವೋಟು ಕೊಡಲು ಬಂದು ಕೊಂಗ್ರೆಸ್ ಏಜಂಟರುಗಳ ಅವನ ವೋಟು ಕೇಳಬೇಕೆಂದು ತಂಬ ಪ್ರಯತ್ನಪಟ್ಟು ಅವನಿಗೆ ವಿಷಯಗಳನ್ನು ತಿಳಿಯಪಡಿಸುವುದೇ ಕಷ್ಟವಾಯಿತು ಕೊಂಗ್ರೆಸ್ಸಿನ ಪರವಾಗಿ ಅಲ್ಲಿ ಶ್ರೀಮತಿ ಶರ್ಮ ದೇವಿ ತ್ಯಾಗಿಯವರ ನಿಂತಿದ್ದರು ಆಗ ಒಬ್ಬ ಕೊಂಗ್ರೆಸ್ ಕಡೆಯವನು ಒಂದು ಉಪಾಯ ಹುಡುಕಿದರು ಮೊದಲು ಅವರೊಂದು ಹೇಟು ಇಟ್ಟು ಕೊಂಗ್ರೆಸ್ ವಿರೋಧಿ ನಿಂತವರನ್ನು ಸೂಚಿಸಿದಾಗ ಆ ಮೂಕನು ಬಿರುಸಾಗಿ ತಲೆಯಲ್ಲಾಡಿಸಿ ತನ್ನ ಅಸಮ್ಮತಿಯನ್ನು ತೋರಿಸಿದನು ನಂತರ ಅವರು ಕಲೆಯ ಮೇಲೆ ಶಾಲನ್ನು ಮುಚ್ಚಿ ಕೊಂಗ್ರೆಸ್ ಮಹಿಳಾ ಉಮೇದುವಾರಿಗೆ ಅನ್ವಯಿಸುವ ಹಾಗೆ ಸೂಚಿಸಿದಾಗ ಮುದುಕ ಮೂಕನು ಸಂತೋಷದಿಂದ ಒಪ್ಪಿಗೆ ತೋರಿಸಿದನಂತೆ

ಮೊರಾದಾಬಾದಿನಲ್ಲಿ ಓರ್ವ ಒಕ್ಕಲಿಗನು ಕೊಂಗ್ರೆಸ್ ಕಡೆಯಿಂದ ಪ್ರಚಾರ ಕಾರ್ಯ ಮಾಡುತ್ತಿದ್ದನು ತನ್ನ ಉತ್ಸಾಹದಲ್ಲಿ ಮರಣೋನ್ಮುಖನಾಗಿ ಮಲಗಿರುವ ಅವನ ಕುಮಾರನ ಅವಸ್ಥೆಯನ್ನು ಅವನು ಗಣನೆಗೆ ತರಲಿಲ್ಲ ಸ್ವಲ್ಪ ಸಮಯದ ನಂತರ ಮಗನಿಗೆ ಕಠಿಣವಾಗಿದೆಯೆಂದು ಅವನಿಗೆ ತಿಳಿಸಿದರು ಆದರೂ ಅವನು ತನ್ನ ಕೆಲಸವನ್ನು ಬಿಡಲಿಲ್ಲ ಇನ್ನೂ ಕೆಲ ಸಮಯದ ನಂತರ ಮಗನ ಪ್ರಾಣ ಹೋಗುತ್ತದೆಂಬ ವಿಷಯವನ್ನು ಅವನಿಗೆ ತಿಳಿಸಲಾಗಿ ಅವನು 'ನನ್ನ ಕಾರ್ಯವು ಇನ್ನೂ ಮುಗಿಯಲಿಲ್ಲ'ವೆಂದನಂತೆ. ಅಂದು ರಾತ್ರಿ ಅವನು ಮನೆಗೆ ಬಂದೊಡನೆ ಸತ್ತುಬಿದ್ದ ಮಗನ ಹೆಣವನ್ನು ಮಾತ್ರ ಅವನು ಕಂಡನು ಆದರೂ ಸಂತಾಪಪಡಲಿಲ್ಲ, ರಾತ್ರ್ಯದಲ್ಲಿ ಪುತ್ರನ ಶವವನ್ನು ಸತ್ಕರಿಸಿ, ಆ ವೇಳೆ ಸಂಸ್ಕಾರ ನಡೆಸಿದನಂತೆ

ಜಾಡಣ್ಣಾ ಎಂಬಲ್ಲಿ ಕರ್ ಸಿಂಗ್ ಎಂಬವನು ಶ್ರೀ ಕಾಬುಲ್ ಸಿಂಗ್ ಎಂಬವರ ಕಡೆಯಿಂದ ಪ್ರಚಾರ ಮಾಡುತ್ತಿದ್ದನು ಆ ಸಮಯಕ್ಕೆ ಅವನ ಮೊಮ್ಮಗಳೊಬ್ಬಳು ಮೃತಪಟ್ಟ ವಿಷಯವು ಅವನಿಗೆ ತಿಳಿಸಲಾದಾಗ ಅವನ "ಚುನಾವಣೆ ಕಾರ್ಯವು ನನಗೆ ಮನೆ ವ್ಯವಹಾರಕ್ಕಿಂತ ಹೆಚ್ಚಿನದಿದೆ' ಎಂದನಂತೆ ಈ ಪುಣ್ಯಾತ್ಮನ ಅದ್ಭುತ ಸಾಹಸದಿಂದಲೇ ಎಂಬಂತೆ ಶ್ರೀ ಕಾಬುಲ್ ಸಿಂಗರು ಗೆದ್ದರು. ಅಷ್ಟೇ ಅಲ್ಲ – ಅಲ್ಲಿದ್ದ 340 ವೋಟುಗಳಲ್ಲಿ 339 ಅವರಿಗೇನೇ ದೊರಕಿದುವು





ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್.

... 1ಕ್ಕೆ ರೂ 2-15 0 ಅದರಲ್ಲಿ ಉತ್ತಮವಾದದ್ದು ... ಬಂಗಾರದ ಗಿಲಿಟಿದ್ದದಕ್ಕೆ ರೂ 4—8—0 ... ರೂ 5-0 0 ... 6 8 0 ... ಬಂಗಾರದ ಗಿಲಿಟಿದ್ದುದಕ್ಕೆ 7 8-0 ... ರೂ 1-14-0 ... 1ಕ್ಕೆ ... ರೂ 1-10-0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176 Cross Street CALCUTTA

ಸಸ್ಯ ಶಾಸ್ತ್ರದಲ್ಲಿ ನವಶೋಧೆ

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರಜ್ಞರಾದ ಡಾ| ವಿಲಿಯಮ್ ಫ್ರೆಡ್ರಿಕ್ ಗೆರಿಕ್ ಇವರು ಸಸ್ಯಗಳನ್ನು ಮಣ್ಣಿನ ಆಧಾರವಿಲ್ಲದೆ ಬೆಳೆಸುವ ಒಂದು ವಿಶೇಷ ವಿಧಾನವನ್ನು ಕಂಡು ಹಿಡಿದಿರುವರು ಸಸ್ಯಗಳನ್ನು ಬರೀ ನೀರಿನ ಮೂಲಕವೇ ಬೆಳಸಿ ಫಲವನ್ನು ಕೊಡುವಂತೆ ಮಾಡುವುದೇ ಇವರು ಕಂಡು ಹಿಡಿದ ವಿಧಾನದ ಮುಖ್ಯ ತತ್ವ ತಮ್ಮ ನವಶೋಧೆಗೆ ಅವರು 'ಹ್ಯಾಡ್ರೋಪೊನಿಕ್ಸ್' ಎಂದು ಹೆಸರಿಟ್ಟಿರುವರು

ಮನುಷ್ಯನ ಮಿದುಳಿನಲ್ಲಿ ಮುಕ್ಕಾಲು ಪಾಲಿಗಿಂತಲೂ ಹೆಚ್ಚು ನೀರು ಇದೆ

ಸುವರ್ಣ ಗೆಡ್ಡೆ ಅಥವಾ ಸಾಮಾನ್ಯ ಬಟಾಟೆಯಲ್ಲಿ, ಟೊಮೆಟೋ ಹಣ್ಣಿನಲ್ಲಿರುವಂತೆ ಸಮೃದ್ಧಿಯಾದ ವಿಟಮಿನ್‌ಗಳಿವೆಯಂತೆ.

ರಾಮೇಶ್ವರದಲ್ಲಿ ಕೋದಂಡ ರಾಮಸ್ವಾಮಿ ದೇವಾಲಯದಲ್ಲಿ ಪ್ರತಿಷ್ಠೆ

ಇದೇ ತಾ. ೧೯-೬-೩೬ರಲ್ಲಿ ರಾಮೇಶ್ವರದಲ್ಲಿರುವ, ಗೌಡಸಾರಸ್ವತ ಬ್ರಾಹ್ಮಣ ವೃಂದಕ್ಕೆ ಸೇರಿದ ಶ್ರೀ ಕೋದಂಡ ರಾಮಸ್ವಾಮಿ ದೇವಳದಲ್ಲಿ, ಪ್ರತಿಷ್ಠೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಪ್ರತಿಷ್ಠೆಯನ್ನು ಶ್ರೀ ಕಾಶೀಮಠದ ಶುಕ್ರತೀಂದ್ರ ತೀರ್ಥ ಶ್ರೀ ಪಾದಂಗಳವರು ಶಿಷ್ಯರ ದಿವ್ಯ ಹಸ್ತಗಳಿಂದಲೇ ಶಾಸ್ತ್ರೋಕ್ತ ವಿಧಿಗನುಸಾರವಾಗಿ ನೆರವೇರಿಸಿದರು. ದೇಶದ ಎಲ್ಲಾ ಕಡೆಗಳಿಂದಲೂ ಶಿಷ್ಯವೃಂದವು ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಾಗಿ ಬಂದಿದ್ದು ಶ್ರೀ ದೇವರ ಪ್ರಸಾದವನ್ನೂ, ಸ್ವಾಮಿಜೀಯವರ ಆಶೀರ್ವಾದವನ್ನೂ ಪಡೆದರು ನೆರೆದ ಶಿಷ್ಯವರ್ಗದವರಿಗೆಲ್ಲ ಸರ್ವ ಅನುಕೂಲತೆಗಳನ್ನು ಶ್ರೀ ಸ್ವಾಮಿಜಿಯವರು ಕಲ್ಪಿಸಿದ್ದರು.

ಊಟ, ಫಲಾಹಾರದ ಏರ್ಪಾಡುಗಳನ್ನು ಶ್ರೀ ಯು ವಾಸುದೇವ ಪೈಗಳು ಇತರ ಅನೇಕ ಮಹನೀಯರ ಸಹಕಾರದಿಂದ ಶ್ಲಾಘನೀಯವಾದ ರೀತಿಯಿಂದ ಮಾಡಿದ್ದರು. ಗೌಡ ಸಾರಸ್ವತ ಸಮಾಜದವರಿಗೆ ರಾಮೇಶ್ವರಕ್ಕೆ ಯಾತ್ರೆಗೆ ಹೋದಾಗ ತುಂಬಾ ಅನಾನುಕೂಲತೆಗಳು ಶ್ರೀ ಕೋದಂಡ ರಾಮಸ್ವಾಮಿ ದೇವಾಲಯದ ಸ್ಥಾಪನೆಯಿಂದ ತುಂಬಾ ಆದಂತಾಯಿತು

ರಾಮೇಶ್ವರದಲ್ಲಿರುವ ಈ ಕೋದಂಡರಾಮಸ್ವಾಮಿ ದೇವಾಲಯವು ಅಜೀರ್ಣಾವಸ್ಥೆಯಲ್ಲಿದ್ದು, ಶ್ರೀ ಶ್ರೀ ಶುಕ್ರತೀಂದ್ರ ತೀರ್ಥ ಶ್ರೀಪಾದಂಗಳವರ ಅವಿಶ್ರಾಂತ ಶ್ರಮದಿಂದಲೂ, ಇನ್ನಿತರ ಮಹನೀಯರ ಉದಾರತೆಯಿಂದಲೂ, ಮುಖ್ಯವಾಗಿ ಸಕಲ ಶಿಷ್ಯವರ್ಗದವರ ಸಹಕಾರದಿಂದಲೂ, ಜೀರ್ಣೋದ್ಧಾರವಾಗಿ ಪುನಃ ಶೋಭಿಸುತ್ತಿರುವುದು ಸಂತೋಷದ ಸಂಗತಿಯೇ ಸರಿ.

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH WRISTWATCHES GTD 3 YEARS. ROUND NICKEL 2/14/-, RADIUM DIAL 3/11/-; GOLDEN 3/14/-. SQUARE NICKEL 4/8/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 5/8/-. POSTAGE EXTRA BUT FREE ON 2. G.T Co. 188 HARRISON RD. CALCUTTA

ದಿ ಕರ್ನಾಟಕ ಟಾಕೀಜ ಲಿಮಿಟೆಡ್, ಧಾರವಾಡ.

The Karnataka Talkies, Limited, DHARWAR.

A Mythological Masterpiece.

CHIRANJEEVI

(A KANNADA TALKIE)

AWAIT RELEASE

Apply —

MOHAN & CO , DHARWAR

ಕಥಾಲೇಖಕ:
ಶ್ರೀ. ದೇವುಡು ನರಸಿಂಹ ಶಾಸ್ತ್ರಿ, M A

ಸಂಗೀತ ನಿರ್ದೇಶಕ —
ಶ್ರೀ ಎಚ್ ಕೆ ಶೇಷಗಿರಿ ರಾಯರು

ದಿಗ್ದರ್ಶಕ:—
ಶ್ರೀ. ಕೆ ಪಿ ಭಾವೆ

ಸ್ಟುಡಿಯೋ:—
ಸರಸ್ವತಿ ಸಿನೆಟೋನ್ ಪುಣೆ

ಭಕ್ತಿರಸಪ್ರಧಾನ
ಪೌರಾಣಿಕ
ಕನ್ನಡ ವಾಕ್ಚಿತ್ರ

ಚಿರಂಜೀವಿ

ಮಾರ್ಕಾಂಡೇಯ

ಮುಖ್ಯ ಪಾತ್ರಗಳು —

ಮಾರ್ಕಾಂಡೇಯ — ಕುಮಾರ ನಾರಾಯಣ
ಮೃಕಂಡು: — ಶ್ರೀ ದೇವುಡು M A.
ಮರುದ್ವತಿ ಶ್ರೀಮತಿ ಪಿ ಸುಂದರಮ್ಮ.
ಪರಮೇಶ್ವರ:— ಶ್ರೀ ಆರ್ ಎಸ್. ಮೂರ್ತಿ
ನಾರದ — ಶ್ರೀ ಬಸವರಾಜ ಮನಸೂರ
ಪಾರ್ವತಿ ಶ್ರೀಮತಿ ಪಾರ್ವತಿ.
ಶ್ರೀ ಮುದವೀಡು ಕೃಷ್ಣರಾಯರು, ಶ್ರೀ ಶೇಷಾದ್ರಿ,
ಮಿಸ್ ಲೀಲಾ, ಮಿಸ ಗಂಗೂ, ಕುಮಾರಿ ಶಾರದಾ,
ಕರ್ನಾಟಕ ಕೋಕಿಲ ಅಮೀರಬಾಯಿ ಕರ್ನಾಟಕಿ
ಮೊದಲಾದವರು ಪಾತ್ರವಹಿಸಿರುವರು.

ಪ್ರದರ್ಶಿಸುವ ದಿನವನ್ನು ಎದುರುನೋಡಿರಿ!

— ವಿವರಗಳಿಗೆ ಬರೆಯಿರಿ —

ಮೋಹನ ಮತ್ತು ಕಂಪೆನಿ, ಬ್ಯಾಂಕು ಬೀದಿ, ಧಾರವಾಡ.

ಚಿಂತಾರತ್ನ

ಇದರಲ್ಲಿ—೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ, ೩ ಕಾಸ್ಟಿಕ್ ಸೋಡಾ ತಯಾರಿಸುವುದು ೪ ಬಿಸ್ಕೀಟ ತಯಾರಿಸುವುದು ೫ ದಶಾಂಗ ತಯಾರ ಮಾಡುವುದು ೬ ಪೆಪ್ಪರಮೆಂಟು ಮಾಡುವುದು ೭ ದೂಪದ ಛಟ್ಟ ಮಾಡುವುದು ೮ ಬಂಗಾರ ಮಾಡುವುದು ೯ ಬೆಳ್ಳಿ ತಯಾರ ಮಾಡುವುದು ೧೦ ಜರ್ಮನ್ ಸಿಲ್ವರ್ ಧಾತು ಮಾಡುವದು ೧೧ ಊದಿನ ಕಡ್ಡಿ ತಯಾರಮಾಡುವುದು ೧೨ ತಗಡಿನಪಾಟಿ ತಯಾರಮಾಡುವುದು ೧೩ ಕುಂಕುಮವನ್ನು ತಯಾರಿಸುವುದು ೧೪ ಪೇಕುಂಕುಮವನ್ನು ತಯಾರಿಸುವುದು ೧೫ ಗೋದೀ ಸರಿ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು. ೧೭ ಹೂನ ಸರಿ ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಮಾನುಗಳು ೧೯ ಛರ್ಪ ತಯಾರಮಾಡುವುದು ೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನು ಮಾಡುವುದು ೨೨ ಮೆಂಥೀಲ ಎಣ್ಣೆ ತಯಾರಿಸುವುದು, ೨೩ ಕನ್ನಡಿಯ ಮೇಲೆ ಬರೆಯುವುದು ೨೪ ದಂತಮಂಜನ ಮಾಡುವುದು ೨೫ ರಕ್ತ ... ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು ೨೭ ಅಜೀರ್ಣಕ್ಕೆ ಔಷಧ ೨೮ ಬಾಲಾಮೃತ ಮಾಡುವುದು ೨೯ ಕೇಶವೃದ್ಧಿಗೆ ಎಣ್ಣೆ ೩೦ ಸರಬತ್ತು ಮಾಡುವುದು, ೩೧ ಚಳಿಜ್ವರದ ಗುಳಿಗೆ ಮಾಡುವುದು ೩೨ ಬೂಟಪಾಲಿಶ ಮಾಡುವುದು, ೩೩ ಪುಸ್ತಕ ಬಜಾರ ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು ೩೪ ಹುರುಕು ಬಿಡ್ಡ ಮುಲಾಮು ೩೫ ನಾಸೀರ ಮಾಡುವುದು ಇತ್ಯಾದಿ ೧೭೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ)

ವಿಳಾಸ—ಎಸ್. ಸಿ ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ ೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿ ಜಾತಿ ಸ್ತ್ರೀಯ ಲಕ್ಷಣ ೮ ಚಿತ್ರಿಣೀ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲಚಿಟಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಳೆಯ ಸ್ಥಾನಗಳು ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ, ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೭೦ ವಿಷಯಗಳು ಇರುತ್ತವೆ,

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ)

ವಿಳಾಸ—ಎಸ್ ಸಿ ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

—. ಇದು :—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ

ಇದರಲ್ಲಿ ವೈದ್ಯಶಾಸ್ತ್ರ ಕಾಮಶಾಸ್ತ್ರ, ವಶ್ಯಭಾಗ, ಶಕುನಭಾಗ ಕೈಗಾರಿಕೆ ವಿಷಯ ಕಾಯದೇಭಾಗ ಇಂದ್ರಜಾಲ ಮಹೇಂದ್ರಜಾಲ ಯಕ್ಷಿಣಿ, ತಂತ್ರ ಮಂತ್ರ ಯಂತ್ರ ವಶೀಕರಣ, ಇತ್ಯಾದಿ ಅನೇಕ ಮರ್ಮವಿದ್ಯೆಗಳು ಇರುತ್ತವೆ ಎಲ್ಲ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೂಲ್ಯ ಗ್ರಂಥದ ಬೆಲೆ ೧—೦—೦

ವಿಳಾಸ ಎಸ್ ಸಿ ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers —

S C. Salimath & Sons,
GADAG.

೫ ಲಕ್ಷ ಮುಸ್ಲಿಮರು ಕಾಂಗ್ರೆಸ್ಸಿಗೆ.

ಹರಾರ್ ಮುಸ್ಲಿಮ್ ಕಮಿಟಿಯ ಯೋಜನೆಗಳು.

ಅಖಿಲಭಾರತ ಹರಾರ್ ಮುಸ್ಲಿಂ ಕಮಿಟಿಯ ಅಧ್ಯಕ್ಷರಾದ ಮೌಲಾನಾ ಹಬಿಬುಲ್ ರಹಿಮಾನ್‌ರವರು ಪತ್ರಿಕಾ ಪ್ರತಿನಿಧಿಗಳಿಗೆ ಲಕ್ನೋದಲ್ಲಿ ಕೊಟ್ಟ ಒಂದು ಭೇಟಿಯಲ್ಲಿ, ಇನ್ನು ಸದ್ಯದಲ್ಲಿಯೇ ೫ ಲಕ್ಷ ಮುಸ್ಲಿಮರ ಒಂದು ಪಡೆಯೇ ಕಾಂಗ್ರೆಸನ್ನು ಪ್ರವೇಶಮಾಡುವುದೆಂದು ತಿಳಿಸಿದರು.

ಈ ಏರ್ಪಾಡಿಗಾಗಿಯೇ ಅದರ ಕಮಿಟಿಯು ಕುಂಬಾ ಪ್ರಯತ್ನದಲ್ಲಿದೆಯಂತೆ. ಗಡಿನಾಡಿನ ಕೆಂಪಂಗಿಗಳಂತೆ ಇವರೂ ಕಡಾ ವಿಶೇಷ ಶಿಸ್ತಿನಲ್ಲಿ ಮುಸ್ಲಿಮರನ್ನು ತರಬೇತುಗೊಳಿಸಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸಿನೊಡನೆ ಸೇರಿ ಕೆಲಸಮಾಡಬೇಕೆಂಬುದೇ ಇವರ ಉದ್ದೇಶವಾಗಿರುತ್ತದೆ. ಆಗಲೇ ಅವರಲ್ಲಿ ೫ ಸಾವಿರ ಸ್ವಯಂಸೇವಕರು ಪಂಜಾಬಿನಲ್ಲಿಯೂ, ೧೨ ಸಾವಿರ ಮಂದಿಗಳು ಶರ್‌ಕೋಟ್ ಜಿಲ್ಲೆಯಲ್ಲಿಯೂ ಇರುವರಂತೆ. ಇವರೆಲ್ಲರೂ ಒಳ್ಳೇ ಶಿಸ್ತಿನಿಂದದ್ದು, ಸುಸಜ್ಜಿತರಾಗಿರುವರು.

ಅನೇಕ ಪಂಗಡಗಳು ಸಹಕರಿಸಿ ಕೆಲಸಮಾಡುವ ಪಕ್ಷದಲ್ಲಿಯೇ ಶ್ರೀ ಭೋಸರು - ಆ ಪದವಿಯನ್ನು ಅಲಂಕರಿಸಲು ಒಪ್ಪಿರುವರು.

ಪ್ರಪಂಚದ ಸ್ಕೌಟ ಶ್ರೇಷ್ಠರಾದ ಲಾರ್ಡ ಬೇಡನ್ ಪೊವೆಲ್‌ರವರು ಹಿಂದೂದೇಶದಲ್ಲಿ ಸ್ಕೌಟ ಚಳವಳಿಯು ಬಹಳ ಪ್ರಗತಿಹೊಂದಿರುವುದೆಂದು ಅಭಿಪ್ರಾಯಹೊಂದಿರುವರು.

ಲಾಹೋರ್ ಜಿಲ್ಲೆಗೆ ಸೇರಿದ ಕಸೂರ್ ಎಂಬಲ್ಲಿ ಸರ್ಕಾರಿ ಅಧಿಕಾರಿಗಳು ೧೪೪ನೇ ಸೆಕ್ಷನ್‌ನನ್ನು ಮಾರ್ಚಿ ೨೭ನೇ ತಾರೀಕಿನ ವರೆಗೆ ಜ್ಯಾರಿಯಲ್ಲಿರಿಸಿದರು.

ಗಡಿನಾಡಿನ ಏಸೆಂಬ್ಲಿಯಲ್ಲಿ ಸುಮಾರು ಆರು ಮಂದಿ ಮುಸ್ಲಿಮ ಸದಸ್ಯರು ಕಾಂಗ್ರೆಸ್ ಪ್ರತಿಜ್ಞೆಯನ್ನು ಕೈಕೊಳ್ಳಲು ನಿಶ್ಚಯಿಸಿರುವುದರಿಂದ ಆ ಏಸೆಂಬ್ಲಿಯಲ್ಲಿ ಕಾಂಗ್ರೆಸ್ ಪಾರ್ಟಿಯೇ ಬಹುಮತದ ಪಾರ್ಟಿಯಾಗುವ ಸಂಭವಗಳಿವೆ.

ಕರವೀರ ಮಠದ ಶಂಕರಾಚಾರ್ಯರು ಪದವಿತ್ಯಾಗಮಾಡುವರು!

ಗೋವಾದಲ್ಲಿ ಪತ್ರಿಕೆಗಳ ಮೇಲೆ ಬ್ರಿಟಿಷ್ ಇಂಡಿಯಾದಲ್ಲಿರುವ ಹಾಗೆಯೇ ಪ್ರತಿಬಂಧಕ ಆಜ್ಞೆಯನ್ನು ಹೊರಡಿಸಿದ್ದಾರೆ.

ಕಳೆದ ತಾ. ೨೩ನೇ ಪ್ರಾತಃಕಾಲ ಮದ್ರಾಸಿಗೆ ಬರುತ್ತಿದ್ದ ಕಲ್ಕತ್ತಾ- ಮದ್ರಾಸ್ ಮೆಯಿಲ್ ರೈಲಿನಲ್ಲಿ ಒಂದು ಬಹು ವಿಷಾದವಾದ ದುರ್ಘಟನೆ ಸಂಭವಿಸಿತು. ರೈಲಿನಿಂದ ಬರುತ್ತಿದ್ದ ಟಿ. ಎನ್. ನಾರಾಯಣನ್ ಎಂಬೊಬ್ಬ ಮೆಡಿಕಲ್ ವಿದ್ಯಾರ್ಥಿಯು ಕಂಪಾರ್ಟಮೆಂಟಿನ ಬಾಗಿಲನ್ನು ತೆರೆದು ಹೊರಗಡೆ ತಲೆಹಾಕಿಕೊಂಡು ನಿಂತಿದ್ದರಂತೆ. ಮದ್ರಾಸು ಸ್ಟೇಷನಿನ ಹತ್ತಿರ ರೈಲು ಬಂದಾಗ ರೈಲು ಒಂದು ಸೇತುವೆಯ ಬಳಿ (ಎಲಿಫೆಂಟ್ ಗೇಟ್) ಸೇತುವೆಯ ಗೋಡೆಗೆ ವಿದ್ಯಾರ್ಥಿಯ ತಲೆ ತಗಲಿತು. ಟಿ. ಎನ್. ನಾರಾಯಣನ್‌ರವರು ಕೆಳಗೆ ಬಿದ್ದು ಮೃತರಾದರು.

ನಾಸಿಕದ ಇಂಗ್ಲಿಷ್ ಸ್ಕೂಲಿನ ವರ್ಧಂತ್ಯುತ್ಸವ ದಿನದ ಭಾಷಣಮಾಡುತ್ತಾ, ಕರವೀರ ಮಠದ ಜಗದ್ಗುರು ಶಂಕರಾಚಾರ್ಯರಾದ ಡಾ। ಕುರ್ತಕೋಟಿಯವರು ತಮ್ಮ ಪದವಿಯನ್ನು ಬಿಟ್ಟುಬಿಡುವ ಇಚ್ಛೆಯನ್ನು ತಿಳಿಸಿದರು. ಇದಕ್ಕೆ ಎರಡು ಕಾರಣಗಳಿವೆಯಂತೆ. 'ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥತೆ' ಮತ್ತು 'ಅವರ ಇತ್ತೀಚೆಗಿನ ಅಸ್ಪೃಶ್ಯತಾ ನಿವಾರಣ ಚಳವಳಿ'. ಅವರಿಗೆ ಸಿಗುತ್ತಿರುವ ೮೦೦೦೦ ರೂಪಾಯಿಗಳ ಸಂಬಳ ಈ ಮೇಲೆ ದೊರಕಿತೋ ಇಲ್ಲವೋ ಎಂಬ ವಿಷಯವು ಇನ್ನೂ ತಿಳಿದಿಲ್ಲ.

ಗತ ಮಾರ್ಚಿ ೨೭ನೇ ತಾರೀಕು ಬಂಗಾಳದಲ್ಲೆಲ್ಲಾ ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಸುಭಾಷ ದಿನವನ್ನು ಆಚರಿಸಿ ಸಧ್ಯಯವರಿಗೆ ಮಾನಪತ್ರಗಳನ್ನು ಅರ್ಪಿಸಿದರು.

ಪಂಡಿತ ಜವಾಹರಲಾಲ ನೆಹ್ರೂ ಸೇಟ್ ಜವಹ್ನಾಲಾಲ ಬಜಾಜರೂ ಜಾಲಿಯನ್‌ವಾಲಾ ಬಾಗ್ ಸ್ಮಾರಕನಿಧಿಯ ಟ್ರಸ್ಟಿಗಳಾಗಿ ನಿಯಮಿಸಲ್ಪಟ್ಟಿರುವರು.

ರಾಷ್ಟ್ರಪತಿಗಳ ಪುತ್ರಿ ಶ್ರೀ ಇಂದಿರಾ ನೆಹರೂರವರು ಏಪ್ರಿಲ್ ೩೦ಕ್ಕೆ ಇಂಗ್ಲೆಂಡಿನಿಂದ ಹಿಂದೂದೇಶಕ್ಕೆ ಬರುವರಂತೆ.

ಪಂಡಿತ ಮದನಮೋಹನ ಮಾಳವ್ಯರು.

ನ್ಯಾಸರಾಯರ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಂಗಡದ ಮುಖಂಡತ್ವವನ್ನು ವಹಿಸುವರು. ಇವರಿಗಾಗಿ ಶ್ರೀ। ಅಣೆಯವರು ತಮ್ಮ ಸ್ಥಾನವನ್ನು ಬಿಟ್ಟುಕೊಡುವರೆಂದು ತಿಳಿದುಬಂದಿರುತ್ತದೆ.



ರಾಷ್ಟ್ರಪತಿ ಪಂಡಿತ ಜವಾಹರ ಲಾಲ ನೆಹ್ರೂಗಳು.

ಗಡಿನಾಡಿನ ಗಾಂಧಿಗಳಾದ ಅಬ್ದುಲ್ ಗಫೂರ್ ಖಾನರು

ಗಡಿನಾಡು ಪ್ರಾಂತ್ಯದಲ್ಲಿ ನವ ಮಂತ್ರಿಮಂಡಲದ ರಚನೆಯಾದೊಡನೆ, ಅಬ್ದುಲ್ ಗಫೂರ್ ಖಾನರ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆದುಹಾಕಲು ಪ್ರಯತ್ನಗಳಾಗುವುದರಿಂದ ಅಲ್ಲಿನ ಗವರ್ನರರು ಇದರ ವಿಚಾರ ನ್ಯಾಸರಾಯರೊಡನೆ ಮಾತುಕತೆ ನಡೆಸಿರುವರು.

o o o o

ಪಂಡಿತ ಜವಾಹರಲಾಲ ನೆಹರೂಗಳ ಆತ್ಮಕಥೆಯನ್ನು ಪ್ರಕಟಿಸಿದ ಲಂಡನಿನ ಪ್ರಸಿದ್ಧ ಪ್ರಕಾಶಕರಾದ ಮೆ। ಬಾಡ್ಲಿ ಕಂಪೆನಿಯು ದಿವಾಳಿಯಾಗಿರುತ್ತದೆ. ಇಷ್ಟರ ವರೆಗೆ ಪಂಡಿತರ ಆತ್ಮಕಥೆಯ ಸಾವಿರಾರು ಪ್ರತಿಗಳು ಖರ್ಚಾಗಿದ್ದುವು- ಇದರಿಂದ ಅವರಿಗೆ ಕಮಿಶನ್ ಮೂಲಕ ೨೦ ಸಾವಿರ ರೂಪಾಯಿಗಳು ಸಿಕ್ಕಿದ್ದುವು. ಇನ್ನೂ ಅವರಿಗೆ ೮೦ ಸಾವಿರ ರೂಪಾಯಿಗಳು ಸಿಕ್ಕಲಿಕ್ಕಿತ್ತು- ಈ ವಾರ್ತೆಯನ್ನು ಪಂಡಿತರಿಗೆ ತಿಳಿಸಿದಾಗ ಅವರು ಯಾವ ತರಹ ಚಕಿತಮನೋಭಾವವನ್ನೂ ತೋರ್ಪಡಿಸದೆ ಗಂಭೀರವಾಗಿಯೇ ಇದ್ದರು.

ವಾರ್ತಾ ವಿಶೇಷಗಳು.

ಕಳೆದ ಹಲವು ದಿವಸಗಳಿಂದಿದ್ದ ಲಕ್ನೋ ನಗರದ ಗಿರಿಣಿ ಕೆಲಸಗಾರರ ಮುಷ್ಕರವು ಇದೇ ತಿಂಗಳ ೨೩ನೇ ತಾರೀಕಿಗೆ ಅಂತ್ಯಗೊಂಡು ಕೆಲಸಗಾರರೆಲ್ಲರೂ ಕೆಲಸಕ್ಕೋಸ್ಕರ ಹಿಂತಿರುಗಿರುವರು.

ಕಾಂಗ್ರೆಸ್ಸಿನ ಧ್ಯೇಯಗಳನ್ನು ಮುಸ್ಲಿಮರೂ ಅಂಗೀಕರಿಸುವಂತೆ ದೇಹಲಿಯಲ್ಲಿ ಪ್ರಬಲವಾದ ಪ್ರಯತ್ನವು ನಡೆಯುತ್ತಿದೆ.

ಪ್ರಸಿದ್ಧ ಕೆಲಸಗಾರರಲ್ಲೊಬ್ಬನಾದ ಮಿ। ಕೊಷಾರ್ ಕುಮಾರ್ ಎಂಬವನನ್ನು ದರ್ಭಾನ್ ಸಂಸ್ಥಾನದ ಒಂದು ಗ್ರಾಮದಲ್ಲಿ ಕೊಲೆ ಮಾಡಿರುವರು.

ಸುಭಾಸ್‌ಚಂದ್ರ ಭೋಸರ ದೇಹಸ್ಥಿತಿಯು ಈಗಲೂ ಚೆನ್ನಾಗಿರುವುದಿಲ್ಲ. ದಿನನಿತ್ಯವೂ ಅವರದೇಹದ ಉಷ್ಣವು ೧೦೦ ಡಿಗ್ರಿಗಳಿಗೆ ಏರುವುದು. ಇವರು ದೇಹಾರೋಗ್ಯದ ಸಮ್ಬಂಧವಾಗಿ, ಪುರಿಗೆ ಹೋಗಿ ಅಲ್ಲಿ ೩ ತಿಂಗಳ ಕಾಲ ವಿಶ್ರಾಂತಿಪಡೆದು ಸರ್‌ನೀಲರತನ್ ಸರ್ಕಾರರು ಏರ್ಪಡಿಸಿದ ಉಸ್ತುವಾರಿಯನ್ನು ಸ್ವೀಕರಿಸುವರು. ಬಂಧನವಿಮುಕ್ತರಾದ ಇವರು ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗುವ ಸಂಭವವಿದೆ. ಆದರೆ ಬಂಗಾಳದ

ನ್ಯಾಶನಲ್ ಟ್ರೇಡ ಯೂನಿಯನ್ ಫೆಡರೇಶನ್ ಇದು ಕಲ್ಕತ್ತದ ಶ್ರೀ ಸತೀಷ್ ಸೆನ್‌ರವರನ್ನು ಮತ್ತು ಜೆಂಷೆಡಪುರದ ಶ್ರೀ ಡಬ್ಲ್ಯು ವಿ. ಆರ್. ನಾಯುಡುರವರನ್ನೂ ಡೆಲಿಗೇಟರುಗಳನ್ನಾಗಿ ಆರಿಸಿ ಅಂತರಾಷ್ಟ್ರೀಯ ಲೇಬರ್ ಸಮ್ಮೇಳನಕ್ಕೆ ಜಿನೀವಕ್ಕೆ ಕಳುಹಿಸಿಕೊಡಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಿರುತ್ತದೆ.

೨೩ನೇ ತಾರೀಕಿನ ದಿನ ಅಮೆರಿಕದ ಪ್ರಸಿದ್ಧ ವೈಮಾನಿಕನಾದ ಕರ್ನಲ್ ಲಿಂಡಬರ್ಗರು ನವದೆಹಲಿಯಲ್ಲಿ ಪಂಡಿತ ನೆಹರೂರೊಡನೆ ವೈಮಾನಿಕ ಸಂಚಾರದ ಕುರಿತು ಮಾತುಕತೆನಡೆಸಿದರು.

ನೂತನ ರಾಜ್ಯಾಂಗಆಡಳಿತದಲ್ಲಿ ಸಿಂದ್ ಪ್ರಾಂತದ ಮಂತ್ರಿಗಳಿಗೆ ತಿಂಗಳೊಂದಕ್ಕೆ ೨೦೦೦ ರೂ. ತಲಬುಕೊಡುವರಂತೆ.

ಸೇಲಂ ಜಿಲ್ಲೆಯ ೧೦ ಗ್ರಾಮಗಳಲ್ಲಿ ಕಾಲರ ಉಪದ್ರವ ಇರುವುದಂತೆ. ಇದರಿಂದ ೨೦೦ ಜನರು ಸದ್ರಿ ರೋಗಕ್ಕೆ ಬಲಿಬಿದ್ದಿರುವರು. ನೂರು ಮಂದಿ ಉಪದ್ರವಕ್ಕೆ ತುತ್ತಾಗಿರುವರು.

ಕೊಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳು ಸಿಗಲಾರವು.

ಲೋಹ ವಿಷದಿಂದ
(Metal- poisoning)
ಉಂಟಾಗುವ ಭಾದೆಯು ಇಲ್ಲ

ಅನೇಕ ತರಹ ಮತ್ತು ಪ್ರಮಾಣಗಳಿವೆ.

ಮುಖ್ಯ ಏಜಂಟರು:

ಕೆ. ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ ರಸ್ತೆ ಮಂಗಳೂರು.

ಅನುಕ್ರಮಣಿಕೆ.

[illegible] ೩
[illegible] ೪
[illegible] ೫
[illegible] ೬
[illegible] ೧೦
ಅಗ್ರಲೇಖ
ಆದುದೇನು? ೧೦
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ

ತಾ. ೨ನೇ ಶುಕ್ರವಾರ ಏಪ್ರಿಲ್ ೧೯೩೭

ಸ್ವದೇಶಾಭಿಮಾನಿ.

ಆದುದೇನು?

ನೌಕರಶಾಹಿಯ ಕೈಯಿಂದ ಜನತೆಗೆ ರಾಜ್ಯಾಡಳಿತದ ಸೂತ್ರಗಳು ಸೇರಬೇಕೆಂದು ಹೊಸ ಆಕ್ಟನ್ನು ಭಾರತೀಯರಿಗೆ ಕೊಡಲಾಗಿದೆ ಎಂಬ ಆಡಂಬರದ ಮಾತು, ಪಾರ್ಲಿಮೆಂಟಿನಲ್ಲಿ ಘಂಟಾಘೋಷವಾಗಿ ಸಾರಲಾಗಿದ್ದಿತು. ಬಹುಕಾಲದಿಂದಲೂ ಅಧಿಕಾರ ನಡೆಸಿ ಬಂದ ನೌಕರರು ಟಪ್ಪನೆ ಅಧಿಕಾರವನ್ನು ಇತರರಿಗೆ ವಹಿಸಿಕೊಡಲಾಗದಿರುವುದು ಸ್ವಭಾವಸಿದ್ಧವೇ ಆಗಿದೆ. ಅದುಕಾರಣ, ಇತರ ನಿರ್ವಾಹಕರಲ್ಲಿ ಸಂಶಯವನ್ನೂ ಭಯವನ್ನೂ ಕಾಣುತ್ತಿರಬಹುದು. ಅದಕ್ಕಾಗಿ, ಯಾರು ನಿರ್ವಹಿಸಿದರೂ, ಅತ್ತಿತ್ತ ಹೋಗದ ಪ್ರತಿಬಂಧಕಗಳನ್ನು ಆಕ್ಟಿನಲ್ಲಿ ಹೂಡಿದ್ದರು. ಆಗ, 'ಈ ಬಂಧಕಗಳು ಸ್ವಾತಂತ್ರ್ಯಕ್ಕೆ ವಿರುದ್ಧವಲ್ಲವೆ?'ಎಂದಾಗ 'ಅವನ್ನು ಯುಗಕ್ಕೊಮ್ಮೆ ಎಂಬಂತೆ ಗವರ್ನರರು ಉಪಯೋಗಿಸಬಹುದು. ಆಕ್ಟಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ನಡೆದರೆ ತಾನೆ ಪ್ರತಿಬಂಧಕಗಳ ಪ್ರಯೋಗ?'' ಎಂದೂ ಉಚ್ಚಾಧಿಕಾರಿಗಳು ಸಮಾಧಾನ ಹೇಳಿದ್ದರು.

ಕೊಂಗ್ರೆಸ್ಸಿನಲ್ಲಿ, ಅಧಿಕಾರ ಸ್ವೀಕರಿಸುವುದುತ್ತಮವೆಂದು ಸಾರಿದವರು ಇದ್ದಾರೆ; ಅದೇ ಗುಲಾಮಗಿರಿಯ ಹುದ್ದೆ ಎಂದವರೂ ಇದ್ದಾರೆ. ಇವರ ಅಭಿಪ್ರಾಯಗಳನ್ನು ಕೇಳಿ, ಆಕ್ಟಿನ ಗಡಿಯೊಳಗೇ ಸ್ವೇಚ್ಛೆಯಾಗಿ ವಿಹರಿಸುತ್ತ, ಬೇಕಾದ ರೀತಿ ದೇಶಸೇವೆ ಮಾಡಿ ಸ್ವತಂತ್ರರಾಗೋಣ ಎಂದು ನಿರ್ಧರಿಸಿ ಒಂದು ಸೂಚನೆ ತರಲಾಯಿತು. ಆದರೆ, ಮುಂದೆ ಬಹಳ ದೂರ ನಡೆದ ಬಳಿಕ, ದಾರಿ ಗಟ್ಟಿಯಾಗಿ ಹೋಗಿ ಪ್ರಲಾಪಿಸುವ ಬದಲಾಗಿ, ಈಗಲೆ ಎಷ್ಟು ದೂರ ನಡೆಯಲು ಸ್ವಾತಂತ್ರ್ಯವಿದೆ ಎಂಬುದನ್ನು ತಿಳಿದುಕೊಳ್ಳುವುದುತ್ತಮವೆಂದು ಗಾಂಧಿಜೀಯವರು ಒಂದು ವಾಕ್ಯವನ್ನು ಈ ಸೂಚನೆಗೆ ಕೂಡಿಸಿದರು.

ಮಂತ್ರಿಮಂಡಲದ ಸೂಚನೆಯಂತೆ ಗವರ್ನರರು ನಡೆಯಲು ಸಿದ್ಧರಿರಬೇಕು. ಆಕ್ಟಿನ ತತ್ವಕ್ಕೆ ವಿರುದ್ಧವಾಗಿ ಮಂತ್ರಿಗಳು ಸೂಚಿಸಿದಾಗ ಕೂಡಲೆ ತಡೆಯಬೇಕು, ಹೊರತು, ಆಕ್ಟಿನ ಚತುರ್ಗಡಿಯಲ್ಲಿ ನಡೆವಾಗ ಅಲ್ಲಿ ಹೇಗಿದ್ದರೂ, ಪರಂಪರಾಗತವಾಗಿ ಸ್ವೇಚ್ಛಾವರ್ತನೆಯುಳ್ಳ ನೌಕರರು ಪಕ್ಕನೆ ಅಷ್ಟು ಸುಗಮವಾಗಿ ಸಲಕರಣೆಗಳನ್ನು ಕೊಡಲೊಪ್ಪದೆ, ತಮ್ಮ ಜವಾಬುದಾರಿಯ ಮಾತೆತ್ತಿ, ಪ್ರತಿಯೊಂದೂ ಕಡೆ ಆತಂಕಿಸಬಹುದು. ಆಕ್ಟಿನ ತತ್ವಕ್ಕೆ ವಿರುದ್ಧವಾಗದಂತೆ, ಹಾಕಿಕೊಟ್ಟ ರೇಖೆಯೊಳಗೇ ನಾವು ಕೆಲಸ ಮಾಡುವಾಗ ಆತಂಕಿಸದಂತೆ ಗವರ್ನರರು ಮಾತುಕೊಟ್ಟ ಬಳಿಕ ಮಾತ್ರ ಅಧಿಕಾರ ಸ್ವೀಕರಿಸಿರಿ ಎಂದು ಗಾಂಧಿಜಿಯವರು ಸೂಚಿಸಿದಂತೆ, ಈ ಶರ್ತ [illegible] ಅಧಿಕಾರಕ್ಕೆ ಕೂಡಿಸಲಾಯಿತು.

ಅಧಿಕಮತಗಳ ಬೆಂಬಲವು ಕೊಂಗ್ರೆಸಿಗಿರುವ ಪ್ರಾಂತ್ಯಗಳಲ್ಲಿ, ಕೊಂಗ್ರೆಸ್ ಪಕ್ಷದ ನಾಯಕರನ್ನು ಗವರ್ನರರು ಕರೆದು ಮಂತ್ರಿಮಂಡಲ ರಚಿಸಲು ಸಹಾಯ್ಯ ಕೇಳಿದರು. ಆಗ ಈ ಶರ್ತದ ಮಾತನ್ನು ಮಂತ್ರಿಗಳೆತ್ತಿದರು. ಎಲ್ಲೆಲ್ಲಿಯೂ ಒಂದೇ ಒಕ್ಕಣೆಯ ಜವಾಬು ದೊರೆಯಿತು. "ಗವರ್ನರರು ತಮ್ಮ ಚಿತ್ತಕ್ಕೆ ಬಂದಂತೆ, ಯಾವ ಮಂತ್ರಿಗಳ ಸೂಚನೆಗಳನ್ನು ನಿರಾಕರಿಸಬಹುದು ಅಥವಾ ಒಪ್ಪಬಹುದು'' ಎಂದಿದೆಯಷ್ಟೆ. 'ನಿರಾಕರಿಸಬಹುದು'ಎಂಬುದನ್ನು ಗವರ್ನರರು ತಿಳಿದು, 'ನಿರಾಕರಿಸಬಾರದು' ಎಂದಿಲ್ಲದಿರುವ ಕಾರಣ, ಒಪ್ಪುವ ಅಥವಾ ಒಪ್ಪದ ಹಕ್ಕು ತಮ್ಮ ಜವಾಬ್ದಾರಿಗೆ ಸೇರಿದ್ದ ಕಾರಣ, ನಾವು ಒಪ್ಪುವುದಿಲ್ಲ ಅಥವಾ ಒಪ್ಪುತ್ತೇವೆ ಎಂದು ಈಗಲೆ ಹೇಳಿದರೆ ಅದು ಆಕ್ಟಿಗೆ ವಿರುದ್ಧವಾದೀತೆಂದು ಭಾವಿಸಿ, ಮಂತ್ರಿಗಳು ಸೂಚಿಸುವುದನ್ನು ಸೂಚಿಸಲಿ ಗವರ್ನರರು ಇಷ್ಟಪಟ್ಟಂತೆ ಮಾಡುವರು ಎಂದೇ ತಮ್ಮೊಳಗೆ ನಿರ್ಧರಿಸಬೇಕಾಗಿ ಬಂತು.

ಗವರ್ನರರು ಈ ಶರ್ತವನ್ನು ಎಲ್ಲಿಯೂ ಸಮ್ಮತಿಸಲಿಲ್ಲ. ಕೊಂಗ್ರೆಸ್ ಪಕ್ಷವೂ ತನಗೆ ಅಧಿಕ ಮತಗಳ ಬೆಂಬಲವಿದ್ದಲ್ಲಿಯೂ ಅಧಿಕಾರವನ್ನು ಸ್ವೀಕರಿಸಲು ಒಪ್ಪಲಿಲ್ಲ.

ಗವರ್ನರರೊಡನೆ ಮೊದಲಾಗಿಯೆ ಹೀಗೆ ಕೇಳಿಕೊಂಡು, ಅವರ ಅಭಿಪ್ರಾಯ ಪಡೆದುದು ತುಂಬ ಕ್ಷೇಮಕರವಾಗಿದೆ ಎನ್ನಬೇಕು. ಇಲ್ಲದಿದ್ದಲ್ಲಿ, ಸಭೆಸೇರಿದ ಕೆಲವೇ ನಿಮಿಷಗಳಲ್ಲಿ ಆತಂಕಗಳು ಉಂಟಾಗಿ ರಗಳೆಗೀಡಾಗುತ್ತಿದ್ದರು.

ಗವರ್ನರರು ಅವರ ಚಿತ್ತಕ್ಕೆ ತೋಚಿದಂತೆ ಆಯಾ ವಿದ್ಯಮಾನಗಳನ್ನು ಇತ್ಯರ್ಥಿಸಬಹುದಾಗಿದೆ. ಆಕ್ಟಿನ ತತ್ವಕ್ಕೆ ಅನುಸಾರ ನಡೆವ ಮಂತ್ರಿಗಳನ್ನು ತಾನು ತಡೆವುದಿಲ್ಲವೆಂದು ಗವರ್ನರರು ಹೇಳಿದರೆ, ಅದರಲ್ಲೇನೂ ತಪ್ಪಾಗುತ್ತಿರಲಿಲ್ಲ. ಏಕೆಂದರೆ, ಗವರ್ನರರ ಅಧಿಕಾರಕ್ಕೆ ಮೀರಿ ಯಾವ ಮಂತ್ರಿಯೂ ನಡೆವುದಿಲ್ಲ; ನಡೆವ ಮೊದಲೇ ರಾಜೀನಾಮೆ ಕೊಡಬೇಕಾಗುವುದು. ಆಕ್ಟಿನಲ್ಲಿ, ಗವರ್ನರರು ವಿಧಿಸಲೇ ಬೇಕೆಂದಿರುವ ಕಾರ್ಯಕ್ರಮವನ್ನು ಮುರಿಯಬೇಕೆಂದು ಕೊಂಗ್ರೆಸಿನವರು ಈ ಮೂಲಕ ಪ್ರಯತ್ನಿಸಿಲ್ಲ. ಆದರೆ, ಜನತೆಯ ಬೆಂಬಲವಿದ್ದು ಪ್ರತಿಯೊಂದು ಹೆಜ್ಜೆಯನ್ನು ಆಕ್ಟಿನ ಸೂಚನೆಗಳಂತೆ ಇಡುವಾಗಲಾದರೂ, ಗವರ್ನರರು ತಡೆದರೆ ಎಷ್ಟೋ ಹಾಸಿಯಾಗುವುದೆಂದೇ, ಈಗಲೆ ತಿಳಿಯಲು ಪ್ರಯತ್ನಗಳಾದುವು.

ಪ್ರಾಂತಿಕ ಸ್ವರಾಜ್ಯವನ್ನು ಈ ಮೂಲಕ ಕೊಟ್ಟೆವು ಎಂದು ಪಾರ್ಲಿಮೆಂಟಿನ ಮಾತಿಗೆ ಈಗ ಬೆಲೆ ಬಂದಿದೆಯೆ? ಇಲ್ಲವೆ? ಅಥವಾ ಪ್ರಾಂತಿಕ ಸ್ವರಾಜ್ಯ ಎಂಬುದನ್ನು ಕೈಕೊಂಡು ನಡೆಸಿ ಬರುವಾಗ, ಆತಂಕವನ್ನೊಡ್ಡಲು ಅಧಿಕಾರಿಗಳಿಗೆ ಪೂರ್ಣ ಅಧಿಕಾರವು ಈ ಆಕ್ಟಿನಲ್ಲಿದೆಯೆ? ಇಲ್ಲವೆ? ಎಂಬುದಕ್ಕೆ ಈಗ ಎಲ್ಲರೂ ತಿಳಿದುಕೊಳ್ಳುವಂತಾಯಿತು.

"ಅಧರಕ್ಕೆ ಸಿಹಿ, ಹೃದಯಕ್ಕೆ ವಿಷ'' ಎಂಬ ರೀತಿಯಲ್ಲಿ ಬ್ರಿಟಿಷ ಸರಕಾರವು ನಡೆಯುತ್ತಿದೆಯಾಗಿ ಮಹಾತ್ಮರೆನ್ನುವರು. ಜನತೆಯಲ್ಲಿ ಸಂಪೂರ್ಣವಾಗಿಯೂ ಬಲತುಂಬಿ ಅದರ ಚಿತ್ತವನ್ನು ಎದುರಿಸಲು ಸರಕಾರಕ್ಕೆ ಅಸಾಧ್ಯವಾಗುವ ತನಕ, ಅಧಿಕಾರಿಗಳು ಎದುರಿಸುವವರೇ ಎಂದು ಅಧಿಕ ಬಲ ಪಡೆದ ಪಕ್ಷಗಳನ್ನು ಗಣನೆಗೆ ತಾರದ ಸರಕಾರದ ರೀತಿಯಿಂದ ತಿಳಿಯಬರುವುದು. ಇದರಿಂದ ಹಾನಿಯಿಲ್ಲ. ಜನತೆಯಲ್ಲಿ ಇನ್ನಷ್ಟು ಬಲ ತುಂಬಬೇಕು. ಅದುವರೆಗೆ, ಹೆಸರಿಗೆ ಮಾತ್ರ ಸ್ವಾತಂತ್ರ್ಯವಿರುವ ಪ್ರಾಂತ್ಯಗಳಲ್ಲಿ ಸಹ, ನಿಜವಾಗಿ ಆಗುವುದು ಉಚ್ಚಾಧಿಕಾರೀ ವರ್ಗವೇ.

ಸ್ಫುಟವಿಚಾರಗಳು

ಶ್ರೀ. ಸರ್. ಕೂರ್ಮ ವೆಂಕಟರೆಡ್ಡಿಯವರು

ಮಾಜಿ ಆಕ್ಟಿಂಗ್ ಗವರ್ನರರಾಗಿದ್ದವರು. ಈಗ ಅಧಿಕಾರ ಸ್ವೀಕರಿಸಿದಲ್ಲಿ ಯಾವ ಪ್ರಯೋಜನವೂ ಉಂಟಾಗದ ಹಾಗೆ ತಡೆ ಹಾಕುವ ಸಂಭವಗಳು ಇಲ್ಲವಾಗದೆಂದಿಲ್ಲೆಂದು ಬಹುಮತ ಸಂಪಾದಿಸಿರುವ ಕೊಂಗ್ರೆಸ್ ಪಕ್ಷವು ಮಂತ್ರಿಮಂಡಲ ರಚನೆಗೆ ಒಪ್ಪದಿರಲು ಈ ಮಹಾನುಭಾವರು ಆದಿ ಕೂರ್ಮನಂತೆ ಮಂದರಪರ್ವತವನ್ನೆತ್ತಿ ಹಿಡಿಯಲೊಪ್ಪಿದರು. ರಾಜ್ಯಾಂಗರಚನೆಯಲ್ಲುಂಟಾಗಿರುವ ವಿದ್ಯಮಾನಗಳ ಸಮುದ್ರಮಥನವಾಗುತ್ತಿರುವಾಗ, ಕೊನೆಗೆ ಅಮೃತವೇ ನಮಗೆ ಸಿಗುವಂತಾಗುವ ಸಂಭವವಿರಬಹುದೆಂಬ ಭಾವನೆಯಿಂದ ಇವರು ಹೀಗೆ ಅಧಿಕಾರ ವಹಿಸಿರುವುದು ಸಂತೋಷಕರ, ಆದರೆ, ಇವರು ಸೇರಿ ಮಾಡಲಿರುವ ಆ ಮಂಡಲದ ಸ್ಥಿತಿಗತಿಗಳು ಎಂತಹವೆಂದು ಯಾರೂ ತಿಳಿದುಕೊಳ್ಳಲೆತ್ನಿಸಿದರೆ ಇವರು ಪಕ್ಕನೆದುರುಗಿರಿಯನ್ನು ಮುಳುಗಿಸುವರೇ ಎಂದೂ ಭಯವಾಗಬೇಕಾಗಿದೆ. ಶ್ರೀಯುತರು ತಾವಾಗಿ ಯಾವುದೊಂದು ಕೌನ್ಸಿಲಿನ ಸದಸ್ಯರಾಗಿ ಚುನಾವಣೆ ಹೊಂದಿಲ್ಲ. ಚುನಾವಣೆಗೆ ಉಮೇದುವಾರರಾಗಿದ್ದವರೂ ಅಲ್ಲ. ಇನ್ನು ರಾಜಕೀಯದಿಂದ ನಿವೃತ್ತರಾಗುವರು ಎಂದೇ ಎಲ್ಲರೂ ನಂಬಿದ್ದರು. ಅವರಿಗೆ ವೋಟರರಲ್ಲಿ ಭರವಸೆಯಿದ್ದಿಲ್ಲವೆಂದೇ ಹೇಳಬೇಕು. ಉಮೇದುವಾರರಾಗಿ ನಿಂತು ಚುನಾವಣೆಯಲ್ಲಿ ಸೋತಿದ್ದರೂ ಆತ್ಮವಿಶ್ವಾಸಕ್ಕಾಗಿ ಹಾಗೆ ಸೋತವರನ್ನಾದರೂ ಅಭಿವಂದಿಸಬೇಕಾಗಿರುವಾಗ, ಇವರನ್ನು ಹೇಗೆ ಅಭಿವಂದಿಸಬಹುದು? ಬೊಬ್ಬಿಲಿ ಮಹಾರಾಜರನ್ನು ಈ ವಿಚಾರದಲ್ಲಿ ವಂದನಾರ್ಹರೆಂದೆನ್ನಬೇಕಾಗಿದೆ, ಇವರನ್ನಲ್ಲ. ಇರಲಿ; ಇವರ ಪಕ್ಷದವರಾದರೂ ಎಸೆಂಬ್ಲಿಯಲ್ಲಿರುವರೇ! ಅಲ್ಪ ಸಂಖ್ಯೆಯಲ್ಲಿ! ನಾಲ್ಕು ಮಂದಿಯನ್ನು ಕರೆದು ಅನಾಥಪ್ರೇತ ಸಂಸ್ಕಾರ ಮಾಡುವಂತೆ, ನಾಲ್ವರನ್ನು ಕೂಡಿ ಪಂಚಾಯತಿಯನ್ನು ರಚಿಸಿಕೊಂಡು ಇವರೇಕೆ, ಹಿಂದೆ ಗವರ್ನರರಾಗಿಯೂ ಹೆಸರ್ಗೊಂಡಿದ್ದವರು, ಈಗ ಯಾರಿಗೂ ಬೇಡವಾಗಿ ಜನಬಲವಿಲ್ಲದ ಬೆಂಬಲ ವಿರಹಿತವಾದ ಮಂತ್ರಿಮಂಡಲ ರಚಿಸಲು ಒಪ್ಪಿದರು? ಹಂಗಾಮಿ ಮಂತ್ರಿಗಳೆಂದರೆ ಬಿಟ್ಟೀ ಕೆಲಸಕ್ಕೆ ಹಿಡಿದ ಆಳುಗಳು; ಸರಕಾರವು ದೊಡ್ಡದೊಂದು ಮೋಸಬಾಜಿ ಮಾಡುವದೆಂದು ಸರ್ವರ ಆಕ್ಷೇಪಣೆಗೆ ಪಾತ್ರವಾಗಿರುವ ಆಕ್ಟನ್ನು ಜ್ಯಾರಿಗೆ ತರಲೆಳಸಿರುವಾಗ, ಇದೀ ಕೆಲಸಕ್ಕೆ ಇವರನ್ನು ಹಿಡಿದಂತಾಗಿದೆ. ಹೀಗೆಂದು ತಡು ಸ್ವರಾಜ್ಯವಾದಿಗಳ ಕಠಿನ ವಿಮರ್ಶೆಯಾಗಿದೆ.

ಹೊಸ ಆಕ್ಟು

ನಮ್ಮ ಔಷಧಿ ಸಿಕ್ಕುವ ಸ್ಥಳ:- ಡಾಕ್ಟರ್ ಬಿ. ಎಚ್. ವಧ್ಯನಾಥ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಹೊಸ ಮಾಲನ್ನು ನಿರೀಕ್ಷಿಸಿರಿ!

?

ಗಿರಾಕಿಗಳಿಗೆ ಒಳ್ಳೇ ಸುಸಂದರ್ಭ!

Sole Agents:- **The Kerala Tea Syndicate,**

PONANI—(S. Malabar.)

Edited Printed & Published By A. S. Kamath at the Sharada Press, Car Street, Mangalore.

MISSING

-9, 16 & 23 APRIL-

MISSING
-9, 16 & 23 APRIL-

ಸ್ವದೇಶಾಭಿಮಾನಿ

SWADESHABHIMANI

ಏಳು ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ತುರುಸವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ವರ್ಷ ೩೧. ಮಂಗಳೂರು ತಾ. ೩೦ನೇ ಎಪ್ರಿಲ್ ೧೯೩೭. (30 4—'37) ಸಂಚಿಕೆ ೧೭



[illegible] ಯಜಮಾನರು [illegible] ಕಾನು ಹೋಗಿ ಬಂ ದನ್ನು ಪ್ರಕಟಿಸಬೇಕು ಎಂಬ ಆತುರ ಅವ [illegible] ಮಾಡಿದ್ದೇನು? ಯಜಮಾನರ [illegible] ಬೇನು?

o o o

ಕಾಂಗ್ರೆಸ್ ಪಕ್ಷವು ಚುನಾವಣೆಗೆ ನಿಲ್ಲು ವಾಗಲೆ ಜನತೆಯ ಮುಂದೊಂದು ಕಾರ್ಯಕ್ರಮ ವನ್ನಿಟ್ಟಿತು. ಅದರಲ್ಲಿ, ಅಧಿಕಾರ ಸ್ವೀಕರಿಸಿ ದರೆ ಕಾಂಗ್ರೆಸು ಜನತೆಗಾಗಿ ಏನು ಮಾಡಲಿ ದ್ದಿತೋ ಅದನ್ನು ವಿವರಿಸಿತು ಚುನಾವಣೆ ಯಲ್ಲಿ ಅಧಿಕಾರ ಸ್ವೀಕರಿಸಲ್ಪಟ್ಟು ಪ್ರಚಂಡ ಬೆಂಬಲವೂ ದೊರಿತ ಬಳಿಕ, ತನ್ನ ಕಾರ್ಯ ಕ್ರಮವು ಜ್ಯಾರಿಗೆ ತರಲು ಗವರ್ನರರು ಮಾತ್ರ ಆತಂಕಿಸದಂತೆ ಕೇಳಿಕೊಂಡಿತು ಗವರ್ನರರು ಭರವಸೆ ಕೊಡಲಿಲ್ಲ ಕೊಂಗ್ರೆಸು ಅಧಿಕಾರ ಸ್ವೀಕರಿಸಲಿಲ್ಲ

o o o

ಆದರೆ ಆ ಕಾರ್ಯಕ್ರಮದ ಸೂಚೀಪತ್ರ ಅಲ್ಲಿತ್ತು ಜನತೆಗೆ ಪ್ರಿಯವಾಗುವ ಹಾಗೆ ಮಾಡಬಹುದೇನೋ ಅವನ್ನು ಕಂಡು, ಗವರ್ನ ರರ ಸಂಬಳದಾರೀ ಮಂತ್ರಿಗಳು ಅವಲ್ಲಿ ಕೆಲ ವನ್ನೆತ್ತಿ ಕೊಂಡು, ಮುಂದರಿಯುಲಿರುವರು ಕೊಂಗ್ರೆಸಿನ ಕಾರ್ಯಕ್ರಮ ಪ್ರಕಟವಾದುದರಲ್ಲಿ ಎಷ್ಟರ ಮಟ್ಟಿಗೆ ಯಾವ ರೀತಿಯಲ್ಲಿ ಮುಂದರಿ ಯಲು ಕೊಂಗ್ರೆಸು ಎಣಿಸಿತ್ತೆಂಬು ಪ್ರಕಟವಾಗಿ ದ್ದಿಲ್ಲ ಮಂತ್ರಿಗಳೆಂಬವರು ಊಟಕವುಂಡಿಗೆ ತೆರಳಿ, ಮನಸ್ಸಿನಲ್ಲಿ ಮುಂಡಿಗೆ ತಿನ್ನುತ್ತ, ಕೊಂ ಗ್ರೆಸಿನವರು ಅಧಿಕಾರ ನಿರ್ವಹಿಸಲು ಹಿ ತೆಗೆದ ಮೂರ್ಖತನವನ್ನೂ ತಾವು ಅವರ ಕಾರ್ಯಕ್ರಮ ದಿಂದ ಹೆಕ್ಕಿ ತೆಗೆದ ಕೆಲವಂಶವನ್ನು ಕೈಕೊಳ್ಳಲಿ ರುವುದನ್ನು ಪ್ರಕಟಿಸಿದರು.

o o o

ಪುಣ್ಯಾತ್ಮರಲ್ಲಿ ಇವರ ಮುಖಂಡರೇ, ಆಕ್ಟಿಂಗ್ ಗವರ್ನರರ ಪದವಿಗೆ ಏರಿದ್ದಿತಾದರೂ ಆಗ ಆ ಹೊಸ ಕಾರ್ಯಕ್ರಮದಲ್ಲಿ ಒಂದೇ ಒಂದ ನ್ನಾದರೂ ಅಣುಮಾತ್ರವೂ ಜ್ಯಾರಿಗೆ ತರಲು ಪ್ರಯತ್ನಿಸಿದ್ದಿಲ್ಲವೇಕೆ? ನಾಳೆ ಆಗೋಸ್ಟಿನಲ್ಲಿ ಸಭೆ ಸೇರಿದ ಕೂಡಲೆ, ತಮಗೆ ಠಾಣ್ಯವಿಲ್ಲ ಹೊರಬೀಳುವಾಗ ಪ್ರಜಾರಂಜಕವಾದ ಮಹ ತ್ವದ ಹೊಸ ಸುಧಾರಣೆಗಳನ್ನು ಪ್ರಾರಂಭಿಸಿದೆ ವೆಂದ ಡಂಗುರ ಹೊಯಿಸಲೆಂದೇ ಈ ಚಮ ತ್ಕಾರ ಸಮ್ರಾಜರ ಸರಕಾರವು ಮುಂದರಿ ಸಲು ಗವರ್ನರರು ಶಾಸನದಂತೆ ಇರುವಾಗ, ಇವರೂ ನಾಗಪ್ಪನೊಡನೆ ಸೇರಿ ಕಟ್ಟಿದ ಮಹಾ ಪರಾಕ್ರಮ ತೋರಿಸಲು ಆತುರ ಪಡುವು ದೇಕೆ?

o o o

ಪುನಃ ಕೊಂಗ್ರೆಸು ಗವರ್ನರರ ಭರವಸೆ ಕೇಳಿ ಪಡೆಯುದಿದ್ದಲ್ಲಿ, ತಾವೇ ಇನ್ನೂ ಇಷ್ಟ ಮಿತ್ರರೊಡಗೂಡಿ ಮಂತ್ರಿಮಂಡಲ ರಚಿಸಿ ಚಂದಗಾಣಿಸಬಹುದೆಂದೇನೋ ಇವರಲ್ಲಿ ವಿಶೇಷ ಶ್ರದ್ಧೆ ಮಾಡಿದ್ದಿರಬಹುದು ವ್ಯರ್ಥ.

o o o o

ಗವರ್ನರರಿಂದ ಬೇಕಾಗಿರುವ ಭರವಸೆ ಯನ್ನು ಕೊಂಗ್ರೆಸ್ ಪಕ್ಷವು ಪಡೆಯಬಹುದು ಅಥವಾ ಗವರ್ನರರು ಎಲ್ಲ ಸೂತ್ರಗಳನ್ನು ತನ್ನ ಕೈಯಲ್ಲಿಟ್ಟುಕೊಂಡು ಆಳಬಹುದು. ಪುನಃ ಈ ಕಾಲ್ಪನಿಕರು ಮುಂದೊತ್ತಿ ಬರುವ ಸಂದರ್ಭ ಕಡಿಮೆ.

[illegible] ಮಂತ್ರಿಗಳಾದ [illegible] ಬಹುದಾದ ಸುಧಾರಣೆಗಳು ಎರಡು ತೆರ. [illegible] ಮೊದಲನೇ, ಮಂತ್ರಿ ಗಳಾಗಿ [illegible] ಸಂಬಂಧಪಡುವ ಸುಧಾರಣೆಗಳನ್ನು ಕೈಕೊಳ್ಳಬಹುದು. ಕೌನ್ಸಿ ಲಿನ (ಅಸೆಂಬ್ಲಿಯ) ಅನುಮತಿಯಿಂದ, ಸಂಸ್ಥೆ ನು ಪಡೆದು, ಕೈಕೊಳ್ಳಬಹುದಾದ ಸುಧಾರಣೆ ಇವೆ. ಎರಡನೆ ವಿಭಾಗಕ್ಕೆ ಸಂಬಂಧಪಡುವ ತಿದ್ದುಪಾಟುಗಳನ್ನು ಈ ಮಂತ್ರಿಗಳು ಕೈಕೊ ಳ್ಳುವರೆಂಬುದು ಪ್ರಕಟನೆಗೆ ಮಾತ್ರ ಯೋಗ್ಯ, ಅಷ್ಟು; ಏಕೆಂದರೆ ಸಭೆಸೇರಲ್ಲವಷ್ಟೆ. ಸಭೆ ಸೇರುತ್ತಲೆ ಈ ಮಂತ್ರಿಮಂಡಲವು ನಾಮಾವ ಶೇಷವಾಗುವುದೆಂದೇ ಸಭೆ ಕರೆಯುತ್ತಿಲ್ಲವಷ್ಟೆ

o o o o

ಕಾನೂನು ಮಂಜೂರಾದ ಬಳಿಕವೇ ಕೈಕೊಳ್ಳಬಹುದಾದ ತಿದ್ದುಪಾಟುಗಳನ್ನು ಈಗ ಲೆ ಕೈಕೊಳ್ಳುತ್ತೇವೆಂದು ಸಾರುವುದು ಅಪ ಹಾಸ್ಯಕರ ಇವರಿಗೆ ಬೇಕಾಗುವ ಹಣವನ್ನಾ ದರೂ ಪ್ರಾಂತಿಕ ನ್ಯಾಯಸಭೆಗಳು ನಿಶ್ಚಯ ಮಾಡುವಂತೆ ಮಾತ್ರ ಸಾಲವೆತ್ತಬಹುದು ಹೀಗಿರುವಾಗ ಕೈಯಲ್ಲಿಲ್ಲದ ಹಣವನ್ನು, ಸಾಲಪಡೆಯಲಾರದ ಹಣವನ್ನು, ನಂಬಿ ಯಾವ ಮಂತ್ರಿ ತಾನೇ ಎಂತಹ ತಿದ್ದುಪಾಟು ಗಳಿಗೆ ಕೈಯಿಕ್ಕಬಹುದೆಂಬ ಭರವಸೆಯುಳ್ಳವ ನಂತೆ?

o o o

ಆದರೆ, ಎರಡೆರಡು ಸಹಸ್ರರೂಪಾಯಿ ತಲಬುಪಡೆದೂ ಏನೂ ಮಾಡಿಲ್ಲವೆಂದು ದೂರು ಬಾರದಂತೆ ಹೀಗೂ ಮಾಡಬೇಕೆ? ಎಷ್ಟೋ ವರ್ಷಗಳಿಂದ ಕೈದಿಗಳಿಗೆ ಮಜ್ಜಿಗೆ ಕೊಡ ಬೇಕೆಂಬ ಚಳವಳವಿದೆಯಲ್ಲ ಅದನ್ನೇಕೆ ಇವರು ತಾವಾಗಿ ಒದಗಿಸಬಾರದು? ತೀರ್ವೆ ಯಲ್ಲಿ ಸೇಕಡಾ ೨೫ರಷ್ಟು ಮಾಫಿಮಾಡಲು ಉದ್ಯುಕ್ತರಾದವರು ಈ ತಿಸ್ತನ್ನೇ ಮಾಫಿಬಿಡ ಬಾರದೇ? ಅಥವಾ ಈ ಕೆಲಗಳಲ್ಲಿ ಪಸೂ ಲಾದುದರಿಂದ ಪರತು ಕೊಡಬಾರದೇಕೆ? ಮುಂದಿನ ಕಿಸ್ತಿಗೆ ವಜಾಮಾಡಬಾರದೇ?

o o o o

ಹಳ್ಳಿಗರ ಸಾಲ ಕಡಿಮೆಮಾಡುವ ಆಲೋಚನೆಯುಳ್ಳ ಇವರು ಒಂದು ವರ್ಷದ ತನಕ ಇಂಥ ಸಾಲಗಳನ್ನು ಮನ್ನಾ ಇಡುವ ಹಾಗೆ ನಿರ್ಧರಿಸಬಾರದೆ? ಆಗ ತಾನೆ, ಗಾಂಧಿ ಜೀಯವರೂ ಕೊಂಗ್ರೆಸ್ ಪ್ರತಿನಿಧಿಗಳೂ ಕೂಡಲೆ ಅದಕ್ಕನುಕೂಲವಾದ ಕಾನೂನನ್ನು ಮಂಜೂರಿದೆ ಉಪಾಯಕಾಣದರಿಂದ, ಅಧಿ ಕಾರವನ್ನು ಸ್ವೀಕರಿಸಲೇಬೇಕು, ಹಾಗೆ ಮಾಡ ದಿದ್ದಲ್ಲಿ ಕೊಂಗ್ರೆಸಿನ ಹೇಳಿಕೆಗೆ ಆಧಾರವಿಲ್ಲ ದಂತಾದೀತಲ್ಲ?

o o o o

ಕೊಂಗ್ರೆಸು ತನ್ನ ಪ್ರತಿನಿಧಿಗಳಿಗಾಗಿ ಮಾತ್ರ ಗವರ್ನರರಿಂದ ಭರವಸೆ ಕೇಳಿದ್ದಲ್ಲ,— ಎಲ್ಲೆಲ್ಲಿ ಮಂತ್ರಿಮಂಡಲಗಳಾಗುವುವೊ ಅಲ್ಲ ಲ್ಲಿ, ಪ್ರಜಾಸತ್ತೆಗೆ ವಿಹಿತವಾಗುವಂತೆ ಈ ಭರ ವಸೆಬೇಕಾಗಿದೆ ಎಂದೇ ಸಾರಿದೆ ಆಗ ಈ ಮಂತ್ರಿಗಳು ಅದನ್ನು ತಿಳಿದೂ ತಿಳಿಯದೆಯೊ, ತಮಗಿಂತ ಅರ್ಹರು ಮಂತ್ರಿಪದವಿ ತಿರಸ್ಕರಿಸಿ ಸುಮ್ಮನಾದರೂ, ಇವರೇ ಮಾತ್ರ ಮೂಲೆ ಹಾಕಿಕೊಳ್ಳಲು ಮುಂದೊತ್ತಿ ಬಂದುದೇಕೆ? ಯಾವುದೊಂದು ಪಕ್ಷದವರಾದರೂ ಇವರಲ್ಲಿ ಯಾರೊಬ್ಬ ಮಂತ್ರಿಯನ್ನಾದರೂ ಸ್ವಪಕ್ಷದವ ರೆಂದು ಒಪ್ಪಿಕೊಳ್ಳದೆ ಇನ್ನೂ ಇರುವರಲ್ಲ!

'ಓವಲ್‌ಟಿನ್ನು' ಪುಷ್ಟವಾದ ದೇಹವನ್ನೂ ಚಟುವಟಿಕೆ ವುಳ್ಳ ಮನಸ್ಸನ್ನೂ ಉಂಟು ಮಾಡುತ್ತದೆ

ಮುಂಗಡ ವೇಳೆಯಲ್ಲಿಯೂ ಊಟದ ಸಮಯದಲ್ಲೂ ಓವಲ್‌ಟಿನ್ನನ್ನು ನಿಮ್ಮ ಮಕ್ಕಳ ದಿನನಿತ್ಯದ ಪಾನೀಯವನ್ನಾಗಿ ಮಾಡಿದರೆ ಗಟ್ಟಿ ಮತ್ತು ಆರೋಗ್ಯವುಳ್ಳ ದೇಹವನ್ನೂ, ನರಗಳನ್ನೂ ಮತ್ತು ಚುರುಕಾದ ಮಾನಸಿಕ ಶಕ್ತಿಯನ್ನೂ ಬೆಳೆಸಲಿಕ್ಕೆ ಬೇಕಾಗುವ ಪೌಷ್ಟಿಕ ಪದಾರ್ಥಗಳು ಅದರಿಂದ ದೊರೆಯು ತ್ತದೆಂದು ಖಂಡಿತವಾದ ಮಾತು

ಶ್ರೇಷ್ಠವಾದ ಪಕ್ವ ಬಾರ್ಲಿ ಸತ್ವದಿಂದ, ಹಸುವಿನ ದನದ ಕೆನೆಹಾಲಿನಿಂದ ... ತಯಾರು ಮಾಡ ಲ್ಪಟದ್ದರಿಂದ ಓವಲ್ಟಿನ್ ಕಮ್ಮಿ ವೆಚ್ಚದಲ್ಲಿ ಹೆಚ್ಚಿನ ಆರೋಗ್ಯ ಪುಷ್ಟಿಯನ್ನು ಕೊಡುತ್ತದೆ ... ಬಹುದಾದ ಆಹಾರಗಳಲ್ಲೆಲ್ಲಾ ಇದು ಸರ್ವಶ್ರೇಷ್ಠವಾದ ... ಆಹಾರವಾಗಿರುತ್ತದೆ

ಶ್ರೇಷ್ಠತೆಯಲ್ಲಿ ... ಬೆಲೆಯಲ್ಲಿಯು ಒವಲ್ಟಿನ್ ಏಕ ಮಾತ್ರವಾಗಿ ... ತ್ತದೆ ... ಅದರ ಮನೆಯಲ್ಲಿ ಉಪಯೋ ಗಿಸುವ ಸಕ್ಕರೆ ... ಅಗ್ಗವಾದ ವಸ್ತುಗಳ ಓವಲ್ಟಿನ್ ನಲ್ಲಿಲ್ಲ ನಿಮ್ಮ ಮಕ್ಕಳ ಆರೋಗ್ಯಹಿತಕ್ಕಾಗಿ ಒವಲ್ಟಿನ್ನನ್ನೇ ಉಪಯೋಗಿಸಿರಿ ನಕಲಿಗಳಿಗೆ ಮೋಸಹೋಗದಿರಿ

OVALTINE

'ಓವಲ್‌ಟಿನ್' ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರ್‌ಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ

ಏಜಂಟ್ಸ್ — ಜೇಮ್ಸ್ ರೈಟ್ 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ

OV/631

THE PIE-MONEY BANK LTD.,
Maidan Road, MANGALORE.

Undertakes all kinds of Banking Business Current account at $2\frac{1}{2}$% per annum Savings Bank Deposits at $4\frac{1}{2}$% per annum

FIXED DEPOSITS

For 2 Years 6% 1 Year 5% For 6 months 4% 3 & 2 months $3\frac{1}{2}$%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— K. R. GURU, *Managing Director.*

NOTICE OF AUCTION

ಏಲಂ ವಿಕ್ರಯದ ನೋಟೀಸು.

Is hereby given that the undermentioned properties will be offered for sale by Public Auction The sale will be held by Mr. A. Srinivasa Pai Power of Attorney Holder from the Firm of Messrs. Moolji Laxmidas of Bombay, at **Vartak Vilas,** Bunder, Mangalore. The sale will commence on **Thursday 6th May 1937 at 2-30 P. M.** and continue from day to day till close. The owner of properties reserves to himself the right to adjourn the sale or withdraw any of the items of properties if proper bids are not forthcoming. Out of the price for which the sale is knocked down in favour of the highest bidder he shall deposit at once 25% of the price Balance 75% shall be paid within one month thereafter In the event of default to pay 25% as indicated above the concerned item will be resold forthwith by auction without further proclamation. In the event of default to pay 75% in full within the time allowed, the amount deposited or paid will be forfeited and the concerned item will be resold by public auction after fresh proclamation The loss or deficit consequent upon resale will be recovered from the defaulting purchaser. In realising the aforesaid loss or deficit deduction on account of the amount so forfeited will not be given Expenses of sale deed will have to be borne by the vendee. Vendees will get landlord's possession. Other conditions as usual

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:— ಈ ಕೆಳಗೆ ವಿವರಿಸಿದ ಆಸ್ತಿ ಕಟ್ಟೋಣ ವಗೈರೆ ಸರ್ವಾಧಿಗಳನ್ನು ಬಹಿರಂಗವಾದ ಏಲಂ ಮುಖಾಂತರ ವಿಕ್ರಯಿಸೋಣಾದಾವು. ಮುಂಬಾಯಿ ಸಾಹುಕಾರ ಮೆಸ್ಸರ್ಸ ಮೂಲ್ಜಿ ಲಕ್ಷ್ಮೀದಾಸ ಫರ್ಮಿನ ಪರವಾಗಿ ಪವರ್ ಓಫ್ ಎಟೊರ್ನಿ ಹೋಲ್ಡರ ರಾ| ಎಡ್ವೋಕೇಟ ಅಮ್ಮೆಂಬಳ ಶ್ರೀನಿವಾಸ ಪೈಗಳು ಏಲಮನ್ನು ಮಂಗಳೂರು ಬಂದರದ **ವರ್ತಕ ವಿಲಾಸ ಕಟ್ಟೋಣದಲ್ಲಿ ತಾರೀಕು 6ನೇ ಮೇ 1937ನೇ ಬ್ರಹಸ್ಪತಿವಾರ ಮಧ್ಯಾಹ್ನದ ನಂತರ ಘಂಟೆ 2-30**ರ ಆಗಾಯಿತು ವ ಮರುದಿನಗಳಲ್ಲಿ ಸಹಾ ಆಖೈರಿ ಪರಿಯಂತರ ನಡಿಸುವರು. ಯಾವುದೇ ಐಟಮುಗಳಾಗಲೀ ಸರಿಯಾದ ಕ್ರಯ ಬಾರದೆ ಇದ್ದಲ್ಲಿ ಏಲಮನ್ನು ಮುಂದರಿಸುವ ಅಥವಾ ಏಲಮಿನಿಂದ ಪರತ ತೆಗೆಯುವ ಹಕ್ಕನ್ನು ಮ್ಹಾಲಿಕರು ಇಟ್ಟುಕೊಂಡಿದ್ದಾರೆ. ಅತ್ಯಂತ ಹೆಚ್ಚಿನ ಕ್ರಯಗಾರನ ಹೆಸರಿಗೆ ಏಲಂ ಸರ್ವಸಾಧಾರಣವಾಗಿ ಕೂಡಲೇ ಕಾಯಂ ಮಾಡಲ್ಪಡುವುದು ಕ್ರಯದ ಮೊಬಲಗಿನ ಪೈಕಿ ಶೇಕಡಾ **25**ರಂತೆ ಐವೇಜನ್ನು ಕೂಡಲೇ ತೆತ್ತು ರಶೀದಿ ಪಡಿಯತಕ್ಕದ್ದು ಉಳ್ಕೆ ಶೇಕಡಾ **75**ರ ಮಟ್ಟಿನ ಐವೇಜನ್ನು ಏಲಂ ಖಾಯಂ ಆದ ಮೂವತ್ತು ದಿವಸಗಳ ಒಳಗೆ ತೆತ್ತು ಕ್ರಯ ದಸ್ತಾವೇಜುಗಳನ್ನು ಒರಿಸಿಕೊಳ್ಳತಕ್ಕದ್ದು ಕ್ರಯ ದಸ್ತಾವೇಜಿನ ಸಕಲ ಖರ್ಚು ಕ್ರಯಕ್ಕೆ ಪಡಕೊಳ್ಳುವವರು ಸಹಿಸಿಕೊಳ್ಳತಕ್ಕದ್ದು ಮೇಲ್ಕಾಣಿಸಿದ ರೀತಿ ಶೇಕಡಾ **25**ರಂತೆ ತೆರತಕ್ಕ ಐವೇಜಿನಲ್ಲಿ ಎಷ್ಟನ್ನಾದರೂ ಬಾಕಿಮಾಡಿಕೊಂಡರೆ ಅವಕ್ಕೆ ಸಂಬಂಧಪಟ್ಟ ಐಟಮು ಕೂಡಲೇ ಇನ್ನೊಂದು ಇಸ್ತಿಹಾರು ಶಿವಾಯಿ ಪರತು ಏಲಂ ಮಾಡಲ್ಪಡುವುದು ನಂತರದ ಶೇಕಡಾ **75**ರಂತೆ ಮೇಲ್ಕಾಣಿಸಿದ ರೀತಿ ತೆರತಕ್ಕ ಐವೇಜಿನಲ್ಲಿ ಎಷ್ಟನ್ನಾದರೂ ಬಾಕಿಮಾಡಿಕೊಂಡರೆ ಅದಕ್ಕೆ ಸಂಬಂಧಪಟ್ಟ ಐಟಮುಗಳು ಇನ್ನೊಂದು ಸಾರಿ ನೋಟೀಸು ಪೈಸ್ ಮಾಡಿ ಏಲಂಮಾಡಲ್ಪಡುವುದು ಕ್ರಯದ ಮೊಬಲಗಿನಲ್ಲಿ ತೆತ್ತ ಐವೇಜು ಎಷ್ಟನ್ನಾದರೂ ತಪ್ಪಿತಸ್ತ ಕ್ರಯಗಾರನಿಗೆ ಪರತು ಕೊಡಲಾರದು ಪುನಃ ಏಲಮಿನಲ್ಲಿ ಏನೊಂದು ಐವೇಜು ಕಮ್ಮಿ ಬಿದ್ದಲ್ಲಿ ಯಾ ನಷ್ಟ ಸಂಭವಿಸಿದರೆ ಅದನ್ನು ತೆರುವರೆ ತಪ್ಪಿತಸ್ತ ಕ್ರಯಗಾರನು ಬದ್ಧನಾಗಿರುತ್ತಾನೆ ತಪ್ಪಿತಸ್ತ ಕ್ರಯಗಾರನು ತೆತ್ತ ಐವೇಜಿನ ಸಂಬಂಧ ನಷ್ಟದ ಐವೇಜಿನಲ್ಲಿ ಮುಜ್ರೆ ಕೇಳುವರೆ ಆತನಿಗೆ ಹಕ್ಕು ಇರುವುದಿಲ್ಲ. ಕ್ರಯಕ್ಕೆ ಪಡಕೊಂಡವರಿಗೆ ವಿಕ್ರಯದ ಆಸ್ತಿಯ ಧನಿಕತನದ ಹಕ್ಕು ಸ್ವಾಧೀನತೆ (Land-Lord s Possession) ಕೊಡಲ್ಪಡುವುದು ಒಕ್ಕಲುಗಳನ್ನು ಹೊರಪಡಿಸಿ ಸ್ವಾಧೀನತೆ ಹೊಂದುವುದು ಕ್ರಯಗಾರನ ಕರ್ತವ್ಯ. ಇತರ ಶರ್ತಗಳು ಎಂದಿನಂತೆಯೇ.

DESCRIPTION OF PROPERTIES.

ಆಸ್ತಿಯ ವಿವರ.

I ದಕ್ಷಿಣ ಕನ್ನಡಾ ರಜಿಸ್ಟ್ರೇಶನ ಮಂಗಳೂರು ಸಬ್ ಡಿಸ್ಟ್ರಿಕ್ಟಿಗೆ ಸೇರಿದ ಮಂಗಳೂರು ತಾಲೂಕು ಕಸಬಾ ಬಜಾರ ಗ್ರಾಮದ ಬಾಬ್ತು—

R. S. ನಂಬ್ರ	T S. ನಂಬ್ರ	ಕಿಸಂ	ವಿಸ್ತೀರ್ಣ	ಕಿರ್ವೆ	ಷರಾ.
1878	868	ಪುಂಜ	0–6	1–0–0	ಇದರಲ್ಲಿರುವ T S ನಂಬ್ರ 868—1 & 2ನೇ ಭಂಡ್ಸಾಲೆ ಕಟ್ಟೋಣ ವಗೈರೆ ಇದು ಉಳ್ಳಾಲ ಸುಬ್ರಾಯ ನ್ಯಾಕರು ಸಾಮಾನು ದಾಸ್ತಾನು ಮಾಡುವ ಭಂಡ್ಸಾಲೆಯಾಗಿರುತ್ತದೆ
1879	869	ಪುಂಜ	0–2	0–5–0	ಇದರಲ್ಲಿರುವ T. S ನಂಬ್ರ 869–1ನೇ ಭಂಡ್ಸಾಲೆ ಕಟ್ಟೋಣ ವಗೈರೆ– ಇದು ಕುಂಬ್ಳೆ ಅಣ್ಣಪ್ಪ ನ್ಯಾಕರು ಸಾಮಾನು ದಾಸ್ತಾನುಮಾಡುವ ಕಟ್ಟೋಣವಾಗಿರುತ್ತದೆ
1875	865	ಪುಂಜ	0—1	0–3–0	ಇವುಗಳು ಮೇಲ್ಕಂಡ R. S. ನಂ 1878ನೇಗೆ ಲಗ್ತಿಯಾಗಿರುವ ಸ್ಥಳಗಳಾಗಿರುತ್ತವೆ.
1877/B	867/B	ಡಿ	0—1	0–8–0	
1877/C	867/C	ಡಿ	0—1	0–2–0	
1186	174	ಡಿ	0—1	0–2–0	
1866	856	ಪುಂಜ	0—8	0–8–0	ಇದರಲ್ಲಿರುವ T. S ನಂ. 856–1 & 2ನೇ ಅಂಗಡಿ ಕಟ್ಟೋಣಗಳು ಇವು ಮುಂಡಪ್ಪ ಶೆಟ್ಟಿ ಎಂಬವರು ವ್ಯಾಪಾರ ಮಾಡುವ ಅಂಗಡಿ ಕಟ್ಟೋಣಗಳಾಗಿರುತ್ತವೆ.
1463	454	ಪುಂಜ	0-4	0–11–0	ಇದರಲ್ಲಿರುವ T. S. ನಂ. 454-1 & 2ನೇ ಕಟ್ಟೋಣ ವಗೈರೆ. ಇದು ಮಿಜಾರ ನರಸಿಂಹ ಕಾಮತರು ಮತ್ತು ಬಿ. ರಂಗಯ್ಯ ಬಾಳಿಗರು ಕಾಫಿ ಹೊಟೇಲು ಮಾಡಿಕೊಂಡಿರುವ ಕಟ್ಟೋಣವಾಗಿರುತ್ತದೆ.

R. S. ನಂಬ್ರ	T. S. ನಂಬ್ರ	ಕಿಸಂ	ವಿಸ್ತೀರ್ಣ	ಕಿರ್ವೆ	ಷರಾ.
1587	527	ಪುಂಜ	0–6	1–0–0	ಇದರಲ್ಲಿರುವ T S ನಂ 527-1 to 3ನೇ ಭಂಡ್ಸಾಲೆ ವ ಅಂಗಡಿ ಕಟ್ಟೋಣಗಳ ವಗೈರೆ–ಇವು ಎಂ ಬಾಲಕೃಷ್ಣ ಪೈ ಮತ್ತು ಎಸ್ ಮಂಜುನಾಥ ನ್ಯಾಕ ಇವರು ವ್ಯಾಪಾರ ಮಾಡುವ ಭಂಡ್ಸಾಲೆ ವ ಇದರ ಎಡ ಬಲ ಪಾರ್ಶ್ವಗಳಲ್ಲಿರುವ 2 ಸಣ್ಣ ಅಂಗಡಿಗಳು ಸಹ ಆಗಿರುತ್ತವೆ
1585/3	525/3	ಪುಂಜ	0–1	1–13–0	ಇದು ಮೇಲ್ಕಂಡ R. S. ನಂಬ್ರ 1587ನೇಗೆ ಲಗ್ತಿಯಾಗಿರುವ ಸ್ಥಳವಾಗಿರುತ್ತದೆ
1172/2	163/2	ಭಾಗಾಯ್ತು	0–4	0–11–0	ಇದರಲ್ಲಿರುವ T S. ನಂಬ್ರ 163–1ನೇ ಕಟ್ಟೋಣ ವಗೈರೆ.
1880/B 1	370/B 1	ಡಿ	0–1	0–3–0	ಇದರಲ್ಲಿರುವ T S. ನಂಬ್ರ 370B-1ನೇ ಅಂಗಡಿ ಕಟ್ಟೋಣಗಳು ವಗೈರೆ– ಇದು ಮೇಲ್ಕಂಡ ಕುಂಬ್ಳೆ ಅಣ್ಣಪ್ಪ ನ್ಯಾಕರು ಸಾಮಾನು ದಾಸ್ತಾನು ಮಾಡುವ R. S. ನಂಬ್ರ 1878ನೇ ಭಂಡ್ಸಾಲೆ ಕಟ್ಟೋಣದ ಹಿಂದುಗಡೆಯಲ್ಲಿರುವ ಅಂಗಡಿ ಕಟ್ಟೋಣವಾಗಿರುತ್ತದೆ.

II. ಸದ್ರಿ ಸಬ್ ಡಿಸ್ಟ್ರಿಕ್ಟಿಗೆ ಸೇರಿದ ಮಂಗಳೂರು ತಾಲೂಕು [illegible] ಗ್ರಾಮದ

366	199	ಭಾಗಾಯ್ತು	0–20018 ಸ್ಕ್ವ.ಫೀ.	2–12–0	ಇದರಲ್ಲಿರುವ ಮನೆಕಟ್ಟೋ[illegible]



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:— ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.

ಆಟೋಮೆಟಿಕ್ ಅಲಾರಂ ಪಿಸ್ತೂಲ್

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕುಂಡಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು, ಇದು ಒಂದು ವಸ್ತುವಿಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು, ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೂಲ್ ಕೂಡೆ ಕಳುಹಿಸುವೆವು. ಪಿಸ್ತೂಲ್ ಒಂದು ಆರ್ಡರು ಮಾಡುವವರಿಗೆ ೨ ಟೆಬಿ ಹಾಕಿದ ಸ್ಪಾರ್ಟ್ ಲೈಟ್ ಒಂದು ಇನಾಮು ಸೇರಿಸಿ ಕಳುಹಿಸುವೆವು. ಪಿಸ್ತೂಲು ೧೨ ತೋಟೆಗಳ ಸಹಿತ ೭-೮-೦ ಟಪ್ಪಾಲು ಖರ್ಚ ಪ್ರತ್ಯೇಕ

ಸ್ವಾನ್ ಹೌಸ್,
ನಂ ೩ ಇರುಳಪ್ಪನ ಬೀದಿ, ಮದ್ರಾಸು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅವರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿ ಮಾಡುವ ಪ್ರಾಣದಾಯಕವೆನ್ನಬಹುದು

ತಯಾರಿಸುವವರು.— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು — ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರೆಗಳು ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಬಾಧೆಯು ಇಲ್ಲ

ಅನೇಕ ತರಹ ಮತ್ತು
ಪ್ರಮಾಣಗಳಿವೆ

ಮುಖ್ಯ ಏಜಂಟರು

ಕೆ. ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ ರಸ್ತೆ ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ — ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ — ಗರ್ಭಶೂಲಿ, ಗರ್ಭಸ್ರಾವಕ್ಕೆ.
ಚಂದ್ರಪ್ರಭಾ — ಆಮಶಂಕೆ, ಅತಿಸಾರಕ್ಕೆ.
ಕೃಷ್ಣಾರಿಷ್ಟ — ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ವೃದ್ಧಿಕಾಸವ — ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ — ನಪುಂಸಕತ್ವ, ಧಾತುಕ್ಷೀಣತೆಗೆ.
ಭುವನಾಂಜನ ಪೈನ್‌ಬಾಮ್ — ಶಾರೀರಕ ನೋವುಗಳಿಗೆ.
ರಸಬಿಂದು — ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ — ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ದೈವ ಲೀಲೆ

ಲೇಖಕ —ಶ್ರೀ, ಕೇಶವ ಕುಡುವ, ಅಧ್ಯಾಪಕ ಉಡುಪಿ.

(All Rights Reserved).

ಪ್ರಾತಃಕಾಲದ ಒಂಭತ್ತು ಘಂಟೆಯ ಸಮಯವಾಗಿದ್ದಿತು. ಹದಿನೇಳು ವರ್ಷ ಪ್ರಾಯದ ನವಯೌವನ ಭರಿತೆಯಾದ ಸುಕುಮಾರಿಯೋರ್ವಳು ತನ್ನ ಗೃಹದ ಬಲಪಾರ್ಶ್ವದ ಒಂದು ಕೋಣೆಯಲ್ಲಿ ಕುಳಿತುಕೊಂಡು ಏನೇನೋ ಆಲೋಚಿಸುತ್ತಿದ್ದಳು. ಅವಳ ಪ್ರಫುಲ್ಲವದನವಿಂದು ಚಿಂತಾಭಾರದಿಂದ ಬಗ್ಗಿ ನಿಸ್ತೇಜೋಹೀನವಾಗಿದ್ದಿತು. ಆಕೆಯ ಕೋಮಲವಾದ ಕರವು ಕಪೋಲವನ್ನು ಸ್ಪರ್ಶಿಸುತ್ತಿತ್ತು. ಅಗಲೇ ಅವಳ ನೇತ್ರದ್ವಯಗಳಿಂದ ಒಂದೆರಡು ಕಂಬನಿಗಳು ಮುತ್ತಿನ ಮಳೆಯಂತೆ ಉದುರಲಾರಂಭಿಸಿದುವು. "ಹೇ! ಸೃಷ್ಟಿಕರ್ತನೇ! ನಿನ್ನಿಂದ ನಿರ್ಮಿತವಾದ ಪರಮಾನಂದಮಯ ಪ್ರಪಂಚದಲ್ಲಿ ನಾನೊಬ್ಬಳು ಮಾತ್ರ ಅದೆಷ್ಟು ಕಾಲದ ತನಕ ಈ ತೆರನಾದ ಸಂಕಷ್ಟಗಳನ್ನನುಭವಿಸಬೇಕು! ದೇವಾ! ಹೆಣ್ಣು ಜನ್ಮವನ್ನೆ ಕೊಡಬಾರದು." ಎಂಬ ಮಾತುಗಳನ್ನು ಗದ್ಗದಕಂಠಿತೆಯಾದ ಅರುಣೆಯು ನುಡಿದು ಬಿಟ್ಟು ಗಳಗಳನೆ ಅಳಲಾರಂಭಿಸಿದಳು.

ಅಷ್ಟರೊಳಗಾಗಿ ಸುಮಾರು ಎಪ್ಪತ್ತೈದು ವರ್ಷ ಪ್ರಾಯದ ವೃದ್ಧನೋರ್ವನು ಹಠಾತ್ತಾಗಿ ಕೊಠಡಿಯನ್ನು ಪ್ರವೇಶಿಸಿದನು ಚಿಂತಾಗ್ನಿಯಿಂದ ಕಳಮಳಿಸುತ್ತಿರುವ ತನ್ನ ಪುತ್ರಿಯನ್ನು ಕಂಡು ಸ್ತಂಭಿತನಾದನು. ತುಟಿಗಳು ಅಲ್ಲಾಡದೆ ಹೋದುವು ದೇಹ ಸರ್ವತ್ರವೂ ಕಂಪಿಸಲಾರಂಭಿಸಿತು. ಅವನ ಕಣ್ಣುಗಳಿಂದಾಗಲೇ ಎರಡು ಹನಿ ಕಂಬನಿಗಳು ಳಳಕ್ಕುರುಳಿದವು 'ಅಮ್ಮಾ' ಅರುಣೆ' ಹೀಗೇಕೆ ಶೋಕಿಸುತ್ತಿರುವೆಯಮ್ಮಾ' ಅಳಬೇಡ' ಗಂಜಿಯೂಟಕ್ಕೆ ಸಿದ್ಧವಾಗಿದೆ ನಿನ್ನೆಯ ರಾತ್ರಿಯೂ ನಿನಗೆ ಉಪವಾಸ, ಒಂದಿಷ್ಟು ಗಂಜಿಯನ್ನುಂಡು ಹೋಗಮ್ಮಾ!" ಎನ್ನುತ್ತಾ ತನ್ನ ಪುತ್ರಿಯನ್ನು ಸಮಾಧಾನಪಡಿಸ ತೊಡಗಿದನು

ಅರುಣೆಯು ತನ್ನ ವೃದ್ಧ ಜನಕನ ಮುಂದೆ ತನ್ನ ದುಃಖವನ್ನು ತೋರ್ಪಡಿಸುವುದು ಯುಕ್ತವಲ್ಲವೆಂದು ತಿಳಿದು ಸ್ವಲ್ಪ ಸಮಾಧಾನಚಿತ್ತವನ್ನು ತಾಳಿದಳು ಅವಳ ಬಾಯಿಯಿಂದಾಗ ದುಃಖರಹಿತವಾದ ಒಂದೆರಡು ನುಡಿಗಳು ಹೊರಟವು " ತಾತಾ! ನನಗೀಗ ಹಸಿವಿಲ್ಲ! ವೃದ್ಧರಾದ ತಾವು ತಮ್ಮ ಭೋಜನವನ್ನು ತೀರಿಸಿರಿ!"

"ಅಮ್ಮಾ! ಹಾಗೆನ್ನದಿರು' ನಿಜವಾಗಿಯೂ ನೀನೀಗ ಹಸಿವಿಲ್ಲವೆಂದು ಸಟೆ ನುಡಿಯುವಿ! ನಿನ್ನನ್ನೀ ಪರಿಯಲ್ಲಿ ಪೀಡಿಸುವ ಆ ಚಿಂತೆಯು ಕಾರಣವಾವುದೆಂದು ನನಗೆ ತಿಳಿದಿದೆ! ಅದರೇನು ಮಾಡಲಮ್ಮಾ! ಇಂದು ಗಂಜಿ ಇದ್ದರೆ ನಾಳೆ ಅದರ ತಿಳಿನೀರು ಕೂಡ ಸಿಗುವುದು ಕಷ್ಟಕರವಾಗಿದೆ! ಇಂತಹ ಆಪತ್ಕಾಲದಲ್ಲಿ ನಿನ್ನ ಮದುವೆಯ ಸಲುವಾಗಿ ವರದಕ್ಷಿಣೆಯನ್ನು ತೆರಲು ಹಣವೆಲ್ಲಿಂದ ಸಂಪಾದಿಸಲಿ! ಅಮ್ಮಾ! ದುಃಖಿಸದಿರು! ವಿಧಿಯು ನಿನ್ನ ಅದೃಷ್ಟವನ್ನು ಯಾವ ರೀತಿಯಲ್ಲಿ ಬಣ್ಣಿಸಿರುವನೆಂದು ಯಾರು ತಾನೆ ಬಲ್ಲ? ಇಂದು ನೀನು ಅದೆಷ್ಟು ದುಃಖಪಟ್ಟಿರುವೆಯೋ, ಅಷ್ಟೇ ಮುಂದೆ ಭಾಗ್ಯವಂತರ ಮನೆಯನ್ನು ಸೇರಿ ಭಾಗ್ಯಲಕ್ಷ್ಮಿಯ ತೆರದಲ್ಲಿ ಸುಖಪಡಬಾರದೇಕೆ? ದೈವಲೀಲೆಯು ವಿಚಿತ್ರವಾದುದಮ್ಮಾ! ಏಳು ಒಂದಿಷ್ಟು ಗಂಜಿಯನ್ನಾದರೂ ಉಂಡು ಹೋಗು.

ನಾರಾಯಣ ಶಾಸ್ತ್ರಿಗಳು ಅರ್ಧ ಘಂಟೆಯ ತನಕ ತನ್ನ ಭಾಷಣಕ್ಕೆ ವಿರಾಮವನ್ನೀಯದೆ, ಅಂತೂ ಮಗಳನ್ನು ಬಲೂ ಒತ್ತಾಯದಿಂದ ಊಟಕ್ಕೆ ಕರಕೊಂಡು ಹೋದರು.

ಕುಲಧರ್ಮಕ್ಕೆ ಅಸಮ್ಮತವಾಗಿ ಎಷ್ಟು ಸಮಯದ ವರೆಗೆ ಮಗಳನ್ನು ಮನೆಯಲ್ಲಿರಿಸಿಕೊಳ್ಳುವುದು? ಪ್ರಾಯ ಸಮರ್ಥೆಯಾದ ತರುಣಿ ಪ್ರಾಯವು ಹದಿನೇಳಕ್ಕೆ ಏರಿದೆ. ಈಗೀಗ ಹದಿನಾಲ್ಕು ತಪ್ಪಿದರೆ ಹದಿನೈದು ವರುಷದೊಳಗಾಗಿ ಮದುವೆಯಾಗದಿದ್ದಲ್ಲಿ ನೆರೆಕೆರೆಯ ಜನರ ಪರಿಹಾಸ್ಯಕ್ಕೆ ಗುರಿಯಾಗುವ ಕಠಿಣ ಕಾಲವಿದು. ಇಂತಹ ಸಮಯದಲ್ಲಿ ಮಗಳನ್ನು ಯೋಗ್ಯನಾದ ವರನಿಗೆ ಕೊಟ್ಟು, ಕನ್ಯಾದಾನ ಮಾಡುವೆನೆಂದರೆ, ಎಲ್ಲೆಲ್ಲಿಯೂ ಸಾಂಕ್ರಮಿಕ ಜಾಡ್ಯದಂತೆ ಹರಡಿಕೊಂಡಿರುವ ಆ ವರದಕ್ಷಿಣೆಯನ್ನು ಎಲ್ಲಿಂದ ತರಬಹುದು? ನಾರಾಯಣ ಶಾಸ್ತ್ರಿಗಳ ಕೈಯಲ್ಲೊಂದು ಚಿಕ್ಕಾಸೂ ಕೂಡ ಇಲ್ಲ. ಅನುದಿನವೂ ಅರೆಹೊಟ್ಟೆಯಿಂದ ಜೀವನವನ್ನು ನಿರ್ವಹಿಸಬೇಕಾಗಿದೆ ಯಾವ ತರದ ಉಪಾಯ ವನ್ನು ಸಾಧಿಸಿ, ಮಗಳನ್ನು ಮದುವೆ ಮಾಡಬಹುದೆಂಬ ಆಲೋಚನೆಯು ಶಾಸ್ತ್ರಿಗಳಿಗೆ ತೋಚದಾಯಿತು ಅರುಣೆಯಾದರೋ ತನ್ನ ಎಂಟು ವರ್ಷ ಪ್ರಾಯದಲ್ಲಿ ತನ್ನ ಜನನಿಯನ್ನಗಲಿ ಅವಳೀಗ ತನ್ನ ಜನಕನ ರಕ್ಷಣೆಯಲ್ಲಿರುವಳು

ಹೀಗೆಯೇ ಕೆಲವು ದಿನಗಳು ಸಂದುವು ಅಕಸ್ಮಾತ್ತಾಗಿ ನಾರಾಯಣ ಶಾಸ್ತ್ರಿಗಳು ಮೂರೇ ಮೂರು ದಿನದ ಕಠಿಣ ಜ್ವರದಿಂದ ದೈವಾಧೀನರಾದರು ಆಹಾ! ಲಜ್ಜೆಯ ಮೇಲೆ ಕುರ ವೆದ್ದಂತಾಯಿತು. ಅರುಣೆಯು ದಿಕ್ಕು ತೋಚದವಳಾದಳು ತಾಯಿಯ ಬಳಿ ಹಾಲು ಣ್ಣುವ ಆಶೆಯಿಂದ ಓಡುತ್ತಿರುವ ಮುದ್ದು ಕರುವು ಥಕ್ಕನೆ ಹುಲಿಗೆ ಎದುರಾದಾಗ, ಅಬಲ ಕರುವಿಗೆ ಯಾವ ತರದ ಹಿಂದೋಡುವ ಸಂಕಷ್ಟವು ಬಂದೊದಗುವುದೋ, ಅಂತೆಯೇ ಯೋಗ್ಯ ವರನೊಡನೆ ಮದುವೆಯಾಗಿ, ಪತಿಯ ಪರಮ ಸೇವೆಯನ್ನು ಎಡೆಯಿಲ್ಲದ ಭಕ್ತಿಯಿಂದ ಮಾಡಿ, ಅನುದಿನವೂ ಸಂತೋಷಾಂಬುಧಿಯಲ್ಲಿರಬೇಕೆಂಬುದಾಗಿ ಬಯಸುತ್ತಿದ್ದ ಈಕೆಯು ವರದಕ್ಷಿಣೆಯೆಂಬ ಭೀಕರ ಹುಲಿಯ ಬಾಯಿಗೆ ಬಿದ್ದುದರಿಂದ ಅದೂ ನಿಷ್ಪ್ರಯೋಜಕವಾಯಿತು ಈ ತರದ ತಡೆಯಲಸದಳವಾದ ಕಷ್ಟದಿಂದ ಪಾರಾಗುವುದಕ್ಕೆ ಬಲು ತೆರನಾಗಿ ನರಳುತ್ತಿದ್ದ ಅರುಣೆಯಿಂದು ಅನಾಥೆಯಾದುದರಿಂದ ಮತ್ತೊಂದು ಹರಿತವಾದ ವಿಧ್ನದ ಬಾಯಿಗೆ ಸಿಕ್ಕಿದಳಲ್ಲ! ಪರಮಾತ್ಮ! ದಯಾನಿಧೆ' ಅನಾಥರಕ್ಷಕ! ಅನಾಥೆಯಾದ ಅರುಣೆಯನ್ನು ನೀನೇ ರಕ್ಷಿಸು!

ಅರುಣೆಗೆ ಮುಂದಿನ ಹಾದಿಯೇ ತೋಚದಾಯಿತು ನೆಂಟರಿಷ್ಟರಿಲ್ಲ! ಬಂಧುಬಳಗವಿಲ್ಲ 'ತನ್ನವರೆಂಬವರು ಯಾರೂ ಇಲ್ಲ! ಆಹಾ! ದುರ್ದೈವವೇ' ಮಾತಾಪಿತೃರನ್ನಗಲಿದ ಅರುಣೆಯಿಂದು ಅನಾಥೆಯಾಗಿ, ಬಿಕಾರಿಣಿಯಾಗಿ ದಾರಿಯಲ್ಲಿ ಅಲೆದಾಡುವ ಕಠಿಣ ಪ್ರಸಂಗ ಬಂತಲ್ಲ ಇಲ್ಲ, ಇಲ್ಲ, ಅರುಣೆಯು ಹೆದರಲಿಲ್ಲ' ಬೆದರಲಿಲ್ಲ! ಅನಾಥನಾಥನೆಂಬ ಪೆಸರಿನಿಂದ ಮೆರೆಯುತ್ತಿರುವ ಆ ಪರಮಾತ್ಮನನ್ನೇ ನಂಬಿಕೊಂಡಳು. ಆತನೇ ತನ್ನ ರಕ್ಷಕನೆಂದು ಭಾವಿಸಿಕೊಂಡಳು.

ಅರುಣೆಯು ಅನುದಿನವೂ ಮುಂಜಾನೆ ಬೇಗನೇ ಎದ್ದು ತನ್ನ ಮೊಗ ಕೈಕಾಲುಗಳನ್ನು ತೊಳೆದುಕೊಂಡು ದೇವರ ಗೀತವನ್ನು ಹಾಡ ತೊಡಗುವಳು. ತುಸು ಹೊತ್ತಾದ ತರುವಾಯ ಸಮೀಪದ ದೇವಾಲಯಕ್ಕೆ ಹೋಗಿ, ಅಲ್ಲಿಯ ಕೆರೆಯಲ್ಲಿ ಮಿಂದು, ತೋಟದಲ್ಲಿಯ ಕುಸುಮಗಳನ್ನು ಕಿತ್ತು ಅವನ್ನು ದೇವರಿಗೆ ಒಪ್ಪಿಸಿ, ತೀರ್ಥ ಪ್ರಸಾದಗಳನ್ನು ಸ್ವೀಕರಿಸುವಳಲ್ಲದೆ ಮಧ್ಯಾಹ್ನದ ಹೊತ್ತಿಗೆ ಶ್ರೀ ದೇವರಿಗೆ ನೈವೇದ್ಯ ಮಾಡಿದ ಒಂದಿಷ್ಟು ಅನ್ನವನ್ನು ಉದಾರಿಯಾದ ಅರ್ಚಕನಿಂದ ಪಡಕೊಂಡು ಅದೇ ತನ್ನ ಭಾಗ್ಯವೆಂದು ತೃಪ್ತಿ ಪಡೆಯುತ್ತಿದ್ದಳು.

ಹೀಗಿರುವಲ್ಲಿ ಒಂದು ದಿನ ಅರುಣೆಯು ರಾತ್ರಿ ಸಾಧಾರಣ ಹತ್ತು ಘಂಟೆಗೆ ಸರಿಯಾಗಿ ಮನೆಯ ಜಾಪಡಿಯ ಮೇಲೆ ಮಲಗಿಕೊಂಡು ದೇವರ ಗೀತೆಯನ್ನು ಪಠಿಸುತ್ತಾ ಇದ್ದಳು. ಕೆಲವು ನಿಮಿಷಗಳಲ್ಲಿಯೇ ಆಕೆಗೆ ಕಣ್ಣು ಕೂರಿತು. ಅಲ್ಲೇ ನಿದ್ರೆ ಹತ್ತಿತು ಅರುಣೆಯಾಗ ಒಂದು ಕನಸನ್ನು ಕಂಡಳು "ಅರುಣೆ' ಅರುಣೆ! ನಿನ್ನ ಪರಮ ಭಕ್ತಿಗೆ ಮೆಚ್ಚಿದೆನು! ಹೆದರದಿರು! ಕೆಲವೇ ದಿನಗಳಲ್ಲಿ ನಿನ್ನ ಸಂಕಷ್ಟಗಳನ್ನು ಹೋಗಲಾಡಿಸುವೆನು "ಎಂಬ ನುಡಿಗಳನ್ನು ಯಾರೋ ನುಡಿದಂತಾಯಿತು.

ಮರುದಿನ ಅರುಣೆಯು ಸೂರ್ಯೋದಯಕ್ಕೆ ಮುಂಚೆ ಎದ್ದು ತನ್ನ ಮುಖ ಕೈಕಾಲುಗಳನ್ನು ತೊಳಕೊಂಡು ದೇವರ ಗೀತೆಯನ್ನು ಪಾಡುತ್ತಲಿದ್ದಾಗ, ಅವಳಿಗೆ ನಿನ್ನೆಯ ಕನಸಿನ ನೆನಪಾಯಿತು ಅವಳ ವದನವು ಅರಳಿತು ಆಕೆಯ ಸರ್ವಾಂಗಗಳಲ್ಲೂ ನವಚೇತನದ ನವಸ್ಫೂರ್ತಿಯು ಆವಿರ್ಭವಿಸಿತು ಸ್ವಲ್ಪ ಸಮಯದಲ್ಲೇ ಅವಳು ಎಂದಿನಂತೆ ಹರಿವಾಣವೊಂದನ್ನು ಹಿಡಕೊಂಡು ದೇವಾಲಯದತ್ತ ಕಡೆ ನಡೆದಳು

ಅರುಣೆಯು ಕೆರೆಯಲ್ಲಿ ಮಿಂದು ಹೂದೋಟದಲ್ಲಿ ಕುಸುಮಗಳನ್ನು ಕೆಗೆಯುತ್ತಿರುವಾಗ ಅಲ್ಲಿಯ ಅನೇಕ ಪುಷ್ಪಗಳಲ್ಲಿ ಅತ್ಯಂತ ಮನೋಹರವಾದ ಕುಸುಮವೊಂದರ ಕಡೆಗೆ ಅವಳ ದೃಷ್ಟಿಯು ಧಾವಿಸಿತು ಅದನ್ನು ಕಿತ್ತು ಅದರ ಸೌಂದರ್ಯಕ್ಕೆ ಮನಸೋತು, ಮೂಸಿದಳದನ್ನು ಕುಸುಮವದು ವಿಷಮಯವಾಗಿತ್ತೊ ಏನೋ? ಅವಳಾಗಲೇ ನಿಶ್ಚೇತನಳಾಗಿ ದೊಪ್ಪನೆ ಬಿದ್ದು ಬಿಟ್ಟಳು ಆಗ ಅಲ್ಲೇ ಕೆರೆಯಲ್ಲಿ ಮಿಂದು ತನ್ನ ಉಡಿದಾರವನ್ನು ಧರಿಸುತ್ತಲಿದ್ದ ತರುಣನೋರ್ವನು ಈ ಭೀಕರ ದೃಶ್ಯವನ್ನು ಕಂಡು, ಆಗಲೇ ಆ ಕಡೆಗೆ ಧಾವಿಸಿದನು. ಸ್ವಲ್ಪ ನೀರನ್ನು ಅವಳ ನೇತ್ರಗಳಿಗೆ ಹಚ್ಚಿದನು

ಅರುಣೆಯು ಸ್ಮೃತಿಗೆ ಬಂದಾಗ ಬಳಿಯಲ್ಲಿ ಅಪರಿಚಿತ ತರುಣನೋರ್ವನು ಕೂತುಕೊಂಡು ಗಾಳಿ ಹಾಕುತ್ತಲಿದ್ದನು ಅವಳಿಗಿದು ಕನಸಿನಂತೆ ಪರಿಣಮಿಸಿತು. ಪುನಃ ಕಣ್ಣು ಮುಚ್ಚಿ ನಾನಾ ವಿಚಾರಗಳಲ್ಲಿ ಮಗ್ನಳಾದಳು ರಮೇಶನು ಈ ತರುಣಿಗೆ ತನ್ನ ವಿಷಯದಲ್ಲಿ ಏನಾದರೂ ವಿಚಾರಗಳು ತೋರಬಹುದೆಂದೆಣಿಸಿ, ಹೇಳಿದನು—'ದೇವೀ' ಅಪರಿಚಿತನಾದ ನಾನು ನಿಮ್ಮ ಬಳಿಯಲ್ಲಿರುವುದನ್ನು ಕಂಡು ನಿಮಗೆ ಅತ್ಯಾಶ್ಚರ್ಯವಾಗಬಹುದು ಆದರೆ ಅಂತಹ ಆಶ್ಚರ್ಯದ ವಿಷಯವಾವುದೂ ಇಲ್ಲ ಮೂರ್ಛಿತಾವಸ್ಥೆಯಲ್ಲಿ ನಿಮ್ಮನ್ನು ಒಂಟಿಯಾಗಿ ಬಿಟ್ಟು ಹೋಗುವುದು ಯುಕ್ತವಲ್ಲವೆಂದು ತಿಳಿದು ಕೆರೆಯ ದಡದಲ್ಲಿ ಉಡಿದಾರವನ್ನು ಧರಿಸುತ್ತಲಿದ್ದ ನಾನು ಇಲ್ಲಿಗೆ ಬಂದೆನು. ಅಂದು ನನಗೆ ಕೊಂಗ್ರೆಸಿನ ಸತ್ಯಾಗ್ರಹ ಆಂದೋಲನದಲ್ಲಿ ಒಂದು ವರ್ಷದ ಶಿಕ್ಷೆಯು ವಿಧಿಸಲಾಗಿತ್ತು ಈಗತಾನೆ ಬಿಡುಗಡೆ ಹೊಂದಿ ಮನೆಗೆ ಹೋಗುತ್ತಿದ್ದಾಗ, ಈ ಪವಿತ್ರ ಸರೋವರದಲ್ಲಿ ಮಿಂದು ಹೋಗಬೇಕೆಂಬ ಉತ್ಕಟೇಚ್ಛೆಯುಂಟಾಯಿತು ಮಿಂದು ವಸ್ತ್ರವನ್ನು ಉಡುತ್ತಿದ್ದಾಗ, ತಮ್ಮ ಮೂರ್ಛಾವಸ್ಥೆಯ ದೃಶ್ಯವನ್ನು ಕಂಡೆನು."

ಅರುಣೆಗೆ ತರುಣನಲ್ಲಿ ಭಕ್ತಿಯುಂಟಾಯಿತು ಪ್ರೇಮಪೂರ್ವಕವಾದ ಗಂಭೀರ ದೃಷ್ಟಿಯಿಂದ ಅವಳು ಇಂತೆಂದಳು—"ದೇವ! ತಾವು ಬಾರದಿದ್ದರೆ ನನ್ನ ಅವಸ್ಥೆಯು ಏನಾಗುತ್ತಿತ್ತೊ ಏನೋ? ಬಡವಿಯನ್ನು ರಕ್ಷಿಸಿದಿರಿ?"

ದಿನಮಣಿಯು ಪೂರ್ವಕ್ಕೇರಿದನು. ಖಗಗಳು ತಮ್ಮ ಇಂಪಾದ ಗಾನವನ್ನು ಪಾಡಲಾರಂಭಿಸಿದುವು. ಅರುಣೆಯ ಹೃದಯದಲ್ಲಿ ತುಮುಲ ಯುದ್ಧವಾಗುತ್ತಾ ಇತ್ತು ಇಂದು ನನ್ನನ್ನು ರಕ್ಷಿಸಿದ ಈ ಪುಣ್ಯಾತ್ಮನಿಗೆ ತನ್ನ ಹೃದಯವನ್ನು ಅರ್ಪಿಸುವೆನೆಂದು ಗ್ರಹಿಸಿದಳು ಆದರೆ ಪರಿಚಿತನಾದ ಅವನೊಡನೆ ಒಮ್ಮೆಯೇ ಹೇಳುವುದೆಂತು? ಲಜ್ಜೆಯು ಅವಳ ಚಂಚಲವಾಣಿಯನ್ನು ತಡೆಯುತ್ತಿತ್ತು.

"ದೇವೀ! ನನಗನುಜ್ಞೆಯಾಗಲಿ! ನಾನು ತೆರಳುವೆನು?" ಎಂದು ರಮೇಶನು ಅವಳೊಡನೆಂದನು.

"ದೇವ! ಈಗೆತ್ತ ಹೊರಡುವಿರಿ? ಈ ನಾವೆಯನ್ನು ಮೇಲೆತ್ತಿದಂತೆಯೇ ದಡಕ್ಕೆ ಮುಟ್ಟಿಸಿರಿ! ಅರುಣೆ ಈಗ ತಮ್ಮವಳು.

"ದೇವೀ! ಹಾಗೆನ್ನದಿರು! ಈ ಸೇವಕನ ಜೀವನ ಪಥವು ದುರ್ಗಮವಾಗಿದೆ ರಮಣಿಯ ಹೃದಯವನ್ನು ಸುಖಮಯವನ್ನಾಗಿ ಮಾಡಲು ಯಾವ ಸಾಧನವೂ ಈತನಲ್ಲಿಲ್ಲ!"

"ನಾಥಾ' ರಮಣೀ ಹೃದಯಕ್ಕೆ ಧನದ ಅವಶ್ಯವಿಲ್ಲ! ವೈಭವದ ಇಚ್ಛೆಯಿಲ್ಲ' ಬಯಸುವೆನು, ಯಾವುದನ್ನು? ಕೇವಲ ಉತ್ತಮ ಹೃದಯದ ತಮ್ಮ ಜೀವನ ಪಥವನ್ನು ಸುಗಮವನ್ನಾಗಿ ಮಾಡಲು ಒಬ್ಬ ಅರ್ಧಾಂಗಿನಿಯು ಅವಶ್ಯವಿದೆ, ಹೃದಯದಲ್ಲಿ ಉತ್ಸಾಹ ತುಂಬಲು ಒಬ್ಬ ಸಂಗಾತಿಯು ಬೇಕೇ ಬೇಕು "

ಭಗವಾನ್ ಭಾಸ್ಕರನು ಅರುಣೆಯ ವದನವನ್ನು ಕೆಲವು ಸಿಂಧೂರ ವರ್ಣಗಳಿಂದ ತುಂಬಿಬಿಟ್ಟನು ಆ ಮಂಗಲ ಪ್ರಭಾತದಲ್ಲಿ ಆ ಎರಡು ತರುಣ ತರುಣಿಯರ ಹೃದಯಗಳು ಒಂದಾದುವು

The Ammembal Subba Rao Pai Memorial Fund,
Canara High School,
MANGALORE.

Applications for loan stipends from the above Fund should reach the HONORARY TREASURER of the Fund by the 15th June 1937. Printed Application forms are available at the Office of the Fund between 9 a m and 11 a m every day at a cost of one anna each for original application forms and half an anna each for renewal application forms If forms are to be sent by post postage stamps equivalent to the price of the form or forms required and one half anna stamp for each form to cover the postage for the same should be sent Only Gowd Saraswath Brahmin students need apply Applicants will note that first preference will be given to running stipendiaries while awarding stipends and if funds are available after that, new applicants, cases will be considered, with preference for applications for technical courses

Canara High School Mangalore 7—4—1937

M. Venkatesha Pai,
Hon. Secretary.

WANTED

4 YOUNG WORKING PARTNERS 4

Capable of investing each a sum of Rs. 200, for a sound and novel indiginous industry to be started shortly.

Please send communications to:—

'K'

C/o, 'Swadeshabhimani
Mangalore

ಮದನಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ನ್ಯಭಿಚಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೨ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂತರೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1. ಇದರ ಸಂಗಡ ೧೩ ಫ್ರೆಂಚ್ ಲವ್ವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 237 ಮದರಾಸ್.

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕಾದರೆ,
ಶಾರದಾ ಛಾಪಖಾನೆ ಮಂಗಳೂರು,
ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಹಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

ESTED- 1931.

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾವಿಶಾರದ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3—6	3—10
ಮುಸ್ಕಾರಿ ...	3—8	4—4
ಗುಡ್ಡು ...	3—10	3—14
ಊರ ಅವ್ವಲ್ ಬೆಳ್ತಿಗೆ ...	4—0	4—4
ರಂಗೂನು ಬೆ. ಗೋ. ಗಿಳ್ಳೆ ...	7—0	7—4
ಎಲ್ಲೂರು ಬೆ. ಮು. ಗಿಳ್ಳೆ ...	3—12	3—12
ಗೋದಿ ಗೋಣಿ ಗಿಳ್ಳೆ ...	11—0	13—0
ತೊಗರಿ ಗೋಣಿ ಗಿಳ್ಳೆ ...	9—8	12—8
ಹುರುಳಿ ಗೋಣಿ ಗಿಳ್ಳೆ ...	5—0	5—6
ಕಡಲೆ ಗೋಣಿ ಗಿಳ್ಳೆ ...	8—0	12—8
ತೊಗರಿಬೇಳೆ ಗೋಣಿ ಗಿಳ್ಳೆ ...	11—0	19—0
ಉದ್ದು ಗೋಣಿ ಗಿಳ್ಳೆ ...	9—0	9—8
ಹೆಸರು ಗೋಣಿ ಗಿಳ್ಳೆ ...	7—12	8—0
ಊರುಬೆಲ್ಲ ಖಂಡಿ ಗಿಳ್ಳೆ ...	30—0	32—8
ಉಪ್ಪು ಗೋಣಿ ಗಿಳ್ಳೆ ...	4—2	5—4
ಕೊಬ್ರಿ ಖಂಡಿ ಗಿಳ್ಳೆ ...	75—0	84—0
ಕೊಬ್ರಿ ಹಿಂಡಿ ಖಂಡಿ ಗಿಳ್ಳೆ ...	26—8	28—8
ಎಳ್ಳಿಂಡಿ ಖಂಡಿ ಗಿಳ್ಳೆ ...	26—4	27—8
ಕೊಬ್ರಿ ಎಣ್ಣೆ ಮಣ ಗಿಳ್ಳೆ ...	6—0	7—0
ಎಳ್ಳೆಣ್ಣೆ ಮಣ ಗಿಳ್ಳೆ ...	7—0	7—0
ಚಿಮಣಿಎಣ್ಣೆ ಪೆಟ್ಟಿಗೆ ಗಿಳ್ಳೆ ...	6—5	7—5
ದೋರಣ ಸಕ್ಕರೆ ಮು. ಗಿಳ್ಳೆ ...	3—2	3—4
ಮೆಣಸು ...	2—8	5—0
ಸಾಸಿವೆ ಮುಡಿ ಗಿಳ್ಳೆ ...	5—4	5—8
ಕಾಳುಮೆಣಸು ಖ. ಗಿಳ್ಳೆ ...	100—0	120—0
ಯೇಲಕ್ಕಿಬೀಜ ಮಣ ಗಿಳ್ಳೆ ...	80—0	85—0
ಗೇರುಬೀಜ ಮು. ಗಿಳ್ಳೆ ...	3—4	3—8
ಕಬ್ಬಿಣ ಖಂಡಿ ಗಿಳ್ಳೆ ...	35—0	37—8
ತಾಂಬ್ರ ತಗಡು ಮ. ಗಿಳ್ಳೆ ...	12—4	12—8
ತಾಂಬ್ರ ಪಾತ್ರಗಳು ಮ. ಗಿಳ್ಳೆ ...	12—8	14—0
ಚೀನಿಬೆಲ್ಲ ಸೇರು ಗಿಳ್ಳೆ ...	13—8	15—0
ಹಿತ್ತಾಳಿ ತಗಡು ಮ. ಗಿಳ್ಳೆ ...	10—0	10—8
ಹವನು ಗಿಳ್ಳೆ ...	22—7	22—8
ಹುಣಿಸೆ ಹುಳಿ ಖಂಡಿ ಗಿಳ್ಳೆ ...	40—0	45—0
ನೇಟಿವ್ ಕಾಫಿ ಖಂಡಿ ಗಿಳ್ಳೆ ...	170—0	180—0
ಫಿಬೇರಿ ಕಾಫಿ ಖಂಡಿ ಗಿಳ್ಳೆ ...	175—0	195—0
ಮಡಿಕೇರಿ ಏಲಕ್ಕಿ ...	50—0	55—0

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯಕೂಡದು. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಎದೆ ಬಡಿತ, ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒದ್ದಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ. ಮತ್ತು ರೋಗಿಯು ಶಾಂತಿಯನ್ನೂ ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2–0–0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ

C. L. Namawala,
Palace Road, BARODA.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

೫ ಅಂಕಗಳ ನ್ನುಳ್ಳ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ.

ಬರೆದವರು:—ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು; ಯೋಗಿ ಹೃದಯದೊಳಿಲ್ಲ; ಸೂರ್ಯನೊಳಗಿಲ್ಲ; ॥
ಎನ್ನ ಭಕ್ತರು ಎಲ್ಲಿ ಪಾಡುತಿಹರೋ ಅಲ್ಲಿ ನೆಲೆಗೊಳ್ಳುವೆನು ನಾನು, ನಾರದ ಮುನಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮಂಗಳೂರಿನ ಮನೋಹರವಾದ ೩೫ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ:—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯಾಯ್ಡ್ ಪಬ್ಲಿಷಿಂಗ್ ಹೌಸ್, ಸ್ಟೇಷನ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಚೈತ್ರ ಬ। ೫ ಶನಿವಾರದಿಂದ, ಚೈತ್ರ ಬ। ೧೧ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ ಮೇಷ (ಪಗ್ಗು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
1	ಶನಿ	೫	೨	ಪೂ.ಷಾಢ	೪೬	೧೮	
2	ರವಿ	೬	೪	ಉ.ಷಾಢ	೪೯	೧೯	
3	ಸೋ.	೭	೫	ಶ್ರವಣ	೫೦	೨೦	
4	ಕುಜ	೮	೫	ಧನಿಷ್ಠ	೫೧	೨೧	
5	ಬುಧ	೯	೩	ಶತಭಿಷ	೫೦	೨೨	
6	ಗುರು	೧೦	೫೬	ಪೂ.ಭಾ.	೪೮	೨೩	
7	ಶುಕ್ರ	೧೧	೫೨	ಉ.ಭಾ.	೪೬	೨೪	

Break Pills!

Take To-Night

Prepared by a Sage out of Amber Saffron Gold Musk with Himalayan Drugs recruit lost energy Strength Nervous Debility and all Disorders in Spinal Cord. Regains lost vitality Gives marvellous effect. 60 Pills Rs. 5. Sample 30 Pills Rs. 3. List Free.

Dr. A. S. MURTHI. CHICACOLE.

THE

Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ಪಾಡಿಕೆಯನ್ನು ಮರೆಯಬೇಡಿರಿ.

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು.

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ, ನೂಲಿನಂತಹ ಹುಳ, ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು. ಇದರ ಸೇವನೆ, ಸಕ್ಕರೆ ಬಿಸಿನೀರು. (ಪರಳಕ್ಕೆ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಸುಕವಿರೇಚನ ಗುಳಿಗೆ	0	0	6
ಪಿತ್ತಶಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0
ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ಶಾಂತಿಯಾಗುವುದು. ಕಷ ಮಿಶ್ರಿತ ಸೀಸೆ 1ಕ್ಕೆ	0	8	0

ಸಿಗುವ ಸ್ಥಳ: ಷಾ ಕಂಪೆನಿ,
ಗವರ್ನಮೆಂಟ್ ಕೋಲೇಜಿನ ಎದುರು, ಮಂಗಳೂರು.

THE

BANK OF MANGALORE LTD.,

ESTD. 1931 MANGALORE.

Branches:-
Panemangalore, Mudabidri & Padubidri.

Chairman:—**Philip J. Chandran, Esq.,**
Retd. Dt. Registrar of Joint Stock Companies.

On & from 1st of January 1937,
Fixed Deposits will be received at following rates of interest.

For 3 months	3½%
" 6 "	4%
" 12 "	5%
" 24 " & upwards	5½%

Interest Payable Quarterly.

Saving Bank deposit 3½% on daily balances

All kinds of banking business transacted.

U. R. PAI, N. U. PAI, ***Managing Directors.***

ಬಿಳಿ ತೊನ್ನು ಮತ್ತು ಕುಷ್ಠರೋಗ.

ಕೆಲವೇ ದಿವಸದ ಔಷಧೋಪಚಾರದಿಂದ ಹಲವು ವರ್ಷದಿಂದ ಮನೆಮಾಡಿದ ಬಿಳಿತೊನ್ನು ಮತ್ತು ಕುಷ್ಠರೋಗ ಮೊದಲಾದ ಕಠಿಣ ರೋಗಗಳು ಗುಣವಾಗುವುವು. ಹಲವು ಹಕೀಮ್, ಡಾಕ್ಟರು ಮತ್ತು ಕವಿರಾಜರುಗಳಿಂದ ಅಸಾಧ್ಯವಾದ ಈ ರೋಗಗಳು ಈ ಔಷಧದಿಂದ ಸಾಧ್ಯವಾಗಿರುತ್ತದೆ. ಇದರಿಂದ ರೋಗವು ನಾಶವಾಗದಿದ್ದಲ್ಲಿ ರೂಪಾಯಿ 500 ಬಹುಮಾನ ಕೊಡಲ್ಪಡುವುದು.

ಔಷಧಿಯ ಬೆಲೆ ರೂ. 2-0—0 ಮಾತ್ರ. ಎಲ್ಲಾ ಪತ್ರವ್ಯವಹಾರವು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು. ಇತರಭಾಷೆಯಲ್ಲಿ ಮಾಡಿದ್ದಲ್ಲಿ ಸರಿಯಾದ ನಿಘಾ ತೆಗೆದುಕೊಳ್ಳಲಾಗಲಿಕ್ಕಿಲ್ಲ.

Vaidyaraj Akil Kishore Ram,
No. 62 P. O. Katrisarai (Gaya)

CHEAPEST RATE
VALUE BACK IF DISAPPROVED
DECENT, STRONG, ACCURATE & STYLISH WRISTWATCHES GTD 3 YEARS. ROUND NICKEL 2/14/-, RADIUM DIAL 3/12/-; GOLDEN 3/14/-. SQUARE NICKEL 4/8/-, GOLDEN 4/14/-. RECTANGULAR NICKEL 5/4/-, GOLDEN 6/-. VERY SMALL ROUND NICKEL 5/-, GOLDEN 6/8/-. POSTAGE ETC. ... FREE ... 103 HARRISON ROAD ... CALCUTTA

ಹಿಂದೂದೇಶ.

ಕವಿ ರವೀಂದ್ರರು ಮುಂದಿನ ಡಿಸೆಂಬರ್ ೭ನೇ ತಾರೀಕಿನ ದಿನ ನಾಗಪುರ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದ ಭಾಷಣ ಮಾಡುವರಾಗಿ ತಿಳಿದುಬರುತ್ತದೆ.

೦ ೦ ೦ ೦

ಶ್ರೀ| ಸುಭಾಸ್ ಬಾಬುಗಳು ಫ್ಯಾಸಿಸಂ ಮತವನ್ನೂ ಮತ್ತು ಯುದ್ಧವನ್ನೂ ವಿರೋಧಿಸುವ ತತ್ವವನ್ನಿಟ್ಟುಕೊಂಡಿರುವ ಅಖಿಲಭಾರತದ ಲೀಗನ್ನು ಸೇರಿದ್ದಾರೆ. ಕವಿರವೀಂದ್ರರು ಈ ಲೀಗಿನ ಅಧ್ಯಕ್ಷರು. ಬೊಂಬಾಯಿಯ ಸುಪ್ರಸಿದ್ಧ ಆರ್ಥಿಕ ಶಾಸ್ತ್ರಜ್ಞರಾದ ಪ್ರೊ| ಕೆ ಟಿ ಷಾರವರು ಇದರ ಚೇರ್‌ಮ್ಯಾನರು

೦ ೦ ೦ ೦

ಕಳೆದ ತಾ ೨೨ನೇ ಸಾಯಂಕಾಲ ಮಹಾತ್ಮಾಜೀಯವರೂ ಪರಿವಾರವೂ ವಾರ್ಧಾದಿಂದ ಮುಂದೆ ಹೋಗುತ್ತ, ಕಲ್ಯಾಣ್ ರೈಲ್ವೆ ಸ್ಟೇಶನನ್ನು ತಲ್ಪಿದರು ಅಲ್ಲಿ ಅವರಿಗೆ ಅಭೂತವಾಗಿ ಸ್ವಾಗತೀಕರಿಸಲಾಯಿತು. ಈ ಸಮಯದಲ್ಲಿ ಪೋಲೀಸರಿಂದ ಬಂಧಿಸಲ್ಪಟ್ಟ ಒಬ್ಬ ಮುದುಕನು, ಜನಸಂದಣಿಯಿಂದ ಮುಂದೆ ಬಂದು ತನ್ನನ್ನು ಬಿಡುಗಡೆಪಡಿಸಬೇಕೆಂದು ಬೇಡಿದನು. ಆಗ ಮಹಾತ್ಮರು ಮುದುಕನನ್ನು ಉದ್ದೇಶಿಸಿ "ಮ್ಯಾಜಿಸ್ಟ್ರೇಟರ ಮುಂದೆ ಹೋಗಿ ನಿನ್ನ ತಪ್ಪನ್ನು ಒಪ್ಪಿಕೊ ಅವರು ದಯಾಳುಗಳಾದರೆ ನಿನ್ನನ್ನು ಬಿಟ್ಟುಬಿಡಬಹುದು." ಎಂದರಂತೆ

೦ ೦ ೦ ೦

ಒಬ್ಬ ಕಮ್ಯೂನಿಸ್ಟನನ್ನು ಹುಡುಕುವ ನೆವದಿಂದ ಲಾಹೋರಿನ ಕೆಲವು ಪೋಲೀಸರು ಅಲ್ಲಿನ ನಾಲ್ಕಾರು ಕಾಂಗ್ರೆಸ್ ಸಂಸ್ಥೆಗಳನ್ನು ಹುಡುಕಿ ಕಾಗದಪತ್ರಗಳನ್ನು ವಶಪಡಿಸಿಕೊಂಡಿರುವರು

೦ ೦ ೦

ಕಳೆದ ವರ್ಷ ಏಪ್ರಿಲ್‌ನಲ್ಲಿ ಪೂನಾ ಬಳಿ ನಡೆದ ಸೋನ್ಯ ಮಾರುತಿ ಕೋಲಾಹಲದ ದೊಂಬಿಗಳ ಸಂಬಂಧದಲ್ಲಿ ಬಂಧಿತರಾದ ಹಿಂದೂಗಳನ್ನೂ ಮುಸಲ್ಮಾನರನ್ನೂ ಚಕ್ರವರ್ತಿಗಳ ಕಿರೀಟಧಾರಣೆ ಕಾಲಕ್ಕೆ ಬಿಟ್ಟುಬಿಡುವಂತೆ ನಾಸಿಕಿನ ಹಿಂದೂ ಮುಸಲ್ಮಾನ್ ಸಭೆಗಳು ಚಕ್ರವರ್ತಿಯವರಿಗೆ ಒಂದು ಅರ್ಜಿ ಬರೆಕೊಂಡಿರುತ್ತಾರೆ

೦ ೦ ೦ ೦

ಬಂಗಾರದ ಬೆಲೆಯು ಹೆಚ್ಚಿದಂದಿನಿಂದ ಭಾರತದಿಂದ ೩,೯೬,೨೯,೦೨,೯೬೨ ರೂಪಾಯಿಗಳಷ್ಟು ಬಂಗಾರವು ಪರದೇಶಕ್ಕೆ ಹೋಗಿದೆ

೦ ೦ ೦ ೦

ಬರ್ಮದ ಭಾರತೀಯ ಕೆಲಸಗಾರರುಗಳ ಸಂಘಗಳ ಒಂದು ಮೀಟಿಂಗು ಸೇರಿ ಬರ್ಮಕ್ಕೆ ಚಿತ್ತೈಸಲಿರುವ ಪಂ ಜವಾಹರಲಾಲರಿಗೆ ಒಂದು ಭಿನ್ನಹಪತ್ರಿಕೆಯನ್ನರ್ಪಿಸಬೇಕೆಂದು ತೀರ್ಮಾನಿಸಲಾಯಿತು.

೦ ೦ ೦ ೦

ಕಳೆದ ತಾ. ೧೬ನೇ ತಾರೀಕಿನಲ್ಲಿ ಗಯಾದಲ್ಲಿನ ಒಬ್ಬ ಶ್ರೀಮಂತ ಜಮೀನುದಾರನ ಕೊಲೆಯಾಗಿದೆ. ಮಹಮ್ಮದ್‌ಪುರ್ ಎಂಬ ಗ್ರಾಮದ ಹರೀಲಾಲ್ ಸಿಂಗ್ ಎಂಬ ಈ ಜಮೀನ್ದಾರನು ಒಂದು ಎತ್ತಿನ ಗಾಡಿಯಲ್ಲಿ ಹೋಗುತ್ತಿದ್ದಾಗ ಡಕಾಯಿತರು ಅವನನ್ನು ಮುತ್ತಿ ಕೊಲೆಮಾಡಿರುವರು.

೦ ೦ ೦ ೦

ಮುತ್ರ ಪಟ್ಟಣದ ಒಂದು ದೇವಸ್ಥಾನದಲ್ಲಿ ರಾತ್ರಿ ಹೊತ್ತು ಕಳ್ಳರು ನುಗ್ಗಿ ದೇವರ ವಿಗ್ರಹದ ಅಲಂಕಾರಾಭರಣಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಸಮಯದಲ್ಲಿ, ದೇವಸ್ಥಾನದ ಆವರಣದಲ್ಲಿ ಪಂಜರದಲ್ಲಿದ್ದ ಒಂದು ಗಿಣಿಯು ಬಲವಾಗಿ ಕೂಗಿಕೊಂಡು ಪೂಜಾರಿಗಳೆಲ್ಲರನ್ನು ಎಬ್ಬಿಸಿತು. ಪರಿಣಾಮವಾಗಿ ಕಳ್ಳರು ಮಾತ್ರ ಕದ್ದದ್ದನ್ನು ಗುಡಿಯಲ್ಲಿಯೇ ಬಿಟ್ಟು ಪಲಾಯನಗೈದರು.

೦ ೦ ೦ ೦

ಮುಂಬಾಯಿ ಶಾಸನ ಸಭೆಯಲ್ಲಿ ಸ್ವರಾಜ್ಯ ಪಾರ್ಟಿಯ ಸದಸ್ಯರಾಗಿದ್ದು, ತಾತ್ಕಾಲಿಕ ಮಂತ್ರಿಮಂಡಳದಲ್ಲಿ ಪೆನ್ಷನ್ಸ್ ಮಂತ್ರಿತ್ವವನ್ನು ಸ್ವೀಕರಿಸಿದ ಶ್ರೀ| ಜಮ್ನಾದಾಸ್ ಮೆಹತಾರವರು ಅಧಿಕಾರ ಸ್ವೀಕರಿಸಿದಕ್ಕಾಗಿ, ಬೊಂಬಾಯಿ ಕೊರ್ಪೊರೇಶನ್ ಭವನದ ಮುಂಭಾಗದಲ್ಲಿ ಮಾಣಿಕ್‌ಲಾಲ್ ಗಾಂಧಿ, ಮತ್ತು ಭಾಟು ದೇಸಾಯಿ ಎಂಬೀರ್ವ ಯುವಕರು, ಅವರನ್ನು ಅವಹೇಳನ ಮಾಡಿದುದಕ್ಕಾಗಿ ಯುವಕರ ದಸ್ತಗಿರಿಯಾಗಿತ್ತು ಬೊಂಬೈ ಎಸ್‌ಪ್ಲೆನೇಡ್ ಪೋಲೀಸ್ ಕೋರ್ಟಿನ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅವರನ್ನು ವಿಚಾರಿಸಿ, ಇಬ್ಬರನ್ನೂ ಖುಲಾಸೆ ಮಾಡಿರುವರು.

೦ ೦ ೦ ೦

ಕಲ್ಕತ್ತಾದಲ್ಲಿ ಈಗ ನಡೆಯುತ್ತಿರುವ ಮುಷ್ಕರದಿಂದ ೧,೩೫,೦೦೦ ಜನಗಳಿಗೆ ಕೆಲಸವಿಲ್ಲದಂತಾಗಿದೆ

೦ ೦ ೦ ೦

ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವ ಶಿಶುವಿವಾಹ ಮಸೂದೆಯನ್ನೇ ಅನುಸರಿಸಿ ಫ್ರೆಂಚ್ ಇಂಡಿಯಾ ಸರಕಾರದವರು ಒಂದು ಮಸೂದೆಯನ್ನು ಫ್ರೆಂಚ್ ಇಂಡಿಯಾದಲ್ಲಿ ತರಲಿರುವರಂತೆ

೦ ೦ ೦ ೦

ಪಂಡಿತ ಜವಾಹರಲಾಲರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಲಿರುವರೆಂದು ಟೈಮ್ಸ್ ಒಫ್ ಇಂಡಿಯಾ ಪತ್ರಿಕೆಯು ಪ್ರಕಟಿಸಿರುವುದು ಶುದ್ಧ ಸುಳ್ಳೆಂದು ಬಾಬು ರಾಜೇಂದ್ರ ಪ್ರಸಾದರು ಹಂದಲಿಯಿಂದ ಒಂದು ಹೇಳಿಕೆಯನ್ನು ಹೊರಡಿಸಿರುವರು.

೦ ೦ ೦ ೦

ಕಳೆದ ತಾ ೧೮ನೇ ದಿನ ಪೂನಾದಲ್ಲಿ ಡೆಮೋಕ್ರಟಿಕ್ ಪಾರ್ಟಿಯ ಒಂದು ಶಾಖೆಯು ತೆರೆಯಲ್ಪಟ್ಟಿತು. ಆಗ ಆ ಪಾರ್ಟಿಯ ಮಂಡಲರಾದ ಶ್ರೀ| ಜಮ್ನಾದಾಸ್ ಮೆಹತಾರವರಿಗೂ (ಇಂಟೆರಿಂ ಮಂತ್ರಿಗಳು) ಮತ್ತು ಫೆಡರಲ್ ಕೋರ್ಟಿನ ಜಡ್ಜ್ ಡೆಸಿಗ್ನೇಟರಾದ ಮಿ| ಎಂ ಆರ್ ಜಯಕರರವರಿಗೂ ಪಾರ್ಟಿಯು ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಠರಾವಾಯಿತು.

೦ ೦ ೦ ೦

ಸಿಂಧ್ ಸ್ವತಂತ್ರವ ಕಟಿನೆಟ್ಟು ೫ ವರ್ಷಗಳು ನಡೆಯುವ ಒಂದು ಗ್ರಾಮ ಪುನರುದ್ಧಾರ ವ್ಯವಸ್ಥೆಯನ್ನು ಕೈಕೊಳ್ಳುವುದಂತೆ. ಈ ವ್ಯವಸ್ಥೆಯ ಪ್ರಕಾರ ಟೂರಿಂಗ್ ಆಸ್ಪತ್ರೆಗಳು ಏರ್ಪಡುವುವು. ರೈತರಿಗೆ ಸುಲಭ ಷರತ್ತುಗಳ ಮೇಲೆ ಖಾಲಿ ಜಮೀನನ್ನು ಆರಂಭಕ್ಕೆ ಕೊಡಲಾಗುವುದು. ಗ್ರಾಮಾಂತರಗಳಲ್ಲಿ ಬಾವಿಗಳನ್ನು ತೆಗೆಯಲಾಗುವುದು ನಿರ್ಬಂಧ ಪ್ರಾಥಮಿಕ ವಿದ್ಯಾಭ್ಯಾಸವನ್ನು ಜಾರಿಗೆ ತರಲಾಗುವುದು.

೦ ೦ ೦ ೦

ಮಹಾತ್ಮಾ ಗಾಂಧಿಯವರು ಅಲ್ಲಹಾಬಾದಿನಲ್ಲಿ ನಡೆಯಲಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗಿನಲ್ಲಿ ಭಾಗಿಯಾಗುವರಾಗಿ ತಿಳಿದುಬರುತ್ತದೆ.

೦ ೦ ೦ ೦

ಕಲ್ಕತ್ತದ ಸೆಣಬಿನ ಮುಷ್ಕರವು ದಿನೇ ದಿನೇ ಪ್ರಬಲವಾಗುತ್ತಿದೆ.

೦ ೦ ೦ ೦

ಮದ್ರಾಸು ಮಂತ್ರಿಮಂಡಲಕ್ಕೆ ಜಸ್ಟಿಸ್ ಪಾರ್ಟಿಯ ಬೆಂಬಲವಿಲ್ಲೆಂದು ಬೊಬ್ಬಿಲಿಯ ಮಹಾರಾಜರು ಉದಕಮಂಡಲದಲ್ಲಿ ಸೂಚಿಸಿರುವರಾಗಿ ತಿಳಿದು ಬರುತ್ತದೆ.

೦ ೦ ೦ ೦

ಕಲ್ಕತ್ತೆಯ ಶ್ರೀ ಭುವನೇಶ್ವರಿ ಎಂಬ ದೇವತೆಯ ಪರವಾಗಿ ೨೦ ವರ್ಷಗಳಿಂದ ನಡೆಯುತ್ತಿದ್ದ ಒಂದು ಕೋರ್ಟ್ ವ್ಯವಹಾರವು ಈಗ ಪ್ರೀವಿ ಕೌನ್ಸಿಲಿನಲ್ಲಿ ಫೈಸಲು ಮಾಡಲ್ಪಟ್ಟಿತು ಈ ದೇವತೆಗೆ ಸಂಬಂಧಪಟ್ಟ ಕಲ್ಕತ್ತದಲ್ಲಿ ಜಮೀನು ಇದೆ ಜಮೀನಿನ ಸ್ವಲ್ಪ ಭಾಗವೇ ಆ ದೇವತೆಗೆ ಸೇರಿದ್ದಾಗಿದೆಂದು ಕಲ್ಕತ್ತಾ ಹೈಕೋರ್ಟಿನವರು ತೀರ್ಮಾನಿಸಿದರು ಈ ತೀರ್ಮಾನದ ನಂತರ ದೇವಾಲಯದ ಟ್ರಸ್ಟಿಗಳು ಪ್ರೀವಿ ಕೌನ್ಸಿಲಿನಲ್ಲಿ ಅಪ್ಪೀಲು ಮಾಡಿದರು. ಅದು ಈಗ ಫೈಸಲ್ ಮಾಡಲ್ಪಟ್ಟಿತು.

೦ ೦ ೦ ೦ ೦

ಮೈಸೂರಿನ ಪ್ರಾಣಿ ಪ್ರದರ್ಶನಾಲಯದಲ್ಲಿ ೧೧೦೬ ಅಡಿ ಉದ್ದದ ಒಂದು ಸರ್ಪವನ್ನು ಪ್ರದರ್ಶನಕ್ಕಿಟ್ಟಿರುವರು.

೦ ೦ ೦ ೦

ನಾಸಿಕ ಮತ್ತು ಯವತಮಾಲ ಜಿಲ್ಲೆಗಳಲ್ಲಿ ಬರಗಾಲದ ಚಿಹ್ನೆಗಳು ಕಂಡುಬರುವುದಾಗಿ ತಿಳಿದುಬರುತ್ತದೆ.

೦ ೦ ೦ ೦

ಆಳಸ್ವೇರ್ ಸಂಸ್ಥಾನದ ಒಂದು ಗ್ರಾಮದ ಜನರ ಮೇಲೆ ಪೋಲೀಸರು ಗುಂಡುಹಾರಿಸಿದ್ದರಿಂದ ೯ ಮಂದಿ ಮರಣಪಟ್ಟಿರುವರು. ೪೨ ಮಂದಿಗಳಿಗೆ ಗಾಯ ಆಗಿರುವುದು.

೦ ೦ ೦ ೦ ೦

ಆಸನ್‌ಸೋಲ್ ಎಂಬಲ್ಲಿಗೆ ೧೩ ಮೈಲು ದೂರದ ರಾಣಿಗಂಜ್ ಎಂಬಲ್ಲಿ ದಿಗರ್ಬಾಯಿನ ನಾಟಕ ಕಂಪೆನಿಯ ಹಲವರು ವಾದ್ಯಸಮೇತ ಕರಪತ್ರಗಳನ್ನು ಹಂಚುತ್ತಿರುವ ಸಮಯ ಕೆಲವು ಮುಸಲ್ಮಾನರು ಅವರ ಮೇಲೆ ಬಿದ್ದು ಕಲ್ಲುಗಳನ್ನೆಸೆದು ಕೆಲವರಿಗೆ ಗಾಯಪಡಿಸಿದರು. ಒಬ್ಬ ಮುಸಲ್ಮಾನನು ಒಬ್ಬ ಹಿಂದುವನ್ನು ಚೂರಿಯಿಂದ ತಿವಿದನು. ಗಾಯಗೊಂಡವರನ್ನು ಆಸ್ಪತ್ರೆಗೆ ಒಯ್ಯಲಾಗಿದೆ. ನಾಲ್ಕು ಮಂದಿ ಮುಸಲ್ಮಾನರನ್ನು ದಸ್ತಗಿರಿ ಮಾಡಿರುವರು

GODREJ

CHAVI BRAND

ಟ್ವಾಲೆಟ್ ಸಾಬೂನುಗಳು



ನನ್ನ ಮುಖವನ್ನು ಸ್ವಲ್ಪ ನೋಡಿ. ಅದೆಷ್ಟು ಅಸಹ್ಯ ಕಾಣುತ್ತದೆ?

ಚರ್ಮಕ್ಕೆ ಕೆಡುಕನ್ನುಂಟುಮಾಡಿ, ಬೆವರಿನ ಒರಳಿಕೆಯನ್ನು ತಡೆಕಟ್ಟುವ, ಅನಿರ್ಮಲ ಮತ್ತು ಅಪಾಯಕರ ಸಾಮಾನುಗಳಿಂದ ತಯಾರಿಸಲ್ಪಟ್ಟ ಅಗ್ಗ ಬೆಲೆಯ ಸಾಬೂನುಗಳನ್ನು ಉಪಯೋಗಿಸಿದುದೇ ನನ್ನ ಈ ಅವಸ್ಥೆಗೆ ಕಾರಣವಾಗಿರುತ್ತದೆ

ಆದರೆ ಅದೇ ಮುಖವನ್ನು ಈಗ ನೋಡಿ-ಎಂಥಾ ಬದಲಾವಣೆಗಳು!

ಇದು ನಿರ್ಮಲವಾದ ಸಸ್ಯ ತೈಲ್ಯಗಳಿಂದಲೇ ತಯಾರಿಸಲ್ಪಟ್ಟ ಗೊಡ್ರೆಜ ಸಾಬೂನುಗಳ ಉಪಯೋಗದಿಂದಾದ್ದುದು ಗೊಡ್ರೆಜ ಸಾಬೂನಿನ ಸುವಾಸನೆಯ ನೊರೆಯು ಚರ್ಮರಂಧ್ರಗಳನ್ನು ಹೊಕ್ಕು ದೇಹದ ಮೇಲಿನ ಎಲ್ಲ ಕಲ್ಮಷಗಳನ್ನು ನಿರ್ಮೂಲಿಸಿ, ಮೋಹಕವಾದ ಶುಭ್ರ ಮೈಬಣ್ಣವನ್ನು ಕೊಡುತ್ತದೆ

ಗೊಡ್ರೆಜ್ ಟ್ವಾಲೆಟ್ ಸಾಬೂನುಗಳು

ನಂ 1 ಮತ್ತು 2

ಮನುಷ್ಯನ ಚರ್ಮಕ್ಕೆ ಅತ್ಯಂತ ಸಹಕಾರಿ ವಸ್ತುಗಳಿಂದ ... ತಯಾರಿಸಲ್ಪಟ್ಟ ... ಗೋದ್ರೆಜ್ ...

ಎಲ್ಲಾ ನಮೂನೆಯ ಗೋಡ್ರೆಜ್ ಸಾಬೂನು ಖಾತ್ರಿಯಾಗಿ ಪ್ರಾಣಿಚರ್ಬಿರಹಿತವಾಗಿರುತ್ತದೆ.

ನಕಲಿಗಳಿಗೆ ಮೋಸ ಹೋಗದಿರಿ.

ಪೆಟ್ಟಿಗೆಯ ಮೇಲೆ 'ಚಾವಿ' ಗುರುತಿಲ್ಲದ ಯಾವ ತಯಾರಿಕೆಯೂ ಶ್ರೇಷ್ಠ ಗೊಡ್ರೆಜ್ ತಯಾರಿಕೆಯಾಗಲಾರದು.

ಪ್ರಾಮುಖ್ಯ ಪ್ರತಿನಿಧಿಗಳು –

ನಾದಿರ್ ಷಾ ಪ್ರಿಂಟರ್ ಎಂಡ್ ಕೊ. ಬೊಂಬಾಯಿ.

ಕಾರ್ಖಾನೆ:–ಗೋಡ್ರೆಜ ಸೋಪ್ಸ್ ಲಿಮಿಟೆಡ್

316 ಡಿ ಲಿಸ್ಲೆ ರೋಡ್ ಬೊಂಬಾಯಿ 11

[illegible] young progressive Life Office of India to Insure with or represent

The Commonwealth Assurance Co.,

LTD., POONA.

TRIENNIAL BONUS! TRIENNIAL BONUS!!
ON ENDOWMENT Rs. 37½. ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to—
Messrs. GAWANKAR & SONS,
Chief Agents for Mysore state, Coorg, Ceded Districts & S Kanara
AHMED BUILDINGS, CHICKPET, BANGALORE CITY.
Branches:—Bombay, Calcutta, Delhi, Madras & Nagpur.
Local Representatives:—THE MODERN TRADING CO., Mangalore

ನವರತ್ನ ಎಲಿಕ್ಸರ್ ಗೈನಕೂ.

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟುದೋಷಗಳನ್ನು ವಿಶೇಷ ಪರಿಣಾಮದಿಂದ ಗುಣಪಡಿಸುವ ಶಕ್ತಿಯುಳ್ಳ ಸಾಮುಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ. ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ. ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಸರಿಪಡಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ.

ಬೆಲೆ 4 ಔನ್ಸ್ ಬಾಟ್ಲಿಗೆ ರೂ. 0 12 0
8 „ „ „ 1 4 0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—
ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
ವಿ ವಿ ಶೆಣೈ ಕಾರ್ಕಳ.
ಡಾ| ಕೆ ಎಲ್ ಐತಾಳ, ಉಡುಪಿ
ಮೊಡರ್ನ್ ಫಾರ್ಮಸಿ, ಕುಂದಾಪುರ
ಬಿ ಜಿ ಭಂಡಾರಿ, ಪುತ್ತೂರು
ಭುಕ್ತಾ ಬ್ರದರ್ಸ್, ಕಾಸರಗೋಡು.

ಹೊಟ್ಟೆನೋವಿನಿಂದ ಬಳಲುತ್ತಿದ್ದವನು ಇತರರಿಗೆ ಹೇಳುವ ಜಾಗ್ರತೆ

ಈ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಅಪೂರ್ವ ಗುಣಗಳನ್ನು ಕಂಡು ಬಜಾರಿನಲ್ಲಿ ಈ ಹೆಸರಿನ ನಾನಾ ನಮೂನೆಯ ಮದ್ದನ್ನು ಹೊಟ್ಟೆನೋವಿಗಾಗಿ ಕೊಡುತ್ತಾರೆ. ನಿಜವಾದ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಿ ಗುಣಲಾಭ ಪಡೆದ ಮಹಾಶಯರು ಇತರ ಬಂಧುಗಳಿಗೆ ಬೇರೆಯವರ ಮೋಸದ ಹಾಸಿಗೆ ಬಲಿಬೀಳದಂತೆ ಜಾಗ್ರತರಾಗಿರಿಸುವುದು ಅವರ ಕರ್ತವ್ಯವೇ ಸರಿ. ಮಿ| ಎಫ್. ಎಸ್ ಎಲ್ ಎಂಬಾತನು ಹೇಳಿದ ಮಾತುಗಳನ್ನು ಆಲೋಚಿಸಿರಿ. ಮೂರು ವರುಷಗಳ ತನಕ ಈ ಉದರವೇದನೆಯಿಂದ ಬಳಲಿ ಕಡೆಗೆ ಈ ಪೌಡರಿನ ಸೇವನೆಯಿಂದಾಗಿ ಪೂರ್ತಿ ಗುಣಹೊಂದಿದನು. ಆದರೆ ದೇಶದಲ್ಲೆಲ್ಲಾ ಈ ಪೌಡರಿನ ಹೆಸರಿನಲ್ಲಿ ಬೇರೆ ಪೌಡರುಗಳನ್ನು ಮಾರಲು ಹಲವು ಕಂಪೆನಿಗಳು ತೊಡಗಿವೆ. ಆದುದರಿಂದ ನನ್ನ ವಿಶ್ವಾಸವೆಂದರೆ ನೀವೂ ಅಂತಹ ಮೋಸಗಳಿಗೊಳಗಾಗದೆ ಖಾತ್ರಿ ಮದ್ದುಗಳನ್ನು ಪಡೆಯಲು ಪ್ರಯತ್ನಿಸಿರಿ.

ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಂತಹ ಖಾತ್ರಿಯಾಗಿ ಗುಣವನ್ನುಂಟುಮಾಡುವಂತಹ ಔಷಧಿಯಿರುವಾಗ ನೀವು ಅನಾವಶ್ಯಕವಾಗಿ ಬೇರೆ ಔಷಧಿಗಳನ್ನು ಸೇವಿಸಿ ರೋಗವನ್ನು ಇನ್ನೂ ಹೆಚ್ಚಾಗಬಿಡುವುದು ಲೇಸಲ್ಲ. ದೇಹದ ಸುಖವೇ ಆರೋಗ್ಯ ಆದ್ದರಿಂದ ಯಾವಾಗಲೂ ಸುಖದಿಂದಿರಲು ಇದನ್ನು ಸೇವಿಸಲು ಮರೆಯದಿರಿ. ವಂಚಕೀಯರ ಮೋಸಕ್ಕೆ ತುತ್ತಾಗದಂತೆ ಯಾವಾಗಲೂ ನೀವು

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ. ಇಂತಹ ನಮೂನೆಯ ಕಡಿಮೆ ದರದ ಪದಕೀಯ ಮದ್ದುಗಳನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ.

S No 60.

ವಿಶೇಷ ವಾರ್ತೆಗಳು.

ಉತ್ತರ ಮತ್ತು ದಕ್ಷಿಣ ಅಮೆರಿಕಾ ಖಂಡಗಳ ನಡುವೆ ತೋಡಿಥುವ ಪನಮಾ ಕಾಲುವೆಯನ್ನು ಕಡಿಸಲು ೭೭ ಮಿಲಿಯ ಸಿಡಿಮದ್ದನ್ನು ಉಪಯೋಗಿಸಿರುವರು.

ಬರ್ಲಿನ್ ನಗರದಲ್ಲಿ ಟರ್‌ಗಾರ್ಟನ್ ಎಂಬ ರಸ್ತೆಯಿರುವುದು. ಈ ರಸ್ತೆಯ ಇಬ್ಬದಿಯಲ್ಲಿಯೂ ಸಾಲಾಗಿ ಪ್ರತಿಮೆಗಳನ್ನಿಟ್ಟಿರುತ್ತಾರೆ. ಒಂದು ಬದಿಯಲ್ಲಿ ಕೃಶವಾಗಿ ಕಾಣುವ ಮನುಷ್ಯರ ಪ್ರತಿಮೆಗಳು, ಇನ್ನೊಂದು ಬದಿಯಲ್ಲಿ ದಪ್ಪವಾಗಿ ಬೆಳೆದ ಮನುಷ್ಯರ ಪ್ರತಿಮೆಗಳು ಅಲ್ಲಿ ಕಾಣಿಸುತ್ತವೆ.

ಪ್ರತಿ ೨೪ ತಾಸುಗಳಲ್ಲಿ ಪ್ರಪಂಚದ ಯಾವ ಭಾಗದಲ್ಲಿಯಾದರೂ ಒಂದು ಹಡಗು ಮುಳುಗುತ್ತದೆಂದು ಲೆಕ್ಕ ಹಾಕಲಾಗಿದೆ.

ಮೊಲಗಳ ಮೇಲಿನ ಹಲ್ಲುಗಳು ಅಕಸ್ಮಾತ್ ಬಿದ್ದುಹೋದರೆ, ಅವುಗಳ ಕೆಳಗಿನ ಹಲ್ಲುಗಳು ಬೆಳೆಯಲಾರಂಭಿಸುತ್ತವೆ. ಅವು ಉದ್ದಕ್ಕೂ ಬೆಳೆದು ಬಾಯಿಯನ್ನು ಮುಚ್ಚಲಾಗದಂತೆ ಮಾಡುತ್ತವೆ. ಆ ಮೇಲೆ ಮೊಲವು ಉಪವಾಸ ಬಿದ್ದು ಸಾಯುವುದು.

೬೦೦,೦೦೦ ಹುಣ್ಣಿಮೆ ಚಂದ್ರರುಗಳ ಬೆಳಕು ಒಂದು ಸೂರ್ಯನ ಬೆಳಕನ್ನು ಸರಿಹೋಲಬಲ್ಲುದಂತೆ.

ಚೀನಾ, ಜಪಾನ್ ದೇಶಗಳಲ್ಲಿ ಕೊಮೊರೆಂಟ್ ಎಂಬೊಂದು ಜಾತಿಯ ಪಕ್ಷಿಗಳಿವೆ. ಇವುಗಳು ಆಕಾಶದಲ್ಲಿ ಎಷ್ಟು ತ್ವರೆಯಾಗಿ ಹಾರುವುವೋ, ಅಷ್ಟೇ ತ್ವರೆಯಾಗಿ ನೀರಿನೊಳಗೂ ಹಾರಬಲ್ಲುವಂತೆ. ಅಲ್ಲಿಯ ಬೆಸ್ತರು ಇವುಗಳನ್ನು ಮೀನು ಹಿಡಿಯುವುದರಲ್ಲಿ ಪಳಗಿಸಿಡುತ್ತಾರಂತೆ.

ಈಗಿನ ಆಸ್ಟ್ರೇಲಿಯಾ ದೇಶವು ಫ್ರಾನ್ಸಿಗೆ ಸೇರಿರುತಿತ್ತು — ೪೮ ಘಂಟೆಗಳ ಸಾವಕಾಶದಿಂದಾಗಿ ಅದು ಬ್ರಿಟಿಷರ ಕೈಸೇರಿತ್ತಂತೆ. ಫ್ರಾಂಕ್ವಾ ಡಿ ಗಾಲೊಪ್ ಲಾಪರೂಸ್ ಎಂಬೊಬ್ಬ ಫ್ರೆಂಚ್ ನಾವಿಕನು ಆಸ್ಟ್ರೇಲಿಯಾವನ್ನು ಫ್ರೆಂಚ್ ಸರಕಾರದ ವಶಪಡಿಸಲೋಸುಗ ಭೂಪ್ರದಕ್ಷಿಣೆ ಮಾಡಿ ಆಸ್ಟ್ರೇಲಿಯದ ಬೊಟನಿ ಬೇ ಎಂಬಲ್ಲಿ ಇಳಿದನು. ಆದರೆ ದುರಾದೃಷ್ಟ ಇಂಗ್ಲಿಷ್ ನಾವಿಕರ ಹಡಗೊಂದು ೪೮ ಘಂಟೆಗಳ ಕಾಲ ಮುಂಚಿತವಾಗಿ ಅಲ್ಲಿ ತಲ್ಪಿತ್ತಂತೆ.

ಸ್ಕೊಟ್ಲೆಂಡ್ ದೇಶದ ಮೊಲಗಳಿಗೆ ಬೇಸಿಗೆ ಕಾಲದಲ್ಲಿ ಮೈಚರ್ಮವು ನೀಲವರ್ಣವಿದ್ದು ಚಳಿಗಾಲದಲ್ಲಿ ಅದು ಬಿಳೀ ವರ್ಣವನ್ನು ತಾಳುತ್ತದಂತೆ.

ಬರ್ಲಿನ್ ನಗರವು ಬಹಳ ಶುಚಿಯಾಗಿರುವ ನಗರವೆಂದೆಣಿಸಲ್ಪಟ್ಟಿದೆ. ಅಲ್ಲಿ ಪ್ರತಿನಿತ್ಯವು ೩೦೦೦ ಜಾಡಮಾಲಿಗಳು ಪ್ರಾತಃಕಾಲವಾದೊಡನೆ, ೩೫೫ ಕಸಗುಡಿಸುವ ಯಂತ್ರೋಪಕರಣಗಳೊಂದಿಗೆ ತಮ್ಮ ಕೆಲಸವನ್ನು ಮಾಡುವರಂತೆ.

ಚೋರ ಬಾಲಕ

ಸಿವಲ್ಸ್ ಜುವೆನೈಲ್ ಕೋರ್ಟಿನಲ್ಲಿ ಒಂದು ದೂರು ಬಂದಿದೆ—ಒಬ್ಬ ಪ್ರಬಲ ಕಳ್ಳನ ವಿಚಾರ. ಕಳ್ಳನಿಗೆ ಪ್ರಾಯ ೮ ವರ್ಷ ಮಾತ್ರ—ಇನ್ನೂ ಬಾಲಕ. ಈಗಲೇ ಚೋರ ವಿದ್ಯೆಗಳಲ್ಲಿ ಪ್ರಾಜ್ಞನಾಗಿರುತ್ತಾನೆ. ಅವನ ತಾಯಿತಂದೆಗಳು ಅವನನ್ನು ಸಂಕಲಿಗಳಿಂದ ಕಟ್ಟಿಹಾಕಿದರೂ ಅವನಿಗ ಅದೊಂದು ಲೆಕ್ಕವಿಲ್ಲ. ಸರ್ವ ಪ್ರಯತ್ನಗಳಿಂದ ತಪ್ಪಿಸಿಕೊಳ್ಳುತ್ತಾನೆ. ಅವನು ಇಷ್ಟರವರೆಗೆ ಹದಿನಾರು ದರೋಡೆಗಳನ್ನು ಮಾಡಿರುತ್ತಾನೆ. ಮನೆಗಳಿಗೆ ಕನ್ನಹಾಕಿ ನುಗ್ಗಿ ಕೆಲವು ತಿಂಗಳಲ್ಲಿ ೩೦ ಪವನುಗಳ ಸಾಮಾನುಗಳನ್ನು ಕದ್ದಿರುವನು. "ಬೈಹುಲ್ಲಿನ ರಾಶಿಯಲ್ಲಿ ಬಿದ್ದ ಸೂಜಿ"ಯಂತೆ ಎಂದವನ ತಾಯಿಯು ಅವನನ್ನು ವರ್ಣಿಸುತ್ತಾಳೆ. ಅವನನ್ನು, ತುಂಟ ಹುಡುಗರನ್ನು ಸುಧಾರಣೆ ಮಾಡುವ ಶಾಲೆಗೆ ಕಳುಹಿಸೋಣವೆಂದರೆ, ೧೨ ವರ್ಷಗಳಾಗದೆ ಅಲ್ಲಿ ಪ್ರವೇಶವಿಲ್ಲ. ಆ ಊರಿನವರಿಗೆ ಈ ಚೋರ ಬಾಲಕನ ಒಂದು ಸಮಸ್ಯೆಯೇ ಆಗಿದೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅಪ್ರತಿಮ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3-0-0 (ಮೂರು) ವಿ. ಪಿ. ಖರ್ಚು ಬೇರೆ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer. **Dr. D. N. JASANI,** Vithalbhai Patel Road, BOMBAY 4.

ಮುಂದೇನು?

ಇಂದಿನ ಮತ್ತು ಹಿಂದಿನ ರಾಜಕೀಯ ಘಟನಾವಳಿಗಳ ಪ್ರಚಂಡತೆಯನ್ನು ಒಂದು ಕ್ಷಣ ಎಣಿಸುವಾಗ ನಮ್ಮ ದೇಶದ ಜನತೆಯ ಮೇಲೆ ಎಷ್ಟರಮಟ್ಟಿನ ಪರಿಣಾಮವಾಗಿದೆ ಯೆಂಬ ವಿಷಯವು ಕೊಂಚಮಟ್ಟಿಗೆ ತಿಳಿಯುತ್ತದೆ. ಆಚಲಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ವಿಕಸಮಾನವಾದ ಕಳವಳವೊಂದು ಜನತೆಯನ್ನು ಅಲ್ಲೋಲಕಲ್ಲೋಲ ಮಾಡಿರುತ್ತದೆ ಹಿಂದಿನ ಚುನಾವಣೆಗಳಲ್ಲಿ ಕೊಂಗ್ರೆಸು ಅತ್ಯಭೂತ ವಿಜಯವನ್ನು ಪಡೆಯಿತು ಇರುವ ಹನ್ನೊಂದು ಪ್ರಾಂತ್ಯಗಳ ಆರು ಪ್ರಾಂತ್ಯಗಳಲ್ಲಿ ಕೊಂಗ್ರೆಸ್ ಚುನಾಯಿತರು ಬಹುಸಂಖ್ಯಾತ ಪಂಗಡದವರಾಗಿದ್ದು ಶಾಸನಸಭೆಗೆ ಜನತೆಯ ಪ್ರತಿನಿಧಿಗಳಾದರು. ಉಳಿದ ಐದು ಪ್ರಾಂತ್ಯಗಳ ನಾಲ್ಕು ಪ್ರಾಂತ್ಯಗಳಲ್ಲಿ ಕೊಂಗ್ರೆಸ್ ಮೆಂಬರರು ಬಹುಸಂಖ್ಯಾತರಿಲ್ಲವಾದರೂ ವ್ಯಯುಕ್ತಿಕವಾಗಿ ಎಣಿಸಿದರೆ ಕೊಂಗ್ರೆಸ್ ಪಂಗಡವೇ ದೊಡ್ಡದಾಗಿರುತ್ತದೆ ಒಂದು ಪ್ರಾಂತ್ಯದಲ್ಲಿ ಮಾತ್ರ ಕೊಂಗ್ರೆಸ್ ಪಂಗಡವು ಅಲ್ಪಸಂಖ್ಯಾಕವಾಗಿದೆ ಇರಲಿ, ಕೊಂಗ್ರೆಸ್ ಬಹುಸಂಖ್ಯಾತವಿದ್ದ ಆರು ಪ್ರಾಂತ್ಯಗಳಲ್ಲಿನ ಜನಸಂಖ್ಯೆಯು ಹಿಂದುಸ್ಥಾನದ ಜನಸಂಖ್ಯೆಯ ಶೇಕಡಾ ೬೮ರಷ್ಟಿದೆ ಎಂಬ ವಿಷಯವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು ದೇಶದ ಅರ್ಧಕ್ಕಿಂತಲೂ ಹೆಚ್ಚಿನ ಜನಸಂಖ್ಯೆಯು ಕೊಂಗ್ರೆಸ್ಸಿನ ಬೆಂಬಲಕ್ಕೆ ಇದೆ ಅಲ್ಲದೆ ಬೇರೆ ಕೆಲವು ರಾಜಕೀಯ ಪಂಗಡಗಳು ಹೆಚ್ಚು ಕಮ್ಮಿ ಕೊಂಗ್ರೆಸಿನದೇ ಧ್ಯೇಯಗಳುಳ್ಳವುಗಳಾಗಿದ್ದರೂ ಕೆಲವು ಅಲ್ಪ ವಿಚಾರಗಳ ಮೇಲಿನ ಅಭಿಪ್ರಾಯ ಭೇದದಿಂದ ಅವು ಕೊಂಗ್ರೆಸ್ಸನ್ನು ಸೇರಿಲ್ಲ ಉದಾಹರಣಾರ್ಥವಾಗಿ ಹೇಳುವುದಾದರೆ, ಶ್ರೀ| ಜಿನ್ನಾರವರ ಮುಸ್ಲಿಂ ಲೀಗ್ ಪಾರ್ಟಿಯು ಬಹಳವಾಗಿ ಕೊಂಗ್ರೆಸ್ ಧೋರಣೆಯುಳ್ಳದ್ದಾಗಿದ್ದರೂ, ಮತವಿಚಾರದ ಪ್ರಶ್ನೆಯನ್ನು ಹಿಡಕೊಂಡು ಅದು ದೂರವಾಗಿರುತ್ತದೆ ಅದೇ ಪ್ರಕಾರ ಬಂಗಾಳದ ಫಜಲುಲ್ ಹಕ್‌ರ ಪ್ರಜಾಪಾರ್ಟಿಯೂ ಆಗಿರುತ್ತದೆ ಇವರು ಅಭಿಪ್ರಾಯ ಧೋರಣೆಗಳು ಎಷ್ಟು ಸಂಕುಚಿತವಾಗಿದೆಯೋ ಇವರ ಬೆಂಬಲವಾದರೂ ಅಷ್ಟೇ ಕಮ್ಮಿಯಾಗಿರುತ್ತದೆ

ಅಂದು ಇರ್ವಿನ್ ಸಾಹೇಬರು ಮಹಾತ್ಮ ಗಾಂಧಿಯವರನ್ನು ಒಪ್ಪಂದದ ಮಾತುಕತೆಗಳಿಗಾಗಿ ಆಹ್ವಾನಿಸಿದ ಮೇಲೆ ಹಿಂದುಸ್ಥಾನಕ್ಕೆ ಜವಾಬುದಾರಿ ಆಡಳಿತದ ಹಕ್ಕನ್ನು ಕೊಡಲಾಗುವುದೆಂದು ಬ್ರಿಟಿಷ್ ಸರಕಾರವು ಬಾಯಿಬಿಟ್ಟು ಹೇಳಿತು ನಂತರ ಇಂಗ್ಲೆಂಡಿನಲ್ಲಿ ಹಲವೊಂದು ತರದ ಕಾಲಹರಣಮಾಡುವ ಪರಿಷತ್ತುಗಳಾಗಿ (ಅದರ ಖರ್ಚು ಕೂಡಾ ಇಂಡಿಯಾ ಸರಕಾರವೇ ಹೊರಬೇಕಾಯಿತು) ಈ ತಿಂಗಳ ಪ್ರಾರಂಭದಲ್ಲಿ ಜ್ಯಾರಿಗೆ ಬಂದ ಇಂಡಿಯಾ ಆಕ್ಟು ಎಂಬ ಈ ನವ ರಾಜಶಾಸನವನ್ನು ಹಿಂದುಸ್ಥಾನದ ಹಿತಕ್ಕೆಂದು ಕೊಡಲಾಯಿತು ಮಹಾತ್ಮಾ ಗಾಂಧಿಯವರೇ ಮೊದಲಾದ ರಾಷ್ಟ್ರಮುಖಂಡರು ಇದರಿಂದ ಯಾವ ಹಿತವಿಲ್ಲವೆಂದು ಅದು ಪ್ರಕಟವಾಗುವ ಮೊದಲೇ ಸಾರಿದರು ಈ ಆಕ್ಟನ್ನು ಜ್ಯಾರಿಮಾಡುವಾಗ ಬ್ರಿಟಿಷ್ ರಾಜನೀತಿಜ್ಞರಲ್ಲಿ ಹಲವು ತರದ ನಿರೀಕ್ಷಣೆಗಳಿದ್ದವು. ಈ ಆಕ್ಟಿನ ಪ್ರಕಾರ ಓದು ಬರಹ ಬಲ್ಲವರಿಗೆಲ್ಲವರಿಗೆ ಮತದಾನ ಯಾ ವೋಟುಮಾಡುವ ಹಕ್ಕು ಕೊಡಲಾಯಿತಷ್ಟೆ ಅದರ ಪ್ರಕಾರ ಶಾಸನಸಭೆಗೆ ಪ್ರತಿನಿಧಿಗಳನ್ನು ಆರಿಸಲು ಆಗುವ ಚುನಾವಣೆಗಳಲ್ಲಿ ಕೊಂಗ್ರೆಸು ಭಾಗವಹಿಸುವುದಿಲ್ಲವೆಂದು ಬ್ರಿಟಿಷ್ ಸರಕಾರವು ಭಾವಿಸಿತ್ತು. ಈ ಸಮಯಕ್ಕೆ ಕೊಂಗ್ರೆಸ್ಸಿನಲ್ಲಿ ಎರಡು ಅಭಿಪ್ರಾಯದವರಿದ್ದರು. ಅಧಿಕಾರವನ್ನು ಸ್ವೀಕರಿಸಬೇಕೆಂಬ ಒಂದು ಪಂಗಡವು

ಅಧಿಕಾರವನ್ನು ಸ್ವೀಕರಿಸುವುದರ ಮೂಲಕ ಹೊಸ ಶಾಸನವನ್ನು ಮುರಿಯಬಹುದೆಂದು ಅಭಿಪ್ರಾಯಪಟ್ಟಿದ್ದರಿಂದಲೂ, ಚುನಾವಣೆಯಲ್ಲಿ ಕೊಂಗ್ರೆಸು ಬಾಗವಹಿಸದೆ ತಪ್ಪುಮಾಡಿತ್ತೆಂಬ ಅಪವಾದವು ಅದರ ಮೇಲೆ ಹೊರಿಸಲ್ಪಡಬಾರದೆಂಬ ಉದ್ದೇಶದಿಂದಲೂ, ಮತ್ತು ಬ್ರಿಟಿಷ ಸರಕಾರದ ಮನೋಭಾವವು ಎಷ್ಟು ಕುಚಿಯಾಗಿದೆ ಎಂಬ ವಿಶೇಷವನ್ನು ತೆಗೆದು ತಿಳಿಯಪಡಿಸಲೋಸುಗವಾಗಿಯೂ ಕೊಂಗ್ರೆಸ್ ಚುನಾವಣೆಯಲ್ಲಿ ಭಾಗವಹಿಸಲು ನಿರ್ಧರಿಸಿತು ಚುನಾವಣೆಗಳಲ್ಲಿ ಭಾಗವಹಿಸಲು ನಿರ್ಧರಿಸಿದ ಕಾಲದಲ್ಲಿ ಅಧಿಕಾರ ಸ್ವೀಕಾರದ ಪ್ರಶ್ನೆಯ ತೀರ್ಮಾನವನ್ನು ಅದು ಆಗ ಮಾಡಲಿಲ್ಲ ಕಾರಣ ಆ ವೇಳೆ ಅಧಿಕಾರವನ್ನು ತಿರಸ್ಕರಿಸುವುದಾಗಿ ನಿರ್ಧರಿಸಿದಲ್ಲಿ, ಕಸುಬು ಶಿಕಾರಿ (Job-hunter) ಧುರೀಣರು ಏನಾದರೊಂದು ನೆಪದಿಂದ ಚುನಾವಣೆಗಳಲ್ಲಿ ಭಾಗವಹಿಸದೆ, ತಿರಸ್ಕರಿಸಲ್ಪಟ್ಟ ಮಂತ್ರಿಪದವಿಗಳನ್ನು ಹಂಚಿಕೊಳ್ಳುವ ಯೋಚನೆಯಿಂದ ಸುಮ್ಮಗಿರುತಿದ್ದು ಅವರ ಯೋಗ್ಯಾಯೋಗ್ಯತೆಗಳು ಬೆಳಕಿಗೆ ಬರುತ್ತಿರಲಿಲ್ಲ ಇದರಿಂದ ಹಿಂದೆ ಸರಕಾರವನ್ನು ಪುಸಲಾಯಿಸಿ ಜೀವನಮಾಡುತಿದ್ದವರು ಚುನಾವಣಾರಂಗಕ್ಕೆ ಎಳೆಯಲ್ಪಟ್ಟರು ಜನತೆಯ ಬೆಂಬಲವು ಅವರಿಗೆ ಹಿಂದೆ ಎಷ್ಟಿತ್ತು ಮತ್ತು ಇಂದು ಎಷ್ಟಿದೆ ಎಂಬ ವಿಷಯವನ್ನು ಅವರ ಅಪಜಯಗಳು ಸ್ಪಷ್ಟಪಡಿಸಿದುವು

ಪ್ರಜಾಪ್ರಭುತ್ವ ಸರಕಾರ ಆಡಳಿತ ಸರಕಾರನೀತಿಯನುಸರಿಸುವುದಾದರೆ ಚುನಾವಣೆಗಳ ನಂತರ ಬಹುಸಂಖ್ಯಾಕ ಜನತೆಯಿಂದ ಚುನಾಯಿಸಿ ಬಂದ ಪ್ರತಿನಿಧಿಗಳ ಮುಖಂಡರೆನಿಸಿದವರು ಮಂತ್ರಿಮಂಡಳವನ್ನು ರಚಿಸಬೇಕು ಈ ಪ್ರಕಾರ ಕೊಂಗ್ರೆಸು ಆಯಾ ಪ್ರಾಂತ್ಯದಲ್ಲಿ (ಅಂದರೆ ಕೊಂಗ್ರೆಸ್ ಬಹುಸಂಖ್ಯಾಕ ಪಂಗಡವಿದ್ದಲ್ಲಿ) ಯೋಗ್ಯರಾದವರನ್ನು ಮುಖಂಡರನ್ನಾಗಿ ಚುನಾಯಿಸಿತು ಶ್ರೀ ರಾಜಗೋಪಾಲಾಚಾರ್ಯರು ನಮ್ಮ ಮದ್ರಾಸ್ ಪ್ರಾಂತ್ಯದ ಶಾಸನಸಭೆಯಲ್ಲಿ ಕೊಂಗ್ರೆಸ್ ಪಾರ್ಟಿಯ ಮುಖಂಡರೆಂದರು ಈ ತನ್ಮಧ್ಯೆ ಡಿಲ್ಲಿಯಲ್ಲಿ ನೇಶನಲ್ ಕನ್ವೆನ್ಶನ್ ಅಥವಾ ರಾಷ್ಟ್ರೀಯ ಪರಿಷತ್ತು ಜರುಗಿತ್ತು ಕೊಂಗ್ರೆಸು ಈ ನವ ರಾಜ್ಯಾಂಗ ಶಾಸನವನ್ನು ಹೇಗೆ ಮತ್ತು ಯಾವ ರೀತಿಯಲ್ಲಿ ಧ್ವಂಸಮಾಡಬೇಕೆಂಬುದರ ಕುರಿತು ಪರ್ಯಾಲೋಚಿಸಿ ಕೆಲವು ಶರ್ತಗಳನ್ನು ಸರಕಾರವು ಒಪ್ಪಿಕೊಂಡರೆ ಕೊಂಗ್ರೆಸು ಆಡಳಿತದ ಜವಾಬುದಾರಿಯನ್ನು ತೆಗೆದುಕೊಳ್ಳಬೇಕೆಂದೂ ಆ ಮೇಲೆ ಈ ನವರಾಜ ಶಾಸನದಿಂದ ಎಷ್ಟರಮಟ್ಟಿನ ದೇಶಹಿತವನ್ನು ಸಾಧಿಸಬಹುದೋ ಅಷ್ಟನ್ನು ಪೂರ್ಣವಾಗಿ ಸಾಧಿಸಬೇಕೆಂದೂ, ಆ ಮೇಲೆ ಅದನ್ನು ರದ್ದುಮಾಡಿಸಿ ಅದರ ಸ್ಥಾನದಲ್ಲಿ ಬೇರೊಂದು ಯೋಗ್ಯ ರಾಜ್ಯಾಂಗ ಕ್ರಮವನ್ನು ಸ್ಥಾಪಿಸಬೇಕೆಂದೂ ನಿರ್ಧಾರವಾಯಿತು ಇದಾದ ಮೇಲೆ ಆಯಾ ಪ್ರಾಂತ್ಯದ ಗವರ್ನರುಗಳು ಕೊಂಗ್ರೆಸ್ ಪಾರ್ಟಿಯ ಮುಖಂಡರುಗಳನ್ನು ಮಂತ್ರಿಮಂಡಳ ರಚನೆಯಲ್ಲಿ ಸಹಕರಿಸಬೇಕಾಗಿ, ಆಹ್ವಾನಿಸಲಾಗಿ, ಕೊಂಗ್ರೆಸ್ ಮುಖಂಡರು ಗವರ್ನರರನ್ನು ಕಂಡು, ರಾಜ್ಯಾಂಗರಚನೆಯ ಮೇರೆಯೊಳಗೆ ಮಂತ್ರಿಗಳಾದವರು ತಮ್ಮ ಕಾರ್ಯಕಲಾಪಗಳನ್ನು ನಡೆಸುತ್ತಿರುವಾಗ ಗವರ್ನರರು ಅಡ್ಡಿಯನ್ನು ತಂದೊಡ್ಡುವುದಿಲ್ಲವೆಂಬ ಭಿನ್ನತೆಯ ಒಂದು ಭರವಸೆಯನ್ನು ಗವರ್ನರರು ಕೊಡಬೇಕೆಂದು ಕೇಳಿದರು. ಇಂಡಿಯಾ ಆಕ್ಟು ತಮಗೆ ಕೊಟ್ಟ ಅಧಿಕಾರದಲ್ಲಿ ಈ ತರದ ಭರವಸೆಯನ್ನು ಕೊಡುವ ಶಕ್ತಿಯು ತಮಗಿಲ್ಲವೆಂದು ಗವರ್ನರರು ಹೇಳಿ, ಮಂತ್ರಿಗಳಾದವರಿಗೆ ತಮ್ಮ ಶಕ್ತಿಯಲ್ಲಿರುವ ಸೌಹಾರ್ದ್ಯ ಸಹಕಾರ ಸಹಾನುಭೂತಿಗಳನ್ನು ಕೊಡುವುದಾಗಿದಾಗಿ ಅವರು ತಿಳಿಸಿದರು

ಅರ್ಧಶತಮಾನದಿಂದ ಬ್ರಿಟಿಷ್ ರಾಜನೀತಿ ಕುಟಿಲತೆಯ ಅಪಾರ ಅನುಭವವಿದ್ದ ಕೊಂಗ್ರೆಸು ಗವರ್ನರರ ಮಾತುಗಳಲ್ಲಿ ಯಾವ ಆಶೆಯನ್ನೂ ಕಾಣಲಿಲ್ಲ ರಾಜ್ಯಾಂಗರಚನೆಯ ಮೇರೆಯೊಳಗೆ ಮಂತ್ರಿಗಳು ತಮ್ಮ ಚಟುವಟಿಕೆಗಳನ್ನು ನಡೆಸುತ್ತಿದ್ದಾಗಲೂ ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಲಿಚ್ಛೆಯುಳ್ಳವರಿದ್ದಾರೆ ಎಂದು ಇದರಿಂದ ಸ್ಪಷ್ಟವಾಯಿತು ಅಂದಮೇಲೆ ಮಂತ್ರಿಪದವಿಗಳನ್ನು ಸ್ವೀಕರಿಸಿ ಪ್ರಯೋಜನವೇನು? ಗವರ್ನರರಿಗೆ ಕೊಂಗ್ರೆಸಿನವರು ಮಂತ್ರಿಗಳಾಗುವುದು ಬೇಡವೆಂಬ ಅಭಿಪ್ರಾಯವಿರುವುದರಿಂದಲ್ಲವೆ ಅವರು, ರಚನಾತ್ಮಕ ಆಡಳಿತದ ಮೇರೆಯೊಳಗೂ ಕೂಡಾ ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸ ಬಯಸುವುದು? ಸರಕಾರದ ಮನೋರಥವು ಹೀಗಿರುವಾಗ ಕೊಂಗ್ರೆಸಿನವರು ಅದೇಕೆ ಅಧಿಕಾರವನ್ನು ಸ್ವೀಕರಿಸಿ ಗವರ್ನರರ ವಿಶೇಷಾಧಿಕಾರದ ಚೂಪಾದ ಮುಳ್ಳುಗಳಿಂದ ಚುಚ್ಚಿಸಿಕೊಂಡು ಮಂತ್ರಿಗಳಾಗಿರಬೇಕು ಇದರಿಂದ ದೇಶಹಿತವು ಕಿಂಚಿತ್ತಾದರೂ ಆಗಲಾರದು ಎಂದು ಮನಗಂಡ ಕೊಂಗ್ರೆಸು ಮಂತ್ರಿಪದವಿಗಳನ್ನು ತಿರಸ್ಕರಿಸಿತು

ಮಂತ್ರಿಮಂಡಳಗಳ ತಿರಸ್ಕಾರದ ನಂತರ ನಡೆದ ಸಂಗತಿಗಳನ್ನು ಜನತೆಯು ವಿಶೇಷ ಉತ್ಸಾಹದಿಂದ ಗಮನಿಸಿರುತ್ತದೆ ಕೊಂಗ್ರೆಸ್ ಮುಖಂಡರು ನಮ್ಮ ಧೋರಣೆಯನ್ನು ಜನತೆಗೆ ತಿಳಿಯಪಡಿಸಲು ಅವಿಶ್ರಾಂತ ಸಂಚಾರ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ವಿಶ್ವಾಸವು ಜನತೆಯು ಮೇಲೆ ಹೊಂದಿಕೊಂಡಿರುತ್ತದೆ ಎಂದು ಜನತೆಗೆ ಮತದಾನದ ಹಕ್ಕು ಕೊಡಲ್ಪಟ್ಟಿದೆಯೊ ಅಂದೇ ಅವರ ಹಕ್ಕುಗಳನ್ನು ಸರಕಾರವು ಅಲ್ಲಗಳೆದರೆ ಇನ್ನೇನು ಉಳಿದಿದೆ ಇದರಿಂದ ನಾವೇನು ತಿಳಿಯಬೇಕು? ಪ್ರಜಾಪ್ರಭುತ್ವದ ಸಾರವುಳ್ಳ ಜವಾಬುದಾರಿ ಪ್ರಾಂತಿಕ ಸರಕಾರ ಶಾಸನವು ನಮಗೆ ಕೊಡಲ್ಪಟ್ಟಿದೆ ಎಂದು ಇಂದಿಗೆ ಎರಡು ವರ್ಷಗಳಿಂದ ಸಾರಲ್ಪಟ್ಟದ್ದು ನಿಷ್ಪ್ರಯೋಜನವಾಯಿತು. ಕೊಂಗ್ರೆಸು ಸರಕಾರದ ಗುಟ್ಟನ್ನು ಹೊರಗೆಳೆಯಿತು ಮಹಾತ್ಮಾ ಗಾಂಧಿಯವರು ಹೇಳಿರುವಂತೆ ('ಬ್ರಿಟಿಶ್ ಸರಕಾರದ ಮನೋಭಾವದಲ್ಲಿ ಸಂಶಯವುಂಟಾಗುತ್ತದೆ') ದೇಶದ ಜನತೆಗೆ ಬ್ರಿಟಿಷರಿಗೆ ಭಾರತದ ಮೇಲಿರುವ ಹಿತದೃಷ್ಟಿಯು ಎಷ್ಟು ವಕ್ರವಾಗಿರುತ್ತದೆಂದು ತಿಳಿಯಿತು ಇಂಡಿಯಾದ ಸ್ಟೇಟ್ ಸೆಕ್ರಟರಿಯವರಾದ ಲಾರ್ಡ್ ಜೆಟ್‌ಲ್ಯಾಂಡ್ ಸಾಹೇಬರು ಪಾರ್ಲಿಮೆಂಟಿನಲ್ಲಿ ಕೊಟ್ಟ ಹೇಳಿಕೆಯು ಈ ಸಂಶಯವನ್ನು ಇನ್ನೂ ಹೆಚ್ಚಿಸಿರುತ್ತದೆ ಅವರು ತಮ್ಮ ಖಡ್ಗಧಾರೆಯ ಮೇಲೆ ದೃಷ್ಟಿಯಿಟ್ಟು ಮಾತನಾಡಿರುವರು ಎಂದು ಹೇಳಿದ ಗಾಂಧಿಯವರ ಮಾತುಗಳಲ್ಲಿ ಬಹಳ ತೂಕವಿದೆ

ಈಗೇನು? ಭಾರತದ ಆಡಳಿತದ ಮೇಲೆ ಹಕ್ಕು ಬ್ರಿಟಿಷ್ ಜನತೆಗೆ ವಿನಹ ಭಾರತೀಯರಿಗೆ ಹಕ್ಕಿಲ್ಲವೆಂದಾಯಿತು ಇಲ್ಲದಿದ್ದರೆ ಲಾರ್ಡ್ ಜೆಟ್‌ಲ್ಯಾಂಡರು ಅಷ್ಟು ತೀಕ್ಷ್ಣವೂ, ಕಠೋರವೂ ಮತ್ತು ನಿರೀಕ್ಷಣವುಳ್ಳದ್ದು ಆದ ಭಾಷಣವನ್ನು ಎಂದೂ ಮಾಡುತ್ತಿರಲಿಲ್ಲ. ಖಡ್ಗಧಾರೆಯ ಮೇಲೆ ಜೇನನ್ನು ಸವರಿ ಬ್ರಿಟಿಷ್ ಸರಕಾರವು ಅದನ್ನು ಭಾರತದ ಜನತೆಗೆ ನೆಕ್ಕಕೊಟ್ಟಿತು. ಬ್ರಿಟಿಷ್ ಸರಕಾರದ ಈ ವರ್ತನೆಯು ಪಂ. ಜ. ನೆಹರುರವರಂತಾ ಉಗ್ರವಾದಿಗಳನ್ನು ಆಗ್ರಹಗೊಳಿಸಿತು. 'ಚರಿತ್ರೆಯನ್ನು ....ಬಿಟ್ಟರೆ ಜನತೆಯ ಹಿತವನ್ನು ದುರ್ಲಕ್ಷಿಸಿದ ಒಂದು ಸರಕಾರವೂ ಬದುಕಲಿಲ್ಲ, ಅಂತಹ ಸಂದರ್ಭಗಳಲ್ಲಿ ಯಾವುದಾದರೊಂದು ಕ್ರಾಂತಿಯುಂಟಾದ ವಿಷಯವು ನಮಗೆ ಸರಿಯಾಗಿ ತಿಳಿದುಬರುತ್ತದೆ' ಹೀಗೆಂದು ರಾಷ್ಟ್ರಪತಿಗಳು ಬ್ರಿಟನ್ನಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಂತೆ ನ್ಯೂಸ್ ಕ್ರಾನಿಕಲ್ ಪತ್ರಿಕೆಗೆ ಕೊಟ್ಟ ಒಂದು ಪ್ರಕಟಣೆಯಲ್ಲಿ ತಿಳಿಸಿರುವರು.

ಬ್ರಿಟಿಷರ ಧೋರಣೆಯು ಭಾರತ ಜನಾಂಗವನ್ನು ಮಾತ್ರವಲ್ಲ ನ್ಯಾಯವಾದೀ ಅನೇಕ ಆಂಗ್ಲ ಮಹನೀಯರೂ ಕೂಡಾ ಈ ಧೋರಣೆಯನ್ನು ಖಂಡಿಸಿದರು ಇದರಿಂದಲಾದರೂ ಬ್ರಿಟಿಷ್ ಸರಕಾರವು ಒಂದು ಪಾಠವನ್ನು ಕಲಿಯಬೇಕು ಮುಳುಗುವವನು ಮುಳಿಹುಲ್ಲನ್ನು ಹಿಡಿಯುವಂತೆ ಬ್ರಿಟಿಷ್ ಸರಕಾರವು ತಮ್ಮ ವಾದವನ್ನು ಅಲ್ಪ ಸಂಖ್ಯಾಕರ ಇಲ್ಲವೆ ಮ್ಯಾನೊರಿಟಿ ಪಂಗಡದ ಹಿತಗಳಿಗಾಗಿ ಎಂದು ಸಾರಿದರು ಕೂಡಲೇ ಅಲ್ಪ ಸಂಖ್ಯಾಕರ ಮುಖಂಡರುಗಳನೇಕರು ಜೆಟ್‌ಲ್ಯಾಂಡರ ಈ ವಾದವನ್ನು ತಿರಸ್ಕರಿಸಿದರು ಸರ್ ವಜೀರ ಅಲಿ ಹುಸೇನರೇ ಮೊದಲಾದ ಮುಸ್ಲಿಂ ಮುಖಂಡರು ತಮ್ಮ ವಿರೋಧಾಭಿಪ್ರಾಯವನ್ನು ಬಹಿರಂಗವಾಗಿ ಸೂಚಿಸಿದರು ಜೆಟ್‌ಲ್ಯಾಂಡರು ಈ ಹೇಳಿಕೆಯನ್ನು ಕೊಡುವ ಬದಲಾಗಿ ಬರೀ ತಮ್ಮ ಖಡ್ಗವನ್ನೇ ಆದರೂ ತೋರಿಸುತ್ತಿದ್ದರೆ ಅದೊಂದು ತರ ಬೇರೆ ಇತ್ತು ಆದರೆ ಅವರು ಕೆಲವು ಅಸಂಬದ್ಧವಾದ ವಿಷಯಗಳನ್ನೆತ್ತಿ ಅಧಿಕಾರವನ್ನು ಸ್ವೀಕರಿಸದೆ ಇದ್ದುದು ಕೊಂಗ್ರೆಸಿನದೇ ತಪ್ಪೆಂದು ತೋರಿಸಿದರು ಹಿಂದೂಸ್ಥಾನದ ಹಿತವು ಎಷ್ಟಿದೆ ಎಂದು ಜೆಟ್‌ಲ್ಯಾಂಡರ ಭಾಷಣವು ತೋರಿಸಿತು ಭಾರತ ವಿರೋಧಿಗಳಾದ ಚರ್ಚಿಲ್ಲರಂತೂ ಉರಿದುಬಿದ್ದರು ಬ್ರಿಟಿಷರು ಮಾಡುತ್ತಿರುವ ಶಸ್ತ್ರಸಂಗ್ರಹದ ಮತ್ತು ಯೂರೋಪಿನಲ್ಲಿ ಕಾಣುತ್ತಿರುವ ಕಳವಳಾಸ್ಪದ ವಾತಾವರಣದ ಸೂಚನೆಯನ್ನು ನಮಗೆ ಕೊಟ್ಟರು. ಭಾರತ ಜನಾಂಗವನ್ನು ಹಿಂಸಿಸಿ ನಿಂತ ಅಭ್ಯಾಸವನ್ನು ಆ ಬ್ರಿಟಿಷ್ ಮುತ್ಸದ್ದಿಗಳು ಇನ್ನು ಪೂರ್ಣ ಬಿಟ್ಟಿಲ್ಲ ಆದರೆ ಹಿಂದೂಸ್ಥಾನದ ಮಾತೆತ್ತಿದರೆ ಗಡಗಡನೆ ನಡುಗುವ ದಿವಸಗಳು ಬರುವುದಿಲ್ಲವೆಂದು ಯಾರು ಬಲ್ಲರು?

ಯಾವದಾದರೊಂದ ರೀತಿಯಲ್ಲಿ ಈಗಿನ ಉತ್ಕಟಾವಸ್ಥೆಯನ್ನು ಪರಿಹರಿಸದಿದ್ದಲ್ಲಿ, ಮುಂದೆ ಏನೆಲ್ಲ ಸಂಭವಿಸಬಹುದೆಂದು ಊಹಿಸಬರುವುದಿಲ್ಲ ಕೊಂಗ್ರೆಸಂತೂ ತನ್ನ ನಿರ್ಧಾರವನ್ನು ಲೇಶಮಾತ್ರವೂ ಬಿಡಲೊಲ್ಲದು ದೇಶದ ಮುಂದಿರುವ ಈಗಿನ ಪ್ರಶ್ನೆಯು ಶಾಂತಿಯುದ್ಧ ಅಥವಾ ಕ್ರಾಂತಿಯುದ್ಧ ಮಹಾತ್ಮಾ ಗಾಂಧಿಯವರಂಥಾ ಅಹಿಂಸಾ ಮೂರ್ತಿಗಳು ಎಷ್ಟರ ತನಕ ಸಹಿಸಿಕೊಂಡಿರುವರು? ಜನಕ್ಕೆ ಯಾದರೂ ಸರಕಾರದ ದಬ್ಬಾಳಿಕೆಯನ್ನು ಎಷ್ಟು ತಾಳಿಕೊಂಡಿರಬಹುದು ಮೊದಲೇಬಡತನದಿಂದ ಬಳಲುವ ದೇಶವು ಸರಕಾರದ ಈಗಿನ ಧೋರಣೆಯಿಂದ ಆಗಬಹುದಾದ ಕಳವಳದಿಂದ ಇನ್ನೂ ಕಠಿಣ ಅವಸ್ಥೆಗೆ ಗುರಿಯಾಗುವುದಾದರೆ ಬ್ರಿಟಿಷ್ ರಾಜನೀತಿ ಮುತ್ಸದ್ದಿಗಳಿಂದಲೇ ಟೀಕಿಸಲ್ಪಟ್ಟ ಈಗಿನ ಧೋರಣೆಯನ್ನು ಸರಕಾರವು ಬದಲಾಯಿಸಿ ಜನತೆಗೆ ಹಿತವಾಗುವಂತಹ ಆಡಳಿತ ಕ್ರಮವನ್ನು ಅನುಸರಿಸಿದರೆ, ಶಾಂತಿಪ್ರಿಯ ಪ್ರಜೆಗಳಿಗೆ ಅದೊಂದು ಮಹದುಪಕಾರವಾದಂತಾಗಿ ಶಾಂತಿಪ್ರಿಯರೆನಿಸಿದ ಬ್ರಿಟಿಷ ಸರಕಾರಕ್ಕೆ ಅದರಿಂದ ಸತ್ಕೀರ್ತಿಯುಂಟಾಗುವುದರಲ್ಲಿ ಸಂದೇಹವಿಲ್ಲ.

ಪರಿವಿಡಿ

ಕಾವ್ಯ
ಪ್ರಕಟನೆ
ವಾರ್ತೆಗಳು
ಲೇಖನಗಳು
ಮೊಹಮ್ಮದೀಯರಿಂದ ಉಂಟಾಗುವ ಕೆಡುಕುಗಳು ೧೨
ಸಂಪಾದಕೀಯ
ಅಲ್ಪ ಸಂಖ್ಯಾಕರ ಸಮಸ್ಯೆ ೧೮
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು ೧೧
ಪ್ರಾಂತೀಯರು ಸಮಾಚಾರ ೧೪
ತಾಲೂಕುಗಳಿಂದ "
ಪತ್ರಿಕಾಭಿಪ್ರಾಯಗಳು ೧೬
ಹಿಂದೂದೇಶ ೬

ತಾ. ೩೦ನೇ ಶುಕ್ರವಾರ ಎಪ್ರಿಲ್ ೧೯೩೭

ಸ್ವದೇಶಾಭಿಮಾನಿ.

MINORITIES
ಅಲ್ಪಸಂಖ್ಯಾಕರ ಸಮಸ್ಯೆ

ಮುಸ್ಲಿಮ ಸಮಾಜದಲ್ಲಿ ಜಾತೀಯತೆಯ ತಳವಳವು ತಲೆದೋರಿದೆ ಇದರೊಡನೆ, ಕಾಂಗ್ರೆಸಿನಲ್ಲಿ ಅಲ್ಪ ಸಂಖ್ಯಾಕರನ್ನು ಹೆಚ್ಚುಹೆಚ್ಚಾಗಿ ಸೇರಿಸಿಕೊಳ್ಳತಕ್ಕದೆಂದೂ ನಿರ್ಧಾರಗಳಾಗಿವೆ ಮುಸ್ಲಿಮರೂ ಹೆಚ್ಚಾಗಿ, ಇತರ ಸಮಾಜಗಳವರಿಗೂ ಒದಗಿರುವ ಸಾಂಪತ್ತಿಕ ಕಷ್ಟಗಳಲ್ಲಿ ಸಮಾನವಾಗಿ ಹಂಸೆಪಡುತ್ತಿರುವ ಕಾರಣ, ಜೀವನ ನಿರ್ವಾಹದ ವಿಚಾರದಲ್ಲಿ ಎಲ್ಲ ಮತದವರೊಡನೆ ಒಂದೇ ಭಾವವುಳ್ಳವರಾಗಿರುವರು ಹೀಗಿರುವಾಗ, ಎಲ್ಲ ಸಮಾಜಗಳೂ, ಅಲ್ಪ ಬಹು ಎಂಬ ಭೇದಗಳಿಲ್ಲದೆ, ಅಖಿಲಭಾರತದ ಕಾಂಗ್ರೆಸು ಸಭೆಯಲ್ಲೇ ಸೇರಲುದ್ಯುಕ್ತರಾಗಿರುವರು ಎಲ್ಲರಿಗೂ ಒದಗಿರುವ ಕಷ್ಟಗಳೂ ಕಷ್ಟನಿವಾರಣೋಪಾಯಗಳೂ ಒಂದೇ ಬಗೆಯವಾಗಿರುವ ಹೀಗೆ ಐಕ್ಯವನ್ನು ಪ್ರಯುಕ್ತ ಹೊಂದಲು ಅನುಕೂಲವಾಗಿದೆ

ಹೀಗಿದ್ದರೂ ಮುಸ್ಲಿಮ ಮುಖಂಡರಲ್ಲಿ ಕೆಲವರು, ಈಗಣ ಬದಲಾದ ಪರಿಸ್ಥಿತಿಯನ್ನು ತಿಳಿದುಕೊಳ್ಳಲಾರದೆ, ಕಾಂಗ್ರೆಸನ್ನು ಮುಸ್ಲಿಮರು ಸೇರಿದರೆ ಅವರ ಸರ್ವ ನಾಶವಾಗುವ ಸಂಭವವುಂಟೆಂಬ ಅತಿರೇಕ ಬೆದರಿಕೆಯನ್ನು ಹುಟ್ಟಿಸಿ, ಮುಸ್ಲಿಮರು ಪ್ರತ್ಯೇಕವಾದೊಂದು ರಾಜಕೀಯ ಸಂಸ್ಥೆಯನ್ನುಂಟುಮಾಡಿಕೊಂಡು, ಆ ಸಂಸ್ಥೆಯು ಕಾಂಗ್ರೆಸಿನೊಡನೆ ಕರಾರನ್ನು ಮಾಡಿದರೆ ಎಲ್ಲವೂ ಸೂಕ್ತವಾಗುವುದಾಗಿ ಬೋಧಿಸುವರು ಇದು ಎಂದಿನಿಂದಲೂ, ಭಾರತೀಯರನ್ನು ಪಂಗಡಗಳಾಗಿ ವಿಂಗಡಿಸಿ ದೂರವಿರಿಸಿ, ಸ್ವಾರ್ಥಸಾಧಕರು ಜೀವನ ಮಾಡುವ ಕ್ರಮವಾಗಿದೆಯೆಂದು ಬಲ್ಲವರು ಇದನ್ನು ನೋಡಿ ಆಶ್ಚರ್ಯಪಡುತ್ತಿಲ್ಲ ಈ ವಿಷಯವಾಗಿ ತರ್ಕಕ್ಕೆ ಪ್ರಾರಂಭಿಸುತ್ತಲೇ, ವ್ಯಕ್ತಿಶಃ ಮಾತು ಪ್ರತಿಮಾತುಗಳು ಹೊರಟು, ಎಲ್ಲ ಸಮಸ್ಯೆಗಳೂ ಇನ್ನಷ್ಟು ಘೋರವಾಗಿ ಬೆಳೆವಂತಾಗುವುದು.

'ಕರಾರುಗಳು' ಯಾರು ಯಾರೊಡನೆ ಮಾಡಿಕೊಳ್ಳುವುದೆಂಬುದನ್ನು ವಿಚಾರಿಸಬಲ್ಲವರಿಗೆ, ಕಾಂಗ್ರೆಸಿನೊಡನೆ ಕರಾರು ಎಂಬುದು ಅಸಾರ್ಥವೆಂದು ಪುನಃ ಹೇಳಬೇಕಾಗಿಲ್ಲ.

ಸಮಸ್ತ ಜನತೆಯ ಸಾಂಪತ್ತಿಕ ವಿಷಯಗಳನ್ನು ಸಂಗ್ರಹಿಸಲು ರಾಜಕೀಯ ರೀತ್ಯಾ ಪ್ರಯತ್ನಿಸುತ್ತಿರುವ ಕಾಂಗ್ರೆಸು, ಆ ಸಮಾಜ ಈ ಸಮಾಜ ಎಂಬ ಭೇದವನ್ನು ಎಣಿಸಿದ್ದಲ್ಲಿ, ಇಷ್ಟು ಕಾಲದ ತನಕ ರಾಷ್ಟ್ರಕಾರ್ಯವನ್ನು ಮಾಡಿಬರುವ ಗಣ್ಯ ಸಂಸ್ಥೆಯಾಗಿ ಉಳಿಯುತ್ತಿರಲಿಲ್ಲ. ಹರಿಜನರಿಂದ ಮೊದಲ್ಗೊಂಡು ಸಮಸ್ತರ, ಅದೇಕೆ, ಪ್ರತ್ಯೇಕಿಸಿದ ಮೂಲನಿವಾಸಿಗಳ ಹಳ್ಳಿಗಳ ತನಕವೂ ನಾನಾ ಸಮಸ್ಯೆಗಳನ್ನು ಕಾಂಗ್ರೆಸು ಇತ್ಯರ್ಥಿಸಲು ಉದ್ಯಮಿಸಿದೆ ಬಡತನವೂ ಪಾರತಂತ್ರ್ಯವೂ ಎಲ್ಲರನ್ನು ಪೀಡಿಸುವಾಗ ಯಾರನ್ನು ಗಣಿಸದೆ ಬಿಟ್ಟರೂ ರಾಷ್ಟ್ರ ಸಭೆಯೆನ್ನುವ ಕಾಂಗ್ರೆಸಿಗೆ ಕುಂದೆನಿಸದೆ? ಪ್ರತಿಯೊಬ್ಬ ಭಾರತೀಯನ ಬಲದಿಂದಲ್ಲದೆ, ಇವೆರಡು ಪೀಡೆಗಳನ್ನು ನಿವಾರಿಸಬರುವುದಿಲ್ಲ ಅಂತೆಯೆ, ಸ್ವಾತಂತ್ರ್ಯ, ಸಂಸ್ಕೃತಿ, ಸಂಪತ್ತು, ಸ್ವಧರ್ಮಗಳನ್ನು ಪ್ರತಿಯೊಬ್ಬನೂ ಪಾಲಿಸಿ ಬರುವಂತಾಗಲೂ ಬೇಕಾಗಿದೆ ಇದಕ್ಕಾಗಿಯೆ, ಸಮಸ್ತರನ್ನೂ ಸಮಾನವಾಗಿ ಕಾಂಗ್ರೆಸಿನಲ್ಲಿ ಪ್ರವೇಶಿಸಲೂ ಚರ್ಚಿಸಲೂ ಅಧಿಕಾರವಿದೆ ಅದುದರಿಂದಲೇ, ಜನಸಾಮಾನ್ಯರೆಲ್ಲರ ಬಾಗಿಲಿಗೆ ಕಾಂಗ್ರೆಸಿನ ಸಂದೇಶವು ತಲಪಬೇಕಾಗಿದೆ ಸರ್ವರ ಸಹಕಾರದ ಸುವ್ಯವಸ್ಥೆ, ಅವರ ಅನುಭವ, ಅಭಿಪ್ರಾಯಗಳ ಬಲದಿಂದಲೇ ಕಾಂಗ್ರೆಸು ತನ್ನ ಕಾರ್ಯನಿರ್ವಹಣದಲ್ಲಿ ಮುಂದರಿಯಬಹುದಾಗಿದೆ

ರಾಜಕೀಯ ಸಂಸ್ಥೆಯಾದ ಕಾಂಗ್ರೆಸು, ಸದಸ್ಯರ ಮತಸಂಬಂಧವಾದ ವಿಚಾರಗಳಲ್ಲಿ ಕೈಯಿಕ್ಕುವುದಿಲ್ಲ ಅದಕ್ಕಾಗಿಯೆ, ಕರಾಚಿ ಅಧಿವೇಶನದಂದಿಗೆ ಪ್ರತಿಯೊಬ್ಬ ಸದಸ್ಯನಿಗೂ ಅವನ ಮತದ ಮನಸ್ಸಾಕ್ಷಿಯ, ಸಂಸ್ಕೃತಿಯ, ಭಾಷೆ ಮತ್ತು ಲಿಪಿಗಳನ್ನು ಕುರಿತಾದ ಸ್ವಾತಂತ್ರ್ಯವಿದೆಯಲ್ಲದೆ ಜಾತಿ ಲಿಂಗಭೇದಗಳೂ ಇಲ್ಲದೆ ಸಮಸ್ತರು ಶಾಸನಕ್ಕೆ ಒಂದೇ ಬಗೆಯಲ್ಲಿ ಒಳಪಡುವರು, ರಕ್ಷಣೆಗೆ ಅರ್ಹರು ಮತದಾನ ವ್ಯಾಪಾರ ನೌಕರಿಗಳಿಗೆಲ್ಲ ತಾರತಮ್ಯವಿಲ್ಲದೆ ಯೋಗ್ಯರು ಎಂದೇ ಕಾಂಗ್ರೆಸು ಪತಿವರ್ಷವೂ ತನ್ನ ನಿರ್ಧಾರಮಾಡುತ್ತಿದೆ ಕಾಂಗ್ರೆಸು ಚುನಾವಣೆಗೆ ಮೊದಲು ಪ್ರಕಟಿಸಿದ್ದ ಹೇಳಿಕೆಯಲ್ಲಿ ಇದೆಲ್ಲವೂ ಸ್ಪಷ್ಟವಾಗಿದೆ

ಹೀಗಿದ್ದುದರಿಂದಲೆ, ಕೋಟ್ಯವಧಿ ಜನರ ಸಹಾನುಭೂತಿಯನ್ನು ಕಾಂಗ್ರೆಸು ಲಭಿಸಿಕೊಂಡಿದೆ ಕಾಂಗ್ರೆಸಿನ ಧ್ಯೇಯವನ್ನೂ ಕಾರ್ಯಕ್ರಮವನ್ನೂ ಈ ಜನಕೋಟಿಯು ಒಪ್ಪಿಕೊಂಡಿದೆ ಈ ಕಾರ್ಯಕ್ರಮವು ಸಮಸ್ತ ಭಾರತೀಯರಿಗಾಗಿದೆ ಹೊರತು ಯಾವುದೊಂದು ಮತದವರಿಗಾಗಿಯಾಗಲಿ ಸಮಾಜದವರಿಗಾಗಿಯಾಗಲಿ ಇಲ್ಲ ಈ ದೇಶದಲ್ಲಿ ಎರಡು ಪಕ್ಷಗಳಿವೆಯಾದರೆ, ಭಾರತೀಯರು ಸಾಮ್ರಾಜ್ಯವಾದಿಗಳು ಎಂಬಿವೇ ಎರಡು ಪಕ್ಷಗಳು ಎಂದೆನ್ನಬಹುದಲ್ಲದೆ,–ಇವನ್ನು ಪಕ್ಷಗಳು ಎನ್ನುವ ಬದಲಾಗಿ ಎರಡು ಶಕ್ತಿಗಳು ಎನ್ನಬಹುದಾಗಿದೆ ಇವೆರಡು ಶಕ್ತಿಗಳ ಸಮಷ್ಟಿಯಲ್ಲಿ ಸೇರಿದವರು, ಅನುಕೂಲವಾದಿಗಳಾಗಿ, ವಿಹಿತಕ್ಕಿಂತಲೂ ಸ್ವಾರ್ಥದ ಮೇಲೆ ಕಣ್ಣಿಟ್ಟು, ಸಂದರ್ಭ ಬಂದಾಗ ಇವಲ್ಲಿ ಒಂದನ್ನಲ್ಲದಿದ್ದಲ್ಲಿ ಮತ್ತೊಂದನ್ನು ಸೇರುವರು ಅಥವಾ, ಸುಮ್ಮನೆ ಪ್ರೇಕ್ಷಕರಾಗಿ ಯಾವ ಪ್ರಯೋಜನಕ್ಕೂ ಬಾರದೆ ಕಾಲಹರಣ ಮಾಡುವರು ಮಹಾ ಸಮಸ್ಯೆಗಳೆಷ್ಟೋ ಉಂಟಾದಾಗ, ಕಾಂಗ್ರೆಸು ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡೇ ಬೆಳೆದು ಬಂದಿದೆ, ಏಕೆಂದರೆ, ಅದರ ಧ್ಯೇಯ ಉದ್ದೇಶ ಕಾರ್ಯಸಾಧನಾಕ್ರಮಗಳನ್ನು ತಿಳಿದು ಜನಕೋಟಿಯು ಹೆಚ್ಚು ಹೆಚ್ಚಾಗಿ ಕಾಂಗ್ರೆಸನ್ನು ಬಲಪಡಿಸುತ್ತ ಬಂದಿದೆ. ಸರಕಾರವೇ ಸರ್ವಾಧಾರವೆಂದು ಜೀವನಾಧಾರವೆಂದು ಬಗೆದವರು, ತಾವು ಬಲಹೀನರಾಗುತ್ತ ಇತರರ ಬಲವನ್ನೂ ಕುಂದಿಸಿ ಬಂದಿರುವರು ಜನಾಂಗಕ್ಕೆ ಯಾವುದು ಹಿತವೊ ಅದನ್ನು ವಾಚಕರೇ ಅರಿಸಿಕೊಳ್ಳಲಿ

ಕೌನ್ಸಿಲು ಎಸೆಂಬ್ಲಿಗಳಲ್ಲಿ ಪ್ರತಿನಿಧಿಗಳ ಸಂಖ್ಯೆ, ನೌಕರರ ಸಂಖ್ಯೆ, ಬಿರುದು ಹೊತ್ತವರ ಸಂಖ್ಯೆ ಮೊದಲಾದುವುಗಳಿಂದ ಯಾವುದೊಂದು ಸಮಾಜಕ್ಕೂ ಬಲ ಬರುವುದೂ ಇಲ್ಲ, ಬೆಲೆಬರುವುದೂ ಇಲ್ಲ ಆ ಯುಗವೇ ಬೇರೆ ಅಲ್ಪ ಸಂಖ್ಯಾಕರೆಂದ ಕೆಲವರನ್ನು ಯಾವಾಗಲು ಅಧಿಕಾರಿಗಳು ಪಾಲನೆ ಮಾಡುತ್ತ ಬಂದುದರ ಫಲವು ಹಿತಕರವಾಗಿಲ್ಲವೆಂದು ಇಂಡಿಯನ್ ಕ್ರಿಶ್ಚಿಯನ್, ಹರಿಜನ ಸಿಕ್ಖ ಮೊದಲಾದ ಸಮಾಜಗಳವರೂ, ಎಂಗ್ಲೊ ಇಂಡಿಯನರೂ ಈಗ ತಾವೇ ಹೇಳುತ್ತಿಲ್ಲವೆ? ಏಕೆಂದರೆ ಯಾವುದೊಂದು ಸಮಾಜದವರು ಅಧಿಕ ಸಂಖ್ಯಾಕರಾದರೂ ಇನ್ನು ಅಲ್ಪ ಸಂಖ್ಯಾಕರನ್ನು ದಲನಗೊಳಿಸುವುದು ಸಾಧ್ಯವಾಗದು. ಹುಟ್ಟಿಸುವುದು ಸಿಕ್ಖರ ಸಂಖ್ಯೆ ಎಷ್ಟು ಪಾರಸಿಯರ ಸಂಖ್ಯೆ ಎಷ್ಟು ಅವರನ್ನು ಎಂತಹ ಮಹಾ ಸಂಖ್ಯಾಬಲದಿಂದಲಾದರೂ ಪೀಡಿಸಬಲ್ಲವರಾರ?

ಮತದ ಭೇದದಿಂದ ಜನಾಂಗದಲ್ಲಿ ಭೇದಗಳಾಗುತ್ತಿದ್ದ ಯುಗವೇ ಬೇರೆ ಈಗ ನಮ್ಮಲ್ಲಿ ಭೇದಗಳಿಗೆ ಕಾರಣ ಸಂಪತ್ತಿನ ತಾರತಮ್ಯ ಜಾತಿವಿಚಾರದಿಂದ ರಾಜಕೀಯ ರಂಗದಲ್ಲಿ ಮುಂದೆ ಬರುವ ಯಾವ ಜಾತಿಯವರೂ ಬಹುಕಾಲ ಮುನ್ನಡೆದುದಿಲ್ಲ ಇವರಿಂದ ಪಂಗಡಗಳಾಗಿ ಕೆಲವು ಸ್ಥಾನಮಾನಗಳು ಇವರಿಗೆ ಆಗ ದೊರೆತಿರಬಹುದು ದರಿದ್ರಕೋಟಿಗೆ ಇದರಿಂದ ಯಾವ ಉಪಕಾರವೂ ಆದುದಿಲ್ಲ ಹೀಗೆ ಆಗಿಯೆ ಅವರು ಮಾಯವಾಗಬೇಕಾಯಿತು.

ಅಲ್ಪ ಸಂಖ್ಯಾಕರು ಇದೇ ಕಾರಣದಿಂದ ಕಾಂಗ್ರೆಸನ್ನು ಸೇರುವಂತೆ ಅದನ್ನು ಕೇಳಿಕೊಳ್ಳುವ ಕಾರ್ಯಕ್ರಮವನ್ನು ಇನ್ನು ವಿಳಂಬಸದೆ ಕಾಂಗ್ರೆಸು ಕೈಕೊಳ್ಳುತ್ತಿದೆ ಈ ವಿಚಾರಗಳನ್ನೆ ಸರ್ವರಿಗೆ ಸಮಾಧಾನಕರವಾಗುವಂತೆ ವಿವರಿಸಿ ಅಧ್ಯಕ್ಷ ನೆಹರುರವರು ಪ್ರಕಟಿಸಿರುವರು

ಸ್ಫುಟವಿಚಾರಗಳು

ಬೀಜದೆತ್ತುಗಳೂ ಮಂತ್ರಿಗಳೂ

ಎಂಬ ಸಾಮ್ಯವನ್ನೆತ್ತಿ ಶ್ರೀ ರಾಜಗೋಪಾಲಾಚಾರ್ಯರು ಸೇಲಂನಲ್ಲಿ ಭಾಷಣಮಾಡಿದರು "ಸಂತೆಗಳಿಗೆ, ಈಗ ಬೀಜದೆತ್ತುಗಳಿಗೆ ಒಳ್ಳೇ ಒಳ್ಳೇ ದರ ಸಿಗುವುದೆಂದು, ಎಷ್ಟೋ ಮಂದಿ ಅಂತಹ ಜಾನುವಾರುಗಳನ್ನು ಮಾರ ತರುವುದುಂಟು ಮಾರುವವರು ಪುಷ್ಟವಾಗಿ ಕಾಣುವ ಇಂತಹ ಎತ್ತುಗಳನ್ನು ಬಹಳವಾಗಿ ಹೊಗಳುವುದೂ ಇದೆ ಆದರೆ ಈ ಪ್ರಾಣಿಗಳು ನಿಜವಾಗಿಯೂ ಬಲಹೀನವಾದುವು, ಅವುಗಳಿಗೆ ಹೊಟ್ಟೆ ಬಿರಿಯುವಷ್ಟು ಹೆಚ್ಚಾಗಿ ನೀರು ಕುಡಿಸಿ, ಸಂತೆಗೆ ತಂದುದರಿಂದಲೇ ಅವು ಹಾಗೆ ಕಾಣುವುವು ಇದನ್ನು ತಿಳಿದುಕೊಳ್ಳಲು ಬಹಳ ವಿಮರ್ಶೆಯೂ ಅಗತ್ಯವಿಲ್ಲ, ಅನುಭವವೂ ಬೇಕಾಗಿಲ್ಲ (ನಮ್ಮ ತಾತ್ಕಾಲಿಕ ಮಂತ್ರಿಮಂಡಲವೂ ಇದರಂತೆ ಇದೆ) ಇಂತಹ ಎತ್ತುಗಳನ್ನು ೨ ಅಥವಾ ೩ ಸಾವಿರ ರೂಪಾಯಿ ಬೆಲೆಗೆ ಕೊಂಡುಕೊಳ್ಳಬೇಕಾಗಿ ನಮಗೆ ಹೇಳುತ್ತಾರೆ ನಾವೆನ್ನುವುದಿಷ್ಟೆ "ಈ ಪ್ರಾಣಿಗಳು ನಮಗೆ ಬೇಡ. ಅದನ್ನು ನಾವು ಸಾಕುವುದಿಲ್ಲ. ನಿಮಗೆ ಇಷ್ಟವಿದೆಯಾದರೆ ಅದನ್ನು ಒಂದು ಕಡೆ ಕಟ್ಟಿಹಾಕಿ ಸಾಕಿರಿ ನಮಗೆ ಈ ವಿಷಯ ಯಾವ ಜವಾಬ್ದಾರಿಯೂ ಇರಲಾರದು" ಈ ಎತ್ತುಗಳಿಗೆ ಈ ಬಗೆಯಲ್ಲಿ ಹೊಟ್ಟೆ ತುಂಬ ನೀರು ಕುಡಿಸಿರುವುದರಿಂದಲೆ, ಅವು ಅಷ್ಟು ಭಾರಿಯಾಗಿ ತೋರುತ್ತವೆ ಇವುಗಳಿಗೆ ಕೌನ್ಸಿಲು ಸಭೆ ಕಂಡರೆ ಆಗುವುದಿಲ್ಲ, ಇವು ಬೆಚ್ಚಿ ಬೀಳುವುವು. ಹಳ್ಳೀ ಜಾನುವಾರುಗಳು ಮೋಟರನ್ನು ಕಂಡರೆ ಬೆಚ್ಚುವ ಹಾಗೆ ಈ ಎತ್ತುಗಳು ಇವೆ ಆದರೆ, ಇನ್ನೆಷ್ಟೋ ಸಲ ಕೌನ್ಸಿಲು ಚುನಾವಣೆಗಳು ಕೂಡ ಆಗುವ ಸಂಭವವಿದೆಯಷ್ಟೆ ಇಂತಹ ಜಾನುವಾರುಗಳನ್ನು ನಮಗೆ ಪುಷ್ಟವಾದ ಯೋಗ್ಯ ಎತ್ತುಗಳೆಂದು ಹೇಳುವ ರೀತಿ ಸರಿಯೆ?"

ಮಂತ್ರಿಗಳು ಸೂಚಿಸುವ ಹೊಸ ತಿದ್ದುಪಾಟುಗಳು

ನಮ್ಮ ತೀರ್ವೆಯ ಕ್ರಮವನ್ನು ತಿದ್ದುಪಡಿಸಿ, ಮೂಲವಿದ್ಯಾಭ್ಯಾಸವನ್ನು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಎಲ್ಲೆಲ್ಲಿಯೂ ಜನರಿಗೆ ತರಲಾಗುವುದೆಂಬ ಎರಡು ಸೂಚನೆಗಳನ್ನು ಜನರು ಬಹಳವಾಗಿ ಅನುಮೋದಿಸಿರುವರು ಆದರೆ, ಇವೆರಡು ಸೂಚನೆಗಳನ್ನೂ ಕಾರ್ಯತಃ ಮಾಡಿ ತೋರಿಸಬೇಕಾದರೆ, ಕೌನ್ಸಿಲುಗಳ ಸಮ್ಮತಿಯಿಲ್ಲದೆ ಸಾಧ್ಯವಾಗುವಂತಿಲ್ಲ ಒಟ್ಟು ತೀರ್ವೆಯಲ್ಲಿ ೭೫ ಲಕ್ಷದಷ್ಟನ್ನು ಇಳಿಸುವುದರಿಂದ ಕೃಷಿಕರಿಗೆ ಪೂರ್ಣ ಸಮಾಧಾನವೂ ಆಗಲಾರದು ಚಿಕ್ಕ ಹಿಡುವಳಿಗಾರರ ತೀರ್ವೆಯನ್ನೂ ಗೇಣಿಯನ್ನೂ ಇಳಿಸಲು ಸಂಪೂರ್ಣ ಪ್ರಯತ್ನಗಳಾಗುವ ತನಕ ಇದೊಂದು ತಿದ್ದುಪಾಟು ತೃಪ್ತಿಕರವೆ ಸದು. ಹೀಗೆ ಒಂದು ಕಡೆ ಆಯವನ್ನು ಇಳಿಸಿದರೆ, ಖರ್ಚಿನ ಭರ್ತಿಗೆ ಹಣವನ್ನು ಎಲ್ಲಿಂದ ದೊರಕಿಸಿಕೊಳ್ಳಬಹುದೋ ಅದನ್ನೂ ನೋಡಬೇಕಾಗಿದೆ ೨೦೦೦ ರೂಪಾಯಿಗೆ ಮೇಲ್ಪಟ್ಟ ಕೃಷಿಯ ಆದಾಯವನ್ನು ತೆರಿಗೆಗೆ ಒಳಪಡಿಸುವಂತಾಗಬೇಕು. ಭೂಕಂದಾಯವನ್ನು ಒಂದು ರೀತಿಗೆ ತರುವುದನ್ನು ಸೂಚಿಸಲು ಒಂದು ಕಮಿಟಿಯನ್ನು ನೇಮಿಸಿದರೆ ಸಾಲದು ಮೊದಲೇ ಸರಕಾರದ ಆಫೀಸುಗಳಲ್ಲಿ ಬೇಕಾಗಿರುವಷ್ಟು ರಿಕಾರ್ಡು ಈ ವಿಷಯ ಇದ್ದೇ ಇದೆ ಅದನ್ನು ವಿಮರ್ಶಿಸಿದರೆ, ಒಬ್ಬಿಬ್ಬರು ಆಫೀಸರರು ಭೂಕಂದಾಯ ನಿರ್ಣಯಕ ಬಿಲ್ಲನ್ನು ತಯಾರಿಸಬಹುದು ೧೯೩೦ ರಲ್ಲಿ ಹಬಿಬುಲ್ಲಾ ಕಮಿಟಿಯವರು ಸಿದ್ಧಪಡಿಸಿದ್ದ ಮಸೂದೆಯಿದೆಯಲ್ಲ? ಇದನ್ನೊಮ್ಮೆ ಪರಾಂಬರಿಸಬಾರದೆ? ಈ ಸೂಚನೆಗಳು ಕಮಿಟಿಗಳು ಇತ್ಯಾದಿ ಪ್ರಕಟನೆಗಳ ಮೂಲಕ ತಾವೂ ಒಂದಾನೊಂದು ಕೆಲಸದಲ್ಲಿ ಮಗ್ನರಾಗಿದ್ದು, ಮಂತ್ರಿತ್ವವನ್ನು ಕಾಪಾಡಿಕೊಂಡು ಸಾರ್ಥಕರಾಗುತ್ತ ಬರುತ್ತೇವೆನ್ನುವುದಕ್ಕೆ ಮಾತ್ರ ಇಷ್ಟು ಪೇಚಾಟ–ಎಂದು ಶ್ರೀ ರಾಮದಾಸ ಪಂತುಲುರವರು ಅಭಿಪ್ರಾಯಪಡುವರು

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets, at the
Office C. P C Co., Ltd
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಮಂಗಳೂರು.

ಇದೇ ಬರುವ ಮೇ ತಿಂಗಳಲ್ಲಿ ಜರಗುವ ನಮ್ಮ ಚಕ್ರವರ್ತಿಗಳ ಪಟ್ಟಾಭಿಷೇಕದ ಸಂಬಂಧದಲ್ಲಿ ಸಾರ್ವಜನಿಕರ ಬಗ್ಗೆ ಪದಕಗಳು ದೊರೆಯುವವು. ಪದಕದ ಒಂದು ಪಕ್ಕದಲ್ಲಿ ಚಕ್ರವರ್ತಿಯವರ ಮತ್ತೊಂದು ಭಾಗದಲ್ಲಿ ಚಕ್ರವರ್ತಿನಿಯರ ಚಿತ್ರಗಳಿವೆ. ಪದಕಗಳಲ್ಲಿ ಎರಡು ಆಕಾರ, ೩ ಇಂಚು ಸುತ್ತಳತೆಯುಳ್ಳದಾಗಿದ್ದು ಶುದ್ಧ ಬೆಳ್ಳಿಯ ಪದಕಕ್ಕೆ ಬರೀ ಬೆಲೆ ರೂಪಾಯಿ ೧೫, ಚಿಕ್ಕ ಸೈಜಿನ ೧½ ಇಂಚು ಸುತ್ತಳತೆಯ ಪದಕಕ್ಕೆ ಬೆಲೆ ರೂ. ೨. ಅದೇ ಸೈಜಿನ ಬ್ರಾಂಜಿನ ಪದಕಕ್ಕೆ ರೂ ೧, ಇವಕ್ಕೆ ಪೋಸ್ಟೇಜು ಬೇರೆ. ಅವುಗಳಿಗಾಗಿ ಅಪೇಕ್ಷೆ ಇರುವವರು ಮಾಸ್ಟರ್ ಆಫ್ ಮಿಂಟ್ ಕಲ್ಕತ್ತ ಇವರಿಂದ ವಿ. ಪಿ. ಪಿ. ಮೂಲಕ ಪಡೆಯಬಹುದು. ರಖಂ ವ್ಯಾಪಾರಿಗಳು ಡಿಸ್ಕೌಂಟ್ ದರಗಳ ಮಾಹಿತಿಯನ್ನು ಅವರಿಂದಲೇ ಪಡೆಯಬಹುದು. ಆರ್ಡರುಗಳನ್ನು ಬೇಗನೇ ಕಳುಹಿಸುವುದು ಒಳ್ಳೇದು. ಅಷ್ಟೇ ಅಲ್ಲ ಬಂಗಾರದ ದೊಡ್ಡ ಆಕಾರದ ಪದಕಗಳು ೫೦ ಗಿನಿಗಳಿಗೂ ಸಣ್ಣ ಆಕಾರದವು ೧೨ ಗಿನಿಗಳಿಗೂ ದೊರಕುವುವು. ಇವಕ್ಕಾಗಿ ಲಂಡನಿನ ರಾಯಲ್ ಮಿಂಟಿಗೆ ಬರೆದುಕೊಳ್ಳಬೇಕು.

ಇದೇ ಮೇ ತಾರೀಕು ೧೨ರಲ್ಲಿ ಇಲ್ಲಿಯ ಗವರ್ನಮೆಂಟ್ ಕಾಲೇಜಿನಲ್ಲಿ ಅಂದು ಸಂಜೆ ಗಂಟೆ ೫ ೧/೨ಕ್ಕೆ ಇಲ್ಲಿನ ನಾಗರೀಕರದೊಂದು ಸಾರ್ವಜನಿಕ ಸಭೆಯು ಸೇರುವುದು. ಅದರ ಉದ್ದೇಶವು ಚಕ್ರವರ್ತಿಗಳ ಪಟ್ಟಾಭಿಷೇಕ ಮಹೋತ್ಸವದ ದಿನವನ್ನು ಹೇಗೆ ಆಚರಿಸಬೇಕೆಂದು ಯೋಚಿಸುವುದೇ. ಆಚರಣೆಯು ಸರಳವಾಗಿರಬೇಕಾಗಿದ್ದು ಅಂದು ಶಾಲಾಮಕ್ಕಳಿಗೆ ತಿಂಡಿ, ಬಡವರಿಗೆ ಅನ್ನದಾನ ಚಾಣದಿರುಸುಗಳ ಪ್ರದರ್ಶನ ಕಟ್ಟಡಗಳಲ್ಲಿ ದೀಪಾವಳಿ ವಗೈರೆ ನಡೆಯಿಸಬಹುದಾಗಿ ಕೇಳಿಕೊಳ್ಳಲಾಗಿಯದೆ. ಇದಕ್ಕಾಗಿ ಜನರಲ್ ಫಂಡಿನ ಸಂಗ್ರಹವಾಗುವುದಿಲ್ಲವಾಗಿ ತಿಳಿದುಬರುತ್ತಿದೆ. ಮಹಾಜನರು ಈ ವಿಷಯ ಗಮನಿಸಿ ಸಹಕರಿಸುವುದು.

ಕಳೆದ ಚುನಾವಣೆಯಲ್ಲಿ ಬಹುಮತದಿಂದ ಆರಿಸಲ್ಪಟ್ಟ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಹಾಗೂ ಅವರ ಸಹೋದರರಾದ ಶ್ರೀ ಡಿ ರತ್ನವರ್ಮ ಸ್ವಾಮಿ ಬಿ. ಎ ಬಿ ಎಲ್ ವಕೀಲ್ ಇವರ ಇಲ್ಲಿನ ವೀರಭವನವೆಂಬ ನೂತನ ಗೃಹಪ್ರವೇಶೋತ್ಸವವು ಕಳೆದ ಆದಿತ್ಯವಾರ ಸಾಯಂಕಾಲ ಜರಗಿತು. ಈ ಸಮ್ಮಂಧ ಒಂದು ಟೀಪಾರ್ಟಿಯು ಸತ್ಕಾರವಿದ್ದಿತು. ಅಲ್ಲದೆ ಮರುದಿನ ೫೦೦ ಜನ ಬಡಬಗ್ಗರಿಗೆ ಅನ್ನದಾನವೂ ಇತ್ತು.

ಮಂಗಳೂರು ವಕೀಲ್ಸ್ ಕ್ಲಬ್ಬ್ ಎಸೋಸಿಯೇಶನ ಸಂಘದವರ ಕೇರಂ ಟೂರ್ನಮೆಂಟಿನ ಸ್ಪರ್ಧೆಯು ಇದೇ ತಾ ೨೬-೪-೩೭ರಲ್ಲು ಅಂತ್ಯವಾಗಿ ಈ ಕೆಳಗಿನವರಿಗೆ ಬಹುಮಾನಗಳು ಸಿಕ್ಕಿದ್ದಾಗಿ ತಿಳಿದುಬರುತ್ತದೆ. ೧ನೇ ಬಹುಮಾನ ಶ್ರೀ ಎಲ್. ಎಸ್ ಪ್ಯಾಸ್. ಎರಡನೇ ಬಹುಮಾನ ಶ್ರೀ ಬಿ ಎ ಕೆ ಸುವರ್ಣ.

ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಶಾಖೆಯೊಂದು ಇದೇ ಕಳೆದ ತಾ ೩೦ನೇ ಶುಕ್ರವಾರ ಸಂಜೆ ಗಂಟೆ ೫-೩೦ಕ್ಕೆ ಸರಿಯಾಗಿ ಬೊಂಬಾಯಿ ಮೇಯರಾದ ಡಾ। ಇ. ಮೋಸಸ್ ಎಂ ಡಿ ಇವರ ಅಧ್ಯಕ್ಷತೆಯಲ್ಲಿ ತೆರೆಯಿತು. ಈ ಶಾಖೆಯು ಸದ್ರಿ ಬೇಂಕಿನ ೩೧ನೇ ಶಾಖೆಯಾಗಿದ್ದು ದಿನೇ ದಿನೇ ಅಭಿವೃದ್ಧಿ ರೂಪವಾಗಿ ಬೆಳೆದು ಬರುತ್ತಿರುವುದು ಸ್ತುತ್ಯ.

ಇದೇ ಮೇ ತಾರೀಕು ೧೫ನೇ ಶನಿವಾರ ಘಂಟೆ ೧೧ಕ್ಕೆ ಡಿ. ಬೋರ್ಡು ಸಾಮಾನ್ಯ ಮೀಟಿಂಗು ಒಂದು ಸದ್ರಿ ಆಫೀಸಿನಲ್ಲಿ ಜರಗುವುದಾಗಿ ತಿಳಿದುಬರುತ್ತದೆ.

ಇದೇ ಕಳೆದ ತಾ. ೨೮ನೇ ಬುಧವಾರ ಅತ್ತಾವರ ಬಾಬುಗುಡ್ಡೆಯ ಹತ್ತಿರ ೫ ಮಂದಿ ಬಾವಿಯನ್ನು ತೋಡುತ್ತಿರುವಾಗ ಆಕಸ್ಮಾತ್ತಾಗಿ ಮೇಲಿಂದ ಮಣ್ಣು ಕುಸಿದು ಸದ್ರಿಯವರ ಮೈಮೇಲೆ ಬಿದ್ದು ಇಬ್ಬರು ಮರಣಪಟ್ಟ ವಿಷಾದಕರ ಘಟನೆಯುಂಟಾಗಿದೆ. ಮೂರು ಮಂದಿಗಳಿಗೆ ತೀವ್ರ ಗಾಯವಾಗಿರುವುದೆಂದು ಸದ್ರಿಯವರನ್ನು ಆಸ್ಪತ್ರೆಗೆ ಒಯ್ಯಲಾಗಿದೆಂದೂ ತಿಳಿದುಬರುತ್ತದೆ.

ವಿದ್ಯಾವಂತ ನಿರುದ್ಯೋಗಿಗಳ ಕಾನ್ಫರೆನ್ಸ್ ಈ ವಿಷಯವಾಗಿ ಸರಕಾರದ ಕಡೆಯಿಂದ ನಮಗೆ ಬಂದಿರುವ ಪ್ರಕಟಣೆಯನ್ನು ಹಿಂದಿನಿಂದ ಪ್ರಕಟಿಸಲಾಗುವುದು.

ಪ್ರಸಿದ್ಧ ಸಾಹುಕಾರರೂ ಶ್ರೀಮಂತರೂ ಕೆನರಾ ಇಂಡಸ್ಟ್ರಿಯಲ್ ಬೇಂಕಿಂಗ್ ಸಿಂಡಿಕೇಟಿನ ಡೈರೆಕ್ಟರರೂ ಆದ ಶ್ರೀ ಕಾಗಲ ವಾಮನ ವೆಂಕಟೇಶ ಪೈಗಳು ಚಿಕಿತ್ಸೆಗಾಗಿ ಬೊಂಬಾಯಿಗೆ ತೆರಳಿದವರು ಬೊಂಬಾಯಿಯಲ್ಲೇ ಕಾಲವಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ.

ಮಂಗಳೂರಿನ ರಸ್ತೆಗಳಿಗೆ ಡಾಮರು ಹಾಕಿಸಲು ಚಿಪೇಗಳಿಂದ ಟೆಂಡರುಗಳನ್ನು ಅಪ್ಪೈಸಿದ್ದಲ್ಲಿ ಒಂದು ಕಂಪೆನಿಯವರು ೬೫೦೦ಕ್ಕೆ ಟೆಂಡರು ಕೊಟ್ಟು ಮಲದಾಗಿಯೂ ಅದು ಇತರ ಕಂಪೆನಿಗಳಿಂದ ಸುಮಾರು ೨೫ ಸಾವಿರಕ್ಕೆ ಕಡಿಮೆಯಾದೆ ಎಂದು ತಿಳಿದುಬರುತ್ತದೆ. ಈ ಟೆಂಡರಿನ ವಿಷಯ ಪರ್ಯಾಲೋಚಿಸಲ್ಪಡುತ್ತದೆ.

ದ. ಕ. ಜಿಲ್ಲಾ ಸೆಂಟ್ರಲ್ ಕೋಓಪರೇಟಿವ್ ಬೇಂಕ್, ಲಿಮಿಟೆಡ್ ಈ ಬೇಂಕಿನ ಆಡಳಿತೆಗೆ ಸಮ್ಮಂಧಪಟ್ಟು ನಮ್ಮ ಜಿಲ್ಲೆಯಲ್ಲಿ ಎಲ್ಲಾ ಪ್ರಾಮುಖ್ಯ ಕೇಂದ್ರಗಳಲ್ಲಿ ಸಹಕಾರಿ ಶಿಕ್ಷಣ ಪ್ರಚಾರ ಕಾರ್ಯಕ್ರಮವನ್ನು ಕೈಕೊಳ್ಳುವುದಾಗಿ ತಿಳಿದು ಬರುತ್ತದೆ. ಪ್ರಚಾರಕಾರ್ಯಕ್ಕಾಗಿ ಅಲ್ಲಲ್ಲಿಗೆ ಬರುವವರಲ್ಲಿ ಬೇಂಕಿನ ಅಧ್ಯಕ್ಷರಾದ ಶ್ರೀ ಮೊಳಹಳ್ಳಿ ಶಿವರಾಯರೊಬ್ಬರು ಅಲ್ಲದೆ ಬೇಂಕಿನ ಕಾರ್ಯದರ್ಶಿ ಶ್ರೀ ಪಿ ರಾಮರಾಯ ಮಲ್ಯರೂ, ಬೇಂಕ್ ಇನ್ಸ್‌ಪೆಕ್ಟರ್ ಯು. ಗೋವಿಂದರಾಯರು ಬರುವರು.

ಸಾಧ್ಯವಿರುವಲ್ಲಿ ಹತ್ತಿರದ ಸಂಘಗಳ ಪಂಚಾಯ್ತಿದಾರರ ಪರಿಷತ್ತುಗಳನ್ನು ಸೇರಿಸಿ ಸಂಘಗಳ ಬೆಳವಣಿಗೆಯ ಕುರಿತಾದ ಪ್ರಶ್ನೆಗಳನ್ನು ಚರ್ಚಿಸಬೇಕೆಂದೂ ನಿರ್ಣಯವಾಗಿದೆ. ಸಹಕಾರ ಸಂಘಗಳಿಗೆ ಸಂಬಂಧಪಟ್ಟವರೆಲ್ಲರೂ ಈ ಸಂದರ್ಭದ ಲಾಭವನ್ನು ಪಡೆದುಕೊಳ್ಳುವರಾಗಿ ಅಪೇಕ್ಷಿಸಲಾಗುತ್ತದೆ. ಮಾಯಾಲಾಂದ್ರದ ದೇಖಾವೆ ಗ್ರಾಮಫೋನ್ ಸಂಗೀತ ಸಹಕಾರ ಸಿದ್ಧಾಂತ ಮತ್ತು ಪದ್ಧತಿಗಳ ಮಾಹಿತಿಗಳನ್ನು ಕೊಡುವ ಕ್ಲಾಸುಗಳನ್ನು ಜರಗಿಸುವ ಏರ್ಪಾಡುಗಳಾಗಿವೆಯಾಗಿ ತಿಳಿದು ಬರುತ್ತದೆ.

ಕಳೆದ ತಾ 28ನೇ ಬುಧವಾರ ರಾತ್ರಿ ಸುಮಾರು 11 ಘಂಟೆಗೆ ಬಿಜ್ಜೈ ಬೋರ್ಡ ಹುಡುಗರ ಶಾಲೆಯ ಸಮೀಪದ ಎರಡು ಮುಳಿ ಹುಲ್ಲಿನ ಮನೆಗಳಿಗೆ ಆಕಸ್ಮಿಕವಾಗಿ ಬೆಂಕಿ ತಗಲಿ ಎಲ್ಲಾ ಸುಟ್ಟುಹೋಗಿರುವುದು.

ಶ್ರೀ ರಾಜಗೋಪಾಲಾಚಾರ್ಯರು, ಶ್ರೀ ಟಿ ಪ್ರಕಾಶಂ, ಶ್ರೀ ಮುನಿಸ್ವಾಮಿ ಪಿಳ್ಳೆ, ಶ್ರೀ ಕಾಳೇಶ್ವರರಾವ್, ಡಾ ಸುಬ್ಬರಾಯನ್ ಮೊದಲಾದವರೊಂದಿಗೆ ಮಂಗಳೂರಿಗೆ ತಾ. ೨೧ನೇ ಬುಧವಾರ ಚಿತ್ತೈಸಿದ್ದರಷ್ಟೆ. ಅದೇ ದಿನ ಸಾಯಂಕಾಲ, ಗಣಪತಿ ಹೈಸ್ಕೂಲಿನಲ್ಲಿ ಏರ್ಪಡಿಸಿದ ದ ಕ ಜಿಲ್ಲಾ ಟೀಚರ್ ಗಿಲ್ಡ್ ಕೇಂಪನ್ನು ತೆರೆದು ಅದೇ ಸಾಯಂಕಾಲ ಡಿ ಬೋರ್ಡಿನಲ್ಲಿ ಮಹಾತ್ಮಾಜಿಯವರ ಭಾವಚಿತ್ರದ ಅನಾವರಣ ಮಾಡಿ ೬ ೩೦ಕ್ಕೆ ಮೈದಾನಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿ ೦ ತ್ರಿ ಘಂಟೆಗೆ ಬಿಸೆಂಟ್ ಗರ್ಲ್ಸ ಸ್ಕೂಲಿನಲ್ಲಿ ಏರ್ಪಡಿಸಿದ ಔತಣ ಸಮಾರಂಭದಲ್ಲಿ ಬಾಗಿಯಾಗಿಯೂ ಮರುದಿನ ಕೆನರಾ ಹೈಸ್ಕೂಲಿಗೆ ಚಿತ್ತೈಸಿ ಕಸ್ತೂರಿಬಾ ಬಂಧುಗಳು ಕೊಟ್ಟ ಸರದಾರ್, ಜವಾಹರಲಾಲ್, ವಲ್ಲಭ ಬಾಯಿಪಟೇಲ್ ಮತ್ತು ಕವೀಂದ್ರ ರವೀಂದ್ರರ ತೈಲಚಿತ್ರಗಳ ಅನಾವರಣವನ್ನುಮುಗಿಸಿ ೯-೩೦ಕ್ಕೆ ಮೈಲ್ ಬಂಡಿಯಲ್ಲಿ ಕಲ್ಲಿಕೋಟೆಗೆ ತೆರಳಿದರು.

ಆಚಾರರ ಅನಾವರಣ ಭಾಷಣ.

ಈ ಸಂದರ್ಭದಲ್ಲಿ ರಾಜಗೋಪಾಲಾಚಾರ್ಯರು ಒಂದು ಪುಟ್ಟ ಭಾಷಣ ಮಾಡಿ. . . ತಾವು ಅನಾವರಣ ಮಾಡಲಿರುವ ಭಾವಚಿತ್ರಗಳು ನಮ್ಮ ದೇಶಿಗರದೇ ಇದು ಅವುಗಳ ಸೌಂದರ್ಯವು ಅಸಾಧಾರಣವಾಗಿದೆ ಎಂದರು. ಶ್ರೇಷ್ಟ ಮನುಷ್ಯರ ಚಿತ್ರಗಳು ಹೆಚ್ಚಾಗಿ ವ್ಯಂಗವಾಗಿ ಚಿತ್ರಿಸಲ್ಪಡುವುದು. ನಮ್ಮ ಅನುಭವಪಡುವುದರಿಂದ ಆ ಚಿತ್ರಗಳು ಬಹಳ ಸೊಗಸಾಗಿರುವುದರಿಂದ ಅವುಗಳನ್ನು ಕೇಳಿಕೊಂಡಿದ್ದಕ್ಕಾಗಿ ಶ್ರೀ ಆಚಾರ್ಯರು ಶಾಲಾಧಿಕಾರಿಗಳನ್ನು ತುಂಬಾ ಶ್ಲಾಘಿಸಿದರು. ಮುಂದುವರಿಯುತ್ತಾ ರಾಜಾಜಿಯವರು ಕೆನರಾ ಹೈಸ್ಕೂಲು ಮಂಗಳೂರಿನ ವಿದ್ಯಾಭಿವೃದ್ಧಿಯ ಚಟುವಟಿಕೆಗಳ ಕೇಂದ್ರವಾಗಿರುವ ವಿಷಯವು ಅವರಿಗೆ ಸಂತೋಷದ ಸಂಗತಿಯಾಗಿದೆಯಾಗಿಯೂ ಅನೇಕ ಚಳವಳಿಗಳಲ್ಲಿ ಶಾಲೆಯು ಸ್ಮರಣೀಯವಾದ ಪಾತ್ರವನ್ನು ವಹಿಸುತ್ತಲಿರುವುದರಿಂದ, ತಮ್ಮನ್ನು ಅನಾವರಣ ಸಮಾರಂಭವನ್ನು ಜರುಗಿಸಲು ಆಹ್ವಾನಿಸಿ ಗೌರವಿಸಿದ್ದು ಅವರಿಗೆ ಬಹಳ ಹರ್ಷವನ್ನುಂಟುಮಾಡಿದೆಎಂದೂ ಆಚಾರ್ಯರು ತಿಳಿಸಿ, ಶಾಲೆಯೂ ಯಥಾ ಪ್ರಕಾರ ದೇಶಸೇವೆಯನ್ನು ಗೈಯುತ್ತಾ ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ಆಚಾರ್ಯರ ಟೀಚರ್‌ಗಿಲ್ಡಿನ ಪ್ರಾರಂಭೋತ್ಸವ ಭಾಷಣ.

ಉಪಾಧ್ಯಾಯರ ವೃತ್ತಿಯು ನನಗೆ ಬಹಳ ಚಿತ್ತಾಕರ್ಷಕವಾದುದಿದೆ. ಕಳೆದ 20 ವರ್ಷಗಳಿಂದ ಇಂತಹ ಉಪಾಧ್ಯಾಯರ ಸಂಘಗಳು ಅವರ ಜೀವನದಲ್ಲಿ ಬಹಳ ಪ್ರಾಮುಖ್ಯ ಪಾತ್ರವನ್ನು ವಹಿಸಿವೆ. ಇಂತಹ ಸಂಘಗಳು ಹೆಚ್ಚಿನ ಕೆಲಸಗಳನ್ನು ಮಾಡಲಿಕ್ಕಿವೆ. ಅದರ ಅಧ್ಯಂತದ ವರೆಗೂ ಅವುಗಳಿಗೆ ಮೇಲಾಧಿಕಾರವೊಂದಿರುವುದರಿಂದ ಅವರು ಕೀಳಪಡುಮುಖ ಭಾವವನ್ನು ಧರಿಸಿಕೊಳ್ಳಬೇಕಾಗಿದೆ. ಟೀಚರ್ ಗಿಲ್ದುಗಳಲ್ಲಿ ಎರಡು ತರದ್ದಿವೆ. ಸ್ವತಂತ್ರವಾಗಿ ವ್ಯವಹಾರಗಳನ್ನು ತೀರ್ಮಾನಿಸುವುದು ಒಂದು ಪಂಗಡ. ತಮ್ಮ ಮೇಲಿನ ಅಧಿಕಾರಿಗಳಿಗೆ ಅರ್ಜಿಮಾಡಿ, ವಿರೋಧ ಸೂಚಿಸುವುದು ಇವೇ ಮೊದಲಾದ ತಾಪತ್ರಯಗಳನ್ನು ಹಚ್ಚಿಕೊಳ್ಳುವ ಪಂಗಡವು ಎರಡನೇಯದು. ಈ ತೊಂದರೆಗಳಿಂದಾಗಿ ಈ ಟೀಚರ್ ಗಿಲ್ದುಗಳು ಮುಂಚಿನಂತೆ ರಾಷ್ಟ್ರಸೇವೆಯಲ್ಲಿ ಉಪಯುಕ್ತ ಪಾತ್ರವನ್ನು ವಹಿಸದಾಗಿವೆ. ಇದರಿಂದ ಗಿಲ್ದುಗಳು ಮಾಡುತ್ತಿರುವ ಕೆಲಸಗಳು ನಿರುತ್ಸಾಹಗೊಳಿಸುತ್ತಿವೆಂದು ಯಾರೂ ತಿಳಿಯಬಾರದು. ದೇಶಬಾಂಧವರಿಗೆ ವಿದ್ಯೆಯನ್ನು ಕಲಿಸುವುದು ನಾಗರೀಕನೊಬ್ಬನ ಶ್ರೇಷ್ಟ ಕರ್ತವ್ಯವಾಗಿದೆ. ಆದರೆ ಇಂದು ಉಪಾಧ್ಯಾಯರವರುಗಳನ್ನು ಬಹಳ ಹೀನ ದೃಷ್ಟಿಯಿಂದ ಕಾಣಲ್ಪಡುವುದು ತುಂಬಾ ಶೋಚನೀಯ ವಿಷಯವಾಗಿದೆ. ಅಲ್ಲದೆ ಅವರಿಗೆ ಸಿಗುವ ಸಂಬಳ ಕೀಳುತರಗತಿದ್ದಾಗಿದೆ. ಆದರೆ ಇನ್ನು ಮುಂದೆ ಉಪಾಧ್ಯಾಯರುಗಳಿಗೆ ತುಂಬಾ ಅನುಕೂಲಕರ ಭವಿಷ್ಯವಿದೆ ಎಂದು ಹೇಳಿ ಶ್ರೀ ಆಚಾರ್ಯರು ಗಿಲ್ಡಿನ ಅಭಿವೃದ್ಧಿಯನ್ನು ಬಯಸಿದರು.

ತಾಲೂಕುಗಳಿಂದ

ಕಾರ್ಕಳ—"ದಕ್ಷಿಣ ಕನ್ನಡ ಗ್ರಾಮಾಭಿವೃದ್ಧಿ ಸಂಘ" ಎಂಬ ಹೆಸರಿನಿಂದ ಇಲ್ಲಿಯ ಕೆಲವು ಜನ ಪ್ರಮುಖರ ಆಡಳಿತೆಗೆ ಒಳಪಟ್ಟ ಒಂದು ಸಂಘವು ಕೆಲವು ದಿನಗಳಿಂದೀಚೆಗೆ ರಿಜಿಸ್ಟರಾಗಿರುವದು. ಗ್ರಾಮಗಳ ಸುಧಾರಣೆಯೇ ಈ ಸಂಘದ ಮುಖ್ಯ ಉದ್ದೇಶ. ಇದರ ವಿವಿಧ ಕಾರ್ಯಕಲಾಪಗಳು ಜನರಿಗೆ ಪ್ರಯೋಜನಕಾರಿಯಾಗಿ ಪರಿಣಮಿಸಿ, ದೀರ್ಘಕಾಲ ಬಾಳಿ ಬರಲೆಂದು ಆಶಿಸುತ್ತೇವೆ.

ಕಾರ್ಕಳ ಹರಿಜನ ಸೇವಾ ಸಂಘದ ಕಳೆದ ವರುಷದ ವರದಿಯು ಬರೆದು ಸಿದ್ಧವಾಗಿದೆ. ಆ ವರ್ಷದಲ್ಲಿ ಸಂಘವು ತನ್ನ ಶಕ್ತಿಮೀರಿ ಕೆಲಸಮಾಡಿ ಅಭಿವೃದ್ಧಿಯನ್ನು ಸಂಪಾದಿಸಿರುವದು ವರದಿಯಿಂದ ಸ್ಪಷ್ಟವಾಗುತ್ತದೆ. ಸಂಘಕ್ಕೆ ಮುಂದಿನ ವರ್ಷ ಇನ್ನೂ ಹೆಚ್ಚಿನ ಕಾರ್ಯ ಮಾಡುವಂಥ ಅನುಕೂಲತೆಗಳು ಭಗವಂತನ ದಯೆಯಿಂದ ಸಂಘಕ್ಕೆ ಪ್ರಾಪ್ತವಾಗಲಿ.

ಪುದು ಫರಂಗಿಪೇಟೆ—ಇಲ್ಲಿಯ ಮಹಮ್ಮದನ್ ಬೋರ್ಡು ಶಾಲೆಯ 1937ನೇ ಇಸ್ವಿಯ ವರ್ಷಂತ್ಯುತ್ಸವವು ಜನಾಬ್ ಮೊಗ್ರಾಲ್ ಕೆ ಕುಂಞಮ್ಮದ್ ಮೌಲಾನಾ ಮೌಲವಿ ಇವರ ಅಧ್ಯಕ್ಷತೆಯಲ್ಲಿ ಇದೇ 1—5—37ನೇ ಶ್ಯಾಮ ಘಂಟೆ 6ಕ್ಕೆ ಜರಗುವುದು. ಎಲ್ಲರಿಗೂ ಸುಸ್ವಾಗತವಿದೆಯೆಂತ ಸದ್ರಿ ವರ್ಷಂತ್ಯೋತ್ಸವದ ಕಮಿಟಿಯವರು ತಿಳಿಸುತ್ತಾರೆ.

ಕೊಲ್ಲೂರು—ಶ್ರೀ ಮೂಕಾಂಬಿಕಾ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯತಕ್ಕ ರಥೋತ್ಸವವು ಇದೇ ತಾ ೩-೪-೩೭ರಲ್ಲಿ ನಡೆಯಿತು. ರಾತ್ರಿ ಸುಮಾರು ೧೦ ಘಂಟೆಗೆ ಸದರಿ ದೇವಸ್ಥಾನಕ್ಕೆ ಸಮ್ಮಂಧಪಟ್ಟ ಒಂದು ಪೋಲೀಸ ಕಾನ್ಸ್‌ಟೇಬಲ ಮತ್ತು ಇನ್ನೂ ೮ ರಿಗೂ ಒಂದು ಕ್ಷುಲ್ಲಕ ವಿಷಯ ಚರ್ಚೆ ಸಂಭವಿಸಿ ಹೊಡೆದಾಟವು ನಡೆಯಿತೆಂಬ ವಾರ್ತೆ ಸಂಬಂಧಪಟ್ಟವರನ್ನು ಕೈದು ಮಾಡಲಾಗಿದೆ ಎಂತ ತಿಳಿದು ಬರುತ್ತದೆ. ಮುಂದಿನ ವಿಚಾರ ತಿಳಿಯಲಿಕ್ಕಿದೆ.

ಪಣಂಬೂರು—ಇಲ್ಲಿಯ ಗ್ರಾಮಪುಸ್ತಕ ಭಂಡಾರದ ಸಹಾಯಾರ್ಥವಾಗಿ ಕಳೆದ ತಾ 22ನೇ ಗುರುವಾರ ರಾತ್ರಿ ಶ್ರೀ ಎಸ್ ಎಸ್ ಹೊಳ್ಳರು ಮತ್ತು ಅವರ ಮಿತ್ರ ವೃಂದದವ ಒಂದು ವಿನೋದಾವಳಿಯ ಪ್ರದರ್ಶನವನ್ನಿತ್ತರು. ನೆರೆದು ರೂಪಾಯಿಗಳಿಗೂ ಮಿಕ್ಕಿ ಧನ ಸಂಗ್ರಹವಾಗಿದೆಯೆಂದು ತಿಳಿದುಬರುತ್ತದೆ. ಶ್ರೀ ಹೊಳ್ಳರ ವಿನೋದ ಚಿತ್ರಗಳು ಉದ್ಧಾರ (ಬರೆದವರು ಶ್ರೀ ಎಸ್. ಎಸ್. ಹೊಳ್ಳರು) ಎಂಬ ನಾಟಕ, ಹರಿಕಥೆ ಶ್ರೀ ಕೆ. ಕೆ ಶೆಟ್ಟರ ತಾಂಡವನೃತ್ಯ ಶ್ರೀ ಸೀತಾರಾಮ ನಾಯಕ್, ಶ್ರೀ ವೆಂಕಟರಾಯ ಶೆಟ್ಟಿ, ಶ್ರೀ ಡಿ ಪಿ ಶಂಕ್ರಿ ಇವರ ಸಂಗೀತ, ಶ್ರೀ ಸೇಸು ಮುಡಿವಾಳರ ವಿವಿಧ ನಕಲಿ, ಶ್ರೀ ವೆಂಕಟ್ರಮಣಾಚಾರ್ಯರ ನಕಲಿ, ನರ್ತನ ಮೊದಲಾದ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಕೊನೆಗೊಂಡಿತು. ಆಗಿಯೂ ನಾಟಕದಲ್ಲಿ ಭಾಗವಹಿಸಿದವರಲ್ಲಿ ಶ್ರೀ ಹೊಳ್ಳರೂ ಶ್ರೀ ಆಚಾರ್ಯರೂ ಶ್ರೀ ಆನಂದರಾವ್ ಮತ್ತು ಶ್ರೀ ಸೀತಾರಾಮ ನಾಯ್ಕರು ಎಂತ ತಿಳಿದು ಬರುತ್ತದೆ.

ಪಾಣೆಮಂಗಳೂರು:—ಇದೇ ತಾರೀಕು ೨೯-೪-೩೭ನೇ ಗುರುವಾರ ರಾತ್ರಿ ಘಂಟೆ ೯ಕ್ಕೆ ಪಾಣೆ ಮಂಗಳೂರು ವಿಠಲ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯ ವಠಾರದಲ್ಲಿ ನಮ್ಮ ಜಿಲ್ಲೆಯ ಪ್ರಾಮುಖ್ಯ ಅರ್ಥದಾರರ ಕೂಡುವಿಕೆಯಿಂದ ಯಕ್ಷಗಾನ ಸಭೆಯು ಸೇರಿತು ಎಂದು ತಿಳಿದುಬರುತ್ತದೆ.

ಮೂಡಬಿದ್ರೆ.—ಧರ್ಮಾರ್ಥ ವಾಚನಾಲಯದ ಐದನೇ ವಾರ್ಷಿಕೋತ್ಸವವು ಇದೇ ತಾ. ೨-೫-೩೭ನೇ ಆದಿತ್ಯವಾರ ಸಾಯಂಕಾಲ ಘಂಟೆ ೬-೩೦ಕ್ಕೆ ಜರಗುವುದಾಗಿಯೂ ತತ್ಸಂಬಂಧ ವಿದ್ವಾಂಸರು ಬಂದು ನೆರವಾಗಬೇಕಾಗಿಯೂ ಈ ಮೂಲಕ ಅಪೇಕ್ಷಿಸೋಣವಾಗಿಯದೆ ಎಂತ ಆಡಳಿತ ಕಮಿಟಿಯವರು ತಿಳಿಸುತ್ತಾರೆ.

ಕಳೆದ ಆದಿತ್ಯವಾರ ತಾ. ೨೫ನೇ ಆದಿತ್ಯವಾರ ಸ್ಥಳೀಯ ಬಸದಿಯ ರಥೋತ್ಸವದ ಸಮಯ ಕೊಂಗ್ರೆಸ್ ಧುರೀಣರಾದ ಶ್ರೀ ಎ ಬಿ ಶೆಟ್ಟಿರೂ, ಶ್ರೀ ವೆಂಕಟ್ರಾಯ ಬಾಳಿಗರೂ, ಶ್ರೀ ಕೆ ಆರ್ ಕಾರಂತರೂ, ಡಾ। ಅಡಪರೂ ಶ್ರೀ ಪಿ ವಿ ಉಪಾಧ್ಯಾಯರೂ ಮೊದಲಾದ ಮಹನೀಯರು ದಯಮಾಡಿಸಿದ್ದರು. ಸ್ವಸ್ತಿ ಶ್ರೀ ಚಾರುಕೀರ್ತಿ ಸ್ವಾಮಿಜಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಜರಗಿತು. ಕೊಂಗ್ರೆಸ್ ಮಂತ್ರಿ ಪದವಿಯನ್ನು ಏಕೆ ನಿರಾಕರಿಸಿತು ಎಂಬ ವಿಷಯವನ್ನು ಶ್ರೀ ಎ ಬಿ ಶೆಟ್ಟರು ಚನ್ನಾಗಿ ವಿವರಿಸಿದರು. ನಂತರ ಕೆ ಆರ್. ಕಾರಂತರು ಮಾತನಾಡುತ್ತ ಗವರ್ನರೊಡನೆ ಭರವಸೆ ಕೇಳಿದ ಪರಿಣಾಮವಾಗಿ ಇಂದು ಪದವಿಯ ಆಶೆಯಿಂದ ಚುನಾವಣೆಗೆ ಇಳಿದುದಲ್ಲ. ಅದು ಜನತೆಯ ಸೇವೆಗಾಗಿ ಎಂಬುದನ್ನು ವಿಶದವಾಗಿ ತಿಳಿಸಿದರು. ತರುವಾಯ ಶ್ರೀ ಬಾಳಿಗರು ಮಾತನಾಡುತ್ತ ವಕೀಲ ದೃಷ್ಟಿಯಿಂದ ಇಂಟೆರಿಂ ಮಂತ್ರಿಗಳು ನಿಜವಾದ ಮಂತ್ರಿಗಳಲ್ಲ. ಅದಕ್ಕೆ ಬೇರೆ ಯಾವದಾದರೊಂದು ಹೆಸರಿಟ್ಟರೆ ಒಪ್ಪತಕ್ಕದು. ನಂತರ ಶ್ರೀ ಅಡಪರು ತುಳುವಿನಲ್ಲಿ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಸಭೆಯ ಮುಂದಿಡುತ್ತ ಕೊಂಗ್ರೆಸು ಕಳೆದ ಚುನಾವಣೆಯಲ್ಲಿ ಜನತೆಯ ಹಿತದ ಸಂಸ್ಥೆಯೆಂದು ಜಗತ್ತಿಗೆ ತೋರಿಸಿ ಕೊಟ್ಟಿದೆ. ಮುಂದಕ್ಕೆ ಚುನಾವಣೆ ಆಗುವದಿದ್ದರೆ ಇದರ ಎದುರಾಳಿಯಾಗಿ ಎಂತಹ ಪಾರ್ಟಿಗೂ ಧೈರ್ಯ ಬಾರದು ಎಂದರು. ಅಧ್ಯಕ್ಷರ ಪರವಾಗಿ ಶ್ರೀ ಎಸ್ ಪಿ ಮಯರಾಯರ್‌ರವರು ಭಾಷಣ ಮಾಡಿದ ತರುವಾಯ ಸಭಾಂತ್ಯವಾಯಿತು.

ಹುಳ ಕಡಿತದ ಬಾಧೆಯನ್ನು ಗುಣಪಡಿಸಿಕೊಳ್ಳಿ

ಸಾಂಬಕನ್ನು ನಿಮ್ಮ ಚರ್ಮದ ಮೇಲೆ ತಿಕ್ಕಿರಿ.

ಯಾವದಾದರೂ ಕ್ರಿಮಿಕೀಟಗಳು ನಿಮ್ಮನ್ನು ಚುಚ್ಚಿ ಕಡಿದರೆ ಅವುಗಳ ವಿಷವು ಬಹಳ ವೇದನೆಯನ್ನೂ ಊದುವಿಕೆಯನ್ನೂ ಉಂಟುಮಾಡುತ್ತದೆ. ಅವುಗಳ ಹೆಚ್ಚು ವಿಕೆಯುಂಟಾಗುವ ರೋಗವನ್ನು ತಪ್ಪಿಸುವುದಕ್ಕೆ ಕೂಡಲೇ ಸಾಂಬಕನ್ನು ಅದರ ಮೇಲೆ ತಿಕ್ಕಿರಿ. ಇದು ಕಡಿತದ ಜಾಗವನ್ನು ಆರೋಗ್ಯದಲ್ಲಿರಿಸಿ ಅದನ್ನು ಗುಣಪಡಿಸುತ್ತದೆ. ಸಾಂಬಕ್ಕು ನೋವನ್ನು ನಾಶಮಾಡಿ, ಊದುವಿಕೆಯನ್ನು ಕಮ್ಮಿ ಮಾಡಿ, ಕಲೆನಗುಳಿಯದಂತೆ ಗುಣಪಡಿಸುತ್ತದೆ. ಎಲ್ಲಾ ಔಷಧ ಅಂಗಡಿಗಳಲ್ಲೂ ಸಾಂಬಕ್ಕು ದೊರೆಯುತ್ತದೆ. ಬೆಲೆ ರೂ. 1 ಮತ್ತು 2—4—0.

ಸಾಂಬಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ

ಏಜಂಟರು.—ಮೆಸರ್ಸ್ ದಾಧಾ ಎಂಡ್ ಕೊ.,
ಪಿ ಟಿ. ಮದ್ರಾಸು.

ಸಾಂಬುಕ್
Zam Buk

ಹೊಗೆಸೊಪ್ಪಿನಿಂದ ಉಂಟಾಗುವ ಕೆಡುಕುಗಳು

ಮಾನವನ ಆರೋಗ್ಯವೂ ಅನಾರೋಗ್ಯವೂ ಅವನ ಅವಲಂಬಿಸುವ ಅಭ್ಯಾಸಗಳನ್ನು ಅನುಸರಿಸಿರುವುದು. ಪ್ರಾಯಶಃ ಈ ಅಭ್ಯಾಸಗಳೆಲ್ಲಾ ಸಂಘದೋಷದಿಂದ ಉಂಟಾಗುವುವು. ಸುಜನರ ಸಹವಾಸದಿಂದ ಸುಗುಣವೂ ಕುಜನರ ಸಂಘದಿಂದ ದುರ್ಗುಣಗಳು ಬರುತ್ತವೆ. ಆದರೆ ಸದ್ಗುಣಗಳಿಗಿಂತಲೂ ದುರ್ಗುಣಗಳು ಮನೆಗೆ ಬೆಂಕಿ ತಗಲಿದಂತೆ ತ್ವರೆಯಾಗಿ ಬರುವುವು ಈ ಹಾಳು ಪಿಶಾಚವು ಕಾಲಕ್ರಮದಿಂದ ಮನುಷ್ಯನನ್ನು ಹಾಳುಮಾಡಿ ಭ್ರಷ್ಟನನ್ನಾಗಿ ಮಾಡುವುದು. ಇವುಗಳ ಬಲೆಗೆ ಬಿದ್ದಮೇಲೆ ತಪ್ಪಿಸಿಕೊಳ್ಳುವುದೆಂದರೆ ಜೇಡನ ಬಲೆಗೆ ಬಿದ್ದ ಹುಳುವಿನಂತೆಯೇ ಸರಿ ಇಂತಹ ಆರ್ಥಿಕ ದುಸ್ಥಿತಿಯಲ್ಲಿ ಇವುಗಳ ಬಾಧೆಗೆ ಒಳಪಟ್ಟಿರುವವರ ಸಂಕಷ್ಟವನ್ನು ಹೇಳಲಳವಲ್ಲ 'ಹೀನ ಚಾಳಿಸುಟ್ಟರೂ ಹೋಗದು' ಎಂಬಂತೆ ಈ ಪಿಶಾಚಗಳು ಮಾನವನನ್ನು ಸಂಪೂರ್ಣ ನಾಶ ಮಾಡದೆ ಬಿಡವು.

ಹೊಗೆಸೊಪ್ಪು, ಚುಟ್ಟಾ, ಬೀಡಿ, ಸಿಗರೇಟು, ನಸ್ಯ, ಗಾಂಜ, ಅಫೀಮು, ಕಾಫಿ, ಟೀ, ಸೋಡಾ, ಹೆಂಡಾ, ಸಾರಾಯಿ, ಇತ್ಯಾದಿಗಳೇ ಮಾನವನನ್ನು ಪೀಡಿಸುವ ಪಂಚದಶ ಪಿಶಾಚಗಳು ಮೇಲೆ ಹೇಳಿದ ಪ್ರತಿಯೊಂದಕ್ಕೂ ಪರಸ್ಪರ ಸಂಬಂಧ ಉಂಟು ಇವುಗಳು ದುರ್ನೀತಿಗಳೆಂಬ ಪಿಶಾಚ ಸೌಧದ ಸೋಪಾನಗಳು ಇದರ ಆರಂಭದ ಮೆಟ್ಟಲನ್ನು ಏರಿದೊಡನೆಯೇ ಮೇಲಿನ ಮೆಟ್ಟಲನ್ನು ಹತ್ತಬೇಕೆಂಬ ಲವಲವಿಕೆಯನ್ನು ಹುಟ್ಟಿಸುವುದು ಪಿಶಾಚಗಳಲ್ಲಿ ಒಂದಾದ ಹೊಗೆಸೊಪ್ಪನ್ನು ಕುರಿತು ತುಸು ವಿಚಾರಿಸೋಣ

ಹೊಗೆಸೊಪ್ಪು ನಮ್ಮ ದೇಶದಲಿ ಮೊದಲು ಇರಲಿಲ್ಲ ಇತ್ತೀಚೆಗೆ ಸುಮಾರು ೩೦೦ ವರ್ಷಗಳಿಂದ ಈ ವಿಷಬೀಜವು ಭರತಖಂಡದಲ್ಲಿ ಮೊಳೆತು, ಈಗ ಪ್ರಬಲವಾದ ವೃಕ್ಷವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು ಇದರ ಬೆಳೆಯು ಅಮೇರಿಕದಲ್ಲಿ ಮಾತ್ರ ಇತ್ತೆಂದೂ, ಅಲ್ಲಿಂದ ಅದನ್ನು ಕೊಲಂಬಸ್ ಎಂಬ ನಾವಿಕನು ತಂದು, ಯುರೋಪಿನಲ್ಲಿ ಪ್ರತಿಷ್ಠಿಸಿದ್ದನೆಂದೂ, ಅದೇ ಕಮಕ್ರಮವಾಗಿ ನಮ್ಮ ದೇಶಕ್ಕೆ ತರಲ್ಪಟ್ಟಿತೆಂದೂ ಕೆಲವರು ಹೇಳುತ್ತಾರೆ 'ನೆರೆಮನೆಯ ಊಟ ಹೇಗಾದರೂ ರುಚಿ' ಎಂಬ ನಾಣ್ಣುಡಿಯಂತೆ ನಮ್ಮವರು ಅದನ್ನು ವಿಶೇಷವಾಗಿ ಸೇವಿಸುತ್ತಿದ್ದಾರೆ

ಇನ್ನು ಹೊಗೆಸೊಪ್ಪಿನ ಗುಣಗಳನ್ನು ವಿಚಾರಿಸುವ. ಇದರಲ್ಲಿ 'ನಿಕೊಟಿನ್' (Nicotin) ಎಂಬ ಒಂದು ಬಗೆಯ ವಿಷವಿರುವುದು ಒಂದು ಪೌಂಡು ಹೊಗೆಸೊಪ್ಪಿನಲ್ಲಿ ಸುಮಾರು ೩೮೦ ಗ್ರೈನಿನ ವಿಷವಿರುವುದು ಒಂದು ಕಟ್ಟು ಹೊಗೆಸೊಪ್ಪಿನಲ್ಲಿ ಇಬ್ಬರನ್ನು ಕೊಲ್ಲುವಷ್ಟು ವಿಷವಿದೆ ಎಂದು ಪ್ರಸಿದ್ಧ ಡಾಕ್ಟರರೊಬ್ಬರು ಕಂಡುಹಿಡಿದಿರುವರು ಇಂತಹ ವಿಷಸಂಯುಕ್ತವಾದ ಹೊಗೆಸೊಪ್ಪನ್ನು ಜನರು ಮೂರು ವಿಧಗಳಲ್ಲಿ ಉಪಯೋಗಿಸುತ್ತಾರೆ ೧. ಚುಟ್ಟಾಗಳು, ೨ ನಸ್ಯ, ೩ ವೀಳ್ಯದೊಡನೆ ಅಗಿಯುವುದು.

ಚುಟ್ಟಾವನ್ನು ಸೇವಿಸುವುದರಿಂದ, ಜೀರ್ಣಸಾಧಕವಾದ ಜೊಲ್ಲುರಸವು ಇಂಗಿಹೋಗಿ ಪದೇ ಪದೇ ಉಗುಳುವದರಿಂದ ಜೊಲ್ಲು ನಿರಂತರವೂ ವ್ಯರ್ಥವಾಗಿ, ಅಜೀರ್ಣ ವ್ಯಾಧಿಯನ್ನುಂಟುಮಾಡುವುದು. ಇದರ ಹೊಗೆಯು ಶ್ವಾಸಕೋಶಗಳಲ್ಲಿ ಪ್ರವೇಶಿಸಿ, ಗಾಳಿಚೀಲಗಳನ್ನು (ಗಾಳಿಚೀಲಗಳನ್ನು) ವಿಷಭರಿತವಾಗಿ ಮಾಡುವುದು. ಅದರಿಂದ ಶ್ವಾಸ ಕಫ ಮೊದಲಾದ ರೋಗಗಳು ಉಂಟಾಗುತ್ತವೆ. ಇಂತಹ ರೋಗಪೀಡಿತರು, ತಮ್ಮ ವ್ಯವಹಾರವನ್ನು ಸುಸೂತ್ರವಾಗಿ ನಡಿಸಲಾರದೆ ಪರಾಶ್ರಯಕ್ಕೆ ಬೀಳಬೇಕಾಗುವುದು. ಚುಟ್ಟಿದಿಂದ ಇಷ್ಟೇ ಅನರ್ಥ ಪರಂಪರೆಗಳೆಂದು ತಿಳಿದಿರಾ! ಅಲ್ಲ ಇನ್ನೂ ಉಂಟು—ಬರೆದರೆ ಪುರಾಣವಾಗಬಹುದು—ಬರೆಯದಿರೆ ಮನಕೇಳದು. ಕ್ರಮೇಣ ಎದೆಯು ಒಣಗಿಹೋಗಿ, ಗುಂಡಿಬೀಳುವುದು ದೃಷ್ಟಿಮಾಂದ್ಯವಾಗಿ ಕಣ್ಣು ಒಳಸೇರುವುದು, ರಕ್ತವು ಕೆಡುವುದು; ಬಾಯಿಯಿಂದ ದುರ್ವಾಸನೆಯು ಹೊರಡುವುದು ಇಷ್ಟೆಲ್ಲಾ ಅನಾಹುತಗಳನ್ನು ದುಡ್ಡುಕೊಟ್ಟು ನಮ್ಮವರು ಕೊಂಡ ಚುಟ್ಟದಿಂದ ಸಿಕ್ಕುವುದೆಂದರೆ, ನಮ್ಮವರ ನಾಗರೀಕತೆಯನ್ನು ಏನೆಂದು ಬಣ್ಣಿಸಲಿ ಅಳಲೇ! ನಗಲೇ!

ಚುಟ್ಟದ ಸೋದರನೇ ನಸ್ಯ ಇದನ್ನು ಸೇವಿಸುವುದರಿಂದ, ಚುರುಕುತನವೂ, ನಾಸಿಕ ರೋಗವೂ (ಮೂಗಿನಿಂದ ರಕ್ತಸ್ರಾವ) ಗುಣವಾಗುವುದೆಂತ ಕೆಲವರು ವಾದಿಸುತ್ತಾರೆ ಇದು ಕೇವಲ ಭ್ರಮೆ ಅದನ್ನು ಸೇವಿಸುವಾಗ, ಅದು ಕಪಾಲಕ್ಕೆ ಹೋಗಿ, ಅಲ್ಲಿರುವ ಮಾಂಸ ಗ್ರಂಥಿಗಳನ್ನು ತಿಂದು ಹಾಕುವುದು ಮೆದುಳನ್ನು ಹಾಳುಮಾಡುವುದ ಯೋಚನಾಶಕ್ತಿಯನ್ನು ಕಡಿಮೆಮಾಡುವುದು ಆದರಕಾರಣ ಆ ಅಭ್ಯಾಸವಿರುವವರು ಯಾವ ಕೆಲಸ ಮಾಡುವುದಕ್ಕೂ ಮೊದಲು ಒಂದು ಚಿಟಕೆ ನಸ್ಯವನ್ನು ಮೂಗಿನ ಒಳಗೆ ತುರುಬಿದ [illegible] ಮಾಡರು [illegible] ಸೇದುವುದ [illegible] ದೊಡ್ಡದಾಗಿ ಕಣ್ಣುಗಳು ಕೆಂಪಾಗುವುವು ಪುಡಿಯು ಮೂಗಿನ ರಂಧ್ರದಲ್ಲಿ ತುಂಬಲ್ಪಡುವುದರಿಂದ ಶ್ವಾಸೋಚ್ಛ್ವಾಸಗಳಿಗೆ ಎಡೆಯಿಲ್ಲದೆ, ಬಾಯಿಯಲ್ಲಿಯೇ ಶ್ವಾಸ ಬಿಡಬೇಕಾಗ ವುದು ಪುಡಿಯು ಧಾತು ಶ್ವಾಸಕೋಶಗಳಿಗೆ ಹೋಗಿ ಉಸಿರು ಚೀಲಗಳನ್ನು ಹಾಳ ಮಾಡುವುದು ಇದು ದೇಹವನ್ನು ಮಾತ್ರವಲ್ಲ, ದೇಹದಲ್ಲಿ ಧರಿಸುವ ಉಡುಪುಗಳನ್ನು ಕೂಡಾ ಕೊಳೆಮಾಡುವುದು ಇದಲ್ಲದೆ, ಚರಂಡಿಗಳಿಂದ ಹಾರುವ ನೀರಿನಂತೆ ಪುಡಿ ಹಾಕುವವರಲ್ಲಿ ಕೆಲವರ ಮೂಗಿನಿಂದ ಒಂದು ವಿಧವಾದ ಕಪ್ಪಗಿರುವ ಸಿಂಬಳವು ಸದಾ ಕಾರುತ್ತಾ, ಒಂದೊಂದು ಸಮಯದಲ್ಲಿ ಬಾಯಿಗೂ ಬರುವುದು ಎಷ್ಟೋ ಜನರು ಇದನ್ನ ಗೋಡೆಗೋ ಶರೀರಗಳಿಗೋ ಸವರುವರು ಇದೆಲ್ಲಾ ನಸ್ಯದ ಪ್ರಭಾವವಲ್ಲವೇ!

ಇನ್ನು ಉಳಿದುದು ಒಂದೇ ವಿಷಯ—ಹೊಗೆಸೊಪ್ಪನ್ನು ಅಗಿಯುವುದು ಈ ದುರಭ್ಯಾಸವು ಸಾಧಾರಣವಾಗಿ ಕೀಳುಜಾತಿಯವರಲ್ಲಿರುವುದು ಹೆಚ್ಚಿನವರ ವೀಳೆಯದೊಡನೆ ಸೇರಿಸಿಕೊಂಡ ಅಗಿಯುವರು ಅರುಚಿಯಾದ ಪದಾರ್ಥವನ್ನು ಬಾಯಿಯು ತೆಗೆದುಕೊಳ್ಳಲಾರದುದರಿಂದ, ಇದನ್ನು ಅಗಿದಂತೆಲ್ಲ ಉಗುಳುತ್ತಿರಬೇಕು ಉಗುಳುವುದರಿಂದ ಜೀರ್ಣಶಕ್ತಿಯು ಮಂದವಾಗುವುದು ಗರ್ಭಿಣಿ ಸ್ತ್ರೀಯರು ಇದನ್ನು ಸೇವಿಸುವುದರಿಂದ, ಸ್ವಲ್ಪ ರಸವು ಗರ್ಭಕೋಶದೊಳಕ್ಕೆ ಹೋಗಿ ಮೃದುವಾದ ಭಾಗವನ್ನು ಸೇರಿ ಕ್ರಮೇಣ ಗರ್ಭಸ್ರಾವವನ್ನುಂಟುಮಾಡುವುದು. ಇದರ ಸೇವನೆಯಿಂದ ಶರೀರಕ್ಕೆ ಹಾನಿಯೇ ಹೊರತು ಮತ್ತೇನೂ ಲಾಭವಿಲ್ಲ. ಪ್ರತಿ ಒಬ್ಬರೂ ದಿನಕ್ಕೆ ಮೂರು ಕಾಸನ್ನು ಇದರ ಬಗ್ಗೆ ಖರ್ಚು ಮಾಡಿದರೆ ನಮ್ಮ ದೇಶದಲ್ಲಿ ಲಕ್ಷಾಂತರ ರೂಪಾಯಿಗಳು ವ್ಯಯವಾದಂತಾಗುವುದು. ಇಂತಹ ದುರುಪಯೋಗಕ್ಕೆ ವೆಚ್ಚಮಾಡುವ ಹಣವನ್ನು ಜನೋಪಕಾರದ ಯಾವ ಇತರ ಕಾರ್ಯಗಳಿಗಾದರೂ ವೆಚ್ಚಮಾಡಿದರೆ ಒಳ್ಳೆಯದಾಗಿರುವುದಲ್ಲವೇ?

ವಾಚಕರೇ, ಇಷ್ಟೆಲ್ಲಾ ಅನರ್ಥ ಪರಂಪರೆಗಳು, ಹೊಗೆಸೊಪ್ಪಿನಿಂದ ಉಂಟಾಗುತ್ತವೆ ಎಂದಮೇಲೆ ಇಂತಹ ಹಾಳ ದುರ್ವ್ಯಸನವನ್ನು ಸದೆಬಡೆದು, ಊರಿಂ ಹೊರದೂಡಬೇಡವೆ? ಆದರೇನು? ಈ ಪಿಶಾಚಕ್ಕೆ ಹೀನಜಾತಿಯವರಲ್ಲದೆ ಉಚ್ಚ ಶಿಕ್ಷಣವನ್ನು ಹೊಂದಿ ಪಂಡಿತರೆಂದು ಹೇಳಿಕೊಳ್ಳುವವರೂ, ಬಿ ಎ ಎಂ ಎ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪದವೀಧರರೂ, ದೊಡ್ಡ ದೊಡ್ಡ ಹುದ್ದೆದಾರರೂ ಮೊದಲಾದ ನಾಗರೀಕತೆಯುಳ್ಳವರು ದಾಸಾನುದಾಸರಾಗಿ, ದಿವಾರಾತ್ರಿಯನ್ನದೆ, ಸದಾ ಸೇವೆ ಮಾಡುತ್ತಿರುವುದನ್ನು ನೋಡಿದರೆ ತುಂಬಾ ಶೋಚನೀಯವಾಗುವುದು ಕಲ್ಲೆದೆಯಾದರೂ ಕರಗುವುದು ವಿದ್ವನ್ಮಣಿಗಳೇ ಏಳಿರಿ! ಹೊಡೆಯಿರಿ! ಈ ದುರ್ಗುಣಗಳೆಂಬ ಪಿಶಾಚಗಳನ್ನು ಓಡಿಸಿರಿ! ಕೀರ್ತಿಪಡೆಯಿರಿ!!

ಇನ್ನು ನನ್ನ ಅಂತಿಮದ ವಚನವೆಂದರೆ ಇಷ್ಟೇ ಹೊಗೆಸೊಪ್ಪನ್ನು ಸೇವಿಸಲು ಅಪೇಕ್ಷೆಯುಳ್ಳವರು, ಮೇಲಿನ ಎಲ್ಲಾ ವಿಷಯಗಳನ್ನು ಚೆನ್ನಾಗಿ ಆಲೋಚಿಸಿ, ಅನಾರೋಗ್ಯಕರವಾಗಿಯೂ, ಧನವನ್ನು ನಾಶಮಾಡತಕ್ಕದಾಗಿಯೂ ಅಸಹ್ಯಕರವಾಗಿಯೂ ನೀತಿದೂರವಾಗಿಯೂ ಇರುವ ಈ ಹಾಳು ಹೊಗೆಸೊಪ್ಪನ್ನು ಸೇವಿಸುವುದನ್ನು ಬಿಟ್ಟು ಆರೋಗ್ಯವಂತರಾಗಿ ಸುಖವಾಗಿರಬೇಕೆಂದು ಪ್ರಾರ್ಥಿಸುವ



ನಿಮ್ಮ ಮಕ್ಕಳ ಆರೋಗ್ಯವನ್ನು ಲೈಫ್‌ಬಾಯಿನಿಂದ

ಕಾಪಾಡಿರಿ

ನಿಮ್ಮ ಮಕ್ಕಳು ಆಟವಾಡಿದನಂತರ ಅವರ ಕೈ ಕಾಲುಗಳನ್ನು ನೋಡಿರಿ. ಧೂಳಿನಿಂದ ಕೂಡಿದೆಯಲ್ಲವೆ? ಮತ್ತು ಆ ಧೂಳಿನಲ್ಲಿ ವಿಷಕ್ರಿಮಿಗಳಿರುವುದನ್ನು ಯೋಚಿಸಿ! ನಿಮ್ಮ ಮಕ್ಕಳನ್ನು ಈ ಅಪಾಯದಿಂದ ತಪ್ಪಿಸಿ ಆರೋಗ್ಯವುಳ್ಳವರನ್ನಾಗಿ ಮಾಡಿ ಅವರು ಯಾವಾಗಲೂ ನಿಷ್ಪಾಪ ಹಾದಿಯಾದ ಲೈಫ್‌ಬಾಯ್‌ನಿಂದಲೇ ತೊಳೆಯಲಿ. ಲೈಫ್ ಬಾಯಿನ ಆರೋಗ್ಯಕರವಾದ ನೊರೆಯು ಪ್ರತ್ಯೇಕವಾದ ಪೋಷಕ ದ್ರವ್ಯದಿಂದ ಕೂಡಿ ಕೊಳೆಯನ್ನು ಚೆನ್ನಾಗಿ ಹೋಗಿಸುವುದಲ್ಲದೆ ಅಪಾಯಕರವಾದ ವಿಷಕ್ರಿಮಿಗಳನ್ನು ಸಂಪೂರ್ಣವಾಗಿ ನಾಶಮಾಡುತ್ತದೆ ನಿಮ್ಮ ಚಿಕ್ಕಮಕ್ಕಳ ಆರೋಗ್ಯವನ್ನು ಲೈಫ್ ಬಾಯ್‌ನಿಂದ ಸುರಕ್ಷಿತವಾಗಿ ಇಟ್ಟುಕೊಳ್ಳಿರಿ

ಲೈಫ್‌ಬಾಯ್ ಸಾಬೂನು

LIFEBUOY SOAP



ಇಂಡಿಯಾದಲ್ಲಿ ಲಿವರ್ ಬ್ರದರ್ಸ್ ಇಂಡಿಯಾ ಲಿಮಿಟೆಡ್ ಅವರಿಂದ ತಯಾರಿಸಿದುದು

LEVER BROTHERS (INDIA) LIMITED

K L 443 50

KAN. RES9

ತುಸು ವಿನೋದಗಳು.

ಮಗ — ಅಪ್ಪಾ ನಿನ್ನ ಕೂದಲುಗಳು ಬೆಳ್ಳಗೆ ಯಾಕೆ ಇವೆ?

ತಂದೆ.— ನಿನ್ನಂತಹ ಮಕ್ಕಳ ಸಲುವಾಗಿ ಚಿಂತೆ ಮಾಡಿ ಬೆಳ್ಳಗಾಗಿವೆ

ಮಗ — ಹಾಗಾದರೆ, ಅಜ್ಜನ ಕೂದಲು ಬಹಳ ಬೆಳ್ಳಗಿವೆಯಲ್ಲ! ಅದೇನು?

o o o o

ರಾಮು — ವೈದ್ಯ ನನಗೆ ತಲೆನೋವು ಬರುತ್ತಿತ್ತು, ಆದರೆ ಈಗ ಆ ಚಾಳಿಯನ್ನು ಬಿಟ್ಟಿರುವೆನು

ಕೃಷ್ಣ — ನನಗೂ ಆ ದುರಭ್ಯಾಸವುಂಟು

ರಾಮು — ನೀನೂ ಅದನ್ನು ಬಿಟ್ಟುಬಿಡು

o o o o

ರಾಕ — ಓ ದೊಡ್ಡ ಮನುಷ್ಯರ ಐಕ್ಯವು ಹೇಗೆ?

ಪ್ರೋಕ — ನಾಹೇಳಲೇ ಇಬ್ಬರ ಹೃದಯದಲ್ಲಿ ಅಲ್ಲಾರಾಮು (Alarum) ಆಗಬೇಕು

o o o o

ಹಳ್ಳಿಗ — ಜಾಹಿರಾತುಗಳನ್ನು ಪ್ರಕಟಿಸುವುದರಿಂದ ಏನು ಪ್ರಯೋಜನ?

ಪಟ್ಟಣಿಗ — ನಾನು ಈ ದಿವಸ ಒಬ್ಬ ಚಾರಕನು ಮನೆಕಾಯಲು ಬೇಕಾಗಿದೆ ಎಂದು ಜಾಹಿರಾತನ್ನು ಕೊಟ್ಟೆ ಈ ಹೊತ್ತಿನ ದಿನವೇ ನಮ್ಮ ಮನೆಯಲ್ಲಿ ಕಳುವಾಗಿರುವುದು

o o o o

ಧಿ ಮಂರಾವ್ — ನಿಮ್ಮ ಪ್ರೊಫೆಸರು ಹೇಗೆ ಹೇಳುತ್ತಾರೆ

ಧೂ ರಾವ್ — ಏನ್ ಕೇಳ್ತೀರಿ ಸಿದ್ದೆ ಬರೂ ಹಂಗ

o o o o

ಜಡ್ಜ — (ಒಬ್ಬ ಕಳ್ಳನನ್ನು ಕುರಿತು) ಈ ಕೊಡ್ಲಿ ನಿನ್ನದು ಹೌದೇನೋ?

ಕಳ್ಳ — ಅಲ್ಲರಿ

ಜಡ್ಜ — ನೀ ಕೊಲೆಮಾಡಿದೇನೊ?

ಕಳ್ಳ — ಇಲ್ಲರಿ

ಜಡ್ಜ — ಥೂ ಇಷ್ಟೆಲ್ಲಾ ಜನರು ಹೇಳ್ತಾರೆ— ನೀನೇ ಮಾಡಿದ್ದಿ ನಿನ್ನ ಕೈದುಮಾಡಬೇಕು

ಕಳ್ಳ — ಹೌದು ಸ್ವಾಮಿಯೂ, ನಾನೇ ಮಾಡಿದ್ದು ನಾನು, ನನ್ನದೂ ನಾನೇ ಮಾಡಿದ್ದು ಎಂಬ ಅಹಂಕಾರ ಇರಬಾರದು ಎಂದು ಹಾಗೆ ಹೇಳಿದೆ ಬಡವನನ್ನು ಕೊಲ್ಲಬ್ಯಾಡ್ರಿ.

The Combined Booking Agency

AND

The Joint Booking Office

MANGALORE South Kanara.

ಪ್ರಯಾಣದ ಅಪೂರ್ವ ವ್ಯವಸ್ಥೆಯೇ ನಮ್ಮ ಜಿಲ್ಲೆಯು ಸಂಪಾದಿಸಿರುವ ಗೌರವಗಳಲ್ಲೊಂದಾಗಿದೆ.

ಈ ತರದ ವ್ಯವಸ್ಥೆಯನ್ನು ಇನ್ನೆಲ್ಲಿಯೂ ಕಾಣಲಾರಿರಿ.

ಉತ್ತರದಿಂದ:– ಭಟ್ಕಳ, ಗೋಕರ್ಣ, ಶಿರ್ಸಿ, ಅಂಕೋಲಾ, ಕಾರವಾರ, ಅಲ್ಲದೆ ಗೋವಾ ವರೆಗೂ ಹೋಗಲಿಕ್ಕಾಗುತ್ತದೆ.

ಪೂರ್ವದಿಂದ:– ಹುಲಿಕಲ್, ಶಿವಮೊಗ್ಗಾ, ಆಗುಂಬೆ, ಚಾರ್ಮಾಡಿ, ಕಡೂರು, ಶಿರಾಡಿ, ಸಕಲೇಶಪುರ, ಹಾಸನ, ಮಡಕೇರಿ, ಮೈಸೂರು ಮೊದಲಾದ ಕಡೆಗಳಿಗೆ ಹೋಗಿ—ಮುಂಬಾಯಿಗೂ, ಮುಂಬಾಯಿ ಪ್ರಾಂತ್ಯದ ಎಲ್ಲಾ ಭಾಗಗಳಿಗೂ, ಬೆಂಗಳೂರಿಗೂ, ಮದ್ರಾಸಿಗೂ ರೈಲು ಮೂಲಕ ಪ್ರಯಾಣಿಸಬಹುದಾಗುತ್ತದೆ.

ದಕ್ಷಿಣದಲ್ಲಿ:– ಕಾಸರಗೋಡು ವರೆಗೆ ಸರ್ವಿಸುಗಳು ಇವೆ.

ಬಸ್ಸು ಸರ್ವಿಸುಗಳ ನೌಕರರೆಲ್ಲರೂ ಅತೀ ಸಭ್ಯರೀತಿಯಿಂದ ವರ್ತಿಸಬೇಕಾಗಿ ಎಚ್ಚರಿಸಲ್ಪಟ್ಟಿದ್ದಾರೆ.

ಪ್ರಯಾಣಿಕರು ತಮ್ಮ ಅನುಭವದ ಕುರಿತು ಬರೆಯುವ ಕಾಗದಗಳ ಮೇಲೆ ತುಂಬಾ ಲಕ್ಷ್ಯವಿಡಲಾಗುವುದು.

Joint Managers.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd. 1908

Church Gate Street, Fort - - BOMBAY.

1936 OUR VALUATION YEAR

Take a BOMBAY LIFE Policy now, and share in the profits



SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

Messrs Kochikar Brothers,

Madras Branch Secretaries.

Branches at:-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4.

ಕಾಂಗ್ರೆಸ್ಸೂ ಗವರ್ನರರೂ

ಕಾಂಗ್ರೆಸ್ ಶಾಸನ ಕ್ರಮದ ಮೇಲೆ ಮಹಾತ್ಮರ ಅಭಿಪ್ರಾಯ.

(ಲಂಡನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿಯು ಮಹಾತ್ಮರನ್ನು ನಾಗಪುರದಲ್ಲಿ ಸಂದರ್ಶಿಸಿ ಕೆಲವು ಪ್ರಶ್ನೆಗಳನ್ನು ಕೇಳಿದರು.—ಸರ್ ಸಾಮುವೆಲ್ ಹೋರರು ಹೇಳಿದ ಪ್ರಕಾರ ಗವರ್ನರರು ಭರವಸೆಗಳನ್ನು ಕೊಟ್ಟರೆ ನಮಗೆ ತೃಪ್ತಿಯಾದೀತೋ ೞ (ಸರ್ವಸಾಧಾರಣವಾಗಿ ಗವರ್ನರರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸುವುದಿಲ್ಲ. ಇದು ಸಾಮುವೆಲ್ ಹೋರರ ಅಭಿಪ್ರಾಯ.)

ಮಹಾತ್ಮರು—ಎಲ್ಲರಿಗೂ ಸರಿಯಾಗಿ ತಿಳಿಯುವಂತೆ "ಸರ್ವಸಾಧಾರಣವಾಗಿ" (ordinarily) ಎಂಬ ಶಬ್ದದ ಅನ್ವಯಾರ್ಥವೇನೆಂದು ವಿಶದಪಡಿಸಿದ ಮೇಲೆ ಗವರ್ನರರು ಭರವಸೆಗಳನ್ನು ಕೊಡುವುದಾದರೆ ನನಗೆ ತೃಪ್ತಿಯಹುದು.

ಪ್ರಶ್ನೆ—ಆ ಶಬ್ದಕ್ಕೆ ನೀವು ಅರ್ಥವಾದರೂ ಏನಿರಬಹುದು?

ಗಾಂಧಿ—ಆ ಶಬ್ದಕರ್ತನು ನಾನಲ್ಲವಾದುದರಿಂದ ಅದರ ಅರ್ಥವನ್ನು ಸರಕಾರವೇ ಕೊಡಬೇಕು ಕಾಂಗ್ರೆಸ್ ಕೇಳಿದ ಭರವಸೆಗಳು, ಒಂದು ಬುದ್ಧಿವಂತ ಕಾರ್ಯಕ್ರಮದ ಸಲುವಾಗಿರುತ್ತವೆ ಅಂತಹ ಕಾರ್ಯಕ್ರಮವನ್ನು ಕಾಂಗ್ರೆಸು ಅನುಸರಿಸುತ್ತಿರುವಾಗ ಗವರ್ನರರಾದವರ ಯಾವ ಅಡ್ಡಿಯೂ ಬರಬಾರದು ಅಂತಹ ಪ್ರಸಂಗವೇನಾದರೂ ಬಂದರೆ ಗವರ್ನರರು ಶಾಸನಸಭೆಯನ್ನು ರದ್ದುಮಾಡಿ ಪುನಃ ಚುನಾವಣೆಯನ್ನು ಮಾಡಿ, ಜನತೆಯ ಅಭಿಪ್ರಾಯವನ್ನು ತಿಳಕೊಳ್ಳಬೇಕು

ಪ್ರಶ್ನೆ—ಕಾಂಗ್ರೆಸ್ ಧ್ಯೇಯವು, ಉಕ್ಕಟಾವಸ್ಥೆಯನ್ನು ತಂದೊಡ್ಡುವುದೇ ಆದರೆ, ಗವರ್ನರರು ಕೊಟ್ಟ ಭರವಸೆಗಳಿಂದ ಏನುಮಾಡಬಹುದು?

ಗಾಂಧಿ—ಉಕ್ಕಟಾವಸ್ಥೆಯನ್ನು (deadlocks) ತಂದೊಡ್ಡುವುದೇ ಕಾಂಗ್ರೆಸಿನ ಧ್ಯೇಯವಲ್ಲ ತನ್ನ ಸ್ಥಾನವನ್ನು ಅಭೇದ್ಯಗೊಳಿಸಿ ಯಾರಿಗೂ ಬೇಡವಾದ ಈ ನವರಾಜಶಾಸನದ ಬದಲು ಜನತೆಗೆ ಒಪ್ಪಿದ ಇನ್ನೊಂದು ಆಡಳಿತ ರಚನೆಯನ್ನು ಸ್ಥಾಪಿಸುವುದು ಮತ್ತು ಯಾವ ಕಾರಣದಿಂದಲೂ ಬ್ರಿಟಿಷ ಮಂತ್ರಿಗಳು ತಡೆಯಲಾಗದಂತಹ ಶಕ್ತಿಯನ್ನು ಗಳಿಸುವುದೇ ಕಾಂಗ್ರೆಸ್ಸಿನ ಧ್ಯೇಯವಾಗಿದೆ

ಬ್ರಿಟಿಷರು ತಮ್ಮ ಸಹಬಲವನ್ನು ಉಪಯೋಗಿಸಬೇಕಲ್ಲದೆ ಬೇರೆ ದಾರಿ ಇಲ್ಲ

ಪ್ರಶ್ನೆ—ಗವರ್ನರರ ಅಡ್ಡಿ ಇರಬಾರದೆಂದೂ, ಶಾಸನಸಭೆಗಳು ರದ್ದುಮಾಡಬಾರದೆಂದೂ ನೀವು ಹೇಳುತ್ತೀರಿ ಈ ಎರಡರ ವ್ಯತ್ಯಾಸವೇನು?

ಗಾಂಧಿ—ಸಭ್ಯಗೃಹಸ್ಥರಂತೆ ಮಾತಾಡುವುದಾದರೆ ಶಾಸನಸಭೆಯನ್ನು ರದ್ದುಮಾಡಬಾರದೆಂಬ ಆಶ್ವಾಸನೆಯನ್ನು ನಾನು ಕೇಳಲಾರೆ ಆದರೆ ಮಂತ್ರಿಗಳ ದಿನನಿತ್ಯದ ಕೆಲಸದಲ್ಲಿ ಗವರ್ನರರು ಅಡ್ಡಿ ಬರಬಾರದಾಗಿ ನಾನು ಕೇಳುವೆನು ಬಿಕ್ಕಟ್ಟಿನ ವಿಷಯವಾದ ಮೇಲೆ ರಾಜೀನಾಮೆ ಕೊಡುವಂತಹ ಸ್ಥಾನದಲ್ಲಿ ಕಾಂಗ್ರೆಸ್ಸು ಇರಬೇಕೆಂದು ನಾನು ಬಯಸುವುದಿಲ್ಲ ಘನಸ್ತಿಕೆಯ ರಾಜೀನಾಮೆಗೆ ಘನಸ್ತಿಕೆಯ ಒಂದು ಉದ್ದಿಶ್ಯವಿರಬೇಕು, ಗವರ್ನರರಿಂದ ಭರವಸೆಗಳನ್ನು ಪಡೆಯದಿದ್ದರೆ, ಅವರ ಸೂಚಿ ಬುಟ್ಟಿತಕ್ಕೆ ಮಂತ್ರಿಗಳು ಸಿಲುಕಿ ರಾಜೀನಾಮೆ ಕೊಟ್ಟ, ವಿಷಯವು ಜನತೆಗೆ ತಿಳಿಸುವುದೇನೆಂಬುದು ಮಂತ್ರಿಗಳಿಗೇನೆ ಗೊತ್ತಾಗದೆ ಇರುವಂತದಿರಬಹುದು ಅಂತಹ ಕೋಚನೀಯ ಅವಸ್ಥೆಯು ಕಾಂಗ್ರೆಸ್ ಮಂತ್ರಿಗಳದ್ದಿರಲು ನಾನು ಬಯಸುವುದಿಲ್ಲ ಗವರ್ನರರಾದರೂ ಸಣ್ಣ ವಿಷಯದ ಮೇಲೆ ಮಂತ್ರಿಗಳನ್ನು ರಾಜೀನಾಮೆ ಕೊಡುವಂತೆ ಮಾಡಿದರೆ ಅದು ಅವರ ಹುಚ್ಚುತನವನ್ನು ತೋರಿಸುತ್ತದೆ ಆದುದರಿಂದ ಗವರ್ನರರು ಸಭ್ಯ ಗೃಹಸ್ಥರಾದ್ದರೆ ಅವರು ಜನಾಂಗದ ಗೌರವವನ್ನು ಮನ್ನಿಸಿ ತಮ್ಮ ಮಂತ್ರಿಗಳನ್ನು ರದ್ದುಮಾಡುವ ಮೊದಲು ಏನತ್ತು ಬಾರಿ ಯೋಚಿಸದಿರರು. ಕಾಂಗ್ರೆಸಿನವರನ್ನು ಇಂತಹ ಪ್ರಸಂಗಗಳಿಂದ ತಪ್ಪಿಸಲು ನಾನು ಪ್ರಯತ್ನಿಸುತ್ತಿದ್ದೇನೆ, ಮುಂಬಯಿನಂತೆ ಮಂತ್ರಿಗಳ ಗವರ್ನರರ ಸೂಚಿಬುಟ್ಟಿತಕ್ಕೆ ಪದೇ ಪದೇ ಬಿದ್ದು ಬೀಳುತ್ತಿದ್ದರು ಅವರಿಗೆ ರಾಜೀನಾಮೆ ಕೊಡುವ ದಾರಿಯೇ ಕಾಣುತ್ತಿರಲಿಲ್ಲ. ಅದರ ಕಾರಣವೇನಿರಬಹುದೊ ನಾನರಿಯೆ?

ಯುರೋಪಿನಲ್ಲಿ ಕಳವಳ.

ಕಳೆದೆರಡು ವಾರಗಳಿಂದ ಅಂತರ್‍ರಾಷ್ಟ್ರೀಯ ಪರಿಸ್ಥಿತಿಯು ವಿಷಮಾವಸ್ಥೆಯನ್ನು ತಾಳುತ್ತಲಿದೆ, ಪ್ರಪಂಚದ ಕೆಲವು ರಾಷ್ಟ್ರಗಳಲ್ಲಿ ಯುದ್ಧಭೀಕರತೆಯೂ, ಕೆಲವು ದೇಶಗಳಲ್ಲಿ ಯುದ್ಧ ಕಾತುರತೆಯೂ ಹರಡುತ್ತಲಿದೆ ಸ್ಪೈನಿನಲ್ಲಿ ಸರಕಾರದ ಕಡೆಯವರಿಗೆ ದಿನೇದಿನೇ ಮೇಲೆ ಆಗುತಿದ್ದ ವಿಜಯಗಳೂ, ಜನರಲ್ ಫ್ರೆಂಕೋವಿನ ಮೊರೊಕ್ಕೋ ಸೈನಿಕರು ಸರಕಾರದ ಕಡೆಗೆ ಸೇರುತ್ತಲಿರುವ ವಿಚಾರವೂ ಇಟಲಿ ಜರ್ಮನಿಗಳನ್ನು ಎದೆಗುಂದಿಸಿದೆ, ಯುರೋಪಿನ ಸಕಲ ರಾಷ್ಟ್ರಗಳೂ ಶೀಘ್ರ ಸಮರ ಸಲಕರಣೆಗಳನ್ನು ಸಂಗ್ರಹಿಸುತ್ತಲಿದ್ದಾರೆ

ಬಹು ಶೀಘ್ರದಲ್ಲೇ ಉಂಟಾಗಬಹುದಾದ ಭಯಂಕರ ಪರಿಸ್ಥಿತಿಯನ್ನು ತಪ್ಪಿಸಲು ಸರ್ವ ಪ್ರಯತ್ನಗಳಾಗುವುವಂತೆ ಪ್ರೆಸಿಡೆಂಟ ರೂಸ್‌ವೆಲ್ಟರು ಪ್ರಪಂಚ ಶಾಂತಿಗಾಗಿ ಒಂದು ಸಮ್ಮೇಳನವನ್ನು ಕರೆಯಲಿರುವರೆಂದು ತಿಳಿದು ಬಂದಿದೆ.

ಮಿ। ಲೆನ್ಸ್‌ಬರಿಯವರು ಈಗ ಯುರೋಪನ್ನು ಸಂಚರಿಸುತ್ತಲಿರುವರು ಮೊನ್ನೆ ಅವರು ಬರ್ಲಿನಿನಲ್ಲಿ ಹಿಟ್ಲರನನ್ನು ಕಂಡು ಮಾತನಾಡಿದರು ಇಟಲಿನ ಮುಸೋಲಿನಿಯನ್ನು ಭೇಟಿಮಾಡಲಿರುವರು ಅವರ ಸಂಚಾರದ ಉದ್ದೇಶವು ವಿಹಾರಾರ್ಥವಾಗಲ್ಲವೆಂತಲೂ ಪ್ರಪಂಚದ ಯುದ್ಧಕಾತುರತೆಯನ್ನು ಕಮ್ಮಿಮಾಡುವ ಪ್ರಯತ್ನ ಮಿ। ಲೆನ್ಸ್‌ಬರಿಯವರು ಪ್ರೆಸಿಡೆಂಟ್ ರೂಸ್‌ವೆಲ್ಟರ ಸೂಚನೆ ಮೇರೆಗೆ ಕೈಕೊಂಡಿರುವರೆಂದೂ ತಿಳಿದು ಬಂದಿರುತ್ತದೆ ಪ್ರಾಮುಖ್ಯ ರಾಷ್ಟ್ರಗಳ ಮುಖಂಡರೊಡನೆ ಪತ್ರವ್ಯವಹಾರ ನಡೆಸಿ ಪ್ರಪಂಚದಲ್ಲಿ ಭರದಿಂದ ನಡೆಯುವ ಶಸ್ತ್ರಸಂಗ್ರಹ ಸಾಧನವನ್ನು ಕಮ್ಮಿಮಾಡಲು ಪ್ರತ್ಯಕ್ಷವಾಗಿ ಅಪೇಕ್ಷಿಸಿದ್ದಲ್ಲಿ ತಾವೊಂದು ಶಾಂತಿ ಸಮ್ಮೇಳನವನ್ನು ಕೈಕೊಳ್ಳುವೆವೆಂದೂ ರೂಸ್‌ವೆಲ್ಟರು ತಿಳಿಸಿರುವರು ಇದರ ಸಂಬಂಧವಾದ ಮಾತುಕತೆಗಳಿಗಾಗಿ ಮಿ। ಲೆನ್ಸ್‌ಬರಿಯವರು ಯುರೋಪಿನ ಪ್ರಾಮುಖ್ಯ ಸರ್ವಾಧಿಕಾರಿಗಳನ್ನು ನೋಡಿ ಮಾತುಕತೆ ನಡೆಯಿಸುತ್ತಲಿದ್ದಾರೆ ಲ್ಯಾನ್ಸ್‌ಬರಿಯವರು ಇಂಗ್ಲೆಂಡಿನಲ್ಲಿರುವ ಪ್ರಬಲ ಶಾಂತಿಪ್ರಿಯ ಸಂಗದ ಮುಖಂಡರಿರುವುದರಿಂದ ರೂಸ್‌ವೆಲ್ಟರು ಇವರನ್ನು ಶಾಂತಿಪ್ರಿಯತ್ನದ ಕೆಲಸಗಳಿಗಾಗಿ ವಿನಂತಿಸಿಕೊಂಡಿರುವರು.

ಭೀಕರ ಪರಿಣಾಮ

ಇದೇ ಸಮಯದಲ್ಲಿ ರಾಷ್ಟ್ರಗಳೊಳಗಿದ ದ್ವೇಷಾಸೂಯೆಗಳು ಕ್ಷಣಕ್ಷಣಕ್ಕೂ ಹೆಚ್ಚುತ್ತಲಿವೆ ಮಿತ್ರರಾಷ್ಟ್ರಗಳು ಸ್ಪೈನಿನ ಸರಕಾರಕ್ಕೆ ಬೇಕಾದ ಯುದ್ಧೋಪಕರಣಗಳನ್ನು ಸಹಾಯಮಾಡುತ್ತವಲ್ಲದೆ, ಧನಸಹಾಯವನ್ನೂ ಅವುಗಳು ಕೊಡುತ್ತಲಿವೆ ಎಂದು ಇಟಲಿ ಜರ್ಮನಿಗಳು ದೂರು ಕೊಡಲಿದ್ದಾರೆ ಫ್ರಾನ್ಸಿಗೆ ಮೊರೊಕ್ಕೋವಿನಲ್ಲಿ ಕೊಟ್ಟ ವಿಶೇಷ ರಿಯಾಯತಿಗಳಿಂದಲೂ ಫ್ರಾನ್ಸು ಸ್ಪೈನ್ ಸರಕಾರಕ್ಕೆ ಸಹಾಯಮಾಡಲು ಕಾರಣವಂತೆ ಸ್ಪೈನಿನ ಸರಕಾರವು ಈಗ ಬಿಲ್ಬಾವೋ ಪಟ್ಟಣವನ್ನು ಸರ್ವ ಪ್ರಯತ್ನಗಳಿಂದ ವಶಪಡಿಸಿಕೊಳ್ಳಲು ಪ್ರಯತ್ನ ಪಡುತ್ತದೆ, ಕಾರಣ ಅಲ್ಲಿದೆ ವಿಶೇಷ ಸಂಪತ್ತು ಕಬ್ಬಿಣ ಖನಿಜ ವಸ್ತು ಗಣಿಗಳಿವೆಯಂತೆ

ಫ್ರಾನ್ಸು

ಜರ್ಮನಿಯ ವರ್ಸೇಲಿಸ್ ಒಪ್ಪಂದದ ಪ್ರಕಾರ ಫ್ರಾನ್ಸಿಗೆ ಸೇರಿದ್ದ ಅಂತರ್‍ರಾಷ್ಟ್ರೀಯ ಸೈನ್ಯ ಕಾಪಾಡುವ ಸಾರ್ ಪ್ರದೇಶವನ್ನು ಕಳೆದ ವರ್ಷ ಜರ್ಮನಿಯು ವಶಪಡಿಸಿಕೊಂಡ ಮೇಲೆ, ಫ್ರಾನ್ಸಿಗೆ ಅಲ್ಲಿಂದ ದಿಂದ ಸಿಗುತಿದ್ದ ವಿಪರೀತ ಲೋಹ ಪದಾರ್ಥಗಳ ಪೂರೈಕೆಯು ಕಮ್ಮಿಯಾಯಿತು ಪರಿಣಾಮವಾಗಿ ಫ್ರಾನ್ಸಿನ ಯುದ್ಧ ಸಲಕರಣೆಯು ಬಹಳವಾಗಿ ಕಡಿಮೆಯಾಯಿತು

ಮೆಡ್ರಿಡಿನ ಮೇಲೆ ಪುನಃ ದಾಳಿ

ಕಳೆದ ತಾ. 20ರಲ್ಲಿ ದಂಗೆಕಾರರ ವಿಮಾನಗಳು ಮೆಡ್ರಿಡ್ ನಗರವನ್ನು ಪುನಃ ದಾಳಿಮಾಡಿದುವು, ಬಾಂಬು ಮತ್ತು ಫಿರಂಗಿಯ ಸ್ಫೋಟಕಗಳು ನಗರದ ಸುತ್ತಲೂ ಅಗತ್ಯವಾಗಿದುವು ವಿಶೇಷ ಸಂಖ್ಯೆಯಲ್ಲಿ ನಗರವಾಸಿಯಲ್ಲಿ ಮರಣಪಟ್ಟಿರುವರೆಂದು ತಿಳಿಯಬಂದಿದೆ.

ಜರ್ಮನಿ

ಚಕೋಸ್ಲೋವಾಕಿಯಾ, ಸ್ಪೈನಿನಲ್ಲಿ, ಸಾಗುತ್ತಿರುವ ಹೊಸ ಸಂಚುಗಳಿಂದ ಜರ್ಮನಿಯು ಖಿನ್ನವಾಗಿರುತ್ತದೆ.

ರಶ್ಯವು—

ಜಪಾನಿಗೆ ಕಬ್ಬಿಣವನ್ನು ರಫ್ತುಮಾಡಿ ಕೊಡುವುದಿಲ್ಲವೆಂದಿದೆ, ರಶ್ಯದಿಂದ ಪಡಕೊಂಡ ಕಬ್ಬಿಣದಿಂದ ತಯಾರಿಸಿದ ಯುದ್ಧೋಪಕರಣಗಳು ಯುದ್ಧಕಾಲದಲ್ಲಿ ತಮ್ಮ ಮೇಲೆಯೇ ಉಪಯೋಗಿಸಲ್ಪಡಬಹುದೆಂದು ರಶ್ಯದ ಹೆದರಿಕೆ,

ಲೇಕ್ ಟಾನಾ ಪ್ರದೇಶವು ಅಬಿಸೀನಿಯಾ ಯುದ್ಧಕಾಲದಲ್ಲಿ ಹೇಗೆ ಪ್ರಾಮುಖ್ಯತೆಯನ್ನು ಪಡೆಯಿತೊ ಅದೇ ಪ್ರಕಾರ ಸ್ಪೈನಿನಲ್ಲಿ ಬಿಲ್ಬಾವೋ ಪ್ರದೇಶವು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ ಅಕಸ್ಮಾತ್ತಾಗಿ ಜನರಲ್ ಫ್ರೆಂಕೋವು ಅಪಜಯ ಹೊಂದಿದರೆ ಮುಸಲೋನಿಯು ಶಾಂತಿ ಪ್ರಯತ್ನಗಳಿಗೆ ಕೊಡಲ್ಪಟ್ಟಮಾಡಬಹುದು

ಬಿಲ್ಬಾವೊದಲ್ಲಿ ಆಹಾರಲೋಪ—

ಬಿಲ್ಬಾವೊ ಪ್ರದೇಶವನ್ನು ವಶಪಡಿಸುವ ತಮ್ಮ ಉದ್ದೇಶದಿಂದ ದಂಗೆಕಾರರು ಅಲ್ಲಿಗೆ ಹೋಗುವ ಆಹಾರ ಸಾಮಗ್ರಿಗಳ ಸರಬರಾಯಿಯನ್ನು ತಡೆದಿದ್ದರ ಪರಿಣಾಮವಾಗಿ ಅಲ್ಲಿಯ ಜನರು ಉಪವಾಸ ಬೀಳಲಾರಂಭಿಸಿದರು ಬ್ರಿಟಿಷ್ ಹಡಗುಗಳು ಆಹಾರ ಸಾಮಗ್ರಿಗಳನ್ನು ಉಪವಾಸ ಸಾಯುತಿದ್ದ ಜನರ ರಕ್ಷಣೆಗಾಗಿ ಕೊಂಡೊಯ್ಯುತ್ತಿರುವಾಗ ದಂಗೆಕಾರರ ಯುದ್ಧನಾವೆಗಳು ಅದನ್ನು ತಡೆದರು ಈಗ ಬ್ರಿಟಿಷ್ ಸರಕಾರವು ಜನರಲ್ ಫ್ರೆಂಕೋವಿಗೆ ಎಚ್ಚರಿಕೆ ಕೊಟ್ಟಿರುತ್ತದ ಆಪ್ಪರಕನೆಳ ಬಿಲು ಬ್ರಿಟಿಷ್ ಹಡಗಗಳು ಬಿಲ್ಬಾವೊವನ್ನು ಮುಟ್ಟಿದುವು

ಬಿಲ್ಬಾವೊ ಸಮೀಪಿಸಿತು—

ಜನರಲ್ ಮ್ಯೋಲಾರವರ ಕೈಕೆಳಗಿನ ದಂಗೆಕಾರರ ಪಡೆಯೊಂದು ಬಿಲ್ಬಾವೊ ಪ್ರದೇಶಕ್ಕೆ ಪ್ರವೇಶಿಸುವ ಹೆದ್ದಾರಿಯಂತಿರುವ ದ್ಯುರಾಂಗೊ ಪ್ರದೇಶವನ್ನು ವಶಪಡಿಸಿಕೊಂಡಿ ಎವರೆಂದು ತಿಳಿದುಬರುತ್ತದೆ

ವೀರ ರಮಣಿಯೋರ್ವಳ ಸಾಹಸ

ಸುಜೇನ್ ಎಂಬ ೨೩ ವರ್ಷ ವಯಸ್ಸಿನ ತರುಣಿಯೋರ್ವಳು ಬೆಸ್ಕ ಪ್ರಭುತ್ವದ ಸೈನ್ಯಭಾಗವೊಂದರ ನಾಯಕತ್ವವನ್ನು ವಹಿಸಿ ದಂಗೆಕಾರರೊಡನೆ ಅದ್ವಿತೀಯ ಸಾಹಸದಿಂದ ಅದ್ಭುತ ಪರಾಕ್ರಮವನ್ನು ತೋರಿಸಿದ ವರ್ತಮಾನವೊಂದು ತಿಳಿದುಬಂದಿದೆ ಆದಳು ಮೊನ್ನೆ ನಡೆದ ಕದನದಲ್ಲಿ ಮೃತಪಟ್ಟಿರುವಳು

LATEST NEWS.

ಗವರ್ನರರಿಗೆ ಕೊಟ್ಟಿರುವ ವಿಶಾಲವಾದ ಅಧಿಕಾರಗಳು ಅವನ್ನು ಪದೇ ಪದೇ ಉಪಯೋಗಿಸಲಿಕ್ಕೆ ಕೊಡಲ್ಪಟ್ಟಿಲ್ಲವೆಂದೂ, ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಅವುಗಳ ಉಪಯೋಗ ಮಾಡಲಾಗುವುದೆಂದೂ ಮಿ। ಆರ್ ಎ ಬಟ್ಲರರು ಪಾರ್ಲಿಮೆಂಟಿನಲ್ಲಿ ತಿಳಿಸಿದರು ಮಂತ್ರಿಗಳಾದವರ ಕೈಯಲ್ಲಿ ವಿಶೇಷಾಧಿಕಾರಗಳನ್ನು ಇರಿಸಲೋಸುಗವೇ ಪಾರ್ಲಿಮೆಂಟು ಈ ವಿಶೇಷಾಧಿಕಾರಗಳನ್ನು ಆಕ್ಟಿನಲ್ಲಿ ಸೇರಿಸಿತ್ತೆಂದೂ ಅವರು ಹೇಳಿದರು

ಸರ್ ಸಪ್ರೂರವರು ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಅಭಿಪ್ರಾಯ ಪಟ್ಟ ವಿಷಯಗಳು ತಪ್ಪು ತಿಳುವಳಿಕೆಯಾಗಿದೆ ಎಂದು ಪ್ರೊ। ಬೆರಿಡೇಲ್ ಕೀತ್‌ರವರು ಬರೆಯುತ್ತಾರೆ ಗಾಂಧಿಯವರ ಕೇಳಿಕೆಯು ಕಾನೂನು ಬಾಹಿರವಾದುದೆಂದು ಹೇಳುವ ಸಪ್ರೂರವರ ವಾದವು ತಪ್ಪೆಂದೂ, ಕಾಂಗ್ರೆಸ್ಸಿನವರು ಭರವಸೆಗಳನ್ನು ಕೇಳುವುದು ಮೈನಾರಿಟಿಗಳ ಹಿತವನ್ನು ನೋಯಿಸುವುದಕ್ಕೂ, ಸಂಸ್ಥಾನಗಳ ಹಕ್ಕುಗಳನ್ನು ಅಲ್ಲಗಳೆಯುವುದಕ್ಕೂ ಅಥವಾ ಸಿವಿಲ್ ಸರ್ವಿಸ್‌ನವರನ್ನು ಅನ್ಯಾಯವಾಗಿ ಶಿಕ್ಷಿಸುವುದಕ್ಕೂ ಅಲ್ಲವಾಗಿದೆ ಎಂದು ಪ್ರೊ। ಕೀತರು ಅಭಿಪ್ರಾಯ ಪಡುತ್ತಾರೆ

ಕರ್ನಾಟಕ ಸಂಘವು ಚಾಮರಾಜಪೇಟೆ, ಬೆಂಗಳೂರು ಸಿಟಿ. ಪ್ರಕಟಣೆ

ಕನ್ನಡ ಲೇಖಕರ ಗೋಷ್ಠಿ

ಈಗ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಗದ್ಯಪದ್ಯ ಲೇಖಕರುಗಳ ಗೋಷ್ಠಿಯೊಂದನು ಈ ವರ್ಷದ ವಿಶೇಷ ಸಾಹಿತ್ಯೋತ್ಸವದ ಅಂಗವಾಗಿ ಮೇ ೭ನೆಯ ತಾರೀಕು ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ಪರಿಷತ್ತಿನಲ್ಲಿ ಸೇರಿಸಬೇಕೆಂದು ಉದ್ದೇಶವಿದೆ ಈಚೆಗೆ ಬಹುಮಂದಿ ಯುವಕರು ಕನ್ನಡ ದಿನ ಪತ್ರಿಕೆ ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಕವಿತೆಗಳನ್ನೂ, ಸಣ್ಣ ಕತೆಗಳನ್ನೂ ನಾಟಕಗಳನ್ನೂ, ವಿವಿಧ ಪ್ರಬಂಧಗಳನ್ನೂ ಪ್ರಕಟಿಸುತ್ತಿರುತ್ತಾರೆ ಅವರಲ್ಲಿ ಅನೇಕರು ತಮ್ಮ ನಿಜವಾದ ಹೆಸರನ್ನು ಕೊಡದೆ ಸಂಕೇತ ನಾಮಧೇಯಗಳನ್ನು ಕೊಡುತ್ತಿದ್ದಾರೆ ನಿಜವಾದ ಹೆಸರುಗಳನ್ನು ಕೊಟ್ಟಿರುವವರ ವಿಳಾಸಗಳು ನಮಗೆ ಎಷ್ಟೋ ಸಂದರ್ಭಗಳಲ್ಲಿ ತಿಳಿಯದೆ ಇವೆ ಹೀಗೆ ನಾನಾ ವಿಧಗಳಲ್ಲಿ ಸಾಹಿತ್ಯಸೇವೆ ಮಾಡುತ್ತಿರುವವರೆಲ್ಲ ಒಂದು ಕಡೆ ಸೇರಿದ್ದಾದರೆ ಅವರಲ್ಲಿ ಪರಸ್ಪರ ಸ್ನೇಹ ಸೌಹಾರ್ದಗಳು ಬೆಳೆಯಲು ಅನುಕೂಲವಾದೀತು ಪರಸ್ಪರ ಸಾಹಿತಿಗಳ ಪರಿಚಯವನ್ನು ಸಂಪಾದಿಸಿಕೊಳ್ಳಲು ಹಿರಿಯರಾದವರು ಬಹುಮಂದಿ ಕುತೂಹಲವುಳ್ಳವರಾಗಿದ್ದಾರೆ ಆದಕ್ಕೂ ಸಹ ಮೇಲ್ಕಂಡ ಗೋಷ್ಠಿ ಉಪಯುಕ್ತವಾಗುವುದು ಆದಕಾರಣ ಗ್ರಂಥಲೇಖನ ಪತ್ರಿಕಾ ಲೇಖನ ನಾಟಕ ಸಣ್ಣ ಕಥೆ ಪ್ರಬಂಧ ಮೊದಲಾದ ನಾನಾ ವಿಧಗಳ ಸಾಹಿತ್ಯ ಕಾರ್ಯಗಳಲ್ಲಿ ಉದ್ಯುಕ್ತರಾಗಿರುವವರೆಲ್ಲರೂ ತಮ್ಮ ಹೆಸರು ವಿಳಾಸಗಳನ್ನು ಆದಷ್ಟು ಬೇಗ ಪರಿಷತ್ತಿನ ಕಾರ್ಯಾಲಯಕ್ಕೆ ಕಳುಹಿಸಿಕೊಟ್ಟು ಮೇ ೭ನೆಯ ತಾರೀಕು ನಡೆಯುವ ಗೋಷ್ಠಿಯಲ್ಲಿ ಭಾಗವಹಿಸಿ ಪರಿಷತ್ತಿನ ಉದ್ದೇಶವನ್ನು ಸಫಲಗೊಳಿಸಬೇಕೆಂದು ಈ ಮೂಲಕ ಪ್ರಾರ್ಥಿಸಿದೆ

ಎಸ್ ವಿ ರಂಗಣ್ಣ,
ಗೌರವ ಕಾರ್ಯದರ್ಶಿ ವಿಶೇಷ ಸಾಹಿತ್ಯೋತ್ಸವ

WANTED.

Applications are invited for the post of a Manager (Parupathygar) for the Sri Venkatramana Temple Mulki, on a salary of Rs 75/-per month

The applicants should have completed the age of 25 years and must belong to the Gowd Saraswat Brahmin Community

The applicant if selected, should furnish before taking up his appointment security either in cash or of immoveable proprety for a sum of Rs 2500/

Applications should be accompanied by true copies of testimonials if any and should reach the trustees on or before 8—5—'37

For further particulars apply to—

10-4-37 | THE TRUSTEES SRI VENKATRAMANA TEMPLE MOOLKY

ನೋಟೀಸು

ಮಂಗಳೂರು ತಾಲೂಕು ಬಂಟ್ವಾಳ ಮಾಗಣೆ ನಾವೂರು ಗ್ರಾಮದ ಮೇಗಿನ ನಾವೂರ ಗುತ್ತಿನ ಗುಮ್ಮ ಅಜಿಲರ ಸೊಸೆ ಚಿಕ್ಕಮ್ಮ ಹೆಂಗಸು ಈ ಮೂಲಕ ಸರ್ವ ಜನರಿಗೆ ತಿಳಿಸುವದೇನಂದರೆ —

ನಾನು ಬರಕೊಡುವ ಯಾವತ್ತು ರಸೀದಿ ದಸ್ತಾವೇಜು ವ ರಿಕಾರ್ಡುಗಳಿಗೆ ನನ್ನ ದಸ್ಕತು ಮತ್ತು ಯೆಡ ಹೆಬ್ಬೆಟ್ಟಿನ ಮೊಹರು ಸಹ ಹಾಕುವರೆ ನಾನು ನಿಶ್ಚಯಿಸಿರುವದರಿಂದ ಇನ್ನು ಮುಂದೆ ಅಂಥಾ ರಸೀದಿ ದಸ್ತಾವೇಜು ವ ರಿಕಾರ್ಡು ನನ್ನ ದಸ್ಕತು ಮತ್ತು ಯೆಡ ಹೆಬ್ಬೆಟ್ಟಿನ ಮೊಹರು ಇಲ್ಲದಿದ್ದರೆ ಅವುಗಳು ನನ್ನ ಮೇಲೆ ಸಿಂಧುವಾದದಲ್ಲವೆಂತಲೂ ಅವುಗಳನ್ನು ನಾನು ಬರಕೊಟ್ಟಿದ್ದಲ್ಲವೆಂತಲೂ ಅವುಗಳು ಮಂಜೂರಲ್ಲವೆಂತಲೂ ಗ್ರಹಿಸಿಕೊಳ್ಳತಕ್ಕದ್ದು.

ನಾವೂರು, 29—4—37. ಈ ಯೆಡ ಹೆಬ್ಬೆಟ್ಟಿನ ಗುರುತು ಚಿಕ್ಕಮ್ಮ ದುಃಖ.

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣೆ, ಆಕಸ್ಮಿತ ಅನಾಹುತ, ದುಸ್ಸಹವಾದ ನಿರಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುವುದು.

ಅದಕ್ಕೆ ಸಂಜೀವನ ಯಾವುದು?

೩೦ ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪರ್ಮಾಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ, ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ. ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯೆಂಬ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಬ್ರಾಂಡಾವರ್ತಿ ಪ್ರಖ್ಯಾತಿಪಟ್ಟ ಪರ್ಮಾಸನ್ ಮಾತ್ರೆಗಳನ್ನು ಉಪಯೋಗಿಸಿರಿ

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ. 4—0—0. ವಿ. ಪಿ. ಚಾರ್ಜು ಬೇರೆ.

ರೋಗಿಯ ಈ ಕುರಿತು ವಿವರಗಳನ್ನು ವಿಶದವಾಗಿ ಬರೆಯಿರಿ —

ಹೆಸರು, ವಿಳಾಸ, ಜಾತಿ, ಸ್ತ್ರೀಯಾ ಪುರುಷ, ಪ್ರಾಯ, ದೇಹದ ಭಾರ ವಿವಾಹಿತನೋ ಅಲ್ಲವೋ, ರೋಗದ ಲಕ್ಷಣ ನಿದ್ರೆ, ಆಹಾರ, ಮಲಶೋಧನೆ, ಅಲ್ಲದೆ ಉಬ್ಬಸ ಜ್ವರ, ಮೇಹ ಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು.

ಪರ್ಮಾಸನ್ ಪ್ರೊಡಕ್ಸ್, (ಇಂಡಿಯಾ.)

ಬ್ರೆಂಚ್: ಪಿ ವಿ ಕಾಮತ್,

ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್, ಒಸ್ಟೇರಿಯಾ ಎಂಡ್ ಇನ್ಸನಿಟಿ ಎಕ್ಸ್‌ಪರ್ಟ್,

386, ಲೇಮಿಂಗ್ಟನ್ ರೋಡ್, ಮುಂಬಯಿ ಮಾರ್ಕೆಟ್ ರೋಡ್, ಉಡುಪಿ

DIAMONDS! DIAMONDS!

BEST BRILLIANCY

K. R. K. SHET,

Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಿಶ್ಯನ್ ಹೈಸ್ಕೂಲ್ ಬಳಿ, ಮಂಗಳೂರು.

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ್ ಕಟ್ಟಿನ, ಸುಪೀರಿಯರ ಟಿಂಟ್ಟಿನ ಕಳೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ವಾದುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ.

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,

ಸರಾಫ ಮತ್ತು ಮೆಟಲ್ ಮರ್ಚೆಂಟ್,

ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of

Please call on or write to:-

PAINTERS

Simon & Co.,

Painters,

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,

ಸ್ಯಾನ್ ಬೋರ್ಡು ಇತ್ಯಾದಿಗಳನ್ನೂ

ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು.

ಈ ಸುಸಂಧರ್ಭವನ್ನು ಕಳಕೊಳ್ಳಬೇಡಿರಿ.

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್ತು

ಶ್ರೀಘ್ರ ಮಾರಾಟ ಗಟ್ಟಿಯಾದ ಯಂತ್ರಸಾಮಗ್ರಿಗಳು ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು, ಅತಿ ಕಮ್ಮಿ ಬೆಲೆಗಳು ಐದು ವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ಕೊಳ್ಳುವವರಿಗೆ ಟೈಮ್ ಪೀಸ್ ಪ್ರೀ ಸಿಕ್ಕೆಲಿನ ಉರುಟು ವಾಚು 1ಕ್ಕೆ ರೂ 2-15-0 ಅದರಲ್ಲಿ ಉತ್ತಮವಾದದ್ದು 3-8-0 ಬಂಗಾರದ ಗಿಲಿಟಿದ್ದದ್ದಕ್ಕೆ ರೂ. 4—8—0 ಶೀಡಿಯ ರೂ 5-0-0 ನಿಕ್ಕೆಲಿನ ಆಯತಾಕಾರದಕ್ಕೆ 6-8-0. ಅದರಲ್ಲಿ ಬಂಗಾರದ ಗಿಲಿಟದ್ದುದಕ್ಕೆ 7-8-0 ಲಿವರ್ ಪಾಕೆಟ್ ವಾಚಿಗೆ ಬರಿ ರೂ. 1-14-0. ಟೈಂಪೀಸ್ 1ಕ್ಕೆ ಬರಿ ರೂ 1-15-0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

M. L. Watch Co., 176 Cross Street, CALCUTTA

KANARA WATCH WORKS

WATCH MAKERS & GENERAL MERCHANTS

Hampankatta MANGALORE.

Dealers in:-
Watches, Clocks, Timepieces, Rolled Gold Jewellery & Sporting Materials etc,



Stockists of
West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones

Japan 8 Inch Octegon	Rs	6	0	0
„ 8 „ Regulator	„	6	12	0
„ 10 „ Octegon	„	6	8	0
„ 10 „ Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ವ ಗ್ರಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH

No 16

Sale Rs. 5-15-0.
SMART LEVER MOVEMENT
Strong & Durable at Low Price.



UNIQUE OPPORTUNITY, ONLY FOR ONE MONTH.
Available Roman or Arabic Figures.
Plain Silver Dial.

Guaranteed for 5 Years. Lever Pocket Watch Rs. 1-15-9.

No. 12. Chromium	4 Jewels	Rs.	8-8-0.
„ 14. „	7 „	„	10-8-0.
„ 15. „	15 „	„	12-8-0.
„ 17. Rolled Gold	15 „	„	16-8 0.

Rs. 1/- Extra for Radium Dial. Postage & Packing Extra.

BAPALAL & CO. (s) 116, Abdul Rehman Street, Bombay 3.

ಟೈಮ್ಸ್ 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಗಳ ಸಂಧಾನ ಸೂಚನೆ.

ಕಾಲಹರಣ ಮಾಡಿದರೆ ಉಪಯೋಗವಿಲ್ಲ—ಟೈಮ್ಸ್

ಈ ಸಲವೂ ಅಲಹಾಬಾದಿನಲ್ಲಿ ಸೇರುವ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಮಹಾತ್ಮಾ ಗಾಂಧಿಯವರೇ 'ಪ್ರಾಮುಖ್ಯ ವ್ಯಕ್ತಿಗಳಾಗುವರು ಎಂದು ಲಂಡನ್ನಿನ ಟೈಮ್ಸ್ ಪತ್ರಿಕೆಯು ತನ್ನ ಅಗ್ರಲೇಖದಲ್ಲಿ ಹೀಗೆ ಬರೆಯುತ್ತದೆ— "ಕಾಂಗ್ರೆಸ್ ಕೇಳಿದ ಭರವಸೆಗಳಿಂದ ಹಿಂದೂಸ್ಥಾನದಲ್ಲಿ ಇಷ್ಟು ಉತ್ಕಟಾವಸ್ಥೆಯಾಗಿದೆ. ಗವರ್ನರರಿಗೆ ಕೊಟ್ಟ ಸೂಚನೆಗಳ ಮತ್ತು ಸರಕಾರದ ಮನೋಭಾವದ ಕುರಿತು ತಪ್ಪು ತಿಳುವಳಿಕೆಯಾದುದರ ಮೂಲಕ ಉಂಟಾಗುವ ಈ ಪರಿಸ್ಥಿತಿಯು ಇನ್ನೂ ಶೋಚನೀಯವಾದದ್ದಾಗಿದೆ" ಎಂದು ಆ ಪತ್ರಿಕೆಯು ಪಶ್ಚಾತ್ತಾಪಪಡುತ್ತದೆ. ಮುಂದುವರಿಯುತ್ತಾ ಅದು ಹೀಗೆ ಬರೆಯುತ್ತದೆ-"ಬಹಳ ಪರಿಶ್ರಮದಿಂದ ತಯಾರಿಸಲ್ಪಟ್ಟ ನವರಾಜಾಂಗ ರಚನೆಯನ್ನು ನಡೆಸಿಕೊಂಡು ಬರುವಾಗ ಗವರ್ನರರು ಆಗಿಂದಾಗ್ಗೆ ಅಡ್ಡಿ ತಂದೊಡ್ಡುವರೆಂಬ ಭಯವನ್ನು ಗಾಂಧಿಯವರು ತಮ್ಮಲ್ಲಿರಗೊಂಡಿದ್ದಾರೆ. ಆದರೆ ಅದು ನಿಜವಾಗಿ ಅಸಂಭವವೇ ಸರಿ. ಗಾಂಧಿಯವರು ಈ ಅಭಿಪ್ರಾಯವನ್ನು ಈಗ ಇಟ್ಟುಕೊಂಡಿದ್ದಾರೆ. ಆದರೆ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗೆ ಅವರು ಈಚೆಗೆ ಕೊಟ್ಟ ಹೇಳಿಕೆಯ ಅಭಿಪ್ರಾಯವೇ ಬೇರೆಯಾಗಿದ್ದುದು ಕಂಡುಬರುತ್ತದೆ. ಗವರ್ನರರು ಶಾಸನ ಸಭೆಯನ್ನು ರದ್ದುಮಾಡಿ ಹೊಸ ಚುನಾವಣೆಯನ್ನು ಕರೆಯುವಂತಹ ಪ್ರಸಂಗಗಳು ಬರಬಹುದು ಎಂದು ಅವರೇ ಹೇಳಿರುತ್ತಾರೆ. ಅಂದ ಮೇಲೆ ಈಗಿನ ಘಟನೆಗಳು ಶಾಂತವಾಗುವಂತೆಯೇ ಸರಿ. ಇನ್ನು ರಾಜಿಪಂಚಾಯಿತಿಗಳಾಗುವುದು ಸುಲಭ. ಗಾಂಧಿಯವರ ಈಚೆಗಿನ ಹೇಳಿಕೆಯಿಂದ ಕಾಂಗ್ರೆಸ್ಸಿನವರು ತಮ್ಮ ವಿಚಾರಗಳನ್ನು ಗವರ್ನರರಲ್ಲಿ ಸರಿಯಾಗಿ ಹೇಳಿಕೊಂಡಲ್ಲಿ ಒಂದು ಪರಿಹಾರ ಸಮಸ್ಯೆಯು ದೊರಕಿದಂತಾಗುವುದು. ಇತ್ತಂಡದವರೂ ಮನಸ್ಸಿಕೆಯ ಯಾವದೊಂದನ್ನು ಎಣಿಸದೆ ಒಂದು ತಿಳುವಳಿಕೆಗೆ ಬರುವುದರಲ್ಲಿ ಯಾವ ತೊಂದರೆ ಇದ್ದಂತೆ ಕಾಣುವುದಿಲ್ಲ. ಇದರ ಮೇಲೆ ವೃಥಾ ಕಾಲಹರಣಮಾಡುವುದರ ಮೂಲಕ ಯಾವ ಸತ್ಕಾರ್ಯ ಸಾಧನೆಯೂ ಆಗಲಾರದು."

ಕಾಂಗ್ರೆಸ್ ಕೇಂದ್ರಗಳಲ್ಲಿ

ಟೈಮ್ಸ್ ಪತ್ರಿಕೆಯು ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯ ಮೇಲೆ ಒಪ್ಪಂದ ಸೂಚನೆಗಳನ್ನು ಕೊಟ್ಟು ಬರೆದ ಲೇಖನವನ್ನು ವಿಮರ್ಶಿಸುತ್ತಾ ಕಾಂಗ್ರೆಸ್ ವಾಲರೊಬ್ಬರು ಹೀಗೆ ಅಭಿಪ್ರಾಯಪಡುತ್ತಾರೆ. 'ಇಂಗ್ಲೆಂಡಿನ ಪತ್ರಿಕೆಗಳ ಅಭಿಪ್ರಾಯವನ್ನು ಒಂದು ಕ್ಷಣಕ್ಕೂ ತೆಗೆದುಕೊಳ್ಳಲಾಗುವುದಿಲ್ಲ. ಅದೂ ಹಿಂದೂಸ್ಥಾನದ ವಿಚಾರವಾಗಿ ಅವರು ಬರೆಯುವ ಲೇಖನಗಳು ಕುತಂತ್ರದವುಗಳೇ ಆಗಿರುತ್ತವೆ. ಟೈಮ್ಸ್ ಪತ್ರಿಕೆಯ ಮುಂಚಿನ ಮತ್ತು ಈಗಿನ ಲೇಖನಗಳಲ್ಲಿ ಧೋರಣೆ ವ್ಯತ್ಯಾಸವು ಸರಿಯಾಗಿ ಕಂಡುಬರುತ್ತದೆ. ಇಂಗ್ಲಿಷ್ ಪತ್ರಿಕೆಗಳಲ್ಲಿ ಇದೇನೂ ಹೊಸದಲ್ಲ'

ಮೆಂಚೆಸ್ಟರ್ ಗಾರ್ಡಿಯನ್.

'ಮಹಾಮುಖ್ಯ ಪೂರ್ವ ಭಾರತದ ಚರಿತ್ರೆಯನ್ನು' ಪರಿಶೀಲಿಸಿದಲ್ಲಿ ಅಸಹಕಾರದಿಂದ ಇಂಡಿಯಾ ಸರಕಾರದಿಂದ ತುಂಬಾ ನಷ್ಟವಾದಂತೆ ಕಾಣುತ್ತದೆ. ಆದುದರಿಂದ ಅಸಹಕಾರದಿಂದ ಯಾವ ಪ್ರಯೋಜನವು ಈಗಲೂ ಸಿಗಲಿಕ್ಕಿಲ್ಲ. ಈಗಿನ ತಪ್ಪು ತಿಳುವಳಿಕೆಗಳನ್ನು ಪರಿಹರಿಸಲು ಕಾಂಗ್ರೆಸಿನ ಕಡೆಯಿಂದಲೂ ತುಂಬಾ ಪ್ರಯತ್ನಗಳಾಗುತ್ತವೆ. ಗಾಂಧಿಯವರೇ ತಮ್ಮ ಅಭಿಪ್ರಾಯಗಳಲ್ಲಿ ಸ್ವಲ್ಪ ಮಟ್ಟಿಗೆ ತಪ್ಪು ಇದ್ದರೂ ಇರಬಹುದೆಂದು ಕೂಡಾ ಒಪ್ಪಿರುವರು' ಹೀಗೆಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆಯುತ್ತದೆ. ಮುಂದುವರಿಯುತ್ತಾ ಅದು ಈ ರೀತಿ ಅಭಿಪ್ರಾಯಪಡುತ್ತದೆ. 'ಚುನಾವಣೆಗಳಲ್ಲಿ ಅತ್ಯಭೂತ ಜಯಪಡೆದು ಬಂದ ಶ್ರೇಷ್ಠ ರಾಜಕೀಯ ಸಂಸ್ಥೆಯಂತೆ ತಮ್ಮನ್ನು ಕಾಣಬೇಕೆಂದು ಕಾಂಗ್ರೆಸು ಸರಕಾರವನ್ನು ಒತ್ತಾಯಪಡಿಸುತ್ತದೆ. ಕಾಂಗ್ರೆಸು ಮಂತ್ರಿಪದವಿಯನ್ನು ಸ್ವೀಕರಿಸಿದರೆ ಅದು ದಿನವಹಿ ನಡೆಸುವ ಕಾರ್ಯಕಲಾಪಗಳಲ್ಲಿ ಗವರ್ನರರ ಸಲಹೆಗಳನ್ನು ಕೇಳಲು ಇಷ್ಟವುಳ್ಳದ್ದಾಗಿದೆ. ಈ ವಿಷಯಗಳ ಮೇಲೆ ಭರವಸೆಗಳನ್ನು ಕೊಡುವುದು ಗವರ್ನರುಗಳಿಗೆ ಅಸಾಧ್ಯವೆ? ಕಾಂಗ್ರೆಸ್ ಶಾಸನ ಸಭೆಯೊಳಗೆ ಕೈಕೊಳ್ಳುವ ಕಾರ್ಯಕ್ರಮದಲ್ಲಿ, ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವ ಅವಶ್ಯಕತೆ ಇಲ್ಲವೆಂಬ ಸಂಗತಿಯನ್ನು ಗವರ್ನರರು ಕಾಂಗ್ರೆಸ್ ಮುಖಂಡರಿಗೆ ಏಕೆ ತಿಳಿಸಬಾರದು? ಇಷ್ಟರವರೆಗೆ ಕಾಂಗ್ರೆಸ್ಸೆ ಎಲ್ಲಾ ತರದ ಸೂಚನೆಗಳನ್ನೂ ಪರಿಹಾರ ಸಲಹೆಗಳನ್ನೂ ಕೊಟ್ಟದ್ದಾಯಿತು. ಒಪ್ಪಂದವು ಜರೂರಾಗಿ ಆಗಬೇಕಾಗಿದೆ. ಈಗ ಸರಕಾರವು ತನ್ನ ಅಭಿಪ್ರಾಯಗಳ ಮೇಲೆ ಸರಿಯಾದ ಜವಾಬನ್ನು ಕೊಡಬೇಕು.'

ಪತ್ರಿಕಾಭಿಪ್ರಾಯಗಳು

"ಬ್ರಿಟಿಷ್ ರಾಜನೀತಿಜ್ಞರ ಎಲ್ಲಾ ಬುದ್ಧಿವಂತಿಕೆ, ಅನುಭವಗಳು ಕಾಂಗ್ರೆಸ್ಸಿನ ಎದುರು ಅಪಜಯ ಹೊಂದಿದುವು. ಈಗಿನ ರಾಜಕೀಯ ಉತ್ಕಟಾವಸ್ಥೆಯಿಂದಾಗಿ ಅವರು ಗಾಬರಿಗೊಂಡಿರುವರು. ಅದಿಲ್ಲದಿರುತಿದ್ದರೆ ಅವರು ಇನ್ನೂ ಹೆಚ್ಚಿನ ಬುದ್ಧಿವಂತಿಕೆಯನ್ನು ತೋರಿಸುವವರಾಗುತಿದ್ದರು. ಬ್ರಿಟಿಷರ ಈಗಿನ ಎಲ್ಲಾ ಹೇಳಿಕೆ ಪ್ರಕಟಣೆಗಳನ್ನು ಓದುವಾಗ ಅವರು ಪೇಚಾಡುವ ರೀತಿಯು ಕಂಡುಬರುತ್ತದೆ. ನಾವೀಗ ನಮ್ಮ ಮುಂದಿರುವ ತೆರೆಗಳ ಬಡಿತವನ್ನು ಎದುರಿಸಲೇಬೇಕಾಗಿದೆ' ಹೀಗೆಂದು ಇಂಡಿಪೆಂಡೆಂಟ್ ಪತ್ರಿಕೆಯು ಬರೆಯುತ್ತದೆ.

ಅಮೃತಬಜಾರ.

"ಪ್ರಾಂತೀಯ ಗವರ್ನರರು ಆಯಾ ಪ್ರಾಂತ್ಯದ ಜನತೆಗೆ ಜವಾಬುದಾರರಾಗಲು ಲಾರ್ಡ್ ಜೆಟ್‌ಲ್ಯಾಂಡರು ಅವರನ್ನು ಬಿಡುವುದಿಲ್ಲ. ಇದರಿಂದ ಈಗಿನ ಸಮಸ್ಯೆಯು ಬಹಳ ಸುಲಭವಾದದ್ದಾಯಿತು. ಹಿಂದಿನಂತೆ ಇಂದೂ ಹಿಂದೂಸ್ಥಾನದ ಆಡಳಿತೆಗೆ ಬ್ರಿಟಿಷ್ ಜನತೆಯು ಹಕ್ಕುಳ್ಳದ್ದೆ ಅಥವಾ ಆ ಹಕ್ಕು ಭಾರತೀಯರಿಗೆ ಸೇರಿದ್ದೆ? ಇನ್ನು ಮುಂದೆ ಬ್ರಿಟಿಷ್ ಜನತೆಯು ಭಾರತ ಸರಕಾರದ ಆಡಳಿತೆಯ ಹಕ್ಕುಳ್ಳವರಾಗುವುದೆಂದರೆ ಅದೊಂದು ಕಟ್ಟುಕತೆಯಾದಂತೆಯೇ ಸರಿ. ಇನ್ನು ಮುಂದೆ ಆ ತರದ ಜವಾಬುದಾರಿಯನ್ನು ನಡೆಸ ನೋಡುವುದು ಕಷ್ಟತರವೆಂದೆನ್ನಬೇಕು.'

ಪತ್ರಿಕೆ.

ಪತ್ರಿಕಾಭಿಪ್ರಾಯಗಳು

ರವೀಂದ್ರರ ಸೂಚನೆ.

ಮುಖಂಡರ ಮಾತುಗಳು

ಕವಿ ರವೀಂದ್ರರು ಮಂತ್ರಿಪದವಿಗಳ ಮೇಲೆ

"ಅಧಿಕಾರ ಸ್ವೀಕಾರವೆಂಬುದು ಅದೊಂದು ಬಾಹ್ಯಾಡಂಬರದ ಮೋಹಗೊಳಿಸುವ ವಿಷಯವಾಗಿದೆ. ಅದರಲ್ಲಿಯೂ ಹಿಂದುಗಳಾದವರು ಇದರ ವಿಷಯವಾಗಿ ವಿಶೇಷ ತಿಳುವಳಿಕೆಯುಳ್ಳವರಾಗಿರಬೇಕು" ಹೀಗೆಂದು ಕವಿ ರವೀಂದ್ರರು ಸಿಂದ್ ಪ್ರಾಂತ್ಯಕ್ಕೆ ಕಳುಹಿಸಿದ ಸಂದೇಶದಲ್ಲಿ ತಿಳಿಸುತ್ತಾರೆ. "ಸಿಂದ್ ಪ್ರಾಂತ್ಯವು ದೇಶದ್ರೋಹ ಕಾರ್ಯ ಮಾಡುತ್ತದೆಂದು ಅಪಾದಿತವಾಗಿದೆ. ಸಿಂದ್‌ನಲ್ಲಿ ಹಿಂದೂ ಮುಸ್ಲಿಂ ಘರ್ಷಣಗಳಿರಬಹುದು. ಮಂತ್ರಿಪದವಿಗಳ ಮಿರುಗಿಗೆ ನಾವು ಮೈಮರೆಯಬಾರದು. ಅದಕ್ಕಿಂತಲೂ ಉನ್ನತ ಧ್ಯೇಯಗಳನ್ನು ಸಾಧಿಸಲು ನಾವು ಪ್ರಯತ್ನಪಡಬೇಕು. ಇದನ್ನು ಮಾಡದಿದ್ದರೆ ನಾವು ದೇಶದ್ರೋಹಿಗಳೇ ಸರಿ. ಪ್ರತಿಯೊಬ್ಬ ಭಾರತೀಯನೂ ಇಂದು ದೇಶದಲ್ಲಿನ ರಾಜಕೀಯ ಘಟನಾವಳಿಗಳನ್ನೂ ಸರಿಯಾಗಿ ತಿಳಕೊಳ್ಳಬೇಕು. ಇದರಿಂದ ಅಧಿಕಾರದ ಮೋಹಕ್ಕೆ ಅವನು ಬಲಿಬೀಳದಂತೆ ತಪ್ಪಿಸಿಕೊಳ್ಳಬಹುದು. ಕಸುಬು ಶಿಕಾರಿಗಳ ಸ್ವಾರ್ಥದ ಕೈಯೊಳಗೆ ಇಂದಿನ ಸಿಂದ್ ಪ್ರಾಂತ್ಯವು ಸಿಲುಕಿದೆ. ಸರಿಯಾದ ವ್ಯಕ್ತಿಗಳು ಸ್ಥಾನಗಳಲ್ಲಿ ಇಲ್ಲವಾಗಿದ್ದಾರೆ.'

'ಪ್ರತಿಸಿಕ್ಕವೂ ಸರಕಾರದ ಒಂದು ನೂರು ಆರ್ಡರ್ ಪತ್ರಗಳಿಗೆ ಸಹಿ ಹಾಕುವ ಅವಶ್ಯಕತೆ ಇದೆ. ಗವರ್ನರರ ಕಾರ್ಯದರ್ಶಿಗಳು ಸ್ವಂತವಾಗಿ ಈ ಕೆಲಸವನ್ನು ಮಾಡುವ ಹಕ್ಕುಳ್ಳವರಾಗಿಲ್ಲ. ಇದಕ್ಕೆ ಮುಖ್ಯ ಮಂತ್ರಿಗಳ ಅನುಮೋದನೆಯು ಅತ್ಯಾವಶ್ಯಕವಾಗಿದೆ. ಗವರ್ನರರಿಗೆ ಕೂಡಾ ಇಂತಹ ಕೆಲಸವನ್ನು ಒಬ್ಬರಾಗಿ ಕೈಕೊಳ್ಳುವುದು ಅಸಾಧ್ಯವಾದುದು' ಇದು ಗೊಂಬೆ ಮಂತ್ರಿಮಂಡಳದ ಸರ್ ಕೆ. ವಿ. ರೆಡ್ಡಿಯವರು ಕೊಟ್ಟ ಒಂದು ಭಾಷಣದ ಭಾಗ. 'ಹಿತವಾದ' ಪತ್ರಿಕೆಯು ಇದನ್ನು ಟೀಕಿಸುತ್ತಾ ಪತ್ರಿಕೆಯು ಈ ಕೆಳಗಿನಂತೆ ಬರೆಯುತ್ತದೆ. ಸರ್ ಕೆ. ವಿ. ರೆಡ್ಡಿಯವರು ಬಹುಶಃ ಸರಕಾರದ ಈ ಆಜ್ಞೆಗಳಿಗೆ ಸಹಿ ಮಾಡಲೋಸುಗವೇ ಮಂತ್ರಿಪದವಿಯನ್ನು ಸ್ವೀಕರಿಸಿದ್ದಿರಬೇಕು. ಸರಕಾರದ ಆಜ್ಞೆಗಳನ್ನು ಸಹಿಮಾಡಲು ತಾವೇ ಯಥಾಯೋಗ್ಯರಾದವರೆಂದು ಶ್ರೀ ಸರ್, ರೆಡ್ಡಿಯವರು ತಿಳಕೊಂಡಂತೆ ಕಾಣುತ್ತದೆ. ನಿರ್ದಾಕ್ಷಿಣ್ಯವಾಗಿ ಹೇಳುವುದಾದರೆ, ಒಂದು 'ವಾಕಿಂಗ್ ಸ್ಟಿಕನ್ನು' ಮಂತ್ರಿಯನ್ನಾಗಿ ಮಾಡಿದರೆ ಅದರಿಂದಲೂ ಸರಕಾರದ ಆಜ್ಞೆಗಳಿಗೆ ಸಹಿ ಮಾಡಿಸಲುಬಹುದು. ಸರ್ ರೆಡ್ಡಿಯವರು ಒಂದು ವೇಳೆ ಮಂತ್ರಿಗಳಾಗದಿದ್ದರೆ ಅವರ ಸ್ಥಾನದಲ್ಲಿ ಮತ್ತೊಬ್ಬರ್‍ಯಾರಾದರೂ ಆಗುತಿದ್ದರು. ನಾವು ವ್ಯಕ್ತಿ ಟೀಕೆಗಳನ್ನು ಮಾಡಬಾರದು. ಆದರೂ ಕಸಬು ಶಿಕಾರಿಗೂ (job hunting) ಒಂದು ಮೇರೆ ಇದೆ. ಅದು ಮೀರಬಾರದು"

ಸಂಯುಕ್ತ ಪ್ರಾಂತ್ಯದ "ಗೊಂಬೆ ಮಂತ್ರಿಗಳು" ಜನತೆಯ ಹಿತದ ಒಂದು ಸವಿಸ್ತಾರದ ಕಾರ್ಯಕ್ರಮವನ್ನು ಗವರ್ನರರ ಮುಂದಿಡುವರಿದ್ದಾರೆಂಬ ವಿಷಯವನ್ನು ಅವರು ಪ್ರಕಟಮಾಡಿದ್ದಾರೆ. ಅಲ್ಲಿಯ ಶಾಸನ ಸಭೆಯ ಕಾಂಗ್ರೆಸ್ ಪಾಳೆಯ ಕಾರ್ಯದರ್ಶಿಯರಾದ ಸ್ವಾಮಿ ಸಂಪೂರ್ಣಾನಂದರವರು "ಗೊಂಬೆ ಮಂತ್ರಿಗಳ ವರ್ತನೆಯನ್ನು ತುಂಬಾ ಚರ್ಚಿಸಿರುವರು. ತಾತ್ಕಾಲಿಕ ಮಂತ್ರಿಗಳು ತಮ್ಮ ಕಾರ್ಯಕ್ರಮವನ್ನು ಸಾರ್ವಜನಿಕದಲ್ಲಿ ಜನತೆಯ ಮುಂದೆ ಹೇಳಲು ನಾಚಿಕೆಪಟ್ಟುಕೊಳ್ಳುವುದೇಕೆ? ಅದಕ್ಕೂ ಇಂಗ್ಲೆಂಡಿನಿಂದ ಹುಕುಂ ಬರಬೇಕೆಂದು ಕಾಣುತ್ತದೆ. ಜನತೆಯ ಅಭಿಪ್ರಾಯಗಳನ್ನು ತಿರಸ್ಕರಿಸಿ ನಡೆಯುವವರಿಗೆ ಇನ್ನಾವುದರೂ ಮಾಡಲು ಹಕ್ಕಿರುತ್ತದೆ. ಈ ಮಂತ್ರಿಗಳು ಬ್ರಿಟಿಷ್ ಸಾಮ್ರಾಜ್ಯ ಶಾಹಿ ಸತ್ತೆಯ ಉಪಕರಣಗಳೆಂದು ಒಪ್ಪಿಕೊಳ್ಳಲಾರದು. ಆದರೆ ಪರಕೀಯ ಬಂಧನವನ್ನು ಕಿತ್ತೊಗೆದು ಸ್ವತಂತ್ರ ಜವಾಬ್ದಾರಿಯ ಆಡಳಿತವನ್ನು ನೋಡ ನೋಡಿದ ಜನತೆಯನ್ನು ಈಗ ಅವರು ಮುಂಚಿನಂತೆ ಹೀನದೃಷ್ಟಿಯಿಂದ ಕಾಣಲಾಗದು. ಜನತೆಯ ಅಭಿಪ್ರಾಯವನ್ನು ತಿರಸ್ಕರಿಸಲೋಸುಗ ಸರಕಾರವು ಈ ಗೊಂಬೆ ಮಂತ್ರಿಗಳನ್ನು ಸಾಧನವಾಗಿ ಉಪಯೋಗಿಸಿಕೊಂಡಿತು. ಈ ಮಂತ್ರಿಗಳು ತಮ್ಮ ಸೇವೆಯನ್ನು ಸರಕಾರಕ್ಕೆ ಒಪ್ಪಿಸಿತು. ಆದರೆ ಜನತೆಯು ತನ್ನ ವಿಶ್ವಾಸವನ್ನು ಈ ದೇಶದಲ್ಲಿರುವ ಬ್ರಿಟಿಷ್ ಸಾಮ್ರಾಜ್ಯದ ಸಾಹಿತ್ಯವನ್ನು ಮುರಿಯಲು ಹೊರಟವರೆ ನಾವು ಸಂಸ್ಥೆಯ ಮೇಲೆ ಇಟ್ಟಿರುತ್ತದೆಂಬ ವಾದವು ಈ ಈ "ಗೊಂಬೆ ಮಂತ್ರಿಗಳಿಗೇನೂ ತಿಳಿಯದ ವಿಷಯವಲ್ಲ.

ನಿದ್ರಾರಹಿತ ಕುಬೇರ

'ಲಾರ್ಡ್ ನಫೀಲ್ಡರು ಪ್ರಪಂಚದ ಮಿಲಿಯಾಪತಿಗಳಿಗೆ ಬೇಕಾಗುವ ಮೋಟಾರು ವಾಹನಗಳನ್ನು ತಯಾರಿಸಬಹುದು. ಮಿಲಿಯಾಪತಿ ಪವನುಗಳನ್ನು ದಾನಮಾಡಿ, ದಾನಶೂರ ಕರ್ಣನೆಂಬ ಬಿರುದನ್ನು ಸಂಪಾದಿಸಬಹುದು. ಆದರೂ ಇವರಿಗೆ ಸಂಪಾದಿಸಲಾಗದ ಒಂದು ವಿಷಯವಿದೆ-ನಿದ್ರೆ. ವೈದ್ಯಕೀಯ ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟ ಅದ್ಭುತ ವಿಷಯಗಳಲ್ಲಿ ಇವರದೂ ಒಂದು ಆಗಿರುತ್ತದೆ. [illegible]ಗಳಲ್ಲಿ ಇವರು ಬರೀ ಒಂದು ತಾಸು ಮಾತ್ರ 'ದ್ರಿಸುತ್ತಾರಂತೆ. ಇವರ ಕೈಕೆಳಗೆ ಕೆಲಸ ಮಾಡುತ್ತಿರುವ ಕೂಲಿಗಾರರಿಗಿರುವ ನಿದ್ರಾನಂದವೂ ಇವರಿಗಿಲ್ಲ. ಬಾಲ್ಯದಿಂದಲೂ ಇವರಿಗೆ [illegible] ರೋಗವು ಇದೆಯಂತೆ. ಚಿಕ್ಕಂದಿನಿಂದ ಅವರು ಇಷ್ಟರ ತನಕ ಒಂದು ಕ್ಷಣವಾದರೂ ಸರಿಯಾಗಿ ನಿದ್ರೆಯಲ್ಲಿ ಮೈಮರೆತಂತೆ ಇಲ್ಲವೆಂದು ಅವರು ಹೇಳುತ್ತಾರೆ. ಯಥಾಪ್ರಕಾರ ಅವರು ಹಾಸಿಗೆಯಲ್ಲಿ ಮಲಗುತ್ತಾರೆ. ಆದರೆ ಅವರಿಗೆ ನಿದ್ರೆಯೆಂಬುದೇ ಬರುವುದಿಲ್ಲ.

ಪ್ರಕಟಣೆ.

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ.

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತರಿಸಿಕೊಳ್ಳುವದೆ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವದೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ.

ಆದ್ರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವತಿಪಡಿಯ ತಕ್ಕದ್ದು. ತಿಳಿದಿರುವುದು.

ESTD: 1906

CANARA BANK

LIMITED.

INCORPORATED IN BRITISH INDIA

Member, Reserve Bank of India.
Member, Clearing House Bombay.

Subscribed Capital	6,00,000
Paid up Capital	3,33,240
Reserves	4,50,000
Deposits	79,64,000
Total Resources	98,00,000

Offices:

BOMBAY-FORT	MANGALORE.
BOMBAY-MANDVI	BANGALORE.
ALLEPPEY	CHIKAMAGALUR
ERNAKULAM	ARSIKERE
COCHIN.	DAVANAGERE
CALICUT	HUBLI
CANNANORE	DHARWAR, Etc., Etc

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾ?

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು
ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡ್ ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿಯಾದದ್ದು.

ಮೇಹರೋಗ, ಶರೀರ ದುರ್ಬಲತೆ, ನಿಶ್ಶಕ್ತಿ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಏಕೋಪವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದ ವೈದ್ಯ ಸಮಾಜ, ಪೆಂಡೇಟಿ.
P O Pendepi (ನೆಲ್ಲೂರು ಡಿ)

'Dil Roz' (Regd)

Dil Roz' is a sure cure for Oriental sores local sores all kinds of deep rooted sores, skin eruptions, Pimples Eczema, Ringworm, Sinus, Fistula auxillary Abscess

There is no need of dressing the wounds and are baths prohibited

Price Rs. 2
Postage extra

TAHIR DIN
Anarkali, LAHORE.

BEHAR CHEMICAL WORKS, BHAGALPUR.

ಗೊನೊಕ್ಯೂರು.

ಕೆಟ್ಟ ಬಗೆಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ದಿವ್ಯವಾದ ಔಷಧವಾಗಿದೆ ಒಂದೇ ದಿನದ ಔಷಧ ಉಪಯೋಗದಿಂದ ಗುಣ ಕಂಡು ಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ—ಧಾತು ದಪ್ಪವಿದ್ದು ಹರಿದು ಬಿಟ್ಟು ಹೋಗುವುದು ಶಕ್ತಿಗ್ರಂಥಿಗಳ ಸಂಬಂಧವಾಗಿ ಆಳವಾದ ಗುಳ್ಳೆಗಳು ಏಳೋಣ ಮುಕ್ತವಾಗುವಾಗ್ಯ ಉರಿಯುವುದು, ಇದರಿಂದ ನಷ್ಟಂಸತ್ತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧ ಸೀಸೆ 1ಕ್ಕೆ ರೂ 2—0—0

ವಿಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ ವಿದ್ಯಾರ್ಥಿಗಳು ತಮ್ಮ ಓದುವಿಕೆಯಲ್ಲಿಯೇ ಆಸಕ್ತರಾಗಿದ್ದು, ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದು ಕೊಂಡು ಸ್ವಭಾವಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ, ಅಂಥವರು ಈ ವೈಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಚುರುಕು ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ. 2-0-0.

ಏಜೆಂಟರು:—ಷಾ ಕಂಪೆನಿ,
ಗವರ್ನ್ಮೆಂಟ್ ಕಾಲೇಜ್ ಎದುರು

ಭಯಂಕರವಾದ ಯಾತನೆ!

ಈ ನೋವು ನಿಮ್ಮನ್ನು ತಿಂದುಹಾಕುತ್ತದೆ ಜೀವನದಲ್ಲಿ ಬೇಸರಿಕೆ ಹುಟ್ಟಿಸುತ್ತದೆ ತಾಯಿತನದ ಸಂತೋಷವನ್ನು ಹೋಗಲಾಡಿಸುತ್ತದೆ ಎಚ್ಚರದಿಂದಿರಿ' ಇದು

ಋತುಸಂಬಂಧವಾದ ನೋವು!

ಋತು ಸಂಬಂಧವಾದ ಅಥವಾ ಗರ್ಭಾಶಯ ಸಂಬಂಧವಾದ ನೋವನ್ನು ನಿರ್ಮೂಲವಾಡದಿದ್ದಲ್ಲಿ ಹೆಂಗಸಿಗೆ ಸುಖಸಂತೋಷಗಳಿರುವುದಿಲ್ಲ 'ಲೋಧ್ರ'ವನ್ನು ತೆಗೆದುಕೊಂಡು ಆರೋಗ್ಯದಿಂದಲೂ ಸಂತೋಷವಾಗಿಯೂ ಇರಿ ಈ ದಿವಸವೇ ತೆಗೆದುಕೊಳ್ಳಲು ಪ್ರಾರಂಭಿಸಿ

ಲೋಧ್ರ —ಶ್ರೇಷ್ಠತಮ ಗರ್ಭಾಶಯ ರೋಗ ನಿವಾರಿಣಿ

ತಯಾರಿಸುವವರು — ಕೇಸರಿ ಕುಟೀರಂ, ಎಗ್ಮೋರ್, ಮದರಾಸು
ಮಂಗಳೂರ ಪ್ರವರ್ತಕರು — ದಿ. ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

TEST YOUR EYES

By the Electro Ophthalmoscope

All Varities of Frames & Lenses. AT

The Mangalore Trading Association Ltd.
Sight Testing Ophthalmic Opticians,
Car Street, MANGALORE

ಟೈಮ್ಸ್ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗಳ ಸಂಧಾನ ಸೂಚನ.

ಕಾಲಹರಣ ಮಾಡಿದರೆ ಉಪಯೋಗವಿಲ್ಲ—ಟೈಮ್ಸ್.

ಈ ಸಲವೂ ಅಲಹಾಬಾದಿನಲ್ಲಿ ಸೇರುವ ಕಾಂಗ್ರೆಸ್ ಕಮಿಟಿಯ ಮೀಟಿಂಗಿನಲ್ಲಿ ಮಹಾತ್ಮಾ ಗಾಂಧಿಯವರೇ ಪ್ರಾಮುಖ್ಯ ವ್ಯಕ್ತಿಗಳಾಗುವರು ಎಂದು ಲಂಡನಿನ ಟೈಮ್ಸ್ ಪತ್ರಿಕೆಯು ತನ್ನ ಅಗ್ರಲೇಖದಲ್ಲಿ ಹೀಗೆ ಬರೆಯುತ್ತದೆ—"ಕಾಂಗ್ರೆಸ್ ಕೇಳಿದ ಭರವಸೆಗಳಿಂದ ಹಿಂದೂಸ್ಥಾನದಲ್ಲಿ ಇಷ್ಟು ಉತ್ಕಟಾವಸ್ಥೆಯಾಗಿದೆ. ಗವರ್ನರರಿಗೆ ಕೊಟ್ಟ ಸೂಚನೆಗಳ ಮತ್ತು ಸರಕಾರದ ಮನೋಭಾವದ ಕುರಿತು ತಪ್ಪು ತಿಳುವಳಿಕೆಯಾದುದರ ಮೂಲಕ ಉಂಟಾಗುವ ಈ ಪರಿಸ್ಥಿತಿಯು ಇನ್ನೂ ಶೋಚನೀಯವಾದದ್ದಾಗಿದೆ" ಎಂದು ಆ ಪತ್ರಿಕೆಯು ಪಶ್ಚಾತ್ತಾಪಪಡುತ್ತದೆ. ಮುಂದುವರಿಯುತ್ತಾ ಅದು ಹೀಗೆ ಬರೆಯುತ್ತದೆ—"ಬಹಳ ಪರಿಶ್ರಮದಿಂದ ತಯಾರಿಸಲ್ಪಟ್ಟ ನವರಾಜ್ಯಾಂಗ ರಚನೆಯನ್ನು ನಡೆಸಿಕೊಂಡು ಬರುವಾಗ ಗವರ್ನರರು ಆಗಿಂದಾಗ್ಗೆ ಅಡ್ಡಿ ತಂದೊಡ್ಡುವರೆಂಬ ಭಯವನ್ನು ಗಾಂಧಿಯವರು ತಮ್ಮಲ್ಲಿರಗೊಂಡಿದ್ದಾರೆ. ಆದರೆ ಅದು ನಿಜವಾಗಿ ಅಸಂಭವವೇ ಸರಿ. ಗಾಂಧಿಯವರು ಈ ಅಭಿಪ್ರಾಯವನ್ನು ಈಗ ಇಟ್ಟುಕೊಂಡಿದ್ದಾರೆ. ಆದರೆ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಗೆ ಅವರು ಈಚೆಗೆ ಕೊಟ್ಟ ಹೇಳಿಕೆಯ ಅಭಿಪ್ರಾಯವೇ ಬೇರೆಯಾಗಿದ್ದುದು ಕಂಡುಬರುತ್ತದೆ. ಗವರ್ನರರು ಶಾಸನ ಸಭೆಯನ್ನು ರದ್ದುಮಾಡಿ ಹೊಸ ಚುನಾವಣೆಯನ್ನು ಕರೆಯುವಂತಹ ಪ್ರಸಂಗಗಳು ಬರಬಹುದು ಎಂದು ಅವರೇ ಹೇಳಿರುತ್ತಾರೆ. ಅಂದ ಮೇಲೆ ಈಗಿನ ಘಟನೆಗಳು ಶಾಂತವಾಗುವಂತೆಯೇ ಸರಿ. ಇನ್ನು ರಾಜಿಪಂಚಾಯಿತಿಗಳಾಗುವುದು ಸುಲಭ. ಗಾಂಧಿಯವರ ಈಚೆಗಿನ ಹೇಳಿಕೆಯಿಂದ ಕಾಂಗ್ರೆಸ್ಸಿನವರು ತಮ್ಮ ವಿಚಾರಗಳನ್ನು ಗವರ್ನರರಲ್ಲಿ ಸರಿಯಾಗಿ ಹೇಳಿಕೊಂಡಲ್ಲಿ ಒಂದು ಪರಿಹಾರ ಸಮಸ್ಯೆಯು ದೊರಕುವಂತಾಗುವುದು. ಇತ್ತಂಡದವರೂ ಘನಸ್ತಿಕೆಯ ಯಾವದೊಂದನ್ನು ಎಣಿಸದೆ ಒಂದು ತಿಳುವಳಿಕೆಗೆ ಬರುವುದರಲ್ಲಿ ಯಾವ ತೊಂದರೆ ಇದ್ದಂತೆ ಕಾಣುವುದಿಲ್ಲ. ಇದರ ಮೇಲೆ ವೃಥಾ ಕಾಲಹರಣಮಾಡುವುದರ ಮೂಲಕ ಯಾವ ಸತ್ಕಾರ್ಯ ಸಾಧನೆಯೂ ಆಗಲಾರದು."

ಕಾಂಗ್ರೆಸ್ ಕೇಂದ್ರಗಳಲ್ಲಿ

ಟೈಮ್ಸ್ ಪತ್ರಿಕೆಯು ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯ ಮೇಲೆ ಒಪ್ಪಂದ ಸೂಚನೆಗಳನ್ನು ಕೊಟ್ಟು ಬರೆದ ಲೇಖನವನ್ನು ವಿಮರ್ಶಿಸುತ್ತಾ ಕಾಂಗ್ರೆಸ್‌ವಾಲರೊಬ್ಬರು ಹೀಗೆ ಅಭಿಪ್ರಾಯಪಡುತ್ತಾರೆ 'ಇಂಗ್ಲೆಂಡಿನ ಪತ್ರಿಕೆಗಳ ಅಭಿಪ್ರಾಯವನ್ನು ಒಂದು ಕ್ಷಣಕ್ಕೂ ತೆಗೆದುಕೊಳ್ಳಲಾಗುವುದಿಲ್ಲ. ಅದೂ ಹಿಂದೂಸ್ಥಾನದ ವಿಚಾರವಾಗಿ ಅವರು ಬರೆಯುವ ಲೇಖನಗಳು ಕುತಂತ್ರದವುಗಳೇ ಆಗಿರುತ್ತವೆ. ಟೈಮ್ಸ್ ಪತ್ರಿಕೆಯ ಮುಂಚಿನ ಮತ್ತು ಈಗಿನ ಲೇಖನಗಳಲ್ಲಿ ಧೋರಣೆ ವ್ಯತ್ಯಾಸವು ಸರಿಯಾಗಿ ಕಂಡುಬರುತ್ತದೆ. ಇಂಗ್ಲಿಷ್ ಪತ್ರಿಕೆಗಳಲ್ಲಿ ಇದೇನೂ ಹೊಸದಲ್ಲ.'

ಮೆಂಚೆಸ್ಟರ್ ಗಾರ್ಡಿಯನ್.

'ಮಹಾಯುದ್ಧ ಪೂರ್ವ ಭಾರತದ ಚರಿತ್ರೆಯನ್ನು ಪರಿಶೀಲಿಸಿದಲ್ಲಿ ಅಸಹಕಾರ ದೃಷ್ಟಿ ಇಂಡಿಯಾ ಸರಕಾರದಿಂದ ತುಂಬಾ ನಷ್ಟವಾದಂತೆ ಕಾಣುತ್ತದೆ. ಆದುದರಿಂದ ಅಸಹಕಾರದಿಂದ ಯಾವ ಪ್ರಯೋಜನವೂ ಈಗಲೂ ಸಿಗಲಿಕ್ಕಿಲ್ಲ. ಈಗಿನ ತಪ್ಪು ತಿಳುವಳಿಕೆಗಳನ್ನು ಪರಿಹರಿಸಲು ಕಾಂಗ್ರೆಸಿನ ಕಡೆಯಿಂದಲೂ ತುಂಬಾ ಪ್ರಯತ್ನಗಳಾಗುತ್ತವೆ. ಗಾಂಧಿಯವರೇ ತಮ್ಮ ಅಭಿಪ್ರಾಯಗಳಲ್ಲಿ ಸ್ವಲ್ಪ ಮಟ್ಟಿಗೆ ತಪ್ಪು ಇದ್ದರೂ ಇರಬಹುದೆಂದು ಕೂಡಾ ಒಪ್ಪಿರುವರು.' ಹೀಗೆಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆಯುತ್ತದೆ. ಮುಂದುವರಿಯುತ್ತಾ ಅದು ಈ ರೀತಿ ಅಭಿಪ್ರಾಯಪಡುತ್ತದೆ. 'ಚುನಾವಣೆಗಳಲ್ಲಿ ಅತ್ಯಭೂತ ಜಯಪಡೆದು ಬಂದ ಶ್ರೇಷ್ಠ ರಾಜಕೀಯ ಸಂಸ್ಥೆಯಂತೆ ತಮ್ಮನ್ನು ಕಾಣಬೇಕೆಂದು ಕಾಂಗ್ರೆಸು ಸರಕಾರವನ್ನು ಒತ್ತಾಯಪಡಿಸುತ್ತದೆ. ಕಾಂಗ್ರೆಸು ಮಂತ್ರಿಪದವಿಯನ್ನು ಸ್ವೀಕರಿಸಿದರೆ ಅದು ದಿನವಹಿ ನಡೆಸುವ ಕಾರ್ಯಕಲಾಪಗಳಲ್ಲಿ ಗವರ್ನರರ ಸಲಹೆಗಳನ್ನು ಕೇಳಲು ಇಷ್ಟವುಳ್ಳದ್ದಾಗಿದೆ. ಈ ವಿಷಯಗಳ ಮೇಲೆ ಭರವಸೆಗಳನ್ನು ಕೊಡುವುದು ಗವರ್ನರುಗಳಿಗೆ ಅಸಾಧ್ಯವೆ? ಕಾಂಗ್ರೆಸ್ ಶಾಸನ ಸಭೆಯೊಳಗೆ ಕೈಕೊಳ್ಳುವ ಕಾರ್ಯಕ್ರಮದಲ್ಲಿ, ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವ ಅವಶ್ಯಕತೆ ಇಲ್ಲವೆಂಬ ಸಂಗತಿಯನ್ನು ಗವರ್ನರರು ಕಾಂಗ್ರೆಸ್ ಮುಖಂಡರಿಗೆ ಏಕೆ ತಿಳಿಸಬಾರದು? ಇಷ್ಟರವರೆಗೆ ಕಾಂಗ್ರೆಸ್ಸೆ ಎಲ್ಲಾ ತರದ ಸೂಚನೆಗಳನ್ನೂ ಪರಿಹಾರ ಸಲಹೆಗಳನ್ನೂ ಕೊಟ್ಟದ್ದಾಯಿತು. ಒಪ್ಪಂದವು ಜರೂರಾಗಿ ಆಗಬೇಕಾಗಿದೆ. ಈಗ ಸರಕಾರವು ತನ್ನ ಅಭಿಪ್ರಾಯಗಳ ಮೇಲೆ ಸರಿಯಾದ ಜವಾಬನ್ನು ಕೊಡಬೇಕು.'

ಪತ್ರಿಕಾಭಿಪ್ರಾಯಗಳು

'ಬ್ರಿಟಿಷ್ ರಾಜನೀತಿಜ್ಞರ ಎಲ್ಲಾ ಬುದ್ಧಿವಂತಿಕೆ, ಅನುಭವಗಳು ಕಾಂಗ್ರೆಸ್ಸಿನ ಎದುರು ಅಪಜಯ ಹೊಂದಿದುವು. ಈಗಿನ ರಾಜಕೀಯ ಉತ್ಕಟಾವಸ್ಥೆಯಿಂದಾಗಿ ಅವರು ಗಾಬರಿಗೊಂಡಿರುವರು. ಅದಿಲ್ಲದಿರುತ್ತಿದ್ದರೆ ಅವರು ಇನ್ನೂ ಹೆಚ್ಚಿನ ಬುದ್ಧಿವಂತಿಕೆಯನ್ನು ತೋರಿಸುವವರಾಗುತ್ತಿದ್ದರು. ಬ್ರಿಟಿಷರ ಈಗಿನ ಎಲ್ಲಾ ಹೇಳಿಕೆ ಪ್ರಕಟಣೆಗಳನ್ನು ಓದುವಾಗ ಅವರು ಪೇಚಾಡುವ ರೀತಿಯು ಕಂಡುಬರುತ್ತದೆ. ನಾವೀಗ ನಮ್ಮ ಮುಂದಿರುವ ತೆರೆಗಳ ಬಡಿತವನ್ನು ಎದುರಿಸಲೇಬೇಕಾಗಿದೆ' ಹೀಗೆಂದು ಇಂಡಿಪೆಂಡೆಂಟ್ ಪತ್ರಿಕೆಯು ಬರೆಯುತ್ತದೆ.

ಅಮೃತಬಜಾರ

DECENT, STRONG, ACCURATE & STYLISH WRISTWATCHES GTD 3 YEARS. ROUND NICKEL 2/14/-, RADIUM DIAL 3/12/-; GOLDEN 3/14/-. SQUARE NICKEL 4/8/-; GOLDEN 4/14/-. RECTANGULAR NICKEL 5/4/-, GOLDEN 5/-. VERY SMALL ROUND NICKEL 5/-, GOLDEN 5/8/-. POSTAGE EXTRA. LIST FREE ON R. G. T. Co., 188 HARRISON ST. CALCUTTA

೩೬ ತಾಸುಗಳೊಳಗೆ ನಿಃಶಕ್ತಿಯು ಮಾಯವಾಯ್ತು

ಹೆಂಗಸಿನ ಪಿತ್ಥಬಾಧೆಯು ದೀರ್ಘ ಕಾಲ ಸಂಭವಿಸಿತು

ಕ್ರುಶ್ಚನ್ ಲವಣವು ಅವಳನ್ನು ಸಂಪೂರ್ಣ ತೊಂದರೆಗಳಿಂದ ಪಾರುಮಾಡಿತು.

ಓರ್ವ ಮಹಿಳೆಯು ಹೀಗೆ ಬರೆಯುತ್ತಾಳೆ "ನಾನು ನನ್ನ ಜೀವಮಾನವೆಲ್ಲ ಪಿತ್ಥ ಬಾಧೆಯಿಂದ ನರಳುತ್ತಿದ್ದೆನು ಇದರಿಂದ ನಾನು ಪ್ರತಿ ಸಲ ಸುಮಾರು ೧೨ ಗಂಟೆಗಳಿಂದ ೩೬ ಗಂಟೆಗಳ ತನಕ ಸಂಪೂರ್ಣ ಕಳೆಗುಂದುತ್ತಲಿದ್ದೆನು ಕಳೆದ ವರ್ಷ ೮ ದಿವಸದಲ್ಲಿ ಎರಡು ಸಲ ಇದಕ್ಕೆ ತುತ್ತಾದೆನು ನನ್ನ ಪತಿಯು ನನಗಾಗಿ ಒಂದು ಬಾಟ್ಲಿ ಕ್ರುಶನ್ ಲವಣವನ್ನು ತಂದನು ಅದನ್ನು ಸ್ವಲ್ಪ ಸ್ವಲ್ಪ ಬೆಳಗ್ಗಿನ ಕಾಫಿಯಲ್ಲಿ ಮಿಶ್ರ ಮಾಡಿ ಸೇವಿಸಲು ಪ್ರಾರಂಭಿಸಿದಂದಿನಿಂದ ನನಗೆ ಅಂಥಾ ತೊಂದರೆಗಳೇ ಇರದ್ದನ್ನು ನೋಡಿ ತುಂಬಾ ಆಶ್ಚರ್ಯವೂ ಸಂತೋಷವೂ ಆಗುತ್ತದೆ"

ಮಿ। ಇ ಡಿ

ಪಿತ್ಥಬಾಧೆಯು ಅಜೀರ್ಣದಿಂದ ಉಂಟಾಗುತ್ತದೆ ಇದಕ್ಕೆ ನಾವು ಕ್ರಮತಪ್ಪಿ ತೆಗೆದುಕೊಳ್ಳುವ ಆಹಾರವೇ ಕಾರಣ ಈ ಆಹಾರವು ಅನ್ನಕೋಶದಲ್ಲಿ ದಮೆಯಾಗಿ, ಕೆಟ್ಟವಾಯುವನ್ನು ಉಂಟುಮಾಡುತ್ತದೆ ಇದನ್ನು ನಾಶಮಾಡಲು ಸ್ವಾಭಾವಿಕ ಟಾನಿಕ್ಕುಗಳಾಗಲಿ ಈರಾರು ಲವಣಗಳಾಗಲೀ ಬೇಕಾಗುತ್ತದೆ ಈರಾರು ಲವಣಗಳು ಈ ಕ್ರುಶನ್ ಲವಣದಲ್ಲಿ ಕಾಣಬಹುದು ಈ ಪ್ರತಿ ಒಂದು ಲವಣವು ನಮ್ಮ ಆರೋಗ್ಯಕ್ಕೆ ಬೇಕಾದುವು



ಅವು ರುಚಿಯನ್ನು ಕೊಡುವುದಲ್ಲದೆ ಅಜೀರ್ಣದ ಅಪಾಯವನ್ನು ಹೋಗಲಾಡಿಸುವುದು

ಕ್ರುಶ್ಚನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ದೊರೆಯುವುದು.

ಲಕ್ಸ್ ಟಾಯಿಲೆಟ್ ಸೋಪನ್ನು ಉಪಯೋಗಿಸಿರಿ ಮತ್ತು

ಉಚಿತವಾಗಿ ಕೊಡುವ ಸೋಪನ್ನು ತೆಗೆದುಕೊಳ್ಳಿರಿ.

ಒಂಭತ್ತು ಪ್ರಿಂಟಾದ ರ್‍ಯಾಪರುಗಳಿಗೆ ಒಂದುಸೋಪು ಉಚಿತವಾಗಿ ಕೊಡಲ್ಪಡುತ್ತದೆ.

ದೊಡ್ಡ ಲಕ್ಸ್ ಟಾಯಿಲೆಟ್ ಸೋಪಿನ ಪ್ರಿಂಟಾದ ರ್‍ಯಾಪರನ್ನು ಶೇಖರಿಸಿ ಅವುಗಳನ್ನು ನಿಮ್ಮ ವ್ಯಾಪಾರಸ್ಥರಲ್ಲಿ ತೆಗೆದುಕೊಂಡು ಹೋಗಿ ಮತ್ತು ನೀವುಕೊಡುವ ಪ್ರತಿ 9 ರ್‍ಯಾಪರುಗಳಿಗೂ ಅವರು ಯಾವಬೆಲೆಯೂ ಇಲ್ಲದೆ ಒಂದು ದೊಡ್ಡ ಲಕ್ಸ್ ಟಾಯಿಲೆಟ್ ಸೋಪನ್ನು ಕೊಡುತ್ತಾರೆ

ಯಾರೊಬ್ಬರೂ ಕಳೆದುಕೊಳ್ಳಲಾಗದಂಥ ಆಶ್ಚರ್ಯಕರವಾದ ಸುಸಮಯವು ಈಗ ಒದಗಿದೆ. ಇದು ನಿಗದಿಯಾದ ಬಹಳ ಸ್ವಲ್ಪಕಾಲವೇ ಇರತಕ್ಕದ್ದು.

ಇನ್ನು ನಿಮ್ಮ ರ್‍ಯಾಪರುಗಳನ್ನು ಶೇಖರಿಸುವುದಕ್ಕೆ ತ್ವರೆಮಾಡಿರಿ.

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP

ಇಂಡಿಯಾದಲ್ಲೇ ಎಲ್ಲಾ ತರಗಳ ಶುದ್ಧವಾದ ಎಣ್ಣೆಯಿಂದಲೇ ತಯಾರಿಸಿರುದು

L. LTS 493 293 LEVER BROTHERS (INDIA) LIMITED

CANARESE

(ಹಿಂದೇ ಪುಟದಿಂದ ಮುಂದುವರಿದುದು.)

ನಿಂತ ಭೂತದಂಥ ಆ ಪದಾರ್ಥ ಅಲ್ಲಿ ನಿಂತು ಏನನ್ನೋ ಬಾವಿಯಲ್ಲಿ ಹಾಕಿದಂತೆ ಸ್ವಲ್ಪಸ್ವಲ್ಪವಾಗಿ ತೋರುತ್ತಿತ್ತು ಆ ಪದಾರ್ಥ ಧಢಾಲ್ ಎಂದು ಬಾವಿಗೆ ಬಿದ್ದದೇ ತಡ, ಸಂಬಂಧಿಯು 'ತಡಾಲ್' ಎಂದು ದೊಣ್ಣೆಯಿಂದ ಒಂದು ಏಟು ಸಿಯೇ ಬಿಟ್ಟ ಏನೋ ಒಂದು ವಸ್ತು ಸುಯ್ಯೆಂದು ಉಸಿರುಬಿಟ್ಟು ಅಗಳು ಹಾರಿ ಓಡಿಹೋಗುತ್ತ ಕಣ್ಮರೆಯಾದಂತಾಯಿತು ಆ ನಡುರಾತ್ರಿಯಲ್ಲಿ ಸಂಬಂಧಿಯು ಎಷ್ಟು ಹುಡುಕಿದರೂ ಅದು ಸಿಕ್ಕಲಿಲ್ಲ ಸಿಕ್ಕಿದ್ದರೆ ಇನ್ನೊಂದನ್ನು ಏರಿಸುವದರಲ್ಲಿದ್ದನು ಭೂತದ ಗ್ರಹಚಾರ!

ಮರುದಿನ ಬೆಳಗ್ಗೆ ವರ್ತಮಾನ ಹೊರಟಿತು 'ಸಾಲಕೊಟ್ಟು ಸಾಲಗಾರನು ನಿನ್ನೆ ರಾತ್ರಿ ಮನೆ ಉಪ್ಪರಿಗೆಯಿಂದ ಕೆಳಗಿಳಿಯುವಾಗ ಕಾಲುಜಾರಿ ನೆಲದ ಮೇಲೆ ಬಿದ್ದು ಸೊಂಟ ಕೈಕಾಲುಗಳನ್ನು ಮುರಿದುಕೊಂಡಿರುವನು!' ಎಂದು ಸಂಬಂಧಿಯು ಹೋಗಿ ನೋಡಿದ. ಸೊಂಟ ಕೈಕಾಲುಗಳು ಮುರಿದು ಹೋಗಿರುವದು ಮಾತ್ರವಲ್ಲ, ಮೈಯೆಲ್ಲಾ ಕಲ್ಲು ಮುಳ್ಳು ನಾಟಿದಂತೆ ಗಾಯವಾಗಿತ್ತು. 'ಪಾಪ, ಭೂತದ ಗ್ರಹಚಾರ!' ಎಂದು ಮನಸ್ಸಿನಲ್ಲಿಯೇ ನಸುನಕ್ಕು ಅವನು ಎರಡು ಸಹಾನುಭೂತಿಪರ ಮಾತುಗಳನ್ನಾಡಿ, ಅದವಿನ ಹಣ ಆ ದಿನವೇ ಕಳುಹಿಸಿಕೊಡುವದಾಗಿ ಹೇಳಿ ಬಂದ ಆ ಮೇಲೆ ಆ ಮನೆಯಲ್ಲಿ ಭೂತದ ಸುಳಿವೇ ಇಲ್ಲ ನಮ್ಮ ಮನೆಯದು ಹೊಸ ಭೂತವಾಗಿದ್ದರೆ, ಅದು ನರಭೂತವಾಗಿತ್ತು ಕತೆ ಇಲ್ಲಿಗೆ ಮುಗಿಯಿತು ಅದರೆ—

ನನ್ನ ಮಿತ್ರರು ಈ ಕತೆಯನ್ನು ಈಗ ಹೇಳುವದರ ಬದಲಿಗೆ ಮೊದಲಿಗೆ ಹೇಳಿದ್ದರೆ ಎಷ್ಟು ಚೆನ್ನಾಗಿತ್ತು! ಬ್ರಾಹ್ಮಣ ಮಂತ್ರವಾದಿಯವರಿಗೆ ಕೊಟ್ಟ 20–30 ರೂಪಾಯಿಗಳಾದರೂ ಉಳಿಯುತ್ತಿದ್ದುವು ಎಂದು ನನಗೆ ಸ್ವಲ್ಪ ಪಶ್ಚಾತ್ತಾಪವಾಯಿತು

ಹೊಸಭೂತ, ನರಭೂತಗಳಂತೆ ಒಂದೊಂದು ಕಾಲದಲ್ಲಿ ನರಿ ನಾಯಿ, ಹಂದಿ ಕೋಳಿ, ಹುಲಿ ಸಿಂಹ ಮೊದಲಾದುವು ಭೂತಗಳಾಗಿದ್ದಿರಬಹುದು. ಕಾರ್ಯಕಾರಣ ಸಂಬಂಧವನ್ನು ಹಚ್ಚದೆಯೂ, ಅವುಗಳು ತಮ್ಮ ಕಾಲದಲ್ಲಿ ಆಡುತ್ತಿದ್ದ ಆಟಗಳ ಮೂಲಕಾರಣವನ್ನು ಶೋಧಿಸಿ ಮನಸ್ಸಿಗೆ ಸಮಾಧಾನ ಮಾಡಿಕೊಳ್ಳದೆಯೂ ಇದ್ದುದರಿಂದ, ಅಂದಿನಿಂದ ಇಂದಿನವರೆಗೆ ನಾವು ಅವುಗಳನ್ನು ನಂಬಿ, ಭೋಗಾದಿಗಳನ್ನು ಕೊಟ್ಟು ಕಷ್ಟನಷ್ಟಗಳಿಗೆ ಗುರಿಯಾಗಿದ್ದಿರಬಹುದು ಮತ್ತೆ ಭೂತಪ್ರೇತ ಕೊಳ್ಳಿ ಪಿಶಾಚಿ ಮೊದಲಾದುವು ನಿಜವಾಗಿಯೂ ಇಲ್ಲದೆ, ಅವು ಬರೇ ನಮ್ಮ ಕಲ್ಪನಾಲೋಕದ ಸೃಷ್ಟಿಯಾಗಿರಬಹುದು ಭೂತಪ್ರೇತಾದಿಗಳ ಸಂಬಂಧವಾಗಿ ಸಾವಿರಾರು ವರ್ಷಗಳಿಂದ ನಮಗಿರುವ ಮೂಢ ನಂಬಿಕೆಯೇ ಅವುಗಳಿಗೆ ಅಸ್ತಿತ್ವವನ್ನು ತಂದುಕೊಟ್ಟಿರಬಹುದು. ರವಿ ಕಾಣದ್ದನ್ನು ಕವಿ ಕಾಣುವನು ಆದಕಾರಣ ಕವಿಯು ರಸಪುಷ್ಟಿಗಾಗಿ ತನ್ನ ಕೃತಿಗಳಲ್ಲಿ ಅವುಗಳಿಗೆ ರುದ್ರನ ಅನುಚರರ ಗೌರವ ಸ್ಥಾನವನ್ನು ಕೊಟ್ಟು ಅಜರಾಮರತ್ವವನ್ನು ಕಲ್ಪಿಸಿರಬಹುದು ಯಾರು ಬಲ್ಲರು ಹೇಳುದು?

ಭೂತಪಿಶಾಚ ಮೊದಲಾದುವು ನಿಜವಾಗಿ ಇರಲಿ, ಇಲ್ಲದಿರಲಿ ಇವುಗಳ ಸವಾದಗಳಿಂಬವು ನಡೆದಾಗಲಿಲ್ಲ ಧೈರ್ಯಶಾಲಿಗಳೂ, ಸ್ವತಂತ್ರ ವಿಚಾರ ಶಕ್ತಿ ಉಳ್ಳವರೂ ಮುಂದೆ ಬಂದು, ಈ ಭೂತಗಳ ಪವಾಡಗಳೆಂಬವುಗಳಿಗೆ ಮೂಲ ಕಾರಣಗಳೇನಿರುವವು ಎಂಬುದನ್ನು ಹುಡುಕಿ ತೆಗೆದರೆ ಹಿಂದೂ ಸಮಾಜಕ್ಕೆ ಮಹೋಪಕಾರ ಮಾಡಿದಂತಾಗುವದು. ಅವುಗಳ ಮೂಲ ಕಂಡು ಹಿಡಿದದ್ದಾದರೆ ಭೂತಪಿಶಾಚಿ ಮೊದಲಾದುವುಗಳ ಸಂಬಂಧವಾಗಿ ಜನರಿಗಿರುವ ವ್ಯರ್ಥವಾದ ಭಯಾತುರಗಳನ್ನು ಹೋಗಲಾಡಿಸಿ ಅವರ ಕಷ್ಟನಷ್ಟಗಳನ್ನು ತಪ್ಪಿಸಿ ಸದಾಕಾಲಕ್ಕಾಗಿ ಅವರ ಕೃತಜ್ಞತೆಗಳಿಗೆ ಪಾತ್ರವಾಗಬಹುದು. ಇದರಿಂದ ಸ್ವತಂತ್ರ ವಿವೇಚನಾಶಕ್ತಿಯು ಬೆಳೆದು ಬಂದು ಅದರ ಮೂಲಕ ನವನಾಗರಿಕತೆ ಹಿಂದೂ ಸಮಾಜವು ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುವಂತೆಯೂ ಆಗುವದೆ ಯೋಚಿಸಿ ನೋಡಿ

WANTED

4 YOUNG WORKING PARTNERS 4

Capable of investing each a sum of Rs. 200, for a sound and novel indigenous industry to be started shortly

Please send communications to –

'K'

C/o, 'Swadeshabhimani'

Mangalore

ಕೆನರಾ ಬ್ಯಾಂಕ್ ಲಿಮಿಟೆಡ್, ಪುತ್ತೂರು.

ಪ್ರಕಟಣೆ.

ಈ ಕೆಳಗೆ ಹೆಸರು ಕಾಣಿಸಿದವರು ಮೇ ಲಿಂದ ಬ್ಯಾಂಕಿನಿಂದ ತಾ: 20-2-36ರಲ್ಲು ನ್ನಾಭರಣಗಳ ಈಡಿನ ಮೇಲೆ ನಡೆದ ಸಾಲದ ಮೊಬಲಗನ್ನು ಯಾ ಅದರ ಮೇಲಣ ಬಡ್ಡಿಯನ್ನು ಕೊಡದೆ ಬಾಕಿ ಇಟ್ಟುಕೊಂಡುದ ರಿಂದ ಅವರಿಗೆ ಕ್ರಮವಾಗಿ ಬಿಟ್ಟ ರಿಜಿಸ್ಟ್ರಿ ನೋಟೀಸು ಅವರು ಮೃತಪಟ್ಟದ್ದಾಗಿ ಮರತ್ತು ಬಂದದ್ದ ನಿಮಿತ್ತವಾಗಿ ಇದೇ ಇಸವಿ ಎಪ್ರಿಲ್ ತಿಂಗಳ 9ನೇ ತಾರೀಕಿನ ಸ್ವದೇಶಾಭಿಮಾನಿ ಗಜೇಟಿನಲ್ಲಿ ಪ್ರಕಟಿಸಿದ ಮೇರೆಗೆ ಇದೇ ತಿಂಗಳ ತಾ. 28ನೇ ಬುಧವಾರ ಮಧ್ಯಾಹ್ನ ಘಂಟೆ 2ಕ್ಕೆ ಸದ್ರಿ ಅಡವಿದ್ದ ನಗಗಳನ್ನು ಬಹಿರಂಗರಾಗಿ ಏಲಂ ಮಾಡಿದ್ದಲ್ಲಿ ರೂ 27-0-0 ಹುಟ್ಟಿ ಬರಲು ಆ ಪೈಕಿ ರೂ 20—8—10 ಸದ್ರಿ ಸಾಲದ ಅಸ್ಲು, ಬಡ್ಡಿ, ಬಡ್ಡಿಗೆ ಬಡ್ಡಿ, ಖರ್ಚು ವಗೈರೆಗಳ ಬಾಬ್ತು ಕಳೆದು, ಬಾಕಿ ಉಳಿತ ಯಾದ ರೂಪಾಯಿ 6-12 2ನ್ನು ಸದ್ರಿಯವರ ಹೆಸರಿನಲ್ಲಿ ಅಮಾನಾತು ಖಾತೆಗೆ ಜಮೆಯಾಗಿ ಇಟ್ಟುಕೊಂಡಿರುತ್ತದೆ. ಆ ಖಾತೆಯ ಐವೇಜನ್ನು ಅವರ ನ್ಯಾಯವಾದ ಹಕ್ಕುದಾರರು ಕ್ಷಣದಲ್ಲೇ ಕೊಂಡುಹೋಗಬೇಕಾಗಿಯೂ, ಅದಕ್ಕೆ ಮೇಲ್ಕಂಡ ಬ್ಯಾಂಕಿನಿಂದ ಯಾವ ಸಲಿಯ ಬಡ್ಡಿಯು ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

ಈ ಪ್ರಕಟಣೆ ನೋಟೀಸು ಖರ್ಚು ಅವರೀ ತೆರತಕ್ಕದಾದುದರಿಂದ, [illegible] ಖಾತೆಗೇನೇ ಈ ಚಾರ್ಜು ಖರ್ಚು ಬರೆಯಲಿಕ್ಕಿರುವುದು.

ಸುಬ್ರಾಯ ಬಳ್ಳಾಳರ ಅಳಿಯ, ರಾಮಯ್ಯ ಬಳ್ಳಾಳ; ಬೇಲೂರು ಗ್ರಾಮ ಆದೂರು ಪೋಸ್ಟು. ಅಮಾನಾತು ಖಾತೆ ರೂ. 6-12-2

ಕೆನರಾ ಬ್ಯಾಂಕ್, ಲಿಮಿಟೆಡ್ ಪುತ್ತೂರು
28-4-1937

M. Anatha Bhandary,
ಏಜಂಟ್.

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! **ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!**

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳಲ್ಲದರಲ್ಲೂ ಸಾವಿರಗಟ್ಟೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು.

ಈ ಪುಸ್ತಕವನ್ನು ಓದಬೇಕು! ಮನೋನೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು?
ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಮಕ್ಕಳಿಗೆ ತಿಳಿವಳಿಕ ಹೇಳುವವರಿಗೆ ಬೇಕು
ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ: ೩೦೦ ಪುಟಗಳು.

ಬೆಲೆ ರೂ. ೧ ೮ ೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್ ಸ್ಟೀಟ್ ಮಾರ್ಟ್‌ನಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ. (ಬ್ರಾಂಚ್)
ಕೋಟೆ ಬೆಂಗಳೂರು ಸಿಟಿ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಶಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಚಿಟೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ

ಚಿಂತಾರತ್ನ

ಅದರಲ್ಲಿ—೧ ಸಬುಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ, ೩ ಕಾಸ್ಟಿಕ್ ಸೋಡಾ ತಯಾರಿಸುವುದು ೪ ಬಿಸ್ಕತ್ತು ತಯಾರಿಸುವುದು ೫ ದಶಾಂಗ ತಯಾರ ಮಾಡುವುದು ೬ ಪೆಪ್ಪರಮೆಂಟು ಮಾಡುವುದು, ೭ ದೂಡದ ಘಟ್ಟಿ ಮಾಡುವುದು ೮ ಭಂಗಾರ ಮಾಡುವುದು, ೯ ಬೆಳ್ಳಿ ತಯಾರ ಮಾಡುವುದು ೧೦ ಜರ್ಮನ್ ಶಿಲ್ವರ್ ಧಾತುಮಾಡುವದು ೧೧ ಊದಿನ ಕಡ್ಡಿ ತಯಾರಮಾಡುವುದು ೧೨ ತಗಡಿನವಾಟ ತಯಾರಮಾಡುವುದು, ೧೩ ಕುಂಕುಮವನ್ನು ತಯಾರಿಸುವುದು ೧೪ ಹಸಿಕುಂಕುಮವನ್ನು ತಯಾರಿಸುವುದು ೧೫ ಗೋದೀಸರಿ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು, ೧೭ ಪೀಪನಸರಿ ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಮಾನುಗಳು ೧೯ ಖರ್ಪ ತಯಾರಮಾಡುವುದು ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನ ಮಾಡುವುದು, ೨೨ ಮಂಥೇಲ ಎಣ್ಣೆ ತಯಾರಿಸುವುದು, ೨೩ ಕಪ್ಪು ಮಸಿ ಬರೆಯುವುದು, ೨೪ ದಂತಮಂಜನ ಮಾಡುವುದು ೨೫ ವೀರ್ಯ ವೃದ್ಧಿ ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು ೨೭ ಉದರಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು ೨೯ ಶಿಶ್ನವೃದ್ಧಿಗೆ ಔಷಧ, ೩೦ ಸರಬತ್ತು ಮಾಡುವುದು, ೩೧ ಚಳಿ—ಜ್ವರದ ಗುಳಿಗೆ ಮಾಡುವುದು, ೩೨ ಓಟಿಪಾಲಿಶ ಮಾಡುವುದು, ೩೩ ಮನೆ, ವಖಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು, ೩೪ ಹುರುಕು ಖಜ್ಜಿ ಮುಲಾಮು ಕ್ಲೇಶ ನಾಶೀಕರಿಸುವುದು ಇತ್ಯಾದಿ ೧೭೦ ವಿಷಯಗಳು ಇರುತ್ತವೆ.

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ)

ವಿಳಾಸ:-ಎಸ್. ಸಿ ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ ೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ, ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅದರಿಂದ ಹುಟ್ಟಿದ ಮಕ್ಕಳ ಫಲಪಿಟಾಕ (ಚಾಕಟ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು, ೧೭ ಸ್ತ್ರೀ ವಶೀಕರಣ, ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯಸ್ಥಳ, ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೭೦ ವಿಷಯಗಳು ಇರುತ್ತವೆ.

ಬೆಲೆ ಒಂದು ರೂಪಾಯಿ. (ವಿ. ಪಿ. ಖರ್ಚು ಬೇರೆ)

ವಿಳಾಸ -ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

—. ಇದು :—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ!

ಇದರಲ್ಲಿ ವೈದ್ಯಶಾಸ್ತ್ರ, ಕಾಮಶಾಸ್ತ್ರ, ಪ್ರಶ್ನಭಾಗ, ಶಕುನಭಾಗ ಕೈಗಾರಿಕೆ ವಿಷಯ ಕಾಯದೇಭಾಗ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ, ತಂತ್ರ, ಮಂತ್ರ, ಯಂತ್ರ ವಶೀಕರಣ, ಇತ್ಯಾದಿ ಅನೇಕ ಮರ್ಮವಿದ್ಯೆಗಳು ಇರುತ್ತವೆ ಎಲ್ಲ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೌಲ್ಯ ಗ್ರಂಥದ ಬೆಲೆ ೧—೦—೦

ವಿಳಾಸ -ಎಸ್ ಸಿ ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers —

S C. Salimath & Sons,
GADAG.

ಭಾರತದಲ್ಲಿ ಸ್ವಾತಂತ್ರ ರವಿಯು ಉದಿಸಿದನೇ?

[illegible]ದಲ್ಲಿ ಎಸೆಂಬ್ಲಿ ಹಾಗೂ ಕೌನ್ಸಿಲು [illegible] ಕಾಂಗ್ರೆಸ್ಸು ಉದ್ಯುಕ್ತವಾದಂದಿನಿಂದ ಭಾರತದಲ್ಲಿ ಚುನಾವಣಾ ಪ್ರಚಾರ[illegible] ಕಾಂಗ್ರೆಸ್ಸಿನ ಸಂದೇಶವು ಸಾರಲ್ಪಟ್ಟಿತು. ಬರಹ ತಿಳಿದ ಹಾಗೂ ಪ್ರಾಯ ಬಂದ [illegible]ಡಸರೂ ಹಾಗೂ ಹೆಂಗಸರಿಗೆ ಮತದಾನದ ಹಕ್ಕು ದೊರೆಯಲ್ಪಟ್ಟಿತು. ಇದಕ್ಕೆ ಕಾಂಗ್ರೆಸ್ಸಿನ ಸಾಧನೆಯೇ ಕಾರಣ. ದೇಶದ ಬಡ ಜನಾಂಗವು ತಮ್ಮ ಮತದಾನದ ಹಕ್ಕನ್ನು ದೇಶದ ದಾರಿದ್ರ್ಯತೆಯನ್ನು ಹೋಗಲಾಡಿಸಲು ಬದ್ಧಕಂಕಣರಾಗಿ ನಿಂತಿದ್ದ ಕಾಂಗ್ರೆಸ್ ಕಡೆಯ ಉಮೇದ್ವಾರರಿಗೇನೇ ಕೊಟ್ಟುದರಿಂದ ಪ್ರಚಂಡವಾದ ಬಹುಮತದಿಂದ ಕಾಂಗ್ರೆಸ್ ಉಮೇದ್ವಾರರು ಜಯಶೀಲರಾದರು ಇದರಿಂದಲೇ ಜನತೆಗೆ ಕಾಂಗ್ರೆಸ್ಸಿನ ಮೇಲೆ ಎಷ್ಟು ಪೂಜ್ಯಭಾವವುಂಟೆಂದು ವಿದೇಶಿಯರಿಗೂ ತಿಳಿದುಬಂತು. ಆದರೆ ಆಳರಸರು ಮಾತ್ರ ತಮ್ಮ ವಕ್ರದೃಷ್ಟಿಯನ್ನು ಕಾಂಗ್ರೆಸ್ಸಿನ ಮೇಲೆ ಇಟ್ಟೇ ಇಟ್ಟಿರುವರು. ರಾಷ್ಟ್ರಪತಿ ನೆಹರೂಗಳವರ ಅಸಾಧಾರಣವಾದ ಪ್ರಚಾರ ಕಾರ್ಯವು ದೇಶೋತ್ಸವವೂ ನಡೆದು ಭಾರತವು ಒಮ್ಮಿಂದೊಮ್ಮೆ ನವಚೇತನವನ್ನು ಹೊಂದಿತು ಭಾರತದ ಅಂತರಾಳವನ್ನು ತಿಳಿದು, ಅಲ್ಲಿಂದ ಬರುವ ಬಿಸಿಯುಸಿರುಗಳನ್ನು ತಿಳಿದವರು ಗಾಂಧಿಜಿಯವರ ನಂತರ ರಾಷ್ಟ್ರಪತಿಗಳೇ ಆಗಿದ್ದಾರೆ. ಆದುದರಿಂದಲೇ ಸಮಗ್ರ ಭಾರತವು ರಾಷ್ಟ್ರಪತಿಗಳ ಅಖಂಡವಾದ ದೇಶಸೇವೆಯಲ್ಲಿ ಸಹಕರಿಸಲು ಸಿದ್ಧವಾಗಿರುತ್ತದೆ

ಪುಣ್ಯ ಭಾರತವು ತನ್ನ ಸರ್ವಸ್ವವನ್ನು ಕಳಕೊಳ್ಳಲು ಆಳರಸರು ಹೇಗೆ ಕಾರಣವಾದರೋ, ಅದರ ಜೊತೆಯಲ್ಲಿ ಭಾರತೀಯರಲ್ಲಿ ಸ್ವಾತಂತ್ರ್ಯದ ದಾಹವುಂಟಾಗಲು ಅವರ ಸ್ವಯಂಪ್ರಭುತ್ವವೇ ಕಾರಣವಾಯಿತು ಸ್ವಾರ್ಥದ ಪರಮಾವಧಿಯಿಂದ ಭಾರತವೆಂಬ ಕಲ್ಪವೃಕ್ಷವನ್ನು ಅಪಹರಿಸಿ ತಿಂದು ಹೊಟ್ಟೆಬಾಕರಾಗಿರುವರು ಈಗ ಬರೀ ತೇಗುವ ಕೆಲಸ ಮಾತ್ರ ಅವರಲ್ಲಿ ಬಾಕಿಯಿರುವುದು ತಿಂದುದರಲ್ಲಿ ಉಳಿದುದನ್ನಾದರೂ ಭಾರತೀಯರಿಗೆ ಬಿಟ್ಟುಕೊಡಲು ಪಾಪ ಅವರ ಮನವೊಪ್ಪುವುದಿಲ್ಲ. ದೇಶಕ್ಕೆ ದೇಶವೇ ಮೊರೆ ಇಟ್ಟರೂ, ಶಾಂತಯುಕ್ತವೂ ಧರ್ಮವುಳ್ಳದ್ದೂ ಆದ ಅಸಹಕಾರ ಯುದ್ಧವನ್ನು ಹೂಡಿ ದೇಶದ ಹಿತಕ್ಕಾಗಿ ದುಡಿದರೂ, ಆಳರಸರ ಮನೋಪರಿವರ್ತನವಾಗಲಿಲ್ಲ. ಇದಕ್ಕೆ ನಮ್ಮವರೇ ಆದ ದೇಶದ್ರೋಹಿಗಳೂ ಸಹಾಯಕರಾಗಿರುವರೆಂದು ಹೇಳಿದರೂ ತಪ್ಪಾಗಲಾರದು ಬಡ ಕೋಟಿಗಳ ರಕ್ತವನ್ನು ಹೀರಿ ಒಬ್ಬಿಬ್ಬರ ಸ್ವಾರ್ಥ ಸುಖಕ್ಕೆ ಸಹಸ್ರಗಟ್ಟಲೆ ಹಣವನ್ನು ತೆತ್ತು, ತಮ್ಮ ಸೂತ್ರಚಾಲನೆಗೆ ಸೇರಿಸಿ ಆ ಮೂಲಕ ತಮ್ಮ ಆಟವನ್ನು ನಿರಾಯಾಸದಿಂದ ಆಡುತ್ತಿರುವರು. ಮೇಲಾಗಿ ಅಧಿಕಾರ ದರ್ಪವೂ ಶ್ರೀಮಂತಿಕೆಯೂ ಕೈಕೆಳಗಿರುವುದರಿಂದ ಭಾರತವನ್ನು ತುಳಿತಕ್ಕೆ ಗುರಿಪಡಿಸಿರುವರು.

ಅನೇಕ ಶತಮಾನಗಳಿಂದ ಭಾರತವು ಸರ್ವಾಲಂಕೃತಳಾಗಿ ತರತರದ ಕೈಗಾರಿಕೆಗಳಲ್ಲಿ ಪರಿವೇಷ್ಟಿತಳಾಗಿ, ಉಳಿದ ಸಾಮಾಗ್ರಿಗಳನ್ನು ವಿದೇಶಗಳಿಗೆ ಸಾಗಿಸಿ ಉನ್ನತ ಶಿಖರದಲ್ಲಿ ಶೋಭಾಯಮಾನಳಾಗಿ ಮೆರೆದಿದ್ದಳು. ಸುವರ್ಣಭೂಮಿಯ ವೈಭವವನ್ನು ಅನೇಕ ಶತ್ರುಗಳು ಬಂದು ಸುಲಿಗೆಮಾಡಿದ್ದರೂ, ದೇಶವು ಬಡವಾಗದೆ ಮತ್ತೂ ಅಕ್ಷಯಪಾತ್ರದಂತಿತ್ತು. ಎಂದಿಗೆ ಪಾಶ್ಚಿಮಾತ್ಯರು ತಕ್ಕಡಿಗಳನ್ನು ಹಿಡಕೊಂಡು ಭಾರತದಲ್ಲಿ ಕಾಲಿಟ್ಟರೋ ಅಂದಿನಿಂದ ದೇಶದಲ್ಲಿ ಒಂದು ತರದ ದುಷ್ಕಾಲವು ಪ್ರಾರಂಭವಾಯಿತು. ಕಳೆದ ೨ ಶತಮಾನಗಳಿಂದ ಒಂದೇ ಸಮನೆ ದೇಶದ ಸಿರಿಯು ಅಪಹರಿಸಲ್ಪಟ್ಟು ಪಶ್ಚಿಮಾಭಿಮುಖವಾಗಿ ಹರಿಯುತ್ತಲೇ ಇದೆ. ಅಂದಿನಿಂದಲೇ ದೇಶದಲ್ಲಿ ಅನ್ಯಾಯ, ಮೋಸ, ಅಧರ್ಮ, ರೋಗರುಜಿಗಳು ಉತ್ಪನ್ನವಾಗಿ ಅದೀಗ ಪರಮಾವಧಿಯ ಶಿಖರವನ್ನು ಏರಿದೆ ಪಾಶ್ಚಿಮಾತ್ಯರ ನಡೆನುಡಿಗಳು, ಆಚಾರ ವಿಚಾರಗಳು ತವರುಮನೆಯಂತಾಗಿ ಅದರ ವಾತಾವರಣವೇ ಸಮಗ್ರ ಭಾರತದಲ್ಲಿ ಹರಡಿಕೊಂಡಿರುತ್ತದೆ ಈ ವಾತಾವರಣವನ್ನು ನಾಶಪಡಿಸಿ ನವ ರೀತಿಯ ನವಯುಗಕ್ಕೊಪ್ಪುವ ಗಾಂಧಿಯುಗದ ವಾತಾವರಣವು ಕಳೆದ ೨೦ ವರ್ಷಗಳಿಂದ ತಲೆಯೆತ್ತಿದೆ ಮೂವತ್ತೈದು ಕೋಟಿ ಪ್ರಜಾ ಸಂಖ್ಯೆಯಲ್ಲಿರುವ ಈ ವಿಶಾಲ ಭಾರತದಲ್ಲಿ ಇಷ್ಟೊಂದು ಅಲ್ಪ ಕಾಲದಲ್ಲಿ ನವಚೇತನವು ಉತ್ಪನ್ನವಾಗಲು ಪೂಜ್ಯ ಗಾಂಧಿಜೀಯವರ ಆತ್ಮಶಕ್ತಿಯ ತೇಜಸ್ಸೇ ಕಾರಣವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು

ಲೋಕದಲ್ಲಿ ಪ್ರಚಲಿತ ವಿದ್ಯಮಾನಗಳಲ್ಲಿ ಬೆರಳೆಣಿಕೆಯ ತೇಜೋರಾಶಿಗಳಿರುವರಾದರೂ, ಅವರಲ್ಲಿ ಹೆಚ್ಚಿನ ಕಾಂತಿಯುಕ್ತ ತೇಜೋರಾಶಿಗಳು ನಮ್ಮ ಪುಣ್ಯಭಾರತದಲ್ಲಿರುವರು ಮಹಾತ್ಮಾ ಗಾಂಧಿಜಿ, ಕವಿ ರವೀಂದ್ರರು, ಸರ್ ಜಗದೀಶ್ಚಂದ್ರ ಭೋಸರು, ಸರ್ ಸಿ ವಿ ರಾಮನರು, ಸರ್ ವಿಶ್ವೇಶ್ವರಯ್ಯರು, ಮಹರ್ಷಿ ಅರವಿಂದ ಘೋಷರು, ರಾಷ್ಟ್ರಪತಿ ನೆಹರೂ, ಸುಭಾಷ್ಚಂದ್ರ ಭೋಸರು. ಈ ಎಲ್ಲಾ ಬುದ್ಧಿಶಾಲಿಗಳು ಸಾಮಾನ್ಯರಲ್ಲ ಇಂಥ ಮಹನೀಯರು ಸ್ವತಂತ್ರ ದೇಶಗಳಲ್ಲಿದ್ದು ದೇಶಸೇವಾನಿರತರಾಗಿದ್ದರೆ, ಆ ಸರಕಾರವು ಈ ಮಹನೀಯರನ್ನು ಯಾವ ಉಚ್ಚ ತರಗತಿಯಲ್ಲಿಡುತ್ತಿದ್ದರೆಂಬುದನ್ನು ಚರಿತ್ರಕಾರರೇ ಚಿತ್ರಿಸಬೇಕಾಗಿದೆ

ವಿಜ್ಞಾನಶಾಸ್ತ್ರ ಪಂಡಿತರಾಗಿ ತರತರದ ಆಯುಧಗಳನ್ನು ನಿರ್ಮಿಸಿ ಲೋಕವನ್ನು ಬೆದರಿಸುತ್ತಿರುವ ಪಾಶ್ಚಿಮಾತ್ಯರು ಸ್ವತಂತ್ರ ದೇಶದವರೆಂಬುದನ್ನು ಮರೆಯಬಾರದು ದೇಶದಲ್ಲಿ ತಮ್ಮ ಇಚ್ಛಿತ ಪ್ರಕಾರ ನಡಕೊಳ್ಳಲು ಆ ದೇಶದವರಿಗೆ ಸರ್ವಾನುಕೂಲತೆಗಳು ಇದ್ದೇ ಇವೆ ಆದರೆ ನಮ್ಮಲ್ಲಿ? ನಿರಾಯುಧರಾಗಿ ಸ್ವರಕ್ಷಣೆ ಮಾಡಿಕೊಳ್ಳಲು ಅಸಮರ್ಥರಾಗಿ ಪ್ರತಿ ಒಂದು ವಿಷಯದಲ್ಲಿಯೂ ಇಂಗ್ಲಾಂಡಿನ ಕಡೆಗೆ ಕತ್ತೆತ್ತಿ ನಿಲ್ಲಬೇಕಾಗಿದೆ ಯಾತರಿಂದ? ಪಾರತಂತ್ರ್ಯದ ಸೆರೆಯಾಳಾಗಿ ಕೈಗೊಂಬೆಗಳಾಗಿರುವುದರಿಂದಲೇ

ವಿಜ್ಞಾನಶಾಸ್ತ್ರದಲ್ಲಿ ನಿಪುಣರಾಗಿ ಲೋಕದಲ್ಲಿ ಶ್ರೇಷ್ಠವಾದ ನೊಬೆಲ್ ಬಹುಮಾನವನ್ನು ಕೂಡ ಪಡೆದು ಬುದ್ಧಿವಂತರೆಂದು ಹೆಸರುವಾಸಿಯಾದ ಸರ್ ಸಿ. ವಿ. ರಾಮನರು ಒಂದು ಕಡೆಯಲ್ಲಿ ಇತ್ತಲಾಗೆ ಭಾಷಣ ಮಾಡಿದ್ದುದು ಸರ್ವಜನಿತವಾಗಿದೆ. "ವರ್ಷ ೧ಕ್ಕೆ ರೂಪಾಯಿ ಹತ್ತು ಲಕ್ಷದಂತೆ ಹತ್ತು ವರ್ಷಗಳಲ್ಲಿ ಕೊಟ್ಟು ಸಂಪೂರ್ಣ ಸ್ವಾತಂತ್ರ್ಯವನ್ನು ನನಗೆ ಕೊಟ್ಟಲ್ಲಿ ದೇಶದ ದಾರಿದ್ರ್ಯತೆಯನ್ನು ಹೋಗಲಾಡಿಸುವೆನಲ್ಲದೆ ದೇಶಕ್ಕೆ ಬೇಕಾದ ಯುದ್ಧದ ಹಡಗುಗಳಿಂದ ಸೂಜಿಯ ಮೊನೆಗಳ ವರೆಗೆ ತಯಾರಿಸಿಕೊಡುತ್ತೇನೆಂದು ಹೇಳಿದ ಮಾತು. ಅದು ಬರೀ ಬಾಯಿ ಮಾತಲ್ಲ. ಆದರೆ ಈ ಸೌಲಭ್ಯವನ್ನು ಆಳರಸರು ಒದಗಿಸಿರುವರೇ? ವರ್ಷಂಪ್ರತಿ ಕೋಟಿಗಟ್ಟಳೆ ಹಣವು ಬರೀ ವಿದೇಶೀ ಸೈನ್ಯಕ್ಕಾಗಿ ವಿನಿಯೋಗವಾಗುತ್ತಿರುವಾಗ್ಗೆ ದೇಶದ ಪ್ರಯೋಜನಕ್ಕೆ ಬೇಕಾಗುವ ಸರ್ ಸಿ. ವಿ. ರಾಮನರ ಆಸೆಯನ್ನು ಪೂರೈಸಲು ವರ್ಷಕ್ಕೆ ೧೦ ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಡಲು ಅಸಾಧ್ಯವೆ? ಎಷ್ಟಕ್ಕೂ ಅಲ್ಲ ಆದರೆ, ಆ ರೀತಿ ಒದಗಿಸಿಕೊಟ್ಟಲ್ಲಿ ದೇಶದಲ್ಲಿ ಸಾರ್ವತ್ರಿಕ ಚೇತನಹೊಂದಿ ಎಲ್ಲಾ ಸಾಮಗ್ರಿಗಳು ದೇಶದಲ್ಲುಂಟಾಗಿ ತಮ್ಮ ಸಾಮಗ್ರಿಗಳನ್ನು ಎಲ್ಲಿ ಸಮುದ್ರಕ್ಕೆ ಚೆಲ್ಲಬೇಕಾಗುತ್ತದೋ ಎಂಬುದೂ ದೇಶವು ಮತ್ತೆಲ್ಲಿ ತಮಗೆ ಎದುರುನಿಲ್ಲಬಹುದೆಂಬ ಸಂಕುಚಿತ ಬುದ್ಧಿಯೂ ಆಳರಸರಿಗೆ ಇದ್ದುದರಿಂದಲೇ ಸರ್ ಸಿ ವಿ ರಾಮನರ ಶರ್ತಕ್ಕೆ ಅವರು ಸೊಪ್ಪು ಹಾಕಲಿಲ್ಲ ಇದು ದೇಶದ ದೃಷ್ಟಿಯಲ್ಲಿ ಹೇಗೆ ಕಾಣುತ್ತದೆ? ಭಾರತೀಯರು ಇನ್ನೂ ಹೇಡಿಗಳಾಗಿ, ನಿರಾಯುಧರಾಗಿ ತಮ್ಮ ಸೂತ್ರದ ಬೊಂಬೆಗಳಾಗಿ ಯಾವತ್ತೂ ಇರಬೇಕಾಗಿಯೂ, ತಮ್ಮ ಸ್ವಾರ್ಥದ ವ್ಯಾಪಾರವು ನಿರಾಯಾಸವಾಗಿ ಸಾಗಬೇಕೆಂಬುದೂ ಆಳರಸರ ಇಚ್ಛೆಯಾಗಿರುತ್ತದೆ

ಬಲಾತ್ಕಾರದ ಆಡಳಿತ, ಅಧಿಕಾರ ದರ್ಪ, ಪ್ರಜಾಜನರ ಗೋಳು ಇವು ಯಾವ ದೇಶದಲ್ಲಿಯೂ ಬಹಳ ಸಮಯದ ವರೇಗೆ ಉಳಿಯಲಾರದು ಅನೇಕ ಪಾರತಂತ್ರ ದೇಶಗಳು ಮೇಲಿನ ತುಳಿತಕ್ಕೆ ಸಿಲುಕಿ ಕಡೆಗೆ ಎಚ್ಚೆತ್ತು ಸ್ವಶಕ್ತಿಯಿಂದ ಹೆಣಗಾಡಿ ತಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಂಡಿವೆ ಅದಕ್ಕೆ ಬೇಕಾಗಿ ರಕ್ತದ ಕಾಲುವೆಗಳನ್ನು ಸುರಿಸಿವೆ ಸರ್ವಸ್ವ ಕಳಕೊಂಡಿವೆ ಕಡೆಗೆ ಮಾತ್ರ ವಿಜಯಶ್ರೀಯನ್ನು ಗಳಿಸಿಕೊಂಡಿವೆ ಆದರೆ ಹಿಂದುಸ್ಥಾನದಲ್ಲಿ?

ಪೂಜ್ಯ ಗಾಂಧಿಜೀಯವರ ನಾಯಕತ್ವದಲ್ಲಿ ಶಾಂತಿಯುಕ್ತ ಅಸಹಕಾರ ಚಳವಳನ್ನು ಹೂಡಿ ಜೈಲಿಗೆ ಹೋಗಲಾಯಿತು. ಬಿರುದು ಬಾವಲಿಗಳನ್ನು ತ್ಯಜಿಸಿ ಸರ್ವಸ್ವವನ್ನೂ ಕಳಕೊಂಡು ಆತ್ಮಯಜ್ಞವನ್ನು ಮಾಡಿಯಾಯಿತು ಆದರೆ ಕಾರ್ಯವು ಸಿದ್ಧಿಯಾಗಲಿಲ್ಲ ಕಡೆಗೆ ಎಸೆಂಬ್ಲಿ ಕೌನ್ಸಿಲ್ ಗಳಿಗೆ ಹೊಕ್ಕು ಆ ಮೂಲಕವಾದರೂ ದೇಶದ ಹಿತವನ್ನು ನೋಡುವುದೆಂದರೆ ಅಲ್ಲಿಯೂ ತಡೆ ಇದ್ದೇ ಇದೆ ಇದರಿಂದಲೇ ಬಹುಮತ ಹೊಂದಿದ ಕಾಂಗ್ರೆಸು ಉಮೇದ್ವಾರರು ಸರಕಾರದ ಆಶ್ವಾಸನೆ ಸಿಕ್ಕದ್ದರಿಂದ ಭಗ್ನ ಮನೋರಥರಾಗಿ ಮಂತ್ರಿ ಸ್ವೀಕಾರಕ್ಕೆ ಸಲಾಂ ಹೊಡೆದರು ನವಸುಧಾರಣೆಯೆಂದು ಯಾವ ಹೊಸ ಸರಕಾರವು ಜ್ಯಾರಿಗೆ ಬಂತೋ ಅದರ ವಿವರವನ್ನು ತಿಳಿದು ಅದು ದೇಶಕ್ಕೆ ಪ್ರಯೋಜನವಿಲ್ಲೆಂದು ದೇಶಕ್ಕೆ ದೇಶವೇ ತಿಳಿಯಹೇಳಿದರೂ ಬಲಾತ್ಕಾರದಿಂದೆಂಬಂತೆ ಆಳರಸರು ಭಾರತದ ಮೇಲೆ ಮತ್ತೊಂದು ದೊಡ್ಡ ಹೊರೆಯನ್ನು ಹೇರಿಬಿಟ್ಟಿರು ಹೊಸ ಆಕ್ಟಿನ ಮರ್ಮವನ್ನು ಅರಿತವರೆಂದರೆ ಅವರು ಪೂಜ್ಯ ಮಹಾತ್ಮಾಜಿಯವರೇ ಹೊಸ ಆಕ್ಟಿನನ್ವಯ ಕಾಂಗ್ರೆಸ್ಸಿನವರು ಎಸೆಂಬ್ಲಿಗಳಿಗೆ ಬಹುಮತವಾಗಿ ಆರಿಸಲ್ಪಟ್ಟು ಇನ್ನೇನು ಮಂತ್ರಿಪದವಿ ಸ್ವೀಕಾರ ಮಾಡುವಷ್ಟರಲ್ಲಿ ಪೂಜ್ಯ ಗಾಂಧಿಜಿಯವರು ಪ್ರಾಂತಿಕ ಗವರ್ನರರು ಮಂತ್ರಿಗಳ ಉದ್ಯಮಗಳಲ್ಲಿ ಕೈಹಾಕಕೂಡದೆಂಬ ಭರವಸೆಯನ್ನು ಕೊಡಬೇಕೆಂಬ ಶರ್ತದಲ್ಲಿ ಮಂತ್ರಿಪದವೀ ಸ್ವೀಕಾರ ಮಾಡಬೇಕೆಂದು ಠರಾವು ತಂದು ಮಾನ್ಯಹೊಂದಿತು. ಇದರಿಂದ ೫೦ ವರ್ಷಗಳ ವರೇಗೆ ಸಾಕಿದ ಕಾಂಗ್ರೆಸ್ಸಿನ ಅಭಿಮಾನವು ಚಿರಸ್ಥಾಯಿಯಾಗಿ ನಿಲ್ಲುವಂತಾಯಿತು.

ಆಳರಸರು ಹಂಗಾಮಿಯಾಗಿ ನೇಮಿಸಿದ ಮಂತ್ರಿಗಳ ಮೇಲೆ ಪ್ರಜಾಸಮುದಾಯದ ವಿಶ್ವಾಸವಿರುವುದಿಲ್ಲ. ಇವರು ಆಳರಸರ ಕೈಗೊಂಬೆಗಳೆಂದು ಸಾರಲ್ಪಟ್ಟಿತು ಇದರಿಂದ ದೇಶದಲ್ಲಿ ಎಂದೂ ಇಲ್ಲದ ಜಾಗ್ರತವುಂಟಾಯಿತು ಅದಕ್ಕೆ ಸರಿಯಾಗಿ ಧುರೀಣರುಗಳಿಗೂ, ಪ್ರಚಾರಕರಿಗೂ ಸುಸಮಯ ಒದಗಿ ದೇಶಾಂತ್ಯವೂ ಕಾಂಗ್ರೆಸ್ಸಿನ ಪ್ರಚಾರವನ್ನು ಪುನರಪಿ ಮಾಡಲು ಅನುಕೂಲವಾಯಿತು. ಚುನಾವಣಾ ಪ್ರಚಾರದಲ್ಲಿ ಅರ್ಧದಲ್ಲಿ ಉಳಿದ ಪ್ರಚಾರಕಾರ್ಯವು ಈ ಒಂದು ತಿಂಗಳಲ್ಲಿ ಪೂರ್ತಿಯಾಯಿತೆಂದು ಹೇಳಬಹುದು ಕಾಂಗ್ರೆಸ್ಸಿನ ತತ್ವ ಬೋಧೆಗಳಿಗೆ ದೇಶದ ಪ್ರತೀ ಜನಾಂಗವೂ ತಲೆಬಾಗುತ್ತಿರುವರು, ಮುಸಲ್ಮಾನರೂ, ಕ್ರೈಸ್ತರೂ ಆಗಲೇ ಬಹುಪಕ್ಷವಾಗಿ ಕಾಂಗ್ರೆಸ್ಸನ್ನು ಸೇರುತ್ತಿರುವರು. ಮುಂದ ಪಕ್ಷದವರೂ ಕಾಂಗ್ರೆಸ್ಸಿನ ನೀತಿಗಳನ್ನು ಒಪ್ಪಿ ಸರಕಾರವನ್ನು ಎಚ್ಚರಿಸುತ್ತಿರುವರು. ದೇಶದಲ್ಲಿ ಎಂದೂ ಇಲ್ಲದ ಜಾಗ್ರತವುಂಟಾಗಿ ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಜಗತ್ತಿಗೆ ತೋರಿಸುವ ಸನ್ನಿವೇಶವು ಬಂದೊದಗಿದೆ. ಸರಕಾರದ ವರ್ತನೆಯನ್ನು ಪ್ರತೀ ಒಂದು ಪತ್ರಿಕೆಗಳೂ ಖಂಡಿಸಿರುತ್ತವೆಯಲ್ಲದೆ ಪಾಶ್ಚಿಮಾತ್ಯ ಧುರೀಣರುಗಳೂ ಖಂಡಿಸಿರುವರು ಆದರೇನು? ಸ್ವಪ್ರತಿಷ್ಠೆಯಲ್ಲಿ ಸ್ವಯಂ ಪ್ರಭುತ್ವದಿಂದ ಆಳುವ ಬಿಳಿ ಜನಾಂಗಕ್ಕೆ ಇದು ತಿಳಿಯಲಾರದು.

ಯಾವ ಪಾಶ್ಚಿಮಾತ್ಯ ಸರಕಾರದಲ್ಲಿ ಮಂತ್ರಿಗಳ ವಿರುದ್ಧ ಸಿಂಹಾಸನಾಧೀಶನು ಕೂಡಾ ವರ್ತಿಸಬಾರದೋ ಅದೇ ಇಂಗ್ಲಾಂಡಿನ ಅಂಕಿತದಲ್ಲಿರುವ ಬಡ ಹಿಂದೂಸ್ಥಾನದಲ್ಲಿ ಪ್ರಾಂತಿಕ ಗವರ್ನರರುಗಳ ಸೂತ್ರಧಾರಕ್ಕೆ ಆಯಾಯಾ ಮಂತ್ರಿಗಳು ಕುಣಿಯಬೇಕಾಗಿದೆ. ಈ ಕೈಗೊಂಬೆಗಳಿಂದ ಪ್ರಾಂತ್ಯಕ್ಕಾಗಲೀ ದೇಶಕ್ಕಾಗಲೀ ಯಾವ ಪ್ರಯೋಜನವಾದೀತು? ತಿಂಗಳೊಂದಕ್ಕೆ ಸಾವಿರಗಟ್ಟಲೆ ತಿಂದು ಆಳರಸರ ತಾಳಕ್ಕೆ ಸರಿಯಾಗಿ ಕುಣಿಯ ಹೋಗುವ ಮಂತ್ರಿಗಳು ಕಾಂಗ್ರೆಸ್ಸಿನಲ್ಲಿರಲಿಕ್ಕಿಲ್ಲ ದೇಶದ ಅಂತರಾಳವನ್ನು ಅರಿತು ದೇಶದ ಬಡ ಜನಾಂಗಕ್ಕೆ ಬೇಕಾದ ರೊಟ್ಟಿಗಳನ್ನು ಸಂಗ್ರಹಿಸಿ ಕೊಡುವ ಉದ್ದಿಶ್ಯದಿಂದಲೇ ಕಾಂಗ್ರೆಸು ಅಧಿಕಾರ ಸ್ವೀಕರಿಸುವುದೆಂದು ಆಳರಸರಿಗೆ ಗೊತ್ತಿದ್ದು ಮತ್ತೂ ಕಾಂಗ್ರೆಸ್ಸಿನ ಸತ್ವಪರೀಕ್ಷೆ ಮಾಡುವುದೆಂದರೆ ಅದು ಅವರ ಸಂಕುಚಿತ ದೃಷ್ಟಿಯೇ ಸರಿ ಆದುದರಿಂದಲೇ ದೇಶದ್ರೋಹಿಗಳನ್ನು ಕಟ್ಟಿಕೊಂಡು ಬಲಾತ್ಕಾರದಿಂದ ಪ್ರಜಾ ಜನರ ವಿರುದ್ಧರೀತಿಯಲ್ಲಿ ತಮ್ಮ ಅಧಿಕಾರವನ್ನು ನಡೆಸುತ್ತಿರುವರು. ಈ ದೆಸೆಯಿಂದಲೇ ದೇಶವು ಚೇತರಿಸಿಗೊಂಡಿದೆ

ದೇಶದ ಸರ್ವಕಾಲದಲ್ಲಿ ಈಗಿನ ಕಾಲವು ಬಹಳ ಮಹತ್ವದ್ದು ಭಾರತದಲ್ಲಿ ಸ್ವಾತಂತ್ರ್ಯದ ಅರುಣೋದಯವಾಗಿದೆ ಸ್ವತಂತ್ರ ಭಾಸ್ಕರನು ಇನ್ನೇನು ಮೂಡಣ ದಿಕ್ಕಿನಲ್ಲಿ ತನ್ನ ಕೆಂಪಾದ ಕಿರಣವನ್ನು ಜನತೆಗೆ ತೋರಿಸಿ ಮೇಲಕ್ಕೆ ಬರುತ್ತಿರುವ ಸುಯೋಗವು ಬರುತ್ತಿದೆ ಭಾರತೀಯರೆಲ್ಲರೂ ಒಗ್ಗಟ್ಟಿನಿಂದ ದೃಢನಿಶ್ಚಯದಿಂದ ಸ್ವಾತಂತ್ರ್ಯ ರವಿಯನ್ನು ನೋಡಲು ಒಮ್ಮತದಿಂದ ಹಾಸಿಗೆಗಳನ್ನು ಬಿಟ್ಟೇಳಬೇಕಾಗಿದೆ ಇನ್ನೂ ರವಿಯು ಉದಯಿಸಲಿಲ್ಲವೆಂದು ಮುಸುಕುಹಾಕಿಕೊಂಡು ಮಲಗಿದ್ದಲ್ಲಿ ತನ್ನ ಪಾಲಿನ ಕೆಲಸವು ಬಾಕಿಯಾಗಿ ಅವಹೇಳನಕ್ಕೆ ಕಾರಣವಾಗಬಹುದು ಭಾರತಮಾತೆಯೇ ನಿನ್ನ ಸುಪುತ್ರರನ್ನು ಅರುಣೋದಯವಾಗುವುದರೊಳಗಾಗಿ ಎಬ್ಬಿಸಿಬಿಡು. ಆಗಲೇ ನಿನ್ನ ದಾಸ್ಯಶೃಂಖಲೆಯು ಬಿಚ್ಚಲ್ಪಡುವುದು

ಎಂ. ಬಿ. ನರಸಪ್ಪ

ಅನುಕ್ರಮಣಿಕೆ

ಟೀಟಿಪ್ಪಣಿಗಳು	೩
ಪಾರ್ಲಿಮೆಂಟಿನ ಮೆಂಬರುಗಳ	
ಫೋಟೋಫೋಟೋ	
ಭೂತ	೫
ವಿಶೇಷ ವಾರ್ತೆಗಳು	೪
... ಉದಯಿಸಿದನೆ	೯
ರಶ್ಯನ್ ರಾಯಭಾರಿಯ ವಂಚನೆ	೧೩
ಅಗ್ರಲೇಖ	
ಆಕ್ಷೇ? ಸಂಧಾನವೆ?	೧೦
ಸ್ಫುಟವಿಚಾರಗಳು	
ವರ್ತಮಾನ ಸಂಗ್ರಹ	
ವಿವಿಧ ಸಮಾಚಾರಗಳು	೧೧
ಜಿಲ್ಲೆಗಳಿಂದ ಸಮಾಚಾರ	೧೪
ತಾಲೂಕುಗಳಿಂದ	,,
ಅಮೇರಿಕದ ಚಿತ್ರ ಶಿರೋಮಣಿ	೧೬
ಹಿಂದೂದೇಶ	೭

ತಾ. ೭ನೇ ಶುಕ್ರವಾರ ಮೇ ೧೯೪೭

ಸ್ವದೇಶಾಭಿಮಾನಿ

ಆಕ್ಷೇ? ಸಂಧಾನವೆ?

ಬ್ರಿಟನ್ನಿನಲ್ಲಿ, ಆಗಾಗ ಭೂಕಂಪವಾಗುವಂತೆ ಆಗಾಗ ಭಾಷಣಗಳನ್ನು ಮಾಡುವ ವಿಶೇಷ ಚೇಷ್ಟೆಯುಳ್ಳ ಚರ್ಚಿಲ್ ಸಾಹೆಬರು ಭಾರತವರ್ಷದ ಈಗಣ ಪರಿಸ್ಥಿತಿಯನ್ನು ಕುರಿತಾಗಿ 'ಹಿಂದಿನಂತಲ್ಲ, ನಾವು ಈಗ ಯುದ್ಧ ಸನ್ನದ್ಧರಾಗತ್ತ, ಕರಿನ ವ ನಸ್ಸಿನ ಕರ್ತರು ಬ್ರಿಟನ್ನಿನ ವಾಯುಮಂಡಲವೇ ಹೀಗೆ ಕಪೋರ ಲಕ್ಷಣವನ್ನು ತಳೆದಿದೆ ಚೋಕೆ '' ಎಂದು ನಮಗೆ ತಿಳಿಯುವಂತೆ ಸಾರುತ್ತಿರುವರು. ಯೂರೋಪಿನಲ್ಲಾದ ಅತಿ ಘೋರ ಮಹಾಯುದ್ಧದಲ್ಲಿ ಬ್ರಿಟಿಷ ಮುಖ್ಯ ಮಂತ್ರಿಗಳಾಗಿದ್ದ ಲೊಯ್ಡ್ ಜೋರ್ಜ ಸಾಹೇಬರು ಆಗಲೆ,– 'ಒಂದು ಆಕ್ಟನ್ನು ಮಾಡಿ, ಅದನ್ನು ಭಾರತವಾಸಿಗಳ ಮೇಲೆ ಒತ್ತಾಯದಿಂದ ಹಿಡಾಯಿಸುವುದು ಸ್ವೀಕೃತದಲ್ಲಿ ಹಿಹಿತವಾಗಿಲ್ಲ, ಅವರೊಡನೆ ಒಂದು ಸಂಧಾನಮಾಡಿಕೊಳ್ಳುವುದೇ ವಿಹಿತವಿಧಾನ' ಎನ್ನುವರು ಇವೆರಡು ವಿಚಾರಗಳ ನಡುವೆ ನಮ್ಮೀಗಣ ಪರಿಸ್ಥಿತಿಯನ್ನು ಕುರಿತಾಗಿ ಬ್ರಿಟಿಷ ಜನತೆಯು ಮನೋಸ್ಥಿತಿಯು ಆಂದೋಲನ ಮಾಡುತ್ತಿದೆಯೆಂದು ಇವರಿಂದ ಸ್ಪಷ್ಟವಾಗುತ್ತಿದೆ

ಕೊಂಗ್ರೆಸ್ ಮುಖಂಡರೂ ಸರಕಾರದ ಧೋರಣವನ್ನು ಕುರಿತಾಗಿ ಆಗಾಗ ಪ್ರಕಟಿಸಿರುವ ಹೇಳಿಕೆಗಳೂ ಮುಖಂಡರ ಭಾಷಣಗಳೂ ಕೊಂಗ್ರೆಸಿನ ಮನೋಭಿಪ್ರಾಯಗಳನ್ನು ಎಷ್ಟು ಸರಿಯಾಗಿ ನ್ಯಾಯಶೀಲ ರೀತಿಯಿಂದ ವಿವರಿಸುತ್ತ ಬಂದರೂ, ಪಾರ್ಲಿಮೆಂಟಿನಲ್ಲೂ ಇಂಡಿಯಾ ಆಫೀಸಿನ ಅಧಿಕಾರಿಗಳೂ ತಮ್ಮ ಹಾಡನ್ನೆ ರಾಗ ಹಿಡಿದು ಪದೇ ಪದೇ ಹಾಡುತ್ತಿರುವರು. ಮೊನ್ನೆ ಪಾರ್ಲಿಮೆಂಟಿನಲ್ಲೂ ಎಂದಿನದೇ ಈ ವಿಷಯ ಪ್ರಶ್ನೋತ್ತರಗಳು ನಡೆವಾಗ, ಅಂಡರ್ ಸೆಕ್ರೆಟರಿ ಸಾಹೆಬರು,— ಇನ್ನಾದರೂ ಸದ್ವಿಚಾರಗಳು ಅವರ ಮಾತುಗಳಲ್ಲಿ ಮೂಡಬಹುದೆಂದು ನಮ್ಮೆಲ್ಲರಲ್ಲಿದ್ದ ನಂಬುಗೆಯನ್ನು ನಿರಾಶೆಗೊಳಿಸಿರುವುದು ವಿಷಾದಕರವಾಗಿದೆ. ಇನ್ನು ಇನ್ನೂ ಆಕ್ಟನ್ನೆ ನೋಡಿರಿ, ಗರ್ನರರಿಗೆ ಕೊಟ್ಟಿರುವ ಅಧಿಕಾರ ಸೂಚನೆಗಳನ್ನು ೧೯೩೫, ಎಂದೇ ತನ್ನ ಅಭಿಪ್ರಾಯವೇ ಸರಿಯಾದುದೆಂದೂ ಅದನ್ನು ಸಿದ್ಧಗೊಳಿಸಿದ,— ನಿಜಸ್ಥಿತಿಯನ್ನು ಹಾಗೆಯೆ ಬಿಟ್ಟು ಶಾಸನದ ಮೂರ್ತಿಯನ್ನೆ ಆರಾಧಿಸುತ್ತಿರುವರು; ವಿಗ್ರಹಾರಾಧಕರಾದರೂ ಮೂರ್ತಿಯಲ್ಲಿ ಪ್ರತಿಷ್ಠಿತವಾಗಿರುವ ಪ್ರಾಣದಲ್ಲಿ ನಂಬುಗೆಯನ್ನಿಟ್ಟು, ತಮ್ಮ ಆರಾಧನೆಯನ್ನು ಅದಕ್ಕೊಪ್ಪಿಸುವಂತೆ ಶಾಸನಾರಾಧನೆಯೆ ಕರ್ತವ್ಯ ಸರ್ವಸ್ವವೆಂದು ಅವರು ಇನ್ನೂ ನಂಬುತ್ತಿರುವುದು ವಿಹಿತವೆ? ಅತುಲವಾದ ಭಕ್ತಿಭಾವಗಳು ಅವರಲ್ಲಿರಬೇಡವೆ?

'ಸಭೆಗಳನ್ನು ಕೂಡಿಸಲು ಉಂಟಾಗಿರುವ ಆತಂಕಗಳನ್ನು ಗವರ್ನರರು ಹೋಗಲಾಡಿಸುವ ಹಾಗೆ ಅಗತ್ಯವಾಗಿರುವ ಸಲಹೆಗಳನ್ನು ಅವರಿಗೆ ಕೊಡಿರಿ,' ಎಂದರೆ, ಆಕ್ಟಿನಲ್ಲಿರುವಂತೆ ಆರು ತಿಂಗಳೊಳಗೆ ಅವರು ಸಭೆ ಕೂಡಿಸುವರು ಎಂದು ಉತ್ತರ. ಇದು ಯಾರಿಗೂ ಗೊತ್ತಿಲ್ಲದ ವಿಷಯವೆ? ಅದನ್ನು ಪಾರ್ಲಿಮೆಂಟಿನ ಮಹಾ ಮಂದಿರದಲ್ಲಿ ಮಹಾತ್ಮರಾದ ಅಧಿಕಾರಿಗಳು ಅವೋಘವಾದ ವಾಕ್ಯಗಳಿಂದ ಮಾತ್ರ ವಿವರಿಸಿ ಸಾರಬೇಕೆ? ಆತಂಕಗಳು ಯಾವುವೆಂದು ಎಲ್ಲರಿಗೂ ಗೊತ್ತಿದೆ, ಅವನ್ನು ಹೋಗಲಾಡಿಸಲು ಭರವಸೆಯನ್ನು ಲಂಡನು ಕೊಡದ ಕಾರಣ ಮಾತ್ರವಲ್ಲದೆ, ಭರವಸೆ ಕೊಡದಂತೆ ಸೂಚಿಸಿದ ಕಾರಣವೇ ಗವರ್ನರರ, ತಮ್ಮ ನ್ಯಾಯ ಬುದ್ಧಿಯನ್ನು ಉಪಯೋಗಿಸಲು ಅವಕಾಶವಿಲ್ಲವಾಗಿದೆ ಎಂದು ತಿಳಿದವರು ಹೇಳಿರುವರು ಇದಲ್ಲದೆ, ಆರು ತಿಂಗಳತನಕ ಸಭೆಗಳನ್ನು ಕೂಡಿಸುವ ಅಗತ್ಯವೂ ಇಲ್ಲವೆಂದು ಇವರು ಇನ್ನಷ್ಟು ಧೈರ್ಯದಿಂದ ಬಲಪಡಿಸಿ ಒತ್ತಿ ಹೇಳಿದಂತಾಯಿತು!

ಈ ಕಾರ್ಯಸರಣಿಯ ಪರಿಣಾಮವೇನಾಗುವುದು? ಅದನ್ನು ವಿವರಿಸುವ ಅಗತ್ಯವೇನೂ ಇಲ್ಲ. ಇದೇ ವಾರದಲ್ಲಿ ಪ್ರಕಟವಾದ ಒಂದೆರಡು ವಿಮರ್ಶಾನಗಳನ್ನು ನೋಡಿದರೆ, ಈಗ ಪ್ರಚಲಿತ ಸರಕಾರಕ್ಕಾದಗಿರುವ ಮಂತ್ರಿಮಂಡಲಗಳ ದಿವ್ಯ ಸ್ಥಿತಿಯ ಭಾಗ್ಯವೆಷ್ಟೆಂದು ಗೋಚರಕ್ಕೆ ಬರುವುದಿಲ್ಲವೆ? ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳಿರುವ ಕೊಂಗ್ರೆಸ್ ಪಕ್ಷದಲ್ಲಿ, ಯಾರ ಅತ್ಯಲ್ಪ ಶ್ರದ್ಧಾವಿಹೀನ ದುರ್ಬಲ ಸ್ವಾರ್ಥಾಂಧರಿರುವರಾದರೆ ಅವರನ್ನು ತಮ್ಮೊಡನೆ ಸೇರಿಸಿಕೊಳ್ಳೋಣವೆಂದು ಗೋಪನದಲ್ಲಿ ಅಲ್ಲಲ್ಲಿ ನಾನಾ ಪ್ರಯತ್ನಗಳನ್ನು ಈ ಮಂತ್ರಿಗಳು ನಡೆಸುತ್ತಲೇ ಇರುತಿದ್ದಂತೆಯೂ ಪ್ರಕಟವಾಗುತ್ತಲೇ ಇದೆ. ಇದು ಸತ್ಯವೆಂದು ಮಂತ್ರಿಗಳು ಈ ಪತ್ರವ್ಯವಹಾರವನ್ನು ನಿಷೇಧಿಸದೆ ಇರುವುದರಿಂದಲೇ ವಿದಿತವಾಗುತ್ತಿದೆ ಒಂದು ವೇಳೆ ಕೊಂಗ್ರೆಸಿನವರಾದ ಪ್ರತಿನಿಧಿಗಳಲ್ಲಿ ಯಾರೇ ಇವರ ಗಾಳ ನುಂಗದಿರುವುದು ಖಂಡಿತ ಯಾರೂ ಅಂಥವರು ಒಲಿಗೆ ಬಿದ್ದರೆ, ಅಂಥವರನ್ನು ಕೂಡಿ ತಮ್ಮ ಹೆಚ್ಚಳವನ್ನು ಬೆಳಗಿಸೋಣ ಎಂದು ಇವರಲ್ಲಿ ಬಹುದಾಗಿರ ಪ ಅಭಿಪ್ರಾಯವನ್ನಾದರೂ ಜನತೆಯು ತಿಳಿದುಕೊಂಡು ಜಿಗುಪ್ಸೆ ತಳೆಯದೆ ಇರಲಾರದು

ಕೊಂಗ್ರೆಸಿನವರೇ ಅಧಿಕಾರ ನಿರ್ವಹಿಸುವಾಗ ಕೈಕೊಳ್ಳಬೇಕೆಂದು ಮೊದಲಾಗಿ ಪ್ರಕಟಿಸಿದಂಥ ಕಾರ್ಯಕ್ರಮವನ್ನು ಈ ಮಂತ್ರಿಮಂಡಲಗಳು ಕೈಕೊಂಡು, ಕೊಂಗ್ರೆಸಿನವರಿಂದೇನು ಹೆಚ್ಚು ತಮ್ಮಿಂದೇನು ಕಡಮೆ ಎಂಬುದನ್ನು ಮೆರೆಯಿಸಲಿಚ್ಛಿಸುತ್ತಿರುವರು ಲಂಡನಿನ ಟೈಮ್ಸ್ ಪತ್ರಿಕೆಯು ಇದನ್ನು ಕೊಂಗ್ರೆಸಿನ ಪ್ರತಿನಿಧಿಗಳಿಗೆ ಬೇರೆ ತೋರಿಸಿಕೊಟ್ಟು, ನೀವಲ್ಲದ್ದರೆ ಇವರಾದರೂ ಜನಪ್ರಿಯರಾಗ ಹತ್ತಿರುವರಲ್ಲ ಎಂಬುದನ್ನು ತಿಳಿದೂ ನೀವು ಸುಮ್ಮನಿರುವುದು ಸೊಗಸೇ ಎಂದು ಪ್ರಶ್ನೆ ಕೇಳುವ ಕುತ್ಸಿತೋಪಾಯವನ್ನು ಕೈಕೊಂಡಿರುವುದು. ಇವರನ್ನು ಗವರ್ನರರು ಆತಂಕ ಪಡಿಸುತ್ತಾರೆಯೆ? ಇಲ್ಲ. ಆತಂಕಪಡಿಸಿದರೆ, ಗವರ್ನರರು ತಮ್ಮನ್ನೇ ಆತಂಕಪಡಿಸುವಂತಾಗದೆ? ಎಂದು ಜನತೆಯು ತತಿಸುತಿದೆ

ಈ ಅವಕಾಶದಲ್ಲಿ ಬಹುಸಂಖ್ಯೆ ಮೊದಲರೇ ಧಾರಾಳ ಸಂಖ್ಯೆಯಲ್ಲಿ ಈ ಮಂತ್ರಿಮಂಡಲದಲ್ಲಿ ತಮಗೆ ವಿಶ್ವಾಸವಿಲ್ಲೆಂಬ ಠರಾವನ್ನು ಗವರ್ನರರಿಗೆ ಕಳುಹಿಸುವರು! ಈ ಠರಾವಿಗೆ ಸಹಿ ಹಾಕಿದವರಲ್ಲಿ, ಮಂತ್ರಿಮಂಡಲದ ಬೆಂಬಲಕ್ಕಾಗಿ ಯಾರು ಇರುವರಂತೆ ಎಂದು ಇವರನ್ನು ಪುಸಲಾಯಿಸಬಹುದೋ ಮಂತ್ರಿಗಳ ಚಾತುರ್ಯವೇ ಬಲ್ಲದು. ಬೆಂಬಲವೇ ಇಲ್ಲದ ಮಂತ್ರಿಗಳು, ಇಲಾಖಾ ಮಂತ್ರಿಗಳು ಹೊರತು ಸರಕಾರದ ಮಂತ್ರಿಗಳಾಗಿಯೂ, ಪ್ರಜಾಗಣದ ಪ್ರತಿನಿಧಿಗಳಾಗಿಯೂ ರಾಜ್ಯಭಾರವನ್ನು ನಿರ್ವಹಿಸಲಾರರೆ, ಇದೆಂತಹ ಪ್ರಜಾಸತ್ತೆ ಅಥವಾ ಪ್ರಾಂತಿಕ ಸ್ವರಾಜ್ಯವೆನಿಸಬಹುದೇ ಆಕ್ಟನ್ನೆ ಆರಾಧಿಸುವವರಾದರೂ ಹೇಳಬಹುದಲ್ಲ!

ಹೀಗಿದ್ದರೂ ಇಂಡಿಯಾ ಆಫೀಸು ಪ್ರಶ್ನೆಗಳಲ್ಲಿ ಸೂಚಿತವಾದ ಮುಖ್ಯ ತತ್ವವನ್ನು ಗ್ರಹಿಸಿಕೊಂಡುಕೊಂಡಿರದಂತೆ ವರ್ತಿಸುತ್ತಿದೆ 'ಅಧಿಕ ಸಂಖ್ಯಾಕ ಪಕ್ಷಗಳ ಪ್ರತಿನಿಧಿಗಳನ್ನೇ ಮೊದಲು ಕರೆದಿದ್ದರು! ಇನ್ನಾರು ತಿಂಗಳಲ್ಲಿ ಸಭೆ ಕರೆಯದಿರರು! ಗವರ್ನರರಿಗೆ ಅಂತಿಂತಹ ಭರವಸೆ ಕೊಡುವ ಅವಕಾಶವು ಆಕ್ಟಿನಲ್ಲಿಲ್ಲ'' ಎಂದೆಲ್ಲ ಉತ್ತರಗಳು ಬಂದಿವೆ. ಯಾವುದೊಂದು ಸಂದರ್ಭದಲ್ಲಿ ಅನಗತ್ಯವಾದ ಆತಂಕಗಳಿದ್ದುವೆಂದು ಕಾಂಗ್ರೆಸು ಆಗ ಅಧಿಕಾರ ಸ್ವೀಕರಿಸಲಿಲ್ಲವಾದ ಕೂಡಲೆ, ಜನ್ಮಕ್ಕೂ ಕೂಡದು ಎಂದು ಅವರಲ್ಲಿ ಅನರ್ಹತೆಯ ಅಪರಾಧ ಹೊಂಸುವುದಕ್ಕೂ ಆಕ್ಟಿನಲ್ಲಿ ಸೆಕ್ಷನುಗಳಿವೆಯೆ? ಸಂದುಕಟ್ಟಿನಲ್ಲಿ ಒದಗಿದ ಮಂತ್ರಿಗಳು ಶಾಶ್ವತರಾಗಿಯೆ ಬಾಳಬೇಕೆ?

ಕೊಂಗ್ರೆಸ್ ಕಾರ್ಯಕಾರೀ ಮಂಡಲವು ತನ್ನ ಹೇಳಿಕೆಯನ್ನು ಬಹಳ ವಿವರವಾಗಿ ಹೇಳಿರುವಾಗ, ಮಂತ್ರಿಯಾಗಿ ಅಧಿಕಾರ ನೋಡುವವನ ಕಾರ್ಯದಲ್ಲಿ ಗವರ್ನರರು ಕೈಯಿಕ್ಕಬಾರದು, ಅವನನ್ನು ಅಂಥ ಸಂದರ್ಭದಲ್ಲಿ ನಿವೃತ್ತಿಗೊಳಿಸತಕ್ಕದು ನಿವೃತ್ತಿಗೊಳಿಸುವುದಕ್ಕೂ ತಕ್ಕ ಕಾರಣಗಳಾವುವೆಂದು ಆಕ್ಟೇ ಹೇಳಿರುವುದಲ್ಲ' ಅನುಸಿಕ್ತದ ಸರ್ವಸಾಮಾನ್ಯ ಕರ್ತವ್ಯಗಳಲ್ಲಿ ಸಹ ಗವರ್ನರರು ಆತಂಕಪಡಿಸ್ಪರೆ ತೀರಿತು' ಎಂದು ಶ್ರೀ ರಾಜಗೋಪಾಲಚಾರ್ಯರು ಸ್ಪಷ್ಟ ಹೇಳಿರುವಾಗ, ಇನ್ನು ಈ ಕಚ್ಚಾಟವು ಮುಗಿಯಬಾರದೆಂದಿದೆಯೆ? ಆರು ಪ್ರಾಂತ್ಯಗಳಲ್ಲಿನ ಮತದಾರರ ಮತಕ್ಕೆ ಮಾನ್ಯವಿರಬೇಕೆಂತಾದರೆ, ಕೂಡಲೆ ಸಭೆಗೂಡಿಸಿ ಅಧಿಕಸಂಖ್ಯಾಕರ ಪ್ರತಿನಿಧಿಗಳನ್ನು ಮಂತ್ರಿಗಳಾಗಿರೆಂದು ಆಮಂತ್ರಿಸಬಾರದೆ? ಜವಾಬುದಾರರಾದ ಮಂತ್ರಿಗಳಾಗಿ ಅವರು ಕಾರ್ಯನಿರ್ವಹಿಸುವಾಗ ಅವರನ್ನು ಆತಂಕಿಸದೆ, ಅವರು ಜವಾಬುದಾರಿಯನ್ನು ಮೀರಿದರೆಂದು ತಿಳಿದೊಡನೆ ಅವರನ್ನು ನಿವೃತ್ತಗೊಳಿಸುವ ಜವಾಬದಾರಿಯನ್ನು ಆಕ್ಟನ್ನು ಆಧಾರವಾಗಿ ಹೇಳುವವರೂ ಅಂಗೀಕರಿಸಬಾರದೆ?

ಇಷ್ಟು ದಿನ ನಿಷ್ಫಲವಾಗಿ ಪರಸ್ಪರ ಸಂದೇಹ ದೋಷಶೋಧನೆಗಳಿಂದ ಕಳೆದುದು ಸಾಕು ಇತ್ತಂಡಗಳ ಅಧಿನಾಯಕರು ಇನ್ನಾದರೂ ಕರಾರಿನಂತೆ ನಡೆದರೆ ಉತ್ತಮ, ಅದೇ ಈ ಪರಿಸ್ಥಿತಿಗೆ ಒಪ್ಪತಕ್ಕದು ಎಂದು ಲೋರ್ಡ್ ಜೋರ್ಜರು ಸೂಚಿಸಿದುದು ವಿಹಿತವಲ್ಲವೆ?

ಸ್ಫುಟವಿಚಾರಗಳು

ಅಖಂಡ ... ...

ಜಿನ್ನಾರವರು ಮುಸ್ಲಿಮರೆಲ್ಲ ಮುಸ್ಲಿಮ ಲೀಗಿನವರಾಗಿರಿ ಎಂದು ಘೋಷಿಸುವರು, ಈ ಲೀಗಿನವರು ಹೇಳುವ ಅಧಿಕಾಂಶ ಧ್ಯೇಯಗಳೂ ಕೊಂಗ್ರೆಸಿನ ಧ್ಯೇಯಗಳೂ ಒಂದೇ ಆದರೂ, ಕೊಂಗ್ರೆಸಿಗೆ ಮುಸ್ಲಿಮರು ಸೇರಿದರೆ, ತಮ್ಮ ಜಾತೀಯತೆ ಹೋಗುವುದೆಂದು (ಮದ್ರಾಸು ಸಭೆಯಲ್ಲಿ ಕೆಲ ಕ್ರೈಸ್ತರು ಎಂದಂತೆ) ಜಿನ್ನಾರವರು ಎನ್ನುವರು ಇಂತಹ ಆಕ್ಷೇಪಗಳನ್ನು ಸರಿಯಾಗಿ ವಿವರಿಸಿ ಅವಕ್ಕೆ ಕಾರಣವಿಲ್ಲೆಂದು ವಿವರಿಸುವುದಕ್ಕೆ ಈಗ ಕೊಂಗ್ರೆಸು ಪ್ರಯತ್ನ ಮಾಡುತ್ತಲಿದೆ ಮಲಬಾರಿನ ಹರಿಜನ ಪ್ರತಿನಿಧಿಗಳೊಬ್ಬರಿಗೆ ಮಂತ್ರಿಮಂಡಳದಲ್ಲಿ ಸೇರುವಂತೆ ಬೇಕಾದ ಪುರಸ್ಕಾರವನ್ನು ಭರವಸೆ ಕೊಟ್ಟಿದ್ದರೂ ಅವರೊಪ್ಪಲಿಲ್ಲ ಮಾತ್ರವಲ್ಲ ಕೊಂಗ್ರೆಸಿನ ಮೂಲಕವೇ ತಮಗೆ ಉದ್ಧಾರವಿದೆ ಎಂದು ಮಹಾಸಭೆಯೊಂದರಲ್ಲಿ ಅವರು ಸಾರಿದರು ಇದರಂತೆ, ಮುಸ್ಲಿಮರಲ್ಲಿ ಆಧ್ಯರೆಷ್ಟೋ ಮಂದಿ ಇರುವ ಸಭೆಗಳು ತಾವಾಗಿ ಕೊಂಗ್ರೆಸಿನ ಪಕ್ಷವಾಗಿರುವರು, ಹೊರತು ಲೀಗಿನ ಪಕ್ಷವಾಗಿಲ್ಲ ಅಲ್ಪಸಂಖ್ಯಾಕರ ಹಕ್ಕು ಗೌರವಾದಿಗಳನ್ನು ಕಾಪಾಡುವ ಭಾರವು ಅಖಿಲಭಾರತದ ಕೊಂಗ್ರೆಸಿಗೆ ಸೇರಿಯೇ ಇದೆ ಎಂದೂ, ಇದನ್ನು ಮನ್ನಿಸದಿರುವಲ್ಲಿ ಕೊಂಗ್ರೆಸು ಅಖಿಲ ಜನಾಂಗದ ಸರಪಾದ ದೊಡ್ಡ ಗೌರವವೇ ವಿನಾಶ ಹೊಂದುವುದೆಂದೂ ಇವರೆಲ್ಲರು ತಿಳಿದಿರಬೇಕು, ಹಾಗೆ ತಿಳಿಯುವಂತೆ, ಅದನ್ನು ಒತ್ತಿ ಸಾರಬೇಕಾಗಿದೆ ಪ್ರತಿಯೊಂದ ಸಮಾಜದ ಧರ್ಮ, ಸಂಸ್ಕೃತಿ ಮೊದಲಾದ ನ್ಯಾಯವಾದ ಹಕ್ಕುಗಳನ್ನು ಕೊಂಗ್ರೆಸ ಕಾಪಾಡಿಯೇ ಕಾಪಾಡುವುದು, ಈ ... ಕೊಂಗ್ರೆಸಿಗೆ ಅನುಕೂಲವಾಗಿರಲಿ ಪ್ರತಿಕೂಲವಾಗಿರಲಿ ಕೊಂಗ್ರೆಸು ಅದನ್ನು ಗಣನೆಗೆ ತರುವಂತಿಲ್ಲ ನಿತ್ಯದೊಂದು ಸಮಾಜವು ಸಾಂಪತ್ತಿಕ ಮತ್ತು ರಾಜಕೀಯ ವಿಚಾರಗಳಲ್ಲಿ ಮುಂಬರಿಯುವಂತೆ ಕೊಂಗ್ರೆಸು ನವೀನ ಕಾರ್ಯಕ್ರಮಗಳನ್ನು ಹೂಡತರಬೇಕಾಗಿದೆ ಮುಸ್ಲಿಮರನ್ನು ಬಲಿಕೊಟ್ಟೇ ಇತರರು ಜೀವಿಸುತ್ತಾರೆಂದು ಕೆಲ ಮುಖಂಡರು ಈಗ ಹೇಳುವ ಧೈರ್ಯಪಡ್ಡರೆ ಹೇಳಲಿ. ಹಿಂದೆ, ಹಿಂದೂ ಮುಸ್ಲಿಮರೇ ಮೊದಲಾದವರನ್ನು ಪ್ರತ್ಯೇಕಿಸಿ ಸುಲಭವಾಗಿ ಆಳುತ್ತಿದ್ದ ರಾಜನೀತಿಯು ಈಗ ಅಷ್ಟು ಸುಲಭವಾಗಿ ಆಳಲು ಬಲವಡುವಂತಿಲ್ಲ ಹಿಂದೂ ಮುಸ್ಲಿಮರೊಳಗೆ ನಾನಾ ಭೇದಭಾವಗಳು ಇರಬಹುದು, ಆದರೆ, ಇತರರು, ತಮ್ಮನ್ನಾಳಬೇಕು ಹೊರತು ತಾವು ಒಂದಾಗಿ ದೇಶವನ್ನಾಳಲಾರೆವು ಎಂದು ಎರಡೂ ಸಮಾಜಗಳು ಹೇಳಲಾರವು

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR
OWN DISTRICT.
Available in 7lb and 14lb packets, at the
Office C. P. C Co., Ltd
ಕಲ್ಯಾಣಪುರ ಸಕ್ಕರೆಯನ್ನೇ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಜವಾಹರಲಾಲರಿಗೆ ಪುನಃ ಬಂಧನವೇ?

ಬರ್ಮಾ ಪ್ರವಾಸಕ್ಕೆ ಅಡ್ಡಿ

ನವರಾಜ ಶಾಸನದ ಶುಭ ಚಿಹ್ನೆಯೇ?

"ಅಮೃತ್ ಬಜಾರ್" ಪತ್ರಿಕೆಯ ಸಿಮ್ಲಾ ಪ್ರತಿನಿಧಿಯು ತಿಳಿಸಿಕೊಂಡ ಪ್ರಕಾರ ಸರಕಾರವು ಬರ್ಮಾಕ್ಕೆ ಹೋಗಲಿರುವ ಪಂಡಿತ್ ಜವಾಹರಲಾಲರಿಗೆ ಪ್ರತಿಬಂಧಕಗಳನ್ನು ತಂದೊಡ್ಡುವ ಶಾಸನವನ್ನು ಜಾರಿಮಾಡುವ ಹವಣಿಕೆಯಲ್ಲಿರುವರೆಂದು ಊಹಾಪೋಹಗಳೆದ್ದಿವೆಯಂತೆ. ಬರ್ಮಾವನ್ನು ಹಿಂದೂದೇಶದಿಂದ ವಿಂಗಡಿಸುವಾಗ ಬಹಳ ಚಳವಳವಾಗಿದ್ದು ಪಂಡಿತ್ ನೆಹರುಗಳ ಸಂಚಾರದಿಂದ ಅಲ್ಲಿ ಪುನಃ ಅದು ಆರಂಭವಾಗಬಹುದೆಂಬ ಹೆದರಿಕೆಯು ಸರಕಾರಕ್ಕೆ ಉಂಟಾಗಿದೆ. ಮುಂಚೆ ಬಂಗಾಳವನ್ನು ವಿಭಾಗಿಸನೋಡುವಾಗ ಆದ ತೊಂದರೆಗಳನ್ನು ಸರಕಾರವು ಪುನಃ ನೆನಪಿಗೆ ತಂದುಕೊಂಡಂತಿದೆ.

"ಆದರೆ ಸರಕಾರವು ಜವಾಹರಲಾಲ್ ನೆಹರುರಂತ ಮನುಷ್ಯರ ಮೇಲೆ ಪ್ರತಿಬಂಧಕವನ್ನು ಹಾಕಿದರೆ ಅವರು ಅದನ್ನು ಮನ್ನಿಸುವವರಲ್ಲವೆಂಬ ವಿಷಯವು ಸರಕಾರಕ್ಕೆ ತಿಳಿಯದೇ ಇಲ್ಲ. ನವರಾಜ್ಯಾಂಗ ಆಡಳಿತದ ಪ್ರಾರಂಭದಲ್ಲಿಯೇ ಇಂತಹ ಅಹಿತವಾದ ಧೋರಣೆಯನ್ನು ಅನುಸರಿಸುವಂತಾಗುವುದು ಶುಭಚಿಹ್ನೆಯಾಗಿ ತೋರುವುದಿಲ್ಲ."

ಸರಕಾರವು ಇನ್ನೊಂದು ಭಾರಿ ಯೋಚಿಸಬೇಕು

ಈ ವಿಚಾರದ ಕುರಿತು ಇಂಡಿಯಾ ಸರಕಾರವು ಪ್ರಾಂತಿಕ ಗವರ್ನರರ ಸಲಹೆಗಳನ್ನು ಕೇಳಿಕೊಂಡಿದೆ ಎಂದು ಒಂದು ವರದಿ ಬಂದಿದೆ. ಆದರೆ ಗವರ್ನರರುಗಳ ಅಭಿಪ್ರಾಯವೇನೆಂಬುದೆಂದು ಇನ್ನೂ ಸರಿಯಾಗಿ ತಿಳಿದುಬರಲಿಲ್ಲ. ಅಂತೂ ಪಂಡಿತ ನೆಹರುಗಳು ಕಲ್ಕತ್ತದಿಂದ ಬರ್ಮಾಕ್ಕೆ ಹೊರಟರು. ಇಷ್ಟರ ತನಕ ಜವಾಹರಲಾಲರು ಹೋದೆಡೆಗಳಲ್ಲಿ ಪ್ರತಿಬಂಧಕಗಳನ್ನು ತಂದೊಡ್ಡಿದ ಪ್ರಸಂಗವನ್ನು ಅವರು ಕಲ್ಪಿಸಲಿಲ್ಲ. ಹಿಂದೂಸ್ಥಾನದ ಯಾವ ಪ್ರಾಂತ್ಯದಲ್ಲೂ ಅವರಿಗೆ ತಡೆಯಿಲ್ಲದಿದ್ದರೂ ಬರ್ಮಾದಲ್ಲಿ ತಡೆಮಾಡುವಂತಹ ಸಂದರ್ಭವೇನಿರಬಹುದೆಂದು ಅಮೃತ ಬಜಾರ್ ಪತ್ರಿಕೆಯು ಪ್ರಶ್ನಿಸುತ್ತದೆ.

ಸುಭಾಸ್ ಬಾಬುಗಳು.

ಅಲಹಾಬಾದ್ ವರ್ಕಿಂಗ್ ಕಮಿಟಿ ಮೀಟಿಂಗಿನಲ್ಲಿ ಹಾಜರಿದ್ದು ಅಲ್ಲಿಂದ ಲಾಹೋರಿಗೆ ಬಂದಿರುವರು. ಅವರು ಅಲ್ಲಿಂದ ಡಾಲ್‌ಹೌಸಿಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳುವರು. ಸಾರ್ವಜನಿಕದಲ್ಲಿ ಭಾಷಣ ಮಾಡಲು ಲಾಹೋರಿನಲ್ಲಿ ಕೆಲವು ಪ್ರಮುಖರು ಬಾಬುಗಳನ್ನು ಕೇಳಿಕೊಂಡಾಗ ಅವರು ವೈದ್ಯರ ಸಲಹೆಯಂತೆ ಕೆಲವು ತಿಂಗಳ ನಂತರ ಅಂದರೆ ಡಾಲ್‌ಹೌಸಿನಿಂದ ಹಿಂತಿರುಗಿದ ಮೇಲೆ ಅವರ ಕೋರಿಕೆಯನ್ನು ಪೂರೈಸುವರೆಂದು ತಿಳಿಸಿರುವರು. ದೇಶವೆಲ್ಲವೂ ಪ್ರಿಯರ ಆರೋಗ್ಯದ ವಿಚಾರ ಬಹಳ ಆತುರಪಡುತ್ತದೆ. ಅವರು ಸಂಪೂರ್ಣ ನಿರೋಗಿಗಳಾಗಿ ಹಿಂತಿರುಗುವರೆಂದು ದೇಶಬಾಂಧವರ ಹೃತ್ಪೂರ್ವಕ ಆಕಾಂಕ್ಷೆಯಾಗಿರುತ್ತದೆ.

ವಲ್ಲಭಭಾಯಿಯವರ ಪ್ರಕಟಣೆ.

ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಕಮಿಟಿಯ ಅಧ್ಯಕ್ಷರಾದ ಶ್ರೀ ವಲ್ಲಭಭಾಯಿ ಪಟೇಲರು ಸಾರ್ವಜನಿಕ ಎಚ್ಚರಿಕೆಯ ಬಗ್ಗೆ ಈ ಕೆಳಗಿನ ಪ್ರಕಟಣೆಯನ್ನು ಪತ್ರಿಕೆಗಳಿಗೆ ಕೊಟ್ಟಿರುವರು.

'ಈಗ ಸ್ಥಾಪಿಸಲ್ಪಟ್ಟ ತಾತ್ಕಾಲಿಕ (ಗೊಂಬೆ) ಮಂತ್ರಿಗಳೆನಿಸಿದವರು ಕೆಲವರು ಕಾಂಗ್ರೆಸ್ ಮೆಂಬರರಾಗಿ ಚುನಾಯಿತರಾದ ಶಾಸನ ಸಭಾ ಸದಸ್ಯರಲ್ಲಿ ಕೆಲವರನ್ನು ಪುಸಲಾಯಿಸಿ ಕಾಂಗ್ರೆಸ್ಸಿನಿಂದ ಬೇರ್ಪಡಿಸುವ ಪ್ರಯತ್ನದಲ್ಲಿರುವರೆಂಬ ವಿಷಯವು ಜನತೆಗೆ ತಿಳಿಸಲು ಸಂತೋಷವಾಗುತ್ತದೆ. ಬಿಹಾರದಲ್ಲಿ ಕೆಲವು ಹರಿಜನ ಸದಸ್ಯರನ್ನು ಅಲ್ಲಿನ ಗೊಂಬೆ ಮಂತ್ರಿಗಳು ಕೆಲವರು ಅಧಿಕಾರವನ್ನು ಸ್ವೀಕರಿಸುವಂತೆ ಮಾಡಿದ ಪ್ರಯತ್ನಗಳೂ, ಕಾಂಗ್ರೆಸ್ಸಿನಿಂದ ದೂರವಿರಲು ಮನಸ್ಸಿಲ್ಲದ ಆ ಹರಿಜನರ ತಿರಸ್ಕಾರವೂ ಮುಂಚೆ ಒಂದು ಭಾರಿ ಪ್ರಕಟವಾಗಿದೆ. ಮಹಾತ್ಮಾ ಗಾಂಧಿಯವರು ಈ ಹರಿಜನರ ಸ್ಥೈರ್ಯವನ್ನು ತುಂಬಾ ಶ್ಲಾಘಿಸಿರುವರು.

'ಕಳೆದ ತಿಂಗಳು ಇಲ್ಲಿಗೆ ಮದ್ರಾಸಿನ ಕಾಂಗ್ರೆಸು ಮುಖಂಡರಾದ ಶ್ರೀ ರಾಜಗೋಪಾಲಾಚಾರ್ಯರು ಮಂಗಳೂರಿಗೆ ಬಂದಿದ್ದಾಗ ಮದ್ರಾಸ್ ಅಸೆಂಬ್ಲಿ ಸದಸ್ಯರಾದ ಮಂಗಳೂರಿನ ಶ್ರೀ ಎ. ಬಿ. ಶೆಟ್ಟಿ ಮತ್ತು ಮದರಾಸಿನ ತಾತ್ಕಾಲಿಕ ಗೊಂಬೆ ಮಂತ್ರಿಮಂಡಳದ ಸದಸ್ಯರಾಗಿದ್ದು ಅದೇ ಸಮಯಕ್ಕೆ ದಕ್ಷಿಣ ಕನ್ನಡಕ್ಕೆ ಬಂದಿದ್ದ ಶ್ರೀ ಆರ್ ಎಂ ಪಾಲಟ್ ಇವರೊಳಗೆ ನಡೆದ ಕೆಲವು ವಿಷಯವನ್ನು ಶ್ರೀ ಶೆಟ್ಟಿ ಶ್ರೀ ಆಚಾರ್ಯರಲ್ಲಿ ಅರಿಕೆ ಮಾಡಿಕೊಂಡಾಗ ಅವರು ಇದನ್ನು ಬಹಿರಂಗ ಪ್ರಕಟಣೆ ಮಾಡಿ ಜನತೆಯನ್ನು ಎಚ್ಚರಿಸಬೇಕೆಂದು ಸೂಚಿಸಿದರು.

ಕಡೆಯದಾಗಿ ಬಿ ಎಸ್ ನೆವಿಗೇಶನ ಕಂಪೆನಿಯ "ನೇತ್ರಾವತಿ" ಸ್ಟೀಮರು ಅದೇ ೨೨ ನೇ ಮಂಗಳವಾರ ಬೆಳಗ್ಗೆ ೯ ಗಂಟೆಗೆ ಮಂಗಳೂರಿನಿಂದ ಹೊರಡಲಿರುವುದು.

ಸ್ಪೈನ್ ಸರಕಾರದ ಕಡಾಯಿ ಪಡೆ

ನಂಗೆಕೋರರು ಹಿಮ್ಮೆಟ್ಟಿಸಲ್ಪಟ್ಟರು.

ಅನೇಕ ಇಟೇಲಿಯಾನರ ಮರಣ

ಅನೇಕ ಇಟೆಲಿಯಾನರಿಂದ ಕೂಡಿದ ಒಂದು ದಂಗೆಕಾರರ ಪಡೆಯು ಬರ್ಮಿಯೊ ಎಂಬ ಬಂದರು ಸ್ಥಳದೊಂದರಲ್ಲಿ ಸಂಪೂರ್ಣವಾಗಿ ಹಿಮ್ಮೆಟ್ಟಿಸಲ್ಪಟ್ಟಿತು. ಇಟೆಲಿಯಾನರ ಅವಸ್ಥೆಯು ಬಹಳ ಕನಿಕರಾಸ್ಪದವಾಗಿರುತ್ತದೆ. ಹಲವರು ದಾರಿ ಕಾಣದೆ ಸಮುದ್ರದಲ್ಲಿ ಮುಳುಗಿ ಈಜಾಡಿ ದಡವನ್ನು ಸೇರಲು ಪ್ರಯತ್ನಪಟ್ಟರಂತೆ. ದಂಗೆಕಾರರ ಕೆಲವು ಚಿಕ್ಕ ದೋಣಿಗಳು ಮುಳುಗುವ ಇಟೆಲಿಯಾನರ ಸಹಾಯಕ್ಕೆ ಬರುತ್ತಿದ್ದಂತೆಯೇ ಸರಕಾರದ ಮೆಶಿನು ಗನ್ನಿನ ಸುರಿಮಳೆಯ ದೆಸೆಯಿಂದಾಗಿ ಓಡಿಸಲ್ಪಟ್ಟವು.

ಬಿಲ್ಬಾವೊ ಜನರಿಗೆ ಸಹಾಯ.

ಬ್ರಿಟಿಷರು ಫ್ರೆಂಕೊವನ್ನು ಗಣನೆಮಾಡುವುದಿಲ್ಲ

ಬ್ರಿಟಿಷ ಯುದ್ಧ ಹಡಗುಗಳ ಸಹಾಯದಿಂದ ದಂಗೆಕಾರರಿಂದ ಮುತ್ತಿಗೆ ಹಾಕಲ್ಪಟ್ಟಿರುವ ಬಿಲ್ಬಾವೋ ಪ್ರದೇಶದ ನಿರಾಶ್ರಿತರನ್ನು ಒಯ್ಯುವ ಏರ್ಪಾಡನ್ನು ಬ್ರಿಟಿಷ್ ವಿದೇಶಾಂಗ ಇಲಾಖೆಯವರು ಮಾಡಿದ್ದು, ಆ ವಿಚಾರವನ್ನು ಜನರಲ್ ಫ್ರೆಂಕೋಗೆ ತಿಳುಹಲಾಯಿತು. ಸರಕಾರದ ಸೈನ್ಯ ಪಡೆಯು ಬಿಲ್ಬಾವೋ ಒಂದರಲ್ಲಿ ಯುದ್ಧವನ್ನು ಮಾಡುವ ಪ್ರಸಂಗವಿರುವುದರಿಂದ ದಂಗೆಕಾರರೂ ಕದನಕ್ಕೆ ಕೈಹಚ್ಚಿದ ಸಮಯದಲ್ಲಿ ಇತರ ಜನಾಂಗದವರ ಸ್ಟೀಮರುಗಳು ಮಧ್ಯ ಬಂದಿದ್ದು ಅವುಗಳೇನಾದರೂ ಅಪಾಯಕ್ಕೊಳಗಾದಲ್ಲಿ ತಾನು ಜವಾಬ್ದಾರನಲ್ಲವೆಂದು ಜನರಲ್ ಫ್ರೆಂಕೊವು ತಿಳಿಸಿದನು.

ಹೇಗಿದ್ದರೂ ಸಹಾಯ

'ದಂಗೆಗಾರ ನಾಯಕನು ಇಷ್ಟು ಸಂದೇಹಾಸ್ಪದವಾಗಿ ಜವಾಬು ಕೊಟ್ಟಿದ್ದರೂ ಬ್ರಿಟಿಷರು ತಮ್ಮಿಂದ ಆದಷ್ಟು ಸಹಾಯವನ್ನು ಶಾಂತಿಪ್ರಿಯ ಪ್ರಜೆಗಳಿಗೆ ಕೊಡುವರು' ಎಂದು ಬ್ರಿಟಿಷ ವಿದೇಶ ಸಚಿವರಾದ ಅಂಟೋನಿ ಈಡನ್ನರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಫ್ರಾನ್ಸು ಮತ್ತು ಬ್ರಿಟನ್.

ಬ್ರಿಟನ್ನಿನಂತೆ ಫ್ರಾನ್ಸು ಕೂಡಾ ತನ್ನ ಯುದ್ಧದ ಹಡಗುಗಳನ್ನು ಬಿಲ್ಬಾವೋಗೆ ಮಕ್ಕಳುಮರಿಗಳ ರಕ್ಷಣೆಯ ಬಗ್ಗೆ ಕಳುಹಿಸುವುದು, ಮಧ್ಯಸಮುದ್ರದಲ್ಲಿ ತಮ್ಮ ಮೇಲೆ ಬಿದ್ದಲ್ಲಿ, ತಮ್ಮನ್ನು ರಕ್ಷಿಸುವ ಹಕ್ಕು ತಮಗಿದೆಯೆಂದು ಇಂಗ್ಲೆಂಡು ಫ್ರಾನ್ಸುಗಳು ಪ್ರತಿಪಾದಿಸುತ್ತವೆ.

೨ನೇ ಪುಟದಿಂದ ಮುಂದರಿದಿರುವುದು

ಉದಕಮಂಡಲ್ಲ್ಯ, ೨೫ ೪-೩೭

ಪ್ರಿಯ ಶೆಟ್ಟಿಯವರೇ,

ನಿಮ್ಮ ಮುಂದಿನ ಧೋರಣೆಯ ಕಾರ್ಯಕ್ರಮಗಳ ಕುರಿತು ಬರೆದ ಪತ್ರಕ್ಕಾಗಿ ಧನ್ಯವಾದಗಳು. ಗುಪ್ತ ಸಂಭಾಷಣೆಗಳನ್ನು ಪುನರಾವರ್ತಿಸುವುದರ ಯುಕ್ತಾಯುಕ್ತತೆಯನ್ನು ವಿಮರ್ಶಿಸುವ ಕೆಲಸಕ್ಕೆ ನಾನು ಕೈಹಾಕುವುದಿಲ್ಲ. ನೀವು ಪ್ರಕಟಣೆಗೆ ಕೊಡಬೇಕೆಂದಿರುವ ಪತ್ರದ ಪ್ರತಿಯೊಂದನ್ನು ನನ್ನ ಅವಗಾಹನೆಗೆ ಕಳುಹಿಸಿದಲ್ಲಿ ಸಂತೋಷ. ನಾನದರಲ್ಲಿ ಭೇದಾಭಿಪ್ರಾಯವಾದ ವಿಷಯವೇನಾದರೂ ಇದ್ದಲ್ಲಿ ಸಂಪಾದಿಸಿ ನಿಮಗೆ ಪುನಃ ಹಿಂದೆ ಕಳುಹಿಸಿಕೊಡುತ್ತೇನೆ. ನನ್ನ ವ್ಯಯಕ್ತಿಕ ಸ್ಥಾನಮಾನಗಳಿಂದ ನಾಪೀ ಪತ್ರವನ್ನು ಬರೆಯುತ್ತೇನೆ. ನಿಮ್ಮೊಡನೆ ನನ್ನ ಸಂಭಾಷಣೆಯೂ ಇದೇ ತರದ್ದಾಗಿರುತ್ತದೆ.

ಇತಿ ನಿಮ್ಮ ಹೃತ್ಪೂರ್ವಕ,

(ಸಹಿ) R M Palat.

ಮಂಗಳೂರು, ೨೬-೪-೩೭.

ಪ್ರಿಯ ಪಾಲಟರೇ

ನಿಮ್ಮ ೨೫ ನೇ ಪತ್ರವು ತಲುಪಿತು. ಅಭಿಪ್ರಾಯವಾಯಿತು. ನನ್ನ ಪಾರ್ಟಿ ಮುಖಂಡರು ಅವಶ್ಯವೆಂದು ತಿಳಿದರೆ ಮಾತ್ರ ನಾನು ನಿಮಗೆ ಬರೆದ ಪತ್ರದಲ್ಲಿ ತಿಳಿಸಿದ ವಿಷಯಗಳನ್ನು ಮಾತ್ರವೇ ಪ್ರಕಟಿಸಲಾಗುವುದು. ಗುಪ್ತ ಸಂಭಾಷಣೆಗಳ ಪ್ರಕಟಣೆಯ ಯುಕ್ತಾಯುಕ್ತತೆಯ ವಿಚಾರ ನೀವು ಬರೆಯುತ್ತೀರಿ. ನನ್ನ ನಿಮ್ಮೊಳಗಿನ ಮಾತುಕತೆಗಳು ವೈಯಕ್ತಿಕ ಸಂಬಂಧವುಗಳಾದ್ದು ರಹಸ್ಯ ವಿಚಾರದವುಗಳೇನಾಗಿರುವುದಿಲ್ಲ. ನನ್ನ ಸಾರ್ವಜನಿಕ ಜೀವನ ಸ್ಥಾನಮಾನಗಳಿಗೆ ಮತ್ತು ನಾನು ಪ್ರತಿಜ್ಞಾಬದ್ಧನಾಗಿರುವ ಸಂಘದ (ಕಾಂಗ್ರೆಸ್) ದ ಅಖಂಡತೆಗೂ ಲೋಪ ಬರುವಂತಾ ಒಂದು ಕಾರ್ಯಸಾಧನೆಯ ಮಾರ್ಗವನ್ನು ನೀವು ನನಗೆ ಸೂಚಿಸಿದ್ದೀರಿ. ನನ್ನ ಕಡೆಯ ಗೊತ್ತಿದ್ದರೂ ನೀವು ಬೇಕು ಬೇಕೆಂದು ನನಗೆ ಈ ಸಲಹೆಯನ್ನು ಕೊಡುವುದು ಯುಕ್ತವೆಂದು ಯೋಚಿಸಿದುದಕ್ಕೆ ನಾನು ವ್ಯಸನಪಡುತ್ತೇನೆ.

ಇತಿ ನಿಮ್ಮ ಹೃತ್ಪೂರ್ವಕ

(ಸಹಿ) ಎ ಬಿ ಶೆಟ್ಟಿ.

ತಾ. 7—5—1937 ರಿಂದ.

ಮಾ॥ ರಾ॥ ರಾ॥ ಡಾ॥ ಕೆ. ವಿಟ್ಠಲಶೆಟ್ಟಿ,

ಚೆಯರ್‌ಮೆನ್ - ಮಂಗಳೂರು ಮುನಿಸಿಪಾಲಿಟಿ

ಇವರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಡುವುದು.

ಬೊಂಬಾಯಿ ಟಾಕೀಸ್ ಇವರ ಇನ್ನೊಂದು ಚಿತ್ರಕುಸುಮ.

ಅಛೂತ್ ಕನ್ಯಾ

ಹರಿಜನ ಬಾಲೆ

ದೇವಿಕಾ ರಾಣಿ — ಅಶೋಕ ಕುಮಾರ.

ಪ್ರತಿಯೊರ್ವ ದೇಶಪ್ರಿಯನೂ ನೋಡಲೇ ಬೇಕಾದುದು.

ಶ್ರೀ ಚಿತ್ರಾ ಟೊಕೀಸ್, ಮಂಗಳೂರು.

ಭರತ ಖಂಡದ ಪ್ರಖ್ಯಾತ ಮುಖಂಡರು ಇಂತಹ ಚಿತ್ರವು ಇದುವರೆಗೆ ಭಾರತದಲ್ಲಿ ತಯಾರಾಗಿಲ್ಲವೆಂದು ... ರು

ಧೂಳು ನಿಮ್ಮ ಶ್ವಾಸಕೋಶಗಳೊಳಗೆ ರೋಗಕ್ರಿಮಿಗಳನ್ನೊಯ್ಯುತ್ತದೆ'

ಈ ಬೇಸಿಗೆ ಕಾಲದ ಬಿಸಿ ಗಾಳಿಯಲ್ಲಿ ರೋಗಾಣುಗಳು ತುಂಬಿರುವುದರಿಂದ ನಿಮ್ಮ ಉಸಿರಾಟದೊಂದಿಗೆ ಈ ಕ್ರಿಮಿಗಳು ನಿಮ್ಮ ದೇಹವನ್ನು ಪ್ರವೇಶಿಸುವುದು. ಗಂಟಲು ಒಣಗುವಿಕೆ, ನೋವು, ಉರಿ, ಬಾತುಕೊಳ್ಳುವಿಕೆಗಳು ಮೊದಲು ಪ್ರಾರಂಭವಾಗಹತ್ತುತ್ತವೆ. ಆದುದರಿಂದ ಅಪಾಯ ಕೆಮ್ಮು ಬಾರದಂತೆ ಪೆಪ್ಸನ್ನು ಸಕಾಲದಲ್ಲಿ ಸೇವಿಸಬೇಕು. ಬಾಯಿಯೊಳಗಿದ್ದ ಪೆಪ್ಸ ಗುಳಿಗೆಯು ಅಮೂಲ್ಯವಾದ ಸುವಾಸನಾಯುಕ್ತ ಸಾರವನ್ನು ಬಿಟ್ಟುಬಿಡುತ್ತದೆ. ಇದು ಗಂಟಲು ನಾಳದ ತೊಂದರೆಗಳನ್ನೂ ಮತ್ತು ರೋಗಾಣುಗಳ ಬಾಧೆಯನ್ನೂ ತಡೆಯುತ್ತದೆ. ಎದೆಯ ಮತ್ತು ಶ್ವಾಸಕೋಶದ ರೋಗಗಳನ್ನು ಪೆಪ್ಸ ಗುಳಿಗೆಗಳು ಬೇಗನೆ ತಡೆಯುತ್ತದೆ. ಶೀತ, ನೆಗಡಿ, ಕೆಮ್ಮುಗಳಿಂದ ಪಾರಾಗಲು ಪೆಪ್ಸ್ ಗುಳಿಗೆಯನ್ನು ಸೇವಿಸಿರಿ.

ಪೆಪ್ಸ್ ಮಾತ್ರೆಗಳು ಸೀಲುಮಾಡಲ್ಪಟ್ಟ ಬಾಟ್ಲಿಗಳಲ್ಲಿ ರೂ. 1ಕ್ಕೆ ಮಾರಲ್ಪಡುತ್ತದೆ.

ಏಜಂಟರು - ಮೆಸರ್ಸ್ ದಾಢಾ ಎಂಡ್ ಕೊ ಪಿ ಟಿ ಮದ್ರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

ರಷ್ಯನ್ ರಾಯಭಾರಿಯು ವಂಚನೆ

ಗುಪ್ತಚಾರ ಸಂಘದ ಸಾಹಸ

ಕ್ರಾಂತಿಕಾಲದ ಒಂದು ಚಿಕ್ಕ ಘಟನೆ

ರಷ್ಯದ ನಿರಂಕುಶ ಜಾರನ ಸರಕಾರವನ್ನು ಕಿತ್ತೊಗೆಯಲು ರಷ್ಯದಲ್ಲಿ ಪ್ರಚಂಡ ಕ್ರಾಂತಿ ಯು ನಡೆಯಿತು. ಕ್ರಾಂತಿಕಾರರು ಅತ್ಯದ್ಭುತ ಸಾಹಸಗಳಿಂದ ತಮ್ಮ ಕಾರ್ಯಸಾಧನೆಯನ್ನು ಪೂರೈಸುತ್ತಿದ್ದರು. ಇಂಗ್ಲೆಂಡಿನ ಪ್ರಖ್ಯಾತ ಕ್ರಿಮಿನಲ್ ವಕೀಲರಾದ ಸರ್ ಹೆನ್ರಿ ಕರ್ಟಿಸ್ ಬೆನೆಟ್ ಇವರ ದೈರಿಯಿಂದ ಪ್ರಕಟವಾದ ಒಂದು ಲೇಖನವನ್ನು 'ಲಂಡನ್ ಪೀಪಲ್' ಪತ್ರಿಕೆಯು ಪ್ರಕಟಿಸಿದೆ. ರಷ್ಯದ ಕ್ರಾಂತಿಕಾರರೊಳಗೂ ಫ್ರೆಂಚ್ ಸರಕಾರದವರಿಗೂ ಗುಪ್ತವಾಗಿ ನಡೆಯುತ್ತಿದ್ದ ಪತ್ರವ್ಯವಹಾರಗಳನ್ನು ಕಂಡುಹಿಡಿಯಬೇಕೆಂದು ಬ್ರಿಟನಿನ ಗುಪ್ತಚಾರ ಕೂಟದವರು ಬಹಳ ಪ್ರಯತ್ನದಲ್ಲಿದ್ದರು ಈ ಸಮಯಕ್ಕೆ ಫ್ರಾನ್ಸಿನಿಂದ ಓರ್ವ ರಷ್ಯನ್ ರಾಯಭಾರಿಯು ಲಂಡನ್ನಿಗೆ ಬರುವ ವಿಷಯವು ಗುಪ್ತಚಾರರ ಸಂಘಕ್ಕೆ ತಿಳಿಯಬಂತು, ಅವರು ಅವನನ್ನು ಹಿಂಬಾಲಿಸಲು ನಿರ್ಧರಿಸಿದರು ಕಾರಣ, ಇಂಗ್ಲೆಂಡು ರಷ್ಯದಲ್ಲಿ ನಡೆಯಬಹುದಾದ ಈ ಕ್ರಾಂತಿಯ ವಿಚಾರವಾಗಿ ಬಹಳ ಆತುರವುಳ್ಳದ್ದಾಗಿತ್ತು. ಆ ರಷ್ಯನ್ ರಾಯಭಾರಿಯು ಲಂಡನ್ ನಗರಕ್ಕೆ ಬಂದಾಗ ಬಹಳ ಸುಸಜ್ಜಿತ ಪೋಷಾಕಿನಲ್ಲಿದ್ದನು. ಕಾರಣ ಅವನು ರಷ್ಯದ ಜಾರನ ಒಬ್ಬ ಸೇನಾಧಿಪತಿಯಾಗಿದ್ದು, ಕಾರಣಾಂತರದಿಂದ ಕ್ರಾಂತಿಕಾರರ ಕೂಟವನ್ನು ಸೇರಿದವನಾಗಿದ್ದನು ಆ ಸಮಯದಲ್ಲಿ ಅವನೊಡನೆ ಒಂದು ಚಿಕ್ಕ ಚರ್ಮದ ಪೆಟ್ಟಿಗೆಯಿದ್ದು, ಅದನ್ನು ಅವನು ಶೃಂಖಲೆಗಳಿಂದ ತನ್ನ ಮುಂಗೈಗೆ ಕಟ್ಟಿಕೊಂಡಿದ್ದನು ಆ ಪೆಟ್ಟಿಗೆಯೊಳಗಿರುವ ರಹಸ್ಯವಾದ ಕಾಗದಪತ್ರಗಳನ್ನೂ ಇನ್ನೂ ಭದ್ರಪಡಿಸಲೋಸುಗ ಆ ಪೆಟ್ಟಿಗೆಯು ಭದ್ರವಾಗಿ ಹಗ್ಗಗಳಿಂದ ಬಿಗಿಯಲ್ಪಟ್ಟು, ರಷ್ಯದ ಚಕ್ರವರ್ತಿಯ ರಾಜಮುದ್ರೆಯು ಅದರ ಮೇಲೆ ಒತ್ತಲ್ಪಟ್ಟಿತ್ತು

ರಾಯಭಾರಿಯು ದೇಹಪ್ರಕೃತಿಯು ಲಕ್ಷಣವಾದದ್ದಾಗಿದ್ದು, ಅವನು ಇಂಗ್ಲೆಂಡಿನಿಂದ ಸ್ಕಾಟ್ಲೆಂಡಿಗೆ ಪ್ರಯಾಣ ಮಾಡಿ, ಅಲ್ಲಿಂದ ಮೊಸ್ಕೋ ನಗರಕ್ಕೆ ಪಯಣಬೆಳೆಸುವವನಿದ್ದ ಇಂಗ್ಲೆಂಡು ರಷ್ಯದ ಮಿತ್ರ ರಾಷ್ಟ್ರವಾಗಿದ್ದುದರಿಂದ, ಆ ರಾಯಭಾರಿಗೆ ಇಂಗ್ಲೆಂಡಿನಲ್ಲಿ ಸರ್ವ ಆತಿಥ್ಯ ಉಪಚಾರ ಸಲಕರಣಗಳೆಲ್ಲವೂ ಒದಗಿಸಲ್ಪಟ್ಟಿದ್ದವು ಆದರೆ, ಅವುಗಳಿಗೆ ಆತನು ಹೆಚ್ಚು ಗಮನಿಸದೆ ತನ್ನ ಉದ್ದೇಶಪೂರ್ತಿಯಲ್ಲಿಯೂ ವಿಶೇಷ ಆತುರವುಳ್ಳವನಾಗಿದ್ದು, ತಾನು ತಂದ ಕಾಗದ ಪತ್ರಗಳ ಗಂಟಿನ ವಿಚಾರ ಯಾವುದೊಂದೂ ತರದ ಹೆದರಿಕೆಯೂ ಅವನಿಗಿರಲಿಲ್ಲ ಇವನನ್ನು ಇಂಗ್ಲೆಂಡಿನಲ್ಲಿ ಸ್ವಲ್ಪ ಕಾಲ ಇರುವಂತೆ ಮಾಡಬೇಕೆಂದು ಇಂಗ್ಲೆಂಡಿನ ಗುಪ್ತಚಾರ ಸಂಘಕ್ಕೆ ಸರಕಾರದ ಆಜ್ಞೆಯು ಹೊರಟಿತ್ತು, ನಾನಾ ತರದ ಮೋಹಕ ಕಾರ್ಯಕ್ರಮಗಳು ಅವನ ಮುಂದೆ ಇಡಲ್ಪಟ್ಟವು ಪ್ರಖ್ಯಾತ ವೇಶ್ಯೆಯರು ತಮ್ಮ ನಗ್ನಾಂಗಗಳಿಂದ ಅವನನ್ನು ಮರುಳುಗೊಳಿಸ ಪ್ರಯತ್ನಿಸಿದರೂ ಅವನು ತನ್ನ ಕರ್ತವ್ಯ ವಿಮುಖನಾಗುವ ಚಿಹ್ನೆಯು ನಿರಾಶಾದಾಯಕವಾಗಿ ಕಂಡು ಬಂತು ಕೂಡಲೇ ಅವನು ಇಂಗ್ಲೆಂಡನ್ನು ಬಿಡುವ ಮೊದಲು ಅವನ ಕಾಗದಪತ್ರಗಳನ್ನೂ ನೋಡಿಯೇ ಅವನನ್ನು ಬಿಡಬೇಕೆಂದು ಆಜ್ಞೆ ಹೊರಟಿತು

ಮೂರು ಮಂದಿ ಗೂಢಚಾರರು ಅವನನ್ನು ಹಿಂಬಾಲಿಸತೊಡಗಿದರು. ಆದರೆ ಇವರ ತಮ್ಮ ಕಾರ್ಯವನ್ನು ನಿರ್ವಹಿಸುವರೆ ಆ ರಾಯಬಾರಿಯು ಯಾವ ಸಂದರ್ಭವನ್ನೂ ಕೊಡದಾದನು. ಕಡೆಗೆ ಸ್ಕಾಟ್ಲೆಂಡಿನ ರೈಲ್ವೆ ಸ್ಟೇಶನಿನ ಹೋಟೆಲೊಂದರಲ್ಲಿ ಅವನು ಕಾಫಿ ಕುಡಿಯಲು ಹೋದಾಗ, ಈ ಗುಪ್ತಚಾರರು ತಮ್ಮ ಕೆಲಸವನ್ನು ಸಾಧಿಸ ಪ್ರಯತ್ನಿಸಿದರು. ಅವನು ಕುಡಿಯುವ ಕಾಫಿಯೊಳಗೆ ಕೆಲವು [illegible]

ರಾಯಭಾರಿಯು ಅದನ್ನು ಕುಡಿದು ತನ್ನ ಕೋಣೆಯನ್ನು ಸೇರಿದನು ಕಾಫಿಯಲ್ಲಿ ಸೇರಿಸಿದ ಪದಾರ್ಥಗಳು ಬಹಳ ಅಮಲುಂಟು ಮಾಡುವುದೇನೊ ಖಂಡಿತವಾದ್ದುದರಿಂದ, ಚಾರರು ಮಧ್ಯರಾತ್ರಿ ಸಮಯಕ್ಕೆ ರಾಯಭಾರಿಯ ಕೋಣೆಯನ್ನು ಧೈರ್ಯದಿಂದ ಪ್ರವೇಶಿಸುವಾಗ, ಸುಸಜ್ಜಿತವಾದ ಪಿಸ್ತೂಲೊಂದು ಅವರನ್ನು ಎದುರ್ಗೊಂಡಿತು. ರಾಯಭಾರಿಗೆ ಯಾವ ಅಮಲೂ ತಗಲಿರಲಿಲ್ಲ ಅಂದು ಕುತಂತ್ರವು ವಿಫಲವಾದುದರ ಕುರಿತು ಲಂಡನ್ನಿಗೆ ವರ್ತಮಾನ ಹೋಯಿತು. 'ಆದರೆ ಕಾರ್ಯವು ವಿಫಲವಾಗಬಾರದು' ಎಂದು ಇಂಗ್ಲೆಂಡಿನಿಂದ 'ರಾಯಭಾರಿಯು ನಿಲ್ಲಿಸಲ್ಪಡಬೇಕು' 'ಗುಪ್ತಚಾರರು ಪುನಃ ಪ್ರಯತ್ನಿಸಬೇಕು' ಹೀಗೆಂದು ಆಜ್ಞೆಗಳು ಹೊರಟವು.

ಕೂಡಲೇ ಗುಪ್ತಚಾರರು ಕೆಲಸಕ್ಕೆ ತೊಡಗಿದರು ರಾಯಭಾರಿಯ ವ್ಯಗಾವಲಿನ [illegible] ಭಾರಿಯು ಸ್ವಲ್ಪ ಮನಗುಂದಿದವನಾದನು. ಈ ಸಾರಿ ಗುಪ್ತಚಾರರು ಬಹಳ ತೀಕ್ಷ್ಣವಾದ ಅಮಲುಪದಾರ್ಥದ ಪ್ರಯೋಗ ನಡಿಸಿದರು. ರಾಯಭಾರಿಯು ತಂತ್ರಜಾಲಕ್ಕೆ ಬಿದ್ದನು. ಅಂದು ಗುಪ್ತಚಾರರು ಅವನ ಕೋಣೆಯನ್ನು ಪ್ರವೇಶಿಸಿದಾಗ ಯಾವ ಪಿಸ್ತೂಲೂ ಅವರನ್ನು ಇದಿರ್ಗೊಳ್ಳಲಿಲ್ಲ. ಅವನ ಕೈಗೂ ಪೆಟ್ಟಿಗೆಗೂ ಕಟ್ಟಲ್ಪಟ್ಟ ಶೃಂಖಲೆಯು ತಪ್ಪಿಸಲ್ಪಟ್ಟು, ಪೆಟ್ಟಿಗೆಯು ಗುಪ್ತಚಾರರ ಕೈಗೆ ಸಿಕ್ಕಿತು

ರಹಸ್ಯ ಪತ್ರಗಳು ಕೂಡಲೇ ಸ್ಕಾಟ್ಲೆಂಡಿನಿಂದ ಇಂಗ್ಲೆಂಡಿಗೆ ಹೋಗಬೇಕು ಅಲ್ಲಿ ಅವು ನಿಪುಣರಿಂದ ಪರೀಕ್ಷಿಸಲಾಗಬೇಕು. ರೈಲ್ವೆ ಮಾರ್ಗಗಳೆಲ್ಲವೂ ದಾರಿಯನ್ನು ಬಿಟ್ಟು ಕೊಡಬೇಕೆಂದು ಆಜ್ಞೆ ಹೊರಟಿತು ಸ್ಪೇಶಲ್ ರೈಲೊಂದು ಸ್ಕಾಟ್ಲೆಂಡಿನಿಂದ ಲಂಡನ್ನಿಗೆ ಬಂತು ಅದರೊಂದಿಗೆ ಬಂದಿದ್ದ ರಶ್ಯನ್ ಕ್ರಾಂತಿಗಾರರ ಗುಪ್ತಪತ್ರಗಳು ಲಂಡನಿನಲ್ಲಿ ಸರ್ ವಿಲಿಯಂ ಕರ್ಟಿಸರ ವಶವಾದುವು ಬರೀ ಅರ್ಧ ತಾಸಿನ ಕಾಲದಲ್ಲಿ ಎಲ್ಲಾ ಕಾಗದ ಪತ್ರಗಳ ಸೂಕ್ಷ್ಮ ಶೋಧ ನಡೆಯಿತು ತಕ್ಷಣ ಅವುಗಳನ್ನು ಪುನಃ ಇದ್ದ ಹಾಗೇ ಬಂದುಮಾಡಲ್ಪಟ್ಟುವು [illegible] ಕೆಲಸಕ್ಕೆ ಹಿಡಿಯಲಾಗಿ [illegible] ಲಂಡನಿನ ಪ್ರಖ್ಯಾತ ಅಂಗಡಿಗಳಿಂದ ಪೆಟ್ಟಿಗೆ ಕಟ್ಟಲ್ಪಟ್ಟ ಹಗ್ಗದಂತಹದೇ ಇನ್ನೊಂದು ಹಗ್ಗವನ್ನು ಹುಡುಕಿ ತೆಗೆದು ಕಾಗದಪತ್ರಗಳ ಪೆಟ್ಟಿಗೆಯನ್ನು ಮುಂಚಿನಂತೆಯೇ ಬಂದು ಮಾಡಿ ಮುದ್ರೆ ಹೊಡೆಯಲ್ಪಾಯಿತು. ಎಂಟು ಗಂಟೆಯ ಕಾಲದೊಳಗೆ ಮತ್ತೊಂದು ಸ್ಪೆಶಲ್ ರೈಲು ಸ್ಕಾಟ್ಲೆಂಡನ್ನು ತಲುಪಿತು. ಪೆಟ್ಟಿಗೆಯನ್ನು ಯಥಾ ಪ್ರಕಾರ ರಾಯಭಾರಿಯ ಕೈಗೆ ಸಿಕ್ಕಿಸಲಾಯಿತು. ಅಮಲೇರಿ ಮಲಗಿದ್ದ ರಶ್ಯನನು ಇನ್ನೂ ಏಳದೆ ಇದ್ದನು. ಆಂಗ್ಲ ಗುಪ್ತಚಾರರ ಸಾಹಸವು ಯಶಸ್ವಿಯಾಯಿತು. ರಶ್ಯನ್ ರಾಯಭಾರಿಯು ಪುನಃ ಸ್ವದೇಶಕ್ಕೆ ಮರಳಿದಾಗ ಅವನಿಗೆ ನಡೆದ ಯಾವ ವಿಚಾರದ ಕುರುಹುಗಳು ಕೂಡ ತಿಳಿಯದೆ ಇದ್ದು ಅವನು ತನ್ನ ಸಾಹಸದಲ್ಲಿ ಹೆಮ್ಮೆಪಟ್ಟುಕೊಂಡೇ ಇದ್ದನು ಇದರ ನಂತರ ನಡೆದ ರಶ್ಯದ ಕ್ರಾಂತಿಯು ಇಂಗ್ಲೆಂಡನ್ನು ಆಶ್ಚರ್ಯಗೊಳಿಸಲಿಲ್ಲ, ಅದೇ ಕೂಲಂಕಷ ಗುಟ್ಟು ಇಂಗ್ಲೆಂಡಿಗೆ ಮೊದಲೇ ತಿಳಿದುದು ಬಹಳ ಅನುಕೂಲವಾಗಿ ಪರಿಣಮಿಸಿತು

ಪಮಾರ್ಸನ್ ಮಾತ್ರೆಗಳು
ಉನ್ಮಾದಕ್ಕೆ ಸಂಜೀವನ

ಮನಶ್ಚಿಂತೆಗಳು, ವ್ಯಾಪಾರ ಯಾ ಆರ್ಥಿಕ ಅಡಚಣೆ, ಆಕಸ್ಮಿತ ಅನಾಹುತ ದುಸ್ಸಹವಾದ ನಿರಾಶೆ, ಪ್ರೇಮಾಸ್ಪದರ ವಿಯೋಗ, ಯುವಕರ ದುರಭ್ಯಾಸ ಮತ್ತು ನರಗಳ ಬಲಹೀನತ್ವ ಇತ್ಯಾದಿ ಸಾವಿರಾರು ಕಾರಣಗಳಿಂದ ಭಯಂಕರವಾದ

ಉನ್ಮಾದರೋಗವುಂಟಾಗುತ್ತದೆ.

ಅದಕ್ಕೆ ಸಂಜೀವನ ಯಾವುದು?

೩೦ ವರ್ಷಗಳ ದೀರ್ಘ ಅನುಭವದಿಂದ ಪ್ರಸಿದ್ಧವಾದ

ಪಮಾರ್ಸನ್ ಮಾತ್ರೆಗಳೇ

ಈ ಮಾತ್ರೆಗಳು ತಾತ್ಕಾಲಿಕ ದೀರ್ಘಕಾಲದ ಎಲ್ಲಾ ತರದ ಉನ್ಮಾದ(ಹುಚ್ಚು), ಹಿಸ್ಟೀರಿಯಾ, ಅಪಸ್ಮಾರ, ಮನೋವಿಕಾರ, ನಿದ್ರಾಭಂಗ, ಮನೋದೌರ್ಬಲ್ಯ ಇತ್ಯಾದಿ ವಿವಿಧ ದುಸ್ಸಹವಾದ ಮಾನಸಿಕ ವ್ಯಾಧಿಗಳನ್ನು ಅತಿ ತ್ವರೆಯಿಂದ ಖಾತ್ರಿಯಾಗಿ ಗುಣಪಡಿಸುತ್ತವೆ. ಜನಸಾಮಾನ್ಯರಲ್ಲಿರುವ ಭೂತ-ಪ್ರೇತ-ಪಿಶಾಚ ಬಾಧೆಯ ಭ್ರಾಂತಿಯನ್ನು ನಿರ್ಮೂಲಮಾಡುವ ಗುಣ ಇವುಗಳಲ್ಲಿದೆ

ಇತರ ಎಲ್ಲಾ ಚಿಕಿತ್ಸೆಗಳು ನಿಷ್ಫಲವಾದಲ್ಲಿ ಕೊನೆಗೆ ಒಂದಾವರ್ತಿ ಪ್ರಖ್ಯಾತಿಪಟ್ಟ ಪಮಾರ್ಸನ್ ಮಾತ್ರೆಗಳನ್ನು ಉಪಯೋಗಿಸಿರಿ

ಬೆಲೆ 60 ಮಾತ್ರೆಗಳ ಸೀಸೆ 1ಕ್ಕೆ ರೂ 4—0—0. ವಿ. ಪಿ ಚಾರ್ಜು ಬೇರೆ.

ರೋಗಿಯು ಈ ಕೆಳಗಿನ ವಿವರಗಳನ್ನು ವಿಶದವಾಗಿ ಬರೆಯಬೇಕು —

ಹೆಸರು, ವಿಳಾಸ ಜಾತಿ, ಸ್ತ್ರೀಯಾ ಪುರುಷ ಪ್ರಾಯ ದೇಹದ ತೂಕ ಎಷ್ಟು ಸಮಯದಿಂದ ರೋಗವಿದೆ, ರೋಗದ ಲಕ್ಷಣ ನಿದ್ರೆ ಆಹಾರ ಮಲಶೋಧನೆ ಇಲ್ಲದೆ ಉಷ್ಣ ಜ್ವರ ಮೇಹಸಂಬಂಧಿ ಇತರ ರೋಗಗಳೂ ಇದ್ದರೆ ಸ್ಪಷ್ಟವಾಗಿ ಅದನ್ನು ಬರೆಯಬೇಕು

ಪಮಾರ್ಸನ್ ಪ್ರೊಡಕ್ಟ್ಸ್ (ಇಂಡಿಯಾ)

ಬ್ರೆಂಚ್. ಪಿ. ವಿ. ಕಾಮತ್,

ಮೆಂಟಲ್ ಕನ್ಸಲ್ಟಿಂಗ್ ಚೇಂಬರ್ಸ್, ಡಿಸ್ಟ್ರಿಬ್ಯೂಟರ್ ಎಂಡ್ ಇಂಪೋರ್ಟ ಎಕ್ಸ್‌ಪರ್ಟ್

386, ಲೇಮಿಂಗ್ಟನ್ ರೋಡ್ ಮುಂಬಯಿ ೪ ಮಾರ್ಕೆಟ್ ರೋಡ್ ಉಡುಪಿ

DIAMONDS! DIAMONDS!

BEST BRILLIANCY

K. R. K. SHET,

Near Mission High School,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ೨೦ ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,

ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರು.

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರು ಟಿಂಟ್ಟಿನ ಕಲೆ ವಗ್ಯೆರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ 'ವಾಸುದೇವ ಪೈ,

ಸರಾಫ ಮತ್ತು ಮೆಟಲ್ ಮರ್ಚೆಂಟ್,

ಬಡಗುಪೇಟೆ ಉಡುಪಿ.

ಪೈಂಟರ್ಸ್

P A I N T E R S

Whenever you require the service of

Please call on or write to:-

Simon & Co.,

Painters

Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸ್ವ್ಯಾನ್ ಬೋರ್ಡು ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

KANARA WATCH WORKS

WATCH MAKERS & GENERAL MERCHANTS

Hampankatta MANGALORE

Dealers in — Watches, Clocks, Timepieces, Rolled Gold Jewellery & Sporting Materials etc



Stockists of West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones.

Japan	8 Inch	Octagon	Rs	6	0	0
„	8 „	Regulator	„	6	12	0
	10 „	Octagon	„	6	8	0
„	10	Regulator		7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು ವಾಚು, ಗಡಿಯಾರ, ವ ಗ್ರೆಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲುಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್

ಶ್ರೇಷ್ಠ ಪೆಟೆಂಟ ಗಟ್ಟಿಯಾದ ಯಂತ್ರಸಾಮಗ್ರಿಗಳು ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ಐದು ವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಟಪ್ಪಾಲು ಖರ್ಚು ಮುಫತ್ ನಿಕ್ಕೆಲಿನ ಉದುಟು ವಾಚು 1ಕ್ಕೆ ರೂ 2-15-0 ಅದರಲ್ಲಿ ಉತ್ತಮವಾದದ್ದು 3-8-0, ಬಂಗಾರದ ಗಿಲಿಟಿದ್ದದಕ್ಕೆ ರೂ 4—8—0 ಲೇಡಿಯ ರೂ 5-0 0 ನಿಕ್ಕೆಲ ಆಯತಾಕಾರದಕ್ಕೆ 6-8 0 ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7 8-0 ಲಿವರ್ ಪಾಕೆಟ್ ವಾಚಿಗೆ ಬರಿ ರೂ. 1-14-0 ಟಿ, ಟ್ರ್ಯಾಂಪೀಸ್ 1ಕ್ಕೆ ಬರಿ ರೂ 1-15-0 ಮಾತ್ರ

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 176 Cross Street CALCUTTA

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH

No 16

Sale Rs 6-15-0
SMART LEVER MOVEMENT
Strong & Durable at Low Price



UNIQUE OPPORTUNITY ONLY FOR ONE MONTH
Available Roman or Arabic Figures
Plain Silver Dial

Guaranteed for 5 Years. Lever Pocket Watch Rs 1-15-9

No. 12	Chromium	4 Jewels	Rs	8-8-0.
„ 14	„	7 „	„	10-8-0
„ 15.	„	15 „	„	12-8-0
„ 17.	Rolled Gold	15 ,	„	16-8 0

Rs. 1/- Extra for Radium Dial. Postage & Packing Extra

BAPALAL & CO. (s) 116, Abdul Rehman Street, Bombay 3

ಮಂಗಳೂರು

ಗ್ರಾಮ ಕಾಂಗ್ರೆಸ್ ಕಮಿಟಿಗಳ ಸ್ಥಾಪನೆಗಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರಿಂದ ನೇಮಿಸಲ್ಪಟ್ಟ ಸ್ವಯಂಸೇವಕರಾದ ಶ್ರೀ ಎನ್. ಎಸ್. ಕಿಲ್ಲೆ ಮತ್ತು ... ಯವರು ಪುತ್ತೂರು ತಾಲೂಕಿನಲ್ಲಿ ಈ ಕೆಳಗಿನ ಕ್ರಮದಂತೆ ಸಂಚಾರಮಾಡಲಿರುವರು. ಮೇ ತಾ. ೫ನೇ ಸಂಜೆ ಬೆಳ್ತಂಗಡಿ, ತಾ. ೬ನೇ ಬೆಳಗ್ಗೆ ಮುಂಡಾಜೆ, ಸಾಯಂ ಉಪ್ಪಿನಂಗಡಿಯಲ್ಲಿ, ತಾ. ೭ನೇ ಸಂಜೆ ಕೊಕ್ಕಡ, ತಾ. ೮ನೇ ಸಂಜೆ ಕಡಬ, ತಾ. ೯ನೇ ಸಂಜೆ ಬೆಳ್ಳಾರೆ, ತಾ. ೧೦ನೇ ಬೆಳಗ್ಗೆ ಕೆಯ್ಯೂರು, ಸಾಯಂಕಾಲ ಸುಳ್ಯ, ತಾ. ೧೧ನೇ ಸಾಯಂಕಾಲ ಪುತ್ತೂರು, ತಾ. ೧೨ನೇ ಸಂಜೆ ಬೆಟ್ಟಂಪಾಡಿ, ತಾ. ೧೩ನೇ ಸಂಜೆ ವಿಟ್ಲ, ತಾ. ೧೪ ಬೆಳಗ್ಗೆ ನೇರಳಕಟ್ಟೆ, ತಾ. ೧೫ನೇ ಸಂಜೆ ಪುತ್ತೂರು— (ತಾಲೂಕು ಕಾಂಗ್ರೆಸ್ ಕಮಿಟಿಯ ಮೀಟಿಂಗ್)

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಹೊಸ ಚುನಾವಣೆಗಳು ಇದೇ ಬರುವ ನವಂಬರದಲ್ಲಿ ನಡೆಯಲಿಕ್ಕಿರುವುದರಿಂದ, ಸರಿಯಾದ ಕಾರ್ಯಕ್ರಮ ಮತ್ತೊಬ್ಬ ಇಲೆಕ್ಷನ್ ಆಫೀಸರರನ್ನು ನೇಮಿಸುವ ಉದ್ದಿಷ್ಟ ಲೋಕಲ್ ಬೋರ್ಡು ಇನ್ಸಪೆಕ್ಟರರಾದ ಮಿ| ಶಂಭೂರವರು ಮಂಗಳೂರಿಗೆ ಬಿಜ್ಜೈಸಿ, ಜಿಲ್ಲಾ ಕಲೆಕ್ಟರ ದೊರೆಯವರೊಡನೆ ಮಾತನಾಡಿ ಹೊರಟುಹೋಗಿರುವದಾಗಿ ತಿಳಿದು ಬರುತ್ತದೆ.

ಕೊಳಂಬೆ ಗ್ರಾಮದ ಕೋಲ್ಪೆ ಅಂತನ್ನಾಕ ವಗೈರೆಯವರನ್ನು ಖೂನಿಮಾಡಿದರೆಂಬ ತಕ್ಸೀರಿನ ಮೇಲೆ ಸದ್ರಿ ಅಂತನ್ನಾಕನ ಸೊಸೆ ಲಕ್ಷ್ಮೀ ಹೆಂಗಸಿಗೆ ಕಳೆದ ಜನವರಿ ತಿಂಗಳಲ್ಲಿ ಮಂಗಳೂರಿನ ಸ್ಪೆಶ್ಯಲ್ ಜಡ್ಜರು ಮರಣ ದಂಡನೆಯನ್ನು ವಿಧಿಸಿದ್ದರು ಅಲ್ಲದೆ ಸದ್ರಿಯವಳ ಮಗನಿಗೆ ಜನ್ಮಟಾಪು ಶಿಕ್ಷೆಯನ್ನೂ, ಗಂಡ ಮತ್ತು ಅಳಿಯನಿಗೆ ಕೆಲವು ತಿಂಗಳ ಕಠಿಣ ಸಜೆಯನ್ನೂ ವಿಧಿಸಿದ್ದರು ಲಕ್ಷ್ಮೀ ವಗೈರೆರು ಮದ್ರಾಸು ಹೈಕೋರ್ಟಿಗೆ ಅಪ್ಪೀಲು ಮಾಡಿದರಿಂದಾಗಿ ಸದ್ರಿಯವಳ ಮರಣದಂಡನೆ ಶಿಕ್ಷೆಯನ್ನು ಕ್ಷೈಸಲು ಮಾಡಿ ಜನ್ಮಟಾಪಿನ ಶಿಕ್ಷೆಯನ್ನು ಹೈಕೋರ್ಟಿನವರು ವಿಧಿಸಿರುವರಾಗಿಯೂ, ಇತರರಿಗೆ ಶಿಕ್ಷೆಯನ್ನು ಕಾಯಂಮಾಡಿರುವದಾಗಿಯೂ ತಿಳಿದುಬರುತ್ತದೆ.

ನಮ್ಮ ಜಿಲ್ಲಾ ಕಲೆಕ್ಟರರಾಗಿ ಶ್ರೀ| ವಿ ಎಂ ವೆಲ್ಲೋಡಿಯವರು ನೇಮಕಹೊಂದಿರುವರು

ಇದೇ ತಾ ೧ರಲ್ಲಿ ಗವರ್ನಮೆಂಟು ಕೊಲೇಜಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಇದೇ ತಾ ೧೩ಕ್ಕೆ ನಡೆಯುವ ನಮ್ಮ ಸಾರ್ವಭೌಮರ ಪಟ್ಟಾಭಿಷೇಕ ಮಹೋತ್ಸವದ ದಿನವನ್ನು ಇಲ್ಲಿಯೂ ಯಥೋಚಿತವಾಗಿ ಆಚರಿಸುವ ನಿಮಿತ್ತ ಒಂದು ಸಮಿತಿಯು ಏರ್ಪಡಿಸಲಾಯಿತು ಅಂದು ನಮ್ಮ ಜಿಲ್ಲಾ ಕಲೆಕ್ಟರ ಮಿ| ಟಿ ಎ ವರ್ಗೀಸರು ಅಧ್ಯಕ್ಷರಾಗಿದ್ದರು

ಇಲ್ಲಿಯ ಜನಪ್ರೀತರಾದ ಡಿಸ್ಟ್ರಿಕ್ಟ್ ಬೋರ್ಡು ಹೆಲ್ತಾಫೀಸರರಾದ ಡಾ ಬಂಟ್ವಾಳ ಸುಬ್ರಾಯ ಬಾಳಿಗ ಎಲ್ ಎಂ ಎಂಡ್ ಎಸ್ ಡಿ ಪಿ ಎಚ್ (ಕಲ್ಕತ್ತಾ) ಇವರು ತಂಜಾವೂರು ಡಿ| ಹೆಲ್ತಾಫೀಸರರಾಗಿಯೂ ರಾಜಮಂದ್ರಿಯಲ್ಲಿ ಮುನ್ಸಿಪಲ್ ಹೆಲ್ತ್ ಆಫೀಸರರಾಗಿರುವ ಡಾ| ಎಂ. ಗೋಪಾಲ ಇವರು ದಕ್ಷಿಣ ಕನ್ನಡ ಜಿಲ್ಲಾ ಹೆಲ್ತಾಫೀಸರರಾಗಿಯೂ ವರ್ಗಾಯಿಸಲ್ಪಟ್ಟಿರುವರು

ಶ್ರೀ ವಿವೇಕಾನಂದ ಸಭಾ, ಡೊಂಗರಕೇರಿ ರಸ್ತೆ, ಈ ಸಭೆಯ ನೇತೃತ್ವದಲ್ಲಿ ಇದೇ ಆದಿತ್ಯವಾರ ತಾ ೯ ರಲ್ಲು ಶ್ರೀ ಎಮ್. ಆರ್ ಭಟ್ಟರವರು 'ಭೀಷ್ಮನೂ ಗೀತಾ ರಹಸ್ಯವೂ' ಎಂಬ ವಿಷಯವನ್ನೆತ್ತಿ ಕೊಂಕಣಿ ಭಾಷೆಯಲ್ಲಿ ಭಾಷಣ ಮಾಡುವರು ಎಲ್ಲರಿಗೂ ಸುಸ್ವಾಗತವಿದೆಯಲ್ಲದೆ, ವಿಷಯವು ಮಹತ್ವದ್ದಾಗಿರುವುದರಿಂದ ಹೆಚ್ಚಿನ ಜನರು ಭಾಷಣವನ್ನು ಕೇಳುವರೆಂದು ಕೂಡುವರಾಗಿ ನಂಬಿಕೆ

ಮದ್ರಾಸು ಗವರ್ನರರು ಸ್ಥಾಪಿಸಿದ ತಾತ್ಕಾಲಿಕ ಮಂತ್ರಿ ಮಂಡಳ ರಚನೆಯಲ್ಲಿ ತಮ್ಮ ಅವಿಶ್ವಾಸವನ್ನು ಸೂಚಿಸಿ, ಅಸೆಂಬ್ಲಿಯ 160 ಸದಸ್ಯರು ಮತ್ತು ಕೌನ್ಸಿಲಿನ 39 ಸದಸ್ಯರ ಸಹಿಗಳಿಂದೊಡಗೂಡಿದ ಒಂದು ಪತ್ರವು ಮದ್ರಾಸು ಅಸೆಂಬ್ಲಿಯ ಕಾಂಗ್ರೆಸ್ ಮುಖಂಡರಾದ ಶ್ರೀ ರಾಜಗೋಪಾಲಾಚಾರ್ಯರು ಮಾನ್ಯ ಗವರ್ನರರಿಗೆ ಕಳುಹಿಸಿರುವರು

ಇದರಲ್ಲಿ ನಮ್ಮ ಜಿಲ್ಲೆಯಿಂದ ಚುನಾಯಿತರಾದ ಶ್ರೀಯುತರುಗಳಾದ ಎ. ಬಿ ಶೆಟ್ಟಿ, ಬಿ ವೆಂಕಟ್ರಾಯ ಬಾಳಿಗ, ಈಶ್ವರ, ಕೆ ಆರ್. ಕಾರಂತ್, ಸಿ. ಜೆ. —ಫ್ ಮತ್ತು ಮಂಜಯ್ಯ ಹೆಗ್ಡೆಯವರ ಸಹಿಗಳು ಕಲ್ಪಟ್ಟಿವೆ

ಇಲ್ಲಿಯ ಪಾಂಗಾಳ ನಾಯ್ಕರ ಮನೆಯಲ್ಲಿ ಶ್ರೀ ಮತಿ ವಿಧವೆಯು ಎಪ್ರಿಲ್ ತಾ ೨೮ನೇ ದಿವಸಗ್ಗೆ ಶಾಸ್ತ್ರೀಕಯಾರಿಸಲು ಬೆಂಕಿ ಮಾಡುವಾಗ ಆಕಸ್ಮಾತ್ತಾಗಿ ಬೆಂಕಿ ಹತ್ತಿ, ಆಕೆ ಮಧ್ಯಾಹ್ನ ಮೃತಪಟ್ಟಿರುವರೆಂಬ ಸಂಗತಿಯು ವಿಷಾಧಕರವಾಗಿದೆ.

ಜಗತ್ಪ್ರಸಿದ್ಧ ನಟ ದೇವಿಕಾ ರಾಣಿಯು ಮುಖ್ಯ ಪಾತ್ರ ವಹಿಸಿ, ಅಶೋಕ ಕುಮಾರನಿಂದ ಸಹಕರಿಸಲ್ಪಟ್ಟ ಬೊಂಬೇ ಟಾಕೀಸರ ಅಸ್ಪೃಶ್ಯಲ ಸಾಮಾಜಿಕ ಕಥಾವಸ್ತು "ಅಛೂತ್ ಕನ್ಯಾ" ಎಂಬ ಚಲಚ್ಚಿತ್ರವು ಇಲ್ಲಿನ ಶ್ರೀ ಚಿತ್ರಾ ಟಾಕೀಸ್ ಮಂದಿರದಲ್ಲಿ ಪ್ರದರ್ಶಿಸಲ್ಪಡುವುದು. ಇಂದು [ತಾ ೬.] ಸಂಜೆ ಆರಂಭಪ್ರದರ್ಶನವು ಮಂಗಳೂರು ನಗರ ಸಭಾಧ್ಯಕ್ಷರಾದ ಡಾ| ಕೆ. ವಿಟ್ಠಲ ಶೆಟ್ರು ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಡುವುದು.

ತಾಲೂಕುಗಳಿಂದ

ಉಡುಪಿ

ನಮ್ಮ ಸ್ವಂತ ವಾತ್ಮೀದಾರರಿಂದ

ಚಕ್ರವರ್ತಿ ಆರನೇ ಜಾರ್ಜರ ಕಿರೀಟಧಾರಣೋತ್ಸವದ ಸಂಬಂಧವಾದ ಉತ್ಸವ ಸಂಭ್ರಮಗಳನ್ನು ಇಲ್ಲಿ ಜರಗಿಸುವ ಬಗ್ಗೆ ತಾಲೂಕು ಆಫೀಸಿನಲ್ಲಿ ಸಭೆ ಸೇರಿ ಒಂದು ಕಮಿಟಿಯು ಸ್ಥಾಪಿತವಾಗಿದೆ ಶಾಲಾ ಮಕ್ಕಳಿಗೆ ಮಿಠಾಯಿ ಹಂಚುವ, ಬಡವರಿಗೆ ಊಟ ಹಾಕುವ ಏರ್ಪಾಡುಗಳೂ ಕೈಕೊಳ್ಳಲಾಗಿವೆ; ವಂತಿಗೆಯೂ ಜಮೆ ಮಾಡಲ್ಪಡುತ್ತಿದೆ

ಕಳೆದ ತಾ ೨೮ನೇ ರಾತ್ರಿ ೯ ೩೦ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶಾರದಾ ಸಂಗೀತ ಕಲಾ ಶಾಲೆಯ ವಿದ್ಯಾರ್ಥಿನಿಗಳಿಂದ 'ಸಾವಿತ್ರಿ' ನಾಟಕವು ಸ್ಥಳೀಯ ಸರಕಾರೀ ಆಸ್ಪತ್ರೆಯಲ್ಲಿ ಅಶಕ್ತರೋಗಿಗಳ ಚಿಕಿತ್ಸೆ ಮಂದಿರದ ಸಹಾಯಾರ್ಥವಾಗಿ ಅಭಿನಯಿಸಲಾಯಿತು ಸಾಧಾರಣ ರೂ ೨೪೦ ಜಮೆಯಾದ್ದಲ್ಲಿ, ರೂ ೮೦ ಖರ್ಚು ಕಳೆಯುತ್ತ, ರೂ ೧೬೦ ಉಳಿದಿರುವುದಾಗಿ ತಿಳಿಯುತ್ತೇನೆ ಸದ್ರಿ ಆಸ್ಪತ್ರೆಯ ಸಿಬ್ಬಂದಿಯವರು ನಾಟಕದ ಯೋಜನೆಯನ್ನು ಹೂಡಿ, ಟಿಕೇಟು ಮಾರಾಟದಲ್ಲಿ ಕ್ರಮವಹಿಸಿ ಸದ್ರಿ ಕಾರ್ಯವು ಸಫಲಗೊಳಿಸಿದುದು ಶ್ಲಾಘನೀಯವಿದೆ ಆಸ್ಪತ್ರೆಯ ಆಫೀಸರರೂ ವಿಶೇಷ ಉತ್ಸಾಹವನ್ನು ವಹಿಸಿದ್ದರು ನಾಟಕ ವರ್ಗದವರು ಮನಾನಂದಕರವಾಗಿ ಅಭಿನಯಿಸಿದ್ದರಲ್ಲದೆ, ನಾರದನ ಪಾತ್ರ ವಹಿಸಿದ ಕುಮಾರಿ ಶಶಿಕಲೆಯು ವಿಶೇಷ ಪ್ರಶಂಸೆಗೆ ಪಾತ್ರಳಾಗಿದ್ದಳು ಎರಡನೆಯದಾಗಿ ಕುಮಾರಿ ಸರಸ್ವತಿಯೂ ಶ್ಲಾಘನೆಗೆ ಪಾತ್ರಳಾಗಿದ್ದಳು ಉತ್ತಮ ಪಾತ್ರಗಳಿಗೆ ಪಾರಿತೋಷಕಗಳನ್ನು ಶ್ರೀ ವಿ ಕೆ ಸುಂದರೇಶ ಶಾಸ್ತ್ರಿ ಬಿ ಎ ಸ್ಟೇಶನರಿ ಸಬ್ ಮಜಿಸ್ಟ್ರೇಟರಿಂದ ಹಂಚಲ್ಪಟ್ಟವು

ತಾ ೨೯ನೇ ಸಾಯಂಕಾಲ ಸುಮಾರು ೫ ತಾಸಿಗೆ ಸ್ಥಳೀಯ ಬೋರ್ಡು ಹೈಸ್ಕೂಲಿನ ಪಠಾರದಲ್ಲಿ ಶಿವಾಜಿ ವ್ಯಾಯಾಮ ಮಂಡಳಿಯವರ ಅಂಗಸಾಧನೆ ಕಸರತ್ತುಗಳ ಪ್ರದರ್ಶನವು ಜರಗಿಸಲಾಯಿತು ಚಿತ್ರಕರ್ಷಕ ಕಾರ್ಯಕ್ರಮವೂ ಹೂಡಲಾಗಿತ್ತು ಸ್ತ್ರೀಪುರುಷ ವಿದ್ಯಾರ್ಥಿಗಳೆಂದು ಪುರಪ್ರಮುಖರೂ ಸೇರಿ ಸಾವಿರಕ್ಕೆ ಮೇಲ್ಪಟ್ಟು ಪ್ರೇಕ್ಷಕರಿದ್ದರು ಕೊನೆಯಲ್ಲಿ ಶ್ರೀ| ವಿ ಕೆ ಸುಂದರೇಶ ಶಾಸ್ತ್ರಿ ಬಿ ಎ ಇವರು ಸದ್ರಿ ಸಂಘದವರು ಇಂದಿಗೆ ೩ ವರ್ಷಗಳೊಳಗಾಗಿ ಇಷ್ಟೊಂದು ಅಭಿವೃದ್ಧಿಗೊಂಡು ಜನಪ್ರಶಸ್ತಿಗೆ ಬಂದುದರ ಬಗ್ಗೆ ಶ್ಲಾಘಿಸಿ ಭಾಷಣವಿತ್ತರು ಮಂಡಳಿಯ ಸ್ಥಾಪಕರೂ ಕಾರ್ಯನಿರ್ವಾಹಕರಾದ ಶ್ರೀ| ಯು ಜಿ ಭಕ್ತರಿಗೆ ಬಾರವೆತ್ತುವ ಶಕ್ತಿ ಸಾಧನೆಗಳ ಬಗ್ಗೆ, ಶ್ರೀ| ಕೆ ಎಸ್ ನಾಯಕರಿಗೆ ಗುಂಡು ಎಸೆಯುವುದರ ಬಗ್ಗೆ, ಶ್ರೀ| ಕೆ ಎಂ ಶೆಟ್ಟಿ ಇವರಿಗೆ ಕಸರತ್ತುಗಳ ಬಗ್ಗೆ ಮತ್ತು ಯು ವಿ ಶೆಣೈರಿಗೆ ಗಳಗಳ ಕಸರತ್ತುಗಳ ಬಗ್ಗೆ ಬೆಳ್ಳಿ ಪದಕಗಳು ಹಂಚಲಾದುವು ಮುನಿಸಿಪಲ್ ಕೌನ್ಸಿಲರ್ ಶ್ರೀ| ಎಂ ವಿ ಭಟ್ಟರ ಉದಾರತೆಯಿಂದ ಸಂಘದವರಿಗೆ ಉಪಹಾರವೀಯಲಾಯಿತು

ಮಾಬುಕಳ ಇಲ್ಲಿ ಶ್ರೀ ಕೃಷ್ಣ ಇಂಡಸ್ಟ್ರಿಯಲ್ ವರ್ಕ್ಸ್, ಲಿಮಿಟೆಡ್ ಮಾಬುಕಳ (ಬ್ರಹ್ಮಾವರ) ಎಂಬ ಹೆಸರಿನಿಂದೊಂದು ಹೊಲಿಗೆಯ ನೂಲು ತಯಾರಿಕೆಯ ಕಾರ್ಖಾನೆಯನ್ನು ಕೆಲವು ಉತ್ಸಾಹೀ ತರುಣರು ತೆರೆದಿರುವರು ಇದರ ಚಾಲಕರಾದ ರಾ| ಆರ್ಟಿಟ್ಟು ವಿಟ್ಠಲಕಾಮತರ ಅವಿಶ್ರಾಂತ ಪ್ರಯತ್ನದಿಂದ ಈ ಸಂಸ್ಥೆಯು ತಾ ೨೭-೪-೩೭ರಲ್ಲಿ ರಜಿಸ್ಟರ್ ಮಾಡಲ್ಪಟ್ಟಿತು ಡೈರೆಕ್ಟರರ ಪ್ರಾಮಾಣಿಕತೆಯೂ ಚಾತುರ್ಯವೂ ಜನಪ್ರೀತಿಯೂ ಸರಕಾರ ಬುದ್ಧಿಯೂ ದಯಾಪೂರಿತ ಹೃದಯವೂ ಸಂಸ್ಥೆಯ ಪುರೋಭಿವೃದ್ಧಿಯನ್ನು ಜನತೆಗೆ ತೋರುತ್ತಿರುವುದು ನಿರುದ್ಯೋಗ ಪಿಶಾಚಿಯ ಕಾಟವು ಪ್ರಬಲವಾದ ಈ ಕಾಲದಲ್ಲಿ ಕಡಿಮೆ ಪಕ್ಷ ೩೦ ಜನರಿಗೆ ಈಗಲೇ ಉದ್ಯೋಗವನ್ನೀಯುವ ಈ ಸಂಸ್ಥೆಯು ಜನ್ಮವೆತ್ತಿದುದು ಮಾಬುಕಳದವರ ಭಾಗ್ಯವೇ ಸರಿ. ಈ ಸಂಸ್ಥೆಯು ದಿನೇ ದಿನೇ ಅಭಿವೃದ್ಧಿ ಹೊಂದಿ ಜನಪ್ರೀತಿಗೆ ಪಾತ್ರವಾಗಿ ಚಿರಸ್ಥಾಯಿಯಾಗಿ ಬೆಳಗುವಂತೆ ಅನುಗ್ರಹಿಸಬೇಕೆಂದು ಶ್ರೀ ಕೃಷ್ಣನನ್ನು ಪ್ರಾರ್ಥಿಸುವೆವು.

ಮುಲ್ಕಿ:— "ಇಲ್ಲಿನ ಆಸ್ಪತ್ರೆಯ ಸಿರಾತ್ರಿಕ ಫಂಡಿನ ಮೆಂಬರರ ವಾರ್ಷಿಕ ಮಹಾಸಭೆಯು ಇದೇ ಮೇ ತಿಂಗಳ ತಾ. ೧೬ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ರಾ| ಬಿ. ವೆಂಕಟ್ರಾಯ ಬಾಳಿಗ, ಬಿ.ಎ, ಬಿ.ಎಲ್, ಎಂ ಎಲ್ ಎ., ಇವರ ಅಧ್ಯಕ್ಷತೆಯಲ್ಲಿ ಸೇರುವುದು ಎಲ್ಲಾ ಮೆಂಬರರು ಈ ಸಭೆಗೆ ದಯಮಾಡಿ ಹಾಜರಾಗಬೇಕೆಂದು ಸದ್ರಿ ಫಂಡಿನ ಗೌ| ಕಾರ್ಯದರ್ಶಿಯವರು ಪ್ರಾರ್ಥಿಸುತ್ತಾರೆ.

ಮೂಡಬಿದ್ರಿ:—ಇದೇ ತಾ. ೨ನೇ ಆದಿತ್ಯವಾರ ಸಾಯಂಕಾಲ ಇಲ್ಲಿಯ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ೫ನೇ ವಾರ್ಷಿಕೋತ್ಸವವು ಶ್ರೀ| ಯು ಭವಾನಿಶಂಕರ ರಾವ್, ಬಿ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು ಅಧ್ಯಕ್ಷರು ತಮ್ಮ ರಸವತ್ತಾದ ಭಾಷಣದಲ್ಲಿ ನಿರಕ್ಷರತೆಯನ್ನು ಹೋಗಲಾಡಿಸಲು ವಾಚನಾಲಯವು ಹೇಗೆ ಯತ್ನಿಸಬೇಕು ಮತ್ತು ಸಾರ್ವಜನಿಕ ಕಾರ್ಯಗಳನ್ನು ಕೈಗೊಳ್ಳುವುದರಲ್ಲಿ ಐಕ್ಯತೆಯೂ ಪರಸ್ಪರ ಸೌಹಾರ್ದವೂ ಅವಶ್ಯಕವಾಗಿರಬೇಕಾದುದೆಂಬ ವಿಷಯವನ್ನು ಚಲೋದಾಗಿ ವಿವರಿಸಿದರು ಇಂದೇ ಸಂಜೆ ಒಂದು ಮಹಾಸಭೆಯೂ ನಡೆದು ೬ನೇ ವರ್ಷದ ಆಡಳಿತೆಯನ್ನು ನಡೆಸುವರೇ ಹನ್ನೊಂದು ಮಂದಿ ಸದಸ್ಯರನ್ನು ಆರಿಸಲಾಯಿತು

ಬಿದಿಯಡ್ಕ—ಕಳೆದ ತಾ ೨೭ರಲ್ಲಿ ಪಿಂಡಿಗೆ ಶ್ರೀ| ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಶ್ರೀಗಳಾದ ಕೆ ಆರ್ ಕಾರಂತರೂ, ಬಿ ವಿ ಬಾಳಿಗರೂ ರಾಜಕೀಯ ಪರಿಸ್ಥಿತಿಯನ್ನು ಜನರಿಗೆ ಮುಂದಿಟ್ಟು ಮಾಡಿ ಕೊಂಗ್ರೆಸ್ಸನ್ನು ಬಲಪಡಿಸಬೇಕೆಂದೂ ಎಲ್ಲರೂ ಸದಸ್ಯರಾಗಿ ಸೇರಬೇಕೆಂದೂ ಉಪದೇಶ ಮಾಡಿದರು.

ಸರಿಮೊಗರು—ಇಲ್ಲಿಯ ಬೋ| ಶಾಲೆಯ ಚತುರ್ಥ ವರ್ಧಂತ್ಯುತ್ಸವದ ಸಮಾರಂಭವು ಕಳೆದ ತಾ ೨೫ನೇ ಆದಿತ್ಯವಾರ ದಿನ ಡಿಸ್ಟ್ರಿಕ್ಟ್ ಬೋ| ಮೆಂಬರರಾದ ಮ| ರಾ| ವಕೀಲ ಎಂ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು ಅಂದು ಪೂರ್ವಾಹ್ನ ವಿದ್ಯಾರ್ಥಿಗಳಿಂದ ಭಜನೆಯೂ ಪಂದ್ಯಾಟವೂ ಜರಗಿತು ಅಪರಾಹ್ನ ಪ್ರಹಸನವೂ 'ಧ್ರುವ ಬಾಲ'ನೆಂಬ ನಾಟಕವೂ ಅಭಿನಯಿಸಲ್ಪಟ್ಟಿತು

ಪಡುಬಿದ್ರೆ:- ಕಳೆದ ಹದಿನೈದು ದಿನಗಳಿಂದ ಸ್ಥಳೀಯ ದೇವಸ್ಥಾನದ ಬಳಿಯ ಶ್ರೀ ಶಂಕರನಾರಾಯಣ ಥಿಯೇಟರಿನಲ್ಲಿ ಕೊಳ್ಳೂರು ಶ್ರೀ ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಮಂಡಳಿಯವರು ಹಲವು ನಾಟಕಗಳನ್ನು ಆಡಿ ಜನಪ್ರೀತರಾಗಿರುವರು ಸದ್ರಿಯವರು ಅಭಿನಯಿಸಿದ ನಾಟಕಗಳಲ್ಲಿ ನಳಚರಿತ್ರೆ ಎಂಬ ಪೌರಾಣಿಕ ನಾಟಕವು ತುಂಬಾ ಯಶಸ್ವಿಯಾಗಿ ಜನರ ಪ್ರಶಂಸೆಗೆ ಪಾತ್ರವಾಗಿರುವುದಾಗಿ ತಿಳಿಯಬರುತ್ತದೆ

ಕೊಂಚಾಡಿ:—ಇದೇ ತಾ ೯ ೫-೧೯೩೭ನೇ ಆದಿತ್ಯವಾರ ಇಲ್ಲಿಯ ಶ್ರೀ ರಾಮಾಶ್ರಮ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಮಂಗಳೂರು ಮುನ್ಸಿಪಲ್ ಚೆಯರ್ಮೆನರಾದ ಡಾ| ಕೆ ವಿಟ್ಠಲಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಲಿರುವುದಾಗಿಯೂ ವಿದ್ಯಾಭಿಮಾನಿಗಳು ಸದ್ರಿ ವರ್ಧಂತಿ ಉತ್ಸವಕ್ಕೆ ಉದಾರಹಸ್ತಗಳಿಂದ ಯಥಾಶಕ್ತಿ ಸಹಾಯಮಾಡಿ ಸಹಕರಿಸಬೇಕಾಗಿಯೂ ಸಂಬಂಧಪಟ್ಟವರು ತಿಳಿಸುತ್ತಾರೆ

ಬ್ರಹ್ಮಾವರ ಕಳೆದ ತಾ ೩೦ರಲ್ಲಿ ಇಲ್ಲಿಯ ಶ್ರೀಮಾನ್ ಕೆ ವಾರಂಬಳ್ಳಿ ಸುಬ್ರಾಯರು ದಿವಂಗತರಾದುದು ತುಂಬಾ ಖೇದಕರವಾಗಿದೆ ಇವರ ವೃದ್ಧಯುಕ್ತವಾದ ಸತತ ಪ್ರಯತ್ನಗಳಿಂದಲೇ ಇಲ್ಲಿನ 'ಸಹಕಾರ ಸಂಘ'ವು ಜಿಲ್ಲೆಯಲ್ಲಿ ಪ್ರಥಮಸ್ಥಾನವನ್ನು ಹೊಂದಿದೆ ಈ ಸಂಘದ ಕೃಪಾಪೋಷಿತವಾದ ಸಾರ್ವಜನಿಕ ಸಂಘವು ಬಹು ದೀರ್ಘಕಾಲದಿಂದ ನಡೆದುಬರುತ್ತಾ ಜನತೆಗೆ ವಾಚನಾನುಕೂಲತೆಯನ್ನು ಒದಗಿಸುತ್ತಿರುವುದಲ್ಲದೆ, ಹೊಸತಾಗಿ ಕಟ್ಟಿಸಿರುವ ಬೋರ್ಡು ಶಾಲಾ ಕಟ್ಟಡದ ಬಗ್ಗೆ ಹೇರಳ ಧನ ಸಹಾಯವನ್ನು ಮಾಡಿರುವುದು, ಈ ಸಹಕಾರ ಮತ್ತು ಸಾರ್ವಜನಿಕ ಸಂಘಗಳ ಅಧ್ಯಕ್ಷರೂ ಗ್ರಾಮ ಉದ್ಯೋಗಸ್ಥರೂ, ಪಂಚಾಯತ ಕೋರ್ಟು ಮೆಂಬರರೂ ಇಲ್ಲಿನ ಜಮಾನ್ದಾರರೂ ಆಗಿದ್ದರು ಅಲ್ಲದೆ, ಸ್ವತಃ ಆಯುರ್ವೇದ ಪಂಡಿತರಾಗಿದ್ದು ಧರ್ಮಾರ್ಥವಾಗಿ ಔಷಧಗಳನ್ನು ದಾನ ಮಾಡಿ ಬಡಜನರಿಗೆ ತುಂಬಾ ಸಹಾಯಮಾಡುತ್ತಿದ್ದರು. ಅವರ ಆತ್ಮಕ್ಕೆ ಶಾಶ್ವತ ಪದವಿಯನ್ನೂ ಕುಟುಂಬಕ್ಕೆ ಶ್ರೇಯಸ್ಸನ್ನೂ ಶ್ರೀ ದೇವರು ಕರುಣಿಸಲಿ!

ಧರ್ಮಸ್ಥಳ—ಇಲ್ಲಿ ೧೫ ವರ್ಷಗಳ ಹಿಂದೆ ಕ್ರಿಸ್ತಮತಾವಲಂಬಿಗಳಾದ ೪೦ ಮಂದಿ ಹರಿಜನರನ್ನು ಹಿಂದೂಧರ್ಮಕ್ಕೆ ಶುದ್ಧೀಸಂಸ್ಕಾರದ ಮೂಲಕ ಸೇರಿಸಲಾಯಿತು. ಹಿಂದೂ ಮಹಾಸಭೆಯ ಮೈಸೂರು ಶಾಖಾ ಸೆಕ್ರೆಟರಿಗಳಾದ ಶ್ರೀ| ಕೇಶವಯ್ಯನವರು ಈ ಶುದ್ಧೀ ಸಂಸ್ಕಾರದ ಪೌರೋಹಿತ್ಯವನ್ನು ನಡೆಸಿ ಅವರಿಗೆ ಹಿಂದೂ ಹೆಸರುಗಳನ್ನು ಕೊಡಲಾಯಿತು.

ಕನ್ಯಾನ—ಇಲ್ಲಿಯ ಹಯರ್ ಎಲಿಮೆಂಟರಿ ಶಾಲೆಯ ವರ್ಷಾವಧಿ ವರ್ಧಂತ್ಯುತ್ಸವವು ತಾ. ೨೪ನೇ ಶನಿವಾರ ಅಪರಾಹ್ನ ಪುತ್ತೂರು ರೇಂಜ್ ಶಾಲಾ ಸೀನಿಯರ್ ಡಿಪ್ಯುಟಿ ಇನ್ಸಪೆಕ್ಟರ್ ಶ್ರೀ| ಬಿ. ವಿ. ವೆಂಕಟರಮಣ ಅವರ್ಗಳ್, ಅವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು

ಕೊಣಜೆ:—ಇದೇ ತಾ ೩ನೇ ಸೋಮವಾರ ಕೊಣಜೆ ಮತ್ತು ಸರಹದ್ದಿನ ಗ್ರಾಮ ನಿವಾಸಿಗಳ ಸಭೆ ಜರಗಿ, ಶ್ರೀ| ಪಿ ವಿ ಉಪಾಧ್ಯಾಯರು ಕೊಂಗ್ರೆಸ್ಸಿನವರು ಸರಕಾರದೊಡನೆ ಕೇಳಿಕೊಂಡ ಭರವಸೆಯ ವಿಷಯವನ್ನೂ, ಸರಕಾರದವರು ಕೊಡಲೊಪ್ಪದಿದ್ದುದು ಶುದ್ಧ ಅನ್ಯಾಯವೆಂದೂ ನೆರೆದವರಿಗೆ ಮನದಟ್ಟಾಗುವಂತೆ ವಿವರಿಸಿ ಹೇಳಿದರು

ಹಿರಿಯಡ್ಕ—ಸ್ಥಳೀಯ ಶ್ರೀ ವೀರಭದ್ರ ದೇವಸ್ಥಾನದ ವರ್ಷಾವಧಿ ಜಾತ್ರೆಯು ಈ ವರ್ಷ ಕಳೆದ ತಾ ೨೫-೪-೩೭ರಿಂದ ತಾ ೩೦-೪-೩೭ ತನಕ ಸಾಂಗವಾಗಿ ಜರಗಿತು ಜಾತ್ರೆಯ ಕಾಲದಲ್ಲಿ ಮಿಶ್ಯನರಿಗಳು ಇಲ್ಲಿಗೆ ಬಂದು ತಮ್ಮ ಮತಪ್ರಚಾರ ಕಾರ್ಯವನ್ನು ಯಾವ ತಡೆಯೂ ಇಲ್ಲದೆ ನೆರವೇರಿಸಿಕೊಂಡು ಹೋಗುತ್ತಿದ್ದರು. ಆದರೆ ಸ್ಥಳೀಯ ಆರ್ಯಸಮಾಜದವರು ಆರ್ಯಧರ್ಮ ಪ್ರಚಾರಕರಾಗಿರುವ ಶ್ರೀ| ಕಾರ್ಕಳ ಮಂಜುನಾಥ ಶೆಣೈಯವರ ಸಹಾಯದಿಂದ ಮಿಶ್ಯನರಿಗಳ ಭಾಷಣ ಕೇಳಲು ಒಬ್ಬನಾದರೂ ಸಿಗದಂತೆ ಮಾಡಿದುದು ಸ್ತುತ್ಯ. ಅಲ್ಲದೆ ಆರ್ಯಸಮಾಜದ ಮಹತ್ವವನ್ನು ಜನತೆಗೆ ಮುಂದಿಟ್ಟು ಮಾಡಿ ಜನರಲ್ಲಿಯ ಅಂಧಶ್ರದ್ಧೆಯನ್ನು ಹೋಗಲಾಡಿಸಲು ಮಾಡಿದ ಪ್ರಚಾರಕಾರ್ಯದ ಪರಿಣಾಮವಾಗಿ ಜನರಲ್ಲಿ ತಕ್ಕಮಟ್ಟಿಗೆ ನವಜಾಗೃತಿಯುಂಟಾಗಿದೆಯೆನ್ನಬಹುದು

ಈ ವರ್ಷದ ಉತ್ಸವದಲ್ಲಿ ಹರಿಜನರ ಕಾಣಿಕೆ ಹೊಟೇಲೊಂದು ತೆರೆದಿದ್ದುದು ತುಂಬಾ ವಿಶೇಷಕರ ಸಂಗತಿಯಾಗಿದೆ

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡೆದುಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತರಿಸಿಕೊಳ್ಳುವರೆ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವರೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿಪಡಿಯತಕ್ಕದ್ದು ತಿಳಿದಿರುವುದು

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಯೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಚಾರ್ಮಾಡಿ		ಕಾರ್ಕಳ
ಉಜ್ರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಯೆ)	ಉಡ್ಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೊಯಿಂಟ್ ಮೆನೇಜರರಿಗೆ ಬರೆದು ತಿಳಿಸಿರಿ

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908

Church Gate Street, Fort - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses

It pays you to represent this Company

Wanted Agents in unrepresented parts

Apply to —

Messrs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at.-	P. B 337, Mount Road, Madras.	Visveshwarapuram Circle, Bangalore City.	Soumyaldyam Puthiyara, Calicut	Car Street, Mangalore	Udipi, S. India	Charni Road, Bombay No 4

ಅಮೇರಿಕದ ಪಿತೃ ಶಿರೋಮಣಿ

ಒಂದು ನಗ್ರೊ ಸಂತಾನ.

ಆಂಬ್ರೋಸ್ ಡೋಗ್‌ಲಾಸ್.

ಅಮೇರಿಕದ ಫ್ಲೋರೀಡಾ ಪ್ರಾಂತ್ಯದ ಬ್ರೂಕ್ಸ್‌ವಿಲ್ ಪಟ್ಟಣಿಗನೊಬ್ಬನ ಪ್ರಾಯ ಒಂದು ಶತಮಾನಕ್ಕೆ ೯ ಕಡಿಮೆ—ಅಷ್ಟೆ. ಮೊನ್ನೆ ತಾನೆ ಅವನಿಗೊಂದು ಮಗು ಹುಟ್ಟಿ, ಅವನ ಮಕ್ಕಳ ಸಂಖ್ಯೆಯು ಜುಮ್ಲಾ ೩ಲಕ್ಕೆ ಬಂದು ನಿಂತಿದೆ. ಮೊದಲನೇ ಹೆಂಡತಿಯಿಂದ ಅವನಿಗೆ ೨೭ ಮಕ್ಕಳಿವೆ. ಎರಡನೇ ಪತ್ನಿಯು ಇಪ್ಪತ್ತರ ತನಕ ೧೨ ಹೆತ್ತುದ್ದಾಯಿತು. ಇಷ್ಟು ಭಾರಿ ಸಂಸಾರವಿದ್ದರೂ ಅಂಬ್ರೊಸನಿಗೆ ಯಾವೊಂದು ತರದ ಚಿಂತೆಯೂ ಇಲ್ಲ. ಅವನ ಸಂಸಾರವು ಸುಗಮವಾಗಿ ಸಾಗುತ್ತದೆ. ಮಕ್ಕಳೆಲ್ಲರೂ ಜೀವಂತವಾಗಿದ್ದಾರೆ. ಕೆಲವರು ದುಡಿಯುತ್ತಾರೆ. ಕೆಲವರು ಶಾಲೆಗೆ ಹೋಗುವವರು. ಇನ್ನು ಕೆಲವು ಚಿಕ್ಕ ಬಾಲಕರು.

'ಮಕ್ಕಳು ಆಗುತ್ತಲೇ ಇರುತ್ತವೆ. ನನಗೆ ಪ್ರಾಯ ಹೆಚ್ಚಿದಷ್ಟು ಆಯುಷ್ಯ ಹೆಚ್ಚುತ್ತದೆ. ನನ್ನ ಈಗಿನ ತೊಂದರೆ ಮಕ್ಕಳಿಗೆ ಹೆಸರಿಡುವುದು. ಇಷ್ಟು ಹುಟ್ಟುತ್ತವೆಯೆಂದು ತಿಳಿದಿದ್ದರೆ ಸಂಖ್ಯೆಪ್ರಕಾರ ನಾಮಧೇಯ ಮಾಡಬಹುದಿತ್ತು. ಆದರೆ ನಮ್ಮ ಅಮೇರಿಕದಲ್ಲಿ ೪೮ ಪ್ರಾಂತ್ಯಗಳಿವೆ. ಆಗಲೇ ೩೬ ಪ್ರಾಂತ್ಯಗಳ ಹೆಸರು ನನ್ನ ಮಕ್ಕಳಿಗೆ ಇಡಲಾಗಿದೆ. ಇನ್ನೂ ಹದಿನೆರಡು ಪ್ರಾಂತ್ಯಗಳ ಹೆಸರಿದೆ. ಅದರಿಂದ ಹೆದರಿಕೆ ಇಲ್ಲ' ಅಸ್ಟೆ, ಹೀಗೆಂದು ಈ ನಿಗ್ರೊ ಮುದುಕನು ಅನ್ನುತ್ತಿದ್ದಾನೆ.

ಪ್ರಕೃತಿ ವೈಚಿತ್ರ್ಯ

ಅಮೇರಿಕದ ಅಲ್ಟಾನಾ ಪಟ್ಟಣದ ಒಂದು ಸರ್ಕಸ್ ಕಂಪೆನಿಯಲ್ಲಿ ಹಾಸ್ಯಗಾರನಾಗಿ ಜೆಕ್ ಎಕರ್ಟ್ ಎಂಬವನಿದ್ದನು. ಇವನ ಮೈ ಎಲ್ಲಾ ಬೊಜ್ಜು ಬೆಳೆದಿತ್ತು. ಇವನ ಭಾರಕ್ಕೆ ಸುಮಾರು ೨೦೦ ರಾತ್ತಲು ಕೂಡಿಸಿದರೆ ಒಂದು ಸಾವಿರ ರಾತ್ತಲುಗಳಾಗುತ್ತವೆ. ದೊಡ್ಡ ಆನೆಮರಿ ಎಂದರೂ ಎನ್ನಬಹುದು. ದಿನಹೋದಷ್ಟಕ್ಕೆ ಇವನ ಮೈಯು ಇನ್ನೂ ಬೆಳೆಯುತಿದ್ದು ಚಲಿಸಲಿಕ್ಕೆ ಕಷ್ಟವಾಗುತ್ತಿದ್ದುದರಿಂದ ಇವನು ಒಂದು ಮೋಟಾರ್ ಲಾರಿಯೇ ತನ್ನ ಓಡ್ಯಾಟಣ ತಿರುಗಾಟಗಳ ಸಾಧನವಾಗಿ, ಅದರೊಳಗೆ ಮನೆಯಂತೆ ಮಾಡಿ ಜೀವಿಸುತ್ತಿದ್ದನು. ಒಂದು ದಿನ ಮತ್ತೊಂದು ಲಾರಿಯು ಇವನ ವಾಹನಕ್ಕೆ ಡಿಕ್ಕಿ ಬಡಿದು ಜೆಕ್ಕನಿಗೆ ಘಾಯಗಳಾದುವು. ಹತ್ತು ಮಂದಿ ದಿಂಡಾಳುಗಳು ಬಹು ಕಷ್ಟದಿಂದ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಅವನು ಮಡಿದನು. ಪಾಪ! ಅವನ ಯಜಮಾನನು ಜೆಕ್ಕನ ಇಚ್ಛೆಯಂತೆ ಅವನ ಮೃತದೇಹವನ್ನು ಒಂದು ವೈದ್ಯಕೀಯ ಸಂಶೋಧನಾಲಯಕ್ಕೆ ಕೊಡಬೇಕೆಂದಿದ್ದಾಗ, ಬೊಜ್ಜು ದೇಹಗಳು ಸಂಶೋಧನೆಗೆ ಅಯೋಗ್ಯವೆಂದು ತಿರಸ್ಕರಿಸಲಾಯಿತು.

ಅಜ್ಜಮ್ಮನನ್ನು ವರಿಸಿದ ತರುಣ

ಲಂಡನಿನ ದರ್ಜಿಯೊಬ್ಬನಲ್ಲಿ ಕೆಲಸ ಕಲಿಯುತ್ತಿದ್ದ ಸ್ಟೆನ್ಲಿ ಸಿರ್ಲ್ ಎಂಬ ೨೨ ವರ್ಷದ ಯುವಕನು ೬೦ ವರ್ಷದ ಮುದುಕಿಯೋರ್ವಳಲ್ಲಿ ೬ ತಿಂಗಳಿಂದ ಪ್ರಣಯ ಬೆಳಸಿ ಮೊನ್ನೆ ಗುಪ್ತವಾಗಿ ಅವಳನ್ನೆ ಮದುವೆಯಾದನು. ಗುಟ್ಟೆಂತು ರಟ್ಟಾಯಿತೋ ಆಯಿತು. ಕೂಡಲೇ ಸಾವಿರಾರು ಮಂದಿ ಹಳೇ ಮುದುಕಿಯರು ವಧೂವರರನ್ನು ಆಶೀರ್ವದಿಸಬಂದರಂತೆ.

ವಿಚಿತ್ರ ಮೃಯಿಲು

ಅಮೇರಿಕದ ಮೌಂಟ್ ವಿಲ್ಸನಲ್ಲಿನ ಅಸಾಬ್ರೌನ್ ಎಂಬವನು ಬರೆದಿಟ್ಟ ಮೃಯಿಲು ಪ್ರಕಾರ ಅವನ ಮಕ್ಕಳೆಲ್ಲರೂ ಏಕಸಮಾನ ಹಕ್ಕುಳ್ಳವರಾಗಿದ್ದಾರೆ. ಅವರೆಲ್ಲರೂ ಅವನ ಸಾಲವನ್ನು ಸಮ ಪಾಲಾಗಿ ತುಂಬಿಸಬೇಕು.

ವಿದ್ಯಾರ್ಥಿ ಪರೀಕ್ಷೆ

ವಿಯನ್ನಾ ನಗರದ ಮಕ್ಕಳ ಶಾಲೆಯೊಂದರಲ್ಲಿ ವೆಲ್ಡ್‌ಮರ್ ಬೊಡೆನ್ ಎಂಬವನೊಬ್ಬ ಅಧ್ಯಾಪಕ. ಬಹಳ ಕಠಿಣ ಶಿಸ್ತಿನವನು. ಮಕ್ಕಳು ವಿಧೇಯರಾಗಿದ್ದಾರೋ ಇಲ್ಲವೊ ಎಂಬುದನ್ನು ಪರೀಕ್ಷಿಸಲೋಸುಗ ಈತನು ವಿದ್ಯಾರ್ಥಿಗಳಿಗೆ ಮೊಳೆಗಳನ್ನು ನುಂಗ ಕೊಟ್ಟನಂತೆ. ಸರಕಾರಕ್ಕೆ ಸುದ್ದಿ ತಿಳಿದು ಉಪಾಧ್ಯಾಯನ ಬುದ್ಧಿ ಸರಿಯಾಗುವಂತೆ ಎರಡು ತಿಂಗಳಿಗೆ ಕಳುಹಿಸಿರುವರು.

ಕ್ರೀಡಾಪ್ರಿಯ ಪತ್ನಿ

ಸಮವಿರೋಧ ಪ್ರಕೃತಿ.

ವಿಯನ್ನಾದಲ್ಲಿ ಇನ್ನೊಂದು ಸಂಗ್ತಿ

ಹರ್ ಕಾರ್ಲ್ ಲುಜ್ ಎಂಬವನು ತನ್ನ ಹೆಂಡತಿಯ ಮೇಲೆ ವಿವಾಹವಿಚ್ಛೇದಕ್ಕೆ ಮೊಕದ್ದಮೆ ಹೂಡಿದನು. ಮನೆಗೆಲಸ ನೋಡದೆ ಪತ್ನಿಯು ಫೂಟ್‌ಬಾಲ್ ಆಟ ಆಡಲು ಹೋಗುವಳೆಂದೇ ಲುಜ್‌ನ ಅಪಾದನೆ. ಅಡಿಗೆ ಮಾಡುವುದು, ಮಕ್ಕಳಾಡಿಸುವುದು ಗಂಡನ ಪಾಲಿಗೆ ಬಿದ್ದಿದೆ. ಕಾರಣ ಪತ್ನಿಯು ಪ್ರಖ್ಯಾತ ಆಟಗಾರ್ತಿ. ಗಂಡಸರಿಗೆ ಎಷ್ಟು ಅಧಿಕಾರವಿದೆಯೋ ಅಷ್ಟು ಅಧಿಕಾರವು ತನಗಿದೆ ಎಂದು ಪತ್ನಿಯು ಪ್ರತಿವಾದಿಸಿದಳು—ಕೇಸ್ ಫೈಸಲ್ ಆಯಿತು.

ನಾರೀ ಶತ್ರು—ಭಾಷಣ ದಾಖಲೆ

ಪೋಲೆಂಡಿನಲ್ಲಿ ಸಂಗೀತ ಶಾಸ್ತ್ರಜ್ಞನೊಬ್ಬ ಸಿದಾಸೆ ಎ. ಟಿ. ಸ್ಪಿಮೈಕ್ 'ನಾರೀಮರ ಚೋದಕ್ಕೆ' ಎಂಬೀತರದ ವಿಷಯದ ಮೇಲೆ ಈ ಮಹನೀಯನು ೨೬ ಗಂಟೆಗಳ ಕಾಲ ಬಿಡದೆ ಭಾಷಣಮಾಡಿದನಂತೆ. ಹೆಂಗುಸರ ಮೇಲೆ ಅನಗಿರುವ ದ್ವೇಷವೇ ಅವನನ್ನು ಈ ದಾಖಲೆ ಮಾಡಿದುವಂತೆ ಪ್ರೇರೇಪಿಸಿತಂತೆ.

ಇಂಗ್ಲೆಂಡಿನ ರಾಜರ ಕಿರೀಟಧಾರಣೆ ಉತ್ಸವಕಾಲದಲ್ಲಿ ಇಂಗ್ಲೆಂಡಿನಲ್ಲಿರುವ ಅನಾಥ ಶಿಶುಗಳನ್ನು ದತ್ತು ತೆಗೆದುಕೊಳ್ಳುವವರಿಗಾಗಿ ತಂದಿಡುವರಂತೆ. ಆಗಲೇ ಲಂಡನಿಗೆ ಬರಲಿರುವ ಅನೇಕಾನೇಕ ಪ್ರೇಕ್ಷಕರು ಶಿಶುಸಂಸ್ಥೆಗಳಿಗೆ ಈ ತರದ ಏರ್ಪಾಡಿಗಾಗಿ ಬರೆದಿರುವರಂತೆ. ಮಕ್ಕಳು ಎರಡು ತಿಂಗಳಿಂದ ಒಂದು ವರ್ಷದ ಒಳಗಿನವರಿರುತ್ತಾರೆ.

o o o o o

ಕಾರ್ಖಾನೆಗಳಲ್ಲಿ ಕೆಲಸಮಾಡುವಾಗ ಲಘು ಸಂಗೀತವನ್ನು ಕೆಲಸಗಾರರಿಗೆ ಕೇಳುವಂತೇರ್ಪಾಡು ಮಾಡಿದ್ದಲ್ಲಿ ಕೆಲಸವು ಬಹು ಜಾಗ್ರತೆಯಾಗಿ ಸಾಗುತ್ತದೆಂದು ಬ್ರಿಟಿಷ್ ವೈದ್ಯಕೀಯ ಸಂಶೋಧನಾಲಯದವರು ಕಂಡುಹಿಡಿದ ಮೇಲೆ ಅಲ್ಲಿಯ ಕಾರ್ಖಾನೆ ಮಾಲಿಕರು ಗ್ರಾಮೋಫೋನ್ ಸಂಗೀತದ ಏರ್ಪಾಡನ್ನು ಮಾಡಲಿರುವರಂತೆ.

o o o o

ಜರ್ಮನಿಯಲ್ಲಿ ಎಲ್ಲಿಯಾದರೂ ನೂರು ಗಜಗಳ ಮೇಲಿನ ಅಂತರದಲ್ಲಿ ಗಾಳಿಪಟಗಳನ್ನು ಹಾರಿಸಬಾರದೆಂದು ಜರ್ಮನ್ ಸರಕಾರವು ಆಜ್ಞೆ ಇತ್ತಿರುತ್ತದೆ.

[illegible]

ಒರಿಸ್ಸಾ ಪ್ರಾಂತ್ಯದ ಮುಖ್ಯ ಮಂತ್ರಿಗಳಾದ ಪರ್ಲಾಕಿಮಿಡಿ ಮಹಾರಾಜರ ಮೋಟಾರು ತಮ್ಮ ಎಸ್ಟೇಟಿನಿಂದ ಕಟಕ್‌ಗೆ ಬರುತ್ತಿದ್ದಾಗ ಅಪಘಾತಹೊಂದಿ ಮಹಾರಾಜರಿಗೆ ಮುಖದ ಮೇಲೆ ಗಾಯಗಳಾಗಿವೆ. ಚಿಕಿತ್ಸೆ ಹೊಂದುತ್ತಲಿರುವರು.

o o o o

ಪ್ರಿದಿಂಕಾಶಾ ಎಸ್ಟೇಟಿನಲ್ಲಿ ಒಂದು ತಮಾಷೆಯು ಸಂಭವಿಸಿತು. ಆ ಎಸ್ಟೇಟಿಗೆ ಸೇರಿದ ಒಂದು ಹೆಣ್ಣು ಹುಲಿಯನ್ನು ಅದೇ ಎಸ್ಟೇಟನ್ನು ಕೊಂಡ ಮತ್ತೊಂದು ಗಂಡುಹುಲಿಗೆ ಕೊಟ್ಟು ವಿಧಿಯುಕ್ತವಾಗಿ ಪಾಣಿಗ್ರಹಣವಾಯಿತು. ಈ ಸಮಾರಂಭಕ್ಕೆ ೨೦೦೦ ರೂಪಾಯಿ ಖರ್ಚು ತಗಲಿತು. ಒಂದು ಭೋಜನ ಸಮಾರಂಭವು ಬೇರೆ ಏರ್ಪಡಿಸಲಾಗಿತ್ತು.

o o o o

ಪಿ ಲಿಟರಿ ಟ್ರೈನಿಂಗ್ ಶಾಲೆಯೊಂದನ್ನು ಹೈದರಾಬಾದಿನಲಿ ಸ್ಥಾಪಿಸಲಾಗಿದೆ.

o o o o

ಕಾನ್‌ಪುರದಲ್ಲಿ ಕೆಲವು ದರೋಡೆಕಾರರು ಒಬ್ಬ ವೈದ್ಯನನ್ನು ಅಪಹರಿಸಿ ಅವರನ್ನು ಗಂಗಾ ನದಿಯ ದಡದಲ್ಲಿ ಬಿಟ್ಟುಬಿಟ್ಟಿರುವರು.

o o o

ಚಿತ್ರಾಪೂರ್ಣಿಮಾ ದಿನ ಹಂಪೆಯಲ್ಲಿ ನಡೆದ ರಥೋತ್ಸವದ ಗಲಾಟೆಯಲ್ಲಿ ೫ ಮಂದಿ ಮಡಿದರಾಗಿ ಸುದ್ದಿ.

o o o

ಇಂಡೋ—ಜಪಾನೀಸ್ ಒಪ್ಪಂದಕ್ಕೆ ಮುಂದಿನ ಜುಲೈ ಮೊದಲನೆ ಭಾಗದಲ್ಲಿ ಉಭಯರಾಷ್ಟ್ರ ಪ್ರತಿನಿಧಿಗಳ ಸಭೆ ಕೂಡುವುದು.

o o o

ಕಳೆದ ತಾ ೨೮ನೇ ಹೊಸದಿಲ್ಲಿಯಲ್ಲಿ ಪ್ರಾಂತಿಕ ಸಿ. ಐ. ಡಿ. ಗಳು ೬ ಮುದ್ರಣಾಲಯಗಳನ್ನು ಶೋಧಿಸಿದರು. ವರ್ಕರ್ಸ್ ಒಫ್ ದಿ ವರ್ಲ್ಡ್ ಯುನೈಟ್, ವೈಸರಾಯ್ ಒಫ್ ರೆಡ್ ಕ್ರಾಸ್' ಇತ್ಯಾದಿ ಶಿರೋನಾಮಗಳನ್ನೊಳಗೊಂಡ ಹಸ್ತಪತ್ರಿಕೆಗಳನ್ನು ವಶಪಡಿಸಬೇಕೆಂಬ ಉದ್ದೇಶದಿಂದಲೇ ಈ ಶೋಧನೆ ನಡೆಸಿರುವರಾಗಿ ತಿಳಿದುಬರುತ್ತದೆ.

o o o

ಅಲಹಾಬಾದ್ ವಿಶ್ವವಿದ್ಯಾಲಯದ ಸುಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞರಾದ ಡಾ. ಎನ್ ಆರ್ ಧಾರ್‌ರವರು ಯುರೋಪು ಮತ್ತು ಅಮೇರಿಕಾ ದೇಶಗಳಲ್ಲಿ ಒಂದು ಉಪನ್ಯಾಸ ಪ್ರವಾಸವನ್ನು ಕೈಕೊಂಡಿರುವರು.

o o o o

ಗೋಧ್ರದಲ್ಲಿ ಕಿಸಾನ್ ಸಮ್ಮೇಳನವು ನಡೆಯುವುದು. ಸುಪ್ರಸಿದ್ಧ ಸೋಶಾಲಿಸ್ಟ್ ಲೀಡರಾದ ಮಿ. ಯುಸೂಫ್ ಮೆಹರಾಲಿಯವರು ಅಧ್ಯಕ್ಷತೆಯನ್ನು ವಹಿಸುವರು.

o o o o

ತಾನು ಪ್ರೀತಿಸುತ್ತಿದ್ದ ಹುಡುಗಿಯನ್ನು ಮದುವೆಯಾಗಲು ಜಾತಿಮತಗಳ ಅಭ್ಯಂತರದ ಮೇಲೆ ತನ್ನ ಮಾತಾಪಿತೃಗಳು ಅವಕಾಶ ಕೊಡದ್ದರಿಂದ ಡೆಹರಾಡನ್ ಮಿಲಿಟರಿ ಕೋಲೇಜಿನಲ್ಲಿ ಓದುತ್ತಿದ್ದ ಓರ್ವ ಧನಿಕ ವಿದ್ಯಾರ್ಥಿಯು ಆತ್ಮಹತ್ಯಮಾಡಿಕೊಂಡನಂತೆ.

o o o o

ಕ್ಯಾಲಿಫೋರ್ನಿಯದ ಒಬ್ಬ ಮ್ಯಾಜಿಸ್ಟ್ರೇಟರು ತಮ್ಮ ಮುಂದೆ ಬಂದು ಮೊಕದ್ದಮೆಯನ್ನು ವಿಚಾರಿಸುವಾಗ ವಿವಾಹದ ಅರ್ಥವೇನೆಂಬುದನ್ನು ತಮಾಷೆಯಾಗಿ ವಿವರಿಸಿದರು. ವಿವಾಹವೆಂದರೆ ಇಬ್ಬರನ್ನು ಒಳಗೊಂಡ ಒಂದು ಸಮಿತಿ. ಆ ಸಮಿತಿಗೆ ಇತರರನ್ನು ಸೇರಿಸುವುದು ಆ ಇಬ್ಬರಿಗೆ ಸೇರಿದುದು ಎಂದರು.

o o o o

ಬಂಗಾಳಾ ಹಿಂದೂ ಮಿಷನ್ನು ಹಿಂದೂ ಧರ್ಮದ ಪ್ರಚಾರಕ್ಕಾಗಿ ಪೌರ್ವಾತ್ಯ ದೇಶಗಳಿಗೆ (ಜಾವಾ, ಬಾಲಿ, ಇಂಡೋ ಚೈನ, ಸಯಾಂ, ಜಪಾನ್ ಮೊದಲಾದ ಸ್ಥಳಗಳಿಗೆ) ಪ್ರಚಾರ ಮಂಡಳಿಯೊಂದನ್ನು ಕಳುಹಿಸಲು ನಿರ್ಧರಿಸುವುದು.

o o o o

ಕಲ್ಕತ್ತದಲ್ಲಿದ್ದ ಈಸ್ಟರ್ನ್ ಮೆಸ್ಸುಪೆಲ್ಲಿಂಗ್ ಕಂಪೆನಿಯ ಸುಮಾರು ೫೦೦ ಮಂದಿ ಕೆಲಸಗಾರರು ೨೬ನೇ ತಾರೀಕು ಪ್ರಾರಂಭಕ್ಕೆ ಕೆಲಸ ನಿಲ್ಲಿಸಿಬಿಟ್ಟಿದ್ದರಿಂದ ಕಂಪೆನಿಯ ವರ್ಕ್‌ಶಾಪು ನಿಲ್ಲಿಸಲ್ಪಟ್ಟಿತು.

o o o o

ನಿರಂತರವಾದ ಒಂದು ರಾಜಕೀಯ ತಳಹದಿಯ ಮೇಲೆ ಸಂಯುಕ್ತ ಭಾರತವನ್ನು ಕಟ್ಟಬೇಕೆಂದು ಪಂಡಿತ ನೆಹರೂರವರು ಒಂದು ಪದಂತಿ ಹೊರಡಿಸಿರುವರು.

o o o o

ಕಲ್ಕತ್ತಾ ಸೆಣಬಿನ ಕೆಲಸಗಾರರ ಮುಷ್ಕರವು ದಿನದಿನಕ್ಕೂ ಪ್ರಬಲವಾಗುತ್ತಿದೆ. ೨೬ನೇ ತಾರೀಕ ೪ ಗಿರಣಿಗಳಲ್ಲಿ ಕೆಲಸಮಾಡುತ್ತಿದ್ದ ಒಟ್ಟು ೧೮೦೦ ಕೆಲಸಗಾರರು ಕೆಲಸ ನಿಲ್ಲಿಸಿಬಿಟ್ಟರಂತೆ.

o o o

ಬಿ ಎನ್ ರೈಲ್ವೆ ಮುಷ್ಕರದ ವಿಚಾರಣಾ ಸಮಿತಿಯು ೨೫ನೇ ತಾರೀಕು ಕಲ್ಕತ್ತೆಯನ್ನು ತಲಪಿತು. ಸಮಿತಿಯು ಹತ್ತು ದಿನ ಕಲ್ಕತ್ತಾದಲ್ಲಿದ್ದು ವಿಚಾರಣೆ ನಡಿಸುವುದು.

o o o

ಬಿಹಾರ್ ಮಂತ್ರಿತ್ವವು ಈಗಿನ ಪಾಂತ್ಯದಲ್ಲಿ ಸರಕಾರದವರು ವಶಪಡಿಸಿಕೊಂಡಿರುವ ಅನೇಕ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಪುನಃ ಸಾರ್ವಜನಿಕ ಹತೋಟಿಗೆ ಕೊಟ್ಟುಬಿಡಬೇಕೆಂದು ನಿರ್ಧರಿಸುವುದಂತೆ.

o o o

ಎಪ್ರೀಲ್ ನ ೩೦ನೇ ತಾರೀಕಿನ ಹರತಾಳ ನಮ್ಮ ಘದಲ್ಲಿ ಪೇಶಲಿಯ ಶ್ರೀಮತಿ ಸತ್ಯದೇವಿಯವರಿಗೂ ಮತ್ತು ಶ್ರೀ ನರಸಿಂಹರವರಿಗೂ ಮ್ಯಾಜಿಸ್ಟ್ರೇಟರು ವಿಧಿಸಿದ್ದ ಶಿಕ್ಷೆಯನ್ನು ಅಪ್ಪೀಲಿನಲ್ಲಿ ಕಡಿಮೆಮಾಡಿರುವರು.

o o o o

ಡೇರಾ ಇಸ್ಮಾಯಿಲ್ ಖಾನಿಗೆ ಪೂರ್ವದಲ್ಲಿರುವ ಗುಲ್ಬತ್ ಎಂಬ ಗ್ರಾಮದಲ್ಲಿ ೨೪ನೇ ತಾರೀಕು ಇಬ್ಬರು ಹಿಂದುಗಳನ್ನು ಅಪಹರಿಸಿ ಮಾಡಿದರಂತೆ. ಮೂರು ಅಂಗಡಿಗಳು ಲೂಟಿಯಾದವು. ಎರಡಕ್ಕೆ ಬೆಂಕಿ ಹಚ್ಚಲ್ಪಟ್ಟಿತು. ಇಫಿ ಪಕೀರನ ಕಡೆಯವರು ಈ ಧಾಳಿಯನ್ನು ನಡೆಸಿದರು.

o o o o

ಮದರಾಸ್ ಪ್ರಾಂತ್ಯದಲ್ಲಿ ಭೂಕಂದಾಯದ ಪದ್ಧತಿಯನ್ನು ಪರಿಶೀಲಿಸಲು ಮದರಾಸ್ ಸರಕಾರದವರು ಒಂದು ಸಮಿತಿಯನ್ನು ಏರ್ಪಡಿಸಿರುವರು. ಸರ್ ನಾರ್ಮನ್ ಮಾರ್ಜೊರಿಬ್ಯಾಂಕರು (ಮ್ಯಾಜಿ ರೆವಿನ್ಯೂ ಮೆಂಬರು) ಈ ಸಮಿತಿಯ ಅಧ್ಯಕ್ಷರು. ಸಮಿತಿಯಲ್ಲಿ ೬ ಮಂದಿ ಸದಸ್ಯರಿರುವರು. ೩ ಮಂದಿ ಅಧಿಕಾರಿ ಸದಸ್ಯರು ಮತ್ತು ೩ ಮಂದಿ ಖಾಸಗೀ ಸದಸ್ಯರು.

o o o o

ಕಳೆದ ತಾ ೨೮ನೇ ಬುಧವಾರ ಲಾಹೋರಿನ ಮಾಚೀಘಟ್ ಎಂಬ ಬಡಾವಣೆಯಲ್ಲಿ ಮನೆಗಳ ಒಂದು ದೊಡ್ಡ ಸಾಲಿಗೆ ಬೆಂಕಿತಗಲಿ ೫೦,೦೦೦ ರೂಪಾಯಿಗಳ ನಷ್ಟ ಸಂಭವಿಸಿರುತ್ತದಂತೆ. ಅಗ್ನಿ ಆರಿಸುವ ಪ್ರಯತ್ನದಲ್ಲಿದ್ದ ಓರ್ವ ಯುವಕನಿಗೆ ಘಾಯಗಳಾಗಿವೆ.

ESTD: 1906.

CANARA BANK

LIMITED.

INCORPORATED IN BRITISH INDIA.

Member, Reserve Bank of India.
Member, Clearing House Bombay.

Subscribed Cap.	6,00,000
Paid up Capital	8,88,240
Reserves	4,50,000
Deposits	79,64,000
Total Resources	98,00,000

Offices:

BOMBAY-FORT.	MANGALORE.
BOMBAY-MANDVI.	BANGALORE.
ALLEPPEY.	CHIKAMAGALUR
ERNAKULAM	ARSIKERE.
COCHIN.	DAVANAGERE.
CALICUT.	HUBLI.
CANNANORE.	DHARWAR, Etc., Etc.

ತಯಾರಿಸುವವರು — ಕೇಸರಿ ಕುಟೀರ, ಬೆಳ್ಗೊಡ್, ಮದರಾಸು.

ಮಂಗಳೂರಿನ ಪ್ರತಿನಿಧಿ — ಬಿ. ಶ್ರೀನಿವಾಸ ಪೈ, ರಥಬೀದಿ ಮಂಗಳೂರು.

TEST YOUR EYES

By the Electro Ophthalmoscope



All Varities of Frames & Lenses.

AT

The Mangalore Trading Association Ltd.

Sight Testing Ophthalmic Opticians

Car Street, MANGALORE.



ಶಾಸ್ತ್ರೀಯರೀತ್ಯಾ ತಯಾರಿಸಿದ
ಬ್ರೆಡ್ಡ್ ನ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂವಮಾರ್ಕೆಟು, ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಮಾವತ್ತು ಬ್ರೆಡ್ಡು ನ ಬಿಸ್ಕಿಟಗಳು ಎಲ್ಲರ ಮನಸೆಳೆದಾಗಿದೆ. ರುಚಿಗೂ ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,
Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ಗೋಲಿಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸದನ, ಪೆರಿಡೇಪಿ
P. O. Peridepi (ನೆಲ್ಲೂರು ಜಿ.)

'Dil Roz' (Regd)

'Dil Roz' is a sure cure for Oriental sores, local sores, all kinds of deep rooted sores, skin eruptions, Pimples, Eczema, Ringworm, Sinus, Fistula auxillary Abscess.

There is no need of dressing. [illegible]

Price Rs. 2
Postage extra

TAHIR DIN,
Anarkali, LAHORE

BEHAR CHEMICAL WORKS, BHAGALPUR

ಗೊನೊಕ್ಯೂರು.

ಕೆಟ್ಟ ಚಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ದಿವ್ಯಔಷಧವಾಗಿದೆ. ಒಂದೇ ದಿನದ ಔಷಧ ಉಪಯೋಗದಿಂದ ಗುಣ ಕಂಡುಬರುವುದು. ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು.

ಇದರ ಗುಣ—ಧಾತು ದಪ್ಪವಿದ್ದು ಶೀಘ್ರ ಸ್ಖಲನವಾಗ ಹೋಗುವುದು. ಶಕ್ತಿಗ್ರಂಥಿಗಳ ಸಂಬಂಧವಾಗಿ ಅತೀವಾದ ಗುಳ್ಳೆಗಳು ಪಳೆಯ ಮೂತ್ರವಾಗುವಾಗ್ಯೆ ಉರಿಯುವುದು, ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧ ಸೀಸೆ 1ಕ್ಕೆ ರೂ 2—0—0.

ವ್ಯಾಟ್ಯಾಲಿಟಿ ಪಿಲ್ಸ್.

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ಅತ್ಯಂತ ಉಪಯೋಗಕಾರಿಯಾಗಿವೆ. ವಿದ್ಯಾರ್ಥಿಗಳು ತಮ್ಮ ಓದು ಶಾಲೆಯಲ್ಲಿಯೇ ಆಸಕ್ತರಾಗಿದ್ದು, ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಿಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು, ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ, ಅಲ್ಲದೆ ತಮ್ಮ ಹಿರಿಯರ ಕಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ, ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಶಕ್ತಿ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ. 2-0-0.

ಏಜೆಂಟರು:—ಷಾ ಕಂಪೆನಿ,
ಗವರ್ನಮೆಂಟ್ ಕೊಲೆಜ್ ಎದುರು
ಮಂಗಳೂರು.

ಮೆಕ್ಲೀನ್ ಬ್ರೆಂಡ್ ಸ್ಟೋಮಕ್ ಪೌಡರಿನಿಂದ

ಹೊಟ್ಟೆಯ ಶಸ್ತ್ರಚಿಕಿತ್ಸೆಯ ಕಷ್ಟವು ತಪ್ಪಿಸಿದಂತಾಯಿತು.

ಎಂ. ಬಿ. ಎಂಬೆಂಟ್ಟ್ರರು ಹೀಗೆ ಬರೆಯುತ್ತಾರೆ:-ಫೆಬ್ರವರಿಯ ಮೊದಲನೇ ವಾರದ ಸುಮಾರಿಗೆ ನಾನು ಅಸ್ವಸ್ಥಬಿದ್ದೆ. ನಾನು ಬಹಳ ಕ್ಷೀಣನಾಗಿ ನಡೆಯಲು ಬಲು ಕಷ್ಟವಾಗುತ್ತಿತ್ತು. ಅಲ್ಲದೆ ಹೊಟ್ಟೆಯೊಳಗಿನ ಕಠಿಣ ನೋವಿನಿಂದಾಗಿ ನನಗೆ ಊಟ ಮಾಡಲಾಗುತ್ತಿರಲಿಲ್ಲ.

ಒಂದು ವಾರದ ವರೆಗೆ ಹೀಗೆ ನಡೆದು ಆ ಮೇಲೆ ನನಗೆ ವಾಂತಿ ಶುರುವಾಯಿತು ನನಗೆ ನೀರು ಕೂಡಾ ಕುಡಿಯಲಿಕ್ಕೆ ಆಗುತ್ತಿರಲಿಲ್ಲ ನಾನು ಒಬ್ಬ ಡಾಕ್ಟರರನ್ನು ವಿಚಾರಿಸಲು ಅವರು ನನಗೆ ಜಠರದಲ್ಲಿ ಹುಣ್ಣುಗಳಾಗಿವೆಯೆಂದು ನನ್ನ ಹೆಂಡತಿಯೊಡನೆ ಹೇಳಿದರು. ನನಗೆ ಏನನ್ನೂ ತಿನ್ನಲಿಕ್ಕೆ ಆಗುತ್ತಿರಲಿಲ್ಲ ಕಡೆಗೆ ಹಾಲು ಕೂಡಾ ತೆಗೆದುಕೊಳ್ಳುವುದನ್ನು ನಿಲ್ಲಿಸಿದೆ ನನ್ನನ್ನು ಆಸ್ಪತ್ರೆಗೆ ಕಳುಹಿಸಬೇಕೆಂದು ಡಾಕ್ಟರರು ಹೇಳಿದರು

ನಾನು ಮೆಕ್ಲೀನ್ ಬ್ರೆಂಡ್ ಸ್ಟೋಮಕ್ ಪೌಡರನ್ನು ತೆಗೆದುಕೊಳ್ಳಲು ಶುರುಮಾಡಿದ ಎರಡು ದಿನಗಳಲ್ಲಿ ನನ್ನ ವಾಕರಿಕೆಯು ನಿಂತು ಹೋಯಿತು ಇದು ನನಗೆ ದೈವಪ್ರಸಾದವಾಯಿತು ನಾನು ಬಹಳ ಗುಣಮುಖನಾಗುತ್ತೇನೆಂದು ಡಾಕ್ಟರರು ಹೇಳಿದರು ಅದನ್ನು ಮುಂದುವರಿಸುತ್ತಾ ಬಂದಲ್ಲಿ ಆಸ್ಪತ್ರೆಯ ಅವಶ್ಯಕತೆ ಇಲ್ಲವೆಂದರು' ಡಾಕ್ಟರರು ಹೇಳಿದಂತೆ ಮೆಕ್ಲೀನ್ ಪೌಡರಿನ ಪ್ರಯೋಗವನ್ನು ಮುಂದುವರಿಸುತ್ತಾ ಬಂದ ಹಾಗೆ ನನಗೆ ಒಂದಿಷ್ಟು ಆಹಾರ ತೆಗೆದುಕೊಳ್ಳುವಂತಾಯಿತು ಆದರೆ ಊಟಮಾಡಿದ ಮೇಲೆ ಸ್ವಲ್ಪ ಹೊಟ್ಟೆನೋವು ಈಗಲೂ ಆಗುತ್ತಿತ್ತು ಒಂದು ವಾರದ ಮೇಲೆ ನನಗೆ ಹಾಸಿಗೆಯಿಂದ ಎದ್ದು ತಿರುಗಾಡಲನುಕೂಲವಾಯಿತು ನನ್ನ ತೂಕವು ಬಹಳ ಇಳಿದಿತ್ತು ಹೇಗಾದರೂ ವಾರವಾರಕ್ಕೆ ನಾನು ಗುಣಮುಖನಾಗುತ್ತಾ ಬರುವ ಹಾಗೆ ಹೊಟ್ಟೆನೋವು ಕಮ್ಮಿಯಾಗುತ್ತಾ ಬಂತು ನನಗೀಗ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳಲಿಕ್ಕಾಗುತ್ತಿದೆ

'ಈ ಹೊತ್ತಿಗೆ ನಾನು ಸಂಪೂರ್ಣ ಗುಣಹೊಂದಿದೆ ನನ್ನ ತೂಕವು ಹೆಚ್ಚಿತು ನನಗೀಗ ಯಾವ ನೋವೂ ಇಲ್ಲ ಮನಸ್ಸಾದುದನ್ನು ತಿನ್ನುವೆನು ಈ ರೋಗದಿಂದ ಪಾರಾಗಾಣುತ್ತೇನೆಂದು ನೆನಸಿರದ ನನಗೆ ಈಗ ಬಹಳ ಆಶ್ಚರ್ಯವಾಗುತ್ತಿದೆ 'ಇದೆಲ್ಲಕ್ಕೂ ನಾನು ಮೆಕ್ಲೀನ್ ಬ್ರೆಂಡ್ ಸ್ಟೋಮಕ್ ಪೌಡರಿಗೆ ಚಿರಋಣಿಯಾಗಿರುತ್ತೇನೆ ಅದನ್ನು ಸಾವಿರಾರು ಬಾರಿ ವಂದಿಸುತ್ತೇನೆ ' ಎಂ ಬಿ ಯವರು ಮಾಡಿದ ಹಾಗೆ ನೀವೂ ಮೆಕ್‌ಲೀನ್ ಪೌಡರಿಂದ ನಿಮ್ಮ ಹೊಟ್ಟೆಶೂಲೆಯನ್ನು ಪರಿಹರಿಸಿರಿ ನಿಮ್ಮ ನರಳುವಿಕೆಯು ಗುಣಹೊಂದಬೇಕಾದರೆ

Alex. C. Maclean

...ದಿಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆ...ಕೊಳ್ಳಿರಿ ಇಂತಹ ನಮೂನೆಯ ಕಡಿಮೆ ದರದ ಬೇರೆಯ ಪುಡಿಗಳನ್ನು ಪಡೆದು ಮೋಸಹೋಗಬೇಡಿ ಇದು ...ಬಿಡಿಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ...ದನ್ನು ಪಡೆಯಿರಿ

S No. 61.

Census of the educated unemployed

With a view to ascertaining the extent of unemployment among the educated classes in the Province, the Government directed the Commissioner of Labour and Rural Uplift to take a census of the educated unemployed, making a start with graduate in law, Arts and Sciences and Diploma holders The Commissioner issued a press notice in July last asking the unemployed among graduates in Law, Arts and Sciences and in Engineering and Medicine and Diploma holders in Economics and European languages to send in their names to him along with certain particulars But only 759 persons responded to the notice The Government consider the response most disappointing but propose to make another attempt but this time over a wider field so as to embrace all educated unemployed persons

' The expression educated unemployed' requires as precise a definition as possible for the purpose of the census, The Government observe that the Sapru Committee of United Provinces defined the expression 'educated young men as people who had received education at the universities inter mediate colleges high schools, varnacular middle schools or at the industrial or technical institutions or professional colleges or schools and passed one of the examinations specified below In regard to the question as to what was meant by unemployment the Committee held the view that young men who after taking a University Degree or Diploma remain without employment between the ages of 23 and 26 and in the case of men with only school education all those who have finished their school education but do not want to proceed to any university and remain unemployed should be treated as unemployed These definitions do not, of course, claim to be perfect but seem to afford a basis to proceed upon and the Government direct that these creteria be applied for the purposes of the census of the educated unemployed of this province also

- M. A
- M Sc.
- LL. B
- B A.
- B Com
- B Sc
- B. Ag

Intermediate in Arts, Science, Commerce and Agriculture.
High School Examination.
Vernacular Middle Examination
Oriental Titles Examination
Final Examinations of the technical institutions, Engineering, Medicine.

3. All the educated unemployed whithin the meaning of paragraph 2 above are accordingly invited to send their names within six weeks to the Commissioner of Labour and Rural Uplift, Chepauk, Madras, with the following particulars

1. Name
2. Address.
3. Qualifications
4. Employment, if any, previously held
5. Nature of employment sought.

Replies should be sent with the superscription on cover 'Unemployment Enquiry'

C J Paul,
Secretary to Government.

ನವರತ್ನ ಎಲಿಕ್ಸಿರ್ ಗೈನೆಕೊ.

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟುದೋಷಗಳನ್ನು ವಿಶೇಷ ಪರಿಣಾಮದಿಂದ ಗುಣಪಡಿಸುವ ಶಕ್ತಿಯುಳ್ಳ ಸಾಮಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಸರಿಪಡಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ

ಬೆಲೆ 4 ಔನ್ಸ್ ಬಾಟ್ಲಿಗೆ ರೂ 0 12 0
8 ,, ,, ,, 1 4 0

ತಯಾರಿಸುವವರು –

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:-

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
ವಿ ವಿ ಶೆಣ್ಯೆ ಕಾರ್ಕಳ.
ಡಾ| ಕೆ ಎಲ್ ವಿಠಾಲಾ, ಉಡುಪಿ -
ಮೊಡರ್ನ್ ಫಾರ್ಮೆಸಿ, ಕುಂದಾಪುರ
ಬಿ ಜಿ ಭಂಡಾರಿ, ಪುತ್ತೂರು
ಭಕ್ತಾ ಬ್ರದರ್ಸ್, ಕಾಸರಗೋಡು

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕೊಳ್ಳುವಿಕೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ಧಾತು ಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಯಿ 4

Sole Manufacturer **Dr. D. N. JASANI,** Vithalbhai Patel Road, BOMBAY 4.

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು! ಅತೀ ಕಮ್ಮಿದರ

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು

ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ ಆಣೆ 8 ಮಾತ್ರ.

Manufactured by.-

J. B Dutt & Co., Calcutta,

Sole agent –

ಪೊಪ್ಯುಲರ್ ಸ್ಟೋರ್ಸ ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನು ಬಲವನ್ನು ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ಸಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಾದುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ –

ಶಾ ಮತ್ತು ಕಂಪೆನಿ.

ಗವರ್ನಮೆಂಟ್ ಕಾಲೇಜಿನ ಎದುರು ಮಂಗಳೂರು

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು ಕುತ್ತಿಗೆ ಭುಜ ಹಲ್ಲುವೇದನೆಗಳಿಗೂ ಎದೆನೋವು ಗಾಯಗಳು ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿ, ಹುಳುಕಜ್ಜಿ, ಹುಳುಕಡ್ಡಿ ಸಿಕ್ಕ ಉಪದವ ತಲೆಹುಣ್ಣು ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

AMRUTANJAN DEPOTS BOMBAY MADRAS CALCUTTA

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್-ಉಡುಪಿ. ಲಿಮಿಟೆಡ್.

1	ಅಧಿಕೃತ ಚಂದಾ ಹಾಕಲು ಅರ್ಪಿಸಿದ ವ ಚಂದಾ ಹಾಕಿ ಎತ್ತಿದ ಮೂಲಧನ	ರೂ 3,50,000-0-0
2.	ಚಂದಾ ಹಾಕಿ ಎತ್ತಿದ ಮೂಲಧನ . . .	ರೂ. 2,88,950-0-0
3.	ರಿಸರ್ವ ವಗೈರೆ ಅವಧ್ಯನಗಳು ರೂಪಾಯಿ	ರೂ. 3,63,578-0-0

ಹೆಡ್ ಆಫೀಸು.– ಉಡುಪಿ

ಬ್ರಾಂಚುಗಳು – 1. ಮದ್ರಾಸು; 2. ವೆಲ್ಲೂರು, 3. ಕಲಿಕೇಟ; 4. ಕಥಬೀದಿ, ಮಂಗಳೂರು, 5. ಬಂದ್ರು, ಮಂಗಳೂರು; 6 ಉಡುಪಿ; 7 ಶಿರ್ವ; 8. ಕುಂದಾಪುರ; 9. ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13 ಮೈಸೂರು, 14 ಮಡಿಕೇರಿ, 15 ವೀರರಾಜೇಂದ್ರಪೇಟೆ

ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರದ ವಹಿವಾಟುಗಳು ನಡಿಸಲ್ಪಡುವುದು.

ಅತೀ ಕಡಿಮೆ ದರದ ಬಡ್ಡಿಯಿಂದ ಯೋಗ್ಯವಾದ ಜವಾಬ್ದಾರಿ ಮೇಲೆ ಸಾಲಗಳು ಕೊಡಲ್ಪಡುವುದು

ಹೆಚ್ಚಿನ ಮಾಹಿತಿ ಬಗ್ಗೆ ಸ್ವತಹಾ ಬಂದು ಯಾ ಪತ್ರಮುಖೇನ ನಮ್ಮ ಯಾವ ಆಫೀಸಿನಿಂದಲೂ ತಿಳಿದುಕೊಳ್ಳಬಹುದು.

10–4–1937

V. R. Kamath, B A LL. B
Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by:—

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder, MANGALORE

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಶರೀರವು ಅಶಕ್ತಿಯಾಗುತ್ತದೆ, ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು - ಡಾ। ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ ಇವರು, ಕಾಣೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ-೪-೦-೦, ವಿ. ಪಿ. ಅಂಚೆ ಅ

ವಿಳಾಸ.—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ವೈದ್ಯನಾಥ ಸ್ವಾ ಚಿಕ್ಕ ಮಂಗಳೂರು 2. ಶ್ರೀರಾಮ ಸ್ಟೋರ್ಸ್ ಹೌಸ್, ಶ್ರೀರಾಮಪೇಟೆ, ಕಾಸರಗೋಡು 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:— **The Kerala Tea Syndicate,**

PONANI—(S. Malabar.)

Edited Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ: 2 ರೂಪಾಯಿ | Regd. No. M. 3406. | ಟಪಾಲು ಹಾಸಲು ಸೇರಿ ರೂ ೨-೧೨-೦

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳ್ ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಶ್ವದ ಸುಡುತ ಒದಗಿರುವ ॥
ಗರಲಕಿವರಂಜದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. | ಮಂಗಳೂರು ತಾ. ೧೪ನೇ ಮೇ ೧೯೩೭ | (14-5-'37) | ಸಂಚಿಕೆ ೧೯

ಶ್ರೀ

ರಾಗಿಣೀ ದೇವಿ

ಇವರು ಅಮೇರಿಕನ್ ಮಹಿಳೆ. ಭಾರತೀಯ ನಾಟ್ಯಕಲೆಗೆ ಮನಸೋತು ಶಾಂತಿನಿಕೇತನ ಮೊದಲಾದ ಕಡೆಗಳಲ್ಲಿ ನಾಟ್ಯವಿಜ್ಞಾನವನ್ನು ಕಲಿತು, ದಕ್ಷಿಣದ ಕಥಕ್ಕಳಿಯನ್ನೂ ಅಭ್ಯಾಸಿಸಿ ಇವರು ಭಾರತವನ್ನು ಅನೇಕ ಬಾರಿ ಸುತ್ತಿ ತಮ್ಮ ಕಲಾನೈಪುಣ್ಯತೆಯನ್ನು ತೋರಿ ಕಲಾಭಿಮಾನಿಗಳ ಪ್ರಶಂಸೆಗೆ ಪಾತ್ರರಾಗಿರುವರು. ಅಮೇರಿಕಾ ಯೂರೋಪು ಖಂಡಗಳಲ್ಲೂ ಭಾರತ ನಾಟ್ಯಪ್ರದರ್ಶನದ ಪ್ರಚಾರಮಾಡಿ ಕೀರ್ತಿಗಳಿಸಿರುವ ಒಂದು ಕಲಾರತ್ನವೆಂದರೆ ರಾಗಿಣಿ ದೇವಿ.

[illegible] — ಕಾಟಗಳು

ಹಲವು ವ್ಯಾಯಾಮ ಮಂದಿರಗಳು ಸ್ಥಾಪಿತವಾಗಿವೆ, ಜರುಗುತ್ತವೆ; ಸಂಸ್ಥೆಗಳ ವ್ಯಾಯಾಮ ಶಿಕ್ಷಣ ಪ್ರಚಾರಕ್ಕೆ ಜರುಗುತ್ತಿರುವ ಅಂಗಸಾಧನೆಯ ಮಹತ್ವವನ್ನು ಬೋಧಿಸುವ ಪ್ರಯತ್ನಗಳು ಎಲ್ಲೆಲ್ಲಿಯೂ ಆಗುತ್ತಿರುವುದು. ಈ ದೇಹದುರ್ಬಲ ಜನತೆಗೆ ಒಂದು ಮಹದುಪಕಾರವೇ ಸರಿ.

ದೇಹದುರ್ಬಲ ಜನತೆಗೆ ನಿಜವಾದ ಅಭ್ಯುದಯವಾಗಬೇಕಾದರೆ, ಒಂದು ಮುಖ್ಯ ವ್ಯವಧಿಯುಂಟಾಗದೆ ಅಸಾಧ್ಯವೇ ಸರಿ. ಅದಲ್ಲದಿದ್ದರೆ ದುರ್ಬಲತೆಯ ನಿವಾರಣೆಯು ದುರ್ಲಭವಾಗುವುದು.

o o o o o

ವ್ಯಾಯಾಮವೆಂದ ಕೂಡಲೆ ಶಿಕ್ಷಣಕ್ಕೆ ಬೇಕಾಗುವ ಸನ್ನಾಹಸಾಹಿತ್ಯಗಳನ್ನೆಲ್ಲಾ ಪರದೇಶಿಯರಿಂದಲಾಗಲಿ, ಪರದೇಶಿಯ ವಿಧಾನವನ್ನಾಗಲಿ ತರಿಸಿಕೊಳ್ಳುವ ಅಥವಾ ತಯಾರಿಸುವ ಚಟ ಹೆಚ್ಚಾಗುತ್ತಾ ಬರುವುದೆಂದು ದುರ್ಲಕ್ಷಣವೇ ಕಾಣುತ್ತಲಿದೆ. ಇವೆಲ್ಲದರಿಂದಲೇ ಆದರೂ, ವ್ಯಾಯಾಮವೆಂತೂ ಆಗುವುದನ್ನುವ. ಆದರೆ, ದೇಹಬಲವು ಹೆಚ್ಚುವ ಹಾಗೆ ದೇಹಪೋಷಕಗಳಾಗಿರುವ ದ್ರವ್ಯಗಳಿಗೇನು ಉಪಾಯವಿದೆ?

o o o o o

ನಮ್ಮ ಪ್ರಾಂತ್ಯದ ಜನರೆಲ್ಲರು ಹೆಚ್ಚಾಗಿ ಅನುಕೂಲತೆ ದೊರೆತಷ್ಟಕ್ಕೆ ನಾಲಗೆಯ ದಾಸರು. ಪುಷ್ಟಿಗಿಂತ ರುಚಿಯನ್ನೇ ನೋಡಿ ಆಹಾರಗಳನ್ನು ಬಳಸುವವರು. ಪುಷ್ಟಿಕರವೂ ಅಗ್ಗವೂ ಆಗಿರುವ ಆಹಾರಗಳ ಕಡೆಗೆ ಜನರಿಯ ಗಮನ ಕೊಡುವಂತೆ ಯಾರು ಸಾಧಿಸಬೇಕು? ವ್ಯಾಯಾಮವು ಪ್ರಚಾರಕ್ಕೆ ಬರುವಂತೆಯೂ ಪುಷ್ಟಿಕರ ಪದಾರ್ಥಗಳನ್ನು ಅವಶ್ಯವಾಗಿಯೂ ತಿನ್ನುವಂತೆ ಬೋಧಿಸುವ ಅಧಿಕಾರವು, ತಾಜಾ ಅಧಿಕಾರವು, ವೈದ್ಯ ಮಹಾಶಯರ ಪಾಲಿಗೇ ಸೇರಿದುದು. ಅವರೇ ಮುಂದೊತ್ತಿ ಬಂದು ಜನತೆಗೆ ಬೋಧಿಸಬೇಕು.

o o o o o

ವ್ಯಾಯಾಮಕ್ಕೆ ವ್ಯಯವಾಗುವ ಹಣವಷ್ಟೆ ಪುಷ್ಟಿಕರವಾದ ಆಹಾರಕ್ಕೆ ವ್ಯಯಿಸುವ ವಿದ್ಯಾರ್ಥಿಗಳಿಲ್ಲ; ಇತರನ್ನೂ ಸಮಾನವಾಗಿ ಹಣವು ಹಂಚಿ ಹಾಕಿ ವಿನಿಯೋಗಿಸುವವರಿಲ್ಲ, ಚೆನ್ನಾದ ಸುಲಭಾಹಾರದಿಂದ, ಸುಲಭವಾದ ದೇಶೀಯ ವ್ಯಾಯಾಮ ವಿನೋದಗಳಲ್ಲಿ ನಮ್ಮ ಯುವಕರು ದಕರಾದರೆ, ದೇಹಬಲವೂ ದೇಶಬಲವೂ ಖಂಡಿತವಾಗಿ ಹೆಚ್ಚುವುದಾಗಿ ನಮ್ಮ ವ್ಯಾಯಾಮ ಪರಿಷದಾಧಿಕಾರಿಗಳಿಗೆ ಬೇರೆ ತಿಳಿಯಹೇಳಬೇಕಾಗಿದೆಯೇ?

o o o o o

ಸಂಯುಕ್ತ ಪ್ರಾಂತ್ಯದ ಮಂತ್ರಿಮಂಡಲವು ಒಂದು ಪ್ರಕಟಣೆಯಲ್ಲಿ "ಸ್ವಾತಂತ್ರ್ಯವೆಂಬುದು ಸಾಧ್ಯವೂ ಅಲ್ಲ ಇಚ್ಛಿತವೂ ಅಲ್ಲ" ಎಂದು ಬಹಿರಂಗವಾಗಿ ಅಭಿಪ್ರಾಯ ಕೊಟ್ಟಿದೆ. ಈ ಧೈರ್ಯವನ್ನು ಮತ್ತೊಂದು ಪ್ರಕಟಣೆಯು ಕೊಗಳುತ್ತಿದೆ. ಹೀಗೆ ಧೈರ್ಯದಿಂದಾದುವುದು ಪ್ರಯೋಜನಕರವೆಂದು ಮಂತ್ರೀಶ್ವರರಿಗೆ ತಿಳಿದೇ ಇರಬೇಕು.

o o o o o

ಸ್ವಾತಂತ್ರ್ಯವೊಂದು ಸಾಧ್ಯವಾಗುವುದಾದರೆ, ನಾನು ಕಸಬಳಿಯುವುದಕ್ಕೂ ಒಪ್ಪುವೆನು; ಸ್ವಾತಂತ್ರ್ಯವಿಲ್ಲದಿರುವಲ್ಲಿ ಕೋಟ್ಯಾಧೀಶನಾಗಲೂ ನಾನೊಲ್ಲೆನು ಎಂದು ಡಾ| ಖಾನ್ ಸಾಹೇಬರೆನ್ನುತ್ತಾರೆ. ಜೀವನದ ಗೌರವಕ್ಕೆ ಅತ್ಯಾವಶ್ಯಕವಾದುದು ಯಾವುದೋ ಅದಕ್ಕಾಗಿ ಸಂಕಷ್ಟಗಳನ್ನು ಸಹಿಸುವುದು. ಗೌರವ

[illegible]

ಒಂದು ಸಲಕ್ಕೆ ಒಂದು ಜಾತಿಗೆ ಸೇರಿದವನೆಂದ ಕೂಡಲೆ ಅವನೆಂದೂ ಆ ಜಾತಿಯಲ್ಲಿ ಉತ್ತಮನಾಗಲೂ ಕಾನೂನು ಅವಕಾಶಕೊಡಬಾರದೆಂದಿದೆಯೆ? ಕಳ್ಳರ ಜಾತಿಯಲ್ಲೊಬ್ಬನು ಉತ್ತಮನಾಗಲೆತ್ನಿಸಿ ತಾನು ಕಳ್ಳರ ಜಾತಿಗೆ ಒಪ್ಪತಕ್ಕವನಲ್ಲವೆಂದು ಪ್ರಯತ್ನಪಟ್ಟರೆ, ಆ ಜಾತಿಯವರಿಗಾಗಿಟ್ಟ ಕಾನೂನು ಅವನನ್ನು ಪ್ರತಿಸಲ ಬಂಧಿಸುತ್ತಲೇ ಇದೆಯಲ್ಲ! ಪಂಚಮರನ್ನು ಉದ್ಧರಿಸಲು ಮಹಾ ಪ್ರಯತ್ನಗಳು ಸಾಗುತ್ತಿರುವಾಗ ಈ ತರಗತಿಯ ಜಾತಿಗಳ ಕಟ್ಟಾಗಿರುವ ಕಾನೂನಿಂದಲೂ ಉತ್ತಮರಾದ ಕೆಲವರನ್ನಾದರೂ ಉದ್ಧರಿಸಲು ಕಾನೂನನ್ನು ತಿದ್ದಬಾರದೆಂದಿದೆಯೇ?

o o o o o

ಜನಕೋಟಿಯ ಅಹಿತಕ್ಕಾಗಿರುವ ಸಂಸ್ಥೆಗಳ ಹೇರಳ ಹಣವನ್ನು ಕೂಡಿಸಬಲ್ಲವೇ ಮಾತ್ರವಲ್ಲದೆ, ಜನಕೋಟಿಯ ಹಿತಕ್ಕಾಗಿ ಯಾವ ಸಂಸ್ಥೆಗಳೂ ಕೆಲಸಮಾಡಲೆಣಿಸಿದಲ್ಲಿ ಅವುಗಳಿಗೆ ಹಣ ದೊರೆಯದಂತೆ ಮಾಡುತ್ತಿವೆ. ನಮ್ಮ ಜನಾಂಗವು ದಾರಿದ್ರ್ಯಕ್ಕೆ ಇಳಿದಿದೆ, ಸಂದಿದೆ. ಅತ್ತ ಕುದುರೆ ಜೂಜು, ಮದ್ಯಪಂಗಡಿಗಳು ಜೂಜಾಟದ ಇತರ ಸಂಘಗಳು ಎಲ್ಲವೂ ಸುಗಮವಾಗಿ ಸಾಗುತ್ತಲೇ ಇವೆ. ಸಾವಿರಕಟ್ಟಲೆ ಸಂಬಳ ಸಿಗುವವರೂ ದರಿದ್ರರೂ ಖರ್ಚಿಗೆ ಹಣ ಸಾಲದೆನ್ನುವಾಗ, ಶಕ್ತಿಪ್ರತ್ತ ರೂಪಾಯಿ ತಲುಪಿನವರು ಗುಣಗುಟ್ಟದೆ ಗೌರವದಿಂದ ಕಾರ್ಯನಿರ್ವಹಿಸಬೇಕಾಗಿದೆ!

o o o o o

ಲಂಡನಿನ ಬಸ್ಸು ಕಂಪೆನಿಯ ಸೇವಕರು ಎರಡು ವರ್ಷಗಳಿಂದಲೂ ತಮ್ಮ ಧನಿಗಳಿಗೆ ತಮಗುಂಟಾಗಿರುವ ಸಂಕಷ್ಟಗಳನ್ನು ಕುರಿತು ದೂರಿಟ್ಟರೂ, ಇದು ವರೆಗೆ ಧನಿಗಳಿಗೆ ಆ ದೂರನ್ನು ವಿಚಾರಿಸಲು ಅವಕಾಶವೇ ಸಿಗಲಿಲ್ಲ. ಈಗ ಕಿರೀಟಧಾರಣೋತ್ಸವದ ಕಾಲಕ್ಕೆ ಅವರು ಮುಷ್ಕರ ಹಿಡಿಯುವರು. ೨೦ ಸಾವಿರ ಬಸ್ಸುಗಳು ಒಂದು ಲಕ್ಷ ಆಳುಗಳು ಸುಮ್ಮನಾಗುತ್ತ ಬಂದರೆ, ಅವರ ಜತೆಗೆ ಟ್ರೇಮ್ ಕಂಪೆನಿಯ ಚಾಕರರೂ ಸೇರಿದರೆ, ಪ್ರಪಂಚದಿಂದ ಎಲ್ಲಾ ಭಾಗಗಳಿಂದ ಸಹಸ್ರ ಸಂಖ್ಯೆಯಲ್ಲಿ ಲಂಡನಿಗೆ ಬಂದವರೆಲ್ಲರಿಗೆ ಕಾಲೇ ಗತಿ.

o o o o

ನಮ್ಮಲ್ಲಿಂದ ರಾಜಾಧಿರಾಜರುಗಳ ಸವಾರಿ ಸಪರಿವಾರವಾಗಿ ಲಂಡನಿಗೆ ಚಿತ್ತೈಸಿದೆ. ಲಂಡನಿನ ಪತ್ರಿಕೆಗಳಿಗೆ ಇವರನ್ನು ಕುರಿತಾಗಿ ವಿಚಿತ್ರ ಕಥಾಲಾಪಗಳನ್ನು ಪ್ರಕಟಿಸುವುದೊಂದು ಮಹಾವಿನೋದ. ಇವರ ದಿವ್ಯ ಉಜ್ವಲ ರತ್ನಶೃಂಗಾರಗಳು, ರಮಣೀಯ ರಮಣಿಯರುಳ್ಳ ಅಂತಃಪುರಗಳು,—ಇವೇ ಮುಖ್ಯ ವಿವರಗಳಾಗಿ ಬರುವ ವಿಷಯಗಳು. ಇವರಿಗೂ ಇದೂ ಹಿಗ್ಗಳಿಕೆಯಲ್ಲ. ಈ ದೇಶಕ್ಕೂ ಅಲ್ಲ. ಇದನ್ನೋದಿ ಕಿಲಕಿಲ ನಗುವ ಬ್ರಿಟಿಷರಿಗೆ ಮಾತ್ರ ಇದೆಂತ ರೀತಿಯ ಮಹಾ ವಿನೋದವೊ!

o o o o o

ರಾಜಕೀಯ ರಂಗಸ್ಥಳದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ನಿವಾರಿಸಲು ಉಪಾಯಗಳೇ ಇಲ್ಲವೇ? ಲಂಡನಿನ ಅಭಿಪ್ರಾಯದಲ್ಲಿ, "ಅಲ್ಲೇ ಇರುವ ನಮ್ಮ ಅಧಿಕಾರಿಗಳೇ ಈ ವಿಷಯ ಆಲೋಚಿಸಲು ಸಮರ್ಥರು". ಧಿಲ್ಲಿಯ ಅಭಿಪ್ರಾಯದಲ್ಲಿ "ಲಂಡನಿನಿಂದ ಸೂಚನೆ ಬಾರದೆ ಇಲ್ಲೇ ಏನೂ ಮಾಡಲಾಗುವುದಿಲ್ಲ"—ಹೀಗೆಂದು ವಾರ್ತಾ ಪತ್ರಿಕೆಗಳು ಊಹಿಸಿವೆ. ಈಗಣ ಹೊಸ ಆಕ್ಟನ್ನು ರೂಪಿಸುವುದರಲ್ಲಿ ಹೆಚ್ಚಿನ ಪರಿಶ್ರಮ ಪಡೆದವರೇ ನಮ್ಮ

(ಕಡೇ ಪುಟಕ್ಕೆ ಮುಂದುವರಿದಿದೆ)

ಸುಖವಾದ ನಿದ್ರೆಯ ವಿಷಯವಾಗಿ ಖಾತ್ರಿಯಾಗಿರಿ.

ಸುಖವಾದ ಆರಾಮವುಳ್ಳ ನಿದ್ರೆಗೆ ಖಾತ್ರಿಯಾದ ದಾರಿಯೆಂದರೆ, ಓವಲ್ಟಿನ್ನನ್ನು ನಿಮ್ಮ ಶಯನಸಮಯದಪಾನೀಯವಾಗಿಮಾಡುವುದು. ಅದು ಮಿದುಳು ನರಗಳಿಗೆ ಹೆಚ್ಚು ಪೌಷ್ಟಿಯ ಆಹಾರವನ್ನುಂಟುಮಾಡಿ ನಿಮಗೆ ಬೆಳಿಗ್ಗೆ ಏಳುವಾಗ ಚುರುಕಾಗಿ ಚೇತನವುಳ್ಳವರಾಗಿ ಮಾಡುವ ಆ ಗಾಢವಾದ ಶಾಂತ ನಿದ್ರೆಯನ್ನುಂಟುಮಾಡುತ್ತದೆ.

ಓವಲ್ಟಿನನ್ನು ಪ್ರಕೃತಿಯಲ್ಲಿರುವ ಜೀವನಪುಷ್ಟಿ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ, ದನದ ನವ ಕೆನೆಹಾಲಿನಿಂದಲೂ ಮಾಡಿದಾಗಿದ್ದು, ಶ್ರೇಷ್ಠ ವಿಟಮಿನ್‌ಗಳಿಂದ ಕೂಡಿದ್ದಾಗಿರುತ್ತದೆ. ಓವಲ್ಟಿನು ಪೌಷ್ಟಿಯುಕ್ತ ಸಂಪೂರ್ಣ ಗುಣದ ಆಹಾರವಾದ್ದರಿಂದ, ನಿಮಗೆ ಅದು ಆರೋಗ್ಯ, ಶಕ್ತಿ, ಚೇತನ್ಯವನ್ನುಂಟುಮಾಡಲಿಕ್ಕೆ ಬೇಕಾಗುವ ಎಲ್ಲಾ ಶಕ್ತಿವರ್ಧಗಳನ್ನು ಒದಗಿಸುತ್ತದೆ.

ಅಪ್ಪಟ 'ಓವಲ್ಟಿನ್'ನ್ನು ಪಡೆಯಿರಿ. ಗುಣದಲ್ಲಿಯೂ, ಕ್ರಮದಲ್ಲಿಯೂ, ಇದರ ಸರಿಸಮಾನವಾದದ್ದು ಯಾವುದೂ ಇಲ್ಲ. ಕೃತಕ ಬದಲಿಯಗಳನ್ನು ತ್ಯಜಿಸಿರಿ.

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಇದು ತಯಾರಿಕೆಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ.

ಏಜಂಟರು:—ಜೇಮ್ಸ್ ರೈಟ್ 85 ಎ ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

ಬೊಂಬಾಯಿ ಮತ್ತು ಮದ್ರಾಸುಗಳಲ್ಲೂ ಸಿಗುತ್ತದೆ.

OV/436

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS.

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for paticulars— K. R. GURU, *Managing Director.*

ಜೆಟ್ಲೆಂಡರ ಎರಡನೇ ಹೇಳಿಕೆ

ವಾಗದಲ್ಲಿ ವ್ಯತ್ಯಾಸ — ಧ್ಯೇಯದಲ್ಲಿಲ್ಲ.

ಗಾಂಧಿ ವ್ಯಾಸರಾಯರೊಳಗೆ ಭೇಟಿಯಾರೆ ಈಗಿನ ರಾಜಕೀಯ ಉತ್ಕಟಾವಸ್ಥೆಯನ್ನು ಮನಗೊಳಿಸುವ ಯಾವುದಾದರೊಂದು ದಾರಿ ಗಬಹುದೊ ಎಂದು ಲಾರ್ಡ್ ಸ್ನೆಲ್‌ರವರು ಮಾಡಿದ ಪ್ರಶ್ನೆಗೆ ಉತ್ತರವನ್ನು ನಿರೀಕ್ಷಿಸಲಾತ್ತು. ಅದೇ ಪ್ರಕಾರ ಕಳೆದ ತಾ ೮ರಲ್ಲಿ ಸೇರಿ ಪಾರ್ಲಿಮೆಂಟಿನ ಪ್ರಭು ಮಂದಿರದಲ್ಲಿ (House of Lords) ಇಂಡಿಯಾಸ್ಟೇಟ್ ಕ್ರೆಟರಿಯವರಾದ ಲಾರ್ಡ್ ಜೆಟ್‌ಲ್ಯಾಂಡರು ಉತ್ತರವೀಯುವಂತೆ ಒಂದು ಉದ್ದವಾದ ಹೇಳಿಯನ್ನಿತ್ತಿರುವರು ಈ ಸರ್ತಿ ಜೆಟ್‌ಲ್ಯಾಂಡ್ ಸಾಹೇಬರು ಮಾತಿನ ಶೈಲಿಯನ್ನು ಮೆತ್ತಗೆ ಮಾಡಿದ್ದರೂ, ಅವರ ಧೋರಣೆಯು ಮುಂಚಿನದಕ್ಕಿಂತ ಬೇರೆಯಾದಂತೆ ಕಂಡು ಬರುವುದಿಲ್ಲ ಅವರ ಹೇಳಿಕೆಯ ಸಾರಾಂಶವನ್ನು ಮುಖ್ಯಾಂಶಗಳಾಗಿ ವಿಂಗಡಿಸಿ ಈ ಕೆಳಗೆ ಕ್ರಮವಾಗಿ ಕೊಟ್ಟಿರುತ್ತದೆ

ಗಾಂಧಿಯವರ ಸೂಚನೆಯಂತಹದಲ್ಲದ ಇನ್ನೊಂದು ಪರಿಹಾರ ದಾರಿಯಾಗಬೇಕ ಗವರ್ನರರು ವಿಶೇಷಾಧಿಕಾರವನ್ನು ಯಾವ ರೀತಿಯಲ್ಲಿ ಉಪಯೋಗಿಸುವುದು ಎಂಬುದಕ್ಕೆ ಒಂದು ಇತ್ಯರ್ಥ ಪರಿಹಾರವನ್ನು ಹುಡುಕುವ ಪ್ರಯತ್ನದ ಮೇಲೆ ಗಾಂಧಿ ವ್ಯಸರಾಯರ ಭೇಟಿಯು ವಿಚಾರವು ಹೊಂದಿಕೊಂಡಿದೆ

ಮುಂಚೆ ಹೇಳಿದಂತೆ ಶಾಸನವನ್ನು ಮಾರ್ಪಡಿಸುವಂತಹದಾಗುವ ಈ ಕಾಂಗ್ರೆಸಿನ ಯಾವ ಬೇಡಿಕೆಗಳನ್ನು ಪೂರೈಸಲಾಗುವುದಿಲ್ಲ. ಒಂದು ವೇಳೆ ಹಾಗೇನಾದರೂ ಗವರ್ನರರು ಭರವಸೆಗಳನ್ನು ಕೊಟ್ಟರೆಂದರೆ ಅದು ಮುಂದೆ ವಿಶ್ವಾಸದ್ರೋಹದ ತಪ್ಪಿಗೆ ಸಿಗುವಂತಹ ಸಂದರ್ಭಗಳುಂಟಾಗಬಹುದು

ಗವರ್ನರರೂ ಅವರ ಮಂತ್ರಿಗಳೂ ಯಾವ ಯಾವ ಸಂದರ್ಭಗಳಲ್ಲಿ ಹೇಗೆ ಹೇಗೆ ನಡೆಯಬೇಕೆಂದು ಸೂಚಿಸುವ ಶರ್ತಗಳನ್ನು ಇಂಡಿಯಾ ಆಕ್ಟಿನಲ್ಲಿ ಸೇರಿಸುವುದಸಾಧ್ಯವಾದುದರಿಂದ ಈಗಿನ ನವಶಾಸನದ ಮುಖವನ್ನು ಅದನ್ನು ತಿಳಕೊಂಡು ಅನುಸರಿಸುವುದರಲ್ಲಿದೆ, ಈ ವಿಷಯದಲ್ಲಿಯೇ ಈಗಿನ ತಪ್ಪು ತಿಳುವಳಿಕೆಗಳ ಕಾರಣವಿದೆ

ಗವರ್ನರರೂ ಮಂತ್ರಿಗಳೂ ಬೇರೆ ಬೇರೆಯಾಗಿ ತಮ್ಮ ಕಾರ್ಯವನ್ನು ನಿರ್ವಹಿಸಬಹುದೆಂದು ಊಹಿಸಬಹುದು ಒಬ್ಬರ ಸಹಾಯವಿಲ್ಲದೆ ಮತ್ತೊಬ್ಬರು ಕಾರ್ಯ ಸಾಗಿಸಲಾರರು ಒಂದು ವ್ಯಾಪಾರದಲ್ಲಿನ ಪಾಲುಗಾರರಂತೆ ಗವರ್ನರರು ಮತ್ತು ಅವರ ಮಂತ್ರಿಗಳಾದರೂ ಅದೇ ರೀತಿಯಾಗಿರಬೇಕು. ಗವರ್ನರರು ತಮ್ಮ ಆಡಳಿತ ಜ್ಞಾನಾನುಭವಗಳಿಂದ ಮಂತ್ರಿಗಳಿಗೆ ಸಹಾಯ ಮಾಡುತ್ತಲಿರಬೇಕು.

ಈಗ ತೀಕ್ಷ್ಣವಾದ ಚರ್ಚೆಗೆ ಒಳಗಾದ ಈ ಗವರ್ನರರ ವಿಶೇಷಾಧಿಕಾರಗಳು ಸಾಧಾರಣ ಸಂದರ್ಭಗಳಲ್ಲಿ ಉಪಯೋಗಿಸಲ್ಪಡುವುದಿಲ್ಲ ಪಾರ್ಲಿಮೆಂಟು ಯಾವ ಉದ್ದೇಶದಿಂದ ತಮಗೆ ವಿಶೇಷಾಧಿಕಾರಗಳನ್ನು ಕೊಟ್ಟಿರುವರು ಆ ಉದ್ದೇಶಗಳಿಗೆ ಅಭಾವವಾದಾಗ ಮಾತ್ರವೇ ಅವುಗಳನ್ನು ಗವರ್ನರರು ಉಪಯೋಗಿಸುವರು. ಈ ಸಂದರ್ಭದಲ್ಲಿ ತಿಳುವಳಿಕೆ ಎರಡು ಕಡೆಗಳಲ್ಲಿಯೂ ಇರಬೇಕಾಗುತ್ತದೆ ಆಗಲೂ ಗವರ್ನರರು ತಮ್ಮ ಕಷ್ಟವನ್ನು ಮಂತ್ರಿಗಳ ಮುಂದಿಡಲೇಬೇಕು

ಮಂತ್ರಿಗಳು ಗವರ್ನರರ ಸಹಾಯವನ್ನು ಅಪೇಕ್ಷಿಸುವಂತೆ, ಅದೇ ಪ್ರಕಾರ ನವರಾಜಶಾಸನವನ್ನು ಗವರ್ನರರು ಕೂಡ ತಮ್ಮ ಕಷ್ಟದಲ್ಲಿ ಮಂತ್ರಿಗಳ ಸಹಾಯವನ್ನು ಕೋರಬೇಕು

ಸಂದರ್ಭಗಳಲ್ಲೇನಾದರೂ ಅಭಿಪ್ರಾಯ ವ್ಯತ್ಯಾಸವುಂಟಾದಲ್ಲಿ ಎರಡೂ ಕಡೆಯವರೂ ಆಯಾ ಪ್ರಾಂತ್ಯದ ಅಭಿವೃದ್ಧಿಯನ್ನು ಮನಸ್ಸಿನಲ್ಲಿಟ್ಟು ಅದನ್ನು ಸುಧಾರಿಸಲು ಪ್ರಯತ್ನಪಡಬೇಕು ಹೀಗೆ ಕೂಡಿ ಇರುವುದಕ್ಕಿಂತಲೂ, ಬೇರ್ಪಡಿರುವುದು ಪ್ರಾಂತ್ಯಹಿತಕ್ಕೆ ಒಳ್ಳೆಯದೆಂದು ತಿಳಿದರೆ ಮಾತ್ರ ಮಂತ್ರಿಮಂಡಳ ಮುಕ್ತಾಯವಾಗಬಹುದು ಇದು ತಿಳುವಳಿಕೆ ಇದು ನವರಾಜಶಾಸನದ ಸಾರ

ತಮಗೆ ವಿಶೇಷಾಧಿಕಾರಗಳನ್ನು ಕೊಟ್ಟಿದೆ ಎಂದು ಗವರ್ನರರು ಅದನ್ನು ಸಂಕುಚಿತ ಮನೋಭಾವದಿಂದ ತಿಳಕೊಂಡು ಅವುಗಳನ್ನು ಪದೇ ಪದೇ ಉಪಯೋಗಿಸ ನೋಡುವ ಸಂಗತಿಯು ಅಸತ್ಯವಾದುದು

ಈಗ ಪ್ರಾಂತ್ಯಗಳಲ್ಲಿ ಸ್ಥಾಪಿತವಾಗಿರುವ ಬಹುಮತ ಮತ್ತು ಅಲ್ಪಸಂಖ್ಯಾಕ ಮಂತ್ರಿಮಂಡಳಗಳ ಕಾರ್ಯಕ್ರಮವನ್ನು ನೋಡಿಯಾದರೂ, ಮಂತ್ರಿಮಂಡಳ ತಿರಸ್ಕರಿಸಿದವರು ತಮ್ಮಲ್ಲಿ ಧೈರ್ಯವನ್ನು ತಂದುಕೊಂಡು ಇದೇ ಒಂದು ಭರವಸೆ ಎಂದು ತಿಳಕೊಳ್ಳಲಿ

ಅನೇಕ ಪ್ರಭುಗಳ ಭಾಷಣ ಮಾತು ಲಾರ್ಡ್ ಸ್ನೆಲ್‌ರ ವಿನಂತಿ

ಲಾರ್ಡ್ ಸ್ನೆಲ್ಲರ ಮಾಡಿದ ಭಾಷಣದಲ್ಲಿ ಗಾಂಧಿ-ವ್ಯಸರಾಯರೊಳಗಣ ಭೇಟಿಯು ಅವಶ್ಯಕತೆಯನ್ನು ಒತ್ತಿ ಹೇಳಿದರು. ಗವರ್ನರರು ಈ ದೇಶದ ಜನರ ಹಿತಕ್ಕೆ ಸದಾಕಾಲವೂ ಅಕ್ಕರೆ ವುದಕ್ಕಾಗಿ ಅವರಿಗೆ ಆ ವಿಶೇಷಾಧಿಕಾರಗಳನ್ನು ಕೊಡಲಿಲ್ಲವೆಂದೂ, ಈ ವಿಷಯವಾಗಿ ಲಾರ್ಡ್ ಜೆಟ್‌ಲ್ಯಾಂಡರು ಭಾರತಕ್ಕೆ ಒಂದು ಭರವಸೆಯನ್ನು ಕೊಟ್ಟು ಒಹ ವ ಕಡೆಯಿಂದ ಚ ನಾಯಕರಿಗೆ ಮಂತ್ರಿ ಪದವಿಗಳನ್ನು ಸ್ವೀಕರಿಸಿದವರ ಸದುದ್ದೇಶಗಳಲ್ಲಿ ಗವರ್ನರರ ಅಕ್ಕರೆ ಬರುವುದಿಲ್ಲವೆಂದು ಕ್ತಪಡಿಸಿದರೆ ಈಗಿನ ಪರಿಸ್ಥಿತಿಯು ಉತ್ತಮಗೊಳ್ಳುತ್ತದೆ ಅಗ್ರಗಣ್ಯರಿಂದ ಕಾಂಗ್ರೆಸ್ ನ ಒಂದರ ಈ ಸಂದರ್ಭವನ್ನು ಸರಿಯಾಗಿ ಉಪಯೋಗಿಸಿ ಆಡಳಿತದ ಕಾರ್ಯ ಸಗರವಾಗಿ ಸಾಗ ಮಂತ್ರಿ ಪದ ಸ್ವೀಕರಿಸಲಿ ದ ಹಾರೈಸುತ್ತೇನೆ ಎಂದರು

ಲೋರ್ಡ್ ಸಾಲ್ಸ್‌ಬರಿಯವರು

ಇವರ ತಮ್ಮ ಭಾಷಣದಲ್ಲಿ ಸರಕಾರವೂ ಕಾಂಗ್ರೆಸಿನವರೂ ವೈಮನಸ್ಸಿಲ್ಲದ ಪರಸ್ಪರ ಸಹಕಾರದಿಂದ ಆಡಳಿತವನ್ನು ನಡೆಸಿಕೊಂಡು ಬರಲಿ ಎಂದರು.

ಲೋರ್ಡ್ ಲ್ಯಾಡರು

ಕಾಂಗ್ರೆಸು ನವರಾಜ ಶಾಸನಕ್ಕೆ ಒಪ್ಪ ವಿರೋಧಿಯಾಗಿರುವುದರಿಂದ ಈಗ ಯಾವ ತರದ ಸ್ವತಂತ್ರ ವಿಚಾರಗಳೂ ವ್ಯರ್ಥವೆಂದರು ಕಾಂಗ್ರೆಸ್ಸಿನಲ್ಲಿರುವ ಯೋಗ್ಯ ಮುಖಂಡರೊಡನೆ ಸಹಕರಿಸಿದರೆ ಈಗಿನ ಸಮಸ್ಯೆಯನ್ನು ಪರಿಹರಿಸಲು ಸಾಧನವಾಗಬಹುದೆಂದರು

ಲಾರ್ಡ್ ಗ್ರೈನ್‌ಫಾರ್ಡ್

ಈಗಿನ ಉತ್ಕಟಾವಸ್ಥೆಯ ಪರಿಹಾರವನ್ನು ಹುಡುಕುವರೆ ಲಾರ್ಡ್ ಜೆಟ್‌ಲ್ಯಾಂಡರೊಂದು ಶಾಂತಿಸೂಚಕ ಹೇಳಿಕೆಯನ್ನು ಕೊಡುವರೆಂದು ನಂಬುತ್ತೇನೆಂದರು

ಗಾಂಧಿಜೀಯವರ ಅಭಿಪ್ರಾಯ

"ಈ ಸರ್ತಿಯ ಲಾರ್ಡ್ ಜೆಟ್ಲೆಂಡರ ಭಾಷಣದ ನಾದವು ಮಾತ್ರ ಮೊದಲಿನದಕ್ಕಿಂತಲೂ ಹಿತವಾಗಿದೆ—ನಾದ ಮಾತ್ರ. ಆದರೆ ಈಗಿನ ರಾಜಕೀಯ ಉತ್ಕಟಾವಸ್ಥೆಯ ಪರಿಹಾರಕ್ಕೆ ಎಡೆಯಿರುವ ಯಾವ ಸೂಚನೆಯೂ ಅದರಲ್ಲಿ ಕಂಡುಬರುವುದಿಲ್ಲ. ವರ್ಕಿಂಗ್ ಕಮಿಟಿಯು ಅಲ್ಲಹಾಬಾದಿನಲ್ಲಿ ನಿರ್ಧರಿಸಿದ ಮಾರ್ಗವೇ ಕಾಂಗ್ರೆಸ್ಸಿನ ಸ್ಪಷ್ಟವಾದ ಧೋರಣೆಯಾಗಿದೆ. ಭರವಸೆಗಳೇನೆಂಬ ವಿಷಯವೂ ಅದರಲ್ಲಿ ಬಿಡಿಸಿಹೇಳಿರುತ್ತದೆ ಈಗ ಎಜಸ್ಥಿತಿಯೇನೆಂದು ಪ್ರಪಂಚವೇ ತಿಳಿದಂತಾಯಿತು. ಗವರ್ನರರು ಭರವಸೆ ಕೊಡುವುದರಿಂದ ನವರಾಜ ಶಾಸನದ ಕುಂದುಂಟಾಗಲಾರದು. ಅಂತಹ ಸಂದರ್ಭಗಳೇನಾದರೂ ಒದಗಿದರೆ ಗವರ್ನರರು ಮಂತ್ರಿಗಳನ್ನು ಕೂಡಲೇ ರದ್ದು ಮಾಡಬೇಕು, ಈ ಹಕ್ಕು ಗವರ್ನರರಿಗೆ ಇದೆ ಅಲ್ಲದೆ ಗವರ್ನರರು ತಮ್ಮ ಮಂತ್ರಿಗಳು ರಾಜಿನಾಮೆ ಕೊಡುವಂತೆಯಾಗಲೀ ಅಥವಾ ತಮ್ಮ (ಗವರ್ನರರ) ಇಚ್ಛೆಯಂತೆ ನಡೆಯಲೊಪ್ಪುವಂತೆಯಾಗಲಿ ನಿರೀಕ್ಷಿಸಬಾರದು ಅಸಂಖ್ಯಾತ ಜನತೆಯ ಅಭಿಮತವನ್ನು ಗಣಿಸದೆ ಗವರ್ನರರು ತಮ್ಮ ಇಚ್ಛೆ ಪ್ರಕಾರ ಮಂತ್ರಿಗಳನ್ನು ನಿಯಮಿಸುವುದು ಈಗಿನ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಬದಲು ನನ್ನ ಅಭಿಪ್ರಾಯದಲ್ಲಿ ಹೆಚ್ಚಿನ ಸಂಶಯಕ್ಕೆ ಎಡೆಕೊಡುತ್ತದೆ ಕಾಂಗ್ರೆಸು ರಾಜ್ಯಾಂಗ ಆಡಳಿತದ ಧೋರಣೆಯನ್ನನುಸರಿಸಿ ತನ್ನ ಗುರಿಯಾದ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಆತುರಪಡುತ್ತದೆ" ಹೀಗೆಂದು ಮಹಾತ್ಮಾ ಗಾಂಧಿಯವರು ಜೆಟ್‌ಲ್ಯಾಂಡರ ಭಾಷಣವನ್ನು ಕುರಿತು 'ಅಸೋಸಿಯೇಟ್ ಪ್ರೆಸ್' ಪ್ರತಿನಿಧಿಗಳಿಗೆ ಕೊಟ್ಟ ಒಂದು ಭೇಟಿಯಲ್ಲಿ ತಿಳಿಸಿದರು.

ಜಿನ್ನಾರವರಿಗೆ ಲಕ್ನೋ ಮುಸ್ಲಿಮರ ಬಹಿರಂಗ ಪತ್ರ

"ಮುಸಲ್ಮಾನರನ್ನು ಹೇಡಿಗಳಾಗಿ ಮಾಡಬೇಡಿ"

ಲಕ್ನೋ ಮುಸ್ಲಿಂ ಜನತೆಯ ಪರವಾಗಿ ಮಿ॥ ಜಿನ್ನಾರವರಿಗೆ ಕಳುಹಿಸಲ್ಪಟ್ಟ ಒಂದು ಬಹಿರಂಗ ಪತ್ರದಲ್ಲಿ, ಸ್ವಾತಂತ್ರ್ಯಗಳಾಗಿ ಹುಟ್ಟಿದ ಮುಸಲ್ಮಾನರನ್ನು ಜಿನ್ನಾರವರು ಗುಲಾಮಗಿರಿಯ ದ್ವಾರಗಳನ್ನು ತೋರಿಸಿ ಮೋಹಿಸುವರೆಂದು ಆಪಾದಿಸಲ್ಪಟ್ಟಿದೆ ಪತ್ರದ ಅಭಿಪ್ರಾಯವು ಈ ಕೆಳಗಿನಂತಿದೆ -ಜವಾಹರಲಾಲ ಜಿನ್ನಾರೊಳಗಣ ಲೇಖನ ಸಮರವನ್ನು ಮುಸ್ಲಿಂ ಜನತೆಯು ಆತುರದಿಂದ ನೋಡುತ್ತಲಿದೆ ಇವರ್ರೂ ಮುಸ್ಲಿಮರನ್ನು ತಮ್ಮ ತಮ್ಮ ಧ್ವಜಗಳ ಕೆಳಗೆ ಸೇರಿಸಲು ನೋಡುವರು. ಜಿನ್ನಾರವರು ಸ್ವಾತಂತ್ರ್ಯಾಭಿಲಾಷಿಗಳಿದ್ದರೆ ಎಪ್ರಿಲ್ ೧ನೇ ತಾರೀಕಿನಂದು ಮುಸ್ಲಿಮರು ಹರತಾಳ, ನವರಾಜಶಾಸನ ವಿರೋಧ ಪ್ರದರ್ಶನ ಮಾಡಿದ್ದಕ್ಕೆ ಏಕೆ ಆಕ್ಷೇಪ ತೆಗೆದರು? ಜಿನ್ನಾರು ನವರಾಜಶಾಸನದ ದೊಡ್ಡ ಟೀಕಾಗಾರರಿರುತ್ತಾರೆ ಅಂದಮೇಲೆ ಅವರ ಈ ಆಕ್ಷೇಪವೇಕೆ? ಬಹುತೇಕ ಸಾಲಸೋಲುಗಳಿಂದಲೂ ಬಡತನದ ಕಷ್ಟಗಳಿಂದಲೂ ನರಳುತ್ತಿರುವ ೮ ಕೋಟಿ ಮುಸ್ಲಿಮರ ಹಿತವು ಜಿನ್ನರಿಗಿರದೆ ಅವರು ಕೆಲವು ಸ್ವಾರ್ಥಿ ವ್ಯಕ್ತಿಗಳಿಗಾಗಿ ಕೆಲಸಮಾಡುವಂತೆ ತೋರಿಬರುತ್ತದೆ

ಪಂಡಿತ್ ಜವಾಹರಲಾಲ ನೆಹರುಗಳಾದರೋ ಮುಸಲ್ಮಾನರ ಈ ಸಂಕಷ್ಟಗಳನ್ನು ಜನತಾರೂಪದಿಂದ ನೋಡುತ್ತಾರೆ ಆಗ್ರಾ, ಕಚೇರ ಮುಸ್ಲಿಂ ಮಜ್ದೂರರುಗಳಿಂದಲೂ, ಮತ್ತು ಬೆಟ್ಟ ಪ್ರದೇಶದ ಬಂಗ್ಲೆಗಳಲ್ಲಿ ಕೂತು ಮುಸ್ಲಿಮ ಜನತೆಯ ವಿಧಿಯನ್ನು ನಡೆಸ ಪ್ರಯತ್ನಿಸುವವರಿಂದಲೂ ಮುಸ್ಲಿಂ ಜನತೆಯು ಬೇಸರ ಹೊಂದಿರುತ್ತದೆ ಆದರೆ ರಾಷ್ಟ್ರಪತಿ ನೆಹರುಗಳನ್ನು ಸ್ಥಳೀಯ (ಲಕ್ನೋವಿನ) ಮುಸ್ಲಿಂ ಸಂಘದವರು ಆಹ್ವಾನಿಸಿದಾಗ ಅವರು ಒರೇ ನೆಲದ ಮೇಲೆ ಕೂತು ನಮ್ಮೊಡನೆ ಮಾತನಾಡಿದರು ಜಿನ್ನಾರವರು ದಯಮಾಡಿ ಇಲ್ಲಿಗೆ ಬಂದ ಮುಸ್ಲಿಮರು ನಮ್ಮನ್ನು ಪ್ರಪಂಚದ ಮುಂದಿನ ಜನಾಂಗದ ಮೆಗಡಗಳೊಡನೆ ಹೆಮ್ಮೆಯಿಂದ ನಡೆಯುವಂತೆ ಮಾಡುವಂತೆ ಮಾತೃಭೂಮಿಯನ್ನು ಹೇಗೆ ಬಂಧನದಿಂದ ದ್ಧಾರ ಮಾಡಬಹುದೆಂಬುದರ ವಿಷಯ ಸೂಚನೆಗಳನ್ನು ಕೊಡುವರೆಂದು ಆಶಿಸುತ್ತೇವೆ

ರಾಷ್ಟ್ರಪತಿಗಳು ಬರ್ಮಾದಲ್ಲಿ

ಅತ್ಯಭೂತ ಸ್ವಾಗತ,

ಭಾರತ-ಬರ್ಮಾ ವಾತ್ಸಲ್ಯ

ಸೌಹಾರ್ದದ ಸುವಾರ್ತೆ

ಪಂಡಿತ ಜವಾಹರಲಾಲ ನೆಹರುಗಳು ಬರ್ಮಾದಲ್ಲಿ ಸಂಚಾರ ಮಾಡುತ್ತಲಿರುವರು. ರಂಗೂನ್ ನಗರದಲ್ಲಿ ಅವರಿಗೆ ಅಭೂತ ಸ್ವಾಗತವು ಕೊಡಲ್ಪಟ್ಟಿತು ರಂಗೂನ್ ಮುನ್ಸಿಪಲ್ ಕಾರ್ಪೋರೇಶನ್ ಮೊದಲಾದ ಅನೇಕಾನೇಕ ಸಂಸ್ಥೆಗಳು ರಾಷ್ಟ್ರಪತಿಗಳಿಗೆ ಬಿನ್ನವತ್ತಳೆ ಮಾನಪತ್ರಗಳನ್ನರ್ಪಿಸಿದರು. ಕಾರ್ಪೋರೇಶನಿನ ಯುರೋಪಿಯನ್ ಸದಸ್ಯರು ಮಾತ್ರ ಮಾನಪತ್ರ ಅರ್ಪಣೆ ಸಮಾರಂಭಕ್ಕೆ ಬರಲಿಲ್ಲ ಇದು ಯುರೋಪಿಯನರಿಗೆ ಸ್ವಾಭಾವಿಕವಾದುದು. ಆದರೂ ಬರ್ಮೀಯರು ತಮ್ಮ ಹೃತ್ಪೂರ್ವಕ ಸ್ವಾಗತಪಿತ್ತರು ಪಂಡಿತರ ತಮ್ಮ ಸಂಚಾರದ ಉದ್ದೇಶವನ್ನು ಕುರಿತು "ನಾನು ಭಾರತೀಯರ ಕಡೆಯಿಂದ ಬರ್ಮೀಯರಿಗೆ ನಮ್ಮ ಸೌಹಾರ್ದ ಸಹಕಾರದ ಸುವಾರ್ತೆಯನ್ನು ಸಾರಲು ಬಂದಿರುವೆನು ಬರ್ಮವನ್ನು ಬಿಟ್ಟವರು ಭಾರತದಿಂದ ವಿಂಗಡಿಸಿದರು. ಬರ್ಮೀಯರಿಗೂ ಭಾರತೀಯರಿಗೂ ಎರಡು ಸಹಸ್ರ ಸಂವತ್ಸರಗಳಿಂದ ನಡೆದು ಬಂದ ವಾತ್ಸಲ್ಯದ ಬಗೆಯನ್ನು ಯಾರಿಂದಲೂ ಕಡಿಸಲಾಗದು ಬರ್ಮವೂ ಭಾರತವೂ ಇಂದು ಪರಕೀಯ ಬಂಧನದಲ್ಲಿದ್ದು ಸಹಿಸಲಸಂಧ್ಯವಾದ ಸೂರೆ ಸುಲಿಗೆಗಳಿಗೆ ತುತ್ತಾಗಿದ್ದುದರಿಂದ ಎರಡೂ ದೇಶದ ಬಂಧನ ಒಡೆಗಡೆಯ ಸಮಸ್ಯೆಗಳು ಕಸನಾಗಿ ಮಾಡುವುದು ರಾಷ್ಟ್ರಪತಿಗಳು ವಿಭಾಗಿಸುವುದಿಲ್ಲ ಒನ್ನದಲ್ಲಿ ವಾಸಿಸುವ ಭಾರತೀಯರು ಬರ್ಮೀಯರ ಸ್ವಾತಂತ್ರ್ಯ ಸಮಸ್ಯೆಗಳಲ್ಲಿ ಹೃತ್ಪೂರ್ವಕ ಭಾಗವಹಿಸಿ ಸಹಕರಿಸಬೇಕು. ಎಂದು ರಾಷ್ಟ್ರಪತಿಗಳು ವಿನಂತಿಸಿಕೊಂಡರು

ಮದ್ರಾಸ್ ಮುಖಂಡರ ಅಭಿಪ್ರಾಯ

ನಮ್ಮ ಪ್ರಾಂತ್ಯದ ಕಾಂಗ್ರೆಸ್ ಮುಖಂಡ ಶ್ರೀ ರಾಜಗೋಪಾಲಾಚಾರ್ಯರು ಜೆಟ್ಲೆಂಡರ ತಮ್ಮ ಭಾಷಣದಲ್ಲಿ ಎರಡು ಮುಖ್ಯ ಸಂಗತಿಗಳನ್ನು ಒಪ್ಪಿಕೆ, ಇದರಿಂದ ತಿಳಿಸುತ್ತಾರೆ ಸರಕಾರದ ಸರ್ವ ಜವಾಬ್ದಾರಿಯು ಮಾತ್ರಕ್ಕೆ ಗವರ್ನರರ ಮೇಲೆ ಹೊಂದಿಕೊಂಡಿದ್ದರೂ ಮಂತ್ರಿಗಳ ಅಧಿಕಾರ ಸೂತ್ರಗಳನ್ನು ಕೈಕೊಂಡೊಡನೆ ಅದು ಅವರ ಕೈವಶವಾಗುತ್ತದೆಂದೂ. ಗವರ್ನರರ ಸಾಮಾನ್ಯವಾಗಿ ಮಂತ್ರಿಗಳಿಂದವರ ಸಲಹೆಗಳನ್ನು ತಿರಸ್ಕರಿಸವುದಿಲ್ಲವೆಂದೂ ಲಾರ್ಡ್ ಜೆಟ್‌ಲೆಂಡರು ಒಪ್ಪಿಕೊಂಡಂತಾಯಿತು. ಅಲ್ಲದೆ ಗವರ್ನರರ ವಿಶೇಷಾಧಿಕಾರಗಳನ್ನು ಉಪಯೋಗಿಸುವ ಸಂದರ್ಭಗಳು ಮಂತ್ರಿ-ಗವರ್ನರರೊಳಗೆ ಒಡಂಬಡಿಕೆಯಾದರೂ ಗವರ್ನರರು ಮಂತ್ರಿಗಳ ಮುಂದೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವರೆಂಬ ವಿಷಯವು ಜೆಟ್ಲೆಂಡರ ಭಾಷಣದಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತದೆ

"ಮಂತ್ರಿ ಗವರ್ನರರೊಳಗೆ ಬರುವ ಭೇದಾಭಿಪ್ರಾಯಗಳನ್ನು ಸರಿಗೊಳಿಸುವ ಪ್ರಯತ್ನಗಳು ನಿಷ್ಫಲವಾದಾಗ ಗವರ್ನರರು ಮಂತ್ರಿಗಳ ಸಲಹೆಗಳನ್ನು ಬದಿಗೊತ್ತಿ ಕಾಂಗ್ರೆಸ್ಸಿನ ಕೇಳಿಕೆಯಂತೆ ಮಂತ್ರಿಗಳನ್ನು ಅಧಿಕಾರದಿಂದ ರದ್ದು (dismiss) ಮಾಡಬೇಕೆಂಬ ವಿಷಯಕ್ಕೆ ಗವರ್ನರರು ತಮ್ಮ ಒಪ್ಪಿಗೆಯನ್ನು ಕೊಡಬೇಕು. ಈ ವಿಚಾರವನ್ನು ಲಾರ್ಡ್ ಜೆಟ್‌ಲ್ಯಾಂಡರು ತಮ್ಮ ಭಾಷಣದಲ್ಲಿ ವಿವರಿಸದೆ ಬಿಟ್ಟಿರುವರು."



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.
ಆಟೋಮಟಿಕ್ ಅಲಾರಂ ಪಿಸ್ತೂಲ್



(ಬಂದೂಕು)

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿ ನಂತಿರುವುದು ಇದರಿಂದ ಹತ್ತು ಸೆಕುಂಡಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು ಇದು ಒಂದು ಸಮಯದಲ್ಲಿ ಇಪ್ಪರಿ ನಮ್ಮ ಸಹಾಯಕನಾಗಿರುವುದು. ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೂಲ್ ಕೂಡ ಕಳುಹಿಸುವೆವು. ಪಿಸ್ತೂಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲ್ಲಿ ಹಾಕಿದ ಸ್ಟಾರ್ಟ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು ಪಿಸ್ತೂಲು ಗಳ್ಳೆ ತೋಟೆಗಳ ಸಹಿತ ೬—೮—೦ ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೩ ಇರುಳಪ್ಪನ ಬೀದಿ ಮದ್ರಾಸು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ಸೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು

ಜೀವಾಮೃತವು ... ಪ್ರಸರ ತೃಪ್ತಿವಾ ... ಣದಾಯ ಕವೆನ್ನಬಹುದು

ತಯಾರಿಸುವರು — ಆಯುರ್ವೇದಾಶ್ರಮ, ಪೋ ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ ಮೊಸರು ಹಾಲು, ಮಧ್ಯ ತಿಂಡಿ ವಗೈರೆ ಹಾಕುವ ದಂತೆಯ ... ಎಣ್ಣೆ ಮಿಗಳ ಸೇರದ ತೆಯ ... ತ್ತು ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರೆಗಳ ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಭಾಧೆಯು ಇಲ್ಲ

ಅನೇಕ ತರಹ ಗುತ್ತು ಪ್ರಮಾಣಗಳಿವೆ

ಮುಖ್ಯ ಏಜಂಟರು

ಕೆ ರಾಮ ನಾಯಕ್
ಹಾರ್ಡ್‌ವೇರ್ ... ತ
... ನರಲ್ ... ಚೆಂಟ
... ಟೋರ್ ರಸ್ತೆ ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ ಕ

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ

ವೃದ್ಧಿಕಾಸವ—ನಿತ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ಬಾರೇ

ಬರೋದಿಲ್ಲ.

ಅಲ್ಲವೇನೆ ಬಂದು ಹೋಗು.

ಏನೂಂದ್ರೆ ಅಲ್ಲಿಗೆ ಬರೋದಿಲ್ಲ.

ಪ್ರಿಯೇ ಏನೂಂದ್ರೆ ನಮ್ಮ ಸರೊಜಿಗೆ ಒಬ್ಬ ವರನನ್ನು ಗೊತ್ತು ಹಚ್ಚಿದ್ದೇನೆ ಆತನಾದರೋ ರೂಪದಲ್ಲಿ ಮನ್ಮಥನಂತೆಯೂ, ವಿದ್ಯೆಯಲ್ಲಿ ಬೃಹಸ್ಪತಿಯಂತೆಯೂ ಗುಣದಲ್ಲಿ ಸತ್ಯವಾನನಂತೆಯೂ ಇದ್ದು ನಮ್ಮ ಸರೊಜೆಗೆ ತಕ್ಕ ಜೋಡಿಯಾಗಿರುತ್ತಾನೆ.

ಹೌದೇ ಹಾಗಾದರೆ ಇನ್ನೇಕೆ ವಿಳಂಬ ಮಾಡುವಿರಿ? ಶೀಘ್ರವಾಗಿ ಆ ತರುಣನ ಹಿರಿಯರನ್ನು ಸಂಧಿಸಿ ಮಾತಾಡಿ ನಿಶ್ಚಯ ಮಾಡಿಕೊಂಡೇ ಬನ್ನಿರಿ

ಎಲ್ಲವೂ ಸರಿ, ಆದರೆ

ಪ್ರಿಯೂ! ಇನ್ನೂ ಆ ಆದರೆಯ ಬಾಧಕವೇಕೆ? ಶೀಘ್ರಗಾಮಿಯಾಗಿ ಕೈಕೊಂಡ ಕಾರ್ಯವನ್ನು ಶ್ರದ್ಧೆಯಿಂದ ಪೂರ್ತಿಸಬಾರದೇ?

ಪ್ರಿಯೇ? ಬೇಸರಿಸಬೇಡ ಅವನ ತಂದೆತಾಯಿಗಳನ್ನು ಸಂಧಿಸಿ ಮಾತಾಡಿದೆನು ನೋಡಿದಲ್ಲಿ ಅವರ ವರವಿಕ್ರಯವು ಎರಡು ಸಾವಿರ ರೂಪಾಯಿಗಳಿಗಿಂತಲೂ ಕಡಿಮೆಯಾಗಲಾರದು ಹುಡುಗನು ಬಿ. ಎ. ಪಾಸಾಗಿರುವನಂತೆ ಅವನ ಶಿಕ್ಷಣಕ್ಕೆ ಅವರು ಎರಡು ಸಾವಿರ ರೂಪಾಯಿಗಳ ಸಾಲವನ್ನು ಮಾಡಿರುತ್ತಾರಂತೆ ಆ ಸಾಲವು ಈ ವರ ವಿಕ್ರಯದಿಂದ ತುಂಬ ಬೇಕೇ ವಿನಹಾ ಬೇರಾವ ಆಧಾರವೂ ಅವರಿಗೆ ಇಲ್ಲವಂತೆ? ಏನು ಮಾಡಲಿ ಹುಡುಗಿಗಂತೂ ಹದಿನಾರು ಸಂವತ್ಸರಗಳು ಕಳೆದುವು ಈ ಹಾಳು ವರದಕ್ಷಿಣೆಗೆ ಎಲ್ಲಿಗೆ ಹೋಗಲಿ. ಪ್ರಿಯೆ? ಬಡವರ ಬಾಳೆಂಬುದು ದಾರಿಯಲ್ಲಿ ಬಿದ್ದ ಕೊಳಕು ಅಹಾರವನ್ನು ಬುಂಜಿಸುವ ನಾಯಿಗಳಿಗಿಂತಲೂ ಕಡೆಯಾಗಿರುವುದು ಈ ವರದಕ್ಷಿಣೆ ಎಂಬ ರೂಢಿಯನ್ನು ಯಾವ ದುಷ್ಟ ಮಾನವನು ಪ್ರಚಾರಕ್ಕೆ ತಂದನೋ ದೇವರೇ ಬಲ್ಲ ಛೀ ಅಲ್ಲದವರ ಮೇಲೇಕೆ ದೂರನ್ನು ಹೊರಿಸಲಿ? ಎಲ್ಲವೂ ನಮ್ಮ ಪ್ರಾರಬ್ಧವೆಂದೇ ಹೇಳಬೇಕು ಎಲೇ ವರದಕ್ಷಿಣೇ, ವರದಕ್ಷಿಣೇ ನಿನ್ನಿಂದ ಎಷ್ಟೋ ದೊಡ್ಡ ದೊಡ್ಡ ಲಕ್ಷಾಧಿಪತಿಗಳು ನಿನ್ನನ್ನು ತಮ್ಮ ಹೆಣ್ಣುಮಕ್ಕಳ ಪ್ರೀತಿಗೆಂದು ಸೃಷ್ಟಿಸಿದರು ಆದರೆ ನೀನೆಂದು ಕರಾಳ ರಾಕ್ಷಸನಂತೆ ಬೆಳೆದು ನಮ್ಮಂತ ದೀನರನ್ನು ಭಿಕ್ಷಾಧಿಪತಿಗಳನ್ನಾಗಿ ಮಾಡಿ, ನಮ್ಮ ಜೀವನಕ್ಕೆ ಮಣ್ಣೆರಚಲು ನೋಡುವೆಯಲ್ಲವೆ? ಇನ್ನೂ ನಿನಗೆ ಕರುಣೆ ದೊರಲಿಲ್ಲವೇ ಎಲ್ಲಿ ನೋಡಿದರೂ ನಿನ್ನ ಪ್ರತಾಪ ಎಲ್ಲಿ ಹೋದರೂ ನನ್ನಂಥಾ ಪಾಪಭೀರುವಿಗೆ ನಿನ್ನ ಸಮ್ಮುಖ ತಿರಸ್ಕಾರ ಇನ್ನಾದರೂ ನಿನ್ನ ಪ್ರತಾಪವನ್ನು ನಿಲ್ಲಿಸಿ ನನ್ನಂಥಾ ಪಾಮರರನ್ನು ಉದ್ಧರಿಸಬಾರದೇ? ಯಾತಕ್ಕಾಗಿ ನಿನ್ನನ್ನು ದೂರಬೇಕು ಎಲ್ಲವೂ ನಮ್ಮ ಪೂರ್ವಪಾಪ ಕರ್ಮದ ಫಲವೆಂದು ಹೇಳಿ ತೀರಬೇಕು. ಇಂಥಾ ಹಾಳು ರೂಢಿಯನ್ನು ಹಂದೆಸೆಯಲು ಈ ನಮ್ಮ ಪರಮ ಪವಿತ್ರವಾದ ಭರತ ಭೂಮಿಯಲ್ಲಿ ಯಾರಾದರೂ ಜನಿಸಲಾರರೇ? ನಮ್ಮ ಈ ಹಾಳು ಸಮಾಜವು ನಮ್ಮಂಥ ಗರೀಬರನ್ನು ಸೂರೆಗೈಯಲು ಮಾಡಿಟ್ಟ ಈ ಕಟ್ಟಳೆ ಈ ಕ್ರೂರ ನೀತಿಯನ್ನು ನಮ್ಮನ್ನು ತಪ್ಪಿಸುವರಿಲ್ಲವೆ? ಈ ವರವಿಕ್ರಯವೆಂಬ ಅಗಾಧ ನರಕ ಕೂಪದಲ್ಲಿ ಬಿದ್ದು ನರಳುವ ನನ್ನಂಥಾ ಅನಾಥರನ್ನು ಉದ್ಧರಿಸಲು ಜನನಕ್ಕೆ ಬಾರದೇ ಇರರು. ಎಲ್ಲವೂ ದೈವೇಚ್ಛೆ. ಪ್ರಿಯೇ ಭೋಜನಕ್ಕಾಗಿದೆಯೇ?

ಪ್ರಿಯಕರಾ ಭೋಜನವು ಆಗಲೇ ತಯಾರಾಗಿರುವುದು.

ಹಾಗಾದರೆ ಇದೋ ಬಂದೆನು

ಮೇಲೆ ನಡೆದ ಸಂಭಾಷಣೆಯು ವಿಷ್ಣುಪುರದಲ್ಲಿರುವ ನಾರಾಯಣರಾಯರಿಗೂ ಅವರ ಧರ್ಮಪತ್ನಿ ಶಾರದಾ ಬಾಯಿಯವರಿಗೂ.

೦ ೦ ೦

ನಾರಾಯಣರಾಯರು ವಿಷ್ಣುಪುರದ ಸಬ್ ರಜಿಸ್ಟ್ರೀ ಆಫೀಸಿನ ಕ್ಲಾರ್ಕರಾಗಿದ್ದರು.

ಸಮಾಜ-ಸಮಾಧಿ

ಲೇಖಕ—ರಾಮರಾಯ ಶೆಣೈ, ಪಾಣೆಮಂಗಳೂರು.

ಮಾಸ ಒಂದಕ್ಕೆ ಸಿಗುವ ಇಪ್ಪತ್ತು ರೂಪಾಯಿಗಳ ತಲುಬನಿಂದ ಅವರ ಒಂದು ಚಿಕ್ಕ ಸಂಸಾರದ ಅಂದರೆ ಹೆಂಡತಿ ಶಾರದಾಬಾಯಿ ಮತ್ತು ಮಗಳು ಸರೋಜಿನಿಯರ ಉದರ ಪೋಷಣೆಯು ಸಾಗಬೇಕಾಗಿತ್ತು ಶಾರದಾ ಬಾಯಿಯವರಾದರೋ ಈಗಿನ ನವನಾಗರೀ ಕಥೆಯ ಸ್ತ್ರೀಯರಂತೆ ಇರಲಿಲ್ಲ ಗೃಹಕೃತ್ಯಗಳನ್ನು ಬಹು ಸೂಕ್ಷ್ಮ ರೀತಿಯಲ್ಲಿ ನಿರ್ವಹಿಸಿ ತನ್ನ ಪತಿಯ ಮಾತುಗಳನ್ನು ವೇದವಾಕ್ಯವೆಂದೆಣಿಸಿ ಪತಿದೇವನನ್ನು ಯಾವ ರೀತಿಯಿಂದಲಾದರೂ ಸಂತೋಷಪಡಿಸಿ ಪತಿಧರ್ಮವನ್ನು ಇತರರಿಗೆ ಬೋಧಿಸುತ್ತಿದ್ದಳು ಅವರ ಮಗಳ ಮದುವೆಯ ವಿಷಯಕವಾದ ಒಂದೇ ಒಂದು ಕುಂದಲ್ಲದೇ (ಅದೂ ವರದಕ್ಷಿಣೆಯ ವಿಚಾರವಾಗಿ ಮಾತ್ರ) ಬೇರೆ ಯಾವದಾದರೂ ಕುಂದಿಲ್ಲದೇ ಅವರ ಸಂಸಾರನೌಕವು ಸಂಸಾರ ಸಾಗರದಲ್ಲಿ ಸುಖಮಯವಾಗಿ ತೇಲಾಡುತ್ತಿತ್ತು ಎಂದು ಬೇರೆ ಹೇಳಬೇಕೇ?

೦ ೦ ೦ ೦

ಅದೊಂದು ಸಾಯಂಕಾಲ ಸಮಯ. ಸೂರ್ಯದೇವನು ಆ ದಿನದ ತನ್ನ ಕಾರ್ಯಕ್ರಮವನ್ನು ಮುಗಿಸಿ ವಿಶ್ರಾಂತಿ ಪಡೆಯಲೋಸುಗ ಪಶ್ಚಿಮಾಂಬುಧಿಯನ್ನು ಸೇರಿದನು. ಮೇಘಾಧಿಗಳು ನಾನಾ ತರದ ಬಣ್ಣಗಳಿಂದ ದಿಗಂತದಲ್ಲಿ ರಾರಾಜಿಸುತ್ತಿದ್ದವು ಪಕ್ಷಿಗಳು ತಮ್ಮ ತಮ್ಮ ಕೋಮಲ ಕಂಠಗಳಿಂದ ಚಿಲಿಪಿಲಿ ಎಂದು ಹಾಡುತ್ತಾ ತಮ್ಮ ತಮ್ಮ ಶಿಬಿರಗಳನ್ನು ಸೇರಹತ್ತಿದವು ಇಂಥಾ ಪ್ರಶಾಂತ ಸಮಯದಲ್ಲಿ ಆ ನಗರದ ಅದೊಂದು ಏಕಾಂಗಿಯಾಗಿದ್ದ ಅನೇಕ ತರದ ಫಲಪುಷ್ಪಾದಿಗಳಿಂದಲೂ ನೀಡಿದಾದ ವೃಕ್ಷಗಳಿಂದಲೂ ಕೂಡಿಕೊಂಡಿರುವ ಸರೋವರದ ತೀರದಲ್ಲಿ ಓರ್ವ ನವನಧಾರಿಯಾಗ ತರುಣಿಯೋರ್ವಳ ನಿಂತಿದ್ದಳು. ಆ ತರುಣಿಯನ್ನು ನೋಡುವಾಗ ಅವಳು ಮಹತ್ತಾದ ಚಿಂತಾ ಸಮುದ್ರದಲ್ಲಿ ತೇಲಾಡುತ್ತಿರವಂತೆ ತೋರುತ್ತಿತ್ತು ಸ್ವಲ್ಪ ಸಮಯ ಪಶ್ಚಾತ್ ಕೋಮಲ ಬಾಯಿಯ ಕಂಠದಿಂದ ಈ ತೆರದ ಮಾತುಗಳು ಕೇಳಲಾರಂಭಿಸಿದುವು

ಅಯ್ಯೋ! ಸರ್ವಶಕ್ತಿಯನು, ಅನಾಥರಕ್ಷಕ ಇನ್ನಾದರೂ ನನ್ನ ಮೇಲೆ ಕರುಣೆ ದೋರಲಾರೆಯಾ ವರದಕ್ಷಿಣೆಯನ್ನು ಹೇಗೆ ಕೊಡಲಿ, ಎಲ್ಲಿಂದ ಕೊಡಲಿ ಎಂದು ಹಂಬಲಿಸುತ್ತಿರುವ ನನ್ನ ಮಾತಾಪಿತೃಗಳನ್ನು ಯಾವ ರೀತಿಯಿಂದಲಾದರೂ ಉದ್ಧರಿಸಲಾರೆಯಾ, ದೇವಾ ನಿನ್ನಿಂದಲ್ಲವೇ ನನ್ನ ಹಿರಿಯರಿಗೆ ತ್ರಾಸವಾಗುತ್ತಿರುವುದು, ನಾನೇ ಈ ಧರಿತ್ರಿಯಲ್ಲಿ ಇಲ್ಲದಿದ್ದರೆ ಕೆಲಕಾಲ ನನ್ನ ಮಾತಾಪಿತೃಗಳು ನನ್ನ ವಿಷಯಕವಾದ ಹಂಬಲದಿಂದ ಕ್ಷೀಣರಾಗುತ್ತಿದ್ದರೂ ಕ್ರಮೇಣ ಅವರು ನನ್ನನ್ನು ಮರೆತು ವರದಕ್ಷಿಣೆಯ ಕ್ರೂರ ಬಾಯಿಯಿಂದ ಮತ್ತು ಸಮಾಜದ ಕಠಿಣ ನಿಯಮಗಳಿಂದ ತಪ್ಪಿ ಸುಖಿಗಳಾಗಬಹುದಲ್ಲವೇ?'' ಎಂದು ಹೇಳಿ ಆ ಸರೋವರದಲ್ಲಿ ಧುಮುಕಿದಳು ಆ ಶಬ್ದವಾದ ಒಡನೆಯೆ ಅದೇ ತರದ ಇನ್ನೊಂದು ಶಬ್ದವು ಅದೇ ಸರೋವರದಲ್ಲಿ ಉಂಟಾಗಿ ಪ್ರಕೃತಿಯಲ್ಲಿ ವ್ಯಾಪಿಸಿಕೊಂಡಿರುವ ಗಾಢಾಂಧಕಾರದಲ್ಲಿ ಮಾಯವಾಗಿ ಹೋಯಿತು

೦ ೦ ೦ ೦

'ಸರೂ ಎದ್ದೇಳು ಇಂಥಾ ಮಹತ್ತಾದ ಪಾಪಕೂಪಕ್ಕೆ ಕೈಹಾಕಿದೆ ನೀನು ಕೂಡಾ ಇತರ ತರುಣಿಯರಂತೆ ಬುದ್ಧಿಶೂನ್ಯಳಾಗಿ ಹೋದೆಯಾ? ವರದಕ್ಷಿಣೆಎಂಬ ದುಶ್ಚಾಳಿಯು ಈ ನಮ್ಮ ಭಾರತ ಭೂಮಿಯಿಂದ ನಾಶವಾಗಬೇಕು ಎಂದು ಕೈಕಟ್ಟಿ ನಿಂತಿರುವ ತರುಣರಲ್ಲಿ ನಾನೂ ಒಬ್ಬನು ಬೆದರಬೇಡ ನಿನ್ನ ಮಾತಾಪಿತೃಗಳ ಶೋಕಕ್ಕೆ ಕಾರಣನಾದ ಮತ್ತು ಲೋಭಿಗಳಲ್ಲಿ ಅಗ್ರಗಣ್ಯನಾಗಿರುವ ಸುರೇಶರಾಯರ ಮಗನೆಂದರೆ ನಾನೇ ಎಂದು ತಿಳಿ ಒಂದು ವೇಳೆ ವರದಕ್ಷಿಣೆ ಇಲ್ಲದೇ ನನ್ನ ನಿನ್ನ ವಿವಾಹವಾದರೆ ಸರಿ ಇಲ್ಲವಾದರೆ ನನ್ನ ಪರಿಣಾಮವು ಹ್ಯಾಗಾಗುವದೆಂದು ತಿಳಿಸಲು ಬಾರದು. ಏನು ಮಾತಾಡುವುದಿಲ್ಲ? ಸ್ತ್ರೀ ಸಹಜವಾದ ಲಜ್ಜೆಯನ್ನು ತೊರೆದು ಸಲೀಸಿನಿಂದ ಮಾತಾಡು ಏನು ನಿನ್ನ ಮನಸ್ಸು ಹೇಗಿರುವುದು? ಸರೋಜಿನಿ—ಮೋಹನಾ ನಿನ್ನನ್ನು ನಾನು ಮನಸಾ ವರಿಸಿರುವೆನು ನಿನ್ನನ್ನು ಅಲ್ಲದೇ ಈತನು ಈ ದನುಸಿಯಲ್ಲಿ ಹೆರಿದಾದ ವರೆಗೂ ಬೇರೆ ಯಾರನ್ನೂ ಪ್ರೀತಿಸುವುದಿಲ್ಲವೆಂದು ಖಂಡಿತವಾಗಿಯೂ ಹೇಳುವೆನು. ಒಂದು ವೇಳೆ ನಾನು ನೀನ ಸತಿಪತಿಗಳಾಗುವುದು ದೇವರ ಮನಸ್ಸಿನಲ್ಲಿ ಬಾರದೇ ನಮ್ಮ ಸಂಬಂಧವು ತಪ್ಪಿಹೋದಲ್ಲಿ ನಾನು ಈ ಜಡ ಶರೀರವನ್ನು ಸೃಷ್ಟಿಕರ್ತನಾದ ಪರಬ್ರಹ್ಮ ಸ್ವರೂಪಿಯಾದ ಪರಮಾತ್ಮನಿಗೆ ಅರ್ಪಿಸುವೆನೇ ವಿನಹಾ ಅನ್ಯಥಾ ಇಟ್ಟುಕೊಳ್ಳುವವಳಲ್ಲ ಇದಕ್ಕೆ ನನ್ನ ಮನಸ್ಸೇ ಸಾಕ್ಷಿಯಾಗಿರುವುದು.

ಮೋಹನ—ಸರೂ' ಹಾಗಾದರೆ ನಾಳೆಯೇ ಇದರ ಇತ್ಯರ್ಥವಾಗಬೇಕು ನಾನು ನನ್ನ ತಾಯಿಯೊಡನೆ ವರದಕ್ಷಿಣೆಯ ವಿಚಾರವಾಗಿ ಮಾತಾಡುವೆನು. ನಾಳೆ ಇದೇ ಸಮಯದಲ್ಲಿ ನನ್ನ ನಿನ್ನ ಭೇಟಿಯು ಆಗಬೇಕು ನೆನಪಿರಲಿ.

೦ ೦ ೦ ೦

ಅಮ್ಮಾ! ಹಾಗಾದರೆ ನಾನೇನು ಮಾಡಬೇಕು.

ಮಗೂ! ಎರಡು ಸಾವಿರ ರೂಪಾಯಿಗಳ ವರದಕ್ಷಿಣೆಯಿಂದಲ್ಲದೆ ತನ್ನ ಮಗಳನ್ನು ಎಂದಿಗೂ ವಿವಾಹವಾಗುವುದಿಲ್ಲವೆಂದು ಖಂಡಿತವಾಗಿಯೂ ತಿಳಿಸಿಬಿಡು

ಅಮ್ಮಾ! ಹಾಗೆ ತಿಳಿಸಲು ನನ್ನಿಂದ ಎಂದಿಗೂ ಸಾಧ್ಯವಿಲ್ಲ ಕಾರಣ ನಾನು ವರ ವಿಕ್ರಯಕ್ಕೆ ಒಪ್ಪುವವನಲ್ಲ ಏನು! ನನ್ನನ್ನು ಎರಡು ಸಾವಿರ ರೂಪಾಯಿಗಳಿಗೆ ಅವರಿಗೆ ಮಾರಿ ಹಣ ಗಳಿಸಿಕೊಳ್ಳುತ್ತೀಯಾ? ನಾನು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನಲ್ಲವೇ? ನನ್ನಲ್ಲಿ ನಿನಗೆ ಕರುಣೆ ತೋರುವುದಿಲ್ಲವೇ?

ಛೀ ಮೂರ್ಖಾ, ಆಂಗ್ಲ ವಿದ್ಯಾಭ್ಯಾಸವನ್ನು ಕಲಿಸಿದುದಕ್ಕೆ ಸಿಕ್ಕಿದ ಫಲವಿದು. ಅಂದೇ ನಾನು ಅವರ ಕೂಡೆ ಹೇಳಿದ್ದೆನು ವಿದ್ಯೆ ನಮ್ಮ ಮಗುವಿಗೆ ಬೇಡ. ಅದರಿಂದ ಹಣ ಖರ್ಚಾಗುವುದೂ ದಲ್ಲದೇ ಹುಡುಗನ ಮನಸ್ಸು ಕೂಡಾ ಚಪಲಾವಸ್ಥೆ ಹೊಂದೀತು. ಇದ್ದ ಒಬ್ಬ ಮಗನ ಸ್ಥಿತಿಯು ಹೀಗಾದರೆ ನಮ್ಮನ್ನು ಕಾಪಾಡುವವರ್‍ಯಾರೆಂಬುದನ್ನು ಸಾರಿ ಸಾರಿ ಹೇಳಿದ್ದೆನು ಕೇಳಲಿಲ್ಲ ಉಣ್ಣಲಿ ಅದರ ಫಲ.

ಅಂದರೆ ವಿದ್ಯೆಯಿಲ್ಲದೆ ಪಶುಗಳ ತರಹ ಗೊಡ್ಡು ಪ್ರಾಣಿಯಂತೆ, ಇದ್ದ ಜೀವನವನ್ನು ಕಳೆಯಬೇಕೆಂದು ನಿನ್ನ ಇಚ್ಛೆಯಿತ್ತೋ ಸಮಾಜ ಸುಧಾರಣೆಗಳ ಈ ಕಾಲದಲ್ಲಿ, ಮಾನವ ತಿಳಿವಳಿಕೆಯು ಪರಿಪೂರ್ಣತೆಯನ್ನು ಹೊಂದುತ್ತಲಿರುವ ಈ ಕಾಲದಲ್ಲಿ ತಾಯಿಂದಿರು ತಮ್ಮ ಮಕ್ಕಳನ್ನು ಮೂಢರಾಗಿ ಬದುಕಲಿಚ್ಛಿಸುವುದು. ಅಂತವಳಾದ ನಿನಗೆ ಸರಿದೋರುವುದೆ ತಾಯಿಯೇ? ಹೆಚ್ಚು ಒದರಬೇಡ ಹುಡುಗನಿಗೆ ವರದಕ್ಷಿಣೆ ತೆಗೆದುಕೊಳ್ಳಲಿಲ್ಲವೆಂದರೆ ಸಮಾಜವು ಏನೆಂದೀತು? ಹಾಳು ಸಮಾಜ ಯಾವ ಸಮಾಜ ಇದೂ ಒಂದು ಸಮಾಜವೆ? ಕ್ರೂರ ನೀತಿಗಳಿಂದಲೂ ಮೂರ್ಖ ಕಟ್ಟಳೆಗಳಿಂದಲೂ ಕೂಡಿರುವ ಕೆಲವು ಅವಿಧ್ಯಾವಂತರ ಗುಂಪು, ಅದೂ ಒಂದು ಸಮಾಜವೆ? ಪ್ರಪಂಚದ ಲೇಶಮಾತ್ರ ಅರಿವಿಲ್ಲವೆ, ಸಮಾಜ ಸುಧಾರಣೆಗೆ ದಾರಿ ಕೊಡದ ಈ ಸಮಾಜಸ್ಥರ ಮನೋಭಾವಕ್ಕೆ ಧಿಕ್ಕಾರವಿರಲಿ

ಎಲಾ, ಏನು ನಿನಗೆ ಬುದ್ಧಿ ಭ್ರಮಣೆಯಾಗಿದೆಯೇ ಅಥವಾ ನಿನಗೆ ಯಾರಾದರೂ ಮದ್ದು ಹಾಕಿರುವರೋ ನೀನೇನು ಗಂಡಸಲ್ಲವೆ? ಎರಡು ಸಾವಿರ ರೂಪಾಯಿಗಳನ್ನು ಕಣ್ಣು ಮುಚ್ಚಿ ಕೊಡುವವರಿರುವಾಗ ನೀನು

(ಗಲನೇ ಪೇಜಿಗೆ ಮುಂದುವರಿಯುವುದು)

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರಕರವಾದ ಔಷಧಿ.
ಚಳಿ
ಡಾ. ಜಸಾನಿಯವರ
ಜಗತ್ಪ್ರಸಿದ್ಧ
ಗೋನೋಕಿಲರ್ (ರಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.
GONO KILLER

ಇಂದಿನ ಅದ್ಭುತವು ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾವ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3–0–0 (ಮೂರು) ವಿ. ಪಿ. ಖರ್ಚು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr. D. N. JASANI,** Vithalbhai Patel Road, BOMBAY 4

[illegible] ಗಳು—ಕ್ರಯ ರೂ. 1—0—0.

[illegible] ವಾಗಿ [illegible]. ಇದರಲ್ಲಿ ಸ್ತ್ರೀಪುರುಷರ ಪ್ರೇಮದ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮುದ್ದುಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಖಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ಸ್ವಭಿಚಾರಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೩ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂಡದೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು, ಕ್ರಯ ರೂ. 1

ಇದರ ಸಂಗಡ ೧೨ ಫ್ರೆಂಚ್ ಲಕಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ 287 ಮದರಾಸ್.

[illegible] ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಳ್ಳಬೇಕೆ ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

—ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTHD- 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾವಿಶಾರದ.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ

5 ಅಂಕಗಳ ಸ್ವಲ್ಪ) ಭಕ್ತಶಿಖಾಮಣಿ ದಾಮಾಜಿಪಂತ (ಸಂಗೀತ ನಾಟಕ.

ಬರೆದವರು.—ಶ್ರೀ ಜಿ. ಎಸ್. ಲಕ್ಷ್ಮಣ ಶೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು, ಯೋಗಿ ಹೃದಯದೊಳಿಲ್ಲ; ಸೂರ್ಯನೊಳಗಿಲ್ಲ,
ಎನ್ನ ಭಕ್ತರು ಎಲ್ಲಿ ಪಾಡುತಿಹರೋ ಅಲ್ಲಿ ನೆಲೆಗೊಳ್ಳುವೆನು ನಾನು, ನಾರದ ಮುನಿವರಾ!"

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮಂಗಳಕಾರ ಮನೋಹರವಾದ ೩೩ ಗೀತಗಳಿವೆ ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಯಾಯ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ. ಧಾತು ಸಂವತ್ಸರದ ವೈಶಾಖ ಶು। ೫ ಶನಿವಾರದಿಂದ, ವೈಶಾಖ ಶು। ೧೧ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ ಮೇ (ಪಗ್ಗು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
15	ಶನಿ	೫	೮	ಪುನರ್ವಸು	೧೮	೧	
16	ರವಿ	೬	೬	ಪುಷ್ಯ	೧೬	೨	
17	ಸೋ	೭	೧	ಆಶ್ಲೇಷ	೧೫	೩	
18	ಕುಜ	೮	೦	ಮಘ	೧೬	೪	
19	ಬುಧ	೯	೦	ಹುಬ್ಬ	೧೮	೫	
20	ಗುರು	೧೦	೧	ಉತ್ತರ	೨೧	೬	
21	ಶುಕ್ರ	೧೧	೩	ಹಸ್ತ	೨೫	೭	

THE

BANK OF MANGALORE LTD.,

MANGALORE

ESTD 1931

Branches -
Panemangalore Mudabidri & Padubidri

Chairman—**Philip J. Chandran, Esq.,**
Retd Dt Registrar of Joint Stock Companies

On & from 1st of January 1937,
Fixed Deposits will be received at following rates of interest.

For	3 months		3½%
"	6	"	4%
"	12	"	5%
"	24	" & upwards	5½%

Interest Payable Quarterly
Saving Bank deposit 3½% on daily balances
All kinds of banking business transacted.

U. R. PAI, N. U. PAI, *Managing Directors*

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗಿ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 6	3— 12
ಮಸ್ಸರಿ ...	3—10	4— 4
ಗುಡ್ಡು ..	3—10	4— 0
ಊರ ಅವ್ವಲ್ ಬೆಳ್ತಿಗೆ ..	4— 0	4—12
ರಂಗೂನಿನ ಬೆ. ಗೋ ೧ಕ್ಕೆ...	6 — 8	7— 0
ಎಲ್ಲೂರು ಬೆ. ಮು. ೧ಕ್ಕೆ ..	3—12	3—12
ಗೋದಿ ಗೋಣಿ ೧ಕ್ಕೆ	11 — 0	13— 0
ಕಡಗಿ ಗೋಣಿ ೧ಕ್ಕೆ ...	9 — 8	12— 8
ಹುರುಳಿ ಗೋಣಿ ೧ಕ್ಕೆ ..	5— 0	5 — 0
ತಡಲೆ ಗೋಣಿ ೧ಕ್ಕೆ	8 — 0	12 — 8
ತೊಗರಿಬೇಳೆ ಗೋಣಿ ೧ಕ್ಕೆ. .	11— 0	19— 0
ಉದ್ದು ಗೋಣಿ ೧ಕ್ಕೆ	9— 0	9 — 8
ಹೆಸರು ಗೋಣಿ ೧ಕ್ಕೆ	7—12	8— 0
ಊರುಬೆಲ್ಲ ಖಂಡಿ ೧ಕ್ಕೆ	27— 8	32— 8
ಉಪ್ಪು ಗೋಣಿ ೧ಕ್ಕೆ .	4—10	5—14
ಕೊಬ್ಬರಿ ಖಂಡಿ ೧ಕ್ಕೆ	75— 0	84— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	20 — 0	20— 8
ಎಳ್ಳಿಂಡಿ ಖಂಡಿ ೧ಕ್ಕೆ	27 — 8	31 — 4
ಕೊಬ್ಬರಿ ಎಣ್ಣೆ ಮಣ ೧ಕ್ಕೆ	5— 3	6— 0
ಎಳ್ಳೆಣ್ಣೆ ಮಣ ೧ಕ್ಕೆ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	6— 5	7— 5
ದೋರಿಸ ಸಕ್ಕರೆ ಮು. ೧ಕ್ಕೆ	3— 2	3 — 4
ಮೆಣಸು .	4— 0	6— 0
ಸಾಸಿವೆ ಮುಡಿ ೧ಕ್ಕೆ	5 — 4	5— 8
ಕಾಳುಮೆಣಸು ಖ ೧ಕ್ಕೆ	100— 0	110 0
ಯೇಲಕ್ಕಿಬೀಜ ಮಣ೧ಕ್ಕೆ	80— 0	85— 0
ಗೇರುಬೀಜ ಮು. ೧ಕ್ಕೆ .	3 — 8	3 — 11
ಕಬ್ಬಿಣ ಖಂಡಿ ೧ಕ್ಕೆ	51— 0	51— 4
ತಾಂಬ್ರತಗಡು ಮ ೧ಕ್ಕೆ	14— 12	15— 0
ತಾಂಬ್ರಪಾತ್ರಗಳು ಮ ೧ಕ್ಕೆ	17— 0	17 8
ಹಿತ್ತಾಳೆ ಸೇರು ೧ಕ್ಕೆ	13— 8	15— 0
ಹಿತ್ತಾಳೆ ತಗಡು ಮ ೧ಕ್ಕೆ	12— 0	12— 8
ಸತುವು ೧ಕ್ಕೆ	22 7	23— 5
ಹೊಗೆ ಸೊಪ್ಪು ಖಂಡಿ ೧ಕ್ಕೆ	40— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	148— 0	150— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	190— 0	200— 0
ಮಡಿಕೇರಿ ಏಲಕ್ಕಿ	55 0	60 —

THE
Shivaji Chemical Works,
HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ವಾಡಿಕೆಯನ್ನು ಮರೆಯಬೇಡಿರಿ

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ ಕೊಕ್ಕೆ ಹುಳ ನೂಲಿನಂತಹ ಹುಳ ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು ಇದಂ ಸೇವನೆ, ಸಕ್ಕರೆ ಹಾಕಿರುವ (ಹರಳೆಣ್ಣೆ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಸುಖವಿರೇಚನ ಗುಳಿಗೆ	0	0	6
ಪಿತ್ತಶಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0

ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ಶಾಂತಿಯಾಗುವುದು ಕಪ ಮಿಶ್ರಣ ಸೀಸೆ 1ಕ್ಕೆ 0 6 0

ಸಿಗುವ ಸ್ಥಳ ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

WANTED

4 YOUNG WORKING PARTNERS 4

Capable of investing each a sum of Rs 200, for a sound and novel indiginous industry to be started shortly

Please send communications to –

'K'
C/o, 'Swadeshabhimani'
Mangalore

HORLICKS



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು.

ಹೊಟ್ಟೆನೋವಿನಿಂದ ಹೊರಳಾಡಬೇಕಾಯಿತು

ಒಬ್ಬ ನರ್ಸಳ ಅನುಭವ

ರೋಗವನ್ನು ಗುಣಪಡಿಸುವ ವಿಧಾನವು ನರ್ಸುಗಳಿಗೆ ಇತರರಿಗಿಂತ ಚೆನ್ನಾಗಿ ಗೊತ್ತಿರುತ್ತದೆ. ಡಿ ಡಬ್ಲ್ಯು ಎಂಬ ನರ್ಸಳೊಬ್ಬಳು ಕಠಿಣ ಹೊಟ್ಟೆನೋವಿಗೆ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಿಂದ ಚಿರಗುಣ ಪಡೆದವಳು

'ನಾನು ಯೋಚಿಸಲಿಕ್ಕಾಗುವುದಕ್ಕಿಂತಲೂ ಹೆಚ್ಚು ವರ್ಷ ಹೊಟ್ಟೆನೋವಿನಿಂದ ನರಳಿದೆನು ಅದು ಸ್ಪೆಸ್ಮ ಎಂಬ ಕಠಿಣತರದ ಹೊಟ್ಟೆನೋವು ಎಂದು ನನ್ನ ತಾಯಿಯು ಹೇಳುತ್ತಿದ್ದಳು. ಹಲವು ಸಾರಿ ವಿಪರೀತ ಹೊಟ್ಟೆನೋವಿನಿಂದ ನೆಲದಲ್ಲಿ ಹೊರಳಾಡಿ ದೇಹವನ್ನು ಮುದುಡಿಕೊಳ್ಳುತ್ತಿದ್ದೆ ಇನ್ನೊಂದು ಕ್ಷಣ ದೇಹವನ್ನು ಅಲುಗಿಸದೆ ಬೀಳುತ್ತಿದ್ದೆ ಅಲುಗಿಸಿದರೆ ನೋವು ಎಲ್ಲಾದರೂ ತಿರುಗಿ ಹೆಚ್ಚಾಗಬಹುದೆಂದು ಹೆದರುತ್ತಿದ್ದೆ ವಿವಿಧ ಔಷಧಿಗಳನ್ನು ಸೇವಿಸಿ ನೋಡಿದೆ ಒಂದೂ ಸಫಲವಾಗಲಿಲ್ಲ. ಕಳೆದ ವರ್ಷ ನೋವು ವಿಪರೀತವಾದುದರಿಂದ ಶಸ್ತ್ರಕ್ರಿಯೆ ನಡೆಸಬೇಕಾಯಿತು.

"ನನ್ನ ತಂಗಿಯೊಬ್ಬಳು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಮನೆಯಲ್ಲಿ ಯಾವಾಗಲೂ ಇಟ್ಟುಕೊಳ್ಳುತ್ತಿದ್ದಳು ಅವಳ ಒತ್ತಾಯದ ಮೇಲೆ ಒಂದು ಡೋಜನ್ನು ತೆಗೆದುಕೊಂಡೆ ಒದ ಮೇಕ್ಸ್ ಮೆಕ್ಲೀನ್ ಪೌಡರು ಅಷ್ಟು ಗುಣಶಕ್ತಿಯುಳ್ಳದ್ದೆಂದು ನಾನ ನಂಬಿರಲಿಲ್ಲ. ಡೋಸನ್ನು ನುಂಗುತ್ತಲೇ ನನಗೆ ಶಂಪಾಯಿತು. ಮತ್ತೆ ಹೊಟ್ಟೆನೋವು ಮಾಯವಾಗುತ್ತಾ ಬಂತು

"ನನ್ನ ಕೃತಜ್ಞತೆಯನ್ನು ಉದ್ದವಾಗಿ ಹೇಳುವುದು ಅನಾವಶ್ಯಕವಾದರೂ ಇದು ಹೃತ್ಪೂರ್ವಕವಾದುದು ಹೊಟ್ಟೆನೋವಿನ ಕುರುಹನ್ನು ಕಂಡೆನೆಂದರೆ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಕಡೆಗೆ ಧಾವಿಸುತ್ತೇನೆ" ಹೀಗೆಂದು ಆ ನರ್ಸಳು ಬರೆದಿರುವಳು

ನಿಮ್ಮ ಹೊಟ್ಟೆನೋವು ಎಷ್ಟು ಕೆಟ್ಟದಿದೆ? ಮೇಲೆ ಹೇಳಿದ ನರ್ಸಳದಕ್ಕಿಂತ ನಿಮ್ಮದು ಕಠಿಣವಿದ್ದರೂ ನೀವದನ್ನು ಮೆಕ್ಲೀನ್ ಬ್ರೇಂಡ್ ಪೌಡರಿಂದ ಗುಣಪಡಿಸಿಕೊಳ್ಳಬಹುದು ಆದರೆ

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡಕೊಳ್ಳಿರಿ ಇಂತಹ ಸಮೂನೆಯ ಆಡಿಮ ದರದ ಪರಕೀಯ ಪುಡಿ ಒನ್ನು ಪಡೆದು ಮೋಸಹೋಗಬೇಡಿ ಇದು ಬಿಡಿಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ

S No 62.

ವಿಜ್ಞಾನ ವಿಚಾರ—ವಾಯುನಾವೆಗಳ ಚರಿತ್ರೆ

ದಿನೇ ದಿನೇ ಪ್ರಗತಿ ಹೊಂದುತ್ತಲಿರುವ ಈ ಆಧುನಿಕ ಪ್ರಪಂಚದ ಕೋರಿಕೆಗಳನ್ನು ಪೂರೈಸಲೋಸುಗ ಚಾಣಾಕ್ಷ ವಿಜ್ಞಾನಿಗಳು ಪ್ರಕೃತಿಯನ್ನು ಅಂಕೆಯಲ್ಲಿಟ್ಟುಕೊಳ್ಳುವ ಸಾಧನಗಳನ್ನು ಕಂಡುಹಿಡಿದರು. ಈ ವಿಜ್ಞಾನಿಗಳ ಅವಿಶ್ರಾಂತ ಶ್ರಮದ ಫಲವಾಗಿ ಅನೇಕಾನೇಕ ಅತ್ಯದ್ಭುತ ಯಂತ್ರೋಪಕರಣಗಳು ವಿಜ್ಞಾನ ತತ್ವಗಳು ಜನಿಸಿದವು. ನೆಲ, ಜಲ, ಆಕಾಶ ಮೊದಲಾದ ಪಂಚಭೂತಗಳು ಬಹಳ ಮಟ್ಟಿಗೆ ಮನುಷ್ಯನ ಹತೋಟಿಯಲ್ಲಿರುವಂತಾದುವು. ಈ ನವಶೋಧಗಳಲ್ಲಿ ಒಂದಾದ ಆಕಾಶ ವಿಮಾನಗಳು ಮಾನವ ಮಿದುಳಿನ ಶ್ರೇಷ್ಠತೆಯನ್ನು ತೋರುವಂತಹುಗಳಾದುವು. ಒಂದು ಕಾಲದಲ್ಲಿ ಮನುಷ್ಯನಿಗೆ ಅಂತ್ಯವಿಲ್ಲದ ಜಗತ್ತೆಂದು ಕಂಡ ಈ ಚಿಕ್ಕಪೃಥ್ವಿಯು ವಿಮಾನಗಳ ಪ್ರಚಾರವಾದ ಮೇಲೆ ಬಹಳೇ ಚಿಕ್ಕದೆಂದು ಭಾಸವಾಯಿತು. ಸಹಸ್ರಾರು ಸಿಶಾ ದಿನಗಳ ಪ್ರಯಾಣದಿಂದ ಕೆಲವೇ ಸಾವಿರ ಮೈಲುಗಳ ಪ್ರಯಾಣವನ್ನು ಪೂರೈಸಲಾಗದಿದ್ದುದು ಈಗ ಒಂದೇ ದಿನದಲ್ಲಿ ಸಾಧ್ಯವಾಗಿದೆ. ವಿಶ್ವವನ್ನು ಬೆರಳೆಣಿಕೆಯಿಂದ ಮಾಡಬಹುದಾದ ದಿನಗಳಲ್ಲಿ ಸುತ್ತಿ ಬರಬಹುದು. ವಿಮಾನಗಳನ್ನು ಕಂಡುಹಿಡಿದಷ್ಟಕ್ಕೆ ಮಾನವನ ಕಾಂಕ್ಷೆಯು ಪೂರೈಸದಂತಾಗದೆ ಆತನು ಇನ್ನೂ ಪರಿಪೂರ್ಣತೆಯನ್ನು ಹೊಂದಲೆಳಸಿದನು. ವಿಮಾನಗಳ ವಿಚಾರಮಾಡಿದ ನವ ಶೋಧಗಳಾದುವು. ಪಂಡಿತರು ತಮ್ಮ ವಿಜ್ಞಾನ ಭವನಗಳಲ್ಲಿ ಅಪಾಯಗಳನ್ನು ಕಡಿಮೆಮಾಡುವ ಸಾಧನಗಳನ್ನು ಮಾಡತೊಡಗಿ ಅದರಿಂದ ತಾವು ಮಾಡಿದ ಶೋಧಗಳು ಮಾನವ ಕೋಟಿಗೆ ಅತ್ಯಂತ ಪ್ರಯೋಜನಕಾರಿಯೂ, ನಿರಪಾಯವಾದುವುಗಳೂ ಆಗುವಂತೆ ಪರಿಶ್ರಮಿಸಿದರು. ವಿಜ್ಞಾನಿಗಳ ಈ ಶ್ರಮವು ಕಲ್ಪಿಸಲಸಾಧ್ಯವಾದ ಶ್ರೇಷ್ಠತೆಯ ಪರಮಾವಧಿಯನ್ನು ಮುಟ್ಟಿತು.

ಲಘುವಾದ ವನ್ನುಪಯೋಗಿಸಿ ನಾವೆಗಳನ್ನು ನೆಲದಿಂದ ಮೇಲಕ್ಕೆ ಎತ್ತುವ ಉಪಾಯಗಳು ವಿಮಾನಗಳ ಚರಿತ್ರೆಯ ಆದಿಯಲ್ಲಿ ಕಂಡು ಹಿಡಿದ ಸಾಧನಗಳು. ಹೈಡ್ರೋಜನ್ ಎಂಬ ವಾಯುವು ನಾವು ಉಸಿರಾಡುವ ಗಾಳಿಗಿಂತ ಎಷ್ಟೋ ಲಘುವಾದುದು. ಇದು ನೀರಿನಲ್ಲಿ ಆಕ್ಸಿಜನ್ ಎಂಬ ಇನ್ನೊಂದು ಜಲವಾಯುವಿನೊಂದಿಗೆ ಕೂಡಿರುತ್ತದೆ. ವೈಜ್ಞಾನಿಕ ರೀತಿಗಳಿಂದ ಈ ಹೈಡ್ರೋಜನ್ ಎಂಬ ಈ ಜಲಾಂಶುವನ್ನು ನೀರಿನಿಂದ ಬಿಂಗಡಿಸುವರು. ಕಿಂಚಿತ್ ಅಗ್ನಿ ಸಂಪರ್ಕವಾದರೆ ಈ ವಾಯುವು ಉರಿಯತೊಡಗುವುದು. ಅದರಲ್ಲಿಯೂ ಗುಡಾಣಗಳಲ್ಲಿ ತುಂಬಿ ಬಂಧುಮಾಡಲ್ಪಟ್ಟ ಈ ವಾಯುವಾದರೂ ಅಗ್ನಿ ಸಂಪರ್ಕ ಆಯಿತೆಂದರೆ ಸಿಡಿಲಿನಂತೆ ಸ್ಫೋಟನವಾಗಿ ಅದು ಉರಿಯತೊಡಗಿ ಭಯಂಕರ ಅನಾಹುತವನ್ನುಂಟುಮಾಡಬಲ್ಲದು. ಆದುದರಿಂದ ಇದರಿಂದ ಎಷ್ಟು ಪ್ರಯೋಜನವಿದೆಯೋ ಅಷ್ಟೆ ಅಪಾಯವಾದರೂ ಇದೆ ಎಂಬ ವಿಷಯವು ವಿಜ್ಞಾನಿಗಳ ಗಮನಕ್ಕೆ ಬಾರದೆ ಇರಲಿಲ್ಲ. ಕೆಲವು ವರ್ಷಗಳ ಮುಂಚೆ ಇವನ್ನು ಬಟ್ಟೆ ಚೀಲದಲ್ಲಿ ತುಂಬಿ ಬೆಲೂನ್ ಎಂಬ ಆಕಾಶ ಗುಡಾಣವನ್ನು ಮಾಡುತ್ತಿದ್ದರು. ಆದರೆ ಆ ಕಾಲದಲ್ಲಿ ಅದರ ಚಲನವನ್ನು ಹತೋಟಿಯಲ್ಲಿಡುವ ಸಾಧನಗಳು ಕಂಡು ಹಿಡಿಯಲ್ಪಟ್ಟಿಲ್ಲ. ಒಂದು ಸಲ ಮೇಲಕ್ಕೆ ಹೋದ ಬೆಲೂನು ಪುನಃ ಕೆಳಕ್ಕೆ ಬರಬೇಕಾಗಿದ್ದಲ್ಲಿ ಅದರೊಳಗಣ ವಾಯುವನ್ನು ಸ್ವಲ್ಪ ಸ್ವಲ್ಪವಾಗಿ ಹೊರಬಿಡಬೇಕು. ಆಗ ಒಳಗಿನ ವಾಯುವಿನ ಅಳತೆಯು ಕಡಿಮೆಯಾಗುತ್ತದೆ, ಅದರ ಜೊತೆಗೆ ವಾಯುವಿನ ಮೇಲಕ್ಕೆತ್ತುವ ಶಕ್ತಿಯಾದರೂ ಕಡಿಮೆಯಾಗಲೇಬೇಕು. ಈ ಶಕ್ತಿಯು ಕಡಿಮೆಯಾದಷ್ಟಕ್ಕೆ ಮೇಲಕ್ಕೆ ಹಾರಾಗುಣವು ಕ್ರಮವಾಗಿ ಕೆಳಕ್ಕಿಳಿಯುವುದು.

ವಿಜ್ಞಾನ ಕ್ಷೇತ್ರವು ವಿಕಾಸವಾಗುತ್ತಲೇ ಯಂತ್ರ ಶಿಲ್ಪಿಗಳು ಮೇಲಕ್ಕೇರಿದ ಈ ವಾಯು ಚೀಲಗಳನ್ನು ಇಚ್ಛಿತ ದಿಕ್ಕುಗಳಿಗೆ ಚಲಿಸುವ ಮತ್ತು ನಿಲ್ಲಿಸುವ ಯಂತ್ರೋಪ ಸಾಧನಗಳನ್ನು ಕಂಡು ಹಿಡಿದರು. ಬಟ್ಟೆ ಚೀಲಗಳ ಬದಲಾಗಿ ಚರ್ಮದ ಗುಡಾಣಗಳು ಯುಕ್ತವಾದುವುಗಳೆಂದು ತಿಳಿದು ಬಂತು. ಕಾರಣ ಚರ್ಮದ ಗುಡಾಣಗಳಿಂದ ವಾಯುವು ಹೊರಬರಲು ಕಾರಣವಿರುವುದಿಲ್ಲ. ಬಟ್ಟೆಯಂತೆ ಅವುಗಳಿಗೆ ರಂಧ್ರಗಳಿರುವುದಿಲ್ಲ. ಇದರಿಂದ ಅಗ್ನಿ ಸಂಪರ್ಕವಾಗುವ ಅಪಾಯವು ಕಡಿಮೆಯಾದಂತಾಯಿತು. ಇನ್ನೂ ಭದ್ರಗೊಳಿಸಲು ಈ ಹೈಡ್ರೋಜನ್ ತುಂಬಿದ ಚರ್ಮದ ಗುಡಾಣಗಳನ್ನು ಬಲವಾದ ಉಕ್ಕಿನ ಪಂಜರದಲ್ಲಿರಿಸಿ ಅದನ್ನು ಹೊರಗಿನಿಂದ ಅದಾಹ್ಯ (fire proof) ಅಥವಾ ಬೆಂಕಿಗೆ ಸುಡದಂತಾ ಒಂದು ಲೋಹ ವಸ್ತುವಿನಿಂದ ಮುಚ್ಚಿದ ಏರ್ಪಾಡುಗಳಾದುವು. ಇವುಗಳನ್ನು ದೊಡ್ಡ ದೊಡ್ಡ ನಾವೆಯಾಕೃತಿಯಲ್ಲಿ ರಚಿಸಿ ಅದಕ್ಕೆ ತಗಲಿಕೊಂಡೇ ಪ್ರಯಾಣಿಕರ ಕೊಠಡಿಗಳನ್ನೂ ಯಂತ್ರೋಪಕರಣ ಕೋಣೆಗಳನ್ನೂ ಜೋಡಿಸಿದರು. ಇಷ್ಟು ಮಾಡಿದರೆಂದರೆ ಒಂದು ವಾಯು ನಾವೆಯು ಸಂಪೂರ್ಣವಾದಂತಾಯಿತು. ಇನ್ನು ಈ ವಾಯು ನಾವೆಗಳನ್ನು ನೆಲದ ಮೇಲಾಗಲೀ ಇಳಿಸಲಾಗುವುದು ಅಸಾಧ್ಯವಾದುದರಿಂದ ಇದಕ್ಕೆ ಪ್ರತ್ಯೇಕವಾದ ಒಂದು ಸ್ಥಳವನ್ನು ಏರ್ಪಡಿಸಿರುತ್ತಾರೆ. ಈ ಸ್ಥಳಗಳು ಎತ್ತರವಾದ ಕಂಭದ ರೂಪದಲ್ಲಿದ್ದು ಬಾಕಿ ನಾವೆಗಳು ಬಂದು ಅವಕ್ಕೆ ತಗಲಿಸಲ್ಪಡುತ್ತವೆ. ಪ್ರಯಾಣಿಕರ ಕೋಣೆಗಳಿಗೆ ತಗುಲಿಕೊಂಡಿರುವ ಒಂದು ಅಂತಸ್ತಿನ ಮೂಲಕ ಪ್ರಯಾಣಿಕರೆಲ್ಲರೂ ವಿದ್ಯುತ್ ಏಣಿಗಳ ಮೂಲಕ ಕೆಳಗಿಳಿಸಲ್ಪಡುವರು.

ಇಂತಹ ವಾಯು ನಾವೆಗಳ ಖರ್ಚು ಮಿಲಿಯಾವಧಿ ಪವನುಗಳಾದರೂ ಮತ್ತು ಇವುಗಳ ರಚನೆಯಲ್ಲಿ ವಿಜ್ಞಾನ ಪರಿಪೂರ್ಣ ಶ್ರಮಬೇಕಾಗಿದ್ದರೂ, ಇವುಗಳು ಆಧುನಿಕ ಪ್ರಪಂಚದಲ್ಲಿ ತುಂಬಾ ಸಹಕಾರಿಯಾಗಿವೆ. ಹೆಚ್ಚಿನ ಯಾವದೊಂದೂ ಅಪಾಯವಿಲ್ಲದೆ ಈ ನಾವೆಗಳು ಮಹಾ ಮಹಾ ಸಾಗರಗಳನ್ನು ದಾಟಿ ಒಂದು ಭೂಖಂಡದಿಂದ ಇನ್ನೊಂದನ್ನು ಸೇರುವವು. ಇತರ ವಿಮಾನಗಳ ವೇಗದಲ್ಲಿಯೇ ಇದನ್ನಾದರೂ ಚಲಿಸುವರು. ಮೇಲಾಗಿ ಇದರಲ್ಲಿ ನೂರರಿಂದ ನೂರಇಪ್ಪತ್ತು ಮಂದಿಗಳನ್ನು ಏಕ ಕಾಲದಲ್ಲಿ ಒಯ್ಯಬಹುದು. ನೂರಿಪ್ಪತ್ತು ಜನರೆಂದರೆ ನಮ್ಮೂರಿನ ಐದು ಮೋಟಾರು ಬಸ್ಸುಗಳಷ್ಟು ಜನದಾದರೆಂದರೆ ಆ ವಾಯು ನಾವೆಯ ಅಗಾಧತೆಯು ಒಂದು ಸಾಧಾರಣ ಕಲ್ಪನೆಮಾಡಿಕೊಳ್ಳಬಹುದು.

ಈ ವಾಯುನಾವೆಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವರು. "ಏರ್‌ಶಿಪ್" "ಡಿರಿಜಿಬಲ್" ಎಂದು ಇಂಗ್ಲೆಂಡು ಅಮೇರಿಕದಲ್ಲಿ ತಯಾರಾದುವುಗಳಿಗೆ ಕರೆಯುತ್ತಾರೆ. "ಜೆಪ್ಲಿನ್" ಎಂದು ಜರ್ಮನ್ ವಾಯುನಾವೆಗಳು ಕರೆಯಲ್ಪಡುತ್ತವೆ. ಕೌಂಟ್ ಜೆಪ್ಲಿನ್ ಎಂಬ ಜರ್ಮನ್ ವಿಜ್ಞಾನಿಗಳು ಈ ಆಧುನಿಕ ತರದ ವಾಯುನಾವೆಗಳನ್ನು ರಚಿಸಿದರು. ಇವರ ಮಾದರಿ ಪ್ರಕಾರ ಜರ್ಮನಿಯಲ್ಲಿ ೧೯೦೦ರಲ್ಲಿ ಕಟ್ಟಿದ ದೊಡ್ಡ ವಾಯುನಾವೆಯನ್ನು ಇವರ ಹೆಸರಿನಿಂದ ಕರೆಯಲಾಯಿತು. ಈಗಲೂ ಅದು ಯುರೋಪು, ಅಮೇರಿಕಾ ಖಂಡಗಳೊಳಗೆ ಪ್ರಯಾಣಿಕರನ್ನು ಟಪಾಲನ್ನು ಒಯ್ಯುತ್ತದೆ. ಇದಕ್ಕಿಂತಲೂ ದೊಡ್ಡದಾಗಿ ಕಟ್ಟಿದ ಹಿಂಡನ್‌ಬರ್ಗ್ ಎಂಬ ಜರ್ಮನ್ ವಾಯು ನಾವೆಯು ಅನಾಹುತವನ್ನು ಈ ಪುರದೊಂದು ಕಡೆಯಲ್ಲಿ ಕೊಟ್ಟಿರುತ್ತದೆ.

ಶಾಸನಸಭೆಗಳು ಮದ್ಯದಂಗಡಿಗಳಲ್ಲವೇ?

ಹುಬ್ಬಳ್ಳಿಯಲ್ಲಿ ನಡೆದ ಗಾಂಧಿ ಸೇವಾ ಸಂಘದ ವಾರ್ಷಿಕೋತ್ಸವದ ಸಮಯದಲ್ಲಿ ಮಹಾತ್ಮಾ ಗಾಂಧಿಯವರಿಗೆ ಒರ್ವ ಸದಸ್ಯರು ಒಂದು ಪ್ರಶ್ನೆಯನ್ನು ಹಾಕಿದರು.

"ನೀವು ೧೯೨೦ರಲ್ಲಿದ್ದಂತೆ ಈಗಲೂ ಅಸಹಕಾರಿ ಚಳವಳಗಾರರೋ?"

"ಹೌದು, ನಿಜವಾಗಿಯೂ ಹೌದು, ನಾನು ಸಹಕಾರಕ್ಕಾಗಿ ಅಸಹಕಾರ ಮಾಡುವವನು, ಇದನ್ನು ಮಾತ್ರ ನೀವು ಮರೆಯಬಾರದು. ಆಗಲಾದರೂ, ದೇಶವು ಸಹಕಾರದಿಂದ ಮುಂದೊತ್ತುವುದಾದರೆ ನಾನೂ ಅದಕ್ಕೆ ಸೇರುವೆನೆಂದು ಹೇಳಿಯೇ ಇರುತ್ತೇನೆ. ಕೊಂಗ್ರೆಸ್ ಅಧಿಕಾರವನ್ನು ಸ್ವೀಕರಿಸಬೇಕೆಂದು ನಾನು ಹೇಳುತ್ತಿರುವುದು ಸಹಕಾರವನ್ನು ಅರ್ಪಿಸುವುದಕ್ಕಲ್ಲ. ಆದರೆ ಸಹಕಾರವನ್ನು ಕೇಳುವುದಕ್ಕಾಗಿರುತ್ತದೆ."

ಪ್ರಶ್ನೆ—ಇರಲಿ, ಕೊಂಗ್ರೆಸ್ಸಿಗೂ ನಿಮಗೂ ಯಾವ ಸಂಬಂಧವೇನು?

ಗಾಂಧಿಜಿ—ನಾನು ಈಗ ಕೊಂಗ್ರೆಸ್ಸಿನಲ್ಲಿಲ್ಲ. ಅದಕ್ಕೆ ಬೇರೆ ಕಾರಣಗಳಿವೆ. ನಾನು ಕೊಂಗ್ರೆಸ್ಸಿನಿಂದ ಹೊರಗೆ ಬಂದುದು ಕೊಂಗ್ರೆಸ್ಸನ್ನು ಸಹಾಯ ಮಾಡುವುದಕ್ಕಾಗಿರುತ್ತದೆ. ಕೊಂಗ್ರೆಸ್ಸು ಸತ್ಯಾಗ್ರಹ ಮತ್ತು ಅಹಿಂಸಾತತ್ವಗಳಿಗೆ ಪ್ರತಿಜ್ಞಾಬದ್ಧವಾಗಿರುವ ತನಕ ನಾನು ನನ್ನ ತನುಮನಗಳಿಂದ ಅದನ್ನು ಸೇವೆ ಮಾಡುತ್ತೇನೆ.

ಪ್ರಶ್ನೆ—ಶಾಸನ ಸಭೆಗಳಲ್ಲಿರುವ ಮೋಹದಾಯಕ ಗುಣವಾವುದು?

ಗಾಂಧಿಜಿ—ಈ ಶಾಸನ ಸಭೆಗಳ ಸದಸ್ಯರಿಗೆ, ಅಧಿಕಾರ ಇವುಗಳೆಲ್ಲಾ ಮೋಹಗೊಳಿಸುವುವಂತಹುದೆಂದು ನಾನೆನ್ನುದಿಲ್ಲ. ಅವುಗಳು ಮದ್ಯದಂಗಡಿಗಳಂತೆ ಆಕರ್ಷಣ ಶಕ್ತಿಯುಳ್ಳವಲ್ಲ. ಕೆಲಸಗಾರರಿಗೂ ಸ್ವಾರ್ಥಪರ ಜನರಿಗೂ ಈ ಅಧಿಕಾರ ಶಾಸನ ಸಭೆಗಳು ಬಹುತೇಕ ತರದ ಸಂದರ್ಭಗಳನ್ನು ಕಲ್ಪಿಸುತ್ತವೆ. ಆದರೆ ಕೊಂಗ್ರೆಸ್ ಮೆಂಬರರಾರೂ ಈ ಅಲ್ಪ ಹಿತವನ್ನು ಆಶಿಸಿ ಅದಕ್ಕೆ ಬಲಿ ಬೀಳುವವರಲ್ಲ. ದೇಶ ಹಿತದ ಕಾರ್ಯಕ್ರಮದೆಡೆಗೆ ಕೊಂಗ್ರೆಸು ಸರಕಾರದ ಗಮನವನ್ನು ಬಲಾತ್ಕಾರದಿಂದ ಎಳೆಯಲೆಳಸುತ್ತವೆ. ಅಲ್ಲಿ ಹೋಗುವ ಕೊಂಗ್ರೆಸಿನವರು ಕರ್ತವ್ಯ ದೃಷ್ಟಿಯಿಂದ ಹೋಗುವವರಿದ್ದಾರೆ. ಉಕ್ಕಿನಂತಹ ನಿರ್ಧಾರ ಶಕ್ತಿಯುಳ್ಳ ಇಂತಹರೇ ಶಾಸನ ಸಭೆಗಳನ್ನು ಪ್ರವೇಶಿಸಲು ಯೋಗ್ಯರು.

ಲಂಡನಿನಲ್ಲಿರುವ ಭಾರತೀಯರ ಮೆರವಣಿಗೆ.

ಲಂಡನ್ ನಗರದಲ್ಲಿ ಮೇ ದಿನಾಚರಣೆಯು ಅತ್ಯಪೂರ್ವ ವಿಜೃಂಭಣೆಯಿಂದಲೂ, ಅತ್ಯಂತ ಶಾಂತ ರೀತಿಯಿಂದಲೂ ಜರುಗಿಸಲ್ಪಟ್ಟಿತು. ಆ ದಿನದ ಮೆರವಣಿಗೆಗಳಲ್ಲಿ ಭಾರತವು ಬಹಳೇ ಚೆನ್ನಾಗಿ ಪ್ರಾತಿನಿಧಿಸಲ್ಪಟ್ಟಿತು. ಲಂಡನಿನಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಒಟ್ಟು ಸೇರಿ ಪಂಡಿತ್ ಜವಾಹರಲಾಲ್ ನೆಹರುಗಳ ದೊಡ್ಡ ಭಾವ-ಚಿತ್ರದೊಡನೆ ಲಂಡನ್ ನಗರದ ಮಾರ್ಗಗಳಲ್ಲಿ ಮೆರವಣಿಗೆ ಬಂದರು. ಸಂಯುಕ್ತ ಸಂಸ್ಥಾನದ ಸೋಶಲಿಸ್ಟ್ ಮುಖಂಡರಾದ ಶ್ರೀ ಜಯ ಪ್ರಕಾಶ ನಾರಾಯಣರವರ ಭಾವಚಿತ್ರವನ್ನೂ ಮೆರವಣಿಗೆಗಾರರು ಹಿಡಕೊಂಡಿದ್ದರು. ಆ ವಿದ್ಯಾರ್ಥಿಗಳು ಹಿಡಕೊಂಡ ಧ್ವಜಗಳಲ್ಲಿ "ಭಾರತೀಯ ವಿದ್ಯಾರ್ಥಿಗಳು ಪರಕೀಯರ ದಬ್ಬಾಳಿಕೆಯನ್ನು ಧಿಕ್ಕರಿಸುತ್ತಾರೆ" ಎಂದು ಬರೆದಿತ್ತು.

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ".

ಈ ವಿಷಧಿವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಟ್ಟಿದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. [illegible] 24 ತಾಸುಗಳಲ್ಲಿ [illegible] 10 ನಿಮಿಷಗಳಲ್ಲಿ [illegible] 10 ದಿನಗಳ ಔಷಧಿ [illegible] ಮತ್ತು 30 ದಿನಗಳ ಔಷಧಿ [illegible]

C L Nathawala,
Fala e Road BARODA

,An ideal young progressive Life Office of India to Insure with or represent

The Commonwealth Assurance Co., LTD., POONA.

TRIENNIAL BONUS! ON ENDOWMENT Rs. 37½. TRIENNIAL BONUS! ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to—

Messrs. GAWANKAR & SONS,
Chief Agents for Mysore state, Coorg, Ceded Districts & S Kanara
AHMED BUILDINGS, CHICKPET, BANGALORE CITY.
Branches:—Bombay, Calcutta, Delhi, Madras & Nagpur.
Local Representatives—THE MODERN TRADING CO, Mangalore.

ಮಕ್ಕಳಿಗೆ ಕತ್ತೆಹಾಲು

ನಾವು ಕತ್ತೆಗಳಿಂದ ಮನಾತ್ರಕ್ಕೆ ಹೀನವಾಗಿ ಅಭಿಪ್ರಾಯಪಡುವುದು ಸ್ವಾಭಾವಿಕ. ಮೃಗಳಲ್ಲಿ ತನಕ್ಕೆ ಹೆಸರುಹೋದ ಈ ಪ್ರಾಣಿಯು ಅಲ್ಪತ್ವದ ಮೂರ್ತಿ ಎಂದರೂ ಹೆಚ್ಚಾಗದು. ಅಶುಚಿಪ್ರಿಯನಾದುದಾದರೂ ಕತ್ತೆಯು ಪಶುಗಳಲ್ಲಿ ಬಹಳ ಆರೋಗ್ಯವಾಗಿರುವ ಪ್ರಾಣಿಯೆಂದೂ, ಯಾವುದೊಂದೂ ತರದ ರೋಗರುಜಿಗಳೂ [illegible] ವೆಂದೂ ಪ್ರಾಣಿಶಾಸ್ತ್ರ ಪಂಡಿತರು ಅಭಿಪ್ರಾಯಪಡುತ್ತಾರೆ. ಇದರಿಂದಾಗಿ ಕತ್ತೆಯು ಅದ್ಭುತ ಸಹನಾಶಕ್ತಿಯುಳ್ಳ ಪ್ರಾಣಿಯಾಗಿದೆ. ಇದು ಕುದುರೆಗಿಂತಲೂ ಹೆಚ್ಚಿನ ಪರಿಶ್ರಮದ ಕೆಲಸವನ್ನು ಮಾಡುತ್ತದೆ. ಬೆನ್ನು ಮುರಿಯುವ ಕಠಿಣ ಕಷ್ಟ ಇದು ಹೊರೆಯನ್ನು ಹೊತ್ತುಕೊಂಡು ಹೋಗಬಲ್ಲುದಂತೆ. ಇದರ ಮಾಂಸಖಂಡಗಳು ಪ್ರಕೃತಿಯಿಂದಾಗಿ ಅಖಂಡ ಶಕ್ತಿಯುಳ್ಳವುಗಳಾಗಿದ್ದು ಕಮ್ಮಿ ಆಹಾರದಿಂದ ಪುಷ್ಟಿಹೊಂದುವಂತಹವುಗಳಾಗಿದ್ದು ಧೃಢವಾದ ಕತ್ತೆಯು ಹಲವು ದಿವಸಗಳ ತನಕ ಆಹಾರವಿಲ್ಲದೆ ಜೀವಿಸಬಹುದು. ಕತ್ತೆಯು ಶುದ್ಧ ಸಸ್ಯಾಹಾರ ಪ್ರಾಣಿಯಾಗಿರುತ್ತದೆ ಈ ಮೊದ್ದು ಜಂತುವಿನ ಹಾಲು ಆರೋಗ್ಯ ಪುಷ್ಟಿಕರ ಪದಾರ್ಥಗಳಿಂದ ಕೂಡಿದ್ದಾಗಿದೆ. ಕ್ಷಯರೋಗಿಗಳಿಗೂ ಚಿಕ್ಕ ಚಿಕ್ಕ ಮಕ್ಕಳ ವ್ಯಾಧಿಗಳಿಗೂ ಕತ್ತೆ ಹಾಲು ಬಹಳ ಪ್ರಯೋಜನಕಾರಿಯಾಗಿದೆಯೆಂದು ವೈದ್ಯರು ಕಂಡುಹಿಡಿದಿರುತ್ತಾರೆ ಅರಬೀಯರು ಹೆಚ್ಚಾಗಿ ಕತ್ತೆಹಾಲನ್ನು ಉಪಯೋಗಿಸುವುದರಿಂದ ಅವರೀಗ ಸಾಧಾರಣವಾಗಿ ಬಲಶಾಲಿ ಜನಾಂಗವಾಗಿ ಎಣಿಸಲ್ಪಟ್ಟಿರುತ್ತಾರೆ.

ಪ್ರಪಂಚದಲ್ಲಿ ಮಕ್ಕಳು ಹುಟ್ಟುವ ಸಮಯವು ಹೆಚ್ಚಾಗಿ ಬೆಳಿಗ್ಗೆ ಹನ್ನೊಂದು ಘಂಟೆಯ ಸಮಯದ ಸುಮಾರಿಗೆಂದು ಜರ್ಮನಿಯ ಆರೋಗ್ಯವಿಚಾರದ ಪತ್ರಿಕೆಯೊಂದು ಪ್ರಕಟಿಸುತ್ತದೆ ಈ ಪ್ರಕಟನೆ ಕೊಟ್ಟವರು ಸುಮಾರು ೧೨೨ ಸಾವಿರ ಮಕ್ಕಳ ಜನನಕಾಲವನ್ನು ತಿಳಿಕೊಂಡಿರುವರಂತೆ

ಕನ್ನಡ-ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳಲ್ಲದರಲ್ಲೂ ಸಾವಿರಗಟ್ಟಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಿಕ ವ್ಯಾಪಾರವು ಯಾಕೋಹಾಮಾ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿದೆ? ಅಲ್ಲಿನ ವೇಶ್ಯೆಯರುಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು,ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನ ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ ಮದಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು

ಈ ಪುಸ್ತಕವನ್ನು ಓದಬೇಕು! ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು?
ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ: ೨೦೦ ಪುಟಗಳು.

ಬೆಲೆ ರೂ. ೧ ೮ ೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್ ಸ್ಟ್ರೀಟ್ ಮಾರ್ಟ್‌ನಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ. (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ

ಚಿಂತಾರತ್ನ

ಇದರಲ್ಲಿ-೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ ೩ ಕಾಷ್ಟಿಕ್ ಸೋಡಾ ತಯಾರಿಸುವುದು ೪ ಬಿಸ್‌ಕ್ಯೂಟ್ ತಯಾರಿಸುವುದು ೫ ದಶಾಂಗ ತಯಾರ ಮಾಡುವುದು ೬ ಪೆಪ್ಪರಮೆಂಟು ಮಾಡುವುದು ೭ ದೂಪದ ಛಟ್ಟಿ ಮಾಡುವುದು ೮ ಭಂಗಾರ ಮಾಡುವ್ದು ೯ ಬೆಳ್ಳಿ ತಯಾರ ಮಾಡುವುದು ೧೦ ಜರ್ಮನ್ ಶಿಲ್ವರ್ ಧಾತುಮಾಡುವದು ೧೧ ಊದಿನ ಕಡ್ಡಿ ತಯಾರಮಾಡುವುದು ೧೨ ತಗಡಿನಪಾಟಿ ತಯ್ಯಾರಮಾಡುವುದು ೧೩ ಕುಂಕುಮವನ್ನು ತಯಾರಿಸುವುದು ೧೪ ಹಸಿಕುಂಕುಮವನ್ನು ತಯಾರಿಸುವುದು ೧೫ ಗೋದಿಸರಿ ಕೆಡದಂತೆ ಮಾಡುವುದು ೧೬ ಬ್ಯುಕ್ಕಿಟ್ಟು ಮಾಡುವುದು. ೧೭ ಪೂನಸರಿ ಯಾವಾಗಲೂ ನೀರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಮಾನುಗಳು ೧೯ ಭರ್ಪ ತಯಾರಮಾಡುವುದು ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು ೨೧ ಕಾಗದವನ್ನು ಮಾಡುವುದು, ೨೨ ಮೆಂಥೇಲ ಎಣ್ಣೆ ತಯಾರಿಸುವುದು, ೨೩ ಕನ್ನಡಿಯ ಮೇಲೆ ಬರೆಯುವುದು ೨೪ ದಂತಮಂಜನ ಮಾಡುವುದು ೨೫ ರಕ್ತ ಶುದ್ಧಿ ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು ೨೭ ಕುಚಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು ೨೯ ಶಿಶ್ನವೃದ್ಧಿಗೆ ಔಷಧ ೩೦ ಹರಟತ್ತು ಮಾಡುವುದು, ೩೧ ಚಳಿ-ಜ್ವರದ ಗುಳಿಗೆ ಮಾಡುವುದು. ೩೨ ಓಟಪಾಲಿಸ ಮಾಡುವುದು ೩೩ ಮನ್ನೆ ಪಜಾರ, ಅಂಗಡಿ ಮೊದಲಾದವುಗಳಿಗೆ ಗಿಳ್ಳಲಿ ಹತ್ತದಂತೆ ಮಾಡುವುದು ೩೪ ಜುರುಕು ಹುಚ್ಚು ಮುಲಾಮು ೩೫ ನಾಸೀವೃದಿಮಾಡುವುದು ಇತ್ಯಾದಿ ೧೬೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ. (ವಿ. ಪಿ. ಖರ್ಚು ಬೇರೆ)

ವಿಳಾಸ.-ಎಸ್. ಸಿ ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ-೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿ ಜಾತಿ ಸ್ತ್ರೀ ೮ ಲಕ್ಷಣ ೯ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲಪಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೬೦ ವಿಷಯಗಳು ಇರುತ್ತವೆ,

ಬೆಲೆ ಒಂದು ರೂಪಾಯಿ. (ವಿ ಪಿ ಖರ್ಚು ಬೇರೆ)

ವಿಳಾಸ.-ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

- ಇದು .—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯಗಳಿಂದೊಡಗೂಡಿದ ಗ್ರಂಥ

ಇದರಲ್ಲಿ ವೈದ್ಯಶಾಸ್ತ್ರ [illegible] ವಶ್ಯಭಾಗ ಶಕ ನಭಂಗ ಶೃಂಗಾರಿಕ ವಿಷಯ ಕಾಯದೇಭಂಗ ಇಂದಜಾಲ ಮಹೇ ದ ಜಾಲ, ಯಕ್ಷಿಣಿ, ತಂತ್ರ, ಮ ತ ಯಂತ್ರ ವಶೀಕರಣ, ಇತ್ಯಾದಿ ಅನೇಕ ಮಹ ವಿದ್ಯಗಳ ಇರತ್ತವೆ ಎಲ್ಲ ವಿಷಯಗಳನ್ನು ತಿಳಿಸಲು ಇಲ್ಲಿ ಸ್ಥಳ ಸಾಲದು. ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು.

ಇಂಥ ಅಮೌಲ್ಯ ಗ್ರಂಥದ ಬೆಲೆ ೧-೦-೦

ವಿಳಾಸ -ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers —

S C Salimath & Sons,
GADAG.

ಜನಾಂಗಮಂಡಳದಿಂದ ಜಗತ್ತಿನ ಶಾಂತಿರಕ್ಷಣೆಯಾಗುವುದೇ?

ಇಂಗ್ಲಂಡು ಮನಸ್ಸು ಮಾಡಿದರೆ, ಜಗತ್ತಿನ ಶಾಂತಿರಕ್ಷಣೆಯನ್ನು ಮಾಡಬಹುದು ಅದು ಜರ್ಮನಿಯ ಕಡೆಗೆ ಗಮನ ಕೊಡಬೇಕು. ಜರ್ಮನಿಯು ಇಂದಿನ ಒಂದು ಭಯಂಕರ ಸಮಸ್ಯೆಯಾಗಿ ನಿಂತಿದೆ. ಅದು ಯುದ್ಧ ಸಿದ್ಧತೆಯನ್ನು ಮಾಡುತ್ತಿದೆ. ಅದರ ಈಗಿನ ಈ ವರ್ತನೆಯು ಬದಲಾಗುವಂತೆ, ಬ್ರಿಟನು ಸಾಧಿಸಬಹುದು. ಆ ಕುರಿತು ಬ್ರಿಟನಿನ ಪ್ರಯತ್ನಗಳು ನಿಷ್ಫಲವಾಗಲಾರವು. ಕಳೆದ ಮಹಾಯುದ್ಧದಂದಿನಿಂದ, ಜರ್ಮನಿಗೆ ಕೆಲವು ಅನ್ಯಾಯಗಳು ಉಂಟಾಗಿವೆ. ಅದರಿಂದ ಅವರಲ್ಲಿ ಒಂದು ತರದ ರೋಷವು ಉಂಟಾಗಿರುತ್ತದೆ. ಒಳ್ಳೇ ಸದುಪಾಯಗಳಿಂದ ಜರ್ಮನಿಯ ಈ ಸ್ಥಿತಿಯನ್ನು ಸುಧಾರಿಸಿ, ಅವರೊಡನೆ ನಯನುಡಿಗಳನ್ನಾಡಿದರೆ ಆಗ್ಗೆ ಜಗತ್ತಿನಲ್ಲಿ ಶಾಂತಿಸ್ಥಾಪನೆಗೆ ಒಂದು ಮಾರ್ಗವಿರಬಹುದು. ಜರ್ಮನಿಗೆ ಕಳೆದ ಯುದ್ಧದ ನಂತರ ಕೀಳು ತರಗತಿಯು ಬಂದುಬಿಟ್ಟಿದೆ ಅದರ ಆ ಸ್ಥಿತಿಯು ಬದಲಾಗುವಂತೆ ಇತರ ಜನಾಂಗಗಳು ಜರ್ಮನಿಯೊಡನೆ ಸಹಕರಿಸುವುದಾದರೆ, ಜರ್ಮನಿಯು ಚಡಪಡಿಗಳು ನಿಲ್ಲಬಹುದು,— ಅಂದರೆ ಇನ್ನೊಂದು ಮಹಾ ಯುದ್ಧವನ್ನು ತಪ್ಪಿಸಬಹುದು ಬದಲಾಗಿ, ಐರೋಪ್ಯದ ಪ್ರಭುತ್ವದ ಜನಾಂಗಗಳು, ಯುದ್ಧ ಸನ್ನತರಾಗಿ, ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದಾವೆ. ಬ್ರಿಟನ್ನು ಮಹಾ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದೆ ಜಗತ್ತಿನ ಶಾಂತಿರಕ್ಷಣೆಯಾಗಬೇಕಾದರೆ, ಮಹಾ ಪ್ರಭುತ್ವದ ಜನಾಂಗಗಳು ಮುಖ್ಯವಾಗಿ,ಬ್ರಿಟನ, ಈಗಿನ ಯುದ್ಧ ಸಿದ್ಧತೆ ಮನೋವರ್ತನೆಯು ಬದಲಾಗಿ, ಎಲ್ಲಾ ಜನಾಂಗಗಳಿಗೆ, ಕಾರಣ ಸಾಮಗ್ರಿ ಸರಿಯಾಗಿ ದೊರಕುವ ಏರ್ಪಾಡಾಗುವಂತೆ, ಜನಾಂಗ ಮಂಡಳದಲ್ಲಿ ಕಾರ್ಯ ಪ್ರಾರಂಭವಾಗಬೇಕು ಈ ಮಾರ್ಗವನ್ನು ಅನುಸರಿಸದಿದ್ದರೆ, ಆಗ ಇನ್ನೊಂದು ಮಹಾ ಯುದ್ಧವು ಬೇಗನೆ ನಡೆಯದಿಯುರದ

ಸ್ಪೈಯಿನಿನಲ್ಲಿ ಇಟೆಲಿಯ ಸೋಲು

ಶಟಸ್ಥ ಭಾವ ಸಮಿತಿಯು ರಚನೆಯಾಗಿದ್ದರೂ, ಇಟೆಲಿಯು ಅದರ ಸದಸ್ಯರಾಗಿದ್ದರೂ ಯಾರೂ ಸ್ಪೈನಿನ ದಂಗೆಯಲ್ಲಿ ಕೈಹಾಕಬಾರದಾಗಿ ಕರಾರುಗಳು ನಡೆದಿದ್ದರೂ ಸ್ಪೈನಿನ ನೆಸಿಯ ಸ್ಥರಿಗೆ ಸಹಾನುಭೂತಿಯಾಗಿ ದಾರಿಗಳ ಇಟೇಲಿಯಾನ ಸೈನ್ಯ ಸಂಗ್ರಹ,ಯುದ್ಧ ಸಾಮುಗ್ರಿ ಇತ್ಯಾದಿಗಳು ಹೋಗಿದ್ದವು ಇಟೇಲಿಯಾನ ಸೈನಿಕನ ನಿಜವಾದ ಸತ್ವ ಪರೀಕ್ಷೆಯು ಅಲ್ಲಿ ನಡೆದುಬಿಟ್ಟಿತು ಇಟೇಲಿಯನ ಸೈನ್ಯ ತುಂಡಳವು ಸ್ಪೈಯಿನಿನ ಸರಕಾರ ಸೈನ್ಯ ವಿಂಗಡದ ಕೈಗಳಲ್ಲಿ ಭಯಂಕರ ಸೋಲನ್ನು ಅನುಭವಿಸಿತು ಸಾವಿರಾರು ಮಂದಿ ಇಟೇಲಿಯಾನ ಸೈನಿಕರು ಸೆರೆಹಿಡಿಯಲ್ಪಟ್ಟಿರುವರು ಇದೇ ತರದ ಸ್ಥಿತಿಯು ಇಟೇಲಿಗೆ ಎಬಿಸೀನಿಯಾದಲ್ಲೂ ದೊರಕಲಿಲ್ಲವೆ? ಆದರೆ ವಿಷಕರ ವಾಯು, ವಿಮಾನಗಳಿಂದ ಬೋಂಬುಗಳ ಮೂಲಕ ಹಾವಳಿ ಇವೇ ತರದ ಅಸಂಖ್ಯ ತರದ ಕ್ರೂರ ಕೃತ್ಯಗಳನ್ನು ನಡೆಯಿಸಿ, ವೀರ ಹಬಸಿಯರನ್ನು ಅವರು ಅಂದು ಸದೆ ಬಡೆದರು. ಅದೇ ತರದ ಪರಿಸ್ಥಿತಿಯು, ಇಂದು ಇಟೇಲಿಗೆ ಸ್ಪೈಯಿನಿನಲ್ಲಿ ದೊರಕಿದುದರಿಂದ, ಪರಿಣಾಮಗಳು ಅದೇ ರೀತಿ ನಡೆಯುವವೋ ಎಂಬ ಭೀತಿಯು ಉಂಟಾಗಿದೆ

ಮುಸಲೀನಿಗೆ ಸ್ಪೈಯಿನಿನಲ್ಲಿ, ಫ್ರಾನ್ಸಿನಲ್ಲಿ ಭಯಂಕರ ಅವಮಾನಗಳು ನಡೆದಿವೆ. ಆತನ ಘನಸ್ಥಿಕೆಯು ಬಯಲಿಗೆ ಇಳಿಯುವ ಸಂದರ್ಭಗಳು ಬಂದೊದಗಿವೆ. ಫ್ರಾನ್ಸಿನಲ್ಲಿ ಗುಪ್ತ ಪೋಲೀಸರು ಆತನ ವೇಶ್ಯೆಯೊಬ್ಬಳ ಮೇಲೆ ದಸ್ತಗಿರಿ ನಡೆಸಿರುವರು ಸ್ಪೈಯಿನಿನಲ್ಲಿ ಆತನ ಪ್ರೀತಿಯ ಸೈನಿಕರಿಗೆ ಸೋಲು. ಇದರಿಂದ ಕೆಣಕಲ್ಪಟ್ಟ ಸಿಂಹದಂತೆ ಮುಸಲೀನಿಯು, ಈಗ ರೋಷಾನ್ವಿತನಾಗಿ, ಭಯಂಕರ ಅನರ್ಥಗಳನ್ನು ನಡೆಯಿಸಲು ಹಿಂಜರಿಯನು.

ಸ್ಪೈಯಿನಿನಲ್ಲಿ ಇಟೇಲಿಯಾನ ಸೈನಿಕರಿಗೆ ಒಂದು ಬುದ್ಧಿ ಪಾಠವಾಗಿರುತ್ತದೆ. ಜನರಲ್ ಫ್ರೆಂಕೋನು ಏನು ಮಾಡುತ್ತಿರುವನು? ಮುಸಲೀನಿಯಿಂದ ತನಗೇನು ಉಪಕಾರವಿದೆ? ಫ್ರೆಂಕೊನು ಸ್ಪೈಯಿನಿನ ಸ್ವಾತಂತ್ರ್ಯ ಧ್ವಂಸ ಮಾಡಲು ಪ್ರಯತ್ನ ಪಡುತ್ತಿದ್ದಾನೆ. ಮುಸಲೀನಿಯು, ತಮ್ಮ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಧ್ವಂಸ ಮಾಡಿರುವನು? ಈ ತರದ ಬುದ್ಧಿ ಹೊಳೆಯುವಿಕೆಯು ಅವರಲ್ಲಾಗಿವೆ. ಆದರೆ, ಮುಸಲೀನಿ ಈಗ ಮಹಾ ಪ್ರಬಲನಾಗಿರುವನು ಅವನ ಎದುರು ಯಾರು ತಾನೆ ನಿಲ್ಲಬಲ್ಲರು?

ಪೆಸಿಯುಸ್ತ ಏಕಾಧಿಪತಿಗಳು ಹಿಟ್ಲರ್ ಮುಸಲೀನಿಯು ಇತ್ಯಾದಿಯರ ಮಹತ್ವಾಕಾಂಕ್ಷೆಗಳೆ, ಇಂದು ಜಗತ್ತಿನಲ್ಲಿ ನಡೆಯುವ ಅನೇಕ ಅನರ್ಥಗಳಿಗೆ ಮುಖ್ಯ ಕಾರಣಗಳು ಜರ್ಮನಿಯ ಜನರಿಗೆ, ಇಟೇಲಿಯಾನರಿಗೆ ನಿಜವಾಗಿಯೂ ಯುದ್ಧ ಬೇಡವಾಗಿದ್ದರೂ, ಶಾಂತರೀತಿಯಲ್ಲಿ ತಮ್ಮ ಸುಧಾರಣೆಯನ್ನು ಯತ್ನಿಸುವುದು, ಅವರ ಸಂಕಲ್ಪವಾಗಿದ್ದರೂ, ಅವರ ಮಾತು ಕೇಳುವವರಾರು? ಹಿಟ್ಲರನು ಯುದ್ಧವಾಗಬೇಕೆಂದು ಹೇಳಿದರೆ ತೀರಿತು ಯುದ್ಧ ನಡೆದೇಬಿಡುವುದು

ಜರ್ಮನಿ-ಇಟೆಲಿ ಒಪ್ಪಂದದ ಕುರಿತು- ಅನೇಕ ವಿಷಯಗಳಲ್ಲಿ ಇಟೆಲಿಗೂ ಜರ್ಮನಿಗೂ ವಿರೋಧಭಾವಗಳಿವೆ, ವಿರೋಧ ಹಿತಗಳಿವೆ ಆದರೆ ಕೆಲವು ವಿಚಿತ್ರ ಸಂಘಟನೆಗಳಿಂದ, ಅವರು ಕೈಜೋಡಿಸುವಂತಾಯಿತು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ, ಜರ್ಮನಿ-ಇಟೆಲಿ ಒಪ್ಪಂದವು ಶಾಸ್ವತವಲ್ಲ, ಅದು ಕಳಚಿಬೀಳಬಹುದೆಂಬ ಭೀತಿಯು ಉಂಟಾಗಿದೆ

ಅಂದು ಇಟೇಲಿಯು ಎಬಿಸೀನಿಯಾವನ್ನು ನುಂಗುತ್ತಿರುವಾಗ, ಇಂಗ್ಲಾಂಡು ಇತ್ಯಾದಿ ದೇಶಗಳು ಸುಮ್ಮನೆ ಕುಳಿತಿರುವುದರಿಂದ, ಎಬಿಸೀನಿಯಾವ ರಕ್ತಪಾನ ಮಾಡಿದ ಮುಸಲೀನಿಯು ಇನ್ನೂ ಮೇಲಕ್ಕೆ ಹೋಗುವವನಾದನು ಇಟೇಲಿಯು ಮಹಾಪ್ರಭುತ್ವವನ್ನು ವಹಿಸುವ ಪ್ರಯತ್ನವನ್ನು ಮಾಡುವುದಾಯಿತು ಅದರಿಂದಲೆ ಐರೋಪ್ಯದ ಶಾಂತಿ ಭಂಗವಾಯಿತು.

ಈಗ ಇಟೇಲಿಯು ಸ್ಪೈಯಿನಿನಲ್ಲಿ ತನ್ನ ಪ್ರಬಲತೆಯನ್ನು ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆ ಆದರೆ ಅದರ ಈ ಕಾರ್ಯಕ್ರಮವು ಸುಲಭಸಾಧ್ಯವಾಗಿ ನಡೆಯಲಿಲ್ಲ ಇಟೇಲಿಯ ಬಲತೆಯು ಸ್ಪೈಯಿನಿನಲ್ಲಿ ಸ್ಥಾಪನೆಯಾಗಲು ಫ್ರಾನ್ಸು ಬಿಡುವುದೆ? ಅದರಿಂದ ಫ್ರಾನ್ಸಿಗೆ ಅನೇಕ ಹಾನಿಗಳಿವೆ ಹೀಗಾಗಿ ಇಟೇಲಿಯು ಸ್ಪೈನಿನಲ್ಲಿ ನಡೆಯಿಸುವ ಸಂಗ್ರಾಮ ಚಟುವಟಿಕೆಗಳನ್ನು ನಿಲ್ಲಿಸದಿದ್ದರೆ, ಇಟೇಲಿಯ ಮೇಲೆ ಕೈಮಾಡಬೇಕಾಗಿ ಬರುವುದು ಎಂದು, ಫ್ರಾನ್ಸು ಎಚ್ಚರಿಕೆ ಕೊಟ್ಟಿರುತ್ತದೆ

ಜರ್ಮನಿಯು ಸ್ಪೈಯಿನಿನ ಕಲಹದಲ್ಲಿ ಕೈ ಹಾಕಿದ್ದರೂ, ಅದರಿಂದ ತಮಗೆ ಹೆಚ್ಚು ಉಪಕಾರವಾಗಲಾರದೆಂದು ತಿಳಿದುಕೊಂಡಿದೆ ಅದೂ ಇಟೇಲಿಯಿಂದ ದೂರ ಸರಿಯಲಾರಂಭಿಸಿದೆ ಅದರಿಂದ ಜರ್ಮನಿಯಿಂದ ಸೈನಿಕರು ಯಾ ಯುದ್ಧ ಸಾಮುಗ್ರಿಗಳು, ಜನರಲ್ ಫ್ರೆಂಕೋನಿಗೆ ಹೋಗುವುದು ಈಗ ಸಂಪೂರ್ಣವಾಗಿ ನಿಂತುಬಿಟ್ಟಿದೆ. ಇಟೆಲಿಯ ಮಿತ್ರ ಜನಾಂಗಗಳು, ಅದರಿಂದ ದೂರ ಸರಿಯುತ್ತಿವೆ.

ಆದರೆ ಜರ್ಮನಿಯು ಜೆಕೊಸ್ಲೊವೇಕಿಯದಲ್ಲಿ ತನ್ನ ಸಾಹಸವನ್ನು ಪ್ರಾರಂಭಮಾಡಬಹುದು. ಈ ಸ್ವಾತಂತ್ರ್ಯ ದೇಶವು ಇತ್ತಿಚೆಗೆ ಕಲ್ಲೂ ಏಕಾಧಿಪತಿಗಳ ಒತ್ತಾಟಕ್ಕೆ ಒಳಗಾಗಿದೆ. ಅಲ್ಲಿರುವ ನಾಜಿಗಳ ಮೂಲಕ ಗಲಭೆ ಪ್ರಾರಂಭಿಸುವ ಆಲೋಚನೆಯು ಜರ್ಮನಿಗೆ ಯಿರುವುದೆಂದು ತಿಳಿದುಬರುತ್ತದೆ. ಆದರೆ ಜರ್ಮನಿಯು ಇತ್ತೀಚೆಗೆ ಬಹುಮಟ್ಟಿಗೆ ತನ್ನ ವರ್ತನೆಯನ್ನು ಬದಲು ಮಾಡಿದಂತೆ ಕಾಣುತ್ತದೆ. ಆದರೂ ಜೆಕೊಸ್ಲೊವೇಕಿಯದಲ್ಲಿ ಎಲ್ಲಾ ತರದ ಸಿದ್ಧತೆಗಳು ನಡೆಯುತ್ತಿವೆ. ಅದರಲ್ಲೂ ಬ್ರಿಟಿಷರು ಯುದ್ಧಸನ್ನಾಹಿತರಾಗಿರುವುದರಿಂದ ಜೆಕೊಸ್ಲೊವೇಕಿಯಕ್ಕೆ ಇನ್ನಷ್ಟು ಧೈರ್ಯ ಹೆಚ್ಚಿದಂತಾಗಿದೆ.

ಆದುದರಿಂದ ಬ್ರಿಟನು, ತನ್ನ ಈಗಿನ ವರ್ತನೆಯನ್ನು ತ್ಯಜಿಸಿ ಯುದ್ಧಸಿದ್ಧತೆಗಳನ್ನು ಮಾಡುವ ಬದಲಾಗಿ,ನ್ಯಾಯಪರ ಯೋಜನೆಗಳಿಂದ ಜಗತ್ತಿನ ಶಾಂತಿ ರಕ್ಷಣೆ ಬಗ್ಗೆ ಪ್ರಯತ್ನಗಳನ್ನು ಮಾಡಿದರೆ ಉತ್ತಮವಿತ್ತೆಂದು ಅನೇಕ ರಾಜಕೀಯ ಪ್ರವೀಣರ ಮತವಾಗಿರುತ್ತದೆ.

ಹಿಂದೂದೇಶವೂ ಜಗತ್ತಿನ ಶಾಂತಿಯೂ

ಜಗತ್ತಿನ ಶಾಂತಿಗೂ ಹಿಂದೂದೇಶಕ್ಕೂ ಇರುವ ಸಂಬಂಧವು, ಬ್ರಿಟನು ಎಂದಿಗೂ ನಿರ್ಲಕ್ಷ್ಯ ಮಾಡದು 'ಮಹಾಪ್ರಭುತ್ವದ ಜನಾಂಗಗಳು, ಕಾರಣ ಸಾಮಗ್ರಿಗಳಿಗಾಗಿ ಬಡಿದಾಡುತ್ತಿರುವ ಈ ಸಮಯದಲ್ಲಿ ಹಿಂದೂದೇಶದ ಮೌಲ್ಯವು ಇನ್ನಷ್ಟು ಹೆಚ್ಚಿದಂತಾಗಿದೆ

ಹಿಂದೂದೇಶದಿಂದ ಸುರಿದು ಹೋಗುತ್ತಿರುವ ಸಂಪತ್ತಿನ ದೆಸೆಯಿಂದ ಇಂಗ್ಲಾಂಡಿನಲ್ಲಿ ಬಡವರೆ ಇಲ್ಲದಾಗಿದ್ದಾರೆ ಇಂಗ್ಲಾಂಡಿನ ಪ್ರತಿಯೊರ್ವ ನಿವಾಸಿಕನಿಗೆ ಹಿಂದೂದೇಶದಿಂದ ವರ್ಷ ಒಂದರ ಸರಾಸರಿ ಐದು ಪವನುಗಳಂತೆ ಉತ್ಪತ್ತಿಯಿದೆ ಒಂದು ಸಾವಿರ ಮಿಲಿಯ ಆಂಗ್ಲೀಯ ಹಣವು ಹಿಂದೂದೇಶದಲ್ಲಿ ಸಂಚಯಿಸಲ್ಪಟ್ಟು ಅದರಿಂದ ಹೆಚ್ಚಿನ ದರದಲ್ಲಿ ಒಬ್ಬಿ ಸಂಪಾದನೆಯಾಗುತ್ತಿದೆ ಕಳೆದ ಮಹಾಯುದ್ಧದ ಸಮಯದಲ್ಲೂ, ಹಿಂದೂದೇಶದ ನಿಮಿತ್ತ ಉತ್ಪತ್ತಿಯಿಂದಲೆ, ಇಂಗ್ಲಾಂಡಿನ ಸ್ಥಿತಿಯು ಸ್ಥಿರವಾಗಿತ್ತು ಈ ಕಾರಣಗಳಿಂದ ಇಂಗ್ಲಾಂಡಿನಲ್ಲಿ ಕ್ರಾಂತಿಗಳಿಗೆ ಅವಕಾಶವೆ ದೊರಕಲಿಲ್ಲ ಕೆಲಸಗಾರರಿಗೆ ಯಾವತ್ತೂ ಮಾರ್ಪಾಡುಗಳು ಬೇಕಾಗಿಲ್ಲ ಅವರು ಯಾವತ್ತೂ ತರದ ತ್ಯಾಗವಮಾಡಬೇಕಾಗಿ ಎರಲಿಲ್ಲ ಇಂಗ್ಲಾಂಡಿನಲ್ಲಿ ಮಜೂರ ಸರಕಾರವು ಅಧಿಕಾರದಲ್ಲಿದ್ದಾಗಲ್ಲ ಹಿಂದೂದೇಶದ ಮೇಲೆ ನಿಲಿಕರಣೆಯು ಏಕಪ್ರಕಾರವಾಗಿ ನಡೆದಿರುತ್ತದೆ

ಇಂಗ್ಲಾಂಡು ಹಿಂದೂದೇಶವನ್ನು ಕಳಕೊಂಡರೆ, ಬ್ರಿಟಿಷ ಮಜೂರ ವರ್ಗವು ಹೆಚ್ಚಿನ ಉತ್ಸಾಹವನ್ನೂ ಚೇತನವನ್ನೂ ಹೊಂದುವುದು ಬ್ರಿಟನಿನ ಸಾರ್ವಭೌಮತೆಯು ಜಗತ್ತಿನ ಶಾಂತಿ ಭಂಗಕ್ಕೆ ಕಾರಣವಾಗಿರುವುದು ಕೊನೆಗೊಳ್ಳುವುದು

ಚೀನಾವು ಹಿಂದುಳಿಯಲು ಕಾರಣವೇನು?

ಬಹಳ ಸಮಯ ಅನ್ಯರಿಗೆ ಬಾಗಿಲುಗಳನ್ನು ಹಾಕಿದ್ದ,ಜಪಾನು ಒಡನೆ ಕಣ್ತೆರೆದು, ಪಾಶ್ಚಾತ್ಯ ತರದ ಕಾರ್ಖಾನೆಗಳನ್ನೂ, ಚಲಾವಣೋಪಾಯಗಳನ್ನೂ, ರಕ್ಷಣಾ ಕ್ರಮಗಳನ್ನೂ ತಮ್ಮ ದೇಶದಲ್ಲಿ ಸ್ಥಾಪಿಸಿ ಬಹಳ ಕೀರ್ತಿಯನ್ನು ಪಡೆದಿದೆ ಇಷ್ಟೆಲ್ಲಾ ನಡೆದುದು ಬಿಟ್ಟು, ಪಾಶ್ಚಾತ್ಯರೊಡನೆ ಅತಿ ಅಲ್ಪ ಸಂಸರ್ಗದ ನಂತರ ಆದರೆ ಚೀನಾಕ್ಕೂ ಪಾಶ್ಚಾತ್ಯಕ್ಕೂ ಬಹಳ ಹಿಂದಿನಿಂದ ಸಂಸರ್ಗವಿದ್ದರೂ ಅದು ಪಾಶ್ಚಾತ್ಯ ಕೈಗಾರಿಕೆ ಕ್ರಮಗಳಿಗೆ ಮನಸೋತುದಾಯಿತು.ಬಹೀರ್ ಒಡವೆಗಳ ಮೇಲೆ ಧಿಕ್ಕಾರ, ಸ್ವದೇಶ ಪ್ರೇಮ, ಇವುಗಳೆ ಮುಖ್ಯ ಕಾರಣ. ರೈಲ್ವೆ ಮಾರ್ಗ ಮತ್ತು ಘನಿಗಳನ್ನು ಚೀನೀಯರು ಬೇಡವೆನ್ನುತ್ತಿದ್ದರು. ಪಾಶ್ಚಾತ್ಯ ಕ್ರಮಗಳ ಮೇಲೆ ಚೀನೀಯರಿಗೆ ಆಸಕ್ತಿಯಿರುವುದಿಲ್ಲ.ಆದರೆ ಈ ವಿಚಾರ ಜಪಾನಿಯರ ವರ್ತನೆಯು ಬೇರೆಯಾಗಿರುತ್ತದೆ. ಜಪಾನು ಪಾಶ್ಚಾತ್ಯದ ಯಶಸ್ಸಿನ ಮರ್ಮವನ್ನು ತಿಳಿದು ಅವುಗಳನ್ನನುಸರಿಸಿ, ಮಹಾ ಪ್ರಗತಿ ಹೊಂದಿಕೊಂಡು, ಇಂದು ಈ ಜಗತ್ತಿನ ಇತರ ಪ್ರಭುತ್ವದ ಜನಾಂಗಗಳೊಡನೆ ಒಂದು ಸ್ಥಾನವನ್ನು ಪಡೆದಿರುತ್ತದೆ. ಪಾಶ್ಚಾತ್ಯರ ವಿಜ್ಞಾನವು ಚೀನೀಯರಿಗೆ ಒಪ್ಪದಾಯಿತು. ಅದರಿಂದ ನಮಗೇನು ಪ್ರಯೋಜನ, ಎಂಬ ಮನೋಭಾವವನ್ನು ಹೊಂದಿದವರಾಗಿ ಚೀನೀಯರು ಸುಮ್ಮನೆ ಕುಳಿಯುವವರಾದರು,

ಚೀನವು ಯಂತ್ರಗಳ ಕಡೆಗೆ ಮನಸ್ಸು ಹಾಕದೆ ಇದ್ದುದಕ್ಕೆ ಇನ್ನೊಂದು ಕಾರಣವಿದೆ. ಚೀನದ ಸಾಂಪತ್ತಿಕ ಸ್ಥಿತಿ ಸ್ವಸಮರ್ಥಕವಾಗಿತ್ತು. ಚೀನೀಯರಿಗೆ ಬೇಕಾದ ಆಹಾರ, ವಸ್ತು ಒಡವೆಗಳು, ಚೀನಾದಲ್ಲೆ ಹೇರಳ ದೊರಕುತ್ತಿದ್ದವು ಅದಕ್ಕೆ ಆಮದು ರಫ್ತಿನ ಅಗತ್ಯವಿರಲಿಲ್ಲ. ಬಹೀರ್ ಸಂಸರ್ಗವಿಲ್ಲದೆ ದಿನ ಹರಣಮಾಡುವ ಯೋಗ್ಯತೆಯು ಅವರಲ್ಲಿತ್ತು. ಚೀನೀಯರೊಡನೆ, ಜಗತ್ತಿನ ಅತ್ಯಂತ ಉತ್ತಮ ಆಹಾರವಿದೆ—ಅನ್ನ, ಪಾನೀಯವಿದೆ ಚಹಾ, ಹತ್ತಿ, ರೇಶ್ಮೆ, ಉಣ್ಣೆ ಇತ್ಯಾದಿಗಳ ವಸ್ತ್ರಗಳು ಅವರೊಡನೆ ಧಾರಾಳ ಇವೆ. ಆದರೂ ಸ್ವಲ್ಪ ಸಮಯದ ನಂತರ ತಮಗೆ ಸುಧಾರಣೆಗಳು ಬೇಕೆಂಬ ಜಿಜ್ಞಾಸೆಯುದಯವು ಕೆಲವು ಚೀನೀಯ ಮಹನೀಯರುಗಳಲ್ಲಿ ಆಗಲಾರಂಭಿಸಿತು.

ಚೀನವು ಕೈಗಾರ ದೇಶವಾಗದೆ ಇರಲು, ಮೂಲಧನದ ಅಭಾವವು ಇನ್ನೊಂದು ಕಾರಣವು ಚೀನದ ಧನಿಕರು ಕೈಗಾರಿಕೆಗಳಿಗೆ ಹಣ ಸಂಚಯಿಸಲು, ಮಹಾ ಅಂಜಿಕೆವುಳ್ಳವರಾಗಿದ್ದುದರಿಂದ, ಚೀನಾ ದೇಶದಲ್ಲಿ ಈಗ ನಡೆಯುವ ಅನೇಕ ಕೈಗಾರಿಕೆಗಳು ಅನ್ಯರ ಕೈಸೇರಿದುವು

ಇವೆ ಮೊದಲಾದ ಕಾರಣಗಳಿಂದ ಚೀನವು ಜಪಾನಿನಂತೆ ಪಾಶ್ಚಾತ್ಯ ತರದ ಪ್ರಗತಿಯನ್ನು ಹೊಂದದಾಯಿತು.

ಜಪಾನಿನ ಸಣ್ಣ ಕೈಗಾರಿಕೆಗಳು

ಜಪಾನಿನಲ್ಲಿ ಅನೇಕ ಸಣ್ಣ ಕೈಗಾರಿಕೆಗಳು ರೂಢಿಯಲ್ಲಿವೆ ಸಣ್ಣ ಕೈಗಾರಿಕೆಗಳೆಂದರೆ ಅವುಗಳು ಅದೇ ತರದ ದೊಡ್ಡ ಕೈಗಾರಿಕೆಗಳ ಪ್ರಥಮ ಸೋಪಾನಗಳಲ್ಲ ಈ ಸಣ್ಣ ಕೈಗಾರಿಕೆಗಳು ಎಲ್ಲಾ ವಿಷಯಗಳಲ್ಲಿ ಸಂಪೂರ್ಣವಾದವುಗಳು.

ಕೆಲವು ಮುಖ್ಯವಾದ ಸಣ್ಣ ಕೈಗಾರಿಕೆಗಳು - ಹತ್ತಿ ನೇಯುವುದು, ಕೃತಕ ರೇಶ್ಮೆ ತಯಾರಿಸುವಿಕೆ, (ರೆಯೊನ್) ರೇಷಿಮೆಯ ಒಡವೆಗಳನ್ನು ತಯಾರಿಸುವುದು, ವಿದ್ಯುತ್‌ಶಕ್ತಿಯ ದೀಪಗಳನ್ನು ತಯಾರಿಸುವುದು, ಸ್ಯಾಕಲ್ ತಯಾರಿ, ಸ್ಪಿಂಗದ ಚಿಕ್ಕ ಪುಟ್ಟ ನಿತ್ಯದ ಉಪಯೋಗದ ಸಾಮಾನುಗಳನ್ನು ತಯಾರಿಸುವುದು, ರಂದದ ಕೆಲಸ,ಗಾಜಿನ ಕೆಲಸ, ಮುದ್ರಣ, ಪುಸ್ತಕ ಬೈಂಡಿಂಗ, ಸಿಮೆಂಟ್ ತಯಾರಿಸುವುದು, ಕೈಗಾರಿಕೆಯಲ್ಲಿ ಉದ್ಯೋಗಿಸುವ ಮಜೂರರಲ್ಲಿ ಶೇಕಡಾ 70ರ ಸಲೆ ಈ ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು.

ರೈತರಿಗೆ ಸಾಗುವಳಿಯಿಂದಲೆ ಜೀವನವು ಅಸಾಧ್ಯವಾದುದರಿಂದ ಅನೇಕ ರೈತರು ಸಾಗುವಳಿ ಇಲ್ಲದ ಸಮಯ ಮೇಲಿನ ತರದ ಸಣ್ಣ ಕೈಗಾರಿಕೆಗಳನ್ನು ನಡೆಯಿಸಿ, ಜೀವನ ನಡೆಯಿಸುತ್ತಿದ್ದಾರೆ

ವಿದ್ಯುಚ್ಛಕ್ತಿ ಬಿಲ್ಲಿಗಳನ್ನು ತಯಾರಿಸುವ ದೊಡ್ಡ ಕಾರ್ಖಾನೆಗಳಲ್ಲಿ ನವೀನ ಯಂತ್ರೋಪಕರಣಗಳು ಬರಲು ಅನೇಕರನ್ನು ಉದ್ಯೋಗದಿಂದ ತಳ್ಳಿಹಾಕಲಾಗಲು ಅವರು,ಬಲ್ಬುಗಳನ್ನು ತಯಾರಿಸುವ ಸಣ್ಣ ಕೈಗಾರಿಕೆಯನ್ನು ನಡೆಯಿಸಿ ಜೀವನ ಸಾಗಿಸುವವರಾದರು

ಜಪಾನಿನಿಂದ ಹೊರಗೆ ರಫ್ತಾಗುವ ಒಡವೆಗಳಲ್ಲಿ, ಮೂರರಲ್ಲಿ ಎರಡಂಶವು, ಸಣ್ಣ ಕೈಗಾರಿಕೆಗಳಿಂದ ಸಿದ್ಧವಾದವುಗಳು, ವಸ್ತ್ರದ ರಫ್ತಿನ ಶೇಕಡಾ 45 ಸಲೆ ಸಣ್ಣ ಕೈಗಾರಿಕೆಗಳಿಂದ ಸಿದ್ಧವಾದುದು. ಈ ಸಣ್ಣ ಕೈಗಾರಿಕೆ ಬರೆ ಕಡಿಮೆ ಖರ್ಚಿನಲ್ಲಿ ನಡೆಯುವುದರಿಂದ, ಆ ಒಡವೆಗಳ ಧಾರಣೆಗಳು ಅತಿ ಕಡಿಮೆಯಾಗಿ ಪ್ರಪಂಚದ ವ್ಯಾಪಾರಮಂಡಳದಲ್ಲಿ ಭಯಂಕರ ತರದ ಅಲ್ಲೋಲಕಲ್ಲೋಲವನ್ನು ಉಂಟುಮಾಡಿರುತ್ತವೆ.

ಅನುಕ್ರಮಣಿಕೆ.

...	೧
... ಪರಿಷತ್ತಿನ ...	೪
ಸಮಾಜ—ಸದ್ಬೋಧ	೫
ವಿಶೇಷ ವಾರ್ತೆಗಳು	೮
ಜನಾಂಗ ಮಂಡಳದಿಂದ ಜಗತ್ತಿನ ಶಾಂತಿರಕ್ಷಣೆ ಯಾಗುವುದೆ?	೯
ಎಳ್ಳೆಣ್ಣೆ ರಕ್ತ ಹಾಲು	೧೮
ಅಗ್ರಲೇಖ,	
ಪ್ರಾಂತಿಕ ಶಿಕ್ಷಣ ಪರಿಷತ್ತು	೧೦
ಸ್ಫುಟವಿಚಾರಗಳು	
ವರ್ತಮಾನ ಸಂಗ್ರಹ	
ವಿವಿಧ ಸಮಾಚಾರಗಳು	೧೧
ಮಂಗಳೂರು ಸಮಾಚಾರ	೧೪
ತಾಲೂಕುಗಳಿಂದ	೧೫
ಪಾದ್ರಿಗಳಿಗೆ ಬಿಷ್ಟರ ಎಚ್ಚರಿಕೆ	೧೬
ಹಿಂದೂದೇಶ	೧೭

ತಾ. ೧೪ನೇ ಶುಕ್ರವಾರ ಮೇ ೧೯೩೭

ಸ್ವದೇಶಾಭಿಮಾನಿ.

ಪ್ರಾಂತಿಕ ಶಿಕ್ಷಣ ಪರಿಷತ್ತು

ಜಿಲ್ಲಾ ಟೀಚರ್ಸ್ ಗಿಲ್ಡಿನ ವಾರ್ಷಿಕಾಧಿವೇಶನವು ಇಲ್ಲಿ ಕಳೆದ ತಿಂಗಳಲ್ಲಿ ಜರುಗಿದಾಗ ಪ್ರಾರಂಭ ಭಾಷಣವನ್ನು ಮಾಡುತ್ತ ಶ್ರೀ. ರಾಜಗೋಪಾಲಾಚಾರ್ಯರು 'ನಾನು ಶಿಕ್ಷಣ ವಿಚಾರದಲ್ಲಿ ಹೇಳಲಿರುವುದನ್ನು ಬೇರೊಂದು ಸಭೆಯಲ್ಲಿ ಹೇಳಲಿಕ್ಕಿದೆ' ಎಂದು ಎರಡುಮಾತುಗಳಲ್ಲೇ ಆದರೂ, ನಾಲ್ಕಾರು ಪ್ರಸ್ತಾಪಗಳನ್ನು ಇಲ್ಲಿ ಎತ್ತಿದನ್ನು ಹಿಂದಣ ಸಂಚಿಕೆಯೊಂದರಲ್ಲಿ ಬರೆದಿದ್ದೇವೆ ತಂಜಾವೂರದಲ್ಲಿ ಆ ಮತ್ತೊಂದು ಸಭೆ ಜರುಗಿತು ಅಲ್ಲಿ, ನಾಳೆ ಅಧಿಕಾರ ಸ್ವೀಕಾರ ಮಾಡುವಲ್ಲಿ, ನಮ್ಮ ಪ್ರಾಂತ್ಯದ ಶಿಕ್ಷಣದಲ್ಲಿ ಎಂತಹ ಸುಧಾರಣೆಗಳು ಆಗಬಹುದೆಂದು ಶ್ರೀ. ಆಚಾರ್ಯರು ಸೂಚಿಸಬಹುದೆಂದೂ ನಿರೀಕ್ಷಿಸಲಾಗಿದ್ದಿತು ಅವರು ಮಾತ್ರ, ಎಷ್ಟೇ ಅಡಗಿಸಿಟ್ಟರೂ ಹೊರಗೆಡವಿದ ಕೆಲವು ಅಭಿಪ್ರಾಯಗಳನ್ನು ತಮ್ಮ ಭಾಷಣದಲ್ಲಿ ವಿವರಿಸಿರುವರು ಹೊರತು, ಸರಕಾರವು ಏನು ಮಾಡಬಹುದೆಂಬುದನ್ನು ಅವಶ್ಯವಾಗಿಯೂ ನಿರೂಪಿಸಲಿಲ್ಲ

ಮಂತ್ರಿಗಳು ಗವರ್ನರರಿಂದ ಭರವಸೆ ಕೇಳಿದಂತೆ ಶಿಕ್ಷಕರ ಕಡೆಯಿಂದ ಅವರ ವೇತನದ ವಿಷಯವಾಗಿ ಒಂದು ಭರವಸೆ ಕೇಳಲಾಗಿದ್ದಿತು ಈ ವಿಷಯದಲ್ಲಿ ಸಂಬಳ ಕಡಿಮೆಯಾಗುವಂತಿಲ್ಲವೆಂದು ಭರವಸೆ ದೊರಕಿದೆ ಉಪಾಧ್ಯಾಯರು ತೀರ ಕಡಮೆ ಸ್ಕೇಲಿನ ಉದ್ಯೋಗಸ್ಥರೆಂಬುದನ್ನು ಇತರ ಇಲಾಖಾ ಉದ್ಯೋಗಿಗಳೊಡನೆ ಹೋಲಿಸಿ ಅವರು ತಿಳಿದೇ ಇರುವರು ಎಲ್ಲಿ ಖರ್ಚು ಕಡಮೆಮಾಡಬೇಕಾದರೂ, ಉಪಾಧ್ಯಾಯರ ಸಂಬಳವನ್ನು ಇಳಿಸಿ ಬಿಡದು, ಇತರ ಖರ್ಚಿಗೆ ಪುರಯಿಕ ಮಾಡಿಕೊಡುವ ದುಷ್ಪದ್ಧತಿಯು ಅವರಿಗೆ ಸಂಯಾ ಇಲ್ಲ ಎಂಬುದು ತೃಪ್ತಿಕರವಾಗಿದೆ

ಪ್ರತಿಯೊಂದು ಜಿಲ್ಲೆಯ ಉಪಾಧ್ಯಾಯರೂ ವಿದ್ಯಾರ್ಥಿಯರೂ ಆಯಾ ಜಿಲ್ಲೆಯ ಸಂಪೂರ್ಣವಾದ ಭೂಗೋಲ ಪರಿಚಯವನ್ನು ಮಾಡಿಕೊಳ್ಳಬೇಕಾಗಿದೆ. . ಈ ಕಾಲದಲ್ಲಿ ಸುಶಿಕ್ಷಿತರೆನ್ನುವವರಿಗಿಂತಲೂ ಅಶಿಕ್ಷಿತರೇ ಸ್ವಸ್ಥಳದ ಜನಜೀವನದ ವಿಚಾರದಲ್ಲಿ ಇಂಗ್ಲೆಂಡು ಮುಂತಾದ ದೇಶಗಳಲ್ಲಿ ಆ ಸ್ಥಳ ಪರಿಚಯವೂ ಜೀವನಪರಿಚಯವೂ ಪ್ರತಿಯೊಬ್ಬನಿಗೆ ಬಹಳ ಚೆನ್ನಾಗಿ ಗೊತ್ತಾಗಿರುವುದು. ಗ್ರಾಮೋದ್ಧಾರಕ್ಕೂ ದೇಶೋದ್ಧಾರಕ್ಕೂ ಅತ್ಯಾವಶ್ಯಕವಾಗಿರುವ ಈ ಭೂಗೋಲ ಜ್ಞಾನವನ್ನೆ ಮೊದಲು ಎಲ್ಲರಿಗೂ ಪ್ರಚಾರಗೊಳಿಸಬೇಕಾಗಿದೆ.

ಪರೀಕ್ಷೆಗಳು ಇಲ್ಲದಿರುವುದೇ ವಾಸಿ. ಆದರೆ ಅವನ್ನು ನಿರ್ಮೂಲಿಸುವುದಕ್ಕೆ ಬಹಳ ಪೇಚಾಟವೂ ಬಹಳ ದಿನಗಳ ತರ್ಕವೂಬೇಕು. ಪರೀಕ್ಷೆಗಳಿಗೆ ಒಂದು ಬಗೆಯ ಪವಿತ್ರತೆಯು ಅವುಗಳ ಪ್ರಾಚೀನತೆಯೊಡನೆ ಸೇರಿಬಂದಿದೆ. ಹೀಗಾಗಿ ಇನ್ನೂ ಕೆಲಕಾಲ ಈ ಪರೀಕ್ಷೆಗಳೆಂಬವು ನಡೆಯಬಹುದು ಪಕ್ಕನೆ ಇವನ್ನು ನಿರ್ಮೂಲಿಸಲು ಬರುವುದಿಲ್ಲ ಪ್ರಗತಿಯ ಶಕ್ತಿಯೂ ಪುರಾತನತೆಯ ಶಕ್ತಿಯೂ ಸ್ವಲ್ಪ ಕಾದಾಡಬಹುದು ಆದರೆ ಉಪಾಧ್ಯಾಯರು ಮಗುವಿನ ದೈನಂದಿನದ ಶಿಕ್ಷಣವನ್ನು ನೋಡುತ್ತಿದ್ದು, ಅವರ ಶಿಫಾರಸು ಪರೀಕ್ಷೆಗಳ ಫಲಗಳಿಗಿಂತ ಹೆಚ್ಚಿನದಾಗುವುದು ನೂರಾರು ಜನರು ಪರೀಕ್ಷಕರಾಗಿ ನೂರಾರು ಬಗೆಯಲ್ಲಿ ಪತ್ರಗಳನ್ನು ತಿದ್ದುವ ಕ್ರಮವು ಸಮರ್ಪಕವಿಲ್ಲ ವಿದ್ಯಾರ್ಥಿಯ ಯೋಗ್ಯತೆ ತಿಳಿಸುವ ಸರ್ಟಿಫಿಕೇಟನ್ನು ಉಪಾಧ್ಯಾಯರು ಕೊಟ್ಟರೆ ಸಾಕು. ಎಲ್ಲಿ ಅವನು ಸೇರುವನೋ ಅಲ್ಲಿ ಆಯಾ ಇಲಾಖೆಯವರು ಪ್ರತ್ಯೇಕವಾದ ಪರೀಕ್ಷೆ ಮಾಡುತ್ತಾರಲ್ಲವೆ? ಈ ವಿಷಯವಾಗಿ ಪರಿಷತ್ತು ಬಹಳ ಚೆನ್ನಾಗಿ ಪರ್ಯಾಲೋಚಿಸಿ, ನವೀನ ಕ್ರಮಗಳನ್ನು ಜ್ಯಾರಿಗೆ ತರುವ ಹಾಗೆ ನೂತನ ಸೂಚನೆಗಳನ್ನು ಕೊಡುವಂತಾಗಬೇಕು

ದೇಶಭಾಷೆಗಳ ಮೂಲಕವೇ ಯಾವತ್ತು ಶಿಕ್ಷಣವು ಸಾಗಬೇಕು ಇತರ ಯಾವ ದೇಶದಲ್ಲೂ ಇಲ್ಲದಂತೆ,—ಕೇವಲ ಪರಭಾಷಾ ಮೂಲಕವೇ ನಮ್ಮಲ್ಲಿ ಶಿಕ್ಷಣ ಸಾಗುತ್ತಿರುವುದು ಅನ್ಯಾಯವು ಈ ಕ್ರಮದಿಂದ ಶಿಕ್ಷಣವು ಅರ್ಥಶ್ಕರ್ಥವಾಗಿ, ಆಯುಷ್ಯವೂ ವ್ಯರ್ಥವಾಗುತ್ತಿದೆ

ಹಿಂದೂಸ್ತಾನಿ ಭಾಷೆಯನ್ನು ದೇವನಾಗರಿ ಅಥವಾ ಅರಬಿ ಬರಹದ ಮೂಲಕ ಎಲ್ಲ ಮಿಡ್ಲ್‌ಸ್ಕೂಲ್ ತರಗತಿಗಳಲ್ಲಿ ಕಲಿಸಬೇಕೆಂಬ ನಿರ್ಣಯವು ಮನನೀಯವಾಗಿದೆ ಇಂಗ್ಲಿಷು ಅಥವಾ ದೇಶಭಾಷೆಯ ಒದಲಿಗೆ ಹಿಂದುಸ್ತಾನಿಯನ್ನು ಕಲಿಸುವದಲ್ಲ ಹಿಂದುಸ್ತಾನಿಯನ್ನು ಕಲಿಸಲೇಬೇಕಾಗಿದೆ ಅದು ಅಗತ್ಯವಾಗಿ ಕಲಿಸಬೇಕಾಗುವ ರಾಷ್ಟ್ರೀಯ ಭಾಷೆ ಉತ್ತರ ದಕ್ಷಿಣ ಹಿಂದೂದೇಶಗಳಲ್ಲಿ ಪರಸ್ಪರ ತಿಳಿವು ಒಗ್ಗಟ್ಟೂ ಇದರಿಂದ ಬೇಗನೆ ಸ್ಥಾಪಿತವಾಗುವುದು

ಪ್ರಾಥಮಿಕ ಶಿಕ್ಷಣದ ಸಮಸ್ಯೆಯು ರಾಷ್ಟ್ರೀಯ ಸಮಸ್ಯೆಯಾಗಿದೆ ಅಶಿಕ್ಷಿತರು ದೇಶದಲ್ಲಿ ಎಲ್ಲಿಯೂ ತೋರದಂತಿರುವ ಹಾಗೆ, ಶಿಕ್ಷಣವು ಅಷ್ಟು ಸಾಗವಾಗಿ ಹರಡಬೇಕು. ಅಕ್ಷರ ಜ್ಞಾನವು ದೃಷ್ಟಿ ಸ್ಪರ್ಶ ಮೊದಲಾದುವುಗಳಂತೆ ಒಂದು ಇಂದ್ರಿಯ ಜ್ಞಾನ ಅದಿಲ್ಲದೆ, ಮನುಷ್ಯನು ಪೂರ್ಣತ್ವ ಹೊಂದಲಾರನು ಮೂವತ್ತು ಕೋಟಿ ಜನರು ಈಗ ಅಕ್ಷರಜ್ಞಾನವಿಲ್ಲದಿರುವರು, ಇವರಿಗೆ ಶಿಕ್ಷಣ ದೊರೆವಂತಾಗಬೇಕು ಹೇಗೆಂಬುದೇ ರಾಷ್ಟ್ರೀಯ ಸಮಸ್ಯೆ ಇದೆಲ್ಲ ತರಬೇತಾದ ಉಪಾಧ್ಯಾಯರಿಂದಲೇ ಆಗತಕ್ಕ ಸಾಧನೆಯಲ್ಲ ಗ್ರಾಮೋದ್ಧಾರ ಕಾರ್ಯವು ಸರಿಯಾಗಿ ನಡೆವಂತೆ, ಪ್ರತಿಯೊಬ್ಬ ಸರಕಾರೀ ನೋಕರನೂ ಪ್ರಯತ್ನಿಸಬೇಕು ಗ್ರಾಮೋದ್ಧಾರವೂ ಶಿಕ್ಷಣ ಪ್ರಚಾರವೂ ಒಂದೇ ಹೆಜ್ಜೆಯಲ್ಲಿ ಜೊತೆಯಾಗಿ ಮುಂದಡಿಯಿಡಬೇಕು ಇದಕ್ಕಾಗಿ ನಮಗೆ ಬೇಕಾಗಿರುವ ಹಣವು ಅಪಾರವಾಗಿದೆ ಇದೆಲ್ಲಿಂದ ಬರಬೇಕು? ಸರಕಾರವು ಸೈನ್ಯ ಪೋಲೀಸುಗಳ ಧಾರಾಳ ವ್ಯಯಿಸುವಾಗ, ಅವರಿಗೆ ಯಾವ ಕೆಲಸ ತಾನೆ ಇಡೀ ವರ್ಷ ಇದೆ? ಆದಕ್ಕಾಗಿ, ಕವಾಯಿತು ಇತ್ಯಾದಿಗಳಿಗೆ ಸಮಯ ಪ್ರತ್ಯೇಕಿಸಿ, ಉಳಿದ ಸಮಯವನ್ನು ಜನರೊಡನೆ ಸೇರಿ ಗ್ರಾಮೋದ್ಧಾರಕ್ಕೆ ಅವರು ನೆರವಾಗಬೇಕು ಸುಶಿಕ್ಷಿತರು ಪೋಲೀಸು ಇಲಾಖೆಯಲ್ಲಿ ಜವಾನರಾಗಿ ಸೇರುತ್ತಿರಬೇಕು ಹಾಗಿದ್ದರೆ, ಅವರಿಂದ ಶಿಕ್ಷಣಕಾರ್ಯವು ಮುಂದರಿವುದು ಪೋಲೀಸರೆಂದರೆ ಜನರನ್ನು ಶಿಕ್ಷೆ ಕೊಡುವುದಕ್ಕಾಗಿಯೆ ಕೈದುಮಾಡುವವರೆಂಬ ಭಾವನೆ ತಗ್ಗಬೇಕು ಅವರು ಜನರೊಡನೆ ಸೇರಿ, ಹಳ್ಳಿಯ ಆರೋಗ್ಯ, ಶಿಕ್ಷಣದ ಕಡೆಗೆ ಗಮನವನ್ನಿಟ್ಟಲ್ಲಿ ಅವರಿಂದ ಉಪಕಾರವಿದೆ ಸರಕಾರದ ನೋಕರರಿಗಾಗಿ ವ್ಯಯವಾಗುವ ಹಣದ ಅಪಾರತೆಯಿಂದ ಗ್ರಾಮಗಳಿಗೆ ಕಿಂಚಿತ್ತೂ ಉಪಕಾರವಾಗಬೇಕಾದರೆ ನೋಕರರೆಲ್ಲರು ಗ್ರಾಮಾಭ್ಯುದಯ ಸಾಧನೆಗಳಲ್ಲಿ ಕೈಯಿಕ್ಕಿ ಸಹಾಯಮಾಡುವುದೂ ಅವರ ನೋಕರಿಯ ಲಕ್ಷಣವಾಗಬೇಕು

ಗ್ರಾಮಶಾಲೆಗಳ ಉಪಾಧ್ಯಾಯರು ಸಹ ಶಿಕ್ಷಣ ಮಾತ್ರವನ್ನೆ ಅಲ್ಲದೆ, ಗ್ರಾಮಾಭ್ಯುದಯಕ್ಕೆ ನೆರವಾಗಬೇಕು ಡಾಕ್ಟರರು, ಕೃಷಿ ಇಲಾಖಾ ಶಿಕ್ಷಕರು, ಇಂಜಿನೀಯರರು ಮೊದಲಾದೆಲ್ಲರು ಉಪಾಧ್ಯಾಯರಂತೆ, ಶಿಕ್ಷಣ ಕಾರ್ಯದಲ್ಲೂ ಗ್ರಾಮೋದ್ಧಾರ ಕಾರ್ಯದಲ್ಲಿಯೂ ಸೇರಿದರೆ ತಾನೆ ಎಲ್ಲರಿಗೂ ಉದ್ಯೋಗವು ಸೌಕರ್ಯಗಳೂ ದೊರೆವುವು ಗ್ರ್ಯಾಜ್ಯುವೇಟರು ಪಾಸಾದ ನಂತರ ಡಿಗ್ರಿ ಪಡೆಯುವುದಕ್ಕೆ ಗ್ರಾಮಗಳಲ್ಲಿ ಆರು ತಿಂಗಳಾದರೂ ಕೆಲಸ ಮಾಡುತ್ತಿದ್ದರೆ, ಅವರಿಗೆ ಗ್ರಾಮಜೀವನದ ಪರಿಚಯವೇ ಮಾತ್ರವಲ್ಲದೆ, ಬರೀ ಅಧಿಕಾರಿಗಳಾಗುವ ಬದಲು ಜನಾಂಗದ ಸಹಾಯಕ ಸೇವಕರಾಗಲೂ ಅವರ ಮನಸ್ಸು ಒಡಂಬಡುವ ತರಬೇತು ಸಿಗುವ ಸಂಭವವಿದೆ

ಸರ್ವಧರ್ಮಗಳಿಗೂ ಸಾಮಾನ್ಯವಾಗಿರುವ ತತ್ವಗಳನ್ನು ಬೋಧಿಸಿ, ಪ್ರತಿಯೊಂದೂ ಸಮಾನವಾಗಿದೆ ಎಂಬ ಸೌಹಾರ್ದತೆಯು ವಿದ್ಯಾರ್ಥಿಗಳಲ್ಲಿ ಉಂಟಾಗುವ ಹಾಗೆ ಮತಶಿಕ್ಷಣವಾಗಬೇಕು ಪ್ರತಿಯೊಂದು ಗ್ರಾಮದಲ್ಲೂ ಸುಂದರವಾದ ತೋಟಗಳು ಇದ್ದು ಅವುಗಳಿಗೆ ಆಗಾಗ ಬಹುಮಾನಗಳನ್ನು ಕೊಡುವಂತಹ ಏರ್ಪಾಡಿರಬೇಕು ಶಾಲಾ ತೋಟ ಎಂಬುದರ ಅಭಿಪ್ರಾಯವು ಬದಲಾಗಬೇಕು ಕೆಲಸಕ್ಕೆ ಬಾರದ ಅಪೂರ್ವ ಹೂ ಎಲೆಗಳ ಗಿಡಗಳಿಗಾಗಿ ಹಣವನ್ನು ಪರಿಶ್ರಮವನ್ನು ಹಾಳುಮಾಡದೆ, ತೋಟಗಾರಿಕೆಯ ಮಹತ್ವ ಸೌಂದರ್ಯಗಳನ್ನು ಬೋಧಿಸುವ ಪ್ರತ್ಯಕ್ಷ ಪ್ರಯತ್ನಗಳಾಗಬೇಕು

ರಾಷ್ಟ್ರೀಯತೆಯ ಪಾಲನೆಗಾಗಿ ಖಾದಿಯನ್ನೆ ಸರ್ವರೂ ಧರಿಸುತ್ತಿರಬೇಕು

ಸ್ಫುಟವಿಚಾರಗಳು

ಇಂಗ್ಲೆಂಡಿನಲ್ಲಿ ನಡೆದ ಷಷ್ಠಮ ಜಾರ್ಜರ ಕಿರೀಟಧಾರಣೆ ಸಮಾರಂಭದಿಂದಾಗಿ ಆಂಗ್ಲೇಯರ ಅನೇಕಾನೇಕ ಮಹತ್ವದ ಉದ್ದೇಶಗಳು ನೆರವೇರುವವು ಪ್ರೇಕ್ಷಕರಾಗಿ ಬರುವ ಮಿಲಿಯಾವಧಿ ಪರದೇಶಿಗರಿಂದ ಬ್ರಹ್ಮಾಂಡ ದ್ರವ್ಯವು ವ್ಯಯಿಸಲ್ಪಡುವುದು. ರೈಲು ಹಡಗು ವಿಮಾನ ಮೊದಲಾದ ಪ್ರಯಾಣಿಕರ ಸೌಕರ್ಯ ಸಂಸ್ಥೆಗಳಿಗೆ ಕುಂಬಾ ಹಣವು ಜಮಾಯಾಗುತ್ತದ. ವ್ಯಾಪಾರ ವಹಿವಾಟುಗಳು ಬಹಳ ಅಭಿವೃದ್ಧಿ ಪಡೆಯುವುವು ಜನರ ಸೌಕರ್ಯಕ್ಕಾಗಿಯೂ ತಮ್ಮ ಸಾಮಾನುಗಳ ಶ್ರೇಷ್ಠತೆಯನ್ನು ಪ್ರಚಾರಗೊಳಿಸುವುದಕ್ಕಾಗಿಯೂ ದೊಡ್ಡ ದೊಡ್ಡ ಸಂಸ್ಥೆಗಳು ಕಿರೀಟಧಾರಣ ಪ್ರೇಕ್ಷಕರಿಗೆ ಅನೇಕಾನೇಕ ಸೌಕರ್ಯಗಳನ್ನು ಒದಗಿಸಿ ಕೊಡಲೇರ್ಪಡಿಸಿರುತ್ತಾರೆ

ಇದೇ ಸಂದರ್ಭವನ್ನು ಅನುಕೂಲಪಡಿಸಿ ಪ್ರಖ್ಯಾತ ಓವಲ್ಟಿನ್ (ovaltin) ತಯಾರಕರಾದ ಮೆಸರ್ಸ್ ಎ ವಾಂಡರ್ ಲಿಮಿಟೆಡ್ ಈ ಸಂಸ್ಥೆಯವರು ತಮ್ಮ ಕಾರ್ಖಾನೆಯನ್ನೂ ಗೋಶಾಲೆಗಳನ್ನೂ ಅನೇಕ ಮಂದಿ ಪ್ರೇಕ್ಷಕರ ಅನುಕೂಲತೆಯ ಬಗ್ಗೆ ಸದಾ ತೆರೆದಿರಲು ಏರ್ಪಡಿಸಿರುವರು ಆಗಲೇ ಅನೇಕಾನೇಕ ಮಂದಿ ಪ್ರೇಕ್ಷಕರು ದಿನವಹೀ ಕಾರ್ಖಾನೆಗೆ ಭೇಟಿ ಇತ್ತು, ಅವರ ಪ್ರಖ್ಯಾತ ತಯಾರಿಕೆಯಾದ ಓವಲ್‌ಟಿನ್ನಲ್ಲಿ ಉಪಯೋಗಿಸಲ್ಪಡುವ ಕೆನೆಯ ಹಾಲನ್ನು ಕೊಡುವ ಪ್ರಖ್ಯಾತ ಜೆರ್ಸಿ ಗೋವುಗಳನ್ನು ಕಂಡು ಪ್ರಶಂಶಿಸುತ್ತಲಿರುವರು ಇದಲ್ಲದೆ ಈ ಪ್ರಖ್ಯಾತ ಪಾನೀಯ ಸಂಸ್ಥೆಯವರ ತಮ್ಮ ತಯಾರಿಕೆಯಲ್ಲಿ ಉಪಯೋಗಿಸುವ ಅತ್ಯಾಧುನಿಕ ಯಂತ್ರೋಪಕರಣಗಳನ್ನೂ ಅವುಗಳ ನಿರ್ಮಲವಾದ ಆರೋಗ್ಯಕರ ನಿರ್ಮಾಣವನ್ನೂ ನೋಡಿ ಶ್ಲಾಘಿಸುತ್ತಾರೆ ಓವಲ್‌ಟಿನ್‌ನ ವಿಷಯವಾಗಿ ಪ್ರತ್ಯೇಕ ಬರೆಯಬೇಕಾದ ಅವಶ್ಯಕತೆಯಿಲ್ಲ ಕಾರಣ ಅದರ ವಿಶ್ವವಿಶಾಲ ಜನಪ್ರಿಯತೆಯೇ ಅದರ ಶ್ರೇಷ್ಠತೆಯನ್ನು ... ವಾಗಿದೆ ಇಷ್ಟಲ್ಲದೆ ಈ ಸಂಸ್ಥೆಯವರು ಕಿರೀಟಧಾರಣ ಉತ್ಸಹವನ್ನು ... ರೂಪದಲ್ಲಿ ಜರಗಿಸಲು ಬ್ರಿಟಿಷ್ ಸಾಮ್ರಾಜ್ಯದ ... ತವಾದ ತಮ್ಮ ಕಾರ್ಖಾನೆಗಳ ಕೆಲಸಗಾರರೆಲ್ಲರಿಗೂ ಒಂದು ವಾರದ ವೇತನ ಮಜೂರಿಯನ್ನು ಮುಫತ್ತಾಗಿ ಕೊಡುವ ವ್ಯವಸ್ಥೆಯನ್ನು ಮಾಡಿರುವುದು ಮಾದರಿ ಕೆಲಸವಾಗಿದೆ ಇದರಿಂದ ಅನುಕರಣೀಯವಾದ ಎರಡು ವಿಶಯಗಳೆಂದರೆ ಪಾನೀಯ ಆಹಾರಗಳ ನಿರ್ಮಲತೆಯು ಆವಶ್ಯಕತೆ ಮತ್ತು ಕಿರೀಟಧಾರಣೆಯ ತಹ ಸಮಾರಂಭಗಳನ್ನು ಜನಹಿತಕ್ಕಾಗಿ ಉಪಯೋಗಿಸಿಕೊಳ್ಳುವುದರ ವಿಚಾರಪೂರ್ಣತೆ- ಇಷ್ಟು ನಮ್ಮ ದೇಶದಲ್ಲಿಯೂ ಕಿರೀಟಧಾರಣ ಸಮಾರಂಭವನ್ನು ಜರಗಿಸ ಆಕಾಂಕ್ಷೆಪಟ್ಟವರು ಈ ಓವಲ್ಟಿನ್ ಕಂಪೆನಿಯವರ ಮಾದರಿಯನ್ನನುಸರಿಸಿದರೆ ಒಳಿತಾಗುತ್ತಿತ್ತು ಎಂಬುದರಲ್ಲಿ ಸಂದೇಹ ಬೇರೆ ಇದೆಯೆ

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets, at the
Office C. P C Co., Ltd
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ದಂಗೆಖೋರರಲ್ಲಿ ದಂಗೆ!

ಜಪಾನೀಯ ಸಂಗ್ರಾಮಿಗಳ ದರ್ಪ!!

ಇಂಗ್ಲಾಂಡಿನಲ್ಲಿ ಅಶಾಂತಿ!

ಸ್ಪೇಯಿನಿನಲ್ಲಿ

ಸ್ಪೇಯಿನಿನ ದಂಗೆಕೋರರಿಗೆ ಇತ್ತೀಚೆಗೆ ಅನೇಕ ಅನೇಕ ಸೋಲುಗಳು ಒದಗಿ, ಸರಕಾರವು ಸ್ಥಿರವಾಗುತ್ತಾ ಬರುತ್ತಿದೆ. ದಂಗೆಕೋರನಾಯಕ ಜನರಲ್ ಫ್ರೆಂಕೋನು ಹರಿತವಾದಂತೆ ಕಾಣುತ್ತದೆ. ತನ್ನ ಸೋಲಿನ ಸೇಡನ್ನು ಭಯಂಕರ ರೀತಿಯಲ್ಲಿ ತೀರಿಸಲು ಆತನು ಯತ್ನಿಸುತ್ತಿದ್ದಾನೆ. ಗ್ರಾನೊಲರ್ಸ ಎಂಬ ನಗರದ ಮೇಲೆ ಜರ್ಮನ್ ವಿಮಾನಗಳು ಮೂರುವರೆ ತಾಸುಗಳ ವರೆಗೆ ಭಯಂಕರ ಬಾಂಬ ದಾಳಿಯನ್ನು ನಡೆಯಿಸಿದವು. ಇಡಿ ನಗರವು ಧ್ವಂಸವಾಯಿತು, ಹೆಂಗುಸರು ಮಕ್ಕಳು ಮೊದಲುಗೊಂಡು ಅನೇಕರು ಗುಂಡಿನಿಂದ ಬೇಟೆಯಾಡಲ್ಪಟ್ಟರು. ನಿರಪರಾಧಿ ಜನರ ಮೇಲೆ ಭಯಂಕರ ತರದ ಕೂರ ಕೃತ್ಯಗಳು ನಡೆದುವು. ಜನರು ಭೀತಿಯಿಂದ ಭ್ರಾಂತರಾಗಿ ಚೆಲ್ಲಾಪಿಲ್ಲಿ ಓಡುವವರಾದರು.

ದಂಗೆಕೋರರಲ್ಲಿ ದಂಗೆ.

ಆದರೆ ದಂಗೆಕೋರರಲ್ಲಿ ದಂಗೆಯು ಪ್ರಾರಂಭವಾಗಿ ಅದು ದಿನೆ ದಿನೆ ಪ್ರಬಲವಾಗುತ್ತಾ ಬರುತ್ತಿದೆ. ಟೆಟುವಾನ್ ಎಂಬಲ್ಲಿರುವ ದಂಗೆಕೋರರ ಸಮಗ್ರ ಪಾಯದಳವು ದಂಗೆ ಎಬ್ಬಿಸುವುದು. ಅನೇಕರಿಗೆ ಶಿಕ್ಷೆಯೆಂದು ಮರಣದಂಡನೆಯು ವಿಧಿಸಲಾಗುತ್ತಿದೆ. ಸಾಧ್ಯವಾದರೆ ಜನರಲ್ ಫ್ರೆಂಕೋನನ್ನು ತಿನಿದು ಕೊಲ್ಲುವ ಪ್ರಯತ್ನಗಳು ನಡೆಯುತ್ತಿವೆ.

ದಂಗೆಕೋರರ ಅನೇಕ ಸೈನ್ಯಪಡೆಗಳು ಸರಕಾರದ ಕಡೆಯನ್ನು ಸೇರುತ್ತಿವೆ. ಮಿಶ್ರ ಸೈನ್ಯ ಮಂಡಲಗಳು ದಂಗೆಕೋರರಿಗಾಗಿ ಕದನ ನಡೆಯಿಸುತ್ತಿದ್ದರೂ, ಅವರು ಬೇಕುಬೇಕೆಂತಲೇ ಕೋವಿಗಳನ್ನು ಆಕಾಶಕ್ಕೆ ಹಾರಿಸುತ್ತಿದ್ದರು. ಪೆಸಿಯಿಸ್ತ ತಂಡದಲ್ಲಿ ಅನೇಕ ಭಿದ್ರಗಳುಂಟಾಗಿವೆ.

ವಿಶೇಷ ಕನದ ಘಟನೆಯೆಂದರೆ ಪೆಸಿಯಿಸ್ತ ದಂಗೆಕೋರರ ಸಹಾಯಾರ್ಥವಾಗಿ ಜರ್ಮನಿಯಿಂದ ಕಳುಹಿಸಲಾದ ಸೈನ್ಯಮಂಡಳವು ದಂಗೆ ಎಬ್ಬಿಸಿರುವುದೆಂದು ತಿಳಿದುಬರುತ್ತದೆ.

ಶಾಂತಿರಕ್ಷಣೆಗಾಗಿ ಹೊಸ ಪ್ರಯತ್ನಗಳು

ಇಂಗ್ಲೆಂಡಿನ ಲೇಬರ್ ಪಂಗಡದ ಮುಖಂಡರಾದ ಓರ್ವ ಲೆನ್ಸಬರಿಯವರು ಹಿಟ್ಲರನೊಡನೆ ಶಾಂತಿ ಮಾತುಕತೆಗಳನ್ನು ನಡೆಯಿಸಲು ಮೊನ್ನೆ ಜರ್ಮನಿಗೆ ತೆರಳಿದ್ದರು. ಯುದ್ಧ ಕಾರಣಗಳನ್ನು ನಿವಾರಿಸುವ ಅಪರೀಕ್ಷಣೆಗೂ ಮಾತುಕತೆ ನಡೆದಿರುತ್ತವೆಂದು ತಿಳಿದುಬರುತ್ತದೆ. ಆ ಕುರಿತಾಗಿ ನೂತನ ಪ್ರಪಂಚ ಪರಿಷತ್ತೊಂದನ್ನು ಜರುಗಿಸುವವರಾಗಿ ತಿಳಿದುಬರುತ್ತದೆ. ಈ ಪರಿಷತ್ತಿನಲ್ಲಿ ಯುದ್ಧ ಸಾಮುಗ್ರಿ ಸಿದ್ಧತೆ, ಕಾರಣ ಸಾಮುಗ್ರಿಗಳ ಹಂಚುವಿಕೆ, ಪ್ರಗತಿ ಹೊಂದಿದ ದೇಶಗಳ ಮೇಲೆ ಅಂತರಾಷ್ಟ್ರೀಯ ಅಧಿಕಾರ, ವ್ಯಾಪಾರವು ವ್ಯವಸ್ಥೆ ಪಡಿಸುವುದು, ಇತ್ಯಾದಿ ಅಧಿಕಾರಗಳು ಚರ್ಚಿಸಲ್ಪಟ್ಟು ಎಲ್ಲಾ ಜನಾಂಗಗಳಿಗೆ ಸಮಾನವೆನಿಸುವ ರೀತಿಯಲ್ಲಿ ಕೆಲವು ಒಪ್ಪಂದದ ಕರಾರುಗಳನ್ನು ನಡೆಯಿಸಬೇಕೆಂದಿದ್ದಾರೆ.

ಸ್ಪೇಯಿನ್ ದೇಶದ ಅಂತರ್ಕಲಹವು ಅನ್ಯರ ಕೈಯಿಲ್ಲದೆ ಸುಧಾರಣೆ ಹೊಂದಲು ಅವಕಾಶ ಕೊಡಬೇಕಾಗಿ ಈ ಪರಿಷತ್ತಿನಲ್ಲಿ ತೀರ್ಮಾನಿಸಲಾಗುವುದು.

ಹಿಟ್ಲರನ ಹೊಸ ಉಪಾಯ.

ಆದರೆ ಇವತ್ತಿಗೆ ಒಂದೆರಡು ವರ್ಷಗಳಲ್ಲಿ ನಡೆದ ಹಾವಳಿಗಳು ತಿಳಿದವರಿಗೆ ಮೇಲಿನದು ಒಂದು ಮಹಾ ಕಪಟಾಶೆಯಂತೆ ಭಾಸವಾಗುತ್ತಿದೆ. ಜನಾಂಗಮಂಡಳವು ಈ ವೊದಲು ಮಾಡಿದುದೇನು? ಲೋಕಾರ್ನೋ ಒಪ್ಪಂದವು ಏನಾಯಿತು? ಶಟಸ್ಥಭಾವ ಸಮಿತಿಯ ಗತಿಯು ಏನಾಗಿದೆ? ಈ ಮೇಲಿನ ವ್ಯವಹಾರಗಳು ನೋಡಿದರೆ ಪಾಶ್ಚಾತ್ಯದ ಪ್ರಭುತ್ವದ ಜನಾಂಗಗಳು ನ್ಯಾಯಕ್ಕೆ ಹೆಚ್ಚಿನ ಮನ್ನಣೆಯನ್ನು ಕೊಡುವಂತೆ ಕಾಣುವುದಿಲ್ಲ. ~~ಹಿಟ್ಲರನು ನುರಿತಮೋಸದಿಂದ ತನ್ನ ಅನೇಕ ಉದ್ದಿಷ್ಟ~~ಗಳನ್ನು ನಡೆಯಿಸಿ ಬಿಟ್ಟನು. ಈಗಿನದು ಅದೇ ಬಗ್ಗೆ ಆತನದೊಂದು ಹೊಸ ಉಪಾಯವಾಗಿರಬಹುದು.

ಹಿಟ್ಲರನ ಹೊಸ ಉಪಾಯ!!

ಜರ್ಮನಿಗೆ ತರಬೇತಿಗೆ ಹೊಸತೊಂದು ರಂಗಭೂಮಿ.

ಆಸ್ಟ್ರಿಯಾದ ಮೇಲೆ ಜರ್ಮನಿಗೂ ಇಟಲಿಗೂ ಕಣ್ಣಿರುವುದು. ಈಗ ಅಲ್ಲಿ ಮುಸಲೋನಿಗೆ ಹಿತಕರವೆನಿಸುವ ಸರಕಾರವು ಅಧಿಕಾರದಲ್ಲಿದೆ. ಆದರೆ, ಹಂಗೇರಿ, ಜುಗಾಸ್ಲೆವಿಯಾ ಇತ್ಯಾದಿ ಹತ್ತಿರದ ದೇಶದೊಡನೆ ಕೂಡಿ ಸ್ವಾತಂತ್ರ್ಯವಾಗಿರಬೇಕೆಂದು ಆಸ್ಟ್ರಿಯಕ್ಕೆ ಒಂದು ಆಶೆಯಿದೆ. ಹಿಟ್ಲರನಿಗೆ ಆಸ್ಟ್ರೀಯವನ್ನು ಜರ್ಮನಿಗೆ ಕೂಡಿಸುವ ಆಶೆಯಿದೆ. ಆತನು ಆ ಆಶೆಯನ್ನು ತೊರೆಯುವುದಾದರೆ ತಾನು ಆತನಿಗೆ ಎಬಿಸಿನಿಯದ ಒಂದಂಶವನ್ನು ಕೊಡುವೆನಾಗಿ ಮುಸಲೋನಿಯ ಮಾತು. ಇಟಲಿ ಸೈನಿಕರಿಗೆ ತಡೆಯಲು ಅಸಾಧ್ಯವೆನಿಸುವ ಹಬಸಿಗಳಿರುವ ಅಂಶ ಯಿದು. ಜರ್ಮನಿಗೆ ಅವರನ್ನು ತಡೆಯಲು ಸಾಧ್ಯವಾಗಬಹುದಂತೆ. ಮುಂದಿನ ಸಂಗ್ರಾಮಕ್ಕಾಗಿ ತನ್ನ ಸೈನ್ಯಮಂಡಳದ ತರಬೇತಿಗಾಗಿ ಈ ಸ್ಥಳವನ್ನು ಸ್ವೀಕರಿಸಬಹುದೆಂಬುದಾಗಿ ಒಲವಾದ ವಾರ್ತೆಯಿದೆ.

ಜರ್ಮನಿಯ ಈಗಿನ ವರ್ತನೆ

ಐರೋಪ್ಯದ ಇತರ ಪ್ರಭುತ್ವದ ಜನಾಂಗಗಳಂತೆ ಈಗಲೀಗ ಯುದ್ಧದಲ್ಲಿ ಕೈಹಾಕುವ ಆಲೋಚನೆಯು ಹಿಟ್ಲರನಿಗೆ ಇಲ್ಲ. ನೌಕೆ, ವಿಮಾನ ಇತ್ಯಾದಿಗಳನ್ನು ನಡೆಯಿಸಿ, ತನ್ನ ಸ್ಥಿತಿಯನ್ನು ವೃದ್ಧಿಪಡಿಸಿ ನಂತರ ತನ್ನ ಕಾರ್ಯ ಸಾಧಿಸಬೇಕಾಗಿರುವುದು ಹಿಟ್ಲರನ ಉದ್ದೇಶ. ಅಲ್ಲಿ ನಯನ ಇಲ್ಲಿ ಮೋಸ ಮತ್ತೊಂದು ಕಡೆ ಎಚ್ಚರಿಕೆಯ ಗರ್ಜನೆ ಇತ್ಯಾದಿಗಳಿಂದಲೇ ತನ್ನ ಕೆಲವು ಉದ್ದೇಶಗಳನ್ನು ಸಾಧಿಸಿ, ಹಿಟ್ಲರನು ಬಲಹೊಂದುತ್ತಾ ಇದ್ದಾನೆ.

ಜಪಾನಿನ ಹೊಸ ಸರಕಾರ.

ಮೊನ್ನೆ ನಡೆದ ಜಪಾನಿನ ಮಹಾ ಚುನಾವಣೆಯಲ್ಲಿ ಸರಕಾರಕ್ಕೆ ಪ್ರಚಂಡ ಸೋಲು ಒದಗಿದುತ್ತದೆ. ವಿರೋಧಪಕ್ಷಕ್ಕೆ ೪೫೬ ಸದಸ್ಯತನಗಳಲ್ಲಿ ೪೦೩ ಸದಸ್ಯತನಗಳು ದೊರಕಿವೆ. ಆದರೂ ಸೋತ ಸರಕಾರವು ಇನ್ನೂ ಅಧಿಕಾರದಲ್ಲಿದೆ. ಚಕ್ರವರ್ತಿಯರ ಅನುಮತಿಯಿಂದ ಅಂದರೆ ಜನರ ಮೇರೆಗೆ ಚಕ್ರವರ್ತಿಯರ ಮಾತಿಗೆ ಕಡಿಮೆ ಬೆಲೆ ಎಂದಾಯಿತು. ಈ ಸ್ಥಿತಿಯು ಸ್ವತಂತ್ರವೆಂದು ಕರೆಯಿಸಿಕೊಳ್ಳುವ ಜಪಾನಿನಲ್ಲಿ ಚಕ್ರವರ್ತಿಯರ ಮತವೆಂದರೆ ಅದು ಸೇನೆಯ ಮತ. ಜಪಾನಿನಲ್ಲಿ ಸೇನಾಮಂಡಳಕ್ಕೆ ಪ್ರಬಲತೆ ಬಹಳ. ಸೇನೆಯ ದೆಸೆಯಿಂದ ಸಂಗ್ರಾಮಿಕರ ಮಹತ್ತಾದ ಉದ್ದೇಶಸಾಧನೆಗಾಗಿ ಸರಕಾರವು ಭಯಂಕರ ಕರದ ಹೊರೆಯನ್ನು ಹಿಡಿಸಬೇಕಾಗಿದೆ. ಸಮಸ್ತ ದೇಶಕ್ಕೆ ಇದು ಒಪ್ಪಿತಕ್ಕದಲ್ಲ. ಜನಮತವು ಇದಕ್ಕೆ ವಿರೋಧವಾಗಿರುವುದೆಂದು ಮೊನ್ನಿನ ಚುನಾವಣೆಯಲ್ಲಿ ವ್ಯಕ್ತವಾಗಿದೆ. ಆದರೆ ಸಂಗ್ರಾಮು ಸಮಯಕ್ಕೆ ಪ್ರಜಾ ಪ್ರಾತಿನಿಧ್ಯಬೇಕಾಗಿಲ್ಲ ತನ್ನದೇ ಕೈ ಮೇಲಾಗಬೇಕೆಂದು ಅದು ಮುಖ್ಯ ಮಂತ್ರಿಯರ ಮೂಲಕ ಸಾಧಿಸುತ್ತಿದೆ. ಈಗ ಅಧಿಕಾರದಲ್ಲಿರುವ ಸಂಗ್ರಾಮು ಸರಕಾರವನ್ನೆ ಮುಂದುವರಿಸುವ ಪ್ರಯತ್ನಗಳಿವೆ.

ಮಿಲಿಟರಿ ಸರಕಾರದಿಂದ ಜನರಿಗೆಲ್ಲಾ ಸಾಕು ಸಾಕಾಯಿತೆನಿಸಿದೆ. ಸಾಮಾಜಿಕ ಸುಧಾರಣೆಗಳು ಮಿಲಿಟರಿ ಸರಕಾರಕ್ಕೆ ಬೇಡ. ಕಂದಾಯ ಹೊರೆಯು ದಿನ ಹೋಗುತ್ತಾ ಹೆಚ್ಚಾಗುತ್ತಾ ಬಂದಿದೆ. ಸಾರ್ವಭೌಮತೆಯು ಜನರ ಮೇಲೆ ಕಪ್ಪ ಕೂತುಕೊಂಡಿದೆ. ಇದರ ಪರಿಣಾಮವಾಗಿ ಮಹಾಕ್ರಾಂತಿಯು ಅಲ್ಲಿ ಬೇಗನೆ ಉಂಟಾಗದೆ ನಿಲ್ಲದೆಂದು ಒಲವಾದ ವಾರ್ತೆಯಿದೆ.

ಇಂಗ್ಲಾಂಡಿನಲ್ಲಿ ಅಶಾಂತಿ.

ಮಹಾ ಯುದ್ಧಸಿದ್ಧತೆಗಳನ್ನು ಮಾಡಿ ಇಂಗ್ಲಂಡು ಶಾಂತಿಯ ಕುರಿತು ಭರವಸೆಗಳನ್ನು ಕೊಡುತ್ತಿದೆ. ಈ ಯುದ್ಧಸಿದ್ಧತೆಯಿಂದ ಇಂಗ್ಲೆಂಡಿನ ಸಾಮಾಜಿಕ ಸ್ಥಿತಿಯು ಕೆಟ್ಟುಹೋಗಿರುತ್ತದೆ. ಯುದ್ಧಸಾಮುಗ್ರಿಯು ತಯಾರಿಸುವ ಕೈಗಾರಿಕೆಯಿಂದ ಇಂಗ್ಲಾಂಡಿನ ಕೈಗಾರಿಕೆಗಳಿಗೆ ಸುದಿನ ಬಂದಿದ್ದರೂ ಅದರಿಂದ ಕೆಲವೇ ಮಂದಿಗಳಲ್ಲಿ ಮಾತ್ರ ಉಂಟಾಗುವಂತಾಗಿದೆ. ಯುದ್ಧಸಿದ್ಧತೆಗಾಗಿ ದು ಜನರ ಮೇಲೆ ತೆರಿಗೆಯ ಹೊರೆಯನ್ನು

ಬ್ರಿಟಿಷ ಪತ್ರಿಕೆಗಳ ಮೇಲೆ ಮುಸಲೋನಿಯ ಬಹಿಷ್ಕಾರ

ಸ್ಪೇನಿನಲ್ಲಿ ಇಟಲಿಯವರಿಗೆ ಒದಗಿದ ಸೋಲಿನ ವಾರ್ತೆಗಳನ್ನು ಕೊಟ್ಟು ಆಂಗ್ಲೇಯ ಪತ್ರಿಕೆಗಳು ಮುಸಲೋನಿಯ ಕೋಪಕ್ಕೆ ಪಾತ್ರವಾಗಿವೆ. ಅವುಗಳು ಮುಂದಕ್ಕೆ ತನ್ನ ದೇಶವನ್ನು ಸೇರಬಾರದಾಗಿ ಆತನ ಕಟ್ಟಪ್ಪಣೆ ಹೊರಟಿರುತ್ತದೆ. ಅಲ್ಲದೆ ಇಂಗ್ಲೆಂಡಿನಲ್ಲಿರುವ ಇಟಲಿಯ ಪತ್ರಿಕಾ ಪ್ರಕಟಕರು ಹಿಂದಕ್ಕೆ ಕರೆಯಲ್ಪಟ್ಟಿರುವರು. ಇಟಲಿಯಲ್ಲಿರುವ ಆಂಗ್ಲೇಯ ಪತ್ರಿಕಾ ಪ್ರತಿನಿಧಿಗಳ ಹೊರಗೆ ಅಟ್ಟಲ್ಪಟ್ಟಿರುವರು.

ಇಂಗ್ಲಾಂಡಿನಲ್ಲಿ —

ಧೈರ್ಯದ ಸಾಹಸದಿಂದ ಇಂಗ್ಲಾಂಡು ಸ್ವಾತಂತ್ರ್ಯವನ್ನು ಪಡೆಯಿತು. ಅಲ್ಲದೆ ತನಗೆ ಬೇಕಾದ ನೂತನ ಶಾಸನವನ್ನು ರಚಿಸಿತು. ಆದರೆ ಆ ಶಾಸನವು ಪ್ರಜಾಪ್ರಾತಿನಿಧ್ಯ ಸೂತ್ರಗಳಿಂದ ಕೂಡಿದೆಂದು. ಹೇಳಲಿಕ್ಕಾಗುವುದಿಲ್ಲವಂತೆ. ಸಾರ್ವಭೌಮತೆಯು ಕಡೆಗೆ ಹೆಚ್ಚಿನ ಲೀನತೆಯು ಅವರಲ್ಲಿ ಕಾಣಿಸುತ್ತವೆ. ಐಯರ್ಲೆಂಡು ಇವರೊಡನೆ ಮೈತ್ರಿ ಬೆಳೆಯಿಸಿದೆ. ಅಂದರೆ ಸ್ವಾತಂತ್ರ್ಯ ಐಯರ್ಲೆಂಡು ಸಾರ್ವಭೌಮತೆಯು ಇನ್ನೊಂದು ಕುರುಹಾಗಿರುತ್ತದೆ.

ಸ್ಪೇಯಿನಿನ ಮಕ್ಕಳು

ದಂಗೆಕೋರರು ಕ್ರೂರತನದ ದಂಗೆಯಿಂದ ರಕ್ಷಿಸಲು ಅನೇಕ ಮಂದಿ ಮಕ್ಕಳನ್ನು ಸ್ಪೇಯಿನಿನಿಂದ ಹೊರಸಾಗಿಸಿರುವರು. ಕೆಲವರನ್ನು ಕೆಲವು ಉದಾರಿಗಳು ಸಾಕುತ್ತಿರುವರು. ಆದರೆ ಹೆಚ್ಚಿನ ಮಂದಿಗಳನ್ನು ಯೋಗ್ಯರೀತಿಯಲ್ಲಿ ಸಾಕಿ ಸಲಹಲು ಸ್ಪೇಯಿನ ಸರಕಾರದಿಂದ ಏರ್ಪಾಡುಗಳು ಮಾಡಲಾಗಿವೆ.

ಹೆಚ್ಚಿರುವರು. ಕೆಲಸಗಾರರು ಧನಾಢ್ಯರೊಡನೆ ಲಾಭದಲ್ಲಿ ಅಂಶವನ್ನು ಕೇಳುತ್ತಿದ್ದಾರೆ. ದೇಶದಲ್ಲಿ ನ ಹಾ ಮುಷ್ಕರ ಉಂಟಾಗುವ ಸಂಭವಗಳು ಎದ್ದಿವೆ. ಬಸ್ಸು ಚಲಾವಣೆಗಾರರ ಮುಷ್ಕರದಿಂದ ಇಂಗ್ಲೆಂಡಿನ ಸಮಸ್ತ ಸಂಚಾರ ವ್ಯವಸ್ಥೆ ನಿಂತುಹೋಗಬಹುದು. ಈ ಸ್ಥಿತಿಯನ್ನು ನಿವಾರಿಸಲು ಸರಕಾರದವರು ಅದಾಯ ತೆರಿಗೆಯನ್ನು ವಿಧಿಸಲು ಆಲೋಚಿಸಿರುವರು. ಕೆಲಸಗಾರರು ಹೆಚ್ಚಿನ ಸಂಬಳವನ್ನು ಕೇಳುತ್ತಿರುವ ಈ ಸಮಯದಲ್ಲಿ ಹೆಚ್ಚಿನ ಆದಾಯ ತೆರಿಗೆಯನ್ನು ತೆರಲು ಸಿದ್ಧರಿಲ್ಲ. ಸರಕಾರವು ಧನಾಢ್ಯರ ಕಡೆಗಿದೆ. ಅಂದರೆ ಯಾವಾಗ ಇಂಗ್ಲಾಂಡಿನಲ್ಲಿ ಮಹಾ ಕ್ರಾಂತಿ ಉಂಟಾಗುವುದೋ ಎಂಬ ಭೀತಿಯು ಉಂಟಾಗ ಹತ್ತಿದೆ.

ಇಂಗ್ಲಾಂಡಿನಲ್ಲಿ ಇನ್ನೊಂದು ಮುಷ್ಕರ?

ಯುದ್ಧಸಾಮುಗ್ರಿ ಸಿದ್ಧತೆ ಕಾರ್ಯಕ್ರಮವನ್ನು ಕೈಕೊಂಡಂದಿನಿಂದ ಇಂಗ್ಲೆಂಡಿನ ಕೈಗಾರಿಕೆಗಳಿಗೆಲ್ಲಾ ಒಂದು ತರದ ನವಚೇತನವುಂಟಾಗಿರುತ್ತದೆ. ಎಲ್ಲೆಲ್ಲೂ ವೃದ್ಧಿಯಾಗಿರುತ್ತದೆ. ಆದರ ಲಾಭಗಳನ್ನು ಅನುಭವಿಸುವವರು ಮಾತ್ರ ಕೆಲವೆ ಮಂದಿ ಧನಿಕರಾಗಿರುವರು. ಕೆಲಸಗಾರರು ಈ ಲಾಭದಲ್ಲಿ ಅಂಶವನ್ನು ಕೇಳುವುದು ಮಾತ್ರವಲ್ಲದೆ ತಮ್ಮ ತಲಬುಗಳನ್ನು ಹೆಚ್ಚಿಸಬೇಕಾಗಿ ಛಲ ಹಿಡಿದಿರುವರು. ಮೋಟಾರಿನ ಉದ್ಯಮದಿಂದ ಕಲ್ಲಿದ್ದಲಿನ ಕೈಗಾರಿಕೆ ಬಹಳ ಯಶಸ್ವಿಯಾಗಿ ನಡೆದು ಉತ್ಪತ್ತಿಯ ತಲಬಿನ ಕುರಿತು ಕೆಲಸಗಾರರಲ್ಲಿ ಅಸಮಾಧಾನವಿರುವುದರಿಂದ ಅವರ ಸಪ್ಪದಲ್ಲೇ ಮುಷ್ಕರ ಒಡಿಯಬಹುದೆಂದು ವಾರ್ತೆಯು ಬಂದಿರುತ್ತದೆ.

ಜಸ್ಟಿಸ್ ಪಂಗಡದವರ ಸಭೆ

ಜಸ್ಟಿಸ್ ಪಂಗಡದವರ ಸಭೆಯೊಂದು ಮೊನ್ನೆ ೨೯ರಂದು ಮದ್ರಾಸಿನಲ್ಲಿ ಬೊಬ್ಬಿಲಿ ರಾಜರ ಅಧ್ಯಕ್ಷತೆಯಲ್ಲಿ ಜರಗಿತು. [illegible] ಕೆಲವರನ್ನು ಮಂತ್ರಿಗಳಾಗಿರಿಸಿದ ಸರಕಾರದ ವರ್ತನೆಯನ್ನು ಖಂಡಿಸಲಾಯಿತು. ಅಲ್ಲದೆ ಇತರ ಅನೇಕ ಠರಾವುಗಳಾದವು. ಕೊಂಗ್ರೆಸ್ಸಿನ ಈ [illegible] ಖಂಡಿಸಲಾಗಿರುತ್ತದೆ.

ರೋಮಿನ ಗೌರವ

[illegible] ಬಹಳ ಯಶಸ್ಸು ಪಡೆದಿತು. ಅಧಿಕ ಸೇನಾ [illegible] ಜರ್ಮನಿಯಲ್ಲಿ ಅತಿ ಶ್ರೇಷ್ಠವಾದ ದೆಂದೆನಿಸಿತು. ಆದರೆ ಈ ಕೀರ್ತಿಯು ನೊಂದ [illegible] ಅವಧಿಯಲ್ಲಿ ರೋಮ [illegible] ಹೊಂದಿರುತ್ತದೆ. [illegible] ರೋಮಿನ [illegible] ಕಾಲದಲ್ಲಿ [illegible] ಮೊನ್ನೆ ಮುಸಲೋನಿ ಮತ್ತು ಇಟಲಿಯ ಚಕ್ರವರ್ತಿ ಇದ್ದ [illegible] ಬೆಂಕಿಯಿಂದ [illegible] ಹಿಸಲ್ಪಟ್ಟಿತು.

ಹೋಲಿವುಡ್ಡಿನಲ್ಲಿ ಮುಷ್ಕರ

[illegible] ಹೋಲಿವುಡ್ಡಿನ [illegible] ಕೆಲವು ಶ್ರೇಷ್ಠ ನಟರು [illegible] ಚಲನಚಿತ್ರಗಳ ಪ್ರದರ್ಶಿಸಲ್ಪಡಲಾರವು [illegible] ಪಿಕೆಟಿಂಗ್ ನಡೆಯುತ್ತಲಿರುತ್ತದೆ.



ಬಗೆಯುವ ಚಳಿ ಬೇಗೆಯನ್ನೂ ಉರಿಯನ್ನೂ ತಣಿಗಿರಿಸಿರಿ

ನಿಮ್ಮ ಚರ್ಮಕ್ಕೆ ಜಾಂಬಕ್ ತಿಕ್ಕಿರಿ

[illegible] ಹೋಗಲಾಡಿಸಿ ಚರ್ಮವನ್ನು ಪ್ರಸ್ವೀಕರಿಸಿ ಪೂರ್ವದೋಕ್ಯವನ್ನೇ ಉಂಟುಮಾಡುತ್ತದೆ. ಮಲಗುವ ಸಮಯಕ್ಕೆ ಜಾಂಬಕ್ಕನ್ನು ತಿಕ್ಕಿದರೆ ನೀವು ನಿದ್ರೆಯೊಳಗಿರುವಾಗಲೇ ಅದು ವಾಸಿಮಾಡುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಜಾಂಬಕ್ಕು ರೂ 2 4—0ದಂತೆ ಸಿಗುತ್ತದೆ.

ಏಜಂಟರು — ಮೆಸರ್ಸ ದಾಧಾ ಎಂಡ್ ಕೊ

ಪಿ ಟಿ ಮದ್ರಾಸು.

ಜಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರವಿಲ್ಲ

ಜಾಂಬಕ್

Zam Buk

ಹಿಂದೂದೇಶ

ಅಹಮದಾಬಾದಿನ ಮಾಲಿಕಾಪರ ಗಲಿ ಬಿಂದು ಮೈದಾನದಲ್ಲಿರುವ ಮಜೂರರ ಗುಡಿಸಲುಗಳ ಸಮೂಹದಲ್ಲಿ ಮೊನ್ನೆ ತಾ. 10ರಲ್ಲಿ ಯಾವುದೋ ಕಾರಣದಿಂದ ಬೆಂಕಿಯುಂಟಾಗಿ ಹತ್ತು ಗುಡಿಸಲುಗಳು ಭಸ್ಮವಾದುವು. ಪ್ರಾಣಹಾನಿಯೇನೂ ಉಂಟಾಗಲಿಲ್ಲ. ಫಾಯರ್ ಎಂಜಿನುಗಳಿಂದ ಉಳಿದ ೭ ಗುಡಿಸಲುಗಳನ್ನು ರಕ್ಷಿಸಲಾಯಿತು.

೦ ೦ ೦ ೦

ಸ್ವತಂತ್ರ ದಿನಾಚರಣೆ ದಿವಸ ಭಾಷಣ ಮಾಡಿದುದಕ್ಕಾಗಿ ಬೆಂಗಳೂರಿನ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ. ಜಿ. ಆರ್. ಸ್ವಾಮಿಗಳ ಮೇಲೆ ರೂ. ೫೦ರ ಜುಲುಮಾನೆ ಯಾ ೧೫ ದಿವಸಗಳ ಕಾರಾಗೃಹವಾಸ ವಿಧಿಸಲಾಗಿದೆ.

೦ ೦ ೦ ೦

ಎಲಿಮೆಂಟರಿ ವಿದ್ಯಾಭ್ಯಾಸದ ಕುರಿತು ಸರಕಾರದವರು ವಿಚಾರಣೆ ನಡೆಯಿಸಬೇಕಾಗಿ ತಂಜಾವೂರಿನಲ್ಲಿ ನಡೆದ ವಿದ್ಯಾಪರಿಷತ್ತಿನಲ್ಲಿ ಠರಾವಾಗಿರುತ್ತದೆ

೦ ೦ ೦

ಹಿಂದೂದೇಶದ ಸಕ್ಕರೆಯು ಹೊರದೇಶಗಳಿಗೆ ರವ್ತಗಬಾರದೆಂದು, ಲಂಡನಿನಲ್ಲಿ ಜರಗಿದ ಅಂತರಾಷ್ಟ್ರೀಯ ಸಕ್ಕರೆ ಪರಿಷತ್ತಿನಲ್ಲಿ ನಿರ್ಣಯವಾಗಿದೆ ಇದನ್ನು ಪ್ರತಿಕೂಲಿಸಿ, ಭಾರತೀಯ ಸಕ್ಕರೆ ಸಂಘದವರು ಠರಾವು ಮಾಡಿರುವರು

೦ ೦ ೦

ಕಲ್ಕತ್ತೆಯಲ್ಲಿ ಉಂಟಾದ ನಾರಿನ ಮಿಲ್ಲುಗಳ ಮುಷ್ಕರವು, ಬಂಗಾಳದ ಮುಖ್ಯ ಮಂತ್ರಿಗಳ ಭರವಸೆ ನಿಮಿತ್ತ ಮೊನ್ನೆಯಿಂದ ನಿಲ್ಲಿಸಲಾಗಿದೆ. ಕೆಲಸಗಾರರ ಆದಷ್ಟು ಕೋರಿಕೆಗಳು ನಡೆಯುವಂತೆ ಮಾಡುವನೆಂದು ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿರುವರು.

೦ ೦ ೦ ೦

ಬಂಗಾಳದ ಮಾದರಿಪುರ ಎಂಬಲ್ಲಿ ಹಳ್ಳಿಯಲ್ಲಿ ಮೊನ್ನೆ ತಾ 11ರಲ್ಲಿ ಗಲಬೆಯುಂಟಾಗಲು, ಪೋಲೀಸರು ಅದನ್ನು ತಡೆಯಲು ತುಪಾಕಿಗಳನ್ನು ಹಾರಿಸಲಾಗಿ ಒಬ್ಬನ ಕೊಲೆಯು, ಇನ್ನಿತರ ಅನೇಕರ ಹಾನಿಯು ನಡೆದಿರುತ್ತದೆ

೦ ೦ ೦ ೦

ಹರಿಜನೋದ್ಧಾರ ಕುರಿತು ಕೆಲವು ಸಮಸ್ಯೆಗಳನ್ನಾಲೋಚಿಸಲು, ಪೂನೆಯ ಹರಿಜನ ನಾಯಕರಾದ ಶ್ರೀ ರಾಜಭೋಜರು, ಸಿಗಾಂವಿನಲ್ಲಿ ಮಹಾತ್ಮಾಜೀಯರನ್ನು ಕಂಡರು ಮಹಾರಾಷ್ಟ್ರದಲ್ಲಿ ಹರಿಜನರ ಬಗ್ಗೆ ಚರ್ಮ ಹದ ಮಾಡುವ ಸಣ್ಣ ಖಾರ್ಖಾನೆಗಳನ್ನು ಸ್ಥಾಪಿಸುವ ಸೂಚನೆಯನ್ನು ಕೊಟ್ಟಿರುವರು

೦ ೦ ೦ ೦

ಗಡಿನಾಡುಗಳಲ್ಲಿ ಉಂಟಾದ ಅಶಾಂತಿಯು ಇನ್ನೂ ನಿವಾರಣೆಯಾಗಲಿಲ ಗುಡ್ಡೆ ನಿವಾಸಿಗಳು, ತಮ್ಮ ಛಲವನ್ನು ಇನ್ನೂ ಬಿಡಲಿಲ್ಲ ಸರಕಾರದ ಭದ್ರತಾ ಏರ್ಪಾಡು, ಸರಿಯಾಗಿ ನಡೆಯುತ್ತಿದೆ

೦ ೦ ೦ ೦

ಹಿಂದೂದೇಶದ ಸಿವಿಲ್ ಲಿಬರ್ಟೀಸ್ ಪರಿಷತ್ತೊಂದು ಲಂಡನಿನಲ್ಲಿ ಬೇಗನೆ ಜರಗುವುದಾಗಿ ತಿಳಿದು ಬರುತ್ತದೆ

೦ ೦ ೦ ೦

ನಾಗಪುರದ ರಾಜಕೀಯ ಪರಿ[illegible] ಮೊನ್ನೆ ತಾ 11ರಲ್ಲಿ ಅಲ್ಲಿನ ದುಮ್ಮುಗಾಂ ಎಂಬ ಹಳ್ಳಿಯಲ್ಲಿ ಜರಗಿತು ಡಾ। ಎನ್ ಬಿ ಖಾರೆ, ಕಾಂಗ್ರೆಸ್ ಮುಖಂಡರು ಅಧ್ಯಕ್ಷರಾಗಿದ್ದರು ಸಾವಿರಕ್ಕೆ ಮಿಕ್ಕಿದ ಹಾಜರಿಯಿತ್ತು. ಕಾಂಗ್ರೆಸ್ಸಿನ ಈಗಿನ ವರ್ತನೆಯನ್ನು ಪುಷ್ಟೀಕರಿಸಿ ಠರಾವುಗಳಾದವು

೦ ೦ ೦ ೦

ತಿರುಪತಿ ಕಡೆಗೆ ಯಾತ್ರೆ ಬೆಳೆಸಲು ಮದರಾಸು ನಗರಕ್ಕೆ ಬಂದ ಇರ್ವರು, (ತಂದೆ ಮತ್ತು ಭಾಗ್ಯ ಒಬ್ಬ ಸ್ತ್ರೀಯಿಂದ, ವಿಷ ಪ್ರಯೋಗಕ್ಕೆ ಒಳಗಾಗಿ, ದೈವವಶಾತ್, ಓರ್ವ ಸ್ಕೌಟಿನ ಸಹಾಯದಿಂದ, ಆಸ್ಪತ್ರೆಯನ್ನು ಸೇರಿ, ರಕ್ಷಣೆ ಹೊಂದಿರುವರು ಈ ಘಟನೆಯು ನಡೆದುದು ತಾ. ೧೧ರಲ್ಲಿ.

೦ ೦ ೦ ೦

ಕಲ್ಕತ್ತಾದಲ್ಲಿ ಒಬ್ಬ ಉಪಾಧ್ಯಾಯರಿಗೆ ದುಷ್ಟ ವರ್ತನೆಯು, ಒಂದು ಬಸ್ಸು ಮ್ಹಾಲಿಕನಿಂದ ದೊರಕಿದ ಪರಿಣಾಮವಾಗಿ, ಮರುದಿನ ನೂರಕ್ಕೆ ಮಿಕ್ಕಿದ ವಿದ್ಯಾರ್ಥಿಗಳು ಆ ಬಸ್ಸನ್ನು ನಿಲ್ಲಿಸಿ, ಡ್ರೈವರ್, ಮ್ಹಾಲಿಕ, ಇತ್ಯಾದಿ ಹೊರಗೆಳೆದು, ಬಸ್ಸಿಗೆ ಕಲ್ಲು ಇತ್ಯಾದಿಗಳಿಂದ ಜಖಂಪಡಿಸಿ, ತಮ್ಮ ಸೇಡನ್ನು ತೀರಿಸಿರುವರು

೦ ೦ ೦ ೦

ಕಾಂಗ್ರೆಸ್ ಮನೋಭಾವವಿರುವ ಮುಸ್ಲಿಮರ ಅಖಿಲಭಾರತ ಪರಿಷತ್ತೊಂದು ಸದ್ಯದಲ್ಲೇ ಜರಗುವುದಾಗಿ ತಿಳಿದುಬರುತ್ತದೆ

೦ ೦ ೦ ೦ ೦

೧೯೧೦ರಲ್ಲಿ ಬಂಧಿಸಲ್ಪಟ್ಟ ರತ್ನಗಿರಿಯ ಶ್ರೀಗಳಾದ ವಿ. ಡಿ. ಸಾವಾರಕಾರರು ಬಂಧವಿಮುಕ್ತರಾಗಿರುವರು ಇವರನ್ನು ಇಂಗ್ಲಾಂಡಿನಲ್ಲಿ ಸೆರೆಹಿಡಿದಿದ್ದರು ಅಂದಿನಿಂದ ಇವ್ವರತನಕ ಇವರಿಗೆ ಯಾವತರ್ತು ಬಗೆಯ ಸ್ವಾತಂತ್ರ್ಯವು ಇರಲಿಲ್ಲ

೦ ೦ ೦ ೦ ೦

ರಿಸರ್ವ ಬ್ಯಾಂಕಿನ ಗವರ್ನರರ ತಲಬು ಸ್ವಲ್ಪ ಮಟ್ಟಿಗೆ ಇಳಿಸಲಾಗುವುದೆಂದು ತಿಳಿದು ಬರುತ್ತದೆ

೦ ೦ ೦ ೦ ೦

ಕಳೆದ ಶನಿವಾರ ಕಲ್ಕತ್ತೆಯಲ್ಲಿ ಕೊಮ್ಯುನಿಸ್ಟ ಪಂಗಡದ ಇಬ್ಬರು ಯುವಕರನ್ನು ಪೋಲಿಸರು ಸೆರೆಹಿಡಿದಿರುವರು ಮೇ ದಿನಾಚರಣೆ ದಿವಸ ಕೆಲವು ನೋಟೀಸು ಗಳನ್ನು ಹಂಚಿದ ದುಷ್ಕೃತ್ಯಕ್ಕೆ ಕಾರಣವಂತೆ

೦ ೦ ೦ ೦ ೦

ರಾಜಕೀಯ ಕೈದಿಗಳ ಮತ್ತು ಡೆಟೆನ್ಯೂ ವಿಚಾರದಲ್ಲಿ ರಾಜಕೀಯ ಕೈದಿಗಳ ಸಂಕಷ್ಟ ನಿವಾರಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಸೆಳ್ವನಾರವರು, ರಾಜಕೀಯ ಕೈದಿಗಳ ಮತ್ತು ಡೆಟೆನ್ಯುಗಳ ಈಗಿನ ಸಂಕಷ್ಟಗಳನ್ನು ವಿವರಿಸಿಯೂ, ಅವುಗಳನ್ನು ಸುಧಾರಿಸಬೇಕಾಗಿಯೂ, ಅಲ್ಲದೆ ಅವರನ್ನು ಬಂಧವಿಮುಕ್ತಗೊಳಿಸುವ ಏರ್ಪಾಡಾಗಬೇಕೆಂದೂ ಸೂಚಿಸಿ, ಬಂಗಾಳದ ಮುಖ್ಯ ಮಂತ್ರಿಗಳಾದ ಹಕ್ಕರಿಗೆ ಪತ್ರ ಬರೆದಿರುವರು

೦ ೦ ೦ ೦ ೦

ಗಡಿನಾಡಿನಲ್ಲಿ ಸೈನ್ಯಪಡೆಯೊಂದು ವಜರಿಸ್ತಾನದಲ್ಲಿ ರಸ್ತೆಗಳನ್ನು ದುರುಸ್ತಿಪಡಿಸುವ ಸಮಯ ಗುಡ್ಡೆನಿವಾಸಿಗಳು ಅವರ ಮೇಲೆ ಹಾಯ್ದು ಬಂದು ದಾಳಿ ನಡೆಯಿಸಿದರು

೦ ೦ ೦ ೦ ೦

ಮುಷ್ಕರವು ನಿಲ್ಲಿಸಲಾದುದರಿಂದ, ಕಲ್ಕತ್ತೆಯ ಅನೇಕ ನಾರಿನ ಗಿರಣಿಗಳು ಮತ್ತೊಮ್ಮೆ ಕಾರ್ಯಾರಂಭ ಮಾಡಿರುವವು

೦ ೦ ೦ ೦ ೦

ಅಹಮ್ಮದಾಬಾದಿನಲ್ಲಿ ಹಿಂದೂ ಮುಸ್ಲಿಮರ ಗಲಭೆಯುಂಟಾಗಿ ಅನೇಕರು ಜಖಂ ಹೊಂದಿರುವರು

೦ ೦ ೦ ೦ ೦

ಮೊನ್ನೆ ತಾ 10ರಲಿ ಟುಟ್ಟಿಕೊರಿನ್‌ನಲ್ಲಿ ಮನೆಯಲ್ಲಿ ಸಾಕಿದ ಕೋತಿಯೊಂದು, ಮೊನ್ನೆ ತಾ 11ರಲ್ಲಿ ತಪ್ಪಿಸಿಕೊಂಡು ಮನೆಯ ಮಗುವಿನ ಮೇಲೆ ಬಿದ್ದು ಅದರ ಕರುಳನ್ನು ಹೊರಗೆ ಎಳೆದು ಮಗವನ್ನು ತಪ್ಪಿಸಲು ತಾಯಿಯು ಪ್ರಯತ್ನ ಮಾಡಲು, ಅಳೆಗೆ ಹಾನಿಗೊಳಿಸಿ, ಕಲೆ ತಪ್ಪಿಸಿಕೊಂಡಿತು

೦ ೦ ೦ ೦ ೦

ಮಹಾತ್ಮಾಜೀಯರು, ವಾರ್ಧಾದಿಂದ ಗುಜರಾತಿಗೆ ತೆರಳಿರುವರು.

ಹಿಂಡನ್ ಬರ್ಗ್ ಅನಾಹುತ

ಜರ್ಮನ್ ವಾಯುನಾವೆಯ ದುಃಖಾಂತ

ಜರ್ಮನಿನಿಂದ ಕಳೆದ ತಾ. ೩ಕ್ಕೆ ಅಮೇರಿಕಾಭಿಮುಖವಾಗಿ ಹೊರಟು ನಾಲ್ಕೇ ದಿವಸಗಳಲ್ಲಿ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಿ ತಾ. ೬ನೇ ಸಾಯಂಕಾಲ ಅಮೇರಿಕವನ್ನು ತಲ್ಪಿ ಪ್ರಯಾಣಿಕರನ್ನಿಳಿಸಬೇಕೆಂದಿರುವ ಸಮಯದ ಕೆಲವೇ ಗಂಟೆಗಳ ನುಂಚೆ ಅಕಸ್ಮಾತ್ ಅಗ್ನಿಗೆ ಆಹುತಿಯಾಯಿತು ನೋಡುತಿದ್ದಂತೆಯೇ ವಾಯುನಾವೆಯು ಬೆಂಕಿ ತಗಲಿ ಉರಿಯ ಹತ್ತಿತು ಇನ್ನೊಂದು ಕ್ಷಣದಲ್ಲಿ ಅದರ ಮುಂಬಾಗವು ನೆಲದಭಿಮುಖವಾಗಿ ಉರುಳಿ ನುಚ್ಚುನುರಾಯಿತು ನೆಲಕ್ಕೆ ಬಿದ್ದೊಡನೆ ಭಯಂಕರ ಸ್ಫೋಟನ ಒಂದು ನೆರೆಕೆರೆಯ ಪ್ರಾಂತ್ಯಗಳನ್ನು ನಡುಗಿಸಿತು ಪ್ರಚಂಡ ಅಗ್ನಿಯ ಜ್ವಾಲೆಗಳು ದಿಗಂತವನ್ನು ವ್ಯಾಪಿಸಿ ಕೆಲವು ಮೈಲುಗಳ ದೂರಕ್ಕೆ ಉಷ್ಣವನ್ನು ಕಾರುತ್ತಿತ್ತಂತೆ ಈ ಅಗ್ನಿಗೆ ಆಹುತಿ ಆದ ಪ್ರಯಾಣಿಕರ ಮತ್ತು ಯಂತ್ರಚಾಲಕರ ಕೂಗುಗಳು ಆಗಾಗ್ಗೆ ಆ ಅಗ್ನಿಮಂಡಳ ಮಧ್ಯದಿಂದ ಕೇಳಿ ಬರುತಿತ್ತು

ಹಿಂಡನ್ ಬರ್ಗು ಅಮೇರಿಕದಿಂದ ಇಂಗ್ಲೆಂಡಿನ ರಾಜರ ಕಿರೀಟಧಾರಣೆಗೆ ಪ್ರೇಕ್ಷಕರನ್ನು ಕೊಂಡೊಯ್ಯಲು ಬಂದಿತ್ತು ಪುನಃ ಇಂಗ್ಲೆಂಡಿನಿಂದ ಮರಳುವಾಗ ಕಿರೀಟಧಾರಣ ಉತ್ಸವದ ಕಾಲದಲ್ಲಿ ತೆಗೆದ ಚಲನ ಚಿತ್ರದ ಫಿಲ್ಮನ್ನು ಅಮೇರಿಕಕ್ಕೆ ಕೊಂಡೊಯ್ಯಲು ಏರ್ಪಾಡುಮಾಡಿದ್ದರು ಜರ್ಮನಿಯಿಂದ ಅಮೇರಿಕಕ್ಕೆ ಬಂದ ಪ್ರಯಾಣಿಕರು ೩೬ ಮಂದಿಗಳಲ್ಲದೆ ೬೦ ಮಂದಿ ಯಂತ್ರ ಚಾಲಕರು ಅದರಲ್ಲಿದ್ದರೆಂದು ತಿಳಿದ ಬರುತ್ತದೆ

ಈ ಸೈಕಿ ಇವ್ವರ ತನಕ ೩೫ ಮಂದಿಗಳು ವಧಿಯಿಯುವರು ಅನಾಹುತ ಕಾರಣಗಳನ್ನು ಪರಿಶೋಧಿಸಲು ಒಂದು ಸಮಿತಿಯು ಏರ್ಪಡಿಸಿಧುತ್ತದೆ ೧೯೩೦ರಲ್ಲಿ ಪ್ರಪಂಚದಲ್ಲಿ ಅತೀ ದೊಡ್ಡದಾದ ಇಂಗ್ಲೆಂಡಿನವಾಯು ನಾವೆಯು ಮಳೆಗೆ ಸಿಕ್ಕಿ ಅನಾಹುತ ಹೊಂದಿದ್ದ ಬಳಿ ಜರ್ಮನಿಯು ಈ ಹಿಂಡನ್ ಬರ್ಗ ವಾಯುನಾವೆಯನ್ನು ನಮ್ಮ ಅಪಾಯಗಳಿಂದ ಭದ್ರವಾಗಿರುವ ಏರ್ಪಾಟುಗಳಿಂದ ರಚಿಸಿದ್ದರು ಇದರಲ್ಲಿ ಹೊಗೆಬತ್ತಿಗಳನ್ನು ಸೇದುವ ಏರ್ಪಾಡ ಕೂಡಾ ಮಾಡಿತ್ತು ಇವರ ಮೇಲೆ ಈ ಅನಾಹುತವಾದುದು [illegible] ಯೋಚನೆಯಲ್ಲಿ ಮುಳುಗಿಸಿದೆ ಅದನ್ನು ನಿಲ್ಲಿಸುವಾಗ ಹೊರಬಿಡುವ ಹ್ಯಾಡ್ರೋಜನಿಗೆ ಬೆಂಕಿ, ಅಥವಾ ಮಿಂಚು ತಗಲಿ ಆ ಮೂಲಕ ಸ್ಫೋಟನವಾಗಿ ಅನಾಹುತ ಸಂಭವಿಸಿದ್ದಿರಬೇಕೆಂದು ಜೆಪ್ಲಿನಿನ ನಾಯಕರಾದ ಡಾ। ಎಕ್ನರರು ಅಭಿಪ್ರಾಯಪಡುತ್ತಾರೆ ನಾಜೀ ವಿರೋಧ ಪಂಗಡಿಗರ ಸಾಹಸವಾಗಿರಬಹುದೊ ಎಂದು ಇನ್ನೊಂದು ಊಹೆ ಜರ್ಮನಿಯಲ್ಲಿದ್ದಿದೆ ಬಂದೂಕಿನ ಏಟು ತಗುಲಿ ಹಾಗಾದರೂ ಆಗಬಹುದೆಂದು ಸಂಶಯಗಳುಂಟಾಗಿವೆ, ಅಂತೂ ಅಮೇರಿಕದ ವಾಯುನಾವೆ ಅನಾಹುತ ಸಂಶೋಧನಾ ಸಂಘದವರು ಸಮಾಲೋಚನೆ ನಡೆಸುತ್ತಿರುವರು

೫೦೦ ಸಾವಿರ ಪವನುಗಳು ಈ ಹಿಂಡನ್ ಬರ್ಗ್ ನಾವೆಗೆ ಖರ್ಚು ತಗುಲಿರುತ್ತದೆ ಇದರ ನಷ್ಟವನ್ನು ತುಂಬಲು ಜರ್ಮನಿಯಲ್ಲಿ ಹಣವನ್ನು ಶೇಕರಿಸುತ್ತಾರೆ ಹರ್ ಹಿಟ್ಲರನು ಆಗಲೇ ೩೦,೦೦೦ ಮಾರ್ಕ್ಸ (೧೫೦೦ ಪವನು) ಗಳನ್ನು ಆ ನಿಧಿಗೆ ಕೊಟ್ಟಿರುವನು

ಅನಾಹುತದ ಶೋಚನೀಯ ವರ್ತಮಾನವು ಜರ್ಮನಿಗೆ ಮಾಡಿದೊಡನೆ ಸಮಸ್ತ ಜರ್ಮನಿಯು ಶೋಕದಲ್ಲಿ ಮುಳುಗುತ್ತಾ ಕರಿ ಬಾವುಟಗಳು ಎಲ್ಲೆಡೆಗಳಲ್ಲಿ ಹಾರಿಸಲ್ಪಟ್ಟವು ವಾಯುನಾವೆಯು ಬಂದು ನೆಲಕ್ಕುರುಳುತ್ತಾ ೩೦ ಅಡಿ ಎತ್ತರದಲ್ಲಿದ್ದಾಗ ಕೆಲವರು ಮರಳುದಿಂಡೆಯ ಮೇಲೆ ದುಮುಕಿ ಬದುಕಿಕೊಂಡರು

ಆರನೇ ಜೋರ್ಜರೂ, ಪ್ರೆಸಿಡೆಂಟರೂ ಸುವೆಲ್ಟರೂ, ಮತ್ತು ಇತರ ರಾಷ್ಟ್ರಮುಖಂಡರುಗಳು ಜರ್ಮನಿಗಾದ ಈ ಆಗಾದ ಅನಾಹುತಕ್ಕಾಗಿ ಸಂತಾಪ ಸೂಚನೆಗಳನ್ನು ಹರ್ ಹಿಟ್ಲರನಿಗೆ ಕಳುಹಿಸಿರುವರು

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠದ ಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡೆಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ

ಸದ್ರಿ ಮಠದ ಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತರಿಸಿಕೊಳ್ಳುವರೆ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲಿ ಸದ್ರಿ ಹಣವು ಜಮೆಯಾಗಿ ನರ್ಮಂಪತ್ತಿ ನಾವು ತರಿಸಿಕೊಳ್ಳುವರೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ವಹಿಕೆ [illegible] ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ

ಆದಿಂದ ನೀವು ಇನ್ನ ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಃ [illegible] ಪುರೋಹಿತರ ಮುಖಾಂತರ ನಿಮ್ಮ ಪೇಟೆ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವತಿ ತಕ್ಕದ್ದು [illegible] ದಿರುವುದು

(೨ನೇ ಪುಟದಿಂದ ಮುಂದುವರಿದುದು)

ವೈಸ್ರಾಯರು ಇಡರ ಇಲ್ಲೇ ಇರುವ ಅಭಿಪ್ರಾಯ ಸರರು, ಲಂಡನಿನ ಅಭಿಪ್ರಾಯವೇನೆಂದ ಮೊದಲೇ ಬಲ್ಲವರ ಹೀಗಾದರೂ ಒಕ್ಕಟ್ಟನ್ನು ಮುರಿಯಲು ಇನ್ನ ವಿಳಂಬವೇಕೆ?

೦ ೦ ೦ ೦

ಲೋರ್ಡ್ ಲಿರ್ನನರು ಈಗ ವೈಸ್ರಾಯರಾಗಿಯಾಗಲಿ ಇಂಡಿಯಾ ಸೆಕ್ರೆಟರಿಯಾಗಲಿ ಆಗಿದ್ದರೆ ಹೀಗಾಗುತ್ತಿತ್ತೇ ಎಂದು ಲಂಡನಲ್ಲಿ ಪ್ರಶ್ನೆ ಕೇಳುತ್ತಿದ್ದಾರೆ

೦ ೦ ೦ ೦ ೦

ಕಿರೀಟಧಾರಣೋತ್ಸವದ ಗಡಿಬಿಡಿ ಅಲ್ಲಿರುವಾಗ ಇಲ್ಲಿನ ಪ್ರಸಂಗಗಳಿಗೆ ಅಲ್ಲಿ ಅವಕಾಶವಿಲ್ಲ ಅದಾಗುತ್ತಲೇ, ಬೊಂಬಾಯಿ ಗವರ್ನರರು ತಮ್ಮ ಪ್ರಾಂತ್ಯದಲ್ಲಿ ಮೊದಲು ಹೊಸ ಕರ್ತವ್ಯವನ್ನೇನೋ ಮಾಡಲಿರುವರಂತೆ ಅವರನ್ನು ಹಿಂಬಾಲಿಸಿ ಇತರ ಪ್ರಾಂತ್ಯಗಳ ಗವರ್ನರರು ಹಾಗೆಯೇ ಮಾಡುವರಂತೆ ಜೂನ್ ಮಧ್ಯದಲ್ಲಿ ಸಭೆ ಸೇರಲು ಆಮಂತ್ರಣಗಳು ಹಾರಾಡುವರಂತೆ ಜುಲೈ ಮಧ್ಯದಲ್ಲಿ ಸಭೆಗಳು ಸೇರಲಿಕ್ಕಿವೆಯಂತೆ

೦ ೦ ೦ ೦

ಗತಿಸಿದ ಜೋರ್ಜ ಸಾರ್ವಭೌಮರಿದ್ದಾಗ ಉತ್ಸವಗಳ ಕಾಲದಿಂದೀಚೆಗೆ ಬ್ರಿಟಿಷ ರಾಜಗೃಹದ ಮೇಲೆ ಇದ್ದ ಗ್ರಹಾಪೀಡೆಯು ಮುಗಿದು, ಈಗಣ ಸಾಮ್ರಾಜರೂ ಕುಟುಂಬವೂ ಬಹಳ ಸೊಗಸಾಗಿ ಸಂಪನ್ನತೆಯಿಂದ ಸೌಭಾಗ್ಯ ಕಳೆದು ಬಹುಕಾಲ ಮೆರೆಯುತ್ತಿರಲಿ ಸಾಮ್ರಾಜ್ಯಕ್ಕೆ ಶಾಂತಿ ಇರಲಿ

ನವರತ್ನ ಎಲಿಕ್ಸಿರ್ ಗೈನೆಕೊ:

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟಿನದೋಷಗಳನ್ನು ವಿಶೇಷ ಪರಿಣಾಮದಿಂದ - ಗುಣಪಡಿಸುವ ಶಕ್ತಿಯುಳ್ಳ ಸಾಮುಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಸರಿಪಡಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ

ಬೆಲೆ 4 ಔನ್ಸ್ ಬಾಟ್ಲಿಗೆ ರೂ. 0 12 0
8 ,, ,, ,, 1 4 0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:-

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
ವಿ ವಿ ಶೆಣೈ ಕಾರ್ಕಳ.
ಡಾ| ಕೆ ಎಲ್ ಪಿತಾಲಾ, ಉಡುಪಿ
ಮೊಡರ್ನ್ ಫಾರ್ಮೆಸಿ, ಕುಂದಾಪುರ
ಬಿ ಜಿ ಭಂಡಾರಿ, ಪುತ್ತೂರು
ಭಕ್ತಾ ಬ್ರದರ್ಸ್ ಕಾಸರಗೋಡು.

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in — Watches, Clocks, Timepieces, Rolled Gold Jewellery & Sporting Materials etc,



Stockists of West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones.

Japan 8 Inch Octegon Rs	6	0	0
,, 8 ,, Regulator ,,	6	12	0
,, 10 ,, Octegon ,,	6	8	0
,, 10 ,, Regulator ,,	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಿಗೆ ಸದಾ ಸಿದ್ಧ ವಿರುವುವು. ವಾಚು, ಗಡಿಯಾರ, ವ ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚಿಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‍ಸ್ಟರ್‍ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಯನ್ ಹೈಸ್ಕೂಲ್ ಬಳಿ ಮಂಗಳೂರು

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಸೂಪಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‍ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of *Please call on or write to:—*

Simon & Co ,
Painters

Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ
ಸ್ಯಾನ್ ಬೋರ್ಡು ಇತ್ಯಾದಿಗಳನ್ನೂ
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ

ಹೆಚ್ಚಿನ ಮಾಹಿತಿ ಒಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

ಈ ಸುಸಂದರ್ಭವನ್ನು ಕಳಕೊಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



[illegible] ಗಟ್ಟಿಯಾದ [illegible] ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು [illegible] ವರ್ಷದ ಗ್ಯಾರಂಟಿ 3 ವಾಚ [illegible] ಒಂದೇ [illegible] [illegible] ಸಿಕ್ಕೆಲಿನ [illegible] ವಾಚು 1ಕ್ಕೆ ರೂ 2 10-0 ಅದರಲ್ಲಿ [illegible] ದದ್ದು 3-8-0 ಬಂಗಾರದ ಗಿಲಿಟಿದ್ದದಕ್ಕೆ ರೂ 1-8-0 [illegible] 5-0 0 ನಿಕ್ಕೆಲಿನ ಆಯತಾಕಾರದಕ್ಕೆ 6-8 0 ಅದರಲ್ಲಿ ಬಂಗಾರದ ಲೇಟಿದ್ದುದಕ್ಕೆ 7 8-0 ಲೀವರ್ ಪಾಕೆಟ್ ವಾಚಿಗೆ ರೂ 1-14-0 ಜಿ ಟ್ಯಾಂಪೀಸ್ 1ಕ್ಕೆ ರೂ 1-15-0 ಮಾತ್ರ

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು.

M. L Watch Co., 1/6 Cross Street CALCUTTA

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH
No 16

Sale Rs 6–15–0
SMART LEVER MOVEMENT
Strong & Durable at Low Price



UNIQUE OPPORTUNITY ONLY FOR ONE MONTH.
Available Roman or Arabic Figures Plain Silver Dial

Guaranteed for 5 Years — Lever Pocket Watch Rs. 1–15–0

No. 12, Chromium 4 Jewels Rs 8–8–0
,, 14 ,, 7 ,, ,, 10–8–0
,, 15, ,, 15 ,, ,, 12–8–0.
,, 17. Rolled Gold 15 , ,, 16–8 0.

Rs. 1/- Extra for Radium Dial. Postage & Packing Extra

BAPALAL & CO. (s) 116, Abdul Rehman Street, Bombay 3

ಮಂಗಳೂರು

ಲೇಡಿ ಹಿಲ್ ಜಂಕ್ಷನಿನಲ್ಲಿ ... ಬಿ. ಎಸ್. ಎಸ್. ಕಂಪೆನಿಯ ... ಇದೇ ತಾ. ೧೩ನೇ ಬುಧವಾರ ಹೊರಟಿರುತ್ತದೆ. ಆದರೂ ಹವೆಯು ಪ್ರತಿಕೂಲವಾಗಿದ್ದಲ್ಲಿ ಇದೇ ತಾ. ೧೬ಕ್ಕೆ "ನೇತ್ರಾವತಿ" ಎಂಬ ಸ್ಟೀಮರು ಮಂಗಳೂರಿಗೆ ಬರದು ಹೋಗುವು ದಾಗಿ ತಿಳಿದುಬರುತ್ತದೆ. ಇದು ಸಾಧ್ಯವಿದ್ದಲ್ಲಿ ಟಿಕ್ಕೆಟು ಸೂರಿಟಿಯನ್ನು ಕಂಪೆನಿಯವರಿಂದ ಪಡಕೊಳ್ಳುವುದು.

ಕದ್ರಿ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾಪರ್ವಕ ಸಂಘದ ತೃತೀಯ ವಾರ್ಷಿಕೋತ್ಸವವು ಇದೇ ಮೇ ತಾ. ೧೬ನೇ ಆದಿತ್ಯವಾರ ರಾತ್ರಿ ೯ ಗಂಟೆಗೆ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ರಾಜಾಂಗಣದಲ್ಲಿ ಶ್ರೀ ಮಹಾಬಲ ನೋಂಡರ ಹಾಡುಗಾರಿಕೆಯಿಂದಲೂ, ಶ್ರೀ ಕಿಟ್ಟಣ್ಣನವರ ಮೃದಂಗವಾದನದಿಂದಲೂ ಮತ್ತು ಶ್ರೀಗಳಾದ ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು, ನಾರಾಯಣ ಕಿಲ್ಲೆಯವರು, ಎಚ್. ಎಚ್. ಪಡಿಯರ್, ಕುರಿಯ ಶಂಕರಭಟ್ಟರು, ಮಲ್ಪೆ ಶಂಕರನಾರಾಯಣ ಸಾಮಗರು ಇವರೇ ಮೊದಲಾದ ಪ್ರಸಿದ್ಧ ಅರ್ಥಧಾರಿಗಳ ಕೂಟದಿಂದಲೂ ಜರಗುವುದು. ಸರ್ವರಿಗೂ ಸ್ವಾಗತವಿದೆ.

ಸದ್ಯದಲ್ಲಿಯೇ ನಡೆಯಲಿರುವ ಡಿ. ಬೋರ್ಡು ಚುನಾವಣೆ ಬಗ್ಗೆ ಓಟರರ ಪಟ್ಟಿ ತಯಾರಿಸುವ ಉದ್ದಿಶ್ಯ ಇಲ್ಲಿನ ಸಬ್ ಮೆಜಿಸ್ಟ್ರೇಟರಾದ ಎಂ. ಜನಾರ್ಧನ ಬಿ. ಎ. ಇವರು ಡಿಸ್ಟ್ರಿಕ್ಟ್ ಇಲೆಕ್ಷನ್ ಆಫೀಸರರಾಗಿ ನೇಮಕಹೊಂದಿರುವರಾಗಿ ತಿಳಿದುಬರುತ್ತದೆ.

ನಮ್ಮ ಆರನೇ ಜಾರ್ಜ್ ಚಕ್ರವರ್ತಿಗಳ ಕಿರೀಟಧಾರಣ ಉತ್ಸವದ ಸಲುವಾಗಿ ಇದೇ ತಾ. ೧೧ ಮತ್ತು ೧೨ನೇ ಬುಧವಾರ ಎಲ್ಲಾ ಸರಕಾರೀ ಆಫೀಸುಗಳಿಗೆ ರಜೆಕೊಡಲಾಗಿತ್ತು.

ಮಣ್ಣಗುಡ್ಡೆ (ಕಂಬಳದ) ಒಳಗಿರುವ ಒಂಟಿಕಟ್ಟೆ ಯಾನೆ ನಾಡವರ ಶ್ರೀ ರಾಮಕೃಷ್ಣ ಯುವಕ ಸಂಘದ ಪ್ರಥಮ ವಾರ್ಷಿಕೋತ್ಸವವು ಇದೇ ತಾ. ೨೩ ಮತ್ತು ೨೪ನೇ ಆದಿತ್ಯವಾರ 'ನರಸಿಂಹ ಜಯಂತಿ'ಯ ದಿನ ಸದ್ರಿ ಸಂಘದ ಕಟ್ಟಡದಲ್ಲಿ ವಿಜೃಂಭಣೆಯಿಂದ ಜರಗಲಿರುವದಾಗಿ ಸಂಬಂಧಪಟ್ಟವರೊಬ್ಬರು ತಿಳಿಸಿರುತ್ತಾರೆ.

ಮೊಗವೀರ ವ್ಯವಸ್ಥಾಪಕ ಮಂಡಳಿಯ ೩೪ನೇ ವಾರ್ಷಿಕ ಮಹಾ ಸಭೆಯು ಇದೇ ತಿಂಗಳ ತಾ. ೩೦ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ರಾ. ಕೆ. ಎ. ಕುಂದರನ್ D Com I Mc (Bom) F C I (Lond) ಇವರ ಅಧ್ಯಕ್ಷತೆಯಲ್ಲಿ ಜರಗಿಸಲು ನಿಶ್ಚೈಸಿರುವುದಾಗಿ ತಿಳಿದುಬರುತ್ತದೆ.

ತಾಲೂಕುಗಳಿಂದ.

ಮೂಲ್ಕಿ — ಸ್ಥಳೀಕ ಹೈಸ್ಕೂಲಿನ ಸಹಾಯಾರ್ಥವಾಗಿ ಏರ್ಪಡಿಸೋಣಾದ ಲಾಟರಿಯಲ್ಲಿ ದೊರೆತ ಹಣವನ್ನು ಉಪಯೋಗಿಸುವ ಕುರಿತು ತಕ್ಕ ನಿರ್ಧಾರ ಮಾಡಲಿಕ್ಕೆ ಇದೇ ಬರುವ ತಾ. ೧೬ನೇ ರವಿವಾರ ಅಪರಾಹ್ನ ಘಂಟೆ ೫ಕ್ಕೆ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಲಿರುವುದೆಂದು ತಿಳಿದುಬರುತ್ತದೆ.

ಸ್ಥಳೀಕ ಕೋಸ್ಟಲ ಪೂವರ್ ಫಂಡಿನ ವರ್ಷಾವಧಿ ಮಹಾ ಸಭೆಯು ಇದೇ ಬರುವ ತಾ. ೧೬ನೇ ರವಿವಾರ ದಿನ ಶ್ರೀ ಬಿ. ವೆಂಕಟ್ರಾಯ ಬಾಳಿಗ ಬಿ. ಎ., ಬಿ. ಎಲ್., ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಇಲ್ಲಿಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ದಶಮ ವರ್ಷ ವರ್ಧಂತಿಯು ಇದೇ ಬರುವ ತಾ. ೧೬ನೇ ರವಿವಾರ ರಾತ್ರಿ ಘಂಟೆ ೭ ೩೦ಕ್ಕೆ ಶ್ರೀ ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ವಿದ್ಯಾಭಿಮಾನಿಗಳಾದ ಸರ್ವರಿಗೂ ಸುಸ್ವಾಗತವಿದೆಯೆಂದು ಸದ್ರಿ ಶಾಲಾ ಆಡಳಿತೆಯವರು ತಿಳಿಸುತ್ತಾರೆ.

ಸ್ಥಳೀಕ ಬೋರ್ಡ್ ಆಸ್ಪತ್ರೆಯ ಡಾಕ್ಟರರಾದ ಶ್ರೀ ಎಂ. ಉಮೇಶರಾವ್, ಎಲ್. ಎಂ. ಎಸ್., ಇವರಿಗೆ ಬಂಟ್ವಾಳಕ್ಕೆ ವರ್ಗವಾಗಿ, ಅವರ ಬದಲಿಗೆ ಡಾ. ಕೆ. ನೇಮಿರಾಜ ಅಳ್ವ, ಎಲ್. ಎಂ. ಎಸ್. ಇವರು ಇಲ್ಲಿಗೆ ಬರಲಿರುವರು.

... ಶ್ರೀ ... ಕೃಷ್ಣರಾವ್, ಬಿ. ಎ., ಎಲ್. ಟಿ. ಇವರಿಗೆ ... ಗೆ ವರ್ಗವಾಗಿ ಅವರ ಸ್ಥಾನಕ್ಕೆ ಶ್ರೀ ಕೆ. ಶ್ರೀನಿವಾಸ ... ಬಿ. ಎ., ಎಲ್. ಟಿ. ಇವರು ಇಲ್ಲಿಗೆ ಬರಲಿರುವರು.

ಇಲ್ಲಿಯ ಬಿಲ್ಲವ ಸಮಾಜ ಸೇವಾ ಸಂಘಕ್ಕೆ ರಾ. ಯಂ. ಕೆ. ಪೂವಪ್ಪನವರು ಒಪ್ಪಿಸಿಕೊಡುವ ಭೂತನ ಕಟ್ಟಡ ಪ್ರವೇಶ ಸಮಾರಂಭವು ಇದೇ ಬರುವ ತಾ. ೨೦ನೇ ಬೃಹಸ್ಪತಿವಾರ ಡಾ. ಎಂ. ಆರ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸದ್ರಿ ಸಂಘದ ದ್ವಿತೀಯ ವರ್ಷಾವಧಿ ಮಹಾಸಭೆಯು ಇದೇ ತಾ. ೨೩ನೇ ರವಿವಾರ ಅಪರಾಹ್ನ ಘಂಟೆ ೩ ೩೦ಕ್ಕೆ ಮಂಗಳೂರಿನ ಗವರ್ನಮೆಂಟ್ ಕಂಟ್ರಾಕ್ಟರರೂ ಬೆಂಚ್ ಮೆಜಿಸ್ಟ್ರೇಟರೂ ಆಗಿರುವ ಮ. ರಾ. ಯಂ. ದೂಮಪ್ಪ ಅವರ್ಗಳವರ ಅಧ್ಯಕ್ಷತೆಯಲ್ಲಿ ಜರಗಲಿರುವುದಾಗಿ ತಿಳಿದುಬರುತ್ತದೆ.

ಬೆಳ್ವಾರೆ: — ಇದೇ ತಾ. ೯ನೇ ದಿನ ಅಪರಾಹ್ನ ಘಂಟೆ ೫ ೩೦ಕ್ಕೆ ಸರಿಯಾಗಿ ಇಲ್ಲಿ ಡಾಕ್ಟರ ಪಿ. ಮಹಾಲಿಂಗ ಭಟ್ಟರ ಅಧ್ಯಕ್ಷತೆಯಲ್ಲಿ ಗ್ರಾಮ ಕಾಂಗ್ರೆಸ್ ಸಭೆಯು ಜರಗಿತು. ಗ್ರಾಮ ಕಾಂಗ್ರೆಸ ಕಮಿಟಿಗಳನ್ನು ಸ್ಥಾಪಿಸುವ ಬಗ್ಗೆ ಇಲ್ಲಿಗೆ ಬಂದಿದ್ದ ಶ್ರೀ ಎನ್. ಎಸ್. ಕಿಲ್ಲೆಯವರು, ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸುವ ಆವಶ್ಯಕತೆಯನ್ನು ವಿವರಿಸಿ ಹೇಳಿ ಕಮಿಟಿಯನ್ನು ಸ್ಥಾಪಿಸಲು ಯೋಗ್ಯ ಸಲಹೆಗಳನ್ನು ಕೊಟ್ಟರು. ಆ ಮೇಲೆ ಐದು ಗ್ರಾಮಗಳು ಸೇರಿದ ಒಂದು ಸಂಯುಕ್ತ ಕಾಂಗ್ರೆಸ್ ಕಮಿಟಿಯನ್ನು ಬೆಳ್ವಾರೆಯಲ್ಲಿ ಸ್ಥಾಪಿಸಲಾಯಿತು. ಶ್ರೀಗಳಾದ ಸೀತಾರಾಮ ಕೋಟೆ ಮತ್ತು ಗಣೇಶ ಸುಬ್ಬಯ್ಯ ಇವರುಗಳನ್ನು ಕ್ರಮವಾಗಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಶ್ರೀ ಗಣೇಶ ಸುಬ್ಬಯ್ಯನವರು ಶ್ರೀ ಕಿಲ್ಲೆಯವರಿಗೂ ಸಭಾಧ್ಯಕ್ಷರಿಗೂ ವಂದನೆಗಳನ್ನು ಸಮರ್ಪಿಸಿದ ಬಳಿಕ ಸಭೆಯು ಅಂತ್ಯಗೊಂಡಿತು.

ಕುಂದಾಪುರ — ಇಲ್ಲಿಯ ತಹಶೀಲ್ದಾರರ ಮನವಿ ಮೇರೆಗೆ ಇಲ್ಲಿಯ ಸೇವಂತ ಗುಡ್ಡೆಯಲ್ಲಿಯ ಕಾಡುಗಳಲ್ಲಿ ಹುಲಿಗಳ ಕಾಟವು ದಿನೇ ದಿನೇ ಹೆಚ್ಚುತ್ತಾ ಬರುವುದರಿಂದ ಜಿಲ್ಲಾ ಕಲೆಕ್ಟರರು ಸಮೀಪದ ಹಳ್ಳಿಹಳ್ಳಿಗಳ ಜನರಿಗೆ ಶಿಕಾರಿ ಮಾಡಲು ಅಪ್ಪಣೆ ಕೊಟ್ಟಿರುವುದಾಗಿ ತಿಳಿದುಬರುತ್ತದೆ. ಈ ಶಿಕಾರಿಯು ಕುಂದಾಪುರ ತಾಲೂಕಿನ ಫೋರೆಸ್ಟ್ ರೇಂಜ ಆಫೀಸರರ ಸಮಕ್ಷಮದಲ್ಲಿ ನಡೆಯುವಂತೆಯೂ, ಸದ್ರಿ ತಾಲೂಕಿನ ತಹಶೀಲ್ದಾರರ ಶಿಫಾರಿಯಲ್ಲಿ ಭಾಗವಹಿಸಿದವರ ಹೆಸರು ಮತ್ತು ಶಿಕಾರಿ ನಡೆಯುವ ತಾರೀಕುಗಳನ್ನು ತಿಳಿಸಬೇಕಾಗಿಯೂ ಹುಕುಂ ಆಗಿರುತ್ತದೆ. ಈ ಕೆಲಸದಲ್ಲಿ ಅದಷ್ಟು ಜನರು ಭಾಗವಹಿಸಿ ಈ ಕಾಡು ಮೃಗಗಳ ಹಾವಳಿಯಿಂದ ತಪ್ಪಿಸುವುದು ಸ್ತುತ್ಯಾರ್ಹವೇ ಆಗಿರುವುದು.

ಇಲ್ಲಿಯ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ. ರಾ. ನರಸಿಂಹ ವೆಂಕಟೇಶ ಶಣೈ ಇವರಿಗೆ ಇಲ್ಲಿಂದ ಕಾರ್ಕಳಕ್ಕೆ ವರ್ಗವಾದುದರಿಂದ ಅವರನ್ನು ಸತ್ಕರಿಸಿ ಕಳುಹಿಸುವರೆ ಇದೇ ಕಳೆದ ತಾರೀಕ ೯ರಲ್ಲು ಸ್ಥಳೀಯ ಆಸ್ಪತ್ರೆ ಡಾಕ್ಟರ್ ಮ. ರಾ. ಮತಲ್ಲಾ ಎಂ. ಬಿ. ಬಿ. ಎಸ್. ರವರಲ್ಲಿಯೂ, ತಾರೀಕು ೧೧ರಲ್ಲು ತಾಲೂಕು ಆಫೀಸ ಕ್ಲಾರ್ಕರಾದ ಮ. ರಾ. ನರಸಿಂಹಾಚಾರ್ಯರಲ್ಲಿಯೂ, ಟೀಪಾರ್ಟಿ ಸತ್ಕಾರ ಕೂಟಗಳು ಜರಗಿದುವು. ಇಲ್ಲಿಯ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ. ರಾ. ಸಿ. ವೆಂಕಪ್ಪ ಸೆಟ್ಟಿ ಬಿ. ಎ. ಎಲ. ಟಿ. ಯವರಿಗೆ ಕಾರ್ಕಳಕ್ಕೂ ಬೈಂದೂರು ಹೆಂಡಾ ಶಾಲೆಯ ಹೆಡ್ ಮಾಸ್ತರರಾದ ಮ. ರಾ. ಕೆ. ಎಲ್. ಆಚಾರ್ಯರಿಗೆ ಕುಂದಾಪುರ ಹೈಸ್ಕೂಲಿಗೂ ವರ್ಗವಾಗಿರುತ್ತದೆ.

ಸ್ಥಳೀಯ ಪೋಸ್ಟುಮಾಸ್ತರರಾದ ಮ. ರಾ. ಎಲ್. ವಿಟ್ಠಲ ರಾಯರಿಗೆ ಮಂಗಳೂರಿಗೆ ವರ್ಗವಾಗಿರುವುದರಿಂದ ಸದ್ರಿಯವರನ್ನು ಪೋಸ್ಟಾಫೀಸಿನವರು ಗ್ರೂಫ್ ಫೊಟೋ ಟೀಪಾರ್ಟಿಗಳ ಪ ... ಅರಲ್ಲಿ ಸತ್ಕರಿಸಿ ಕಳುಹಿಸಿಕೊಟ್ಟರು. ಇಲ್ಲಿಯ ಆಸ್ಪತ್ರೆಯ ಡಾಕ್ಟರರಾದ ಮ. ರಾ. ಮತಲ್ಲಾ ಎಂ. ಬಿ. ಬಿ. ಎಸ್. ರವರು ೩ ೪ ತಿಂಗಳ ರಜೆಯನ್ನು ಪಡೆಯಲಿರುವರೆಂದು ತಿಳಿದುಬರುತ್ತದೆ.

ಇಲ್ಲಿಗೆ ಉಡುಪಿ ಕೃಷ್ಣ ಮಾರುತಿ ನಾಟಕ ಕಂಪೆನಿಯವರು ಸದ್ಯದಲ್ಲೇ ಬರುವರೆಂದು ತಿಳಿದುಬರುತ್ತದೆ.

ಕಾರ್ಕಳ — ಇಲ್ಲಿಯ ಶ್ರೀಮತ ಭುವನೇಂದ್ರ ಸಂಸ್ಕೃತ ಮಹಾ ವಿದ್ಯಾಶಾಲೆಯು ಸೆಖೆಕಾಲದ ರಜೆಯು ಮುಗಿದ ನಂತರ ಇದೇ ತಾ. ೯–೬–೩೭ನೇ ದಿನ ತೆರೆಯಲ್ಪಡುವುದು. ಈ ವಿಶ್ವ ವಿದ್ಯಾಲಯದಲ್ಲಿ ... ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅನುಕೂಲವಾದ ಶಿಕ್ಷಣವು ದೊರೆಯುವ ಏರ್ಪಾಡು ಮಾಡಲಾಗುವುದು.

ವಿದ್ಯಾರ್ಥಿಗಳಿಗೆ ಉಳಕೊಳ್ಳಲು ಶ್ರೀ ಭುವನೇಶ ಆಶ್ರಮದಲ್ಲಿ ಯೋಗ್ಯವಾದ ಅನುಕೂಲತೆಗಳು ಇವೆ. ಆಶ್ರಮದ ದಿನಚರ್ಯೆಯು ಪ್ರಾಚೀನ ಗುರುಕುಲ ಪದ್ಧತಿಗಳನ್ನು ಅನುಸರಿಸಿ ಏರ್ಪಡಿಸೋಣಾಗಿದೆ. ಆಶ್ರಮದಲ್ಲಿ ಇರಲು ಇಚ್ಛಿಸುವ ವಟುಗಳು ಬ್ರಹ್ಮಚಾರಿಗಳಾಗ ಬೇಕು. ಆಶ್ರಮದಲ್ಲಿ ಊಟ ಉಪಚಾರಗಳ ಬಗ್ಗೆ ತಿಂಗಳೊಂದರ ರೂ. ೮ರಂತೆ ವೇತನ ತೆರಬೇಕಾಗಿರುವುದಾದರೂ ಯೋಗ್ಯರಾದ ವಟುಗಳ ವಿಚಾರವಾಗಿ ಮೇಲೆ ಕಾಣಿಸಿದ ಹಣದ ಒಂದಂಶವು ಮಾಫಿ ಮಾಡೋಣಾಗುವುದು. ಆಹಜೀವನಕ್ಕೆ ಬೇಕಾದ ವೃತ್ತಿಶಿಕ್ಷಣದ ಏರ್ಪಾಡುಗಳು ಕೂಡಾ ಆಶ್ರಮದಲ್ಲಿರುವುದು. ಆದುದರಿಂದ ತಮ್ಮ ಮಕ್ಕಳು ಯೋಗ್ಯವಾದ ವಿದ್ಯೆಯನ್ನು ಪಡೆದು ತಮ್ಮ ಮುಂದಿನ ಜೀವನದಲ್ಲಿ ಸಭ್ಯತೆ ಮೊದಲಾದುವುಗಳನ್ನು ಹೊಂದಿ ಮುಂದಣ ಜೀವನವು ಸುಗಮವಾಗಿ ನಡೆಯುವಂತೆ ನೋಡುವುದು ಹೆತ್ತವರ ಪ್ರಾಮುಖ್ಯ ಕೆಲಸವಿದೆ. ಹೆಚ್ಚಿನ ಮಾಹಿತಿ ಬಗ್ಗೆ ಅಧಿಕಾರಯುಕ್ತರಿಗೆ ಬರಕೊಳ್ಳುವುದು.

ಫರಂಗಿಪೇಟೆ — ಇಲ್ಲಿಯ ಪುದು ಬೋರ್ಡು ಮಹಮ್ಮದೀ ಶಾಲೆಯ ವರ್ಷೋತ್ಸವವು ಇದೇ ಕಳೆದ ತಾ. ೧೮ರಲ್ಲು ಜನಾಬ್ ಮೊಗ್ರಾಲ್ ಕೆ. ಕುಂಞಮ್ಮದ್ ಮೌಲಾನಾ ಮೌಲ್ವಿಯವರ ಅಧ್ಯಕ್ಷತೆಯಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಕೆನರಾ ರೇಂಜ್ ದ ಹಮ್ಮದನ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರವರೂ ಊರ ಪರವೂರ ಗೃಹಸ್ಥರೂ ಬಾಲಾ ಹಿತೈಷಿಗಳು ಎಲ್ಲರೂ ನೆರೆದು ಬಂದಿದ್ದರು. ಹೆಣ್ಣು ಮಕ್ಕಳ ಲೇಜಿಂ ಆಟವೂ ಮಲೆಯಾಳಿ ನಾಟಕವನ್ನೂ ಪ್ರದರ್ಶಿಸಿದ ನಂತರ ಹೆಡ್ ಮಾಸ್ತರರು ರಿಪೋರ್ಟನ್ನು ಓದಿದ ತರುವಾಯ ಆಟ ಪಾಠಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಇನಾಮುಗಳ ಹಂಚೋಣಾಯಿತು. ಅಧ್ಯಕ್ಷರು ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯ ವಿಷಯವಾಗಿ ಹಿಂದೂ ಮುಸ್ಲಿಂ ಐಕ್ಯವೇ ಮುಂದಿನ ಜನಾಂಗದ ಏಳಿಗೆಯ ಸಾಧನವೆಂದೂ ಮನಂತಾಗಿ ಭಾಷಣ ಮಾಡಿದರು.

ಪೊಳಲಿ — ಇದೇ ಬರುವ ತಾ. ... ಆದಿತ್ಯವಾರ ... ರಾತ್ರಿ ಘಂಟೆ ೯ಕ್ಕೆ ಸರಿಯಾಗಿ ಪೊಳಲಿ ಶ್ರೀ ರಾಜರಾಜೇಶ್ವರೀ ದೇವಳದ ರಾಜಾಂಗಣದಲ್ಲಿ ಯಕ್ಷಗಾನ ಕಲಾ ಕೋವಿದರನೇಕರ ಕೂಡುವಿಕೆಯಿಂದ ಯಕ್ಷಗಾನ ಸಮಾರಂಭ ಒಂದು ನೆರವೇರಲಿರುವುದು. ಸದ್ರಿ ಸಮಾರಂಭಕ್ಕೆ ಸರ್ವರಿಗೂ ಸ್ವಾಗತವಿದೆ ಎಂದು ಸ್ವಾಗತಾಧ್ಯಕ್ಷರಾದ ಬ್ರಹ್ಮಶ್ರೀ ಅಡಿಗಳು ಪರಮೇಶ್ವರ ಭಟ್ಟರು ತಿಳಿಸುತ್ತಾರೆ.

ಉಡುಪಿ

ನಮ್ಮ ಸ್ವಂತ ವಾರ್ತಾದಾರರಿಂದ

ಇದೇ ಕಳೆದ ತಾ. ೧೩ನೇ ಗುರುವಾರ ಅಪರಾಹ್ನ ... ಗಂಟೆ ಆರಕ್ಕೆ ಶ್ರೀ ಪೇಜಾವರ ಮಠದ ವ್ಯಾಸ ಭವನದಲ್ಲಿ ಶ್ರೀ ಮದ್ಭಾಗವತದ ಸುಪ್ರಸಿದ್ಧ ವ್ಯಾಖ್ಯಾನಕಾರರಾದ ಪೇಜಾವರ ಮಠದ ಶ್ರೀಮದ್ವಿಜಯಧ್ವಜಾಚಾರ್ಯರ ಭಾವಚಿತ್ರ ಅನಾವರಣ ಸಮಾರಂಭವು ಬಹಳ ವಿಜೃಂಭಣೆಯಿಂದ ಜರಗಿತು.

ಉಡುಪಿ ತಾಲೂಕಿನಲ್ಲಿ ಕಾಂಗ್ರೆಸು ಪ್ರಚಾರ ಕಾರ್ಯಕ್ರಮ — ಇದೇ ತಾ. ೧೬ರಿಂದ ಬರುವ ಜೂನ್ ತಾ. ೧ ವರೆಗೆ ಈ ಕೆಳಗೆ ಕಾಣಿಸಿದಂತೆ ಕಾಂಗ್ರೆಸು ಕೆಲಸಗಾರರ ದಳವೊಂದು ಹೊರಟು ಹಳ್ಳಿಗಳಲ್ಲಿ ಕಾಂಗ್ರೆಸು ಪ್ರಚಾರ ಕಾರ್ಯಗೈಯುವರೆಯೂ ಹಳ್ಳಿ ಕಾಂಗ್ರೆಸು ಕಮಿಟಿಗಳನ್ನು ಸ್ಥಾಪಿಸುವರೆಯೂ ಸಂಚರಿಸಲಿದೆ. ತಾ. ೧೭ ಬ್ರಹ್ಮಾವರ, ತಾ. ೧೮ ಬಾರಕೂರು, ತಾ. ೧೯ ಸ್ವಾಬರಕಟ್ಟೆ, ತಾ. ೨೦ ಕೋಟ, ತಾ. ೨೧ ಪೂರ್ವಾಹ್ನ ಸಾಸ್ತಾನ ಮತ್ತು ಅಪರಾಹ್ನ ಹಂಗಾರಕಟ್ಟೆ, ತಾ. ೨೨ ಕಲ್ಯಾಣಪುರ, ತಾ. ೨೩ ಮಲ್ಪೆ, ತಾ. ೨೪ ಹಿರಿಯಡ್ಕ, ತಾ. ೨೫ ಪೆರ್ಡೂರು, ತಾ. ೨೬ ಪೇತ್ರಿ, ತಾ. ೨೭ ಕೊಕ್ಕರ್ಣೆ, ತಾ. ೨೮ ಉದ್ಯಾವರ, ತಾ. ೨೯ ಪೂರ್ವಾಹ್ನ ಕಟಪಾಡಿ ಮತ್ತು ಅಪರಾಹ್ನ ಕಾಪು, ತಾ. ೩೦ ಪೂರ್ವಾಹ್ನ ಎರ್ಮಾಳು ಮತ್ತು ಅಪರಾಹ್ನ ಪಡುಬಿದ್ರಿ, ತಾ. ೩೧ ಪೂರ್ವಾಹ್ನ ಕುತ್ಯಾರು ಮತ್ತು ಅಪರಾಹ್ನ ಶಿರ್ವ, ಜೂನ್ ತಾ. ೧ಕ್ಕೆ ಉಡುಪಿ. ಎಲ್ಲ ಕಡೆಗಳಲ್ಲಿಯೂ ಪ್ರಾತಃ ಧ್ವಜವಂದನೆ ಮತ್ತು ಸಾಯಂಕಾಲ ಮಹಾ ಸಭೆಗಳಿರುತ್ತವೆ. ದೇಶಾಭಿಮಾನಿಗಳೆಲ್ಲರೂ ಆಯಾಯ ಸ್ಥಳಗಳಲ್ಲಿ ಸದ್ರಿ ಕಾರ್ಯಕ್ರಮವನ್ನು ಪ್ರಕಟಗೊಳಿಸಿ ದೇಶಸೇವೆಯ ಕಾರ್ಯದಲ್ಲಿ ನೆರವಾಗಬೇಕೆಂದು ತಾಲೂಕು ಕಾಂಗ್ರೆಸು ಕಮಿಟಿಯ ಅಧ್ಯಕ್ಷರ ವಿನಂತಿ ಇದೆ.

... ಸ್ಥಳೀಯ ... ಯುವಕ ... ಪ್ರಥಮ ವರ್ಷದಲ್ಲಿ ಮಂಗಳೂರಿನ ರೋವರ್ ಸ್ಕೌಟ್ ದಳದವರ ಅಂಗಸಾಧನ ಕಸರತ್ತುಗಳ ಪ್ರದರ್ಶನವು ಶ್ರೀ ಎಂ. ವಿಟ್ಠಲ ಕಾಮತ್, ಬಿ. ಎ., ಬಿ. ಎಲ್., ವಕೀಲರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಪ್ರೇಕ್ಷಕ ವರ್ಗವು ಬಹಳವಿತ್ತು. ಆಟಗಾರರೆಯೂ ಚೆಲೋದಾಗಿತ್ತು. ರಾತ್ರೆ ೯ ೩೦ಕ್ಕೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಎನ್. ಎಸ್. ಹೊಳ್ಳ ಮತ್ತು ಪಾರ್ಟಿಯವರು ಹರಿಕಥಾ, ವಿನೋದಾವಳಿಗಳ ಸಮೇತವಾಗಿ, ಜೀವನ್ಮೃತ ಎಂಬ ನಾಟಕಾಭಿನಯವೂ ಇತ್ತು, ಸಂಗೀತವೂ ಇತ್ತು. ಪ್ರವೇಶ ಟಿಕೇಟುಗಳ ಮೂಲಕವಾಗಿತ್ತು. ಉತ್ಪನ್ನವು ಮಂಗಳೂರಿನ ಸ್ಕೌಟ್ಸ್ ಸಂಘದ ಸಹಾಯಾರ್ಥವಾಗಿ ವಿನಿಯೋಗಿಸಲಾಗಿದೆ. ಶ್ರೀ ಹೊಳ್ಳರ ಪಾರ್ಟಿಗಳೆಲ್ಲವೂ ಪ್ರೇಕ್ಷಕರನ್ನು ಆನಂದಗೊಳಿಸಿದ್ದವು.

ಸಾದರ ಸ್ವೀಕಾರ

ಅಶಕ್ತ ಪೋಷಕ ಸಭೆ ವಿಶ್ವೇಶ್ವರಪುರಂ ಬೆಂಗಳೂರು ಸಿಟಿ. ಈ ಉದಾರ ಸಂಸ್ಥೆಯ ೧೯೩೫ ೩೬ನೆಯ ವರ್ಷದ ವರದಿ.

ಉಡುಗೊರೆ ಕನ್ನಡಿಗರ ಕಣಜದಿಂದ ಹೊರಬಿದ್ದ ... ೧/೮ನೇ ಸೈಜು ಸಂಸ್ಕೃತೀ ಮಾಸಪತ್ರಿಕೆಯ ಸಂಪಾದಕೀಯರಾದ ಶ್ರೀಮತಿ ಆರ್. ಕಲ್ಯಾಣಮ್ಮ ಇವರ ಸಂಪಾದಕತ್ವದಲ್ಲಿ ಹೊರಡುವ ತ್ರೈಮಾಸಿಕ ಬಿಡಿ ಸಂಚಿಕೆ ಎರಡು ಹಣ. ಮುಂಬರಿಗೆ ಸೇರುವ ಮಕ್ಕಳಿಗೆ ವಾರ್ಷಿಕ ಚಂದಾ ಆರಾಣೆ. ಮಕ್ಕಳ ಸ್ಪರ್ಧೆಗಳಿಗೆ ಪ್ರವೇಶ ಧನವಿಲ್ಲ. ಬೆಂಗಳೂರಿನ ಸರಸ್ವತೀ ಕಾರ್ಯಾಲಯದಲ್ಲಿ ಮುದ್ರಿತವಾಗಿ ಪ್ರಕಟವಾದುದು.

ಶಿವಶರಣರ ಅಹಿಂಸಾಧರ್ಮ

ಶ್ರೀ ಅನ್ನದಾನೀಶ ... ಇವರ ... ಯಿಂದ ಗೋರಕ್ಷಣ ಸಂಘ ಹಿರೇಕೆರೂರ ಇವರು ಪ್ರಕಾಶಕರು.

ಮುದ್ರಕರ ... ಬುಧಿ ... ವಸಂತ ಮುದ್ರಣಾಲಯ ಧಾರವಾಡ.

ಗೊಲ್ಗೊಥಾ ಅಥವಾ ಯೇಸುವಿನ

ಕಡೆಯ ದಿನ

ಶ್ರೀ ... ಗೋವಿಂದ ಪೈಯವರ ಶ್ರೀ ಯೇಸುಕ್ರಿಸ್ತನ ಜೀವನಾಂತವೊಂದರ ವಿಚಾರ ... ಬೆಲೆ ಆಣೆ ...

ಮಂಗಳೂರ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟು ತ್ರಿವೇಣಿ ಪ್ರಕಟನಾಲಯದಿಂದ ಕ್ರಿ. ಕವಿ ಗ್ರಂಥಮಾಲೆಯ ಮೊದಲನೆಯ ಪುಷ್ಪವಾಗಿ ಪ್ರಕಟಿಸಲ್ಪಟ್ಟಿದೆ.

... ಕನ್ನಡ ... ಸಾಹಿತ್ಯ ಸಂಘ ಇದರ ನವಂಬರ ತಿಂಗಳ ತಾ. ... ರಲ್ಲಿ ಜರಗಿದ ವರ್ಧಂತಿ ಮಹೋತ್ಸವದ ಸಮ್ಮೇಳಿತಸಲ್ಪಟ್ಟ ೧೯೩೫ ೩೬ನೇ ವರ್ಷದ ವರದಿ. ಮಹಾಲಕ್ಷ್ಮೀ ಪ್ರಿಂಟಿಂಗ್ ವರ್ಕ್ಸ ... ಪುರ ಇಲ್ಲಿ ಮುದ್ರಿಸಲ್ಪಟ್ಟಿದೆ.

೧೯೩೬ರಿಂದ ೧೯೩೭ನೇ ವರ್ಷದ ಸುರತ್ಕಲಿನ ಹಿಂದೂ ವಿದ್ಯಾದಾಯಿನಿ ಶಾಲೆಯ ... ಡೆಮ್ಮಿ ೧/೮ನೇ ಸೈಜು ಮಂಗಳೂರು ಪ್ರೆಸ್ಸಿನಲ್ಲಿ ಛಾಪಿಸಲ್ಪಟ್ಟಿತು.

The Memorandum and the Bye Laws of the Hindu Vidyadayinee Sangha Surathkal South Kanara

---

ಜಿಲ್ಲೆಯ ಸರಕಾರಿ ಕೇಂದ್ರಗಳಲ್ಲಿ ಇಂಗ್ಲೆಂಡಿನ ರಾಜರಾದ ಆರನೇ ಜಾರ್ಜರ ಕಿರೀಟ ಧಾರಣೆ ಉತ್ಸವವು ಕೆಲವೊಂದು ಕ್ರೀಡಾ ವಿನೋದಗಳಿಂದಲೂ ವಿದ್ಯುದ್ದೀಪ ಅಲಂಕಾರಗಳಿಂದಲೂ ಜರಗಿಸಲ್ಪಟ್ಟಿತು. ಮಂಗಳೂರಿನಲ್ಲಿಯೂ ಸರಕಾರಕ್ಕೆ ಸಂಬಂಧಪಟ್ಟ ಕೆಲವು ಸ್ಥಳಗಳಲ್ಲಿಯೂ ದೀಪಾಲಂಕಾರಗಳ ಪ್ರದರ್ಶನ ಚಟುವಟಿಕೆಯು ಇತ್ತು. ಕೆಲವು ಕ್ರೈಸ್ತ ಮತ್ತು ಇತರ ದೇವಾಲಯಗಳ ಶಿಖರಗಳಲ್ಲಿ ಧ್ವಜ ಪತಾಕೆಗಳು ಹಾರುತ್ತಿದ್ದವು. ಅಂತೂ ಹೆಚ್ಚಿನ ಹರುಷವಾಗಲೀ ಉತ್ಸಾಹವಾಗಲೀ ಜನತೆಯಲ್ಲಿ ಕಂಡುಬರಲಿಲ್ಲ. —ಒಂದು ವಾರ್ತೆ.

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಚಾರ್ಮಾಡಿ		ಕಾರ್ಕಳ
ಉಜಿರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)	ಉಡುಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜ್ಯೊಂಟ್ ಮನೇಜರರಿಗೆ ಬರೆದು ತಿಳಿಸಿರಿ

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908

Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for bigger assurances
3 Accident Risk covered on small extra premiums
4 Attractive Bonuses

It pays you to represent this Company

Wanted Agents in unrepresented parts

Apply to —

Messrs Kochikar Brothers,

Madras Branch Secretaries.

—— 1936 ——

OUR VALUATION YEAR

Take a BOMBAY LIFE Policy now and share in the profits



Branches at-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore	Udipi S India	Charni Road Bombay No 4

ಪಾದ್ರಿಗಳಿಗೆ ಹಿಟ್ಲರನ ಎಚ್ಚರಿಕೆ!

ಕಳೆದ ಮೇ ಒಂದನೇ ತಾರೀಕಿನಲ್ಲು ಬರ್ಲಿನಿನ ಒಲಿಂಪಿಕ್ ಕ್ರೀಡಾಂಗಣದಲ್ಲಿ [illegible],೦೦೦ ಜರ್ಮನ್ ಹುಡುಗ ಹುಡುಗಿಯರಿಗೆ ಭಾಷಣ ಕೊಡುತ್ತಾ ಹರ್ ಹಿಟ್ಲರನು "ಯುವಕ ಜನಾಂಗವನ್ನು ಬೋಧನೆಗಳ ಮಾಡಿಸಿ, ಜನತೆಯಲ್ಲಿ ವೈರಾಗ್ಯವೈಶಮ್ಯವನ್ನು ತಂದೊಡ್ಡುವವರಿಗೆ" ಒಂದು ಎಚ್ಚರಿಕೆಯನ್ನು ಕೊಟ್ಟನು.

ಕೆಥೊಲಿಕ್ ಮಠಾಧಿಕಾರಿಗಳು ಕೆಥೊಲಿಕ್ ಯುವಕರ ವಿದ್ಯಾಭಿವೃದ್ಧಿಯಾಗಬೇಕೆಂಬ ಕೇಳಿಕೆಯ ವಿಚಾರವನ್ನೆ ಕುರಿತು ಆತನು ಎಚ್ಚರಿಕೆ ಇತ್ತನೆಂದು ತಿಳಿದು ಬರುತ್ತಿದೆ

ಆ ಮೇಲೆ ಆತನು ಯುವಕರೆಲ್ಲರೂ ಒಂದು ಸಂಘಕ್ಕೆ ಸೇರಿ ದೇಶದುನ್ನತಿಯ ಸಾಧನೆ ಮಾಡಬೇಕೆಂದೂ ಆಗಲೇ ೯೧೭,೪೫೪, ಹುಡುಗ ಹುಡುಗಿಯರು "ಯುವಕ ಚಳವಳ ಸಂಘಕ್ಕೆ" ಸೇರಿರುವರೆಂದೂ ತಿಳಿಸಿದನು

ಮಠಾಧಿಪತಿಗೆ ಮತವಿಚಾರ ಮಾತ್ರ

ಲಸ್ಟ್‌ಗಾರ್ಟನ್‌ನಲ್ಲಿ ಒಂದು ಕಡೆ ಭಾಷಣ ಮಾಡುತ್ತಾ ಹಿಟ್ಲರನು ಸರಿಯಾಗಿ ಕ್ರೈಸ್ತ ಗುರುಗಳನ್ನು ಎಚ್ಚರಿಸಿದನು "ದೇವಾಲಯದ ಅಧಿಕಾರಿಗಳು ತಮ್ಮ ಕೆಲಸವನ್ನೇ ನೋಡಿಕೊಂಡಿರಬೇಕು. ರಾಜಕೀಯದಲ್ಲೇನಾದರೂ ಅವರು ಕೈಯಿಕ್ಕಿದಲ್ಲಿ ಅವರನ್ನು ಬಲತ್ಕಾರದಿಂದಾದರೂ ಪುನಃ ಅವರ ಸ್ಥಾನದಲ್ಲಿ ತಂದು ನಿಲ್ಲಿಸಲಾಗುವುದು' ಹೀಗೆಂದು ಅವನು ನುಡಿದನು

ದೂರ ಪೌರ್ವಾತ್ಯದಲ್ಲಿ ಜನರಲ್ ಹಯಾಶಿ

ಇವರು ಅಧಿಕಾರವನ್ನು ಬಿಡಲೊಪ್ಪುವುದಿಲ್ಲ.

ಜಪಾನಿನಲ್ಲಿ ನಡೆದ ಭಾರಿ ಚುನಾವಣೆಗಳ ಫಲವಾಗಿ, ಅಲ್ಲಿ ಪ್ರಕೃತದಲ್ಲಿ ಆಡಳಿತದ ಮುಖಂಡತ್ವದಲ್ಲಿದ್ದ ಜನರಲ್ ಹಯಾಶಿಯವರಿಗೆ ಯಾವ ಬೆಂಬಲವೂ ಸಿಗಲಿಲ್ಲ ಜಪಾನ್ ಪಾರ್ಲಿಮೆಂಟಿನಲ್ಲಿದ್ದ ೪೬೬ ಸದಸ್ಯರುಗಳಲ್ಲಿ ೪೦ ಮಂದಿಗಳು ಮಾತ್ರ ಅವರನ್ನು ಬೆಂಬಲಿಸಿದರು ಜನರಲ್ ಹಯಾಶಿಯವರು ಜಪಾನ್ ಸೇನಾದಳದ ಅಧಿನಾಯಕರಿರುವುದರಿಂದ ಅವರು ತಮ್ಮ ಅಪಜಯವನ್ನು ಸಹಿಸದೆ, ಅಧಿಕಾರವನ್ನು ಬಿಡುವ ಮನಸಿಲ್ಲದವರಾಗಿದ್ದಾರೆ ತಮ್ಮ ಈ ಇಚ್ಛಿತವನ್ನು ಅವರು ಮೊನ್ನೆ ಬಹಿರಂಗವಾಗಿ ಪ್ರಕಟಿಸಿರುವರು

ಜನರಲ್ ಹಯಾಶಿಯವರು ಈ ತರದ ವರ್ತನೆಯನ್ನು ಅನುಸರಿಸುವುದರಲ್ಲಿ ಒಂದು ಮುಖ್ಯ ಉದ್ದೇಶವಿದೆ ತಮ್ಮ ಇಚ್ಛಿತವನ್ನು ಪ್ರಕಟಿಸುವ ಮೊದಲು ಅವರು ಚಕ್ರವರ್ತಿಯವರನ್ನೂ ಮಂತ್ರಿಮಂಡಳದ ಸದಸ್ಯರನ್ನೂ ಕೂಡಿಸಿ ಮಾತುಕತೆ ನಡೆಸಿರುವರು ತಮಗೆ ವಿರೋಧವಿರುವ ಅಲ್ಲಿನ ಇತರ ರಾಜಕೀಯ ಪಂಗಡಗಳು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸುವರೆಂದು ಅವರು ಆಶಿಸುತ್ತಾರೆ ದೇಶದ ಒಳಗಿನ ಮತ್ತು ಹೊರಗಿನ ರಾಜಕೀಯ ಪರಿಸ್ಥಿತಿಯು ಅವರನ್ನು ತಮ್ಮ ಅಧಿಕಾರವನ್ನು ಬಿಟ್ಟು ಕೊಡುವಂತಹದಲ್ಲವೆಂದು ಅಭಿಪ್ರಾಯಪಡುತ್ತಾರೆ "ಪ್ರಪಂಚದಲ್ಲೆಲ್ಲ ಸಮರ ಸಿದ್ಧತೆಗಳಾಗುತ್ತಿರಲು ತಮ್ಮ ದೇಶದಲ್ಲಿಯಾದರೂ ಈಗಿನ ಪರಿಸ್ಥಿತಿಯನ್ನು ಎದುರಿಸಬಲ್ಲ ಆಡಳಿತದ ಸ್ಥಾಪನೆಯ ಆವಶ್ಯಕತೆ ಇರುವದರಿಂದ ಪಾರ್ಲಿಮೆಂಟಿನ ಎಲ್ಲಾ ಸದಸ್ಯರು ನನ್ನ ಧೋರಣೆಯನ್ನು ತಿಳಕೊಂಡು, ಆಡಳಿತದಲ್ಲಿ ನನ್ನೊಡನೆ ಸಹಕರಿಸುವರೆಂದು ನಂಬುತ್ತೇನೆ" ಹೀಗೆಂದು ಅವರು ತಮ್ಮ ವಿರೋಧಿಗಳಾದವರಲ್ಲಿ ವಿನಂತಿಸಿಕೊಂಡಿರುವರು

ಇಂಗ್ಲೆಂಡಿನ ಭೀಮ.

ಇಂಗ್ಲೆಂಡಿನ ಹೆಂಡನ್ ಜಿಲ್ಲೆಯಲ್ಲಿ ಬೆಸ್‌ಫೋರ್ಡ್ ಎಂಬ ಒಬ್ಬ ದಾಂಡಿಗನೊಬ್ಬನಿದ್ದಾನೆ. ಮಹಾ ಶಕ್ತಿಶಾಲಿ ಕಲಿಯುಗದ ಭೀಮನೆಂದರೂ ಅವನಿಗೆ ಈ ಹೆಸರು ಸರಿಯಾಗಿ ಒಪ್ಪಬಹುದು. ತಾನು ಮಾಡುವ ಶಕ್ತಿಕಾರ್ಯಗಳನ್ನು ನೋಡಲು ಇವನು ಪ್ರಪಂಚದ ಇತರ ಅನೇಕ ಬಲಶಾಲಿಗಳೆಂದೆನಿಸಿದವರಿಗೆ ಆಹ್ವಾನಿಸಿರುವನಂತೆ. ಇವನು ಮಾಡಿ ತೋರಿಸುವ ಅನೇಕ ಕಾರ್ಯಗಳಲ್ಲಿ ಈ ಕೆಳಗಿನವೂ ಕೆಲವಾಗಿರುತ್ತವೆ.

ದೇಹದಿಂದ ಮುಂದಕ್ಕೆ ನೀಡಿದ ಕೈಗಳಿಂದ, ಒಂದು ಹಾರೆಯ ಮೇಲೆ ನಿಂತಿರುವ ೭॥ ಮಣ ಭಾರದ ಮನುಷ್ಯನನ್ನು ಎತ್ತುವುದು (೨) ೧೨ ಅಂಗುಲ ಉದ್ದವಿದ್ದು ೨॥ ಅಂಗುಲ ಅಗಲದ ಕುದುರೆಯ ಕಬ್ಬಿಣದ ಲಾಳವನ್ನು ೫ ಸುತ್ತು ತಿರುಗಿಸುವುದು (೩) ೯ ಜನರಂತೆ ಎರಡು ಕಡೆಯಲ್ಲಿ ೧೮ ಜನರು ನಿಂತು ದಪ್ಪನಾದ ಹಗ್ಗದಿಂದ ಇವನ ಕುತ್ತಿಗೆಯನ್ನು ಬಿಗಿಯ ನೋಡಿದರೂ ಇವನು ತಡೆಯುವನಂತೆ (೪) ೧೩೦ ರಾತ್ಲು ಭಾರವಿರುವ ವಸ್ತುವನ್ನು ಅವನು ನಡ ಬೆರಳಿನಿಂದ ತಲೆಯ ಮೇಲೆ ಎತ್ತಿ ಇಡುವನಂತೆ (೫) ೬ ಅಂಗುಲ ಮೊಳೆಗಳನ್ನು ಇವನು ಬೆರಳುಗಳಿಂದ ಬಗ್ಗಿಸುವನಂತೆ ಇವೆಲ್ಲಾ ಅವನ ಕೆಲವು ಸುಲಭವಾದ ಸಾಧನಗಳಂತೆ

ರಶ್ಯದ ಪ್ರಸಿದ್ಧ ದಂತ ವೈದ್ಯ

ವೆಸೆಲಿ ಯೆಡಿಲೊವಿಚ್ ಎಂಬವನು ರಶ್ಯದಲ್ಲಿ ಪ್ರಖ್ಯಾತ ದಂತವೈದ್ಯನು ರಾಜಕೀಯ ಕಾರಣಗಳ ಮೇಲೆ ಅವನಿಗೆ ದಸ್ತಗಿರಿ ಮಾಡಿರುತ್ತಾರೆ ರಶ್ಯದ ರಾಜನೀತಿ ಮುತ್ಸದಿಗಳ ಸಂಘದವರಿಗೆಲ್ಲ ಹಲ್ಲು ನೋವು ಪ್ರಾರಂಭವಾಗಿದೆ ಅವರಿಗೆ ಈ ದಂತವೈದ್ಯನಿಲ್ಲದೆ ಆಗುವುದೇ ಇಲ್ಲ ಈಗ ಅವನನ್ನು ಬಿಡುವ ಯೋಚನೆಯಲಿದ್ದಾರೆ ಇದರ ಮುಂಚೆ ಅವನಿಗೆ ಮೂರು ಬಾರಿ ಬಿಟ್ಟಿದ್ದಂತಾಯಿತಂತೆ

ಹುಡುಗನೊಬ್ಬನ ವಿಚಿತ್ರ ಮರಣ

ನಟ್‌ಕೇರು ಎಂಬೊಂದು ಹಳ್ಳಿಯಲ್ಲಿ ಒಬ್ಬ ರೈತ ಹುಡುಗನು ಒಂದು ಕೆರೆಯ ದಂಡೆಯ ಮೇಲೆ ಹರುಷದಿಂದ ಹಾಡುತ್ತಾ ಕುಳಿತಿದ್ದನು ಮಿಂಚುಳ್ಳಿ ಪಕ್ಷಿಯೊಂದು ಆಗಾಗ್ಗೆ ಆ ಕೆರೆಯಿಂದ ಮೀನುಗಳನ್ನು ಹಿಡಿದು ಒಂದು ಬಿಲಕ್ಕೆ ಸಾಗಿಸುತ್ತಿದ್ದುದು ಆ ಹುಡುಗನಿಗೆ ವಿನೋದವಾಗಿ ಕಂಡು ಬಂದು, ಅವನು ಆ ಪಕ್ಷಿಯನ್ನು ಹಿಡಿಯಬೇಕೆಂದಪೇಕ್ಷೆಪಟ್ಟು, ಅದು ನುಗ್ಗಿದ ಬಿಲದೆಡೆಗೆ ಹೋಗಿ ಅದರೊಳಗೆ ಕೈ ಹಾಕಲು ಅವನಿಗೆ ಏನೋ ಕಡಿದಂತಾಗಿ ಕೆಲವೇ ಸಮಯದೊಳಗೆ ಆ ಕಡಿತವು ಅವನ ಮರಣಕ್ಕೆ ಕಾರಣವಾಯಿತು ಈ ವರ್ತಮಾನವು ಹಳ್ಳಿಗರಿಗೆ ತಿಳಿದು ಅವರು ಆ ಬಿಲವನ್ನು ಅಗೆಯಲಾಗಿ ಅದರೊಳಗೆ ಒಂದು ನಾಗರ ಹಾವು ಇದ್ದುದು ಕಂಡು ಬಂತು ಹಾವನ್ನು ಕಡೆಗೆ ಕೊಂದರು ಹುಡುಗ ಸತ್ತೆ ಹೋದ

ಪ್ರಿತಿನ್‌ಪಾಶಾ ಎಂಬ ಜಮೀನಿನ ಆಡಳಿತಗಾರರು ತಾವು ಹೊಸದಾಗಿ ಪಡಕೊಂಡ ಒಂದು ಜತೆ ಹುಲಿಗಳ ಮದುವೆಯನ್ನು ಜರುಗಿಸಿದರು ಈ ಸಂತೋಷ ಸಮಾರಂಭದ ಸಲುವಾಗಿ ದೊಡ್ಡ ಔತಣವನ್ನು ಮಾಡಿಸಿದರು ಸುಮಾರು ೨ ಸಾವಿರ ರೂಪಾಯಿಗಳ ಖರ್ಚು ಅವರಿಗೆ ತಗುಲಿರುತ್ತದಂತೆ

ಕಾಂಗ್ರೆಸ್ಸಿನ ಅದ್ವಿತೀಯ ಪ್ರಭಾವ!

ಆಂಗ್ಲ ಪತ್ರಿಕೆಯು ನೆಹ್ರುಗಳನ್ನು ಶ್ಲಾಘಿಸುತ್ತದೆ.

ಆಭರಣಾಲಂಕೃತ ಸ್ವದೇಶಿ ರಾಜರುಗಳ ಗಾಬರಿ.

ಹಿಂದೂದೇಶದ ಈಗಿನ ರಾಜಕೀಯ ಪರಿಸ್ಥಿತಿಯ ಮೇಲೆ ಇಂಗ್ಲೆಂಡಿನ 'ಲಿಟರರಿ ಡೈಜೆಸ್ಟ' ಎಂಬ ಪತ್ರಿಕೆಯು ಒಂದು ಉಜ್ವಲವಾದ ಲೇಖನದಲ್ಲಿ ಭಾರತ ಮುಖಂಡರ ಪರಿಶ್ರಮವನ್ನು ಶ್ಲಾಘಿಸುತ್ತದೆ

"ಲೇಶಮಾತ್ರವೂ ದಣಿವೆಂಬ ಅರಿವು ಇಲ್ಲದ ಸ್ವರ್ಣನಾದ ಕಂಠವುಳ್ಳ ರಾಷ್ಟ್ರಪತಿ ನೆಹರೂರವು ಭಾರತದ ಆದ್ಯಂತ್ಯದ ವರೆಗಿನ ಹಳ್ಳಿಪಳ್ಳಿಗಳಲ್ಲಿಯೂ ಕಾಂಗ್ರೆಸ್ ವಾರ್ತೆಯನ್ನು ಸಾರಲು, ವಿಮಾನವನ್ನು ವಾಹನವಾಗಿ ಉಪಯೋಗಿಸಿದರು ನೆಹರೂಗಳ ಸಹಕಾರಿಗಳಲ್ಲಿ ಲೋಕವಿಖ್ಯಾತ ಕವಿರತ್ನವೂ ಅದ್ವಿತೀಯ ಭಾಷಣಗಾರ್ತಿಯೂ, ಸುಪ್ರಸಿದ್ಧ ದೇಶಭಕ್ತಳೂ ಆಗಿರುವ ಶ್ರೀಮತಿ ಸರೋಜಿನಿ ನಾಯುಡುಗಳೂ ಒಬ್ಬರು ಮಹಾತ್ಮನ ಸುವಾರ್ತಾ ದೂತರುಗಳು ತಂದ ಸುವಾರ್ತೆಯನ್ನು ಅಲ್ಲಿಯ ಅರೆ ಹೊಟ್ಟೆಯ ಅರೆ ನಗ್ನ ಹಳ್ಳಿ ನಿವಾಸಿಗಳು ಗಂಭೀರವಾಗಿ ಕೇಳಿ ಬ್ರಿಟಿಷ ಆಡಳಿತವನ್ನು ಕೆಡಹಲು ನಿರ್ಧರಿಸಿದರು"

"ಪರಿಣಾಮವಾಗಿ ಆರು ಪ್ರಾಮುಖ್ಯ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಪ್ರಚಂಡ ವಿಜಯವನ್ನು ಪಡೆಯಿತು. ದೊಡ್ಡ ದೊಡ್ಡ ಲಕ್ಷಾಧಿಪತಿಗಳೂ ಜಮೀನ್ದಾರರೂ ಅಲ್ಲದೆ ಬಿರುದಾಂಕಿತ ಇನ್ನೂ ಅನೇಕ ಮಹನೀಯರೂ ಅಪಜಯ ಹೊಂದಿದರು ದೇಶೀಯ ಸಂಸ್ಥಾನಗಳಲ್ಲಿಯೂ ನೆಹರುಗಳು ತಮ್ಮ ವರ್ಚಸ್ಸನ್ನು ಬೀರಿದರು ಅಲ್ಲಿ ಸೇಕಡಾ ೮೦ರಂತೆ ಕಾಂಗ್ರೆಸ್ಸಿನ ಪ್ರಭಾವವು ನೆಲೆಸಿರುವುದು. ದೊಡ್ಡ ದೊಡ್ಡ ಜಮೀನ್ದಾರರ ಕಡೆಗಳಿಂದ ಪ್ರತಿನಿಧಿಗಳಾಗಿ ಅಪ್ಪರ್ ಚೇಂಬರಿಗೆ ಚುನಾಯಿತರಾದವರಲ್ಲಿ ಸೇಕಡಾ ೫೦ರಂತೆ ನೆಹರುಗಳನ್ನು ಬೆಂಬಲಿಸುವವರಿದ್ದಾರೆ ಈ ತೆರನಾಗಿ ಹನ್ನೊಂದರಲ್ಲಿ ಆರು ಪ್ರಾಂತ್ಯಗಳನ್ನು ಸಂಪೂರ್ಣ ಗೆದ್ದು ನೆಹರುಗಳು ಅಲ್ಲಿಯ ಶಾಸನಸಭೆಗಳನ್ನು ಕಾಂಗ್ರೆಸ್ಸಿನ ವಶದಲ್ಲಿಟ್ಟುಕೊಳ್ಳಲು ಪ್ರಯತ್ನ ಮಾಡುವರು

"ಬ್ರಿಟಿಷ ಟೋರಿ ಪಂಗಡದವರು ಎಷ್ಟರ ತನಕ ಹಿಂದೂಸ್ಥಾನವನ್ನು ವಶದಲ್ಲಿಟ್ಟುಕೊಳ್ಳಲು ಸಹಾಯಕರೆನಿಸಿದ ಸಿ ವೈ ಚಿಂತಾಮಣಿಯವರ ಲಿಬರಲ್ ಪಂಗಡವು ಕಲ್ಪನಾತೀತವಾದ ಸೋಲನ್ನು ಅನುಭವಿಸಿತು"

"ದೇಶೀಯ ಸಂಸ್ಥಾನಗಳ ರಾಜರುಗಳ ನ್ಯಾಯ ಸಲಹೆಗಾರರಾದ ಜೆ ಎಚ್ ಮೋರ್ಗನರು 'ಸಂಯುಕ್ತ ಸಂಸ್ಥಾನಗಳ ಸಂಘವೆಂದರೆ (Princes Federation) ರಾಜತೀವಿಯನ್ನು ಬಿಟ್ಟುಕೊಟ್ಟ ಹಾಗೆ' ಎಂದು ಚೇಂಬರ್ ಆಫ್ ಪ್ರಿನ್ಸೆಸ್ಸಿನ ಅಧ್ಯಕ್ಷರಾದ ಮಹಾ ಪ್ರತಿಭಾಶಾಲಿ ಪಾಟಿಯಾಲಾ ಮಹಾರಾಜರಿಗೆ ತಿಳಿಸಿದಾಗ, ಆಭರಣ ಅಲಂಕಾರ ಭೂಷಿತರಾದ ಈ ಸ್ವದೇಶಿ ರಾಜರುಗಳು ತೆರೆದ ಕಣ್ಣುಗಳಿಂದ ದಂಗುಬಡಿದಂತಾದರು'

ಮೇ ದಿನಾಚರಣೆಯ ಕಾಲದಲ್ಲಿ ಕ್ರಾಂತಿಯುಕ್ತ ಸಲಹೆಗಳುಳ್ಳ ಹಸ್ತ ಪತ್ರಿಕೆಗಳನ್ನು ಹಂಚಿದರೆಂಬ ಅಪಾದನೆಯ ಮೇಲೆ ಕಲ್ಕತ್ತದಲ್ಲಿ ಈರ್ವ ಯುವಕರನ್ನು ಕೈದುಮಾಡಿರುತ್ತಾರೆ. ಯುವಕರು ಕಮ್ಯೂನಿಸ್ಟ ಕ್ರಾಂತಿಕಾರ ಪಂಗಡಕ್ಕೆ ಸೇರಿದವರೆಂದು ಸರಕಾರದ ಅಧಿಕಾರಿಗಳ ಊಹೆ

ಸೋನ್ಯ ಮಾರುತಿ ದೇವಾಲಯ ಸತ್ಯಾಗ್ರಹ.

ಮೇ ೧೮ನೇ ತಾರೀಕು ವರೆಗೆ ಪೂನೆಯ ಸೋನ್ಯ ಮಾರುತಿ ದೇವಾಲಯದಲ್ಲಿ ಯಾವದೊಂದು ತರದ ಭಜನ ಅಥವಾ ಶಬ್ದವನ್ನುಂಟು ಮಾಡುವ ಪೂಜೆ ಪುರಸ್ಕಾರಗಳನ್ನೂ ನಡೆ.. ಬಾರದೆಂಬ ಸರಕಾರದ ಕಾನೂನಿಗೆ ವಿರೋಧವಾಗಿ, ಅಲ್ಲಿಯ ಎಲ್ಲಾ ಪಂಗಡಗಳ ಹಿಂದೂಗಳೂ ತೀಕ್ಷ್ಣವಾದ ಚಳವಳವನ್ನು ಎಬ್ಬಿಸಿ ಸತ್ಯಾಗ್ರಹವನ್ನು ಪ್ರಾರಂಭಿಸಿರುವರು ಕಾನೂನನ್ನು ಉಲ್ಲಂಘಿಸಿ ದೇವಾಲಯದಲ್ಲಿ ಘಂಟೆಗಳನ್ನು ಬಾರಿಸಿ ದೇವರ ಪೂಜೆಮಾಡಿದವರನ್ನು ಪೋಲೀಸ್ ಅಧಿಕಾರಿಗಳು ಕೈದುಮಾಡಿರುವರು ಇಷ್ಟರ ವರೆಗೆ ೪೫೦ಕ್ಕೆ ಮಿಕ್ಕಿ ಜನರ ಕೈದಾಗಿದೆ ಆಸುಪಾಸಿನ ಜಿಲ್ಲೆಗಳಿಂದ ಅನೇಕಾನೇಕ ಹಿಂದೂ ಸಭೆಗಳ ಮುಖಂಡರುಗಳು ಸತ್ಯಾಗ್ರಹವನ್ನು ಮಾಡಲಿಚ್ಛಿಸುವ ಸ್ವಯಂಸೇವಕರ ತಂಡದೊಂದಿಗೆ ಪೂನೆಗೆ ಬಂದಿದ್ದು, ಕಾನೂನು ಉಲ್ಲಂಘಿಸಿ ಪೂಜೆ ವಿನಿಯೋಗಾದಿಗಳನ್ನು ಆ ಸೋನ್ಯ ಮಾರುತಿ ದೇವಾಲಯದಲ್ಲಿ ನೆರವೇರಿಸುವಾಗ ಕೈದುಮಾಡಲ್ಪಟ್ಟಿರುತ್ತಾರೆ

ದೇವಾಲಯದಲ್ಲಾಗುವ ಪೂಜೆ ಭಜನಾದಿಗಳಿಂದ ಪಕ್ಕದಲ್ಲಿರುವ ಒಂದು ಮಸೀದಿಯಲ್ಲಿ ಪ್ರಾರ್ಥನೆಮಾಡುವ ಮುಸಲ್ಮಾನರಿಗೆ ತೊಂದರೆಗಳಾಗಿ, ಅದರಿಂದ ಹಿಂದೂಮುಸ್ಲಿಂ ಘರ್ಷಣೆಯಾಗಬಹುದೆಂಬ ಸರಕಾರದ ಹೆದರಿಕೆಯೇ ಈ ಕಾನೂನು ಜ್ಯಾರಿ ಕಾರಣವಾಯಿತು ಮುಂಬಾಯಿಯ ಹಣಕಾಸಿನ ಸಚಿವರಾದ ಶ್ರೀ ಜಮ್ನದಾಸ್ ಮೆಹತಾರವರು ಮೊನ್ನೆ ಪೂನಾಕ್ಕೆ ಬಂದು ದೇವಾಲಯ ಮಸೀದಿಗಳ ಸ್ಥಾನ[illegible] ಪರಿಶೀಲಿಸಿದರು

[illegible] ಮಹಾರಾಷ್ಟ್ರದ ಸುಪ್ರಸಿದ್ಧ ಮುಖಂಡರಾದ ಶ್ರೀ ಎನ ಸಿ ಕೇಳ್ಕರರವರು ಸತ್ಯಾಗ್ರಹವನ್ನರ್ಪಿಸಿ ಸರಕಾರದ ಕಾನೂನುಲ್ಲಂಘನೆ ಮಾಡಿ ದೇವಸ್ಥಾನದ ಗಂಟೆಗಳನ್ನು ಬಾರಿಸಿ ಪೂಜೆ ಮಾಡಿದರು ಅವರನ್ನು ಕೈದುಮಾಡಿ, ಈಗ ಜಾಮೀನಿನ ಮೇಲೆ ಬಿಟ್ಟಿರುವರು ಪರಿಸ್ಥಿತಿಯ ಕುರಿತು ಪರ್ಯಾಲೋಚಿಸಲು ಪೂನೆಯ ಪೋಲಿಸ್ ಸುಪರಿಂಟೆಂಡೆಂಟರೂ, ಕಲೆಕ್ಟರರೂ ಮತ್ತು ಮೆಜಿಸ್ಟ್ರೇಟರೂ ಬೊಂಬಾಯಿಗೆ ತೆರಳಿರುವರು ಅವರು ಮುಖ್ಯ ಮಂತ್ರಿಗಳಾದ ಸರ್ ಡಿ ಬಿ ಕೂಪರರನ್ನು ಕಂಡು ಮಾತನಾಡಿದರು ಈ ವಿಷಯವು ಬೊಂಬಾಯಿಯ ಶಾಸನ ಸಭಾಧಿವೇಶನದಲ್ಲಿ ಚರ್ಚೆಗೆ ಇಡಲಾಗುವುದೆಂದು ತಿಳಿದುಬರುತ್ತದೆ

ಮದರಾಸ್ ಅಡ್ವೊಕೇಟ್ ಅಸೋಸಿಯೇಷನ್ನು 'ಇಂಟರಿಮ್' ಮಂತ್ರಿತ್ವವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ

° ° ° °

ಗುಡಿವಾಡದ ಹತ್ತಿರ ಒಂದು ಹಳ್ಳಿಯಲ್ಲಿ ಮೊನ್ನೆ ದಿನ ಭಯಂಕರ ಗಲಭೆಯು ನಡೆಯಿತು ಇರ್ವರು ಮೃತರಾಗಿರುವರು. ಪೋಲೀಸರು ಬೇಗನೆ ಈ ಗಲಭೆಯನ್ನು ತಡೆದಿರುವರು ಕೆಲವರನ್ನು ಸೆರೆ ಹಿಡಿದಿರುವರು

° ° ° °

ಗುಂಟೂರಿನಲ್ಲಿ ಸೆಕೆಯು ವಿಶೇಷವಾಗಿದೆ ಸೆಕೆಯು ಜನರಿಂದ ಸಹಿಸಲು ಅಸಾಧ್ಯವಾದುದಾಗಿರುತ್ತದೆ ಕೆಲವು ವೇಳೆ ಸ್ವಲ್ಪ ಮಳೆ ಬರುತ್ತಿದ್ದರೂ, ಬಿಸಿ ಗಾಳಿಯು ಬೀಸುತ್ತಿದೆ ಉಷ್ಣದ ದೆಸೆಯಿಂದ ಕೆಲವರಿಗೆ ಸನ್‌ಸ್ಟ್ರೋಕ್ ತಗಲಿರುತ್ತದೆ. ಮರಣಗಳಿಲ್ಲ

...ರುವ ಕ್ರಿ ಕಾಲುಗಳ ಮೇಲೆ
...ಗಳು ಇರುತ್ತವೆ.

ನಿಮ್ಮ ಮಕ್ಕಳ
ಆರೋಗ್ಯವನ್ನು
ಲೈಫ್‌ಬಾಯ್
ಸೋಪಿನಿಂದ
ಕಾಪಾಡಿರಿ.



...ರೆ ಕೈ ಕಾಲುಗ
...ಲ್ಲವೇ ? ಮತ್ತು
...ನೀವೇ ಯೋ
ಈ ಅಪಾಯದಿಂದ
ಸಾಪಕಾರಿಯಾದ
ಲೈಫ್‌ಬಾಯ್‌ನ
ವಿಶೇಷವಾದ ...
ತೊಳೆಯುವ್ನು ...
ರವಾದ ವಿಷಕ್ರಿಮಿ
...ದೆ ನಿಮ್ಮ ಮ
...ಂದ ಸುರಕ್ಷಿತವಾಗಿ

ಎಲ್ಲಿ ಕೊಳೆಯಿರುತ್ತದೋ ಅಲ್ಲಿ ಅಪಾಯವಿದೆ ನಿಮ್ಮ ಮಕ್ಕಳು ಆಟವಾಡುವ ನೆಲವು ಯಾವಾಗಲೂ ಚೊಕ್ಕಟವಾಗಿ ಆಟವಾಡುವುದಕ್ಕೆ ಅನುಕೂಲವಾಗಿರಬೇಕೆಂಬುದನ್ನು ಜ್ಞಾಪಕದಲ್ಲಿಡಿ ಗುಡಿಸುವುದೊಂದೇ ಸಾಕಾಗುವುದಿಲ್ಲ ಪ್ರತಿದಿನವೂ ಉಪಕಾರಿಯಾದ ಲೈಫ್‌ಬಾಯ್‌ನಿಂದ ನೆಲವನ್ನು ತೊಳೆಯುವುದರಿಂದ ನಿಮ್ಮ ಮಕ್ಕಳ ಆರೋಗ್ಯವನ್ನು ಚೆನ್ನಾಗಿ ಕಾಪಾಡಬಹುದು



ಸಾಬೂನು
...Y SOAP
...ಎಲ್ಲಾಯಿಂದಲೇ ತಯಾರಿಸಿದುದು

LEVER BROTHERS (INDIA) LIMITED
KANARESE

"ಇದು ಎಲ್ಲಿಯ ಗೃಹಚಾರ' ತಾಯಿ ...ಸ್ವಲ್ಪ ಗಾಬರಿಯಾಗುವಳು "ನಿನ್ನೆ ... ಹುಡುಗ ಸರಿಯಿದ್ದ ಇವತ್ತು ಇವನಿಗೇ ...ತು ಅಯ್ಯೋ ನರಸಿಂಹ ದೇವರೇ ಹುಡುಗನ ಬುದ್ಧಿ ಸರಿಯಾದರೆ ನಿನಗೆ ... ರೂಪಾಯಿಯ ಪಂಚಕಜ್ಜಾಯ ಕೊಡಿ...ತು ನನ್ನ ಗ್ರಹಚಾರ" 'ಅಮ್ಮಾ ಅಮ್ಮಾ ...ನು, ನನಗೇನಾಗಿದೆ ನನ್ನನ್ನು ತಿಳಿಯು...ದ ನೀನು ನನಗೆ ಹುಚ್ಚೆನೆಂದ ಭಾವಿಸು...ಯಿತೆ?"

"ನೀನು ಹುಚ್ಚನಲ್ಲ ನಿನಗೆ ಯಾವುದೊ... ದೇವತೆಯು ಪೀಡಿಸುತ್ತಿರಬೇಕು" ...ಗಿ ಹಂಕೆ ಹೇಳಿದ "ಭಲೆ' ಸರಿ... ವರದಕ್ಷಿಣೆ ಎಂಬ ಈ ಕ್ರೂರ ಪೈಶಾ...ಕಟ್ಟಳೆಯು ನನ್ನನ್ನು ಪೀಡಿಸುವುದು ಅದ... ತಪ್ಪಿಸಿಕೊಂಡ ಹೊರತು ನನಗೆ ಆತ್ಮ...ತಿ ಇಲ್ಲ ಇದು ನನ್ನ ನಿರ್ಧಾರ"

"ತಾಯೀ! ಹಾಗಾದರೆ ವರದಕ್ಷಿಣೆಯಿಂ...ದೇ ಎಂದೂ ಈ ಮದುವೆಗೆ ನಾವಿಬ್ಬರೂ ...ವವರಲ್ಲ ಅಲ್ಲವೇ? ಅಮ್ಮಾ ಇದೇ ನನ್ನ ಕೊನೆಯ ಸಂದರ್ಶನ ಜನನೀ! ನಾನಿಂ...ನಿನಗೆ ನೋಡಲು ಸಿಗುವವನಲ್ಲ"

ಎಂದವನೇ ಮೋಹನನು ತಟ್ಟನೇ ಮನೆ...ದ ಹೊರಬಿದ್ದು ಸರ್ವತ್ರವೂ ವ್ಯಾಪಿಸಿಕೊಂಡಿರುವ ಕರಾಳ ಕತ್ತಲೆಯಲ್ಲಿ ಮಾಯವಾದನು

o o o o

"ಸರಿ! ನನ್ನ ಪ್ರಯತ್ನವೆಲ್ಲವೂ ಮಣ್ಣುಪಾಲಾಯಿತು ಈ ವಧುವಿಗೆ ನಿಶ್ಚೈಸಿದಂತೆ ಈಗ ನಡೆಯಬೇಕಾಗಿದೆ" ಮೋಹನನೆಂದನು

ಮೋಹನಾ! ನಾನಾದರೋ ಅದಕ್ಕೆ ಸಿದ್ಧಳಾಗಿಯೇ ಇರುವೆನು, ಆದರೆ ಇನ್ನಾದರೂ ಈ ನಮ್ಮ ಮಾತೃಭೂಮಿಯಲ್ಲಿರುವ ನಮ್ಮ ಬಂಧುಗಳು ನಮ್ಮ ಈ ಚರಿತ್ರೆಯನ್ನು ಕೇಳಿ ಈ ವರ ವಿಕ್ರಯವೆಂಬ ದಶ್ಯಾಗೆ ತಿಲಾಂಜಲಿಯನ್ನೀಯಬೇಕೆಂದು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತೇನೆ ಹೂಂ ಇನ್ನು ವಿಳಂಬವೇಕೆ?'

ಎಂಬ ಮಾತುಗಳು ಈ ಮೊದಲಿನ ಸರೋವರದಿಂದ ಕೇಳಿಸಿದುವು ಮರುಕ್ಷಣವೇ ಭಯಂಕರವಾದ ಭಳಕ್ಕೆಂಬ ಶಬ್ದವೊಂದು ಮಿಂಚಿನಂತೆ ಕೇಳಿಸಿ ರಭಸದಿಂದ ಬೀಸುತ್ತಿರುವ ವಾತಾವರಣದಲ್ಲಿ ಲೀನವಾಗಿ ಹೋಯಿತು ವರನೂ ಇಲ್ಲ—ದಕ್ಷಿಣೆಯೂ ಇಲ್ಲ—ವಧೂವೂ ಕಾಣೆ ಸಮಾಜವೋ—ಸಮಾಧಿಯೋ? ಯಾವುದು ಹಿತ?

ನಿರುಪಮಾ ಸ್ನೋ
ಸ್ನೋಗಳಲ್ಲಿ ಶ್ರೇಷ್ಠವಾದುದು!
ಎಲ್ಲಾ ಕಾಲದ ಹವಾಗುಣಗಳಲ್ಲಿಯೂ
ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು!
ಅತೀ ಕಮ್ಮಿದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ,
ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.
ಹಾನಿಕರವಾದ ಪದಾರ್ಥಗಳು
ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು
ಚರ್ಮವನ್ನು ಶುಚಿಯಾಗಿಡುತ್ತದೆ.
ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ
ಬಾಟ್ಲಿ ಒಂದರ ಬೆಲೆ: ಆಣೆ 8 ಮಾತ್ರ.

Manufactured by.—
J. B Dutt & Co., Calcutta,
Sole agent.—
ಪೋಪ್ಯುಲರ್ ಸ್ಟೋರ್ಸ ಮಂಗಳೂರು.

Regd)

ಅಮೃತ...

ತಲೆವೇದನೆ, ಶಿರೋವೇದನೆ ಉಳುಕು ಕುತ್ತಿಗೆ ...
ಗಳು, ವಾತುಕೊಳ್ಳುವುದು ಚೇಳು ವಿಷ ಮು...
ಎಲ್ಲಾ ರೋಗಗ...
ಕಜ್ಜಿ ತುರಿಕೆ, ತುರಿಕಜ್ಜಿ ಹುಳಕಡ್ಡಿ, ಪಿತ್ಥ...
ಉಪದವ ತಲೆಹುಣ್ಣು ವಣ ಮೊದಲಾದ
ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ...
ಮಂಗಳೂರ...

ದಿ ಕೆನರಾ ಬೇಂಕಿಂಗ್ ಕೋ...
(ಬ್ರಿಟಿಷ್ ಇಂಡಿಯಾದೇ...

1. ಅಧಿಕೃತ ಚಂದಾ ಹಾಕಲು ಅರ್ಪಿಸಿದ...
2. ಚಂದಾ ಹಾಕಿ ಎತ್ತಿದ ಮೂಲಧನ
3. ಕ್ಷೇಮನಿಧಿಗಳು

ವ್ಯವಹಾರದಲ್ಲಿದ್ದ ಜುಮ್ಲಾ...

ಹೆಡ್ ...

ಬ್ರಾಂಚುಗಳು:—1. ಮದ್ರಾಸು; 2. ವೆಲ್ಲೂರು; 3. ತಲಚೇರಿ; 4. ...
8. ಕುಂದಾಪುರ; 9. ಬೈಂದೂರು; 10. ಸಾಗರ; 1...
ರಾಜೇಂದ್ರಪೇಟೆ.

ನ...

ಈ ಬ್ಯಾಂಕಿನ ಒಂದು ಶಾಖೆಯು "ಸೇ...

10—4—1937

ಪ್ರಪಂಚ

ಯುರೋಪು ದೇಶಗಳಲ್ಲಿ ಇರುವವರೆಲ್ಲರೂ ಕ್ರೈಸ್ತ ಮತಾವಲಂಬಿಗಳೆಂದು ನಾವು ಸಾಧಾರಣವಾಗಿ ತಿಳಿಕೊಂಡಿರುವ ವಿಷಯವಾಗಿದ್ದೆ. ಆದರೆ ನಿಜವಾಗಿ ಅಲ್ಲಿಯವರೆಲ್ಲರೂ ಕ್ರೈಸ್ತರಾಗದೆ ಅಲ್ಲಿಯ ಜನರು ಹಲವು ಚಿಕ್ಕ ಚಿಕ್ಕ ಸ್ವತಂತ್ರ ಮತ ಪಂಗಡಕ್ಕೆ ಸೇರಿರುವರಿರುತ್ತಾರೆ ನಿದರ್ಶನವಾಗಿ ಹಂಗೇರಿ ದೇಶದಲ್ಲಿ ಸುಮಾರು ೫೦-೬೦ ತರದ ಪಂಗಡಗಳಿವೆ ಇವುಗಳ ಹೆಸರೂ ಬಹು ವಿಚಿತ್ರವಾದದ್ದಾಗಿಯೂ ಇರುತ್ತದೆ ಪ್ರಗತಿಗಾರರು, ಅಭಿವೃದ್ಧಿ ಕಾಂಕ್ಷಿಗಳು, ಪ್ರಪಂಚದ—ಅಂತ್ಯ—ನೋಡುವವರು, ಕ್ರಿಸ್ತಮತ ವಿರೋಧಿಗಳು, ಏಕಸ್ತ್ರೀವಾರಾಧಕರು, ಉಪವಾಸ ವ್ರತಮಾಡುವವರು, ಇವೇ ಮೊದಲಾದುವುಗಳು ಆ ಪಂಗಡಗಳ ಹೆಸರುಗಳಲ್ಲಿ ಕೆಲವು

ವಿಶಾಲವಾದ ದೊಡ್ಡ ಮನೆಗಳಲ್ಲಿರುವ ಮಕ್ಕಳು ಎತ್ತರವಾಗಿ ಬೆಳೆಯುವರೆಂದೂ, ಇಕ್ಕಟ್ಟಾದ ಚಿಕ್ಕ ಮನೆಗಳಲ್ಲಿರುವ ಮಕ್ಕಳ ಬೆಳವಣಿಗೆಯು ಕುಗ್ಗುತ್ತದೆಂಬ ಈ ವಿಚಿತ್ರ ಶೋಧೆಯನ್ನು ಸ್ಕಾಟ್ಲೆಂಡಿನ ಆರೋಗ್ಯಖಾತೆಯವರು ಕಂಡುಹಿಡಿದಿರುವರು ಅಲ್ಲಿಯ ಅನೇಕಾನೇಕ ಮನೆಗಳಲ್ಲಿನ ಮಕ್ಕಳ ಎತ್ತರಗಳನ್ನು ಅವುಗಳಿರುವ ಮನೆಗಳ ಅಳತೆಯೊಂದಿಗೆ ಸರಿಹೋಲಿಸಿ ನೋಡಿದ ಮೇಲೆ ಸಂಗತಿಯು ಖಚಿತವಾಯಿತಂತೆ

ಪೂರ್ವಕಾಲದಲ್ಲಿ ಅಬಿಸೀನಿಯಾ ದೇಶವನ್ನು ಆಳಿಕೊಂಡಿದ್ದ ಶಿಬಾರಾಣಿಯು ಅವಳ ಕಾಲದಲ್ಲಿ ಅತ್ಯಂತ ಶ್ರೀಮಂತ ಸ್ತ್ರೀಯಾಗಿದ್ದಳು ಇವಳ ಕಾಲದಲ್ಲಿಯೇ ಪೆಲೆಸ್ತೀನ ದೇಶದಲ್ಲಿ ಯೆಹೂದಿಗಳ ಅರಸನಾಗಿ ಜೆರುಸಲೇಮಿನಲ್ಲಿ ಆಳುತ್ತಿದ್ದ ಸೊಲೊಮೋನನ ಅದ್ವಿತೀಯ ಪಾಂಡಿತ್ಯಕ್ಕೆ ಮೆಚ್ಚಿ ಅವನನ್ನು ವರಿಸಲು ಈ ಶಿಬಾರಾಣಿಯು ಆಫ್ರಿಕದ ತನ್ನ ರಾಜ್ಯದಿಂದ ಅರೇಬಿಯ ದ ಮರಳ ಕಾಡು ಮಾರ್ಗವಾಗಿ ಪೆಲೆಸ್ತೀನಿಗೆ ಬಂದಿದ್ದಳು ಶಿಬಾರಾಣಿಯು ಪೆಲೆಸ್ತೀನಕ್ಕೆ ಬಂದ ಈ ಮಾರ್ಗವನ್ನು 'ಕೌಂಟ್ ಬ್ಯಾರನ್ ಡಿ ಪ್ರೊರೊಕ್' ಎಂಬ ಫ್ರೆಂಚ್ ದೇಶಸ್ಥರೊಬ್ಬರು ಕಂಡ ಹಿಡಿದಿರುವರು ಇದರೊಂದಿಗೆ ಆ ರಾಣಿ ಶಿಬಾರಾಣಿ ಕಾಲದಲ್ಲಿದ್ದ ಪ್ರಖ್ಯಾತ ಓಫಿರ್ ಚಿನ್ನದ ಗಣಿಗಳನ್ನು ಶೋಧಮಾಡಿರುವರಂತೆ ಈಗ ಅವರು ಗುಪ್ತವಾಗಿ ಅಲ್ಲಿ ಬಂಗಾರದ ಶೋಧೆಯನ್ನು ನಡೆಸುತ್ತಲಿರುವರು

ದಕ್ಷಿಣ ಆಫ್ರಿಕದ ಕೇಪ್‌ಟೌನಿನಲ್ಲಿರುವ ಶಾಲಾಮಕ್ಕಳಿಗೆ ಭೂಗೋಳ ಪಾಠವನ್ನು ಕಲಿಸಲು ನವ ಏರ್ಪಾಡು ಮಾಡಿರುತ್ತಾರೆ ಮಕ್ಕಳನ್ನು ೩೦೦೦ ಅಡಿ ಎತ್ತರವಿರುವ ಟೇಬಲ್ ಪರ್ವತದ ತುದಿಗೆ ಕರೆದೊಯ್ಯುವ ಏರ್ಪಾಡು ಮಾಡಿರುವರು ಅಲ್ಲಿಂದ ಕಾಣುವ ಭೂಪ್ರದೇಶದ ವಿವರವನ್ನು ಮಕ್ಕಳಿಗೆ ವಿವರಿಸಿದರೆ ಸರಿಯಾದ ಭೂಗೋಳ ಜ್ಞಾನವಾಗಬಹುದೆಂದು ಅಲ್ಲಿಯ ವಿದ್ಯಾಧಿಕಾರಿಗಳ ಅಭಿಪ್ರಾಯ ಈಗಲೇ ಸಾವಿರಾರು ಮಕ್ಕಳು ಈ ಪರ್ವತಗಳ ಮೇಲಿಂದ ಪಾಠ ಹೇಳಿಸಿಕೊಂಡು ಅನುಭವ ಪಡೆದಿರುವರು ಕೆಲವು ಸಂದರ್ಭಗಳಲ್ಲಿ ಮಕ್ಕಳನ್ನು ವಿಮಾನಗಳ ಮೇಲೆ ಒಯ್ಯಲಾಗುವುದಂತೆ

ಬೆಲ್‌ಗ್ರೇಡ್ ನಗರದಲ್ಲಿ ಮಾಟಿಜಾ ಎಂಬವನು ಬಹಳ ಶ್ರೀಮಂತನಾಗಿದ್ದನು ಬಡವರೆಂದರೆ ಇವನಿಗೆ ಪ್ರೇಮ ಇವನು ತನ್ನ ಆಸ್ತಿಯನ್ನೆಲ್ಲಾ ಮಾರಿ ಬಂದ ಹಣವನ್ನು ಬಡವರಿಗೆ ದಾನಮಾಡಿಬಿಟ್ಟನು ಇದರ ನಂತರ ಹಲವು ವರ್ಷಗಳ ವರೆಗೆ ಆತನು ಆಸುಪಾಸಿನ ಹಳ್ಳಿಗಳಲ್ಲಿ ನಡೆಯುವ ಸಂತೆಗಳಿಗೆ ಹೋಗಿ ಅಲ್ಲಿ ಕೊಳೆತ ಹಣ್ಣುಹಂಪಲುಗಳನ್ನು ತಿಂದು ಜೀವಿಸುತ್ತಿದ್ದನು ಅವನ ಸ್ತ್ರೀಯು ಅವನನ್ನು ಬಿಟ್ಟು ಎಲ್ಲಿಗೋ ಹೋದಳು ಕಡೆಗೆ ಹೇಗೂ ಅವನೊಂದು ಚಿಕ್ಕ ಗದ್ದೆಯನ್ನು ಪಡಕೊಂಡು ಅದರಲ್ಲೊಂದು ಗುಡಿಸಲು ಕಟ್ಟಿ ದ್ರಾಕ್ಷಿ ಹಣ್ಣನ್ನು ಬೆಳೆಸುತ್ತಲಿದ್ದನು ಮಾಟಿಜನು ತನ್ನ ಭಿಕ್ಷಾ ಜೀವನದಲ್ಲಿ ಒಂದು ವಿಚಿತ್ರ ಅಭ್ಯಾಸವನ್ನು ಮಾಡಿರುತ್ತಾನೆ, ದ್ರಾಕ್ಷಿ ಗಿಡಗಳನ್ನು ಅವನ ಮಳೆಗಾಲದಲ್ಲಿ ನೆಡುತ್ತಾನೆ ದ್ರಾಕ್ಷಿ ಹಣ್ಣುಗಳು ಬೇಸಿಗೆಕಾಲದಲ್ಲಿ ಕೊಯ್ಯಲು ತಯಾರಾಗುವುವು ಇಷ್ಟು ಸಮಯದ ವರೆಗೆ ಮಾಟಿಜನು ತನ್ನ ಗುಡಿಸಲಿನಲ್ಲಿ ಮಲಗಿಕೊಂಡೇ ಇರುತ್ತಾನೆ ತಿಂಗಳುಗಟ್ಟಲೆ ನಿದ್ರಿಸುವ ಅಭ್ಯಾಸವು ಅವನಿಗೆ ಹೆಂಡತಿಯನ್ನು ಬಿಟ್ಟ ಮೇಲಾಯಿತಂತೆ



(೫ನೇ ಪುಟದಿಂದ ಮುಂದುವರಿದುದು)

ಹುಚ್ಚನಂತೆ ಸುಧಾರಣೆ ಸುಧಾರಣೆ ಎಂದರೆ ಅರ್ಥವಿಲ್ಲವೆ ಅದಕ್ಕೆ? ಅರ್ಥವಿದೆ ಅರ್ಥವನ್ನು ನಿಮಗೆ ನಾನು ಬಿಡಿಸಿ ತೋರಿಸುವೆನು ನಿಮ್ಮ ಮುಂದೆ ಅದನ್ನು ಮೂರ್ತಿಮತ್ತಗೊಳಿಸುವೆನು. ನನ್ನ ಪೌರುಷವನ್ನು ಸಮಾಜದ ಮುಂದಿಡುವೆನು ''

"ಮುಚ್ಚಿಕೊಂಡಿರುವ ಸಮಾಜದ ಕಣ್ಣುಗಳನ್ನು ತೆರೆಯುವೆನು ಗೋಳಿಡುವ ಸಾವಿರಾರು ಮಾತೃಪಿತೃಗಳಿಗೆ ಸಮಾಧಾನದ ಸುವಾರ್ತೆಯನ್ನು ಸಾರುವೆನು ಇದೊ ನೋಡುತ್ತಿರು?

"ಇದು ಎಲ್ಲಿಯ ಗ್ರಹಚಾರ' ತಾಯಿಯು ಸ್ವಲ್ಪ ಗಾಬರಿಯಾಗುವಳು ನಿನ್ನೆ ವರೆಗೆ ಹುಡುಗ ಸರಿಯಿದ್ದ ಇವತ್ತು ಇವನಿಗೇನಾಯಿತು ಅಯ್ಯೋ ನರಶಿವ ದೇವರೇ ನಮ್ಮ ಹುಡುಗನ ಬುದ್ಧಿ ಸರಿಯಾದರೆ ನಿನಗೆ ಒಂದು ರೂಪಾಯಿಯ ಪಂಚಕಜ್ಜಾಯ ಕೊಡಿಸುವೆನು ನನ್ನ ಗ್ರಹಚಾರ ಅಮ್ಮಾ ಅಮ್ಮಾ ಇದೇನು, ನನಗೇನಾಗಿದೆ ನನ್ನನ್ನು ತಿಳಿಯಲಾರದ ನೀನು ನನಗೆ ಹುಚ್ಚನೆಂದ ಭಾವಿಸುವಂತಾಯಿತೆ?

"ನೀನು ಹುಚ್ಚನಲ್ಲ ನಿನಗೆ ಯಾವುದೊ ಒಂದು ದೇವತೆಯು ಪೀಡಿಸುತ್ತಿರಬೇಕು" ಅದಕ್ಕಾಗಿ ಹರಿಕೆ ಹೇಳಿದೆ "ಭಲೆ ಸರಿಯಮ್ಮಾ ವರದಕ್ಷಿಣೆ ಎಂಬ ಈ ಕ್ರೂರ ಪೈಶಾಚೀ ಕಟ್ಟಳೆಯು ನನ್ನನ್ನು ಪೀಡಿಸುವುದು ಅದರಿಂದ ತಪ್ಪಿಸಿಕೊಂಡ ಹೊರತು ನನಗೆ ಆತ್ಮಶಾಂತಿ ಇಲ್ಲ ಇದು ನನ್ನ ನಿರ್ಧಾರ

"ತಾಯೀ ಹಾಗಾದರೆ ವರದಕ್ಷಿಣೆಯಿಂದಲ್ಲದೇ ಎಂದೂ ಈ ಮದುವೆಗೆ ನಾವಿಬ್ಬರೂ ಒಪ್ಪುವವರಲ್ಲ ಅಲ್ಲವೇ? ಅಮ್ಮಾ ಇದೇ ನನ್ನ ನಿನ್ನ ಕೊನೆಯ ಸಂದರ್ಶನ ಜನನೀ' ನಾನೆಂದೂ ನಿನಗೆ ನೋಡಲು ಸಿಗುವವನಲ್ಲ ''

ಎಂದವನೇ ಮೋಹನನು ತಟ್ಟನೇ ಮನೆಯಿಂದ ಹೊರಬಿದ್ದು ಸರ್ವತ್ರವೂ ವ್ಯಾಪಿಸಿಕೊಂಡಿರುವ ಕರಾಳ ಕತ್ತಲೆಯಲ್ಲಿ ಮಾಯವಾದನು

೦ ೦ ೦ ೦

'ಸಹೂ ನನ್ನ ಪ್ರಯತ್ನವೆಲ್ಲವೂ ಮಣ್ಣುಪಾಲಾಯಿತು ಈ ಮೊದಲು ನಿಶ್ಚೈಸಿದಂತೆ ಈಗ ನಡೆಯ ಬೇಕಾಗಿದೆ ಮೋಹನನೆಂದನು

ಮೋಹನಾ ನಾನಾದರೋ ಅದಕ್ಕೆ ಸಿದ್ಧಳಾಗಿಯೇ ಇರುವೆನು, ಆದರೆ ಇನ್ನಾದರೂ ಈ ನಮ್ಮ ಮಾತೃಭೂಮಿಯಲ್ಲಿರುವ ನಮ್ಮ ಬಂಧುಗಳು ನಮ್ಮ ಈ ಚರಿತ್ರೆಯನ್ನು ಕೇಳಿ ಈ ವರ ವಿಕ್ರಯವೆಂಬ ದುಶ್ಚಾಳಿಗೆ ತಿಲಾಂಜಲಿಯನ್ನೀಯ ಬೇಕೆಂದು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತೇನೆ ಹೂಂ ಇನ್ನು ವಿಳಂಬವೇಕೆ?

ಎಂಬ ಮಾತುಗಳ ಈ ಮೊದಲಿನ ಸರೋವರದಿಂದ ಕೇಳಿಸಿದುವು ಮರುಕ್ಷಣವೇ ಭಯಂಕರವಾದ ಭಳಕ್ಕೆಂಬ ಶಬ್ದವೊಂದು ಮಿಂಚಿನಂತೆ ಕೇಳಿಸಿ ರಭಸದಿಂದ ಬೀಸುತ್ತಿರುವ ವಾತಾವರಣದಲ್ಲಿ ಲೀನವಾಗಿ ಹೋಯಿತು ವರನೂ ಇಲ್ಲ—ದಕ್ಷಿಣೆಯೂ ಇಲ್ಲ—ವಧುವೂ ಕಾಣೆ ಸಮಾಜವೊ—ಸಮಾಧಿಯೊ? ಯಾವುದು ಹಿತ?

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು! ಅತೀ ಕಮ್ಮಿ ದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ, ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ: ಆಣೆ ೪ ಮಾತ್ರ.

Manufactured by:—

J. B Dutt & Co., Calcutta,

Sole agent:—

ಪೊಪ್ಯುಲರ್ ಸ್ಟೋರ್ಸ ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನು ಬಲವನ್ನು ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ಸಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತೆ ಅಸಹ್ಯವಾದ [illegible] ಒಳಸ್ಸಿರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು [illegible]

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ,

[illegible] ಮಂಗಳೂರ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಘಾಯಗಳು, ಎಳೆತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ ತುರಿಕೆ ತುರಿಕಜ್ಜಿ, ಹುಳಕಡ್ಡಿ, ಸಿಕ್ತ ಬಾವದವ ತಲೆಹುಣ್ಣು, ವಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ. ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು)

1.	ಅಧಿಕೃತ ಚಂದಾ ಹಾಕಲು ಅರ್ಪಿಸಿದ ಮೂಲಧನ	ರೂ 3,50,000-0-0
2.	ಚಂದಾ ಹಾಕಿ ಎತ್ತಿದ ಮೂಲಧನ . . .	ರೂ. 2,88,950-0-0
3.	ಕ್ಷೇಮನಿಧಿಗಳು	ರೂ. 3,63,578-0-0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು:—ಉಡುಪಿ.

ಬ್ರಾಂಚುಗಳು.—1. ಮದ್ರಾಸು; 2. ವೆಲ್ಲೂರು, 3. ತಲಚೇರಿ; 4. ರಥಬೀದಿ, ಮಂಗಳೂರು, 5. ಬಂದ್ರ, ಮಂಗಳೂರು; 6. ಉಡುಪಿ; 7. ಶಿರ್ವ; 8. ಕುಂದಾಪುರ; 9. ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13. ಮೈಸೂರು, 14 ಮಡಿಕೇರಿ, 15 ವೀರರಾಜೇಂದ್ರಪೇಟೆ.

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು "ಸೇಲಂ"ನಲ್ಲಿ ಶೀಘ್ರದಲ್ಲಿಯೇ ತೆರೆಯಲ್ಪಡುವುದು

~~10—4—1937~~

V. R. Kamath, B. A. LL. B.

Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced

Manufactured by -
The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agent
Panchmal Krishnaya Shenoy & Son,
Bunder MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು — ಡಾ। ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೇಳುವವರಾಗಿದ್ದು, ಆಗೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪-೦-೦ ವಿ ಪಿ ಆಣೆ ೮

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಜಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ ಡಾಕ್ಟರ್ ಪಿ ಎಚ್ ಪದ್ಮನಾಭ ಪೈ, ಚಿಕ್ಕಮಗಳೂರು 2 ಶ್ರೀರಾಮ ಸ್ಟೋರ್ಸ ಹೌಸ್, ಶ್ರೀರಾಮಪೇಟೆ, ಕಾಸರಗೋಡು 3 ಪೈ ಕಂಪನಿ ಎಂಡ್ ಕೋ ಗಿರಗಾಂ ಮುಂಬಯಿ 4 ಕೆ ಶ್ರೀನಿವಾಸ ಹೆಗ್ಡೆ ಡಾ। ಬಾ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents: **The Kerala Tea Syndicate,**
PONANI—(S. Malabar)

Edited Printed & Published By A. S. Kamath at the Sharada Press, Car Sreet, Mangalore.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. ಮಂಗಳೂರು ತಾ. ೨೧ನೇ ಮೇ ೧೯೩೭. (21-5-'37) ಸಂಚಿಕೆ ೨೦

ನಮ್ಮ ಹಳ್ಳಿ ನಾಡಿನ ಸುಂದರ ದೃಶ್ಯ.

Notes — ಟಿಪ್ಪಣಿಗಳು

ಅಮೇರಿಕದ ಪ್ರಮುಖ ಪತ್ರಿಕೆಗಳಲ್ಲಿ, ಕಾಂಗ್ರೆಸ್ ಪಕ್ಷಕ್ಕೆ ಗಾಂಧೀಜಿಯವರ ಬೆಂಬಲವಿರುವುದನ್ನು ರೂಸ್‌ವೆಲ್ಟರ ಬೆಂಬಲಕ್ಕೆ ಇರುವ ಅಮೇರಿಕನ್ ಜನತೆಯ ಡೆಮೊಕ್ರೆಟಿಕ್ ಪಕ್ಷದ ಪ್ರಾಬಲ್ಯದೊಡನೆ ಹೋಲಿಸಿ ಲೇಖನಗಳು ಬಂದಿವೆ.

o o o o o

ಬ್ರಿಟಿಷ ಕಾಲೋನಿಯಲ್ ಸೂತ್ರಗಳಲ್ಲಿ ಮರ್ಯಾದಿತವಾದ ಸೂತ್ರವೊಂದಿದೆ. 'ತಾಯಿ ಬಲ್ಲಳು' ಎಂಬ ಮಾತಿಗೆ ಎಲ್ಲರೂ ತಲೆಬಾಗುವರು. ಈ ಸೂತ್ರದಂತೆ ಪ್ರಾಂತಿಕ ಸರಕಾರಗಳಲ್ಲಿ ಗವರ್ನರರನ್ನು ತಾಯಿಯಂತೆ ನೋಡಿಕೊಂಡು, ಗವರ್ನರರಿಗೆ ವಿಶಿಷ್ಟ ಅಧಿಕಾರಗಳನ್ನು ಕೊಟ್ಟು, ಈ ಗವರ್ನರರ ತಾಯಿಯ ಕೈಯಿಂದ 'ನೇಟಿವ' ಮಂತ್ರಿ ಮಂಡಲಗಳನ್ನು ಪಾಲಿಸಿದರಾಯಿತು ಎಂದು ಅಜ್ಞ ಯಾದ ಪಾರ್ಲಿಮೆಂಟಿನ 'ನಿರೀಕ್ಷೆ' ಎಂದು ಆ ಪತ್ರಿಕೆಯ ಅಂಬೋಣ.

o o o o o

ಏಪ್ರಿಲ್ ಒಂದನೇ ತಾರೀಕಿನ ದಿನ ರಾಜಧಾನಿಯಾದ ನವ ದಿಲ್ಲಿಯಲ್ಲಿ ಪ್ರತಿ ಅಂಗಡಿಯ ಬಾಗಿಲೂ ತೆರೆಯಲೊಪ್ಪಲಿಲ್ಲ. ಇದರಂತೆ ಇತರ ಪ್ರಮುಖ ನಗರಗಳಲ್ಲಾಯಿತು. ಗ್ರಾಮಗಳಲ್ಲೂ 'ಹೊಸ ಶಕ್ತಿನ' ನಿಷೇಧದ ಕತ್ತಲೆ ಕವಿಯಿತು. ಮೂರು ಸಲ ವರ್ಕಿಂಗ ಪರಿಷತ್ತನ್ನು ಜರುಗಿಸಿದ ಬಳಿಕವೂ ಇನ್ನೂ ಇಂಡಿಯದಲ್ಲೆಲ್ಲ ಈ ಕತ್ತಲೆ ಕವಿಯುವುದರ ಅರ್ಥವೇನು?

o o o o o

ಕಿರೀಟಧಾರಣೋತ್ಸವವಾಯಿತು. ಇನ್ನು ದಿಲ್ಲಿ ದರ್ಬಾರಿನ ಉತ್ಸವಾದಿಗಳಿಗೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕಾಗಿದೆ. ಕಿರೀಟಧಾರಣೆಯ ಉತ್ಸವಗಳಿಗೆ ಅತ್ಯಲ್ಪ ಆಡಂಬರವಿಲ್ಲದ್ದರೆ ಸಾಕು, ಏಕೆಂದರೆ ದರ್ಬಾರಿನ ಉತ್ಸವ ಬರುತ್ತಿದೆ. ಆಗ ನೋಡಬಹುದೆಂದು ಸರಕಾರವೇ ಸಾರಿದೆ. ಮುಂದಣ ವರ್ಷ ಸಮ್ರಾಜರ ಸವಾರಿ ಇತ್ತ ಬಿಜಯಂಗೈಯುವಾಗ, ಇಲ್ಲಿನ ಪ್ರಾಂತಿಕ ಸ್ವರಾಜ್ಯವು ಹೇಗೆ ಚೇತರಿಸಿಕೊಂಡಿದೆ ಎಂಬುದು ಅವರು ಕಾಣಬೇಕಲ್ಲವೆ? ಹೀಗಿರುವಾಗ ಇನ್ನೂ ಇಲ್ಲಿನ ಒಕ್ಕಟ್ಟನ್ನು ನಿವಾರಿಸಲು ವಿಳಂಬವೇಕೆ? ಎಂದು ಲಂಡನ್ನಿನ ಒಬ್ಸರ್ವರ್ ಪತ್ರಿಕೆ ಕೇಳಿದೆ.

o o o o o

ಚಿತ್ತಗಾಂಗದ ಹೆಡ್ಮಾಸ್ತರರ ಅಪ್ಪಣೆ ಪಡೆಯದೆ, ಪೊಲೀಸ್ ಹವಿಲ್ದಾರನೊಬ್ಬನು ಕ್ಲಾಸಿಗೆ ಬಂದು, ಕೆಲವು ಹುಡುಗರಿಗೆ ಅಲ್ಲೇ ಸಿಪಾಯಿಗಳು ಸ್ಥಾಪಿಸಿದ್ದ ಶಿಬಿರಕ್ಕೆ ಮರುದಿನ ಬರಬೇಕಾಗಿ ಅಪ್ಪಣೆಕೊಟ್ಟನು. ಹುಡುಗರು ಅಲ್ಲಿಗೆ ಹೋಗುತ್ತಲೇ ಅವರನ್ನು ಚೆನ್ನಾಗಿ ಒದ್ದು ಲಾಠಿ ಪ್ರಯೋಗಮಾಡಲಾಯಿತೆಂದು ತಿಳಿದು ಹೆಡ್ಮಾಸ್ತರರು ಮೆಜಿಸ್ಟ್ರೇಟರಲ್ಲಿ ಫಿರ್ಯಾದು ಕೊಟ್ಟರು. ಹವಿಲ್ದಾರರಿಗೂ ಸಬ್ ಇನ್ಸ್‌ಪೆಕ್ಟರರಿಗೂ ಸಸ್ಪೆಂಡ್!—ಒದ್ದಿಸಿದುದಕ್ಕೆ.

o o o o o

ಸ್ವಾಮಿ ಸಹಜಾನಂದರೆಂಬೊಬ್ಬರು ಹರಿಜನರಿಗಾಗಿ ಹೊಸ್ಟೆಲು ಇಟ್ಟಿರುವರು. ಇವರಿಗೆ ೧೦೦೦ ರೂಪಾಯಿ ಗ್ರೇಂಟು ದೊರೆಯುತ್ತಿತ್ತು. ಈ ವರ್ಷ ಜಿಲ್ಲಾ ಬೋರ್ಡಿನವರು ೩೦೦೦ ರೂಪಾಯಿ ಗ್ರೇಂಟನ್ನು ಸೆಂಕ್ಷನು ಮಾಡುವ ಸಂದರ್ಭ ಒದಗಿದಾಗ, ಕಾಂಗ್ರೆಸ್ ಪಕ್ಷದವರ ಅಧಿಕಮತದಿಂದ ಆ ಗ್ರೇಂಟು ಸೆಂಕ್ಷನು ಆಗಲಿಲ್ಲ! ಆದುದರಿಂದ ಕಾಂಗ್ರೆಸ್ ಹರಿಜನರಿಗೆ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ವಿರುದ್ಧವಾಗಿ ಚುನಾವಣೆಕಾಲಕ್ಕೆ ಕೆಲಸ ಮಾಡಿದ ಸಹಜಾನಂದರ ಮನಸ್ಸಾಕ್ಷಿ ಚುಚ್ಚಿದ ಬೇನೆ ಹೇಳುತ್ತಿದೆ.

[illegible] ಗಾಳಿ ನುಂಗಬಿದ್ದರೂ, ಅಷ್ಟು ಸಹಜವಾಗಿ ಸಹಜಾನಂದರು ಅದನ್ನು ನುಂಗಿದರು. ಆದರೆ— ಕಾಂಗ್ರೆಸ್ ಪಕ್ಷದವರು ಈ ಹೊಸ್ಟೆಲಿನ ವ್ಯವಸ್ಥೆ ಮೊದಲಾದವನ್ನು ವಿಚಾರಿಸಿಕೊಂಡು ಅಗತ್ಯ ಕಂಡುದನ್ನು ಮಾಡುವಂತೆ, ಜಿಲ್ಲಾ ಬೋರ್ಡ ಪ್ರೆಸಿಡೆಂಟರಿಗೆ ಸಹ ಸಲಹೆಗಳನ್ನು ಆ ಪಕ್ಷದ ಮುಖಂಡರಾಗಿರುವ ಶ್ರೀ ಆಚಾರ್ಯರೇ ಬರೆದಿರುವರು. ಅದರ ವಿಚಾರ ನಡೆಯುತ್ತಲೇ ಇದೆ. ಅದರಂತೆ ಸಹಜಾನಂದರ ಪ್ರಚಾರವೂ ಸಾಗುತ್ತಲಿದೆ.

o o o o o

ನಲ್ವತ್ತೆರಡು ತಿಂಗಳ ಹಿಂದೆ ಚುನಾವಣೆ ಹೊಂದಿದ ಜಸ್ಟಿಸ್ ಪಕ್ಷದ ಕಾರ್ಯನಿರ್ವಾಹಕ ಮಂಡಲಿಯು ಇದುವರೆಗೆ ಸೇರಿದ್ದು ಒಂದೇ ಸಲ. ಆಗಲಾದರೂ ಸಭಾಕಾರ್ಯವು ಗೊಂದಲದಲ್ಲೇ ಮುಗಿದಿತ್ತು. ವಿಚಿತ್ರವೆಂದರೆ, ಈ ಮಂಡಲಿಗೆ ಕಾರ್ಯದರ್ಶಿಯೂ ಇಲ್ಲ, ಕೋಶಾಧ್ಯಕ್ಷನೂ ಇಲ್ಲ! ಇಂಥ ಮಂಡಲಿಯು ಇನ್ನೊಂದು ಸಲ ಸೇರಿ, ಈಗ ಮಂತ್ರಿಗಳಲ್ಲಿ ತಮ್ಮವರು ತಮ್ಮವರಲ್ಲವೆಂದು ತೀರ್ಮಾನಿಸಿದರೆ, ಮಂತ್ರಿಗಳಾದರೂ ನಗದಿರುವರೆ?

o o o o o

ಐರ್ಲೆಂಡಿನವರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ, ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾಗಿದ್ದ ಲೋಯ್ಡ್ ಜೋರ್ಜರು "ಇವರ ಭಾಷೆಯಲ್ಲಿ ಸ್ವಾತಂತ್ರ್ಯ ಎಂಬರ್ಥದ ಮಾತೇ ಇಲ್ಲವಲ್ಲ, ಇವರಿಗೆಲ್ಲಿಯ ಸ್ವಾತಂತ್ರ್ಯ" ಎಂದು ನಗುತ್ತಿದ್ದರು. ಆದರೆ ಈಗ ಮಾತೆತ್ತದೆಯೆ ಐರ್ಲೆಂಡು ಸ್ವತಂತ್ರವಾಗಿಯೆ ಇದೆ ಎಂಬುದನ್ನು ಲೋಯ್ಡ್ ಜೋರ್ಜರು ತಿಳಿಯಬೇಕಾಗಿ ಬಂದಿದೆಯಲ್ಲ!

o o o o

ನಮ್ಮ ಗವರ್ನಮೆಂಟ ಕಾಲೇಜಿನ ಇಂಟರ್ ಮಿಡಿಯೆಟ್ ಫಲಿತಾಂಶವು ನೂರರಲ್ಲಿ ಸುಮಾರು ಮೂವತ್ತರಂತೆ ತೃಪ್ತಿಕರವಾಗಿಲ್ಲ. ಈ ವರ್ಷ ಇಷ್ಟು ಕಠಿಣವಾಗಿರುವುದೇಕೋ ತಿಳಿದಿಲ್ಲ. ಪರೀಕ್ಷೆ ಕಠಿಣವೊ ವ್ಯವಸ್ಥೆ ಕಠಿಣವೋ ತಿಳಿದುಬರುವುದಿಲ್ಲವೆ? ಐವರು ಮಾತ್ರ ಪ್ರಥಮ ದರ್ಜೆಯ ನಂಬರುಗಳು. ಇದೂ ಕನಿಷ್ಠವೇ, ಸಾಮಾನ್ಯ ಸರಾಸರಿಗಿಂತಲೂ.

o o o o

ಖರ್ಚು ಹೆಚ್ಚಾಗಿಯೂ ಆದಾಯವು ಕಡಮೆಯಾಗಿಯೂ ಬರುತ್ತಿರುವಾಗ ಶಿಕ್ಷಣಪರೀಕ್ಷೆಗಳ ಫಲಿತಾಂಶಗಳೂ ಹೀಗಾದರೆ— ಕಾಲೇಜು ಅಧಿಕಾರಿಗಳು ತೀಕ್ಷ್ಣವಾಗಿ ವಿಚಾರಿಸಿ ನೋಡುವಂತಾಗಲೇ ಬೇಕು. ಒಂದು ವರ್ಷದ ಫೈಲಿನಿಂದ ಐದೂರಿನ ಫಲವತ್ತಾಗಿರುವ ಲಕ್ಷಣಗಳನ್ನು ನಿರ್ದೇಶಿಸಿ ಪಡುತ್ತಿಲ್ಲವಾದರೂ, ಬೀಜ, ಗೊಬ್ಬರ ಆತ್ಮಿಕೆಗಳ ಸುಧಾರಣೆಗಳ ಕಡೆಗೆ ತೀವ್ರ ಗಮನಕೊಡಬೇಕೆಂದಾದರೂ ಸೂಚನೆಹುಟ್ಟದೆ?

o o o o

ಕಿರೀಟಧಾರಣೋತ್ಸವಕ್ಕೆ ಹಿಂದೀಯರು ಬಂದಿರುವರು. ಆದರೆ ಹಿಂದೂಸ್ಥಾನ ಬರಲಿಲ್ಲ ಎಂದು, ಹಿಂದೀಯರ ವಿದ್ಯಮಾನಗಳ ವಿಮರ್ಶೆಯಾಗಿ ಮ| ಲೋಯ್ಡ್ ಜೋರ್ಜರು ಟೀಕಿಸಿರುವರು. ಕಾರಣವೇನು? ಬ್ರಿಟಾನ್ಯದ ಮಂತ್ರಿಮಂಡಲ. ಈ ಮಂಡಲದ ದರ್ಪದಿಂದ ಹಿಂದೀ ಪ್ರಾಂತೀಯ ಸರಕಾರಗಳಲ್ಲಿ ಹಲವಕ್ಕು ಸಭಾನಾಯಕರಿಗೂ ಉಂಟಾಗಿರುವ ಕಚ್ಚಾಟವು ಇನ್ನೂ ಕೊನೆಗೊಂಡಿಲ್ಲ. ಜೆಟ್ಲೆಂಡರ ಮೊದಲನೆ ಭಾಷಣವು ಎರಡನೆ ಭಾಷಣದಷ್ಟು ಮೃದುವಾಗಿ ಸಹಜವಾಗಿದ್ದಾದರೆ ಈ ಕಚ್ಚಾಟವು ಎಂದೇ ಮುಗಿಯಬಹುದಾಗಿತ್ತು.

o o o o

ಹೀಗಿದ್ದರೂ ನಮಗೆ ಇನ್ನೂ ಲೋರ್ಡ ಲಿನ್‌ಲಿತ್‌ಗೋರವರಲ್ಲಿ ಭರವಸೆಯಿದೆ. ಬ್ರಿಟಿಷರಿಗೂ ಹಿಂದೀಯರಿಗೂ ಸಮಾನವಾಗಿ ನ್ಯಾಯ ತೀರಿಸುವುದರಲ್ಲಿ ಇವರು ಮನಃಪೂರ್ವಕ ಹೋರಾಡಿ ಕೃತಕೃತ್ಯರಾಗುವವರೆಂಬ ಖಂಡಿತ ಭರವಸೆಯಿದೆ.

(೧೧ನೇ ಪುಟಕ್ಕೆ ಮುಂದುವರಿಯುದೆ.)

ಅಸೌಖ್ಯದ ನಂತರ ತ್ವರೆಯಾಗಿ ಆರೋಗ್ಯವನ್ನುಂಟುಮಾಡುವುದು

'ಓವಲ್ಟೀನು' ಬಹಳ ಶ್ರೇಷ್ಠವಾದ ಪುಷ್ಟಿಯುಕ್ತ ಆಹಾರ ಪಾನೀಯವಾಗಿರುತ್ತದೆ. ಪ್ರಕೃತಿಯ ಉತ್ತಮ ಪೌಷ್ಟಿಕ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ, ದನದ ನವ ಕೆನೆಹಾಲಿನಿಂದಲೂ ತಯಾರಿಸಲ್ಪಟ್ಟಿದ್ದಾಗಿದ್ದು, ಅದರಲ್ಲಿ ದೇಹಕ್ಕೆ ಅಗತ್ಯವಿರುವ ವಿಟಮಿನ್ ಸತ್ವಗಳು ಕೂಡಿಕೊಂಡಿವೆ. ಇದರಲ್ಲಿನ ಅಮೂಲ್ಯ ಪೌಷ್ಟಿಕಗಳ ಶ್ರೇಷ್ಠತೆಯು ಅದ್ವಿತೀಯವಾಗಿದ್ದು, ಅಸೌಖ್ಯದಲ್ಲಿ ಬಿದ್ದು ಕೃಶವಾದವರ ದೇಹಗಳನ್ನು ಪುಷ್ಟಿಮಾಡಿ ಆರೋಗ್ಯವನ್ನುಂಟುಮಾಡುತ್ತದೆ.

ರುಚಿಕರವಾದ ಓವಲ್ಟಿನನ್ನು ದಿನನಿತ್ಯದ ಸೇವನೆಯು, ಆರೋಗ್ಯ, ಶಕ್ತಿ, ಚೈತನ್ಯಗಳನ್ನುಂಟುಮಾಡುವುದು,

'ಓವಲ್‌ಟೀನ್'

ಟಾನಿಕ್ ಆಹಾರ ಪಾನೀಯ.

OVALTINE

ಮೆದುಳು, ನರ ಮತ್ತು ಮೆದುಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶ ವಾಗಿಲ್ಲ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊ

ಏಜಂಟರು:—ಜೇಮ್ಸ್ ರೈಟ್, 85 ಎ. ಕ್ಲೈವ್ ಸ್ಟ್ರೀಟ್, ಕಲ್ಕತ್ತಾ,

ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ.

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 3½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— **K. R. GURU**, *Managing Director.*

ಒಂದು ರಚನಾತ್ಮಕ ಕಾರ್ಯಕ್ರಮ.

ಇಂದಿನ ರಾಜಕೀಯ ವಿಷಮಾವಸ್ಥೆಯಲ್ಲಿ ಅನೇಕಾನೇಕ ಹೇಳಿಕೆ, ಅಭಿಪ್ರಾಯ ಪ್ರಕಟನೆಗಳಿಂದ ಕೂಡಿದ ಲೇಖನ ಸಮರಗಳು ನಿರಂತರವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ರಾಜಕೀಯ ದಿಗಂತದಲ್ಲಿ ಈ ವಾಗ್ಯುದ್ಧಗಳು ಗಗನಕ್ಕೆ ಹಾರುವ ಸಿಡಿಮದ್ದಿನಂತೆ ಸ್ಫೋಟನವಾಗುತ್ತ ಅದರ ಕರ್ಕಶ ಶಬ್ದಗಳು ಜನತೆಯಲ್ಲಿ ಬೆಗುಸ್ಸೆಯನ್ನುಂಟುಮಾಡಿರುತ್ತದೆ. ಜನತೆಯಲ್ಲಿ ಮೇಧಾವಿಗಳಾದವರಿಗೆ ಈ ದೃಶ್ಯಗಳು ಕೌತುಕವನ್ನುಂಟುಮಾಡಿರುತ್ತದೆ. ದೇಶ [illegible] ಕಾಂಗ್ರೆಸ್ ಮುಖಂಡರುಗಳು ಇದುವರೆಗೆ ದೊಡ್ಡ ದೊಡ್ಡ ಭಾಷಣಗಳಲ್ಲಿಯೂ ಪ್ರಚಾರ ಕಾರ್ಯಗಳಲ್ಲಿಯೂ [illegible] ಗಳಲ್ಲಿಯೂ [illegible] ಜನರು ಕಳೆದ ಚುನಾವಣೆಗಳ ಫಲವನ್ನು [illegible], ಈಗಿನ ಉತ್ಕಟಾವಸ್ಥೆ [illegible] ತಿಳಿದುಕೊಳ್ಳಲಾರದಾಗಿದೆ. ಈ ಮಧ್ಯೆ [illegible] ಮಂತ್ರಿಮಂಡಳವು [illegible] ಚುನಾವಣೆಗಳಲ್ಲಿ ಜನತೆಯನ್ನು [illegible] ನೆಪದಿಂದ [illegible] ಕಾರ್ಯಕ್ರಮಗಳನ್ನು [illegible] ಪಡಿಸಿರುತ್ತದೆ.

ಈಗಿನ ಜನಗತ್ಯವಾದ ವಾಗ್ಯುದ್ಧ [illegible] ಇವುಗಳಿಂದಾದ [illegible] ಸಾಕಷ್ಟು [illegible]. [illegible] ಅತಿಶಯೋಕ್ತಿಯಲ್ಲ. ಈ ಅಭಿಪ್ರಾಯ ವಿರೋಧಭಿಪ್ರಾಯ, ಹೇಳಿಕೆ-ಪ್ರತಿ ಹೇಳಿಕೆ, ಕಾನೂನು ತರ್ಕ ಇವುಗಳು [illegible] ಅಧಿಕಾರ [illegible] ಮಂತ್ರಿಗಳು ಸ್ಥಾಪನೆಯಾದ [illegible] ಸ್ಥಾನಕ್ಕೆ ಬಂದು ನಿಂತಿದ್ದುವು. ಇದರಿಂದ ನೈಜವಾದ ಧ್ಯೇಯವು ದೃಷ್ಟಿಬಾಹಿರವಾಯಿತು. ಕಳೆದ ಚುನಾವಣೆಗಳಿಂದ [illegible] ಗಳು [illegible] ತೀವ್ರ [illegible] ಸಾಧನೆಯ ಕಕ್ಷ್ಯಂತೆಯ [illegible] ಹೋಗಿವೆ. ರಾಜಕೀಯ [illegible] ದೇಶವು ಒಂದು [illegible] ಎಂದರೆ [illegible]. ಇದರಿಂದಾಗಿ ಇಂದಿನ ರಾಜಕೀಯ ವಾತಾವರಣವು [illegible] ತರದ ಅಪಾಯ [illegible] ರುತ್ತದೆ. ಈ ಅಪಾಯವು [illegible] ವೇಳೆ ಈ [illegible] ವಾತಾವರಣವು ಇನ್ನು ಹೀಗೆಯೇ [illegible] ಅಪಾಯ [illegible] ಆವಶ್ಯಕ [illegible] ವಿಷಯಗಳನ್ನು ಇದ್ದಂತೆ ತಿಳಿದುಕೊಂಡು ನಮ್ಮ ಸ್ವಪ್ನಗಳನ್ನು ಭದ್ರಪಡಿಸುವುದು ಆವಶ್ಯಕವಾಗಿದೆ.

ಕಾಂಗ್ರೆಸ್ಸಿನ ಧ್ಯೇಯವು ಅಧಿಕಾರ [illegible] ಕೊಳ್ಳುವುದರಲ್ಲಿಲ್ಲ. ಈ ಅಧಿಕಾರವನ್ನು ನಡೆಯಿಸುವುದಕ್ಕಾಗಿ ಎಂದು [illegible] ಸಾಧನೆಯ ಮಾರ್ಗಗಳ [illegible] ಬೇಕಾಗಿದೆ. ಪುನರುತ್ಥಾನಕ್ಕಾಗಿ ಈಗ ಒಂದು ಚಳುವಳಿಯು ನಡೆಸಲ್ಪಡಬೇಕು. ಇಲ್ಲಿ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಯು [illegible] ಕಾರ್ಯಕ್ರಮವನ್ನು [illegible] ಬೇಕು. ಸಮಾನ [illegible] ನಿರ್ವಹಿಸುವುದು ಈ ಕಾರ್ಯಕ್ರಮಗಳ [illegible] ಹೀಗೆ [illegible] ಕಾಂಗ್ರೆಸ್ಸು ಜನತೆಯ ಬೆಂಬಲವನ್ನು ಇನ್ನೂ ಪೂರ್ಣವಾಗಿ ಸಂಪಾದಿಸಿ ಉತ್ತಮ ವ್ಯವಸ್ಥೆಯ ಕಾನೂನುಗಳನ್ನು ಕಾಂಗ್ರೆಸ್ಸು ತಯಾರುಮಾಡಬೇಕು. ಈ ದಾರಿಯನ್ನು ಬಿಟ್ಟು ಕೊಂಗ್ರೆಸ್ಸು ಅಧಿಕಾರವನ್ನು ವಹಿಸುವ ಇಚ್ಛೆಯು [illegible] ವನ್ನು ಅನುಸರಿಸಿದಲ್ಲಿ, ಕಾಂಗ್ರೆಸ್ಸು ದೇಶದ ಎಲ್ಲೆಡೆಗಳಲ್ಲಿಯೂ ಕಾಂಗ್ರೆಸ್ ಕಛೇರಿಗಳನ್ನು ಸ್ಥಾಪಿಸುವ ಆವಶ್ಯಕತೆಗೆ ಗಮನ ಕೊಡಬೇಕಾಗುವುದು. ಅಂದರೆ ಅನುಸರಿಸುವ ಮಾರ್ಗವು ಯಾವ ತರದ್ದೆ ಇರಲಿ, ಕೆಳಗಿನಿಂದ ಕಾರ್ಯಸಾಧನೆ ಮಾಡುವ ಅಖಂಡ ವ್ಯವಸ್ಥಾಪನೆಯಾಗಬೇಕು. ಬ್ರಿಟಿಷ್ ಸಾಮ್ರಾಜ್ಯ ಶಾಹಿತ್ವ [illegible]

ನಮ್ಮ [illegible] ಈ ಸುವ್ಯವಸ್ಥಿತ ಸಂಸ್ಥೆಯು ಶಕ್ತಿಯುಳ್ಳದ್ದಾಗಬೇಕು.

ಆಗಾಧವಾದ ಈ ಯೋಜನೆಯನ್ನು ಕಾರ್ಯಗತಕ್ಕೆ ತರಬೇಕಾದಾಗ ನಾವೀಗ ದೇಶದ ಎಲ್ಲೆಡೆಗಳಲ್ಲಿಯೂ ಹಳ್ಳಿಹಳ್ಳಿಗಳಲ್ಲಿಯೂ ತಾಲೂಕು [illegible] ಗ್ರಾಮ ಕಛೇರಿಗಳನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಬೇಕು. ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಮೂಲಕ ಈ ಕಾರ್ಯವನ್ನು ಸಾಧಿಸಲು ಸುಲಭವಾಗುವುದು. ಭದ್ರವಾದ ಕಾಂಗ್ರೆಸ್ ಕಛೇರಿಗಳು ಭಾರತದ ಪ್ರತಿ [illegible] ಹಳ್ಳಿಯಲ್ಲಿಯೂ ಸ್ಥಾಪನೆಯಾಗಬೇಕು. ಆದರೆ ಬರೀ [illegible] ಗ್ರಾಮ ಕಮಿಟಿಗಳನ್ನು ಸ್ಥಾಪಿಸಿದ ಮಾತ್ರಕ್ಕೆ ನಮ್ಮ ಕೆಲಸ ಮುಗಿದ [illegible]. ಜಿಲ್ಲಾ ಕೇಂದ್ರ ಕಮಿಟಿಯವರು ಈ ಗ್ರಾಮ ಕಾಂಗ್ರೆಸ್ ಕಮಿಟಿಗಳನ್ನು [illegible]

ಸ್ಥಳಗಳಿಗೆ [illegible] ಕೆಲವೇ ವರುಷಗಳಲ್ಲಿ ಹೇಳುವುದಾದರೆ ಈ ಗ್ರಾಮ ಕಾಂಗ್ರೆಸ್ ಕಮಿಟಿಗಳು ತಮ್ಮ ಹಳ್ಳಿಗಳ [illegible] ವನ್ನು [illegible] ಸರಕಾರವು [illegible] ಆಸಕ್ತಿಯಿಂದ [illegible] ವಿಷಯಗಳನ್ನು ತಾವು [illegible] ವನ್ನು [illegible].

ಇದಾದ ಮೇಲೆ ಗ್ರಾಮ ಕಾಂಗ್ರೆಸ್ ಅಧಿಕಾರಿಗಳು, ಅಕ್ಕಪಕ್ಕದ [illegible] ಗಳನ್ನು [illegible] ಹಳ್ಳಿಗಳ [illegible] ಅವುಗಳನ್ನು ಸರಕಾರದ [illegible]. ಸರಕಾರವು [illegible] ಕ್ರಮಗಳು ಆದಷ್ಟು ತೀವ್ರವಾಗಿ [illegible] ನಡೆಸುತ್ತಿರಬೇಕು. ಕಾಂಗ್ರೆಸ್ಸಿನ ಈ [illegible]

[illegible]

ತಾಳಿದೇ ಇರತಕ್ಕ ಮೂತ್ರಾವ್ಯಾಧಿಗಳಿಗೆ
ಆಶ್ಚರಕರವಾದ ಔಷಧಿ.
ಡಾ. ಜಸಾನಿಯವರ
ಗೊನೊಕಿಲರ್
[illegible]
ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ. [illegible]
Sole Manufacturer Dr. D. N. JASANI. [illegible] BOMBAY

Notes — ಟೀಕೆಗಳು

ಅಮೇರಿಕದ ಪ್ರಾಮುಖ್ಯ ವಿಮರ್ಶಕ ಪತ್ರಗಳಲ್ಲಿ, ಕಾಂಗ್ರೆಸ್ ಪಕ್ಷವು ಗಾಂಧೀಜೀಯವರ ಬೆಂಬಲಿಕ್ಕಿರುವುದನ್ನು ರೂಸ್‌ವೆಲ್ಟ್‌ರ ಬೆಂಬಲಕ್ಕೆ ಇರುವ ಅಮೇರಿಕನ್ ಜನತೆಯ ಡಿಮೊಕ್ರೆಟಿಕ್ ಪಕ್ಷದ ಪ್ರಾಬಲ್ಯದೊಡನೆ ಹೋಲಿಸಿ ಲೇಖಗಳು ಬಂದಿವೆ.

o o o o o

"ಬ್ರಿಟಿಷ ಕೌಟುಂಬಿಕ ಸೂತ್ರಗಳಲ್ಲಿ ಮರ್ಯಾದಿತವಾದ ಸೂತ್ರವೊಂದಿದೆ. 'ತಾಯಿ ಬಲ್ಲಳು' ಎಂಬ ಮಾತಿಗೆ ಎಲ್ಲರೂ ತಲೆಬಾಗುವರು. ಈ ಸೂತ್ರದಂತೆ ಪ್ರಾಂತಿಕ ಸರಕಾರಗಳೆಲ್ಲ ಗವರ್ನರರನ್ನು ತಾಯಿಯಂತೆ ನೋಡಿಕೊಂಡು, ಗವರ್ನರರಿಗೆ ವಿಶಿಷ್ಟ ಅಧಿಕಾರಗಳನ್ನು ಕೊಟ್ಟು, ಈ ಗವರ್ನರರ ತಾಯಿಯ ಕೈಯಿಂದ 'ನೇಟಿವ' ಮಂತ್ರಿ ಮಂಡಲಗಳನ್ನು ಪಾಲಿಸಿದರಾಯಿತು ಎಂದು ಆಜ್ಞೆಯಾದ ಪಾರ್ಲಿಮೆಂಟಿನ ನಿರೀಕ್ಷೆ" ಎಂದು ಆ ಪತ್ರಿಕೆಯ ಅಂಬೋಣ.

o o o o o

ಎಪ್ರಿಲ್ ಒಂದನೇ ತಾರೀಕಿನ ದಿನ ರಾಜಧಾನಿಯಾದ ನವ ದಿಲ್ಲಿಯಲ್ಲಿ ಪ್ರತಿ ಅಂಗಡಿಯ ಬಾಗಿಲೂ ತೆರೆಯಲೊಪ್ಪಲಿಲ್ಲ. ಇದರಂತೆ ಇತರ ಪ್ರಾಮುಖ್ಯ ನಗರಗಳಲ್ಲಾಯಿತು. ಗ್ರಾಮಗಳಲ್ಲೂ 'ಹೊಸ ಆಕ್ಟಿನ' ನಿಷೇಧದ ಕತ್ತಲೆ ಕವಿಯಿತು. ಮೂರು ಸಲ ವರ್ತುಲ ಪರಿಷತ್ತನ್ನು ಜರುಗಿಸಿದ ಬಳಿಕವೂ ಇನ್ನೂ ಇಂಡಿಯದಲ್ಲೆಲ್ಲ ಈ ಕತ್ತಲೆ ಕವಿಯುವುದರ ಅರ್ಥವೇನು?

o o o o o

ಕಿರೀಟಧಾರಣೋತ್ಸವವಾಯಿತು. ಇನ್ನೂ ದಿಲ್ಲಿ ದರ್ಬಾರಿನ ಉತ್ಸವಾದಿಗಳಿಗೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕಾಗಿದೆ. ಕಿರೀಟಧಾರಣೆಯ ಉತ್ಸವಗಳಿಗೆ ಅತ್ಯಲ್ಪ ಆಡಂಬರವಿಲ್ಲದ್ದರೆ ಸಾಕು, ಏಕೆಂದರೆ ದರ್ಬಾರಿನ ಉತ್ಸವ ಬರುತ್ತಿದೆ. ಆಗ ನೋಡಬಹುದೆಂದು ಸರಕಾರವೇ ಸಾರಿದೆ. ಮುಂದಣ ವರ್ಷ ಸಮ್ರಾಜರ ಸವಾರಿ ಇತ್ತ ಬಿಜಯ್ಗೆಯುವಾಗ, ಇಲ್ಲಿನ ಪ್ರಾಂತಿಕ ಸ್ವರಾಜ್ಯವು ಹೇಗೆ ಚೇತರಿಸಿಕೊಂಡಿದೆ ಎಂದು ಅವರು ನೋಡಗಾಣಬೇಕಲ್ಲವೆ? ಹೀಗಿರುವಾಗ ಇನ್ನೂ ಇಲ್ಲಿನ ಒಕ್ಕಟ್ಟನ್ನು ನಿವಾರಿಸಲು ವಿಳಂಬವೇಕೆ? ಎಂದು ಲಂಡನಿನ ಒಬ್ಸರ್ವರ್ ಪತ್ರಿಕೆ ಕೇಳಿದೆ.

o o o o o

ಚಿತ್ತಗಾಂಗದ ಹೆಡ್ಮಾಸ್ತರರ ಅಪ್ಪಣೆ ಪಡೆಯದೆ, ಪೋಲೀಸ್ ಹವಿಲ್ದಾರನೊಬ್ಬನು ಕ್ಲಾಸಿಗೆ ಬಂದು, ಕೆಲವು ಹುಡುಗರಿಗೆ ಅಲ್ಲೇ ಸಿಪಾಯರು ಸ್ಥಾಪಿಸಿದ್ದ ಶಿಬಿರಕ್ಕೆ ಮರುದಿನ ಬರಬೇಕಾಗಿ ಅಪ್ಪಣೆಕೊಟ್ಟನು. ಹುಡುಗರು ಅಲ್ಲಿಗೆ ಹೋಗುತ್ತಲೇ ಅವರನ್ನು ಚೆನ್ನಾಗಿ ಒದ್ದು ಲಾಠಿ ಪ್ರಯೋಗಮಾಡಲಾಯಿತೆಂದು ತಿಳಿದು ಹೆಡ್ಮಾಸ್ತರರು ಮೆಜಿಸ್ಟ್ರೇಟರಲ್ಲಿ ಫಿರ್ಯಾದು ಕೊಟ್ಟರು. ಹವಿಲ್ದಾರರಿಗೂ ಸಬ್ ಇನ್ಸ್‌ಪೆಕ್ಟರರಿಗೂ ಸಸ್ಪೆಂಡ್!–ಒದ್ದಿಸಿದುದಕ್ಕೆ.

o o o o o

ಸ್ವಾಮಿ ಸಹಜಾನಂದರೆಂಬೊಬ್ಬರು ಹರಿಜನರಿಗಾಗಿ ಹೊಸ್ಟೆಲು ಇಟ್ಟಿರುವರು. ಇವರಿಗೆ ೪೦೦೦ ರೂಪಾಯಿ ಗ್ರೇಂಟು ದೊರೆಯುತ್ತಿತ್ತು. ಈ ವರ್ಷ ಜಿಲ್ಲಾ ಬೋರ್ಡಿನವರು ೩೦೦೦ ರೂಪಾಯಿ ಗ್ರೇಂಟನ್ನು ಸೆಂಕ್ಷನು ಮಾಡುವ ಸಂದರ್ಭ ಒದಗಿದಾಗ, ಕಾಂಗ್ರೆಸ್ ಪಕ್ಷದವರ ಅಧಿಕಮತದಿಂದ ಆ ಗ್ರೇಂಟು ಸೆಂಕ್ಷನು ಆಗಲಿಲ್ಲ! ಆದುದರಿಂದ ಕಾಂಗ್ರೆಸ್ ಹರಿಜನರಿಗೆ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ವಿರುದ್ಧವಾಗಿ ಚುನಾವಣೆಕಾಲಕ್ಕೆ ಕೆಲಸ ಮಾಡಿದ ಸಹಜಾನಂದರ ಮನಸ್ಸಾಕ್ಷಿ ಚುಚ್ಚಿದಬೇನೆ ಹೇಳುತ್ತಿದೆ. ಅಸ್ಪೃಶ್ಯರಿಗಾಗಿ ಶಕ್ತಿಯಿಂದ ಮತ್ತು ಶ್ರದ್ಧೆಯಿಂದ ದುಡಿಯುತ್ತಿರುವ ಕಾಂಗ್ರೆಸ್ಸನ್ನು ಅಸ್ಪೃಶ್ಯರ ದ್ವೇಷಿ ಎಂದು ಸಾಧಿಸಲು ಯತ್ನಿಸಿದ್ದೂ ಬೋರ್ಡಿನ ಆ ಪ್ರೇಂಟನ್ನು ತೊಡೆದುಹಾಕುವಂತೆ ಮಾಡಿದ್ದೂ ಮುಖ್ಯವಾಗಿ ಬೋಧಿಸಿದ್ದ ಲೋಕರ್ ಚಟ್ಟೀಂದರಿಗೆ ಇನ್ನಾರೂ ಆ ಶಿಕ್ಷೋಪಾಯಗಳ ಗಾಳನುಂಗದಿದ್ದರೂ, ಅನ್ನು ಸಹಜವಾಗಿ ಸಹಜಾನಂದರು ಅದನ್ನು ನುಂಗಿದರು. ಆದರೆ,—ಕಾಂಗ್ರೆಸ್ ಪಕ್ಷದವರು ಈ ಹೊಸ್ಟೆಲಿನ ವ್ಯವಸ್ಥೆ ಮೊದಲಾದವನ್ನು ವಿಚಾರಿಸಿಕೊಂಡು ಅಗತ್ಯ ಕಂಡುದನ್ನು ಮಾಡುವಂತೆ, ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೆ ಸಹ ಸಲಹೆಗಳನ್ನು ಆ ಪಕ್ಷದ ಮುಖಂಡರಾಗಿರುವ ಶ್ರೀ ಆಚಾರ್ಯರೇ ಬರೆದಿರುವರು. ಅದರ ವಿಚಾರ ನಡೆಯುತ್ತಲೇ ಇದೆ. ಅದರಂತೆ ಸಹಜಾನಂದರ ಪ್ರಚಾರವೂ ಸಾಗುತ್ತಲಿದೆ.

o o o o o

ನಲ್ವತ್ತೆರಡು ತಿಂಗಳ ಹಿಂದೆ ಚುನಾವಣೆ ಹೊಂದಿದ ಜಸ್ಟಿಸ್ ಪಕ್ಷದ ಕಾರ್ಯನಿರ್ವಾಹಕ ಮಂಡಲಿಯು ಇದುವರೆಗೆ ಸೇರಿದ್ದು ಒಂದೇ ಸಲ. ಆಗಲಾದರೂ ಸಭಾ ಕಾರ್ಯವು ಗೊಂದಲದಲ್ಲೇ ಮುಗಿದಿತ್ತು. ವಿಚಿತ್ರವೆಂದರೆ, ಈ ಮಂಡಲಿಗೆ ಕಾರ್ಯದರ್ಶಿಯೂ ಇಲ್ಲ, ಕೋಶಾಧ್ಯಕ್ಷನೂ ಇಲ್ಲ. ಇಂಥ ಮಂಡಲಿಯು ಇನ್ನೊಂದು ಸಲ ಸೇರಿ, ಈಗ ಮಂತ್ರಿಗಳಲ್ಲಿ ತಮ್ಮವರು ತಮ್ಮವರಲ್ಲವೆಂದು ತೀರ್ಮಾನಿಸಿದರೆ, ಮಂತ್ರಿಗಳಾದರೂ ನಗದಿರುವರೆ?

o o o o o

ಐರ್ಲೆಂಡಿನವರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ, ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾಗಿದ್ದ ಲೋರ್ಡ ಜೋರ್ಜರು "ಇವರ ಭಾಷೆಯಲ್ಲಿ ಸ್ವಾತಂತ್ರ್ಯ ಎಂಬರ್ಥದ ಮಾತೇ ಇಲ್ಲವಲ್ಲ, ಇವರಿಗೆಲ್ಲಿಯ ಸ್ವಾತಂತ್ರ್ಯ" ಎಂದು ನಗುತ್ತಿದ್ದರು. ಆದರೆ ಈಗ ಮಾತೆತ್ತದೆಯೆ ಐರ್ಲೆಂಡು ಸ್ವತಂತ್ರವಾಗಿಯೆ ಇದೆ ಎಂಬುದನ್ನು ಲೋಯ್ಡ್ ಜೋರ್ಜರು ತಿಳಿಯಬೇಕಾಗಿ ಬಂದಿದೆಯಲ್ಲ!

o o o o

ನಮ್ಮ ಗವರ್ನಮೆಂಟ ಕೊಲೆಜಿನ ಇಂಟರ್ ಮಿಡಿಯೆಟ್ ಫಲಿತಾಂಶವು ನೂರರಲ್ಲಿ ಸುಮಾರು ಮೂವತ್ತರಂತೆ ತೃಪ್ತಿಕರವಾಗಿಲ್ಲ. ಈ ವರ್ಷ ಇಷ್ಟು ಕಠಿಣವಾಗಿರುವುದೇಕೋ ತಿಳಿದಿಲ್ಲ. ಪರೀಕ್ಷೆ ಕಠಿಣವೊ ವ್ಯವಸ್ಥೆ ಕಠಿಣವೊ ತಿಳಿದುಬರುವುದಿಲ್ಲವೆ? ಐದಾರು ಮಾತ್ರ ಪ್ರಥಮ ದರ್ಜೆಯ ನಂಬರುಗಳು. ಇದೂ ಕನಿಷ್ಠವೇ, ಸಾಮಾನ್ಯ ಸರಾಸರಿಗಿಂತಲೂ.

o o o o

ಖರ್ಚು ಹೆಚ್ಚಾಗಿಯೂ ಅರ್ಜನೋಪಾಯವು ಕಡಮೆಯಾಗಿಯೂ ಬರುತ್ತಿರುವಾಗ ಶಿಕ್ಷಣಪರೀಕ್ಷೆಗಳ ಫಲಿತಾಂಶಗಳೂ ಹೀಗಾದರೆ— ಕೊಲೇಜು ಅಧಿಕಾರಿಗಳು ತೀಕ್ಷ್ಣವಾಗಿ ವಿಮರ್ಶಿಸಿ ನೋಡುವಂತಾಗಲೇ ಬೇಕು. ಒಂದು ವರ್ಷದ ಪೈಲಿನಿಂದ ಜಪೂನಿನ ಫಲವತ್ತಾಗಿರುವ ಲಕ್ಷಣಗಳನ್ನು ನಿರ್ದೇಶಿಸ ಪಡುತ್ತಿಲ್ಲವಾದರೂ, ಬೀಜ, ಗೊಬ್ಬರ ಆರೈಕೆಗಳ ಸುಧಾರಣೆಗಳ ಕಡೆಗೆ ತೀವ್ರ ಗಮನಕೊಡಬೇಕೆಂದಾದರೂ ಸೂಚನೆಹುಟ್ಟದೆ?

o o o o

ಕಿರೀಟಧಾರಣೋತ್ಸವಕ್ಕೆ ಹಿಂದೀಯರು ಬಂದಿರುವರು. ಆದರೆ ಹಿಂದೂಸ್ಥಾನ ಬರಲಿಲ್ಲ ಎಂದು, ಹಿಂದೀಯರ ವಿದ್ಯಮಾನಗಳ ವಿಮರ್ಶೆಯಾಗಿ ಮಿ। ಲೋಯ್ಡ್ ಜೋರ್ಜರು ಟೀಕಿಸಿರುವರು. ಕಾರಣವೇನು? ಬ್ರಿಕಾನ್ಯದ ಮಂತ್ರಿಮಂಡಲ. ಈ ಮಂಡಲದ ದರ್ಪದಿಂದ ಹಿಂದೀ ಪ್ರಾಂತೀಯ ಸರಕಾರಗಳಲ್ಲಿ ಹಲವಕ್ಕೂ ಸಭಾನಾಯಕರಿಗೂ ಉಂಟಾಗಿರುವ ಕಚ್ಚಾಟವು ಇನ್ನೂ ಕೊನೆಗಂಡಿಲ್ಲ. ಜೆಟ್ಲೆಂಡರ ಮೊದಲನೆ ಭಾಷಣವು ಎರಡನೆ ಭಾಷಣದಷ್ಟೆ ಮೃದುವಾಗಿ ಸಹಜವಾಗಿದ್ದಾದರೆ ಈ ಕಚ್ಚಾಟವು ಎಂದೇ ಮುಗಿಯಬಹುದಾಗಿತ್ತು.

o o o o

ಹೀಗಿದ್ದರೂ ನಮಗೆ ಇನ್ನೂ ಲೋರ್ಡ ಲಿನ್‌ಲಿತ್‌ಗೋರವರಲ್ಲಿ ಭರವಸೆಯಿದೆ. ಬ್ರಿಟಿಷರಿಗೂ ಹಿಂದೀಯರಿಗೂ ಸಮಾನವಾಗಿ ನ್ಯಾಯ ತೀರಿಸುವುದರಲ್ಲಿ ಇವರು ಮನಃಪೂರ್ವಕ ಹೋರಾಡಿ ಕೃತಕೃತ್ಯರಾಗುವವರೆಂಬ ಖಂಡಿತ ಭರವಸೆಯಿದೆ.

(೧೧ನೇ ಪುಟಕ್ಕೆ ಮುಂದುವರಿಸಿಯದೆ.)

ಅಸೌಖ್ಯದ ನಂತರ ತ್ವರೆಯಾಗಿ ಆರೋಗ್ಯವನ್ನುಂಟುಮಾಡುವುದು

'ಓವಲ್ಟೀನು' ಬಹಳ ಶ್ರೇಷ್ಠವಾದ ಪುಷ್ಟಿಯುಕ್ತ ಆಹಾರ ಪಾನೀಯವಾಗಿರುತ್ತದೆ. ಪ್ರಕೃತಿಯ ಉತ್ತಮ ಪೌಷ್ಟಿಕ ಪದಾರ್ಥಗಳಾದ, ಪಕ್ವ ಬಾರ್ಲಿ ಸತ್ವದಿಂದಲೂ, ದನದ ನವ ಕೆನೆಹಾಲಿನಿಂದಲೂ ತಯಾರಿಸಲ್ಪಟ್ಟದ್ದಾಗಿದ್ದು, ಅದರಲ್ಲಿ ದೇಹಕ್ಕೆ ಅಗತ್ಯವಿರುವ ವಿಟಮಿನ್ ಸತ್ವಗಳು ಕೂಡಿಕೊಂಡಿದೆ. ಇದರಲ್ಲಿನ ಅಮೂಲ್ಯ ಪೌಷ್ಟಿಕಗಳ ಶ್ರೇಷ್ಠತೆಯು ಅದ್ವಿತೀಯವಾಗಿದ್ದು, ಅಸೌಖ್ಯದಲ್ಲಿ ಬಿದ್ದು ಕೃಶವಾದವರ ದೇಹಗಳನ್ನು ಪುಷ್ಟಿಪಡಿಸಿ ಆರೋಗ್ಯವನ್ನುಂಟುಮಾಡುತ್ತದೆ.

ರುಚಿಕರವಾದ ಓವಲ್ಟಿನನ್ನು ದಿನನಿತ್ಯದ ಸೇವನೆಯು, ಆರೋಗ್ಯ, ಶಕ್ತಿ, ಚೈತನ್ಯಗಳನ್ನುಂಟುಮಾಡುವುದು,

'ಓವಲ್‌ಟೀನ್'

ಟಾನಿಕ್ ಆಹಾರ ಪಾನೀಯ.

OVALTINE

ಮೆದುಳು, ನರ ಮತ್ತು ಮೆದುಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತ್ತದೆ.
ಏಜಂಟರು:—ಜೇಮ್ಸ್ ರೈಟ್, 85 ಎ. ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ.

OV/479

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— **K. R. GURU,** *Managing Director.*

ಒಂದು ರಚನಾತ್ಮಕ ಕಾರ್ಯಕ್ರಮ.

ಇಂದಿನ ರಾಜಕೀಯ ವಿಷಮಾವಸ್ಥೆಯ ರಿ ಅನೇಕಾನೇಕ ಹೇಳಿಕೆ, ಅಭಿಪ್ರಾಯ ಕಿನೆಗಳಿಂದ ಕೂಡಿದ ಲೇಖನ ಸಮರಗಳು ತ್ಯವಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಕೀಯ ದಿಗಂತದಲ್ಲಿ ಈ ವಾಗ್ಯುದ್ಧಗಳು ಕ್ಕೆ ಹಾರುವ ಸಿಡಿಮದ್ದಿನಂತೆ ಸ್ಫೋಟನ ಹತ್ತಿ ಅದರ ಕರ್ಕಶ ಶಬ್ದಗಳು ಜನತೆ ಜಿಗುಪ್ಸೆಯನ್ನುಂಟುಮಾಡಿರುತ್ತದೆ ಜನ ಲ್ಲಿ ಮೇಧಾವಿಗಳಾದವರಿಗೆ ಈ ದೃಶ್ಯ ಕೌತುಕವನ್ನುಂಟುಮಾಡಿರುತ್ತದೆ ದೇಶ ೀಣರೆನಿಸಿದ ಕೊಂಗ್ರೆಸ್ ಮುಖಂಡರುಗಳು ನರೆಗೆ ದೊಡ್ಡ ದೊಡ್ಡ ಭಾಷಣಗಳಲ್ಲಿಯೂ ಾರ ಕಾರ್ಯಗಳಲ್ಲಿಯೂ ಇಲ್ಲವೇ ವಾಕ್ ಗಳಲ್ಲಿಯೂ ಮಗ್ನರಾಗಿರುವ ವೇಳೆ ಜನ ು ಕಳೆದ ಚುನಾವಣೆಗಳ ಫಲವನ್ನು ನಿರೀ ತ್ತ, ಈಗಿನ ಉತ್ಕಟಾವಸ್ಥೆಯು ಏನೆಂ ವನ್ನು ತಿಳಕೊಳ್ಳಲಾರದಾಗಿದೆ ಈ ಮಧ್ಯೆ ಂಬೆ ಮಂತ್ರಿಮಂಡಳವು ಮುಂದೆ ಆಗಬಹು ದ ಚುನಾವಣೆಗಳಲ್ಲಿ ಜನತೆಯನ್ನು ತಮ್ಮ ಒಲಿಸಿಕೊಳ್ಳುವ ನೆಪದಿಂದ ಆಕರ್ಷಣೀಯ ಗ ತೋರಿಬರುವ ಕಾರ್ಯಕ್ರಮಗಳನ್ನು ಪ್ರಕ ಟಿಸಿರುತ್ತದೆ

ಈಗಿನ ಅನಗತ್ಯವಾದ ವಾಗ್ಯುದ್ಧ ಲೇಖನ ುರ, ಇವುಗಳಿಂದಾದ ಕಾಲುಷರಣವು ಶಕ್ತಿ ನಾಶವು ಕೆಡುಕನ್ನುಂಟುಮಾಡಿರು ವೆಂದರೆ ಅತಿಶಯೋಕ್ತಿಯಲ್ಲ ಈ ಅಭಿ ್ರಯ ವಿರೋಧಭಿಪ್ರಾಯ, ಹೇಳಿಕೆ-ಪ್ರತಿ ಳಿಕೆ, ಕಾನೂನು ತರ್ಕ ಇವುಗಳು, ಕಾಂಗ್ರೆ ಅಧಿಕಾರ ತಿರಸ್ಕರಿಸಿದ ಮೇಲೂ ಮತ್ತು ಂಬೆಮಂತ್ರಿಗಳು ಸ್ಥಾಪನೆಯಾದ ಮೇಲೂ ರಕ ಸ್ಥಾನಕ್ಕೆ ಬಂದು ಮುಟ್ಟಿದುವು ಇದ ದ ನೈಜವಾದ ಧ್ಯೇಯವು ದೃಷ್ಟಿಬಾಹಿರವಾ ತು ಕಳೆದ ಚುನಾವಣೆಗಳಿಂದ ಕಲಿತ ಗಳು ಮರೆತುವಲ್ಲದೆ ತೀವ್ರ ಕಾರ್ಯ ಧನೆಯ ತತ್ಪರತೆಯ ಆವಶ್ಯಕತೆಯು ಗ್ರಹಿ ದದೆಯೇ ಹೋಗಿದೆ ರಾಜಕೀಯ ಕಳ ಳಾವಸ್ಥೆಯಿಂದ ದೇಶವು ಒಂದು ತರದ ದುಸ್ಥಿ ಗೆ ಒಳಗಾಗಿದೆ ಎಂದರೆ ಹೆಚ್ಚಾಗದು ಇದೆ ಂದಾಗಿ ಇಂದಿನ ರಾಜಕೀಯ ವಾತಾವರಣವು ಅನೇಕ ತರದ ಅಪಾಯಗಳಿಂದ ಕೂಡಿದ್ದಾ ರುತ್ತದೆ ಈ ಅಪಾಯವು ಬೂದಿ ಮುಚ್ಚಿದ ಂಡದಂತಿದ್ದು ಒಂದು ವೇಳೆ ಈ ರಾಜಕೀಯ ವಾತಾವರಣವು ಇನ್ನೂ ಹೀಗೆಯೇ ಮುಂದು ರಿಯಬಿಟ್ಟಲ್ಲಿ ಮುಚ್ಚಿಕೊಂಡಿದ್ದ ಅಪಾಯ ಳು ಗೋಚರಕ್ಕೆ ಬಾರದಿರವು. ಆದಕಾರಣ ಾವುಗಳು ವಿಶಯಗಳನ್ನು ಇದ್ದಂತೆ ತಿಳ ಕೊಂಡು ನಮ್ಮ ಸ್ಥಾನಗಳನ್ನು ಭದ್ರಪಡಿಸು ವುದು ಅತ್ಯವಶ್ಯವಿದೆ

ಕೊಂಗ್ರೆಸ್ಸಿನ ಧ್ಯೇಯವು ಅಧಿಕಾರ ವಶೀ ಕರಿಸಿಕೊಳ್ಳುವುದರಲ್ಲಿದೆ ಈ ಅಧಿಕಾರವನ್ನು ಪಡೆಯುವುದಕ್ಕಾಗಿ ಎರಡು ತರದ ಕಾರ್ಯ ಸಾಧನೆಯ ಮಾರ್ಗಗಳು ಇಷ್ಟರ ವರೆಗೆ ಸೂಚಿ ಸಲ್ಪಟ್ಟಿವೆ ಪುನರ್ಚುನಾವಣೆಗಾಗಿ ಈಗ ಬಲ ವಾದ ಚಳವಳವು ನಡೆಸಲ್ಪಡಬೇಕು, ಇಲ್ಲವೇ ಸಂಯುಕ್ತ ಪ್ರಾಂತ್ಯದ ಕೊಂಗ್ರೆಸ್ ಕಮಿಟಿಯು ನಿರ್ಧರಿಸಿದ ಕಾರ್ಯಕ್ರಮವನ್ನು ಅನುಸರಿಸ ಬೇಕು. ಸಮಾನ ಸರಕಾರ ಅಥವ ಆಡಳಿತ ವನ್ನೇರ್ಪಡಿಸುವುದು ಈ ಕಾರ್ಯಕ್ರಮಗಳ ಲ್ಲೊಂದಾಗಿದೆ. ಹೀಗೆ ಮಾಡುವುದಾದರೆ ಕೊಂಗ್ರೆಸ್ಸು ಜನತೆಯ ಬೆಂಬಲವನ್ನು ಇನ್ನೂ ಪೂರ್ಣವಾಗಿ ಸಂಪಾದಿಸಿ ಉತ್ತಮ ವ್ಯವಸ್ಥೆಯ ಕಾನೂನುಗಳನ್ನು ಕೊಂಗ್ರೆಸ್ಸು ತಯಾರುಮಾಡ ಬೇಕು. ಈ ದಾರಿಯನ್ನು ಬಿಟ್ಟು ಕೊಂಗ್ರೆಸ್ಸು ಅಧಿಕಾರವನ್ನು ವಶಪಡಿಸುವ ಇನ್ನೊಂದು ಮಾ ರ್ಗವನ್ನು ಅನುಸರಿಸಿದಲ್ಲಿ, ಕೊಂಗ್ರೆಸ್ಸು ದೇಶದ ಎಲ್ಲೆಡೆಗಳಲ್ಲಿಯೂ ಕೊಂಗ್ರೆಸ್ ಕಛೇರಿಗಳನ್ನು ಸ್ಥಾಪಿಸುವ ಅವಶ್ಯಕತೆಗೆ ಗಮನ ಕೊಡಬೇಕಾ ಗುವುದು. ಅಂದರೆ ಅನುಸರಿಸುವ ಮಾರ್ಗವು ಯಾವ ತರದ್ದೇ ಇರಲಿ, ಭರದಿಂದ ಕಾರ್ಯ ಸಾಧನೆ ಮಾಡುವ ಅಖಂಡ ವ್ಯವಸ್ಥಾಪನೆಯಾ ಗಲೇ ಬೇಕು. ಬ್ರಿಟಿಷ್ ಸಾಮ್ರಾಜ್ಯ ಶಾಹಿತ್ವ ವನ್ನು ಎದುರಿಸಲು ಈ ಸುವ್ಯವಸ್ಥಿತ ಸಂಸ್ಥೆಯು ಶಕ್ತಿಯುಳ್ಳದ್ದಾಗಿರಬೇಕು

ಅಗಾಧವಾದ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲೋಸುಗ ನಾವೀಗ ದೇಶದ ಎಲ್ಲೆ ಡೆಗಳಲ್ಲಿರುವ ಹಳ್ಳಿಪಳ್ಳಿಗಳಲ್ಲಿ ಮೂಕಾಲೂಕು ಮತ್ತು ಗ್ರಾಮ ಕಛೇರಿಗಳನ್ನು ಸ್ಥಾಪಿಸುವ ಪ್ರಯತ್ನಗಳನ್ನು ಮಾಡಬೇಕು. ಜಿಲ್ಲಾ ಕೊಂಗ್ರೆಸ್ ಕಮಿಟಿಗಳ ಮೂಲಕ ಈ ಕಾರ್ಯ ವನ್ನು ಸಾಧಿಸಲು ಸುಲಭವಾಗುವುದು. ಭದ್ರ ವಾದ ಕೊಂಗ್ರೆಸ್ ಕಛೇರಿಗಳು ಭಾರತದ ಪ್ರತಿ ಯೊಂದು ಹಳ್ಳಿಯಲ್ಲಿಯೂ ಸ್ಥಾಪನೆಯಾಗ ಬೇಕು ಆದರೆ ಬರೀ ತಾಲೂಕು ಯಾ ಗ್ರಾಮ ಕಮಿಟಿಗಳನ್ನು ಸ್ಥಾಪಿಸಿದ ಮಾತ್ರಕ್ಕೆ ನಮ್ಮ ಕೆಲಸ ಮುಗಿದ ಹಾಗಾಗುವುದಿಲ್ಲ ಜಿಲ್ಲಾ ಕೇಂದ್ರ ಕಮಿಟಿಯವರು ಈ ಗ್ರಾಮ ಕೊಂಗ್ರೆಸ್ ಕಮಿಟಿಗಳನ್ನು ವರ್ಷದ ಅದ್ಯಂತ್ಯದ ವರೆಗೂ ಕಣ್ಣು ತೆರೆದ ಕೊಳ್ಳುವಂತೆ ಮಾಡಿ, ಅವುಗಳು ಸ್ಥಳೀಯ ತಮ್ಮ ಗ್ರಾಮಸ್ಥರ ಅತ್ಯ ಗತ್ಯದ ಕೋರಿಕೆಗಳನ್ನು ಪೂರೈಸುವರೆ ಶತ ಪ್ರಯತ್ನ ಮಾಡಬೇಕು. ಗ್ರಾಮ ಕಮಿಟಿಗಳ ಜವಾಬುದಾರಿಯಲ್ಲಿದ್ದವರು ಆಯಾ ಗ್ರಾಮ ದಲ್ಲಿನಸ್ಥಿತಿಗತಿಗಳನ್ನೂ [illegible] ಕೊರತೆಗಳನ್ನೂ ವಿಮರ್ಶೆ ಮಾಡಿ ಜಿಲ್ಲಾ ಕಮಿಟಿಗೆ ವರದಿಮಾಡಿ ಕೊಳ್ಳಬೇಕು.

ಹಳ್ಳಿಗಳ ಬೆಳೆಯ ದುಸ್ಥಿತಿ ಯಾ ಸುಸ್ಥಿತಿ ಮಳೆ, ಒರಗಾಲ ಸಸ್ಯರೋಗಾದಿಗಳಿಂದಾದ ಅನಾಯುತಗಳು, ಇವೇ ಮೊದಲಾದ ವಿಷಯ ಗಳನ್ನು ಗ್ರಾಮ ಕಮಿಟಿಯವರು ಕ್ರಮವಾಗಿ ವರದಿ ಮಾಡಬೇಕು. ಜಿಲ್ಲಾ ಕಮಿಟಿಗಳು ತಮ್ಮ ಕೈಕೆಳಗಿರುವ ಇತರೆ ಕಮಿಟಿಗಳನ್ನು ಆಗಾಗ್ಗೆ ಸಂದರ್ಶಿಸಿ ಅವುಗಳ [illegible] ಮಾಡಿಕೊಂಡಿದ್ದು ಅವುಗಳು ಸುಗಮವಾಗಿ ನಡೆಯು ವಂತೆ ಪ್ರೋತ್ಸಾಹಿಸುತ್ತಿರಬೇಕು ಹಳ್ಳಿಗಳ [illegible] ಆಲ್ಲಿ [illegible] ಕೊರತೆ ಇಲ್ಲದಂತೆ ನೋಡಿ ಹಳ್ಳಿಗರ [illegible] ಮಾಡಿ [illegible] ದಂತೆ [illegible] ಮಾಡುವುದು. [illegible] ಕಮಿಟಿಗಳ ಅಧೀನ ಕಾರ್ಯಗ ಳಲ್ಲಿ ಒಂದಾಗಿರುತ್ತದೆ [illegible] ಒಬ್ಬ ದಾದ ನರಿ, [illegible] ವಿ [illegible] ರೋಗ ಇವುಗಳ [illegible] ಗಳಲ್ಲಿ ಹಳ್ಳಿ ಕಮಿಟಿಗಳ [illegible] ಕಮಿಟಿಗಳನ್ನೇರ್ಪಡಿಸಿ, ನರಳುವ ಹಳ್ಳಿಗರಿಗೆ ಸಹಾಯವನ್ನು ಒದಗಿಸಬೇಕು. ಇಷ್ಟಲ್ಲದೆ ಇನ್ನೂ ಅನೇಕಾನೇಕ ಕಾರ್ಯಕ್ರಮಗಳನ್ನು ಹಳ್ಳಿ ಕೊಂಗ್ರೆಸು ಕಮಿಟಿಗಳು ಅನುಸರಿಸುವುವು. ಅವುಗ ಳಲ್ಲಿ ಮುಖ್ಯವಾಗಿ ಶಿಶು ಪ್ರದರ್ಶನ, ಕೈಗಾ ರಿಕೆ ಪ್ರದರ್ಶನ, ಆರೋಗ್ಯಸಪ್ತಾಹ, ಮೊದ ಲಾದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ವ್ಯವ ಸ್ಥೆಗೊಳಿಸಬೇಕು. ಕೆಲವೇ ಮಾತುಗಳಲ್ಲಿ ಹೇಳುವುದಾದರೆ ಈ ಗ್ರಾಮ ಕೊಂಗ್ರೆಸ್ ಕಮಿ ಟಿಗಳು ತಮ್ಮ ಹಳ್ಳಿಗಳ ಆಡಳಿತವನ್ನೂ ಹಿತ ವನ್ನೂ ನೋಡುತ್ತಿದ್ದ ಸರಕಾರವು ಇಷ್ಟರ ತನಕ ಅಸಡ್ಡೆಯಿಂದ ಕಾಣುತ್ತಿದ್ದ ವಿಷಯಗಳನ್ನು ತಾವು ಸರಿಪಡಿಸಿ ಸರಕಾರದ ಆಡಳಿತ ಕ್ರಮ ವನ್ನು ಮೀರಿಸುವಂತೆ ಮಾಡಬೇಕು.

ಇದಾದ ಮೇಲೆ ಗ್ರಾಮ ಕೊಂಗ್ರೆಸ್ ಅಧಿಕಾರಿಗಳು, ಅತ್ಯಗತ್ಯದ ಕೋರಿಕೆಗಳನ್ನು ಮುಂದುಮಾಡಿ ಹಳ್ಳಿಗಳ ಹಿತದೃಷ್ಟಿಯಿಂದ ಅವುಗಳನ್ನು ಸರಕಾರದೆದುರ ಕೇಳುತ್ತಿರಬೇಕು ಸರಕಾರವು ಸಾರಿಕೊಂಡಿದ್ದ "ಏರರ್ಪಾ ಕಾರ್ಯ ಕ್ರಮಗಳು ಆದಷ್ಟು ತೀವ್ರವಾಗಿ ರೂಪಕ್ಕೆ ಬರು ವಂತೆ ಬಲವಾದ ಚಳವಳವನ್ನು ನಡೆಸುತ್ತಿರ ಬೇಕು. ಕೊಂಗ್ರೆಸಿನ ಈ ಕೋರಿಕೆಯನ್ನು ಪ್ರತಿರೋಧ ಮಾಡದೆ [illegible] ಅದರೆ [illegible] ಕೊಂಗ್ರೆಸ್ [illegible] ಜನಪ್ರಿ [illegible] ತಳವಳದಲ್ಲಿ [illegible] ಗಬೇಕು.

ಗ್ರಾಮ [illegible]

[illegible]

ಕೆಸಿಕ ಸಾಮಾನುಗಳಿಗೆ ಸದಾ ಗಿರಾಕಿಗಳು ಇದ್ದೇ ಇದ್ದಾರೆ. ಇವುಗಳ ಸ್ಥಾಪನೆಗೆ ಹೆಚ್ಚಿನ ಬಂಡವಾಳದ ಅವಶ್ಯಕತೆಯೂ ಅಗತ್ಯವಿಲ್ಲ. ಆದರೆ ಸ್ವತಃಸ್ಪರ್ಶಕ ಕೆಲಸ ಮಾಡುವ ಸ್ವಯಂ ಸೇವಕರ ಅವಶ್ಯಕತೆಯು ಗ್ರಾಮ ಪುನರುದ್ಧಾರ ಕಾರ್ಯದಲ್ಲಿ [illegible] ಬೀಳುಗುತ್ತದೆ. ಇಲ್ಲಿ ಸ್ವಯಂಸೇವಕರಿಂದ ಮಾತ್ರವೇ ಅವರು ಯಾವ ಫಲದಾಶೆಯಿಲ್ಲದೆ ಕೆಲಸ ಮಾಡುವರೆಂ ದೆಂಬರ್ಥವಲ್ಲ. ಅವರಿಗೆ ಜೀವನಕ್ಕೆ ತಕ್ಕ ವೇತನವನ್ನು [illegible] ಜಿಲ್ಲಾ ಕೇಂದ್ರ ಕಮಿಟಿಯವರು ವ್ಯವಸ್ಥೆ ಮಾಡ ಬೇಕು. [illegible]

[illegible]

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರಕರವಾದ ಔಷಧಿ.
ಡಾ. ಜಸಾನಿಯವರ ಜಗತ್ಪ್ರಸಿದ್ಧ
ಗೋನೋಕಿಲರ್ (ರಿಜಿಸ್ಟರ್)
GONO KILLER
ಪ್ರತ್ಯೇಕ ವ್ಯಾಧಿಗಳಿಗಿದು ಮದ್ದು.
ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.
ಇದಿನ ಆಶ್ಚರ್ಯ ಔಷಧ [illegible]
ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 [illegible]
ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4
Sole Manufacturer: Dr. D. N. JASANI, Vithalbhai Patel Road, BOMBAY 4.



Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.

ಆಟೋಮೆಟಿಕ್ ಆಲಾರಂ ಪಿಸ್ತಲ್

(ಬಂದೂಕು)

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕುಂಡಗಳಲ್ಲಿ ೧ ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದ ನಮ್ಮಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದ ನೀವು ನೋಡಿರಬಹುದು. ಇದನ್ನು ಉಪಯೋಗಿಸು ಕ್ರಮದ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೨ ಬ್ಯಾಟರಿ ಹಾಕಿದ ಸ್ಟಾರ್ಚ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತೂಲು ೧೨ ತೋಟೆಗಳ ಸಹಿತ ೩—೮—೦. ಟಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ. ೩ ಇರುಳಪ್ಪನ ಬೀದಿ, ಮದ್ರಾಸು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ.

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ

ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು

ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು —ಪೊಪ್ಯುಲರ್ ಸ್ಟೋರ್ಸ್,

ರಥಬೀದಿ, ಮಂಗಳೂರು

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರೆಗಳು ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಬಾಧೆಯು ಇಲ್ಲ

ಅನೇಕ ತರಹ ಮತ್ತು ಪ್ರಮಾಣಗಳಿವೆ

ಮುಖ್ಯ ಏಜಂಟರು

ಕೆ. ರಾಮ ನಾಯಕ್,

ಹಾರ್ಡ್‌ವೇರ್ ಮತ್ತು

ಜನರಲ್ ಮರ್ಚೆಂಟ್,

ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ.

ಗರ್ಭಪಾಲ—ಗರ್ಭಶೂಲೆ, ಗರ್ಭಸ್ರಾವಕ್ಕೆ.

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ವೃದ್ಧಿಕಾಸವ—ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.

ಭುವನಾಂಜನ ಪೈನ್‌ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಐ. ಸಿ. ಎಸ್. ಯಾತ್ರೆ

ಲೇಖಕ:—'ಪದ್ಮ'

ಬಿ. ಎ. ಪಾಸು ಮಾಡಿಕೊಂಡು ಇಂದಿಗೆ ಮೂರು ಮಳೆಗಾಲಗಳಾದರೂ ಸದಾಶಿವನು ನಿರುದ್ಯೋಗಿಯಾಗಿಯೇ ತನ್ನ ಹಳ್ಳಿಯ ಮನೆಯಲ್ಲಿ ದಿನಗಳನ್ನು ದೂಡುತ್ತಲಿದ್ದನು. ತಾನು ಮನೆಯಲ್ಲಿ ಕೂತುದರ ಅರ್ಥವು ಅವನಿಗೇ ತಿಳಿದಿರಲಿಲ್ಲ. ಆದರೂ, ಬಿ. ಎ. ಕಲಿತು ಇನ್ನೂ ಉಚ್ಚ ಶಿಕ್ಷಣವನ್ನು ಕಲಿಯಲು ಅನಾನುಕೂಲತೆಯಾದುದರ ಮೂಲಕವೂ, ಕನಿಷ್ಠ ವೇತನದ ಕೆಲಸಕ್ಕೆ ನಿಲ್ಲುವುದು ಅಭಿಮಾನಕ್ಕೆ ಕೊರತೆಯುಂಟು ಮಾಡುವುದರಿಂದಲೂ, ಸದಾಶಿವನು ನಿರುದ್ಯೋಗಿಯಾಗಿರುವುದೇ ಮೇಲೆಂದು ತಿಳಕೊಂಡಿದ್ದನು. ಆದರೂ ಎಷ್ಟರ ತನಕ ನಿರುದ್ಯೋಗಿ ದಳದ ಸದಸ್ಯನಾಗಿರಬಹುದು? ಎಂಬೀ ಯೋಚನೆಯೂ ಅವನ ತಲೆಯಲ್ಲಿ ಸುತ್ತಾಡುತ್ತಿತ್ತು. . . . ಮಧ್ಯಾಹ್ನ ಊಟದ ಮೇಲೆ ಸ್ವಾಭಾವಿಕವಾಗಿ ಬರುವ ಮಬ್ಬಿಗೆ ಸದಾಶಿವನು ನಿರುದ್ಯೋಗದ ಈ ಕಾಲದಲ್ಲಿ ಬಲಿಬಿದ್ದುದು ಹೆಚ್ಚೇನಲ್ಲ. ಓದುತ್ತಿದ್ದ ಪುಸ್ತಕವು ಕೈಯಲ್ಲಿದ್ದಂತೆ ಅವನು ನಿದ್ರಾವಶನಾದನು. ಆಗವನಿಗೆ ಒಂದು ಸ್ವಪ್ನವು ಬಿತ್ತು. ಅದ್ಭುತ ಪ್ರಕಾಶದಿಂದೊಡಗೂಡಿದ ಯಶಸ್ಸಿನ ದೇವತೆಯು ಶೋಭಾಯಮಾನವಾದ ಗಗನದಲ್ಲಿ ಹಾರುತ್ತ ಮೆರೆಯುತ್ತಿದ್ದಳು. ಸದಾಶಿವನಿಗೆ ತಾನು ಅವಳನ್ನು ಅಂತರಿಕ್ಷದಲ್ಲಿ ಅನುಸರಿಸುತ್ತಿದ್ದಂತೆಯೂ ಆ ದೇವತೆಯು ಇವನನ್ನು ನೋಡಿ ನಕ್ಕು ತನ್ನ ಅಗಾಧವಾದ ರೆಕ್ಕೆಗಳಿಂದ ಸದಾಶಿವನನ್ನು ಬಡಿದಳು. ದೇವಲೋಕಗಳು ನಡುಗುವಂತಹ ಆ ರೆಕ್ಕೆಗಳ ಏಟಿಗೆ ಸಿಲುಕಿದ ಸದಾಶಿವನು ದೊಪ್ಪನೆ ಸ್ವರ್ಗಲೋಕದಿಂದ ಮೃತ್ಯುಲೋಕಕ್ಕೆ ಬಿದ್ದನು. ಈ ಪ್ರಚಂಡ ಗೋಳಾಟವು ನಿದ್ದೆಯಲ್ಲಿದ್ದ ಸದಾಶಿವನನ್ನೆಚ್ಚರಿಸಿತು—ಕಣ್ಣು ಬಿಟ್ಟನು. ಅವನಿಗೆ ಆಶ್ಚರ್ಯವಾಯಿತು. ಅನಿರೀಕ್ಷಿತವಾಗಿ ರಾಮುವು ಅವನ ಮುಂದೆ ನಿಂತಿರುವುದು ಕಂಡುಬಂತು. ಕೆಲವು ನಿಮಿಷಗಳಿಂದ ಅಲ್ಲಿ ಎದುರು ನಿಂತಿರುವ ರಾಮುವು, ಸದಾಶಿವನು ಸ್ವಪ್ನಾವಸ್ಥೆಯಲ್ಲಿದ್ದಾಗ ತೋರಿಸುತ್ತಿದ್ದ ಮುಖಭಾವಗಳನ್ನು ತಿಳಕೊಂಡು "ಸದಾ ರಾತ್ರಿಹಗಲು ಕನಸಿನಲ್ಲಿಯೇ ಇರುವೆಯೊ" ಎಂದು ಪ್ರಶ್ನಿಸಿದನು. ಸದಾಶಿವನು ಸ್ವಲ್ಪ ನಾಚಿಕೆಪಟ್ಟು,

"ಹಲೋ ರಾಮು, ಎಂದು ಬಂದೆ"

'ಇಂದೇ ಬಂದೆನು, ನಿನ್ನನ್ನು ನೋಡದೆ ಸಮಾಧಾನವಿರಲಿಲ್ಲ. ಸದಾ, ಏನು ನೀನು ತುಂಬಾ ಕ್ಷೀಣನಾಗಿರುವೆಯಲ್ಲ'

"ರಾಮು ನಿರುದ್ಯೋಗದ ಮಹಿಮೆಯನ್ನು ನೀನಿನ್ನೂ ಅರಿತಿಲ್ಲ. ನಾನು ಅರಿತಿರುವೆನು. ಚೆನ್ನಾಗಿ ಅನುಭವಿಸುತ್ತಿರುವೆನು"

"Dont be ever discouraged my dear friend cheer up ಪ್ರಯತ್ನ ಮಾಡು. ನಿನಗೆ ಯಶಸ್ಸುಂಟಾಗದೆ ಇರದು." ಹೀಗೆಂದು ರಾಮುವು ತತ್ಕ್ಷಣ ಆರಂಭಿಸಿದನು. ಸದಾಶಿವನು ಸುಮ್ಮಗಿದ್ದನು.

o o o o o

ರಾಮುವು ಇನ್ನೂ ತರುಣನು. ವಯಸ್ಸು ಇಪ್ಪತ್ತೈದು ಮೀರಿರಲಿಲ್ಲ. ಆದರೂ ಅವನೊಬ್ಬ ನಿವೃತ್ತ ಐ. ಸಿ. ಎಸ್. ಮನುಷ್ಯನಾಗಿದ್ದನು. ಐ. ಸಿ. ಎಸ್. ಪರೀಕ್ಷೆಯ ಜಾತ್ರಾಕ್ಷೇತ್ರಕ್ಕೆ ನುಗ್ಗುವ ವಿದ್ಯಾರ್ಥಿ ಯಾತ್ರಿಕರ ಗುಂಪಿನಿಂದ ಅವನು ಹಿಂತಿರುಗಿದವನು. ಐ. ಸಿ. ಎಸ್. ಪ್ಯಾಸ್ ಮಾಡಿಕೊಂಡು ದೊಡ್ಡ ಉದ್ಯೋಗವನ್ನು ನೋಡಬೇಕೆಂದು ಕಾಂಕ್ಷಿಸಿದ್ದವರಲ್ಲಿ ರಾಮುವೂ ಒಬ್ಬನು. ಅವನೀಗ ದೊಡ್ಡದೊಂದು ನಗರದ ನಾಗರೀಕನಾಗಿ ತನ್ನ ಹಳ್ಳಿಗೆ ಹಿಂತಿರುಗಿದ್ದನು. ಹಳ್ಳಿಗಳೆಂದರೆ ಪ್ರಗತಿಮಾರ್ಗದಲ್ಲೊಂದು ಮುಳ್ಳೆಂದೂ, ಅವುಗಳ ವಿಚಾರ ಮಾತಾಡುವುದೆಂದರೆ ಅದೊಂದು ಅಪ್ರಾಸಂಗಿಕ ವಿಷಯವೆಂದೂ, ನಗರದಲ್ಲಿ ಮಾರ್ಗದ ಧೂಳು ತಿಂದು, ಅನಾರೋಗ್ಯಕರ ಆಹಾರ ಭುಂಜಿಸಿ ಯಂತ್ರೋಪಕರಣಗಳ ದಾಸರಾಗಿ ಮೆರೆಯುವ ನಗರವಾಸಿಗಳಲ್ಲಿ ತಾನೂ ಒಬ್ಬನೆಂದು ರಾಮುವು ಹೆಮ್ಮೆಪಟ್ಟುಕೊಂಡಿದ್ದನು. ಒಂದು ಕಾಲದಲ್ಲಿ ಗಗನವನ್ನೇರಿ ಮಿನುಗುವ ತಾರೆಗಳನ್ನು ಕಿತ್ತು ತೆಗೆಯುವೆನೆಂದೂ, ಕವಿಗಳು ಬೆಣ್ಣೆಯ ಮುದ್ದೆಯೆಂದು ಬಣ್ಣಿಸಿರುವ ಆ ಚಂದ್ರನ ಒಂದು ತುಂಡನ್ನು ಕೀಳುವೆನೆಂದೂ ಹೊರಟ ರಾಮುವೂ ಈತನೇ ಆಗಿದ್ದನು. ಆದರೆ ಅವನು ತನ್ನ ಪ್ರಯತ್ನಗಳಲ್ಲಿ ಸಫಲನಾಗಿರಲಿಲ್ಲ.

ಸದಾಶಿವನೂ ರಾಮುವೂ ಒಂದೇ ಹಳ್ಳಿಯಲ್ಲಿ ಜನ್ಮವೆತ್ತಿದವರು. ಅವರಲ್ಲಿ ರಾಮುವು ಆಚಾರವಂತ ಕುಟುಂಬದವನು. ಸದಾಶಿವನು ಸ್ವಲ್ಪ ಸುಧಾರಿತ ಮನೋಭಾವದವರಲ್ಲಿ ಜನಿಸಿದವನಿದ್ದನು. ರಾಮುವಿನ ಮನೆಯವರಿಗೆ ಅವರ ಹಳ್ಳಿಯೇ ಒಂದು ಲೋಕ. ಅಲ್ಲಿಯ ಗೊಡ್ಡು ಹರಟೆಗಳೇ ಅವರ ಪ್ರಪಂಚದ ರಾಜಕೀಯ ವಿಷಯಗಳು. ರಾಮುವು ಸ್ವಲ್ಪ ಶ್ರೀಮಂತ ವಿದ್ಯಾವಂತನಿರುವುದರಿಂದ ಹಳ್ಳಿಯಲ್ಲಿ ಅವನು ಎಲ್ಲರಿಗೂ ಆಪ್ತನಾಗಿದ್ದನು. ಅವನ ಹಣೆಯಲ್ಲಿನ ಆ ನಾಮ, ತಲೆಯ ಹಿಂಬಾಗದಲ್ಲಿದ್ದ ಚಿಕ್ಕ ಜಡೆ ಇವುಗಳು ಅವನ ಆಚಾರವಂತ ಕುಟುಂಬದ ಗೌರವ ಚಿಹ್ನೆಗಳಾಗಿದ್ದು ಹಳ್ಳಿಗರಿಂದ ಅಭಿಮಾನದಲ್ಲಿ ಕಾಣಲ್ಪಡುತ್ತಿದ್ದವು.

o o o o

ಹಳ್ಳಿಯಲ್ಲಿ ಅಂದು ಬಹಳೇ ಕೋಲಾಹಲ. ಸದಾಶಿವನೂ ಅಂದಿನ ಗದ್ದಲದಲ್ಲಿ ಭಾಗವಹಿಸಿದವನು. ಕಾರಣ ವೇನಿರಬಹುದು? ರಾಮುವು ಐ. ಸಿ. ಎಸ್. ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹನೆಂದು ಸರಕಾರದ ಕಡೆಯಿಂದ ಬಂದ ವಾರ್ತೆಯೇ ಅಂದಿನ ಗದ್ದಲಕ್ಕೆ ಕಾರಣ—ಅವನು ಅರ್ಹನೆಂದು ಸೂಚಿಸುವ ಪತ್ರವು ಮಾನ್ಯ ವ್ಯಾಸ್ ರಾಯರಿಂದಲೇ ಬಂದುದೆಂದ ಮೇಲೆ ಬೇರೆ ಹೇಳಬೇಕೆ—ಹಳ್ಳಿಯಲ್ಲೆಲ್ಲಾ ಹುರುಪೆ ಹುರುಪು. ಹಳ್ಳಿಯ ಹುಡುಗಿಯರೆಲ್ಲ ರಾಮುವಿನ ವಿದ್ಯೆಗೆ ಸೋತು ಕರಗಿಬಿಟ್ಟು ಅವನನ್ನು ಅಚಲದೃಷ್ಟಿಯಿಂದ ನೋಡಿ ಅವನೇನಾದರೂ ಅವರ ಕಡೆಗೆ ನೋಡಿ ನಸುನಕ್ಕರೆ ಅದೊಂದೇ ತಮಗೆ ಭೂಷಣವೆಂದು ಹೆಮ್ಮೆಪಡುತ್ತಿದ್ದರು. ರಾಮುವಿನ ಮನೆಯಲ್ಲಿ ಅಂದು ನಾಲ್ಕೈದು ಜೋಯಿಸರು ಕಲೆತಿದ್ದರು. ಐ. ಸಿ. ಎಸ್. ಪರೀಕ್ಷೆಗೆ ಕುಳಿತುಕೊಳ್ಳುವ ಶುಭಲಗ್ನದ ಕುರಿತು ಅವರುಗಳು ಗಣಿತವನ್ನು ಗುಣಿಸಿ, ತಾರೆಗಳ ಸ್ಥಾನವನ್ನು ಕಂಡುಹಿಡಿಯುವುದರಲ್ಲಿ ಮಗ್ನರಾಗಿದ್ದರು. ಹಿರಿಯರು ಐ. ಸಿ. ಎಸ್. ಪರೀಕ್ಷೆಯ ಎಂಟು ದಿನಗಳ ಮುಂಚಿತವಾಗಿ ಒಂದು ಬಹಳ ಶುಭ ಲಗ್ನವಿದೆಯೆಂದೂ, ಅಂದೇ ಪರೀಕ್ಷೆಯನ್ನು ಇಡಿಸುವಂತೆ ವ್ಯಾಸ್ ರಾಯರಿಗೆ ಒಂದು ಕಾಗದ ಬರೆಸಿದರೆ ಉತ್ತಮವೆಂದೂ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಮತ್ತೊಬ್ಬರು ತಮ್ಮ ಲೆಕ್ಕದಲ್ಲಿ ಪರೀಕ್ಷಾಕಾಲದ ಒಂದು ದಿನದ ನಂತರ ಒಂದು ಶುಭ ಸಮಯವಿದ್ದು ಅದು ರಾಮುವಿನ ಜಾತಕಕ್ಕೆ ಸರಿಹೋಗಿ ಯಶಸ್ಸನ್ನು ಸೂಚಿಸುವುದರಿಂದ ಆ ದಿನ ಪರೀಕ್ಷಾಕಾಲವನ್ನು ಇಡಿಸುವರೆ ವಿನಂತಿಸಿಕೊಂಡಲ್ಲಿ ವ್ಯಾಸ್ ರಾಯರೂ ಒಪ್ಪಬಹುದೆಂದೂ ತಿಳಿಸಿದರು. ಮತ್ತೊಬ್ಬರು ಐ. ಸಿ. ಎಸ್. ಪರೀಕ್ಷಾಕಾಲದ ನಕ್ಷತ್ರಗಳು ಶುಭಸ್ಥಾನಗಳಲ್ಲಿದ್ದರೂ, ದಿಲ್ಲಿಯು ಮಾತ್ರ ಪರೀಕ್ಷಾ ಸ್ಥಾನವಾಗಬಾರದೆಂದೂ, ರಾಮೇಶ್ವರದ ಸಮೀಪ ಎಲ್ಲಾದರೂ ಪರೀಕ್ಷೆಗಳು ಜರಗುವಂತೆ ಮಾಡಿದರೆ, ಕ್ಷೇತ್ರದ ಪುಣ್ಯದಿಂದಲೂ ರಾಮುವಿಗೆ ಪಾಸ್ ಆಗುವ ಸಂಭವಗಳು ಹೆಚ್ಚುವುವೆಂದು ತಮ್ಮ ಲಿಖಿತಾಚಾರವನ್ನು ವಿಶದಪಡಿಸಿದರು. ಸ್ವಲ್ಪ ಸುಧಾರಿತರಾದ ಇನ್ನೊಬ್ಬ ಜೋಯಿಸರು ಪರೀಕ್ಷೆಯ ಫಲವು ರಾಮುವಿನ ಬುದ್ಧಿವಂತಿಕೆಯಲ್ಲಿ ಹೊಂದಿಕೊಂಡಿರುವುದೆಂತಲೂ, ಹಿಂದೂ ಶಾಸ್ತ್ರಕ್ಕನುಸಾರವಾಗಿ ಏನಾದರೊಂದು ಪೂಜೆ ಗೀಜೆ ಮಾಡಿ, ಮಿತ್ರಭೋಜನವನ್ನೇರ್ಪಡಿಸುವುದು ತನ್ನ ಅಭಿಪ್ರಾಯದಲ್ಲಿ ಹಿತವೆಂದು ಕಂಡುಬರುತ್ತದಾಗಿಯೂ ಹೇಳಿದಾಗ, ಇತರ ಜೋಯಿಸರು ಕಣ್ಣು ಕೆರಳಿಸಿ, ಜ್ಯೋತಿಷ್ಯಕ್ಕೆ ಕುಂದು ತರಲು ಹುಟ್ಟಿದ ಆ ಮನುಷ್ಯನನ್ನು ದೂರಿದರು. ಅಂತೂ ಯಥಾಪ್ರಕಾರ ಗ್ರಾಮದ ದೇವಾಲಯದಲ್ಲಿ ಪೂಜೆ ಪುರಸ್ಕಾರಗಳು ನಡೆದುವು. ಪೂಜಾರಿಗಳು ಬಹಳ ಸಂಭ್ರಮದಿಂದ ದೇವರ ಆರಾಧನೆ ನಡೆಸಿ ರಾಮುವನ್ನು ಹರಸಿದರು. ರಾಮು ಕೂಡಾ ಬಹಳ ಮುಂದುವರಿದವನಾದರೂ ಮೂಕನಂತೆ ಪೂಜೆಗಳ ಎಲ್ಲಾ ವಿಧಿಗಳಿಗೆ ತಲೆಬಗ್ಗಿಸಿಕೊಂಡಿದ್ದನು.

o o o o

ಹಳ್ಳಿಯಲ್ಲಿ ರಾಮುವು ಮುಖ್ಯ ಆಕರ್ಷಣೀಯ ವ್ಯಕ್ತಿ. ಅವನು ಐ. ಸಿ. ಎಸ್. ಪರೀಕ್ಷೆಯ ವಿಚಾರ ತುಂಬಾ ಮಾತನಾಡತೊಡಗಿದನು. ಹಳ್ಳಿಗರಿಗೆ ಅರ್ಥವಾಗದ ವಿಷಯಗಳ ಸ್ಥಿತಿ ಭಾಷಣಮಾಡತೊಡಗಿದನು. ಎಲ್ಲರೂ ಅವನ ರಾಜಯೋಗವನ್ನು ಕೊಂಡಾಡಿದರು. ಆದರೆ ರಾಮುವಿನ ಅಜ್ಜಿಯ ಆಶೆಯೇ ಬೇರೆ. ಐ. ಸಿ. ಎಸ್. ನ ಹೆಚ್ಚಿನ ವಿಷಯಗಳು ಅವಳಿಗೆ ತಿಳಿದಿರಲಿಲ್ಲ. ತಿಳಿಯಬೇಕೆಂಬ ಆವಲಿಕೆಯಿಂದ ಅವಳು ಮುಂದೆ ಬಂದು "ಮಗು, ನೀನು ಹೋಗಲಿರುವ ಐ. ಸಿ. ಎಸ್. ಪರೀಕ್ಷೆಯು ಎಲ್ಲಿ ನಡೆಯುವುದು?"

"ಅಮ್ಮಾ ನಾನು ಅದಕ್ಕಾಗಿ ದಿಲ್ಲಿ ನಗರಕ್ಕೆ ಹೋಗುವೆನು

"ಅದೇನು ಸ್ಟೀಮರಿನ ಮೇಲೆ ಹೋಗಬೇಕೆ?"

"ಇಲ್ಲಮ್ಮಾ, ಇಲ್ಲಿ ರೈಲು ಇದೆ, ಅದರಲ್ಲಿ ಹೋಗಬೇಕು. ಅದೇನು ನಮ್ಮ ಹಳ್ಳಿಯ ಹಾಗಲ್ಲ. ಮಾನ್ಯ ವ್ಯಾಸ್ ರಾಯರ ಸ್ಥಾನವದು. ಮುಂಚೆ ಅಲ್ಲಿಯೇ ಹತ್ತಿರ ಪಾಂಡವರ ರಾಜಧಾನಿ ಇತ್ತು. ಅಲ್ಲಿಂದ ಸ್ವಲ್ಪ ಈಚೆ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಶ್ರೀಮತ್ ಭಗವದ್ಗೀತೆಯನ್ನು ಬೋಧಿಸಿದ ಕುರುಕ್ಷೇತ್ರವಿದೆ. ಅಲ್ಲಿಗೆ ನಾನು ಹೋಗುವುದು."

ಮುದುಕಿಗೆ ಸ್ವಲ್ಪ ಆತುರ ಹುಟ್ಟಿತು. 'ಮಗು ಅಲ್ಲಿಂದ ಕಾಶಿಗೆ ಎಷ್ಟು ದೂರವಿದೆ?"

"ಕಾಶಿಯೇ? ಅದನ್ನು ದಾಟಿ ಕೆಲವು ಸಾವಿರ ಮೈಲುಗಳಷ್ಟು ಹೋಗಬೇಕು."

ಮುದುಕಿಗೆ ಸ್ವಲ್ಪ ನಿರಾಶೆಯಾಯಿತು. ಅದಕ್ಕಾಗಿಯೇ ರಾಮುವು ಹೇಳಿದ್ದನೆಂದು ಯಾರಿಗೆ ಗೊತ್ತು?

"ಐ. ಸಿ. ಎಸ್. ಪ್ಯಾಸ್ ಮಾಡಿಕೊಂಡ ಮೇಲೆ ಮಗು ನೀನು ಗ್ರಾಮ ಮುನ್ಸಿಫನ ಹುದ್ದೆಯನ್ನು ಕೊಡುವರೆ ವ್ಯಾಸ್ ರಾಯರೊಡನೆ ಕೇಳಬೇಕು. ಆಗ ನಿನಗೆ ತುಂಬಾ ಗೌರವವಿದೆ. ನೋಡು ನಮ್ಮ ಹಳ್ಳಿಯ ಮುನ್ಸಿಫರು ಎಷ್ಟು ದೌಲತಿನಲ್ಲಿದ್ದಾರೆ. ಅವರ ಮನೆ ಏನು, ಅವರ ಸಂಸಾರವೇನು, ಅವರಿಗೇನು ಮನ್ನಣೆ, ಕಾಣಿಕೆ, ಅವರ ಮಕ್ಕಳ ಆಭರಣವೇನು, ಪುಣ್ಯ ಅಂದರೆ ಹಾಗಿರಬೇಕು"

"ಹುಚ್ಚುತನ, ಹುಚ್ಚುತನ" ರಾಮುವು ಅದರ ಪ್ರಾಮುಖ್ಯತೆಯನ್ನು ತಿರಸ್ಕರಿಸುವನು.

"ಹೋಗಲಿ ಬಿಡು" ಎಂದು ಹೇಳಿ "ವ್ಯಾಸ್ ರಾಯರು ನಿನ್ನನ್ನು ಗ್ರಾಮಮುನ್ಸಿಫನನ್ನಾಗಿ ಮಾಡದಿದ್ದರೆ, ಐ.ಸಿ.ಎಸ್. ಆದರೂ ಮಾಡಲಿ. ಬ್ರಹ್ಮನು ನಿನ್ನ ಹಣೆಯ ಮೇಲೆ ಐ. ಸಿ. ಎಸ್. ಎಂದು ಬರೆದಲ್ಲಿ ಅದನ್ನು ಅಳಿಸಲು ತಹಶಿಲ್ದಾರರಿಂದಲೂ ಕೂಡಾ ಆಗದು. ಆ ಮೇಲೆ ಆದರೂ ನಿನಗೊಬ್ಬ ಕೆಲಸದವನನ್ನೂ, ಒಂದು ಜೋಡಿ ಎತ್ತುಗಳನ್ನೂ ಕೊಡಿಸುವರೆ ವ್ಯಾಸರಾಯರ ಹತ್ತಿರ ಹೇಳು, ಗಾಡಿ ಬೇಕಾದರೆ ನಿನ್ನ ಮಾವನ ಮನೆಯಲ್ಲೊಂದು ಇದೆ. ನಾನದನ್ನು ಉಪಯೋಗಿಸಿಕೊಳ್ಳುತ್ತೇನೆ. ಹೊಸ ಗಾಡಿ, ಒಂದು ತಿಂಗಳು ಕೂತುಕೊಳ್ಳಲಿಲ್ಲ. ಆ ಮೇಲೆ ಒಂದು ನೆಲ್ಲೂರು ದನ, ಅದೂ ನಮ್ಮ ಗ್ರಾಮ ಮುನ್ಸಿಫರಲ್ಲಿದ್ದಂತೆಯೇ ಆಗಬೇಕು.' ಮುದುಕಿಯು ಕಣ್ಣೀರು ಸುರಿಸಿದಳು. ಬಾಲ್ಯದಲ್ಲಿ ಪಟ್ಟ ಕಷ್ಟಗಳನ್ನು ಮನಸ್ಸಿಗೆ ತಂದುಕೊಂಡಳು. ಇಷ್ಟಾಗುವಾಗ ರಾಮುವಿಗೆ ಐ. ಸಿ. ಎಸ್. ಆಫೀಸರನು ವೃಥಾ ಕಾಲಹರಣ (ಅವನಿನ್ನೂ ಪರೀಕ್ಷೆಗೆ ಕುಳಿತಿಲ್ಲ) ಮಾಡುವುದು ಯುಕ್ತವಲ್ಲವೆಂಬ ಯೋಚನೆ ಬಂತು.

ಐ. ಸಿ. ಯಸ್. ಪರೀಕ್ಷೆಯ ಕಡೆಗೆ ಭಾರತದ ಉಚ್ಚಶಿಕ್ಷಣಾಕಾಂಕ್ಷಿ ಯುವಕರನೇಕರು ಮರುಳಾಗಿ ದಿಲ್ಲಿಗೋಡಲು ಸಿದ್ಧರಾದರು. ರಾಮುವೂ ಅಂದೇ ಹೊರಡಲುದ್ಯುಕ್ತನಾದನು. ಅವನ ಸಂಬಂಧಿಕರು ಅವನನ್ನು ರೈಲ್ವೆ ನಿಲ್ದಾಣದಲ್ಲಿ ಕಂಡು ಪುಷ್ಪಮಾಲೆಗಳನ್ನರ್ಪಿಸಿದರು. ಹಳ್ಳಿಯ ಕೆಲವು ತರುಣಿಯರು ಯಾವುದೋ ಒಂದು ನೆವದಿಂದ ಅವನ ಅಗಲುವಿಕೆಯನ್ನು ಕಾಣಲು ಬಂದಿದ್ದರು. ರಾಮುವಿನೊಡನೆ ದೊಡ್ಡದೊಂದು ಪುಸ್ತಕಭಂಡಾರ ತುಂಬಿದ್ದ ಅಗಾಧ ಗಾತ್ರದ ಟ್ರಂಕು ಒಂದು ಬೆಡ್ಡಿಂಗ್ ಮತ್ತೊಂದು ಸೂಟ್‌ಕೇಸ್ ಇವುಗಳಿತ್ತು. ಇದರ ಮೇಲೆ ಅಲ್ಲಿಯ ಟಿಕೆಟ್ ಚೆಕ್ಕರನ ದೃಷ್ಟಿಯು ಹೋಯಿತು 'ಹಲ್ಲೊ, ಮಿಸ್ಟರ್, ನಿಮ್ಮ ಸಾಮಾನನ್ನು ತೂಕಮಾಡಿಸಿ ಪಾಸ್ ಪಡೆದಿರುವಿರೊ?' ರಾಮುಗೆ ಸ್ವಲ್ಪ ಕಳವಳವುಂಟಾಯಿತು

'ಯಾಕೆ, ಅದೇನು ಹೆಚ್ಚು ಸಾಮಾನಿಲ್ಲ, ಅಲ್ಲದೆ, ನನ್ನ ಟಿಕೇಟು ದಿಲ್ಲಿಗೆ, ಇಷ್ಟರಮೇಲೂ ಲಗ್ಗೇಜಿಗೆ ಬೇರೆ ತೆರಬೇಕೆ?'

'ಓಹ್ಹೊ ಸಾಮಾನು ನಿಯಮಿತ ತೂಕಕ್ಕಿಂತ ಮೂರುಪಾಲು ಭಾರವಿದೆ. ಆ ಹೆಚ್ಚಿನ ಎರಡು ಪಾಲಿಗೆ ಚಾರ್ಜು ಕೊಡಲೇ ಬೇಕು.' ಆಗ ಹತ್ತಿರ ನಿಂತಿದ್ದ ರಾಮುವಿನ ಸಂಬಂಧಿಕನೊಬ್ಬನು 'ರಾಮು ಇವನ ಗುರ್ತ ಇಟ್ಟಿರು, ನೀನು ಕಲೆಕ್ಟರ್ ಆಗಿ ಬಂದಮೇಲೆ ಇವನಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕು' ಎಂದು ಸೂಚಿಸಿ ಕೊಟ್ಟನು. 'ಇರಲಿ ಇರಲಿ, ಇವರಿಗೆಲ್ಲ ದರ್ಪ ಹೆಚ್ಚಿದೆ, ಮಹಾತ್ಮಾಗಾಂಧಿಯವರ ಮಹಾನ ಚಳವಳಿಯೂ ಇವರ ಅಹಂಕಾರವನ್ನು ಮುರಿಯಲಾರದು. ಇರಲಿ," ಎಂದು ರಾಮು ಚಡಪಡಿಸಿದನು. ತಾನು ಐ. ಸಿ. ಎಸ್ ಗೆ ಹೋಗುವೆನೆಂದು ಹೇಳಿದರೆ ಅವನು ಒಂದು ವೇಳೆ ಚಾರ್ಜು ಮಾಡದಿರಬಹುದೆಂದು ರಾಮು ಹಾಗೆ ಹೇಳುವುದರಲ್ಲಿದ್ದನು. ಆದರೆ ಮಾನತೆಯ ಭಾವವು ಅವನಲ್ಲಿ ಹೊಕ್ಕು ಅವನ ಯೋಚನೆಗಳನ್ನು ತಡೆಯಿತು. ಅಂತೂ ಇಂತೂ ರೈಲು ಹೊರಟಿತು. ರಾಮುವಿನ ತಾಯಿ ತಂದೆಗಳು ಕಣ್ಣು ತುಂಬ ಅತ್ತರು. ಮುದುಕಿ ಅಜ್ಜಿಯಂತೂ ಗೋಳಿಡ ತೊಡಗಿದಳು. ರೈಲಿನ ಶಬ್ದದಲ್ಲಿ ಯಾರೂ ಅದನ್ನು ಕೇಳಲಿಲ್ಲ

ರೈಲು ಮುಂದಕ್ಕೆ ಹೋದಷ್ಟಕ್ಕೂ, ಅಲ್ಲಿಯ ಪ್ರಕೃತಿಯ ವಿವಿಧ ದೃಶ್ಯಗಳ ಸೊಬಗು ರಾಮುವಿನಲ್ಲಿ ಬಹಳ ಸ್ಫೂರ್ತಿದಾಯಕ ಭಾವನೆಗಳನ್ನುಂಟುಮಾಡಿತು. ಇನ್ನೊಂದು ದಿವಸದಲ್ಲಿ ರಾಮುವು ಮೊಗಲರ ಹಳೇ ರಾಜಧಾನಿಯನ್ನು ಸೇರುವನು. ರೈಲಿನಲ್ಲಿ ರಾಮುವಿಗೊಬ್ಬ ಸ್ನೇಹಿತನ ಪರಿಚಯವಾಯಿತು. ಅವನು ದಿಲ್ಲಿಯ ಅದ್ಭುತ ಕೋಟೆ, ಕೊತ್ತಳಗಳ ಅನುಭವವನ್ನು ವಿವರಿಸುತ್ತಿದ್ದನು. ಇಂದ್ರಪ್ರಸ್ಥ, ಗಜನಗರಿ, ದಿಲ್ಲಿ, ಆಗ್ರ, ತಾಜಮಹಾಲು ಮೊಗಲರ ದರ್ಬಾರ, ಮಹಾ ಭಾರತದ ಯುದ್ಧ, ಗೌರವ ಪಾಂಡವಾದಿ ವೀರರು ಯುದ್ಧ ಮಾಡಿದ ಪುಣ್ಯಸ್ಥಳ, ಪರಮಾತ್ಮನು ಗೀತೆಯನ್ನು ಸಾರಿದ ಪುಣ್ಯಭೂಮಿ, ದಿಲ್ಲಿ!! ಒಂದು ಕಾಲಕ್ಕೆ ವಜ್ರ ವೈಡೂರ್ಯಾದಿಗಳಿಂದ ಮೆರೆದ ಊರು, ಅನೇಕಾನೇಕ ಚಕ್ರವರ್ತಿಗಳು ವೈಭವ ನಡೆಸಿದ ರಾಜಧಾನಿ!! ಇಂದು ಮಹಾ ಮಹಿಮ ಬ್ರಿಟಿಷರ ಭಾರತ ಸಾಮ್ರಾಜ್ಯದ

(ಇನ್ನೂ ಇದೆ)

[illegible]ಶಾಸ್ತ್ರ ಎಂಬ ಪ್ರೇಮ ರಹಸ್ಯಗಳು ಕ್ರಯ ರೂ. 1—0—0.

"ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ." ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಇಡಿ ಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ, ಮಲಗುವ ಮನೆಯಲ್ಲಿ ಸ್ವಭಿಚಾರಿಗಳ ವಿನೋದಗಳು, "ವೇಶ್ಯಾ ಕನ್ಯೆಗಳು" ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೊನೆಗೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು ಕ್ರಯ ರೂ 1 (ಇದರ ಸಂಗಡ ೧೩ ಫೈಂಟ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ 287 ಮದ್ರಾಸ್

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೆ? ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTED 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ಯಾವಿಶಾರದ

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳ ಸ್ವಳ್ಪ **(ಭಕ್ತಶಿಖಾಮಣಿ ದಾಮಾಜಿಪಂತ)** ಸಂಗೀತ ನಾಟಕ

ಬರೆದವರು —ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಲ್ಲ, ಸೂರ್ಯನೊಳಗಿಲ್ಲ, ।
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮುನಿವರ।"

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಪುರಾತನ ಮನೋಹರವಾದ ೩೫ ಗೀತಗಳಿವೆ ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ —12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ —1. ಎಲ್ಸ್ಯಾಡ್ ಪಬ್ಲಿಷಿಂಗ್ ಹೌಸ್, ಸ್ಟಾರ್ಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ವೈಶಾಖ ಶು। ೧೨ ಶನಿವಾರದಿಂದ, ವೈಶಾಖ ಬ। ೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೭ನೇಯ ವೃಷಭ (ಮೇಶ)

ತಾರೀಖು	ವಾರ	ತಿಥಿ	ಘಟಿ	ನಕ್ಷತ್ರ	ಘಟಿ	[illegible]	ವಿಶೇಷ
22	ಶನಿ	೧೨	೬	ಚಿತ್ರ	೩೦	೮೩	[illegible]
23	ರವಿ	೧೩	೧೦	ಸ್ವಾತಿ	೩೬	೯	
24	ಸೋ	೧೪	೧೫	ವಿಶಾಖ	೪೩	೧೦	
25	ಕುಜ	೧೫	೨೦	ಅನುರಾಧ	೪೯	೧೧	
26	ಬುಧ	೧	೨೫	ಜ್ಯೇಷ್ಠ	೫೫	೧೨	
27	ಗುರು	೨	೨೯	ಮೂಲ	೬೦	೧೩	
28	ಶುಕ್ರ	೩	೩೨	ಮೂಲ	೦	೧೪	

THE
BANK OF MANGALORE LTD.,
MANGALORE

ESTD 1931

Branches - Panemangalore Mudabidri & Padubidri

Chairman —**Philip J. Chandran, Esq.,**
Retd. Dt Registrar of Joint Stock Companies

On & from 1st of January 1937,
Fixed Deposits will be received at following rates of interest

For	3 months	3½%
„	6 „	4%
	12 „	5%
„	24 „ & upwards	5½%

Interest Payable Quarterly
Saving Bank deposit 3½% on daily balances
All kinds of banking business transacted
U. R. PAI, N. U. PAI, *Managing Directors*

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ	3— 8	3—12
ಮುಸ್ಕ	3—10	4— 4
ಗುಜ್ಜು	3—10	4— 0
ಊರ ಅವ್ವಲ್ ಬೆಳ್ತಿಗೆ	4— 0	4—12
ರಂಗೂನು ಬೆ. ಗೋ. ೧ಕ್ಕೆ	6 — 8	7— 0
ಎಲ್ಲೂರು ಜೆ. ಮು. ೧ಕ್ಕೆ	3—14	4— 0
ಗೋದಿ ಗೋಣಿ ೧ಕ್ಕೆ	11 — 0	13— 0
ತೊಗರಿ ಗೋಣಿ ೧ಕ್ಕೆ	9 — 8	12— 8
ಹುರುಳಿ ಗೋಣಿ ೧ಕ್ಕೆ	5— 4	5 — 6
ಕಡಲೆ ಗೋಣಿ ೧ಕ್ಕೆ	8 —14	12 — 8
ತೊಗಂಬೇಳೆ ಗೋಣಿ ೧ಕ್ಕೆ	11— 0	19— 0
ಉದ್ದು ಗೋಣಿ ೧ಕ್ಕೆ	9— 0	9 — 8
ಹೆಸರು ಗೋಣಿ ೧ಕ್ಕೆ	7—12	8— 8
ಊರುಬೆಲ್ಲ ಖಂಡಿ ೧ಕ್ಕೆ	27— 8	32— 8
ಉಪ್ಪು ಗೋಣಿ ೧ಕ್ಕೆ	4—10	5—14
ಕೊಬ್ರಿ ಖಂಡಿ ೧ಕ್ಕೆ	75— 0	84— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	20 — 0	20— 8
ಎಳ್ಳಿಂಡಿ ಖಂಡಿ ೧ಕ್ಕೆ	27 — 8	31 — 4
ಕೊಬ್ರಿ ಎಣ್ಣೆ ಮಣ ೧ಕ್ಕೆ	5— 8	6— 0
ಎಳ್ಳೆಣ್ಣೆ ಮಣ ೧ಕ್ಕೆ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	6— 5	7— 5
ಮೋರಿಸ ಸಕ್ಕರೆ ಮ ೧ಕ್ಕೆ	3— 0	3 — 0
ಮೆಣಸು	4— 8	6— 0
ಸಾಸಿವೆ ಮುಡಿ ೧ಕ್ಕೆ	5 — 4	5— 8
ಕಾಳುಮೆಣಸು ಖ ೧ಕ್ಕೆ	97 — 8	100— 0
ಯೇಲಕ್ಕಿ ಬೀಜ ಮಣ ೧ಕ್ಕೆ	80— 0	80— 0
ಗೇರುಬೀಜ ಮು. ೧ಕ್ಕೆ	3 —10	3 — 12
ಕಬ್ಬಿಣ ಖಂಡಿ ೧ಕ್ಕೆ	51— 0	51— 4
ತಾಂಬ್ರತಗಡು ಮ ೧ಕ್ಕೆ	14— 12	15— 0
ತಾಂಬ್ರಪಾತ್ರಗಳು ಮ ೧ಕ್ಕೆ	17— 0	17 — 8
ಚೀನಬೆಳ್ಳಿ ಸೇರು ೧ಕ್ಕೆ	13— 8	15 — 0
ಹಿತ್ತಾಳೆ ತಗಡು ಮ ೧ಕ್ಕೆ	12 — 0	12— 8
ಪವನು ೧ಕ್ಕೆ	22— 7	22 6
ಹುಣಸೆ ಹುಳಿ ಖಂಡಿ ೧ಕ್ಕೆ	40 — 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	11' — 0	150— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	190— 0	200— 0
ಮಡಿಕೇರಿ ಏಲಕ್ಕಿ	60— 0	62 —

THE
Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ಪಾಡಿಕೆಯನ್ನು ಮರೆಯಬೇಡಿರಿ

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ ಕೊಕ್ಕೆ ಹುಳ ನೂಲಿನಂತಹ ಹುಳ ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು ಇದರ ಸೇವನೆ, ಸಕ್ಕರೆ ಬಿಸಿನೀರು (ಹರಳೆಣ್ಣೆ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಸುಖವಿರೇಚನ ಗುಳಿಗೆ	0	0	6
ಪಿತ್ತವಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0
ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ವಾಂತಿಯಾಗುವುದು ಕಫ ಮಿಶ್ರಣ ಸೀಸೆ 1ಕ್ಕೆ	0	6	0

ಸಿಗುವ ಸ್ಥಳ ಷಾ ಕಂಪೆನಿ,
ಗವರ್ನಮೆಂಟ್ ಕೋರ್ಟಿನ ಎದುರು ಮಂಗಳೂರು

WANTED

4 YOUNG WORKING PARTNERS 4

Capable of investing each a sum of Rs 200, for a sound and novel indiginous industry to be started shortly

Please send communications to —

'K'
C/o, 'Swadeshabhimani Mangalore

HOUNSA

ಹಂಸಾ. ಸ್ನೋ ಮತ್ತು ಬ್ರಿಲ್ಲೆಂಟೈನ್,
ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

ಚೂರಿಯಿಂದ ಕತ್ತರಿಸುವಂತೆ ಇರುವ ಹೊಟ್ಟೆನೋವು

ಜೆ ಎಫ್ ಎಸ್ ಎಂಬವರು ತಮ್ಮ ನಿತ್ಯದ ಕೆಲಸಗಳನ್ನು ಹರುಷದಿಂದ ಮಾಡುತ್ತಿದ್ದರು ಇದ್ದಕ್ಕಿದ್ದ ಹಾಗೆ ಅವರಿಗೆ ಹೊಟ್ಟೆನೋವು ತಗಲಿಕೊಂಡಿತು ಅದಕ್ಕೆ ಹಲವು ವಾರಗಳ ವೈದ್ಯಕೀಯ ಉಪಚಾರವು ಅಗತ್ಯವಿತ್ತು ಕಡೆಗೆ ಅವರು ಯಾವ ರೀತಿಯಲ್ಲಿ ಗುಣಮುಖರಾದರು ಎಂಬ ವಿಷಯವು ಅವರಿಂದಲೇ ಹೇಳಲ್ಪಟ್ಟಿದೆ

"ನಿಮ್ಮ ಔಷಧಿಯಿಂದ ನಾನು ಪಟ್ಟ ಗುಣವನ್ನು ಒಂದೆರಡು ಮಾತುಗಳಲ್ಲಿ ಹೇಳಲಪೇಕ್ಷಿಸುತ್ತೇನೆ ಫಕ್ಕನೆ ನನಗೆ ಹೊಟ್ಟೆನೋವು ತಗಲಿತು ಒಂದು ತಿಂಗಳು ಡಾಕ್ಟರರೊಬ್ಬರ ಆರೈಕೆಯಲ್ಲಿ ಇದ್ದು ಮೂರು ತರದ ಔಷಧಿಗಳ ಉಪಯೋಗದಿಂದಲೂ ಯಾವ ಪ್ರಯೋಜನವೂ ಆಗದಾಯಿತು

"ಕೆಲವು ವೇಳೆ ನನಗೆ ಅರ್ಧ ಊಟ ತೆಗೆದುಕೊಳ್ಳಬೇಕಾಗುತ್ತು ಹೊಟ್ಟೆಯನ್ನು ಚೂರಿಯಿಂದ ತಿವಿದ ಹಾಗೆ ಆಗುತ್ತಿದ್ದುದರಿಂದ ಕೋಳಿಯ ಸುತ್ತುಗಳನ್ನು ತೆಗೆಯುತ್ತಿದ್ದೆ ಬಿಸಿ ಸಿಪ್ ಶಾಖೀಯವು ವೇದನೆಯನ್ನುಂಟುಮಾಡುತ್ತಿತ್ತು

ಮೆ ಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ಗುಣಶಕ್ತಿಯ ವಿಷಯ ತಿಳಿದ ಮೇಲೆ ನಾನು ಒಂದು ಸೀಸೆಯನ್ನು ತಂದು ಅದರಲ್ಲಿನ ಮೂರು ಡೋಸ್‌ಗಳನ್ನು ತೆಗೆದುಕೊಂಡ ಕೂಡಲೇ ನನಗೆ ಸ್ವಲ್ಪ ಸುಖ ಭಾಸವಾಯಿತು

"ಅರ್ಧ ಸೀಸೆಯನ್ನು ಉಪಯೋಗಿಸುವುದರೊಳಗಾಗಿ ನಾನು ಸಂಪೂರ್ಣ ಗುಣವನ್ನು ಪಡೆದೆನು ಹೊಟ್ಟೆನೋವಿನಿಂದ ನರಳುವ ನನ್ನ ಸ್ನೇಹಿತರೆಲ್ಲರಿಗೂ ನಾನು ಈ ಪೌಡರನ್ನು ಶಿಫಾರಸು ಮಾಡುತ್ತೇನೆ"

ಹೊಟ್ಟೆನೋವಿನಿಂದ ನರಳಬೇಡಿರಿ ಪ್ರಖ್ಯಾತ ಮೆಕ್ಲೀನ್ ಬ್ರೆಂಡ್ ಸ್ಟೋಮಕ್ ಪೌಡರಿನಿಂದ ನಿಮ್ಮ ಹೊಟ್ಟೆನೋವನ್ನು ನೀಗಿಕೊಳ್ಳಿರಿ ಅದರ ಮೇಲೆ

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆಕೊಳ್ಳಿರಿ ಇಂತಹ ನಮೂನೆಯ ಕಡಿಮೆ ದರದ ಪರಕೀಯ ಮಾಲನ್ನು ಪಡೆದು ಮೋಸಹೋಗಬೇಡಿ ಇದು ಚಿಲ್ಲರೆಯಾಗಿ ಮಾರುವುದಿಲ್ಲ ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ



S No 58.

ಪ್ರಧಾನ ಸ್ಕಾಟ್ ಬೇಡನ್ ಪೊವೆಲ್ಲರವರು

(೬ನೇ ಪುಟದಿಂದ ಮುಂದುವರಿಸಿದುದು)

ಬ್ರಿಟಿಷ್ ರಾಜನೀತಿ ತಂತ್ರ(diplomacy)ದ ಒಂದು ಭಾಗವಾದ ಈ ಸ್ಕಾಟ್ ಚಳವಳದ ಗುಟ್ಟು ಮಧ್ಯಾಹ್ನದ ಬಿಸಿಲಿನಲ್ಲಿದ್ದಂತೆ ಸ್ಪಷ್ಟ ವಿದೆ. ಬ್ರಿಟಿಷ್ ಧ್ವಜಕ್ಕೆ ವಿಧೇಯತೆಯನ್ನು ಸೂಚಿಸುವ ಮನೋಭಾವವು ಭಾರತದ ಭಾವೀ ಜನಾಂಗದಲ್ಲಿ ಬೇರೂರುವುದೆಂದು ಬ್ರಿಟಿಷರು ನಿರೀಕ್ಷಿಸುತ್ತಲಿರುವುದು ಸಹಜವಾದುದೆ ಆದರೆ ಈ ನಿರೀಕ್ಷಣೆಯು ಎಷ್ಟರ ತನಕ ತುಂಬಬಹುದೆಂದು ಈಗ ಹೇಗೆ ಹೇಳಬರುವುದು? ಒಂದು ವೇಳೆ ಸ್ಕಾಟ್‌ಪ್ರಧಾನರ ನಿರೀಕ್ಷಣೆಗೆ ವಿರೋಧವಾದ ಪರಿಸ್ಥಿತಿಯು ಉಂಟಾದರೆ ಅದು ಶೀಲ ಸ್ವಭಾವತೆಗೆ ಕಾರಣಭೂತವಾಗುವುದೆಂದು ಹೇಳುವುದು ಶೀಲವೆನಿಸಲಾರದ

ಇನ್ನು ಕಾರ್ಯಸಾಧನೆಯು ಶೀಲ, ಶ್ರಮ ಸಹಿಷ್ಣುತೆಯು ಶೀಲ ಇವೇ ಮೊದಲಾದ ವ್ಯಕ್ತಿ ಶೀಲಗಳಿವೆ ಪಾಶ್ಚಾತ್ಯರು ತಮಗಿದ್ದ ಅಪಾರ ಅನುಕೂಲತೆಗಳಿಂದ ಭಾರಿ ಕಾರ್ಯಸಾಧಕ ಜನಾಂಗಿಕರೆಂದೂ, ಶ್ರಮ ಸಹಿಷ್ಣುತೆಯು ಅವರ ಒಂದು ಲಾಕ್ಷಣೀಕ ಶೀಲವೆಂದೂ ಅವರೇ ಹೊಗಳಿಕೊಳ್ಳುತ್ತಿರುವರು ನಮ್ಮ ದೇಶದ ಪ್ರಖ್ಯಾತ ವಿಜ್ಞಾನಿಗಳನ್ನೂ, ಸಾಹಿತಿಗಳನ್ನೂ, ಕಲಾನಿಪುಣರನ್ನೂ ನೋಡಿದರೆ ಮತ್ತು ನವ ಸ್ವಾತಂತ್ರ್ಯವಿಲ್ಲದೆ ಉಂಟಾದ ಅನಾನುಕೂಲತೆಗಳನ್ನು ಪರಿಗಣಿಸಿದರೆ ಶ್ರಮ ಸಹಿಷ್ಣುತೆ, ಕಾರ್ಯಸಾಧನೆಯು ಶೀಲದ ಅರಿವಾಗುವುದು. ನೈತಿಕ ಶೀಲ(Moral)ತೆಯ ವಿಚಾರ ತೆಗೆದುಕೊಂಡರೆ ಇಂದು ಭಾರತ ಜನಾಂಗವು ಪಶು ಬಲಪ್ರಿಯ ಪಾಶ್ಚಾತ್ಯರನ್ನು ಅಚ್ಚರಿಗೊಳಿಸುವ ಅಹಿಂಸಾತ್ಮಕ ಚಳವಳಿ ಒಂದು ಯುದ್ಧದಿಂದ ತನ್ನ ಸ್ವಾತಂತ್ರ್ಯವನ್ನು ಗಳಿಸಲು ಪ್ರಯತ್ನಿಸುತ್ತಿದೆ. ಈ ಆತ್ಮಬಲಕ್ಕೆ ಸಹಜವಾದ ಯಶಸ್ಸು ಸಿಕ್ಕಿದ ಮೇಲೆ, ಭಾರತದ ಇಂದಿನ ಕೋರಿಕೆಗಳು ಪೂರೈಸಲ್ಪಟ್ಟ ಮೇಲೆ, ಲಾರ್ಡ್ ಬೇಡನ್ ಪೊವೆಲ್ಲರಂತವರು ಎಷ್ಟು ಮಂದಿಗಳು ನಮ್ಮ ಜನಾಂಗವನ್ನು ಟೀಕಿಸುವರೆಂದು ನೋಡಲಿದೆ

ಐಕ್ಯತೆಯ ಕೊರತೆ ಪೊವೆಲ್ಲರು ಕಡೆಗೆ ಹೇಳಿದ ವಿಷಯ ವಿಭಾಗಿಸಿ ಆಳುವುದೇ ತನ್ನ ತತ್ವವಾಗಿಟ್ಟುಕೊಂಡ ಬ್ರಿಟಿಷರು ಒಂದು ಕ್ಷಣಕ್ಕಾದರೂ ಭಾರತದಲ್ಲಿ ಐಕ್ಯತೆಯನ್ನು ನಿರೀಕ್ಷಿಸುವುದೆಂತು? ಆದರೂ ಕಾಂಗ್ರೆಸಿನಂತಹ ಒಂದು ರಾಷ್ಟ್ರಸಂಸ್ಥೆಯು ಈ ಐಕ್ಯತೆಯನ್ನು ಬಹಳ ಮಟ್ಟಿಗೆ ಸಾಧಿಸಿರುತ್ತದೆ ಅದರ ಧ್ವಜದ ಕೆಳಗೆ ಸಕಲ ಜಾತಿಮತಸ್ಥರು ಒಟ್ಟುಗೂಡುತ್ತಲಿದ್ದಾರೆ ಐಕ್ಯತೆ ಭಂಗವನ್ನುಂಟುಮಾಡುವ ಕೆಲವು ಸರಕಾರದ ಬೆಂಬಲಿಗಾರರ ಪ್ರಯತ್ನಗಳು ನಿಷ್ಫಲವಾಗುತ್ತಲಿವೆ ಇನ್ನೊಂದು ಬಾರಿ ಪೊವೆಲ್ಲರು ಭಾರತಕ್ಕೆ ಬಂದರೆ ಭಾರತಪುತ್ರರ ಒಗ್ಗಟ್ಟಿನ ಅರಿವು ಅವರಿಗೆ ಆಗಬಹುದೆಂದು ಹೇಳಬಹುದ

ತೆರಿಗೆ ಕಂದಾಯ ರೂಪದಲ್ಲಿ ಹುಟ್ಟಿದ ಧನವು ಸೈನ್ಯಖಾತೆಯ ಸುಖಲೋಲುಪ್ತತೆಗೂ ಉಚ್ಚ ನೌಕರರ ವಿಪರೀತ ವೇತನಗಳಿಗೂ ಖರ್ಚಾಗುವುದಾದರೆ ಮತ್ತು ಪರಿಣಾಮವಾಗಿ ದಿನೇ ದಿನೇ ನಮ್ಮ ಜನಾಂಗವು ಅರೆಹೊಟ್ಟೆ ಪಾಡಿಗೆ ಇಳಿಯುತ್ತಿರುವುದಾದರೆ, ತನಗೊಂದು ಜೀವನಸ್ಥಾನವನ್ನು ಕೊಡಬೇಕೆಂದ ಜನತೆಯ ಕೋರಿಕೆಗಳು ಜನತಾಹಿತದ ಸರಕಾರವು ತಿರಸ್ಕರಿಸಿದರೆ, ಜನಾಂಗದ ಆರೋಗ್ಯವು ಸರಿಯಾಗಿರಲು ಬೇರೆ ಯಾವ ಕಾರಣವೂ ಇರುವುದಿಲ್ಲ ಈ ಕೊರತೆಯನ್ನು ತೋರಿಸಿಕೊಡುವ ಬದಲು ಪೊವೆಲ್ಲರು ತಮ್ಮ ನೇತಾರರ ಅನುಯಾಯಿಗಳೊಡನೆ ಅವುಗಳ ಮೂಲವನ್ನು ಕಂಡು ಹಿಡಿದು ಅದನ್ನು ಸಂಗೋಳಿಸ ಹೋರಾಡುತ್ತಿದ್ದರೆ ಎಷ್ಟೋ ಪುರುಷಾರ್ಥವಿತ್ತು

ಒಟ್ಟಿನ ಮೇಲೆ ಹೇಳುವುದಾದರೆ ಪೊವೆಲ್ಲರಂತವರ ಟೀಕೆಗಳನ್ನು ಭಾರತವು ಎಷ್ಟೋ ಸಹಿಸಿರುತ್ತದೆ ಕೆಲವು ಕಾಲದ ವರೆಗೆ ಸಹಿಸಲು ಸಿದ್ಧವಿದೆ ಆದರೆ ಪೊವೆಲ್ಲರಿಗೆ ಸ್ಕಾಟ್ ಸಂಘಗಳಲ್ಲಿ ನ್ಯೂನತೆಗಳು ಕಂಡುಬಂದು ಅವರ ಟೀಕೆಗೆ ಕಾರಣವಾದುದಾದರೆ ನಮ್ಮ ದೇಶದ ಸ್ಕಾಟ್ ದಳಾಧಿಕಾರಿಗಳು, ಇಲ್ಲವೇ ಗರ್ಲ್ ಗೈಡ್ ನಾಯಕರು ಅವುಗಳ ಅವಶ್ಯಕತೆಯು ಅಗತ್ಯವೂ ಎಂದು ಪರ್ಯಾಲೋಚಿಸಿ ಅವಶ್ಯವೆಂದು ಕಂಡಲ್ಲಿ ಆ ಚಳವಳದ ತತ್ವಗಳು ಪರಿಪೂರ್ಣತೆ ಹೊಂದುವುದೆಂದು ಆದರೆ ಉಚಿತವಾದಲ್ಲಿ ಮಾತ್ರ ಸರಿಯಾದ ಏರ್ಪಾಡುಗಳನ್ನು ಕೈಕೊಳ್ಳುವರೆಂದು ಸ್ಥಾಪಿಸಲಾಗಿದೆ ಇಲ್ಲವೆ ಈ ಗಣನೆಗೆ ಬಾರದ ಕೆಲವೊಂದು ಸಂಸ್ಥೆಗಳಿಂದ ದೇಶಕ್ಕೇನೇ ಅವಮಾನಕರವಾದ ಟೀಕೆಗಳಾಗಲು ಕಾರಣವಾಗುವುದಾದರೆ ಅಂತಹ ಸಂಸ್ಥೆಗಳ ಅವಶ್ಯಕತೆಬೇಕೆಂದು ಹೋರಾಡುವರ ಗುಟ್ಟೇನ ?

THE KALYANPUR SUGAR MILLS LTD KALYANPUR

NOTICE.

Noti e is hereby given that the annual General Meeting of the shareholders of the above Company will be held at the Registered Offi e at Kalhanpur on Saturday the 19th June 1937 at 11 a m

The transfer books and the Register of Members shall be closed from 1-6-37 to 20-6-37

(By the order of the Board

For The Kalyanpur Sugar Mills Ltd

K Bhaskar Kamath

Secretary in Charge

ಇಂಗ್ಲೆಂಡಿನ ವಿಲ್ಟ್ಸ್‌ಶೈರ್ ಪ್ರಾಂತ್ಯದ ಗ್ರೆಸ್‌ಫೋರ್ಡ್ ಪಟ್ಟಣದಲ್ಲಿ ಇರುವ ಜೆನೆಟ್ ಹೊಲ್ಲಿಮೇನ್ ಎಂಬ ಈ ಮಗುವಿಗೆ ಇನ್ನೂ ೧೮ ತಿಂಗಳುಗಳಾಗಲಿಲ್ಲ ಆಗಲೇ ಅದಕ್ಕೆ ೧೬ ಹಲ್ಲುಗಳು ಬಂದಿವೆಯಂತೆ ಹುಟ್ಟಿದ ಎರಡು ವಾರಗಳಲ್ಲಿಯೇ ಈ ಮಗುವಿಗೆ ಹಲ್ಲು ಬರಲಾರಂಭಿಸಿದವ ಕೆಲವು ತಿಂಗಳ ಮಗುವಿಗೆ ೮ರ ಹಲ್ಲುಗಳು ಎದ್ದಿತ್ತತೆ ವೈದ್ಯರ ಇದೊಂದು ವಿಚಿತ್ರ ಪ್ರಕೃತಿಯಾಗಿ ಕಂಡು ಬಂದಿದೆ

The Coronation of their Majesties is now over' But Remember'

Comfortable ***Ideal*** ***Central***

The Coronation Darbar Restuarant

Boarding & Lodging

Opposite Govt College Hampankatta, Mangalore

A Home in the Mother land

Cleanliness and comfort at moderate cost.

A delightful Hotel in the centre of the town and nearest to the Rly Station & Bus Station

Gives best Refreshment & dinner service and modern preparations such as Biryani, Fowl Biryani Pulao Khushka Chop, Cutlets Roast Bheja Khima, Tomato mutton Roasted fowl Omlet Sumbusa, etc. a speciality

Special lodging arrangements for travellers Students will find all their food requirements

Please Step in Once and Convince Yourself

S B Mohidin, S. M Syedali Saheb (Bhatkal) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೋಜಿಂಗ್

ಗವರ್ನಮೆಂಟ್ ಕಾಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.

ಸೌಲಭ್ಯ ಸೌಕರ್ಯ ಸುಖದಾಯಕ

ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳು ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರದು

ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸುಗಳಿಗೆ ತೀರಾ ಸಮೀಪವು.

ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು

ಮುರ್ಗಿ ಬಿರಿಯಾನಿ, ಬಿರಿಯಾನಿ, ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮಟೊಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವುವು.

ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ.

ಯಸ್. ಬಿ. ಮೊಹಿದಿನ್,
ಯಸ್. ಬಿ. ಸಯ್ಯದ್ ಆಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು

...ಸ್ಥ ಸ್ಥಳಗಳಲ್ಲಿಯು. ... ಪ್ರಯುಕ್ತ ಒಂದು ದಿನ ಅಲ್ಲಿ ಬೆಳಿಗ್ಗೆ ನಾಟ್ಯಾಭ್ಯಾಸ ನಡೆಯುತ್ತಿತ್ತು. ಅನಿರೀಕ್ಷಿತವಾಗಿ ಹರ್ ಜುಲಿಯಸ್ ಸ್ಟ್ರೈಚರ ಸವಾರಿಯು ಕೆಲವು ಮಂದಿ ಸಂಗಾತಿಗಳೊಂದಿಗೆ ನಾಟ್ಯಗೃಹವನ್ನು ಪ್ರವೇಶಿಸಿತು. ಇದನ್ನು ನೋಡಿದ ಯೆಹೂದಿಗಳು ತಮ್ಮ ಸಂಸ್ಥೆಯ ಅವನತಿ ಬಂತೆಂದು ತಿಳಿಕೊಂಡರು. ಯೆಹೂದಿ ದ್ವೇಷಿಯಾದ ಸ್ಟ್ರೈಚರರು ನಾಟ್ಯಾಭ್ಯಾಸವನ್ನು ನೋಡುತ್ತಿದ್ದ ಹಾಗೆ ಅದನ್ನು ನಿಲ್ಲಿಸಲು ಅಪ್ಪಣೆಕೊಟ್ಟರು. ಆಗಂತೂ ಯೆಹೂದಿಗಳಿಗೆ ಎದೆಗುಂದಿತು. ಸ್ಟ್ರೈಚರರು ತಮ್ಮ ಪರಿವಾರವನ್ನು ನಾಟ್ಯರಂಗಸ್ಥಳಕ್ಕೆ (stage) ಕರಕೊಂಡು ಹೋಗಿ ಅಲ್ಲಿ ಅಭ್ಯಾಸ ಮಾಡುತ್ತಿರುವವರಂತೆ ನಾಟ್ಯಮಾಡಿ ತೋರಿಸಬೇಕೆಂದು ತನ್ನ ಸಂಗಾತಿಗಳಿಗೆ ಅಪ್ಪಣೆಕೊಟ್ಟನು ಅವರು ಅದು ತಮ್ಮಿಂದ ಅಸಾಧ್ಯವೆಂದರು ಆಗ ಸ್ಟ್ರೈಚರರು ಸಂಗಾತಿಗಳಿಗೆ ಒಂದು ಸಾರಸ್ಯವಾದ ಭಾಷಣ ಕೊಟ್ಟರು. ಅವರ ಉದ್ದೇಶವು ಬೇರೆ ಏನಾಗಿರದೆ, ತನ್ನ ಸಂಗಾತಿಗಳಿಗೆ ಒಂದು ಪಾಠವನ್ನು ಹೇಳಿಕೊಡುವುದೇ ಆಗಿತ್ತು. ಅಂತ್ಯದಲ್ಲಿ ತಿಳಿದುಬಂದ ಪ್ರಕಾರ ಸ್ಟ್ರೈಚರರ ಜೊತೆಗೆ ಬಂದವರು ಬೇರೆಯಾಗಿರದೆ ಅವರು ವೃತ್ತಪತ್ರಿಕೋದ್ಯೋಗಿಗಳಾಗಿದ್ದು ದೊಡ್ಡ ದೊಡ್ಡ ವಿಮರ್ಶಕರಾಗಿದ್ದರು. ಟೀಕೆಗಳ ಹಾಸ್ಯ ಮಾಡುವುದು ಸುಲಭವೆಂತಲೂ, ಕಾರ್ಯರೂಪದಲ್ಲಿ ಮಾಡಿ ತೋರಿಸುವುದು ಕಷ್ಟತರವಾದುದಿದೆ ಎಂದೂ ಆದುದರಿಂದ ವಿಮರ್ಶಕರು ಟೀಕೆಟಿಪ್ಪಣಿಗಳನ್ನು ಮಾಡುವಾಗ ತುಂಬಾ ತಿಳುವಳಿಕೆಯುಳ್ಳವರಾಗಬೇಕೆಂದೂ ಎಂಬ ಈ ಪಾಠವನ್ನು ಸ್ಟ್ರೈಚರರು ಕಾರ್ಯರೂಪದಲ್ಲಿಯೇ ಮಾಡಿ ತೋರಿಸಿದರು

ಸ್ವಿಂಧರಿ ಥಿಯೇಟರಿಂದ ಬರ್ಲಿನ್ನಲ್ಲಿ ಜರ್ಮನ್... ಹಿಟ್ಲರನ ಬಲಕೈಯಂತಿರುವ ಮನುಷ್ಯ ಪ್ರಭಾವಶಾಲಿ ನಾಜೀ ಮುಖಂಡನು ಯೆಹೂದಿ (Jous) ಜನರನ್ನು ಹಿಟ್ಲರನು ಜರ್ಮನಿಯಿಂದ ಓಡಿಸಲು ಇವನೇ ಪ್ರೋತ್ಸಾಹ ಕರ್ತನಂತೆ ಅಂದರೆ ಇವನು ಯೆಹೂದಿಗಳ ಉದ್ಧವಿರೋಧ ಜರ್ಮನಿಯಲ್ಲಿ ಅಪ್ಪೊಲೊ ಥಿಯೇಟರ್ ಎಂಬೊಂದು ನಾಟ್ಯಮಂದಿರವಿದೆ. ಯೆಹೂದಿಗರಿಗೆ ಸೇರಿದ್ದು. ಈ ಸಂಸ್ಥೆಯವರು ತಮ್ಮ ಪ್ರಖ್ಯಾತ ನಾಟ್ಯ ಪ್ರದರ್ಶನವನ್ನು ಬರ್ಲಿನಲಿ...

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! **ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!**

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳಲ್ಲಿದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು.

ಈ ಪುಸ್ತಕವನ್ನು ಓದಬೇಕು! ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಆಡಿಯಿಡುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು
ಅವರಿಗೆ ಇವರಿಗೆ ಏನ್ನುವುದೇನು?

ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಮಕ್ಕಳಿಗೆ ತಿಳುವಳಿಕೆ ಹೇಳುವವರಿಗೆ ಬೇಕು
ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ: ೩೦೦ ಪುಟಗಳು.

ಬೆಲೆ ರೂ. ೧ ೮ ೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್, ಸ್ಟೇಟ್ ಮಾರ್ಟ್‌ನಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೂ ಕೊಡಲಾಗಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ ವಿದಳಿನ ಕೆಲಸವಾದ ಊಹಾಪೋಹೆಗಳಿಗ ಎಳ್ಳಷ್ಟಿದರೂ ಎಡೆಗೊಟ್ಟಿಲ್ಲ

ಚಿಂತಾರತ್ನ

ಇದರಲ್ಲಿ ೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ ರೀತಿ ೩ ಕಾಸ್ಟಿಕ್ ಸೋಡಾ ತಯಾರಿಸುವುದು ೪ ಬಿಸ್‌ಕತ್ತು ತಯಾರಿಸುವುದು ೫ ದಶಾಂಗ ಕರ್ಪೂರ ಮಾಡುವುದು ೬ ಪೆಪ್ಪರಮೆಂಟ ಮಾಡುವುದು ೭ ದೂಪದ ಬತ್ತಿ ಮಾಡುವುದು ೮ ಭಂಗಾರ ಮಾಡುವುದು ೯ ಬೆಳ್ಳಿ ತಯಾರ ಮಾಡುವುದು ೧೦ ಜರ್ಮನ್ ಸಿಲ್ವರ್ ಧಾತುವನ್ನು ಮಾಡುವದು ೧೧ ಊದಿನ ಕಡ್ಡಿ ತಯಾರಮಾಡುವುದು. ೧೨ ತಗಡಿನಡಬ್ಬಿ ತಯಾರಮಾಡುವುದು ೧೩ ಕುಂಕುಮವನ್ನು ತಯಾರಿಸುವುದು ೧೪ ಪಸಿಕುಂಕುಮವನ್ನು ತಯಾರಿಸುವುದು. ೧೫ ಗೋದೀಸರಿ ಕೆಡದಂತೆ ಮಾಡುವುದು ೧೬ ಬುಕ್ಕಿಟ್ಟು ಮಾಡುವುದು ೧೭ ಪೂನಸರಿ ಯಾವಾಗಲೂ ಸೀರಾಗಿರುವಂತೆ ಮಾಡುವುದು ೧೮ ಅಷ್ಟಗಂಧ ಸಾಮಾನುಗಳು ೧೯ ಛರ್ಷ ತಯಾರಮಾಡುವುದು ೨೦ ಕಟ್ಟಿಗೆ, ಲೋಹಗಳಿಗೆ ಹಚ್ಚುವ ಬಣ್ಣ ಮಾಡುವುದು, ೨೧ ಕಾಗದವನ್ನ ಮಾಡುವುದು, ೨೨ ಮೆಂಥೋಲ ಎಣ್ಣೆ ತಯಾರಿಸುವುದು, ೨೩ ಕನ್ನಡಿಯ ಮೇಲೆ ಬರೆಯುವುದು ೨೪ ದಂತಮಂಜನ ಮಾಡುವುದು ೨೫ ... ಶುದ್ಧಿ, ಧಾತುವೃದ್ಧಿ ಔಷಧ ೨೬ ಕಸ್ತೂರಿ ಮಾತ್ರೆ ಮಾಡುವುದು, ೨೭ ಕಟಪ್ರಭಾತಕ್ಕೆ ಔಷಧ ೨೮ ಬಾಲಾಮೃತ ಮಾಡುವುದು ೨೯ ಶಿಶ್ನವೃದ್ಧಿಗೆ ಔಷಧ ೩೦ ಶರಬತ್ತು ಮಾಡುವುದು, ೩೧ ಚಳಿ-ಜ್ವರದ ಗುಳಿಗೆ ಮಾಡುವುದು ೩೨ ಬೂಟಪಾಲಿಶ ಮಾಡುವುದು, ೩೩ ಮನೆ, ವಖಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವುದು, ೩೪ ಹುರುಕು ಖುಜ್ಜಿ ಮುಲಾಮು ೩೫ ನಾಸಿಕಪುಡಿಮಾಡುವುದು ಇತ್ಯಾದಿ ೧೬೦ ವಿಷಯಗಳು ಇರುತ್ತವೆ

ಬೆಲೆ ಒಂದು ರೂಪಾಯಿ, (ವಿ ಪಿ ಖರ್ಚು ಬೇರೆ)

ವಿಳಾಸ —ಎಸ್. ಸಿ. ಸಾಲಿಮಠ ಎಂಡ್ ಸನ್ಸ್, ಗದಗ

ಕಾಮಕಳಾ ಶಾಸ್ತ್ರ

ಇದರಲ್ಲಿ—೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ, ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿಯ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವುದು ೧೫ ಯಾವ ಯಾವ ಜಾತಿ ಸ್ತ್ರೀಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು ೧೭ ಸ್ತ್ರೀ ವಶೀಕರಣ ೧೮ ಪುರುಷ ವಶೀಕರಣ, ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ಇತ್ಯಾದಿ ೧೬೦ ವಿಷಯಗಳು ಇರುತ್ತವೆ,

ಬೆಲೆ ಒಂದು ರೂಪಾಯಿ. (ವಿ. ಪಿ. ಖರ್ಚು ಬೇರೆ)

ವಿಳಾಸ:—ಎಸ್. ಸಿ ಸಾಲಿಮಠ ಎಂಡ್ ಸನ್ಸ್, ಗದಗ.

ಐರಾವತ.

—: ಇದು :—

ದೇವಲೋಕದ ಕಾಮಧೇನುವಿಗೆ ಸಮಾನವಾದ ಅನೇಕ ಅತ್ಯುತ್ತಮ ವಿದ್ಯೆಗಳಿಂದೊಡಗೂಡಿದ ಗ್ರಂಥ!

ಇದರಲ್ಲಿ ವೈದ್ಯಶಾಸ್ತ್ರ ಕಾಮಶಾಸ್ತ್ರ, ಪ್ರಶ್ನಭಾಗ, ಶಕುನಭಾಗ ಕೈಗಾರಿಕೆ ವಿಷಯ, ಕಾಯದೇಭಾಗ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ, ತಂತ್ರ, ಮಂತ್ರ, ಯಂತ್ರ ವಶೀಕರಣ, ಇತ್ಯಾದಿ ಅನೇಕ ಮರ್ಮವಿದ್ಯೆಗಳು ಇರುತ್ತವೆ ಎಲ್ಲ ವಿಷಯಗಳನ್ನೂ ತಿಳಿಸಲು ಇಲ್ಲಿ ಸ್ಥಳ ಸಾಲದು ಒಂದೊಂದು ವಿಷಯಕ್ಕೆ ಎಷ್ಟು ಬೆಲೆಕೊಟ್ಟರೂ ತೀರದು

ಇಂಥ ಅಮೌಲ್ಯ ಗ್ರಂಥದ ಬೆಲೆ ೧—೦—೦

ವಿಳಾಸ —ಎಸ್ ಸಿ. ಸಾಲಿಮಠ ಎಂಡ್ ಸನ್ಸ್, ಗದಗ.

ಸೂಚನೆ:—ಕಾಮಕಳಾಶಾಸ್ತ್ರ, ಚಿಂತಾರತ್ನ, ಐರಾವತ ಈ ಮೂರೂ ಬುಕ್ಕುಗಳು ಪ್ರತಿಯೊಬ್ಬ ಬುಕ್ಕ ಸೇಲರರಲ್ಲಿ ದೊರೆಯುತ್ತವೆ ಜರ ಅಲ್ಲಿ ಸಿಗದಿದ್ದರೆ ನಮಗೆ ಪತ್ರ ಬರೆದು ತರಿಸಿಕೊಳ್ಳಿರಿ

Publishers—

S. C. Salimath & Sons,
GADAG.

ಹುಡುಗಿಯರ ಕಳವು!

ಎಂಜಲಾಳಿಗಳ ಭಯಂಕರ ಕೃತ್ಯ!

ಜ್ಹಾನ್ಸಿ ಪಟ್ಟಣದ ಒಂದು ಬಡ ಸಂಸಾರದಲ್ಲಿ ತಾರಾ ದೇವಿ ಎಂಬೋರ್ವ ತರುಣಿಯು ಇನ್ನೂ ಬಾಲ್ಯ ಪ್ರಾಯದಲ್ಲಿಯೇ ಇದ್ದಳು. ಅವಳ ವಯಸ್ಸು ೧೫ಕ್ಕೆ ಮಿಕ್ಕಿರಲಿಲ್ಲ. ಅವಳ ಮನೆಯ ಪಕ್ಕದಲ್ಲಿ ಜಾಮಿರ್ ಮತ್ತು ಅಮುದ್ ಎಂಬ ಈರ್ವ ಯುವಕರ ಮನೆಯೂ ಇತ್ತು. ಅವರಲ್ಲಿ ಜಾಮಿರ್ ಎಂಬವನು ತಾರಾದೇವಿಯನ್ನು ಮೋಹಿಸಿ ಆಗಿಂದಾಗ್ಗೆ ಅವಳಿಗೆ ಸನ್ನೆಮಾಡುತ್ತಿದ್ದು ತನ್ನ ಮನೋಗತವನ್ನು ತಿಳಿಸುತ್ತಿದ್ದನಂತೆ. ಒಂದು ದಿನ ಅವನು ತಾರಾಳನ್ನು ಆಭರಣ ಒಡವೆಗಳನ್ನೂ ಬಟ್ಟೆಬರೆಗಳನ್ನೂ ಕೊಡುವೆನೆಂದು ಮರುಳುಗೊಳಿಸಿ, ನಾಂಗ್ರಾ ಎಂಬ ಹತ್ತಿರದ ಊರಿಗೆ ಕೊಂಡೊಯ್ದನು. ಅಲ್ಲಿ ಹೊಟೇಲೊಂದರಲ್ಲಿ ಅವರು ಇಳಕೊಂಡರು. ಆ ಹೊಟೇಲಿನ ಮ್ಯಾನೇಜರಾದ ದಯಾನಾರ್‍ಯಾನ್ ಎಂಬವನು ತಾರಾಳನ್ನು ವೇಶ್ಯಾವೃತ್ತಿಗಿಳಿಯುವಂತೆ ಬಲತ್ಕರಿಸಿ, ಅವಳನ್ನೊಬ್ಬ ಪ್ರಯಾಣಿಕನ ಕೋಣೆಯಲ್ಲಿ ಹಾಕಿ ಬೀಗ ಹಾಕಿದನು. ಒಳಗಿದ್ದ ಪ್ರಯಾಣಿಕನು ಅವಳ ಮೇಲೆ ಬಲಾತ್ಕಾರ ನಡೆಸಿ ಅವಳ ಮಾನಭಂಗ ಮಾಡಿದನು. ಹೀಗೆಯೇ ಕೆಲವು ದಿನಗಳು ನಡೆದ ಮೇಲೆ ತಾರಾದೇವಿಯು ಕಾಣೆಯಾದ ವಿಚಾರವನ್ನು ಜಾಮಿರನು ಒಂದು ಪತ್ರಿಕೆಯಲ್ಲಿ ನೋಡಿ, ಅವಳು ಪ್ರಾಯಕ್ಕೆ ಬಂದಿರುವಳೆಂದು ಡಾಕ್ಟರರ ಸುಳ್ಳು ಸರ್ಟಿಫಿಕೇಟನ್ನು ಪಡೆಯಲೋಸುಗ ಅವಳನ್ನು ದಯಾನಾರ್‍ಯಾನನೂ ಜಾಮೀರನೂ ಕೂಡಿ ಖಾಂಡಾ ಎಂಬ ಊರಿಗೆ ಕೊಂಡೊಯ್ದರು. ಅಲ್ಲಿಯ ಸರ್ಜನರು ಸುಳ್ಳು ಸರ್ಟಿಫಿಕೇಟನ್ನು ಕೊಡಲೊಪ್ಪಲಿಲ್ಲ. ಅನಂತರ ಅಲ್ಲಿ ಅವಳಿಗೆ ಸಂಗೀತ ನಾಟ್ಯ ಅಭ್ಯಾಸಗಳನ್ನು ಕೊಡಲಾಯಿತು. ದಯಾನಾರ್‍ಯಾನನ ಮತ್ತು ಜಾಮೀರನ ಬಲಾತ್ಕಾರದಿಂದ ಅವಳು ವೇಶ್ಯಾವೃತ್ತಿಯನ್ನು ಅನುಸರಿಸಬೇಕಾಯಿತು. ಅವರ ಪತ್ತೆಹಚ್ಚಿ ಪೋಲೀಸರು ಮನೆಯನ್ನು ಹುಡುಕುವಾಗ ತಾರಾಳು ತಾನು ವೇಶ್ಯೆಯೆಂದು ಹೇಳಿದಳಂತೆ. ಹಾಗೂ ಅಲ್ಲಿಂದ ತಪ್ಪಿಸಿಕೊಂಡರು. ಅಲ್ಲಿಂದ ಅವರು ಕಾನ್ಪುರಕ್ಕೆ ಬಂದರು. ಅಲ್ಲಿಯೂ ಅದೇ ವೃತ್ತಿಯನ್ನು ಆರಂಭಿಸಬೇಕಾಯಿತು. ದುಡಿದ ಹಣವು ದಯಾನಾರ್‍ಯಾನನ ಕೈಸೇರುತ್ತಿತ್ತು. ಕಾನ್ಪೂರದಲ್ಲಿ ಇವರೆಲ್ಲರ ಪತ್ತೆಹಚ್ಚಲಾಗಿ, ಈಗ ಎಲ್ಲರೂ ಕೋರ್ಟಿನಲ್ಲಿರುವರು

ಡಾರ್ಜಿಲಿಂಗಿನ ಸಿಲಿಗುರಿ ಎಂಬ ಊರಿನಲ್ಲಿ ಸೂರ್ಶಿ ಕಾಹಾರ್ಸಿ ಎಂಬೋರ್ವ ವಿವಾಹಿತ ತರುಣಿಯು ಚೂಲ್ಕೈ ಮಿಸ್ತ್ರಿ ಎಂಬ ತನ್ನ ತಂದೆಯನ್ನು ಬಿಟ್ಟು ದೇವಿದಯಾಲ್ ಎಂಬ ಒಬ್ಬ ಬಂಗಾಳಿಯೊಡನೆ ವಾಸಿಸತೊಡಗಿದಳು. ಅವಳ ತಂದೆಯು ಸರಕಾರಕ್ಕೆ ಬರಕೊಂಡಾಗ ಅಧಿಕಾರಿಗಳು ತರುಣಿಯನ್ನು ಕೋರ್ಟಿಗೆ ಹಾಜರುಪಡಿಸಿದರು. ಅಲ್ಲಿ, ಹುಡುಗಿಯು ತಾನು ವಿವಾಹಿತಳಿದ್ದು, ಗಂಡನು ತನ್ನನ್ನು ಬಿಟ್ಟಿರುವುದರಿಂದ ಮದುವೆಯ ಸಂಬಂಧವು ಆಗಲೇ ಕಡಿದಿರುವುದೆಂತಲೂ, ಆ ಮೇಲೆ ತಾನು ಪ್ರೀತಿಮಾಡಿದ ಬಂಗಾಳಿಯಾದ ದೇವಿದಯಾಳನಲ್ಲಿ ತಾನು ಇಚ್ಛಾನುಸಾರವಿರಲು ತನಗೆ ಹಕ್ಕಿರುವುದೆಂತಲೂ ಪ್ರತಿಪಾದಿಸಿದಳು. ತಂದೆಯು ತಾನು ಬಿಹಾರಿಯಾಗಿದ್ದು ಯಾವ ಸಂಬಂಧವೂ ಇಲ್ಲದ ಬಂಗಾಳಿಯೊಡನೆ ತನ್ನ ಮಗಳು ಸಂಬಂಧ ಬೆಳೆಸಿದರೆ ತನ್ನನ್ನು ಜಾತಿಯಿಂದ ಹೊರಗಿಡುವರಾಗಿಯೂ, ಅಲ್ಲದೆ ಹುಡುಗಿಯು ಇನ್ನೂ ೧೪ ವರ್ಷದವಳಿರುವಳೆಂದೂ ತರ್ಕಿಸಿದನು. ಜಡ್ಜರು ತನಿಖೆ ನಡೆಸಿ ಹುಡುಗಿಗೆ ೨೧ ವರ್ಷ ಪ್ರಾಯ ಮಿಕ್ಕಿದೆಯಾಗಿಯೂ, ಆ ಪ್ರಯುಕ್ತ ಅವಳ ಗಂಡನು ಅವಳನ್ನು ಬಿಟ್ಟ ಮೇಲೆ ಯಾರನ್ನಾದರೂ ಸೇರಲು ಅವಳಿಗೆ ಹಕ್ಕಿರುವುದೆಂತಲೂ ತೀರ್ಪುಕೊಟ್ಟರು.

ವಿ. ಡಿ. ಸವಾರ್‌ಕರರ ಬಿಡುಗಡೆ.

27 ವರ್ಷಗಳ ಅಖಂಡ ಕಾರಾಗ್ರಹವಾಸ

೧೯೧೦ರಲ್ಲಿ ಇಂಗ್ಲೆಂಡಿನಲ್ಲಿ ಉಚ್ಚಶಿಕ್ಷಣ ಪಡೆಯುತ್ತಿದ್ದು, ರಾಜಕೀಯ ಕ್ರಾಂತಿಕಾರ ಚಳವಳಿಗಾರರೆಂದು ಇಂಗ್ಲೆಂಡಿನಲ್ಲಿಯೇ ಕೈದು ಮಾಡಲ್ಪಟ್ಟ ವಿ. ಡಿ. ಸವಾರ್‌ಕರರನ್ನು ಯಾವ ಶರ್ತಗಳಿಲ್ಲದೆ ಬಿಡುಗಡೆ ಮಾಡಿರುವರು.

○ ○ ○

ಕಿರೀಟಧಾರಣೆಯ ಉತ್ಸವ ಸಂಬಂಧವಾಗಿ ಶೋಲಾಪುರದಲ್ಲಿ ಏರ್ಪಡಿಸಿದ ಒಂದು ಧರ್ಮಾರ್ಥ ಸಿನೆಮಾ ಪ್ರದರ್ಶನಕ್ಕೆ ಜನರ ನುಗ್ಗಾಟವು ವಿಪರೀತವಾದ ಪರಿಣಾಮದಿಂದ ಮೂರು ಜನರು ಮರಣಪಟ್ಟರಂತೆ ಅನೇಕರಿಗೆ ಘಾಯಗಳಾಗಿವೆ.

○ ○ ○

ಅಹಮ್ಮದಾಬಾದಿನ ಹತ್ತಿರದ ಗೋಗಾ ಎಂಬ ಹಳ್ಳಿಯಲ್ಲಿ ಒಂದು ಸಂಸಾರದ ಮನೆಯಲ್ಲಿ ಎರಡು ಮಕ್ಕಳು ಆಡುತ್ತಿದ್ದಾಗ ಅಕಸ್ಮಾತ್ ಬೆಂಕಿ ತಗಲಿ ಮನೆಯು ಭಸ್ಮವಾಯಿತು. ಮಕ್ಕಳು ಬೈಹುಲ್ಲಿನ ಮನೆಯನ್ನು ಹೊಕ್ಕು ಬೆಂಕಿಕಡ್ಡಿಯನ್ನು ಗೀಚಿಬಿಟ್ಟರಂತೆ. ತತಕ್ಷಣ ಉರಿಯು ಅಗಾಧವಾಗಿ ನೆರೆಯವರು ಸಹಾಯಕ್ಕೆ ಬರುವುದರೊಳಗೆ ೨ ಮಕ್ಕಳೂ ಅವುಗಳ ತಾಯಿಯೂ ಸುಟ್ಟು ಬೂದಿಯಾದರು.

○ ○ ○

ಶ್ರೀ. ಕೆ. ಎಫ್. ನರಿಮಾನರು.



ಬರುವ ತಿಂಗಳು ಬೆಳಗಾಂವಿನಲ್ಲಿ ಜರಗುವ ದಕ್ಷಿಣದ ಜನರ ಸಮ್ಮೇಳನಕ್ಕೆ ಶ್ರೀ. ಕೆ. ಎಫ್. ನರಿಮನರು ಅಧ್ಯಕ್ಷರಾಗುವರೆಂದು ತಿಳಿದುಬಂದಿದೆ.

○ ○ ○ ○

ಪಾಟ್ನದ ಬಳಿಯ ಸಾಡಿಸೊಪುರ್ ಎಂಬ ಹಳ್ಳಿಯ ಪೋಸ್ಟ್ ಆಫೀಸಿನಿಂದ ಅಲ್ಲಿನ ಪೇದೆಯು ಟಪ್ಪಾಲು ಚೀಲವನ್ನು ರೇಲ್ವೆ ಸ್ಟೇಶನಿಗೆ ಒಯ್ಯುತ್ತಿದ್ದಾಗ ನೂರು ಮಂದಿ ಡಕಾಯಿತರು ಅವನನ್ನು ತಡೆದು ಖಡ್ಗಧಾರಿಯನ್ನು ತೋರಿಸಿ ಟಪ್ಪಾಲು ಚೀಲವನ್ನು ಅಪಹರಿಸಿದರು. ಸುಮಾರು ಒಂದು ಸಾವಿರ ರೂಪಾಯಿಯ ನೋಟುಗಳೂ ಚಿಲ್ಲರೆ ರೂಪಾಯಿಗಳೂ ಅದರಲ್ಲಿದ್ದವೆಂದು ತಿಳಿದು ಬರುತ್ತದೆ.

○ ○ ○ ○ ○

ಒಂದು ಸಾಧಾರಣ ಬೆಳೆದ ಕಿತ್ತಳೆ ಹಣ್ಣಿನ ಮರವು ಒಂದು ಕಾಲಕ್ಕೆ ೨ ಲಕ್ಷ ಹಣ್ಣುಗಳನ್ನು ಕೊಡುವುದಂತೆ.

ಪ್ರಧಾನ ಸ್ಕೌಟ್ ಬೇಡನ್ ಪೊವೆಲ್ಲರು!

ಇಂಡಿಯದ ವಿಷಯ ಅವರ ಸೌಮ್ಯ ಅಭಿಪ್ರಾಯವೇ

ಶೀಲಾರೋಗ್ಯ ಐಕ್ಯತೆಗಳ ಕೊರತೆಯಂತೆ.

ಭಾರತಕ್ಕೆ ಸ್ಕೌಟ ಚಳವಳದಿಂದ ಬಹಳ ಒಳಿತಾಗಿದೆಯಂತೆ.

ಡಿಲ್ಲಿಯಲ್ಲಿ ಜರಗಿದ ಅಖಿಲ ಭಾರತ ಸ್ಕೌಟು ಜಂಬೂರಿಗಾಗಿ ದಯಮಾಡಿಸಿದ ಪ್ರಪಂಚದ ಚೀಫ್ ಸ್ಕೌಟರಾದ ಲೋರ್ಡ್ ಬೇಡನ್ ಪೊವೆಲ್ಲರು, ಭಾರತ ಸಂಚಾರವನ್ನು ಮುಗಿಸಿ ತಮ್ಮ ತಾಯಿನಾಡನ್ನು ಸೇರಿದೊಡನೇ ಅವರನ್ನು ಮುತ್ತಿದ ಕೆಲವು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಒಂದು ಹೇಳಿಕೆಯಲ್ಲಿ 'ಭಾರತ ಜನಾಂಗವು ಇಂದು ಪ್ರಾಮುಖ್ಯವಾದ ಮೂರು ಕೊರತೆಗಳಿಂದ ನರಳುತ್ತಿದೆ' ಎಂದರು. ಅವರು ಹೇಳಿದ ಕೊರತೆಗಳೆಂದರೆ, ಶೀಲ (character) ಅಭಾವ, ಆರೋಗ್ಯ ಅಭಾವ, ಐಕ್ಯತೆಯ ಕೊರತೆ, ಇವಿಷ್ಟು. Honour ಅಥವಾ ಗೌರವ ಎಂಬರ್ಥದ ಇಂಗ್ಲಿಷ್ ಶಬ್ದಕ್ಕೆ ಸರಿಯಾಗಿ ಅರ್ಥ ಕೊಡುವ ಹಿಂದೂಸ್ಥಾನಿ ಶಬ್ದವು ಅವರಿಗೆ ಸಿಗಲಿಲ್ಲವಂತೆ. ಗೌರವ ಅರ್ಥ ಕೊಡುವ ಆಂಗ್ಲ ಶಬ್ದವನ್ನು ನಿರೂಪಿಸುವುದಕ್ಕೆ ಒಂದು ವಾಕ್ಯವನ್ನೇ ರಚಿಸುವ ಆವಶ್ಯಕತೆಯು ಅವರಿಗೆ ಉಂಟಾಯಿತಂತೆ.

ಇಂಡಿಯಾದಲ್ಲಿ ಸ್ಕೌಟ್ ಚಳವಳವು ಬಹು ಜನ ಪ್ರಿಯತೆಯನ್ನು ಪಡೆದಿದ್ದು ಅನೇಕ ತರದ ಸುಧಾರಣೆಗಳು ಅದರಿಂದ ಪ್ರಗತಿ ಹೊಂದುವಂತಾಗಿವೆ ಎಂದು ಅವರು ತೃಪ್ತಿ ಪಡುತ್ತಲಿದ್ದಾರೆ. ಗರ್ಲ್ ಗ್ಯಾಡ್ ಅಥವಾ ನಾರೀ ದಳಗಳೂ ಬಹು ತೃಪ್ತಿಕರವಾಗಿ ಕೆಲಸ ಮಾಡುತ್ತಲಿದ್ದು, ಅವುಗಳಿಂದ ಅನೇಕ ಸ್ತ್ರೀ ಸುಧಾರಣೆಗಳಾಗಿವೆಯೆಂದು ಅವರು ಹೃಷ್ಟಪಟ್ಟಿರುವರು

ಬೇಡನ್ ಪೊವೆಲ್ಲರು ಹೇಳುತ್ತಿರುವ ಶೀಲ (ಕೆರೆಕ್ಟರ್) ಅಭಾವವು ಯಾವುದೋ ಬಹುಶಃ? ಸಾಮಾನ್ಯವಾಗಿ ಪಶ್ಚಿಮದ ಪೂರ್ವಕ್ಕಿರುವ ಜನರು ಬಹಳ ಸತ್ಕಾರ ಶೀಲತೆಗೆ (Hospitality) ಹೆಸರುಹೊಂದಿದವರು. "Indians and Japanese are a very polite and hospital nation as whole" ಎಂದು ಅನೇಕಾನೇಕ ಆಂಗ್ಲ ಚರಿತ್ರಕಾರರೂ ಅಭಿಪ್ರಾಯಪಟ್ಟಿರುತ್ತಾರೆ. ಉತ್ತಮ ಕಲಾ ಪರಿಪೂರ್ಣತೆಗೂ, ಉತ್ತಮ ದೇಶಾಭಿಮಾನಕ್ಕೂ ಉಜ್ವಲ ಧರ್ಮ ಸಂಸ್ಥಾಪನೆಗಳಿಗೂ ಹೆಸರು ಹೋದ ಈ ಪುರಾಣಭೂಮಿಯಲ್ಲಿ ಪೊವೆಲ್ಲರು ಯಾವ ತರದ ಶೀಲ ಅಭಾವವನ್ನು ಕಂಡರೋ ತಿಳಿಯದಾಗಿದೆ.

ಇಲ್ಲಿಗೆ ಬಂದಿದ್ದಾಗ ಭಾರೀ ಸತ್ಕಾರಗಳನ್ನು ಪಡೆದು ಸುಖವಾಗಿ ಸ್ಪೆಶ್ಯಲ್ ಕೆಬಿನುಗಳ ರೈಲುಗಾಡಿಗಳಲ್ಲಿ ಪ್ರಯಾಣ ಮಾಡಿ ಕೆಲವು ಅಧಿಕಾರಿಗಳ ಪ್ರೋತ್ಸಾಹದಿಂದ ಏರ್ಪಡಿಸಲ್ಪಟ್ಟ ಕೆಲವು ಸ್ಕೌಟು ದಳದ ಪ್ರದರ್ಶನಗಳನ್ನು ಕಂಡು ಬಹಳ ತೃಪ್ತಿಪಟ್ಟಂತೆ ನಟಿಸಿ ಇಲ್ಲಿಂದ ಹೊರಟುಹೋದ ಪೊವೆಲ್ಲರು ಶ್ವೇತದ್ವೀಪದ ತೀರಗಳನ್ನು ಸೇರಿದೊಡನೆ ಇಂಥ ಅಭಿಪ್ರಾಯಗಳನ್ನು ಕೊಡುವುದೂ ಒಂದು ಶೀಲವೇ ಎಂದು ಕೆಲವು ತಿಳಿದವರು ಪ್ರಶ್ನಿಸುತ್ತಾರೆ.

ತಾವು ಸಂದರ್ಶಿಸಿದ ಭಾರತದ ಸ್ಕೌಟ್ ದಳದೊಳಗೂ ಗರ್ಲ್ ಗ್ಯಾಡ್ ಸಂಘಗಳೊಳಗೂ ಸಂಚರಿಸಿ ಅನುಭವವಿದ್ದವರಾದ ಕಾರಣ ಪೊವೆಲ್ಲರು ಕೆಲವೊಂದು ತುಚ್ಛವಾದ ಕೊರತೆಗಳನ್ನು ಕಂಡಿರಬೇಕು. ಈ ಕೊರತೆಗಳು ಸಾಧಾರಣವಾಗಿ ಆಯಾ ಊರಿನ ಜನರಿಗೆಲ್ಲರಿಗೂ ಗೊತ್ತಿದ್ದ ವಿಷಯಗಳೇ ಆಗಿರುತ್ತವೆ. ಇಷ್ಟು ಮಾತ್ರಕ್ಕೆ ಪೊವೆಲ್ಲರು ಇಡೀ ಜನಾಂಗವನ್ನು ಟೀಕೆಗೆ ಒಳಪಡಿಸುವುದು ಸೌಮ್ಯವಾದ ಶೀಲವೆಂದು ದೇಶಪ್ರೇಮಿಗಳಾರೂ ಒಪ್ಪಲಾರರು. ಪೊವೆಲ್ಲರ ಸ್ಕೌಟು ದಳದಿಂದ ಏನೆಲ್ಲ ಸುಧಾರಣೆಗಳಾಗಿವೆ, ಅದರಿಂದ ದೇಶಹಿತವು ಎಷ್ಟು ಸಾಧಿಸಲ್ಪಟ್ಟಿದೆ, ಅದರಲ್ಲಿ ತರಬೇತಿ ಹೊಂದಿದ ಸ್ಕೌಟರುಗಳು ಇಂದು ಎಷ್ಟು ದೇಶಸೇವಾತುರರಾಗಿರುವರು ಎಂಬ ವಿಷಯವು ಹಿಂದೂಳಿದ್ದವನಿಗೆ ತಿಳಿಯದೆ ಇಲ್ಲ. ಯಾವನೊಬ್ಬ ಆಂಗ್ಲೇಯನು ತನ್ನ ಜನಾಂಗದ ರೀತಿನೀತಿಗಳ ಅಳತೆಯಿಂದ ಆ ಜನಾಂಗದ ಬದ್ಧ ವಿರೋಧಾಭಿಮುಖದ ರೀತಿನೀತಿಗಳನ್ನನುಸರಿಸಿ ಒಂದು ಜನಾಂಗವನ್ನು ಅಳೆಯುವುದು ಯಾವ ಶೀಲವೂ ಅಲ್ಲ.

ಸರಿಯಾಗಿ ಯೋಚಿಸಿದರೆ, ಭಾರತಕ್ಕೆ ಪೊವೆಲ್ಲರ ಸ್ಕೌಟ್ ದಳದ ಒಂದು ಅವಶ್ಯಕತೆಯಿದೆ ಎಂದು ಭಾವಿಸುವವರು ಎಷ್ಟು ಮಂದಿ ಸಿಗಬಹುದು. ಈ ಸ್ಕೌಟ್ ಚಳವಳವು ಸರಕಾರದಧಿಕಾರಿಗಳ ಕೆಲವರ ಸೃಷ್ಟಿಯಲ್ಲದೆ ಇದರಿಂದ ಹೆಚ್ಚಿನ ಪ್ರಯೋಜನವಿಲ್ಲವೆಂಬ ಸಂಗತಿಯನ್ನು ಬಿಡಿಸಿ ಹೇಳುವ ಅವಶ್ಯಕತೆ ಇಲ್ಲ.

(೭ನೇ ಪುಟದಲ್ಲಿ ಮುಂದುವರಿದಿದೆ)



ಪರಿವಿಡಿ

ಬಿಡಿಪುಟಗಳು
... ರಚನಾತ್ಮಕ ಕಾರ್ಯಗಳು
... ಎಸ್. ಯಾತ್ರೆ
ಸ್ಥಳೀಕ ವಾರ್ತೆಗಳು
ಹುಡುಗಿಯರ ಕಳವು
ಅಗ್ರಲೇಖ
ಮುಸ್ಲಿಮರ ಪರಿಷತ್ತು
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ವಿವಿಧ ಸಮಾಚಾರಗಳು
ಮಂಗಳೂರು ಸಮಾಚಾರ
ತಾಲೂಕುಗಳಿಂದ
ಕರ್ನಾಟಕ ಸಾಹಿತ್ಯ
ಅಕ್ಕಿ ಮಿಲ್ಲುಗಳನ್ನು ಮುಚ್ಚಿ!

ತಾ. ೨೧ನೇ ಶುಕ್ರವಾರ ಮೇ ೧೯೩೭

ಸ್ವದೇಶಾಭಿಮಾನಿ

ಮುಸ್ಲಿಮರ ಪರಿಷತ್ತು

'ಮುಸ್ಲಿಮರ ಏಕಮಾತ್ರ ಕರ್ತವ್ಯವೆಂದರೆ, ನಿರ್ವಿವಾದವಾಗಿ ಯಾವ ಶರ್ತಗಳೂ ಇಲ್ಲದೆ, ರಾಷ್ಟ್ರಸಭೆಯನ್ನು ಸೇರಿ, ದೇಶದ ಸ್ವಾತಂತ್ರ್ಯಸಾಧನೆಗಾಗಿ ಪೋರಾಡುವುದೇ ಆಗಿದೆ' ಎಂಬ ಒಂದು ನಿರ್ಧಾರವನ್ನು ಅಲ್ಲಹಾಬಾದಿನಲ್ಲಿ ಜರುಗಿದ ಕೊಂಗ್ರೆಸ್ ಸಭಾ ಪಾತ್ರ್ಯವುಳ್ಳ ಮುಸ್ಲಿಮರ ಒಂದು ಪರಿಷತ್ತು ಮಂಜೂರು ಮಾಡಿರುವುದು.

ದೇಶದ ಸ್ವಾತಂತ್ರ್ಯ ಸಾಧನೆಗಾಗಿ ನಡೆವ ಪೋರಾಟಗಳಲ್ಲಿ ಇದೊಂದು ಮುಖ್ಯ ವಿಷಯವೆಂದು ಹೆಚ್ಚೆ ಮುಂದಕ್ಕೆ ಜನಾಂಗವು ಕಾಲಿಡಲು ನಿರ್ಧರಿಸಿದಂತಾಗಿದೆ.

ಈ ಪೋರಾಟದಲ್ಲಿ ಇತರರೊಡನೆ ಸೇರಿ ತಮ್ಮ ಜನ್ಮದ ಕರ್ತವ್ಯವನ್ನು ಜನ್ಮಭೂಮಿಯ ಸೇವೆಗಾಗಿ ಮಾಡುತ್ತಿರುವ ಸಂದರ್ಭದಲ್ಲಿ, ಯಾವುದೊಂದು ಬಗೆಯ ಶರ್ತಗಳನ್ನು ಹೇಳಿದಾಗಾದಲ್ಲಿ ಮಾತ್ರ ನಾವಿದ್ದೇವೆ ಎನ್ನುವುದು ಉಚಿತವಾದುದಲ್ಲ. ಶರ್ತಕ್ಕೊಳಪಟ್ಟ ಕರ್ತವ್ಯ ಎಂದರೆ ಕರ್ತವ್ಯವೇ ಅಲ್ಲ. ಈ ದೇಶವು ಹಿಂದುಗಳದೇ ಎಂದೇನೂ ಶಾಸನವಿಲ್ಲ. ಮುಸ್ಲಿಮರಿಗೂ ಅಷ್ಟೇ ಹಕ್ಕು ಇದೆ. ಮುಸ್ಲಿಮ ದೇಶಸೇವಕನು ಕೇಳುವ, ಹಿಂದೂ ದೇಶಸೇವಕನು ಒಪ್ಪುವ ಎಂಬ ತೆರದ ಶರ್ತಗಳಾವುವೂ ಇರಲಾರವು, ಇಬ್ಬರಿಗೂ ಗೌರವವೂ ಆತ್ಮವಿಕಾಸವೂ ಒಂದೇ ರೀತಿ. ಸ್ವಾತಂತ್ರ್ಯವೂ ಇಬ್ಬರಿಗೂ ಬೇಕಾದುದು.

ಹಿಂದುಗಳಾಗಲಿ ರಾಜಕೀಯ ರಂಗದಲ್ಲಿ ಒಂದೇ ಪಂಗಡವಾಗಿಲ್ಲ. ಅವರೊಳಗೇ ಎಷ್ಟೋ ಪಕ್ಷಗಳಿವೆ. ಸ್ವರಾಜ್ಯ ಸಾಧನೆ ಮಾತ್ರ ಎಲ್ಲರಿಗೂ ಬೇಕಾದುದು. ಮುಸ್ಲಿಮರ ಮುಖವಾಗಿ ಜಿನ್ನರಾಗಲಿ ಇತರರಾರೇ ಆಗಲಿ ಇಬ್ಬರೇ ಮಾತಾಡಲು ಅಧಿಕೃತರಾಗಿಲ್ಲ. ಅದರಂತೆಯೆ, ಮಹಾತ್ಮಾಜಿಯಾಗಲಿ ಪಂಡಿತ ಜವಾಹರಲಾಲರೇ ಆಗಲಿ ಹಿಂದುಗಳೆಲ್ಲರ ಪರವಾಗಿ ಒಬ್ಬರೇ ಎಂದೂ ಪ್ರಾತಿನಿಧ್ಯ ವಹಿಸಲಾರರು. ಯಾವ ತತ್ವಗಳನ್ನಾದರಿಸಿ ಕಾರ್ಯ ಮಾಡುತ್ತಿರುವಾಗ ಎಲ್ಲರೂ ಒಂದಾಗಿ ಕೆಲಸ ಮಾಡಬಹುದೋ ಆ ತತ್ವಗಳೇ ಮಾತ್ರ ಸರ್ವರ ಅಂಗೀಕಾರಕ್ಕೆ ಯೋಗ್ಯವಾಗಿವೆ. ಈ ತತ್ವಗಳಿಗಾಗಿ ಹೋರಾಟವಾಗುತ್ತಲೇ ಇದೆ. ಹೀಗಿರುವಾಗ ಮತವಿಚಾರಗಳನ್ನು ಹಿಡಿದುಕೊಂಡು ಜಗಳಗಂಟಿತನವನ್ನು ಮುಂದರಿಸುವುದು ಇಬ್ಬರಿಗೂ ವಿಹಿತವಲ್ಲ. ಮತ ಎಂದು ಕುರುಡು ಬುದ್ಧಿಯನ್ನು ಹಿಡಿದ ಜನಾಂಗಗಳು ರಾಷ್ಟ್ರವನ್ನು ವಿನಾಶಕ್ಕೊಪ್ಪಿಸಿದುದುಂಟು. ಮತಸಂಬಂಧವಾಗಿ, ಹಿಂದುಗಳಾಗಲಿ ಮುಸ್ಲಿಮರಾಗಲಿ ಯಾವ ಕಾಲಕ್ಕೆ ಗಂಡಾಂತರವಿಲ್ಲೆಂದು ದೃಢಪಡುವರೋ ಆಗ, ತೀವ್ರಗಾಮಿ ಉದಾರ ಧನಿ ಕೂಲಿ ಇತ್ಯಾದಿ ಪಂಗಡಗಳಾಗಿ ಹಿಂದುಗಳೂ ಮುಸ್ಲಿಮರೂ ನಾನಾ ಪಕ್ಷಕಟ್ಟಿಕೊಳ್ಳುವರು.

ಜಾತಿ ವಿಚಾರವನ್ನು ಮುಂದಕ್ಕೆ ತಂದು, ಮೇಲಕ್ಕೆ ಎತ್ತಿ ಹಿಡಿದು, ಇದರಿಂದ ಪ್ರಯೋಜನ ಪಡೆಯಲು ಪೋರಾಡುವವರು ಭಾಂಡವಳಿಗರು. ಧರ್ಮದ ಹೆಸರಲ್ಲಿ ಪಂಗಡಗಳಾಗುವಂತೆ ಮಾಡುವವರು, ತಮ್ಮ ಅಧಿಕಾರ ಮಹತ್ವ ಕುಂದದಂತಾಗಬೇಕೆಂಬ ಕಡು ಪುರಾತನವಾದಿಗಳು. ಮುಸ್ಲಿಮ ಜನತೆಯು ನಿರೀಕ್ಷಿಸುವ ಭವಿಷ್ಯವೂ ಹಿಂದೂ ಜನತೆಯು ನಿರೀಕ್ಷಿಸುವ ಭವಿಷ್ಯವೂ ಬೇರೆ ಬೇರೆಯಾಗಿಲ್ಲ. ಇಬ್ಬರ ಆಶಾಕಾಂಕ್ಷೆಗಳೂ ಒಂದೇ.

ಸಾಂಪತ್ತಿಕ ವಿಚಾರಗಳು ಮುಖ್ಯವಾಗಿ ತಲೆದೋರಿದುದರ ಫಲವಾಗಿ, ಜ್ಞಾತಿಗಳ ದುರ್ಗಂಧವು ಅಡಗುವ ಹಾಗಾಗಿದೆ. ಬಡತನವು ಮುಗಿದು ಸುಖಜೀವನವು ಎಲ್ಲರಿಗೂ ಬೇಕಾದುದು. ಇದಕ್ಕಾಗಿ ಎಲ್ಲರೂ ಪೋರಾಡಬೇಕು. ಧರ್ಮದ ಹೆಸರನ್ನೆತ್ತಿ ಸ್ವರ್ಗವೋ ಮೋಕ್ಷವೋ ತಪ್ಪುವುದಾಗಿ ಸಾರುವವರು, ಮತದ ಅಮಲನ್ನು ಜನರಿಗೆ ಕುಡಿಸುತ್ತ, ವಾಸ್ತವ ವಿಷಯಗಳಲ್ಲಿ ಜನರು ಎಲ್ಲವನ್ನೂ ಮರೆಯುವಂತೆ ಮಾಡುವರು. ಸ್ವರ್ಗದ ಯೋಚನೆಯ ನಿಮಿಷಗಳು ಮುಗಿಯುತ್ತಲೆ, ಮನುಷ್ಯನು ಭೂಮಿಯ ಫಲವಸ್ತುಗಳಲ್ಲಿ ತನ್ನ ಅಂಶವನ್ನು ಅಪೇಕ್ಷಿಸುವನಷ್ಟೆ. ಹೀಗಿರುವ ಕಾರಣವೇ, ಎಲ್ಲಾ ಮನುಷ್ಯರೂ (ಜನತೆ) ಸೇರಿ ಈ ಪ್ರಪಂಚದಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಪೋರಾಡುವರು. ಈ ಪೋರಾಟವು ಸರಿಯಾಗಿ ನಡೆವಂತೆ, ಅಲ್ಲಹಾಬಾದಿನಲ್ಲಿ ಜರುಗಿದ ಸಭೆಯು, ಸಹಜ ಮಾರ್ಗವನ್ನು ಉತ್ತಮೋಪಾಯವನ್ನು ಹೇಳಿಕೊಟ್ಟಿರುವುದು. ಎಲ್ಲರೂ ಕೊಂಗ್ರೆಸನ್ನು ಸೇರಿ ಅಲ್ಲಿ ನಿರ್ಧಾರವಾಗುವಂತೆ ಸ್ವರಾಜ್ಯವನ್ನು ಸಾಧಿಸಿಕೊಳ್ಳಲಿ. ಸ್ವರಾಜ್ಯವು ದೊರೆವಾಗ ಅದು ಅಲ್ಪ ಸಂಖ್ಯಾತರಿಗೆ ಎಷ್ಟು ಚೆನ್ನಾಗಿಯೋ ಅಷ್ಟೆ ಚೆನ್ನಾಗಿ ಅಧಿಕ ಸಂಖ್ಯಾತರಿಗೂ ದೊರೆವುದಲ್ಲವೆ?

ನಮ್ಮಲ್ಲಿನ ಕಲ್ಲಿದ್ದಲು

ಕಲ್ಲಿದ್ದಲು ಈಗ ಪ್ರತಿಯೊಂದು ದೇಶದ ಅಭ್ಯುದಯಕ್ಕೆ ಅಗತ್ಯವಾಗಿಯೂ ಬೇಕಾಗಿರುವ ಶಕ್ತಿ, ಬಲ. ನಮ್ಮಲ್ಲಿ ಎಷ್ಟೋ ಕಲ್ಲಿದ್ದಲು ಗನಿಗಳಿವೆ. ಇವುಗಳ ಆಡಳಿತ ಚೆನ್ನಾಗಿಲ್ಲ. ಮಡಿಯುವ, ಪ್ರಾಣವನ್ನು ನಿಮಿಷಕ್ಕೂ ಅಪಮೃತ್ಯುವಿಗೆ ಈಡಾಗಿರಿಸಿ ದುಡಿಯುವ ಬಡಪಾಯಿಗಳ ಕಷ್ಟದಿಂದ, ಧನಿಗಳ ಜೀವನ ದೂರದ ರಾಜಧಾನಿಗಳಲ್ಲಿ ಸುರಕ್ಷಿತವಾಗಿದೆ. ಆಗಾಗ ಗನಿಗಳು ಕುಸಿದುಬಿದ್ದು ಕೂಲಿಗಳು ಸಾಯುತ್ತಾರೆ. ಜನರು ಸಾಯುವುದಕ್ಕಾಗಿಯೆ ಕೆಲಸಮಾಡುತ್ತಿರುವಂತೆ ತೋರುತ್ತದೆ. ಧನಿಗಳು ಗನಿಗಳನ್ನು ಉತ್ತಮ ರೀತಿಯಲ್ಲಿ ಸುರಕ್ಷಿತವಾಗಿ ಇರಿಸುತ್ತಿಲ್ಲ. ಕಲ್ಲಿದ್ದಲಿನಿಂದ ಲಾಭ ಹೊಂದುವರೆ ಅಗತ್ಯವಾದ ಎಷ್ಟೋ ಪೋರಾಟಮಾಡಿ, ಇದ್ದಲನ್ನು ಮಾರಿ, ಗನಿಗಳನ್ನು ಭದ್ರಪಡಿಸದೆ, ಕೂಲಿಗಳಿಗೆ ಸುಖಕೊಡದೆ ಇರುತ್ತಾರೆ. ಈ ಕಾರಣದಿಂದ, ಸರಕಾರವೇ ಗನಿಗಳ ಸ್ಥಿತಿಯನ್ನು ವಿಚಾರಿಸುವ ಒಂದು ಕಮಿಟಿ ನೇಮಿಸಿತು. ಇನ್ನು 122 ವರ್ಷಗಳಲ್ಲಿ ನಮ್ಮ ಉತ್ತಮ ಕಲ್ಲಿದ್ದಲೆಲ್ಲವು ಮುಗಿಯುವುದಾಗಿ ಈ ಕಮಿಟಿಯ ಅಂದಾಜು ಇದೆ. ದ್ವಿತೀಯ ತರಗತಿಯದು 62 ವರ್ಷಗಳಲ್ಲೇ ಮುಗಿವುದು. ಹೀಗಿರುವ ಕಾರಣ, ದ್ವಿತೀಯ ತರಗತಿಯದನ್ನು ಬೇಕಾದಷ್ಟು ಈಗ ವಿನಿಯೋಗಿಸುತ್ತ ಉಚ್ಚ ತರಗತಿಯದನ್ನು ನಿಧಾನವಾಗಿ ಉಪಯೋಗಿಸುತ್ತ ಬಂದರೆ ಇನ್ನೆಷ್ಟೋ ವರ್ಷ ಹೆಚ್ಚಿಗೆ ಇದ್ದಲು ನಮಗೆ ಉಪಯೋಗಕ್ಕೆ ಬಂದೀತು. ಧನಿಗಳು ಲಾಭದ ಆಶೆಯಿಂದ, ಎಲ್ಲವನ್ನೂ ಬೇಗಬೇಗನೆ ಮಾರುವ ಧರಲ್ಲಿರುವ ಕಾರಣ, ಐವತ್ತು ವರ್ಷಗಳಲ್ಲೇ ಎಲ್ಲ ಇದ್ದಲೂ ಮುಗಿಯಬಹುದು. ಅನಂತರ ಹಿಂದೀಯರು ಕೈಗಾರಿಕೆಗಳಿಗಾಗಿ ಪರದೇಶಗಳ ಮೇಲೆ ಇನ್ನೂ ಹೆಚ್ಚಾಗಿ ಆಧರಿಸಬೇಕಾಗುವುದು.

ದೇಶದ ಗರ್ಭದಲ್ಲಿರುವ ಈ ದಿವ್ಯ ಸಂಪತ್ತು ದೇಶದ ಸಂಪತ್ತಿನ ಜತೆಯಲ್ಲಿ ಇಡೀ ದೇಶಕ್ಕೆ ಸಂಬಂಧಪಟ್ಟುದೇ ಹೊರತು, ಸಾವಿರಕೂಲಿಗಳ ದುಡಿತದಿಂದ ಕೆಲವೇ ಮಂದಿ ಧನಿಗಳು ಸಂಪನ್ನರಾಗುವಂತೆ ದೇವರು ಉಂಟುಮಾಡಿರುವ ಸಂಪತ್ತಲ್ಲ. ಹೀಗೆಂದೇ ಈ ಕಮಿಟಿಯ ಇಬ್ಬರು ಮೆಂಬರರು, ಜನಾಂಗಕ್ಕೆ ಸಂಬಂಧಪಡುವಂತೆ, ಈ ಸಂಪತ್ತನ್ನು ಸರಕಾರವು ವಹಿಸಿಕೊಳ್ಳಬೇಕಾಗಿ ಶಿಫಾರಸು ಬರೆದಿರುವರು. ಆದರೆ, ಜನಾಂಗದ ಈಗಣ ವಿದ್ಯಮಾನಗಳಲ್ಲಿ ರಾಜಕೀಯ ಪ್ರಗತಿಯಲ್ಲಿ ಈಗ ಪರಿಸ್ಥಿತಿ ಹೀಗಿರುವಾಗ, ಗನಿಗಳನ್ನು ಸರಕಾರವು ವಹಿಸಿಕೊಳ್ಳುವುದರಲ್ಲಿ ಅರ್ಥವಿಲ್ಲೆಂದು ಕೆಲವು ಮಂದಿ ಅಧ್ಯರು ಆಕ್ಷೇಪಿಸಿರುವರು. ಎಂದರೆ, ಉತ್ತಮ ತರಗತಿಯ ಕಲ್ಲಿದ್ದಲೆಲ್ಲ ನಾಶ ಮುಗಿದ ಬಳಿಕವೇ ಗನಿಗಳನ್ನು ಜನಾಂಗವು (ಧನಿಗಳಿಗೆ ಜಗ ನಷ್ಟವಾಗುವ ಕಾರಣ) ವಹಿಸಿಕೊಳ್ಳಬೇಕೆ? ಇದೂ ಅಲ್ಲದೆ, ಕಲಿದ್ದಲಿನ ಮೇಲೆ ಸುಂಕವನ್ನು ವಿಧಿಸಿ, ಅದರ ಬಲದಿಂದ, ಕೆಲ ಮಂದಿ ಆಫೀಸರರನ್ನು ಹೆಚ್ಚಿನ ಸಂಬಳಕೊಟ್ಟು ಇಟ್ಟುಕೊಂಡು ಇವರ ಆಡಳಿತದಲ್ಲಿ ಗನಿಗಳನ್ನು ಇಡುವುದೆಂದರೂ ವ್ಯರ್ಥವಲ್ಲವೆ? ರೈಲ್ವೆಗಳು ಅಧಮ ತರಗತಿಯ ಇದ್ದಲನ್ನು ಉಪಯೋಗಿಸಬೇಕಾಗಿಯೂ, ಇದ್ದಲ ಮಾರಾಟಕ್ಕೆ ಒಂದು ಸಮಿತಿಯನ್ನು ನೇಮಿಸಬೇಕಾಗಿಯೂ, ಇತರ ಸೂಚನೆಗಳಾಗಿವೆ.

ಇದನ್ನೆಲ್ಲ ನೋಡುವಾಗ, ನಮ್ಮ ಸುಧಾರಿತ ಸರಕಾರದ ಒಂದು ತತ್ವವು ಪುನಃ ಕಣ್ಣಿಗೆ ಬೀಳುತ್ತದೆ. ಬೇಂಕುಗಳೂ ರೈಲ್ವೆಗಳೂ ಸರಕಾರದ ಸಾಮ್ರಾಜ್ಯ ತತ್ವಕ್ಕೆ ಸಹಾಯಕವಾಗಿರುವಂತೆ ಪ್ರಯತ್ನಗಳಾಗುವುವು. ಕೌನ್ಸಿಲುಗಳ ಅಧಿಕಾರದಿಂದ ಇವನ್ನು ಹೊರಕೊಟ್ಟು, ನಷ್ಟವಾದಂತೆ ಸರಕಾರವು ನಷ್ಟ ತುಂಬಿಸುವ ಹಾಗೂ, ಲಾಭವುಂಟಾದಲ್ಲಿ ಭಾಂಡವಳಿಗರು ಹಣ ಎತ್ತಿಕೊಳ್ಳುವ ಹಾಗೂ ಯಾವ ಸೂತ್ರಗಳನ್ನು ಕೈಗೊಳ್ಳಬಹುದೋ, ಅವನ್ನು ನಮ್ಮ ಸರಕಾರವು ಯಾವಾಗಲು ಅನುಸರಿಸುತ್ತಿರಬೇಕೆ?

ಸ್ಫುಟವಿಚಾರಗಳು

'Honour' ಶಬ್ದವೇ ಹಿಂದುಸ್ಥಾನಿಯಲ್ಲಿಲ್ಲ!

ಸ್ಕೌಟುದಳದಂತಹ ಸೇವಾಧುರಂಧರರ ಮಹತ್ಕಾರ್ಯಗಳ ಪ್ರಶಂಸೆ ಮಾಡುತ್ತ, ದಳ ಸ್ಥಾಪಕ ಲೋರ್ಡಬೇಡನ್ ಪವೆಲ್‌ರವರು, ಹಿಂದೂದೇಶದಲ್ಲಿ ಊನತೆಗಳಿಗಿಂತ ನ್ಯೂನತೆಗಳಾವುವೆಂದು ಹೇಳುವಾಗ,-ಜನರಲ್ಲಿ ಶೀಲವಿಲ್ಲವೆಂಬುದನ್ನು ಸಾರುತ್ತ, Honour ಶಬ್ದವು ಇಂಗ್ಲಿಷಿನಲ್ಲಿದೆಯಾದರೂ, ಅದಕ್ಕೆ ಸಮಾನಾರ್ಥಕೊಡುವ ಪದವು ರಾಷ್ಟ್ರಭಾಷೆಯೆನ್ನುವ ಹಿಂದುಸ್ಥಾನಿಯಲ್ಲಿ ಇಲ್ಲದಿರುವ ಪ್ರಯುಕ್ತ ಆ ಅರ್ಥ ಸೂಚಿಸಲು ಒಂದು ವಾಕ್ಯವನ್ನೆ ಬರೆಯ ಬೇಕಾಯಿತೆಂದೂ, ದೇಶಭಾಷೆಗಳಲ್ಲಿರುವ ಈ ಬಡತನದಿಂದ, ದೇಶಿಯರಲ್ಲಿ ಆ ಗುಣವೇ ಇಲ್ಲವೆಂದೂ ಮೊದಲಾಗಿ ಟೀಕಿಸಿರುವರು. ನೈತಿಕ ಜೀವನಕ್ಕೂ ಪರಮಾತ್ಮ ವಿಚಾರಕ್ಕೂ ಜನ್ಮವನ್ನೆ ಮೀಸಲಾಗಿರಿಸಿ ಅತಿ ಪ್ರಾಚೀನ ಕಾಲದಿಂದಲೂ ಮೆರೆದ ಆರ್ಯ ಜನಾಂಗದ ಮಾತಂತಿರಲಿ, ಪ್ರಪಂಚಕ್ಕೇ ಸುಶೀಲದ ಮಾದರಿಯನ್ನ ಈ ಕಲಿಯುಗದಲ್ಲಿ ಹಾಕಿಕೊಟ್ಟಿರುವ ಮಹಾತ್ಮಾಜೀಯವರ ನೆನಪಾದರೂ ಈ ಲೋರ್ಡರಿಗೆ ಆಗದೆ ಇದ್ದುದು ಶೋಚನೀಯ. ನಮ್ಮವರಿಗೆ Honour ಇಲ್ಲ ನಿಜ, ಇದ್ದಿದ್ದರೆ ಸೇವಾಸಮಿತಿಯಂತಹ ಅಚ್ಚ ಸ್ವದೇಶೀ ಸಂಸ್ಥೆಯನ್ನೆ ಬಿಟ್ಟು, ಸೋದರತೆ ಸಾರುತ್ತ ವರ್ಣಬೇಧವನ್ನೆ ತೋರಿಸಿ ಬರುವ ಈ ಸ್ಕೌಟ ಸಂಸ್ಥೆಗೆ ಯುವಕರನ್ನು ಏಕೆ ಸೇರಿಸಿ ಭಾರೀ ಆಡಂಬರಪೂರ್ಣವಾಗಿ ಹೆಗ್ಗಳಿಸಿಕೊಳ್ಳುತ್ತಿದ್ದರೇ? ಅದರಲಿ — ಇನ್ನಾದರೂ ನಮ್ಮ ಸಂಸ್ಥೆಗಳಲ್ಲೇ ಸೇರುವ ಗೌರವವನ್ನಿಟ್ಟುಕೊಳ್ಳುವ ಶೀಲವನ್ನು ಪಾಲಿಸುತ್ತ ಒಂದಾಗದೆ? ಅರ್ಥವಿಲ್ಲದ Honour ಇರುವ ಸ್ಕೌಟದಳವನ್ನು ಅಲ್ಲಲ್ಲೇ ಶೃಂಗಾರಕ್ಕಾಗಿ ಇಟ್ಟುಕೊಳ್ಳುವರೇ? ಸ್ಕೌಟದಳಗಳಲ್ಲಿ ಎಷ್ಟೋ ಭಯಂಕರ Honour ನವು ಇವೆ ಎಂದ ... ಅರಿಯವೆ? ಸಾಕ.

ರಾಷ್ಟ್ರಧ್ವಜ ಪ್ರದರ್ಶನ ಕೂಡದು

ಕಿರೀಟಧಾರಣೋತ್ಸವವನ್ನು ಆಚರಿಸುವರೆ ಹಣವನ್ನು ವ ... ವಿಶೇಷ ಧ್ವಜದೊಡನೆ ರಾಷ್ಟ್ರಧ್ವಜ ... ತೂಗಿಸಬೇಕೆಂದು ... ನಿರ್ಧಾರ ಮಾಡಿದ್ದಿತು. ಅದನ್ನು ... ವ ದ್ರಾಸು ಸರಕಾರವು ಎಲ್ಲ ... ಬೋರ್ಡುಗಳಿಗೂ ಮುನಿಸಿಪಾಲಿಟಿಗಳಿಗೂ, ಈಗ ಆಜ್ಞೆ ಹೊರಡಿಸಿರುವುದು. ಬ್ರಿಟಿಷ ಧ್ವಜದೊಡನೆಯಾಗಲಿ, ಒಂದೇಯಾಗಿಯಾಗಲಿ ರಾಷ್ಟ್ರಧ್ವಜವನ್ನು ಪ್ರದರ್ಶಿಸುವುದು ರಾಜಭಕ್ತಿಗೆ ವಿರುದ್ಧವಾಗಿದೆ. ಈ ವಿಚಾರದಲ್ಲಿ ರಾಷ್ಟ್ರಧ್ವಜವನ್ನು ಪ್ರದರ್ಶಿಸುವವರೆ ಯಾವುದೊಂದು ನಿರ್ಣಯವನ್ನು ಮಾಡಿದ್ದಿದ್ದರೆ, ಅದನ್ನು ಜ್ಯಾರಿಗೆ ತರಬಾರದ. ಲೋಕಲ್ ಸೆಲ್ಫ್ ಗವರ್ನಮೆಂಟ್ ಇಲಾಖಾ ಸೆಕ್ರೆಟರಿಯಾದ ರಸ್ಸೆಲ್ ಸಾಹೇಬರು ಸಹಿಮೂಲಕ ಕೊಟ್ಟಿರುವ ಈ ಸರ್ಕಲಾರನ್ನು, ನಮ್ಮ ತಾತ್ಕಾಲಿಕ ಮಂತ್ರಿಗಳು ನೋಡಿರಬೇಕು. ಹೊಸ ಸ್ವರಾಜ್ಯ ತಂತ್ರವು ಎಷ್ಟರದು? ಎಂದು? ಶ್ರೀ ಪಾಟಿಶರಂತಹರು ತಿಳಿಯರೆ?

USE

KALYANPUR SUGAR

IT IS THE PUREST & THE SWEETEST

IT IS A UNIQUE PRODUCT OF OUR OWN DISTRICT.

available in 7lb and 14lb packets at the

Office C. P C Co., Ltd

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ

ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಲಾರ್ಡ್ ಬ್ರೆಬೋರ್ನರು ರಾಜಕೀಯ ಪರಿಸ್ಥಿತಿಯ ಮೇಲೆ.

"ನವರಾಜ ಶಾಸನದೊಳಗೆ ಗವರ್ನರರ ಮತ್ತು ಅವರ ಮಂತ್ರಿಗಳೊಳಗಿನ ಸಂಬಂಧದ ಕುರಿತು ಸ್ವಷ್ಟವಾದ ಒಂದು ತಿಳುವಳಿಕೆಯುಂಟು ಗುತಿದ್ದರೆ ಕರ್ಶಾಭಿಪ್ರಾಯ ಬೇಧಗಳ ಹೇಳಿಕೆಗಳಿಂದ ಕೂಡಿದ್ದ ಕಳೆದ ಕೆಲವು ವಾರಗಳ ಅಮೂಲ್ಯ ಕಾಲವು ದುರುಪಯೋಗವಾಗುತ್ತಿರಲಿಲ್ಲ. ಗವರ್ನರರ ಮತ್ತು ಅವರ ಮಂತ್ರಿಗಳೊಳಗೆ ಯಾವುದೇ ತರದ ತಪ್ಪು ತಿಳುವಳಿಕೆಗಳುಂಟಾಗಲು ಎಡೆಯೀಬಾರದೆಂಬ ಏರ್ಪಾಡಿನಿಂದ ಪಾರ್ಲಿಮೆಂಟು ಈ ವಿಶೇಷಾಧಿಕಾರಗಳನ್ನು ಗವರ್ನರರ ಮೇಲೆ ಹೊರಿಸಿರುತ್ತವೆ. ಗವರ್ನರ್-ಮಂತ್ರಿಗಳೊಳಗೆ ಇಂತಹ ಯಾವುದೊಂದು ತರದ ತಪ್ಪು ತಿಳುವಳಿಕೆಯಿಲ್ಲದೆ ಕ್ರಮವಾಗಿ ಆಡಳಿತವು ಸಾಗಬೇಕೆಂದು ನಾನು ಮುಂಚಿನಿಂದಲೂ ಹೃತ್ಪೂರ್ವಕವಾಗಿ ಆಶಿಸಿದ್ದೆನು. ಪರಸ್ಪರ ಕೂಡುವಿಕೆ ಸದ್ಭಾವದ ಸ್ನೇಹಭಾವ ಮತ್ತು ಅನುಭವದಿಂದ ನವರಾಜ ಶಾಸನದಲ್ಲಿ ಸೂಚಿಸಿದ ಈ ವಿಷಯದ ಪ್ರಾಮುಖ್ಯತೆಯು ತಾನಾಗಿ ಕಮ್ಮಿಯಾಗುವುದು. ಕ್ರಿಯಾತ್ಮಕ ಕಾರ್ಯಗಳಿಂದಲೇ ಯಾವಾದರೊಂದು ಶಾಸನದ ಒಳಿತು ಕೆಡುಕು ತಿಳಿಕೊಳ್ಳಬಹುದೇ ವಿನಹ ಊಹಾಕಲ್ಪನೆಗಳಿಂದ ಕಾಲಹರಣ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ.

'ಮಂತ್ರಿಗಳ ಮತ್ತು ಅವರು ಅನುಸರಿಸುವ ಕಾರ್ಯಕ್ರಮಗಳ ಕಡೆಗೆ ಗವರ್ನರರು ತೋರಿಸಿದ ವರ್ತನೆಯ ಸದಭಿಪ್ರಾಯವನ್ನು ಮಾಡಿದೆ ಎಂಬ ವಿಷಯವು ಈಚೆಗೆ ಪತ್ರಿಕೆಗಳ ಮೂಲಕವೂ ಭಾಷಣಗಳ ಮೂಲಕವೂ ಸೂಚಿಸಿದ ಅಭಿಪ್ರಾಯದಿಂದ ಖಚಿತವಾಗುತ್ತದೆ. ಈಗಿನ ಬೊಂಬಾಯಿ ಪ್ರಾಂತ್ಯದ ತಾತ್ಕಾಲಿಕ ಮಂತ್ರಿಮಂಡಳವು ಜನತೆಯ ಮುಂದಿಟ್ಟ ಕಾರ್ಯಕ್ರಮವನ್ನು ಗವರ್ನರರು ಅವಕ್ಕೆ ಸಹಕಾರವಲ್ಲದೆ ಅಡ್ಡಿ ಮಾಡದೆ ಇರುವ ವಿಷಯವನ್ನು ಪರ್ಯಾಲೋಚಿಸಿದರೆ ಗವರ್ನರ್ ವಿಶೇಷಾಧಿಕಾರಗಳ ಮೇಲೆ ಅವಲಂಬಿಸಿ ಇಟ್ಟಿದವಗೆ ಆದರಿಂದ ಉತ್ತರ ಸಿಕ್ಕಿದಂತಾಗುತ್ತದೆ.

ಬಹುಕಾಲದಿಂದಲೂ ಹಿಂದೀಯರು ಸ್ವಆಡಳಿತೆಗೆ ಕಾಂಕ್ಷಿಸುತಿದ್ದು, ನವರಾಜ ಶಾಸನದ ಪ್ರಕಾರ ಕೊಡಲ್ಪಟ್ಟಿರುವ ಈ ಅಧಿಕಾರ ಸೂತ್ರಗಳನ್ನು ಹಿಡಿಯುವ ಸುಸಂಧಿಯು ಇಲ್ಲಿ ಚುನಾಯಿತ ಶಾಸನಸಭಾ ಸದಸ್ಯರು ತಿರಸ್ಕರಿಸಲಾಗದು. ಅಧಿಕಾರ ಸ್ವೀಕರಿಸುವುದು ತುಂಬಾ ಜವಾಬ್ದಾರಿಯ ಮತ್ತು ಶ್ರಮದ ಕೆಲಸವಾಗಿರುತ್ತದೆ. ಈ ಶ್ರಮವನ್ನು ವಹಿಸದೆ ಯಾವ ದೇಶದಲ್ಲೂ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಾಗಲಿಲ್ಲ.

"ಈಗ ದೊಡ್ಡ ಪ್ರಾಂತದ ಗವರ್ನರನಾಗಿದ್ದ ನನ್ನ ಮತ್ತು ನನ್ನ ಮಂತ್ರಿಗಳೊಳಗಿನ ಸಂಬಂಧವನ್ನು ನಾನೀಗ ಸ್ಪಷ್ಟಪಡಿಸಬಯಸಿದ್ದೇನೆ. ಅದು ತಿಳುವಳಿಕೆ, ಸಹಾನುಭೂತಿ ಮತ್ತು ಎಲ್ಲಾ ಕಾಲದಲ್ಲಿಯೂ ಮಂತ್ರಿಗಳೊಡನೆ ಸಹಕರಿಸಿ ಸಹಾಯ ಮಾಡುವುದರಲ್ಲಿರುವ ನನ್ನ ಆತುರದ ಮೇಲೆ ಈ ಸಂಬಂಧವು ನೆಲೆ ನಿಲ್ಲಬೇಕು. ಅಂದರೆ ನಾನು ನನ್ನ ಮಂತ್ರಿಗಳಿಗೆ ಸದಾ ಕಾಲವೂ ಸಹಾಯ ಒದಗಿಸಲು ಸಿದ್ಧನಿದ್ದೇನೆ. ಆದುದರಿಂದ ನನ್ನ ಮಂತ್ರಿಗಳು ಅವರು ಯಾವುದೇ ರಾಜಕೀಯಾಭಿಪ್ರಾಯ ಪಂಗಡಕ್ಕೆ ಸೇರಿದವರೇ ಇರಲಿ, ಅದರ ನನ್ನ ತಿಳುವಳಿಕೆ ಸಹಾನುಭೂತಿಗಳ ಮೇಲೆ ಧೈರ್ಯವಾಗಿ ಹೊಂದಿಕೊಂಡಿರಬಹುದಲ್ಲದೆ, ನನ್ನ ವಿಶೇಷಾಧಿಕಾರಗಳ ವಿಷಯವಾಗಿ ಬರಬಹುದಾದ ಯಾವುದೊಂದು ತರದ ಭೇದಾಭಿಪ್ರಾಯವು ಬಾರದಂತೆ ನಾನು ನನ್ನ ಶಕ್ತಿಯಲ್ಲಿದ್ದಷ್ಟು ಪ್ರಯತ್ನಗಳನ್ನು ಮಾಡುತ್ತೇನೆಂಬುದರ ಮೇಲೂ ನನ್ನ ಮಂತ್ರಿಗಳು ನಿಸ್ಸಂದೇಹವಾಗಿ ಹೊಂದಿಕೊಂಡಿರಬಹುದು. ಗವರ್ನರನಾಗಿದ್ದ ಮೇಲೆ ಯಾವ ಪಂಗಡದ ಮೇಲೂ ನನಗೆ ಪಕ್ಷಪಾತವಿಲ್ಲ, ಮತ್ತು ಯಾವ ಪಂಗಡವನ್ನಾದರೂ ಪ್ರತಿನಿಧಿಸಲಿ, ಅವರಿಗೆ ನನ್ನ ಸಕಲ ಸಹಕಾರ ಸಹಾಯಗಳನ್ನು ಕೊಡಲು ಸದಾ ಸಿದ್ಧನಿರುವೆನು.

"ಸರಕಾರವನ್ನು ಮುಂದುವರಿಸಲು, ಈ ಅನಿವಾರ್ಯ ಸಂದರ್ಭಗಳಲ್ಲಿ ಜವಾಬ್ದಾರಿಯನ್ನು ವಹಿಸಿ ಮಂತ್ರಿಗಳಾದವರಿಗೆ ನಾನು ಮತ್ತು ಬೊಂಬಾಯಿ ಪ್ರಾಂತ್ಯವು ಕೃತಜ್ಞತೆಯನ್ನು ಸೂಚಿಸಬೇಕಾಗಿದೆ. ಇವರು ತಮ್ಮ ಮುಂದಿರುವ ಸ್ವಲ್ಪ ಕಾಲದಲ್ಲಿ ಅದನ್ನು ಉಪಯುಕ್ತ ಕಾರ್ಯಗಳನ್ನು ಮಾಡುವರೆಂದು ಹಾರೈಸುತ್ತೇನೆ. ಇನ್ನು ಸದ್ಯದಲ್ಲಿಯೇ ಸೇರಲಿರುವ ಶಾಸನ ಸಭೆಗಳ ಮುಂದೆ ಅವರು, ತಾವು ಮಾಡಿದ ಉಪಯುಕ್ತ ಕಾರ್ಯಗಳ ಫಲ, ಗುಣಾವಗುಣಗಳ ಮೇಲೆ ತಮ್ಮನ್ನು ವಿಮರ್ಶಿಸಬೇಕೆಂದು ಕೇಳಿಕೊಳ್ಳುವುದಕ್ಕಿಂತಲೂ ಯಥಾರ್ಥವಾದ ವಿನಂತಿಯು ಬೇರೊಂದಿರಲಾರದು. ಅಂತ್ಯದಲ್ಲಿ ಒಳಿತು ಕೆಡುಕುಗಳನ್ನು ವಿಮರ್ಶಿಸುವ ಕೆಲಸವು ಬಹು ಸಂಖ್ಯಾತರಾಗಿ [ಕಾಂಗ್ರೆಸ್ಸಿಗೆ] ಸೇರಿದ್ದಾಗಿದೆ. ಮುಂದಿನ ಭವಿಷ್ಯವೇನೇ ಇರಲಿ, ಅಧಿಕಾರಸೂತ್ರಗಳನ್ನು ವಹಿಸಿದವರಿಗೆ ನನ್ನ ಮತ್ತು ನನ್ನ ಹಿಂದೆ ಬರಲಿರುವ ಗವರ್ನರುಗಳ ಕೂಡಾ ಸಹಾಯ ಸಹಕಾರ ಸಹಾನುಭೂತಿಯು ಪೂರ್ಣವಿರುವುದಾಗಿ ನಾನು ದೃಢವಾಗಿ ನಂಬುತ್ತೇನೆ.

ಬ್ರೆಬೋರ್ನರ ಭಾಷಣದ ಪರಿಣಾಮ.

ಬೊಂಬಾಯಿ ಗವರ್ನರರು ಬೆಳಗಾಂವಿಯಲ್ಲಿ ಕೊಟ್ಟ ಈ ಭಾಷಣದ ಮೇಲೆ ಬೇರೆ ಬೇರೆ ರಾಜಕೀಯ ಕೇಂದ್ರಗಳಲ್ಲಿ ಬೇರೆ ಬೇರೆ ಅಭಿಪ್ರಾಯಗಳನ್ನು ಮಾಡಿಕೊಳ್ಳಲಾಗಿದೆ. 'ಹಿಂದೂಸ್ಥಾನ್ ಟೈಮ್ಸ್' ಪತ್ರಿಕೆಯ ಸಿಮ್ಲಾ ಪ್ರತಿನಿಧಿಯು ತಿಳಿಸಿದ ಪ್ರಕಾರ ಗವರ್ನರರು ಸದ್ಯದಲ್ಲಿಯೇ ಶಾಸನ ಸಭೆಗಳನ್ನು ಕರೆಯಲಿರುವರೆಂದೂ ಮೇಲಾಧಿಕಾರಿಗಳಿಂದ ಬರಬೇಕಾದ ಅಪ್ಪಣೆಗಳನ್ನವರು ನಿರೀಕ್ಷಿಸುತ್ತಲಿರುವರೆಂದೂ ತಿಳಿದುಬಂದಿದೆ. ಈಗಿನ ತಾತ್ಕಾಲಿಕ ಮಂತ್ರಿಗಳು ಕಾಂಗ್ರೆಸ್ ಮುಖಂಡರೊಳಗೆ ಮತ್ತು ಗವರ್ನರರೊಳಗೆ ಒಂದು ಸಮ್ಮೇಳನವನ್ನೇರ್ಪಡಿಸುವರೆ ಪ್ರಯತ್ನಮಾಡುವರೆಂದೂ ವದಂತಿ ಇದೆಯಂತೆ. ಇಷ್ಟರ ತನಕ ಮೌನವ್ರತವನ್ನು ತಾಳಿದ್ದ ವೈಸ್ರಾಯರೂ ಸದ್ಯದಲ್ಲಿಯೇ ಒಂದು ಹೇಳಿಕೆಯನ್ನು ಕೊಡಲಿರುವರೆಂದು ಊಹಿಸಲಾಗಿದೆ.

ಮಹಾತ್ಮರ ಅಭಿಪ್ರಾಯ.

ಮಹಾತ್ಮಾಗಾಂಧಿಜಿಯವರು ಬ್ರೆಬೋರ್ನರ ಭಾಷಣದಲ್ಲಿ ವಿಶೇಷವೇನೂ ಇಲ್ಲವೆಂದೂ, ಅದು ಜೆಟ್ಲೆಂಡರ ಭಾಷಣದ ಅನುವಾದರ್ಥವಲ್ಲದೆ ಇನ್ನೇನಿಲ್ಲವೆಂದೂ ಮತ್ತು ಅಂತಹ ಅಭಿಪ್ರಾಯಗಳಿಂದ ಪರಿಸ್ಥಿತಿಯು ಉತ್ತಮವಾಗಲಾರದೆಂದೂ ಅಭಿಪ್ರಾಯಪಟ್ಟಿರುವರು.

ಡಾ॥ ಖಾನ್ ಸಾಹೇಬರು.

ಗಡಿನಾಡಿನ ಗಾಂಧಿಯೆ ದೆಂದು ಕರೆಯಲ್ಪಡುವ ಖಾನ್ ಅಬ್ದುಲ ಗಫರ್ ಖಾನರ ಸಹೋದರರಿವರು. ಉಜ್ವಲ ದೇಶಾಭಿಮಾನಿಗಳೂ ಚತುರ ವ್ಯವಸ್ಥಾಪಕನಿಪುಣರೂ ಆಗಿರುವ ಇವರು ಗಡಿನಾಡಿನ ಶಾಸನಸಭೆಯಲ್ಲಿ ಕಾಂಗ್ರೆಸ್ ಮುಖಂಡತ್ವವನ್ನು ವಹಿಸಿರುವರು. ಮುಸ್ಲಿಮರನ್ನು ಕಾಂಗ್ರೆಸ್ಸಿಗೆ ಸೇರಿಸಲು ಇವರು ಬಹಳ ಪ್ರಯಾಸಪಡುತ್ತಿದ್ದಾರೆ. 'ಲಕ್ಷಾಧಿಪತಿಯಾಗಿ ಗುಲಾಮನಾಗಿರುವುದಕ್ಕಿಂತಲೂ ಭಿಕ್ಷಾಧಿಪತಿಯಾಗಿ ಸ್ವತಂತ್ರನಾಗಿರುವುದು ಮೇಲು" ಎಂದು ಇವರು ಹೇಳಿದ ಸ್ಫೂರ್ತಿದಾಯಕ ಮಾತುಗಳು ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡದಿರವು.

ಬೊಂಬಾಯಿ ಮುಖಂಡರಾದ ಬಿ. ಜಿ. ಖೇರ್ ರವರು.

ಬ್ರೆಬೋರ್ನರ ಬೆಳಗಾವಿನ ಭಾಷಣವನ್ನು ವಿಮರ್ಶಿಸುತ್ತಾ ಬೊಂಬಾಯಿ ಪ್ರಾಂತ್ಯದ ಶಾಸನ ಸಭೆಯ ಕಾಂಗ್ರೆಸ್-ಮುಖಂಡರಾದ ಬಿ. ಜಿ. ಖೇರರು ಅದನ್ನು ತೀಕ್ಷ್ಣವಾಗಿ ಖಂಡಿಸಿರುತ್ತಾರೆ. "ಗವರ್ನರರು ಹೇಳುತ್ತಿರುವ ಈ ಸಹಾಯ-ಸದ್ಭಾವ, ಸಹಾನುಭೂತಿಗಳ ಪೊಳ್ಳು ಮಾತುಗಳು ಇಂದೇನು ಹೊಸದಲ್ಲ. ಇಂದಿಗೆ ನೂರೈವತ್ತು ವರ್ಷಗಳಿಂದ ಬ್ರಿಟಿಷರು ಹಾಡುತ್ತಿರುವ ಹಾಡಾದರೂ ಇದೇ ಆಗಿರುತ್ತದೆ. ಈಗಿನ ಮಂತ್ರಿಗಳು ಭರವಸೆಗಳನ್ನು ತೆಗೆದುಕೊಳ್ಳದೆ ಅಧಿಕಾರವನ್ನು ಸ್ವೀಕರಿಸಿರುವರೆಂದರೆ ಆ ಮಂತ್ರಿಗಳು ಗವರ್ನರರನ್ನು ಎದುರಿಸುವಷ್ಟು ಧೈರ್ಯಶಾಲಿಗಳಲ್ಲವೆಂಬ ವಿಷಯವು ಎಲ್ಲರಿಗೂ ತಿಳಿದಿದೆ. ಆದುದರಿಂದ ಅವರಿಗೆ ಭರವಸೆಗಳ ಅಗತ್ಯವಿರುವುದಿಲ್ಲವೆಂಬ ಸಂಗತಿಯೇನೋ ನಿಜವಾದದ್ದು.

ಆರನೇ ಜಾರ್ಜ್ ಸಾರ್ವಭೌಮರ ಕಿರೀಟಧಾರಣೋತ್ಸವ.

ಪ್ರಪಂಚದ ನಾನಾ ಭಾಗಗಳಲ್ಲಿ ಬೇರೆ ಬೇರೆ ತರದ ಘಟನೆಗಳು ನಡೆಯುತ್ತಿದ್ದಂತೆ ಇಂಗ್ಲೆಂಡಿನಲ್ಲಿ ಆಂಗ್ಲ ದೊರೆ ಆರನೇ ಜಾರ್ಜರ ಕಿರೀಟಧಾರಣ ಸಮಾರಂಭವು ಅತ್ಯುಜ್ವಲ ವಿಜೃಂಭಣೆಯಿಂದ ಜರಗಿತು. ಯುರೋಪಿನ ರಾಷ್ಟ್ರಗಳು ಭಯಂಕರ ದಂಗೆಗಳಲ್ಲೂ ಸಮರ ಸಿದ್ಧತೆಗಳಲ್ಲೂ ಮಗ್ನವಾಗಿವೆ. ಆಫ್ರಿಕದಲ್ಲಿ ವರ್ಣದ್ವೇಷದ ಪರಿಣಾಮವಾಗಿಯೂ, ಐರೋಪ್ಯರ ದಬ್ಬಾಳಿಕೆಯಿಂದಲೂ ನರಳುತ್ತಿರುವವರ ಗೋಳು ಹೇಳತೀರದು. ಚೀನಾ ಜಪಾನುಗಳ ವೈರಮ್ಯವು ಹೆಚ್ಚುತ್ತಲಿದೆ. ಫೆಸಿಸ್ಟ್ ರಾಷ್ಟ್ರಗಳು ಕೊಮ್ಯುನಿಸ್ಟ್ ದಳವನ್ನು ಧ್ವಂಸಮಾಡುವ ಹವಣಿಕೆಯಲ್ಲಿದ್ದಾರೆ. ಚಿಕ್ಕ ಪುಟ್ಟ ರಾಷ್ಟ್ರಗಳು ತಮ್ಮ ಅಧೋಗತಿಯನ್ನು ನಿರೀಕ್ಷಿಸುತ್ತ ದಿನಗಳನ್ನು ದೂಡುತ್ತಿರುವುವು. ಪರಕೀಯ ಬಂಧನದಲ್ಲಿ ಸಿಲುಕಿದ ಜನರು ತಮ್ಮ ಪಾರುಗಾಣಿಕೆಗಾಗಿ ಸ್ವಾತಂತ್ರ್ಯ ಸಂಗ್ರಾಮಗಳನ್ನು ಹೂಡುತ್ತಿರುವರು. ದುಡಿತಕ್ಕಾಗಿಯೇ ನಿರ್ಮಿಸಲ್ಪಟ್ಟಿರುವ ಮಜೂರ ವರ್ಗದವರು ತಮ್ಮ ಜೀವನ ಸ್ಥಾನಗಳನ್ನು ಉತ್ತಮಗೊಳಿಸಲು ತಮ್ಮ ಗಿರಣಿಗಳಲ್ಲಿ ಮುಷ್ಕರ ನಡೆಸುತ್ತಿರುವರು. ಹಿಂದೂಸ್ಥಾನದ ಗಡಿನಾಡಿನಲ್ಲಿ ಮುಸಲ್ಮಾನತ್ವವನ್ನು ಕಾಪಾಡಿಕೊಳ್ಳಬೇಕೆಂಬುದಕ್ಕೆ ಕದನಗಳು ನಡೆಯುತ್ತಿವೆ. ಸ್ಪೈನಿನಲ್ಲಿ ಆಗಲೇ ಬಹುತೇಕ ಮಾನವ ಕೋಟಿಯು ಅಧುನಿಕ ಸಮರ ಸಾಧನೆಗಳಿಗೆ ತುತ್ತಾದರು. ಇನ್ನೂ ಎಷ್ಟೋ ಮಂದಿಗಳು ಆಗಲಿರುವರು. ಆದರೆ ಆಂಗ್ಲ ಪ್ರಭುತ್ವದ ತತ್ವಗಳು ಸಿರ್ವಹಿಸಲ್ಪಡಲೇಬೇಕು. ಆಂಗ್ಲರಾಜನೀತಿಗೆ ಕುಂದುಂಟಾಗಬಾರದು. ಅಂತೆಯೇ ಸಪ್ತಮ ಜಾರ್ಜರ ಕಿರೀಟಧಾರಣ ಉತ್ಸವವು ಬಹು ಶೋಭಾಯಮಾನವಾಗಿ ಜರಗಿಸಲ್ಪಟ್ಟಿತು.

ಪ್ರಪಂಚದ ಸಕಲ ರಾಷ್ಟ್ರಗಳು ಆಂಗ್ಲ ಅರಸರ ಕಿರೀಟಧಾರಣೆ ಸಮಾರಂಭದಲ್ಲಿ ಪ್ರತಿನಿಧಿಸಲ್ಪಟ್ಟಿದ್ದವು. ಬ್ರಿಟಿಷ್ ಸಾಮ್ರಾಜ್ಯದೊಳಗಿನ ಹೆಚ್ಚು ಕಮ್ಮಿ ಪ್ರತಿ ಒಂದು ಇಲಾಖೆಯ ಒಬ್ಬೊಬ್ಬರಂತೆ ಪ್ರತಿನಿಧಿಗಳಿಂದ ಕಳುಹಿಸಲ್ಪಟ್ಟ ಅವರುಗಳು ತಮ್ಮ ರಾಷ್ಟ್ರ ಭಕ್ತಿ ಪ್ರದರ್ಶನಕ್ಕಾಗಿ ಅಂಗ್ಲರ ರಾಜಧಾನಿಗೆ ಒಯ್ಯಲ್ಪಟ್ಟರು. ಪ್ರಪಂಚದ ನಾನಾ ಕಡೆಗಳಿಂದ ಇಂಗ್ಲೆಂಡಿಗೆ ಬಂದಿದ್ದ ಪ್ರೇಕ್ಷಕರ ಸಂಖ್ಯೆಯು ೫ ಲಕ್ಷಕ್ಕೆ ಮಿಕ್ಕಿತಂತೆ.

ಮೇ ೧೨ನೇ ತಾರೀಕಿನಂದು ಸಪ್ತಮ ಜಾರ್ಜರು ಸಾಮ್ರಾಜ್ಯದ ಪ್ರತಿನಿಧಿ ವರ್ಗಗಳಿಂದ ಕೂಡಿದ ಸಕಲ ಪರಿವಾರ ಸಮೇತವಾಗಿ ಮೆರವಣಿಗೆಗೆ ಬಂದರು. ಅಂದಿನ ಲಂಡನ ನಗರದ ದೃಶ್ಯಗಳು ವರ್ಣಿಸಲು ಅಸದಳವಾದ ತೋಳಿಕೆಯಿಂದಲೂ ಕಲ್ಪನಾತೀತವಾದ ಅಲಂಕಾರ ವೈಭವಗಳಿಂದಲೂ ಕೂಡಿಕೊಂಡಿದ್ದರಲ್ಲಿ ಉತ್ಪ್ರೇಕ್ಷೆ ಇರಲಾರದು.

ಪಾತಃಕಾಲ ೧೧ ಗಂಟೆಗೆ ಸರಿಯಾಗಿ ಬಕ್ಕಿಂಗ್‌ಹಾಮ್ ಅರಮನೆಯಿಂದ ಮೆರವಣಿಗೆಯು ಅತ್ಯಂತ ಮನೋರಂಜಕ ಉಡುಪುಗಳಿಂದ ಸುಸಜ್ಜಿತವಾದ ಪರಿವಾರದೊಡನೆ ಹೊರಟಿತು. ಪ್ರಧಾನ ಮಂತ್ರಿಗಳು, ಸಾಮ್ರಾಜ್ಯದ ಉಪಖಂಡಗಳ ಪ್ರಧಾನರುಗಳು, ಲಾರ್ಡ ಮೇಯರರೇ ಮೊದಲಾದ ಉಚ್ಚಾಧಿಕಾರಿಗಳು ಮೆರವಣಿಗೆಯ ಮುಂಭಾಗದ ನಾಯಕತ್ವವನ್ನು ವಹಿಸಿದ್ದರು. ಬಕ್ಕಿಂಗ್‌ಹಾಮ್ ಅರಮನೆಯಿಂದ ವೆಸ್ಟ್ ಮಿನಿಸ್ಟರ್ ಅಬ್ಬಿಯ ಮಾರ್ಗದ ಉದ್ದಕ್ಕೆ ಕ್ರಮವಾಗಿ ಸೇರಿದ ಪ್ರೇಕ್ಷಕರಿಂದ ಕಿಕ್ಕಿರಿದ ಸಂದಣಿಯನ್ನು ಹತೋಟಿಯಲ್ಲಿಡಲು ೨೦ ಸಾವಿರ ಪೋಲೀಸ್ ಬಂದೋಬಸ್ತು ಇಡಲ್ಪಟ್ಟಿತು. ವಿಶೇಷ ಘಟನೆಗಳೇನಾದರೂ ನಡೆಯದಂತೆ ನೋಡಲು ಸ್ಕಾಟ್ಲೆಂಡ್ ಯಾರ್ಡಿನ ಗುಪ್ತಚಾರರ ದಳವು ವಿಶೇಷ ಜಾಗರೂಕತೆಯನ್ನು ವಹಿಸಿತ್ತು. ಜಾರ್ಜರು ಎಲಿಜಬೆತ್ ರಾಣಿಯೊಡಗೂಡಿ ಎಂಟು ಕುದುರೆಗಳ ರಾಜವಾಹನದಲ್ಲಿ ಸಕಲ ರಾಜ ದೀವಿಗೆಯಿಂದ ಕೂಡಿದವರಾಗಿದ್ದು, ಪ್ರಜೆಗಳ ಜಯಕಾರಗಳನ್ನು ನಮ್ರತೆಯಿಂದ ಬಾಗಿ ಪ್ರತ್ಯುತ್ತರಿಸುತ್ತಿದ್ದರು. ೧೧-೩೦ಕ್ಕೆ ಸರಿಯಾಗಿ ಜಾರ್ಜ ಪ್ರಭುಗಳು ವೆಸ್ಟ್‌ಮಿನಿಸ್ಟರ್ ಅಬ್ಬಿಯನ್ನು ಸೇರಿ, ಸಕಲ ರಾಜ ಮರ್ಯಾದೆಯ ವಿಧಿ ಪ್ರಕಾರ ಕಿರೀಟಧಾರಣ ಮಾಡಿಕೊಂಡರು.

೨ನೇ ಪುಟದಿಂದ ಮುಂದರಿಸಿದುದು

'ಬ್ರಿಟಿಷ ಸಾಮ್ರಾಜ್ಯದ ಸಂತೆ' ಎಂಬ ವಾಣಿಜ್ಯ ಪ್ರದರ್ಶನಕ್ಕಾಗಿ ಎಷ್ಟು ವೆಚ್ಚವಾಯಿತು? ಇಂಡಿಯಕ್ಕೆ ಹಿಂದಣ ವರ್ಷಕ್ಕಿಂತ ಸೇಕಡಾ ೪೦ರಷ್ಟು ಹೆಚ್ಚಿನ ವ್ಯಾಪಾರ ದೊರೆಯಿತು ಎಂದು ವಾರ್ತೆ. ಬೆದರಬೇಡಿರಿ. ೪೦ರಷ್ಟು ಶೇಕಡೆಯಲ್ಲಿ ಹೆಚ್ಚಿಗೆ ದೊರೆತ ಒಟ್ಟು ವ್ಯಾಪಾರದ ಬೆಲೆ ರೂ. ೬೩೧೩೫! ಇದಕ್ಕಿಂತ ಹೆಚ್ಚಿನ ಬೆಲೆಯ ಸಾಮಾನು ಒಂದೊಂದು ಸ್ಟೀಮರಿನಲ್ಲಿ ಮಂಗಳೂರಿಗೆ ಬರುವುದುಂಟು!

ಈ ಬೇಸಿಗೆ ಕಾಲದಲ್ಲಿ ಎಂದಿನಂತೆ ಪರ್ವತನಿವಾಸಕ್ಕೆ ಹೋಗುವುದಿಲ್ಲವೆಂದು ಸಂಯುಕ್ತಪ್ರಾಂತ್ಯದ ತಾತ್ಕಾಲಿಕ ಮಂತ್ರಿಗಳೆಂದರು. ಎಲ್ಲರಿಗೂ ಹಾಡೆನಿಸಿತು. ಈಗ ಕೊನೆಗೆ ಇವರೂ ಹೋದರು! ಎಂದರೆ ಪರ್ವತ ನಿವಾಸಕ್ಕೆ ಹೋಗದೆ, ಪರ್ವತ ಪ್ರವಾಸವಾಗಲೂ ತಾತ್ಕಾಲಿಕ ಮಂತ್ರಿಗಳಿಗೆ ಸಾಧ್ಯವಾಗಲಾರದೆಂದೇ?

ಹುಳ ಕಡಿತದ ಬಾಧೆಯನ್ನು ಗುಣಪಡಿಸಿಕೊಳ್ಳಿ
ಝಾಂಬಕನ್ನು ನಿಮ್ಮ ಚರ್ಮದ ಮೇಲೆ ತಿಕ್ಕಿರಿ

ಯಾವದಾದರೂ ಕ್ರಿಮಿ ಕೀಟಗಳು ನಿಮ್ಮನ್ನು ಚುಚ್ಚಿ ಕಡಿದರೆ ಅವುಗಳ ವಿಷವು ಬಹಳ ವೇದನೆಯನ್ನೂ ಊತವನ್ನೂ ಉಂಟುಮಾಡುತ್ತದೆ. ಇತ್ತಲ ಹೆಚ್ಚು ವಿಷದಿಂದಾಗುವ ರೋಗವನ್ನು ತಪ್ಪಿಸುವುದಕ್ಕೆ ಕೂಡಲೇ ಝಾಂಬಕನ್ನು ಅದರ ಮೇಲೆ ತಿಕ್ಕಿರಿ. ಇದು ಕಡಿತದ ಜಾಗವನ್ನು ಆರೋಗ್ಯದಲ್ಲಿರಿಸಿ ಅದನ್ನು ಗುಣಪಡಿಸುತ್ತದೆ. ಝಾಂಬಕ್ಕು ನೋವನ್ನು ನಿವಾರಿಸಿ ಊದುವಿಕೆಯನ್ನು ಕಮ್ಮಿಮಾಡಿ, ಕಲೆಗಳು ಕಾಣದಂತೆ ಗುಣಪಡಿಸುತ್ತದೆ. ಎಲ್ಲಾ ಔಷಧ ಅಂಗಡಿಗಳಲ್ಲೂ ಝಾಂಬಕ್ಕು ದೊರೆಯುತ್ತದೆ. ಬೆಲೆ ರೂ. 1 ಮತ್ತು 2-4-0

ಝಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ.
ಏಜಂಟರು—ಮೆಸರ್ಸ್ ರಾಧಾ ಎಂಡ್ ಕೊ.,
ಪಿ. ಟಿ. ಮದ್ರಾಸು

ಝಾಂಬಕ್
Zam Buk

ಅಕ್ಕಿ ಮಿಲ್ಲುಗಳನ್ನು ಮುಚ್ಚಬೇಕು.

ಮಿಲ್ಲು ಅಕ್ಕಿಯಿಂದಾಗುವ ಕೆಡುಕು.

ಮಾವಿನ ಹಣ್ಣುಗಳು ಕಣ್ಣಿನ ಮುಂದೆ ಮೋಹಕವಾಗಿರುವಾಗ, ವೈದ್ಯರು ರೋಗಿಗೆ ಆ ಹಣ್ಣನ್ನು ತಿನ್ನಬಾರದೆಂದು ಪಥ್ಯ ಹೇಳಿದರೆ, ರೋಗಿಗೆ ಮನವೊಲ್ಲದು. ಹಾಗೆಂದು, ಮಾವು ಎಲ್ಲ ಮಾರಾಟಕ್ಕೆ ಬರುವುದು ಮುಗಿಯಲಿ, ಮುಂದೆ ಚಿಕಿತ್ಸೆ ಮಾಡೋಣ ಎಂದರಾದೀತೆ? ಮಾವು ತಿಂದು ಮುಗಿದಾದ ಬಳಿಕ ಚಿಕಿತ್ಸೆ ಎಂದರೆ, ಮುಂದೆ ಚಿಕಿತ್ಸೆ ಪಡೆಯುವುದಕ್ಕೆ ರೋಗಿ ಉಳಿಯುವನೆಂದು ಖಂಡಿತವಾಗಿಯೂ ಹೇಳುವ ವೈದ್ಯರಾರು? "ನಾನಾ ನೋಕರರನ್ನು ಈಗ ನೇಮಿಸುವ ಕಾಲ, ಅಧಿಕಾರಗಳೆನ್ನ ತಮ್ಮವ ರಿಗೆ ಕೊಡಲು ತಾವು ಅಧಿಕಾರ ಸ್ವೀಕರಿಸು ವುದು ಉತ್ತಮ" ಎಂದು ಕಾಂಗ್ರೆಸ್ಸಿಗೆ ಹೇಳು ವವರಿದ್ದಾರೆ. ಮಾವಿನ ಹಣ್ಣು ತಿಂದು ಮುಗಿಸಿ ಚಿಕಿತ್ಸೆ ಪಡೆಯುವ ಬದಲು, ಸದ್ಯಕ್ಕೆ ಚಿಕಿತ್ಸೆ ಪಡೆಯಲಿ, ಮುಂದಿನ ವರ್ಷ ಬೇಕಾದಷ್ಟು ಹಣ್ಣು ತಿನ್ನಬಲ್ಲೆವು ಎಂದು ಕಾಂಗ್ರೆಸ್ಸಿನವ ರೆನ್ನುತ್ತಾರೆ.

o o o o o

ಕಾಂಗ್ರೆಸ್ಸಿನ ಕಾರ್ಯಕ್ರಮವನ್ನೆ ಈಗಣ ತಾತ್ಕಾಲಿಕ ಮಂತ್ರಿಮಂಡಲಗಳೂ ಕೈಗೊಂಡಿ ರುವಾಗ, ಗವರ್ನರರು ಆತಂಕಿಸಿದ್ದುಂಟೆ? ಎಂದು ಬೊಂಬಾಯಿಯ ಗವರ್ನರರು ಪ್ರಶ್ನಿಸಿ, ಇದೇ ರೀತಿ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗೂ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಲು ಅನುಕೂಲ ವಿದ್ದಿತು ಎಂದು ಸೂಚಿಸುತ್ತಾರೆ. ಡಾ| ಪಟ್ಟಾಭಿ ಸೀತಾರಾಮಯ್ಯನವರು ಈ ವಿಚಾರದಲ್ಲಿ 'ಯಾವನೊಬ್ಬನು ತನ್ನ ಗೃಹಿಣಿಯನ್ನು ದೂರ ಬಿಟ್ಟು, ಪ್ರಣಯಿನಿಯ ಬಳಿ ಇರುವನಾದರೆ, ಪ್ರಣಯಿನಿಯ ಇಚ್ಛೆಗಳನ್ನೆಲ್ಲ ನೆರವೇರಿಸದ ದ್ದಲ್ಲಿ ತನ್ನ ಜೀವನಸುಖಕ್ಕೆ ಮೋಸವೆಂದು ತಿಳಿದೇ ಇರುವನಲ್ಲವೇ? ಪ್ರಣಯಿನಿಗೆ ಅನು ಕೂಲನಾಗಿ ವರ್ತಿಸುವಾತನು ಗೃಹಿಣಿಗೆ ಅನು ಕೂಲನಾಗಿ ನಡೆವನೆಂಬುದಕ್ಕೆ ಋಜುವಾತು ಕಡಮೆ' ಎಂದಿರುವರು.

o o o o o

ಹಿಂದೀಭಾಷಾ ಪ್ರಚಾರ, ಹರಿಜನೋ ದ್ಧಾರ ಇವೆರಡು ಉದ್ಯಮಗಳಿಂದ ಗಾಂಧಿಜಿ ಯವರ ಕಾರ್ಯಕ್ರಮದಲ್ಲಿ ವಿಶೇಷತ್ವವನ್ನು ಮುಸ್ಲಿಮರಲ್ಲಿ ಹಲವರು ಸಂದೇಹಗ್ರಸ್ತರಾಗಿ ವರು, ಎಂದು ಜನಾಬ್ ಅಬ್ದುಲ್ ಹಮೀದ್ ಖಾನರು ಭಾಷಣವೊಂದರಲ್ಲಿ ಸೂಚಿಸಿರುವರು. ಖಾನರು ನೂತನ ತತ್ವವೊಂದನ್ನು ಕಂಡುಕೊಂಡ ವಿಚಿತ್ರ ಮಹಾಪುರುಷರು. ಪಂಡಿತ ಜವಾಹರ ಲಾಲರನ್ನು ಸದ್ಯದಲ್ಲಿ ಕೊಂಡಾಡಿ, ಮಹಾತ್ಮಾ ಜಿಯವರಲ್ಲಿ ಸಂದೇಹ ಕಂಡಿರುವರು. ಪಂಡಿತ ರಷ್ಟು ಹಿಂದೀ ಪ್ರಿಯರು, ಹಿಂದೀ ವಾತ್ಸಲ್ಯ ವುಳ್ಳವರು ಮತ್ತಿಬ್ಬರಿಲ್ಲವೆನ್ನಬಹುದು. ಉರ್ದು ಬರಹವನ್ನು ಹಿಂದೂಗಳು ಕಲಿಯಬೇ ಕೆಂದು ಸಾರುತ್ತಿರುವ ಮಹಾತ್ಮಾಜಿಯವರಲ್ಲಿ ದೋಷವನ್ನು ಕಾಣುವುದೆಂದರೇನು? ಹಿಂದೂ ಮುಸ್ಲಿಮರು ಒಂದೇ ಭಾಷೆಯ ಮೂಲಕ ಪರ ಸ್ಪರ ಅಭಿಪ್ರಾಯ ತಿಳಿದುಕೊಳ್ಳುವ ಹಾಗಾಗ ಲೆಂದು ಅವರಿಬ್ಬರೂ ಬೋಧಿಸುವರು. ಖಾನ ರಿಗೆ ಇವರಲ್ಲಿಯಾದರೂ ಅಭಿಮಾನವಿದೆಯೋ? ಸಂದೇಹವೆ?

(೯ನೇ ಪುಟಕ್ಕೆ ಮುಂದರಿಸಿದೆ)

ಓವಲ್‌ಟಿನ್
ಶಕ್ತಿ, ಚೈತನ್ಯಗಳನ್ನು
ಕೊಡುವುದು.

ನಿಮ್ಮ ಶಕ್ತಿ, ಚೈತನ್ಯಗಳನ್ನು ಹುರುಪುಗೊಳಿಸಿರಿ. ದೇಹ ದುರ್ಬಲತೆಯಿಂದಲೂ, ನರಗಳ ಅಶಕ್ತಿಯಿಂದಲೂ ಮತ್ತು ರೋಗರುಜಿಗಳಿಂದಲೂ ನಿಮ್ಮನ್ನು ಕಾದುಕೊಳ್ಳಿರಿ.

ಸರಿಯಾಗಿಯೂ ಸುಖಕರವಾಗಿಯೂ ಇರಬೇಕಾದರೆ ಅದಕ್ಕೆ ಸರಿಯಾದ ತಕ್ಕ ಪುಷ್ಟಿಕರ ಆಹಾರವು ಬೇಕು. ಅಂತಹ ಪುಷ್ಟಿಕರ ಆಹಾರವು ಸಾಧಾರಣ ದಿನನಿತ್ಯದ ಆಹಾರದಲ್ಲಿ ಸಿಗ ಲಾರದು. ಆದರೆ, ಶ್ರೇಷ್ಠ ಆಹಾರ ಪಾನೀಯವಾದ 'ಓವಲ್ಟಿನ್' ನಲ್ಲಿ ಅಂಥ ಶ್ರೇಷ್ಠ ಆಹಾರ ಪದಾರ್ಥಗಳು ಸಮೃದ್ಧವಾಗಿವೆ.

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಆಹಾರ ಪದಾರ್ಥ ಗಳಾದ ಪಕ್ವ ಬಾರ್ಲಿ ಸತ್ವದಿಂದಲೂ, ದನದ ಹಾಲು ಜೇನು ಹಾಲಿನಿಂದಲೂ, ತಯಾರಿಸಿದುದರಿಂದ 'ಓವಲ್ಟಿನ್'ನಲ್ಲಿ ಪರಿಪೂರ್ಣ ಪುಷ್ಟಿ ಆಹಾರಗಳನ್ನು ದೇಹಕ್ಕೆ ಬೇಕಾದಂತೆ ಪೂರೈಸಿಕೊಡು ತ್ತದೆ. ಇದು ನಿಮ್ಮ ದೇಹದ ಆರೋಗ್ಯ, ಶಕ್ತಿ, ಚೈತನ್ಯಗಳನ್ನು ಹೆಚ್ಚಿಸುತ್ತದೆ. ಅಮೂಲ್ಯ ಪ್ರಕೃತೀಯ ವಿಟಮಿನ್‌ಗಳೂ ಓವ ಲ್ಟಿನ್‌ನಲ್ಲಿದೆ. ದೇಹದ ಸೌಖ್ಯಕ್ಕಾಗಿ ಓವಲ್ಟಿನ್ನನ್ನು ಸದಾ ಕುಡಿ ಯಿರಿ. ಬದಲೀಯಗಳನ್ನು ತ್ಯಜಿಸಿರಿ.

'ಓವಲ್‌ಟಿನ್' ಪುಷ್ಟಿಕರ ಆಹಾರ ಪಾನೀಯ

OVALTINE

ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಕೆಯಲ್ಲಿ ಹಸ್ತಸ್ಪರ್ಶವಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ ಸಿಗುತ್ತವೆ.

ಏಜಂಟರು:— ಜೇಮ್ಸ್ ರೈಟ್, 85 ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/483

THE PIE-MONEY BANK LTD.,
Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— **K. R. GURU,** *Managing Director.*

ಲಕ್ನೋದಲ್ಲಿ ಭಾರಿ ದಂಗೆ!

ಭಯಂಕರ ಕೃತ್ಯಗಳು!

ಶಿಯಾ–ಸುನ್ನಿ ಘರ್ಷಣ
ಲಕ್ನೋದಲ್ಲಿ ದೊಂಬಿ
ಏಳು ಮಂದಿಗಳ ಕೊಲೆ!
ಕರ್ಫ್ಯೂ ಆರ್ಡರ್

ಕಳೆದ ತಾ ೨೦ರಲ್ಲಿ ಲಕ್ನೋದಲ್ಲಿ ಭಯಂಕರ ದೊಂಬಿ ಪ್ರಾರಂಭವಾಯಿತು ಕಲಹವು ಈ ಸರ್ತಿ ಹಿಂದೂ ಮುಸಲ್ಮಾನರೊಳಗಿರದೆ, ಮುಸಲ್ಮಾನರ ಎರಡು ಪಂಗಡಗಳಾದ ಶಿಯಾ–ಸುನ್ನಿಗಳೊಳಗೆಯೇ ಆಗಿರುತ್ತದೆ. ೭ ಮಂದಿಗಳು ಮರಣಪಟ್ಟಿರುವರು ಲಕ್ನೋದ ಚೋಪ್ಪೈಟೋಲಾದಲ್ಲಿದ್ದ ಜೊವಾಹರ್ ಹುಸೆನರ ಮನೆಯಲ್ಲಿ ಕೂಡಿದ್ದ ಶಿಯಾ ಪಂಗಡದವರು ರಬ್ಬಿಲಾವಲ್ ತಿಂಗಳ ೯ನೇ ದಿವಸದ ಪ್ರಾರ್ಥನೆಯನ್ನು ಮಾಡುತ್ತಿದ್ದರು ಸುಮಾರು ಹತ್ತು ಗಂಟೆ ಸಮಯಕ್ಕೆ ಶಿಯಾ ಪಂಗಡದವರು ಪ್ರಾರ್ಥನೆಯನ್ನು ಮುಂದರಿಸುತ್ತಿದ್ದಾಗ ಸುನ್ನಿ ಪಂಗಡದವರಿಗೆ ವಿರೋಧವಾದ ಕೆಲವು ಶಾಸ್ತ್ರಗಳನ್ನು ಅವರು ಉಚ್ಚರಿಸಿದರಂತೆ ಇಷ್ಟು ಹೊತ್ತಿಗೆ ಸುನ್ನಿಗಳ ಒಂದು ದೊಡ್ಡ ಪಂಗಡವು ಆ ಮನೆಯ ಸುತ್ತಲೂ ಸೇರಿತು

ಸರಕಾರದ ಪ್ರಕಟನೆ ಪ್ರಕಾರ, ಶಾಂತಿ ಭಂಗದ ಕುರುಹುಗಳು ಕಂಡೊಡನೆ ಪೋಲೀಸ್ ದಳವನ್ನು ಗಲಾಟೆಯಾಗಲಿರುವ ಸ್ಥಳಕ್ಕೆ ಒಯ್ಯಲಾಯಿತಂತೆ ಅಷ್ಟರೊಳಗೆ ಎರಡು ಪಂಗಡದವರೂ ಕಲ್ಲುಗಳಿಂದ ಹೊಡಕೊಂಡಿದ್ದರು ದೊಂಬಿಯ ವಾರ್ತೆಯು ನಗರದಲ್ಲೆಲ್ಲ ಹಬ್ಬಿದೊಡನೆ ಎರಡು ಪಂಗಡದವರೂ ಜಗಳಕ್ಕಾರಂಭಿಸಿದರು ಸಣ್ಣ ಸಣ್ಣ ಗಲ್ಲಿಗಳಲ್ಲಿ ಖೂನಿಗಳು ನಡೆದ ವಾರ್ತೆ ಎದ್ದಿತು. ಪೋಲೀಸರು ಕರ್ಫ್ಯೂ ಆರ್ಡರನ್ನು ಜಾರಿಮಾಡಿ, ಎರಡು ಪಂಗಡಿಗರನ್ನೂ ಸಮಾಧಾನಪಡಿಸಿ ಅವರವರ ಮನೆಗಳಿಗೆ ಮುಟ್ಟಿಸಿದರಂತೆ

ಲಕ್ನೋ ದೊಂಬಿಯ ಭಯಂಕರ ವರ್ತಮಾನಗಳು ಬಂದಿರುತ್ತವೆ ಮನೆಗಳಿಗೆ ಬೆಂಕಿ ಕೊಡುವುದು, ಸೋಡಾ ಸೀಸೆಗಳ ಪ್ರಯೋಗ, ಇಟ್ಟಿಗೆ ತುಂಡುಗಳ ಹೊಡೆತ ಇವುಗಳಿಗೆಲ್ಲಾ ತುತ್ತಾದ ಸುಮಾರು ೩೦೦ ಮಂದಿಗಳು ಆಸ್ಪತ್ರೆಯ ಪಾಲಾಗಿರುವರು ಇತ್ತಂಡದವರ ಕುಟುಂಬದವರನ್ನು ಪೋಲೀಸ್ ಬಂದೋಬಸ್ತಿಯಲ್ಲಿ ಭದ್ರವಾದ ಸ್ಥಳಗಳಿಗೆ ಸಾಗಿಸುತ್ತಿದ್ದಾರೆ ನಾಥಾಸ್ ಬಡಾವಣೆಯಿಂದ ಬಂದಿದ್ದ ಒಂದು ವರ್ತಮಾನವು ಇನ್ನೂ ಭಯಂಕರವಾಗಿದೆ ೬ ವರ್ಷದ ಒಂದು ಹೆಣ್ಣು ಮಗುವನ್ನು ಎರಡು ತುಂಡಾಗಿ ಸೀಳಿರುವರಂತೆ ಒಂದು ಕಡೆ ಒಬ್ಬ ಹುಚ್ಚನನ್ನು ತಿವಿದುಕೊಂದಿರುವರು

ಸಿಂಧ್‌ದಲ್ಲಿ ಹಿಂದೂ ಮುಸ್ಲಿಂ ಗಲಾಟೆ

ಸಿಂಧುಪ್ರಾಂತ್ಯದ ಶಿಕಾರ್‌ಪುರ್‌ನಲ್ಲಿ ಹಿಂದೂ ಮುಸ್ಲಿಂರೊಳಗೆ ಗಲಾಟೆಯಾಗಿ ಒಬ್ಬ ಹಿಂದೂವಿನ ಮರಣವಾಗಿದೆ ಅಲ್ಲಿಯ ಒಂದು ಮಸೀದಿಯಲ್ಲಿ ಕುರಾನ್‌ಗ್ರಂಥದ ಹಾಳೆಗಳು ಸುಟ್ಟು ಬಿದ್ದಿರುವುದನ್ನು ನೋಡಿ ರೇಗಿದ ಮುಸಲ್ಮಾನರು ಹಿಂದೂ ವಸಾಹತುಗಳನ್ನು ಹೊಕ್ಕು ಲೂಟಿಗಾರಂಭಿಸಿದರು. ಅಷ್ಟರೊಳಗೆ ಪೋಲೀಸರ ದಳವು ಬಂದು ವಾತಾವರಣವನ್ನು ಸ್ವಲ್ಪ ತಣಿಸಲಾಯಿತು

ಪತ್ರಿಕಾ ಪ್ರತಿನಿಧಿಯ ಸುಳ್ಳುವಾರ್ತೆ

ಉದಕಮಂಡಳದ ಒಬ್ಬ ಪತ್ರಿಕಾ ಪ್ರತಿನಿಧಿಯು ಒಂದು ಹಸಿ ಹಸಿ ಸುಳ್ಳು ವಾರ್ತೆಯನ್ನು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೂ ಮತ್ತು ಮದ್ರಾಸಿನ ಕೆಲವು ಪತ್ರಿಕೆಗೂ ಕಳುಹಿಸಿದ್ದನು. ಆ ವರ್ತಮಾನವೇನೆಂದರೆ, ಮುಖಂಡರು ತಮ್ಮ ಧೋರಣೆಯನ್ನು ಬದಲಾಯಿಸಿ, ಅಧಿಕಾರವನ್ನು ಸ್ವೀಕರಿಸುವಂತೆ ತಮಗೆ ಅಪ್ಪಣೆ ಕೊಡಬೇಕೆಂದು ರಾಜಗೋಪಾಲಾಚಾರಿಯವರು ಮಹಾತ್ಮಾಜೀಯವರನ್ನು ಕೇಳಿಕೊಂಡರೆಂದೂ, ಗಾಂಧಿಜಿಯವರಿಂದ ಉತ್ತರವನ್ನು ನಿರೀಕ್ಷಿಸುತ್ತಲಿರುವರೆಂದೂ ಆ ವಾರ್ತೆಯು ತಿಳಿಸುತ್ತದೆ ಈ ವಿಶಯವನ್ನು ಕುರಿತು ಶ್ರೀ। ರಾಜಗೋಪಾಲಾಚಾರ್ಯರು ಮಹಾತ್ಮಾಜೀಯವರಿಗೆ ಬರೆದು ಕೇಳಿಕೊಂಡರು ಉತ್ತರವಾಗಿ ಗಾಂಧಿಜೀಯವರು "ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಯಾವ ಕಾಂಗ್ರೆಸ್ ಸದಸ್ಯನೂ ಅಧಿಕಾರ ಸ್ವೀಕಾರಕ್ಕೆ ಅಪ್ಪಣೆಯನ್ನು ನನ್ನಿಂದ ಅಪೇಕ್ಷಿಸಲಿಲ್ಲ"ವೆಂದು ತಂತಿಮಾಡಿರುವರು

ಜಾಟ್ ಪಂಗಡಗಳೊಳಗೆ ಜಗಳ
ಓರ್ವನ ಮರಣ

ಲಾಹೋರ್ ಜಿಲ್ಲೆಗೆ ಸೇರಿದ [illegible] ಹಳ್ಳಿಯಲ್ಲಿ ಸಿಖ್ ಮತ್ತು ಮುಸಲ್ಮಾನ್ ಮತಕ್ಕೆ ಸೇರಿದ ಜಾಟ್ ಪಂಗಡಗಳೊಳಗೆ ಜಗಳವಾಗಿ ಒಬ್ಬನ ಮರಣವಾಯಿತು. ಸಿಖ್ ಜಾಟರಿಬ್ಬರು ನಿಷೇಧಿಸಲ್ಪಟ್ಟ ಒಂದು ಸ್ಥಳದಿಂದ ಮರವನ್ನು ಕಡಿಯುತ್ತಿದ್ದಾಗ ಮುಸ್ಲಿಮರು ಆಕ್ಷೇಪ ಮಾಡಿದರು ಇತ್ತಂಡದೊಳಗೂ ಜಗಳಕ್ಕಾರಂಭವಾಯಿತ ಹತ್ತಿರದ ಛಾಂಗೆ ಪೋಲೀಸ್ ಸ್ಟೇಷನಿನವರು ಗಲಾಟೆ ಸ್ಥಳಕ್ಕೆ ಹೋಗಿ ತನಿಖೆ ನಡೆಸುತ್ತಿರುವರು

ಖೂನಿಕಾರ ಜಮೀನ್ದಾರರು

ಒಂದು ಚಿಕ್ಕ ಆಸ್ತಿಯ ವಿಚಾರದಿಂದ ಉಂಟಾದ ಜಗಳದಲ್ಲಿ ಶಿಪ್ರಾಗಢದ ನಾಲ್ಕು ಮಂದಿ ಜಮೀನ್ದಾರರು ೨ ಹೆಂಗಸರನ್ನೂ ಓರ್ವ ಹುಡುಗನನ್ನೂ ಕೊಂದರೆಂಬ ಅಪವಾದನೆಯ ಮೇಲೆ ಈ ನಾಲ್ಕು ಜಮೀನ್ದಾರರಿಗೆ ಮರಣಾಂತ್ಯ ಟಾಪು ಶಿಕ್ಷೆ ವಿಧಿಸಲ್ಪಟ್ಟಿದೆ

ಮುಸಲ್ಮಾನರೊಬ್ಬರು ಕಿರೀಟ ಧಾರಣ ಬಿರುದನ್ನು ತಿರಸ್ಕರಿಸಿದರು

ಹಬೀಗಂಜ್ ತಾಲೂಕ [illegible] ಅಧ್ಯಕ್ಷರಾದ ಮದಾಬೀರ್ ಹುಸ್ಸೆನ್ [illegible] ಎಂಬವರು ತಮಗೆ ಕಿರೀಟಧಾರಣ ಕಾಲದ ಭೂಷಣವಾಗಿ ಬಂದಿದ್ದ ಖಾನ್ ಸಾಹೇಬ್ ಬಿರುದನ್ನು ಹಿಂದಕ್ಕೆ ಕಳುಹಿಸಿರುವರು.

ಇಂದಿಗೆ ಐದು ವರ್ಷಗಳಿಂದ ನಡೆಯುತ್ತಿದ್ದ ಅಂತಃಕಲಹಗಳೇ ಜಸ್ಟಿಸ್ ಪಾರ್ಟಿಯ ಕಾರ್ಯಕ್ರಮಗಳಲ್ಲಿ ಕುಂದು ತಂದಂಥವುಗಳು ಸಾರ್ವಜನಿಕರಿಂದ ಈಗ ಅದನ್ನು ಮಾಯಗೊಳಿಸಲ್ಪಟ್ಟುದಕ್ಕೆ ಅದು ಧನ್ಯವಾದಗಳನ್ನರ್ಪಿಸಬೇಕು–

'ಎಡ್ವಾನ್ಸ್'

ಪತ್ರಿಕಾಭಿಪ್ರಾಯಗಳು.

ಗವರ್ನರರಿಗೆ ಎಚ್ಚರಿಕೆ.

ಮುಂದೆ ಹೆಚ್ಚು ಅಪಾಯ
ಆಂಗ್ಲ-ಹಿಂದೀಪತ್ರಿಕೆಗಳು ಗವರ್ನರರನ್ನು ಎಚ್ಚರಿಸುತ್ತದೆ

"ಎಷ್ಟು ಬೇಗನೆ ಗವರ್ನರರು ಕಾಂಗ್ರೆಸ್ ಮುಖಂಡರನ್ನು ಎರಡನೇ ಸಲಕ್ಕೆ ಕರೆಯುವರೋ, ಅಷ್ಟು ಒಳಿತಿದೆ ಗವರ್ನರರು ಸಪ್ಟಂಬರ್ ತಿಂಗಳ ವರೆಗೆ ಕಾಯುವುದು ದೊಡ್ಡ ತಪ್ಪಾಗಿರುತ್ತದೆ ಮಧ್ಯಪ್ರಾಂತ್ಯದ ಕಾಂಗ್ರೆಸ್ ಮುಖಂಡರು ಸಮಾನ ಸರಕಾರವನ್ನು ಸ್ಥಾಪಿಸಲಿರುವರು ಅದಕ್ಕಿಂತ ಮುಂಚೆ ಅವರು ಶಾಸನ ಸಭೆಗಳನ್ನು ಕೂಡಿಸಬೇಕೆಂದು ಗವರ್ನರರನ್ನು ವಿನಂತಿಸಿಕೊಂಡರೂ ಅವರು ತಿರಸ್ಕರಿಸಿದರು ಮದ್ರಾಸಿನ ಕಾಂಗ್ರೆಸ್ ಮುಖಂಡರು ಮಾಡಿದ ಕೇಳಿಕೆಗಳೂ ತಿರಸ್ಕರಿಸಲ್ಪಟ್ಟಿವೆ ಪ್ರಾಂತಿಕ ಜವಾಬುದಾರಿಯ ಆಡಳಿತ ಕ್ರಮದ ಪ್ರಾರಂಭದಲ್ಲಿಯೇ ತೊಂದರೆಗಳು ಬಂದಿವೆ ಶಾಸನ ಸಭೆಗಳನ್ನು ಗವರ್ನರರು ಬೇಗನೆ ಕರೆಯದಿದ್ದಲ್ಲಿ ತೊಂದರೆಗಳು ಇನ್ನೂ ಇರುವವು ಇದು 'ಸ್ಟೇಟ್ಸ್‌ಮೆನ್' ಎಂಬ ಆಂಗ್ಲೋ ಇಂಡಿಯನ್ ಪತ್ರಿಕೆಯ ಅಭಿಪ್ರಾಯ

ಸಂಯುಕ್ತ ಸಂಸ್ಥಾನದ ಗೊಂಬೆ ಮಂತ್ರಿ ಮಂಡಳವನ್ನು [illegible] "ಟ್ರಿಬ್ಯೂನ್" [illegible] ಇಂಗ್ಲಿಷ್ ಪತ್ರಿಕೆಯು ಈ ಕೆಳಗಿನಂತೆ ಬರೆಯುತ್ತದೆ ರೆಡ್ಡಿಗಳು ಮದ್ರಾಸಿನಲ್ಲಿ [illegible] ರವರು ನ್ಯಾಯವಲ್ಲವೆಂದು ತಿಳಿದ ಪದವಿಯನ್ನು ಸ್ವೀಕರಿಸಿದರೆಂದರೆ ಅದೇ ಪ್ರಕಾರ ಚಟ್ಟಾರಿಯ ನವಾಬರು ಕೂಡಾ ಸಂಯುಕ್ತ ಸಂಸ್ಥಾನದ ಸರಕಾರವನ್ನು ಮುನ್ನಡೆಸುವುದಕ್ಕೆ ಮಂತ್ರಿ ಪದವಿಗಳನ್ನು ಸ್ವೀಕರಿಸಿದರಂತೆ ಸಂಯುಕ್ತ ಪ್ರಾಂತ್ಯದ ಜನತೆಗೆ ಬ್ರಿಟಿಷ್ ದಪ್ತ್ರಾಳಿಗೆ ತಿಳಿದ ಇಂತಹ ರಾಜರುಗಳ ನವಾಬರುಗಳ [illegible] ಹಿತವಿದೆಯೆಂದು ಯಾರು ಹೇಳುತ್ತಾರೆ?

ಮೈನಾರಿಟಿಗಳಿಗ ಬಯಪಿಲ

ಜನಾಬ್ [illegible] ಅವರ [illegible] ಮುಸ್ಲಿಂ ಜನತೆಯ [illegible] ದೇಶದಿತದ [illegible] ವಾದ ಉದ್ದೇಶವಿದ್ದಲ್ಲಿ ಅವರು ದೇಶಹಿತಕ್ಕೆ ಅಡ್ಡಿಯನ್ನು ತಂದೊಡ್ಡುವುದಕ್ಕಿಂತ ಅದಕ್ಕೆ ಸಹಾಯವನ್ನು ಮಾಡಬಹುದಿತ್ತು ಕಾಂಗ್ರೆಸ್ಸು ಅಲ್ಪಸಂಖ್ಯಾಕರ ಹಿತಗಳನ್ನು ದುರ್ಲಕ್ಷಿಸುತ್ತದೆ ಎಂಬುದೆಂದರೆ ಅರ್ಥವಿಲ್ಲದ ಮಾತು. ಹಾಗೇನಾದರೂ ಕಾಂಗ್ರೆಸ್ಸು ಅಲ್ಪಸಂಖ್ಯಾಕರ ಹಿತಗಳನ್ನು ತಿರಸ್ಕರಿಸಿದರೆ ಅದು ಸ್ವತಂತ್ರ ಜನಾಂಗದ ತತ್ವವಿರೋಧವಾಗಿದೆಯೆಂದು ಯಾರು ತಿಳಿದಿಲ್ಲ?" ಹೀಗೆಂದು 'ಅಡ್ವಾನ್ಸ್' ಪತ್ರಿಕೆಯು ಬರೆಯುತ್ತಿದೆ

ಗೊಂಬೆ ಮಂತ್ರಿಗಳು ತಮ್ಮ ದುರ್ದಶೆಯನ್ನು ವರ್ಣಿಸುತ್ತಾರೆ

ಬಿಹಾರಿನ ತಾತ್ಕಾಲಿಕ ಮಂತ್ರಿಮಂಡಳದ ಮುಖಂಡರಾದ ಮಿ। ಎಂ [illegible] ರವರನ್ನು ಓರ್ವ ಪತ್ರಿಕಾಪ್ರತಿನಿಧಿಗಳು ಈ ಕೆಳಗಿನಂತೆ ಪ್ರಶ್ನಿಸಿದರು. "ಪಾಟ್ನಾದ ವಕೀಲ ಸಂಘದ ಆಶ್ರಯದಲ್ಲಿ ನೀವು "ಶಾಸನಸಭೆಯು [illegible] ದಾಗ ಯಾವ ಅಸಂಬಲಿಕೆಗಳ ಪ್ರಾರ್ಥ‌ನಾ ರಾಜಿನಾಮೆಯನ್ನು ಕೊಡುವ" ಎಂದು ಹೇಳಿದ್ದ ನಿಜವಾದ ವಾರ್ತೆಯೆ?

"ಇಂದು ನಾನು ಬಿಹಾರದ ಮುಖ್ಯ ಮಂತ್ರಿಯಾಗಿದ್ದೇನೆ ಹೌದು ಆದರೆ ವಕೀಲರ ಸಂಘದ ಸದಸ್ಯನಿಯನ್ನು ನಾನ [illegible] ಆದುದರಿಂದ ಈ ಸಂಘದ [illegible] ಸಂಘದ ಆಶ್ರಯದಲ್ಲಿ ಹೇಳಲ್ಪಟ್ಟ ಯಾವ ವಿಶಯದ ಕುರಿತು ನಾನ ಹೇಳ[illegible] ಕೊಡಲಾರೆ"

ಪ್ರಶ್ನೆ 'ನಿಮ್ಮ ಮಂತ್ರಿತ್ವವು ಎಷ್ಟು ಕಾಲ ಬಾಳಬಹುದು?'

ಉತ್ತರ 'ದೇವರೆ ಬಲ್ಲ'

ಪ್ರಶ್ನೆ ಮೂರು ವರ್ಷ [illegible]

ಉತ್ತರ ಮೂರು ವರ್ಷ [illegible] ಮಂತ್ರಿಗಳು ಶಾಂತಿ, ಮೂರು [illegible] ಎಷ್ಟು [illegible] ಹೇಳಬರುವುದಿಲ್ಲ'

WANTED

4 YOUNG WORKING PARTNERS 4

Capable of [illegible] indigenous industry [illegible] shortly

Please send [illegible] to –

'K'

C/o Swadeshabhimani
Mangalore

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. 'ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೆಂಬೂ ಫಲಕಾರಿಯಾಗದೇ ಇಂಜೆಕ್ಷನ್ ಮೊಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ದಾಹವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ವರ್ಷ. ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3–0–0 (ಮೂರು) ವಿ. ಪಿ. ಛಾರ್ಜು ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4

Sole Manufacturer Dr. D. N JASANI, Vithalbhai Patel Road, BOMBAY 4

Distributors for South Kanara —

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.
ಆಟೊಮೆಟಿಕ್ ಅಲಾರಂ ಪಿಸ್ತಲ್

(ಬಂದೂಕು)



ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತಲಿನಂತಿರುವುದು ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು, ಇದು ಒಂದು ನಮ್ಮಲ್ಲಿ ಇದ್ದರೆ ನಮ್ಮ ಸಹಾಯಕನಾಗಿರುವುದು, ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತಲ್ ಕೂಡ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲೆ ಹಾಕಿದ ಸ್ಪಾರ್ಕ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತಲು ೧ಕ್ಕೆ ತೋಟೆಗಳ ಸಹಿತ ೭–೮–೦ ಟಪ್ಪಾಲು ಖರ್ಚು ಪ್ರತ್ಯೇಕ

ಸ್ಟ್ಯಾನ್ ಹೌಸ್,
ನಂ ೩, ಇರುಳಪ್ಪನ ಬೀದಿ, ಮದ್ರಾಸು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ.

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ದಕ್ಷಿಣ ಕನ್ನಡದ ಏಜಂಟರು —ಪೋಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

ಕೊಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದ ಕೆಯೂ, ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳು ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಬಾಧೆಯು ಇಲ್ಲ

ಅನೇಕ ತರಹ ಮತ್ತು
ಪ್ರಮಾಣಗಳವೆ

ಮುಖ್ಯ ಏಜಂಟರು

ಕೆ ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ – ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ— ಗರ್ಭಶೂಲಿ, ಗರ್ಭಸ್ರಾವಕ್ಕೆ.

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ.

ಕೃಷ್ಣಾರಕ್—ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ವೃದ್ಧಿಕಾಸವ – ನಿಶ್ತ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ- ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ – ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಲಲಾಟ ಲಿಖಿತ

ಅಸ್ತಮಯನಾಗುವ ಸೂರ್ಯದೇವನು ತನ್ನ ಸುವರ್ಣ ರಶ್ಮಿಗಳನ್ನು ಪ್ರಕೃತಿಯ ಉದ್ದಕ್ಕೂ ಹರಡಿಕೊಂಡಿದ್ದ ಗಿರಿಬೆಟ್ಟಗಳ ಶಿಖರಗಳ ಮೇಲೆ ಪ್ರಸರಿಸಿದ್ದನು. ಮಣಿಪುರವು ನಗರದ ಈ ಕೋಟೆಯ ಒಂದು ಅಂಗವಾಗಿ ಸಾರ್ವಜನಿಕ ಇರಲಿಲ್ಲ. ಇದೇ ಸಮಯಕ್ಕೆ ಆ ಹಳ್ಳಿಯ ಬಾವಿಯು ಬಹಳ ಚಟುವಟಿಕೆಗಳ ಸ್ಥಾನವಾಗಿ ಮಾರ್ಪಟ್ಟಿತ್ತು. ಕಾರಣ ಅಲ್ಲಿ ಇರುವ ಒಂದೇ ಒಂದು ಬಾವಿಯಿಂದ ಹಳ್ಳಿಯ ನೂರೈವತ್ತು ಮನೆಗಳಿಗೂ ನೀರಿನ ಸರಬರಾಯಿಯಾಗಬೇಕು. ತಾಲೂಕು ಅಧಿಕಾರಿಗಳ ಅಸಡ್ಡೆಯಿಂದಲೋ, ಸರಕಾರದ ತಿರಸ್ಕಾರದಿಂದಲೋ ಆ ಹಳ್ಳಿಗೆ ಕೆಲವೊಂದು ಬಾವಿಗಳಾಗುವ ಪುಣ್ಯವು ಇನ್ನೂ ಒದಗಲಿಲ್ಲ. ಒಂದು ಬಾವಿಯಿದ್ದ ಮಾತ್ರಕ್ಕೆ ಅದೆಷ್ಟು ಜನರು ಒಂದು ಬಾರಿ ನೀರನ್ನು ಸೇದಬಹುದು? ಆದರೆ ಬಹಳೇ ತಿಳುವಳಿಕೆಯಿಂದ ವಾಸಿಸುತ್ತಿದ್ದ ಆ ಹಳ್ಳಿಗರು ಒಬ್ಬರಾದ ಮೇಲೊಬ್ಬರು ಸರ್ತಿ ಪ್ರಕಾರ ನೀರನ್ನು ತೆಗೆದುಕೊಂಡು ಹೋಗುತ್ತಿದ್ದರು.

ಸೀತೆಯು ತನ್ನ ಸರ್ತಿಯನ್ನು ಕಾಯುತ್ತಿದ್ದಳು. ಬಹಳ ಹೊತ್ತಾದರೂ ಅವಳಿಗಿಂತ ಮೊದಲು ಬಂದಿದ್ದವರ ಕೆಲಸವೇ ಮುಗಿಯದಾಗ ಸೀತೆಯು ಅಸ್ತಂಗತನಾಗುತ್ತಿರುವ ಸೂರ್ಯನಾರಾಯಣನನ್ನು ನೋಡಿ ಭ್ರಮೆಗೊಂಡವಳಂತೆ ನಿಂತಲ್ಲಿಯೇ ನಿಂತಿದ್ದಳು. ಕೈಯಲ್ಲಿದ್ದ ಕೊಡವು ಬಾವಿಯ ದಂಡೆಯಲ್ಲಲಂಕೃತವಾಗಿತ್ತು. ಕಡೆಗೆ ಸೀತೆಯ ಸರ್ತಿಯು ಬಂತೆ ಬಂತು. ಅಲ್ಲಿ ಸೇರಿದ್ದ ಹೆಂಗುಸರ ನಾನಾ ತರದ ಸುದ್ದಿಗಳಿಗೆ ಸೀತೆಯು ಕಿವಿಗೊಟ್ಟು ಮೆಲ್ಲಗೆ ನೀರಿನ ಕೆಲಸವನ್ನು ಮಾಡುತ್ತಿದ್ದಳು. ತುಂಬಿದ ಕೊಡವನ್ನು ಹಗ್ಗದಿಂದ ಸಡಲಿಸಿ ಸೊಂಟದ ಮೇಲೆ ಇಟ್ಟುಕೊಳ್ಳಲು ಅವಳು ಅಸ್ತವ್ಯಸ್ತವಾದ ತನ್ನ ಸೀರೆಯನ್ನು ಸರಿಪಡಿಸಿಕೊಳ್ಳುತ್ತಿದ್ದ ಹಾಗೆ ಥಟ್ಟನೆ ಅವಳ ಗಮನವು ದೂರದಲ್ಲಿನ ಒಂದು ಮರದಡಿಯಲ್ಲಿ ನಿಂತಿರುವ ಆಗಂತುಕ ವ್ಯಕ್ತಿಯ ಕಡೆಗೆ ಸೆಳೆಯಲ್ಪಟ್ಟಿತು. ವ್ಯಕ್ತಿಯು ದಿಂತವಾದ ತರುಣನಾಗಿದ್ದು ಒಳ್ಳೊಳ್ಳೆಯ ಉಡುಪುಗಳನ್ನು ಧರಿಸಿದ್ದನು. ಅವನ ತಲೆಯ ಮೇಲಿನ ಆವರಣದಿಂದ ಅವನು ದಕ್ಷಿಣದವನಾಗಿರದೆ ಉತ್ತರ ದೇಶಸ್ಥನಂತೆ ಕಾಣುತ್ತಿದ್ದನು. ಗಟ್ಟಿಮುಟ್ಟಾದ ಅವನ ದೇಹ ಪ್ರಕೃತಿಯು ಸ್ವಾಭಾವಿಕವಾಗಿ ಯಾರ ಗಮನವನ್ನಾದರೂ ಸೆಳೆಯುವಂತಹದಿದ್ದು ಆ ಸೆಳೆತಕ್ಕೆ ಸೀತೆಯು ಬಿದ್ದುದೇನು ಆಶ್ಚರ್ಯವಲ್ಲ. ಆ ತರುಣನು ಸೀತೆಯನ್ನು ಎವೆಯಿಕ್ಕದೆ ಒಂದೇ ಸವನೆ ಪ್ರಶಾಂತವಾದ ಮುಖಭಾವದಿಂದ ನೋಡುತ್ತಿದ್ದನು. ಸೀತೆಗೆ ಆಗುಂತುಕನ ವರ್ತನೆಯು ಕಳವಳಗೊಳಿಸಿತು. ಬೇರೆ ಯಾವುದೋ ಕಡೆಗೆ ನೋಡಿ ಅವಳು ನೀರಿನ ಕೊಡವನ್ನು ಎತ್ತಿಕೊಂಡು ಹೋದಳು. ಒಂದು ಕ್ಷಣಕ್ಕೆ ಅವಳ ಮನಸ್ಸಿನಲ್ಲಿ ಆಗಂತುಕನ ನೆನಪು ಉಳಿಯಿತು, ಪುನಃ ಅದು ಅಳಿದುಹೋಯಿತು. ಆ ತರುಣ ವ್ಯಕ್ತಿಯು ತನ್ನನ್ನೆ ನೋಡುತ್ತಿದುದರ ಅರ್ಥವು ಸೀತೆಗೆ ಹೊಳೆಯಲಿಲ್ಲ. ಅವಳು ಮನೆಯನ್ನು ಸೇರಿದಳು.

ಸೀತೆಯು ವೈದಿಕ ಕುಟುಂಬದಲ್ಲಿ ಹುಟ್ಟಿದವಳು. ವೈದಿಕ ವೃತ್ತಿಯಲ್ಲಿದ್ದ ಅವಳ ತಂದೆಗೆ ಅವಳು ಒಬ್ಬಳೇ ಮಗಳು-ಅಷ್ಟೆ ಅಲ್ಲ, ಬಹು ಪ್ರೀತಿಯಿಂದ ಸಾಕಿದ ಮಗಳು. ಬಡತನದ ಬೇಗೆಯು ಅವರ ಚಿಕ್ಕ ಸಂಸಾರದ ಮೇಲೆ ಬೀಸಿದ್ದರೂ, ಶಾಸ್ತ್ರಿಗಳಿಗೆ ಹಳ್ಳಿ ದೇವಸ್ಥಾನದಲ್ಲಿ ಪೂಜಾರಿ ಕೆಲಸವಿದ್ದುದರಿಂದ ಹೆಚ್ಚಿನ ತಾಪತ್ರಯಗಳಿರಲಿಲ್ಲ. ಸೀತೆಗೆ ಗಣ ವಯಸ್ಸು ಮೀರಿದ್ದರೂ ಶಾಸ್ತ್ರಿಗಳಿಗೆ ಅವಳಿನ್ನೂ ಬಾಲೆ. ಸೀತೆಯಾದರೋ ಬಾಲ್ಯದ ಸಂತೋಷಮಯ ಜೀವನದ ಗಡಿಗಳನ್ನು ದಾಟಿ ತಾರುಣ್ಯದ ಹೆಬ್ಬಾಗಿಲುಗಳನ್ನು ಪ್ರವೇಶಿಸುತ್ತಿದ್ದಳು. ಅವಳಿಗೆ ಪ್ರಾಪಂಚಿಕ ವಿಚಾರಗಳ ಅರಿವು ಹೆಚ್ಚಾಗಿ ಆಗಲಿಲ್ಲದಿದ್ದರೂ, ಬಾಲ್ಯವಿವಾಹದ ಪದ್ಧತಿಯು ಪ್ರಚಾರದಲ್ಲಿದ್ದ ಆ ಕಾಲದಲ್ಲಿ ಗಣ ವರ್ಷಗಳ ತನಕ ಬೆಳೆದ ತರುಣಿಯರ ಮನೋಭಾವವು ಸ್ವಾಭಾವಿಕವಾಗಿ ಸ್ವಲ್ಪ ಪಕ್ವವಾದುದೆ ಇರಬೇಕು.

ಸೀತೆಗೆ ಯುವಕನ ದರ್ಶನವಾದಂದಿನಿಂದ ಯಾವುದೋ ಒಂದು ಅಪೂರ್ವ ತರದ ಭಾವನೆಯು ಅವಳನ್ನು ಕಾಡುತ್ತಲಿತ್ತು. ನಿರೂಪಿಸಲಶಕ್ಯವಾದ ಆ ಭಾವನೆಯು ಬಂದೊಡನೆ ಸೀತೆಯ ಮನೋದೃಶ್ಯದಲ್ಲಿ ಆ ಉತ್ತರೀಯ ಆಗಂತುಕನ ಭವ್ಯವ್ಯಕ್ತಿತ್ವವು ಕಾಣಬರುತಿತ್ತು. ಅವಳೊಂದು ಕ್ಷಣಕ್ಕೆ ಭಾವವಿಕಾರಗಳಿಂದ ನರಳುವಳು. ಮತ್ತೊಂದು ಕ್ಷಣಕ್ಕೆ ಆ ವಿಕಾರಗಳು ಅರ್ಥವಿಲ್ಲದವುಗಳೆಂದೂ, ತಾನಾ ವಿಕಾರಗಳಿಗೆ ಎಡೆಕೊಟ್ಟುದಕ್ಕೆ ನಾಚಿಕೊಳ್ಳುವಳು. ಏನಾದರೇನು? ವೈದಿಕ - ಕುಲೋತ್ಪನ್ನಳಾದ ದಕ್ಷಿಣದ ಓರ್ವ ಕನ್ನಿಕೆಗೂ ಪರಕೀಯನಾದ ಉತ್ತರೀಯ ತರುಣನಿಗೂ ಎಲ್ಲಿಂದೆಲ್ಲಿಯ ಸಂಬಂಧ?

ಮರುದಿನ ಸಾಯಂಕಾಲ ಸೀತೆಯು ನೀರನ್ನು ಸೇದಲು ಬರುವಾಗ ಅವಳ ಮನೋಚಿತ್ರಪಟದಲ್ಲಿ ಯಾವ ತರದ ಭಾವನೆಗಳೂ ಇರಲಿಲ್ಲ. ಅವಳ ಎಳೇ ಮನಸ್ಸನ್ನು ಚಲ್ಲಾಬಿಲ್ಲಿ ಮಾಡಿದ ಹಿಂದಿನ ದಿನದ ಆ ಚಿಕ್ಕ ಘಟನೆಯು ಅವಳಿಂದ ಪೂರ್ಣ ಮಾಯವಾಗಿ ಹೋಗಿತ್ತು. ಪುನಃ ಅವಳು ನೀರು ತೆಗೆಯಲು ಕೊಡವನ್ನು ಬಾವಿಗಿಳಿಸುತ್ತ ಹಗ್ಗವನ್ನು ಚಾತುರ್ಯದಿಂದ ಅಲ್ಲಾಡಿಸಿ ಕೆಳಗಿನ ಕೊಡದಲ್ಲಿ ನೀರು ತುಂಬಿಸಲು ಪ್ರಯತ್ನಪಡುತ್ತಿದ್ದ ವೇಳೆ ಅದೇ ಯುವಕ, ಅದೇ ದೃಷ್ಟಿ, ಅದೇ ಸ್ಥಾನ, ಇನ್ನೇನು ಅದೇ ಆಕರ್ಷಣೀಯ ವ್ಯಕ್ತಿತ್ವ ಎಂದಿಗಿಂತಲೂ ಇಮ್ಮಡಿಯಾಗಿ ಅವಳಲ್ಲಿ ಕಳವಳವುಂಟಾಯಿತು. ಅವನನ್ನು ನೋಡಿದೊಡನೆ ಅವಳೊಂದು ಕ್ಷಣಕ್ಕೆ ತಲೆಯನ್ನು ಬಾವಿಯಲ್ಲಿನ ಕೊಡದ ದಿಕ್ಕಿಗೆ ತಿರುಗಿಸಿ, ತರುಣನ ದೃಷ್ಟಿಯಿಂದ ತನ್ನಲ್ಲಿ ಏನೂ ಪರಿಣಾಮವಾಗ ಲಿಲ್ಲವೆಂಬ ಭಾವನೆಯನ್ನು ತೋರ್ಪಡಿಸುವವಳಾದಳು. ಆದರೆ ಎಷ್ಟರ ತನಕ ಆ ಆಕರ್ಷಣೀಯ ಶಕ್ತಿಯನ್ನವಳು ಪ್ರತಿಕೂಲಿಸಬಹುದು. ಕೊಡವನ್ನು ಮೇಲಕ್ಕೆಳೆಯುವ ಕಾಲಕ್ಕೆ ಸೆರಗನ್ನು ಸರಿಮಾಡುವ ನೆಪದಿಂದ ಒಂದು ಸರ್ತಿ ದೃಷ್ಟಿಯನ್ನು ಆ ಜಾಗಕ್ಕೆ ತಿರುಗಿಸಿದಳು. ಪುನಃ ಅದೇ ದೃಷ್ಟಿ, ಅದೇ ಯೌವನ, ಅದೇ ವ್ಯಕ್ತಿತ್ವ ಈಗೇನು ಮಾಡುವಳು? ಅವಳಿಗೂ ಅವನನ್ನು ಸರಿಯಾಗಿ ನೋಡಬೇಕೆಂದು ಕುತೂಹಲವು ಹುಟ್ಟಿ, ಒಂದು ಕ್ಷಣ, ಎರಡು ಕ್ಷಣ, ಮೂರು ಕ್ಷಣ ನೋಡಿದಳು. ಇನ್ನೂ ಅವನು ನೋಡುತ್ತಲೇ ಇದ್ದನು, ಸೀತೆಯೂ ತನ್ನನ್ನು ನೋಡುತ್ತಿದ್ದುದು ಅವನಲ್ಲಿ ಹರುಷವನ್ನುಂಟುಮಾಡಿತೋ ಏನೋ-ಅವನು ಸ್ವಲ್ಪ ಮುಗುಳುನಗೆಯನ್ನು ಬೀರಿದನು. ಏಕಾಕಿಯಾಗಿ ಅಪರಿಚಿತ ತರುಣನೊಬ್ಬನು, ಅದೂ ಅಪರಿಚಿತ ದೇಶಿಗನೊಬ್ಬನು ವಿವಾಹಪ್ರಾಯಭರಿತೆಯಾದ ವೈದಿಕ ತರುಣಿಯನ್ನು ನೋಡಿ ನಗುವುದೆಂದರೆ ಅದೆಂತಹ ಪ್ರಮಾದವಾಗಲಿಕ್ಕಿಲ್ಲ. ಸೀತೆಯು ನೀರನ್ನು ತೆಗೆದುಕೊಂಡು ಮನೆಗೆ ಬಂದಳು. ತನ್ನನ್ನೋರ್ವ ಪರಕೀಯ ಯುವಕನು ನೋಡಿ ನಕ್ಕ, ವಿಷಯವು ಯಾರಿಗೂ ತಿಳಿಯಲಿಲ್ಲವೆಂದು ಅವಳಿಗೆ ಸ್ವಲ್ಪ ಸಮಾಧಾನವಿತ್ತು. ಮುಂದೆ ಅಂತಹ ಘಟನೆಗಳಿಗೆ ತಾನು ಎಡೆಕೊಡಬಾರದೆಂದು ಅವಳು ನಿರ್ಧರಿಸಿದಳು.

ಯಾವುದಾದರೊಂದು ನಿರ್ಧಾರವನ್ನು ಮಾಡಿಕೊಂಡರೆ ಯಾವ ವಿಷಯವಾಗಿ ಆ ಆ ನಿರ್ಧಾರವು ಮಾಡಲ್ಪಟ್ಟಿದೆಯೋ ಆ ವಿಷಯವಾಗಿ ಇನ್ನೂ ಹೆಚ್ಚಿನ ಶೋಧನೆಗಳಾಗುವುದು ಮನುಷ್ಯ ಪ್ರಕೃತಿಯ ಸ್ವಭಾವ. ಅಂದರೆ ಎಂದು ಸೀತೆಯು ನಿರ್ಧಾರವನ್ನು ನಿರ್ಧರಿಸಿದಳೋ ಆ ಕ್ಷಣದಿಂದಲೇ ಅವಳಲ್ಲಿ ಆಗಂತುಕ ವ್ಯಕ್ತಿಯ ವಿಚಾರವಾಗಿ ಹೆಚ್ಚು ಹೆಚ್ಚು ತಿಳಿಕೊಳ್ಳಬೇಕೆಂದು ಆಶೆಯು ಅವಳಿಗುಂಟಾಯಿತು. ಪ್ರತಿಕ್ಷಣಕ್ಕೂ ಅವಳ ಮನಸ್ಸಿನಲ್ಲಿ ಆ ಯುವಕನ ಗಂಭೀರ ತೇಜವು ಪ್ರತಿಬಿಂಬಿಸತೊಡಗಿತು. ರಾತ್ರಿಯನ್ನು ಕಳೆಯುವುದೂ ಕಷ್ಟವೆಂದು ಅವಳಿಗೆ ತೋರಿತು. ಅಂತೂ ಮರುದಿನ ಪ್ರಾತಃಕಾಲ ಅವಳು ಎಂದೂ ಇರದ ಹುರುಪಿನಿಂದಿದ್ದಳು. ಯಥಾಪ್ರಕಾರ ಬಾವಿಯ ಕಡೆಗೆ ಹೋಗುತ್ತಿರುವಾಗಲೇ ಅದೇ ವ್ಯಕ್ತಿ, ಅದೇ ಗಂಭೀರ ಸ್ವರೂಪ, ಅದೇ ತರುಣ, ಅದೇ ಸ್ಥಾನದಲ್ಲಿ ನಿಂತಿದ್ದು ಅದೇ ದೃಷ್ಟಿಯಿಂದ ನೋಡುತ್ತಿದ್ದನು . . .

ಹೀಗೆ ಸಾಯಂಕಾಲಗಳು ಪ್ರಾತಃಕಾಲಗಳನ್ನನುಸರಿಸಿದುವು. ಪ್ರಾತಃಕಾಲಗಳು ರಾತ್ರಿಯನ್ನು ಹಿಂಬಾಲಿಸಿದುವು-ದಿನಗಳು ಉರುಳಿ ವಾರಗಳು ದಾಟಿದುವು. ಸೀತೆಯು ಎಂದಿನಂತೆ ಬಾವಿಯ ಕಡೆಗೆ ಬಂದಾಗ ಅವಳು ನೋಡುತ್ತಿರುವುದು ಅದೇ ವ್ಯಕ್ತಿ ಅದೇ . . . .

ಅದೊಂದು ಸಾಯಂಕಾಲ ಸೀತೆಯು ಎಂದಿನಂತೆ ಅಂದೂ ಕೊಡವನ್ನು ಹಿಡಿದುಕೊಂಡು ಬಾವಿಗೆ ಬಂದಳು. ಆಗಲೂ ಅದೇ ವ್ಯಕ್ತಿ ಅದೇ ...

ಆಗಲೇ "ಮಗೂ, ವಿಷಯವೇನು?" ಎಂಬೊಂದು ಪ್ರಶ್ನೆಯು ಸೀತೆಯ ಕಿವಿಗೆ ಕೇಳಿಸಿತು. ಇದ್ದಕ್ಕಿದ್ದ ಹಾಗೆಯೇ ಅವಳು ತಕ್ಕಾಬಿಕ್ಕಿಯಾದಂತಾದಳು. ಹಿಂತಿರುಗಿ ನೋಡಿದಳು-ಅಲ್ಲಿ ಅವಳ ಮಾತಾಮಹಿಯು ಊರುಗೋಲು ಹಿಡಕೊಂಡು ಬಿರಬಿರನೇ ನೋಡುತ್ತಿದ್ದಳು "ಏನು ನೋಡುವೆ? ವಿಷಯವೇನು? ಮರೆಮಾಚದಿರು" ಎಂದು ಮುದುಕಿಯು ಪುನಃ ಕೇಳಿದಳು.

"ಅದೇನಿಲ್ಲ, ವಿಷಯವೇನಿಲ್ಲವಲ್ಲಾ"

"ಇಲ್ಲವೆ, ಮಗೂ, ನನ್ನಲ್ಲಿ ಮರೆಮಾಡಬೇಡ, ವಿಷಯವು ನನಗೆ ತಿಳಿಯದೆ ಇಲ್ಲ. ದೂರದಲ್ಲಿ ನಿಂತಿರುವ ಆ ತರುಣನು ನಿನ್ನನ್ನು ನೋಡುತ್ತಲೆ ಇರುವನಾದುದರಿಂದ ನೀನು ಬಹಳೇ ಕಳವಳಗೊಂಡಿರುವೆ. ನನಗೆ ಚೆನ್ನಾಗಿ ಸಂಗತಿ ತಿಳಿದಿರುತ್ತದೆ. ನೀನು ಮಾತ್ರ ಆ ಕಡೆಗೆ ಗಮನ ಕೊಡದಿರು. ನಿನ್ನ ತಂದೆಯು ಊರಲ್ಲಿಲ್ಲ. ಅವನು ಬಂದೊಡನೆ ಆ ಅಹಂಕಾರಿ ತರುಣನ ದಿಟ್ಟತನವನ್ನು ಮುರಿಸದೆ ಬಿಡೆನು"

'ಆದರೆ ಅವನಾರಿರಬಹುದು' ಸೀತೆಯು ಉತ್ಸಾಹದಿಂದ ಕೇಳುವಳು.

"ಗೊತ್ತಿಲ್ಲವೆ ಮಗೂ ನಿನಗೆ. ಅವನು ಪಠಾಣರವನು. ಪರಶಿವನ ವಾಸಸ್ಥಾನವಾದ ಪರಮಪವಿತ್ರ ಕೈಲಾಸ ಪರ್ವತದ ಪದತಳದಲ್ಲಿಯೇ ಅವನ ವಾಸಸ್ಥಾನ. ಆದರೆ ಅವನು ಮುಸಲ್ಮಾನನು. ಅವರಿಗೆಲ್ಲಿ ಅದರ ಪವಿತ್ರತೆ ತಿಳಿಯಬೇಕು?" ಎಂದಳು ಮುದುಕಿ.

"ಏನು ಅವನು ಪಠಾಣರವನೆ? ಬಹಳ ಕ್ರೂರರೆಂದು ವರ್ಣಿಸಲ್ಪಟ್ಟ ಪಠಾಣರವನೇ ಅವನು ಅಜ್ಜಮ್ಮಾ, ಆದರೆ ಈ ತರುಣನು ಬಹಳ ಶಾಂತನಾಗಿ ಕಾಣುವನಲ್ಲಾ' ಎಂದು ಸೀತೆಯು ಆಲಾಪಿಕೆಯಿಂದ ಕೇಳಿದಳು.

'ಅವರು ಹಾಗೆಯೇ ತೀಕ್ಷ್ಣತೆ, ರಕ್ಕಸತನದಲ್ಲಿ ಅವರನ್ನು ಮೀರುವವರು ಬೇರಾರೂ ಇಲ್ಲ. ಈಗ ನೀನು ಮನೆಗೆ ಹೋಗು. ಅವನು ಹೇಗೆ ಇದ್ದರೆ ನಿನಗೇನು? ನಾಳೆ ನಾಡಿದ್ದು ಮದುವೆಯಾಗಲಿರುವ ನಿನಗೆ ಪರಕೀಯ ತರುಣರ ವಿಚಾರವೇಕೆ? ನಿನ್ನ ಮದುವೆಯ ವಿಚಾರವಾಗಿ ನಿನ್ನ ತಂದೆಯು ಆ ಊರಿಗೆ ಹೋಗಿ ಏರ್ಪಾಡು ಮಾಡಲಿದ್ದಾರೆ. ನಿನ್ನ ಮನಸ್ಸನ್ನು, ಮುಂದೆ ನಿನ್ನ ಪತಿದೇವನಾಗುವವನಲ್ಲಿ ಕೇಂದ್ರೀಕರಿಸುವವಳಾಗು. ಪೂರ್ವ ಜನ್ಮದಲ್ಲಿ ನಿನ್ನ ಪತಿಯಾದವನು ಈ ಜನ್ಮದಲ್ಲಿಯಾದರೂ ನಿನ್ನ ಪತಿಯೇ ಆಗುವುದು ಖಂಡಿತ. ನಿನ್ನ ಲಲಾಟ ಲೇಖನದಒಂದೇ ಒಂದು ಅಕ್ಷರವನ್ನು ಅಳಿಸಲು ಯಾರಿಂದಲೂ ಸಾಧ್ಯವಿಲ್ಲ"

ಸೀತೆಯು ಮುದುಕಿಯ ಭಾಷಣದಿಂದ ಬೆಚ್ಚಿಬಿದ್ದಳು. ಪ್ರಾಯದಲ್ಲಿ ಚಿಕ್ಕವಳಾದರೂ ಹಳ್ಳಿಗರ ಕಣ್ಣಿನಲ್ಲಿ ಅವಳು ಓರ್ವ ಹೆಂಗಸೆಂದೇ ಭಾವಿಸಲ್ಪಟ್ಟಿದ್ದಳು. ಅಜ್ಜಿಯ ಮಾತುಗಳು ಅವಳಲ್ಲಿ ಭವಿಷ್ಯದ ಯಾವುದೋ ಒಂದು ಭಯವನ್ನುಂಟುಮಾಡಿತು. ಅವಳು ಮರುಮಾತನಾಡಲಿಲ್ಲ. ಕೊಡವನ್ನು ಹಿಡಕೊಂಡು ಮನೆಗೆ ಹಿಂತಿರುಗಲನುವಾದಳು.

ಮರುದಿನ ಸೀತೆಯ ತಂದೆಯವರು ಮನೆಗೆ ಬಂದರು. ಮುದುಕಿಯು ಅವನೊಂದಿಗೆ ಪಿಸುಗುಟ್ಟುತ್ತಿದ್ದ ಸಂಗತಿಯು ಸೀತೆಯ ದೃಷ್ಟಿಬಾಹಿರವಾಗಲಿಲ್ಲ. ಅವಳು ನೋಡಿದಳು. ಸ್ವಲ್ಪ ಕೇಳಿದಳು.....ಮರುದಿನ ಸೀತೆಯು ಬಾವಿಕಡೆಗೆ ಹೋದಳು ಆದರೆ-ಆದರೇನು? ಆ ವ್ಯಕ್ತಿ ಆ ಗಂಭೀರನೋಟ, ಆ ಭಾವ ಆ-ಒಂದೂ ಇಲ್ಲ. ವರ್ಣಿಸಲಸದಳವಾದ ಅಸಮಾಧಾನವು ಸೀತೆಗಾಯಿತು. ಏತಕ್ಕೆ? ಏತಕ್ಕೊ ಯಾರು ಬಲ್ಲರು? ಅಂತೂ ಅವಳಿಗೆ ಅಸಮಾಧಾನವಾಯಿತು. ಬಹುಶಃ ಅಂದು ಆ ಪಠಾಣ ತರುಣನು ಅಲ್ಲಿ ಕಾಣಸಿಗಲಿಲ್ಲವೆಂದೇ ಸೀತೆಯ ಈ ಕಳವಳವಿರಬಹುದೊ? ಏನೇ ಇರಲಿ ಅಂದವಳಲ್ಲಿ ಹರುಷವಿರಲೇ ಇಲ್ಲ.

ಆ ದಿನ ದಾಟಿತು. ಪ್ರಾತಃಕಾಲವಾಯಿತು. ಸೀತೆಯು ಹಿಂದಿನ ರಾತ್ರಿಯೆಲ್ಲ ಆ ಪಠಾಣನ ಧ್ಯಾನದಲ್ಲೆ ಎಂಬಂತೆ ಕಳೆದಿದ್ದಳು. ಏಳುತ್ತಲೇ ಅವಳ ಮನೆಯ ಅಂಗಳದಲ್ಲಿ ಬಹಳ ಗಲಾಟೆಯಾಗುವಂತೆ ಅವಳಿಗೆ ತೋರಿತು. ಹೊರಬಾಗಿಲ ಕಡೆ ಧಾವಿಸಿದಳು. ಪಠಾಣನ ವಿಚಾರವೆ ಆ ಗಲಾಟೆ ಆಗಿರಬಹುದೆಂದು ಅವಳು ಊಹಿಸಿದ್ದರೂ ಇರಬಹುದು. ಅಷ್ಟಕ್ಕೆ ಅವಳ ತಾಯಿಯು ಅವಳನ್ನು ತಡೆದು 'ಮಗೂ, ನೀನು ಅಲ್ಲಿ ಹೋಗಬಾರದು. ಆ ಕೆಟ್ಟವರ್ತಮಾನವನ್ನು ನೀನು ಕೇಳಲೂ ಬಾರದು' ಎಂದಳು.

"ಅಮ್ಮಾ, ಅಮ್ಮಾ, ಅದೇನಿರಬಹುದು' ಸೀತೆಯು ನಡುಗುತ್ತ ಕೇಳಿದಳು.

'ಅದೇ, ಆ ಹಾಳಾದ ಪಠಾಣ' ತಾಯಿ ಎಂದಳು 'ನಿನಗೆ ಅವನ ಪಂಚರಪಿಡ್ಡ ವಿಚಾರವು ನನಗೆ ತಿಳಿದೇ ಇದೆ. ಅವನಿಂದ ನಿನಗೆ ತುಂಬಾ ತೊಂದರೆ ಇತ್ತು. ಈಗ ಅದು ತಪ್ಪಿತು. ಅವನು ಸತ್ತುಹೋದನು. ಆದರೆ ಸಾಯಬೇಕಾದರೆ ನಮ್ಮ ದೇವಸ್ಥಾನದ ಮೆಟ್ಟಿಲನಲ್ಲಿಯೇ ಬಿದ್ದು ಸಾಯಬೇಕೆ ಹಾಳಾದವನು. ನಮ್ಮ ದೇವಸ್ಥಾನದ ಎದುರು ಕೂಡ ಬರಲು ಆ ಮುಸಲ್ಮಾನನಾದವನಿಗೆ ಅಧಿಕಾರವಿಲ್ಲ. ನಮಗಷ್ಟು ಕಷ್ಟ ಈಗ. ನಿನ್ನ ತಂದೆಯವರು ದೇವಸ್ಥಾನ ಪವಿತ್ರಗೊಳಿಸುವ ಪ್ರಯತ್ನದಲ್ಲಿದ್ದಾರೆ. ಪಠಾಣನ ಶವ ಕಡೆಯುವರೆಗೆ ಜನರು ಕಳುಹಲ್ಪಟ್ಟಿರುವರು. ಮುಂದರಿಸುತ್ತಾ ತಾಯಿಯು 'ಸೀತಾ ನೀನೀಗ ಅಲ್ಲಿಗೆ ಹೋಗಬೇಕಿಲ್ಲ. ನಾನೇ ತರುವೆನು' ಎಂದಳು.

ಸೀತೆಯು ಮನೆಗೆಲಸದಲ್ಲಿ ಮಗ್ನಳಾದಳು. ತನ್ನ ಮಾನಸಿಕ ಯೋಚನೆಗಳನ್ನವಳು ಜಗ್ಗ ನೋಡಿದಳು. ಸಾಧ್ಯವಾಗದೆ ಹೋಯಿತು. 'ಪಠಾಣನ ಸತ್ತರೆ ನನಗೇನು' ಎಂದವಳು ಪದೇ ಪದೇ ತನ್ನಲ್ಲಿಯೇ ಪ್ರಶ್ನಿಸತೊಡಗಿದಳು. ಆದರೂ ವ್ಯರ್ಥ. ಅಷ್ಟರಲ್ಲಿ ನೀರಿಗೆ ಹೋದ ತಾಯಿಯು ಹಿಂತಿರುಗಿದಳು. 'ಹುಸ್ಸಪ್ಪಾ, ಎನಾಶ್ಚರ್ಯವಿದು' ಇದಕ್ಕೇ ನೋಡೋಣ ಇರಬೇಕು. ಪಠಾಣನ ಶವವನ್ನು ನಾಲ್ವರು ಬಂದಿದ್ದಾರೆ. ಎಷ್ಟು ಪ್ರಯತ್ನ ಪಟ್ಟರೂ ಹೆಣವನ್ನು ಎತ್ತಲಿಕ್ಕೆ ಅವರಿಂದ ಸಾಧ್ಯವಾಗಲಿಲ್ಲ' ಎಂದು ನಿಟ್ಟುಸಿರುಬಿಟ್ಟಳು. 'ಏನಮ್ಮಾ ಅದು ಆಶ್ಚರ್ಯವೆಂದೆನ್ನುವುದು' ಸೀತೆಯು ತಾಯಿಯನ್ನು ಉತ್ಸಾಹದಿಂದ ಕೇಳಿದಳು. 'ಏನಿಲ್ಲ ನಿನಗೇಕೆ ಆ ವಿಚಾರ' ತಾಯಿ ಸೀತೆಯನ್ನು ಗದರಿಸಿದಳು. ಪತ್ತೆಯಾದ ಬಾವಿ ತಾಯಿ ನೀರು ತರಲು ಹೋದಳು. ಪುನಃ ಹಿಂತಿರುಗಿ ಬರುತ್ತಾ ಇನ್ನೂ ಆಶ್ಚರ್ಯಕರವಾದ ವಾರ್ತೆ ತಂದಳು "ಎಲ್ಲರೂ ಕೂಡಿ ಎಳೆಸಿದರೂ ಹೆಣವು ಅಲ್ಲಾಡುವುದಿಲ್ಲ ಏನಾಶ್ಚರ್ಯವಿದು" ಎಂದಳು. ಸೀತೆಗೆ ದಿಗ್ಭ್ರಮೆಯಾಯಿತು. ಕಾರಣ ತನ್ನನ್ನು ಕಳವಳಕ್ಕೀಡುಮಾಡಿದ ಪಠಾಣ, ತನ್ನ ಮನಸ್ಸನ್ನು ತನ್ನ ಗಂಭೀರ ದೃಷ್ಟಿಯಿಂದ ಸೆಳೆದ ಪಠಾಣ, ಈಗ ಆಶ್ಚರ್ಯಕರವಾದ ರೀತಿಯಲ್ಲಿ ಮರಣಪಟ್ಟು, ಅವನ ಶವವು ಅಗಾಧವಾದ ಶಕ್ತಿಯಿಂದಲೂ ಮೇಲಕ್ಕೆತ್ತಲಾಗುವುದಿಲ್ಲವೆಂದ ಮೇಲೆ ಏನು ಅದ್ಭುತವಿರಬೇಕು. ಸೀತೆಯು ಯೋಚನೆಗೆ ತೊಡಗಿದಳು.

ಮಣಿಪುರದ ಹಳ್ಳಿಯಲ್ಲಿನ ಆಶ್ಚರ್ಯ ಸಂಗತಿಯನ್ನು ನೋಡಲು ಆಸುಪಾಸಿನಿಂದ ಸಾವಿರಗಟ್ಟಲೆ ಜನರು ಬಂದು ಸೇರಿದರು. ಹಳ್ಳಿಯಲ್ಲಿ ಆತುರವೇ ಆತುರ. ಉತ್ಪ್ರೇಕ್ಷಾಪ್ರಕಾರ ಹಚ್ಚಿದ ವರ್ತಮಾನಗಳು ಹಳ್ಳಿಯಲ್ಲೆಲ್ಲ ಹರಡಿದುವು. ಇದೊಂದೂ ಸೀತೆಯನ್ನು ಅಲುಗಿಸಲಾರದಾದವು. 'ನಿನ್ನ ಪತಿದೇವನಾಗುವವನನ್ನು ಸ್ಮರಿಸಿಕೊಂಡಿರು' ಎಂದು ಅಜ್ಜಿಯು ಹೇಳಿದ ಮಾತುಗಳನ್ನು ನೆನಪಿಗೆ ತಂದು ಅವಳು ಕಲ್ಪನೆಗೆ ತೊಡಗಿದಳು. ತಲೆತಗ್ಗಿಸಿ ಯೋಚಿಸುತ್ತಿದ್ದ ಹಾಗೆ ಅವಳೊಂದು ಹಿಂದೂ ಯುವಕನನ್ನು

[illegible]

ಮದನಕಲಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ, ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ, ಮಲಗುವ ಮನೆಯಲ್ಲಿ ಸ್ವಭಾವಗಳ ವಿನೋದಗಳು, ವೇಶ್ಯಾ ಕನ್ನೆಗಳು ಮೋಹಿಸುವ ಉಪಾಯಗಳು, ಮಲಗುವ ಮಂಚದ ಪ್ರೀತಿಯ ೩೦ ಫೋಟೋಗಳನ್ನು ನೋಡುತ್ತಾ ಓದುತ್ತಾ ಕಡೆಯ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1

ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟ್ ಬೋಕ್ಸ್ ನಂ 287 ಮದರಾಸ್.

ವಿವಾಹ, ಉಪನಯನ ಇತ್ಯಾದಿ ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕಾಗಿ ಹಾಗಾದರೆ,
ಶಾರದಾ ಛಾಪಖಾನೆ ಮಂಗಳೂರು,
ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತಶಾಲೆ,

ಹಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTED. 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾವಿಶಾರದ,

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ:

5 ಅಂಕಗಳ ಸ್ವಲ್ಪ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ

ಬರೆದವರು —ಶ್ರೀ ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.
ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—
"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳ್ಳು। ಸೂರ್ಯನೊಳಗಿಲ್ಲ।
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರಾ!"
ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಚಾಲಿನ ಮನೋಹರವಾದ ೩೫ ಗೀತಗಳನ್ನೂ ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ
ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಯ್ಯಾಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ವೈಶಾಖ ಬ। ೪ ಶನಿವಾರದಿಂದ, ವೈಶಾಖ ಬ। ೧೦ ಶುಕ್ರವಾರದ ವರೇಗಿನ ಪಂಚಾಂಗ (೧೯೩೭ನೇಯ ವೃಷಭ (ಮೇ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
29	ಶನಿ	೪	೩೫	ಪೂ ಷಾಢ	೫	೧೫	[illegible]
30	ರವಿ	೫	೩೭	ಉ ಷಾಢ		೧೬	
31	ಸೋಮ	೬	೩೫	ಶ್ರವಣ	೧೦	೬	
1	ಮಂಗಳ	೭	೩೩	ಧನಿಷ್ಠ	೧೧	೧೮	
2	ಬುಧ	೮	೨೦	ಶತಭಿಷ	೧೦	೧೯	
3	ಗುರು	೯	೨೭	ಪೂ ಭಾ	೯	೨೦	
4	ಶುಕ್ರ	೧೦	೨೩	ಉ ಭಾ	೬	೨೧	

THE

BANK OF MANGALORE LTD.,

MANGALORE

ESTD 1931

Branches -
Panemangalore Mudabidri & Padubidri

Chairman—**Philip J Chandran, Esq.,**
Retd Dt Registrar of Joint Stock Companies

On & from 1st of January 1937,
Fixed Deposits will be received at following rates of interest.

For	3 months	3½%
„	6	4%
„	12 „	5%
	24 „ & upwards	5½%

Interest Payable Quarterly
Saving Bank deposit 3½% on daily balances
All kinds of banking business transacted
U. R. PAI, N. U. PAI, ***Managing Directors.***

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ …	3— 8	3—12
ಮುಸ್ಸಿ …	3—10	4— 4
ಗುಡ್ಡೆ …	3—10	4— 0
ಉಂಡೆ ಅಕ್ಕಿಲ್ ಬೆಲ್ಲಗೆ …	4— 0	4—12
ರಂಗೂನ್ಸ್ ಬಿ. ಗೋ ೧ಕ್ಕೆ …	6 — 8	7— 0
ಎಲ್ಲಾರು ಬಿ. ಮು. ೧ಕ್ಕೆ …	3—14	4— 0
ಗೋದಿ ಗೋಣಿ ೧ಕ್ಕೆ …	11 — 0	13— 0
ಕಡಲೆ ಗೋಣಿ ೧ಕ್ಕೆ .	9 — 8	12— 8
ಹುರುಳಿ ಗೋಣಿ ೧ಕ್ಕೆ …	5— 4	5 — 6
ಕಡಲೆ ಗೋಣಿ ೧ಕ್ಕೆ …	8 —14	12 — 8
ತೊಗರಿಬೇಳೆ ಗೋಣಿ ೧ಕ್ಕೆ ..	11— 0	19— 0
ಉದ್ದು ಗೋಣಿ ೧ಕ್ಕೆ	9— 0	9 — 8
ಹೆಸರು ಗೋಣಿ ೧ಕ್ಕೆ ..	7—12	8— 8
ಊರುಬೆಲ್ಲ ಖಂಡಿ ೧ಕ್ಕೆ …	27— 8	32— 8
ಉಪ್ಪು ಗೋಣಿ ೧ಕ್ಕೆ .	4—10	5—14
ಕೊಬ್ರಿ ಖಂಡಿ ೧ಕ್ಕೆ .	75— 0	84— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ ..	20 — 0	20— 8
ಎಳ್ಳಿಂಡಿ ಖಂಡಿ ೧ಕ್ಕೆ	27 — 8	31 — 4
ಕೊಬ್ರಿ ಎಣ್ಣೆ ಮುಡಿ ೧ಕ್ಕೆ ..	5— 8	6— 0
ಎಳ್ಳೆಣ್ಣೆ ಮುಡಿ ೧ಕ್ಕೆ	7— 0	7— 0
ಹರಳೆಣ್ಣೆ ಬಟ್ಟಿಗೆ ೧ಕ್ಕೆ	6— 5	7— 5
ಮೋರಿಸ ಸಕ್ಕರೆ ಮು. ೧ಕ್ಕೆ …	3— 0	3 — 0
ಮೆಣಸು .	4— 8	6— 0
ಸಾಸಿವೆ ಮುಡಿ ೧ಕ್ಕೆ .	5 — 4	5— 8
ಕಾಳುಮೆಣಸು ಖ ೧ಕ್ಕೆ	97 — 8	100— 0
ಮೆಂತ್ಯೆ ಬೀಜ ಮು ೧ಕ್ಕೆ	80— 0	85— 0
ಜೀರುಬೀಜ ಮು. ೧ಕ್ಕೆ .	3 —10	3 — 12
ಕಲ್ಲಿನ ಖಂಡಿ ೧ಕ್ಕೆ	51— 0	51— 4
ಕಾಂಪ್ರಕೆಗಡು ಮು ೧ಕ್ಕೆ	14— 12	15— 0
ಕಾಂಪ್ರಶಾಸ್ತ್ರಗಳು ಮು ೧ಕ್ಕೆ	17— 0	17— 8
ಹೊಸಬೆಲ್ಲ ಸೇರು ೧ಕ್ಕೆ	13— 8	15— 0
ಹಿಸ್ತಾಳ ಹಗಡು ಮು. ೧ಕ್ಕೆ	12— 0	12— 8
ಹದನು ೧ಕ್ಕೆ	22— 7	22— 8
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	145— 0	150— 0
ಪ್ಲಾಂಟೇರ ಕಾಫಿ ಖಂಡಿ ೧ಕ್ಕೆ	190— 0	200— 0
ಮದರಾಸ ಏಲಕ್ಕಿ	60— 0	62 „

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ.

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತರಿಸಿಕೊಳ್ಳುವರೆ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವರೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿ ಪಡಿಯತಕ್ಕದ್ದು ತಿಳಿದಿರುವುದು.

ಕಿರೀಟಧಾರಣೆ

ಸುಖ ಸಮಾರಂಭದ ಸ್ವಲ್ಪ ಸಂಖ್ಯೆಗಳು

ಸ್ವಾರಸ್ಯವಾದ ಸಂಖ್ಯೆಗಳನ್ನು ಓದುವುದು ತುಂಬಾ ಹಿತಕರವಾಗಿರುತ್ತದೆ. ಆಂಗ್ಲರಾಜ ಆರನೇ ಜಾರ್ಜರ ಕಿರೀಟಧಾರಣೆಯ ಉತ್ಸವದ ಕೆಲವು ಸಂಖ್ಯೆಗಳು ಸಾರಸ್ಯವಾದುವುಗಳೇ ಇರುತ್ತವೆ

ಕಿರೀಟಧಾರಣೆಯ ಉತ್ಸವದ ಪ್ರೇಕ್ಷಕರಾಗಿ ಕಳೆದ ವರ್ಷಕ್ಕೆ ೫ ಮಿಲಿಯ ಪರದೇಶಿಗಳು ಇಂಗ್ಲೆಂಡಿಗೆ ಬಂದಿದ್ದರಂತೆ ಈ ಸಮಯದಲ್ಲಿ ಲಂಡನ್ ನಗರದ ಜನಸಂಖ್ಯೆಯು ೧೫ ಮಿಲಿಯವಾಯಿತು

ಇವರ ಪೈಕಿ ಸುಮಾರು ೬೦ ಮಿಲಿಯ ಜನರು ಉತ್ಸವ ಸಮಾರಂಭವನ್ನು ನೋಡಲು ಹಾಜರಿದ್ದರಂತೆ

ಪ್ರೇಕ್ಷಕರ ಅನುಕೂಲತೆ ಬಗ್ಗೆ ೩,೫೦,೦೦೦ ಸ್ಥಳಗಳ ಏರ್ಪಾಡು ಮಾಡಿತ್ತಂತೆ ಇವುಗಳ ಪೈಕಿ ೧,೦೦,೦೦೦ ಸ್ಥಾನಗಳನ್ನು ೧೫ ಶಿಲಿಂಗುಗಳ ಪ್ರಕಾರ ಸರಕಾರವೇ ಬಾಡಿಗೆಗೆ ಕೊಂಡಿದ್ದರಂತೆ ಉಳಿದುವುಗಳು ೩ ಪವನುಗಳಂತೆ ಮಾರಲ್ಪಟ್ಟಿರುವುವಂತೆ

ಬಾಡಿಗೆಗೆ ಸ್ಥಾನಗಳನ್ನು ಪಡೆದವರು ಮುಂಜಾನೆ ಆರು ಗಂಟೆಯೊಳಗೆ ತಮ್ಮ ಸ್ಥಾನಗಳಲ್ಲಿ ಇರಬೇಕೆಂದು ಅಪ್ಪಣೆಯಾಗಿತ್ತು—ಅಂದರೆ ಮೆರವಣಿಗೆಯ ಒಂಭತ್ತು ತಾಸುಗಳ ಮುಂಚಿತವಾಗಿ ನಿಂತು ನೋಡುವವರು ಮೊದಲಿನ ದಿನ ರಾತ್ರಿಯೇ ತಮ್ಮ ಸ್ಥಾನಗಳನ್ನು ಹಿಡಕೊಂಡಿದ್ದರಂತೆ

೨೦ ಸಾವಿರ ಪೋಲೀಸರ ಪಡೆಯು ಲಂಡನ್ ನಗರದ ಗಲಾಟೆಯನ್ನು ಕಮ್ಮಿಮಾಡಲು ಕೆಲಸಕ್ಕೆ ನೇಮಿಸಲ್ಪಟ್ಟಿದ್ದರಂತೆ

೨೫ ಸಾವಿರ ಸೈನಿಕರು, ಮೆರವಣಿಗೆ ಕಾಲದಲ್ಲಿ ಮಾರ್ಗಗಳನ್ನು ಗಲಾಟೆಯಿಲ್ಲದಂತೆ ನೋಡಲು ನೇಮಕವಾಗಿದ್ದರಂತೆ

ಮೆರವಣಿಗೆಯು ೬॥ ಮೈಲು ಉದ್ದವಿದ್ದು ಒಂದು ನಿಯಮಿತ ಸ್ಥಳವನ್ನು ದಾಟಬೇಕಾಗಿದ್ದರೆ ಒಂದು ಘಂಟೆಯ ಕಾಲ ಹಿಡಿಯುತ್ತಿತ್ತಂತೆ

ಅಲಂಕಾರಕ್ಕಾಗಿ ಲಂಡನಿನ ಒಂದೇ ಸಂಸ್ಥೆಯು ೨೫ ಸಾವಿರ ಪವನುಗಳ ಖರ್ಚು ಮಾಡಿ ತಮ್ಮ ಸಂಸ್ಥೆಯನ್ನು ಜಾಹೀರಾತು ಪಡಿಸಿ ಅಲಂಕರಿಸಿದರಂತೆ

THE

Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ಪಾಡಿಕೆಯನ್ನು ಮರೆಯಬೇಡಿರಿ

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಶುದ್ಧಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ, ನೂಲಿನಂತಹ ಹುಳ, ಯಾವ ತರದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು ಇದರ ಸೇವನೆ, ಸಕ್ಕರೆ ಪಾನೀಯ (ಹರಳೆಣ್ಣೆ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಸುಕವಿರೇಚನ ಗುಳಿಗೆ	0	0	6
ಚಿತ್ರಕಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0
ಇದರ ಸೇವನೆಯಿಂದ ಎಲ್ಲಾ ತರದ ಚಿತ್ರವು ಕಾಂತಿಯಾಗುವುದು ಶತ ಮಿಶ್ರಣ ಸೀಸೆ 1ಕ್ಕೆ	0	8	0

ಸಿಗುವ ಸ್ಥಳ ಷಾ ಕಂಪೆನಿ,
ಗವರ್ನಮೆಂಟ್ ಕೊಲೇಜಿನ ಎದುರು, ಮಂಗಳೂರು

ಮರದೊಳಗ ಮಂದಿರ.

ಕೆಲಿಫೋರ್ನಿಯಾವು ದೊಡ್ಡ ದೊಡ್ಡ ಮರಗಳಿಗೆ ಪ್ರಖ್ಯಾತವಾದ ದೇಶ ಅಲ್ಲಿಯ ಒಂದ. ಅಗಾಧವಾದ ಮರದ ಕಾಂಡವು ಕಾರಣಾಂತರದಿಂದ ಸುಟ್ಟುಹೋಗಿತ್ತು. ಕೆಲವರಿಗೆ ಒಂದು ಯೋಚನೆ ಹುಟ್ಟಿ, ಆ ಟೊಳ್ಳು ಕಾಂಡವನ್ನವರು ಸುವ್ಯವಸ್ಥಿತ ಪಡಿಸಿ ಒಂದು ಕೋಣೆಯನ್ನೇರ್ಪಡಿಸಿದರು ಕೋಣೆಯು 20 × 27 ಅಡಿಗಳ ವಿಸ್ತೀರ್ಣವುಳ್ಳದ್ದಿದೆ ಅವರೊಳಗೆ ಈಗೊಂದು ಉಪಹಾರ ಗೃಹದ ಸ್ಥಾಪನೆಮಾಡಿರುತ್ತಾರೆ

ಮಿಲಿಯಾಧಿಪತಿಗೆ ಮದುವೆ

ಜಪಾನಿನ ಓರ್ವ ೪೦ ವರ್ಷದ ನಡುಪ್ರಾಯದ ಕೋಟ್ಯಾಧೀಶನು ಪತ್ರಿಕೆಗಳಲ್ಲಿ ತನಗೊಂದು ಸುಶಿಕ್ಷಿತ, ೩೫–೪೦ರೊಳಗಿನ ವಯಸ್ಸಿನ ವಧುವಾಗಬೇಕೆಂದು ಜಾಹೀರಾತು ಕೊಟ್ಟನು ಅವನ ಹಿರೇ ಹೆಂಡತಿಯು ಸ್ವರ್ಗವಾಸಿಯಾಗಿದ್ದಳಂತೆ ಸರಿ–ದಿನಕ್ಕೆ ಅವನಿಗೆ ಸಾವಿರಾರು ಕಾಗದಗಳಂತೆ ಅವನಿಗವುಗಳನ್ನು ಒಡೆದು ನೋಡಲು ಸಮಯಾವಿಲ ವಧುಗಳ ಕಡೆಯಿಂದ ಪತ್ರಗಳು ಬಮೇದ ವಾರರಲ್ಲಿ ಕೆಲವರು ಅವನ ಪತ್ನಿಯಾಗಲೊಪ್ಪಿಗೆಯಿದ್ದವರೂ, ಕೆಲವರು ಪರಿಚಾರಿಕೆಯರಾಗಿ ನಿಲ್ಲುವೆವೆಂದೂ, ಮತ್ತೂ ಕೆಲವರು ಅವನ ಕಾರ್ಯದರ್ಶಿಯರಾಗುವೆವೆಂದೂ ಹೀಗೆ ನಾನಾ ತರದಲ್ಲಿ ಪತ್ರಮುಖೇನ ವಿನಂತಿಸಿಕೊಂಡರ ಕೋಟ್ಯಾಧೀಶನಿಗೆ ಬೇಸರ ಹತ್ತಿ ಕಡೆಗವನ ಕೆಲವು ತಿಂಗಳವರೆಗೆ ಊರುಬಿಟ್ಟು ಹೋದನಂತೆ

ಪ್ರತಿಜ್ಞಾ ಉಲ್ಲಂಘನೆ

ಮೆಕ್ಸಿಕೊ ನಗರದ ಲಿಡಿಯಾಲುಜ್ ಎಂಬವಳು 18 ವರ್ಷದ ಯುವತಿ ಓರ್ವ ಟ್ಯಾಪಿಸ್ಟಳು ಅವಳೊಂದು ದಿನ ಬಾಸ್ಕೆಟ್ ಬೋಲ್ ಎಂಬೊಂದು ಆಟವಾಡಲು ಹೋಗುತ್ತಿದ್ದಾಗ, ಅವಳ ಪ್ರಣಯಿಯೊಬ್ಬನು ಅವಳನ್ನು ಮಾರ್ಗದಲ್ಲಿ ನಿಲ್ಲಿಸಿ ಎಳೆದು ಕೆನ್ನೆಗೆ ಬಲವಾದೊಂದು ಏಟು ಕೊಟ್ಟನು ಇದು ನಡೆದಿದ್ದು ಸಾರ್ವಜನಿಕದಲ್ಲಿ, ಏತಕ್ಕೆ ಗೊತ್ತೆ? ಆ ತರುಣಿಯು ಲಂಗವನ್ನು ಬಿಟ್ಟು ನಿಕ್ಕರ್‌ಗಳನ್ನು ಉಟ್ಟುಕೊಂಡಿದ್ದಳಂತೆ ತರುಣಿಯನ್ನು ಪ್ರೀತಿಸುವ ಆ ತರುಣನ ಹೆಸರು ಲ್ಯೂಸ್ ವೆಲಾಡರ್ಸ್ ಅರ್ಜೆಲ್ ಎಂದು. ಅವನು ಲಿಡಿಯಾಳನ್ನು ಪ್ರೀತಿಸುವಾಗ, ಅವಳು ಅಂತಹ ಸಾರ್ವಜನಿಕದಲ್ಲಿ ಸಭ್ಯತೆಯನ್ನು ಮೀರುವ ಯಾವ ತರದ ಉಡುಪುಗಳನ್ನುಧರಿಸಬಾರದೆಂದು ಭಾಷೆ ಮಾಡಿಸಿಕೊಂಡಿದ್ದನು ಈ ಸಮಯಕ್ಕೆ ಲಿಡಿಯಾಳ ಸಂಗಾತಿಗಳಾಗಿದ್ದ ಕೆಲವು ಮಂದಿ ಇತರ ತರುಣಿಯರು ತಮ್ಮ ಸ್ನೇಹಿತಳಿಗೆ ಆದ ಅವಮಾನವನ್ನು ಸಹಿಸಲಾರದೆ ಲ್ಯೂಸ್‌ನನ್ನು ಹಿಡಿದು ಚೆನ್ನಾಗಿ ಬಡಿದರು ಠಾಣಾಲಕ್ಕೆ ಅಧಿಕಾರಿಗಳು ಪ್ರವೇಶ ಮಾಡಿಲ್ಲದಿದ್ದಲ್ಲಿ ಲ್ಯೂಸನ ಪರಿಣಾಮ ಹೇಗಾಗುತಿತ್ತೆಂದು ನಿರೀಕ್ಷಿಸಲಿಕ್ಕಾಗುತ್ತಿಲ್ಲವಂತೆ. ನಾರೀವೃಂದದ ರೇಗು ಅಷ್ಟಕ್ಕೆ ನಿಂತಿತು

HOUNSA

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ
ಕೆ ವೆಂಕಟೇಶ ಬಾಳಿಗ,
ಗೋಲಿಕಟ್ಟಾ ಬಜಾರ್ ಮಂಗಳೂರು

The Coronation of their Majesties is now over'
But Remember'
Comfortable ***Ideal*** ***Central***

The Coronation Darbar Restuarant

Boarding & Lodging
Opposite Govt College Hampankatta, Mangalore
A Home in the Motherland
Cleanliness and comfort at moderate cost
A delightful hotel in the centre of the town and nearest to the Rly Station & Bus Station
Gives best Refreshment & dinner service and modern preparations such as Biryani, Fowl Biryani Pulav Khushka, Chops, Cutlets, Roast, Bheja, Khima, Tomato-mutton Roasted Fowl Omlet, Sumbusa, etc a speciality
Special lodging arrangements for travellers Students will find all their food requirements
Please Step in Once and Convince Yourself
S B Mohidin, S. M Sayed Ali Saheb (Bhatkal) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ
ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೊಜಿಂಗ್
ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.
ಸೌಲಭ್ಯ ಸೌಕರ್ಯ ಸುಖದಾಯಕ
ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳು ಸುಲಭ ದರದಲ್ಲಿ
ಇನ್ನೆಲ್ಲಿಯೂ ದೊರಕಲಾರದು.
ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸುಗಳಿಗೆ ತೀರಾ ಸಮೀಪವು
ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು
ಮುರ್ಗಿ ಬಿರಿಯಾನಿ, ಬಿರಿಯಾನಿ, ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮಾಟೊಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ
ಚಿರಸ್ಮರಣೀಯವಾಗಿ ಉಳಿಯುವುವು.
ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ

ಯಸ್. ಬಿ. ಮೊಹಿದಿನ್,
ಯಸ್. ಎಮ್. ಸಯ್ಯದ್ ಅಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು.

ಹೊಟ್ಟೆ ವ್ಯಾಧಿಗಳಿಂದ ನರಳುವವರು

ಶ್ರೇಷ್ಠ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನ ವಿಚಾರ ಮೊದಲು
ದೃಢಪಡಿಸಿಕೊಳ್ಳಿ.

ಈ ಕೆಳಗಿನ ಗುರುತಿನ ಕೆಂಪು ಮುದ್ರೆಯಿರುವ ತಾಜಾ ಕಾರ್ಟನುಗಳನ್ನೇ ನೋಡಿ ಪಡಕೊಳ್ಳಿರಿ.

MACLEAN Brand Stomach Powder

ಈ ಗುರುತುಗಳು ಸೀಸೆಯ ಮೇಲ್ಭಾಗದಲ್ಲಿಯೂ ಅಡಿಭಾಗದಲ್ಲಿಯೂ ಇರುವುವು ಇದರಲ್ಲಿ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಇದೆ ನಿಮ್ಮ ಭದ್ರತೆಗಾಗಿ ಈ ಗುರುತುಗಳನ್ನು ನೋಡದೆ ಮೋಸ ಹೋಗಬೇಡಿ



ಮೆಕ್ಲೀನ್ ಬ್ರೇಂಡ ಸ್ಟೋಮಕ್ ಪೌಡರಿನಂತಹ ಒಂದು ದಿವ್ಯೌಷಧಿಯು ಅದ್ಭುತ ಯಶಸ್ಸಿನಿಂದ ಮೆರೆಯುತ್ತಿರುವಾಗ ಇಮಿಟೇಶನ್ ಮಾಲುಗಳು ನೋಡಸಿಕ್ಕಿಯೇ ಸಿಗುತ್ತವೆ ಈ ನಕಲಿಗಳು ಅದರಷ್ಟೇ ಒಳ್ಳೆಯದೆಂದು ಹೇಳಿಕೊಳ್ಳುತ್ತವೆ ಆದರೆ ಆರೋಗ್ಯವು ಅಮೂಲ್ಯವೆಂದು ತಿಳಿದಿರುವ ನೀವು ಅದನ್ನು ತಿರಸ್ಕರಿಸದೆ ಇರುವುದಿಲ್ಲ ಉದರವ್ಯಾಧಿಗಳು ಕಠಿಣವಾದುವುಗಳು ಅಜೀರ್ಣ ಪಿತ್ತ ಆಗ್ನಿಮಾಂದ್ಯ ಹೊಟ್ಟೆಯುಬ್ಬರ, ಎದೆಯುರಿ ಜಠರವೇದನೆ ಮತ್ತು ಹೊಟ್ಟೆಯೊಳಗಿನ ಹುಣ್ಣು ಇದಕ್ಕೆ ಕಠಿಣವಾದ ಚಿಕಿತ್ಸೆಯು ಬೇಕು ಉತ್ತಮ ಔಷಧಿಗಳಿಂದ ತಯಾರಿಸಲ್ಪಟ್ಟ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರ್ ಈ ಚಿಕಿತ್ಸೆಯನ್ನು ಪೂರೈಸುತ್ತದೆ ಶ್ರೇಷ್ಠ ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಇದು ತಯಾರಾಗುವುದರಿಂದ ಬಹಳ ನಿರ್ದುಷ್ಟವಾಗಿದೆ ಆದುದರಿಂದ ALEX C MACLEAN ಎಂಬ ಸಹಿಯಿರುವ ಸೀಸೆಗಳನ್ನೇ ಪಡಕೊಳ್ಳಿರಿ ಆರೋಗ್ಯವು ಮುಖ್ಯವಾದುದರಿಂದ ಕೆಲವು ಅಣೆಗಳ ಆಶೆಗಾಗಿ ಇಮಿಟೇಶನ್‌ಗಳನ್ನೆಂದೂ ಕೊಂಡುಕೊಳ್ಳದಿರಿ ಇದು ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ ಸೀಸೆಗಳಲ್ಲಿಯೂ ಪೊಟ್ಟಣಗಳಲ್ಲಿಯೂ ಸಿಗುತ್ತದೆ ಸ್ಥಳೀಯ ಕೆಮಿಸ್ಟರಿಂದ ಪಡೆಯಿರಿ ಡಿಸ್ಟ್ರಿಬ್ಯೂಟರ್ಸ್ Martin & Harris Ltd
Sunkurama Chetty Street Madras



ಇಮಿಟೇಶನ್ ಪೌಡರನ್ನು ಉಪಯೋಗಿಸಿ
ಆರೋಗ್ಯವು ಕೆಡದಂತೆ ಎಚ್ಚರವಿರಲಿ

ನಿಮ್ಮ ಭದ್ರತೆಗೆ ಮೇಲೆ ಮುದ್ರೆಯನ್ನು ಪ್ರತಿ ಉತ್ತಮ ಪೊಟ್ಟಣಗಳ ಮೇಲೆ ನೋಡಿ ಕೆಳಭಾಗದಲ್ಲಿ ಅದು ಭಾಗವಾಗಿದೆ ಅಲೆಕ್ಸ್ ಸಿ ಮೆಕ್ಲೀನ್ ಎಂಬ ಸಹಿಯು ಸರಿಯಾಗಿದ್ದರೆ ಮಾತ್ರ ಅದರೊಳಗೆ ಉತ್ತಮ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಇರುವುದೆಂದು ಖಾತ್ರಿಯಾಗಿರಿ
ಯಾವಾಗಲೂ ಬರೇ ಮೆಕ್ಲೀನ್ ಎಂಬುದಾಗಿ ಕೇಳಬೇಡಿ ಮೆಕ್ಲೀನ ಬ್ರೇಂಡ್ ಸ್ಟೋಮಕ್ ಪೌಡರೆಂದು ಪ್ರತ್ಯೇಕವಾಗಿ ಹಿಡಿಯಿರಿ 146

೧ ರೂಪಾಯಿಗೆ ೫೦೦೦ ರೂಪಾಯಿ

ಗಳನ್ನು ಪಡೆಯಬೇಕಾದರೆ,
ಮತ್ತು
೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ
ಪುನಃ ಪ್ರೀಮಿಯಂ ಕಟ್ಟಬೇಕಾಗಿಲ್ಲ, ಮತ್ತು ಪ್ರೀಮಿಯಂ ಕೇಳುವುದಿಲ್ಲ
ಎಲ್ಲಾ ಕಡೆಯಲ್ಲೂ ಏಜಂಟರ ಬೇಕಾಗಿದ್ದಾರೆ.
ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.
ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್
ನಿಸ್ಬೆತ್ ರೋಡ್, ಲಾಹೋರು.

Write for full particulars to:

M. S. V. Kamath,
MANGALORE, BOLUR.
Dist Agent for SOUTH CANARA
Dist. Agent for North Kanara.
Mr. I. A. Shaik Khaji Mohalla,
ANKOLA.

ಒಂದು ಕೌತುಕ

ಕಳೆದ ವರ್ಷದ ನವಂಬರ್ ತಿಂಗಳ ಸುಮಾರಿಗೆ ಅಮೇರಿಕದ ಮಿಸಿಸಿಪಿ ನದಿಯು ಬಹು ಭಾರೀ ನೆರೆಯುಂಟಾಯಿತಷ್ಟೆ. ಆ ಪ್ರದೇಶದಲ್ಲಿ ಒಂದು ಮನೆಯಲ್ಲಿ ವಾಸಿಸುತ್ತಿದ್ದ ಜೋನ್ಸನ್ ಎಂಬೊಬ್ಬನು ನೀರು ತುಂಬಿದ ತನ್ನ ಮನೆಯ ಮಧ್ಯದಲ್ಲಿ ಕುಳಿತಿದ್ದು, ಅವನು ನೋಡುತ್ತಿದ್ದ ಹಾಗೆ ಅವನ ಮನೆಯ ಒಂದು ಕೋಣೆಯಲ್ಲಿದ್ದ ಒಂದು ಪಿಯಾನೊ (Piano) ವು ಮೆಲ್ಲಗೆ ಕೋಣೆಯಿಂದ ಹೊರಬಂದು ಅಗಾಧ ನೀರಿನ ಪ್ರವಾಹವನ್ನು ಸೇರಿತು. ಜೋನ್ಸನನು ಅದರ ಆಶೆ ಬಿಟ್ಟನು. ಮರುದಿನ ಯಾವುದೋ ಇನ್ನೊಂದು ಪಿಯಾನೊವು ಎಲ್ಲಿಂದಲೊ ಜೋನ್ಸನನ ಮನೆಯನ್ನು ಹೊಕ್ಕು ಕ್ರಮವಾಗಿ ಕೋಣೆಯಲ್ಲಿ ಮುಂಚಿನ ಪಿಯಾನೊ ಇದ್ದ ಸ್ಥಳದಲ್ಲಿಯೇ ಬಂದು ನಿಂತಿತು. ಆಶ್ಚರ್ಯಪಡುತ್ತಿದ್ದಂತೆ ಜೋನ್ಸನನು ಬಹುಶ್ಯ ತನ್ನ ಪಿಯಾನೋವು ಮತ್ತೊಂದು ಪಿಯಾನೊ ಮಾಲಿಕನ ಮನೆಯನ್ನು ಸೇರಿರಬೇಕೆಂದು ತರ್ಕಿಸಿದನಂತೆ.

ಕಳ್ಳ ಪಾದ್ರಿ

ಇಂಗ್ಲೆಂಡಿನ ಲಿಸ್ಟರ್‌ಶ್ಯಾಯರಿನ ಒಂದು ಹಳ್ಳಿಯಲ್ಲಿ ಓರ್ವ ಪಾದ್ರಿ—ಶಿರೋನಾಮವು ಸೂಚಿಸುವಂತೆ ಅವನೇನು ದರೋಡೆ ಕಳ್ಳನಲ್ಲ. ಅಂತೂ ಅವನಿಗೊಂದು ಕಳ್ಳ ಅಭ್ಯಾಸವಿತ್ತು ಅವನು ತನ್ನ ಹಳ್ಳಿಯ ಇಗರ್ಜಿಗೆ ಬರುವ ಜನರಿಗೆ ಉಪದೇಶ ಮಾಡುತ್ತಿದ್ದನು ಆದರೆ ಸ್ವಂತವಾಗಿ ಉಪದೇಶ ಮಾಡುವ ಕ್ರಮವು ಅವನಿಗೆ ತಿಳಿಯುವುದಿಲ್ಲ. ಅದಕ್ಕಾಗಿ ಆತನು ಬೇರೆ ಬೇರೆ ಊರಿನ ಪಾದ್ರಿಗಳು ಉಪದೇಶ ಮಾಡಿದ ಮಾತುಗಳನ್ನು ಬರೆಕೊಂಡು ಅವುಗಳನ್ನು ಬಾಯಿಪಾಠ ಮಾಡಿ ಅವುಗಳನ್ನೇ ಅವನು ಬೋಧಿಸುವುದಿತ್ತು ಕಳ್ಳರು ಒಂದು ದಿನ ಆ ಪಾದ್ರಿಯ ಮನೆಯನ್ನು ಹೊಕ್ಕು ತುಂಬಾ ಸಾಮಾನುಗಳನ್ನು ಕದ್ದುಕೊಂಡು ಹೋದರು. ಆದರೆ ಪಾದ್ರಿಯು ಬರೆಕೊಂಡಿಟ್ಟಿದ್ದ ಉಪದೇಶಗಳ ಗಂಟನ್ನು ಮಾತ್ರ ಅವರು ಬಿಟ್ಟಿದ್ದರು. ಕಳ್ಳರು ಎಲ್ಲವನ್ನೂ ಕದ್ದರು. ಉಪದೇಶಗಳ ಗಂಟು ಮಾತ್ರ ಬಿಟ್ಟರು. ಕಾರಣ ಅವುಗಳು ಕದ್ದಂತವುಗಳೇ ಆಗಿರುತ್ತವೆ— ಎಂದನಂತೆ ಪಾದ್ರಿ.

ಮೂರು ಕೌತುಕಗಳು

ಮೆಂಚಸ್ಟರಿನ ಓರ್ವ ಮಹಿಳೆಯು ಒಂದು ಶಪಥಮಾಡಿಕೊಂಡಳು; ಅದೇನೆಂದರೆ ಹವೆಯು ಚೆನ್ನಾಗಿದ್ದಾಗ ಮನೆಯಲ್ಲೇ ಇರುವುದು. ಹವೆಯು ಕೆಟ್ಟದಿದ್ದು ಮಳೆಗಾರಂಭವಾದಾಗ ಸಂಚಾರಕ್ಕೆ ಹೋಗುವುದು.

ಮಾಲ್ಟಾ ದ್ವೀಪದಲ್ಲೊಬ್ಬ ಶ್ರೀಮಂತನು ತನ್ನ "ವೀಲ"ನ್ನು ಬೆನ್ನಿನ ಮೇಲೆ ಚುಚ್ಚಿಸಿಕೊಂಡನಂತೆ ಕಡೆಗೆ ಅವನಿಗೆ ಅದರಲ್ಲಿ ಸಹಿ ಹಾಕಲು ಸಾಧ್ಯವಾಗಲಿಲ್ಲವೆಂದ ಮೇಲೆ ಅರ್ಧದಲ್ಲಿಯೇ ಆಲೋಚನೆ ಬಿಟ್ಟನಂತೆ.

ಅಮೇರಿಕದ ದೊಡ್ಡ ಕೇಡಿಯೋರ್ವನು ತಲೆತಪ್ಪಿಸಿಕೊಳ್ಳುವವರ ಲಿಮಿಟೆಡ್ ಸಂಸ್ಥೆ ಎಂಬೊಂದನ್ನು ಸ್ಥಾಪಿಸುವ ಯೋಚನೆಯಲ್ಲಿದ್ದಾನಂತೆ. ಜೈಲಿನಲ್ಲಿರುವ ಕಳ್ಳರು ತಪ್ಪಿಸಿಕೊಳ್ಳಲು ಸಹಾಯಮಾಡುವುದು ಈ ಸಂಘದ ಉದ್ದೇಶವಂತೆ ಖಂಡಿತ ತೃಪ್ತಿಯ. ಆಶ್ವಾಸನೆಯನ್ನು ಶಿರೋನಾಮವುಳ್ಳ ಹಸ್ತ ಪತ್ರಿಕೆಗಳನ್ನವನು ಪ್ರಕಟಿಸಿ ಹಂಚುತ್ತಲಿರುವನಂತೆ

ಬ್ಲಾಟ್ಮನ್ ಕೊಜ್ಜಿನ್ ಎಂಬಾತನು ರಶ್ಯದವನು—ಒಬ್ಬ ಹಳ್ಳಿಗ ಪ್ರಾಯ ಒಂದು ಶತಮಾನದ ಮೇಲೆ 82 ವರ್ಷ ಈಗಲೂ ಆಸಾಮಿ ಗಟ್ಟಿಮುಟ್ಟಗೆ ಇದ್ದಾನೆ ಅವನ ಹಿರೀ ಮಗ 105ರಲ್ಲಿ ಸತ್ತಿರುವನಂತೆ ಮಕ್ಕಳ. ಮೊಮ್ಮಕ್ಕಳು, ಮರಿಮಕ್ಕಳು ಕೂಡಿಸಿ ಅವನಿಗೆ 812 ಮಂದಿ ಉತ್ತರಾಧಿಕಾರಿಗಳಿರುವರು. ಈಗಲೂ ಪ್ರತಿನಿತ್ಯವೂ ಅವನು ಕಾಡಿಗೆ ಹೋಗಿ ಕಟ್ಟಿಗೆ ಒಡೆಯುವನಂತೆ.

ಕೊಳೆಯಿಂದಿರುವ ಕೈ ಮತ್ತು ಕಾಲುಗಳಮೇಲೆ ವಿಷಕ್ರಿಮಿಗಳು ಇರುತ್ತವೆ.



ನಿಮ್ಮ ಮಕ್ಕಳ ಆರೋಗ್ಯವನ್ನು ಲೈಫ್‌ಬಾಯಿನಿಂದ ಕಾಪಾಡಿರಿ

ನಿಮ್ಮ ಮಕ್ಕಳು ಆಟವಾಡಿದನಂತರ ಅವರ ಕೈ ಕಾಲುಗಳನ್ನು ನೋಡಿರಿ. ಧೂಳಿನಿಂದ ಕೂಡಿದ ಬುಲ್ಲವೆ ಮತ್ತು ಆ ಧೂಳಿನಲ್ಲಿ ವಿಷಕ್ರಿಮಿಗಳುಳ್ಳಂಟುದನ್ನೂ ಯೋಚಿಸಿ! ನಿಮ್ಮ ಮಕ್ಕಳನ್ನು ಈ ಅಪಾಯದಿಂದ ತಪ್ಪಿಸಿ, ಅವರ ಆರೋಗ್ಯವುಳ್ಳವರನ್ನಾಗಿ ಮಾಡಿ ಅವರು ಯಾವಾಗಲೂ ಲೈಫ್‌ಬಾಯ್‌ನಿಂದಲೇ ತೊಳೆಯಲಿ. ಲೈಫ್ ಬಾಯಿನ ಆರೋಗ್ಯಕರವಾದ ನೊರೆಯು ಪ್ರತ್ಯೇಕವಾದ ಪೋಷಕ ದ್ರವ್ಯದಿಂದ ಕೂಡಿ ಕೊಳೆಯನ್ನು ಚೆನ್ನಾಗಿ ಹೋಗಿಸುವುದಲ್ಲದೆ ಅಪಾಯಕರವಾದ ವಿಷಕ್ರಿಮಿಗಳನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ನಿಮ್ಮ ಚಿಕ್ಕಮಕ್ಕಳ ಆರೋಗ್ಯವನ್ನು ಲೈಫ್ ಬಾಯ್‌ನಿಂದ ಎಚ್ಚರಿಕೆಯಾಗಿ ಕಾಪ್ಪಿಕೊಳ್ಳಿರಿ

ಲೈಫ್‌ಬಾಯ್ ಸಾಬೂನು

LIFEBUOY SOAP



ಇಂಡಿಯಾದಲ್ಲೇ ವನಸ್ಪತಿಗಳ ಬದ್ಧವಾದ ಎಣ್ಣೆಯಿಂದ ತಯಾರಿಸಿದುದು

LEVER BROTHERS (INDIA) LIMITED

KANARESE

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳಲ್ಲದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರು ಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು

ಈ ಪುಸ್ತಕವನ್ನು ಓದಬೇಕು! ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು?
ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಎಲ್ಲರಿಗೂ ಬೇಕು.

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ: ೨೦೦ ಪುಟಗಳು.

ಬೆಲೆ ರೂ. ೧-೮-೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು. ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್, ಸ್ಟೇಟ್ ಮಾರ್ಟ್‌ನಲ್ಲಿ ದೊರಕುತ್ತದೆ.

ಟಾಗೂರ್ ಅಂಡ್ ಕೋ, (ಬ್ರಾಂಚ್)
ಕೋಟೆ, ಬೆಂಗಳೂರು ಸಿಟಿ.

ಪ್ರಪಂಚದ ಅತೀ ಶ್ರೇಷ್ಠ ಶ್ರೀಮಂತರು!

ತಮ್ಮ ೯೭ನೇ ವಯಸ್ಸಿನಲ್ಲಿ ನಿಧನಹೊಂದಿದರು

ಪ್ರಪಂಚದ ಅತೀ ಶ್ರೇಷ್ಠ ಶ್ರೀಮಂತರೂ 'ಆಯಿಲ್ ಕಿಂಗ್' ಎಂದು ಪ್ರಖ್ಯಾತಿ ಪಡೆದವರೂ ಆದ ಮಿ॥ ಜಾನ್ ಡಿ ರಾಕ್‌ಫೆಲ್ಲರವರು ಕಳೆದ ತಾ. ೨೩ರಲ್ಲಿ ನಿಧನಹೊಂದಿದರು ಇವರ ಮರಣದಿಂದ ಅಮೇರಿಕಾದ ಮಹಾ ಪ್ರಭಾವಶಾಲಿ ವ್ಯಕ್ತಿಯೊಂದು ಅಲ್ಲಿನ ಪ್ರಜಾಜೀವನದಿಂದ ಮಾಯವಾದಂತಾಯಿತು.

ಹಿರಿಯ ಜಾನ್ ಡೆವಿಸನ್ ರಾಕ್‌ಫೆಲ್ಲರವರು ೧೮೩೯ರಲ್ಲಿ ನ್ಯೂಯೋರ್ಕಿನ ರಿಚ್‌ಫರ್ಡಿನಲ್ಲಿ ಜನ್ಮವೆತ್ತಿದರು ಒಂದು ಸಾರ್ವಜನಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದು ರಾಕ್‌ಫೆಲ್ಲರವರು ಒಂದು ಗುಮಾಸ್ತೆಯ ಕೆಲಸವನ್ನು ಸೇರಿದರು. ತಮ್ಮ ೧೯ನೇ ವಯಸ್ಸಿನಲ್ಲಿ ಸಣ್ಣ ಸಂಸ್ಥೆಯೊಂದನ್ನು ಸ್ಥಾಪಿಸಿದರು ಕ್ಲಾರ್ಕ ಎಂಡ್ ರಾಕ್ಫೆಲ್ಲರ ಕಂಪೆನಿ, ಕಮಿಶನ್ ಮರ್ಚೆಂಟ್ಸ್ ಎಂದು ಆ ಸಂಸ್ಥೆಯ ಹೆಸರು ೧೮೬೭ರಲ್ಲಿ ಈ ಚಿಕ್ಕ ಸಂಸ್ಥೆಯು ರಾಕ್‌ಫೆಲ್ಲರ್ ಎಂಡ್ರ್ಯೂಸ್ ಎಂಡ್ ಫ್ಲೆಗ್ಲರ್ ಎಂದು ಮಾರ್ಪಾಟಾಯಿತು ಭೂಮಿಯಿಂದ ಎಣ್ಣೆಯನ್ನು ತೆಗೆಯುವುದೇ ಈ ಸಂಸ್ಥೆಯ ಉದ್ದೇಶವಿತ್ತು ಇದೇ ಸಂಸ್ಥೆಯು ಮುಂದೆ ಸ್ಟೇಂಡಾರ್ಡ ಆಯಿಲ್ ಕಂಪೆನಿಯೆಂದಾಯಿತು ಇತರ ಚಿಕ್ಕ ಸಂಸ್ಥೆಗಳು ಇದನ್ನು ಸೇರಿಕೊಂಡು ಕೆಲಸಮಾಡತೊಡಗಿದವು ೧೮೮೨ರಲ್ಲಿ ಸ್ಟೇಂಡಾರ್ಡ ಆಯಿಲ್ ಟ್ರಸ್ಟ್ ಎಂಬ ಸಂಸ್ಥೆಯು ಸ್ಥಾಪಿತವಾಯಿತು. ೧೮೯೨ರಲ್ಲಿ ಅದು ದಿವಾಳಿಯಾಯಿತು ತಿರುಗಿ ೧೮೯೯ರಲ್ಲಿ ಸ್ಟೇಂಡಾರ್ಡ ಕಂಪೆನಿಯು ನ್ಯೂಜೆರ್ಸಿಯಲ್ಲಿ ಸ್ಥಾಪಿತವಾಯಿತು ರಾಕ್‌ಫೆಲ್ಲರವರು ಅದರ ಅಧ್ಯಕ್ಷರಾದರು ಇದರ ತರುವಾಯ ರಾಕ್‌ಫೆಲ್ಲರು ಅಪಾರ ಧನವನ್ನು ಸಂಗ್ರಹಿಸತೊಡಗಿದರು.

ಶ್ರೀಮಂತನಾದಷ್ಟಕ್ಕೆ ಧನಾಭಿಲಾಷೆ ಹೆಚ್ಚುವುದು ಮನುಷ್ಯ ಪ್ರಕೃತಿಗೆ ಸ್ವಾಭಾವಿಕವಾದುದು ಆದರೆ, ರಾಕ್‌ಫೆಲ್ಲರ ಹಾಗೇನ ಮಾಡದೆ, ಅವರು ಅತ್ಯಧಿಕ ಹಣವನ್ನು ಪರೋಪಕಾರ, ದಾನಕ್ಕಾಗಿ ವ್ಯಯಿಸಿರುವರು ೧೯೩೨ರ ವರೇಗೆ ಅವರು ೫೦ ಮಿಲಿಯ ಡಾಲ್ಲರುಗಳನ್ನು ದಾನಕ್ಕಾಗಿ ಕೊಟ್ಟಿರುವರು ೩೦ ವರ್ಷಗಳ ಕೆಳಗೆ ರಾಕ್‌ಫೆಲ್ಲರು ಪ್ರಪಂಚದ ಚರಿತ್ರೆಯಲ್ಲಿ ಅತೀ ಶ್ರೇಷ್ಠ ಶ್ರೀಮಂತರೆಂದು ಗಣಿಸಲ್ಪಟ್ಟಿರುತ್ತಾರೆ ಆಗ ಅವರ ಧನಸಂಗ್ರಹವು ೪೦೦ ಮಿಲಿಯ ಪವನುಗಳಿಗೆ ಮಿಕ್ಕಿತ್ತಂತೆ ಈಗ ಅವರಿಗೊಬ್ಬ ಮಗನಿರುವನು ರಾಕ್‌ಫೆಲ್ಲರರು ಮಗನಿಗೆ ಬಿಟ್ಟ ಧನಕ್ಕಿಂತ ದಾನ ಮಾಡಿದ ಧನವು ಅಪಾರವಾಗಿರುವುದೆಂದು ಅವರನ್ನು ಬಲ್ಲವರು ತಿಳಿಸುತ್ತಾರೆ ಸಾಯುವಾಗ ಈ ತೈಲರಾಜರಿಗೆ ೯೭ ವಯಸ್ಸಾಗಿತ್ತು.

ಡ್ಯೂಕ್ ಆಫ್ ವಿಂಡ್ಸರರಿಂದ ಅಭಿವಂದನೆ

ಕಳೆದ ಡಿಸೆಂಬರ್ ತಿಂಗಳ ವರೆಗೂ ಬ್ರಿಟಿಷ್ ಸಾಮ್ರಾಜ್ಯ ಸೂತ್ರಗಳನ್ನು ವಹಿಸಿಕೊಂಡಿದ್ದು, ಒಂದು ಸಂವತ್ಸರ ಕೂಡಾ ಆಳದೆ ತನ್ನ ಪ್ರೇಯಸಿಗಾಗಿಪಟ್ಟ ಪರಿತ್ಯಾಗ ಮಾಡಿದ ಮಾಜಿ ಅಷ್ಟಮ ಎಡ್ವರ್ಡರು (ಈಗ ಡ್ಯೂಕ್ ಆಫ್ ವಿಂಡ್ಸರ್) ತಮ್ಮಂದಿರಾದ ಆರನೇ ಜಾರ್ಜರಿಗೆ ಒಂದು ತಂತಿಯನ್ನು ಕಳುಹಿಸಿರುವರು ಆರನೇ ಜಾರ್ಜರು ತಮ್ಮ ಹಿರಿಯಣ್ಣನವರಿಗಾದ ದುಃಸ್ಥಿತಿಯನ್ನು ಕಂಡು ಬಹಳ ವ್ಯಸನವುಂಟಾಗಿದೆ ಹಿರಿಯಣ್ಣನವರ ಪದವಿಯು ಅವರಿಗೆ ಬೇಕಾಗಿಯೂ ಇರಲಿಲ್ಲ. ಅದಕ್ಕವರು ಸಿದ್ಧರೂ ಇರಲಿಲ್ಲ. ಆದರೆ ಸಂದರ್ಭಗಳ ಒತ್ತಾಯದಿಂದ ಅವರು ಕಿರೀಟವನ್ನು ಧರಿಸಬೇಕಾಗಿ ಬಂತು. ಒಂದು ಸಲ ಆರನೇ ಜಾರ್ಜರು ಡ್ಯೂಕ್ ಆಫ್ ಯಾರ್ಕ್‌ರಾಗಿದ್ದಾಗ ತಮ್ಮೊಬ್ಬ ಸ್ನೇಹಿತನೊಡನೆ ಹೀಗೆಂದರಂತೆ – "ನಾಳೆ ನಮ್ಮಣ್ಣನವರು ಸಾರ್ವಜನಿಕದಲ್ಲಿ ಒಂದು ಘಂಟೆಯ ಭಾಷಣ ಮಾಡಲಿರುವರು ಅವರು ಹೇಗೆ ಅದನ್ನು ಮಾಡುವರೋ, ನನಗಂತೂ ಅದು ಸಾಧ್ಯವೇ ಇಲ್ಲ"ವೆಂದರಂತೆ

ಕುಳ್ಳರಾದುದರಿಂದ ವಿವಾಹವಾಗಲು ಅಪ್ಪಣೆಯಿಲ್ಲ

ಯುಗೊಸ್ಲೋವಿಯಾದ ಒಂದು ಸರ್ಕಸಿನ ಕಂಪೆನಿಯಲ್ಲಿ ಕುಳ್ಳರ ಒಂದು ಜೊತೆ ಇದೆ ಅವರೊಳಗೆ ಪ್ರಣಯವು ಬೆಳೆದು ಅವರು ಈಗ ಮದುವೆಯಾಗಲಿಚ್ಛಿಸುತ್ತಾರೆ ಅಂಟನಿ ಸ್ಪಿಡ್ಸ್ ಎಂಬ ಕುಳ್ಳನ ೨ ಅಡಿ ೧೧ ಅಂಗುಲ ಉದ್ದವಿದ್ದು, ಆತನ ವಧುವಾಗಲಿರುವವಳು ೨ ಅಡಿ ೮॥ ಅಂಗುಲ ಉದ್ದವಿದ್ದಾಳೆ ಇವರು ದೇಶದೊಳಗಿನ ಎಲ್ಲಾ ಚರ್ಚುಗಳನ್ನು ತಿರುಗಿದ್ದಾಯಿತು ಆದರೆ ಯಾರೂ ಮದುವೆ ಮಾಡಲು ಒಪ್ಪುವುದಿಲ್ಲ ಕಾರಣ ಆ ದೇಶದ ಕಾನೂನ ಪ್ರಕಾರ ಅಲ್ಲಿ ಮದುವೆಯಾಗುವವರ ಎತ್ತರವು ಮೂರು ಅಡಿಗಳಿಗೆ ಕಮ್ಮಿಯಿರಬಾರದೆಂದಿದೆ

ವಿಲ್ಸ್‌ಶ್ಯಾಯರಿನ ಒಂದು ದನವು ದಿನಕ್ಕೆ ೩೨ ರಾತ್ತಲುಗಳಷ್ಟು ಹಾಲನ್ನು ಕೊಡುವುದಂತೆ ಪ್ರಪಂಚದ ಹಾಲು ಕೊಡುವ ಹಸುಗಳಲ್ಲಿ, ಈ ಹಸವು ಒಂದ ದಾಖಲೆಯನ್ನು ಮಾಡಿದೆಯಂತೆ

ಇನ್ನು ಇಪ್ಪತ್ತೈದು ವರ್ಷಗಳೊಳಗೆ ಚೀನಾದೇಶವು ಒಂದು ಪ್ರಬಲ ಶಕ್ತ ರಾಷ್ಟ್ರವಾಗಿ ಪರಿವರ್ತಿಸಲ್ಪಡುವುದೆಂದು ಅಮೇರಿಕಕ್ಕೆ ತಿರುಗಿ ಹೋದ ಡಾ॥ ಸಿ ವಾ ಗ್ ರವರು ತಿಳಿಸುತ್ತಾರೆ

ಮೂಷಿಕ – ಮಾರ್ಜಾಲ ನ್ಯಾಯ!

ರವೇನಿಯಾದ ಒಪಿಲ್ಕ ಎಂಬ ಹಳ್ಳಿಯಲ್ಲಿ ಭಾರೀ ಬೆಂಕಿ ಎದ್ದು ೨೦ ಮಂದಿಗಳ ಮರಣವೂ ೩೫೦ ಗೋವುಗಳ ನಾಶವೂ ಆಗಿದೆ ೩೫೦೦ ಮಂದಿಗಳಿಗೆ ಮನೆಮಾರು ಇಲ್ಲದಾಗಿದೆ ೩೫೦ ಗುಡಿಸಲುಗಳು ಅಗ್ನಿಗಾಹುತಿಯಾದುವು ಈ ವಿಷಾದ ಘಟನೆಯು ನಡೆದುದಕ್ಕೆ ಒಂದು ಇಲಿ ಮತ್ತು ಒಂದು ಬೆಕ್ಕು ಇವು ಕಾರಣವಂತೆ ಲಿನುಟ್ಕಾ ಡ್ಯಾಮಿಟ್ರಿಸ್ಕ್ಯ ಎಂಬೋರ್ವ ತರುಣಿಯು ಒಲೆ ಹತ್ತಿಸುವುದಕ್ಕೆ ಪೆಟ್ರೋಲಿನ ಡಬ್ಬಿಯಿಂದ ಎರಡು ಹನಿಗಳನ್ನು ಒಲೆಯೊಳಕ್ಕೆ ಸುರಿಸಿ, ಬೆಂಕಿ ಮಾಡಲು ಪ್ರಯತ್ನಮಾಡುತ್ತಿದ್ದಳು ಅಷ್ಟರೊಳಗೆ ಒಂದು ಇಲಿಯು ಅಡಿಗೆ ಕೋಣೆಯೊಳಗೆ ಆಟವಾಡುತ್ತಿದ್ದುದನ್ನು ಸಹಿಸದೆ ಅಲ್ಲಿಯೇ ಕೂತಿದ್ದ ಬೆಕ್ಕು ಇಲಿಯ ಮೇಲೆ ಹಾರಲು ಯತ್ನಿಸಿತು. ಹಾರುವಾಗ ಪೆಟ್ರೋಲಿನ ಡಬ್ಬಿಯು ನೆಲಕ್ಕುರುಳಿ ಒಳಗೆ ಪೆಟ್ರೋಲು ಒಲೆಯೊಳಗೆ ಹರಿಯಿತು ಈ ಸಮಯಕ್ಕೆ ಸರಿಯಾಗಿ ಎಂಬಂತೆ ಬೆಂಕಿ ಕಡ್ಡಿಯನ್ನು ಗೀಚಿ ತಯಾರು ಮಾಡಿ ಕೈಯಲ್ಲಿ ಹಿಡಕೊಂಡ ತರುಣಿಯು ಗಾಬರಿಪಟ್ಟಳು ಅಷ್ಟರೊಳಗೆ ಒಂದೇ ಸವನೆ ಪೆಟ್ರೋಲಿಗೆ ಬೆಂಕಿ ಹಿಡಿದು ಉರಿಯತೊಡಗಿತು ಉರಿಯು ಬೇಸಿಗೆಕಾಲದ ಗಾಳಿಯ ಭರಕ್ಕೆ ಇಡೀ ಮನೆಯನ್ನೇ ಆವರಿಸಿತು ಯಾವ ರಕ್ಷಣೋಪಾಯವೂ ಸಾಧ್ಯವಾಗದೆ ಹೋಯಿತು ಕಾರಣ, ಆ ಹಳ್ಳಿಯಲ್ಲಿ ಬೆಂಕಿ ನೊಂದಿಸುವ ಇಲಾಖೆಯು ಸ್ಥಾಪಿಸಿದ್ದಿಲ್ಲ

ಹಿಂದೂ ದೇಶ.

ಮೈಸೂರು ವಿಶ್ವವಿದ್ಯಾಲಯದ ಈ ವರ್ಷದ ಬಿ ಎ ಪರೀಕ್ಷೆಯಲ್ಲಿ ಸುಮಾರು ೫೫ ವರ್ಷದ ಓರ್ವ ಮಹಿಳೆಯು ಉತ್ತೀರ್ಣಳಾದಳಂತೆ

ಂ ಂ ಂ ಂ

ಈಗ ಈಸ್ಟ್ ಇಂಡಿಸ್ ದ್ವೀಪಗಳಲ್ಲಿ ಸಂಚಾರ ಮಾಡುತ್ತಿದ್ದ ತ್ರಿವಾಂಕೂರಿನ ಮಹಾರಾಜರು ಅಲ್ಲಿಯ ನೆದರಲೆಂಡ್ಸ್ ಸರಕಾರದ ರಾಯಭಾರಿಯಿಂದ ಅಪೂರ್ವ ಆದರಾತಿಥ್ಯ ಉಪಚಾರಗಳನ್ನು ಪಡೆದರು

ಂ ಂ ಂ ಂ

ಕಿರೀಟಧಾರಣ ಉತ್ಸವಕಾಲದಲ್ಲಿ ಮಾನ್ಯ ವ್ಯಾಸರಾಯರು ಭಾರತದ ಜನಾಂಗದ ಪರವಾಗಿಯೂ (?) ಸ್ವದೇಶಿಯ ರಾಜರುಗಳ ಪರವಾಗಿಯೂ ಕಳುಹಿಸಿದ ಅಭಿನಂದನ ಸಂದೇಶಕ್ಕೆ ಆಂಗ್ಲ ದೊರೆಗಳು ಕೃತಜ್ಞತಾಪೂರ್ವಕ ವಂದನೆಗಳನ್ನು ಕಳುಹಿಸಿರುವರಂತೆ

ಂ ಂ ಂ ಂ

ಬಿಹಾರ್ ಸರಕಾರದವರು ಪತ್ರಿಕೋದ್ಯೋಗಿಗಳಿಗೆ ಪ್ರತ್ಯೇಕ ಮೂರು ಇಲಾಖೆಯನ್ನು ತೆರೆಯುವರಂತೆ ರೂಟರ್ ಪ್ರತಿನಿಧಿಗಳಾದ ಮಿ॥ ಎಸ್ ಬ್ಯುವಾಸಿಯವರು ಈ ಇಲಾಖೆಯ ಮುಖ್ಯಾಧಿಕಾರಿಗಳಾಗುವರಂತ

ಂ ಂ ಂ ಂ

ಕಲ್ಕತ್ತದ ಸೆಣಬಿನ ಕಾರ್ಖಾನೆಗಳ ಮುಷ್ಕರವು ಶಾಂತವಾಗಿ ಗಿರಣಿಗಳಲ್ಲಿ ಕೆಲಸವು ಪ್ರಾರಂಭವಾಗಿದೆ ಟಿಟಗರ್ ಕಾಗದ ಕಾರ್ಖಾನೆಯಲ್ಲಿ ಒಪ್ಪಂದವಾದ ವೇಳೆ ಅಲ್ಲಿನ ಕೆಲಸಗಾರರು ಕೆಲಸಾರಂಭಿಸಿದರಂತೆ

ಂ ಂ ಂ ಂ

ಕಮ್ಯೂನಿಸ್ಟ ಪಾರ್ಟಿಯ ಆದೇಶದಲ್ಲಿ ಸಹಕರಿಸಿದರೆಂಬ ಆಪಾದನೆಯ ಮೇಲೆ ಲಾಹೋರಿನ ಕೀರ್ತಿ ಎಂಬ ಪತ್ರಿಕೆಯ ಸಂಪಾದಕರೂ ಪ್ರವಾಸಿ ಸೋಶಲಿಸ್ಟ ಕೆಲಸಗಾರರೂ ಆದ ಮೋಹನ್‌ಲಾಲ್ ಎಂಬವರಿಗೆ ಸರಕಾರದಿಂದ ೧೮ ತಿಂಗಳ ಶಿಕ್ಷೆ ವಿಧಿಸಲಾಗಿದೆ

ಂ ಂ ಂ ಂ

ಕಾಂಗ್ರೆಸ್ಸಿನೊಡನೆ ಅಧಿಕಾರವನ್ನು ಸ್ವೀಕರಿಸುವುದರ ಬಗೆ ಶಾಂತಿಸ ದಾನಗಳು ಮಾಡುವುದನ್ನು ಬಿಟ್ಟುಬಿಡಿ ಎಂಬುದಾಗಿ ಬಂಗಾಳಾ ಯುರೋಪಿಯನ್ನರು ಸರಕಾರಕ್ಕೆ ಉಪದೇಶಿಸಿರುವುದನ್ನು 'ಸ್ಟೇಟ್ಸ್‌ಮೆನ್' (ಇದು ಯುರೋಪಿಯನ್ ಮನೋಭಾವದ ಪತ್ರಿಕೆ) ಪತ್ರಿಕೆಯು ಪ್ರತಿಭಟಿಸಿ ೨೦ನೇ ತಾರೀಕು, ಒಂದು ಪ್ರಧಾನಲೇಖನ ಬರೆದಿದೆ

ಂ ಂ ಂ ಂ

ಅಮೃತಸರದ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಹಿಡಿದಿರುವರು ಅವರು ಪಿಕೆಟಿಂಗ್ ಆರಂಭಮಾಡಿರುವರು ನಾಲ್ಕು ವಿದ್ಯಾರ್ಥಿಗಳನ್ನು ಕಾಲೇಜಿನಿಂದ ಹೊರಗೆ ಹೊರಡಿಸಿದುದೇ ಈ ಮುಷ್ಕರಕ್ಕೆ ಕಾರಣವಂತೆ ಕಳೆದ ೧೯ರಲ್ಲಿ ಕೊಲೇಜ್ ಗೇಟಿನೆದುರು ಪಿಕೆಟಿಂಗ್ ನಡೆಯುತಿದ್ದಾಗ ಪೋಲಿಸರು ಲಾಠಿ ಚಾರ್ಜು ಮಾಡಿದರಂತೆ

ಂ ಂ ಂ ಂ

ಮೀರತನದಲ್ಲಿ ಒಬ್ಬ ಹೈಸ್ಕೂಲು ವಿದ್ಯಾರ್ಥಿಯು ತನಗೆ ಪರೀಕ್ಷೆಯಲ್ಲಿ ಪಾಸ್ ಮಾರ್ಕುಗಳು ಸಿಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಂಡಿರುವನಂತೆ

ಂ ಂ ಂ ಂ ಂ

ಕಳೆದ ತಾ ೧೯ರಲ್ಲಿ ಬಂಗಾಳ ಪ್ರಾಂತ್ಯದ ಮೈಮನ್ ಸಿಂಘ್ ಜಿಲ್ಲೆಯಲ್ಲಿ ಒಂದು ಭಯಂಕರವಾದ ಬಿರುಗಾಳಿ ಬೀಸಿತು. ಇದರ ಪರಿಣಾಮವಾಗಿ ಒಂದು ಹಳ್ಳಿಯಲ್ಲಿ ಎಂಟು ಮಂದಿಗಳು ನಿಂತಲ್ಲಿಯೇ ನೆಲಕ್ಕಪ್ಪಳಿಸಲ್ಪಟ್ಟು ಮರಣಪಟ್ಟಿರುವರು.

ನಾಲ್ವರು ಹಿಂದೂ ಬಾಲಕಿಯರ ಅಪಹಾರ.

ಅಂಗಡಿಗಳ ದರೋಡೆ-ದಾರಿಕಾರರ ಸುಲಿಗೆ

ಬನ್ನೂ ಜಿಲ್ಲೆಯಲ್ಲಿ ಪುನಃ ಗಲಾಟೆ ಗಾರಂಭವಾಗಿದೆ ೧೯ ಮತ್ತು ೩೦ನೇ ತಾರೀಕುಗಳಲ್ಲ ರಾತ್ರಿ ಬನ್ನುಮಿರಾಲಿಯ ರಸ್ತೆಯ ಬಳಿ ಇದ್ದ ಕಾವಲುಗಾರರನ್ನು ಟ್ರೈಬ್ ಜನರು ಎದುರಿಸಿದರು ಬನ್ನು ಮಿಲಿಟರಿ ಠಾಣೆಯ ಮೇಲೆ ಡಕಾಯಿತರು ಬಿದ್ದು ಲೂಟಿ ಮಾಡಿದರು ಇರ್ವ ಭಾರತೀಯ ಸೈನಿಕರಿಗೆ ಘಾಯಗಳಾಗಿವೆ ೧೯ ಮತ್ತು ೨೦ನೇ ರಾತ್ರಿ ಬನ್ನೂ ಪೇನೂ ರಸ್ತೆ ಬಳಿ ಉಮಾರ್ ಚತ್ತಾರ್‌ಖೇಲ್ ಎಂಬ ಗ್ರಾಮದ ಮೇಲೆ ಡಕಾಯಿತರು ಲೂಟಿ ಸುಲಿಗೆ ಮಾಡಿದರು ನಾಲ್ವರು ಹಿಂದೂ ಬಾಲಕಿಯರು ಅಪಹರಿಸಲ್ಪಟ್ಟಿರುವರು ದಾರಿಹೋಕರನೇಕರ ಸುಲಿಗೆಯಾಗಿದೆ ನಂತರ ಡಕಾಯಿತರ ಕೂಟವು ಬೆಯಿನ್ ಕಣಿವೆಯ ಮೂಲಕ ಮುಂದಕ್ಕೆ ಹೋದರು ಅಪಹರಿಸಲ್ಪಟ್ಟ ಇನ್ನೊಬ್ಬ ಹಿಂದೂವನ್ನು ವಜೀರ್ ಮಲ್ಲಿಕ್‌ಗಳ ಎನ್ನುವಿಗೆ ಹಿಂದಕ್ಕೆ ಕರತಂದಿರುತ್ತಾರೆ

ಂ ಂ ಂ ಂ

ಬರ್ಮಾ ಸರಕಾರವು ಸದ್ಯದಲ್ಲೇ ಅನೇಕ ರಾಜಕೀಯ ಕೈದಿಗಳನ್ನು ಬಿಟ್ಟುಬಿಡುವರು

ಂ ಂ ಂ ಂ

ಲಕ್ನೋದಲ್ಲಿ ಬಿಸಿಲಿನ ತಾಪವು ೧೧೦ ಡಿಗ್ರಿಗಳಿಗೆ ಮಿಗುತ್ತಲಿದೆ ವಿಪರೀತ ಉಷ್ಣದ ದೆಸೆಯಿಂದ ಪಾದಾರ್ಗಸ್ತರು ಮೂರ್ಛೆ ಹೊಂದುತ್ತಲಿರುವರ

ಡಾಲ ಹೌಸಿಗೆ ಹೋಗಿದ ಶ್ರೀ ಸುಭಾಸ್ ಬಾಬುಗಳ ದೇಹ ಸ್ಥಿತಿಯು ಉತ್ತಮಗೊಳ್ಳುತ್ತಲಿದೆ ಎಂಬ ತೃಪ್ತಿಕರ ವಾರ್ತೆ ಬಂದಿರುತ್ತದೆ

ಟೀಕೆಗಳು.

(ಪ ಂದುವರಿಸಿದುದು.

"ಂಯಿಂದೆಕ ಮ..ನ್ನು ಕಾಪಾಡುವುದರಲ್ಲಿ ನಮ್ಮ ತಾತ್ಕಾಲಿಕ ಮಂತ್ರಿಗಳಿಗೆ ಒಂದು ಉತ್ತಮ ಅನುಕೂಲ ಸಂದರ್ಭ ದೊರೆಯಿತು ಕೆಲ್ಪಟ್ಟಣದಲ್ಲಿ ನೆರೆದಿದ್ದ ಸಾಂಪತ್ತಿಕ ಶಾಸ್ತ್ರ ವ್ಯಾಸಂಗದ ಶಿಬಿರವನ್ನು ಶಾಸನವಿರುದ್ಧವಾದುದೆಂದು ನಿಲ್ಲಿಸಿ, ಅಲ್ಲಿ ಸೇರಿದವರು ಶಾಸನೋಲ್ಲಂಘನ ಮಾಡಬಾರದೆಂದು ತಿಳಿಸಿ ಹೊಂದು ತ್ತಿರ ೧ವರಿಂದ.. ನಿರ್ಣಯಿಸಿ, ಆ ಶಾಲೆಯ ಪಾಠಕ್ರಮದ ಅವಧಿಯು ಅರೆವಾಸಿ ಮುಗಿವಾಗ ಅದನ್ನೆಲ್ಲಾ ಮುಗಿದಿಕ್ಕಿ ಸುಮಾರು ೬೦ ಮಂದಿಯನ್ನು ಲಾಠಿಪ್ರಯೋಗದ ಮೂಲಕ ಓಡಿಸಿ ಅಥವಾ ಸೆರೆಯಲ್ಲಿಟ್ಟು ಕಾನೂನನ್ನು ಕಾಪಾಡಿದಂತಾಗಿದೆ

ಂ ಂ ಂ ಂ ಂ

"ಕೆಲವೇ ದಿನಗಳಿಗಾಗಿ ನಡೆವ ಪಾಠಪ್ರವಚನಗಳ ವಿಚಾರವನ್ನು ಹಿಂದೆಯೇ ತಿಳಿಸಿದ್ದರೂ, ಅದಾಗಬಾರದೆನ್ನದೆ ಅರ್ಧದಲ್ಲೇ ಮುಗಿಸುವಂತೆ ಏಕೆ ಮಾಡಲಾಯಿತೋ! ಅಲ್ಲಿ ಸೇರಿದ್ದವರೆಲ್ಲರು ಶಸ್ತ್ರಪಾಣಿಗಳಾದ ಪಿತೂರಿಗಾರರೆ? ಅವರೆಲ್ಲರನ್ನು ಸೆರೆಯಲ್ಲಿಡುವಂತೆ ಪ್ರಯತ್ನಿಸಲಿಲ್ಲವೇಕೋ! ಅವರನ್ನು ಆಗಲೆ ವಿಚಾರಣೆಗೆ ತರಬಹುದಾಗಿತ್ತು.

ಂ ಂ ಂ ಂ ಂ

"ತಾತ್ಕಾಲಿಕರ ಪ್ರಯತ್ನದಿಂದ ಬಹುಕಾಲದ ವರೆಗೂ ಇವರ ಆಡಳಿತಕ್ರಮವನ್ನು ಆಕ್ಷೇಪಿಸುವಂತೆ ಇವರೇಕೆ ಸಾಧಿಸುವುದು?" ಎಂದು ಪತ್ರಿಕೆಗಳು ಪ್ರಶ್ನಿಸಿವೆ

[illegible]

ಜರ್ಮನಿಯಲ್ಲಿ [illegible]
ಅಲ್ಪಾಟ್ [illegible]
ಮರೆಯೊಳಗಿನ ಮಂದಿರ
[illegible]
ಸಾಮ್ರಾಜ್ಯದ ಸಂರಕ್ಷಣೆ
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ಪ್ರಪಂಚದ ಅತೀ ಶ್ರೇಷ್ಠ ತೀರ್ಮಾನ
ವಿವಿಧ ಸಮಾಚಾರಗಳು ೧
ಮಂಗಳೂರು ಸಮಾಚಾರ ೪
ತಾಲೂಕುಗಳಿಂದ ೧೧
ನಿಮಗೆ ತಿಳಿದಿರುವುದೇ ೧೨
ಜನತಾ ಸಂಪರ್ಕ ೧೩

ತಾ. ೨೮ನೇ ಶುಕ್ರವಾರ ಮೇ ೧೯೩೭

ಸ್ವದೇಶಾಭಿಮಾನಿ.

ಸಾಮ್ರಾಜ್ಯದ ಸಂರಕ್ಷಣೆ

ಬ್ರಿಟಿಷ ಸಾಮ್ರಾಜ್ಯದ ಪ್ರತಿಯೊಂದು ಪ್ರಾಂತ್ಯವೂ ತನ್ನ ಸಂರಕ್ಷಣೆಯನ್ನು ತಾನೆ ಮಾಡಿಕೊಳ್ಳಬೇಕಾಗಿದೆ ಎಂದು ಸಾಮ್ರಾಜ್ಯದ ರಕ್ಷಣೋಪಾಯಗಳನ್ನು ಕುರಿತಾಗಿ ವಿಮರ್ಶಿಸಿ ಬ್ರಿಟಿಷ ಮಂತ್ರಿಗಳು ಸೂಚಿಸಿರುವರು ಇಂಗ್ಲೆಂಡು ಎಲ್ಲ ಪ್ರಾಂತ್ಯಗಳ ಸಂರಕ್ಷಣಾ ಭಾರವನ್ನು ಹೊರಲೂ ಶಕ್ತವಾಗಿಲ್ಲ, ಪ್ರಾಂತ್ಯಗಳು ಈ ಸಂರಕ್ಷಣೆಗಾಗಿ ತೆಯುವ ಮೊಬಲಗೂ ಅತ್ಯಲ್ಪ ಸೂರ್ಯನು ಮುಳುಗಲೊಲ್ಲದ ಈ ಸಾಮ್ರಾಜ್ಯವನ್ನು ಶಕ್ತಲಿಯೊಂದೂ ಕವಿಯದಂತಾಗಬೇಕಾಗಿ ಪ್ರತಿಯೊಂದು ಪ್ರಾಂತ್ಯವೂ ತನ್ನ ಮಟ್ಟಿನ ಜವಾಬ್ದಾರಿಯನ್ನು ತಾನೆ ಹೊರಬೇಕಾಗಿದೆ ನಿಜ ಬ್ರಿಟಿಷ ಸಾಮ್ರಾಜ್ಯದ ಮಹತ್ವವನ್ನು ನೌಕಾ ಸೈನ್ಯವೇ ಕಾಪಾಡುತ್ತಿದ್ದಿತು, ಈ ವಾಯುನಾವೆಗಳ ಪ್ರಾಬಲ್ಯದಿಂದಾಗಿ, ಬ್ರಿಟಿಷ ನಾವೆಗಳ ಬಲಕುಂದಿದೆ ಅದೂ ಅಲ್ಲಲ್ಲಿ ಸಪ್ತಸಾಗರಗಳ ಅಂಚಿನಲ್ಲಿರುವ ಬ್ರಿಟಿಷ ವಸಾಹತುಗಳನ್ನು ಇಂಗ್ಲೆಂಡಿನಿಂದ ನಾವೆಗಳು ಓಡಿಬಂದು ಕಾಪಾಡುವುದೂ ಅಷ್ಟು ಸಹಜವಾಗದು

ಬ್ರಿಟಿಷ ಸಾಮ್ರಾಜ್ಯದ ಚದರಿಬಿದ್ದಿರುವ ಅಂಗಗಳು ತಮ್ಮ ತಮ್ಮ ಆತ್ಮರಕ್ಷಣೆಯನ್ನು ನಿಜವಾಗಿಯೂ ತಾವು ತಾವೇ ಮಾಡಿಕೊಳ್ಳುವುದು ಲೇಸು, ನ್ಯಾಯ. ಹಾಗೆ ಮಾಡುವಂತಾದರೆ, ಭಾರತ ವಾಸಿಗಳಾದ ನಮಗೆ ತೆರಿಗೆಯ ಭಾರವು ಕಡಿಮೆಯಾಗುವುದು

ನಮ್ಮ ದೇಶದಿಂದ ಬಲು ದೂರವಾಗಿದ್ದು, ಪ್ರಬಲ ಸೇನೆಗಳುಳ್ಳ ರಾಷ್ಟ್ರಗಳಿವೆ ಬ್ರಿಟಿಷರ ವಿರುದ್ಧವಾಗಿ ಎಂದಾದರೂ ಕಾದಾಡಬರಬಹುದಾದ ರಷ್ಯ ಮತ್ತು ಜಾಪಾನುಗಳೂ ಹಿಂದೂದೇಶವನ್ನು ಅಭಿಯೋಗ ಮಾಡುವಂತಿಲ್ಲ ಚೀನದ ಕಳೇಬರವನ್ನು ಕತ್ತರಿಸುತ್ತ ಅದರ ಒಂದೊಂದೇ ತುಂಡನ್ನು ಜೀರ್ಣ ಮಾಡುತ್ತ ಬೆಳೆಯಲು ತೊಡಗಿರುವ ಜಾಪಾನಿಗೆ ಇನ್ನೆಷ್ಟೋ ವರ್ಷಗಳ ತನಕ ಅಲ್ಲೇ ಸಾಕಷ್ಟು ಕಷ್ಟವಿದೆ ಜಾಪಾನಿನ ಜನಬಲವು ತುಂಬಾ ಇದೆಯಾದರೂ, ಜನಸಂಖ್ಯೆಯನ್ನು ಪರದ್ವೀಪಗಳೇ ಮೊದಲಾದುವಕ್ಕೆ ಜಾಪಾನು ಕಳುಹಬೇಕೇ ಹೊರತು, ಜನತುಂಬಿರುವ ಈ ದೇಶಕ್ಕಲ್ಲ ರಷ್ಯದ ಸಾಂಪತ್ತಿಕ ಸ್ಥಿತಿ ಚೆನ್ನಾಗುತ್ತ ಬರುತ್ತಿದೆಯಾದರೂ, ಅದಕ್ಕನುಕೂಲವಾಗಿ ಸಾಮಾಜಿಕ ಸ್ಥಿತಿಯು ಸರಿಹೋಗಲು ಇನ್ನೆಷ್ಟೋ ವರ್ಷಗಳು ದಾಟಬೇಕಲ್ಲವೇ! ರಷ್ಯದ ರಾಜ್ಯಭಾರ ಕ್ರಮವನ್ನು ಒಪ್ಪುವ ದೇಶಗಳು ಕಡಮೆ; ಇತರ ದೇಶಗಳಲ್ಲಿ ಈ ಕ್ರಮವು ಜಾರಿಗೆ ಬರುವುದೂ ಕಷ್ಟ. ಅದೂ ಅಲ್ಲದೆ, ನಮ್ಮ ದೇಶದೊಡನೆ ವಿಶೇಷ ಸಂಪರ್ಕ ಬೆಳಸುವುದರಿಂದ ಸ್ವದೇಶೀಯರ ಜೀವನ ಕ್ರಮವೇ ಬದಲಾಗುವುದೆಂಬ ಬೆದರಿಕೆಯು ರಷ್ಯಕ್ಕೆ ಇದ್ದೇ ಇದೆ. ಹೀಗಾಗಿ, ನಮ್ಮ ದೇಶದೊಳಗೆ ಅಭಿಯೋಗ ಮಾಡುವ ಪ್ರಬಲರಾರೂ ಇಲ್ಲ, ಇದ್ದರೂ ಇದಕ್ಕಾಗಿ ಅವರು ಹಾ ತೊರೆಯುತ್ತಿಲ್ಲ.

ಹೀಗಿರುವ ಕಾರಣ, ವರ್ಷಕ್ಕೆ 45 ಕೋಟಿ ರೂಪಾಯಿ ವ್ಯಯಿಸುವ ನಮ್ಮ ಸೇನಾಂಗಗಳ ಏರ್ಪಾಡು ನಿರರ್ಥಕವಾಗಿದೆ ಎನ್ನಬೇಕು. ಗಡಿನಾಡುಗಳಲ್ಲೂ ದೇಶದೊಳಗೂ ಅಲ್ಲಲ್ಲಿ ಸಮಾಧಾನಪಾಲನೆಗಾಗಿ ಪೋಲೀಸರ ಫೌಜುಗಳಂತೆ ನಮಗೆ ಸೇನೆಗಳಿದ್ದರೆ ಸಾಕಾಗುವುವು ಈಗ ಇರುವ ಸೈನ್ಯವೆಲ್ಲ, ಪರಕೀಯರನ್ನು ಅಣಗಿಸುವುದಕ್ಕಿಂತಲೂ ನಮ್ಮನ್ನೆ ಅಣಗಿಸುವುದಕ್ಕೆ ಉಪಯುಕ್ತವಾಗಿರುವಂತಿದೆ ಕಾಯಂ ಸೈನ್ಯವನ್ನು ಅರ್ಧಕ್ಕರ್ಧ ಇಳಿಸಿ, ಅಲ್ಲಲ್ಲಿನ ದಂಡುಗಳನ್ನು ಬೆಳಸುತ್ತ ಬಂದರೆ ನಮ್ಮ ದೇಶರಕ್ಷಣೆಗೆ ಯಥೇಷ್ಟವಾಗುವುದು ಇದ್ದ ಸೇನೆಗಳಾದರೂ, 45 ಕೋಟಿ ವ್ಯಯಕ್ಕೆ ಒಪ್ಪುವಷ್ಟು ಬಲವುಳ್ಳವಲ್ಲ ಸೇನಿಕರೆಲ್ಲ ಹಿಂದೀಯರಾದಲ್ಲಿ, ಇಪ್ಪತ್ತು ಕೋಟಿ ವ್ಯಯದಲ್ಲೇ ಈಗ ಸೈನ್ಯದ ಇಮ್ಮಡಿ ಮುಮ್ಮಡಿ ಸೈನ್ಯವನ್ನು ಇಟ್ಟುಕೊಳ್ಳಬರುವುದರಲ್ಲಿ ಸಂದೇಹವಿಲ್ಲ

'ಇಂಡಿಯನ್ ನೇವಿ' ಎಂದು ಯಾವ ನೌಕಾಬಲವನ್ನು ನಾವು ಇಟ್ಟುಕೊಳ್ಳಬೇಕಾಗಿದೆಯೋ, ಅದು ಬ್ರಿಟಿಷ ನೌಕಾಬಲದ ಒಂದು ಕಿಂಚಿದಂಶ, ಆ ನೌಕೆಗಳೇ ಈಗ ವಿಮಾನಗಳ ಪ್ರಾಬಲ್ಯದಿಂದ ಅಲ್ಪಬಲಿಗಳಾಗುವುವೆಂದು ಮೊದಲೇ ಹೇಳಿರುವ ಕಾರಣ, ನಮ್ಮ ನಾವೆಗಳು ಯಾವ ರಾಷ್ಟ್ರದ ಗಣ್ಯಕ್ಕೂ ಬಾರದೆ, ಕೇವಲ ಆಡಂಬರಕ್ಕಾಗಿ ಮಾತ್ರ ಇರುವುವು ನಮ್ಮ ದೇಶದ ಕರಾವಳಿಯನ್ನು ಸಂರಕ್ಷಿಸಲು ಶೀಘ್ರಗಾಮಿಗಳಾಗಿ ಬಲವುಳ್ಳ ನೂರಾರು ನಾವೆಗಳು ಬೇಕು ಇವು ಚಿಕ್ಕವಾಗಿದ್ದರೂ ಸಾಕು ಹಿಂದೀಯರ ಕೈಯಲ್ಲಿದ್ದು ಇಲ್ಲೇ ಕಟ್ಟಿಸುವಂತಾದಲ್ಲಿ ಇವುಗಳ ವ್ಯಯವೂ ಕಡಮೆಯು ರಕ್ಷಣೋಪಾಯಗಳನ್ನು ಜನರು ತಿಳಿದ ಕೊಳ್ಳುವುದಕ್ಕೂ ಇಂತಹ ನೌಕಾಬಲದ ರಚನೆಯೆ ಆಗತ್ಯ

ನಮ್ಮ ವಾಯುನಾವೆಗಳೆಂದರೆ, ನಾಲ್ಕರು ಬ್ರಿಟಿಷರೂ ಹನ್ನೊಂದು ಮಂದಿ ಹಿಂದೀಯರೂ ಆಫೀಸರರಾಗಿರುವ ಕೆಲವು ವಿಮಾನಗಳೇ ಮಾತ್ರ ಇವೂ, ಯೂರೋಪಿನಲ್ಲಿ ಯುದ್ಧವಾದಾಗ ಇಲ್ಲಿಂದ ಅತ್ತ ತೆರಳುವುವು ನಾವೆಗಳೆಲ್ಲ ಇಂಗ್ಲಿಷ ಸೈನ್ಯ ಭಾಗದವು ಅದರ ಬದಲು, ಹಿಂದೀ ವಿಮಾನ ಸೇನೆಯನ್ನೆ ರಚಿಸಿದರೆ ಈಗ ತಗಲುವ ವೆಚ್ಚದಲ್ಲಿ ಇನ್ನೆಷ್ಟೋ ವಿಮಾನಗಳನ್ನೂ ಆಫೀಸರರನ್ನೂ ಇಟ್ಟುಕೊಳ್ಳಲು ನಮಗೆ ಅನುಕೂಲ

ಅಂತೂ 48ರಿಂದ 20ಕ್ಕೆ ಖರ್ಚನ್ನಿಳಿಸಿ ವಾಸ್ತವವಾಗಿಯೂ ಹಿಂದೀಯರಾದ ಸೈನ್ಯಗಳನ್ನೂ ವಿಭಾಗಗಳನ್ನೂ ಹೆಚ್ಚಿಸಿ, ನಮ್ಮ ದೇಶೀಯರೇ ಸ್ವದೇಶ ರಕ್ಷಣೆ ಮಾಡುವಂತಹ ಏರ್ಪಾಡಾಗಬೇಕು ಇದೊಂದೂ ಇಲ್ಲದೆ, 'ನಾವು ಹಿಂದೆರಳಿದರೆ, ದೇಶವನ್ನು ಕಾಪಾಡುವವರಿಲ್ಲ, ದೇಶವು ಹಾಳಾದರೆ ಮತ್ತೆ ಸ್ವರಾಜ್ಯ ಕಟ್ಟು ದೊರೆತುದೇನು?' ಎಂದಾಡುವ ಬುದ್ಧಿವಂತಿಕೆಯ ಮಾತು ಮಾತ್ರ ನಮಗೆ ಆಗಾಗ ಕೇಳಿಸುತ್ತಿರುವುದು ಕೆಲವರಂತೂ, ಮೆಲ್ಲನೆ ಇನ್ನೂರು ನಾನ್ನೂರು ವರ್ಷಗಳಲ್ಲಿ ಹಿಂದೀಯರೇ ದೇಶ ರಕ್ಷಣೆ ಮಾಡುವಂತಾಗುವುದು ಎಂದು ಎನ್ನುವರು ಸ್ವಾತಂತ್ರ್ಯ ದೊರೆಯದೆ ಈ ಸ್ವರಕ್ಷಣೆಯು ಹಿಂದೂದೇಶಕ್ಕೆ ಸಾಧ್ಯವಲ್ಲ, ಸ್ವರಕ್ಷಣೋಪಾಯಗಳನ್ನು ಅರಿಯದೆ ಸ್ವಾತಂತ್ರ್ಯ ಕೊಡಲಾಗದೆಂಬುದು ವಿಹಿತವಲ್ಲ

ಸ್ಫುಟವಿಚಾರಗಳು

ಸ್ಪೈಯಿನಿನಲ್ಲಿ ಇನ್ನೂ ಯುದ್ಧ ಮುಗಿದಿಲ್ಲ!

ಜನರಲ್ ಫ್ರೆಂಕೋವಿನ ಸಹಾಯಕ್ಕಾಗಿ ಇಟಲಿಯಿಂದ ಕಳುಹಲಾದ ದಂಡು ತನಗೆ ಬೇಕಾದಂತೆ ವರ್ತಿಸಲಾರದ ಕಾರಣ, ಅತೃಪ್ತರಾಗಿ, ಇಟಲಿಯಲ್ಲಿ ಈ ಅತೃಪ್ತಿಯ ಪ್ರತಿಧ್ವನಿ ಎದ್ದಿದೆ ಈ ವೊಲಂಟೀಯರರನ್ನು ಇಟಲಿಗೇ ಹಿಂದಕ್ಕೆ ಕರೆಯಿಸಬೇಕೆಂದು ಮುಸೊಲಿನಿಯ ಅಭಿಪ್ರಾಯವಾಗಿದೆ ಫ್ರೆಂಕೋ ಇದನ್ನು ತಿಳಿದು ತನ್ನ ರಾಯಭಾರಿಗಳನ್ನು ಮುಸೊಲಿನಿಗೆ ಕಳುಹಿಸಿ, ಈಗ ಅಪಾಯಕ್ಕೀಡುಮಾಡಬಾರದೆಂದು ವಿನಂತಿಸಿಕೊಂಡಿರುವನು. ಮುಸೊಲಿನಿಯು ಸ್ವಯಂಸೇವಕರನ್ನು ಮೊದಲು ಕಳುಹಿಸಿದ್ದೇಕೆ? ಈಗ ಹಿಂದಕ್ಕೆ ಕರೆವನೇಕೆ? ತಾನು ನಿಂತ ಕಡೆ ಗೆಲ್ಲುವಂತಿಲ್ಲ, ನಷ್ಟ ಅಪಾರವಾಯಿತೆಂದೇ ಅವನ ನಂಬುಗೆ ಇರಬಹುದು ಅಥವಾ,–ಇನ್ನು ಫ್ರೆಂಕೋಗೆ ಸಹಾಯಮಾಡಬೇಕಾದರೆ, ಆತನು ತನ್ನ ಅಂಕೆಯಲ್ಲಿರಬೇಕು ಹೊರತು, ಆತನ ಮಾತಿನಂತೆ ತನ್ನವರು ಕಾದಾಡುವಂತಿರಬಾರದು ಎಂದೂ ನಿರ್ಧರಿಸಿರಬಹುದು ಈ ಎರಡನೆ ನಿರ್ಧಾರ ಮಾಡುವುದಕ್ಕಾದರೂ, ಜರ್ಮನಿಯ ಸಮ್ಮತಿ ಸಹಾನುಭೂತಿಗಳು ಮುಸೊಲಿನಿಗೆ ಬೇಕು ಈ ದೆಸೆಯಿಂದ ಹಿಟ್ಲರನ ಮತ್ತು ಮುಸೊಲಿನಿಯ ರಾಯಭಾರಿಗಳ ಕಳೆದ ವಾರ ನಾನಾ ಸಂಭಾಷಣಾ ಕೂಟಗಳಲ್ಲಿ ಸೇರಿದ್ದಂತೆ ತಿಳಿದುಬರುತ್ತಿದೆ ಇತ್ತ ಫ್ರೆಂಕೋವಿನ ದಂಡ ಹಿಂದೋಡುವ ಕೆ ವಾರ್ತೆಗಳು ಬಂದುದರಿಂದ, ಬ್ರಿಟಿಷ ಸರಕಾರವೂ ಇತ್ತಂಡಗಳೊಳಗೆ ಕರಾರನ್ನು ಮಾಡಿಸಿಕೊಡಲು ಯುದ್ಧವನ್ನು ತಡೆಯವುದುತ್ತಮ ಎಂದಿದೆ ಜರ್ಮನ ವಿಮಾನಚಾರಿಗಳು ಬಿಲ್ಬಾವ್ ಪ್ರಾಂತ್ಯವನ್ನು ಸಿಡಿಗುಂಡ ಗಳಿಂದ ಪುಡಿಮಾಡಿದರು, ಅಲ್ಲಿನ ಜನರು ಮಾತ್ರ ಕಿಂಚಿತ್ತು ಹೆದರದೆ ಇನ್ನೂ ಒಬ್ಬ ದೇ ಒಂದು ಜನ ಉಳಿಯುವ ತನಕವೂ ಕಾದಾಡಿ ತಮ್ಮ ಪ್ರಾಂತ್ಯವನ್ನು ಕಾಪಾಡಿಕೊಳು ವೆವು ಎಂದೇ ಸಾರಿರುವರು ಅವರಿನ್ನು ಶರಣಾಗತರಾಗಿಲ್ಲ ದಂಗೆಖೋರರು ಗೆಲ್ಲುವಂತೆ ಮೌನವಾಗಿಯೂ, ಅವರು ಸೋಲುವಾಗ ತಾಟಸ್ಥ್ಯಭಾವವನ್ನು ಬೋಧಿಸಿಯೂ ಬ್ರಿಟಿಷ ಸರಕಾರವು ದಿನ ಕಳೆಯುತ್ತಿದೆ ಇದಕ್ಕೆ ಕಾರಣವೇನು? ಇಂಗ್ಲೆಂಡು ಫ್ರಾನ್ಸುಗಳಿಗೆ, ಇಟಲಿಯು ಸ್ಪೈಯಿನನ್ನು ತನ್ನ ಅಧಿಕಾರದಲ್ಲಿ ಇಟ್ಟುಕೊಳ್ಳುವಂತಾಗಬಾರದೆಂಬ ಆಸೆಯಿದೆ ಇಟಲಿಯು ಎಂತೆಂಥ ಗಂಡಾಂತರವನ್ನೂ ಗಣನೆಗೆ ತಾರದೆ ಮುಂದೊತ್ತುತ್ತಿದೆ; ಇಂಗ್ಲೆಂಡು ಫ್ರಾನ್ಸುಗಳಿಗೆ ಈಗ ತಾನೆ ಗಂಡಾಂತರಗಳಿಗೆ ಈಡಾಗುವುದು ಅಚಾತುರ್ಯವೆನಿಸಿಯದೆ. ದಂಗೆಖೋರ ಫ್ರೆಂಕೋವಿನ ದಂಡು ಜಯ ಹೊಂದುವಾಗ ಇಂಗ್ಲೆಂಡು ಫ್ರಾನ್ಸುಗಳು ಇದಿರಾಡಿದರೆ ಇಟಲಿಯು ಕೋಪಿಸಬಹುದೆಂದು ಹೀಗೆ ಬ್ರಿಟಿಷ ಸರಕಾರವು ವರ್ತಿಸಬೇಕಾಗಿದೆ. ಅಬಿಸೀನಿಯವನ್ನು ಇಟಲಿಯು ಗೆಲ್ಲುವಾಗಿಯೂ ಬ್ರಿಟಿಷರು ಇದೇ ರೀತಿ ವರ್ತಿಸಿದ್ದರು. ಇನ್ನೊಮ್ಮೆಯೂ ಹಾಗೆಯೆ, ಇತ್ತ, ಸ್ಪೈಯಿನ್ ಸರಕಾರದ ಸೇನೆಗಳು ಜಯಹೊಂದುತ್ತಿರುವ ವಾರ್ತೆ ಬರುತ್ತಲೆ, ಇಟಲಿಯ ಸೇನಿಕರು ಪುನಃ ಇಟಲಿಯನ್ನು ಸೇರುವಂತೆ ಬ್ರಿಟಿಷ ನಾವೆಗಳು ಸಹಕರಿಸುವುವೆಂದು ಬ್ರಿಟಿಷ ಸರಕಾರವು ಸೂಚಿಸಿಯದೆ ಈ ಸ್ವಯಂಸೇವಕರು ಕೆಲ ದಿನಗಳಲ್ಲಿ ಸ್ವದೇಶವನ್ನು ಸೇರಿದರೆ ಬರೇ ಕಾಲಹರಣದಿಂದಲೇ ಸ್ಪೈಯಿನಿನ ಸರಕಾರವು ದಂಗೆಖೋರರನ್ನು ಥಕ್ಕನೆ ಗೆಲ್ಲುವ ಸಂಭವವಿದೆ ಹೀಗಾಗಿ ಫ್ರೆಂಕೋವು ಜರ್ಮನಿ ಇಟಲಿಗಳ ಆಶ್ರಯವನ್ನು ಕೇಳಿಕೊಳ್ಳಲೇಬೇಕಾಗಿದೆ ಅಲ್ಲಿನ ಇಬ್ಬರು ಡಿಕ್ಟೇಟರರು ಏನೆನ್ನುವರೋ ಅದರಂತೆ ಸ್ಪೈಯಿನಿನ ಗತಿ ಹೊರತು ಬೇರೆ ಇಲ್ಲ

ಬದುಕುವ ಹಕ್ಕು

ಜೀವನದಲ್ಲಿ ನಿರಾಶನಾಗಿ ಸಾಯಲಿಚ್ಛಿಸುವವನನ್ನು ಕಾನೂನು ದಂಡಿಸುವುದು ಉಚಿತ ವಿಹಿತ ಆತ್ಮಘಾತವು ಮಹಾ ಪಾತಕಗಳಲ್ಲಿ ಹೆಚ್ಚಿನದು ಬರೀ ಉಪವಾಸದಿಂದಲೇ ಸಾಯಲೆಳಸುವವನನ್ನು ಕೂಡ ದಂಡಿಸುವುದೂ ಕ್ರಮವೇ, ಅವನು ಬದುಕುವಂತೆ ಮಾಡಲೇಬೇಕಾಗಿದೆ ಈ ರೀತಿಯ ಜತನವನ್ನು ಸರಕಾರವು ನೋಡುವುದು ಶ್ಲಾಘನೀಯ ಆದರೆ, ಸಾಯುವುದಕ್ಕೆ ಹಕ್ಕಿಲ್ಲದವನು ಬದುಕುವುದಕ್ಕೂ ಹಕ್ಕುಳ್ಳವನಷ್ಟೆ ಅವನು ಬದುಕುವಂತೆ ಆಗತ್ಯ ಸಹಾಯ ಮಾಡುವುದೂ ಸರಕಾರದ ಕರ್ತವ್ಯವಲ್ಲವೆ? ಪ್ರತಿಯೊಬ್ಬನಿಗೆ ಕೆಲಸ ಮಾಡಿ ಜೀವನ ಸಾಗಿಸಲೂ ಸುಖವಾಗಿ ಬದುಕಲೂ ಅನುಕೂಲತೆಗಳನ್ನು ಒದಗಿಸುವುದೂ ಸರಕಾರದ ಕರ್ತವ್ಯಗಳೇ ಇದು ನಿಜವಾದಲ್ಲಿ ಶ್ರಮಜೀವಿಗಳಿಗೆ ಬಲವಾಗಿ ಸರಕಾರವು ಇದ್ದೇ ಇರಬೇಕಾಗುವುದು ಸಾಂಪತ್ತಿಕ ಸುಧಾರಣೆಗಳನ್ನು ಕೂಡಲೆ ನಿರ್ಧರಿಸಿ ಸರಕಾರವು ಜಾರಿಗೆ ತರಬೇಕಾಗುವುದು ಜೀವನ ಎಂದರೆ ಉಪವಾಸವಾಗಿರದಿರೋಣ ಎಂಬಂರ್ಥವಾಗದು. ಜೀವನಕ್ಕೂ ಒಂದು ಗೌರವದ ಅಳತೆ ಇರಬೇಕು ಶ್ರಮ ಜೀವಿಗಳ ಹಿತಚಿಂತನೆಕ್ಕಾಗಿ ಅಗತ್ಯವಾಗಿಯೂ ಸರಕಾರವು ತೀರ ನೂತನ ಶಾಸನ ಮಾಡಲು ಸಿದ್ಧರಾಗಬೇಕಾಗಿದೆ ಆಗ ಮಾತ್ರ, ಎಲ್ಲರು ಜೀವಿಸುವ ಹಕ್ಕನ್ನು ಕಾಪಾಡಿದಂತಾಗುವುದು

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets, at the
Office C. P C Co., Ltd.
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಜರ್ಮನಿಗೆ ಸ್ಪೆಯಿನಿನ ಕಲಹದಲ್ಲಿ ಅಭಿರುಚಿ ಇಲ್ಲ.

ಮುಸಲೋನಿಗೆ ಹುಟಿಂಕೆ ಹಿಡಿದಿದೆ.

ಶಾಂತಿ ಪ್ರಶ್ನೆ ಅಸಾಧ್ಯ.

ಬೆಲ್ಜಿಯಂ, ಫ್ರಾನ್ಸು, ಜರ್ಮನಿಗಳು, ಸ್ಪೈನಿನಲ್ಲಿ ಶಾಂತಿ ಸಂಧಾನಗಳ ಪ್ರಯತ್ನಗಳನ್ನು ಮಾಡಲು ಪ್ರಯತ್ನಗಳಾಗಬೇಕೆಂದು ಬ್ರಿಟಿಷರು ಕೊಟ್ಟ ಸೂಚನೆಯಲ್ಲಿ ಕೃಷ್ಟಪಟ್ಟು ಈ ಸೂಚನೆಯನ್ನು ಸ್ಪೈನಿನ ಸರಕಾರದವರಿಗೆ ಅರುಹಲಾಗಿ ಅವರು ನಾಲ್ಕು ಗಂಟೆಗಳ ಕಾಲದ ಪರ್ಯಾಲೋಚನಾ ಸಭೆಯ ನಂತರ, ದಂಗೆಖೋರರನ್ನು ಸಂಪೂರ್ಣ ನಾಶಗೊಳಿಸದ ಹೊರತು ಸ್ಪೈನಿನ ಸರಕಾರವು ಶಾಂತಿ ಸಂಧಾನದ ಪ್ರಶ್ನೆಗಳಿಗೆ ಗಮನ ಕೊಡುವುದಿಲ್ಲವೆಂದು ನಿರ್ಧರಿಸಿರುವರು.

ದಂಗೆಕಾರರೂ ಕೂಡಾ—ಸರಕಾರದ ಕಡೆಯವರು ಸಂಪೂರ್ಣ ಶರಣಾಗತರಾಗದ ಹೊರತು ಶಾಂತಿಸಂಧಾನದ ಪ್ರಶ್ನೆಗಳನ್ನು ಪ್ರಸ್ತಾಪಿಸುವುದಿಲ್ಲವೆಂದು ತಿಳಿಸಿರುತ್ತಾರೆ.

ಬ್ರಿಟನ್ನಿನ ವಿನಂತಿ: ಲಂಡನ್ನಿನಲ್ಲಿ ಸ್ಥಾಪಿತವಾದ ನಾನ್ ಇಂಟರ್‌ವೆನ್ಷನ್ ಸಮಿತಿಯವರು ಸ್ಪೈನಿನ ಕಲಹದ ಇತ್ತಂಡದವರಿಗೂ, ಮಾನುಷಿಕ ಭಾವನೆಯ ಮೇಲೆ ಯುದ್ಧದ ವಿಚಾರವನ್ನು ಪರ್ಯಾಲೋಚಿಸಬೇಕಾಗಿ ವಿನಂತಿಮಾಡಿಕೊಳ್ಳಲು ನಿರ್ಧರಿಸಿರುವರು.

ವಿದೇಶಿ ಸ್ವಯಂಸೇವಕರು: ಸ್ಪೈನಿನ ಕಲಹದಲ್ಲಿ ಭಾಗಿಗಳಾಗಿರುವ ಹೊರಗಿನ ಸ್ವಯಂಸೇವಕರನ್ನು ಹಿಂದಕ್ಕೆ ಕರೆಯಲು ವಿಚಾರಮಾಡುತ್ತಿದ್ದಾರೆ. ಬ್ರಿಟನು ಇದಕ್ಕಾಗಿ, ಯೂರೋಪಿನ ಪ್ರಧಾನ ನಗರಗಳಲ್ಲಿರುವ ತನ್ನ ರಾಯಭಾರಿಗಳೊಡನೆ ಸ್ಪೈನಿನಲ್ಲಿ ತಾತ್ಕಾಲಿಕವಾಗಿ ಕಲಹವನ್ನು ನಿಲ್ಲಿಸುವ ಏರ್ಪಾಡಿನ ಸಾಧ್ಯಾಸಾಧ್ಯತೆಗಳ ಕುರಿತು ಸೂಚನೆ ಕೇಳಿರುತ್ತದೆ.

ಮುಸಲೋನಿಗೆ ಭಯ: ಸ್ಪೈನಿನಲ್ಲಿರುವ ಇಟಲಿಯಾನರ ಕಟುಂಬದವರು ಮುಸಲೋನಿಗೆ ಬರೆಕೊಂಡಿರುವರು. ಸ್ಪೈನಿನ ಪರಿಸ್ಥಿತಿಯು ಬದಲಾಗಿಲ್ಲವೆಂದೂ, ಸಾವಿರಗಟ್ಟಲೆ ಇಟಲಿಯಾನರು ಅಗಲೇ ಮಡಿದಿರುವರೆಂಬಲೂ ವಾರ್ತೆಯನ್ನು ಕೇಳಿ ಮುಸಲೋನಿಗೆ ಹೆದರಿಕೆ ಹುಟ್ಟಿದೆ. ಆತನು ಈಗ ಸ್ಪೈನಿನಲ್ಲಿರುವ ಇಟಲಿಯವರನ್ನು ಹಿಂದಕ್ಕೆ ಕರೆಸುವನಂತೆ.

ಇಟಲಿ—ಆಸ್ಟ್ರಿಯಾ ಸಂಬಂಧ:—ಈ ಕುರಿತು ಇಟಲಿಯ ವಿದೇಶಾಂಗ ಮಂತ್ರಿಗಳೊಳಗೂ ಹಂಗೇರಿಯ ಮುಖ್ಯ ಮಂತ್ರಿಗಳೊಳಗೂ ನಡೆದ ಮಾತುಕತೆಗಳಲ್ಲಿ, ಇತ್ತಂಡದವರೂ ಮಧ್ಯಯೂರೋಪಿನ ರಾಜಕೀಯ ಮತ್ತು ಆರ್ಥಿಕ ಸಂಪತ್ತಿನ ಪರಿಸ್ಥಿತಿಯನ್ನೂ ಪರ್ಯಾಲೋಚಿಸಿ ತಮ್ಮ ತಮ್ಮ ಮುಂಚಿನ ಧೋರಣೆಯನ್ನು ಬದಲಾಯಿಸಬಾರದೆಂತ ಒಪ್ಪಂದಮಾಡಿಕೊಂಡಿರುವರು.

ಚೀನಾ ಅಮೇರಿಕಾಗಳೊಳಗಿನ ಸಂಬಂಧವನ್ನು ಬೆಳಸಲು ಪ್ರಯತ್ನಗಳಾಗುತ್ತಿವೆ. ಈ ಸಾರಿ ಅಮೇರಿಕಕ್ಕೆ ಚೀನದ ಸರ್ವಾಧಿಕಾರಿಯಾದ ಚಾಂಗ್ ಕೈಶೇಕರ ಪತ್ನಿಯು ಹೋಗುವರು. ಇವರು ಓರ್ವ ಶಿಕ್ಷಿತ ಅಮೇರಿಕನ್ ಮಹಿಳೆ. ಇವರಿಗೆ ಅಮೇರಿಕದ ಪ್ರಖ್ಯಾತ ಸ್ತ್ರೀ ವಿಶ್ವವಿದ್ಯಾಲಯಗಳು ಗೌರವಿಸಿ, ಬಿರುದುಗಳನ್ನು ಕೊಡುವರಂತೆ. ಈ ವರ್ಷದ ಕೊನೆಯಲ್ಲಿ ಫಿಲಿಪ್ಪೈನ್ ದ್ವೀಪಗಳಿಗೆ ಸಂಚಾರಾರ್ಥವಾಗಿ ಬರಲಿರುವ ರೂಸವೆಲ್ಟ್ ದಂಪತಿಗಳು ಚೀನಾಕ್ಕೆ ಭೇಟಿಯನ್ನು ಕೊಡುವರೆಂದು ತಿಳಿದುಬರುತ್ತದೆ.

ವಿದೇಶಾಂಗ ಕಚೇರಿಯ ಅಂತಃಕೋಶ ಇವನ್ನರು ಕಿರಿಟ ಧಾರಣೆಯ ಉತ್ಸವಕ್ಕಾಗಿ ಲಂಡನ್ನಿಗೆ ಬಂದಿರುವ ಹೊರ ದೇಶದ ರಾಜನೀತಿ ಮುತ್ಸದಿಗಳೊಡನೆ ವ್ಯವಹಾರ ಸಂಪರ್ಕ ಬೆಳಸಿ ರಾಜಕೀಯ ಆರ್ಥಿಕ ಪ್ರಶ್ನೆಗಳನ್ನು ಪರಿಶೀಲಿಸುತ್ತಿರುವರು. ಇವರ ಮಾತುಕತೆಗಳು ಯಾವ ನಿರ್ಧಾರಕ್ಕೂ ಬರಲಿಲ್ಲ.

ಟ್ರಾಟ್‌ಸ್ಕಿಯವರು ಮಾಡಿದ ಚಟುವಟಿಕೆಗಳನ್ನು ಪ್ರತಿಭಟಿಸಲು ರಷ್ಯದ ಎಲ್ಲಾ ಹಳ್ಳಿಗಳಲ್ಲೂ ಮಿಲಿಟರಿ ಕೌನ್ಸಿಲುಗಳು ಸ್ಥಾಪಿತವಾಗಿವೆ.

ಹೊಂಕೊಂಗ್‌ನಲ್ಲಿ ಭಯಂಕರ ಸ್ಫೋಟನ:—ಬಿಸಾಕಿ ಮೋಸೆಸ್ ಕೈವಶಕ್ಕೆ ಸೇರಿದ ಒಂದು ಸಣ್ಣ ಜಹಜನ್ನು ನಿಲ್ಲಿಸುತ್ತಿದ್ದಾಗ ಒಂದು ಭಯಂಕರ ಆಸ್ಫೋಟನೆಯಾಗಿ ೫೦ ಜನರು ತಕ್ಷಣ ಮರಣಪಟ್ಟಿರುವರು. ಹಡಗು ಪೂರ್ಣವಾಗಿ ಚೂರು ಚೂರಾಯಿತು. ಶವಗಳು ದಿಕ್ಕು ದಿಕ್ಕುಗಳಿಗೆ ಎಸೆಯಲ್ಪಟ್ಟಿರುವವಂತೆ.

ಲಂಡನಿನ ಬಸ್ ಮುಷ್ಕರ:—ಇದು ಈಗಿನದಕ್ಕಿಂತಲೂ ಹೆಚ್ಚು ಅಭಿವೃದ್ಧಿ ಹೊಂದಿ ಗಲಾಟೆಯಾಗಬಹುದೆಂದು ಹೆದರಿಕೆ ಇದೆ. ಟ್ರಾಲಿ ಮತ್ತು ಟ್ರಾಂಬಸ್ ಕೆಲಸಗಾರರು ಕಳೆದ ಗುರುವಾರ ದಿನ ಸಭೆ ಸೇರಿ ಇದನ್ನು ನಿರ್ಧರಿಸಿರುವರು.

ಇಟಲಿ-ಜರ್ಮನ್ಗಳೊಳಗೆ ಕಳೆದ ತಿಂಗಳು ಗುಪ್ತವಾದ ಮಾತುಕತೆಗಳು ನಡೆಯುವುವು. ಅಂತರ್‌ರಾಷ್ಟ್ರೀಯ ವಿಚಾರಗಳಲ್ಲಿ ಮಾತುಕತೆಗಳ ವಿಚಾರ ನಡೆಸಲು ಯೋಗ್ಯರೆಂದು ಹಿಟ್ಲರನು ಗೋರಿಂಗರನ್ನು ಮುಸೋಲಿನಿಯೊಡನೆ ಮಾತುಕತೆ ನಡೆಸಲು ನೇಮಿಸಿರುವನಂತೆ. ಜರ್ಮನಿಯ ಸರಕಾರಿ ಪತ್ರಿಕೆಗಳ ಮೊಲ್ಬುಟಗಳಲ್ಲಿ ಮುಂಚಿನಂತೆ ಈಗ ಸ್ಪೈನಿನ ಸುದ್ದಿಗಳು ಬರುವುದನ್ನು ನಿಲ್ಲಿಸಿಬಿಟ್ಟಿರುತ್ತಾರೆ. ಜರ್ಮನಿಗೆ ಸ್ಪೈನಿನ ಕಲಹದಲ್ಲಿ ಹೆಚ್ಚಿನ ಅಭಿರುಚಿ ತೋರಿಬರುವುದಿಲ್ಲ. ಜನರಲ್ ಫ್ರಾಂಕೋವಿನ ವಿಚಾರ ಅಭಿಪ್ರಾಯಗಳನ್ನು ಪ್ರಕಟಗೊಳಿಸಬಾರದೆಂದು ಜರ್ಮನ್ ಪತ್ರಿಕೋದ್ಯೋಗಿಗಳಿಗೆ ಆಜ್ಞೆ ಹೋಗಿರುತ್ತದೆ. ಜರ್ಮನಿಯು ಸ್ಪೈನ ಪ್ರಕರಣದಿಂದ ಅದನ್ನು ದೂರವಿರಲು ಪ್ರಯತ್ನಮಾಡುತ್ತದೆ.

ಡಿವೆಲೆರಾರು:—ಒಂದು ಭಾಷಣದಲ್ಲಿ ಜನಾಂಗ ಸಭೆ ಅಥವಾ ಲೀಗ್ ಆಫ್ ನೇಷನ್ಸಿನ ಕುರಿತು ಮಾತಾಡಿದರು. ಜನಾಂಗ ಸಭೆಯ ಸ್ಥಾನವು ಸಂಶಯಾವಸ್ಥೆಯಲ್ಲಿದೆ ಎಂದೂ, ಅದರ ಶಕ್ತಿಯನ್ನು ಸಂಪೂರ್ಣವಾಗಿ ತಿಳಕೊಂಡಂತಾಗಿದೆ ಎಂದೂ, ಅದು ಈಗಿನ ಯುರೋಪಿನ ರಾಜಕೀಯಗಳೆದುರು ಒಂದು ಬಲ ಹೊಸ ಸಂಸ್ಥೆ ವೆಂಬಲೂ ವರ್ಣಿಸಿದರು. ಈ ಪರಿಸ್ಥಿತಿಯಲ್ಲಿ ಐರ್ಲೆಂಡು ತನ್ನ ಹಿತಕ್ಕಾಗಿ ಲೀಗಿನಿಂದ ಹೊರ ಬರುವುದು ಒಳಿತೆಂದು ಹೇಳಿದರು. ಮುಂದರಿಸುತ್ತಾ, ಡಿವೆಲೆರಾರು ಸದ್ಯಕ್ಕೆ ಲೀಗಿನ ಸ್ಥಿತಿಯು ಹೀಗಿದ್ದರೂ ಮುಂದೆ ಅದನ್ನು ಚೆನ್ನಾಗಿ ವ್ಯವಸ್ಥೆಗೊಳಿಸಿದ್ದಲ್ಲಿ, ಅದರಿಂದ ತುಂಬಾ ಅನುಕೂಲತೆಗಳಾಗಬಹುದೆಂದು ಅಭಿಪ್ರಾಯ ಪಟ್ಟರು.

ಲಂಡನಿನಲ್ಲಿ ಜಪಾನ್ ಯುವರಾಜರು: ಇವರು ಆರನೇ ಜೋರ್ಜರನ್ನು ಬಕ್ಕಿಂಗ್ಹಾಮ ಅರಮನೆಯಲ್ಲಿ ಭೇಟಿಮಾಡಿದರು. ಜಪಾನ್ ಚಕ್ರವರ್ತಿಗಳ ಪ್ರತಿನಿಧಿಯಾಗಿ ಬಂದ ಯುವರಾಜ ಚಿಚಿಬುರವರು ಆಂಗ್ಲ ರಾಜರಿಗೆ ಜಪಾನಿನ ದೊಡ್ಡ ಬಿರುದುಗಳನ್ನು ಅರ್ಪಿಸುವವರಾದರು. ಜಪಾನಿಗೂ ಬ್ರಿಟನ್ನಿಗೂ ಇದ್ದ ಒಳಸಂಬಂಧವನ್ನು ಇನ್ನೂ ಅಭಿವೃದ್ಧಿಗೊಳ್ಳಲೆಂದು ಹಾರೈಸಲಾಯಿತು.

ಎಡ್ವರ್ಡ್ ವಿಂಡ್ಸರರು ಕೋರ್ಟಿನಲ್ಲಿ

ಒಬ್ಬ ತರುಣ ಆಂಗ್ಲ ಯುವಕನು ಪೆರಿಸಿನ ಒಂದು ದೊಡ್ಡ ಹೋಟೆಲಿನಲ್ಲಿ ಇಳಿದನು. ಅಲ್ಲಿ ಅವನು ತನ್ನ ಪಾಸ್‌ಪೋರ್ಟು ತೋರಿಸಲಾಗಿ ಅದರಲ್ಲಿ ಎಡ್ವರ್ಡ್ ವಿಂಡ್ಸರ್ ಎಂದಿತ್ತು. ಹೋಟೆಲಿನವರಿಗೆ ಪರಮಾಶ್ಚರ್ಯವಾಗಿ ಸಂತೋಷ ಬಂತು. ಅವರು ಅತಿಥಿಯನ್ನು ಬಹು ಗೌರವದಿಂದ ಕಂಡರು; ಕಾರಣ ಅವರು ಆ ಆಂಗ್ಲ ಯುವಕನು ಮಾಜಿ ಅಷ್ಟಮ ಎಡ್ವರ್ಡರಿರಬೇಕೆಂದು ತಿಳಕೊಂಡರು. ಆ ಯುವಕನು ಕೂಡಾ ತುಂಬಾ ಶ್ರೀಮಂತನಿರುವುದರಿಂದ ಅವನು ಮಾಡುತ್ತಿರುವ ಆಹಾರ ಖರ್ಚು ಕೂಡಾ ರಾಜ ರೀತಿಗೆ ತಪ್ಪುವ್ಯದೇನೋ ಇದ್ದಂತೆ ಕಂಡು ಬರಲಿಲ್ಲ. ಕಡೆಗೆ ಮಾಜಿ ಅಷ್ಟಮ ಎಡ್ವರ್ಡರಾದ ಡ್ಯೂಕ್ ಆಫ್ ವಿಂಡ್ಸರರು ವಿಯನ್ನಾದಲ್ಲಿ ಇದ್ದಾರೆಂಬ ಸಂಗತಿಯು ಹೋಟೆಲಿನವರಿಗೆ ತಿಳಿಯಿತು. ಅವರು ಆ ಆಂಗ್ಲ ಯುವಕನ ಮೇಲೆ "ಮೋಸದ" ಮೊಕದ್ದಮೆ ಮಾಡಿದರು. ಪ್ಯಾರಿಸ್ ನ್ಯಾಯ ಸಭೆಯವರು "ಯುವಕನು, ತಾನೇ ಮಾಜಿ ಅಷ್ಟಮ ಎಡ್ವರ್ಡನೆಂದು ಹೋಟೆಲಿನವರಿಗೆ ಹೇಳಿರಲಿಲ್ಲವಾದುದರಿಂದ ಅವನಿಗೆ ತಪ್ಪಿರುವಲ್ಲವೆಂದು ಬಿಡುಗಡೆಯಾಯಿತು.

" ನೆಹರುಗಳ ಪ್ರವಾಸ.

ಆಲ್ವಾರ್ ಮಹಾರಾಜರ ಮರಣ

ಮದ್ರಾಸು ಸರಕಾರದ ಪ್ರಕಟನೆ:—ಕೋಟಾಪಟ್ಟಿನಲ್ಲಿ ಸ್ಥಾಪಿತವಾದ ಸೋಶಲಿಸ್ಟ ಪಂಗಡದವರ ರಾಜಕೀಯ ಮತ್ತು ಆರ್ಥಿಕ ಶಿಕ್ಷಣ ಶಾಲೆಯನ್ನು ಸರಕಾರವು ತಾರೀಖು ೧೪ರಲ್ಲಿ ಹೊರಡಿಸಿದ ಆರ್ಡರಿನಲ್ಲಿ ಅಕ್ರಮ ಸಂಸ್ಥೆಯಾಗಿ ಮಾಡಿತು. ಸರಕಾರದ ಹೇಳಿಕೆ ಪ್ರಕಾರ ಈ ಶಾಲೆಯನ್ನು ಸ್ಥಾಪಿಸಿದ ಉದ್ದೇಶವು ಕ್ರಾಂತಿಕಾರಿ ಚಳವಳಿಯಿರುವುದೆಂದು ಸಾರಲ್ಪಟ್ಟಿದೆ. ಆದರೆ ಈ ಶಾಲೆಯನ್ನು ಸ್ಥಾಪಿಸಿದ ಸೋಶಲಿಸ್ಟ ಮುಖಂಡರು ಸರಕಾರದ ಈ ಹೇಳಿಕೆಯನ್ನು ಖಂಡಿಸಿರುವರು, ತರುಣ ತರುಣಿಯರನ್ನು ಕ್ರಾಂತಿಕಾರ ತತ್ವಗಳಲ್ಲಿ ತರಬೇತು ಮಾಡುವುದು ಈ ರಾಜಕೀಯ ಶಾಲೆಯ ಉದ್ದೇಶವಿದೆಯೆಂದು ಸರಕಾರಕ್ಕೆ ತಿಳಿದಿದೆ ಎಂದು ಮದ್ರಾಸು ಸರಕಾರದ ಪ್ರಕಟನೆಯು ಹೇಳುತ್ತದೆ.

ಉಲ್ಲಂಘನೆ:—೩೦ ಮಂದಿಗಳು ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ, ಕೈದಿಗೆ ಒಳಪಟ್ಟರು. ಇವರಲ್ಲಿ ಅನೇಕ ಮಂದಿ ಮಹಿಳೆಯರೂ ಇದ್ದಾರೆ.

ವ್ಯವಸ್ಥಾಪಕರಾದ ಶಿವನೇಶ್ವರರಾಯರು ಒಂದು ಉದ್ದವಾದ ಹೇಳಿಕೆಯಲ್ಲಿ, ಸರಕಾರದ ವರ್ತನೆಯನ್ನು ಖಂಡಿಸಿದರು. ಆ ಶಾಲೆಯು ಯಾವುದೊಂದು ತರದ ಕ್ರಾಂತಿಕಾರಿ ಚಳವಳಿಯ ಉದ್ದೇಶದಿಂದ ಸ್ಥಾಪಿತವಾಗಿಲ್ಲವೆಂದೂ, ಪೋಲೀಸರನ್ನು ಶಾಲೆಯೊಳಗೆ ಬಿಡಲಿಲ್ಲದ ಮಾತ್ರಕ್ಕೆ ಸರಕಾರವು ದುರಾಲೋಚನೆಯನ್ನು ಮಾಡುವುದು ಖಂಡನಾರ್ಹವಾದ ವಿಷಯವೆಂದೂ ಹೇಳುತ್ತಾರೆ.

ದಬ್ಬಾಳಿಕೆ: ಸರಕಾರದ ಕಾನೂನನ್ನುಲ್ಲಂಘನೆ ಮಾಡಲು ಆ ಶಾಲೆಯ ವಿದ್ಯಾರ್ಥಿಗಳು ತಯಾರಿರುವರೆಂದು ತಿಳಿದ ಕೂಡಲೇ ಪೋಲೀಸ್ ಸಾರ್ಜಂಟರು ರಿಜರ್ವ್ ಪೋಲೀಸರ ಸಮೇತ ಬಂದು ಲೋರಿಯಲ್ಲಿ ಬಂದು, ಕೆಲವು ವಿದ್ಯಾರ್ಥಿಗಳನ್ನು ಲಾಠಿಗಳಿಂದ ಹೊಡೆದೋಡಿಸಿದರು. ಪೋಲೀಸರು ಪಶುಗಳಂತೆ ವರ್ತಿಸಿದರೆಂದು ಅಲ್ಲಿ ಹಾಜರಿದ್ದ ಕೆಲವರು ತಮ್ಮ ಸಾಕ್ಷಿಯಲ್ಲಿ ತಿಳಿಸಿರುವರೆಂದೂ ತಿಳಿದುಬರುತ್ತದೆ.

ಕೈದುಮಾಡಲ್ಪಟ್ಟವರು ಯಾವುದೊಂದು ತರದ ಬಲಾತ್ಕಾರವನ್ನೂ ತೋರಿಸದೆ ಶಾಂತರೀತಿಯಲ್ಲಿ ವರ್ತಿಸಿದರೆಂದೂ ತಿಳಿದುಬರುತ್ತದೆ. ಲಾಠಿ ಏಟುಗಳು ಬಿದ್ದವರಿಗೆ ವೈದ್ಯಕೀಯ ಸಹಾಯ ಕೊಡಲಾಗಿದೆ. ಅಂತೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಬರುವ ಮೊದಲೇ ಎಲ್ಲ ಪೋಲೀಸರ ಗಲಾಟೆಯು ಅವರು ಬಂದೊಡನೆ ಲಾಠಿಗಳೆಲ್ಲವೂ ಸೊಂಟದಲ್ಲಿ ಅಲಂಕರಿಸಲ್ಪಟ್ಟಿದ್ದವಂತೆ.

ಪಂಡಿತ್ ಜೆಯುವರ ಪ್ರವಾಸ:—ಕುಮಾರಿ ಇಂದಿರಾ ನೆಹರುಗಳೊಡನೆ ಬರ್ಮಾ ಸಂಚಾರವನ್ನು ಮುಗಿಸಿ ರಾಷ್ಟ್ರಪತಿಗಳು ಪೆನಾಂಗಿಗೆ ತೆರಳಿರುವರು. ಬರ್ಮದಲ್ಲಿ ಪಂಡಿತಜಿಯವರಿಗೆ ೫೦ ಸಾವಿರಗಳ ಧನಸಂಗ್ರಹವನ್ನು ಅರ್ಪಿಸಲಾಯಿತು. ಇದರಲ್ಲಿ ಹೆಚ್ಚಿನ ಅಂಶವು ಕಮಲಾ ನೆಹರು ಧರ್ಮಾಸ್ಪತ್ರೆಗೆ ಕರ್ಚಾಗುವುದೆಂದೂ, ಸ್ವಲ್ಪ ಅಂಶವು ಕೊಂಗ್ರೆಸ್ ಸಂಸ್ಥೆಗೆ ಉಳಿಯುವುದೆಂದೂ ತಿಳಿಯಲಾಗಿದೆ.

ಬರ್ಮೀಯರಿಗೆ ಸಂದೇಶ:—ಬರ್ಮಾವನ್ನು ಬಿಡುವಾಗ ರಾಷ್ಟ್ರಪತಿಗಳು ಒಂದು ಸಂದೇಶವನ್ನು ಕೊಡುತ್ತಾ "ಬರ್ಮಾದಲ್ಲಿದ್ದ ಹಿಂದೀಯರಲ್ಲಿ ಕೆಲವರು ಅಭಿವೃದ್ಧಿ ಹೊಂದಿರುತ್ತಾರೆ. ಆದರೆ ಹೆಚ್ಚಿನವರು ಬಡವರಾಗಿಯೇ ಇರುವರು. ಬರ್ಮಾದಲ್ಲಿರುವ ಭಾರತೀಯರು ಬರ್ಮದ ಅಭಿವೃದ್ಧಿಗಾಗಿ ಪ್ರಯತ್ನಪಡಬೇಕು. ಬರ್ಮಾದಲ್ಲಿಯಾಗಲೀ ಭಾರತದಲ್ಲಿಯಾಗಲೀ, ಬಡಜನರ ಸಮಸ್ಯೆಯು ಏಕಸಮಾನವಾಗಿರುವುದು" ಎಂದರು.

ಮುಂದರಿಯುತ್ತಾ, ಪಂಡಿತರು "ನೀವು ನನಗೆ ಅದ್ಭುತ ಸ್ವಾಗತವನ್ನು ಇತ್ತಿರುವಿರಿ. ನಾನು ಭಾರತದಿಂದ ಸೌಹಾರ್ದದ ಸುವಾರ್ತೆಯನ್ನು ಸಾರಲು ಬರ್ಮಾಕ್ಕೆ ಬಂದ ಓರ್ವ ದೂತನಿರುವೆನು" ಎಂದರು.

ಆಳ್ವಾರ್ ಮಹಾರಾಜರ ನಿಧನ:—ಅಳ್ವಾರಿನ ಮಹಾರಾಜರು ಪೆರಿಸಿನಲ್ಲಿ ತಾವು ವಾಸಿಸುತ್ತಿದ್ದ ಹೋಟೇಲಿನ ಭವನದಲ್ಲಿ ನಿಧನಹೊಂದಿದರು. ಒಂದು ಆಟವಾಡುತ್ತಿದ್ದಾಗ ಬಿದ್ದು ಅವರಿಗೆ ಎಲುಬಿಗೆ ಏಟಾಗಿದ್ದಿತಂತೆ. ಅವರ ಮರಣದಿಂದ, ಅವರ ಸಂಸ್ಥಾನದ ಆಡಳಿತದಲ್ಲಿ ಯಾವುದೊಂದು ತರದ ವ್ಯತ್ಯಾಸಗಳೂ ಆಗುವುದಿಲ್ಲವೆಂದು ಪ್ರಕಟವಾಗಿದೆ. ಮಹಾರಾಜರು ಕೆಲವು ವರ್ಷಗಳ ಹಿಂದೆ ಸಂಸ್ಥಾನದಿಂದ ಓಡಿಸಲ್ಪಟ್ಟರು. ಕಾರಣ ಆಡಳಿತದಲ್ಲಿ ಅವ್ಯವಸ್ಥೆ ಕಂಡುಬಂದಿತು. ಈಗ ಮಹಾರಾಜರಿಗೆ ಮಕ್ಕಳು ಇಲ್ಲ. ಹತ್ತಿರದ ಅಥವಾ ದೂರದ ಹಕ್ಕುದಾರರಿಗಳಿಲ್ಲವಾದುದರಿಂದ ಕೆಲವು ಸಮಯದ ವರೆಗೆ ಈಗಿನ ಮುಖ್ಯ ಮಂತ್ರಿಗಳೇ ಆಡಳಿತವನ್ನು ನೋಡುವರೆಂದು ತಿಳಿದುಬರುತ್ತದೆ. ಗತಿಸಿದ ಮಹಾರಾಜರು ದೊಡ್ಡ ಸಂಸ್ಕೃತ ಪಂಡಿತರು.

ಸೋನ್ಸಮಾರುತಿ ದೇವಾಲಯದ ಸತ್ಯಾಗ್ರಹದಲ್ಲಿ ಭಾಗವಹಿಸಿ ದಸ್ತಗಿರಿಯಾಗಿದ್ದ ಶ್ರೀ ಎಸ್ ಡಿ. ಕೇಳ್ಕರ್, ಶ್ರೀ ಎಲ್ ಬಿ. ಬೋಪಟ್ಕರ್ ಮೊದಲಾದ ೬೮ ಜನ ಸತ್ಯಾಗ್ರಹಿಗಳಿಗೆ ತಲಾ ರೂ. ೨೫ರಂತೆ ಜುಲ್ಮಾನೆ ವಿಧಿಸಲಾಯಿತು. ಜುಲ್ಮಾನೆಯನ್ನು ಕೊಡಲು ತಪ್ಪಿದರೆ ಒಂದು ವಾರದ ಕಠಿಣ ಸಜೆ ಕೂಡಾ ವಿಧಿಸಲಾಗಿತ್ತು.

ಡೆಮೊಕ್ರಾಟಿಕ್ ಸ್ವರಾಜ್ಯ ಪಾರ್ಟಿ: ಇದರ ಅಧ್ಯಕ್ಷರಾದ ಶ್ರೀ ಎಲ್ ಬಿ ಬೋಪಟ್‌ಕರ್ ರವರು ಮತ್ತು ೧೬ ಜನರು ಜುಲ್ಮಾನೆಯನ್ನು ಕೊಡುವುದಿಲ್ಲವೆಂದು ಶಿಕ್ಷೆಯನ್ನನುಭವಿಸಿದರು.

ಶ್ರೀ ಕೇಳ್ಕರ್ ಮತ್ತು ಇತರ ಕೆಲವರು ಜುಲ್ಮಾನೆಯನ್ನು ಕೊಟ್ಟಿರುವರು.



ಚರ್ಮವ್ಯಾಧಿಗಳಿಗೆ
ಪ್ರಪಂಚದಲ್ಲಿ ಶ್ರೇಷ್ಠವಾದ
ಗುಣಕಾರಿ.
ಎಲ್ಲಾ ತರದ ಘಾಯ
ಹುಳಕಡ್ಡಿ ಹುಣ್ಣುಗಳನ್ನು
ಗುಣಪಡಿಸುತ್ತದೆ.

ಚರ್ಮ ವ್ಯಾಧಿಗಳಿಗೂ ಮತ್ತು ಘಾಯಗಳಿಗೂ ಸಾಂಬಕ್ಕು ಪ್ರಪಂಚದಲ್ಲಿ ಸರ್ವ ಶ್ರೇಷ್ಠವಾದ ಗುಣಕಾರಿಯಾಗಿರುತ್ತದೆ. ಈ ಅದ್ಭುತ ಔಷಧಿಯನ್ನು ಘಾಯ, ಕಡಿತ, ಸುಟ್ಟಘಾಯ್ಯ, ಉರಿಯುವಿಕೆ ಆದ ಜಾಗಗಳಲ್ಲಿ ತಿಕ್ಕಿಬಿಟ್ಟರೆ ಅದು ಇಂದ್ರಜಾಲದಂತೆ ಗುಣಪಡಿಸುತ್ತದೆ. ಸಾಂಬಕ್ಕು ನೋವನ್ನು ಹೋಗಿಸಿ, ಊದುವಿಕೆಯನ್ನು ಕಮ್ಮಿ ಮಾಡಿ, ಚರ್ಮದ ಅಪರ್ಮಿತೆಯನ್ನು ಕಲೆಗಳಿಲ್ಲದಂತೆ ಹೋಗಲಾಡಿಸುತ್ತದೆ. ಅಲ್ಲದೆ ಮಡಿವೆ, ಕಜ್ಜಿ, ಹುಳಮೇಯುವುದು, ಹುಣ್ಣು, ಕಾಲು ಬೇನೆ, ಕಡಿತ, ಬೊಕೆ ಇವುಗಳನ್ನು ಗುಣಪಡಿಸುತ್ತದೆ.

ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ಸಾಂಬಕ್ಕು ರೂ. 1 ಮತ್ತು ಆ. 2-4-0ಕ್ಕೆ ಸಿಗುತ್ತದೆ.

ಸಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ.

ಏಜಂಟರು:—ಮೆಸರ್ಸ್ ದಾಧಾ ಎಂಡ್ ಕೊ., ಪಿ. ಬಿ. ಮದ್ರಾಸು.

ಸಾಂಬಕ್

Zam Buk

ಜನತಾ ಸಂಪರ್ಕ

[illegible] ಸ್ವಾತಂತ್ರ್ಯವನ್ನು ಪಡೆಯುವುದು ಕಾಂಗ್ರೆಸ್ಸಿನ ಮೂಲಗತವಾಗಿ ಪ್ರಕಟವಾದ ಉದ್ದೇಶವಾಗಿರುತ್ತದೆ. ಸರಕಾರಕ್ಕೂ ಕಾಂಗ್ರೆಸ್ಸಿನ ಈ ಉದ್ದೇಶವೂ, ಅದಕ್ಕನುಗುಣವಾಗಿ ಅದು ಅನುಸರಿಸುವ ಧೋರಣೆಯು ಚೆನ್ನಾಗಿ ತಿಳಿದ ವಿಷಯವೇ ಆಗಿರುತ್ತದೆ. ಪೂರ್ಣ ಸ್ವಾತಂತ್ರ್ಯದ ಗುರಿಯನ್ನಿಟ್ಟುಕೊಂಡು ಕಾಂಗ್ರೆಸು ಬಹಳವಾಗಿ ಶ್ರಮಪಟ್ಟು ಅದಕ್ಕಾಗಿ ಮಾಡಿದ ತ್ಯಾಗ, ಬಲಿದಾನಗಳು ಪ್ರಪಂಚಕ್ಕೆ ವಿದಿತವಾದ ವಿಚಾರಗಳೇ ಆಗಿವೆ. ಈ ಧ್ಯೇಯಕ್ಕಾಗಿ ಕಾಂಗ್ರೆಸು ಜನತೆಯ ಬೆಂಬಲವನ್ನು ಪಡೆಯಲು ಪ್ರಯತ್ನಪಟ್ಟು ಆ ಪ್ರಯತ್ನದಲ್ಲಿ ಬಹಳವಾಗಿ ಯಶಸ್ಸನ್ನು ಪಡೆದಿರುತ್ತವೆ. ಎಂಬ ಸಂಗತಿಯೂ ಕಳೆದ ಚುನಾವಣೆಗಳಿಂದ ಸ್ಪಷ್ಟವಾಯಿತು. ಸ್ಥಾಪಿತವಾಗಿರುವ ಆಡಳಿತದ ಧೋರಣೆಯು ಸಾಧಕವಾಗಿರದೆ ಬಾಧಕವಾಗಿರುತ್ತದೆ ಎಂಬ ಈ ವಿಷಯವನ್ನು ಜನತೆಯು ತಾನಾಗಿ ತಿಳಿಕೊಳ್ಳುವಂತೆ ಮಾಡಿ ತೋರಿಸಿ, ಜನತೆಯಲ್ಲಿ ಸ್ಥಾಪಿತವಾದ ಈ ಆಡಳಿತ ಕ್ರಮದ ಧೋರಣೆಯ ಮೇಲೆ ಅಹಿತ ಹುಟ್ಟುವಂತೆ ಮಾಡುವುದೂ ಕಾಂಗ್ರೆಸ್ಸಿನ ಅನೇಕ ಧೋರಣೆಗಳಲ್ಲಿ ಒಂದಾಗಿದೆ. ಅಂದರೆ ಸಾಧಕವಾದ ಕ್ರಮವನ್ನು ಬಾಧಕವೆಂದು ಉದ್ದೇಶಪೂರ್ವಕವಾಗಿ ತೋರಿಸಿಕೊಡುವುದು ಕಾಂಗ್ರೆಸ್ಸಿನ ಧ್ಯೇಯವಿಲ್ಲ. ಈ ವಿಚಾರದಲ್ಲಿ ಸರಕಾರಕ್ಕೂ ಕಾಂಗ್ರೆಸ್ಸಿಗೂ ಬರುವ ಭೇದಾಭಿಪ್ರಾಯವು ಇರುತ್ತದೆ. ತನ್ನ ಧೋರಣೆಯು ನ್ಯಾಯಸಮ್ಮತವಾದುದೆಂದೂ, ಕಾಂಗ್ರೆಸ್ಸು ನ್ಯಾಯದಿಂದ ಸ್ಥಾಪಿಸಲ್ಪಟ್ಟ ಸರಕಾರವನ್ನು ಕೆಡವಲು ಕ್ರಾಂತಿಕಾರೀ ಚಳವಳವನ್ನು ಮಾಡುತ್ತದೆ ಎಂತಲೂ ಸರಕಾರವು ತರ್ಕಿಸುತ್ತದೆ. ದೇಶದ ಮಿಲಿಯಾವಧಿ ಬಡಜನರಿಗೆ ಉದ್ಧಾರ ಮಾಡುವಂತಹುದಲ್ಲದ ಧೋರಣೆಯನ್ನು ಸರಕಾರವು ಅನುಸರಿಸುವುದು ತಪ್ಪೆಂದೂ ಅದರಿಂದ ಜನತೆಯು ಸುಲಿಗೆಯಾಗಿ ದೇಶವು ಇನ್ನೂ ಬಡತನಕ್ಕೆ ಇಳಿಯುವುದೆಂದೂ ಕಾಂಗ್ರೆಸ್ಸಿನ ವಾದವಾಗಿರುತ್ತದೆ.

ದೇಶದ ದಾರಿದ್ರ್ಯ ಸುಲಿಗೆಗಳ ಕಡೆಗೆ ದೇಶದ ಜನತೆಯನ್ನು ಎಚ್ಚರಗೊಳಿಸುವುದು ಕಾಂಗ್ರೆಸ್ ತನ್ನ ಪ್ರಾಮುಖ್ಯ ಕರ್ತವ್ಯವೆಂದಿಟ್ಟುಕೊಂಡಿದೆ. ಈ ಕರ್ತವ್ಯ ಸಾಧನೆಗಾಗಿ ಅನೇಕ ನೇತಾ ಕಾಂಗ್ರೆಸ್ ಮುಖಂಡರು ದೇಶದ ಮೂಲೆ ಮೂಲೆಗಳನ್ನು ಸಂಚರಿಸಿ, ಭಾಷಣಗಳ ಮೂಲಕ ಜನತೆಯನ್ನು ಎಚ್ಚರಗೊಳಿಸುತ್ತಿರುವುದು. ದೇಶದ ಮತ್ತು ಜನತೆಯ ಹಿತಕ್ಕಾಗಿ ಸಾಧಿಸುವ ಕಾಂಗ್ರೆಸ್ಸಿಗೆ ಜನತಾಬೆಂಬಲವು ದೊರೆತುದು ಸ್ವಾಭಾವಿಕವಾದ ವಿಷಯವು. ತಮಗೆ ಹಿತವಾಗುವ ಕಾರ್ಯಕ್ಕೆ ಜನತೆಯು ಬೆಂಬಲ ಕೊಡದಿರುವುದು ಎಂತು? ಅಂದ ಮೇಲೆ ಆಡಳಿತ ಸರಕಾರದ ವಿಷಯವೇನು? ಸರಕಾರವಾದರೋ ಜನತೆಯ ಹಿತದೃಷ್ಟಿಯಿಂದ ಕಾಂಗ್ರೆಸ್ಸಿನ ಕೇಳಿಕೆಗಳನ್ನು ತಿರಸ್ಕರಿಸುವುದಾಗುತ್ತದೆಯೇ? ಸಾರ್ವಭೌಮರುಗಳಿಂದ ದೊಡ್ಡ ದೊಡ್ಡ ರಾಜಕೀಯ ಮುತ್ಸದ್ದಿಗಳು ತಮ್ಮ ದಿವ್ಯ ಸಂದೇಶಗಳ ಮೂಲಕವೂ, ಭಾಷಣಗಳ ಮೂಲಕವೂ ಭಾರತದ ಹಿತವನ್ನು ಬಯಸುತ್ತಿರುವಾಗ, ಭಾರತದ ಹಿತಕ್ಕಾಗಿ ಹೋರಾಡುವ ಕಾಂಗ್ರೆಸ್ಸಿನೊಡನೆ ಸಹಕರಿಸದೆ ಇರುವುದು ಜಾಣತನವೆನಿಸಲಾರದು. ಸರಕಾರವು ಕಾಂಗ್ರೆಸ್ಸಿನೊಡನೆ ಅಥವಾ ಜನತೆಯ ಬೆಂಬಲವುಳ್ಳ ಇನ್ಯಾವ ಸಂಸ್ಥೆಯೊಡನೆ ಸಹಕರಿಸದೆ ಇದ್ದಲ್ಲಿ, ಆ ಸಂಸ್ಥೆಯ ಧ್ಯೇಯ ಉದ್ದೇಶಗಳು ಸರಿಯೋ ತಪ್ಪೋ ಎಂಬ ವಿಷಯವನ್ನು ಜನತೆಯಲ್ಲಿಯೇ ಕೇಳುವುದು ರಚನಾತ್ಮಕ ರೀತಿಗೆ ತಕ್ಕುದಾದ ಧೋರಣೆ. ಇದಕ್ಕಾಗಿಯೇ ಚುನಾವಣೆಗಳನ್ನು ಮಾಡುವುದು. ದೇಶ ಹಿತದ ಧ್ಯೇಯಗಳನ್ನು ಕಟ್ಟಿಕೊಂಡು ಧುರೀಣರಾದರು ಕೆಲವೊಂದು ಸಂಸ್ಥೆಗಳಿಂದಾಗಲೀ ಪಂಗಡಗಳಿಂದಾಗಲೀ ಜನತೆಯ ಮುಂದೆ ನಿಲ್ಲಿಸಲ್ಪಡುವರು. ಇವರುಗಳು ತಾವು ಮಾಡಲಿರುವ ಸೇವಾಕಾರ್ಯಗಳನ್ನು ಜನತೆಯ ಮುಂದಿಟ್ಟು ಬೆಂಬಲತೆಯ ಹಕ್ಕನ್ನು ಕೇಳುವರು. ಜನತೆಗೆ ಅವರ ತತ್ವಗಳು ಹಿತವಾದುದೆಂದು ಕಂಡು ಬಂದಲ್ಲಿ ಅವರು ಬಹುಮತದಿಂದ ಚುನಾಯಿತರಾಗುವರು. ಆ ಮೇಲೆ ಸರಕಾರದ ಶಾಸನ ಸಭೆಗಳಲ್ಲಿ ಈ ಜನಚುನಾಯಿತರು ತಮ್ಮ ಕಾರ್ಯಸಾಧನೆಯನ್ನು ಮಾಡುವರು.

ಈಗ ಬಹಳಮಟ್ಟಿಗೆ ಕಾಂಗ್ರೆಸು ತನ್ನ ವರ್ಚಸ್ಸನ್ನು ಜನತೆಯಲ್ಲುಂಟುಮಾಡಿರುತ್ತದೆ. ಜನತೆಗೆ ಕಾಂಗ್ರೆಸ್ಸ್ ಸಂಸ್ಥೆಯ ಮೇಲೆ ತುಂಬ ಭರವಸೆಯಿದೆ. ಕಾಂಗ್ರೆಸ್ಸಿನ ಈಗಿನ ಉದ್ದಿಷ್ಟವು ಜನತೆಯನ್ನು ಸುವ್ಯವಸ್ಥಿತ ಶಿಸ್ತಿನಿಂದ ಸುಸಜ್ಜಿತಗೊಳಿಸಿ ಮುಂದೆ ಬರಬಹುದಾದ ಯಾವ ತೊಡಕುಗಳನ್ನಾದರೂ ಅದು ನಡೆಯುವಂತಾಗುವಂತೆ ಮಾಡುವುದರಲ್ಲಿದೆ. ಇದಕ್ಕಾಗಿ ಕಾಂಗ್ರೆಸು ಇನ್ನೂ ಹೆಚ್ಚಿನ ಜನತಾಸಂಪರ್ಕವನ್ನು ಪಡೆಯಲಿಳಸುತ್ತದೆ. ಈ ಸಂಪರ್ಕವನ್ನು ಸರಿಯಾದ ರೀತಿಯಲ್ಲಿ ಮಾಡಿಕೊಳ್ಳುವುದರಲ್ಲಿ ಕಾಂಗ್ರೆಸ್ ಧುರೀಣರು ಶ್ರಮಗೊಳ್ಳುತ್ತಿದ್ದಾರೆ. ಎರಡು ವರ್ಷಗಳ ಕೆಳಗೆ ಲಕ್ನೋ ಕಾಂಗ್ರೆಸ್ ಕಮಿಟಿಯು ಇಂತಹ ಜನತಾ ಸಂಪರ್ಕ ಸಮಿತಿಯೊಂದನ್ನು ರಚಿಸಿತು. ಆದರೆ ಈ ತತ್ವವನು ನಿರ್ವಹಿಸುವುದರಲ್ಲಿ ಸಮಿತಿಯ ಸದಸ್ಯರೊಳಗೆ ಭೇದಾಭಿಪ್ರಾಯವು ಬಂದು ಅದರ ಕಾರ್ಯವು ಸಾಗದಾಯಿತು. ಅಖಿಲ ಭಾ। ಕಾಂ। ಕಮಿಟಿಯು ತಯಾರಿಸಿದ ವರದಿ ಪ್ರಕಾರ, ಜನತಾ ಸಂಪರ್ಕವನ್ನು ಮಾಡಿ, ಪ್ರಭಾವಶಾಲಿ ಸಂಸ್ಥೆಯೊಂದನ್ನು ಸ್ಥಾಪಿಸಲು ಅಖಂಡವಾದ ರಚನಾತ್ಮಕ ಆಡಳಿತದ ಅವಶ್ಯಕತೆಯು ತೋರಿಬಂತು. ಕಾಂಗ್ರೆಸ್ ಸಂಸ್ಥೆಯ ರಚನಾತ್ಮಕ ಕಾರ್ಯಕ್ರಮವು ರೂಪದಲ್ಲಿ ಕಾಣುವುದಕ್ಕಿಂತಲೂ ಕ್ರಿಯೆಯಲ್ಲಿ ಕಷ್ಟವೆಂದು ಅನುಭವದಿಂದ ತಿಳಿಯಿತು.

ಕಾಂಗ್ರೆಸ್ ವ್ಯವಸ್ಥಾಪನೆಯು ತೃಪ್ತಿಕರವಾಗಿದ್ದರೂ, ಇನ್ನೂ ಕೊಂಚ ಬಲಹೀನ ಸ್ವಭಾವವು ಅದರಲ್ಲಿ ಕಂಡುಬರುವುದರಿಂದ ಈಗಿನ ರಾಜಕೀಯ ಉತ್ಕಟಾವಸ್ಥೆಯನ್ನು ಶಮನಗೊಳಿಸುವುದಕ್ಕೆ ಅಗತ್ಯವಿರುವ 'ಕ್ರಾಂತಿ'ಕಾರ ಘಟನೆಯನ್ನುಂಟುಮಾಡುವ ಧೈರ್ಯದ ಕಾರ್ಯಕ್ರಮವನ್ನನುಸರಿಸುವುದಕ್ಕೆ, ಅದಕ್ಕೆ ಈಗ ಸದ್ಯಕ್ಕೆ ಸಾಧ್ಯವಾಗುವಂತಿಲ್ಲ. (ಇಲ್ಲಿ ಕ್ರಾಂತಿಕಾರಿ ಎಂದರೆ,—ಹಿಂಸಾತ್ಮಕ ಅಥವಾ ಇನ್ನಾವ ತರದ ಶಾಂತಿಭಂಗದ ಚಳವಳವೆಂದರ್ಥವಲ್ಲ.)

ಮತದಾನದ ಹಕ್ಕು ಕೊಡಲ್ಪಟ್ಟ ಮಿಲಿಯಾವಧಿಗಳು ಕಾಂಗ್ರೆಸ್ಸಿನ ಸಭೆಗಳನ್ನು ಸೇರುವರು, ಭಾಷಣಗಳನ್ನು ಕೇಳುವರು. ಆದರೆ ಇವುಗಳಿಂದ ವಿಷಯ, ಪರಿಸ್ಥಿತಿಗಳನ್ನು ತಿಳಿಕೊಳ್ಳಬಹುದೇ ವಿನಹ ಮತ್ತಾವ ಉಪಯುಕ್ತ ಕಾರ್ಯ ಸೇವೆಯೂ ಅದರಿಂದ ಆಗದು. ಜನತೆಯೊಳಗೆ ಶಿಸ್ತಿನ ಪ್ರಭಾವಶಾಲಿ ಲಕ್ಷಣಗಳು ಇನ್ನೂ ಕಾಣಬರುವುದಿಲ್ಲ. ಜನತೆಯು ಇನ್ನು ತರಬೇತು ಹೊಂದಿದ ಒಂದು ಸೈನ್ಯ ದಳದಂತಾಗಲಿಲ್ಲ—ಇಲ್ಲವೇ ಆ ತರದ ಮನೋಭಾವವುಳ್ಳದಾಗಿಲ್ಲ. ಜನತೆಯನ್ನು ಈ ಶಿಸ್ತಿಗೆ ತರಬೇತುಗೊಳಿಸುವ ಕಾರ್ಯವು ಕಾಂಗ್ರೆಸ್ಸಿಗೆ ಈಗ ಸದ್ಯಕ್ಕೆ ಅಸಾಧ್ಯವೆಂದು ಕಂಡು ಬಂದ ಮೇಲೆ ಅದು ಶಾಸನ ಸಭೆಗಳಲ್ಲಿ ಸ್ಥಾನಗಳನ್ನು ಗೆದ್ದು, ಅಧಿಕಾರವನ್ನು ಸ್ವೀಕರಿಸಿ, ತನ್ಮೂಲಕ ಜನತಾ ಮನೋಭಾವವನ್ನು ಮುಂದಿನ ಸಮರಕ್ಕೆ ಪಕ್ವಗೊಳಿಸುವ ಕಾರ್ಯಕ್ರಮವನ್ನು ಕೈಗೊಂಡಿತು. ಆದರೆ ಈ ರಚನಾತ್ಮಕ ಆಡಳಿತದೊಡನೆ ಸಹಕರಿಸಿ, ಪೂರ್ಣ ಸ್ವಾತಂತ್ರ್ಯದ ಗುರಿಯನ್ನು ತಲುಪಲು ಅಸಾಧ್ಯವೆಂದು ಕಾಂಗ್ರೆಸ್ಸಿನೊಳಗಿನ ಉಗ್ರಗಾಮಿಗಳು ಅಭಿಪ್ರಾಯಪಡುತ್ತಾರೆ.

ಈ ಉಗ್ರಗಾಮಿಗಳು ಅಥವಾ ಕ್ರಾಂತಿಕಾರ ಮನೋಭಾವದವರೂ ಕಾಂಗ್ರೆಸ್ಸಿನಲ್ಲಿ ಹೆಚ್ಚು ಮಂದಿ ಇಲ್ಲವಾದರೂ ಕೆಲವರು ಇರುವರು. ಇಲ್ಲಿಯೂ ಕ್ರಾಂತಿಕಾರರೆಂದರೆ ವಿಪರೀತಾರ್ಥವನ್ನು ಮಾಡಿಕೊಳ್ಳಬಾರದು. ಅವರ ಮತ ಪ್ರಕಾರ ಕ್ರಾಂತಿ ಎಂದರೆ, ಸ್ಥಾಪನೆಯಾದ ಒಂದು ರಚನಾತ್ಮಕ ಆಡಳಿತದ ಕ್ರಮವು ತಪ್ಪೆಂದು ಕಂಡು ಬಂದಲ್ಲಿ ಅದನ್ನು ಕ್ಷಣಮಾತ್ರದಲ್ಲಿ ಬೇರ್ಪಡಿಸುವುದು. ಜನತೆಯ ಶಕ್ತಿಯ ಅವಶ್ಯಕತೆಯೂ ಇಲ್ಲಿ ಬೇಕೇ ಬೇಕು. ಯಾವುದೇ ತರದ ದಬ್ಬಾಳಿಕೆಯಿಂದಲೂ ಜನತೆಯ ಸಂಘ ಶಕ್ತಿಯನ್ನು ಮುರಿಯಲಾಗುವುದಿಲ್ಲವೆಂದು, ಜನತೆಯು ಅಸಮಾಧಾನಪಟ್ಟ ಸರಕಾರಕ್ಕೆ ತಿಳಿಯಿತೊ ಅಂದೇ ಆ ಸರಕಾರವು ಮೃದುವಾಗಲೇಬೇಕು. ಇದೇ ಕ್ರಾಂತಿಕಾರರ ತತ್ವವೆನ್ನುತ್ತಾರೆ. ಈ ತತ್ವವು ನಮ್ಮ ದೇಶದ ರಾಜಕೀಯದಲ್ಲಿ ಮಾತ್ರವಲ್ಲ ಪ್ರಪಂಚದ ಯಾವ ದೇಶದ ರಾಜಕೀಯದಲ್ಲೂ ಪರಿಣಾಮಕಾರಿಯಾಗುತ್ತದೆ. ಕಾಂಗ್ರೆಸ್ಸು ಇನ್ನೂ ಜನತಾ ಸಂಪರ್ಕದ ಸುಲಭೋಪಾಯಗಳನ್ನು ಕಂಡುಕೊಂಡಿಲ್ಲ. ರಾಷ್ಟ್ರಪತಿಗಳು ಜನತಾ ಸಂಪರ್ಕದ ಅವಶ್ಯಕತೆಯನ್ನು ಒತ್ತಿ ಹೇಳುವುದೇ ತಮ್ಮ ಒಂದು ಹಾಡನ್ನಾಗಿ ಕಟ್ಟಿಕೊಂಡಿರುತ್ತಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಕಡೆಯಿಂದ ಹೆಚ್ಚಿನ ಹುರುಪು ಕಂಡುಬರುವುದಿಲ್ಲ. ಅಂದರೆ ಪಂ. ನೆಹರುಗಳು ಒತ್ತಿ ಹೇಳುವ ಆ ಮಾತುಗಳ ಭರದಿಂದ ಕೆಲಸವು ಈಗ ನಡೆಯುವುದಿಲ್ಲ.

ಮಹಾತ್ಮಾ ಗಾಂಧಿಯವರು ತಮ್ಮ ಗ್ರಾಮ ಪುನರುದ್ಧಾರದ ಕಾರ್ಯಕ್ರಮಗಳ ಮೂಲಕ ತಮ್ಮದೇ ಒಂದು ತರದ ಜನತಾ ಸಂಪರ್ಕದ ಸಾಧನೆಯಲ್ಲಿದ್ದಾರೆ. ಆದರೆ ಅವರ ದಾರಿಯು ಶಾಂತಿಮಯದಿದ್ದು ಬಹು ಮೆಲ್ಲಗೆ ಸಾಗುವಂತಹುದಿದೆ. ಉಗ್ರಗಾಮಿ ಕ್ರಾಂತಿಕಾರರಿಗೆ ಈ ತೆರನಾದ ದಾರಿಯು ಒಪ್ಪದು. ಅವರಿಗೆ ಬಿರುಸಾದ ರೀತಿಯು ಬೇಕು. ದಬ್ಬಾಳಿಕೆಗೆ ಸುಲಭೋಪಾಯವೆಂದರೆ ಅಹಿಂಸೆ. ಸುಲಿಗೆ, ಬಡತನಕ್ಕೆ ಸುಲಭೋಪಾಯವೆಂದರೆ ಗ್ರಾಮ ಕೈಗಾರಿಕೆ, ಖಾದಿ ಪ್ರಚಾರ. ಇವುಗಳನ್ನು ಸರಿಯಾಗಿ ಬೆಳಸಿದಲ್ಲಿ ಪ್ರತಿಕೂಲ ಶಕ್ತಿಗಳು ತಾನಾಗಿ ಕುಂದುತ್ತವೆ. ಇದೂ ಒಂದು ತರದ ತತ್ವವೇ ಸರಿ.

ಆದರೆ ಗಾಂಧಿಯವರ ತತ್ವಗಳಲ್ಲಿ ಒಂದು ವಿಶೇಷವೇನೆಂದರೆ, ಅವರ ತತ್ವಗಳು ಪ್ರಚಾರದಲ್ಲಿರುವ ವರೆಗೆ ಅವುಗಳು ಯಾವುದೇ ಒಂದು ತೆರದ ಕ್ರಾಂತಿಕಾರಿ ತತ್ವಗಳಿಗೆ ಎಡೆ ಕೊಡುವಂತಹವುಗಳೇ ಆಗಿವೆ. ಅಂತೂ ದೇಶ ಜಾಗ್ರತಿಯ ಜ್ಯೋತಿಯು ಉರಿಯುತ್ತಲೇ ಇರುತ್ತದೆ—ಆದರೆ ಶಾಂತವಾಗಿ, ಅಂದರೆ ಅದು ಸಂದರ್ಭಾನುಸಾರ ಅದೇ ಜ್ಯೋತಿಯು ದಗ ದಗಿಸುವ ಜ್ವಾಲೆಯನ್ನುಂಟುಮಾಡಬಾರದೇಕೆ? ಅಂದರೆ ಗಾಂಧಿಯವರ ಅಭಿಪ್ರಾಯದಲ್ಲಿ ಜ್ಯೋತಿಯನ್ನು ನಂದಿ ಹೋಗಲು ಬಿಡಬಾರದು ಅಷ್ಟೇ. ಕಾಂಗ್ರೆಸ್ಸಿನ ಈಗಿನ ಉದ್ದೇಶವು ತಾಜಾ ರಾಜಕೀಯ ವ್ಯವಸ್ಥೆಯದೇ ಆಗಿರಬೇಕೆಂದೂ, ಸ್ಥಾಪಿತವಾದ ಆಡಳಿತದ ಮೇಲಿನ ಅಸಮಾಧಾನವು ಹರಿತವಾಗುವ ಮಾಡುವ ಸ್ವಭಾವವು ಆ ಉದ್ದೇಶದೊಳಗಿರಬೇಕೆಂದೂ ಉಗ್ರಗಾಮಿಗಳು ಇಚ್ಛಿಸುತ್ತಾರೆ. ಜನತೆಯಲ್ಲಿ ಅಸಮಾಧಾನ ದ್ವೇಷಗಳನ್ನುಂಟುಮಾಡುವುದು, ಜನತೆಯಲ್ಲಿ ರಾಜಕೀಯ ವಿಚಾರಗಳ ಜಾಗೃತಿಯನ್ನುಂಟು ಮಾಡುವುದರಲ್ಲಿದೆ, ರಾಜಕೀಯ ಜಾಗೃತಿಯಾಗಬೇಕಾದರೆ, ಜನತೆಯಲ್ಲಿ ಅಸಮಾಧಾನಕ್ಕೆ ಎಡೆಗೊಟ್ಟ ವಿಷಯಗಳನ್ನು ಜನತೆಗೆ ತಿಳಿಯಗೊಡಬೇಕು. ಇದು ಸಮತಾವಾದಿಗಳೆನ್ನುವವರ ವಾದ.

ಇಷ್ಟೆಲ್ಲ ಸಂಗತಿಗಳೂ ಸ್ಪಷ್ಟವಾಗಿದ್ದರೂ ಕಾಂಗ್ರೆಸು ಜನತಾಸಂಪರ್ಕದಿಂದ ಸ್ವಾತಂತ್ರ್ಯವನ್ನು ಪಡೆಯುವ ಗುರಿಯನ್ನು ತಲುಪುವ ದಾರಿಯು ಬಗೆಹರಿಯದಾಗಿದೆ. ಅಖಿಲ ಭಾ। ಕಾಂ। ಸಭೆಯ ವ್ಯವಸ್ಥಾಪನಾ ಕಾರ್ಯದರ್ಶಿಗಳಾದ ಶ್ರೀ। ಜಯರಾಮ್‌ದಾಸ್ ದೌಲತ್‌ರಾಮರು ಹೇಳುವಂತೆ 'ಜನತೆಯೊಂದಿಗೆ ಸಜೀವ ಸಂಪರ್ಕವನ್ನು ಗಳಿಸಲಿಕ್ಕೆ ನಾವು ಜನತೆಯ ಕೋರಿಕೆಗಳನ್ನೂ ಪೂರೈಸನೋಡಬೇಕು. ಮತ್ತು ಈ ಮೂಲಕ ರಚನಾತ್ಮಕ ಕಾರ್ಯಕ್ರಮವನ್ನು ಮುಂದೆ ಸಾಗಿಸಬೇಕು' ಇಲ್ಲಿಯೂ ಕೂಡಾ ಜನತಾಸಂಪರ್ಕದ ಸರಿಯಾದ ದಾರಿಯನ್ನು ಹುಡುಕಿದಂತಾಗಲಿಲ್ಲವೆಂತಲೂ, ಜನತೆಗಳ ಕೋರಿಕೆಗಳನ್ನು ಹುಡುಕಿ ಜನತಾಸೇವೆಯನ್ನು ಕೆಲವು ದಾನಧರ್ಮದ ಸಂಸ್ಥೆಗಳು ಮಾಡಿದಂತೆ ಮಾಡಿದರೆ ಕೆಲಸವು ಆಗಲಾರದೆಂದೂ, ಜನತೆಗೆ ಕೋರಿಕೆಯನ್ನುಂಟುಮಾಡಿ, ಅವರನ್ನು ಬವಣೆಯಲ್ಲಿ ಗೋಳಾಡಿಸುವ ಪ್ರಾಮುಖ್ಯ ಸಂಗತಿಗಳಾವುದವೆಯೊ, ಅವುಗಳ ಕಡೆಗೆ ಜನತೆಯ ಗಮನವನ್ನು ಸೆಳೆದು ತನ್ಮೂಲಕ ಆ ಆತಂಕಗಳನ್ನು ಹೋಗಲಾಡಿಸುವಂತೆ ಅವರ ಶಕ್ತಿಯನ್ನು ಸಂಪಾದಿಸಿದರೆ ಮಾತ್ರವೇ ಕಾರ್ಯವು ಸಫಲವಾಗುವುದೆಂಬ ಅಭಿಪ್ರಾಯವನ್ನು ಕ್ರಾಂತಿಕಾರರು ಇಟ್ಟುಕೊಂಡಿರುತ್ತಾರೆ.

THE BUNDER STREET,
MANGALORE.

Facing the crowded riverfront and but a stone's throw from the busy markets in Second Line, you find it. A strangley quiet street of Mangalore, this strangely. For day in and day out, without fuss or bluster, hundreds and thousands of bills and cheques leave from here for distinations as far from home as London or Now York. A street of quiet, efficient and up-to-date service to the businessman and his clients.

Canara Bank with a large well-equipped office in Bunder Street offers to its customers banking facilities second to none. It has branches in all important business centres and agency connections all over.

RESOURCES OF A CRORE. ESTD: 1906

CANARA BANK, LIMITED.

ನವರತ್ನ ಎಲಿಕ್ಸಿರ್ ಗೈನೆಕೊ.

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟುದೋಷಗಳನ್ನು ವಿಶೇಷ ಪರಿಣಾಮದಿಂದ ಗುಣಪಡಿಸುವ ಶಕ್ತಿಯುಳ್ಳ ಸಾಮಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ. ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಸರಿಪಡಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ

ಬೆಲೆ 4 ಔನ್ಸ್ ಬಾಟ್ಲಿಗ ರೂ 0 12 0
" 8 " " " 1 4 0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
ವಿ ವಿ ಶೆಣೈ ಕಾರ್ಕಳ.
ಡಾ| ಕೆ ಎಲ್ ಐತಾಳ, ಉಡುಪಿ
ಮೊಡರ್ನ್ ಫಾರ್ಮೆಸಿ, ಕುಂದಾಪುರ
ಬಿ ಜಿ ಭಂಡಾರಿ, ಪುತ್ತೂರು
ಭಟ್ಟಾ ಬ್ರದರ್ಸ್, ಕಾಸರಗೋಡು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ
ಆಗ ತಾನೇ ನಿಮಗೆ ಖಚಿತವಾಗುವುದು
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ ಮಂಗಳೂರು

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಶಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of
Please call on or write to:-

Simon & Co ,
Painters,
Church ... Hampankatta ... MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸ್ಯೈನ್ ಬೋರ್ಡ್ ಇತ್ಯಾದಿಗಳನ್ನೂ
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in — Watches Clocks Timepieces, Rolled Gold Jewellery & Sporting Materials etc,



Stockists of West End, Zenith Meridian Swiss Watches of latest designs & tastes

Repairers – Watches, Clocks Timepieces and Gramophones.

Japan 8 Inch Octegon Rs 6 0 0
" 8 Regulator " 6 12 0
" 10 Octegon " 6 8 0
" 10 " Regulator 7 8 0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು ವಾಚು, ಗಡಿಯಾರ, ವ ಗ್ರಾಮೊಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



... ವಾಚು 1ಕ್ಕೆ ರೂ ...-10-0 ಅದರಲ್ಲಿ ಉತ್ತಮ ವಾ... ರೂ 1-14-0 ... 1ಕ್ಕೆ ಬೆಲೆ ರೂ 1-1...-0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co , 176 Cross Street CALCUTTA

Most Reliable New Model 1937

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH
No 16

Sale Rs 6—10—0
SMART LEVER MOVEMENT
Strong & Durable at Low Price



UNIQUE OPPORTUNITY ONLY FOR ONE MONTH
Available Roman or Arabic Figures
Plain Silver Dial

Guaranteed for 5 Years Lever Pocket Watch Rs 1—15—9

No 12	Chromium	4 Jewels	Rs 6—8—0
14	"	7 "	" 10—8—0
" 15		15 "	" 12—8—0
" 17	Rolled Gold	15	" 16—8 0

Rs 1/- Extra for Radium Dial Postage & Packing Extra

BAPALAL & CO (s) 116, Abdul Rehman Street, Bombay 3

ತಾಲೂಕುಗಳಿಂದ

ಅಜೆಕಾರು:— ಈ ಸಂಸ್ಥೆಯ ಅಧ್ಯಾಪಕರ ಸಭೆಯು ತಾ. ೧೫—೫—೩೬ರಲ್ಲು ಕಾರ್ಕಳ ರೇಂಜಿನ ಡೆಪ್ಯುಟಿ ಇನ್ಸ್ಪೆಕ್ಟರರಾದ ಮ॥ ರಾ॥ ಬಿ. ವೆಂಕಟ್ರಾಯ ಮಲ್ಯ ಅವರ್ಗಳ್ ಬಿ. ಎ. ಎಲ್. ಟಿ. ಯವರ ನೇತೃತ್ವದಲ್ಲಿ ಜರಗಿ ಕಾರ್ಯಕ್ರಮದಂತೆ ಎಲ್ಲವನ್ನೂ ತೀರ್ಮಾನಿಸಿದ ಬಳಿಕ ಅಧ್ಯಕ್ಷರ ಸುರಸ ಭಾಷಣ, ಗ್ರೂಪ್ ಫೋಟೋ, ಫಲಾಹಾರ ಇತ್ಯಾದಿಯೊಂದಿಗೆ ಸಭೆಯು ಕೊನೆಗೊಂಡಿತು.

ಮಾನ್ಯ ದ. ಕ. ಜಿಲ್ಲಾ ಬೋರ್ಡಿನವರು ಅಜೆಕಾರಿಗೊಂದು ರೂರಲ್ ಡಿಸ್ಪೆನ್ಸರಿಯನ್ನು ಸೆಂಕ್ಷನ್ ಮಾಡಿರುವರಾಗಿ ತಿಳಿದುಬರುತ್ತದೆ. ಅದು ಶೀಘ್ರದಲ್ಲೇ ತೆರೆಯಲ್ಪಟ್ಟು ಸಂಭ್ರಮದ ಸುಸ್ವಾಗತವನ್ನು ಪಡೆಯಲಿ!

ಊರವರು ಸ್ಥಳೀಯ ಬೋರ್ಡುಶಾಲಾ ಕಟ್ಟಡದ ವಿಸ್ತರಿಸುವಿಕೆಯ ಕೆಲಸವನ್ನು ಸಂಪೂರ್ಣಗೊಳಿಸಿ, ದ. ಕ. ಜಿಲ್ಲಾ ಬೋರ್ಡಿಗೆ ಧರ್ಮಾರ್ಥವಾಗಿ ಬಿಟ್ಟುಕೊಟ್ಟಿರುವುದು ಸ್ತುತ್ಯ.

ಸ್ಥಳೀಯ ಪೋಸ್ಟಾಫೀಸಿನಲ್ಲಿ ಸೇವಿಂಗ್ಸ್ ಬೇಂಕ್ ಕೆಲಸವನ್ನು ಕೈಕೊಳ್ಳಬಹುದಾಗಿ ಅಧಿಕಾರವನ್ನೀಯಲ್ಪಟ್ಟಿದೆ.

ಇಲ್ಲಿ ಸದ್ಯದಲ್ಲಿ ಒಂದು ಗ್ರೈನ್ ಬೇಂಕ್ ಸ್ಥಾಪಿಸಲ್ಪಡುವುದು.

ಪಡುಬಿದ್ರೆ:— ಇಲ್ಲಿ ತಾ. ೧೦—೫—೩೬ನೇ ದಿನ ಸುಮಾರು ೫ ಗಂಟೆಗೆ ಶ್ರೀಯುತ ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ಒಂದು ಸಭೆಯು ಸೇರಿತು. ಸದರಿ ಸಭೆಗೆ ಶ್ರೀಗಳಾದ ವೆಂಕಟ್ರಾಯ ಬಾಳಿಗರೂ, ಎ. ಬಿ. ಶೆಟ್ಟರೂ ಚಿತ್ತೈಸಿದ್ದರು. ಶ್ರೀ ವೆಂಕಟ್ರಾಯ ಬಾಳಿಗರು ತಮ್ಮ ಭಾಷಣದಲ್ಲಿ ಕಳೆದ ಚುನಾವಣೆಯಲ್ಲಿ ಸ್ವದೇಶಾಭಿಮಾನಿಗಳು ತಮ್ಮ ಸಾಹಸವನ್ನು ತೋರಿ ಕಾಂಗ್ರೆಸ್ಸಿನ ಉಮೇದ್ವಾರರಿಗೆ ಜಯಪ್ರದವನ್ನು ಉಂಟುಮಾಡಿದುದಕ್ಕೆ ಅವರನ್ನು ಹೊಗಳಿ, ಅವರಿಗೆ ತಮ್ಮ ಹೃದಯಾಂಗಮವಾದ ಧನ್ಯವಾದಗಳನ್ನು ಅರ್ಪಿಸಿದರು. ಆ ಮೇಲೆ ಅವರು ತಮ್ಮ ಭಾಷಣದಲ್ಲಿ ಮುಂದುವರಿಯುತ್ತಾ, ಕಾಂಗ್ರೆಸ್ಸಿನ ಧ್ಯೇಯವು ನಮ್ಮ ಜನರಲ್ಲಿ ಬೇರೂರಿರುವ ಬಡತನವೆಂಬ ವೃಕ್ಷವನ್ನು ಬೇರು ಸಮೇತ ಕಿತ್ತೊಗೆದು, ಅದರ ಸ್ಥಾನದಲ್ಲಿ ಸ್ವರಾಜ್ಯವೆಂಬ ವೃಕ್ಷವನ್ನು ನೆಡುವುದು ಎಂದು ಹೇಳಿದರು. ಇಷ್ಟುಮಾತ್ರವಲ್ಲದೆ, ಕಾಂಗ್ರೆಸ್ಸಿನಿಂದ ಚುನಾಯಿತರಾದವರು ಕೌನ್ಸಿಲಿನಲ್ಲಿ ಏಕೆ ಮಂತ್ರಿಪದವಿಯನ್ನು ಸ್ವೀಕರಿಸಲಿಲ್ಲವೆಂದು ಎಲ್ಲಾ ಸಭಿಕರ ಮನಸ್ಸಿಗೆ ಹಿಡಿತವಾಗುವಂತೆ ವಿವರಿಸಿದರು. ಭಾಷಣಾಂತ್ಯದಲ್ಲಿ ಪ್ರತಿಯೊಬ್ಬನೂ ಕಾಂಗ್ರೆಸಿನ ಮೆಂಬರನಾಗಿ ಕಾಂಗ್ರೆಸ್ಸಿಗೆ ತುಂಬಾ ಬೆಂಬಲವನ್ನು ಕೊಡಬೇಕೆಂದು ಹೇಳಿ ತಮ್ಮ ಸ್ಥಾನವನ್ನು ಸ್ವೀಕರಿಸಿದರು. ಆ ಮೇಲೆ ಇದನ್ನು ಸಮರ್ಥಿಸಿ ಶ್ರೀ ಎ. ಬಿ. ಶೆಟ್ರು ಒಂದು ಚಲೋ ಭಾಷಣವನ್ನು ಎಲ್ಲರಿಗೂ ವಿಶದವಾಗುವಂತೆ ತುಳುವಿನಲ್ಲಿ ಮಾಡಿದರು. ಅಧ್ಯಕ್ಷರ ಭಾಷಣ ಮುಗಿದ ಮೇಲೆ, ಶ್ರೀಯುತ ಪಡುಬಿದ್ರೆ ಕರಿಯಣ್ಣ ಶೆಟ್ರು ಅಧ್ಯಕ್ಷರಿಗೂ, ಸಭಿಕರಿಗೂ ಊರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಉಜಿರೆ:— VIನೇ ಜೋರ್ಜ ಚಕ್ರವರ್ತಿಯ ಕಿರೀಟಧಾರಣೆಯ ಸಮಾರಂಭ ಇದೇ ತಾ. ೧೩—೫—೩೬ನೆ ಬುಧವಾರ ಬೆಳಿಗ್ಗೆ ಗಂಟೆ ೮ಕ್ಕೆ ಉಜಿರೆ ಶಾಲಾಮಕ್ಕಳು ಸುಮಾರು ೨೦೦ಕ್ಕೆ ಮಿಕ್ಕಿ, ವಾಲಗ, ಆನೆ, ಪತಾಕೆ ಇತ್ಯಾದಿಗಳಿಂದ ಕೂಡಿ ಮೆರವಣಿಗೆಯಿಂದ ಬೆಳ್ತಂಗಡಿಗೆ ಹೋಗಿ ಅಲ್ಲಿ ನಡೆದ ಸಮಾರಂಭದಲ್ಲಿ ಸಹಕರಿಸಿದರು. ಅದೇ ದಿನ ಸಾಯಂಕಾಲ ಗಂಟೆ ೫ಕ್ಕೆ ಉಜಿರೆ ಪೇಟೆಯಲ್ಲಿ ನೂತನವಾಗಿ ಕಟ್ಟಿಸಿದ ಶ್ರೀರಾಮ ಭಜನಾ ಮಂದಿರದ ಎದುರು ಚಲೋ ರೀತಿಯಿಂದ ಅಲಂಕೃತವಾದ ಚಪ್ಪರದಲ್ಲಿ ಬೆಳ್ತಂಗಡಿಯ ಡಾಕ್ಟರ್ ಮ॥ ರಾ॥ ರಾ॥ ಯು. ಎನ್. ನಾಯ್ಕರವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿಸಲ್ಪಟ್ಟಿತು. ಸದರಿ ಸಭೆಗೆ ಮ॥ ರಾ॥ ರಾ॥ ಬೆಳ್ತಂಗಡಿ ಡಿ॥ ತಹಶೀಲ್ದಾರರೂ, ಸುಮಾರು ೩೫೦ಕ್ಕೆ ಮಿಕ್ಕಿ ಊರ ಜನರೂ ಶಾಲಾ ಮಕ್ಕಳೂ ಹಾಜರಿದ್ದರು. ಉಜಿರೆ ಪಂಚಾಯತ ಬೋರ್ಡಿನಿಂದ ತಯಾರಿಸಲ್ಪಟ್ಟ ಒಂದು ದೀಪಸ್ತಂಭವನ್ನು ಭಜನಾ ಮಂದಿರದ ಎದುರು ರಾಜಮಾರ್ಗದಲ್ಲಿ ಪಟ್ಟಾಭಿಷೇಕದ ಸ್ಮಾರಕವಾಗಿ ಅಧ್ಯಕ್ಷರಿಂದ ತೆರೆಯಲ್ಪಟ್ಟು, ತರುವಾಯ ಚಕ್ರವರ್ತಿಯವರ ಕಿರೀಟಧಾರಣೆಯ ಕುರಿತು ಭಾಷಣಗಳಾದ ನಂತರ ಶಾಲಾ ಮಕ್ಕಳಿಗೂ ಅತಿಥಿಗಳಿಗೂ ಕಮಿಟಿಯ ಚಾಲಕರು ಉಪಾಹಾರಗಳಿಂದ ತೃಪ್ತಿಗೊಳಿಸಿದ ನಂತರ ಚಕ್ರವರ್ತಿಯವರ ಶ್ರೇಯ, ಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು.

ಮರುದಿನ ಸಾಯಂಕಾಲ ಗಂಟೆ ೮ಕ್ಕೆ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ನೇತೃತ್ವದಲ್ಲಿ ಸದರಿ ಶ್ರೀ ರಾಮ ಭಜನಾ ಮಂದಿರದ ಪ್ರವೇಶೋತ್ಸವು ಅತೀ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಸಂತೆಕಟ್ಟೆ(?):— ಇಲ್ಲಿಯ ಬೋರ್ಡುಶಾಲಾ ವಾರ್ಷಿಕೋತ್ಸವವು ಇದೇ ತಾ. ೨೬—೫—೩೬ನೇ ರವಿವಾರ ದಿವಸ ಗಂಟೆ ೪ಕ್ಕೆ ಮ॥ ರಾ॥ ರಾ॥ ಸಂತೆಕಟ್ಟೆ(?) ಬೈಲು ಗ್ರಾಮೋದ್ಯೋಗಸ್ಥರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಂತೆ— ಪ್ರಾರ್ಥನೆ, ತಿಂಡಿ, ಇನಾಂ ಹಂಚೋಣ, ಅಧ್ಯಕ್ಷರ ಚುನಾವಣೆ, ಸಭಿಕರ ಭಾಷಣಗಳಾದ ಬಳಿಕ ಶಾಲೆಯ ನೆರೆಗ್ರಾಮದ ವಿದ್ಯಾರ್ಥಿಗಳು ಮತ್ತು ಸದರಿ ಶಾಲೆಯ ಹಳೇ ಮತ್ತು ಈಗಿನ ವಿದ್ಯಾರ್ಥಿಗಳು ಕೂಡಿ "ಹಿರಿಯಕ್ಕನ ಚಾಳಿ" ಎಂಬ ನಾಟಕವನ್ನು ಆಡಿ ತೋರಿಸಿದರು. ಪ್ರೇಕ್ಷಕರು ಸುಮಾರು ೪೦೦ಕ್ಕೆ ಮಿಕ್ಕಿ ನೆರೆದಿದ್ದರು. ಕೊನೆಗೆ ಅಧ್ಯಕ್ಷರ ಭಾಷಣವಾಗಿ ಉಪಕಾರಸ್ಮರಣೆಯನ್ನು ಹೇಳಿದ ತರುವಾಯ ಸಭೆಯು ಮುಕ್ತಾಯವಾಯಿತು. ಈ ಸಮಾರಂಭದಲ್ಲಿ ಕಾರ್ಯದರ್ಶಿಗಳಾದ ಶ್ರೀಯುತ ಮೋಹನ ಭಟ್ರು ಮತ್ತು ಶ್ರೀಯುತ ರಘುರಾಮ ಭಟ್ಟರ ಉತ್ಸಾಹ ಹಾಗೂ ಶ್ರಮಗಳು ತುಂಬಾ ಹೊಗಳತಕ್ಕದ್ದಿದೆ.

ಕೋಕೂರು(?) ಜೋಗಟ್ಟೆ.— ಇಲ್ಲಿಯ ಬೋರ್ಡ ಮಹಮ್ಮದನ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಇದೇ ತಾ. ೧೫—೫—೩೬ರಲ್ಲು ದ. ಕ. ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಶ್ರೀ ಯು ಕಣ್ಣಪ್ಪ ಅವರ್ಗಳ್ ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿಯೂ ಮಂಗಳೂರು ರೇಂಜಿನ ಡಿ. ಇ. ರಾ॥ ಎಚ್ ಸಂಜೀವರಾವ್ ಅವರ್ಗಳ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಸದರಿ ಸಮಾರಂಭದ ಸಮಯ ಶಾಲಾ ವಿದ್ಯಾರ್ಥಿಗಳಾದ ಚಿಕ್ಕ ಬಾಲಕ ಬಾಲಕಿಯರ ಕಥಾ ನಟನೆ, ಗಾಯನ, ಕೋಲಾಟ, ಪಲಿಂಪಟ್ಟು(?), ಲೇಜಿಮ್, ಪ್ರಹಸನ ಮತ್ತು ಅನೇಕ ವಿನೋದಾವಳಿಗಳನ್ನು ಅಭಿನಯಿಸಿದರು. ವರ್ಧಂತಿ ಉತ್ಸವದ ಉದ್ದೇಶ ಮೊದಲಾದವುಗಳ ಕುರಿತು ರಾ॥ ಡೆಪ್ಯುಟಿ ಇನ್ಸ್ಪೆಕ್ಟರ್ ಮತ್ತು ಸಭಿಕರ ಭಾಷಣದ ತರುವಾಯ ಅಧ್ಯಕ್ಷರು ಶಾಲಾ ಹಿತವನ್ನು ಬಯಸಿ ದ. ಕ. ಜಿಲ್ಲೆಯಲ್ಲಿರತಕ್ಕ ಶಾಲೆಗಳ ಪೈಕಿ ಇದೊಂದು ಮೇಲ್ಪಂಕ್ತಿಯಂತಿದೆ ಎಂಬ ಭಾಷಣವಿತ್ತು, ಬಡವಿದ್ಯಾರ್ಥಿಗಳ ಒಂದು ನಿಧಿಯನ್ನು ಸ್ಥಾಪಿಸುವುದಕ್ಕೆ ತಾನು ಕೂಡಾ ಹತ್ತು ರೂಪಾಯಿಗಳನ್ನು ದಾನವಾಗಿ ಕೊಡುತ್ತೇನೆಂದು ವಾಗ್ದಾನ ಮಾಡಿದರು. ಇದಾದ ನಂತರ ಸರಿ ಸಭಾಧ್ಯಕ್ಷರಿಗೂ ಸಭಿಕರಿಗೂ ಉಪಕಾರಸ್ಮರಣೆಗಳನ್ನು ಅರ್ಪಿಸಿ ಸಭಾ ಮುಕ್ತಾಯವಾಯಿತು. ಇದೇ ಸಮಯ ಒಂದು ಭಾವಚಿತ್ರವು ಕೂಡಾ ತೆಗೆಯಲ್ಪಟ್ಟಿತು. ಮತ್ತು ಈ ದಿನ ಇಲ್ಲಿಯೇ ಕಳವಾರು(?) ಸೆಂಟರಿನ ಉಪಾಧ್ಯಾಯರ ಸಂಘದ ಮೂಲಕ ಸಭೆಯು ಇಲ್ಲಿಯೇ ಮ॥ ರಾ॥ ರಾ॥ ಡಿ. ಇನ್ಸ್ಪೆಕ್ಟರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೂಲ್ಕಿ(?):— ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ಪಾಠಶಾಲೆಯ ೧೦ರ(?) ವರ್ಧಂತಿಯು ಇದೇ ಕಳೆದ ತಾ. ೧೬—೫—೩೬ನೇ ರವಿವಾರ ರಾತ್ರಿ ಗಂಟೆ ೧೦ಕ್ಕೆ [೭ ೩೦ಕ್ಕೆ ಸರಿಯಾಗಿ ಪ್ರಾರಂಭವಾಗಬೇಕಾಗಿದ್ದ ಸಮಾರಂಭವು ಕಾರಣಾಂತರಗಳಿಂದ ೧೦ ಗಂಟೆಗೆ ಶುರುವಾಗಬೇಕಾಯಿತು.) ಶ್ರೀಮಾನ್ ಎ. ಬಿ. ಶೆಟ್ಟಿ, ಎಂ. ಎಲ್. ಸಿ. ರವರ ಸಭಾಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಸಭಾಮಂದಿರವೂ ಶಾಲಾ ಪರಿಸರವೂ ತಳಿರುತೋರಣಗಳಿಂದಲೂ ಪತಾಕೆಗಳಿಂದಲೂ ಮನೋಹರವಾಗಿ ಶೃಂಗರಿಸಲ್ಪಟ್ಟಿತ್ತು. ಊರ ಅನೇಕ ಪ್ರಮುಖರು ದಯಮಾಡಿಸಿದುದಲ್ಲದೆ, ಶ್ರೀ ಬಿ. ವೆಂಕಟ್ರಾಯ ಬಾಳಿಗ ಬಿ. ಎ. ಬಿ. ಎಲ್. ಎಂ. ಎಲ್. ಎ. ರವರೂ ಡಿ. ಇ. ಕೌನ್ಸಿಲ್ ಮೆಂಬರ್ ಶ್ರೀ ಗಣಪಯ್ಯ ಶೆಟ್ರು ಚಿತ್ತೈಸಿದ್ದರು. ಶ್ರೀ ದೇವತಾ ಪ್ರಾರ್ಥನೆ, ಸ್ವಾಗತಗೀತೆ ಇವು ನಡೆದ ಮೇಲೆ ಶಾಲೆಯ ೧೦ನೇ ವರದಿಯು ಓದಲ್ಪಟ್ಟಿತು. ಪರವೂರಿನಿಂದ ಬಂದ ಸಂದೇಶಗಳು ಓದಿಹೇಳಲ್ಪಟ್ಟವು. ನಂತರ ಸನ್ಮಾನ್ಯ ಅಧ್ಯಕ್ಷರ ಮೂಲಕ ಕೆಲವೊಂದು ಪಾರಿತೋಷಕಗಳು ಹಂಚಲ್ಪಟ್ಟುವು. ಇದಾಗಲು ಶಾಲಾ ಬಾಲಕರು "ಶ್ರೀ ಕೃಷ್ಣ ರುಕ್ಮಿಣಿ ಸಂವಾದ"ವನ್ನು ಯಕ್ಷಗಾನ ಮೂಲಕ ನಟಿಸಿ ತೋರಿಸಿದರು. ಅದಾಗಲು ಶಾಲಾ ವಿದ್ಯಾರ್ಥಿಗಳಾದ ಮೂವರು ಕೊರಗರ ಹುಡುಗರು ಚಲೋ ರೀತಿಯಿಂದ ಕೊಳಲು, ವಾಲಗಗಳನ್ನು ಊದಿದರು. ಸ್ಥಳೀಯ ಸಮರ್ಥ ವ್ಯಾಯಾಮಶಾಲೆಯ ಪ್ರೊಪ್ರೈಟರ್ ಶ್ರೀ ಎಂ. ರಾಮಕೃಷ್ಣ ಕಾಮತ್ ಮತ್ತು ಇವರ ಸಹಪಾಠಿ ಶ್ರೀ ಎಂ. ಅಪ್ಪುರಾಯ ಕಾಮತ್ ಇವರಿಬ್ಬರು ಕೆಲವೊಂದು ಅಂಗಸಾಧನೆಯ ದೇಖಾವೆಗಳನ್ನು ಪ್ರದರ್ಶಿಸಿದರು. ಇದಾದ ಮೇಲೆ ಶಾಲಾ ವಿದ್ಯಾರ್ಥಿಗಳು "ಕಲಿತ ಹುಡುಗಿ" ಎಂಬ ಒಂದಂಕದ ಸಾಮಾಜಿಕ ನಾಟಕವನ್ನು ಅಭಿನಯಿಸಿ ತೋರಿಸಿದರು. ಆಮೇಲೆ ಸನ್ಮಾನ್ಯ ಅಧ್ಯಕ್ಷ ಮಹಾಶಯರ ಅಮೂಲ್ಯ ಭಾಷಣವಾಯಿತು. ಇವರು ತಮ್ಮ ಭಾವಗರ್ಭಿತವಾದ ಭಾಷಣದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಒದಗಿಸಿಕೊಟ್ಟಿರುವ ಸೌಕರ್ಯಗಳನ್ನು ಕುರಿತು ವಿಮರ್ಶಿಸಿ, ರಾತ್ರಿ ಶಾಲೆಗಳ ಆವಶ್ಯಕತೆಯನ್ನು ಸಾದ್ಯಂತವಾಗಿ ವಿವರಿಸಿ ಶಾಲೆಗೆ ಉತ್ತರೋತ್ತರ ಶ್ರೇಯೋಭಿವೃದ್ಧಿಯನ್ನು ಕೋರಿದರು. ಕಡೆಗೆ ಅಧ್ಯಕ್ಷ ಮಹಾಶಯರ ಕೊರಳಿಗೆ ಹೂವಮಾಲೆ ಹಾಕಿ ಗೌರವಿಸಿಯಾಗಲು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಭೋಜರಾಯರು ನೆರೆದುಬಂದಿದ್ದ ಸರ್ವರಿಗೂ ಮುಖ್ಯವಾಗಿ ಅಧ್ಯಕ್ಷ ಮಹಾಶಯರಿಗೆ ಶಾಲೆಯ ಕಡೆಯಿಂದ ಧನ್ಯವಾದಗಳನ್ನು ಅರ್ಪಿಸಿದರು. ನಂತರ ಮಂಗಳ ಗೀತದೊಡನೆ ಸಮಾರಂಭವು ಕೊನೆಗೊಂಡಿತು.

ಸ್ಥಳೀಯ ಸಂಗೀತಕಲಾ ಮಂದಿರದ ಪೋಷಣಾರ್ಥವಾಗಿ ಕಿರಿಯರ ಕೂಟವೊಂದು ಏರ್ಪಟ್ಟು, ಸಂಗೀತ ಅಂತೆಯೇ ನಾಟ್ಯಕಲಾ ಪ್ರದರ್ಶನಕ್ಕಾಗಿ ಅಲ್ಲಲ್ಲಿ "ಅಸ್ಪೃಶ್ಯತಾ" ಅಥವಾ "ಹರಿಜನೋದ್ಧಾರ" ಎಂಬ ಸಾಮಾಜಿಕ ನಾಟಕವನ್ನು ಸಾರ್ಥಕವಾದ ರೀತಿಯಲ್ಲಿ ಜನಮನಾಕರ್ಷಕವಾಗುವಂತೆ ಅಭಿನಯಿಸಿ ಪ್ರಶಂಸೆಗೆ(?) ಪಾತ್ರವಾದುದು ತುಂಬಾ ಸಂತೋಷಾಸ್ಪದ ವಿಚಾರವಿದೆ. ಇದರಿಂದ ಸಮಾಜಸೇವಾ ಕಾರ್ಯವು ನಿರ್ವಹಿಸಲ್ಪಡುತ್ತದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ನಾಟಕವು ಅತ್ಯಂತ ಮನೋರಂಜಕವಾಗಿದುವುದು.

ಈ ಕಿರಿಯರ ಕೂಟವು ಸದ್ಯದಲ್ಲೇ ಉಡುಪಿ ಮಂಗಳೂರು ಪಟ್ಟಣಗಳಲ್ಲಿಯೂ ತನ್ನ ಚಾತುರ್ಯವನ್ನು ಪ್ರಕಟಿಸಲು ನಿಶ್ಚಯಿಸಿರುವುದೆಂಬ ವದಂತಿ ಇದೆ. ಈ ಬಗ್ಗೆ ಕಂಬ್ಯಾಯಿಡ್ ವರ್ಕಿಂಗ್ ಏಜನ್ಸಿಯವರು ಈ ಬಡ ಕೂಟಕ್ಕೆ ಪ್ರಯಾಣ ದರದಲ್ಲಿ ರಿಯಾಯಿತಿ ತೋರಿಸಿ ಪ್ರೋತ್ಸಾಹ ಕೊಟ್ಟರೆಂತ್ತಾರೆಂಬ ಸಂಗತಿಯು ತುಂಬಾ ಸಂತೋಷದಾಯಕವಾಗಿದೆ.

ಉಡುಪಿ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮುಂಚೆಯೆ ಪ್ರಕಟಿಸಲಾದಂತೆ ಉಡುಪಿ ತಾಲೂಕಿನ ಆಯಾಯ ಹಳ್ಳಿಕೇಂದ್ರಗಳಲ್ಲಿ ಕಾಂಗ್ರೆಸ್ ಪ್ರಚಾರ, ಹಳ್ಳಿ ಕಾಂಗ್ರೆಸ್ ಸಮಿತಿಗಳ ಸ್ಥಾಪನಾ ಕಾರ್ಯಗಳನ್ನು ಜರಗಿಸುವರೆ, ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಪಿ. ಮಂಜನಾಥ ನಾಯಕರು(?) ಕೆಲವು ಕೆಲಸಗಾರರೊಂದಿಗೆ ತಾಲೂಕಿನ ಭಾಗಗಳಲ್ಲಿ ಪ್ರವಾಸ ಮಾಡುತ್ತಿರುವರು. ಇದು ವರೆಗೆ ಹಳ್ಳಿಗಳಲ್ಲಿ ಕಾಂಗ್ರೆಸ್ ವಿಶ್ವಾಸ ದೇಶಾಭಿಮಾನಗಳು ತೀವ್ರ ವೃದ್ಧಿಹೊಂದುವಂತೆ ತಿಳಿದುಬರುವುದಲ್ಲದೆ ಪ್ರಚಾರಕಾರ್ಯದಲ್ಲಿ ಸರ್ವರೂ ಬಹಳ ಉತ್ಸಾಹ ಸಂತೋಷಗಳಿಂದ ಸಹಕರಿಸುತ್ತಿರುವರೆಂದೂ ತಿಳಿಯುತ್ತೇವೆ.

ತಾ. ೨೪ನೇ ಪೂರ್ವಾಹ್ನ ಪಿಲಿಗಬೆಟ್ಟು(?) ಸಹಕಾರ ಸಂಘದ ಆಫೀಸಿನಲ್ಲಿ ಕೋ ಆಪರೇಟಿವ್ ಸಂಘಗಳ ಡಿ. ರಿಜಿಸ್ಟ್ರಾರಿಂದ ಆಹ್ವಾನಿಸಲ್ಪಟ್ಟಂತೆ ಉಡುಪಿ ಟೌನ್ ಬೇಂಕ್ ಮತ್ತು ಉಡುಪಿ ಮತ್ತು ಬಡಗಬೆಟ್ಟು ಸಹಕಾರ ಸಂಘಗಳ ಪಂಚಾಯತದಾರರ ಸಭೆ ಸೇರಿ ಸದ್ರಿ ಮೂರು ಸಂಘಗಳನ್ನು ಒಂದುಗೂಡಿಸಿ ಸಾರ್ವತ್ರಿಕ ಟೌನ್ ಬೇಂಕಾಗಿ ಸಂಯೋಜಿಸುವ ಆಲೋಚನೆ ಮಾಡಲಾಯಿತು. ಸದ್ರಿ ಸಂಘಗಳ ಸ್ಥಿತಿಗತಿಗಳನ್ನು ಓದಿ ಹೇಳಲಾದ ಮೇಲೆ, ಒಂದೇ ಟೌನ್ ಬೇಂಕನ್ನು ಸ್ಥಾಪಿಸುವುದರ ಹಿತಾಹಿತಗಳ ಬಗ್ಗೆ ಅನುಭವವೂ ಹೇಳಲಾಗಿ, ದೀರ್ಘ ಚರ್ಚೆಯೂ ನಡೆದು, ಬಾಲ್ಯ ವರ್ಷದ ಸ್ಥಿತಿಗತಿಗಳನ್ನು ಮುಂದಿಟ್ಟುಕೊಂಡು ಸದ್ರಿ ಯೋಜನೆಯನ್ನು ಹೇಗೆ ರೂಪಿಸಬಹುದೆಂಬ ತಕ್ಕ ಸಲಹೆಗಳೊಂದಿಗೆ ಮುಂದಕ್ಕೆ ಆಲೋಚಿಸಬೇಕೆಂದು ತೀರ್ಮಾನವಾಯಿತು. ಒಂದೇಯಾಗಿದ್ದ ಉಡುಪಿ ಸಹಕಾರ ಸಂಘವನ್ನು ಕಾರಣಾಂತರದಿಂದ ಮೂರಾಗಿ ವಿಭಜನೆ ಮಾಡಿದ್ದುದು, ಸದ್ರಿ ಮಾತೃ ಸಂಘದ ರಜತೋತ್ಸವ ವರ್ಷದಲ್ಲಿ ಇವು ಮೂರೂ ಒಂದುಗೂಡುವ ಸುಯೋಗವು ಸಮೀಪಿಸಿದೆನ್ನಬಹುದು.

ದಿ ಕೆನರಾ ಫೊರೆಸ್ಟ್ ಪರ್ವ್ಸ್(?)

ಲಿಮಿಟೆಡ್.

ಬ್ರೇಂಚ್: ಕಾರ್ಕಳ.

ಈ ಕಂಪೆನಿಯಲ್ಲಿ ಮರದಿಂದ ತಯಾರಾದ ಮೋಪು ವ ಹಲಿಗೆ, ಕೆಟ್ಟಿಗೆ ವ ಇತರ ಎಲ್ಲಾ ನಮೂನೆಯ ಸಾಮಾನುಗಳು ಮೇಲೆ ಬರೆದ ಕಂಪೆನಿಯಲ್ಲಿ ಮಿತವಾದ ಕ್ರಯಕ್ಕೆ ಆಗತ್ಯವಿದ್ದ ಸ್ಥಳದಲ್ಲಿ ರವಾನಿಸಿಕೊಡುತ್ತಾರೆ. ಅಲ್ಲದೆ ಇಲ್ಲಿ ಸಹ ಬಂದರೆ ಕೂಡಲೆ ತಕ್ಕ ಕ್ರಯಕ್ಕೆ ದೊರೆಯುತ್ತದೆ.

ಮಂಗಳೂರು

ಮಂಗಳೂರು ಅಂಜುಮನ್ ಹಿಮಾಯತುಲ್ ಇಸ್ಲಾಂ ಸಂಘದ ಮೂರನೇ ವರ್ಷಾವಧಿ ಮಹಾಸಭೆಯು ಮಂಗಳೂರು ಬಂದರ್ ಕುದ್ರೋಳಿ ಹಿಂದುಸ್ಥಾನಿ ಶಾಲೆಯಲ್ಲಿ ಸಾಯಂಗಂಟೆ ೬ಗೆ ಸರಿಯಾಗಿ ಜನಾಬ್ ಖಾನ್ ಸಾಹೇಬ್ ಪ್ರೊಫೆಸರ್ ಎ. ಎಂ. ಮೌಲವಿ ಸಾಹೇಬ್ ಎಂ. ಎ. ಡಿಪ್. ಟಿ. ಎಸ್. (ಲಂಡನ್) ಓಫ್ ಬೊಂಬೈ ಇವರ ಅಧ್ಯಕ್ಷತೆಯಲ್ಲಿ ಮಹಾ ವಿಜೃಂಭಣೆಯಿಂದ ಜರಗಿತು. ಹಿಂದೂ ಸಹೋದರರೂ ಸಹಾ ಹಾಜರಿದ್ದರು. ದೇವರ ಪ್ರಾರ್ಥನೆ, ವಗೈರೆಗಳು ಹೇಳಲ್ಪಟ್ಟ ಮೇಲೆ ಸಂಘದ ಸಹಾಯಕ ಕಾರ್ಯದರ್ಶಿಯವರಾದ ಜನಾಬ್ ರಫಿಯುದ್ದೀನ್ ಅಹಮದ್ ಸಾಹೇಬರು ಸಂಘದ ವರದಿಯನ್ನು ಸಭೆಯ ಮುಂದೆ ಓದಿಹೇಳಿದರು. ನಂತರ ಜನಾಬ್ ಕೆ. ಹೈದರ್ ಸಾಹೇಬರು ಕನ್ನಡದಲ್ಲಿಯೂ, ಜೆ. ಜಿಂಜುದ್ದೀನ್(?) ಸಾಹೇಬ್, ಬಿ. ಎ. ಎಲ್. ಎಲ್. ಬಿ. ಯವರು ಉರ್ದು ಭಾಷೆಯಲ್ಲಿಯೂ, ಜನಾಬ್ ಎಂ. ಎ. ಕರೀಮ್ ಸಾಹೇಬ್ ಎಂ. ಎ. ಯವರು ಇಂಗ್ಲಿಷ್ ಭಾಷೆಯಲ್ಲಿಯೂ ಸಂಘದ ಚಟುವಟಿಕೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ವಿದ್ಯಾವೇತನವು ಇನ್ನೂ ಹೆಚ್ಚಿಗೆ ಸಿಗುವ ಹಾಗೆ ಜನರು ಇನ್ನಷ್ಟು ಧನಸಹಾಯವನ್ನು ಮಾಡಬೇಕೆಂತಲೂ ಸದರಿ ಸಂಘವು ಬೇಗನೇ ಒಂದು ವಿದ್ಯಾರ್ಥಿಭವನವನ್ನು (Hostel) ತೆರೆಯುವ ಹಾಗೆ ಏರ್ಪಾಡು ಮಾಡಿದರೆ ಇನ್ನಷ್ಟು ಪ್ರಯೋಜನವಾದೀತು ಎಂಬ ಮುಂದಿನ ಅಭಿವೃದ್ಧಿಗೆ ಜನರು ಬೆಂಬಲವನ್ನು ಕೊಡಬೇಕಾಗಿ ಭಾಷಣಗಳನ್ನು ಮಾಡಿದರು. ಅಧ್ಯಕ್ಷರ ಸುರಸಭಾಷಣವಾದ ಬಳಿಕ ಸಭಿಕರಿಗೂ ಅಧ್ಯಕ್ಷರಿಗೂ ಭಾಷಣಕರ್ತರಿಗೂ ಸಂಘಕ್ಕೆ ಧನಸಹಾಯ ಮಾಡಿದ ಸರ್ವ ಬಂಧುಗಳಿಗೂ ವಂದನೆಗಳನ್ನು ಅರ್ಪಿಸಿ ಸಭೆಯು ಬರಖಾಸ್ತು ಮಾಡಲಾಯಿತು.

ಶ್ರೀ ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಸಭಾ, ಕೋಟೇಶ್ವರ(?) ಇವರು ತಾರೀಕು ೨೭—೫—೩೬ನೇ ಬುಧವಾರ ರಾತ್ರಿ ಗಂಟೆ ೯ ೩೦ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಮಂಗಳೂರು ಮುನ್ಸಿಪಾಲ್ ಚೆಯರ್ಮೇನ್ ಡಾ॥ ಕೆ. ವಿಟ್ಠಲ ಪೈಗಳ(?) ನೇತೃತ್ವದಲ್ಲಿ ಒಂದು ಸುಧಾರಿತ ಯಕ್ಷಗಾನ ನಾಟಕವನ್ನು ಅಭಿನಯಿಸುವರು. ಪ್ರಸಂಗ—ಸಂಪೂರ್ಣ ಶ್ರೀ ಕೃಷ್ಣಲೀಲೆ. ಭಾಗವತರು—ಶ್ರೀ ಮೈರಿದಪ್ಪ(?) ಕೈಗಳು, ವ್ಯವಂಗವಾದಕರು—ಮೃದಂಗವಾದನ ವಿಶಾರದ ಕಿಟ್ಟಣ್ಣನವರು. ಶ್ರೀ ಶಂಕರನಾರಾಯಣ ಸಾಮಗ ವೆಂಕಟ್ರಮಣ ಭಟ್ಟರೇ ಮೊದಲಾದ ಅನೇಕ ಅಭಿನಯ ವಿಶಾರದರು ಪಾತ್ರಗಳನ್ನು ವಹಿಸುವರು. ಅಲ್ಲದೆ ಶ್ರೀ ಎಸ್. ಎಸ್. ಕಿಲ್ಲೆಯವರು ಯಕ್ಷಗಾನ ಕಲೆಯ ಕುರಿತು ಭಾಷಣಮಾಡಲಿರುವರು. ತಾ. ೫ ಮತ್ತು ೬ನೇ ದಿವಸ, ಸೋಮವಾರಗಳಲ್ಲಿ ಬೇರೆ ಎರಡು ನಾಟಕಗಳನ್ನು ಕೂಡಾ ಆಡಲಿರುವರು. ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮುಂದಿನ ಜಿಲ್ಲಾ ಬೋರ್ಡ್ ಚುನಾವಣೆಯ ವೋಟರುಗಳ ಪಟ್ಟಿಯನ್ನು ತಯಾರಿಸಲು ಎಲ್ಲಾ ತಾಲೂಕುಗಳಿಗೆ ನೇಮಕಹೊಂದಿದ ಚುನಾವಣಾ ಅಧಿಕಾರಿಗಳು ಸಂಚರಿಸಲಿರುವರು. ವೋಟಿನ ಹಕ್ಕುಳ್ಳವರೂ ಗೇಣಿಚೀಟು ಇತ್ಯಾದಿಗಳಿದ್ದವರೂ ತೃಪ್ತಿಕರವಾದ ದಾಖಲೆಯನ್ನು ಈ ಅಧಿಕಾರಿಗಳಿಗೆ ತೋರಿಸಿ ವೋಟಿನ ಅರ್ಹತೆಯನ್ನು ಪಡೆಯಬೇಕೆಂದೂ ಜಿಲ್ಲಾ ಚುನಾವಣಾಧಿಕಾರಿಗಳಾದ ಮಿ॥ ಯು. ಜನಾರ್ಧನ್ ಇವರು ತಿಳಿಸುತ್ತಾರೆ.

ಇಲ್ಲಿಯ ಸೈಂಟ್ ಎಗ್ನಿಸ್ ಕಾಲೇಜಿನಿಂದ ಬಿ. ಎ. ಪರೀಕ್ಷೆಗೆ ಕಳುಹಿಸಲ್ಪಟ್ಟ ೧೯ ಮಂದಿಯಲ್ಲಿ ೧೬ ಮಂದಿಗಳು ಪಾಸ್ ಆಗಿರುವರು. ಇದೇ ಕಾಲೇಜಿನಿಂದ ಇಂಟರ್ ಮಿಡಿಯೆಟಿಗೆ ೨೮ ಮಂದಿಗಳು ಪರೀಕ್ಷೆ ಕೊಟ್ಟಿದ್ದು, ೧೪ ಮಂದಿಗಳು ತೇರ್ಗಡೆಪಟ್ಟಿರುವರೆಂದು ಪ್ರಕಟವಾಗಿದೆ.

ಇಲ್ಲಿಯ ಕೊಂಚಾಡಿ ಬಡಾವಣೆಯ ಬಿರು(?) ಕ್ರಿಶ್ಚನ್ ಓರ್ವ ಸೈಕಲುಸವಾರನು ಅಕಸ್ಮಾತ್ತಾಗಿ ಅಪಘಾತಕ್ಕೆ ತುತ್ತಾಗಿ ಮರಣಪಟ್ಟಿರುವನೆಂದು ತಿಳಿಯುತ್ತೇವೆ.

ಮೆಸರ್ಸ್ ಎಸ್. ಅನಂತಯ್ಯ ಶೆಟ್ಟಿ, ಬಾಳತಟ್ಟು(?) ಕೃಷ್ಣಯ್ಯ ಹೆಗ್ಡೆ ಮತ್ತು ಶ್ರೀಮತಿ ಪಾಂಗಾಳ ಮನೋರಮಾ ಬಾಯಿಯವರು ನಮ್ಮ ಜಿಲ್ಲೆಯ ಎಜ್ಯುಕೇಶನಲ್ ಕೌನ್ಸಿಲಿನ ಮೆಂಬರರಾಗಿ ಚುನಾಯಿತರಾಗಿರುವರು.

ಮಿ॥ ಜೆ. ಎ. ಪಿಂಟೋ, ಬಿ. ಎ. ಬಿ. ಎಲ್., ಇವರು ಮದ್ರಾಸು ಸಿಟಿ ಸಿವಿಲ್ ಕೋರ್ಟಿನ ಕಾಯಂ ಪ್ರಿನ್ಸಿಪಾಲ್ ಜಡ್ಜರಾಗಿ ನೇಮಕಹೊಂದಿರುವರು. ಈ ಮಹನೀಯರು ನಮ್ಮ ಜಿಲ್ಲೆಯವರು.

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಚಾರ್ಮಾಡಿ — ಕಾರ್ಕಳ
ಉಜ್ರೆ (ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ) — ಉಡ್ಪಿ
ಮಂಗಳೂರು — ಕುಂದಾಪುರ
ಪುತ್ತೂರು — ಮೂಡಬಿದ್ರೆ
ಮುಲ್ಕಿ — ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ — ಮೈಸೂರು
ಸಕಲೇಶಪುರ — ಚಿಕ್ಕಮಗಳೂರು
ಮೂಡಗೆರೆ

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೊಯಿಂಟ್ ಮೇನೇಜರರಿಗೆ ಬರೆದು ತಿಳಿಸಿರಿ.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908
Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses

It pays you to represent this Company
Wanted Agents in unrepresented parts

Apply to.—

Messrs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at -	P B 337, Mount Road, Madras	Visveshwarapuram Circle, Bangalore City.	Soumyalayam Puthiyara Calicut	Car Street, Mangalore	Udipi S India	Charni Road, Bombay No 4

ನಿಮಗೆ ತಿಳಿದಿರುವುದೇ?

ಪಿಯಾನೋ ಎಂಬ ವಾಯು ವಾದ್ಯವು ೧೭೧೦ರಲ್ಲಿ ಕಂಡುಹಿಡಿಯಲ್ಪಟ್ಟಿತು ಪಾಶ್ಚಾತ್ಯ ಸಂಗೀತ ಕಛೇರಿಗಳಲ್ಲಿ ಇದಲ್ಲದೆ ಯಾವ ಸಂಗೀತಗಾರನೂ ಹಾಡಲುಶಕ್ತನಾಗುವುದಿಲ್ಲ.

ಇಂಗ್ಲೆಂಡಿನಲ್ಲಿ ಮೊದಲನೇ ಸಲಕ್ಕೆ ಭಂಗಾರದ ನಾಣ್ಯಗಳು ಚಲಾವಣೆಗೆ ಬರಲು ಪ್ರಾರಂಭವಾದುದು ಲನೇ ಚಾರ್ಲ್ಸನ ಕಾಲ ದಲ್ಲಿ ಅಂದರೆ ಸುಮಾರು ೧೬೬೦ರಲ್ಲಿ.

ಪ್ರಪಂಚದಲ್ಲಿ ಇಂದು ೪೦೦೦ ಜಾತಿಯ ಗುಲಾಬಿ ಹೂವುಗಳಿವೆಯಂತೆ.

ಈಸಿಚೇರ್ ಅಥವಾ ಆರಾಮ ಕುರ್ಚಿಯನ್ನು ಮೊದಲನೇ ಸಲಕ್ಕೆ ಉಪಯೋಗಮಾಡಿದ್ದು ಈಜಿಪ್ತದ ಓರ್ವ ರಾಣಿಯು,–೧೩೦೦ನೇ ವರ್ಷದಲ್ಲಿ. ಇಂದಿಗೂ ಆರಾಮುಕುರ್ಚಿಗಳು ಬಹಳವಾಗಿ ಪ್ರಚಾರದಲ್ಲಿದೆ.

ಸನ್ ಫ್ಲವರ್ ಅಥವಾ ಸೂರ್ಯಕಾಂತಿ ಹೂವುಗಳಿಂದ ಸಕ್ಕರೆ ತಯಾರಿಸಲಾಗುತ್ತದಂತೆ

ಚರಿತ್ರೆಯ ಪ್ರಾರಂಭದಿಂದ ಇಂದಿನವರೆಗೆ ರಾಜರೂ ಚಕ್ರವರ್ತಿಗಳೂ ಎನಿಸಿದ ೨೬೦೦ ಮಂದಿಗಳಲ್ಲಿ ೭೭ ಮಂದಿಗಳು ಸಿಂಹಾಸನ ತ್ಯಾಗಮಾಡಿರುವರು ಆಧುನಿಕವಾದ ಈ ಕಾಲದಲ್ಲಂತೂ ಕಳೆದ ೨೫ ವರ್ಷಗಳೊಳಗೆ ೧೩ ಮಂದಿ ರಾಜರುಗಳು ಸಿಂಹಾಸನತ್ಯಾಗ ಮಾಡಿರುವರು

ಇಂದಿನ ಕನಕ ಬೆಳ್ಳುಳ್ಳಿ ನೀರುಳ್ಳಿಗಳು ತುಂಬಾ ನಿಷೇಧಿಸಲ್ಪಟ್ಟ ಆಹಾರಗಳು ಸನಾತನಿ ವೈಧಿಕರಲ್ಲಂತೂ ಇವುಗಳ ವಾಸನೆಯು ಕೂಡಾ ಬಹಿಷ್ಕೃತವಾಗಿದೆ ಆದರೆ, ವಿಜ್ಞಾನದ ಕೈಯಲ್ಲಿ ಈ ಬೆಳ್ಳುಳ್ಳಿ ನೀರುಳ್ಳಿಗಳ ಮಹಾ ಉಪಯುಕ್ತ ಪದಾರ್ಥಗಳೆಂದುದ್ಘೋಷಿಸಲ್ಪಟ್ಟಿವೆ ಕೆಲಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಶೋಧನೆಗಳಲ್ಲಿ ಮಗ್ನರಾಗಿದ್ದ ವಿಜ್ಞಾನಿಗಳು ಬೆಳ್ಳುಳ್ಳಿ ನೀರುಳ್ಳಿಗಳಲ್ಲಿ ರೋಗ ಕ್ರಿಮಿಗಳನ್ನು ನಾಶಮಾಡುವ ಶಕ್ತಿಯಿದೆ ಎಂದು ಕಂಡುಹಿಡಿದರು.

ತೆಂಗಿನ ಮರವು ಬೆಳೆದಷ್ಟಕ್ಕೆ ಅದರ ಕಾಂಡದಲ್ಲಿ ಕಂಕಣಾಕಾರದ ಗುರುಹುಗಳು ಕಾಣಬರುತ್ತಿವೆ ಅದೇ ಪ್ರಕಾರ ಮನುಷ್ಯನ ಹಲ್ಲುಗಳು ಕೂಡಾ ಬೆಳೆದಷ್ಟಕ್ಕೆ ವರ್ತುಲಾಕಾರದ ಈ ಗುರುಹುಗಳನ್ನು ತೋರಿಸುತ್ತವೆಂದು ಡಾ। ಇಸಾಕ್ ಶೋವರ್ ಎಂಬ ಪ್ರಖ್ಯಾತ ದಂತ ಶಾಸ್ತ್ರಜ್ಞರು ತಿಳಿಸುತ್ತಾರೆ ಹಲ್ಲಿನಲ್ಲಿ ಕಾಣಸಿಗುವ ಈ ಗುರುಹುಗಳಿಂದ ಮನುಷ್ಯನ ಪ್ರಾಯವನ್ನು ಕಂಡುಹಿಡಿಯಬಹುದಂತೆ

ಮುಖದಲ್ಲಿ ಮಡಿಕೆ ಅಥವಾ ಮುದ್ದಣಗಳ ಬೀಳುವುದು ತರುಣ ಪ್ರಾಯದಲ್ಲಿ ಸ್ವಾಭಾವಿಕವು ಮುಖದ ಸ್ನಾಯುಗಳು ಒಂದು ತರದ ಬಹಳ ಮೃದು ಪ್ರಕೃತಿಯವಿರುವುವು ಅಲ್ಲದೆ ಈ ಸ್ನಾಯುಗಳ ಮೇಲೆ ಪಸರಿಸಿರುವ ರಕ್ತನಾಳಗಳಲ್ಲಿ ರಕ್ತವನ್ನು ಹಿಂದಕ್ಕೆ ಚಲಿಸದಂತೆ ತಡೆಯುವ ಪರೆಗಳಿಲ್ಲವಾದುದರಿಂದ ರಕ್ತವು ಸ್ವೇಚ್ಛೆಯಾದ ದಿಕ್ಕುಗಳಲ್ಲಿ ಚಲಿಸುವುದರಿಂದಲೂ, ಮುಖದ ಮೇಲೆ ಏನಾದರೊಂದು ಘಾಯವಾದರೆ ಅದು ಬಹು ಬೇಗನೆ ವಿಷಪ್ರಾಯವಾಗಿ ಮಾರ್ಪಡುವುದು ಇದಕ್ಕಾಗಿಯೇ ಮಡಿಕೆ ಮುದ್ದಣಗಳನ್ನು ನೋಯಿಸಬಾರದೆಂದು ಎಚ್ಚರಿಸುವುದು ಮುಖದ ಮೇಲಾಗುವ ಈ ಮುದ್ದಣಗಳನ್ನು ಮುಟ್ಟದೆ ಬಿಟ್ಟಲ್ಲಿ ಅವುಗಳು ತಾನಾಗಿಯೇ ನಿಂತುಹೋಗುವುವೆಂದು ನ್ಯೂಯಾರ್ಕಿನ ಪ್ರಖ್ಯಾತ ವೈದಜ್ಞರಾದ ಡಾ। ಜರಾಲ್ಡ್ ಹಿಲೆಂಪ್ರೆಟ್ ಇವರು ತಿಳಿಸುತ್ತಾರೆ

ಹಿಂದೂಧರ್ಮದ ದುರಾದೃಷ್ಟ.

ನಮ್ಮ ಮಾದರೀ ಮೈಸೂರು ಸಂಸ್ಥಾನವು 'ರಾಮರಾಜ್ಯ'ವೆಂದು ಕರೆಯಲ್ಪಡುತ್ತಿರುವುದೂ 'ರಾಜರ್ಷಿ' ಬಿರುದಾಂಕಿತರಿಂದ ಆಳಲ್ಪಡುತ್ತಿರುವುದು ಜನಜನಿತವಾದ ವಿಚಾರವಷ್ಟೆ. ಈ ಸಂಸ್ಥಾನದಲ್ಲಿ 'ಪ್ರಜಾಪ್ರತಿನಿಧಿ ಸಭೆ', 'ನ್ಯಾಯ ಶಾಸನ ಸಭೆ' ಎಂಬೀ ಎರಡು ಸಭೆಗಳಿರುವುದೂ, ನಮ್ಮ ದೇಶದಲ್ಲಿಯ ಅನೇಕ ನಾಯಕರು ಉಮೇದ್ವಾರಿಕೆಯಿಂದ ನಿಂತು ಸದಸ್ಯರುಗಳಾಗಿ ಚುನಾಯಿಸಲ್ಪಟ್ಟು ತನ್ಮೂಲಕ ಅನೇಕ ಸತ್ಕಾರ್ಯಗಳನ್ನು ಮಾಡುತ್ತಿರುವುದು ಸರಿಯಷ್ಟೆ ಇವುಗಳನ್ನು ಎಷ್ಟು ಶ್ಲಾಘಿಸಿದರೂ ತೀರದು. ಅಲ್ಲದೆ ನಮ್ಮ ಸಂಸ್ಥಾನದಲ್ಲಿ ಉಂಟಾಗಿರತಕ್ಕ ಪರಿವರ್ತನೆಗಳನ್ನಂತೂ ವಿವರಿಸಲೇ ಬೇಕಾಗಿಲ್ಲ ಎಷ್ಟು ಪರಿವರ್ತಗಗಳೂ ರಾಜಶಾಸನಗಳೂ ಘನಸರಕಾರದ ಬಂಧೋಬಸ್ತುಗಳೂ ಇರುವಾಗ್ಯೂ, ಆಗಿಂದಾಗ್ಗೆ ನಮ್ಮ ಮೈಸೂರು ದೇಶದಲ್ಲಿ ಸಂಭವಿಸುತ್ತಿರುವ ಕೆಲ ಮತಾಂತರದ ವಿಷಯಗಳು ನಮ್ಮ ದೇಶದ ಅನೇಕ ಕಡೆಗಳಲ್ಲಿ ಅಯಾಯ ಧರ್ಮಗಳ ಮೇಲೆ ಧಾಳಿಯಿದ್ದು, ಧರ್ಮಗಳಿಗೆ ಲೋಪ ಬರುತ್ತಿರುವುದ ನಮ್ಮ ದೇಶದ ಪ್ರಜಾವರ್ಗದವರಿಗೂ ಮ ಪಿ ಮರಿಗೂ ಘನ ಸರಕಾರದವರಿಗೂ, ಅಧಿಕಾರಿಗಳಿಗೂ ತಿಳಿದ ಬರುವಂತೆ ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದ್ದರೂ ಆ ಬಗ್ಗೆ ಮತಧರ್ಮಗಳ ಸಂರಕ್ಷಣಾರ್ಥವಾಗಿ ಯಾವ ವಿಧವಾದ ನಿಬಂಧನೆಗಳೂ ಏರ್ಪಡಿಸಲ್ಪಡದೇ ಇರುವುದು ನಮ್ಮ ಮತಧರ್ಮಗಳ ದುರಾದೃಷ್ಟವೇ ಅಲ್ಲವೇ?

ಯಾವ ರಾಷ್ಟ್ರ ಮಹಾಸಭೆಯು ದೇಶದ ಸ್ವಾತಂತ್ರ್ಯದ ಬಗ್ಗೆ ಯಾವ 'ಹಿಂದೂ ಮುಸಲ್ಮಾನ'ರ ಐಕ್ಯಮತ್ಯತೆ, ಸೌಹಾದ್ರತೆಗಾಗಿ ಹೆಣಗಾಡುತ್ತಲಿದೆಯೋ, ಅದೇ ಈ ಮೈಸೂರು ಸಂಸ್ಥಾನದಲ್ಲಿ ಕಳೆದ ಸುಮಾರು ವರ್ಷಗಳಿಂದೀಚೆಗೆ ಪದೇ ಪದೇ ಹಿಂದೂ ಮುಸಲ್ಮಾನರ ಗಲಭೆಗಳೂ ಹೆಚ್ಚುತ್ತಿದೆಯಲ್ಲದೆ, ಅಬಲೆಯರಾದ ಹಿಂದೂ ಯುವತಿಯರ ಮೇಲೆ ನಡೆಸುತ್ತಿರುವ ಅತ್ಯಾಚಾರಗಳು ಅಸಹನೀಯವಾಗಿವೆ ಎಂಬ ವಿಷಯಗಳು ನಮ್ಮ ದೇಶದ ಮೇಲ್ಕಂಡ ಸಭೆಗಳ ಸದಸ್ಯ ಮಹನೀಯರುಗಳ ಗಮನಕ್ಕೆ ಬಂದಾಗ್ಯೂ ಘನ ಸರಕಾರದಲ್ಲಿ ತಮಗಿರುವ ಅವಕಾಶವನ್ನು ಮೇಲ್ಕಂಡ ವಿಚಾರದಲ್ಲಿಯೂ ಹಿಂದೂ ಸಮಾಜದ ಮೇಲೆ ಮುಸಲರೇ ಆಗಲಿ, ಕ್ರೈಸ್ತರೇ ಆಗಲೀ ಅಥವಾ ಇನ್ನಿತರರ ನಡೆಸುತ್ತಿರುವ ಅತ್ಯಾಚಾರವನ್ನು ಖಂಡಿಸಿ, ಹಿಂದೂ ಯುವತಿಯರನ್ನು ಮತಾಂತರಗೊಳಿಸಲು ಅವಕಾಶವಿರದಂತೆ ಘನ ಸರ್ಕಾರದಲ್ಲಿ ಒಂದು ಕಠಿಣವಾದ ರಾಜಶಾಸನವೂ ಹೊರಡಿಸಲ್ಪಡುವಂತೆ ಪ ಯ ತ್ನಿಸದೇ ಇರುವ ಅಂಶವನ್ನು ತಿಳಿಸಲು ಬಹಳ ವಿಶಾದವೆನಿಸುತ್ತದೆ ಈ ನಮ್ಮ ಮತಧರ್ಮಗಳ ಸಂರಕ್ಷಣಾರ್ಥವಾಗಿ ಯಾವ ಪಿಬಂಧನೆಗಳೂ ಏರ್ಪಡಿಸಲ್ಪಡದೇ ಇರುವ ಲೋಪಗಳ ನಮ್ಮನ್ನಾಳುವ ಘನ ಸರ್ಕಾರದ ಪರದೆಯೇ ಇಲ್ಲವೇ ಸಂಸ್ಥಾನದ ಅಧಿಕಾರಿಗಳದ್ದೋ ಇಲ್ಲವೇ ಬಿರುದ ಸದಕಾಗಿಗಳಿಗೆ ಆಶೆದಾದ ತಾ ತಮ್ಮ ಸ್ವಾರ್ಥ ಸ ಖಲೋಲಪಗಳನ್ನೆಣಿಸುವ ಸದಸ್ಯರುಗಳ ಲೋಪವೋ? ಇಲ್ಲವೇ, ಪ್ರಜಾ ಹಕ್ಕು ಬಾಧ್ಯತೆಗಳನ್ನು ಕಳೆಕೊಂಡು ಪಶುಗಳೋಪಾದಿಯಲ್ಲಿರುವ ನಮ್ಮ ಪ್ರಜಾವರ್ಗದವರ ಲೋಪವೋ? ಯಾವುದೂ ತಿಳಿಯಲು ಶಕ್ಯವಿಲ್ಲ

ವಿಚಾರಗಳು ಹೇಗೂ ಇರಲಿ ಇನ್ನಾದರೂ ಘನಕೀರ್ತಿಯ ಕಡೆ ಗಮನ ಕೊಟ್ಟು ನಮ್ಮ ಪ್ರತಿನಿಧಿಗಳಾದ ಸದಸ್ಯರು ಮತಧರ್ಮಗಳಿಗೆ ಯಾವ ಲೋಪವೂ ಬಾರದಂತೆ ಒಂದು ರಾಜಶಾಸನವನ್ನು ಘನ ಸರಕಾರದವರಿಂದ ಹೊರಡಿಸುವಂತೆ ಒಮ್ಮನಸ್ಸಿನಿಂದ ಪ್ರಯತ್ನಿಸಿ ದೇಶದ ಒಳಗೆಯಲ್ಲಿ ಶಾಂತಿ, ಐಕ್ಯಮತ್ಯ, ಭ್ರಾತೃ ವಾತ್ಸಲ್ಯ ಇವು ಚಿರಾಯುವಾಗಿರುವಂತೆ ಪ ಯತ್ನಿಸಿ, ಧರ್ಮಪರಿಪಾಲನೆಯ ಸಹಾಯಕರಾಗಿದ್ದು ಪ್ರಜೆಗಳ ಕುಂದುಕೊರತೆಗಳನ್ನು ಪರಿಹರಿಸಿ ಕೀರ್ತಿಯನ್ನು ಪಡೆಯಬೇಕೆಂದು ಪ್ರಾರ್ಥನೆ

'ಪ್ರಜಾಹಿತೈಷಿ'

ಅವಿಧೇಯ ಹಿಂದೀಯ ಹಾವು!

ಬ್ರಿಟಿಷ ಡೊಂಬನ ಹಾಡಿಗೆ ಇನ್ನು ಎಂದೂ ಕುಣಿಯದು.

ಜರ್ಮನಾ ದೃಷ್ಟಿಕೋನದಿಂದ ಭಾರತದ ಈಗಿನ ಪರಿಸ್ಥಿತಿಯನ್ನು ನಿರೂಪಿಸುವ ಒಂದು ವ್ಯಂಗ ಚಿತ್ರ.

ವಾಯು ಮಂಡಲದಲ್ಲಿ ಬಹು ಮೇಲಕ್ಕೆ ಹಾರಿ ಅಲ್ಲಿನ ವಾತಾವರಣದ ಕೌತುಕಗಳನ್ನು ಜಗತ್ತಿಗೆ ಸಾರಿದ ವಿಯನ್ನದ ಪ್ರೊ। ಪಿಕಾರ್ಡರವರು ಪುನ ಮತ್ತೊಂದ ಸಾರಿ ವಾಯುವ ಎತ್ತರವನ್ನು ಪ್ರವೇಶಿಸಲು ಯೋಜನೆ ಮಾಡಿ, ಅದಕ್ಕಾಗಿ ೬೦ ಸಾವಿರ ಡಾಲ್ಲರುಗಳು ಬೇಕೆಂದು ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿರುವರು ಆದರೆ ಧೂಮ್ರಪಾನದ ಸಾಮಗ್ರಿಗಳನ್ನು ತಯಾರಿಸ ಪವರೇದಲೂ ಮತ್ತು ಮಧ್ಯಪಾನಗಳನ್ನು ತಯಾರಿಸುವವರಿಂದಲೂ ತಾನು ಹಣವನ್ನು ತೆಗೆದುಕೊಳ್ಳಲಾರೆನು' ಎಂದು ಅವರು ಪ್ರಕಟಿಸಿರುವರು

° ° °

ಸಾಧಾರಣ ೪ ಇಂಜಿನುಗಳ ವಿಮಾನಗಳಲ್ಲಿ ಘಂಟೆಗೆ ೬೦೦ ಮೈಲುಗಳ ವೇಗವನ್ನು ಪಡೆಯಬಹುದಂತೆ ಎಂಜಿನಿನ ಶಕ್ತಿಯನ್ನು ಹೆಚ್ಚಿಸಿ, ಧೈರ್ಯವಂತರಾದ ಚಾಲಕರಿದ್ದಲ್ಲಿ ಒಂದು ಸಾವಿರ ಮೈಲುಗಳ ವೇಗದಲ್ಲಿ ವಿಮಾನವನ್ನು ಚಲಿಸಬಹುದೆಂದೂ, ೬೧೦೦೦ ಅಡಿಗಳ ಎತ್ತರಗಳ ದಾಖಲೆಯನ್ನು ಮಾಡಬಹುದೆಂದೂ ರಾಯಲ್ ಏರೊ ನೋಟಿಕಲ್ ಸೊಸೈಟಿಯ ಅಧ್ಯಕ್ಷರಾದ ಮಿ। ವಿಂಪೆರಿಸ್ ಎಂಬವರು ಅಭಿಪ್ರಾಯಪಡುತ್ತಾರೆ

° ° °

ಗಿಡುಗ, ಹದ್ದುಗಳ ಕಣ್ಣುಗಳು ಅವುಗಳ ಮಿದುಳಿಗಿಂತ ಎರಡರಷ್ಟು ಭಾರವಿದೆಯಂತೆ

TEST YOUR EYES

By the Electro Ophthalmoscope





All Varieties of Frames & Lenses.

At

The Mangalore Trading Association Ltd.

Sight Testing Ophthalmic Opticians,

Car Street, MANGALORE.

ಲೋಧ್ರ

ಸ್ತ್ರೀಯರ ಸಮಸ್ತವಾದ ರೋಗಗಳಿಗೂ ವ್ಯಾಧಿಗಳಿಗೂ ದಿವ್ಯೌಷಧ.

ತಯಾರಿಸುವವರು:

ಕೇಸರಿ ಕುಟೀರಂ

ಎಗ್ಮೋರ್ ಮದ್ರಾಸು.

ಮಂಗಳೂರು ಪ್ರವರ್ತಕರು

ದಿ ಪೊಪ್ಯುಲರ್ ಸ್ಟೋರ್ಸ್

ರಥಬೀದಿ, ಮಂಗಳೂರು.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟ.

ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಬಹಳ ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ

CITY BISCUIT WORKS,

Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದೀಯ ಸಮಾಜ, ಪೆಂಡೇಪಿ.

P O Pendepi (ನೆಲ್ಲೂರು ಡಿ.)

'Dil Roz' (Regd)

'Dil Roz' is a sure cure for Oriental sores local sores, all kinds of deep-rooted sores skin eruptions, Pimples, Eczema, Ringworm, Sinus, Fistula auxillary-Abscess.

There is no need of dressing the wounds nor are baths prohibited.

Price Rs. 2-

Postage extra

TAHIR DIN,

Anarkali, LAHORE.

BEHAR CHEMICAL WORKS, BHAGALPUR.

ಗೊನೊಕ್ಯೂರು.

ಕೆಟ್ಟ ಚಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ದಿವ್ಯೌಷಧವಾಗಿದೆ. ಒಂದೇ ದಿನದ ಔಷಧಿ ಉಪಯೋಗದಿಂದ ಗುಣ ಕಂಡು ಬರುವುದು. ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು.

ಇದರ ಗೊಣ–ಧಾತು ದಪ್ಪವಿದ್ದು ಹಳದಿ ಬಣ್ಣವಾಗಿ ಹೋಗುವುದು. ಶಕ್ತಿಗ್ರಂಥಿಗಳ ಸಂಬಂಧವಾಗಿ ಅತೀಯಾದ ಗುಳ್ಳೆಗಳು ಏಳೋಣ, ಮೂತ್ರವಾಗುವಾಗ್ಯೆ ಉರಿಯುವುದು, ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧಿ. ಸೀಸೆ 1ಕ್ಕೆ ರೂ 2—0—0.

ವ್ಯಾಟ್ಯಾಲಿಟಿ ಪಿಲ್ಸ್.

ವಿದ್ಯಾರ್ಥಿಗಳಿಗೂ, ಪೆಟ್ಟಿಗೆ ಮುದುಕರ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ. ವಿದ್ಯಾರ್ಥಿಗಳು ತಮ್ಮ ಓದು ವಿಕೆಯಲ್ಲಿಯೇ ಆಸಕ್ತರಾಗಿದ್ದು, ವ್ಯಾಯಾಮವನ್ನು ತೆಗದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಕರ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು, ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ. ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ. ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಚಟುಕ್ತ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ. 2-0-0.

ಏಜೆಂಟರು:— ಷಾ ಕರಪಸಿ, ಗವರ್ನಮೆಂಟ್ ಕೊಲೇಜ್ ಎದುರು ಮಂಗಳೂರು.

"An ideal young progressive Life Office of India to Insure with or represent"

The Commonwealth Assurance Co., LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to—

Messrs. GAWANKAR & SONS,

Chief Agents for Mysore state, Coorg, Ceded Districts & S. Kanara

AHMED BUILDINGS, CHICKPET, BANGALORE CITY.

Branches: — Bombay, Calcutta, Delhi, Madras & Nagpur.

Local Representatives:—THE MODERN TRADING CO., Mangalore.

ಸೂತಿಕಾವಾಯು ಅಪಸ್ಮಾರ,

10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ ಕೂಗು, ಹೊರಳಾಟ ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ಮಾಯವಾಗುತ್ತದೆ ಮತ್ತು ರೋಗಿಯು ಶಾಂತಿಯನ್ನೂ ತೃಪ್ತಿಯನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2-0-0 ಮತ್ತು 30 ದಿನಗಳ ಔಷಧಿಗೆ ರೂ. 5. ಪೋಸ್ಟೇಜು ಅಲಾಯಿದಾ

C. L. Namawala,

Palace Road, BARODA.

Buy Advertised Goods

(ಹಿಂದಿನ ಪುಟದಿಂದ ಮುಂದುವರಿದುದು)

[illegible]ಯುತ್ತಿರುವಂತೆ ಭಾಸವಾಯಿತು. ತಲೆ[illegible]ನ್ನು ಮೇಲಕ್ಕೆತ್ತಿದಳು; ಅವಳ ಮನೋ[illegible]ದಲ್ಲಿ ಕಂಡ ಆ ಯುವಕನು ಇನ್ನಾರಾಗಿರದೆ [illegible]ವಾಗಿ ಬಿದ್ದ ಪರಾಣನದೇ ಆಗಿತ್ತು. [illegible]ಂದು ಕ್ಷಣಕ್ಕೆ ಅವಳು ಚೀರಿದಳು. ಆದರೆ [illegible]ದನ್ನು ಯಾರೂ ಕೇಳಲಿಲ್ಲ. ತಾಯಿಯೂ, [illegible]ಜ್ಜಿಯೂ ಹೊರಗಿನ ಗಲಿಬಿಲಿಯಲ್ಲಿ ಮುಳು[illegible]ದ್ದರು. ಅಷ್ಟರೊಳಗೆ ತಾಯಿಯು ಮನೆಯೊ[illegible]ಗೆ ಓಡಿಬಂದಳು. 'ಏನಂದ್ರೆ, ಆನೆಗಳನ್ನು [illegible]ಂದರೂ, ಅವುಗಳಿಂದ ಕೂಡಾ, ಆ ಹಾಳು [illegible]ರಾಣನ ಹೆಣವನ್ನು ಎತ್ತಲು ಸಾಧ್ಯವಾಗಲಿ[illegible]ವೆಂದಮೇಲೆ—ಏನೊ ಗೌಡಬಂಗಾಳಿ ಇರ[illegible]ಕು' ಎಂದು ಗುಲ್ಲೆಬ್ಬಿಸಿದಳು ಸೀತೆಯು [illegible]ರಳಿದ ಕಣ್ಣುಗಳಿಂದ ತಾಯಿಯ ಬಳಿಗೆ ಓಡಿ[illegible]ಳು. 'ಸೀತಾ ಸೀತಾ, ಇವತ್ತು ಅಡಿಗೆ [illegible]ಡ ನಿನ್ನ ತಂದೆಯವರಿಗೆ ದೇವಸ್ಥಾನ ಪರಿ[illegible]ದ್ದಗೊಳಿಸದೆ ಬರಲು ಸಾಧ್ಯವಿಲ್ಲ. ಹೆಣ[illegible]ವನ್ನು ತೆಗೆಯಲು ಬ್ರಹ್ಮನೆ ಬರಬೇಕನೊ ಅಂತ[illegible] ಅವಸ್ಥೆ' ಎಂದು ತಾಯಿಯು ಸೀತೆಗೆ ಅಪ್ಪಣೆ [illegible]ಟ್ಟಳು 'ಅಯ್ಯೊ, ನಮ್ಮ ಬಡ ಸಂಸಾ[illegible]ವು ಯಾರದೋ ಶಾಪಕ್ಕೆ ಒಳಗಾಗಿರಬೇಕು [illegible]ಲ್ಲವೆ ನನ್ನ ಮಗನ ಜವಾಬುದಾರಿಯಲ್ಲಿರುವ [illegible]ವಸ್ಥಾನದಲ್ಲಿಯೇ ಇಂತಹ ಅವಸ್ಥೆ ಒದಗ[illegible]ಕೆ?' ಎಂದು ಅಜ್ಜಿ ಗೋಳಿಟ್ಟಳು

ಸೀತೆಯು ಇವ್ಯಾವುದಕ್ಕೂ ಕಿವಿಗೊಡಲಿಲ್ಲ [illegible]ಣೆಯಲ್ಲಿ ಕೂತಿದ್ದ ಹಾಗೆ ಯಾವುದೋ [illegible]ಂದೇ ಒಂದು ದಿವ್ಯ ವಾಣಿಯು ಅವಳಿಗೆ [illegible]ಳುತ್ತಿತ್ತು 'ನೀನೊಬ್ಬಳೇ ಆ ಶಾಪದಿಂದ [illegible]ಕ್ತಗೊಳಿಸಬಲ್ಲೆ ಹೋಗು ನಿನ್ನ ಕೈಯ[illegible]ನ್ನು ಪರಾಣನ ಹೆಣದ ಭುಜದ ಮೇಲೆ ಇಡು, [illegible]ಗ ಅದನ್ನು ಎತ್ತಬರುವುದು' ನಿನ್ನ ಪರಾಣ [illegible]ಯಾವ ಪರಾಣ ಹೌದು ನನ್ನ ಪರಾಣ ನನ್ನ ಹೃದಯದಲ್ಲಿ ಸ್ಥಾನವನ್ನು ಪಡೆದ ಪರಾಣ [illegible]ವನು [illegible]ಸಲ್ಮಾನನೆ ಹೌದು ಅವನು [illegible]ಸಲ್ಮಾನನು ಆದರೆ ಅವನ ಹೃದಯ ಮಾತ್ರ [illegible]ನವ ಹೃದಯ ಹೌದು ದೇಹವಲ್ಲ ಹೃದಯ [illegible]ದವಳೇ ಸೀತೆಯು ತನ್ನ ನಿರ್ಧಾರವನ್ನು [illegible]ಪಡಿಸಿದಳು. ಧೈರ್ಯವಾಗಿ ಎದ್ದಳು ತಾಯಿ[illegible]ಡನೆ ತನ್ನ ಮನೋಗತವನ್ನು ದಿವ್ಯ ಪ್ರೇರ[illegible]ಣೆಯನ್ನು ತಿಳಿಸಿದಳ ಮೊದಲೇ ಸಮಯ [illegible]ಯುತ್ತಿದ್ದ ತಾಯಿಯು ಸೀತೆಯನ್ನು ಶಪಿಸಿ[illegible]ದಳು ಹೆದರಿಸಿದಳು ಗದರಿಸಿದಳು ಅಷ್ಟರಲ್ಲಿ [illegible] ಸ್ತ್ರೀಗಳು ಬಂದರು 'ಏನಿದು—ಹೊರಗೆ ನೆಗೆ[illegible] ಪರಿಗಳಿಲ್ಲವಂದೇ ನಾಸೀ ನಿಮ್ಮ ಗಲಾಟೆ[illegible]ನ್ನ ಕೇಳಿಕೊಂಡಿರಬೇಕೆನ್ನುವಿರಾ' ಎಂದು [illegible] ಮಗಳನ್ನು ಗದರಿಸಿದರು ಮೆಲ್ಲನೆ ಸೀತೆಯು ತಂದೆಯ ಚರಣ ಕಮಲಗಳಿಗೆರಗಿ[illegible]ದಳು

ಅಪ್ಪಾ, ದೈವಪ್ರೇರಣೆಯಿಂದ ಒಂದು [illegible]ವನ್ನು [illegible]ರ್ವಹಿಸಬಹುದಲ್ಲವೆ?'' [illegible]ಂದು ಕೇಳಿದಳು ಅವಳ ನಮ್ರತೆಯು ಶಾಸ್ತ್ರಿಗಳ ಸಿಟ್ಟನ್ನು ತಣ್ಣಗೆ ಮಾಡಿತು. ''ಮಗು ದೈವಪ್ರೇರಣೆಯ ಕಾರ್ಯಗಳನ್ನು ಅಡ್ಡಿಯಿಲ್ಲದೆ ಮಾಡಬಹುದು. ಆದರೆ ಈ ವಿಚಾರದಲ್ಲಿ ಮಾತ್ರ—ಶಾಸ್ತ್ರಿಗಳು ಮುಂದೆ ಮಾತಾಡದಾ[illegible] ಅಜ್ಜಿ[illegible] ನಡುವೆ ಬಂದು ''ಮಗನೇ [illegible]ವಾಣಿಯನ್ನು ತಿರಸ್ಕರಿಸುವುದು ಒಳಿತಲ್ಲ'' [illegible]ಂದು ಶಾಸ್ತ್ರಿಗಳನ್ನು ಎಚ್ಚರಿಸಿದಳು ಕೂಡಲೇ [illegible]ಯಾಯಿತು ಶವದೆಡೆಗೆ ಸೀತೆಯನ್ನು [illegible]ತೊಯ್ಯುವ ಏರ್ಪಾಡುಗಳಾದವು ನೆರೆ ದವರೆಲ್ಲರೂ ಸಾಲಾಗಿ, ಮಧ್ಯ ದಾರಿ ಬಿಟ್ಟು ನಿಂತರು.

ಸೀತೆಯು ತಾಯಿಯ ರೇಗಿದಳು ''ಏನು [illegible]ಮರ್ಯಾದೆ ಇದು ಅವಳು ಶವದೆಡೆಗೆ ಹೋಗುವುದಾದರೆ, ಹಳೆ ಬಟ್ಟೆಗಳನ್ನುಟ್ಟು [illegible]ಬೇಕು'' ಎಂದಳು ಆಗ ಅಜ್ಜಿಯು ''ಅವಳು ಹೋಗುವವಳು ಹಿಂದಕ್ಕೆ ಬರುವ [illegible] ಹೇಗೆ ಹೇಳಲಿಕ್ಕಾಗುತ್ತದೆ ಅವಳ ಒಳ್ಳೆ ವಸ್ತ್ರಾಭರಣಗಳನ್ನೆ ಉಟ್ಟುಕೊಳ್ಳಲಿ'' [illegible]ಂದಳು

ಶೃಂಗಾರದಿಂದಲಂಕೃತಳಾದ ಸೀತೆಯು ದೇವಸ್ಥಾನದ ಬಾಗಿಲಿಗೆ ಮುಟ್ಟಿದೊಡನೆ, ಸರ್ವ ಜನತೆಯು ಗಂಭೀರ ಮೌನವನ್ನು ತಾಳಿದ್ದಿತು. ಶವವಿರುವ ಸ್ಥಳಕ್ಕೆ ಸೀತೆಯನ್ನು ಕರೆತಂದರು ಸೀತೆಯು ನೋಡಿದಳು—ಅದೇ ವ್ಯಕ್ತಿ, ಅದೇ ಗಂಭೀರ ಆಕಾರ, ಅದೇ ದೃಷ್ಟಿ [illegible], ಆ ದೃಷ್ಟಿಯ [illegible]ಇಲ್ಲ, ಆ ಜೀವವೂ ಇಲ್ಲ ಈಗ

ಕ್ಲಾಡೆಟ್ ಕಾಲ್‌ಬರ್ಟ್

ಚಲನಚಿತ್ರದಲ್ಲಿ ಸೌಂದರ್ಯವತಿಯಾಗಿರುವುದಲ್ಲದೆ ಸ್ವತಃ ಅಸಮಾನವಾದ ಸುಂದರಿಯಾಗಿದ್ದಾಳೆ.

ಕ್ಲಾಡೆಟ್ ತನ್ನ ಮನಃಪೂರ್ವಕವಾದ ಅಭಿನಂದನೆಗಳನು [illegible] ತನ್ನ [illegible]ಂದರ್ಯವನು [illegible] ಲಕ್ಸ್ ಟಾಯಿಲೆಟ್ ಸಾಬೂನಿಗೆ ಕೊಡುತ್ತಾಳೆ ಅವಳು ಹೇಳುವುದೇನಂದರೆ ಲಕ್ಸ್ ಟಾಯಿಲೆಟ್ ಸಾಬೂನು ನನ ಚರ್ಮವನ್ನು ಚೊಕ್ಕಟವಾಗಿಯೂ ಮೃದುವಾಗಿಯೂ ಮತ್ತು ಯೌವನಪೂರ್ಣವಾಗಿಯೂ [illegible] ಇಡುತ್ತದೆ ಎಂಬುದನ್ನು ನಾನು [illegible] ಹಿಡಿದಿರುತ್ತೇನೆ

ನೀವು ಏತಕ್ಕೆ ಅವಳ ಮೇಲ್ಪಂಕ್ತಿಯನ್ನನುಸರಿಸಬಾರದು? ನೀವು ಸಾಬೂನಿನ ಮೃದುವಾದ ನೊರೆಯನ್ನು ಪ್ರೀತಿಸುತ್ತೀರಿ ಅದು [illegible] ಪರಿಶುದ್ಧವಾದ ಪದಾರ್ಥಗಳಿಂದ ಕೂಡಿದ್ದು ಎಂಬುದಕ್ಕೆ ಗುರುತು ನೀವು ಅದರ ಆನಂದಕರವಾದ ಸುವಾಸನೆಯನ್ನು ಸಹಾ ಅಪೇಕ್ಷಿಸುತ್ತೀರಿ ಮತ್ತು ನಿಮ್ಮ ಚರ್ಮವನ್ನು ಮೃದುವಾಗಿಯೂ ಚೊಕ್ಕಟವಾಗಿಯೂ ಇರುವಂತೆ ಇಡುವುದು ಒಳ್ಳೆಯದು

ನಿಮ್ಮ ಚರ್ಮವು ಮುದುಕರ ಚರ್ಮದಂತಿರಲು ಅವಕಾಶಕೊಡಬೇಡಿ ಲಕ್ಸ್ ಟಾಯಿಲೆಟ್ ಸಾಬೂನಿನಿಂದ ಯೌವನವನ್ನು ಕಾಪಾಡಿಕೊಳ್ಳಿರಿ

ಲಕ್ಸ್ ಟಾಯಿಲೆಟ್ ಸಾಬೂನು
LUX TOILET SOAP



ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧವಾದ ಎಣ್ಣೆಯಿಂದಲೇ ತಯಾರಿಸಿದ್ದು

L-LTS 488/2 203 KANARESE

LEVER BROTHERS INDIA LIMITED

ಉಚಿತ

ಪ್ರಿಂಟಾದ 9 ಲಕ್ಸ್ ಟಾಯಿಲೆಟ್ ಸೋಪಿನ ದೊಡ್ಡ ಬಿಲ್ಲೆಗಳ ರಾಪ್ಪರುಗಳನ್ನು ಕೂಡಿಸಿ ನಿಮ್ಮ ವ್ಯಾಪಾರಿಗೆ ಕೊಡುತ್ತಲೇ ಆಗ ಅವನು ಲಕ್ಸ್ ಟಾಯಿಲೆಟು ಸೋಪಿನ ಒಂದು ಫುಲ್‌ಸೈಜ್ ಬಿಲ್ಲೆಯನ್ನು ನಿಮಗೆ ಕೊಡುವನು ಈ ಆಶ್ಚರ್ಯಕರವಾದ ಸುಸಂದರ್ಭವನ್ನು ಕಳೆದುಕೊಳ್ಳಬೇಡಿ

K LTS 495/0-35/A KANARESE

ಅದು ಶವ ದೇವರನ್ನು ಸ್ಮರಿಸಿ ಸೀತೆಯು ಪರಾಣನ ಹೆಗಲನ್ನು ಮುಟ್ಟಿದಳು ತಯಾರಾಗಿ ನಿಂತಿದ್ದ ನಾಲ್ವರು ಕೂಡಲೇ ಶವವನ್ನೆತ್ತಿದರು ಶವವು ಸ್ಮಶಾನಭೂಮಿಯ ಕಡೆಗೆ ಸಾಗಿಸಲಾಯಿತು ಸ್ವಲ್ಪ ಕಾಲದ ಮುಂಚೆ ಏನೇನೋ ಅಸಂಬದ್ಧ ಮಾತುಗಳನ್ನಾಡಿಕೊಂಡಿದ್ದ ಹಳ್ಳಿಗರು ಈಗ ಗೊಂಬೆಗಳಂತೆ ಅವಾಕ್ಕಾದರು [illegible] ದಿಂಡಾಳುಗಳಿಂದಾಗಲಿಲ್ಲ ಶಕ್ತಿಯಾನೆಗಳಿಂದಾಗಲಿಲ್ಲ ಕೇವಲ ಓರ್ವ ತರುಣಿಯ ಹಸ್ತಸ್ಪರ್ಶ—ಏನಾಶ್ಚರ್ಯ

ಸೀತೆಗೆ ಸ್ವಲ್ಪ ಸಮಾಧಾನವಾಯಿತು ಅವಳಿಗೆ ಕರ್ತವ್ಯಜ್ಞಾನವಾಯಿತು ''ನನ್ನ ಪತಿದೇವನು ಇವನೆ ಇರಬಹುದು ಲಲಾಟಲೇಖವನ್ನು ಯಾರಿಂದ ತಪ್ಪಿಸಲು ಸಾಧ್ಯವಿರುವುದು'' ಅವಳು ಶವದ ಜೊತೆಗೆ ನಡೆದುಕೊಂಡು ಹೋದಳು ಹೆಗಲ ಮೇಲಿಟ್ಟ ಕೈಯು ಹಾಗೆ ಇತ್ತು. ಅದನ್ನು ತೆಗೆಯ ನೋಡಿದಳು ಅದು ಅಂಟಿಕೊಂಡಂತಿತ್ತು. ಅವಳಿಗೆ ಸ್ವಲ್ಪ ಆಶ್ಚರ್ಯ[illegible]ವಾಯಿತು ಗಟ್ಟಿಯಾಗಿ ಎಳೆದಳು—ಸಾಧ್ಯವಾಗದಾಯಿತು ಯೋಚಿಸಿದಳು—ಸರಿ ಪೂರ್ವಜನ್ಮದ ಪತಿದೇವನನ್ನು ಅಗಲಿ ಎಲ್ಲಿ ಬಾಳುವುದು ನೀನೂ ಅವನನ್ನು ಹಿಂಬಾಲಿಸು'' ಎಂಬ ದಿವ್ಯ ವಾಣಿಯೊಂದು ಅವಳನ್ನು ಪ್ರೇರೇಪಿಸಿತು ರುದ್ರಭೂಮಿಗೆ ಶವವು ತರಲ್ಪಟ್ಟಿತು ಸೀತೆಯೂ ಅಂಟಿಕೊಂಡಿದ್ದ ಕೈಯೊಂದಿಗೆ ಅದರ ಬಳಿ ಇದ್ದಳು

''ಅಜ್ಜಮ್ಮಾ'' ಎಂದು ಸೀತೆ ಕರೆದಳು

''ಏನು ಮಗೂ''

''ನಾನಿನ್ನು ಮನೆಗೆ ಬರಲಾರೆ, ನನ್ನ ಪತಿದೇವನೊಂದಿಗೆ ನಾನೂ ಇರುವೆನು'' ಎಂದಳು ಸೀತೆ

ತಾಯಿಯು ಬೊಬ್ಬಿಟ್ಟಳು ಗೋಳಿಟ್ಟಳು, ಅತ್ತಳು, ಬಡಕೊಂಡಳು—ಸೀತೆಗೆ ಎಲ್ಲವೂ ಶೂನ್ಯ

''ಅವಳ ಹಣೆಯಲ್ಲಿ ಹಾಗೆ ಬರೆದರೆ ಯಾರಿಂದ ತಪ್ಪಿಸಲು ಸಾಧ್ಯ'' ಎಂದು ಅಜ್ಜಿಯು ಶಾಸ್ತ್ರಿಗಳನ್ನು ಸಂತೈಸಿದಳು ಘನಗಂಭೀರವಾದ ಮೌನದಿಂದ ಶಾಸ್ತ್ರಿಗಳು ಮಗಳನ್ನು ನೋಡಿದರು

'ಮಗಳೇ ಸರ್ವ ಮಂಗಳೆ, ನಿನ್ನ ಆತ್ಮಕ್ಕೆ ಪರಮ ಶಾಂತಿಯನ್ನು ಆ ಪರಶಿವನು ಕೊಡಲಿ'' ಎ[illegible] [illegible]ಮನೆಗೆ ಹಿಂತಿರುಗಿದರು

೦ ೦ ೦ ೦ ೦

ವ[illegible]ಪುರದಲ್ಲಿ ಇಂದು ಎರಡು ಗೋರಿಗಳು ಒ[illegible]ದಕ್ಕೆ ತಗಲಿಕೊಂಡು ಮಲಗಿದ್ದಂದು. ಒಂದು ಕಾಲದಲ್ಲಿ ಪರಮ ಪವಿತ್ರವಾದ ಎರಡು ಆತ್ಮಗಳಿಂದ ಕೂಡಿದ ಹಿಂದೂ-ಮುಸಲ್ಮಾನ್ ದೇಹಗಳೆರಡು ವಿಶ್ರಮಿಸಿಕೊಂಡಿದ್ದು, ಈಗ ಯಾವ ಜಾತಿಮತಕ್ಕೂ ಸೇರದ ಅಸ್ಥಿಪಂಜರಗಳು ಆ ಗೋರಿಯಲ್ಲಿರಬಹುದು ಜಾತಿಮತಭೇದವಿಲ್ಲದೆ ಇಂದು ಆ ಹಳ್ಳಿಯವರು ಆ ಗೋರಿಯನ್ನು ಪೂಜಿಸುವರು

ಪದ್ಮ

— —

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು! ಅತೀ ಕಮ್ಮಿದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ, ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು

ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ: ಆಣೆ 8 ಮಾತ್ರ.

Manufactured by:–

J. B Dutt & Co., Calcutta,

Sole agent:–

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು.

ಡೋಂಗರೇ ಇವರ ಬಾಲಾಮೃತ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೇಕೃ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ಸಿಬರಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ –

ಷಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY. MADRAS. CALCUTTA

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು.)

1.	ಅಧಿಕೃತ ಚಂದಾ ಹಾಕಲು ಅರ್ಪಿಸಿದ ಮೂಲಧನ	ರೂ 3,50,000–0–0
2.	ಚಂದಾ ಹಾಕಿ ಎತ್ತಿದ ಮೂಲಧನ	ರೂ. 2,88,950–0–0
3.	ಕ್ಷೇಮನಿಧಿಗಳು	ರೂ. 3,63,578–0–0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು.–ಉಡುಪಿ.

ಬ್ರಾಂಚುಗಳು:—1. ಮದ್ರಾಸು; 2. ವೆಲ್ಲೂರು, 3. ತಲಚೇರಿ; 4. ರಥಬೀದಿ, ಮಂಗಳೂರು, 5. ಬಂದ್ರ, ಮಂಗಳೂರು; 6. ಉಡುಪಿ; 7. ಶಿರ್ವ; 8. ಕುಂದಾಪುರ; 9. ಭೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13 ಮೈಸೂರು, 14 ಮಡಿಕೇರಿ; 15 ವೀರರಾಜೇಂದ್ರಪೇಟೆ.

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು "ಸೇಲಂ"ನಲ್ಲಿ ಶೀಘ್ರದಲ್ಲಿಯೇ ತೆರೆಯೋಣಾಗುವುದು.

10—4—1937

V. R. Kamath, B. A. LL. B
Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by –

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರ ನಮಗೆಲ್ಲರಿಗೂ ಒಂದು ಗೌರವ ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಶಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯ ಎವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುಗುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರ್ತಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು – ಡಾ। ಬಿ. ಎ. ವೈದ್ಯ ಎಲ್ ಸಿ. ಪಿ ಎಸ್ ಕೆಲವಾದಾಟಮು, ಶಾಡೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯು ಕ್ರಯ ರೂ ೪–೦–೦ ವಿ ಪಿ. ಆಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ಕಾಲ ಸೇವಿಸಿದರೆ ಬೇರೆ ಔಷಧ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ. 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕಮಂಗಳೂರ 2. ಶ್ರೀರಾಮ ಸ್ಟೇಶನರಿ ಹೌಸ್ ಶ್ರೀರಾಮಪೇಟೆ, ಕಾಸರಗೋಡು 8 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಾಯಿ 4 ಕೆ ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents: **The Kerala Tea Syndicate,**

PONANI—(S. Malabar.)

Edited, Printed & Published By A. S. Kamath at the Sharada Press, Car Street, Mangalore

ವಾರ್ಷಿಕ ಚಂದಾ ೨ ರೂಪಾಯಿ Regd. No. M. 8406 ಟಪ್ಪಾಲು ಹಾಸಲು ಸೇರಿ ರೂ 2-13-0.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮ ವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲಿನುಪಮ ರತ್ನಗಳ ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಗದೆ ಕೆ ಮುಕ್ತೆ ವಿಶ್ವವ ಸುಡುತ ಬರುತಿರುವ ॥

ಗರಲಕವರಂಜದರೆ ಸ ಧೃವ ನು ಮೃತಕ್ಕುದ್ದರ ತೆರದಿ ಕ ಳತರೆ । ತೆರಳಬಿಲ್ಲರೆ ತೊರಿದು ಧೀರರು ನಿಶ್ಚಿತಾರ್ಥವನ

ಮಂಗಳೂರು ತಾ. ೪ನೇ ಜೂನ್ ೧೯೩೭ (4 6-'37) ಸಂಚಿಕೆ ೨೨

ನಮ್ಮ ಹಳ್ಳಿ ನಾಡಿನ ಒಂದು ಸುಂದರ ದೃಶ್ಯ

Note. ಟಿಪ್ಪಣಿಗಳು.

ಕಾಂಗ್ರೆಸ್ಸಿನ ವಿರುದ್ಧ ಚಳವಳಿ ನಡೆಸಲು, ಬ್ಬರು ಮುಸ್ಲಿಮರಾಜರ್ಗೆ ಹಣ ನ್ನು ದಂತಿಗೆ ಕೊಡುವೆಂಬ ವಾರ್ತೆ ಬಂದಿದೆ. ಸ್ಲಿಮರು ತಾವೂ ಇತರ ಸಮಾಜದವ ಂತೆಯೆ ಹಿಂದೀಯರು ಎಂಬುದನ್ನು ಮರೆ ಂದೆ, ಕಾಂಗ್ರೆಸಿಗೆ ಸೇರುತ್ತಿರುವ ಕಾರಣ, ವರನ್ನು ತಡೆಯಲು ಈ ಹಣದ ವಿನಿಯೋಗ ಾಗುವುದು. ವರಿಣಾಮದಲ್ಲೇನೂ ಇರ ದ್ದರೂ, ಯಾವ್ಯಾವುದಕ್ಕೆಲ್ಲ ವ್ಯಯವಾಗಿ ರ್ಥವಾಗುತ್ತಿದ್ದ ಹಣಗಳು ಚಲಾವಣೆಗೆ ರುವಂತಾಯಿತೆಂಬುದು ಸಂತೋಷಕರ.

o o o o

ಚುನಾವಣೆಗಳ ಕಾಲದಲ್ಲಿ ನಮ್ಮ ಾಂತ್ಯದಲ್ಲಿಯೆ ಸುಮಾರು ಅರ್ಧ ಕೋಟಿ ಪಾಯಿ ವುಡಿಯಾಗಿದ್ದಿತು ಎಷ್ಟೋ ಬಗೆ ುಲ್ಲಿ ಈ ಹಣ ಅಲ್ಲಲ್ಲಿನವರಿಗೆ ದೊರೆದಿತ್ತು ಬ್ಬ ಶ್ರೀಮಂತರು ಇಪ್ಪತ್ತು ಲಕ್ಷದಷ್ಟು ವ್ಯಯಿ ದ್ದರು ಚುನಾವಣೆ ಕಾಲದ ಚಲಾವಣೆ ುಂತೆ, ಮುಸ್ಲಿಮರು ಕಾಂಗ್ರೆಸ್ಸಿಗೆ ಸೇರದಂತೆ ಾಡುವ ಪ್ರಯತ್ನಗಳ ಚಲಾವಣೆಯೂ ೀಗೆಯೆ.

o o o o o

ಹೈದ್ರಾಬಾದಿನ ನಿಜಾಮರು ಒಂದು ೋಟಿ ರೂಪಾಯಿಯನ್ನು ಮುಸ್ಲಿಮ ಲೀಗ್ ಂಡಿಗೆ ಕೊಡುವರಾಗಿ ಸಹ ಒಂದು ವಾರ್ತೆ ೀಗೋ ಹಬ್ಬಿದ್ದಿತು ಅವರ ಹಣ ಹೀಗೆಲ್ಲ ಲಾವಣೆಗೆ ಸಿಗಲಿಲ್ಲ ಈ ವಾರ್ತೆ ಸುಳ್ಳೆಂದು ವರ ಆಫಿಸಿನಿಂದ ಕೂಡಲೆ ಪ್ರಕಟವಾಗಿದೆ ಣ ವಂತಿಗೆಯಾಗುತ್ತದೆಂದು ಸುಳ್ಳು ವಾರ್ತೆ ರಡಿಸಿದ ಕೂಡಲೆ, ಜನರಲ್ಲಿ ಸಂಪಾದನೆಯ ವಲವಿಕೆ ಹೆಚ್ಚಿ ಅವರ ಹಾದಿಯನ್ನು ಬದ ಾಯಿಸುವ ಚಾಳಿಯಿದೆ ಎಂದೇ ಈ ಸುಳ್ಳು ಾರ್ತೆಗಳಿಂದ ಉಪಯೋಗ ಹೊಂದುವವ ದ್ದಾರೆ

o o o o

ಬ್ರಿಟಿಷ ಮಂತ್ರಿಮಂಡಲ ಬದಲಾಯಿತು ಹುಕಾಲದ ಮೆಕ್‌ಡಾನಲ್ಡರು ಬಿರುದನ್ನು ಾಕರಿಸಿಯೂ, ಬಹುಕಾಲದ ಬಾಲ್ಡ್‌ವಿನ್‌ರು ರುದನ್ನು ಸ್ವೀಕರಿಸಿಯೂ ತನ್ನ ಆಸ್ತಿಗೆ ೊಡಿಸಿಯೂ ನಿವೃತ್ತರಾದರು. ಒಂದೂ ಾನದ ಮಟ್ಟಿಗೆ, ಇತ್ತೀಚೆಗೆ ಸುಧಾರಣಾ ಮುಗದಲ್ಲಿ ಇವರಿಬ್ಬರೂ ತಕಪರುಷರು. ಬ್ಬರು ಭಾರೀ ನಂಬಿಸಿ ನಮಗೂ ಅವರಿಗೂ ೋಸ ಮಾಡಿಕೊಂಡವರು ಮತ್ತೊಬ್ಬರು ಇಂಗ್ಲಿಷ ಭಾಷಾ ಪ್ರಯೋಗದಲ್ಲಿ ನಿಪುಣರಾಗಿ ದುವಾಗ ತುಂಬ ತೃಪ್ತಿಯಾಗುವ ಹಾಗೂ ರ್ಥದಲ್ಲಿ ಸ್ಥಿತಿ ವ್ಯತ್ಯಾಸಟು ಇಲ್ಲದಂತೆಯೂ ಗಿಬಗೆಯ ಭಾಷಣ ಮಾಡಿದವರು ಇಬ್ಬರೂ ವೃತ್ತರಾದರು

o o o o

ಪುನಃ ಲೀಗ್ ಒಫ್ ನೇಶನ್ಸ್ ಸಭೆ ಸೇರ ಿದೆ ಇಜಿಪ್ತನ್ನು ಮೆಂಬರಾಗಿ ಸೇರಿಸಿ ೊಳ್ಳುವರು. ಈ ಸಭೆಗಳಿಗೆ ಅಬಿಸಿನಿಯದ ಪ್ರತಿನಿಧಿ ಬಂದರೆ, ಇಟಲಿಯ ಮೆಂಬರು ೈಹಾಜರಾಗುವ ಪದ್ಧತಿ ಅಬಿಸಿನಿಯಾ ಂಬ ರಾಜ್ಯವೇ ಇಲ್ಲ, ಇಟಲಿಯ ಸಾಮಂತ ಾಜ್ಯವೋ ವಸಾಹತವೋ ಆಗಿರುವ ಇಥಿ ಯೋಪಿಯ ಮಾತ್ರ ಇರುವ ಕಾರಣ, ಅಬಿಸಿನಿ ಯದ ಮೆಂಬರಿಗೆ ಸ್ಥಾನವಿಲ್ಲೆಂದು ಇಟಲಿಯ ೂರು. ಅದನ್ನು ತಿಳಿದು ಇಜಿಪ್ತವನ್ನು ಹರ ಯೂ, ಮುಂದೆ ಎಂದಾದರೂ ಅಬಿಸಿನಿಯದ ಸ್ವಾತಂತ್ರ್ಯವನ್ನು ಲೀಗು ಸ್ಥಾಪಿಸಿ ಕೊಡಬಹು ೆಂದು ಅತಿಸ್ವ—ನೇಗಸರು ವಾರ್ತೆ ಕಳುಹಿಸಿ, ಪ್ರತಿನಿಧಿಯನ್ನು ಹಿಂದೆಗೆದರು. ಪ್ರಾಬಲ್ಯದ ಎದಿರಲ್ಲಿ ಶ್ರೆಛುತ್ತವೇ?

o o o o

ಇಂಡಿಯಾ ಉಪಸೆಕ್ರೆಟರಿಯವರೂ ಬದ ಲಾದರು. ಬಟ್ಲರವರು ಹೋದಾಗಿ, ಲೋರ್ಡ್ ಸ್ಟೆನ್ಲಿಯವರು ಒಳಗೆ ಬಂದರು. ಯಾರು ಹೋದರೂ ಯಾರು ಬಂದರೂ, ಇಂಡಿ ಯದ್ದ ವಿಷಯ ಮಾತು ಒಂದೇ ಬಗೆ. ಅದರ ಧ್ವನಿ ಬೇರೆಯಾಗುವಂತಿಲ್ಲ. ಕಿವಿಗೆ ಇನ್ನಷ್ಟು ಇಂಪು, ಮನಸ್ಸಿಗೆ ಇನ್ನಷ್ಟು ಕಠಿನ. ಹೀಗಾಗಿ ಈ ಆಫೀಸರು ಬದಲಾವಣೆಯಿಂದ ಹೆಚ್ಚಿನ ಮಟ್ಟಿಗೆ ಆಗುಹೋಗುಗಳಾವುವೂ ಇರಲಾರವು.

o o o o o

ಕಲ್ಕತ್ತದ ಸಣಬು ಕಾರ್ಖಾನೆಗಳಲ್ಲಿ ಕೂಲಿಯವರ ಮುಷ್ಕರ ಒಕ್ಕಣೆಯ ಮಟ್ಟಿಗೆ ಮಾತ್ರ ಮುಗಿದೇ ಇದೆ. ತೃಪ್ತಿ ಯಾರಿಗೂ ಇಲ್ಲ. ಹಿಂದಣ ಸರಕಾರೀ ರೀತಿಯನ್ನು ಬಿಟ್ಟು, ಈ ಮುಷ್ಕರ ಕಾಲದಲ್ಲಿ, ಮುಖ್ಯ ಮಂತ್ರಿ ಶ್ರೀ ಫಜಲುಲ್ ಹುಕ್‌ರೇ ಬಹಳ ಪೇಚಾಡಿದರು ಇವರ ಪರಿಶ್ರಮದ ಫಲ ವಾಗಿ, ಕೆಲವು ತೀರ್ಮಾನಗಳಾದುವು. ಗಿರಣೀ ಧನಿಗಳಿಗೆ ಈ ತೀರ್ಮಾನಗಳು ಸರಿ ಯಾಗಿಲ್ಲವೆಂದೇ ಅತೃಪ್ತಿ

o o o o

ಮುಷ್ಕರಗಾರರ ಮೇಲೆ ಕೆಲವು ಮೊಕ ದ್ದಮೆಗಳಾಗಿದ್ದುವು ಈ ತೀರ್ಮಾನದ ಫಲ ವಾಗಿ ಆ ಮೊಕದ್ದಮೆಗಳನ್ನು ಹಿಂದೆಗೆಯ ಬೇಕಾಗಿತ್ತು ಅದಾಗಲಿಲ್ಲ ಮೇಜಿಸ್ಟ್ರೇಟರು ವಿಳಂಬಿಸಿದರೇಕೆಂದೂ ಅತೃಪ್ತಿ

o o o o

ಕೆಲಸಗಾರರ ಯೂನಿಯನ್ನುಗಳನ್ನು ಅಂಗೀಕರಿಸಬೇಕಾಗಿ ನಿರ್ಧಾರವಾಗಿತ್ತು. ಅವನ್ನು ಅಂಗೀಕರಿಸಿಲ್ಲ ಮುಷ್ಕರದಲ್ಲಿ ಕೆಲವರನ್ನು ಹಿಂಸಿಸುತ್ತಿರುವರೆಂದು ದೂರು. ದೂರನ್ನು ಹೇಳಿಕೊಳ್ಳಲು ಯೂನಿಯನು ಅಲ್ಲ, ಹಿಂಸೆ ಪಟ್ಟವರೇ ಮುಂದೆ ಬರಬೇಕೆಂದು ಧನಿ ಗಳ ಮಾತು. ಇದೂ ಅತೃಪ್ತಿಕರ

ದಿ ಬಿಲ್ಲವರ ಎಸೋಸಿಯೇಶನ್,
ಮುಂಬಾಯಿ.

ವಿದ್ಯಾರ್ಥಿವೇತನ

ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿ ಗಳಿಗೆ ಮಾತ್ರ ವೇತನವನ್ನಪೇಕ್ಷಿಸುವವರು ಈ ಕೆಳಗೆ ನಮೂದಿಸಿದ ಪ್ರಶ್ನೆಗಳ ಉತ್ತರ ಸಹಿತ ತಾ 30-6-'37ರ ಒಳಗೆ ಈ ಕೆಳಗಿನ ವಿಳಾ ಸಕ್ಕೆ ಬರಕೊಂಡಲ್ಲಿ ಅರ್ಹರೆಂದು ಕಂಡುಬಂದ ವರಿಗೆ ಈ ಮೇಲಿನ ಸಂಸ್ಥೆಯಿಂದ ವೇತನ ವನ್ನು ಕೊಡಲಾಗುವುದು.

೧ ವಿದ್ಯಾರ್ಥಿಯ ಹೆಸರು ೨. ತಂದೆ ಯಾ ರಕ್ಷಕನ ಹೆಸರು, ವಿಳಾಸ ವೃತ್ತಿ ಮತ್ತು ವರ್ಷಾವಧಿ ಉತ್ಪತ್ತಿ. ೩ ಇತರ ಸಂಬಂಧಿ ಕರ ಹೆಸರು ಮತ್ತು ವಿಳಾಸ ೪ ಕಲಿಯತಕ್ಕ ದರ್ಜೆಯ ಮತ್ತು ಶಾಲೆಯ ಹೆಸರು ೫. ಕಳೆದ ಪರೀಕ್ಷೆಯ ಮಾರ್ಕುಗಳ ಪಟ್ಟಿ. ೬ ಶಾಲಾ ಸಂಬಳ ೭ ವಿದ್ಯಾರ್ಥಿಯ ಗುಣ ನಡತೆಯ ಕುರಿತು ಶಾಲಾ ಮುಖ್ಯೋಪಾಧ್ಯಾಯರ ಪತ್ರ ೮ ವಿದ್ಯಾರ್ಥಿಯು ವೇತನವನ್ನು ಪಡೆಯಲು ಅರ್ಹನೆಂಬುದರ ವಿಷಯ ಊರಿನ ಮೆಜಿಸ್ಟ್ರೇ ಟರ ಅಥವಾ ಪ್ರಸಿದ್ಧ ವಕೀಲರ ಒಂದು ಪತ್ರ.

ಮಾನಾರ್ಥ ಜನರಲ್ ಕಾರ್ಯದರ್ಶಿ—

The Billawar Association,

C/o Daphtary Ferreira & Diwan,

13-19, Meadow Street, Bombay.

ಮಗುವಿನ ಆರೋಗ್ಯಕ್ಕೆ
ಮೊಲೆಹಾಲೇ ಶ್ರೇಷ್ಠವಾದದ್ದು

ತಾಯಿ ಯಾದ ಪ್ರತಿಯೊಬ್ಬಳೂ ತನ್ನ ಮಗುವನ್ನು ಪ್ರಕೃತಿಯ ರೀತಿಯಲ್ಲಿ ಬೆಳೆಸಬೇಕು ಆಹಾರ ದೋಷಗಳಿಂದಾಗಿ ಆಗುವ ರೋಗಗಳ ತಪ್ಪಿಕಕ್ಕೆ ಮೊಲೆ ಹಾಲಿನ ಉಪ್ಪಸುವಿಕೆಯೇ ಮಕ್ಕಳ ಆರೋಗ್ಯದ ಕಳಹದಿ

ಇಂಥ ಶ್ರೇಷ್ಠ ಮೊಲೆಹಾಲಿನಿಂದ ನಿಮ್ಮ ಮಕ್ಕಳನ್ನು ಸರಿಯಾಗಿ ಬೆಳೆಸಬೇಕೆಂಬುದರ ಭರವಸೆಗಾಗಿ ಒವಲ್ಟಿನ್ನನ್ನು ಉಪಯೋಗಿಸಿದ್ದಲ್ಲಿ ತಾಯಂದಿರಲ್ಲಿ ಅದು ಮಕ್ಕಳಿಗೆ ಬೇಕಾದ ಶ್ರೇಷ್ಠ ಮೊಲೆಹಾಲನ್ನುಂಟು ಮಾಡುವುದು ನಿಂದಿತ ಒವಲ್ಟಿನ್‌ನಲ್ಲಿ ಅಂಥಾ ಮಾತೃಕ್ಷೀರದ ಸತ್ವವಿ ರುವುದು ಇದನ್ನು ಎಳೇ ಮಕ್ಕಳ ತಾಯಂದಿರು ಕುಡಿದಲ್ಲಿ ಅವರಿಗೆ ಶಕ್ತಿ ಚೈತನ್ಯಗಳುಂಟಾಗುವುದು

ಒವಲ್ಟಿನ್ ಶುದ್ಧವಾದ ಪ್ರಕೃತೀಯ ತಯಾರಿಕೆಯಾಗಿದ್ದು, ಅದ ರಲ್ಲಿ ಪಕ್ವ ಬಾರ್ಲಿ ಸತ್ವವೂ ಹದ ಕನೆ ಹಾಲೂ ಕೂಡಿದೆ ಶಕ್ತಿ ಆರೋಗ್ಯಗಳನ್ನು ಬೆಳೆಸಬೇಕಾಗುವ ಎಲ್ಲ ಪುಷ್ಟಿಕರ ಆಹಾರಗಳೂ ಅದ ರಲ್ಲಿ ಕೂಡಿಕೊಂಡಿವೆ ಓವಲ್ಟಿನ್ನನ್ನು ಪಡಕೊಳ್ಳಿರಿ ಬದಲಿಯ ಪ್ರತಿ ಪ್ಪ್ಪಾಲುಗಳನ್ನು ನಿರಾಕರಿ

ಓವಲ್‌ಟಿನ್
ತಾಯಂದಿರಿಗೆ ಮಕ್ಕಳನ್ನು ಮೊಲೆಯುಣ್ಣಿಸಿ ಬೆಳೆಸ
ಲಿಕ್ಕೆ ಶಕ್ತಿಯನ್ನು ಕೊಡುತ್ತದೆ.

OVALTINE

ಟಾನಿಕ್ ಆಹಾರ ಪಾನೀಯ—

ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತ್ತದೆ

ಏಜಂಟರು—ಜೇಮ್ಸ್ ರೈಟ್, 85 ಎ, ಕ್ಲೈವ್ ಸ್ಟ್ರೀಟ್, ಕಲ್ಕತ್ತ.

ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— **K. R. GURU,** *Managing Director.*

ವೈಸರಾಯರು ರಾಜೀನಾಮೆ ಕೊಡುವರೆ?

ಆಂಗ್ಲೇಯರಿಂದ ಬ್ರಿಟಿಷ್ ಧೋರಣೆಯ ಖಂಡನೆ

ಜಮ್ನಾದಾಸ್ ಮೆಹತಾರವರು ದಿವಾನರಾಗುವರು?

ವ್ಯಾಸ್‌ರಾಯರ ರಾಜಿನಾಮೆ ಸುಳ್ಳು

ಅಹ್ಮದಾಬಾದಿನ ಒಂದು ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ವ್ಯಾಸರಾಯರ ರಾಜಿನಾಮೆಯ ವರ್ತಮಾನವು ಯಾವ ಆಧಾರವಿಲ್ಲದ್ದೆಂದು ತಿಳಿದುಬರುತ್ತದೆ ಕೊಂಗ್ರೆಸ್ಸು ಮಂತ್ರಿಪದವಿಗಳನ್ನು ಸ್ವೀಕರಿಸದಿದ್ದುದರಿಂದುಂಟಾದ ರಾಜಕೀಯ ಘಟನಾವಳಿಗಾಗಿ ವ್ಯಾಸ್‌ರಾಯರು ರಾಜಿನಾಮೆಯನ್ನು ಕೊಡುವುದಕ್ಕೆ ಲಾರ್ಡ್ ಜೆಟ್‌ಲ್ಯಾಂಡರೊಂದಿಗೆ ಪತ್ರವ್ಯವಹಾರ ನಡೆಸುತ್ತಿರುವರೆಂದು ಆ ಪತ್ರಿಕೆಯಲ್ಲಿ ಪ್ರಕಟವಾಗಿತ್ತಂತೆ

ಭಾರತಕ್ಕೆ ಕೊಟ್ಟಿರುವ ನವರಾಜಶಾಸನವು ಫೆಸಿಸ್ಟ ಅಥವಾ ಸರ್ವಾಧಿಕಾರದ್ದು ವಿಶೇಷಾಧಿಕಾರಿಗಳ ಮೇಲೆ ಆಂಗ್ಲರೊಬ್ಬರ ಅಭಿಪ್ರಾಯ.

'ಯಾವ ಜನಾಂಗವು ಈ ಇಂಡಿಯಾ ಆಕ್ಟನ್ನು ತಿರಸ್ಕರಿಸುತ್ತದೊ ಅದರಮೇಲೆ ಈ ಆಕ್ಟನ್ನು ಹೊರಿಸಲಾಗಿದೆ ನಮ್ಮಲ್ಲಿರುವ ಯುದ್ಧದ ಯಂತ್ರಗಳೂ, ಬಾಂಬು ವಿಮಾನಗಳೂ ಈ ಬಲಾತ್ಕಾರಕ್ಕೆ ಧೈರ್ಯವನ್ನು ಕೊಟ್ಟಿರತಕ್ಕವುಗಳು ಹೀಗೆಂದು ಲಂಡನಿನ ರೆವೆರೆಂಡ್ ಕೊನ್ರಾಡ್ ನೋಯೆಲ್‌ರವರು ಡೈಲಿ ಹೆರಾಲ್ಡ್ ಪತ್ರಿಕೆಯಲ್ಲಿ ಬರೆದಿರುತ್ತಾರೆ "ಇಂಡಿಯಾ ಆಕ್ಟ್ ಎಂಬುದು ಪ್ರಜಾಪ್ರಭುತ್ವ ತತ್ವವುಳ್ಳದ್ದೂ ಅಲ್ಲ ವ್ಯಕ್ತಿಗತ್ಯವಾದುದೂ ಅಲ್ಲ ಕಡೆಗೆ ಅದರಲ್ಲಿ ಸಾಮಾನ್ಯವಾಗಿ ಗವರ್ನರರ ಸರ್ವಾಧಿಕಾರ ಬೇರೆ ಈ ಗವರ್ನರರ ತಮಗೆ ಅಹಿತವೆಂದು ತೋರಿದ ಕಾರ್ಯಕ್ರಮವನ್ನು ತಿರಸ್ಕರಿಸಬಹುದು ಈ ತತ್ವವು ಪ್ರಜಾಪ್ರಭುತ್ವದ್ದೆಂದು [illegible] ದೇನ? [illegible] ತ್ತಾರೆ

ಇನ್ನೊಬ್ಬ ಆಂಗ್ಲರ ಅಭಿಪ್ರಾಯ.

ಡೈಲಿ ಹೆರಾಲ್ಡ್ ಪತ್ರಿಕೆಯ ಪತ್ರವ್ಯವಹಾರ ವಿಭಾಗದಲ್ಲಿ ಬರೆಯುತ್ತಾ ವಿ. ಸ್ಕೊಲ್ಲಿ ಎಂಬ ಆಂಗ್ಲ ಗೃಹಸ್ಥರೊಬ್ಬರು ಈ ಕೆಳಗಿನಂತೆ ಬರೆಯುತ್ತಾರೆ "ಪರದೇಶಿಗರು ನಮ್ಮನ್ನು ರಕ್ತ ಸನ್ಯಾಸಿಗಳ ಜನಾಂಗವೆಂದು ಕರೆವುದರಲ್ಲಿ ವಿಶೇಷ ಆಶ್ಚರ್ಯವಿಲ್ಲ' ಬ್ರಿಟಿಷ್ ಸರಕಾರದ ರಕ್ಕತನವನ್ನು ಎರಡು ವಿಷಯಗಳಲ್ಲಿ ಕಾಣಬಹುದು ಹಿಂದೂಸ್ಥಾನದಲ್ಲಿ ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ತೋರೆಯುವುದು ಅಸಾಧ್ಯವೆನ್ನುತ್ತಾರೆ ಅಲ್ಲಿ ಅದು ಒಂದು ಸಮಯಕ್ಕೆ ನಡೆಯಬಹುದು ಹಾಗೆ ಸ್ಪೈಯಿನಿನಲ್ಲಿ, ಬ್ರಿಟಿಷ್ ಸರಕಾರದ ಧೋರಣೆಯು ಅಂತರಾಷ್ಟ್ರೀಯ ಕಾನೂನನ್ನು ಮೀರುತ್ತದೆ ಅಲ್ಲಿಯೂ ನಮ್ಮ ಸರಕಾರವನ್ನು ಕೇಳುವವರಿಲ್ಲದಾಗಿದೆ'

ಜಮ್ನಾದಾಸ್ ಮೆಹತಾರವರು ದಿವಾನರಾಗುವರೆ?

ಬೊಂಬಾಯಿಯ ಹಣಕಾಸಿನ ಸಚಿವರಾದ ಆನರೇಬಲ್ ಶ್ರೀ ಜಮ್ನಾದಾಸ್ ಮೆಹತಾರವರು, ಸದ್ಯದಲ್ಲಿ ಸೇರಲಿರುವ ಬೊಂಬಾಯಿ ಶಾಸನ ಸಭೆಯಲ್ಲಿ ಕೊಂಗ್ರೆಸು ತಮ್ಮಲ್ಲಿ ಸೂಚಿಸಬಹುದಾದ ಅವನಂಬಿಕೆಯ ವೋಟಿನಿಂದ ಅಧಿಕಾರ ಬಿಡಲಾಗುವ ಮೊದಲೇ ರಾಜಿನಾಮೆಯನ್ನು ಕೊಡುವರೆಂದು ತಿಳಿದುಬರುತ್ತದೆ ಅವರಿಗೆ ಜಮ್ನಗರ ಸಂಸ್ಥಾನದ ದಿವಾನಗಿರಿಯ ಆಹ್ವಾನ ಬಂದಿರುತ್ತದೆಂದು ವದಂತಿ ಇದೆ

ಗೊಂಬೆ ಮಂತ್ರಿಗಳ ಪ್ರಚಾರ ಮುಂದಿನ ಚುನಾವಣೆಗೆ ತಯಾರಿಯೆ?

ಮದ್ರಾಸಿನ ತಾತ್ಕಾಲಿಕ ಮಂತ್ರಿಮಂಡಳದ ನಾಯಕರಾದ ಸರ್ ಕೂರ್ಮಾ ವೆಂಕಟರೆಡ್ಡಿಯವರು ಆಂಧ್ರ ಮತ್ತು ತಮಿಳು ಪ್ರಾಂತ್ಯಗಳಲ್ಲಿ ಸಂಚರಿಸುತ್ತಲಿರುವರು ಕೆಲವು ಪಂಚಾಯತ್ ಬೋರ್ಡುಗಳು ಮತ್ತಿತರ ಜಸ್ಟಿಸ್ ಪಂಗಡದವರೂ ಅವರಿಗೆ ಬಿನ್ನವತ್ತಳೆ, ಮಾನಪತ್ರಗಳನ್ನರ್ಪಿಸಿ ಸನ್ಮಾನಿಸುತ್ತಾರೆ ಅವರೊಂದಿಗೆ ಕುಮಾರರಾಜ ಮುತ್ತಯ್ಯ ಚೆಟ್ಟಿಯವರೂ ಇದ್ದಾರೆ ಈರ್ವರೂ ಹೋದೆಡೆಗಳಲ್ಲಿ, ತಮ್ಮ ಧೋರಣೆಯನ್ನು ಸಮರ್ಥಿಸಿ ಭಾಷಣ ಮಾಡುತ್ತಾರೆ ರೈತರಿಗೆ ಸಹಾಯವನ್ನು ಮಾಡುವ ಕಾರ್ಯಕ್ರಮವನ್ನು ತಾವು ಆಗಲೇ ಪ್ರಾರಂಭ ಮಾಡಿರುವುದಾಗಿಯೂ, ಹೇಳಿ, ಕೊಂಗ್ರೆಸನ್ನು ಹೋದೆಡೆಗಳಲ್ಲಿ ಅವರು ಟೀಕಿಸುತ್ತಲಿದ್ದಾರೆ

ಸಂಯುಕ್ತ ಸಂಸ್ಥಾನದ ಮುಸಲ್ಮಾನ್ ಕೌನ್ಸಿಲು ಸದಸ್ಯರು ಕೊಂಗ್ರೆಸ್ ಮೆಂಬರರಾಗುವರು

ಸಂಯುಕ್ತ ಪ್ರಾಂತ್ಯದ ಕೌನ್ಸಿಲು ಸದಸ್ಯರಾದ ಹಫೀಜ್ ಮುಹಮ್ಮದ್ ಇಬ್ರಾಹಿಮ್ ಇವರು ಕೊಂಗ್ರೆಸ್ ಪಾರ್ಟಿಯನ್ನು ಸೇರುವರು ಜಿನ್ನಾರವರ ಮುಸ್ಲಿಂ ಲೀಗಿನ ಸದಸ್ಯರಾದ ಇವರು, ಮುಸ್ಲಿಂ ಲೀಗಿನ ಕಡೆಯಿಂದ ಚುನಾವಣೆಗೆ ನಿಲ್ಲಿಸಲ್ಪಟ್ಟು ಗೆದ್ದಿರುವರು ಸಂಯುಕ್ತ ಪ್ರಾಂತ್ಯದಲ್ಲಿ ಮುಸ್ಲಿಮರನ್ನು ಕೊಂಗ್ರೆಸಿಗೆ ಸೇರಿಸಲು ಬಲವಾದ ಚಳವಳಿವು ನಡೆಯುತ್ತಿರುವ ಕಾಲದಲ್ಲಿ ಇಬ್ರಾಹಿಂರಂತವರು ಮಾದರಿಯನ್ನು ತೋರಿಸಿಯವಾಗಿದೆ

ಶುದ್ಧ ತಪ್ಪು

ಕೊಂಗ್ರೆಸ್ ಕಕ್ಷಿಗಳೊಳಗೂ ಮುಸ್ಲಿಂ ಲೀಗಿನ ಧೋರಣೆಯ ಮೇಲು ಒವ ಸರ ಜಿನ್ನಾರವರ [illegible] ವಿವಾದಗಳ [illegible] ಪತ್ರಿಕೆಗಳಲ್ಲಿ [illegible] ಟೀಕಿಸಿ [illegible] ಅವರ [illegible] ಟೀಕೆಗಳಿಗೂ ಪತ್ರಿಕೆಗಳಲ್ಲಿ ಎಡೆಕೊಡಬಾರದೆಂದು ವಿನಂತಿಸಿಕೊಂಡಿರುವರು

'ಹಿಂದೂಸ್ಥಾನ್ ಟೈಮ್ಸ್'

"ನಿರಂಕುಶ ಪ್ರಭುತ್ವವು ಪ್ರಾಂತಿಕ ಜವಾಬುದಾರಿಯ ಸ್ಥಾನವನ್ನು ತೆಗೆದುಕೊಳ್ಳುತ್ತದೆ ಪಾರ್ಲಿಮೆಂಟು ಗವರ್ನರರಿಗೆ ಬೇಕಾದಷ್ಟು ಬೆಂಬಲವನ್ನು ಕೊಟ್ಟಿಲ್ಲವೆಂದೂ ಈ ಯುರೋಪಿಯನ್ ಮುಂದಾಳುಗಳು ತಮ್ಮ ಬೆಂಬಲ

ಗವರ್ನರರಿಗೆ ಬೆಂಬಲ

ಭಾರತದಲ್ಲಿ ಐರೋಪ್ಯರ ಧೋರಣೆಯ ಖಂಡನೆ

ದಬ್ಬಾಳಿಕೆಯು ಹೆಚ್ಚು ಕಾಲ ಬಾಳಲಾರದು

ಐರೋಪ್ಯರೂ ಗವರ್ನರರೂ

ಬಂಗಾಳ ಮತ್ತು ಮದ್ರಾಸಿನಲ್ಲಿ ಯುರೋಪಿಯನ್ ಮುಂದಾಳುಗಳು ತಮ್ಮ ಅನುಯಾಯಿಗಳಿಗೆ ಭೋಧಿಸುತ್ತಾ ಅವರು ಐಕ್ಯಮತದಿಂದ ಗವರ್ನರರ ಬೆಂಬಲಕ್ಕೆ ನಿಲ್ಲಬೇಕೆಂದು ಬೋಧಿಸಿರುತ್ತಾರೆ ಮುಂದೆ ಉಂಟಾಗಲಿರುವ ಭಯಂಕರ ರಾಜಕೀಯ ಕ್ರಾಂತಿಯಲ್ಲಿ ಯುರೋಪಿಯನರಿಗೆ ಪ್ರಾಂತೀಯ ಗವರ್ನರುಗಳ ಸಹಾಯವು ಅತ್ಯಗತ್ಯವೆಂದೂ ಆದುದರಿಂದ ಯುರೋಪಿಯನ್‌ರೆಲ್ಲರೂ ಗವರ್ನರರಿಗೆ ಬೆಂಬಲ ಕೊಟ್ಟು ಸಹಕರಿಸಬೇಕೆಂದೂ ಈ ಐರೋಪ್ಯ ನಾಯಕರ ಬೋಧನೆ

ಈ ಧೋರಣೆಯು ವಿಚಾರಪರವಲ್ಲ

ಐರೋಪ್ಯ ನಾಯಕರ ಈ ಧೋರಣೆಯಲ್ಲಿ ರಾಜಕೀಯ ದೂರದರ್ಶಿತ್ವವಿಲ್ಲ" ಎಂದು ಅಮೃತ್ ಬಜಾರ್ ಪತ್ರಿಕೆಯು ಟೀಕಿಸುತ್ತದೆ "ಕೊಂಗ್ರೆಸನ್ನು ಸದೆಬಡೆಯಲು ಸರಕಾರವು ಪ್ರತಿಯೊಂದು ತರದ ಆಯುಧವನ್ನು ಉಪಯೋಗಿಸಿದುದು ಸತ್ಯಸಂಗತಿಯಲ್ಲವೆ? ಆದರೆ ಅದು ಸಾಧ್ಯವಾಗದೆ ಹೋಯಿತು, ಸರಕಾರದ ಪ್ರತಿಯೊಂದು ಏಟಿಗೂ ಕೊಂಗ್ರೆಸ್ಸು ಹೆಚ್ಚು ಹೆಚ್ಚು ಶಕ್ತಿಯನ್ನು ಪಡೆಯಲಿಲ್ಲವೆ? ಕೊಂಗ್ರೆಸ್ಸು ಬರೇ ಒಂದು ರಾಜಕೀಯ ಪಂಗಡವೆಂದು ತಿಳಿಯುವುದು ತಪ್ಪು ಹಾಗೇನಾದರೂ ಅದು ಆಗಿರುತ್ತಿದ್ದರೆ ಸರಕಾರದ ದಬ್ಬಾಳಿಕೆಗೆ ಅದು ಎಂದೋ ನಿಲಿಸುವಾಗ [illegible] ಕೊಂಗ್ರೆಸ್ಸು ಇಂದು ನವಚೇತನವನ್ನು ಸೂಚಿಸುವ ಒಂದು ಅಖಂಡ ಪರ್ವವಾಗಿದೆ ಈ ನವಚೈತನ್ಯವು ಕೊಂಗ್ರೆಸ್ಸಿನ ಮುಖಾಂತರ ಮಾತನಾಡುತ್ತದೆ ಅಲ್ಲದೆ ಇದಕ್ಕೆ ಇನ್ನೂ ಅನೇಕ ದಾರಿಗಳೂ ಇರುತ್ತವೆ"

ಸ್ಟೇಟ್ಸ್‌ಮೇನ್

"ಯುರೋಪಿಯನರ ಗರ್ವದ ಮಾತುಗಳಿಂದ ಏನಾಗಬಹುದು [illegible] ವಿಷಯ [illegible] ವನ್ನು ಗವರ್ನರರಿಗೆ ಕೊಡುವೆವು ಎಂದು ನಿರ್ಧರಿಸುವುದು? ಕೊಂಗ್ರೆಸ್ಸಿನ [illegible] ಮಾತುಕತೆಗಳು ಮುರಿದವು ಪರಿಸ್ಥಿತಿಯನ್ನು ಇಳಿಜಾರಿನಲ್ಲಿ ತಂದಿರಿಸುತ್ತದೆ ಈ ಪರಿಸ್ಥಿತಿಯು ಜಾರಿ ಕೆಳಕ್ಕುರುಳಿ ಪಾತಾಳವನ್ನು ಮುಟ್ಟಿದೊಡನೆ ಅಲ್ಲಿ ಸಂಘರ್ಷ, ನಿಷ್ಕರ್ಷ ಕಾರ್ಯಸಾಧನೆ, ಮತ್ತು ಭಯಂಕರ ಕ್ರಾಂತಿ ಇವುಗಳು ಎದುರುಬರುತ್ತವೆ ಆದುದರಿಂದ ಗವರ್ನರರು ಹೆಚ್ಚು ಕಾಲ ನಿರಂಕುಶ ಪ್ರಭುತ್ವವನ್ನು ಮಾಡಲು ಸಾಧ್ಯವಾಗದು" ಎಂದು ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯು ಒಂದು ಅಗ್ರಲೇಖದಲ್ಲಿ ಬರೆಯುತ್ತದೆ

ಇನ್ನು ಮೂರು ವರ್ಷಗಳ ವರೆಗೆ ಇಲ್ಲದಂತಾಗಬಹುದು ಅಷ್ಟೆ ಆದರೆ ಆ ಮೂರು ವರ್ಷಗಳೊಳಗೆ ಕೊಂಗ್ರೆಸ್ಸಿನ ಬಲವು ಕುಂದಬಹುದೆಂದು ನಿರೀಕ್ಷಿಸುವವರು ಬರೇ ಮೂಢರು ಕೊಂಗ್ರೆಸ್ ಇನ್ನೂ ಬಲಶಾಲಿಯಾಗುವುದು" ಹೀಗೆಂದು ಕಲ್ಕತ್ತದ ಸ್ಟೇಟ್ಸ್‌ಮನ್ ಪತ್ರಿಕೆಯು ಬರೆದಿರುತ್ತದೆ

ಇಡೀ ಒಂದು ತಾಲೂಕೇ ಪ್ರದರ್ಶನ ಮಂದಿರವಾಗಿ ಮಾರ್ಪಡುವುದು.

ಸರ್ದಾರ್ ಪಟೇಲರ ಕಾರ್ಯಕ್ರಮ ಹರಿಪುರ ಕೊಂಗ್ರೆಸ್ಸಿಗೆ ಬಾರ್ಡೋಲಿ ಯುವರ ಸಹಾಯ

ಮುಂದಿನ ಕೊಂಗ್ರೆಸ್ ಅಧಿವೇಶನಕ್ಕಾಗಿ ಮಹಾತ್ಮಾ ಗಾಂಧಿಯವರು ಹರಿಪುರವನ್ನು ಮಾದರಿ ಹಳ್ಳಿಯಾಗಿ ಆರಿಸಿದ ಮೇಲೆ ಸರದಾರ್ ವಲ್ಲಭಾಯಿ ಪಟೇಲರು ಅಲ್ಲಿಯ ವ್ಯವಸ್ಥೆಯ ಕಾರ್ಯಕ್ರಮವನ್ನು ಕೈಕೊಂಡಿರುವರು ಆಗಲೇ ಅವರ 64 ಗ್ರಾಮಗಳನ್ನು ಸಂಚರಿಸಿ ಹಳ್ಳಿಗರಿಂದ ತುಂಬಾ ಸಹಾಯದ ವಾಗ್ದಾನವನ್ನು ಪಡೆದಿರುವರು ಅವರು ಸ್ವೀಕರಿಸಿದ ವಾಗ್ದಾನಗಳು ಈ ಕೆಳಗಿನಂತಿವೆ

ಕೊಂಗ್ರೆಸಿಗಾಗಿ ಖಾದಿ 866 ಜನರು ತಾವು ಕೊಂಗ್ರೆಸ್ ಅಧಿವೇಶನಕ್ಕೆ ಹಾಜರಾಗಲು ಅರ್ಹರಾಗುವಂತೆ, ಸ್ವಂತವಾಗಿ ನೂಲುಮಾಡಿ ಬಟ್ಟೆಗಳನ್ನು ತಯಾರಿಸುವುದಾಗಿ ಪ್ರತಿಜ್ಞೆ ಮಾಡಿರುವರಂತೆ

ಹರಿಪುರದ ಕೊಂಗ್ರೆಸ್ ಅಧಿವೇಶನದ ಕಾಲಕ್ಕೆ ಸಾಯಾಗುವಂತೆ 310 ದನಗಳನ್ನು ತಯಾರಿಸಿ ಕೊಡುವುದಾಗಿ ವಾಗ್ದಾನಗಳು ಬಂದಿವೆ 250 ಮಂದಿಗಳು ಹೊಸ ದನಗಳನ್ನು ಕೊಂಗ್ರೆಸ್ ಅಧಿವೇಶನ ಸಮಯಕ್ಕೆ ಕಳುಹಿಸಿ ಕೊಡುವ ಸದಸ್ಯರ ಅನುಕೂಲತೆ ಬಗ್ಗೆ ತಯಾರಿಸುವರು ಆಗಲೇ 75 ದನಗಳ ಕೊಂಡು ಕೊಳ್ಳಲಾಗಿವೆ

ಬಹಿರ್ಭಾಗಕ್ಕೆ ಅನುಕೂಲತೆ: 417 [illegible] ಗದ್ದೆಗಳ [illegible] ದು ಮಾಡಿಕೊಡುವುದಾಗಿ ಒತ್ತುಕೊಟ್ಟಿರುವರು

ಪಟೇಲರ ಪ್ಲಾನು— ಸರ್ದಾರ್ [illegible] ಇಡೀ ಒಂದು [illegible] ತಾಲೂಕನ್ನು ಒಂದು ಪ್ರದರ್ಶನಾಲಯವನ್ನಾಗಿ [illegible] ಯಲ್ಲಿ ಮಗ್ನರಾಗಿದ್ದಾರೆ

ಗಾಂಧಿ ಸೇವಾ ಸಂಘ—ಅನೇಕ ಸದಸ್ಯರು ಆಗಲೇ [illegible] ಒಂದು ಗ್ರಾಮದಲ್ಲಿ ಅಲ್ಲಿಯೇ ಬೆಳೆದ ಹತ್ತಿಯನ್ನು, ಅದನ್ನು ನೂಲಿ ವಸ್ತ್ರ ಮಾಡುವ ವಿಧಾನವನ್ನು ತೋರಿಸಲು [illegible] ತ್ತದೆ

ಉಣ್ಣೆ—ಇನ್ನೊಂದು ಗ್ರಾಮದಲ್ಲಿ [illegible] ಗಳಿಂದ ಉಣ್ಣೆ ಬಟ್ಟೆಗಳನ್ನು ತಯಾರಿಸುವ ಸಂಪೂರ್ಣ ಘಟ್ಟಗಳನ್ನು ಪ್ರದರ್ಶಿಸುವರು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್‌ಜೆಕ್ಷನ್ ನಂತಹ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ,ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ,ಧಾತುಸ್ರಾವ,ಬಿಳುಪು ಹರಿಯುವುದು ಇವೇ ಮೊದಲಾದ ಮೂನತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ, ಬೆಲೆ 50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಖರ್ಚು ಬೇರೆ,

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N JASANI,** Vithalbhai Patel Road, BOMBAY 4.



Distributors for South Kanara —

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.

ಆಟೋಮೆಟಿಕ್ ಅಲಾರಂ ಪಿಸ್ತಲ್



(ಬಂದೂಕು)

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕುಂಡಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದು ನಮ್ಮಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು ಸಿನಿಮಾದದು ಡ್ರಾಮಾದವರು ಉಪಯೋಗಿಸುವುದ ನೀವು ನೋಡಿರಬಹುದು ಇದನ್ನು ಉಪಯೋಗಿಸು. ಕ್ರಮದ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ ಒಂದು ಆರ್ಡರು ಮಾಡುವವರಿಗೆ ೨ ಬೆಲಿಂ ಟಾರ್ಚ್ ಸ್ಟಾರ್ಟ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು ಪಿಸ್ತಲು ೧ಕ್ಕೆ ತೋಟೆಗಳ ಸಹಿತ ೬—೮—೦ ಟಪ್ಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೩, ಇರುಳಪ್ಪನ ಬೀದಿ, ಮದ್ರಾಸು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ



ಬಾಲಭಾಸ್ಕರ.

(ಗವರ್ನ ಮೆಂಟ್ ರಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ದಕ್ಷಿಣ ಕನ್ನಡದ ಏಜಂಟರು — ಪೊಪ್ಯುಲರ್ ಸ್ಟೋರ್ಸ್,
ರಥಬೀದಿ, ಮಂಗಳೂರು

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು ತಿಂಡಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದ್ದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳು ಸಿಗಲಾರವು

ಲೋಹ/ ವಿಷದಿಂದ
(Metal poisoning)
ಉಂಟಾಗುವ ಬಾಧೆಯು ಇಲ್ಲ

ಅನೇಕ ತರಹ ಮತ್ತು
ಪ್ರಮಾಣಗಳವೆ

ಮುಖ್ಯ ಏಜಂಟರು

ಕೆ ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ.

ಗರ್ಭಪಾಲ— ಗರ್ಭಶೂಲೆ, ಗರ್ಭಸ್ರಾವಕ್ಕೆ

ಚಂದ್ರಮಸ್— ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಕ್— ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ವೃದ್ಧಿಕಾಸವ— ನಿತ್ರಾಣಕ್ಕೆ

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್‌ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ತಪ್ಪಾರದು?

ಲೇಖಕ — ರಾಘವ

'ಶಾಂತಾ' ಎಂದು ಗಂಭೀರ ಸ್ವರದಿಂದ, ಮದ್ಯದಿಂದ ಮತ್ತನಾದ ಕುಮಾರನು ಮನೆ ಯೊಳಗೆ ಕಾಲಿಡುವಾಗಲೇ ಕರೆದನು ಅಡುಗೆ ಮನೆಯಲ್ಲಿದ್ದ ಶಾಂತೆಯು ಕಕ್ಕಾಬಿಕ್ಕಿ ಯಾಗಿ ಹೊರಗೆ ಓಡಿಬಂದಳು. ಗಂಡನ ಮುಖ ಮುದ್ರೆಯನ್ನು ಕಂಡು ತುಸು ಅಸಮಾಧಾನ ಗೊಂಡಳು, ಆದರೂ ಮಾಡಲೇನು ಸಾಧ್ಯವಿಲ್ಲ, ಕಂಪಿತ ಸ್ವರದಿಂದ "ಕರೆದಿರೇನು?"

'ಶಾಂತಾ, ನಾನೀಗ ಗೊಂದಲದಲ್ಲಿ ಬಿದ್ದಿ ರುವೆನು ಅದನ್ನು ತೀರಿಸಲು ಹಣವು ಅವಶ್ಯ ವಿದೆ. ನಿನ್ನ ಕಂಠಾಭರಣವನ್ನು ಈಗಲೇ ಕೊಟ್ಟುಬಿಡು, ಕುಮಾರನು ಉಗ್ರರೂಪಿಯಾಗಿ ಕೇಳಿದನು

"ನಾಥಾ ಇದೆಂತಹ ಯಾಚನೆ, ಕೊನೆಗೆ ಇದರ ಮೇಲೂ ನಿಮ್ಮ ಕಣ್ಣು ಬಿತ್ತೆ? ಇಲ್ಲ ಇಲ್ಲ ಎಷ್ಟು ಮಾತ್ರಕ್ಕೂ ಕೊಡಲಾರೆ ಕೋ ಪವೂ ದುಃಖವೂ ಉಕ್ಕೇರಿ ಬರುತ್ತಾ ಶಾಂತೆ ಯು ನುಡಿದಳು

'ಹುಚ್ಚಿ ನಾನಾರೆಂದು ಹೀಗೆ ಗದರಿಸಿ ಮಾತಾಡುವೆ ನಿನಗಿಷ್ಟು ದುರಹಂಕಾರ ಎಂತೆ?' ಕುಮಾರನು ಕಡವರಿಸುತ್ತಾ ಕೇಳಿ ದನು

'ಇನ್ನೂ, ಇನ್ನೂ, ನಾಚಿಕೆ ಲಜ್ಜೆ ಭಯ ವಿಂದ. ಕುಳಿತರೆ ಸಾಗಲಿಕ್ಕಿಲ್ಲವೆಂದ ಹೀಗೆ ಕೇಳಬೇಕಾಯಿತು ಇದ್ದುದೆಲ್ಲವನ್ನ ದೋಚಿ ಕೊಂಡು ಹೋದಿರಿ ಆಗ ನಾನು ಆತ ಕಿಸಿ ದೆನೆ? ಇದೊಂದನ್ನು ಮಾತ್ರ ಎಷ್ಟು ಮಾತ್ರಕ್ಕೂ ಕೊಡಲಾರೆ' ಶಾಂತೆಯು ಗೋಡೆಯತ್ತ ಕಡೆ ನೋಡಿ ಧೈರ್ಯದಿಂದ ಉತ್ತರವಿತ್ತಳು

"ನೋಡು, ಸುಮ್ಮಗೆ ರಗಳೆಗೀಡಾಗಬೇಡ ನಾನು ನಿನಗೆ ಬೇಕಾದರೆ ಕೂಡಲೇ ನನಗದನ್ನು ಕೊಟ್ಟುಬಿಡು ಇಲ್ಲವಾದರೆ ನಾನೀಗಲೇ ಹೊರಟೆ' ಕುಮಾರನ ದೀನಭಾವವನ್ನು ನಟಿ ಸುತ್ತಾ ಹೇಳಿದನು

"ನೀವು ನನಗೆ ಬೇಡವೆಂದ ನಾನು ನಿಮ್ಮನ್ನು ವಿವಾಹವಾದೇನೆ? ನಿಮ್ಮನ್ನು ಪ್ರೀತಿ ಸಿಯೇ ಮದುವೆಯಾದೆನು ಆಗಲೂ ನಿಮ್ಮನ್ನು ಪ್ರೀತಿಸುತ್ತಿದ್ದೆನು, ಈಗ ಕೂಡಾ ಪ್ರೀತಿಸುವೆನು ಸಹಿಸುವಷ್ಟು ಕಾಲ ಸಹಿಸಿದೆನು ಆದರ ಇನ್ನು ಸಾಧ್ಯವಾಗಲಾರದು ಸಹಿಸಿ ಸಹಿಸಿ ನನ್ನ ಶಕ್ತಿಯು ಕುಂದಿಹೋಯಿತು ಮನೆ ಹೋ ಯಿತು, ಧನ ಹೋಯಿತು ಇದ್ದ ಇಬ್ಬರು ಮಕ್ಕಳ ಚಿನ್ನಾಭರಣಗಳೂ ಹೋದವು ನನ್ನ ಬೆಳ್ಳಿ ಬಂಗಾರಗಳ ಮಾತ ತೂ ಇರಲಿ ಇನ್ನು ವರೂ ನಿಮಗೆ ಬುದ್ಧಿ ಬರಬೇಡವೆ? ಗಂಡಸಾಗಿ ಹುಟ್ಟಿ ಗಂಡಸಾಗಿ ಬಾಳಿ ಇಂತಹ ಪೈಶಾಚಿಕ ವೃತ್ತಿಗೆ ಕೈಹಾಕುವುದೆಂದರೆ ನಾಚಿಕೆಗೇಡಲ್ಲದೆ ಮತ್ತೇನು?" ಶಾಂತೆಯು ಖಿನ್ನಳಾಗಿ ನುಡಿ ದಳು

'ಏನು ಬೋಧನೆಗೆ ಪ್ರಾರಂಭಿಸಿದೆಯಾ ಕುಮಾರನ ಕೋಪವು ಒಂದೇ ಸವನೆ ನೆತ್ತಿಗೇ ರಿತು ಸಾಕ ಮಾಡು ನಿನ್ನ ಹರಟೆಯನ್ನು ನಾನು ಹೆಚ್ಚೇನು ಹೇಳಲಾರೆ ಹೇಳುವದಿದ್ದರೂ ಈಗ ಸಮಯವಿಲ್ಲ ಈಗ ಕೊಡುತ್ತಿಯೋ ಅಥವಾ ಎಳೆದುಕೊಂಡು ಹೋಗಬೇಕೋ ಬುಸುಗುಟ್ಟುತ್ತಾ ಕುಮಾರನುಸುರಿದನು

'ನೋಡಿ ನಿಮಗೆಷ್ಟು ತಡವೆ ಸಾರಬೇಕು ಳಿದಿರುವುದು ಈ ಕಂಠಾಭರಣವೇ ಮಾಂಗ ಲ್ಯದ ಚಿಹ್ನ, ಅದನ್ನು ನೀವು ಯಾಚಿಸುವು ದೆಂದರೆ ಲಜ್ಜಾಸ್ಪದವಲ್ಲವೆ ಬಡವರೇನೊ ಆಗಿ ರುವೆವು, ಅಂದರೆ ಇದನ್ನೂ ಕಳಕೊಳ್ಳಬೇಕೆನ್ನು ವಿರಾ? ಇಲ್ಲ ಇಲ್ಲ ಪ್ರಾಣೇಶ ಎಷ್ಟು ಮಾತ್ರ ಕ್ಕೂ ನಾನಿದನ್ನು ಕಳಕೊಳ್ಳಲಾರೆ' ಉದ್ವಿಗ್ನ ಳಾದ ಶಾಂತೆಯು ಪ್ರಲಾಪಿಸಿದಳು

ಏನೆಂದೆ, ಕಳಕೊಳ್ಳಲಾರೆಯಾ, ನನ್ನ ಮರ್ಯಾದೆಯ ಮುಂದೆ ನಿನ್ನ ಮಾಂಗಲ್ಯವೆ? ನೀನು ಕೊಡದಿದ್ದರೆ ಇಗೋ ನಾನೇ ಅದನ್ನು ತೆಗೆದುಕೊಳ್ಳುವೆನು' ಎಂದು ರೋಷಾಸಕ್ತ ನಾದ ಕುಮಾರನು ಶಾಂತೆಯ ಮೇಲೆ ಧಾವಿಸಿ ದನು ಸತಿಪತಿಗಳಿಬ್ಬರೊಳಗೆ ತುಸು ಕಿತ್ತಾಟ ವಾಯಿತು. ಕುಮಾರನು ಭರದಿಂದ ಕಂಠಾ ಭರಣವನ್ನು ಎಳೆದು 'ಲಂಕಿಣಿ ನಾನು ಮಾಡಿ ಹಾಕಿದ್ದನ್ನ ನನಗೆ ಕೊಂಡುಹೋಗಲು ಇಷ್ಟು ಆತಂಕವೆ? ನೀನು ನನ್ನ ಬಾಳಿನ ಅಧಿದೇವತೆ ಯಲ್ಲ—ರಾಕ್ಷಸಿ ಧೂರ್ತೆ ನನಗಿಷ್ಟು ಅವ ಮಾನ ಮಾಡಿದೆಯಲ್ಲ ಇನ್ನು ನಿನ್ನ ಮೋರೆ ಯನ್ನು ನೋಡ ವುದೂ ಪಾಪಕರ ಎಂದು ಹೇಳುತ್ತಾ ಮನೆಯ ಹೊರಗೆ ನಡೆದನು ಆಗ ರಾತ್ರಿ ಹನ್ನೆರಡು ಗಂಟೆಯಾಗಿತ್ತು

೦ ೦ ೦ ೦

ಸರ್ವಸ್ವವನ್ನು ಕಳಕೊಂಡ ಶಾಂತೆಯು ಇಂದು ಪತಿಯನ್ನೂ ಕಳಕೊಂಡು ದುರ್ಭಾಗ್ಯೆ ಯಾಗಿದ್ದಾಳೆ ಗಂಡನ ಕೈ ಹಿಡಿದಂದು ಐಶ್ವ ರ್ಯವಂತೆಯಾಗಿದ್ದಳು ಇಂದು ಭಿಕಾರಿಣಿ ಅಂದು ಗಂಡನ ರೂಪರಾಶಿ ಸಿರಿಸಂಪತ್ತನ್ನು ಕಂಡು ಹಿರಿಹಿಗ್ಗಿದ ಆಕೆಯು ಹುಟ್ಟಿದಕ್ಕೆ ಜನ್ಮ ಸಾರ್ಥಕವಾಯಿತೆಂದ ಭಾವಿಸಿದ್ದಳು ಸಾಲ ದದಕ್ಕೆ ಯಥಾಕಾಲದಲ್ಲಿ ಇಬ್ಬರು ಗಂಡು ಮಕ್ಕಳೂ ಜನಿಸಿದ್ದರ ಶಾಂತೆಯು ತನ್ನ ಸುಖದ ಪರಮಾವಧಿಯಾಯಿತೆಂದು ಊಹಿಸಿ ದ್ದಳ ಮನಸ್ಸಿನಲ್ಲಿಯೇ ಕಲ್ಪನಾ ಸುಖ ಸಾಮ್ರಾಜ್ಯವನ್ನು ಬಳಸಿ ತಾನೇ ಅದರ ಚಕ್ರ ವರ್ತಿನಿ ಎಂದು ಭಾವಿಸಿದಳು ಆದರೆ ವಿಧಿ ವಿಲಾಸವು ವಿಚಿತ್ರವಾಗಿದೆಯೆ ದುಃಖ ಸಂತೋ ಷದ ಕಾಲದಲ್ಲಿ ಅವಳಿಗೆ ಹೇಗೆ ತಿಳಿದಿರಬೇಕು ಅವಳ ಆ ದಿನ ಸುಸ್ಥಿತಿಯನ್ನು ಇಂದಿನ ದುಃಸ್ಥಿ ತಿಯ ನ್ನುಕಂಡರೆ ಯಾರಿಗೂ ದುಃಖವಾದೀತು

ಅನೇಕ ದುಶ್ಚಟಗಳಿಗ ಬಲಿಬಿದ್ದ ಅವಳ ಗಂಡನ ಯಾರ ಮಾತನ್ನೂ ಆಲಿಸದೆ ಸತಿ ಯನ್ನು ಅನ್ಯಾಯವಾಗಿ ಪೀಡಿಸಿ, ಬಾಧಿಸಿ, ತನ್ನ ಅಸುರಿ ಲಾಲಸೆಯನ್ನು ತಣಿಸಿಕೊಳ್ಳುವು ದಕ್ಕಾಗಿ ಮನೆಮಠಗಳನ್ನು ಮಾರಿದನು ವಸ್ತ್ರ ಒಡವೆಗಳನ್ನು ಲೆಕ್ಕವಿಟ್ಟು ವ್ಯಯಿಸಿದನು ಸಾಧ್ವಿ ಶಾಂತೆಯು ಸವ ಸಹಿಸಿದಳು, ಬುದ್ಧಿ ಹೇಳಿದಳ ಹಸ ಗೂಸುಗಳನ್ನು ತೋರಿಸಿ ದಯೆ ತೋರಿಸಿದಳೆ ಕೈಕಾಲು ಹಿಡಿದು ಬೇಡಿ ದಳು ಆದರೆ ಸ ರಾ ಪಿಗೆ ಬಲಿಯಾದ ಜೂಜುಬಟ್ಟನ್ನ ದ ರ ಳಂಪಟ ಕುಮಾರನು ಶಾಂತೆ ಯನ್ನು ಧಿಕ್ಕರಿಸಿ ಮನೆಯಲ್ಲಿ ಅಕ್ಕಿ ಕಾಳೂ ಕೂಡ ಉಳಿದಿಲ್ಲವೆಂದು ತಿಳಿದು ಬಂದ ನಂತರ ಸತಿಯನ್ನೂ ಎರಡು ಹಸುಗೂಸುಗಳನ್ನೂ ತೊ ರೆದು ಪರಾರಿಯಾಗಿದ್ದನೆ ತಪ್ಪಾರದು? ಸಾಧ್ವಿ ಶಾಂತೆಯದೆ ಅಥವಾ ಪಾಷಾಂಡ ಕುಮಾರ ನದೆ?

೦ ೦ ೦ ೦ ೦

ತಬ್ಬಲಿ ಮಕ್ಕಳನ್ನು ಬಳಿಯಲ್ಲಿರಿಸಿ ಪ್ರಾಯ ಭರಿತೆ ಶಾಂತೆಯು ಕಂಬನಿಗರೆಯುತ್ತಿದ್ದಳು ಆದರೆ ಅತ್ತು ಮಾಡುವುದೇನು ಬಹುಕಾಲದಿಂದ ಚೆಂದ ಅವಳ ಒಡಲಿಗೆ ಶಾಂತಿಯನ್ನೀಯಲು ಅಪ್ಪ ನ್ನರಾದರೂ ಅವಳಿಗಾರಾದರೂ ಇರುವರೆ? ಇಲ್ಲ ಬಂಧುಬಳಗದವರಾರೂ ಅವಳಿಗಿರಲಿಲ್ಲ ಆದ್ದರಿಂದ ಏನು ಮಾಡ ವುದೆಂದು ತಿಳಿಯದೆ ಬಹಳ ಕಂಗೆಟ್ಟಳು ಶಾಂತೆ ಅವಳ ಸಿರಿಸಂಪ ತ್ತನ್ನು ನೋಡಿ ಅಸೂಯೆಪಟ್ಟ ನೆರೆಕರೆಯವರು ಅವಳಿಗೆಷ್ಟು ದಿನ ತಾನೆ ಸಹಾಯ ಮಾಡಿಯಾ ರು? ಅವಳೊಡನೆ ಸಹಾಯವನ್ನು ಯಾಚಿಸು ವುದೂ ಅವಳಿಗೆ ಉಚಿತವೆಂದು ಕಾಣಲಿಲ್ಲ ಹಾಗೂ ಗಂಡನು ಮಕ್ಕಳನ್ನು ತೊರೆದನೆಂದು ಹೆಂಡತಿಯೂ ತೊರೆಯುವುದೆ? ಹಾಗಾದರೆ ಅವರನ್ನು ರಕ್ಷಿಸುವವರಾರು?

ಕೆಲವು ವಾರಗಳ ವರೆಗೆ ನೆರೆಕರೆಯವರು, ಬೇಡವೆಂದರೂ ಸಹಾಯ ಮಾಡಿದರು ಆದರೆ ಮತ್ತೆ ಪಿಸಿ ಪಿಸಿ ಮಾತಾಡತೊಡಗಿದರು 'ಗಂಡ ನನ್ನು ಬಿಟ್ಟು ಇವಳೊಬ್ಬಳೆ ವಾಸಿಸಲು ಕಾರಣ ವೇನು' ಎಂದೊಬ್ಬಳು 'ಗಂಡನು ಇವಳನ್ನು ಬಿಟ್ಟನೊ ಅಥವಾ ಇವಳುಗಂಡನನ್ನುಬಿಟ್ಟಳೊ' ಎಂದು ಮಗದೊಬ್ಬಳು "ಗಂಡನು ಇವಳನ್ನು ಬಿಟ್ಟು ಹೋಗಿರುವುದಾದರೂ ಕಾರಣವಿಲ್ಲದೆ ಬಿಡಲಾರನು" ಎಂದು ಮೂರನೇಯವಳೆಂ ದಳು ಅಂತೂ ಶಾಂತೆಯ ಜೀವನ ಚರಿತ್ರೆ ಯನ್ನು ತೋರಿದ ಮಟ್ಟಿಗೆ ರಂಗುಬೆರಸಿ ಪ್ರಚಾ ರ ಮಾಡಿದ್ದಾಯಿತ ಎಲ್ಲರಿಗೂ ಬೇಕಾದ ಶಾಂತೆಯು ಈಗ ಯಾರಿಗೂ ಬೇಡವಾದಳು ಸಾಧ್ವಿಯಾದ ಶಾಂತೆಯು ಜಾರಿಣಿಯೆಂದು ಕರೆ ಯಲ್ಪಟ್ಟಳು ಸಮಾಜವು ಅವಳನ್ನು ಕಂಡು ಬುಸುಗುಟ್ಟಿತು ಎಲ್ಲರ ನೆಚ್ಚಿನ ಶಾಂತೆ ಇಂದು ಎಲ್ಲರ ರೊಚ್ಚಿಗೆ ಕಾರಣಳಾದಳು ಜಗತ್ತಿನ ಸ್ಥಿತಿಯು ಹೀಗೆ

ನೆರೆಕರೆಯವರು ಶಾಂತೆಯನ್ನು ಬಿಟ್ಟು ಹಾಕಿದರೂ ಅವಳಿಗೆ ಸಹಾಯಮಾಡಲು ಹಲ ವರು ಸಿದ್ಧರಿದ್ದರು ಅವರಾರೆಂದರೆ ಕಾಳೀ ಚರಣರಂತಹ ಸಮಾಜದೂಷಕರು ಆದರೆ ತನ್ನ ವಿಷಯ ಸಮಾಜವು ಉದ್ವಿಗ್ನವಾದ ದನ್ನು ತಿಳಿದ ಶಾಂತೆಯು ಈ ಬಂಡಗಾರರ ಕ್ರಾಂತಿ ಯನ್ನು ದಿಟ್ಟತನದಿಂದ ಅಡಗಿಸಿ, ಲಜ್ಜೆಯನ್ನ ತೊರೆದು, ತನ್ನ ಬಾಲಕರ ಏಳಿಗೆಗಾಗಿ ಐಶ್ವರ್ಯ ವಂತರ ಮನೆಗಳಲ್ಲಿ ಊಳಿಗಕ್ಕೆ ನಿಂತು ಬಾಲ ಕರ ಕಷ್ಟ ಒಡಲ ಗಳಿಗ ಶಾಂತಿಯ ನ್ನರಿಸಿದಳ ಸಿಕ್ಕಿದುದರಲ್ಲಿ ಅಲ್ಪ ಸ್ವಲ್ಪವನ್ನು ಉಳಿಸಿ ಎಮ್ಮೆ ಗಳನ್ನು ಕ್ರಯಕ್ಕೆ ಪಡೆದು ಅವುಗಳ ಹಾಲನ್ನ ಹೊಟೇಲಿಗೆ ಒಪ್ಪಿಸಿ ಮಕ್ಕಳ ಜೀವನವನ್ನ ಸುಖಮಯವಾಗಿ ಮಾಡಲು ಪ್ರಯತ್ನಿಸಿದಳು ಆದರೆ ಸಾಧ್ಯವಾಗಲಿಲ್ಲ ಅವಳ ತನ್ನ ಚಿಕ್ಕ ಸಂಸಾರದ ರಕ್ಷಣೆಗಾಗಿ ಬಹಳ ಜತನದಿಂದ ಎಷ್ಟು ಕಷ್ಟಪಟ್ಟು ದುಡಿಯುತ್ತಿದ್ದಳೋ ಅಷ್ಟೇ ದ್ವಿಗುಣಿತವಾಗಿ ಸಮಾಜವು ಅವಳನ್ನು ನಿಂದಿ ಸಿತು 'ಗಂಡನ ಸತ್ತು ಹೋಗಿದ್ದನೋ ಏನೊ, ಆದರೂ ರಂಭೆಯಂತೆ ಮೆರೆಯುತ್ತಾ ಳಲ್ಲ ಇವಳಿಗೆ ನಾಚಿಕೆಯಾದರೂ ಬೇಡವೆ ಎಂದಿತ ಸಮಾಜ ಒದೆದ ಗಂಡನು ತ್ಯಜಿಸಿದ ದು ಇನ್ನೊದೆದ ಮಕ್ಕಳ ಆರೈಕೆಯು ಕಷ್ಟ ಆದರೊಡನೆ ಸಮಾಜದ ವಕ್ರದೃಷ್ಟಿ ಇವು ಮೂರೂ ಅವಳನ್ನ ಶಿಥಿಲಳನ್ನಾಗಿ ಮಾಡಿತ ಆದರೂ ಶಾಂತೆಯು ಮನಸ್ಸಿನಲ್ಲಿ ಉಕ್ಕಿ ಬರು ತ್ತಿದ್ದ ದುಃಖವನ್ನು ಒಗಿಹಿಡಿದ ಮಕ್ಕಳನ್ನು ಕಂಡು ಅದನ್ನು ಮರೆಯತೊಡಗಿದಳು

ಬಡವರ ಮಕ್ಕಳ ಎಲ್ಲಿದರೊಬ್ಬುದರಲ್ಲಿ ತಿಲಮಾತ್ರವೂ ಸಂಶಯವಿಲ್ಲ ರಾಮ ಲಕ್ಷ್ಮಣ ರೆಂಬ ಶಾಂತೆಯ ಉರ್ವರ ಮಕ್ಕಳು ತಾಯಿ ಯು ಒದಗಿಸಿಕೊಟ್ಟ ಸೌಕರ್ಯದಿಂದಲೂ, ಶಾಲಾಧಿಕಾರಿಗಳ ಕೃಪೆಯಿಂದಲೂ ಎಸ್ ಎಲ್ ಸಿ ವರೆಗೆ ಕಲಿತು ಈಗ ದುಡಿಯಲು ಪ್ರಾರಂಭಿಸಿ ದರು ಹಿರಿಯವನ ಹಳ್ಳಿಯ ಶಾಲೆಯೊಂದ ರಲ್ಲಿ ಅಧ್ಯಾಪಕನಾಗಿದ್ದನು ಕಿರಿಯವನು ಪೇಟೆಯಲ್ಲಿ ಕರಣೀಕ ವೃತ್ತಿಯನ್ನ ನಡೆಸುತ್ತಿ ದ್ದನ ಅಂತೂ ಚಿಕ್ಕಂದಿನಿಂದ ತಮಗಾಗಿ ಕಷ್ಟಪಟ್ಟು, ಎಲ್ಲವನ್ನೂ ಕಳೆದುಕೊಂಡ ಈಗ ಅನಾರೋಗ್ಯದಿಂದ ಬಳಲುತಿದ್ದ ಮಾತೆಯನ್ನ ಬಹಳ ಪ್ರೀತಿಯಿಂದ ಸಾಕತೊಡಗಿದರು ಮಾ ತೆಯ ಎಲ್ಲಾ ಬಯಕೆಗಳನ್ನು ಸಂಪೂರ್ಣಗೊ ಳಿಸಿದರು ತಂದೆಯನ್ನು ಹುಡುಕಿ ಮನೆಗೆ ಬರುವಂತೆ ಮಾಡಬೇಕೆಂದು ಪ್ರಯತ್ನಿಸಿದರ ಆದರೆ ಕೃತಕಾರ್ಯರಾಗಲಿಲ್ಲ ಮಾತೆಯು ಸುತರ ಅಭಿವೃದ್ಧಿಯನ್ನು ಕಂಡು ತನ್ನ ದುಃಖ ವನ್ನು ಮರೆಯತೊಡಗಿದಳು ಇನ್ನು, ಅವಳ ಕಡೆಯದೊಂದು ಆಶೆಯು ಮಾತ್ರ ಬಾಕಿ ಉಳಿ ಯಿತು ರಾಮ ಲಕ್ಷ್ಮಣರನ್ನು ಮದುವೆ ಮಾ ಡಿಸಿ ಅವರು ಸಂಸಾರಿಗಳಾಗಿ ಬಾಳುವುದನ್ನು ಕಣ್ಣಾರೆ ಕಾಣಬೇಕೆಂದು ಆದರೆ ಅವಳ ಈ ಕೊನೆಯ ಆಶೆಯು ಮಾತ್ರ ನಿರಾಶೆಯಾ ಯಿತು

ರಾಮಲಕ್ಷ್ಮಣರನ್ನು ಕಂಡ ಅನೇಕ ಮನು ಷ್ಯರು ತಮ್ಮ ಪುತ್ರಿಯರ ಜಾತಕಗಳನ್ನು ತೆಗೆ ದುಕೊಂಡು ಬಂದರು ಮಗಳ ಜಾತಕವನ್ನು ಕೊಟ್ಟು ಹುಡುಗನ ಜಾತಕವನ್ನು ಕೊಂಡು ಹೋದರು ಆದರೆ ಜಾತಕಗಳು ಕೂಡಿಬರು ತ್ತವಾದರೂ ಹುಡುಗಿಯ ಮನೆಯವರು ಪುನಃ ಇವರ ಮನೆಯ ಮೆಟ್ಟಲನ್ನು ಹತ್ತಲಿಲ್ಲ ಹೀಗೆ ಅನೇಕ ತಡವೆ ಆಗಲು, ಇದರ ಕಾರಣವೇ ನೆಂದು ಶಾಂತೆಗೂ ಚಿಂತೆಯಾಯಿತು ರಾಮ ಲಕ್ಷ್ಮಣರಿಗೂ ಆಶ್ಚರ್ಯವಾಯಿತು ಹಾಗಾ ದರೆ ಯಾರೂ ಅವರಿಗೆ ತಮ್ಮ ಕುವರಿಯನ್ನು ಕೊಡಲೊಪ್ಪರೆ? ವಿಹ್ವಲರಾದ ರಾಮ ಲಕ್ಷ್ಮಣ ರು ಇದರ ಕಾರಣವನ್ನು ಹುಡುಕಬೇಕೆಂದು ಪ್ರಯತ್ನಿಸಿದರು ಆಗ ಅವರಿಗೆ ತಿಳಿದುಬಂದ ವಿಷಯವೆಂದರೆ ಸಮಾಜದ ಅವಹೇಳನ ಶಾಂತೆಯು ಗಂಡನನ್ನು ಏಕೆ ಮನೆಯಿಂದ ಹೊರಡಿಸಿದಳು? ಅವಳ ಮಕ್ಕಳ ವಿದ್ಯಾಭ್ಯಾ ಸವು ಹೇಗಾಯಿತು? ಎಂಬೀ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವು ಅವರಿಗೆ ಸಮಾಜ ದಿಂದ ದೊರಕಲಿಲ್ಲ ಇದೇ ಅದರ ಕಾರಣ ರಾಮ ಲಕ್ಷ್ಮಣರು ಮಾರ್ಗಹೀನರಾದರು— ಶಾಂತೆಯು ಇದನ್ನು ತಿಳಿದು ಹಾಸಿಗೆ ಹಿಡಿ ದಳು ತಪ್ಪಾರದು ಅವಳದೆ? ಅವಳೇನು ಗಂಡನನ್ನ ಬೇಕೆಂದ ಹೊರದೂಡಿದ್ದಳೇ? ಪರ ಪುರುಷನನ್ನು ಕಣ್ಣೆತ್ತಿ ಪಾಪದೃಷ್ಟಿಯಿಂದ ನೋ ಡದ ಸಾಧ್ವಿ ಶಾಂತೆಯು ಕುರುಡು ಸಮಾಜದ ಕಣ್ಣಿನ ಕಿತ್ತೆಗೆಯಲಿ ಗಂಡನು ಸ್ವತಃ ಅಲ್ಲಿ ರದೆ ಶಕ್ತಳಾಗುವುದಾದರೂ ಹೇಗೆ?

ಅಂತಿಮ ಕಾಲದಲ್ಲಿ ದೊರಕಿದ ಸುಖದ ಹೂವಿನಲ್ಲಿ ಇಷೊಂದ ಮುಳ್ಳು ಅವಳ ಲಿಬಲ ಹೃದಯವನ್ನು ಚೆನ್ನಾಗಿ ಚುಚ್ಚಿತ ಮಗ ಮರನೇ ಮರಗಿದಳ —ಅದರೊಡನೆ ಕರಗಿ ದಳು ಮಕ್ಕಳ ದೀನ ವದನಗಳನ್ನು ನೋ ಡುತ್ತಾ ಹೇ ಜಗದೀಶ್ವರಾ ತಪ್ಪಾರದೆಂದು ನೀನೇ ಜಗತ್ತಿಗೆ ತಿಳಿಸು ಎಂದ ಬೇಡಿ ಕೊನ ಇಹಲೋಕ ಯಾತ್ರೆಯನ್ನು ಮುಗಿಸಿದಳ ಆದರೆ ಸಮಾಜವು ಮಾತ್ರ ಇಷ್ಟರ ವರೆಗೆ ತಪ್ಪಾರದೆಂದ ಬಿಂಬಿಸಿದ್ದಿಲ್ಲ ಏಕಿಲ್ಲರ ಇಂತಹ ಘೋರ ಸಮಾಜದ ಸುಭಗರಾಗಿರುವು ದಕ್ಕೆ ತಲೆ ಸಲ ಒಂಟಿರವಾಗಿರುವುದ ಒಳ್ಳೆಯದೆ ಅಲ್ಲವೆ?

HOUNSA

ಹಂಸಾ ಸ್ನೋ ಮತ್ತು
ಬ್ರಿಲ್ಲಿಂಟೈನ್,
ಉಪಯೋಗಿಸಿರಿ
ಕೆ ವೆಂಕಟೇಶ ಬಾಳಿಗ,

WANTED

4 YOUNG WORKING PARTNERS 4

Capable of investing the sum of Rs 200 for sound and never indiginous industry to be started shortly

Please send communications to —

'K'

C/o Swadeshabhimani

Mangalore

ಸಾಮುದ್ರಿಕಾಶಾಸ್ತ್ರ ಎಂಬ ಪ್ರೇಮ ರಹಸ್ಯಗಳು — ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೇಮದ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೇಮದ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೇಮದ ರಹಸ್ಯಗಳು ಬೆಲೆಗಳ ಫೋಟೋಗಳ ಸಹಿತ ಕೂಡಿದೆ. ಮಲಗುವ ಮನೆಯಲ್ಲಿ ನೃಥಿಬಾರಿಗಳ ವಿನೋದಗಳು, ವೇಶ್ಯಾ ಕನ್ಯೆಗಳು ಬೋಧಿಸುವ ಉಪಾಯಗಳು, ಮಲಗುವ ಮನೆಯ ಪ್ರೇಮಿಯ ೩೩ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂತರೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1

ಇದರ ಸಂಗಡ ೧೨ ಫೆಂಟ್ ಬಣ್ಣಗಳ ಕಲರ್ ನೇಚರ್ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,

ಪೋಸ್ಟು ಬೋಕ್ಸ್ ನಂ. 287 ಮದರಾಸ್.

ವಿವಾಹ, ಜೀವಲೋಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕಾದರೆ ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಹಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

ESTED- 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,

ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ವತ್ಪ್ರವೀಣರು.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 8	3—12
ಮುಸ್ಕತಿ ...	3—10	4— 4
ಗುಡ್ಡು ...	3—10	4— 0
ಊರ ಅವ್ವಲ್ ಬೆಲ್ಲಗೆ ...	4— 0	4—12
ರಂಗೂನು ಬೆ. ಗೋ. ೧ಕ್ಕೆ...	6 — 8	7— 0
ಎಲ್ಲೂರು ಬೆ. ಮು. ೧ಕ್ಕೆ...	3—14	4— 0
ಗೋಧಿ ಗೋಣಿ ೧ಕ್ಕೆ ...	11 — 0	13— 0
ತೊಗರಿ ಗೋಣಿ ೧ಕ್ಕೆ ...	9 — 8	12— 8
ಹುರುಳಿ ಗೋಣಿ ೧ಕ್ಕೆ ...	5— 4	5 — 6
ಕಡಲೆ ಗೋಣಿ ೧ಕ್ಕೆ ...	8 —14	12 — 8
ತೊಗರಿಬೇಳೆ ಗೋಣಿ ೧ಕ್ಕೆ...	11— 0	19— 0
ಉದ್ದು ಗೋಣಿ ೧ಕ್ಕೆ .	9— 0	9 — 8
ಹೆಸರು ಗೋಣಿ ೧ಕ್ಕೆ ..	7—12	8— 8
ಊರುಬೆಲ್ಲ ಖಂಡಿ ೧ಕ್ಕೆ ...	27— 8	32— 8
ಉಪ್ಪು ಗೋಣಿ ೧ಕ್ಕೆ ...	4—10	5—14
ಕೊಪ್ರ ಖಂಡಿ ೧ಕ್ಕೆ ...	75— 0	84— 0
ಕೊಪ್ರ ಹಿಂಡಿ ಖಂಡಿ ೧ಕ್ಕೆ...	20 — 0	20— 8
ಎಳ್ಳಿಂಡಿ ಖಂಡಿ ೧ಕ್ಕೆ ..	27 — 8	31 — 4
ಕೊಪ್ರ ಎಣ್ಣೆ ಮುಡಿ ೧ಕ್ಕೆ .	5— 8	6— 0
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 5	7— 5
ಬೋರಿನ ಸಕ್ಕರೆ ಮು. ೧ಕ್ಕೆ.	3— 0	3 — 0
ಮೆಣಸು .	4— 8	6— 0
ಸಾಸಿವೆ ಮುಡಿ ೧ಕ್ಕೆ	5 — 4	5— 8
ಕಾಳುಮೆಣಸು ಖ ೧ಕ್ಕೆ .	97 — 8	100— 0
ಯೇಲಕ್ಕಿ ಬೀಜ ಮುಡಿ೧ಕ್ಕೆ	80— 0	85— 0
ಗೇರುಬೀಜ ಮು. ೧ಕ್ಕೆ	3 —10	3 — 12
ಕಪ್ಪುಳ ಖಂಡಿ ೧ಕ್ಕೆ	51— 0	51— 4
ಕಾಂಡ್ಲ್ರಕಗಡು ಮು ೧ಕ್ಕೆ	14— 12	15— 0
ಕಾಂಡ್ಲ್ರಪಾತ್ರಗಳು ಮು ೧ಕ್ಕೆ	17— 0	17— 8
ಚೀಪಟೆಕ್ರ ಸೇರು ೧ಕ್ಕೆ .	13— 8	15— 0
ಹಿತ್ತಾಳೆ ತಗಡು ಮು ೧ಕ್ಕೆ	12— 0	12— 8
ಶಬನು ೧ಕ್ಕೆ	22— 7	22— 8
ಮುಟ್ಟಳೆ ಹುಳಿ ಖಂಡಿ ೧ಕ್ಕೆ	40— 0	45— 0
ಪೀಬೆರ್ ಕಾಫಿ ಖಂಡಿ ೧ಕ್ಕೆ	115— 0	150— 0
ಫ್ಲಾಟೇರಿ ಕಾಫಿ ಖಂಡಿ ೧ಕ್ಕೆ	190— 0	200— 0
ಮಡಿಕೇರಿ ಏಲಕ್ಕಿ	60— 0	62 — 0

೧೧ ವರುಷಗಳಿಂದಲೂ ಕರುಳಿನಲ್ಲಿಯ ಅಸ್ತವ್ಯಸ್ತತೆ ಹಾಗೂ ಮುರುಗುತ್ತಿ

ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರು ಅದನ್ನು ಅದ್ಭುತವಾದ ರೀತಿಯಲ್ಲಿ ಶಮನಗೊಳಿಸಿತು.

ಹೊಟ್ಟೆನೋವಿನ ಅರಿವು ಇದ್ದವರು ಹೊಟ್ಟೆನೋವು ಕುಸು ಪ್ರಾರಂಭವಾದೊಡನೆಯೇ ಅದನ್ನು ಭಯಂಕರವಾದ ರೀತಿಯಲ್ಲಿ ತ್ರಾಸಗೊಳಿಸುವುದಾಗಿ ನೆನಸಿ ಬೇಗನೆ ಔಷಧಿಯನ್ನು ತೆಗೆದುಕೊಳ್ಳುವರು. ಸಿಕ್ಕಿಂತಕೆ ಮತ್ತು ಅಲಸ್ಯ ಕನವು ಹಲವು ಜನರನ್ನು ಇಂತಹ ದುಃಸ್ಥಿತಿಗೆ ಈಡುಮಾಡಿದೆ ಇಂತಹ ವೇಳೆಯಲ್ಲಿ ಒಳ್ಳೇ ಔಷಧಿಯೆಂದರೆ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರ್, ಇದು ಹೊಟ್ಟೆಯ ಎಂತಹ ವೇದನೆಯುದ್ದರೂ ಕೂಡ ಪರಿಹರಿಸಿ, ಸುಖವ ಸ್ಥಿತಿಯುಕ್ತವೆ.

"11 ವರುಷಗಳಿಂದಲೂ ನಾನು ಉದರ ವೇದನೆಯಿಂದ ಪೀಡಿತನಾಗಿದ್ದೆ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಲು ಪ್ರಾರಂಭಿಸಿದೊಡನೆಯೇ ನನ್ನ ಪ್ರಕೃತಿಯು ನೆಟ್ಟಗಾಯಿತು

ಮಿ। ಎಫ್ ಎ.

ಆರೋಗ್ಯವನ್ನು ಪಡೆದೆನೆಂಬ ಸಂತೋಷದಿಂದ ಬರೆದ ಕಾಗದವಿದು. ನಿಮಗೂ ಇಂತಹ ವೇದನೆಯುದ್ದರೆ ಈ ಔಷಧಿಯ ಸೇವನೆಯಿಂದ ಮಿ। ಎಫ್ ಎ ಗೆ ಸಿಕ್ಕಿದ ಲಾಭವು ನಿಮಗೂ ದೊರಕೀತು. ಆದುದರಿಂದ

Alex. C. Maclean

ಎಂಬ ಸಹಿಯ ಕಂಪು ಮುದ್ರೆಯುಳ್ಳ ಸೀಸೆಯನ್ನೇ ಪಡೆದುಕೊಳ್ಳಿರಿ ಇಂತಹ ಸಹಿಯಿಲ್ಲದ ಔಷಧಿ ಪಡೆದ ಪುಡಿಯು ಪ್ಯಾಕೇಟು ಪಡೆದು ಮೋಸಹೋಗಬೇಡಿ ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಟೀನುಗಳಲ್ಲು ಪೆಟ್ಟಿಗೆಗಳಲ್ಲು ಮಾರಲ್ಪಡುತ್ತದೆ

ಕೈಕೀಳ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ

S No 51.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

೬ ಅಂಕಗಳುಳ್ಳ **ಭಕ್ತಶಿಖಾಮಣಿ ಪಾಪೂಜಿಪಂತ** ಸಂಗೀತ ನಾಟಕ.

ಬರೆದವರು.—ಶ್ರೀ ಜಿ. ಎಸ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ। ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರ!" ।

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮಂಗಳೂರಿನ ಮನೋಹರವಾದ ೩೫ ಗೀತಗಳಿವೆ. ಕಥಾಭಾಗದಲ್ಲಿ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ—12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ-1. ಎಲ್ಸ್ಯಾಂಡ್ ಪಬ್ಲಿಶಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ವೈಶಾಖ ಬ। ೧೧ ಶನಿವಾರದಿಂದ, ಜ್ಯೇಷ್ಠ ಶು। ೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೭ನೇಯ ವೃಷಭ (ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
5	ಶನಿ	೧೧	೧೮	ರೇವತಿ	೩	೨೨	ಅಕ್ಷಯತದಿಗೆ
6	ರವಿ	೧೨	೧೫	ಅಶ್ವಿನಿ	೫೩	೨೩	
7	ಸೋ	೧೩	೩೫	ಕೃತ್ತಿಕ	೫೨	೨೪	
8	ಮಂಗ	೮	೫೩	ರೋಹಿಣಿ	೪೮	೨೫	
9	ಬುಧ	೧	೪೮	ಮೃಗಶಿರ	೪೪	೨೬	
10	ಗುರು	೨	೪೩	ಆರ್ದ್ರಾ	೪೧	೨೭	
11	ಶುಕ್ರ	೩	೩೮	ಪುನರ್ವಸು	೩೮	೨೮	

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತು ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಮೋದಿಕ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ಮಂದಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡಕೊಂಡು ಬಂದಿರುವದು ತಿಳುವಳಿಗೆ ಇರಬಹುದಷ್ಟೆ

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತಂಡಿಕೊಳ್ಳುವದರ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಗಂದ್ರತಿ ನಾವು ತರಿಸಿಕೊಳ್ಳುವರೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ವಸೂಲುಮಾಡಿ ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಮೋದಿಕ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿಪಡೆಯತಕ್ಕದ್ದು. ತಿಳಿದಿರುವುದು.

THE

BANK OF MANGALORE LTD.,

MANGALORE.

ESTD 1931

Branches-

Panemangalore Mudabidri & Padubidri

Chairman—**Philip J. Chandran, Esq.,**

Retd. Dt. Registrar of Joint Stock Companies

On & from 1st of January 1937,

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Saving Bank deposit 3½% on daily balances

All kinds of banking business transacted.

U. R. PAI, N. U. PAI, *Managing Directors.*

THE

Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿಡಿಸುವ ವಾಡಿಕೆಯನ್ನು ಮರೆಯಬೇಡಿರಿ

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ, ಜೊಂತಕ ಹುಳ, ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು. ಇದರ ಸೇವನೆ, ಸಕ್ಕರೆ ಬೆರಸಿರಿ. (ಪರಲೆಕ್ಕ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಟುಕಡಿರೀಚನ ಗುಳಿಗೆ	0	0	6
ಚಿತ್ರಕಾಂತ ಪೌಡರ್ ಪ್ಯಾಕೆಟ್ 1ಕ್ಕೆ	0	1	0
ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ಶಾಂತಿಯಾಗುವುದು. ಶರ ಸುಗಂಧ ಸೀಸೆ 1ಕ್ಕೆ	0	8	0

ಸಿಗುವ ಸ್ಥಳ:- ಪಾ ಕಂಪೆನಿ,

ಗವರ್ನಮೆಂಟ್ ಕೋಲೇಜಿನ ಎದುರು, ಮಂಗಳೂರು.

ವನಿತಾ ವಿಭಾಗ

ಮದುವೆ ಮಾಡುವ ಕಸುಬು

ಜರ್ಮನಿಯಲ್ಲಿ ಮದುವೆಮಾಡುವ ಕಸುಬನ್ನು ಪ್ರಾರಂಭಿಸಲು ಪ್ರೋತ್ಸಾಹಿಸುತ್ತಾರೆ. ಸುಂದರ ವಧುವರರನ್ನು ತಯಾರಿಸಿ ಕೊಡುವುದಾಗಿ ಸಾರಲ್ಪಡುವ ಜಾಹೀರಾತುಗಳು ಅನೇಕ ವೃತ್ತಪತ್ರಿಕೆಗಳಲ್ಲಿ ಬರುತ್ತಲಿವೆ ಈ ಮದುವೆ ವ್ಯಾಪಾರಕ್ಕೆ ಮಧ್ಯಸ್ಥಿಕೆಯನ್ನು ವಹಿಸುವ ತುಂಬಾ ಮಹಿಳೆಯರು ಜರ್ಮನಿಯಲ್ಲಿದ್ದಾರೆ ಇವರಿಗೆ ಸರಕಾರದ ಪ್ರೋತ್ಸಾಹವಿದೆ.

"ಹಣಕ್ಕಾಗಿ ಸ್ವಾರ್ಥದಿಂದ ಮದುವೆಯಾಗುವವರ ಮೇಲೆ ನಾಜೀ ಸರಕಾರವು ತನ್ನ ವಿರೋಧವನ್ನು ತೋರಿಸುತ್ತದೆ ಆರೋಗ್ಯವಂತ ದಂಪತಿಗಳಿಗೆ ಹುಟ್ಟಿದ ಮಕ್ಕಳನ್ನು ನಾಜೀ ಸರಕಾರವು ಪ್ರೋತ್ಸಾಹಿಸುತ್ತದೆ" ಹೀಗೆಂದು ನಾಜೀ ಸರಕಾರದ ಪತ್ರಿಕೆಯೊಂದರಲ್ಲಿ ಪ್ರಕಟವಾಗಿತ್ತು. ಮದುವೆ ವಹಿವಾಟುಗಳಿಗೆ ಮಧ್ಯಸ್ತಿಕೆ ತೆಗೆದುಕೊಳ್ಳುವವರಿಗೆ ವಂಶ, ಕುಲಗೋತ್ರ, ಆರೋಗ್ಯ, ದಾಂಪತ್ಯ ಜೀವನದ ಕುರಿತು ಯೋಗ್ಯ ಶಿಕ್ಷಣವನ್ನು ಕೊಡಲಾಗುವುದು ಅಲ್ಲದೆ ತರಬೇತು ಹೊಂದಿದವರಿಗೆ ಶಿಫಾರಸು ಪತ್ರಗಳನ್ನೂ ಕೊಡಲಾಗುವುದು

ಹೆಲನ್ ಕೆಲ್ಲರ್‌ಳು ಜಪಾನಿನಲ್ಲಿ

ಜಪಾನಿಯರಿಂದ ಪರಿಶುದ್ಧ ಮಹಿಳೆಯೆಂದು ಗೌರವಿಸಲ್ಪಡುವ ಅಮೇರಿಕದ ಪ್ರಖ್ಯಾತ ಮಹಿಳೆಯೂ ಗ್ರಂಥಕರ್ತಳೂ ಬಾಲ ಅಂಧಳೂ ಆದ ಹೆಲನ್ ಕೆಲ್ಲರಳು ಜಪಾನಿನ ಯೊಕೊಹಾಮಾದ ಬಂದರಿನಲ್ಲಿಳಿಯುವಾಗ, ಸಾವಿರಾರು ಜಪಾನೀಯ ಮಕ್ಕಳಿಂದಲೂ, ಸರಕಾರಿ ಅಧಿಕಾರಿಗಳಿಂದಲೂ ಅಭೂತ ಸ್ವಾಗತವನ್ನು ಪಡೆದಳು ಜಪಾನ್ ಚಕ್ರವರ್ತಿಗಳ ತಮ್ಮಂದಿರಾದ ಯುವರಾಜ ಟಕಾಮಾಟ್ಸುರವರು ಅವಳನ್ನು ಸ್ವಾಗತೀಕರಿಸಿದರು

ಹೆಲನ್ ಕೆಲ್ಲರಳು ಬಾಲ್ಯದಿಂದಲೇ ಅಂಧಳಾಗಿದ್ದಳು ಅವಳು ಅನೇಕ ಗ್ರಂಥಗಳನ್ನು ಬರೆದು ಕೀರ್ತಿ ಪಡೆದಿರುತ್ತಾಳೆ ಪ್ರೆಸಿಡೆಂಟ್ ರೂಸ್‌ವೆಲ್ಟರು ಅವಳಿಗೆ ಒಂದು ಸಂದೇಶವನ್ನು ಕೊಡುತ್ತಾ "ಜಪಾನಿನ ಜನರಿಗೆ ಅಮೇರಿಕಾನರ ಸೌಹಾರ್ದದ ಸುವಾರ್ತೆಯನ್ನು ಒಯ್ಯಲು ನೀವೇ ಯೋಗ್ಯರೆಂದು ನನಗೆ ತಿಳಿದು, ನಾನೀ ಸಂದರ್ಭದಲ್ಲಿ ನಿಮ್ಮ ಸುವಾರ್ತೆಯನ್ನು ಸಾರುವ ಕೆಲಸದಲ್ಲಿ ಯಶಸ್ಸನ್ನು ಬಯಸುತ್ತೇನೆ ಎಂದು ತಂತಿ ಕಳುಹಿಸಿದರು

ಜಪಾನ್ ರಾಜಕುಟುಂಬದವರು ಅವಳನ್ನು ಗೌರವಿಸುವರು ಜಪಾನಿನ ಪ್ರಾಮುಖ್ಯ ನಗರಗಳಲ್ಲಿ ಕೆಲ್ಲರಳು ಭಾಷಣಗಳನ್ನು ಮಾಡಲಿರುವಳು

ಬಾಲಕ ಬಾಲಕಿಯರ ಮುಷ್ಕರ

ಫಿಲಡೆಲ್ಫಿಯಾ ನಗರದ ಒಂದು ಚಲಚಿತ್ರ ಕಂಪೆನಿಯ ಮೆನೆಜರರು, ಒಂದು ಮೆಟನಿ ಪ್ರದರ್ಶನದಂದು ಶಾಲಾ ಮಕ್ಕಳಿಗೆ ಅಂದಿನ ಚಿತ್ರವನ್ನು ತೋರಿಸಲಾಗುವುದಿಲ್ಲವೆಂದು ತಿರಸ್ಕರಿಸಿದನು ಅಂದು ಚಿತ್ರವನ್ನು ನೋಡಬಂದ ಸುಮಾರು ಒಂದು ಸಾವಿರ ಶಾಲಾ ಮಕ್ಕಳು, ತಮಗೆ ಚಿತ್ರವನ್ನು ತೋರಿಸದೆ ಇದ್ದರೆ ತಾವು ಚಲಚಿತ್ರ ಮಂದಿರದ ಮುಂದೆ ಮುಷ್ಕರವನ್ನು ಕೈಕೊಳ್ಳುವುದಾಗಿ ತಿಳಿಸಿದರು ಸುಮಾರು ಒಂದೂವರೆ ಗಂಟೆಯ ಕಾಲದ ವರೆಗೆ ಮಕ್ಕಳು ಮುಷ್ಕರವನ್ನು ಮುಂದರಿಸುತ್ತಿರುವುದನ್ನು ಕಂಡು ಚಲಚಿತ್ರ ಮಂದಿರದ ಮಾಲಿಕರು ಅವರಿಚ್ಛೆಗಳನ್ನು ಸಲಿಸಿದರು

೧೪ ವರ್ಷದ ವಧುವಿಗೆ ವಿವಾಹ ವಿಚ್ಛೇದದ ಅನುಮತಿ

ಬ್ರಿಟನಿನ ಒಂದು ಶಾಲೆಯಲ್ಲಿ ಕಲಿಯುತ್ತಿದ್ದ ದೊರತಿ ಪೋಕ್ ಎಂಬ ೧೪ ವರ್ಷದ ಕೈಕಬಾಲೆಯು ತನ್ನ ನೆರೆಯ ಸಂಗಾತಿಯಾದ ೧೫ ವರ್ಷದ ವಿಲ್ಲಿ ಪೋಕ್ ಎಂಬ ಹುಡುಗನನ್ನು ಮದುವೆಯಾಗಲು ಮನೆಯಿಂದ ಓಡಿಹೋದಳು. ಅವರೊಳಗೆ ಮದುವೆಯಾಗಿ ವರ್ಷಗಳು ಎರಡು ಕಳೆದು ಹೋದುವು ಈಗ್ಗೆ ಒಂದು ತಿಂಗಳ ಹಿಂದೆ ಈ ಬಾಲದಂಪತಿಗಳೊಳಗೆ ಜಗಳವಾಗಿ ಹುಡುಗಿಯು ವಿವಾಹ ವಿಚ್ಛೇದನಕ್ಕೆ ಅರ್ಜಿಮಾಡಿಕೊಂಡಾಗ ಕೋರ್ಟಿನಲ್ಲಿ ಅವಳಿಗೆ ಒಪ್ಪಿಗೆ ಕೊಡಲಾಯಿತು ಹುಡುಗಿಯು ತನ್ನ ತಂದೆಯನ್ನು ಪುನಃ ಸೇರಿಕೊಂಡಳಂತೆ

ಮೊಸ್ಕೊ ಮೃಗಾಲಯದ ಪ್ರಾಣಿಗಳನ್ನು ಮಕ್ಕಳಿಗೆ ಸಾಕಲು ಕೊಡುತ್ತಾರೆ

ಪ್ರಪಂಚದಲ್ಲಿ ಅತೀ ದೊಡ್ಡ ಮೃಗಾಲಯವಾದ ರಷ್ಯದ ಮೊಸ್ಕೊ ಮೃಗಾಲಯದ ಅಧಿಕಾರಿಗಳು ಅಲ್ಲಿನ ಪ್ರಾಣಿಗಳನ್ನು ಮಕ್ಕಳಿಗೆ ಸಾಕಲು ಕೊಡುವ ಏರ್ಪಾಡು ಮಾಡಿರುತ್ತಾರೆ ಆದರೆ ಮಕ್ಕಳು ಮನೆಗೆ ತರುವ ಹುಲಿಮರಿಗಳು, ಕರಡಿ ಮರಿಗಳು, ದೊಡ್ಡ ದೊಡ್ಡ ಪಕ್ಷಿಗಳನ್ನು ಸಾಕಲು ಅನುಕೂಲವಿಲ್ಲವೆಂದು ಮಕ್ಕಳ ತಂದೆತಾಯಿಗಳು ಅಧಿಕಾರಿಗಳಿಗೆ ಬರಕೊಂಡಾಗ, ಆ ಮಕ್ಕಳು ಚಿಕ್ಕ ಚಿಕ್ಕ ಪ್ರಾಣಿಗಳನ್ನು ಬದಲಿಗೆ ಒಯ್ಯಬಹುದೆಂದಾಯಿತು

ಪತ್ನಿಗಳಿಗೆ ಉಪದೇಶ

ಲಂಡನಿನ ವಿದ್ಯಾ ಇಲಾಖೆಯ ಸಮಿತಿಯ ಒಬ್ಬ ಸದಸ್ಯಳಾದ ಮಿಸ್ ಎ ಜಿ ಪಿಲಿಪ್ ಎಂಬವಳ ಒಂದು ಭಾಷಣದಲ್ಲಿ ಹೀಗೆ ಹೇಳುತ್ತಾಳೆ -ಜನಾಂಗ ಸಭೆ ಅಥವಾ ಲೀಗ್ ಆಫ್ ನೇಶನ್ಸಿನಿಂದಲೂ ಪರಿಹರಿಸಲಸಾಧ್ಯವಾದ ಗಂಡಹೆಂಡಿರ ಜಗಳವನ್ನು, ಹೊಲಿಯುವ ಸೂಜಿಯೊಂದು ತೀರ್ಮಾನಿಸಲು ಸಾಮರ್ಥ್ಯವುಳ್ಳ ಒಂದು ಆಯುಧವಾಗಿದೆ ಇಂತಹ ಆಯುಧವನ್ನು ಯಾವ ಸ್ತ್ರೀಯೂ ಅಸಡ್ಡೆ ಮಾಡಲಾಗದು ಸೂಜಿ ಹಿಡಕೊಂಡು ಕಸೂತಿ ಕೆಲಸಕ್ಕೆ ಕೂತಿರುವ ಓರ್ವ ತರುಣಿಯ ದೇಹ ಭಾವವು ಬಹಳ ಸುಂದರವಾದದ್ದಾಗಿರುತ್ತದೆ

ಈ ಸಮಯದಲ್ಲಿ ಒಂದು ವೇಳೆ ಗಂಡ ಹೆಂಡಿರೊಳಗೆ ಜಗಳಕ್ಕೆ ಆರಂಭವಾದರೆ, ಹೆಂಡತಿಯ ಕೈಯಲ್ಲಿದ್ದ ಆ ಸೂಜಿಯನ್ನು ನೋಡಿ ಗಂಡನು ಗಾಬರಿಯಾಗದಿರಲಿಕ್ಕಿಲ್ಲ ಕಾರಣ ಅದು ಅವನ ಸಿಗರೇಟಿಗಿಂತಲೂ ಹೆಚ್ಚು ಕ್ರೂರವಾಗಿರುವಂತೆ ಕಾಣುತ್ತದೆ ಇದೇ ಮಹಿಳೆಯರ ಕೈಯಲ್ಲಿರುವ ಸೂಜಿಯು ಮಹತ್ವ-ಜಗಳಖೋರ ಗಂಡನನ್ನು ಹೆದರಿಸುವುದು

ಕೆಲವು ಗೃಹ ಸೂಚನೆಗಳು

ಬೆಳಗ್ಗೆ ಎದ್ದ ಕೂಡಲೇ ಬಿಸಿ ನೀರಿನಲ್ಲಿ ನಿಂಬೆ ಹಣ್ಣಿನ ರಸವನ್ನು ಬೆರಸಿ ಕುಡಿಯುವುದು ಸ್ತ್ರೀಯರಿಗೆ ಬಹು ಆರೋಗ್ಯವನ್ನು ಕೊಡಬಲ್ಲದು

ಕಿಟಕಿಯ ಬಾಗಿಲುಗಳು ಕೊಳೆಯಿಂದ ತುಂಬಿದ್ದರೆ, ಮೊದಲು ಒಂದು ಒದ್ದೆ ಬಟ್ಟೆಯಿಂದ ಅದನ್ನು ಒರಸಿರಿ ಆ ಮೇಲೆ ಸ್ಪಿರಿಟಿನಲ್ಲಿ ಅದ್ದಿದ ಬಟ್ಟೆಯಿಂದ ತಿಕ್ಕಿದರೆ ಕೊಳೆಯು ಸ್ವಚ್ಛವಾಗುವುದು

ಬಟಾಟೆ (ಹಾಲುಗೆಡ್ಡೆ)ಗಳನ್ನು ಬೆಯಿಸಿದ ನೀರಲ್ಲಿ ಕಪ್ಪು ಅಥವಾ ಕಂದು ಬಣ್ಣದ ಸಿಲ್ಕನ್ನು ಚೆನ್ನಾಗಿ ತೊಳೆಯಬಹುದು

ಕೆಲಸದವಳಿಗೆ ಇನಾಮು

೨೨ ಸಾವಿರ ಪೌಂಡುಗಳ ಆಸ್ತಿ

ಈಸ್ಟ್‌ಬೋರ್ನಿನ ಶ್ರೀಮಂತ ಮಹಿಳೆಯೋರ್ವಳು ಹಾರ್ಡ್‌ವಿಕ್ ರಸ್ತೆಯಲ್ಲಿದ್ದ ತನ್ನ ಮನೆಯಲ್ಲಿ ಮೃತಪಟ್ಟಳು ಮಿಸ್ ಎಮಿಲಿ ವುಡ್‌ಗೇಟ್ ಎಂದು ಅವಳ ಹೆಸರು ಸಾಯುವಾಗ ಆ ಶ್ರೀಮಂತೆಯು, ತನ್ನ ಬಳಿ ಕೆಲಸಕ್ಕಿದ್ದವಳೊಬ್ಬಳಿಗೆ ೨೨ ಸಾವಿರ ಪವನುಗಳನ್ನು ಕೊಡಬೇಕೆಂದು ತನ್ನ ಮರಣಶಾಸನದಲ್ಲಿ ಬರೆದಿಟ್ಟಿದ್ದಳು. ಮಿಸ್ ಮೇರಿ ಎನ್ ಕೋರ್ಕ್ ಎಂಬ ಆ ಪರಿಚಾರಕಳು ೩೦ ವರ್ಷಗಳ ಹಿಂದೆ ತನ್ನ ಯಜಮಾನಿಯೊಡನೆ ಕೆಲಸಕ್ಕೆ ಸೇರಿದ್ದಳು "ನನ್ನ ಯಜಮಾನಿಯು ನನ್ನನ್ನು ಎಂದೂ ಕಠಿಣವಾಗಿ ಕಂಡವಳಲ್ಲ. ತನ್ನ ಮಗಳಂತೆ ನನ್ನನ್ನವಳು ಪ್ರೀತಿಸುತ್ತಿದ್ದಳು ನನ್ನ ತಂದೆತಾಯಿಗಳನ್ನೂ ಕೂಡಾ ಅವಳು, ತನ್ನ ಮನೆಯಲ್ಲೇ ತಂದಿರಿಸಿಕೊಂಡಿದ್ದಳು ನನ್ನ ತಂದೆಯು ಇದೇ ಮನೆಯಲ್ಲಿ ಸತ್ತನು" ಎಂದು ಆ ಪರಿಚಾರಿಕೆಯನ್ನುತ್ತಿದ್ದಾಳೆ

ಒಂದು ತತ್ವ.

"ಸದಾಕಾಲವೂ ಏನಾದರೊಂದು ಕೆಲಸವನ್ನು ಮಾಡುವುದರಲ್ಲಿಯೂ, ಯಾರೊಬ್ಬನನ್ನಾದರೂ ಸದಾ ಪ್ರೀತಿಸುವುದರಲ್ಲಿಯೂ, ಮತ್ತು ಯಾವುದನ್ನಾದರೂ ನಿರೀಕ್ಷಿಸಿಕೊಂಡಿರುವುದರಲ್ಲೂ ನಿಜವಾದ ಸುಖಸಂತೋಷಗಳು ಅಡಗಿವೆ ಇದು ತನ್ನ ದೃಢವಾದ ನಂಬಿಕೆ ಇರುತ್ತದೆ" ಹೀಗೆಂದು ಮರಣಶಯ್ಯೆಯಲ್ಲಿ ಮಲಗಿದ್ದ ಡೇಮ್ ಎಲಿಜಬೆತ್ ಎಡ್ವೆರ್ ಹೊರೆ ಇವರು ತಿಳಿಸಿರುವರು ಈ ಮಹಿಳೆಯು ಇಂಗ್ಲೆಂಡಿನ ಟ್ರಾನ್ಸ್‌ಪೋರ್ಟ್ ಮಂತ್ರಿಗಳಾದ ಹೋರ್ ಬೆಲಿಶಾರ ವೃದ್ಧ ಮಾತೆ

ಜರ್ಮನ್ ಮಹಿಳೆಯರ ವಿಜಯ

ಹಿಟ್ಲರನ ನಾಜೀ ಧೋರಣೆಯ ಪ್ರಕಾರ ಜರ್ಮನ್ ಮಹಿಳೆಯರು ಹಳೇ ಪದ್ಧತಿ ಕ್ರಮ ಕಟ್ಟಳೆಗಳನ್ನು ಅನುಸರಿಸಿಕೊಂಡಿರಬೇಕು, ಆದರೆ ಅಲಿ ಜರ್ಮನ್ ಫ್ಯಾಷನ್ಸ್ ಲೀಗ್ ಎಂಬದೊಂದು ಸಂಘವು ಸ್ಥಾಪಿತವಾಗಿ ೧೦ ಮಿಲಿಯ ಜರ್ಮನ್ ಮಹಿಳೆಯರು ಅದರ ಸದಸ್ಯರಾದರು ಈ ಸಂಘವು ಚಳವಳವನ್ನು ನಡೆಸಿ ನಾಜೀಗಳ ಈ ಧೋರಣೆಯನ್ನು ಉಲ್ಲಂಘಿಸಿತು 'ಜರ್ಮನ್ ಮಹಿಳೆಯರ ವೇಷಭೂಷಣಗಳ ಶೈಲಿಯು ಆಧುನಿಕ ಪ್ರಪಂಚದ ಶೈಲಿಯನ್ನನುಸರಿಸಿಕೊಂಡಿ ಇರುವುದು. ಕ್ರೀಡಾಪ್ರಿಯರೂ, ಪುಷ್ಟಿಕಾಯರೂ ಆದ ಜರ್ಮನ್ ಮಹಿಳೆಯರು ತಮ್ಮ ದೇಹ ಸೌಂದರ್ಯವನ್ನು ಪ್ರದರ್ಶಿಸುತ್ತಾ ಸದಾ ಮುಚ್ಚಿಕೊಂಡಿರಬೇಕ ಹೀಗೆಂದ ಆ ಮಹಿಳಾಸಂಘದ ನಾಯಕಿಯು ಪ್ರಶ್ನಿಸುತ್ತಿರುವಳ

ನಾಸಿಕಛೇದನ

ಕಲ್ಕತ್ತಾದಲಿ ಶಿವಚಂದ್ರದಾಸ್ ಶರ್ಮೆ ಎಂಬಾತನು ಅನೇಕ ದಿನಗಳಿಂದ ಮಿಸ್ ವಯೋಲೆಟ್ ಫಿಲಿಪ್ಸ್ ಎಂಬ ಆಂಗ್ಲೋ ಇಂಡಿಯನ್ ತರುಣಿಯ ಸ್ನೇಹದಲ್ಲಿದ್ದು ಕಳೆದ ೧೫ ದಿನಗಳಿಂದ ಇವರೀರ್ವರಿಗೆ ಏನೋ ಬಿಗಡಾಯಿಸಿಕೊಂಡಿತ್ತು ಹೀಗಿರುವಾಗ ಗಳೆದವಾರ ಒಂದು ದಿನ ಒಂದು ಕ್ಷೌರದ ಕತ್ತಿಯನ್ನು ತೆಗೆದುಕೊಂಡು ಅವಳ ಮೂಗನ್ನು ಕತ್ತರಿಸಿ ಹಾಕಿಬಿಟ್ಟ

ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಕೇಸಾಗಿದೆ ಜಾಮೀನು ಮೇಲೆ ಅಪರಾಧಿಯು ಬಿಡುಗಡೆಯಾಗಿದೆ ಜೂನ ೧ನೇ ತಾರೀಕಿಗೆ ಕೇಸ್ ಅಡ್ಜರ್ನ್ ಆಗಿದೆ

ಹೆಲ್ಲನ್ ಕೆಲ್ಲರಳ ಹಣ ಚೀಲವನ್ನು ಕದ್ದಿರುವರು.

ಜಪಾನಿನಲ್ಲಿ ಭಾಷಣ ಸಂಚಾರಕ್ಕೆ ಬಂದ ಅಮೇರಿಕದ ಪ್ರಖ್ಯಾತ ಅಂಧ ಉಪಾಧ್ಯಾಯಿನಿಯಾದ ಹೆಲನ್ ಕೆಲ್ಲರಳ ಹಣದ ಚೀಲವನ್ನು ಯಾರೋ ಕಳ್ಳರು ಹೊಡೆದರು ಆದರೆ ಕೆಲ್ಲರಳು ಅದನ್ನು ಪೋಲೀಸರಿಗೆ ತಿಳಿಯಪಡಿಸಲಿಲ್ಲ ಕಡೆಗೆ ಹೇಗೂ ಜಪಾನಿ ಪೋಲೀಸರಿಗೆ ಆ ವಿಷಯವು ತಿಳಿಯಿತು

ಕೋಪಗೊಂಡ ಗಂಡನ ಕ್ರೌರ್ಯ.

ಇದೇ ಧನಾಬಾದಿನ ಹತ್ತಿರ ಇನ್ನೊಂದು ಹಳ್ಳಿ ಛಾಬ್‌ಧುವಾ ಎಂದು ಅಲ್ಲೊಬ್ಬ ಸಂತಾಳ್ ಹೆಂಗಸು, ಈಗ ಆಸ್ಪತ್ರೆಯಲ್ಲಿದ್ದಾಳೆ ಕಾರಣವಿಷ್ಟೆ, ಇವಳು ಪರಕೀಯನವನಲ್ಲೋ ಪ್ರೀತಿಯನ್ನಿಟ್ಟು ಪತಿತಳಾದಳಂತೆ.

ಇದನ್ನು ಕಂಡ ಗಂಡನು ಕೋಪಗೊಂಡು ಹರಿತವಾದ ಆಯುಧದಿಂದ ಅವಳ ಮೈಮೇಲೆ ಯದ್ವಾತದ್ವಾ ಹೊಡೆದನು ಇದರಿಂದ ಅವಳು ಮಹಾವಿಶಾದಕರವಾದ ಪರಿಸ್ಥಿತಿಯಲ್ಲಿದ್ದಾಳೆ

ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ

ತಾಯಿಗೆ 157 ವರ್ಷ ಮಗಳಿಗೆ 107

ಪ್ರಪಂಚದಲ್ಲಿ ಅತೀ ವೃದ್ಧ ತಾಯಿಮಗಳೀರ್ವರನ್ನು ಇಜಿಪ್ತಿನಲ್ಲಿ ಕಂಡುಹಿಡಿಯಲಾಗಿದೆ ಖಾನೇಶುಮಾರಿ ತೆಗೆಯುವಾಗ ಈ ತಾಯಿ ಮಕ್ಕಳ ಪತ್ತೆಯಾಯಿತು

ರಿಫೆಲಾ ಎಲ್ ಸಯದ್ ಎಂದು ತಾಯಿಯ ಹೆಸರು, ಅವಳಿಗೆ 157 ವರ್ಷ ವಯಸ್ಸಂತೆ ಮೊಬಾರಾಫಾ ಹಚೆನ್ ಎಂಬ ಅವಳ ಮಗಳಿಗೆ ಬರೀ 107 ವರ್ಷಗಳು ಅಷ್ಟೆ ಖಾನೇಶುಮಾರಿ ತೆಗೆಯುವ ಅಧಿಕಾರಿಗಳು ತಾಯಿ ಮಗಳ ವಯಸ್ಸಿನ ಸಂಖ್ಯೆಯನ್ನು ಮೊದಲು ನಂಬಲಿಲ್ಲ ಅವರು ನೆರಿಗಳು ಬಿದ್ದ ತಮ್ಮ ಮೈಯ ಚರ್ಮವನ್ನು ತೋರಿಸಿದರ ಆದರೂ ಅಧಿಕಾರಿಗಳಿಗೆ ನಂಬಿಗೆ ಹುಟ್ಟಲಿಲ್ಲ ಕಡೆಗೆ 157 ವರ್ಷದ ತಾಯಿಯು ನೆಪೋಲಿಯನನು ಇಜಿಪ್ತಿನಲ್ಲಿ ಮಾಡಿದ ದಾಳಿಯ ಕುರಿತು ತಿಳಿಸಿದಳು ಅವನ ಸೈನ್ಯದ ಆರ್ಪ ಫ್ರೆಂಚ ಸೈನಿಕರ [illegible] ಆಗ ಅವಳು ತರುಣಿ ಇದಳು ಇಷ್ಟು ಹೇಳಿದಾಗ ಆ ಅಧಿಕಾರಿಗಳಿಗೆ ನಂಬಿಕೆ ಹುಟ್ಟಿತ 132 ವರ್ಷಗಳ ಕೆಳಗೆ ಆ ಸ್ತ್ರೀಯ [illegible] ದುವೆಯಾಳದ [illegible] ಚರಿಸ್ಥಳ [illegible] ಏಕಮಾತ್ರ ಪುತ್ರಿ ಅವರ ಅನೇಕ ವರ್ಷಗಳಿಂದ ಆರಕೆ [illegible] ಮಣ್ಣಿನ ಗುಡಿಸಲಿನಲ್ಲಿ ಜೀವನ ಮಾಡಿಕೊಂಡಿದ್ದರಂತೆ

ಅತ್ಯಾಚಾರ

[illegible] ಒಂದಿನ [illegible] ಪೆಷ್ಯಲ್ ಮ್ಯಾಜಿಸ್ಟ್ರೇಟ ಕೋರ್ಟಿಗೆ ಒಂದ ಕೇಸು ವಿಚಾರಣೆಗೆ ಬಂದಿತ ಮಹಾ ಅಸಹ್ಯಕರವಾದ ಸಕ್ಷಿ [illegible]

ಧನಾಬಾದಿನ ಸಮೀಪದಲ್ಲಿ [illegible] ಎಂಬುದೊಂದು ಹಳ್ಳಿ ಅಲ್ಲಿ ಸೂಕೂಕೋಚಿರಿ ಎಂಬ ತರುಣ

ಆ ಹಳ್ಳಿಯಲ್ಲಿ ಒಂದು ಸಂಸಾರ [illegible] ಗಂಡ ಹೆಂಡಿರಿಬ್ಬರೂ ಸಮೀಪದಲ್ಲಿದ್ದ ಕಲ್ಲಿದ್ದಲಿ ಗಣಿಯಲ್ಲಿ ಕೆಲಸ ಮಾಡಲು ಹೊರಟು ಹೋಗಿದ್ದರು

ಇವರ ಮಗಳು ಎಂಟು ವರ್ಷದ ಹುಡುಗಿ ಒಬ್ಬಳೇ ಹಳ್ಳಿಯ ಸಮೀಪದಲ್ಲಿ ದನಗಳನ್ನು ಮೇಯಿಸುತ್ತಿದ್ದಳ

ಆದರೆ ಆ ತರುಣನಿಗೆ ಏನ ಮದವೇರಿತ್ತೋ ತಿಳಿಯದು ಆ ಹುಡುಗಿಯನ್ನು ಮಗ್ಗುಲಲ್ಲಿದ್ದ ಪಾಳು ಮನೆಗೆ ಎಳೆದುಕೊಂಡು ಹೋಗಿ ಅವಳ ಮೇಲೆ ಅತ್ಯಾಚಾರ ನಡೆಸಿದನು

ಒಳ್ಳೆಯ ಪ್ರಾಯದ ತರುಣನ ಹುಮ್ಮಸ್ಸನ್ನು ಎಂಟು ವರ್ಷದ ಹುಡುಗಿಯು ತಡೆದಾಳೆ? ತಕ್ಷಣ ಪ್ರಜ್ಞೆ ತಪ್ಪಿಹೋಯಿತ ವಿಪರೀತವಾಗಿ ರಕ್ತಸ್ರಾವವಾಗಿತ್ತು ಮನೆಗೆ ನಡೆದುಕೊಂಡು ಹೋಗುವುದಕ್ಕೆ ಸಹಾ ಆಗದೆ ತೆವಳಿಕೊಂಡು ಹೋಗಿ ಮನೆಗೆ ಬಿದ್ದಳು

ಸಾಯಂಕಾಲ ಅವಳ ಸಹೋದರ,ತಂದೆ ತಾಯಿಗಳು ಎಲ್ಲರೂ ಒಂದರು ನೋಡಿದರು

ಈಗ ಪೋಲೀಸಿನವರು ಅಪರಾಧಿಯನ್ನು ಹಿಡಿದುಕೊಂಡು ಕೋರ್ಟಿಗೆ ಎಳೆ ತಂದಿದ್ದಾರೆ

ನಮ್ಮ ದೇಶದ ಚಲನಚಿತ್ರಗಳು

[illegible]
ಇನ್ನೂ ಬಾಲ್ಯಾವಸ್ಥೆಯಲ್ಲಿದೆ ಎನ್ನುವುದು ಶುದ್ಧ ಮೂಢತನ. ಬಾಲ್ಯವು ಎಂದೂ ಕಳೆದುಹೋಗಿದ್ದೆ. ಆದರೆ ಅದು ಬೆಳೆಯಲಿಲ್ಲ. ಅಂದರೆ ಅದರ ಬೆಳವಣಿಗೆಯು ಅನೇಕಾನೇಕ ವಿಷಯುಗಳನ್ನೊಳಗೊಂಡ ಕುಂದುಕೊರತೆಗಳಿಂದ ಕುಗ್ಗಿ ಹೋಗಿರುತ್ತದೆ. ಅದು ಬೆಳೆಯದ ಕುಳ್ಳನಂತಿದೆ. ನಮ್ಮ ದೇಶದ ಚಲನಚಿತ್ರ ಕೈಗಾರಿಕೆ ಎಂದರೆ ಅತಿಶಯುವಾಗಲಾರದು ಬಹು ವಿಧದ ಕುಂದು ಕೊರತೆಗಳಿದ್ದರೂ ಅವುಗಳನ್ನು ಆದಷ್ಟುಮಟ್ಟಿಗೆ ಸುಧಾರಿಸಿ ಚಲನಚಿತ್ರಗಳ ಸ್ಥಾನವನ್ನು ಒಂದು ಮೇಲ್ತರಗತಿಯ ಅಳತೆಗೆ ತಂದು ನಿಲ್ಲಿಸಲು ಅಸಾಧ್ಯವಲ್ಲವೆಂದು ಕೆಲವು ಸಂಸ್ಥೆಗಳು ಉತ್ತಮ ಚಿತ್ರಗಳನ್ನು ತಯಾರಿಸಿದುದರ ಮೂಲಕ ಒಂದು ಮೇಲ್ಪರಗತಿಯನ್ನು ಹಾಕಿಕೊಟ್ಟಿರುವರು. ಇಷ್ಟಿದ್ದರೂ ನಮ್ಮ ದೇಶದ ಹೆಚ್ಚು ಚಲನಚಿತ್ರ ಸಂಸ್ಥೆಗಳು ಕೀಳು ತರಗತಿಯ ಚಿತ್ರಗಳನ್ನು ತಯಾರಿಸುವುದರಲ್ಲಿಯೇ ಮಗ್ನರಾಗಿರುವ ಸಂಗತಿಯು ವಿಷಾದಕರವಾಗಿರುತ್ತದೆ ಇಂತಹ ಸಂಸ್ಥೆಗಳು ದಿನೇ ದಿನೇ ಮುಂದುವರಿಯುತ್ತಿದ್ದ ಪ್ರಪಂಚದ ಪ್ರಗತಿಯನ್ನು ಅರಿತಿರುವಂತೆ ಕಾಣುವುದಿಲ್ಲ ಕೂಪಮಂಡೂಕದ ಇವರ ಪರಿಸ್ಥಿತಿಯು ಶೋಚನಿಯುವಾಗಿದೆ

ಬೆಳೆಯ ಗುಣವು ಮೊಳೆಯಲ್ಲಿಯೇ ಕಂಡುಬರುವಂತೆ ನಮ್ಮ ದೇಶದ ಚಿತ್ರಪಟಗಳನ್ನು ಸಂಪೂರ್ಣ ನೋಡಬೇಕಾಗಿಲ್ಲ ಅವುಗಳಲ್ಲಿನ ಅಪಾರ ಕುಂದುಕೊರತೆಗಳು ಪ್ರದರ್ಶನ ಮಂದಿರಗಳಲ್ಲಿ ತೋರಿಸಲ್ಪಡುವ "ಟ್ರೈಲರು"ಗಳಲ್ಲಿಯೇ ಕಂಡುಬಂದು ಅವುಗಳನ್ನು ಮುಂದೆ ನೋಡಬೇಕೆಂಬುದರಲ್ಲಿ ಸಂಶಯುಬರುತ್ತದೆ ಜಾಹೀರಾತಿಗಾಗಿಪ್ರದರ್ಶನ ಮಂದಿರಗಳಿಗೆ ಕಳುಹಲ್ಪಡುವ ಈ ಟ್ರೈಲರ್ ಅಥವಾ ಮಾದರಿ ಚಿತ್ರಭಾಗವು ಕೆಲವು ಸಮಯದಲ್ಲಿ ಬಹಳೇ ಹಾಸ್ಯಾಸ್ಪದವಾಗಿವೆ ಈ 'ಸೆಂಪಲ್'ಗಳನ್ನು ನಿರ್ಮಿಸುವುದರಲ್ಲಿಯೂ ವಿಶೇಷ ಚಾತುರ್ಯದ ಆವಶ್ಯಕತೆ ಇದೆಯೆಂಬುದಕ್ಕೆ ಪಾಶ್ಚಾತ್ಯ ಚಿತ್ರಗಳ 'ಟ್ರೈಲರು'ಗಳನ್ನು ನೋಡಿದರೆ ಆಗ ತಿಳಿಯುವುದು. ಅವುಗಳು ಬಹಳೇ ಚಿಕ್ಕವಿದ್ದು ಮುಂದೆ ಬರುವ ಕಥಾಭಾಗದ ಪ್ರಾಮುಖ್ಯ ನಟನಟಿಯರನ್ನು ತೋರಿಸುವುದಲ್ಲದೆ, ಕಥಾಭಾಗದ ಮುಖ್ಯ ಅಂಶಗಳನ್ನು ತೋರಿಸುವಂತವುಗಳಿರುತ್ತವೆ. ಇವುಗಳನ್ನು ನೋಡಿದ ಮಾತ್ರಕ್ಕೆ ಆ ಚಿತ್ರವನ್ನು ಸಂಪೂರ್ಣ ನೋಡಬೇಕೆಂದಾಗುವ ಅಭಿರುಚಿ ಹುಟ್ಟುತ್ತದೆ ಅದು ಪಾಶ್ಚಾತ್ಯ ಚಿತ್ರಗಳ ವಿಚಾರವಾಯಿತು

ಚಿತ್ರಗಳ ಸಾರಾಸಾರ ವಿಶಯುಗಳನ್ನು ಸಾರುವ ಈ 'ಸೆಂಪಲು' ಅಥವಾ 'ಟ್ರೈಲರು'ಗಳು ಒಂದು ವಿಶಯುದಲ್ಲಿ ಮಾತ್ರ ಅಭಿನಂದನೀಯವೆನಿಸುತ್ತದೆ ಹಿಂದೀಯ ಈ ಚಿತ್ರಭಾಗಗಳು ಒಳ್ಳೆ ಹಾಸ್ಯವನ್ನು ಒದಗಿಸುತ್ತವೆ ವಾಚಕರೇ ನೀವಾದರೂ ಇವುಗಳನ್ನು ನೋಡಿ ಒಂದು ಕ್ಷಣದ ಹರುಷಪಟ್ಟುಕೊಂಡಿದ್ದಿಲ್ಲವೆ? ಚಿತ್ರವು ಪ್ರಾರಂಭವಾಗುತ್ತಲೇ ಸಾಧಾರಣವಾಗಿ Nana Dasai Presents ಎಂಬ ಅರ್ಥದ ಬರಹಗಳು ಹಲವೊಂದು ವಿಧದ ಭಾಷೆಗಳಲ್ಲಿ ಬೇರೆ ಬೇರೆಯಾಗಿ ತೋರಿಸಲ್ಪಡುತ್ತವೆ ಆ ಮೇಲೆ "Produced by your master producers" ಎಂಬುದನ್ನು ಕಾಣಿಸುತ್ತಾರೆ ಚಿತ್ರವನ್ನು ತಯಾರಿಸಿದ ಸಂಸ್ಥೆಯ ಹೆಸರನ್ನು ಓದುವಾಗ ಹೆಚ್ಚಿನವರು ಆ ಹೆಸರನ್ನು ಮುಂಚೆ ಕೇಳಿದಂತೆ ಕಂಡುಬರುವುದಿಲ್ಲ ಅಂತೂ ಅವರ ಮಟ್ಟಿಗೆ ಆ ಸಂಸ್ಥೆಯು 'your master producers' ಆಗಿದೆ

ಚಿತ್ರದಲ್ಲಿ ಪಾತ್ರಧಾರಿಗಳಾದವರ ಹೆಸರುಗಳನ್ನು ಕ್ರಮವಾಗಿ ಅವರವರ ವ್ಯಕ್ತಿಕ ಚಿತ್ರಪಟದೊಂದಿಗೆ ತೋರಿಸುವುದು ಸಾಧಾರಣ ಕ್ರಮ ಈ ಪಾತ್ರಗಳನ್ನು ತೋರಿಸುವಾಗ ಅವರುಗಳು ನಾನಾ ತರದ ಅಂದರೆ ಅವರವರ ಪಾತ್ರಗಳಿಗುಣವಾಗುವ, ಮುಖಭಾವಗಳನ್ನು ಧರಿಸಿಕೊಂಡು, ಕೆಲವರು ಮೋಹ ಮಾಡುವಂತೆಯೂ, ಕೆಲವರು ಅಳುವಂತೆಯೂ ಮತ್ತೂ ಕೆಲವರು ಹಾಸ್ಯ ಮಾಡುವಂತೆಯೂ, ಇನ್ನೂ ಕೆಲವರು ಭಯಂಕರ ತರದ ಮುಖ ವಿಕಾರಗಳನ್ನು ತೋರಿಸುವಂತೆಯೂ ಕಾಣುತ್ತಿರುತ್ತದೆ ಚಿತ್ರಭಾಗಗಳ ಅಕ್ಷರಪರಗಳಲ್ಲಿ ಮಾಡುವ ವರ್ಣನೆಗಳನ್ನು ಓದಿದರೆ ಅದರಲ್ಲಿನ ಪಾತ್ರಗಳು ಜಗತ್‌ವಿಖ್ಯಾತ ಕೀರ್ತಿ ಪಡೆದಂತೆ ಭಾಸವಾಗುತ್ತದೆ ಆ ಮೇಲೆ ಅವರ ಹೆಸರುಗಳನ್ನು ಓದುವಾಗ ಆ ವ್ಯಕ್ತಿಯು ಇಡೀ ದೇಶದಲ್ಲಿ ಅಪರಿಚಿತ ವ್ಯಕ್ತಿಯಾಗಿರುತ್ತದೆ. "Here comes Billi you favourite" ಅಂದರೆ ನಿಮ್ಮ ಬಹು ಪ್ರೀತಿಯ ನಟನಾದ ಬಿಲ್ಲಿಯು ಇದೋ ಇಲ್ಲಿ ಬರುವನು" ಎಂಬ ಅರ್ಥ ಆ ನಟನನ್ನು ನೋಡುವಾಗ ಅವನಲ್ಲಿ ಪ್ರೀತಿಗೆ ಯೋಗ್ಯವಾದ ಕಲೆಯು ಯಾವ ಕುರುಹೂ ಕಾಣುವುದಿಲ್ಲ ಅಲ್ಲದೆ ಅವನ ದೇಹಪ್ರಕೃತಿಯು ಕೂಡ ಈಗ ತಾನೆ ಆಸ್ಪತ್ರೆಯಿಂದ ಎದ್ದು ಬಂದಂತಹ ವ್ಯಕ್ತಿಯಂತಿರುತ್ತದೆ ಇನ್ನೂ ಕೆಲವು ಮುಖ್ಯ ಪಾತ್ರಗಳು, ಮೊಳಉದ್ದದಕೂದಲರಾಶಿಗಳನ್ನಿಟ್ಟು, ಕೆಲವು ಕೃತಕ ಮೀಸೆಗಳನ್ನು ಕಟ್ಟಿಕೊಂಡು, ಖಡ್ಗವನ್ನು ನಾನಾ ದಿಕ್ಕುಗಳಿಗೆ ತಿರುಗಿಸುವಾಗ ಕೆಲವರಿಗೆ ಕೊಂಚ ನಗುಬರುವುದುಂಟು ಕಾರಣ ಅವನ ಖಡ್ಗಧಾರಿಯು ದೇಹಕ್ಕೆ ತಗಲುವ ಮೊದಲನೇ ಶತ್ರು ಪಾತ್ರಧಾರಿಯು ನೆಲದ ಮೇಲೆ ಬಿದ್ದು ಹೊರಳಾಡುವನು ಹೀಗೆ ನಾನಾ ತರದ ಮುಖ್ಯ ಪಾತ್ರಗಳು ತಮ್ಮ ಕೃತಕ ನಟನೆಗಳಿಂದ ಪ್ರೇಕ್ಷಕ ವರ್ಗದ ಗಮನವನ್ನು ಸೆಳೆಯ ನೋಡುತ್ತಾರೆ

The Queen of the silver screen ಚಲಚ್ಚಿತ್ರರಾಣಿ ಎಂಬರ್ಥದ ವರ್ಣನೆಯಿಂದ ಮುಖ್ಯ ನಟಿಯನ್ನು ತೋರಿಸುವ ಕ್ರಮ.

ಸುಮಾರು ೩೦ ವರ್ಷಕ್ಕೆ ಕನ್ನಿಯಾಗದ ಓರ್ವ ಮಹಿಳೆಯು ನಾನಾ ತರದ ಹಾವಭಾವಗಳಿಂದ ತೋಟದಲ್ಲಿ ಹೂವುಗಳನ್ನು ಕೀಳುತ್ತಲೋ, ಅಥವಾ ಮಹಡಿಗಳ ಮೇಲೆ ಪಾರಿವಾಳಗಳನ್ನು ಹಾರಿಸುತ್ತಲೋ ನಿಂತಿರುವುದನ್ನು ತೋರಿಸುತ್ತಾರೆ ಇಂತಹ ನಟಿಯರಲ್ಲಿ ಅನೇಕರಿಗೆ ಕೋಕಿಲೆ(Nightingale ಎಂದು ಇಂಗ್ಲಿಷಿನಲ್ಲಿ) ಎಂಬ ಉಪಬಿರುದುಗಳು ಬೇರೆ ಇರುತ್ತವೆ 'ಸಿಂಹಳ ದ್ವೀಪದ ಕೋಕಿಲೆ', 'ಅಂದಮಾನದ ಕೋಕಿಲೆ' ಹೀಗೆ ಆ ಕೋಕಿಲೆಗಳು ಪ್ರಖ್ಯಾತಿಪಟ್ಟ ದೇಶಗಳ ಹೆಸರುಗಳನ್ನು ಕಾಣಿಸುವರು ಕೆಲವರಿಗೆ 'ತಾರೆಗಳ ತಾರೆ' 'Star of Stars' ಹೀಗೆ ಬಿರುದುಗಳನ್ನಿಡುತ್ತಾರೆ ವೀಳ್ಯದೆಲೆ ತಿಂಪ ಹಲ್ಲುಗಳು ಇವರುಗಳಲ್ಲಿ ಹೆಚ್ಚಿನವರ ತಾರಾಜ್ಯೋತಿಗೆ ತೇಜವನ್ನುಂಟುಮಾಡುತ್ತವೆ ಇನ್ನೂ ಇವರಲ್ಲಿ ವೀರಾಧಿವೀರ ನಾರೀಮಣಿಗಳಿರುವರು ಈ ಜಾತಿಯವರು ಚತುರ ಸೇನಾನಾಯಕಿಯರಂತಿರುವರು ಕದನಗಳಲ್ಲಿ ಅಪಜಯುವೆಂಬುದೆ ಇವರಿಗಿಲ್ಲ

ಇನ್ನು ಕಳ್ಳ ಪಾತ್ರಗಳು, ಹಾಸ್ಯಗಾರರು ವಗೈರೆ ಮಂದಿಗಳು ಕ್ಷಣಕ್ಷಣಕ್ಕೂ ತಮ್ಮ ಅನೇಕ ಅಭಾವಗಳಿಂದ ಕೂಡಿದ ಹಾಸ್ಯವನ್ನೊದಗಿಸುವರು ಹಾಸ್ಯಗಾರರು ಮಾಡುವ ಕುಚೇಷ್ಟೆಗಳು ಬಹಳ ಕೀಳು ತರಗತಿಯವಿದ್ದು, ಅವರು ಆಗಿಂದಾಗ್ಗೆ ಉಪಯೋಗಿಸುವ ಅಸಹ್ಯ ಮಾತುಕತೆಗಳು ಬೇಸರವನ್ನುಂಟುಮಾಡದರವು ಹೊಟ್ಟೆಯ ಮೇಲೆ ಹೊಡಕೊಂಡ ಹಾಡುವವರಂತೆ ಇವರು ಒಗರುತ್ತಾ ಇರುವುದು ನಮ್ಮ ದೇಶದ ಚಲನಚಿತ್ರಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ದೃಶ್ಯಗಳಾಗಿರತ್ತವೆ ಕೆಲವು ಅಂಗವಿಕಾರಾದಿಗಳಿಂದ ಹಾಸ್ಯವುತ್ಪನ್ನವಾಗುವುದೆಂದು ಪ ಥರಾದ ಆ ಹಾಸ್ಯಪಾತ್ರಿಗಳು ಎಣಿಸಿದ್ದರೂ, ಡ್ಯಾರೆಕ್ಟರರು ಅಂತಹ ಅಸಹ್ಯವಿಕಾರಗಳಿಗೆ ಎಡೆಕೊಡಬೇಕೆ?

(ಮುಂದುವರಿಯುವುದು) ಪದ್ಮ

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳಲ್ಲದರಲ್ಲೂ ಸಾವಿರಗಟ್ಟ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಸಂಕ್ಷಿಪ್ತ ವಿಷಯುಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರುಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು, ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೆದುಳಿನ ಕೆಲಸವಾದ ಊಹಾಪೋಹಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು

ಈ ಪುಸ್ತಕವನ್ನು ಓದಬೇಕು! ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು?
ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ ೩೦೦ ಪುಟಗಳು.

ಬೆಲೆ ರೂ. ೧-೮-೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು. ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್, ಸ್ಟೀಟ್ ಮಾರ್ಟ್‌ನಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ., (ಬ್ರಾಂಚ್)
ಕೋಟೆ, ಬೆಂಗಳೂರು ಸಿಟಿ.

ವಿಜ್ಞಾನ ವಿಚಿತ್ರ

ಅಮೇರಿಕದ ಅತೀ ದೊಡ್ಡ "ಲೌಡ್ ಸ್ಪೀಕರ್"

ಅಮೇರಿಕದ ವಿಜ್ಞಾನ ಸಂಶೋಧನಾ ಮಂದಿರದಲ್ಲಿ ನಿರ್ಮಿಸಿರುವ ಒಂದು ಲೌಡ್ ಸ್ಪೀಕರು ಪ್ರಪಂಚದಲ್ಲಿ ಅತೀ ದೊಡ್ಡ ಗಾತ್ರದೆಂದು ಸಾರಲ್ಪಟ್ಟಿದೆ. ೧೦೦ ಅಡಿ ಎತ್ತರದ ಗೋಪುರದ ಮೇಲೆ ಅದನ್ನು ಇಡುವ ಏರ್ಪಾಡು ಮಾಡಿರುತ್ತಾರೆ. ಮನುಷ್ಯನು ಅತೀ ಗಟ್ಟಿಯಾಗಿ ಗರ್ಜಿಸಿದರೆ ೮೦ ಡೆಸಿಬೆಲ್ಸ್‌ನಷ್ಟು ಶಬ್ದವಾಗುತ್ತದೆ. ಡೆಸಿಬೆಲ್ಸ್ ಅಂದರೆ ಶಬ್ದವನ್ನು ಅಳೆಯುವ ಒಂದು ಪ್ರಮಾಣ. ಹಾಗೆ ಸಿಡಿಲಿನ ಶಬ್ದವು ೧೨೫ ಡೆಸಿಬೆಲ್ಸ್, ವಿಮಾನಗಳ ಶಬ್ದವು ೧೩೩ ಡೆಸಿಬೆಲ್ಸ್‌ನಷ್ಟು ಇದೆ. ಭೂಲೋಕದಲ್ಲಿ ಆದ ಅತೀ ದೊಡ್ಡ ಶಬ್ದವೆಂದರೆ ೧೮೮೩ರಲ್ಲಿ ಕ್ರಾಕಟೋವಾ ದ್ವೀಪದಲ್ಲಿ ಆದ ಜ್ವಾಲಾಮುಖಿಯ ಶಬ್ದವು. ಇದು ೧೭೦ ಡೆಸಿಬೆಲ್ಸ್‌ನಷ್ಟು ಇತ್ತಂತೆ. ಅಮೇರಿಕದ ಈ ನೂತನ "ಲೌಡ್ ಸ್ಪೀಕರು" ೧೮೦ ಡೆಸಿಬೆಲ್ಸ್‌ನಷ್ಟು ಶಬ್ದ ಮಾಡುತ್ತದಂತೆ. ಅದರ ಮೂಲಕ ೧ ಮೈಲು ದೂರದಿಂದ ಸ್ಪಷ್ಟವಾಗಿ ಕೇಳಬಹುದಂತೆ.

ಗಾಜಿನ ದೇಹನಿರ್ಮಾಣ.

ಕೆಲವು ಸಮಯದ ಹಿಂದೆ ನ್ಯೂಯಾರ್ಕ್ ನಗರದಲ್ಲಿ ವೈಜ್ಞಾನಿಕ ಪ್ರದರ್ಶನವೊಂದು ಏರ್ಪಡಿಸಲ್ಪಟ್ಟಿತು. ಅದರಲ್ಲಿ ಸಾವಿರಾರು ನವಶೋಧೆಗಳು ಪ್ರದರ್ಶಿಸಲ್ಪಟ್ಟಿದ್ದವು. ಡ್ರೆಸ್‌ಡೆನ್ ನಗರದ ಪ್ರಖ್ಯಾತ ದೇಹಶಾಸ್ತ್ರ ವಿಜ್ಞಾನಿಗಳೊಬ್ಬರು ತಯಾರಿಸಲ್ಪಟ್ಟ ಗಾಜಿನ ಸ್ತ್ರೀದೇಹ ಆಕೃತಿಯು ಅದರಲ್ಲಿ ಇಡಲ್ಪಟ್ಟಿತು. ಇದು ಪ್ರೇಕ್ಷಕರ ಗಮನವನ್ನು ಹೆಚ್ಚಾಗಿ ಸೆಳೆಯುವಂತಿದ್ದು ಅವರಲ್ಲಿ ಅತ್ಯಾಶ್ಚರ್ಯವನ್ನುಂಟು ಮಾಡಿತ್ತು. ಇದು ಗಾಜಿನ ಒಂದು ವಿಗ್ರಹ. ಅದರ ದೇಹಭಾಗದೊಳಗೆ ಮನುಷ್ಯ ದೇಹದೊಳಗಿನ ಪ್ರತಿಯೊಂದು ಅವಯವಗಳೂ ರಕ್ತನಾಳಗಳೂ, ಎಲ್ಲವೂ ರಚಿಸಲ್ಪಟ್ಟಿದ್ದವು. ರಕ್ತಚಲನೆ, ಹೃದಯದೊಂದಿಗೆ ಎಲ್ಲವೂ ಕೃತಕವಾಗಿ ಚಲಿಸಲ್ಪಡುತಿದ್ದವು. ಅಗೋಚರವಾಗಿ ಇಡಲ್ಪಟ್ಟ ವಿದ್ಯುದ್ದೀಪಗಳು ಸೂಕ್ಷ್ಮವಾದ ಅವಯವಗಳ ಕೆಲಸವನ್ನು ತೋರಿಸುವಂತೇರ್ಪಡಿಸಿದ್ದವು. ಈ ಗಾಜಿನ ವಿಗ್ರಹವನ್ನು ಪರಿಪೂರ್ಣಗೊಳಿಸಲು ೨೮ ವರ್ಷಗಳ ಶ್ರಮವು ತಗಲಿತ್ತಂತೆ.

ಚಲಚಿತ್ರ ಮಂದಿರಗಳಲ್ಲಿ ಅಳುವ ಮಕ್ಕಳ ಕೋಣೆ

ಗ್ಲ್ಯಾಸ್‌ಗೋದ ಒಂದು ಸಿನಿಮಾ ಮಂದಿರದಲ್ಲಿ ಸೌಂಡ್‌ಪ್ರೂಫ್ ಕೋಣೆಗಳನ್ನು ನಿರ್ಮಿಸಿರುತ್ತಾರೆ. ತಾಯಂದಿರು ಸಿನಿಮಾಕ್ಕೆ ಕರೆದುಕೊಂಡುಬಂದ ಮಕ್ಕಳು ಅಳಲಾರಂಭಿಸಿದರೆ ಆ ಕೋಣೆಯೊಳಗೆ ತಾಯಿಮಕ್ಕಳನ್ನು ಕೂಡ್ರಿಸುವರು. ಆಗ ಆ ಕೋಣೆಯೊಳಗೆ ಆದ ಶಬ್ದವು ಇತರ ಪ್ರೇಕ್ಷಕರನ್ನು ತೊಂದರೆಗೊಳಿಸಲಾರದು.

ವಿಷಗಾಳಿಯಿಂದ ಕುದುರೆಗಳ ರಕ್ಷಣೆ

ಉತ್ತರ:—ನಿಜವಾಗಿಯೂ ಒಪ್ಪಲಾರೆ. ಬಹುಪಕ್ಷ ಪಂಗಡದವರಿಗೆ ವಿರೋಧವಾಗಿ ಅಲ್ಪ ಸಂಖ್ಯಾಕರಿಂದ ಏನೂ ಆಗದು. ಆದರೆ, ಬರ್ಮೀಯರೊಂದಿಗೆ ಸಹಕರಿಸಿ ಅವರು ತಮ್ಮ ಹಿತಗಳನ್ನು ಕಾಪಾಡಿಕೊಳ್ಳಬಹುದು

ವಿಧಿಯ ವಿಲಾಸ !

ರಾಜಕುಮಾರಿಯೋರ್ವಳ ಶವವು ಮೂರು ರಗಳಿಂದ ಕೊಳೆಯುತ್ತಲಿದೆ.

ಶವಸಂಸ್ಕಾರಕ್ಕೆ ಬಿಡುಕಾಸಿಲ್ಲ.

ಬರ್ಮಾದೇಶದ ಮಾಜಿ ಅರಸರ ಮನೆತನದವರ ಶೋಚನೀಯ ಅವಸ್ಥೆ.

ಸರಕಾರದಿಂದ ತಿರಸ್ಕಾರ.

ಬರ್ಮದ ಮಾಜಿ ಅರಸು ಮನೆತನಕ್ಕೆ ಸೇರಿದವನೂ, ಬರ್ಮದ ಕಡೇ ರಾಜನಾದ ಮಿಂಡೂನ್ ಮಿನ್ನಿನ ಮೊಮ್ಮಗನಾದ ರಾಜಕುಮಾರ ಸೌಯಾನಿನ್ನಿನ ಮಗಳಾದ ರಾಜಕುಮಾರಿ ಚಂದ್ರಾದೇವಿಯು ಕಲ್ಕತ್ತದಲ್ಲಿ ಕಳೆದ ಮೇ ತಾ. ೯ರಲ್ಲಿ ಮರಣಪಟ್ಟಳು ಬರ್ಮದ ರಾಜರ ಆಳಿಕೆಯನ್ನು ಕೊನೆಗಾಣಿಸಿ ಬ್ರಿಟಿಷರು ಬರ್ಮವನ್ನು ತಮ್ಮ ಚಕ್ರಾಧಿಪತ್ಯಕ್ಕೆ ಸೇರಿಸಿಕೊಂಡು, ರಾಜ ಕುಮಾರ್ ಸೌಯಾನಿನ್‌ನನ್ನು ಬರ್ಮಾದಿಂದ ಗಡಿಪಾರು ಮಾಡಿದರು ಅವನಿಗೆ ನಾಲ್ಕು ಮಂದಿ ಹೆಣ್ಣು ಮಕ್ಕಳಿದ್ದರು ಅವರು ಕಲ್ಕತ್ತದಲ್ಲಿನ ಒಂದು ಬೌಧಮಠದಲ್ಲಿ ವ್ಯಾಸಂಗ ಮಾಡುತಿದ್ದು, ಸರಕಾರದಿಂದ ಅವರಿಗೆ ತಿಂಗಳಿಗೆ ೨೦ ರೂಪಾಯಿಗಳ ವೇತನವು ಸಿಗುತಿತ್ತು

ಮೃತಿ ಹೊಂದಿದ ಚಂದ್ರಾದೇವಿಗೆ ವಯಸ್ಸು ೩೪ ಇದ್ದು, ಅವಳು ಕುಂಟು ಕಾಲಿನವಳಿದ್ದಳು ಅವಳ ತಂದೆ ಬಡ ರಾಜಕುಮಾರನು, ರಾಜ ರೀತಿಗೆ ಒಪ್ಪುವ ವೈಭೋಗದಿಂದ ತನ್ನ ಮಗಳ ಶವಸಂಸ್ಕಾರ ಮಾಡಲಿಕ್ಕೆಂದು ೧೨೦೦ ರೂಪಾಯಿಗಳನ್ನು ತನಗೆ ಕೊಡಬೇಕೆಂದು ಕಲ್ಕತ್ತದ ಕಮಿಶನರಿಗೆ ಬರಕೊಂಡಾಗ, ಕಮಿಶನರು ೨೦೦ ರೂಪಾಯಿಗಳನ್ನು ಕೊಟ್ಟು ಅದಕ್ಕಿಂತ ಹೆಚ್ಚು ಬೇಕಾದಲ್ಲಿ ಇಂಡಿಯಾ ಸರಕಾರಕ್ಕೆ ಬರಕೊಳ್ಳಬೇಕೆಂದು ತಿಳಿಸಿದರು ಸಿಕ್ಕಿದ ಈ ಇನ್ನೂರು ರೂಪಾಯಿಗಳಿಂದ ಒಂದು ಅಂದವಾದ ಶವದ ಪೆಟ್ಟಿಗೆಯನ್ನು ಮಾಡಿಸಿ, ಅದರಲ್ಲಿ ತನ್ನ ಮಗಳ ಮೃತದೇಹವನ್ನಿಟ್ಟು ಆ ಬಡ ರಾಜಕುಮಾರನು, ಇನ್ನೂ ತನಗೆ ೩೦೦ ರೂಪಾಯಿಗಳು ಬೇಕೆಂದೂ, ಅಷ್ಟಿಲ್ಲದೆ ಶವವನ್ನು ಸಮಾಧಿ ಮಾಡಲಾಗುವುದಿಲ್ಲವೆಂದೂ ತಿಳಿಸಿ, ಬಂಗಾಳದ ಪ್ರಧಾನ ಮಂತ್ರಿಗಳಾದ ಫಜಲುಲ್ ಹುಖ್‌ರಿಗೆ ಒಂದು ಪತ್ರವನ್ನು ಬರಕೊಂಡನು ಹುಖ್‌ರು ಈ ವಿಷಯವನ್ನು ಶಿಫಾರಸು ಮಾಡಿ ಹಣ ಕಾಸಿನ ಸಚಿವರಾದ ಆನರೆಬಲ್ ನಲಿನಿ ರಂಜನ್ ಸರಕಾರರಿಗೆ ಸಹಾಯಕ್ಕಾಗಿ ಬರೆದರು. ಉತ್ತರವಾಗಿ ಸರಕಾರರು ಬಂಗಾಲ ಸರಕಾರಕ್ಕೆ ಆ ಜವಾಬ್ದಾರಿ ಇಲ್ಲವೆಂತಲೂ, ಬರ್ಮದ ರಾಜಕುಮಾರರು ಸಹಾಯಕ್ಕಾಗಿ ವೈಸರಾಯರಿಗೆ ಅರ್ಜಿ ಮಾಡುವುದುತ್ತಮವೆಂದೂ ತಿಳಿಸಿದರು.

ಸೌಯಸಿನ್‌ನು ವೈಸ್‌ರಾಯರಿಗೆ ಬರಕೊಂಡು, ಮೇಲಿಂದ ಮೇಲೆ ತಂತಿ ಬಿಟ್ಟರೂ ಯಾವ ಜವಾಬೂ ಸಿಗಲಿಲ್ಲ ಕಳೆದ ಮಹಾಯುದ್ಧದಲ್ಲಿ ಈ ಬಡ ರಾಜ ಕುಮಾರನು ಕಲ್ಕತ್ತದಲ್ಲಿದ್ದ ಬರ್ಮೀಯರಿಂದ ಹಣವನ್ನು ಶೇಖರಿಸಿ ಸರಕಾರಕ್ಕೆ ಸಹಾಯ ಮಾಡಿರುವವನಾಗಿಯೂ, ಅದಕ್ಕಾಗಿ ಅವನಿಗೆ ಶಿಫಾರಸು ಪತ್ರಗಳು ಸಿಕ್ಕಿವೆಯಾಗಿಯೂ ತಿಳಿದು ಬರುತ್ತದೆ ಶವದ ಪೆಟ್ಟಿಗೆಯಲ್ಲಿ ಮುಚ್ಚಿದ್ದು, ಶೃಂಗರಿಸಲ್ಪಟ್ಟ ಚಂದ್ರಾದೇವಿಯ ಶವವು ಅಲ್ಲಿನ ಒಂದು ಬೌಧ ದೇವಾಲಯದ ಬುದ್ಧನ ವಿಗ್ರಹದ ಪದಸ್ಥಳದಲ್ಲಿಡಲ್ಪಟ್ಟಿದೆ. ಇನ್ನೂ ಅದು ಅಲ್ಲಿಯೇ ಕೊಳೆಯುತ್ತದೆ ತಕ್ಕ ಶವ ಸಂಸ್ಕಾರಗಳನ್ನು ಮಾಡದೆ ಅದನ್ನು ಸಮಾಧಿ ಮಾಡುವುದು ತನ್ನಲ್ಲಿ ಜೀವವಿರುವ ವರೇಗೆ ಅಸಾಧ್ಯವೆಂದು ರಾಜಕುಮಾರನೆನ್ನುತ್ತಾನೆ

ಇದೇ ರಾಜ ಕುಟುಂಬಕ್ಕೆ ಸೇರಿದ ಓರ್ವನು ಬರ್ಮದಲ್ಲಿ ಸತ್ತಾಗ ಅವನ ಶವ ಸಂಸ್ಕಾರಕ್ಕೆ ಬರ್ಮಾ ಸರಕಾರವು ೧೦೦೦ ರೂಪಾಯಿಗಳನ್ನು ಕೊಟ್ಟಿತ್ತಂತೆ

ರಾಷ್ಟ್ರಪತಿಗಳಿಗೆ ಸಿಂಗಪುರದಲ್ಲಿ ಸ್ವಾಗತ.

ಸುಮಾರು ೧೦ ಸಾವಿರ ಭಾರತೀಯರೂ ಸಿಂಗಾಪುರಿಗಳೂ ಪಂಡಿತ ಜವಾಹರಲಾಲರನ್ನು, ಅವರ ಪುತ್ರಿ ಇಂದಿರಾ ನೆಹರೂಗಳನ್ನೂ ಸ್ವಾಗತೀಕರಿಸಿದರು. ಪೌರಸಭೆಯಿಂದಲೂ ಇತರ ಸಂಘಗಳಿಂದಲೂ ಅವರಿಗೆ ಭಿನ್ನವತ್ತಳೆಗಳನ್ನು ಅರ್ಪಿಸಲಾಯಿತು. ಇವುಗಳಿಗೆ ತಕ್ಕ ಉತ್ತರವೀಯುತ್ತಾ ಪಂಡಿತರು, ಈಗ ಸದ್ಯಕ್ಕೆ ಪರದೇಶಗಳಲ್ಲಿರುವ ಭಾರತೀಯರ ವಿಷಯವಾಗಿ ಕಾಂಗ್ರೆಸ್ಸು ಹೆಚ್ಚಿನ ಕೆಲಸವನ್ನು ಕೈಕೊಳ್ಳಲು ಶಕ್ಯವಿಲ್ಲವಾದರೂ, ಕಾಲಾನುಸಾರ ಆ ಕೆಲಸವು ಅಗತ್ಯವಾಗಿ ಕೈಕೊಳ್ಳಲಾಗುವುದು ಎಂದೂ, ಆ ದೇಶಸ್ಥರೊಡನೆ ಭಾರತೀಯರು ಸಹಕರಿಸಿ ನಡೆಯಬೇಕೆಂದೂ ವಿನಂತಿಸಿದರು.

THE BUNDER STREET,

MANGALORE.

Facing the crowded riverfront and but a stone's throw from the busy markets in second Line, you find it. A strangley quiet street of Mangalore, this strangly For day in and day out, without fuss or bluster, hundreds and thousands of bills and cheques leave from here for destinations as far from home as London or New York. A street of quiet, efficient and up-to-date service to the businessman and his clients.

Canara Bank with a large well-equipped office in Bunder Street offers to its customers banking facilities second to none. It has branches in all important business centres and agency connections all over.

RESOURCES OF A CRORE. ESTD: 1906

CANARA BANK, LIMITED.

ನವರತ್ನ ಎಲಿಕ್ಸಿರ್ ಗೈನೆಕೊ.

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟುದೋಷಗಳನ್ನು ವಿಶೇಷ ಪರಿಣಾಮದಿಂದ ಗುಣಪಡಿಸುವ ಶಕ್ತಿಯುಳ್ಳ ಸಾಮಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ. ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ. ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಸರಿಪಡಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ

ಬೆಲೆ 4 ಔನ್ಸ್ ಬಾಟ್ಲಿಗೆ ರೂ. 0 12 0

8 ,, ,, ,, 1 4 0

ತಯಾರಿಸುವವರು:—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
ವಿ. ವಿ. ಶೆಣೈ ಕಾರ್ಕಳ.
ಡಾ| ಕೆ. ಎಲ್. ಐತಾಲ, ಉಡುಪಿ.
ಮೊಡರ್ನ್ ಫಾರ್ಮಸಿ, ಕುಂದಾಪುರ
ಬಿ. ಜಿ. ಭಂಡಾರಿ, ಪುತ್ತೂರು.
ಭಕ್ತ ಬ್ರದರ್ಸ್, ಕಾಸರಗೋಡು.

ಬೊಂಬಾಯಿ ಏಜಂಟರು:-CHAMSI NARSI & CO.,
Chemists, Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE.

Dealers in:—
Watches, Clocks, Timepieces, Rolled Gold Jewellery & Sporting Materials etc,



Stockists of:
West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones.

Japan 8 Inch Octegon	Rs. 6	0	0
,, 8 ,, Regulator	,, 6	12	0
,, 10 ,, Octegon	,, 6	8	0
,, 10 ,, Regulator	,, 7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದಂತೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ಗ್ರೆಮಾಫೋನು ಇವೇ ಗಳನ್ನು ಗ್ರಾಹಕರ ಮೆಚ್ಚಿಗೆಗೆ ಸರಿಯಾಗಿ ಸ್ವಲ್ಪಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY.

K. R. K. SHET,

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು ಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಯನ್ ಹೈಸ್ಕೂಲ್ ಬಳಿ, ಮಂಗಳೂರು.

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲ್ತೀ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ.

ಅನೇಕ ಪಿಫಾರ[illegible] ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿ.ಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of

Please call on or write to:—

Simon & Co,
Painters,

Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ,
ಸ್ಕ್ರೈನ್ ಬೋರ್ಡುಗ ಇತ್ಯಾದಿಗಳನ್ನೂ,
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ಟಾಂಪು ಹಾಕಿ ಬರೆದು ತಿಳಕೊಳ್ಳಬಹುದು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ. 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೇಷ್ಠ ವಾರಂಟಿ, ಗಟ್ಟಿಯಾದ ಯಂತ್ರಸಾಮಗ್ರಿಗಳು, ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು, [illegible] ಕಮ್ಮಿ ಬೆಲೆಗಳು. [illegible] ವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ [illegible] ವಾಚು 1ಕ್ಕೆ ರೂ. 2–15–0. ಅದರಲ್ಲಿ ಉತ್ತಮವಾದದ್ದು 3–8–0. ಬಂಗಾರದ ಗಿಲಿಟಿದ್ದದಕ್ಕೆ ರೂ. 4—8—0 [illegible] ರೂ 5–0–0 [illegible] ಆಯತಾಕಾರದಕ್ಕೆ 6–8–0. ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7–8–0 'ಲಿವರ್' ಪಾಕೆಟ್ ವಾಚಿಗೆ ಬರಿ ರೂ. 1–14–0. ಬಿ, ಟ್ಯಾಂಟೀಸ್ 1ಕ್ಕೆ ಬರಿ ರೂ. 1–15–0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು:

M. L. Watch Co., 176, Cross Street CALCUTTA.

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH
No 16

Sale Rs. 6–15–0.
~~SMART LEVER~~
MOVEMENT
Strong & Durable at Low Price.



UNIQUE OPPORTUNITY ONLY FOR ONE MONTH.
Available Roman or Arabic Figures Plain Silver Dial.

Guaranteed for 5 Years. Lever Pocket Watch Rs. 1–15–0.

No. 12. Chromium	4 Jewels	Rs.	8–8–0.
,, 14. ,,	7 ,,	,,	10–8–0.
,, 15. ,,	15 ,,	,,	13–8–0.
,, 17. Rolled Gold	15 ,	,,	16–8–0.

Rs. 1/- Extra for Radium Dial. Postage & Packing Extra.

BAPALAL & CO. (s) 116, Abdul Rehman Street, Bombay 3.

ನಗರ ಸುದ್ದಿಗಳು

ವ್ಯಾಪಾರ ವಹಿವಾಟುಗಳಿಂದ ದಿನೇ ದಿನೇ ಅಭಿವೃದ್ಧಿ ಹೊಂದುತ್ತಲಿರುವ ಮಂಗಳೂರ ನಗರದಲ್ಲಿ ಬಹುಕಾಲದಿಂದಲೂ ಅವಶ್ಯವೆಂದು ಕಂಡುಬಂದ ಉತ್ತಮ ನಗರ ವಾಹನಗಳ ಅನುಕೂಲತೆಯನ್ನು ಕೆಲವು ತಿಂಗಳ ಹಿಂದೆ ಸ್ಥಾಪಿತವಾದ ಮಂಗಳೂರು ಆಟೊಮೊಬೈಲ್ಸರವರು, ಒಂದು ಸಿಟಿ ಬಸ್ ಸರ್ವಿಸನ್ನು ಚಲಾವಣೆಗೆ ತಂದುದರ ಮೂಲಕ ನಗರವಾಸಿಗಳ ಈ ಕೋರಿಕೆಯನ್ನು ಪೂರೈಸಿದಂತಾಗಿದೆ. ಮಂಗಳೂರ ನಗರವನ್ನು ಬಿಟ್ಟು ಬಹು ಅಂತರದಲ್ಲಿ ವಾಸಿಸುವ ಸಾವಿರಾರು ಮಜೂರ ವರ್ಗದವರಿಗೂ, ಹಾಲು, ಹೂ, ಕಾಯಿಪಲ್ಯ ಮಾರುವವರಿಗೂ ಇದರಿಂದ ತುಂಬಾ ಅನುಕೂಲವಾದಂತಾಗಿದೆ. ಆದರೆ ಈ ಅನುಕೂಲತೆಗಳನ್ನು ಉಪಯೋಗಿಸಿಕೊಳ್ಳುವುದರಲ್ಲಿ ಹೆಚ್ಚಿನ ಪ್ರಾಮುಖ್ಯತೆಯು ಆದಂತೆ ಕಾಣಿಸಿದೆ. ಕೆಲವೇ ಕಾಸುಗಳಲ್ಲಿ ಸುಲಭವಾಗಿ ನಗರದಲ್ಲಿನ ಬಹುದೂರದ ಅಂತರದಲ್ಲಿ ಪ್ರಯಾಣ ಮಾಡುವ ಸೌಕರ್ಯವು ಬಹಳ ಆಕರ್ಷಣೀಯವಿದೆ. ವಿಪರೀತ ಬೇಸಿಗೆಕಾಲದಲ್ಲಿಯೂ, ವಿಪರೀತ ಮಳೆಗಾಲದಲ್ಲಿಯೂ ಇದರಿಂದ ಬಹಳ ಅನುಕೂಲವೇ ಎಂದೆನ್ನಬೇಕು. ಜನಸೇವೆಯನ್ನು ಮಾಡುವ ಈ ಸಂಸ್ಥೆಯ ಉದ್ದೇಶವು ಯಶಸ್ವಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ನಾಗರೀಕರು ಸಂಸ್ಥೆಯೊಂದಿಗೆ ಸಹಕರಿಸುವುದು ಯಥಾಯೋಗ್ಯವಿದೆ.

ಈ ಸಂದರ್ಭದಲ್ಲಿ ಸಿಟಿ ಬಸ್ ಸರ್ವಿಸಿನಿಂದ ನಗರದ ಜಟ್ಕಾಗಾಡಿಯವರ ಜೀವನಕ್ಕೆ ತುಂಬಾ ಅನಾನುಕೂಲವಾಗುತ್ತದೆ ಎಂಬ ವಿಷಯವು ಎಲ್ಲರ ಗಮನದಲ್ಲಿದೆ. ಆದರೆ ಪ್ರಗತಿಹೊಂದುತ್ತಿರುವ ನಗರಗಳಲ್ಲಿ ಎಷ್ಟು ಕಾಲದ ತನಕ ಇಂತಹ ಹಳೇ ಮಾದರಿಯ ವಾಹನಗಳನ್ನಿಟ್ಟುಕೊಂಡಿರಬಹುದು. ಒಂದು ಕಾಲದಲ್ಲಿ ಎತ್ತಿನ ಗಾಡಿಗಳು ಬಹಳವಾಗಿ ಚಲಾವಣೆಯಲ್ಲಿದ್ದಾಗ, ಕುದುರೆಗಾಡಿಗಳ ಆಗಮನವು ಎತ್ತಿನ ಗಾಡಿಯವರಿಗೆ ಅನಾನುಕೂಲತೆಯನ್ನುಂಟುಮಾಡಿತು. ಅದೇ ಪ್ರಕಾರ ಈಗ ಕುದುರೆಗಾಡಿಯವರ ಸರ್ತಿ ಇರುತ್ತದೆ. ಆದರೆ ಕುದುರೆಗಾಡಿಯವರು ಒಂದು ಸಂಘವನ್ನೇರ್ಪಡಿಸಿ, ಸಿಟಿ ಬಸ್ ಸರ್ವೀಸು ಚಲಾವಣೆ ಇಲ್ಲದಲ್ಲಿ, ತಮ್ಮದೆ ಒಂದು ಕಮ್ಮಿ ಬಾಡಿಗೆಯ ಜಟ್ಕಾ ಸರ್ವಿಸನ್ನು ಇಡುವ ಏರ್ಪಾಡು ಮಾಡುವುದರಿಂದ ಪರಿಸ್ಥಿತಿಯು ಕೊಂಚ ಸುಧಾರಿಸಬಹುದು. ಇದಕ್ಕಿಂತಲೂ ಒಳ್ಳೆಯ ಯೋಚನೆಯು ಬೇರೊಂದಿದೆ ಎಂದು ಹೇಳಬರುವುದಿಲ್ಲ. ಜಟ್ಕಾ ಗಾಡಿಯವರ ಸಂಕಷ್ಟದಲ್ಲಿ ಸಿಟಿ ಸರ್ವಿಸಿನ ಮಾಲಿಕರಿಗಾದರೂ ಸಹಾನುಭೂತಿ ಇಲ್ಲವೆಂದು ಹೇಳಲಾಗದು. ಆದರೆ ಈ ಆಧುನಿಕ ಪ್ರಗತಿಯನ್ನು ತಡೆಯುವವರಾರು?

ಭೂಮ್ಯಾಲಿಕರ ಸಂಘ: ಇದೇ ಆದಿತ್ಯವಾರ ತಾ. ೬ರಲ್ಲಿ ಜಿಲ್ಲಾ ಭೂಮ್ಯಾಲಿಕರ ಸಂಘದ ವರ್ಷಾವಧಿ ಸಭೆಯು ಶ್ರೀ ಕೆ ಆರ್ ಕಾರಂತರ ಕಛೇರಿಯಲ್ಲಿ ಬೆಳಗ್ಗೆ ಜರಗುವುದೆಂದೂ, ಆ ಸಭೆಯಲ್ಲಿ ಗತ ವರ್ಷದ ವರದಿ ವಾಚನ, ನವ ಕಾರ್ಯನಿರ್ವಾಹಕ ಮಂಡಳಿಯ ಚುನಾವಣೆ ಮೊದಲಾದುವುಗಳು ನಡೆಯಲಿರುವವೆಂದೂ, ಮುಖ್ಯವಾಗಿ ತೀರ್ವೆ ಕಡಿಮೆ ಮಾಡುವುದಕ್ಕೆ ಅನುಸರಿಸಬೇಕಾಗುವ ಕಾರ್ಯಕ್ರಮದ ಪರ್ಯಾಲೋಚನೆಯಾಗಲಿದೆ ಎಂದು ತಿಳಿದುಬರುತ್ತದೆ.

ಅನುಮತಿ ಬೇಕು. ಕಳೆದ ತಾ ೨೫ರಲ್ಲಿ ಕೂಡಿದ ಮುನ್ಸಿಪಲ್ ಮೀಟಿಂಗಿನಲ್ಲಿ ವೆಲೆಂಶಿಯಾ ಪಳನ ಭೂಮಿಯ ವಿಚಾರವು ಮುಂದಿನ ಮೀಟಿಂಗಿಗೆ ಇಡಲಾಗಿದೆ. ಮುನಿಸಿಪಲ್ ನೌಕರಿಯಲ್ಲಿ ಮಂಗಳೂರಿನವರನ್ನೇ ಕೆಲಸಕ್ಕಿಡಬೇಕೆಂಬ ನಿರ್ಧಾರವು ಸಭೆಯಲ್ಲಿ ಅನುಮೋದಿಸಲಾಯಿತು. ಕಿರೀಟಧಾರಣೆಯ ದಿವಸ ಕಮಿಶನರರು ಕೌನ್ಸಿಲಿನ ಅನುಮತಿ ಪಡೆಯದೆ ಯೂನಿಯನ್ ಜೇಕ್ ಧ್ವಜವನ್ನು ಹಾರಿಸಿದ್ದರು. ಅವರು ಇನ್ನು ಕೌನ್ಸಿಲಿನ ಅಪ್ಪಣೆ ಪಡೆಯದೆ ಧ್ವಜಗಳನ್ನು ಹಾರಿಸಲೇರ್ಪಡಿಸುವುದಿಲ್ಲವೆಂದು ಒಪ್ಪಿಕೊಂಡಂತೆ ತಿಳಿದುಬರುತ್ತದೆ. ಈ ವಿಷಯವು ಚರ್ಚೆಗೆ ಬಂದು, ಮ್ಯುನ್ಸಿಪಲ್ ಕಟ್ಟಡದ ಮೇಲೆ ಯೂನಿಯನ್ ಜೇಕನ್ನು ಅಥವಾ ಇನ್ನಾವ ಧ್ವಜವನ್ನೇ ಆಗಲಿ ಕೌನ್ಸಿಲಿನ ಅನುಮತಿಯಿಲ್ಲದೆ ಹಾರಿಸಕೂಡದೆಂದು ತೀರ್ಮಾನಿಸಲಾಯಿತು.

ಪ್ರಕಟಣೆ — ಭೂಕಂದಾಯದ ಕ್ರಮವನ್ನು ಈಗಿನ ಪರಿಸ್ಥಿತಿಗಳಿಗೆ ಅನುಕೂಲಿಸುವಂತೆ ತಿದ್ದುಪಡಿ ಮಾಡುವ ವಿಷಯವನ್ನು ವಿಚಾರಿಸಲು ನಿಯಮಿಸಿದ ಕಮಿಟಿಯವರು ಸಭೆಸೇರಿ- ಅವರ ಮುಂದಿರುವ ಸದರಿ ವಿಷಯದ ಕುರಿತು ಅವರಿಗೆ ತೋರಿಬಂದ ವಿವಿಧ ಅಂಗಗಳನ್ನು ಪರ್ಯಾಲೋಚಿಸಿದರು. ಆದರೆ ಈ ವಿಷಯದಲ್ಲಿ ಯಾವುದಾದರೂ ನಿಶ್ಚಿತಾರ್ಥಕ್ಕೆ ಬರುವ ಮೊದಲು ಮುದ್ರಾಸು ಭೂಕಂದಾಯದ ಕ್ರಮವನ್ನು ಚೆನ್ನಾಗಿ ತಿಳಿದವರಿಂದ ಅಥವಾ ಕೃಷಕ ಹಿತಗಳಿಗೆ ಪ್ರತಿನಿಧಿಯಾದ ಸಂಘಗಳಿಂದ ಕೊಡಲಾಗುವ ಸೂಚನೆಗಳಿಗೆ ಯಾ ಅನುಭವಗಳಿಗೆ ಕಮಿಟಿಯವರು ಕೃತಜ್ಞರಾಗಿರುತ್ತಾರೆ. ಆ ವಿಷಯದಲ್ಲಿ ಎಲ್ಲಾ ಪತ್ರವ್ಯವಹಾರಗಳು ಸದರಿ ಕಮಿಟಿಯ ಸೆಕ್ರಿಟರಿಯವರಿಗೆ (ಮುದ್ರಾಸು ಗವರ್ನಮೆಂಟಿನ ರೆವಿನ್ಯೂ ಸೆಕ್ರಿಟರಿಯವರಿಗೆ) 'ಊಟಕಮುಂಡ್ ಸೆಕ್ರೆಟೇರಿಯಟ್ ಹೌಸ್ ಹಿಲ್'ನಲ್ಲಿ ಇದೇ ಜೂನ್ ತಿಂಗಳ ತಾ. ೧೫ರ ಒಳಗೆ ತಲ್ಪಿಸತಕ್ಕದ್ದು.

ಕೊಟಾಪಟ್ಟಾಮಿನ ಬೇಸಿಗೆ ಕಾಲದ ರಾಜಕೀಯ ಮತ್ತು ಆರ್ಥಿಕ ಶಿಕ್ಷಣದ ಶಾಲೆಯ ಮೇಲೆ ಸರಕಾರವು ಹಾಕಿದ ನಿಷೇಧ ಕಾನೂನನ್ನು ಖಂಡಿಸಲು ಇದೇ ದಿನ ಸಾಯಂಕಾಲ ಸ್ಥಳೀಯ ಲೈನ್ ಮೈದಾನಿನಲ್ಲಿ ನಾಗರಿಕರ ಒಂದು ಸಾರ್ವಜನಿಕ ಸಭೆಯು ಸೇರುವುದು. ಶ್ರೀ ಕೆ. ಆರ್ ಕಾರಂತ, ಎಂ. ಎಲ್ ಎ. ಇವರು ಅಧ್ಯಕ್ಷತೆಯನ್ನು ವಹಿಸುವರು. ಸರಕಾರವು ನಿಷೇಧಕಾನೂನು ಹಾಕುವಂತಹದ್ದೇನನ್ನೂ ಕೊಟಾಪಟ್ಟಮಿನ ರಾಜಕೀಯ ಶಿಕ್ಷಣ ಶಾಲೆಯವರು ಮಾಡಿಲ್ಲವೆಂದು ಪ್ರಕಟವಾದ ಮೇಲೆ, ಆ ಶಾಲೆಯ ಮೇಲೆ ಹೊರಿಸಿದ ನಿರೋಧ ಕಾನೂನಿನ ಮೇಲೆ ಅಸಮ್ಮತಿಯನ್ನು ತೋರ್ಪಡಿಸುವುದೇ ಈ ಸಭೆಯ ಉದ್ದೇಶವೆಂದು ತಿಳಿದುಬರುತ್ತದೆ. ಇದೇ ಸಭೆಯಲ್ಲಿ ಗವರ್ನರರುಗಳು ಸ್ಥಾಪಿಸಿದ ತಾತ್ಕಾಲಿಕ ಮಂತ್ರಿಮಂಡಲವನ್ನು ಖಂಡಿಸುವ ಠರಾವುಗಳೂ ಚರ್ಚಿಸಲಾಗುವುದೆಂದೂ ತಿಳಿದುಬಂದಿದೆ.

ಕೆನರಾ ಗಾಯನ ಸಮಾಜ: ಕೆಲವು ಮಂದಿ ಸಂಗೀತಕಲಾಭಿಮಾನಿಗಳ ಪ್ರೋತ್ಸಾಹದಿಂದ ನಮ್ಮ ನಗರದಲ್ಲಿ ಒಂದು ಗಾಯನ ಸಮಾಜವೆಂಬ ಸಂಘವು ಸ್ಥಾಪಿಸಲ್ಪಡುವುದು. ನಾಗರೀಕರಲ್ಲಿ ಸಂಗೀತಾಭಿರುಚಿಯನ್ನು ಅಭಿವೃದ್ಧಿಗೊಳಿಸುವುದೇ ಈ ಸಂಘದ ಉದ್ದೇಶವಿರುವುದು ಸ್ಪಷ್ಟ ವಿಷಯವಾಗಿರುತ್ತದೆ. ನಾಳೆ ಶನಿವಾರ (೫-೬ ೩೭)ಕ್ಕೆ ಗಣಪತಿ ಶಾಲೆಯಲ್ಲಿ ಈ ಗಾಯನ ಸಮಾಜದ ಆರಂಭೋತ್ಸವವಾಗುವುದು. ಮೈಸೂರು ಆಸ್ಥಾನ ವಿದ್ವಾನ್ ವಿಲಾಯತ ಹುಸೇನ್ ಸಾಹೇಬರು ಅಂದು ಗಾಯನ ಕಛೇರಿಯನ್ನು ಮಾಡಲಿರುವರೆಂದು ತಿಳಿದುಬರುತ್ತದೆ. ಮುಂದೆ ಪ್ರಖ್ಯಾತ ಸಂಗೀತಗಾರರನ್ನು ಕರೆಯಿಸಿ ಸಂಗೀತ ಕಛೇರಿಯನ್ನು ಏರ್ಪಡಿಸುವ ಉದ್ದೇಶವು ಸಂಘಾಧಿಕಾರಿಗಳಿಗಿರುತ್ತದೆಂದು. ವರ್ಧಂತಿಯಂದು-ಶ್ಲಾಘನೀಯ ಸಂಗತಿ.

ಮುನ್ಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್: ಕಳೆದ ತಿಂಗಳ ೨೨ ನೇ ರಲ್ಲಿ ಇಲ್ಲಿಯ ಕಾಂಗ್ರೆಸ್ ಕಛೇರಿಯಲ್ಲಿ ಸಭೆ ಸೇರಿ, ಬರುವ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರನ್ನು ಸ್ಪರ್ಧೆಗೆ ನಿಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ನಗರ ಕಾಂಗ್ರೆಸ್ ಸಮಿತಿಯು ಈ ಚುನಾವಣೆಗಳನ್ನು ನಡೆಸಬೇಕೆಂದೂ, ಈ ವಿಷಯವು ಸದ್ಯದಲ್ಲಿಯೇ ಸೇರಲಿರುವ ಕಾಂಗ್ರೆಸ್ ಸಮಿತಿಯ ಮೀಟಿಂಗಿನಲ್ಲಿ ಅನುಮೋದನೆಗೆ ಇಡಲಾಗುವುದು. ಅಂತೂ ಹೆಚ್ಚಿನ ಪ್ರಯಾಸ ಪರಿಶ್ರಮಗಳಿಲ್ಲದೆ ಕಾಂಗ್ರೆಸು ಬಹು ಸಂಖ್ಯಾಕವಾಗಿ ಆರಿಸಲ್ಪಡುವುದರಲ್ಲಿ ಸಂದೇಹವಿಲ್ಲ. ಹೀಗಾದರೆ ಮುನಿಸಿಪಲ್ ಸದಸ್ಯಗಿರಿಯಲ್ಲಿದ್ದ ನಿಷ್ಪ್ರಯೋಜಕ ವ್ಯಕ್ತಿಗಳು ಕಾಣೆಯಾಗುವ ವಿಷಯವು ನಿಸ್ಸಂದೇಹಾಸ್ಪದವೆಂದು ಹೆಚ್ಚಿನ ನಾಗರಿಕರ ಅಭಿಪ್ರಾಯವಿರುತ್ತದೆಂದು ತಿಳಿದುಬರುತ್ತದೆ.

ತಾಲೂಕುಗಳಿಂದ

ಬೆಳ್ಳಾರೆ — ಸ್ಥಳೀಕ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ ೨೦-೫-೩೭ನೇ ಶುಕ್ರವಾರ ಬೆಳ್ಳಾರೆಯ ಮಹಾಜನರ ಒಂದು ಸಭೆಯು ಕೂಡಿಬಂತು. ಶ್ರೀ ಬಿ ನಾರಾಯಣ ಸೇಕರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಕೋಟ ರಾಮಕೃಷ್ಣ ಕಾರಂತ ಎಂ. ಎಲ್ ಎ. ರವರು ತಮ್ಮ ಭಾಷಣದಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸ ಸಂಸ್ಥೆಯನ್ನು ಜನತೆಯು ಬಲಗೊಳಿಸಬೇಕೆಂದೂ ಜನತೆಯ ಸಂಪೂರ್ಣ ಬೆಂಬಲವಿದ್ದರೆ ಕಾಂಗ್ರೆಸಿಗೆ ತನ್ನ ಧ್ಯೇಯವನ್ನು ಸಂಪಾದಿಸಲು ಶಕ್ಯವಾಗುವುದೆಂದೂ ಹೇಳಿದರು. ಶ್ರೀ ಗೋ.ದ ಸೂರಲ ಸಂಕಪ್ಪ ರೈ ಮತ್ತು ಕೋಟ ಸೀತಾರಾಮಯ್ಯನವರು ಸಮಯೋಚಿತ ಭಾಷಣಮಾಡಿದರು. ಅಧ್ಯಕ್ಷರು ಸಭಿಕರೊಡನೆ ಕಾಂಗ್ರೆಸಿಗೆ ಸಂಪೂರ್ಣ ಬೆಂಬಲವಿತ್ತು, ದೇಶಸೇವೆಯಲ್ಲಿ ಭಾಗಿಗಳಾಗಬೇಕೆಂದು ಭಿನ್ನವಿಸಿದರು. ಶ್ರೀ ಗಣೇಶ ಸುಬ್ಬಯ್ಯನವರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಶ್ರೀಕರಪುರ: — ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಿಂದ ಆರಿಸಲ್ಪಟ್ಟ ಕಾಂಗ್ರೆಸ ಎಸೆಂಬ್ಲಿ ಸದಸ್ಯರಿಗೆ ಸಾರ್ವಜನಿಕ ಮಾನಪತ್ರವನ್ನರ್ಪಿಸುವುದಕ್ಕಾಗಿ ತಾ. ೨೩-೫-೩೭ನೇ ಆದಿತ್ಯವಾರ ಶ್ರೀಕರಪುರದ ಅಂತೂ ಸುತ್ತುಮುತ್ತಲಿನ ಗ್ರಾಮಗಳ ಮಹಾಜನರ ಒಂದು ದೊಡ್ಡ ಸಭೆಸೇರಿತ್ತು. ಅಂದಿನ ಸಮಾರಂಭದ ಬಗ್ಗೆ ಹಿಂದು, ಮುಸ್ಲಿಮ್ ಸದಸ್ಯರನ್ನೊಳಗೊಂಡ ಒಂದು ಸ್ವಾಗತಕಮಿಟಿಯ ವ್ಯವಸ್ಥೆ ಮಾಡಲ್ಪಟ್ಟಿತು.

ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಿಂದ ದಯಮಾಡಿಸಿದ್ದ ಎಸೆಂಬ್ಲಿ ಸದಸ್ಯರು ಮೆರವಣಿಗೆಯಲ್ಲಿ ರೈಲ್ವೇಸ್ಟೇಶನಿನಿಂದ ಸಭೆಸೇರುವ ಸ್ಥಳಕ್ಕೆ ಕರೆಂದೊಯ್ಯಲ್ಪಟ್ಟರು. ಸಭೆಯಲ್ಲಿ ೨೦೦೦ಕ್ಕಿಂತಲೂ ಮಿಕ್ಕಿದ ಜನರು ಭಾಗವಹಿಸಿದ್ದರು. ಶ್ರೀ ಸಾಮ್ಯುವೆಲ್ ಆರನ್ ಎಂ. ಎಲ್ ಎ ರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಸಾರ್ವಜನಿಕ ಮಾನಪತ್ರವು ಓದಿಬಟ್ಟೆಯ ಮೇಲೆ ಮುದ್ರಿಸಲ್ಪಟ್ಟಿತ್ತು. ಕಾಸರಗೋಡು ತಾಲೂಕಿನ ಪೈಕಿ ಮಲೆಯಾಳ ಭಾಷೆಯು ಮಾತಾಡಲ್ಪಡುವ ಭಾಗವನ್ನು ಮಲಬಾರಿಗೆ ಸೇರಿಸಬೇಕು, ಭೂಕಂದಾಯ ಕಡಿಮೆಯಾಗಬೇಕು—ಎಂಬಿವೇ ಮೊದಲಾದ ವಿಷಯಗಳು ಮಾನಪತ್ರವನ್ನು ಸೂಚಿಸಲ್ಪಟ್ಟದ್ದವು. ಮಾನಪತ್ರಕ್ಕೆ ಉತ್ತರವಾಗಿ ಮಲಬಾರಿನ ಪ್ರತಿನಿಧಿಗಳಾಗಿರುವ ಶ್ರೀಯುತರುಗಳಾದ ಮಹಮದ್ ಅಬ್ದುಲ್ ರಹಿಮಾನ್, ಸಿ ಅಚ್ಯುತನ್, ಪಿ ಮಾಧವನ್ ಮತ್ತು ಶ್ರೀಮತಿ ಕುಟ್ಟಿಮಾಲು ಅಮ್ಮನವರೂ, ದಕ್ಷಿಣ ಕನ್ನಡದ ಪ್ರತಿನಿಧಿಗಳಾದ ಶ್ರೀ ಕೆ ಆರ್ ಕಾರಂತ ಮತ್ತು ಬಿ ಬಿ ಬಾಳಿಗರವರು ಭಾಷಣವಿತ್ತರು. ಅಬ್ದುಲ್ ರಹಿಮಾನ್ ಸಾಹೇಬರು ತಮ್ಮ ದೀರ್ಘ ಭಾಷಣದಲ್ಲಿ ಈಗಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ್ದಲ್ಲದೆ ಮುಸ್ಲಿಮರು ಕಾಂಗ್ರೆಸಿಗೆ ಸೇರುವ ಮಹದವಶ್ಯಕತೆಯನ್ನು ಸೂಚಿಸಿದರು. ಮಂಜೂರಾದ ಠರಾವುಗಳ ಪೈಕಿ ತಾತ್ಕಾಲಿಕ ಮಂತ್ರಿಮಂಡಲದ ಖಂಡನೆಯೂ ಒಂದಾಗಿತ್ತು.

ಬೆಳ್ತಂಗಡಿ: ತಾರೀಕು ೨೫-೫-೩೭ರಲ್ಲಿ ಬೆಳ್ತಂಗಡಿ ಮತ್ತು ಸುತ್ತುಮುತ್ತಲಿನ ಮಹಾಜನರ ಸಾರ್ವಜನಿಕ ಸಭೆಯೊಂದು ಶ್ರೀ ಉಜ್ರೆ ಶೇಷಗಿರಿ ಶ್ಯಾನುಭಾಗರವರ ಅಧ್ಯಕ್ಷತೆಯಲ್ಲಿ ಕೂಡಿಬಂತು.

ಶ್ರೀ ಕೆ ಆರ ಕಾರಂತ, ಎಂ ಎಲ್ ಎ ಯವರು ತಮ್ಮ ದೀರ್ಘ ಭಾಷಣದಲ್ಲಿ ಹೊಸ ರಾಜ್ಯಘಟನೆಯು ಭಾರತೀಯರ ಪ್ರಯೋಜನಗಳ ಅಭಾವ, ಕಾಂಗ್ರೆಸ್ ಭರವಸೆಯನ್ನು ಕೇಳುವ ಕಾರಣ ಮೊದಲಾದುವುಗಳನ್ನು ವಿವರಿಸಿ, ಇತ್ತೀಚೆಗೆ ಸರಕಾರದವರು ಹೊರಡಿಸಿರುವ ಪ್ರಚಾರಕ ಕರಪತ್ರಗಳ ಟೊಳ್ಳುಸ್ವಭಾವವನ್ನು ಬಯಲಿಗೆ ತಂದರು. ಅಲ್ಲದೆ ಜನತೆಯು ಕಾಂಗ್ರೆಸಿಗೆ ಅಧಿಕ ಸಂಖ್ಯೆಯಲ್ಲಿ ಸೇರಿ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿ ಗ್ರಾಮೋದ್ಧಾರ ಕಾರ್ಯವನ್ನು ಕೈಕೊಳ್ಳಬೇಕಾದ ಮಹದವಶ್ಯಕತೆಯ ಕುರಿತು ಕೂಡಾ ಭಾಷಣವಿತ್ತರು. ಬೆಳ್ತಂಗಡಿ ಮತ್ತು ಸುತ್ತುಮುತ್ತಲಿನ ೬ ಗ್ರಾಮಗಳ ಒಂದು ಸಂಯುಕ್ತ ಗ್ರಾಮಕಮಿಟಿಯು ಸಭೆಯಲ್ಲಿಯೇ ವ್ಯವಸ್ಥೆಗೊಳಿಸಲ್ಪಟ್ಟಿತು. ಪ್ರತಿಯೊಂದು ಗ್ರಾಮಗಳಿಂದ ಎರಡು ಪ್ರತಿನಿಧಿಯಂತೆ ಕಾಂಗ್ರೆಸ್ ಕಮಿಟಿಗೆ ಆರಿಸಲ್ಪಟ್ಟಿತು.

ಅಲ್ಲದೆ ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸಿದ್ದಕ್ಕಾಗಿ ಮತ್ತು ಮದ್ರಾಸ್ ಎಸೆಂಬ್ಲಿಯ ಸಭೆಯನ್ನು ಕರೆಯದಿದ್ದುದಕ್ಕಾಗಿ ಖಂಡಿಸುವ ಒಂದು ಠರಾವು ಮಂಜೂರಾಯಿತು. ಮತ್ತು ಕಾಂಗ್ರೆಸಿನಲ್ಲಿ ಜನತೆಗೆ ಸಂಪೂರ್ಣ ನಂಬಿಕೆಯಿದೆಯೆಂಬ ಠರಾವು ಕೂಡಾ ಸರ್ವಾನುಮತದಿಂದ ಮಂಜೂರಾಯಿತು. ಶ್ರೀ ಟಿ. ಎ ಅಡ್ಯಂತಾಯರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಮುಂಡಾಜೆ: — ಇದೇ ಕಳೆದ ತಾ ೨೬ನೇ ಬುಧವಾರ ಮುಂಡಾಜೆಯ ನಿವಾಸಿಗಳ ಒಂದು ಮಹಾಸಭೆಯು ಶ್ರೀ ಕೆ ಶ್ರೀನಿವಾಸರಾವ್ ವಕೀಲ್, ಮದ್ರಾಸು ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಕೆ ಆರ್ ಕಾರಂತ ಎಂ ಎಲ್ ಎ ಯವರು ತಮ್ಮ ಭಾಷಣದಲ್ಲಿ ಸ್ಥಳೀಕ ಕಾಂಗ್ರೆಸ್ ಕಮಿಟಿಯವರು ಕಾಂಗ್ರೆಸಿನ ಪ್ರಾಮುಖ್ಯ ಕಾರ್ಯಕ್ರಮಗಳಾಗಿರುವ ಖಾದಿಯ ಪ್ರಚಾರ, ಹರಿಜನೋದ್ಧಾರ, ಮುಸ್ಲಿಮ್ ಜನತಾ ಸಂಪರ್ಕ ಮೊದಲಾದುವುಗಳನ್ನು ಕೈಕೊಳ್ಳಬೇಕೆಂದು ಹೇಳಿದರು. ಅಖಿಲಭಾರತ ಕಾಂಗ್ರೆಸಿನ ಸದಸ್ಯರಾದ ಶ್ರೀ ಎಂ. ಎಸ್ ಬಿಡೆಯವರು ಕೂಡಾ ಭಾಷಣಮಾಡಿದರು. ಅಧ್ಯಕ್ಷರ ಭಾಷಣವಾದ ಬಳಿಕ ಸಭಾಂತ್ಯವಾಯಿತು.

ಕೆದಿಂಜೆ: — ಇಲ್ಲಿಯ "ದಿ. ಗಾಂಧಿಕ್ಲಬ್"ನ ೩ನೇ ವರ್ಷಾವಧಿ ಸಭೆಯಲ್ಲಿ ಮ। ರಾ। ಕೆದಿಂಜೆ ದಾಸ ಹೆಗ್ಗಡೆಯವರನ್ನು ಅಧ್ಯಕ್ಷರನ್ನಾಗಿಯೂ, ಬೋಳ ರಾಜು ಶೆಟ್ರನ್ನು ಕಾರ್ಯದರ್ಶಿಗಳನ್ನಾಗಿಯೂ ಮ। ರಾ। ಗಳಾದ ಬಿ. ವಿಠಲ ಹೆಗ್ಗಡೆಯವರು ಇವರನ್ನು ಕಮಿಟಿಯ ಸದಸ್ಯರನ್ನಾಗಿಯೂ ಆರಿಸಲಾಯಿತು.

ಉಚ್ಚಿಲ: — ಸರಸ್ವತಿ ಮಂದಿರ ಶಾಲೆಯ ವರ್ಧಂತ್ಯುತ್ಸವವು ಕಳೆದ ತಿಂಗಳ ತಾ ೧೮ರಲ್ಲು ಬಹಳ ವಿಜೃಂಭಣೆಯಿಂದ ಜರಗಿತು. ಬೆಳಗ್ಗೆ ೮ ಗಂಟೆಯಿಂದ ೧೧ ಗಂಟೆಯ ವರೆಗೆ ಸದರಿ ಶಾಲೆಯ ಹುಡುಗರು ವಿವಿಧ ಆಟಗಳನ್ನು ಆಡಿ ತೋರಿಸಿ, ನೆರೆದ ಮಹನೀಯರನ್ನು ಬೆರಗುಗೊಳಿಸಿದರು. ಗಂಟೆ ೧೧ರಿಂದ ೧೮ ವರೆಗೆ ಹುಡುಗರಿಗೆ ಇನಾಮುಗಳನ್ನೂ ತಿಂಡಿತೀರ್ಥಗಳನ್ನೂ ಹಂಚಿದರು. ಆ ಮೇಲೆ ಮಧ್ಯಾಹ್ನ ೨ ಗಂಟೆಯಿಂದ ೬ ಗಂಟೆಯ ವರೆಗೆ ಶಾಲಾ ಮಕ್ಕಳು ಪತಿದಾನವೆಂಬ ನಾಟಕವನ್ನು ತಮ್ಮ ಸಕ್ಕರೆಯಂಥ ಚಿಕ್ಕ ಮಾತುಗಳಿಂದಲೂ ಮತ್ತು ವಿವಿಧ ಅಭಿನಯಗಳಿಂದಲೂ ಆಡಿ ತೋರಿಸಿ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು. ತರುವಾಯ ಶಾಲಾ ಮುಖ್ಯೋಪಾಧ್ಯಾಯರಾದ ಸಂಕಪ್ಪ ಶೆಟ್ರು ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ನಾಟಕವು ಕೊನೆಗೊಂಡಿತು.

ಉಡುಪಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ಮೂಲ್ಕಿ ಸಂಗೀತಕಲಾ ಮಂದಿರದ ಸಹಾಯಾರ್ಥವಾಗಿ ಮೂಲ್ಕಿ ಕಿರಿಯರ ಕೂಟದವರು "ಅಸ್ಪೃಶ್ಯತಾ ಅಥವಾ ಹರಿಜನೋದ್ಧಾರ"ವೆಂಬ ನವೀನ ಸಾಮಾಜಿಕ ನಾಟಕವನ್ನು ಶ್ರೀ ರಾಮಕೃಷ್ಣ ಥಿಯೇಟರನಲ್ಲಿ ತಾ ೨೯ನೇ ರಾತ್ರಿ ೯ ೩೦ಕ್ಕೆ ಅಭಿನಯಿಸಿದರು. ಜನಪ್ರೋತ್ಸಾಹವು ತಕ್ಕಮಟ್ಟಿಗೆ ಚೆನ್ನಾಗಿತ್ತು. ಶ್ರೀ ರಾಘವೇಂದ್ರರಾಯರ ಭುಜಂಗನ ಪಾತ್ರವೂ, ಶ್ರೀ ಭವಾನಿಶಂಕರ ಭಟ್ಟರ ಭಾಸ್ಕರರಾಯನ ಪಾತ್ರವೂ ಮಾಸ್ಟರ್ ಗಿರಿಯಪ್ಪನ ಪ್ರಸನ್ನ ಕುಮಾರನ ಪಾತ್ರವೂ ಪ್ರಶಂಸೆಗೆ ಪಾತ್ರವಾಗಿದ್ದುವು.

೭ನೇ ಜೋರ್ಜ ಸಾರ್ವಭೌಮರ ಕಿರೀಟಧಾರಣೋತ್ಸವ ಸಮಾರಂಭದ ಸಲುವಾಗಿ ಇಲ್ಲಿ ಸ್ಥಾಪಿತವಾದ ಕಮಿಟಿಯವರಿಂದ ಜಮೆಮಾಡಲಾಗಿದ್ದ ರೂಪಾಯಿ ೮೭-೩-೨ರಲ್ಲಿ ಬಡಬಗ್ಗರಿಗೆ ಅಕ್ಕಿ ಹಂಚಿ ಖರ್ಚು ರೂ ೬೩-೩-೮ ಹೋಗಲಾಗಿ ಉಳಿದ ರೂಪಾಯಿ ೧೪-೧೫-೬ನ್ನು ಗಾಂಧಿಮೈದಾನದಲ್ಲಿ ಸ್ನಾನಗೃಹ ನಿರ್ಮಿಸುವ ಬಗ್ಗೆ ವಿನಿಯೋಗಿಸುವರೆ ನಿರ್ಣಯಿಸಲಾಗಿದೆಯೆಂದು ತಿಳಿಯುತ್ತೇವೆ.

ಕುಂದಾಪುರ. ಇದೇ ಕಳೆದ ತಾ ೨೭ರಲ್ಲಿ ಶ್ರೀ ಕೋದಂಡರಾಮರ ಕಂಪೌಂಡಿನಲ್ಲಿ ಮ। ರಾ। ಬಿ ಶಿವರಾಮ ಶೆಟ್ಟಿ ಬಿ ಎ ಬಿ ಎಲ್ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಮ। ರಾ। ಬಿ ಸುಬ್ಬಣ್ಣ ಶೆಟ್ರು ಆರಂಭ ಭಾಷಣಮಾಡಿದರು. ತರುವಾಯ ಶ್ರೀ ಹಿಲ್ಡಿಯವರು ಈಗಿನ ರಾಜಕೀಯ ಪರಿಸ್ಥಿತಿಯ ಕುರಿತು ೧। ಗಂಟೆಯ ವರೆಗೆ ಉದ್ದಾತ್ತ ಭಾಷಣವನ್ನು ಮಾಡಿದರು. ಅಧ್ಯಕ್ಷರು ಸರ್ವರೂ ಇಂತಹ ಸಂದರ್ಭದಲ್ಲಿ ಕಾಂಗ್ರೆಸಿಗೆ ಸದಸ್ಯರಾಗಿ ಸೇರಿ ಕಾಂಗ್ರೆಸನ್ನು ಬಲಪಡಿಸಬೇಕೆಂದು ವಿವರಿಸಿದರು. ಧನ್ಯವಾದವನ್ನರ್ಪಿಸಿದ ತರುವಾಯ ಸಭೆಯು ಅಂತ್ಯವಾಯಿತು.

ಇದೇ ತಾ ೨೬ರಲ್ಲು ಅಲ್ಲಿಯ ಪೇಟೆ ಕ್ರಿಶ್ಚಿಯನರಲ್ಲಿಯ ಮದುವೆಗೆ ಹೋಗಿದ್ದ ಹೆಂಗಸೊಬ್ಬಳು ಓಣಿದಾರಿಗಾಗಿ ಹಗಲು ೩ ಗಂಟೆಯ ಸಮಯ ಮನೆಗೆ ಬರುತ್ತಿರುವಾಗ ದ ಕ್ರಿಶ್ಚಿಯನ್ ಗಂಡಸೊಬ್ಬನು ಆವಳ ಕುತ್ತಿಗೆಯಿಂದ ಒಂದು ಚಿನ್ನದ ಸರವನ್ನು ಬಲಾತ್ಕಾರದಿಂದ ಎಳದು ತೆಗೆದುಕೊಂಡು ಓಡಲು ಹೆಂಗಸು ಈ ಸಂಗತಿಯನು ಪೋಲೀಸರಿಗೆ ತಿಳಿಸಲು ಪೋಲೀಸಿನವರು ಸಂಬೇಣದ ಸಮೀಪವಿರುವ ಕಾಡಿನ ಮರವೊಂದರಲ್ಲಿ ಅಡಗಿದ್ದ ಕಳ್ಳನನ್ನು ಹಿಡಿದು ಬಂಧಿಸಿರುವರು. ಚಿನ್ನ ಸಿಕ್ಕಲಿಲ್ಲವೆಂದೂ ಸದರಿಯವನು ಮೊದಲು ಜೈಲಿಗೆ ಹೋದ ಆಸಾಮಿಯೆಂದೂ ತಿಳಿದುಬರುತ್ತದೆ.

ಸ್ಥಳೀಯ ಹ್ಯಾಂಡ್ಲೂಮ್ ಇದೇ ತಾ ೬ರವರೆಗೂ, ಡಿ ಎಮ್ ಕೋರ್ಟು ಇದೇ ತಾ ೪ರಲ್ಲು ತೆರೆಯಲ್ಪಡುವುದು.

ಸ್ಥಳೀಯ ಕುಂದಾಪುರ ಬೇಂಕಿನ ಶಾಖೆಯೊಂದು ಇದೇ ತಾ ೪ರಲ್ಲು ಶಂಕರನಾರಾಯಣದಲ್ಲಿ ತೆರೆಯಲ್ಪಡುವುದೆಂದು ತಿಳಿದುಬರುತ್ತದೆ.

ಕಳೆದ ಎರಡು ತಿಂಗಳ ಹಿಂದೆ ಕೆಲವು ಕಡೆಗಳಲ್ಲಿ ಪಾತ್ರೆ ಕಳವು ಕೇಸುಗಳಾದಾಗ ಕೆಲವು ಪಾತ್ರೆಗಳು ಸಿಕ್ಕಿತೆಂಬ ಅನುಮಾನದಿಂದ ಇಲ್ಲಿಯ ಪ್ರಸಿದ್ಧ ಪಾತ್ರೆ ವ್ಯಾಪಾರಿಗಳೂ ಯೋಗ್ಯ ಕುಟುಂಬದವರೂ ಆದ ಶ್ರೀ ಬಿ ವಿ. ಕಾರಂತರು ಕೈದುಮಾಡಲ್ಪಟ್ಟು, ಆ ಸಂಬಂಧ ಉಂಟಾದ ವ್ಯವಹರಣೆಯು ತನಿಖೆಯಾಗಿ ಇದೇ ಕಳೆದ ತಾ. ೩೧ರಲ್ಲು ಸದರಿ ಕಾರಂತರು ನಿರಪರಾಧಿಗಳೆಂದು ತೀರ್ಮಾನವಾಯಿತಲ್ಲದೆ ನಂಬ್ರವು ತೆಗೆದುಹಾಕಲಾಗಿದೆಯೆಂದೂ ತಿಳಿದುಬರುತ್ತದೆ.

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಬಾರ್ವಾಡಿ		ಕಾರ್ಕಳ
ಉಜಿರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)	ಉಡುಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೈಂಟ್ ಮೆನೇಜರರಿಗೆ ಬರೆದು ತಿಳಿಸಿರಿ.

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.,

Wanted Agents in unrepresented parts.

Apply to:—

Messrs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at:-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4

ದ. ಕ. ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿ.

ಮದ್ರಾಸ್ ಎಸೆಂಬ್ಲಿ ಚುನಾವಣೆಯ ಸಂಬಂಧವಾಗಿ, ಕಳೆದ ಫೆಬ್ರವರಿ ತಾ ೧೦ ರಲ್ಲು ರಾಷ್ಟ್ರಪತಿಗಳು ನಮ್ಮ ಜಿಲ್ಲೆಗೆ ಚಿತ್ತೈಸಿದ್ದಾಗ, ಕಾರ್ಕಳ ತಾಲೂಕಿನ ಮೂಡಬಿದ್ರೆಯಲ್ಲಿ ಜರಗಿದ ಸಭೆಯಲ್ಲಿ ರೈತರು ಇವರಿಗಿತ್ತ ಮಾನಪತ್ರಕ್ಕೆ ಉತ್ತರವಾಗಿ ಕೊಟ್ಟ ಭಾಷಣದ ಮುಖ್ಯ ಸಾರಾಂಶವನ್ನೂ, ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯ ಸ್ಥಾಪಕ ಶ್ರೀ! ಬಿ. ಟಿ. ರೈಗಳು ಕನ್ನಡಿಗರಲ್ಲಿ ಮಾಡಿಕೊಂಡಿರುವ ವಿನಂತಿಯೊಡನೆ ಕೆಳಗೆ ಕೊಡಲಾಗಿದೆ.

ವ್ಯವಸ್ಥಾಪಕರ ವಿನಂತಿ.

ಕನ್ನಡ ಜಿಲ್ಲೆಯ ಭಾಂಧವರೇ, ಕಳೆದ ನೂರ ಎಂಬತ್ತು ವರ್ಷಗಳಿಂದ ಪರದಾಸ್ಯಕ್ಕೆ ಸಿಲುಕಿ ಅಧೋಗತಿಗಿಳಿದಿರುವ ನಮ್ಮ ಹಿಂದೂ ಮಾತೆಯ ಸ್ವಾತಂತ್ರ್ಯವನ್ನು ಸಂಪಾದಿಸಿ ನಮ್ಮ ಜನಾಂಗದ ದಾರಿದ್ರ್ಯವನ್ನು ಹೋಗಲಾಡಿಸುವುದು ಭಾರತಪುತ್ರ ಪುತ್ರಿಯರ ಕರ್ತವ್ಯವಾಗಿರುವುದಾದರೂ ಈ ಕಾರ್ಯಸಾಧನೆಯು ಮಾತ್ರ ಹೇಗೆ ಮುಂದುವರಿಯಬೇಕೆಂಬುದೇ ಇಂದಿನ ಮುಖ್ಯ ವಿಚಾರಪರ ವಿಷಯವಾಗಿರುತ್ತದೆ.

ಕಳೆದ ೫೦ ವರ್ಷಗಳಿಂದಲೂ ನಮ್ಮ ರಾಷ್ಟ್ರಸಭೆಯು ಈ ಕುರಿತು ಹಲವು ತರದ ನಿಸ್ವಾರ್ಥಪರ ಕಾರ್ಯಕ್ರಮಗಳನ್ನು ದೇಶದ ಮುಂದಿಡುತ್ತಿದೆಯಾದರೂ, ಪೂರ್ಣ ಸ್ವಾತಂತ್ರ್ಯದ ಜಯಭೇರಿಯ, ನಾದವನ್ನು ಕೇಳಲಿಕ್ಕೆ ಇನ್ನೂ ಬಹಳ ಸಮಯವಿರುವುದೊ ಎಂಬ ಅನುಮಾನಾಸ್ಪದ ವಿಚಾರವು ಎಲ್ಲರನ್ನೂ ಕಳವಳಗೊಳಿಸುತ್ತದೆ ಇದಕ್ಕೆ ಜನಾಂಗವು ತನ್ನ ಸಾಹಸಪೂರ್ವಕ ಬೆಂಬಲದ ಶಕ್ತಿಯನ್ನು ಪೂರ್ಣ ಸ್ವಾತಂತ್ರ್ಯದ ಗುರಿಯ ಒಂದೇ ಕಡೆಗೆ ಉಪಯೋಗಿಸದೆ, ಇತರ ಸ್ವಾರ್ಥಪರ ಸಾಧನೆಗಳಲ್ಲೂ ವ್ಯಯಿಸುತ್ತಿರುವುದೇ ಮುಖ್ಯ ಕಾರಣವಾಗಿರುತ್ತದೆ. ಹೇಗೆಂದರೆ ದೇಶದ ಮುಖಂಡರೆನ್ನಿಸಿಕೊಳ್ಳುವ ಕೆಲವು ಸ್ವಾರ್ಥ ಶ್ರೀಮಂತರೂ ಮತ್ತು ಹಲವು ಮಂದಿ ವಿದ್ವಾಂಸರೆನ್ನಿಸಿಕೊಳ್ಳುವವರು ಕೂಡಾ, ಅನಿತ್ಯ ಸುಖೋಪಭೋಗಗಳಿಗೆ ಮೈಮರೆತು, ತನ್ನ ಜನಾಂಗದ ಅಭಿವೃದ್ಧಿಯ ಕಡೆಗೂ ಲಕ್ಷ್ಯಕೊಡದೆ ದೇಶಿಯರಾದ ತಮ್ಮ ಭಂದುಭಗಿನಿಯರ ಕಷ್ಟಾರ್ಜಿತವನ್ನು ಕೂಡಾ ಸೂರೆಮಾಡುವುದರಲ್ಲಿ ಹೇಸದೆ ನಮ್ಮ ಸರಕಾರದ ಬೆನ್ನು ಬಿಡಲಾರರು.

ಇನ್ನೊಂದೆಡೆ ಈ ತರದ ದೇಶದ್ರೋಹಿಗಳು ಬಡವರಾದ ಅಸಂಖ್ಯಾತ ಹಿಂದೀ ಜನತೆಯ ಶಕ್ತಿಯನ್ನು ತಮ್ಮ ಸಾಲದ ಮೂಲಕ ಬಿಗಿಹಿಡಿದು, ತಮ್ಮ ಸ್ವಾರ್ಥಕ್ಕಾಗಿ ಪರಕೀಯರ ಇಂದಿನ ಪ್ರಭುತ್ವವನ್ನು ಬಲಪಡಿಸುವುದರಲ್ಲಿ ಬೆಂಬಲಕೊಡುತ್ತಾರೆ. ಇನ್ನು ಕೆಲವರು ಜಾತಿಯತೆಯ ಸೋಗನ್ನು ಧರಿಸಿ ತಮ್ಮ ಲಾಭವನ್ನು ಸಂಪಾದಿಸುವುದಕ್ಕಾಗಿ ಅಲ್ಪ ಸಂಖ್ಯಾಕರ ರಕ್ಷಣೆಯೆಂಬ ತಮ್ಮ ಮಾತಿನ ಜಾಲದಿಂದ ಅವರನ್ನು ಮರುಳುಗೊಳಿಸಿ ಹಿಂದೀ ಸಹೋದರ ಸಹೋದರಿಯರೊಳಗೆ ಕಲಹದ ಬೀಜವನ್ನು ಬಿತ್ತಿ ಜನಾಂಗದ ಒಗ್ಗಟ್ಟಿಗೆ ಒಡಕನ್ನುಂಟುಮಾಡಿ, ರಾಷ್ಟ್ರಸಭೆಯ ಶಕ್ತಿಯನ್ನು ಕುಗ್ಗಿಸಲು ಪ್ರಯತ್ನಿಸುತ್ತಾರೆ. ಈ ತರದ ಸ್ವಾರ್ಥಿಗಳ ಕುಟಿಲೋಪಾಯವು ಸಂಪೂರ್ಣ ನಿರ್ನಾಮವಾಗದೆ, ನಮಗೆ ಎಂದೆಂದಿಗೂ ಪೂರ್ಣ ಸ್ವಾತಂತ್ರ್ಯವು ದೊರೆಯಲಾರದು. ಆದುದರಿಂದ ಇದರ ನಿವಾರಣೆಯಾಗಬೇಕಾದರೆ, ನಮ್ಮ ಜನಾಂಗದ ಬಡ ಹಿಂದೀ ವ್ಯವಸಾಯಕರೊಳಗೆ ಮತ್ತು ಕೂಲಿಯವರೊಳಗೆ ಜನಸಾಮೂಹಿಕ ಜಾಗ್ರತೆಯನ್ನು ಆದಷ್ಟು ತ್ವರ್ಯದಿಂದುಂಟುಮಾಡಿ, ಭಾಂಡವಾಳ ಮತ್ತು ಬಡವರೊಳಗಿರುವ ಸಾಲವೆಂಬ ಸಂಕಲಿಯ ಬಿಗಿಯಾದ ನಿಕಟಸಂಬಂಧವನ್ನು ಕಡಿದುಹಾಕುವುದೇ ಇಂದಿನ ಮುಖ್ಯ ಕಾರ್ಯಸಾಧನೆಯಾಗಿರತಕ್ಕದ್ದು ಈ ಪ್ರಕಾರ ನಮ್ಮ ದೇಶದ ಬಡವರು ಬಾಂಡವಾಳಿಗರ ಮತ್ತು ನಮ್ಮ ಸರಕಾರದ ಹತೋಟಿಯಿಂದ ಪಾರಾದೊಡನೆಯೇ ಪೂರ್ಣ ಸ್ವಾತಂತ್ರ್ಯವು ನಮ್ಮ ಕೈಹಿಡಿಯೊಳಗಾಗುವುದಲ್ಲದೆ, ನಂತರ ಇದನ್ನು ಪರಕೀಯರಿಂದ ಯಾಚಿಸುವ ಅಗತ್ಯವೇ ಇರುವುದಿಲ್ಲ

ಕಳೆದ ೧೯೩೫ನೇ ಇಸವಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಸರಕಾರೀ ಪಕ್ಷದವರಿಗೂ, ಕಾಂಗ್ರೆಸ್ಸಿನವರಿಗೂ ನಡೆದ ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಯ ಜಯದ ಫಲಿತಾಂಶವನ್ನೂ ಮತ್ತು ಇದೇ ರೀತಿ ಕಳೆದ ಮದ್ರಾಸ್ ಎಸೆಂಬ್ಲಿಗೆ ಇವರೊಳಗೆ ನಡೆದ ಗುಪ್ತ ಮತ ಚುನಾವಣೆಯ ಪ್ರಚಂಡ ಜಯವನ್ನೂ ಮತ್ತು ಈ ಎರಡು ಚುನಾವಣೆಯ ಪ್ರಚಾರಕಾರ್ಯವು ಪರಿಣಾಮದಿಂದ ಜನಸಾಮೂಹಿತರೊಳಗೆಉಂಟಾದ ಜಾಗ್ರತಿಯನ್ನು ತಿಳಕೊಂಡರೆ, ಮೇಲಿನ ಅಭಿಪ್ರಾಯವು ಸರಿಯೆಂದು ವಿಧಿತವಾಗದಿರದು.

ರೋಗದ ಮೂಲವನ್ನು ಕಂಡುಹಿಡಿದು ತಕ್ಕ ಔಷಧಿಯನ್ನು ಕೊಡದೆ, ಇತರ ಎಷ್ಟೇ ಶಕ್ತಿಯ ದ್ರಾವಕಗಳನ್ನು ರೋಗಿಗೆ ಕೊಟ್ಟರೂ, ಆತನ ಸಂಕಷ್ಟವು ಹ್ಯಾಗೆ ನಿವಾರಣೆಯಾಗುವುದಿಲ್ಲವೊ ಹಾಗೆಯೇ ಇಂದು ನಮ್ಮ ಜನಾಂಗದಲ್ಲಿ ತಲೆದೋರಿರುವ ದಾರಿದ್ರ್ಯದ ರೋಗಕ್ಕೆ ಸಾಲನಿವಾರಣೆಯೆಂಬ ಯೋಗ್ಯ ಔಷಧಿಯನ್ನು ಕೊಡದಿದ್ದರೆ, ದಾಸತ್ವದಿಂದ ನಮ್ಮ ತಲೆಯ ಮೇಲೆ ಹೊರಿಸಲ್ಪಟ್ಟಿರುವ ಹೊರೆಯ ಭಾರವನ್ನು ತಳ್ಳಿಹಾಕಲು ನಮಗೆ ಶಕ್ತಿಯೇ ಬರಲಾರದು. ಇಂಥಾ ಶಕ್ತಿಯನ್ನು ಸಂಪಾದಿಸಲಾಗದ ಯಾವತ್ತು ಕಾರ್ಯಸಾಧನೆಗಳಲ್ಲೂ ನಾವು ಸಾಹಸಪಡುವುದೆಂದರೆ, ಸ್ವಪ್ನದಲ್ಲಿ ಕಳ್ಳರು ನಮ್ಮನ್ನು ಹಿಂಬಾಲಿಸುವಾಗ ನಾವು ಓಡಿ ಹೋಗಲಿಕ್ಕೆ ಪ್ರಯತ್ನಿಸುವಾಗ ಶಕ್ತಿಯಿಲ್ಲದೆ ಹ್ಯಾಗೆ ಒದ್ದಾಡುತ್ತೇವೊ ಹಾಗೆಯೇ ಸರಿ. ಆದರೆ ಈ ಮೇಲಿನ ಕಾರ್ಯಸಾಧನೆಯನ್ನು ನೆಂವೇರಿಸುವುದು ಕಷ್ಟವೆಂದು ಹಲವರಿಗೆ ತೋರುವುದಾದರೂ, ನಮ್ಮ ಒಕ್ಕಲಿಗರ ಸಮಿತಿಯು ಕೈಕೊಂಡಿರುವ ನೂತನ ಕಾರ್ಯಕ್ರಮವನ್ನು ಮುಂದೊತ್ತಲು ಜಿಲ್ಲೆಯ ಅರ್ಥಾತ್ ದೇಶದ ಎಲ್ಲಾ ವರ್ಗದವರೂ ತಮ್ಮ ತನು, ಮನ, ಧನಗಳೆಂಬ ಯಾವುದಾದರೊಂದು ಸಹಾಯವಿತ್ತರೆ, ಖಂಡಿತವಾಗಿಯೂ, ನಮ್ಮ ದಾರಿದ್ರ್ಯವು ನಿವಾರಣೆಯಾಗಿ, ನಮ್ಮೊಳಗೆ ಸಾಮೂಹಿಕ ಶಕ್ತಿಯು ಬಲವಾಗುವುದರಲ್ಲಿ ಏನೊಂದೂ ತರದ ಅನುಮಾನವಿರಲಾರದು

"ದಕ್ಷಿಣ ಕನ್ನಡ ಜಿಲ್ಲಾ ಒಕ್ಕಲಿಗರ ಸಹಕಾರ ಸಮಿತಿಯು ಈಗ ಕೈಕೊಂಡಿರುವ ಕಾರ್ಯಸಾಧನೆಗಳು."

೧. ಹಳ್ಳಿಯ ವ್ಯವಸಾಯಗಾರರನ್ನು ಮತ್ತು ಕೂಲಿಗಾರರನ್ನು ಆದಷ್ಟು ಸಮಿತಿಯು ಸದಸ್ಯರನ್ನಾಗಿ ಸೇರಿಸಿಕೊಳ್ಳುವುದು.

೨. ಸದಸ್ಯರನ್ನು ತೆಗೆದುಕೊಳ್ಳುವಾಗ ಜಾತಿಭೇದವನ್ನು ಗಮನಕ್ಕೆ ತೆಗೆದುಕೊಳ್ಳದೆ ಸೇರಿಸಿಕೊಳ್ಳುವುದು.

೩. ಸದಸ್ಯರು ಮಳೆಗಾಲದ ತಮ್ಮ ಜೀವನಕ್ಕೆ ಮತ್ತು ಪ್ರಥಮ ಸಾಗುವಳಿಯ ಖರ್ಚಿಗೆ ಅಗತ್ಯಪಡುವ ಸಾಲವನ್ನು ಆದಷ್ಟು ಕಮ್ಮಿ ಮಾಡುವುದಕ್ಕಾಗಿ, ಸಮಿತಿಗೆ ಸೇರುವ ಸದಸ್ಯರು ೮ ತಿಂಗಳ ವರೇಗೆ ತಮ್ಮ ಮನೆಯಲ್ಲಿ ನಿತ್ಯಕ್ಕೆ ಖರ್ಚಾಗುವ ಅಕ್ಕಿಯಿಂದ ೧ನೇ ಅಂಶವನ್ನು ನಿತ್ಯಕ್ಕೂ ತೆಗದಿಟ್ಟು ಹಪ್ತೆಗೊಮ್ಮೆ ಸಮಿತಿಗೆ ಒಪ್ಪಿಸಿಕೊಟ್ಟು ಪುನಃ ಈ ಪ್ರಕಾರದ ಡಿಪೋಜಿಟು ಅಕ್ಕಿಯನ್ನು ಮಳೆಗಾಲದ ಆರಂಭಕ್ಕೆ ತನ್ನ ಖರ್ಚಿಗೆ ಸಾಲದ ರೂಪವಲ್ಲದೆ, ವಾಪಾಸು ಪಡಕೊಂಡ ಸಾಲದ ಸಂದೆಯನ್ನು ಕಮ್ಮಿ ಮಾಡುವರೆ ಸಹಾಯ ಕೊಡುವುದು.

೪ ಸದಸ್ಯರಿಗೆ ಬೇಕಾಗುವ ಹೆಚ್ಚಿನ ಸಾಲವನ್ನು ೭ ವ ೮ ತಿಂಗಳ ವ್ಯಾದೆ ವರೇಗೆ ಏನೊಂದೂ ಜವಾಬ್ದಾರಿ ಪಡೆಯದೆ, ಮುದಿಗರ ಮೇಲಿಕ್ಕೆ ಸೇರು ಅಕ್ಕಿ ಹೊಲಿಯ ದರದಲ್ಲಿ ಸಮಿತಿಯಿಂದಲೇ ಸಾಲಕೊಟ್ಟು ಬಡವರನ್ನು ಬಂಡವಾಳರ ಹಂಗಾಮಿಯಿಂದ ತಪ್ಪಿಸುವುದು

೫ ಸಮಿತಿಯ ಸದಸ್ಯರು ಸಭೆಯೊಡನೆ ಪ್ರತೀ ೧೫ ದಿವಸಕ್ಕೊಮ್ಮೆ ಜರಗಿಸಿ, ಕೃಷಿ ಕೈಗಾರಿಕೆ ಆರೋಗ್ಯ ವಿಚಾರ, ರಾಜಕೀಯ ವಿಷಯ, ವಾರ್ತಾ ಪತ್ರಗಳ ಮೂಲಕ ಪರದೇಶಗಳ ಸಮಾಚಾರ ಇತ್ಯಾದಿಗಳನ್ನು ಬೋಧಿಸಿ ಇವರೊಳಗೆ ತಿಳುವಳಿಕೆಯನ್ನೂ ಐಕ್ಯವನ್ನೂ ಬೆಳೆಸುವುದು.

೬ ಸಮಿತಿಗೆ ಸೇರಿದ ಸದಸ್ಯರೊಳಗೆ ಉಂಟಾಗಬಹುದಾದ ಯಾವತ್ತು ನ್ಯಾಯಗಳನ್ನೂ ತಮ್ಮೊಳಗನೇ, ಸಮಿತಿಯ ಸಭೆಗಳಲ್ಲಿ ತೀರ್ಮಾನಿಸಿಕೊಳ್ಳುವ ವಿಧಾನದಿಂದ ಸರಕಾರಕ್ಕೆ ನ್ಯಾಯ ಪೀಠಸುತ್ತ ಮಾಡಿ ಸದಸ್ಯರ ಕಷ್ಟ ನಷ್ಟವನ್ನು ಉಳಿಸಿಕೊಡುವುದು

೭ ಸಮಿತಿಯ ಸದಸ್ಯರು ವ ಇವರ ಮನೆಯವರುಕೂಡಾ ಔಷಧಿಗೆ ವಿನಹ ಇತರ ಕಾಲದಲ್ಲಿ ಕೇಂಪಿನ ಶರಾಬನ್ನು ಉಪಯೋಗಿಸದಂತೆ ಮಾಡಿ, ಇವರನ್ನು ದುಷ್ಪಚಾಲಿಯಿಂದ ತಪ್ಪಿಸುವುದು.

೮ ಸಮಿತಿಯ ಪರಿವಾರದವರು ಸದಸ್ಯರ ಮನೆಗಳಿಗೆ ಆಗಾಗ್ಯೆ ಸಂಚರಿಸಿ ಇವರ ಮನೆಯ ಪರಿಸರ ಶುಚಿತ್ವಪಡಿಸುತ್ತಿರುವ ಏರ್ಪಾಡಿನಿಂದ ಆರೋಗ್ಯವನ್ನು ಕಾಪಾಡಿಕೊಡುವುದು. ೯. ತರಕಾರಿ ಪ್ರದರ್ಶನಗಳನ್ನು ಜರಗಿಸಿ, ಒಳ್ಳೆಯ ಮತ್ತು ಹೆಚ್ಚಿನ ನಮೂನೆಯ ಕಾಯಿಪಲ್ಯಗಳನ್ನು ತಯಾರಿಸುವಂತೆ ಪ್ರೋತ್ಸಾಹಕೊಡುವುದಕ್ಕಾಗಿ ಇನಾಮ ಹಂಚುವದು ೧೦ ಹೂಡುವ ಎತ್ತು, ಕೋಣಗಳ ಪ್ರದರ್ಶನದ ಏರ್ಪಾಡು ಮಾಡಿ ಉತ್ತಮ ಜಾನುವಾರುಗಳಿಗೆ ಇನಾಮನ್ನು ಕೊಡುವುದರಿಂದ, ಜಾನುವಾರು ರಕ್ಷಣೆಗೆ ಪ್ರೋತ್ಸಾಹ ಕೊಡುವುದು. ೧೧. ಸಾರವತ್ತಾದ ಗೊಬ್ಬರವನ್ನು ಕಾಪಾಡುವ ವಿಧಾನಗಳನ್ನು ಸದಸ್ಯರಿಗೆ ಹೇಳಿಕೊಡುವುದು.

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು!

ಅತೀ ಕಮ್ಮಿ ದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ, ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು

ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ ಆಣೆ ೮ ಮಾತ್ರ.

Manufactured by:—

J. B Dutt & Co., Calcutta,

Sole agent:—

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

ಡೋಂಗರೆ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಷ್ಟಿ[illegible]ಗಿ ಸಿರ್ಬ[illegible]ರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳ ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು [illegible] ಅಸಹ್ಯವಾದ [illegible] ಒಳೆ[illegible] ಇವುಗಳನ್ನು [illegible]

(೬) ಡೋಂಗರೇ ಇವರ ಬಾಲಾಮೃತವು [illegible]

ಸಿಗುವ ಸ್ಥಳ —

ಶಾ ಮತ್ತು ಕಂಪೆನಿ,

[illegible] ಕಾಲೇಜ [illegible] ಮಂಗಳೂರು.

ಅಮೃತಾಂಜನ

ತಲೆನೋವು, ಶಿರೋವೇದನೆ ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು, ವಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು)

1.	ಅಧಿಕೃತ ಚಂದಾ ಹಾಕಲು ಅರ್ಪಿಸಿದ ಮೂಲಧನ	ರೂ 3,50,000-0-0
2.	ಚಂದಾ ಹಾಕಿ ಎತ್ತಿದ ಮೂಲಧನ	ರೂ. 2,8[illegible]50-0-0
3.	ಕ್ಷೇಮನಿಧಿಗಳು	ರೂ. 3,63,578-0-0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು:—ಉಡುಪಿ.

ಬ್ರಾಂಚುಗಳು —1. ಮದ್ರಾಸು; 2. ವೆಲ್ಲೂರು; 3. ತಲಚೇರಿ; 4. ಕಥಬೀದಿ, ಮಂಗಳೂರು, 5. ಬಂದ್ರ, ಮಂಗಳೂರು; 6. ಉಡುಪಿ; 7. ಶಿರ್ವ; 8. ಕುಂದಾಪುರ; 9. ಬೈಂದೂರು, 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13 ಮೈಸೂರು, 14 ಮಡಿಕೇರಿ; 15. ವೀರರಾಜೇಂದ್ರಪೇಟೆ.

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು "ಸೇಲಂ"ನಲ್ಲಿ ಇಂದು ತಾ. 4-6-1937ರಲ್ಲಿ ತೆರೆಯಲ್ಪಡುತ್ತದೆ

10—4—1937 **V. R. Kamath** B. A LL. B

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by –

The West Coast Soap Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ತೃಪ್ತಿ ಪಡೆವರು. ಅವುಗಳನ್ನು ಉಪಯೋಗಿಸುವುದಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವದ ರೀತಿ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ತೃಪ್ತಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಅತ್ಯಮೃತವಾದ ಶಕ್ತಿವರ್ಧಕ ರಸಾಯನ

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ [illegible] ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

[illegible] ಶಕ್ತಿವರ್ಧಕ ರಸಾಯನ [illegible] ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: [illegible]

ಹೊಸ ಮಾಲು ಇಂದೆ ಬಂದದ್ದು!

ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents —

The Kerala Tea Syndicate,

PONANI—(S. Malabar)

ನಿಮ್ಮ ಮನೆಯಲ್ಲೇ ಸಿನೆಮಾ.



[illegible]

Novelty Stores, P. B. No. 275 Madras

---

೧ ರೂಪಾಯಿಗೆ ೫೦೦೦ ರೂಪಾಯಿಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ವಿನಃ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರೀಮಿಯಂ ಕಟ್ಟಬೇಕೆಂಬ ಮತ್ತು ಮೆಡಿಕಲ್ ಪರೀಕ್ಷೆ ಬೇಕಾಗುವುದಿಲ್ಲ.

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇ. ಹಿ.) ಪತ್ರವ್ಯವಹಾರ ನಡೆಸಿರಿ.

ದಿ ಹಿಂದೂಸ್ಥಾನ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರ್.

Write for full particulars to:

M. S. V. Kamath,

BOLUR, MANGALORE

Dist Agent for SOUTH CANARA.

Dist. Agent for North Kanara.

Mr. **I. A. Shaik Khaji Mohalla,**

ANKOLA

Printed & Published by A. S. Kamath at the Sharada Press, Car Sreet, Mangalore

ವಾರ್ಷಿಕ ಚಂದಾ: 2 ರೂಪಾಯಿ   Regd. No. M. 3406   ಟಪ್ಪಾಲು ಹಾಸಲು ಸೇರಿ ರೂ. 2-13-0.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.]   ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.   ESTABLISHED 1906

ಪ್ರತಿ ಶುಕ್ರವಾರದಂದು ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

[illegible]
[illegible]
[illegible]

ಪುಸ್ತಕ ೩೧.   ಮಂಗಳೂರು ತಾ. ೧೧ನೇ ಜೂನ್ ೧೯೩೭   (11-6-'37)   ಸಂಚಿಕೆ ೨೪

ಹೂ ಗಿಡಗಳ ಸುಂದರ ದೃಶ್ಯ.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced.

Manufactured by:-

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮ್ಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ.

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agents.

Panchmal Krishnaya Shenoy & Son,

Bunder, MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು:- ಡಾ। ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪೂರ, ಕಾಶೀ: ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ: ರೂ. ೪-೦-೦. ವಿ. ಪಿ. ಆಣೆ ೮.

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಸ್ತೂರಿ, ಮತ್ತು)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ.

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ; ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2-8-0. ಮೂರು ಬಾಟ್ಲಿಗಳಿಗೆ ರೂ. 7-0-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಬೇಕಾಗಿಲ್ಲ. ಬಾಟ್ಲಿ 1ಕ್ಕೆ ರೂ. 1-8-0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಪಿ. ಎಚ್. ಪದ್ಮನಾಭ ಪೈ, ಚಿಕ್ಕಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಗಾಂ ಮುಂಬಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

ನಿಮ್ಮ ಮನೆಯಲ್ಲೇ ಸಿನೆಮಾ.



9×6×8 ಇಂಚುಗಳಷ್ಟು ಅಳತೆಯುಳ್ಳದ್ದು ಅಚ್ಚುಕಟ್ಟಾದ ಸ್ಟೀಲಿನಿಂದಲೇ ತಯಾರಿಸಲ್ಪಟ್ಟಿದೆ.

ಬಹಳ ಶಕ್ತಿಯ ಭೂತ ಕನ್ನಡಿಗಳಿಂದ ಜೋಡಿಸಲ್ಪಟ್ಟು, ಜೊತೆಗೆ 100 ಗಜ (300 ಅಡಿ) ಗಳಷ್ಟು ಉದ್ದದ ಚಲನಚಿತ್ರಗಳ ಫಿಲ್ಮ್ ಕೂಡಾ ಕೊಡಲಾಗುತ್ತದೆ. ಒಂದು ಚಿಕ್ಕ ಬಿಟರಿ ಲ್ಯಾಟಿನ ಪ್ರಕಾಶದಿಂದ ನಿಮ್ಮ ಮನೆಗಳ ಕೋಣೆಗಳಲ್ಲಿ ಸ್ಪಷ್ಟವಾದ ಚಲನಚಿತ್ರಗಳ ಪ್ರದರ್ಶನ ಮಾಡಬಹುದು. ಒಂದು ಯಂತ್ರವನ್ನು ಈಗಲೇ ತರಿಸಿಕೊಳ್ಳಿರಿ. ಯಂತ್ರದೊಡನೆ 100 ಗಜ ಫಿಲ್ಮಗೂ ಒಂದು ಬಿಟರಿಲ್ಯಾಟಿಗೂ ಸಮೇತ ರೂ. 7-8-0 ಮಾತ್ರ. ಪೋಸ್ಟೇಜ್ ಬೇರೆ. ರೂ. 1ರ ಟಪ್ಪಾಲು ಚೀಟುಗಳನ್ನಾಗಲೀ, ಪೋಸ್ಟಲ್ ಆರ್ಡರ್ ಮೂಲಕವಾಗಲೀ ಆರ್ಡರಿನೊಂದಿಗೆ ಮುಂಗಡ ಕಳುಹಿಸಬೇಕು.

Novelty Stores, P. B. No. 275. Madras.

೧ ರೂಪಾಯಿಗೆ ೫೦೦೦ ರೂಪಾಯಿ

ಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರಿಮಿಯಂ ಕಟ್ಟಬೇಕಾಗಿಲ್ಲ; ಮತ್ತೆ ಪ್ರಿಮಿಯಂ ಕೇಳುವುದಿಲ್ಲ.

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರು.

Write for full particulars to:

M. S. V. Kamath,

BOLUR, MANGALORE.

Dist. Agent for SOUTH CANARA.

Dist. Agent for North Kanara:

Mr. I. A. Shaik Khaji Mohalla,

ANKOLA.

Edited, Printed & Published By A. S. Kamath at the Sharada Press, Car Sreet, Mangalore.

ವಾರ್ಷಿಕ ಚಂದಾ: 2 ರೂಪಾಯಿ.

ಸ್ಟ್ಯಾಂಪು ಹಾಸಲು ಸೇರಿ ರೂ 2-13-0.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ] ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸೂಡ ತ ಒಡೆ‌ತಿರುವ ।

ಗರಳಕವರಂಜಿದರೆ ಸುಧೆಯನು । ಮರಿಕು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥

ಪುಸ್ತಕ ೩೧. ಮಂಗಳೂರು ತಾ. ೧೧ನೇ ಜೂನ್ ೧೯೩೭ (11 6-'37) ಸಂಚಿಕೆ ೨೩

ಹೂ ಗಿಡಗಳ ಸುಂದರ ದೃಶ್ಯ.

Note……—ನೋಟಗಳು

[illegible] ಮುಖ್ಯ ಮಂತ್ರಿಗಳಾಗಿ [illegible]ತ್ತಾನನ್ನು ಆಳಲಿಸಿದವರು [illegible] [illegible] ರಾಜೀನಾಮೆ ಕೊಟ್ಟರು. ಅಧಿಕ ಕರ್ಲಿಲ್ಲದಿರುವಲ್ಲಿ ಬೆನ್ನಮೂಳೆ ಮುರಿದಂತಾ ವುದು ಖಂಡಿತ. ಇದೇ ಸ್ಥಿತಿ ನಮ್ಮ ಸರ ರದ ಮಂತ್ರಿಮಂಡಲಕ್ಕೂ ಒದಗಿದೆ. ಜವಾ ಬ್ದಾರ ಸರಕಾರ ಕ್ರಮವಿರುವಲ್ಲಿ ಯಶಸ್ವಾಗಲೂ ಅಲ್ಪಸಂಖ್ಯಾಕರಿಂದ ಬಹುಕಾಲ ಅಧಿಕಾರ ನಿಸಬರುವುದಿಲ್ಲ. ಇವರು ಎಷ್ಟು ದಿನ ಅಧಿ ರ ವಹಿಸುವರೋ ಅಷ್ಟು ದಿನ ಮತದಾರ ಲ್ಲಿ ಸ್ಥಿರತೆ ಕಡಿಮೆಯಾಗುತ್ತಲೇ ಬರುವುದು.

○ ○ ○ ○ ○

ನಮ್ಮ ಮಂತ್ರೀಶ್ವರರು ದೊರೆತಷ್ಟು ದಿನ ತ್ಮ ಕಾರ್ಯಭಾರವನ್ನು ಹಳ್ಳಿಹಳ್ಳಿಗಳಿಗೆ ಸಾರು ರಬೇಕೆಂದು ಒಂದು ಲಕ್ಷ ನೋಟಿಸ ಗಳಲ್ಲಿ ಲಿಕೆಯನ್ನು ವ್ಯಾಪಿಸಿರುವುದೇ ಅಲ್ಲದೆ,— ಗೋದಾವರಿ ಜಿಲ್ಲೆಯಲ್ಲಿ ಹಳ್ಳಿಯ ಜನರಿಗೆ ಭಾಷಣ ಕೊಡುತ್ತಿರುವರು. ಈ ಜಿಲ್ಲೆಯಿಂದ ಚುನಾವಣೆ ಹೊಂದಿದ ಪ್ರತಿನಿಧಿಗಳೆಲ್ಲರೂ ಕಾಂಗ್ರೆಸ್ ಪಕ್ಷದವರು. ಹೀಗಾದಲ್ಲಿ ಈ ಭಾಷಣಗಳನ್ನು ಕೇಳಬರುವವರು ಯಾರು!

○ ○ ○ ○

ಅಧಿಕಾರಕ್ಕಾಗಿ ಕಲೆಕ್ಟರರಿಂಗೆ ಸೂಚನೆ. ಹಳ್ಳಿ ಳ ಉದ್ಧಾರ ಕ್ರಮವು ಹೇಗಾಗುತ್ತದೆಂದು ವರಿಸುವ ಈ ಭಾಷಣ ಕೇಳಲು ಹಳ್ಳಿಗಳ ರು ಗುಂಪು ಕಟ್ಟಿ ಭಾಷಣ ನಡೆವಲ್ಲಿಗೆ ಬರು ರಬೇಕೆಂದು ಒತ್ತಾಸೆ. ಭಾಷಣಗಳಲ್ಲಿ ಉದ್ಧಾರದ ಮಾತಿಲ್ಲ. ತಾವು ಮಂತ್ರಿಗಳಾ ದುದು ಏಕೆ, ಕಾಂಗ್ರೆಸಿನ ಮಹಾಪರಾಧ ಯಾವುದು ಎಂದು ಮಾತ್ರ ವಿವರವಿದೆ.

○ ○ ○ ○ ○

ಜಾತಿಗಳೊಳಗಣ ವೈಷಮ್ಯ ಸಾರುತ್ತ ದ್ದ ಹಳೆಯ ಜಗ್ಗಣಗಳು ಚುನಾವಣೆಯ ರಿಯಲ್ಲಿ ಮುಳುಗಿ ಸತ್ತಿವೆ. ಆದರೂ, ಮುಖ್ಯ ಮಂತ್ರಿಗಳು ಈ ವೈಷಮ್ಯದ ನೆನಪನ್ನು ಮುಂದೆ ತಂದು, ಹಳ್ಳಿಯವರ ಇದಿರಲ್ಲಿ ಕುಣಿಸ ತ್ತಿರುವರು. ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಕೋಲಿಕೆಯ ಮತ್ತು ಮಾತ್ಸರ್ಯ ಸೂಚನೆಯ ಇದ್ದೂ ಈಗ ಈ ಪಾಂತ್ಯದಲ್ಲಿ ಚುನಾವಣೆಯ ನಂತರ ಕೇಳಬರುತ್ತಿಲ್ಲ. ಆದರೂ ಮಂತ್ರಿ ಗಳಿಗೆ ಇದೇಕೆ ಬೇಕಾಯಿತು? ಇದರಿಂದು ಕಾರಣವೂ ಇವರ ಆದರಣೆಗೆ ಆಗತ್ಯವಾದಲ್ಲಿ ಇವರು ಈ ಶತಮಾನಕ್ಕೆ ಸಂಬಂಧವಿಲ್ಲದವ ರಂತೆ ತೋರುವುದಿಲ್ಲವೆ?

○ ○ ○ ○

ಕಲ್ಕತ್ತದಲ್ಲೂ ಹೀಗೆಯೆ ಸಣಬು ಕಾರ್ಖಾನೆಯ ಮಾಲಿಕರ ಇದಿರಲ್ಲಿ, ಸರ ಕಾರದ ಮಂತ್ರಿಗಳ ಪರಾಕ್ರಮವು ಏನೇನೂ ಇಲ್ಲವಾಗಿದೆ. ಮಂತ್ರಿಗಳು ಕೆಲಸಗಾರರ ಮುಷ್ಕರ ಮುಗಿಸುವಾಗ ಹೇಳಿದ್ದ ಭರವಸೆ ಗಳೊಂದೂ ಆಚರಣೆಗೆ ಇನ್ನೂ ಬಂದಿಲ್ಲ. ಹಣ ವಂತರ ದರ್ಪವು ಬಹಳವಾಗಿರುವಾಗ, ಅವರು ಮಂತ್ರಿಗಳನ್ನೇಕೆ ಗಣನೆಗೆ ತರಬೇಕು. ಮುಖ್ಯ ಮಂತ್ರಿ ಫಜಲುಲ್ ಹಕ್ಕರು ತಮ್ಮ ಹಕ್ಕನ್ನು ಕಾಪಾಡಿಕೊಳ್ಳುವುದು ಕಷ್ಟವಾಗಿದೆ, ಧನಿಗಳ ಹಕ್ಕು ಉಳಿದಿದೆ, ಕೆಲಸಗಾರರ ಹಕ್ಕಿಗೆ ಕೇಳು ವವರಿಲ್ಲ.

○ ○ ○ ○ ○

ಹೆಂಗಸರನ್ನೂ ಮಕ್ಕಳನ್ನೂ ಬಹಳವಾಗಿ ಕೊಲಬಲ್ಲವರೇ ಮಾತ್ರ ಯುದ್ಧ ವಿಶಾರದರೆಂದು ಯುರೋಪಿನಲ್ಲಿ ಕೀರ್ತಿ ಹೊಂದುತ್ತಿರುವರು. ಸೈನಿಕರು ಸೈನಿಕರನ್ನು ಎದುರಾದುವುದಿಲ್ಲ. ಬರಿಗೈಯ ಜನಗಳಿದ್ದಿರುವರೋ ಅವರನ್ನು ಹಿಂಸಿಸಿ ಕತ್ತರಿಸಿದವರೇ ವೀರರು. ಬಲವುಳ್ಳವ ರಾರೋ ಅವರು ಹೇಗೆ ಕೈ ಬೀಸಿದರೂ ಕೇಳು ವವರಿಲ್ಲ. ಹೀಗಾದರೂ ಇಂತಹರಿಗೆ ಯುದ್ಧ ದಲ್ಲಿ ಹೇರುವುದೊಂದೇ ಒಂದಿಕ್ಕೆ ಸ್ವಯಂ ಜನರಲ್ಲ ಉಳಿದಿಲ್ಲವೆನಿಸದೆ? ಹೀಗಾದರೂ, ಇಂತಹರೇ ನಮಗೆ ಶಾಂತಿ ಬೇಕು ಎಂದೂ ಸಾರುವರು.

ಇಂಗ್ಲಂಡಿನ ರಾಜಕೀಯ ಪಕ್ಷಿತ್ರದಿಂದ ಮೆಕ್‌ಡೊನಲ್ಡರು ಮಾಯವಾದರು. ಇವ ರಿಂದಾದ ಪರಮ ಲಾಭಗಳು ಬಹಳವಾಗಿದೆ. ಮೊದಲನೆದಾಗಿ, ಇಸ್ಲಿಂಗ್‌ಟನ್ ಕಮಿಶನ್ ನಲ್ಲಿ ಮೆಂಬರರಾಗಿ ಇವರು ಗೋಖಲೆಯವ ರೊಡನೆಯೂ ಅಬ್ದುಲ್ ರಹಿಮನೊಡನೆಯೂ ಸೇರಿ, ನಮಗೆ ಹಿತವಾಡುವವರಲ್ಲಿ, ಗೋಖಲೆ ಯವರು ದಿವಂಗತರಾದ ಕೂಡಲೇ, ಇವರೇ ನಮ್ಮ ಪಕ್ಷ ತೊರೆದರು.

○ ○ ○ ○

ದುಂಡು ಮೇಜಿನ ಸಂಘದಲ್ಲಿ ಇವರು ನಮಗೆ ಸ್ವರಾಜ್ಯ ಕೊಡಬೇಕೆಂದು ವಾದಿಸಿ, ಆ ತಕ್ಷಣ ವನ್ನೆ ಅನಂತರ ಮರೆತರು. ವರ್ತುಲ ಪರಿ ಷತ್ತಿನಲ್ಲಿ ಕೇಂದ್ರದಲ್ಲಿ ಜವಾಬ್ದಾರಿಯುಳ್ಳ ಸರ ಕಾರ ಕ್ರಮವನ್ನು ನಮಗೆ ಕೊಡಬೇಕಾಗಿ ವಾದಿಸಿ, ಅನಂತರ ಎಲ್ಲವನ್ನೂ ಮರೆತು, ಸೇಫ್‌ಗಾರ್ಡುಗಳ ಹೊರೆಯನ್ನು ಅಕ್ಷಿನಲ್ಲಿ ತುಂಬಿಸಿದರು. ಲೇಬರ್ ಪಕ್ಷದ ಮೂಲಕ ಮುಖಂಡತನ ಪಡೆದ, ಆ ಪಕ್ಷವು ಈಗ ಹೆಸರು ಮಾತ್ರ ಉಳಿಸಿಕೊಳ್ಳುವುದೂ ಕಠಿನ ವೆನಿಸುವಂತೆ, ಅದನ್ನು ತೊರೆದೇ ಬಿಟ್ಟರು.

○ ○ ○ ○ ○

ಹಿಂದೀಯರ ಹಣದಿಂದ ಉಂಟಾದ ರೈಲುಗಳಲ್ಲಿ ಹಿಂದೀಯರಿಗೆ ಸರಿಯಾದ ಸ್ಥಾನ ಮಾನಗಳಿಲ್ಲದಿದ್ದ ಒಂದು ಕಾಲವಿತ್ತು. ಹಲವು ವಿಧಗಳಿಂದ ಸಾಧಿಸಿದ ಬಳಿಕ, ಹಿಂದೀಯರಿಗೆ ಸ್ವಲ್ಪ ದಾಕ್ಷಿಣ್ಯಭಾವದಿಂದ ಯುರೋಪಿಯರು ಹಿಂದೀ ರೈಲ್ವೆಗಳಲ್ಲಿ ಕಾಣುವಂತಾಯಿತು. ಈಗ ಪುನಃ ಹಲವು ಕಡೆಗಳಿಂದ ಒಂದು ಬಗೆಯ ಸಾಂಕ್ರಮಿಕ ಸ್ಥಿತಿಯಲ್ಲಿರುವ ದುರ್ಬುದ್ಧಿ ದುರ್ಲಕ್ಷ್ಯಗಳ ಈ ರೋಗವು ಹಲಿ ದೋರಿದ ವಾರ್ತೆಗಳಿವೆ. I ಕ್ಲಾಸು ಟಿಕೇಟು ಇದ್ದ ಹಿಂದೀಯ ಅಧಿಕಾರಿಗಳನ್ನು I ಕ್ಲಾಸಿನ ಗಾಡಿಯೊಳಗೆ ಬಾರದಂತೆ ತಡೆದ ಬೀಳ ಜನ ರಿಗೆ ಅವರ ತಪ್ಪನ್ನು ತಿಳಿಸಿ ರೈಲ್ವೆ ಅಧಿಕಾರಿ ಗಳಿಂದಾಗದೆ ಹೋಯಿತು.

○ ○ ○ ○ ○

ಮಂತ್ರೀಶ್ವರರ ಮಹಾತ್ಮೆ ವರ್ಣಿಸುವ ಪತ್ರಿಕೆಗಳ ಪ್ರಯೋಜನವೇನೆಂದು 'ಪತ್ರಿಕೆ' ಪ್ರಕಟಿಸಿಯದೆ (೧) ಸಕ್ಕರೆ ಉಪ್ಪು ಮೊದ ಲಾದುವನ್ನು ಕಟ್ಟಿಕೊಡಲೂ (೨) ಒಲೆಯಲ್ಲಿ ಬೆಂಕಿ ಹೊತ್ತಿಸಲೂ (೩) ಮಕ್ಕಳಿಗೆ ಗಾಳಿಪಟ ಮಾಡಿ ಆಡುವುದಕ್ಕೂ ಉಪಕಾರವಾಗುವುದು.

○ ○ ○ ○ ○

ಕೊಟ್ಟಾಪಟ್ಟನಲ್ಲಿ ಸೇರಿದ ಶಾಲಾ ವಿದ್ಯಾರ್ಥಿಗಳನ್ನು ದಂಡಿಸಿದ ವಿಚಾರದಲ್ಲೂ "ಪತ್ರಿಕೆ" ಬರೆದಿದೆ—ಹಿಂದಣ ರಾಜಕೀಯ ವ್ಯವಹಾರ ಕ್ರಮದಲ್ಲಿ ಇಂತಹ ದಂಡನೆ ನಡೆಸು ವಾಗ, ಕ್ರಿಮಿನಲ್ ಕಾನೂನಿನ ಒಕ್ಕಣೆ ವಿವ ರಿಸಿ ಹೇಳುವ ಪದ್ಧತಿ ಇತ್ತು. ಅದಿನ್ನೂ ಇದೆ ಯೇ? ಅಥವಾ ಹೊಸ ರಾಜ್ಯಭಾರ ಕ್ರಮ ವೆಂಬುದು ಹಳೆಯದೇ ಮಾತ್ರವಾಗಿದ್ದು ಅದನ್ನೂ ಮುಚ್ಚಿಹಾಕಿದ್ದಲ್ಲವೆ? ಮಂತ್ರಿಗಳೇ ವಿವರಿಸಬೇಕು.

○ ○ ○ ○ ○

ಬಕ್ಸಾರದ ಜೈಲಿನಲ್ಲಿದ್ದ ಬಾಬು ಸಹ ದೇವ ಸಿಂಹನನ್ನು ಅಲ್ಲಿಗೆ ಮುಖ್ಯ ಮಂತ್ರಿಗಳು ಸಂದರ್ಶನೆಗೆ ಬಂದ ಸ್ಮರಣೆಗಾಗಿ ಬಿಡುಗಡೆ ಮಾಡಲಾಯಿತಂತೆ. ಆದರೆ ಪಬ್ಲಿಕ್ ಸೇಫ್ಟಿ ಆಕ್ಟಿನ ಪ್ರಕಾರ, ಬಿಡುಗಡೆ ಮಾಡಿದ ಸಿಂಹ ನನ್ನು ಪುನಃ ಬಂಧನದಲ್ಲಿಟ್ಟಿರುವರು. ಇದು ಯಾವ ಸ್ಮರಣೆಗಾಗಿ? ಹೊಸ ಸರಕಾರ ಪದ್ಧ ತಿಯ ಸ್ಮರಣೆಗಾಗಿಯೆ?

ನಿಮ್ಮ ನರಗಳ ಪೋಷಣೆ
ಕಡೆ ಗಮನಿಸಿರಿ.
ಅಂದರೆ ಅವುಗಳು
ಶಕ್ತಿಯುಕ್ತವಾಗುವುವು

ಬಹು ಬೇಗನೆ ಆಯಾಸ ಹೊಂದಿ ರಾತ್ರಿಹೊತ್ತಿನಲ್ಲಿ ನೀವು ಬಹಳ ಶ್ರಮ ಪಡುವಿರಾದರೆ ಅದು ನಿಮ್ಮ ನರಗಳಿಗೆ ಆರೋಗ್ಯಕೊಡುವ ಆಹಾರಗಳ ಪೂರೈಕೆ ಇಲ್ಲದಿದ್ದುದರಿಂದಾಗುತ್ತದೆ. ಅದಕ್ಕೆ ಸರಿಯಾಗಿ ಬೇಕಾಗುವ ತಕ್ಕ ಪೋಷಣೆಯನ್ನು ಕೊಡಿರಿ ಅಂದರೆ ಅವು ನಿಮ್ಮನ್ನು ಎಂದೂ ಬಾಧಿಸಲಾರವು.

ಇಂಥಾ ತೊಂದರೆಗಳಲ್ಲಿ ಓವಲ್ಟೀನು ಅದ್ವಿತೀಯವಾದುದ್ದಾಗಿದ್ದು [illegible] ಓವಲ್ಟಿನ್ ಎಂಬುದು ನರಗಳ ಶಕ್ತಿಗೆ ಬೇಕಾದ ಆರೋಗ್ಯ ಶಕ್ತಿ ಚೈತನ್ಯಗಳನ್ನುಂಟು ಮಾಡುವ ಪೌಷ್ಟಿಕ ಆಹಾರಗಳಿಂದೊಡಗೂಡಿದ್ದಾಗಿದ್ದು ಪರಿಪೂರ್ಣ ವಾಗಿರುವ ಆಹಾರಪಾನೀಯವಾಗಿರುತ್ತದೆ.

ಓವಲ್ಟೀನು ಪ್ರಾಕೃತಿಕ ಆಹಾರವಾಗಿದ್ದು ಪಕ್ವ ಬಾರ್ಲಿ ಕಷ್ಟದಿಂದಲೂ ದನದ ಹಸ ಕೆನೆಹಾಲಿನಿಂದಲೂ ಮತ್ತು ಮೊಟ್ಟೆ ಮೊದಲಾದ ಶ್ರೇಷ್ಠ ವಸ್ತುಗಳಿಂದಲೂ ಕೂಡಿದ್ದಾಗಿರುತ್ತದೆ. ರಾತ್ರಿಹೊತ್ತಿನಲ್ಲಿ ಕುಡಿದ ಒಂದು ಕಪ್ ಓವಲ್ಟಿನ್, ನರಗಳನ್ನು ಶಾಂತಗೊಳಿಸಿ ಸುಖವಾದ ನಿದ್ರೆಯನ್ನುಂಟು ಮಾಡುತ್ತದೆ. ಬದಲಿಯಾಗಳನ್ನು ತ್ಯಜಿಸಿರಿ.

'ಓವಲ್‌ಟಿನ್'
ಪೌಷ್ಟಿಕ ಆಹಾರ ಪಾನೀಯ.

OVALTINE

ಶಾಂತಮಯ ಸುಖ ನಿದ್ರೆಯನ್ನುಂಟುಮಾಡುತ್ತದೆ
ತಯಾರಿಕೆಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ದೊರಕುತ್ತದೆ
ಏಜಂಟರು—ಜೇಮ್ಸ್ ರೈಟ್, ೫೦ ಎ ರಿವರ್ ಸ್ಟ್ರೀಟ್
ಕಲ್ಕತ್ತ ಮತ್ತು ಮುಂಬಾಯಿ, ಮದ್ರಾಸುಗಳಲ್ಲಿ

OV/418

THE PIE-MONEY BANK LTD.,
Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum

FIXED DEPOSITS

For 3 Years 6% 1 Year 5% For 6 months 4% 3 & 2 months 3½%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for particulars— K. R. GURU, *Managing Director.*

ಕೊಂಗ್ರೆಸ್ಸಿನೊಡನೆ ಸಹಕಾರ

ಅಂಬೇಡ್ಕರರೂ ತಾತ್ಕಾಲಿಕ ಮಂತ್ರಿಗಳೂ

ಅದಕ್ಕೆ ಬಹುಮತ ಬೆಂಬಲವಿಲ್ಲ

ಯಾವ ಸಂದರ್ಭದಲ್ಲಿಯೂ ನಾವು ಕೊಂಗ್ರೆಸ್ಸನ್ನು ಎದುರಿಸಲಾರೆವು.

"ಯಾವ ಸಂದರ್ಭದಲ್ಲಿಯೂ ನಾವು ಕೊಂಗ್ರೆಸ್ಸನ್ನು ವಿರೋಧಿಸಲೇಬೇಕೆಂಬ ಉದ್ದೇಶದಿಂದ, ಎದುರು ನಿಲ್ಲಲಾರೆವು. ದೇಶಕ್ಕೂ, ದೇಶದ ಬಡಜನರಿಗಾಗಿಯೂ ಕೊಂಗ್ರೆಸ್ ಸಂಸ್ಥೆಯು ಮಾಡುವ ಹೋರಾಟದಲ್ಲಿ, ನಾವು ಅದನ್ನು ಬೆಂಬಲಿಸುತ್ತೇವೆ. ಆದರೆ ಧನಿಕರು ದರಿದ್ರರು ಎಂಬ ಪ್ರಶ್ನೆಯು ಕೊಂಗ್ರೆಸಿನಲ್ಲಿ ಬಂದರೆ ಮಾತ್ರ ನಮ್ಮ ದಾರಿಯನ್ನು ನಾವೇ ನೋಡಬೇಕಾದೀತು." ಹೀಗೆಂದು ಡಾ॥ ಅಂಬೇಡ್ಕರರು, ೧೫,೦೦೦ ಮಜೂರರ ಒಂದು ಸಭೆಯಲ್ಲಿ ನುಡಿದರು. ತಮ್ಮ ಇಂಡಿಪೆಂಡೆಂಟ್ ಪಾರ್ಟಿಯು ಯಾರ ಹಣದ, ಪತ್ರಿಕೆಗಳ, ಶ್ರೀಮಂತರ ಸಹಾಯವಿಲ್ಲದೆ ಬಹಳ ಯಶಸ್ವಿಯಾಗಿ ಚುನಾವಣೆಗಳಲ್ಲಿ ೧೬ರಲ್ಲಿ ೧೪ ಮಂದಿಗಳು ಗೆದ್ದು ಬಂದುದರ ವಿಚಾರವಾಗಿ ಅವರು ತಮ್ಮ ಪಾರ್ಟಿಯನ್ನು ಶ್ಲಾಘಿಸಿದರು. ಕೊಂಗ್ರೆಸ್ಸು ಅವರಿಗೆ ಹಲವು ರೀತಿಯಲ್ಲಿ ತೊಂದರೆ ಕೊಟ್ಟಿತ್ತೆಂದೂ ಆದರೂ ಚುನಾವಣೆಗಳಲ್ಲಿ ಇಂತಹ ತೊಂದರೆಗಳು ಸ್ವಾಭಾವಿಕವಿರುವುದರಿಂದ ಅವರು ಅದನ್ನು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲವೆಂತಲೂ ತಿಳಿಸಿದರು. ಮುಂದುವರಿಯುತ್ತಾ ಅಂಬೇಡ್ಕರರು 'ಚುನಾವಣೆಗೆ ನಿಂತ ಕೊಂಗ್ರೆಸ್ಸಿನ ವರ್ತನೆಯು ವಿಚಿತ್ರವಾದುದು. ಹರಿಜನರಿಗಾಗಿ ತುಂಬಾ ಶ್ರಮಪಟ್ಟಿದ್ದ ಒಬ್ಬ ರಾವ್ ಬಹದೂರರ ಎದುರಿಗೆ ಕೊಂಗ್ರೆಸ್ಸು, ಪಂಡಿತ ಜವಾಹರಲಾಲರ ಮನೆಯಾಳಾದ ಹರಿ ಎಂಬವನನ್ನು ಚುನಾವಣೆಗೆ ನಿಲ್ಲಿಸಿ ಗೆದ್ದರು. ಯಾವ ಅನುಭವವೂ ಇಲ್ಲದ ಹರಿಯು ಕೊಂಗ್ರೆಸ್ಸಿನ ಕೈಯಲ್ಲಿ ಒಂದು ಗೊಂಬೆಯಂತಿದ್ದಾನೆ" ಎಂದರು.

ಗೊಂಬೆ ಮಂತ್ರಿತ್ವ

"ನಾನೇಕೆ ಮಂತ್ರಿಮಂಡಳವನ್ನು ಸೇರಲಿಲ್ಲವೆಂದು ಕೆಲವರು ಪ್ರಶ್ನಿಸಿರುವರು. ಈಗಿನ ಮಂತ್ರಿ ಮಂಡಳವು ತಾತ್ಕಾಲಿಕವಾದುದು. ಯಾವ ಕ್ಷಣದಲ್ಲಿಯಾದರೂ ಹೊರಗಟ್ಟಿಸಲ್ಪಡಬಹುದಾದ ಅಧಿಕಾರ ಪದವಿಯು ಏತಕ್ಕೆ? ಈಗಿನ ಮಂತ್ರಿಗಳಿಗೆ ಬಹುಮತ ಬೆಂಬಲವಿಲ್ಲ. ಅದಕ್ಕೋಸ್ಕರವೇ ನಾನದನ್ನು ಸೇರಲಿಲ್ಲ. ಅಧಿಕಾರ ಪದವಿಯನ್ನು ಸ್ವೀಕರಿಸಲು ಕೊಂಗ್ರೆಸು ಹಕ್ಕುಳ್ಳದ್ದಾಗಿದೆ. ಇನ್ನು ಕೆಲವು ಸಮಯದಲ್ಲಿಯಾದರೂ ಕೊಂಗ್ರೆಸು ಮಂತ್ರಿಪದವಿಗಳನ್ನು ಸ್ವೀಕರಿಸುತ್ತದೆಂದು ಹಾರೈಸುತ್ತೇನೆ" ಎಂದು ಅಂಬೇಡ್ಕರರು ತಮ್ಮ ಭಾಷಣವನ್ನು ಮುಗಿಸಿದರು.

ವಿಮರ್ಶೆ

"ಅಂಬೇಡ್ಕರರು ಕೊಂಗ್ರೆಸ್ಸನ್ನು ಕಿಂಚಿತ್ ದೂರಿಯೂ, ಹೊಗಳಿಯೂ ಮಾತಾಡಿಕೊಂಡರೂ, ಹರಿಜನರಿಗಾಗಿ ತಾವು ಮಾಡಿದ ಕಾರ್ಯಗಳನ್ನು ಶ್ಲಾಘಿಸಿಕೊಂಡರೂ ಅಂಬೇಡ್ಕರರು "ಮಹಾತ್ಮಾ ಗಾಂಧಿಯವರನ್ನು ಮಿಗಿಸಲ್ಲರೆ?" ಎಂದೊಬ್ಬ ಕೊಂಗ್ರೆಸ್‌ವಾಲರು ಪ್ರಶ್ನಿಸುತ್ತಾರೆ.

ಕೊಂಗ್ರೆಸ್ಸಿನ ಮೇಲೆ ಭರವಸೆ

ಸಂಯುಕ್ತ ಪ್ರಾಂತ್ಯದ ಯುವಕರ ಸಮ್ಮೇಳನ

ಸಂಯುಕ್ತ ಪ್ರಾಂತ್ಯದ ಯುವಕರ ಸಮ್ಮೇಳನವೊಂದು ಸೀತಾಪುರದಲ್ಲಿ ಶ್ರೀ॥ ಎಂ. ಎನ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವಿಶೇಷ ಪ್ರಾಮುಖ್ಯತೆಯ ಕೆಲವು ಠರಾವುಗಳು ಆ ಸಮ್ಮೇಳನದಲ್ಲಿ ಅಂಗೀಕರಿಸಲಾದುವು. ಕೊಂಗ್ರೆಸಿನಲ್ಲಿ ತಮ್ಮ ಭರವಸೆಯನು ಸೂಚಿಸಿ, ಸಾಮ್ರಾಜ್ಯ ಶಾಹಿತ್ವವನ್ನು ಎದುರಿಸುವ ಒಂದೇ ಒಂದು ಸಂಸ್ಥೆಯಾದ ಕೊಂಗ್ರೆಸನ್ನು ಸರ್ವವಿಧದಲ್ಲೂ ಪುಷ್ಟೀಕರಿಸಿ ಅಖಂಡ ಸಂಸ್ಥೆಯನ್ನಾಗಿ ಮಾಡಬೇಕೆಂದೂ, ಕೊಂಗ್ರೆಸ್ ಧ್ವಜದ ಕೆಳಗೆ ದೇಶದ ಯುವಕರನ್ನು ಶೇಖರಿಸಬೇಕೆಂಬ ವಿಷಯಗಳ ಮೇಲೂ ಠರಾವುಗಳಾದವು.

ಕೊಂಗ್ರೆಸ್ಸೂ ಮತ್ತದರ ಟೀಕಾಗಾರರೂ

ಸರ್. ಕೆ ವಿ ರೆಡ್ಡಿಯವರೂ, ಕುಮಾರ ರಾಜ ಮುತ್ತಯ್ಯ ಚೆಟ್ಟಿಯಾರರೂ ಕೊಂಗ್ರೆಸ್ ವಿರೋಧವಾಗಿ ಪ್ರಚಾರ ಮಾಡುತ್ತಿರುವುದನ್ನೂ ಪ್ರಚಾರ ಭಾಷಣಗಳಲ್ಲಿ ಕೊಂಗ್ರೆಸನ್ನು ಟೀಕಿಸುವುದನ್ನೂ ತಿಳಿಸಿ ರಾಜಗೋಪಾಲಾಚಾರ್ಯರು ಒಂದು ಬಹಿರಂಗ ಸಭೆಯಲ್ಲಿ ಹೀಗೆಂದರು. "ದೇಶದಲ್ಲಿ ರಚನಾತ್ಮಕ ಅಖಂಡ ಕಾರ್ಯಕ್ರಮವನ್ನು ಕೈಕೊಂಡಿರುವ ಒಂದೇ ಸಂಸ್ಥೆಯೇ ಕೊಂಗ್ರೆಸ್ಸು. ಅಬಿಸೀನಿಯದ ದುರ್ದಶೆಯನ್ನು ತೋರಿಸಿಕೊಟ್ಟ ಸರ್ ಕೆ ವಿ ರೆಡ್ಡಿಯವರು. ಅದರಿಂದ ಪಾಠ ಕಲಿಯಿರೆಂದು ಬೋಧಿಸುತ್ತಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿ ಬಲಿದಾನ ಮಾಡಿದ ಜನರಿಂದ ನಾವು ಸ್ಫೂರ್ತಿಯನ್ನು ಪಡೆಯಬೇಕು. ಅಬಿಸೀನಿಯದವರ ತಮ್ಮ ಸ್ವಾತಂತ್ರ್ಯ ರಕ್ಷಣೆಯ ಪವಿತ್ರ ಕಾರ್ಯದಲ್ಲಿ ಅಪಜಯ ಹೊಂದಿದರೆಂದು ನಾವು ನಿರುತ್ಸಾಹಗೊಳ್ಳಬೇಕೆಂದು ಸರ್ ರೆಡ್ಡಿಯವರ ಉದ್ದೇಶವೆ? ಗವರ್ನರರು ತಾತ್ಕಾಲಿಕ ಮಂತ್ರಿಗಳಿಗೆ ಇಷ್ಟರ ವರೆಗೆ ಅಧಿಕ ಬಲವಿಲ್ಲವೆಂದೂ ಇನ್ನು ಮುಂದೆ ಬರುವುದೂ ಇಲ್ಲವೆಂದೂ ಈ ಮಂತ್ರಿಗಳು ಸಾರುತ್ತಾರೆ. ಸರ್ಕಸಿನವನೊಬ್ಬನು ಸಿಂಹದ ಬಾಯಲ್ಲಿ ತಲೆ ಕೊಡುತ್ತಾನೆ. ಅದು ಅವನಿಗೆ ಹಾನಿ ಮಾಡಲಾರದು—ಹಾಗೆ ಇತರರು ಯಾರಾದರೂ ತಮ್ಮ ತಲೆಯನ್ನು ಮೃಗರಾಜನ ಬಾಯಲ್ಲಿ ಇಟ್ಟರೆ ಅವರ ತಲೆಯು ಭದ್ರವಾಗಿರುತ್ತದೆಂದು ಹೇಗೆ ಹೇಳಲು ಸಾಧ್ಯ.

ಪ್ರಪಂಚ ಶಾಂತಿಗಾಗಿ ಹೊತೊರೆಯುವವರೆಂದು ಹೇಳಿಕೊಳ್ಳುವ ಇಂಗ್ಲೆಂಡಿನ ನಾಗರೀಕರು ಭಾರತ ಸಮಸ್ಯೆಯ ಪ್ರಾಮುಖ್ಯತೆಯನ್ನು ದುರ್ಲಕ್ಷಿಸಲಾಗದು—ಒಂದು ಆಂಗ್ಲ ಪತ್ರಿಕೆ

ಮಹಾ ಶಕ್ತಿರಾಷ್ಟ್ರಗಳು ಕ್ರೂರ ಪಶುತ್ವದ ತತ್ವಗಳನ್ನನುಸರಿಸಿಕೊಂಡು ಬಂದಲ್ಲಿ ಪ್ರಪಂಚದ ಶಾಂತಿಯು ಹೇಗೆ ಸಾಧ್ಯವಾಗಬಹುದು?—ದಿ ಮಂತ್

ಅಬಿಸೀನಿಯಾ ಪ್ರಕರಣದಲ್ಲಿ ನಮ್ಮ ದೇಶದ ಅಭಿಮಾನ ಗೌರವಗಳನ್ನು ಮಣ್ಣು ಪಾಲು ಮಾಡಿದವರು ನಮ್ಮ ಕಡಲಪಡೆಯ ಅಧ್ಯಪ್ರಭುಗಳು (ಸರ್ ಸಾಮುವೆಲ್ ಹೋರ್) ಇವರಿಗೆ ಕಡಲೊಳಕಳ್ಳರೊಂದಿಗೆ ಸ್ನೇಹ ಬೆಳೆಸುವ ಒಂದು ವಿಶೇಷ ಅಭ್ಯಾಸವಿದೆ—ದೋಜರ್ ಎಟ್ಲಿಯವರು ಪಾರ್ಲಿಮೆಂಟಿನಲ್ಲಿ ಮಾಡಿದ ಒಂದು ಭಾಷಣದಿಂದ.

ಕಹಿಯಾದ ಫಲ

"ಪ್ರಾಂತಿಕ ಜವಾಬುದಾರಿಯ ಪ್ರಥಮ ಫಲವೇ ಕಹಿಯಾದ ರುಚಿಯನ್ನು ಕೊಡುವಂತಾಯಿತು. ಈ ರುಚಿಯನ್ನು ಮದ್ರಾಸ್ ಪ್ರಾಂತ್ಯದಲ್ಲಿ ಮೊದಲು ನೋಡಲಾಯಿತು" ಎಂದು ಹಿತವಾದ ಪತ್ರಿಕೆಯು ಅಭಿಪ್ರಾಯಪಡುತ್ತದೆ. "ಮದ್ರಾಸ್ ಸರಕಾರವು ಮೊಂಟ್‌ಫೋರ್ಡ್ ಸುಧಾರಣೆಯ ದಬ್ಬಾಳಿಕೆಯನ್ನು ಅನುಸರಿಸುತ್ತಿರುವುದನ್ನು ನೋಡಿದರೆ ಜನರ ಸ್ವಾತಂತ್ರ್ಯವು, ರಾಕ್ಷಸಿ ಕಾನೂನುಗಳನ್ನೊಳಗೊಂಡ ಪುಸ್ತಕವನ್ನು ಹರಿದು ಚೂರುಮಾಡುವ ತನಕ ಭದ್ರವಾಗಿರಲಾರದು."

ಪತ್ರಿಕಾಭಿಪ್ರಾಯಗಳು

ಸರಕಾರದ ವರ್ತನೆಯು ಸರಿಯಾದುದಲ್ಲ.

ಮನೋಭಾವ ಬದಲಾಯಿಸಬೇಕು — ಬಂಗಾಲ ಗವರ್ನರರ ಮನವಿ

ಗೊಂಬೆ ಮಂತಿಗಳ ಪ್ರಚಾರಕಾರ್ಯ!

ತಾತ್ಕಾಲಿಕ ಮಂತ್ರಿಗಳ ಜನತಾಸಂಪರ್ಕ

ಗವರ್ನರರಿಂದ ಆಹ್ವಾನಿಸಲ್ಪಟ್ಟ, ವಿಶೇಷಾಧಿಕಾರಗಳನ್ನು ಉಪಯೋಗಿಸದಂತೆ ಭರವಸೆಗಳನ್ನು ಕೊಡಬೇಕೆಂದು ಕೇಳಿ ತಿರಸ್ಕರಿಸಲ್ಪಟ್ಟು, ಕೊಂಗ್ರೆಸ್ ಮುಖಂಡರು ಅಧಿಕಾರವನ್ನು ಧಿಕ್ಕರಿಸಿದ ಮೇಲೆ ಗವರ್ನರರು ತಾತ್ಕಾಲಿಕ ಮಂತ್ರಿಮಂಡಳವನ್ನು ಕರೆದರಷ್ಟೆ. ಈ ತಾತ್ಕಾಲಿಕ ಮಂತ್ರಿಗಳು ಈಗ ಪ್ರಾಂತ್ಯದ ಕೆಲವು ಸ್ಥಳಗಳನ್ನು ತಿರುಗಿ, ಕೊಂಗ್ರೆಸ್ ಮುಖಂಡರಾದ ಶ್ರೀ॥ ರಾಜಗೋಪಾಲಾಚಾರ್ಯರೂ, ಅವರ ಅನುಯಾಯಿಗಳೂ ಈ ಅಧಿಕಾರವನ್ನು ಸ್ವೀಕರಿಸದೆ ಜನರನ್ನು ತುಂಬಾ ಮೋಸಪಡಿಸಿರುವರೆಂದು ಸಾರುತ್ತಿರುವರು.

ಈ ವಿಷಯವನ್ನು ಕುರಿತ ಅಮೃತ್ ಬಜಾರ್ ಪತ್ರಿಕೆಯು ಹೀಗೆ ಬರೆಯುತ್ತದೆ—"ರಾಜಗೋಪಾಲಾಚಾರ್ಯರು ತಪ್ಪಿತಸ್ಥರೆಂದು ಜನತೆಯಲ್ಲಿ ದೃಢಪಡಿಸುವುದಕ್ಕಾಗಿ ಮದ್ರಾಸ್ ಸರಕಾರದವರು ಕರಪತ್ರಗಳನ್ನು ಹಂಚುತ್ತಿರುವರು. ಈ ಪತ್ರಗಳು ಯಾವ ಸಾಹಿತ್ಯ ಚಪೆ ಕ್ಕಾರದ ರತ್ನಗಳೆಂದು ಪ್ರಕಟಪಡಿಸಿದ ಅಧಿಕಾರಿಗಳ ತಿಳಿಕೊಂಡಿರುವರೋ ತಿಳಿಯದು. ಜನತೆಯನ್ನು ಸಂದರ್ಶಿಸುವ ವಿಧಾನವು ಅವರಿಗೆ ಬೇರೆ ಸಿಗದಿರಬಹುದು. ಆದರೆ ಇಂಥವುಗಳ ಮೇಲೆ ಮಾಡಿದ ಕಾಲಹರಣವನ್ನು ಬೇರೆ ಯಾವುದಾದರೂ ಸದುದ್ದೇಶದ ಮೇಲೆ ಮಾಡಬಹುದಿತ್ತು. ಇಂತಹ ಪತ್ರಗಳನ್ನು ಬಂಗಾಲದಲ್ಲಿ ಜೀನಸುಗಳ ಅಂಗಡಿಗಳಲ್ಲಿ, ಕಲ್ಲುಸಕ್ಕರೆಯನ್ನು ಕಟ್ಟುವುದಕ್ಕೂ, ಹೆಂಗುಸರು ಒಲೆ ಉರಿಸಲಿಕ್ಕೂ, ಅಥವಾ ಹುಡುಗರು ಗಾಳಿಪಟ ತಯಾರಿಸಲಿಕ್ಕೂ ಉಪಯೋಗಿಸುತ್ತಾರೆ. ಇದನ್ನು ಓದುವವರು ಎಷ್ಟು ಮಂದಿ ಇದ್ದಾರೆ ದರೆ, ಶಹರಾ ಮರುಭೂಮಿಯಲ್ಲಿ ಜ್ಯಸ್ (ಹಿಮಗಡ್ಡೆ) ಮಾರುವವರಷ್ಟೆ ಮಂದಿ ಇದ್ದಾರೆ (ಶಹರಾ ಮರುಭೂಮಿಯಲ್ಲಿ ಐಸ್ ಮಾರಿದ ... [illegible])

ಹಿಂದೂ ಪತ್ರಿಕೆ

ಮಹಾತ್ಮಾ ಗಾಂಧಿಯವರ ತಿಥಿ... [illegible] ಕೊಟ್ಟ ಹೇಳಿಕೆಯು ಈಗಿನ ಉತ್ಕಟಾವಸ್ಥೆಯನ್ನು ತಪ್ಪಿಸಿಕೊಳ್ಳಲಿಕ್ಕೆ ಮಾರ್ಗ... [illegible] ಹದೂ, ರಾಜಿ ಒಪ್ಪಂದದ ಮಾತುಕತೆಗಳಿಗೆ ತುಂಬಾ ಎಡೆಯಿರುವಂತಾದ್ದಾಗಿದೆ ಎಂದು ... [illegible] ಪ್ರವೀಣರಿಂದಲೂ ಒಪ್ಪಿಕೊಂಡ ಸಂಗತಿಯಾಗಿರುವಾಗ, ಸರಕಾರವು ಸ್ತಬ್ಧವಾಗಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇಂಡಿಯಾದ ಅಂಡರ್ ಸೆಕ್ರೆಟರಿಯವರು ಕೂಡ ಸುಮ್ಮನೇ ಇದ್ದಾರೆ, ಬಹುಶಃ ಅವರ ಲೆಕ್ಕದಲ್ಲಿ, "ಹೆಚ್ಚಿನ ವಿಶೇಷತೆಯ ಕೆಲಸಗಳಿರಬಹುದೆಂದು ಕಾಣುತ್ತದೆ. ಹೀಗೆಂದು ಹಿಂದೂ ಪತ್ರಿಕೆಯು ತನ್ನ ಒಂದು ಅಗ್ರಲೇಖದಲ್ಲಿ ಬರೆಯುತ್ತದೆ. "ಪ್ರಾರಂಭದಿಂದಲೂ ಸರಕಾರವು ಈ ಪ್ರಶ್ನೆಯ ವಿಚಾರವಾಗಿ ತೋರಿಸಿದ ವರ್ತನೆಯು ಕಲ್ಪನಾಶಕ್ತಿಯ ಅಭಾವವನ್ನು, ರಾಜಕೀಯ ವಿಷಯಗಳ ಬುದ್ಧಿಗೇಡಿತನವನ್ನೂ ತೋರಿಸುತ್ತದೆ."

ಅಪಕೀರ್ತಿಯ ಮಾದರಿ

ಬಂಗಾಲ ಗವರ್ನರರ ಮೂಲಪಾಠ

"ಪ್ರತಿಯೊಬ್ಬ ಗವರ್ನರರೂ ರಚನಾತ್ಮಕ ಸರಕಾರದ ನೀತಿಗನುಸಾರವಾಗಿ ವರ್ತಿಸುವರೆಂದು ನಿರೀಕ್ಷಿಸಿಕೊಂಡಿರುವುದು ದೊಡ್ಡ ತಪ್ಪಾಗಿರುತ್ತದೆ. ಜವಾಬುದಾರಿ ಸರಕಾರದ ತತ್ವಗಳನ್ನು ಉಲ್ಲಂಘಿಸಿ, ಬಂಗಾಳದ ಗವರ್ನರರಾದ ಸರ್ ಜಾನ್ ಎಂಡರ್‌ಸನ್‌ರವರು ಮಂತ್ರಿಮಂಡಳದ ಅಧ್ಯಕ್ಷತೆಯನ್ನು ತೆಗೆದುಕೊಂಡು ಅಧಿಕಾರವನ್ನು ಪ್ರದರ್ಶಿಸಿದ ಮಾದರಿಯು, ನವರಾಜಶಾಸನವು ಮುಂದುವರಿದು ವಿಕಾಸವಾಗುವುದೆಂಬ ನಿರೀಕ್ಷಣೆಯನ್ನು ನಿರುತ್ಸಾಹಗೊಳಿಸುತ್ತದೆ" ಹೀಗೆಂದು ಅಡ್ವಾನ್ಸ್ ಪತ್ರಿಕೆಯು ಒಂದು ಪ್ರಧಾನ ಲೇಖದಲ್ಲಿ ಬರೆಯುತ್ತದೆ.

ಸರಕಾರದ ಮನೋಭಾವವು ಬದಲಾಗಲೇ ಬೇಕು

ಈಗಿನ ರಾಜಕೀಯ ಉತ್ಕಟಾವಸ್ಥೆಯನ್ನು ಸುಧಾರಿಸಲು ಸರಕಾರದಧಿಕಾರಿಗಳ ಮನೋಭಾವವು ಬದಲಾವಣೆಯಾಗಬೇಕೆಂಬುದರ ಮೇಲೆ ಇಂಗ್ಲೆಂಡಿನ 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು ಈ ರೀತಿ ಬರೆಯುತ್ತದೆ—"ಬರೀ ಒಂದು ಮಾನಸಿಕ ಅತೃಪ್ತಿಯಿಂದುಂಟಾಗುವ ಒಂದು ವಿಷಯದ ಮೇಲೆ ಕಾಲಹರಣ ಮಾಡುವುದು ತೀರ ಅನಾವಶ್ಯಕವಿರುತ್ತದೆ. ಆದರೆ ವಿದೇಶಿ ಜನಾಂಗದ ಆಡಳಿತಕ್ಕೆ ಒಳಪಟ್ಟ ಒಂದು ಜನಾಂಗದ ಮಾನಸಿಕ ಅತೃಪ್ತಿಯು ರಚನಾತ್ಮಕ ತೊಂದರೆಗಳಿಗಿಂತಲೂ ವಿಶೇಷವಾದುದಾಗಿದೆ. ಹೆಚ್ಚು ಕಮ್ಮಿ ಎಲ್ಲಾ ಕೊಂಗ್ರೆಸ್ ಮುಖಂಡರುಗಳು ಒಂದಲ್ಲೊಂದು ಕಾಲದಲ್ಲಿ ಸಾರ್ವಭೌಮ ಸರಕಾರದ ಬಂದಿವಾಸಗಳನ್ನು ಅನುಭವಿಸಿದ್ದವರಿದ್ದಾರೆ. ಆದುದರಿಂದ ಸರಕಾರದ ಈಗಿನ ಉದ್ದೇಶದ ಸರ್ವರೂಪವನ್ನೂ ತಿಳಿಕೊಂಡು ಘನಸರಕಾರದ ಸದಸ್ಯರುಗಳಿಗೆ ಕಷ್ಟವಾಗುತ್ತದೆ ಎಂಬ ಸಂಗತಿಯು ಒಪ್ಪಬೇಕಾದದ್ದು. ನವರಾಜಶಾಸನವು ಭಾರತದಲ್ಲಿ ನವಶಕವನ್ನು ಉಂಟುಮಾಡುವ ಉದ್ದೇಶದಿಂದ ಜ್ಯಾರಿಗೆ ತರಲಾಯಿತು. ಈಗ ಸರಿಯಾದ ಪರಿಹಾರವು ಆಗಬೇಕಾದಲ್ಲಿ ಇತ್ತಂಡದವರಲ್ಲೂ ತಿಳುವಳಿಕೆ ಮತ್ತು ರಿಯಾಯಿತಿಗಳು ಇರಬೇಕು.

'ಕೊಟಾವಟ್ಟಂದ ರಾಜಕೀಯ ಶಾಲೆಯ ಮೇಲೆ ಮದ್ರಾಸ್ ಸರಕಾರವು ಕೈಕೊಂಡ ವರ್ತನೆಯು ಮೇಲೆ ರಾಜಗೋಪಾಲಾಚಾರ್ಯರು ತಾತ್ಕಾಲಿಕ ಮಂತ್ರಿಗಳನ್ನು ... [illegible] ಕೇಳಿದಾಗ ಈ ಮಂತ್ರಿಗಳ ಸ್ಥಿತಿ ... [illegible] ಭಯಂಕರ ... [illegible] ಪರಿಣಮಿಸಿವೆ. ಹೀಗೆಂದು ಅಮೃತ್ ಬಜಾರ್ ಪತ್ರಿಕೆ ... ಅಗ್ರಲೇಖದಲ್ಲಿ ಬರೆದಿದೆ ... [illegible] 'ಕ್ರಿಮಿನಲ್ ಅಮೆಂಡ್‌ಮೆಂಟ್ ... ' ಇದೆ, ಆದರೆ ... [illegible] ರಾಜ್ಯಾಡಳಿತ ಕ್ರಮದ ಅಸ್ತಿತ್ವವು ... [illegible] ರಾಜ್ಯಾಡಳಿತ ಕ್ರಮದ ಆಧಾರದ ಮೇಲೆ ... [illegible] ಗಳನ್ನು ಪುಷ್ಟೀಕರಿಸಿ ... [illegible] ಹಳೆದೇ ಆಗಿರುತ್ತದೆ. ... [illegible] ವುದು ಪ್ರತಿಯೊಬ್ಬ ನಾಗರೀಕನ ಜನ್ಮಸಿದ್ಧ ಹಕ್ಕಾಗಿರುತ್ತದೆ. ತಾತ್ಕಾಲಿಕ ಮಂತ್ರಿಗಳು ಇಷ್ಟರ ತನಕ ಕೊಟ್ಟ ವಿವರಣೆಗಳಿಗಿಂತಲೂ ಈ ದಬ್ಬಾಳಿಕೆಯ ಮೇಲೆ ಜನ ... [illegible] ಮಂತ್ರಿಗಳ ಹೆಚ್ಚಿನ ವಿವರಣೆಗಳನ್ನು ... [illegible] ಗಿದೆ. ಆದರೆ ಹಳೇ ರಾಜ್ಯಾಡಳಿತ ಕ್ರಮವು ನಿಜವಾಗಿ ಹೋಯಿತೆ? ನವರಾಜ್ಯಾಡಳಿತವು ಹೀಗೆಯೊ ಎಂದು ಪ್ರಶ್ನಿಸುತ್ತದೆ.

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,
ಉಪಯೋಗಿಸಿರಿ.
ಕೆ. ವೆಂಕಟೇಶ ಬಾಳಿಗ,
ರೋಸಿ... [illegible]

ಮದನಕಳಾಶಾಸ್ತ್ರ ಎಂಬ ಪ್ರೇಮ ರಹಸ್ಯ

ಗಳು — ಕ್ರಯ ರೂ. 1—0—0.



ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ, ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಫ್ರಾನ್ಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹಾಸಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಇನ್ನೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಲೇಡಿಗಳ ಫೋಟೋಗಳ ಸಹಿತ ಕೂಡಿದೆ, ಮಲಗುವ ಮನೆಯಲ್ಲಿ ಸ್ವಭಾವಂಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೦ ಫೋಟೋಗಳನ್ನು ನೋಡುತ್ತಾ ಓದುತ್ತಾ ಕಡೆತನಕ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು, ಕ್ರಯ ರೂ. 1 ಇದರ ಸಂಗಡ ೧೨ ಪ್ರಿಂಟ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೇ? ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಹಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು

ESTED. 1931

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ಯಾವಿಶಾರದ

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳುಳ್ಳ **(ಭಕ್ತಶಿಖಾಮಣಿ ದಾಮಾಜಿಪಂತ)** ಸಂಗೀತ ನಾಟಕ

ಬರೆದವರು.—ಶ್ರೀ ಬಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ। ನೆಲೆಗೊಳ್ಳುವೆನು ನಾನು, ನಾರದ ಮುನಿವರಾ!"॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಿ ಟಾಣಿನ ಮನೋಹರವಾದ ೩೫ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ —12 ಆಣೆ

ಪುಸ್ತಕದ ಪ್ರತಿಗಳು ಸಿಗುವ ಸ್ಥಳ -1. ಎಲ್ಯ್ಯಾಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಜ್ಯೇಷ್ಠ ಶು। ೪ ಶನಿವಾರದಿಂದ ಜ್ಯೇಷ್ಠ ಶು। ೧೦ ಶುಕ್ರವಾರದ ವರೇಗಿನ ಪಂಚಾಂಗ (೧೯೩೭ನೇಯ ವೃಷಭ (ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
12	ಶನಿ	೪	೩೪	ಪುಷ್ಯ	೩೬	೨೯	
13	ರವಿ	೫	೩೨	ಆಶ್ಲೇಷ	೩೫	೩೦	
14	ಸೋಮ	೬	೩೦	ಮಘೆ	೩೫	೩೧	
15	ಮಂಗಳ	೭	೩೦	ಹುಬ್ಬ	೩೭	೧	
16	ಬುಧ	೮	೩೧	ಉತ್ತರ	೪೦	೨	
17	ಗುರು	೯	೩೩	ಹಸ್ತ	೪೪	೩	
18	ಶುಕ್ರ	೧೦	೩೬	ಚಿತ್ರ	೪೯	೪	

THE

BANK OF MANGALORE LTD.,

MANGALORE.

ESTD 1931

Branches - Panemangalore Mudabidri & Padubidri

Chairman —**Philip J Chandran, Esq ,**
Retd Dt Registrar of Joint Stock Companies

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Saving Bank deposit 3½% on daily balances

All kinds of banking business transacted

U. R. PAI, N. U. PAI, *Managing Directors.*

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 8	3— 12
ಮುಸ್ಕತಿ ...	3—10	4— 4
ಗುಡ್ಡ ...	3—10	4— 0
ಊರ ಅವ್ವಲ್ ಬೆಲ್ಲಗೆ .	4— 0	4—12
ರಂಗೂನು ಬೆ. ಗೋ. ಒಕ್ಕ ..	6 — 8	7— 0
ಎಲ್ಲೂರು ಬೆ. ಮು. ಒಕ್ಕ ..	3—14	4— 0
ಗೋದಿ ಗೋಣಿ ಒಕ್ಕ ..	11 — 0	13— 0
ತೊಗರಿ ಗೋಣಿ ಒಕ್ಕ ...	9 — 8	12— 8
ಹುರುಳಿ ಗೋಣಿ ಒಕ್ಕ ..	5— 4	5 — 6
ಕಡಲೆ ಗೋಣಿ ಒಕ್ಕ ..	8 —14	12 — 8
ತೊಗರಿಬೇಳೆ ಗೋಣಿ ಒಕ್ಕ...	11— 0	19— 0
ಉದ್ದು ಗೋಣಿ ಒಕ್ಕ .	9— 0	9 — 3
ಹೆಸರು ಗೋಣಿ ಒಕ್ಕ .	7—12	8— 8
ಉದ್ದಿನಬೇಳೆ ಖಂಡಿ ಒಕ್ಕ .	27— 8	32— 8
ಉಪ್ಪು ಗೋಣಿ ಒಕ್ಕ ..	4—10	5—14
ಕೊಬ್ರಿ ಖಂಡಿ ಒಕ್ಕ .	75— 0	84— 0
ಕೊಬ್ರಿ ಹಿಂಡಿ ಖಂಡಿ ಒಕ್ಕ...	20 — 0	20— 8
ಎಳ್ಳಿಂಡಿ ಖಂಡಿ ಒಕ್ಕ ..	27 — 8	31 — 4
ಕೊಬ್ರಿ ಎಣ್ಣೆ ಮಣ ಒಕ್ಕ..	5— 6	6— 0
ಎಳ್ಳೆಣ್ಣೆ ಮಣ ಒಕ್ಕ	7— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ಒಕ್ಕ	6— 5	7— 5
ಮೋರಿಸ ಸಕ್ಕರೆ ಮು. ಒಕ್ಕ	3— 0	3 — 0
ಮೆಣಸು	4— 8	6— 0
ಸಾಸಿವೆ ಮುಡಿ ಒಕ್ಕ	5 — 4	5— 8
ಕಾಳುಮೆಣಸು ಖ. ಒಕ್ಕ	97 — 8	100 0
ಮೇಲುಕೈಬೀಜ ಮಣ ಒಕ್ಕ	80— 0	85— 0
ಗೇರುಬೀಜ ಮು. ಒಕ್ಕ	3 —10	3 — 12
ಕಲ್ಲಿಜ ಖಂಡಿ ಒಕ್ಕ	51— 0	51— 4
ತಾಂಬ್ರಕಗಡು ಮ ಒಕ್ಕ	14— 12	15— 0
ತಾಂಬ್ರಪಾತ್ರಗಳು ಮ ಒಕ್ಕ	17— 0	17— 8
ಚೀನಿಬೆಳ್ಳಿ ಸೇರು ಒಕ್ಕ	13— 8	15— 0
ಹಿತ್ತಾಳೆ ತಗಡು ಮ ಒಕ್ಕ	12 — 0	12— 8
ಪವನು ಒಕ್ಕ	22— 7	22— 8
ಮುಣಸಿ ಮುಳ ಖಂಡಿ ಒಕ್ಕ	40— 0	45— 0
ನೇಟಿವ್ ಕಾಫಿ ಖಂಡಿ ಒಕ್ಕ	145— 0	150— 0
ಫಿಟೇರಿ ಕಾಫಿ ಖಂಡಿ ಒಕ್ಕ	190— 0	200— 0
ಮಡಿಕೇರಿ ಏಲಕ್ಕಿ	60— 0	62 — [illegible]

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠದ ಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತರಿಸಿಕೊಳ್ಳುವದು ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವದು ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹವ್ಯಕವ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿ ಪಡೆಯತಕ್ಕದ್ದು ತಿಳಿದಿರುವುದು

---

4 ವರ್ಷಗಳಿಂದ ಉದರವೇದನೆಯಿಂದ ಬಳಲುತಿದೆ

ಈಗ ಸೌಖ್ಯದಿಂದಿರುವೆನು.

ನಿಮಗೆ ದುರದೃಷ್ಟಕರವಾದ ಹೊಟ್ಟೆನೋವು ಇದ್ದರೆ, ಹೊಟ್ಟೆಯಲ್ಲಿ ಜಠರಾಗ್ನಿ ರಸವು ಹೆಚ್ಚಾಗಿ ನಿಮ್ಮನ್ನು ಬಳಲಿಸುತ್ತಿದ್ದರೆ, ವಾಯು ಸಂಚರಿಸಿ, ಯಾ ಅಜೀರ್ಣದಿಂದ ಹೊಟ್ಟೆ ನೋವು ಎತ್ತಿದ್ದರೆ, ಮಿ। ಡಬ್ಲ್ಯು. ಎಚ್. ಎಂ. ಎಂಬವರು ಬರೆದ ಪತ್ರವನ್ನು ಓದಿ ಆಶ್ಚರ್ಯಪಡುವಿರಿ.

"ನಾಲ್ಕು ವರುಷಗಳಿಂದಲೂ ನಾನು ಉದರವೇದನೆಯಿಂದ ಬಳಲುತ್ತಿದ್ದೆ. ನಾನು ಒಂದು ಆಫೀಸಿನಲ್ಲಿ ಚಾಕರಿಯವನಾಗಿದ್ದೆ. ಆದುದರಿಂದ ದಿನಕ್ಕೆ 12 ಅಥವಾ 14 ಗಂಟೆ ಕೆಲಸ ಮಾಡುತ್ತಿದ್ದಾಗ ನನ್ನ ಅವಸ್ಥೆಯು ಹೇಗಾಗುತ್ತಿತ್ತೆಂಬುದನ್ನು ನೀವೇ ಎಣಿಸಿರಿ. ಕೆಲವೊಂದು ವೇಳೆ ಎಲ್ಲರೂ ಹಾಜರಿದ್ದ ಸಮಯ ನನ್ನ ಹೊಟ್ಟೆನೋವನ್ನು ತಡೆಯಲಾರದೆ ಕೂಗತೊಡಗಿದೆನು. ಆದರೂ ಬಹಳ ಪ್ರಯತ್ನದಿಂದ ಅದನ್ನು ಅಡಗಿಸಿ ನನ್ನ ಕೆಲಸವನ್ನು ಮಾಡಿದೆನು. ಪ್ರತಿ ವರುಷವೂ ಆಗಾಗ ನನಗೆ ರಜೆಯನ್ನು ಪಡೆಯಬೇಕಾಗುತಿತ್ತು. ಕೆಲವು ದಿನಗಳ ಹಿಂದೆ ನಿಮ್ಮ ಪೌಡರಿನ ಸೀಸೆಯೊಂದನ್ನು ಪಡೆದೆನು. ಅದನ್ನು ಸೇವಿಸಿದಂದಿನಿಂದ ನನ್ನ ನೋವು ಶಮನವಾಗುತ್ತಬಂತು. ಈಗ ನಾನು ಸಂಪೂರ್ಣ ಸುಖಿಯು."

ಇಂತಹ ನಮೂನೆಯ ಕಾಗದಗಳನ್ನು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ ಕಂಪೆನಿಯವರು ಪಡೆದಿರುತ್ತಾರೆ. ಇಂತಹ ಬೇನೆಗಳಿಂದ ಬಳಲಿ ಜೀವನ ಸಾರವನ್ನು ಕಳೆದ ಎಷ್ಟೋ ಮಂದಿ ಕಡೆಗೆ ಈ ಮದ್ದನ್ನು ಪಡೆದು ತುಂಬಾ ಗುಣಲಾಭವನ್ನು ಪಡೆದಿರುತ್ತಾರೆ. ಆದುದರಿಂದ ನಿಮಗೂ ಇಂತಹ ನೋವಿದ್ದರೆ ಕೂಡಲೆ

Alex. C. Maclean

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡಕೊಳ್ಳಿರಿ. ಇಂತಹ ನಮೂನೆಯ ಕಡಿಮೆ ದರದ ಪರಕೀಯ ವಸ್ತುಗಳನ್ನು ಪಡೆದು ಮೋಸಹೋಗಬೇಡಿ. ಅದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೆಟ್ಟಿಗೆಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ

S No 52.

THE

Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ವಾದೀಯನ್ನು ಮರೆಯಬೇಡಿರಿ

ಹುಬ್ಬಳ್ಳಿಯ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ ಕೊಕ್ಕೆ ಹುಳ, ನೂಲಿನಂತಹ ಹುಳ ಯಾವ ತರದ ಕ್ರಿಮಿಯೇ ಆಗಲಿ ಬಿದ್ದುಹೋಗುವುದು. ಇದರ ಸೇವನೆ ಸಕ್ಕರೆ ಬಿಸಿನೀರು (ಪರಹೆಜ್ಜೆ ಬೇಡ)

ಕ್ರಿಮಿ ಪ್ಯಾಕೆಟ್ 1ಕ್ಕೆ	0	1	0
ಸುಖವಿರೇಚನ ಗುಳಿಗೆ	0	0	6
ಪಿತ್ತಶಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0
ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ಶಾಂತಿಯಾಗುವುದು ಕಫ ಮಿಶ್ರಣ ಸೀಸೆ 1ಕ್ಕೆ	0	8	0

ಸಿಗುವ ಸ್ಥಳ — ಷಾ ಕಂಪೆನಿ,
ಗವರ್ನಮೆಂಟ್ ಕೊಲೇಜಿನ ಎದುರು, ಮಂಗಳೂರು

'ಕಳೆದ ತಿಂಗಳ ತಾರೀಕು ೨೦ನೇ ಗುರುವಾರ ದಿನ ಮಧ್ಯಾಹ್ನ ನಾನು ಅದಾವುದೋ ಕೆಲಸದ ನಿಮಿತ್ತ ಕಾರ್ಕಳಕ್ಕೆ ಹೋಗಿದ್ದೆನು. ಬಸ್ಸಿನಿಂದಿಳಿದವನೇ ನೆಟ್ಟಗೆ ನನ್ನ ಪರಮಾಪ್ತರಾದ ಕೇಶವ ರಾಮಚಂದ್ರ ಶೆಣೈಯವರ ಸರಾಫ್ ಕಟ್ಟೆಗೆ ಹೋದೆನು. ಅಲ್ಲವರು ಅದಾವುದೋ ಒಂದು ಹಿಂದೀ ಭಾಷಾ ಪತ್ರಿಕೆಯನ್ನು ಓದುತ್ತಲಿದ್ದರು. ನನ್ನನ್ನು ನೋಡಿದವರು ಆದರದಿಂದ ಅಲ್ಲಿಯ ಪರಗುವ ಬೆಂಚಿಯ ಮೇಲೆ ಕುಳಿತುಕೊಳ್ಳುವಂತೆ ಹೇಳಿದರು. ಅಂತೆಯೇ ನಾನು ಅಲ್ಲಿ ಮಂಡಿತನಾಗಿ ಏನು ವಿಶೇಷ ಕೇಶವ ಮಾಮನವರೇ? ಎಂದೆ.

"ವಿಶೇಷವೇ? ಮೊನ್ನೆ ತಾನೆ ಇಲ್ಲೊಂದು ಭೂತದ ಕಾಟವು ಸ್ವಲ್ಪ ವಿಪರೀತವಾಗಿತ್ತು. ಭಾರೀ ತಮಾಷೆ ಉಂಟಯ್ಯಾ'' ಮುಗುಳ್ನಗುತ್ತ ನುಡಿದರು ಕೇಶವ ಮಾಮನವರು ನಾನು ಕುತೂಹಲದಿಂದ ಆ ವಿಶೇಷ ವರ್ತಮಾನವನ್ನು ಆಲಿಸಲಾರಂಭಿಸಿದೆನು.

ಪ್ರಿಯ ವಾಚಕ ಬಂಧುಗಳೇ! ನಮ್ಮ ಶೆಣೈಯವರು ಕಣ್ಣಾರೆ ಕಂಡು, ಕಿವಿಯಾರೆ ಕೇಳಿ ನನ್ನ ಮುಂದೆ ವಿವರಿಸಿದ ವಿಷಯವನ್ನು ಈಗಿಲ್ಲಿ ಕೊಡಬಯಸುತ್ತೇನೆ. ಅಂದರೆ ಕೆಲವು ದಿನಗಳ ಹಿಂದೆ ಕಾರ್ಕಳದ ಸುಪ್ರಸಿದ್ಧ ಸಾಹುಕಾರ ಬಂಧುಗಳೊಬ್ಬರಲ್ಲಿ ಅದೊಂದು ಭೂತದ ಉಪಟಳಕ್ಕೆ ಪ್ರಾರಂಭವಾಗಿತ್ತಂತೆ. ಪೇಟೆಯಲ್ಲೆಲ್ಲಾ ಹಬ್ಬಿದ ಈ ವಾರ್ತೆಯನ್ನು ಕೇಳಿದ ನಮ್ಮ ಶೆಣೈಯವರು ಆಗಲೇ ಆ ಸಾಹುಕಾರ ಬಂಧುಗಳ ಮನೆಯತ್ತ ಕಡೆ ಹೋದರಂತೆ. ಆದರೆ ಅವರಲ್ಲಿ ಹೋಗುವಾಗ ಏನೂ ಇದ್ದಿಲ್ಲವಂತೆ. ಕೆಲವು ನಿಮಿಷಗಳ ಹಿಂದೆ ಮಾತ್ರ ಆ ಭೀಕರ ಭೂತದ ವಿಚಿತ್ರ ತರದ ಲೀಲೆಯು ಪ್ರದರ್ಶಿಸಲ್ಪಟ್ಟಿದ್ದಿತಂತೆ. ಕಿಟಿಕಿ ಬಾಗಿಲುಗಳನ್ನು ಬಡಿಯುವುದು, ಕಲ್ಲು ಮಣ್ಣು ಮಸಿ ಹುಡಿ, ಗಾರೆ ತುಂಡುಗಳನ್ನು ಬಿಸಾಡುವುದು ಹಾಗೂ ಇನ್ನೂ ಅನೇಕ ವಿಧದಲ್ಲಿಯೂ ಆ ಭೂತವು ಉಪದ್ರವವನ್ನೀಯುತ್ತಿತ್ತಂತೆ. ಆ ಭೂತ ಲೀಲೆಯನ್ನು ನೋಡಲಾಗಿ ಅಲ್ಲಿ ಕೂತುಕೊಂಡಿದ್ದ ಶೆಣೈಯವರು ಅಲ್ಲಿ ಯಾವ ತರದ ಶಬ್ದವೂ ಇಲ್ಲದುದನ್ನು ಕಂಡು ಹತಾಶರಾಗಿ ಅಲ್ಲಿಂದ ಹಿಂದಿರುಗಿ ಪುನಃ ಅದೇ ದಿನ ರಾತ್ರೆ ಅಲ್ಲಿಗೆ ಹೋಗಿ ಕೂತುಕೊಂಡರಂತೆ. ಆಗಲೂ ಕೂಡ ಏನೂ ಇಲ್ಲದುದನ್ನು ಕಂಡ ಅವರು ಕೆಲ ಹೊತ್ತಿನ ತನಕ ಅಲ್ಲಿ ಕೂತುಕೊಂಡು ಬೇಸತ್ತು ಮನೆಯತ್ತ ಕಡೆ ನಡೆದರಂತೆ. ಆದರೆ ಮರುದಿನವೂ ಕೂಡ ಭೂತದ ಉಪಟಳಕ್ಕೆ ಪ್ರಾರಂಭವಾಗಿದೆಯೆಂದು ಊರಿನಲ್ಲೆಲ್ಲಾ ವಾರ್ತೆ ಹಬ್ಬಿತು. ಆಗಲೇ ಮಧ್ಯಾಹ್ನ ಶೆಣೈಯವರು ಊಟವನ್ನು ಕೂಡ ಮಾಡದೆ ತನ್ನ ಕೆಲವು ಮಂದಿ ಸ್ನೇಹಿತರೊಂದಿಗೆ ಅಲ್ಲಿಗೆ ಹೋದರಂತೆ. ಆಗ ಒಳಗಿಂದ ಯಾರೋ, ಅಡಿಗೆಯ ಕೋಣೆಯ ಬಾಗಿಲನ್ನು ಗುದ್ದಿದರೆಂದು ಕೂಗಿದರಂತೆ. ಶೆಣೈಯವರು ಅಡಿಗೆ ಕೋಣೆಯೊಳಗೆ ಪ್ರವೇಶಿಸಲು ಅವರ ಮನೆಯ ಕೆಲಸದ ಹುಡುಗಿಯೋರ್ವಳು ಒಳಗಿಂದ ಹೊರಗೋಡಿದುದನ್ನು ಕಂಡು ಹಿಡಿದ್ದು ಯಾತಕ್ಕೆಂಬುದಾಗಿಯೂ, ಅವಳು ಪುನಃ ಅಡಿಗೆ ಕೋಣೆಗೆ ಬರಬೇಕಾಗಿಯೂ ಹೇಳಿದ್ದಲ್ಲಿ ಆ ಹುಡುಗಿಯು ಹೋಗಲೊಪ್ಪದೆ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳಂತೆ. ಆಗ ಒಬ್ಬರೆಂದರಂತೆ ಒಳಗಾರೂ ಇಲ್ಲದಿದ್ದರೂ ಬಾಗಿಲು ಬಡಿದ ಶಬ್ದವಾಗುವುದೆಂದೂ, ತಾನದನ್ನು ಕಿವಿಯಾರೆ ಕೇಳುವೆನೆಂದೂ, ಶ್ರೀ ಶೆಣೈಯವರು ತನ್ನ ಗೆಳೆಯರೊಂದಿಗೆ ಮಧ್ಯಾಹ್ನ ಒಂದೂವರೆ ಘಂಟೆಯ ತನಕ ಅಲ್ಲಿ ಕೂತುಕೊಂಡರೂ ಅವರಿಗೆ ಏನೂ ಕಾಣಸಿಗದುದರಿಂದ ಪುನಃ ಹತಾಶರಾಗಿ ಮನೆಗೆ ಹೋದರಂತೆ. ಮನೆಯ ಯಜಮಾನರು ಒಬ್ಬಿಬ್ಬರು ಮಂತ್ರವಾದಿಗಳನ್ನು ಕರೆಸಿ ಕೇಳಿದ್ದಲ್ಲಿ ಒಬ್ಬರು ಗುಡ್ಡೆ ಪಂಜುರ್ಲಿಯ ಉಪಟಳವೆಂದೂ ಮತ್ತೊಬ್ಬರು ಹಿರಿಯರ ಉಪದ್ರವವೆಂದು ಹೇಳಿದರಂತೆ. ಹೀಗೆಯೇ ಎರಡು ಮೂರು ದಿನಗಳ ವರೆಗೆ ಈ ತಮಾಷೆ ನಡೆಯುತ್ತಲೂ ಇದನ್ನು ನೋಡಲು ಜನರು ತಂಡತಂಡವಾಗಿ ಬರುತ್ತಲೂ ಇದ್ದರಂತೆ.

ಪ್ರಯಾಣದಿಂದ ದೊರೆತ ಅನುಭವ

(ಲೇಖಕ:—ಶ್ರೀಯುತ ಕೆ. ಕೇಶವ ಕುಡುವ, ಅಧ್ಯಾಪಕ ಉಡುಪಿ.)

ಹೀಗೆಯೇ ಒಂದೆರಡು ದಿನಗಳು ಕಳೆದ ತರುವಾಯ ಒಂದು ದಿನ ಅಂದು ಅಳುತ್ತ ನಿಂತಿದ್ದ ಮನೆಯ ಕೆಲಸದ ಹುಡುಗಿಯು ಮನೆಯೊಳಗಿನ ಕೋಣೆಯೊಂದರಲ್ಲಿ ನಿಂತುಕೊಂಡು ಅತ್ತಿತ್ತ ಧಿಟ್ಟಿಸುತ್ತಲೂ ಕಿಟಿಕಿಯ ಬಾಗಿಲುಗಳನ್ನು ಬಡಿಯುತ್ತಲೂ ಇರುವಾಗ ಅಲ್ಲಿಯ ಯಾರೋ ಒಬ್ಬ ಮಹಾಶಯರು ಆ ಹುಡುಗಿಯ ರಟ್ಟೆಯನ್ನು ಹಿಡಿದರಂತೆ. ಹೇಳುವುದೇನನ್ನು? ಆ ಹುಡುಗಿಗೆ ಎರಡು ದಿನಗಳ ಹಿಂದೆ ಅವಳ ಮನೆಯಿಂದ ಆಕೆಯನ್ನು ಎರಡು ದಿನಗಳ ಮಟ್ಟಿಗೆ ಕರೆಯಲಿಕ್ಕೆ ಜನ ಬಂದಾಗ ಅವಳನ್ನು ಯಜಮಾನರು ಕಳುಹಲೊಪ್ಪದಿದ್ದುದಕ್ಕಾಗಿ ಅವಳೇ ಈ ತೆರನಾದ ಆಟವನ್ನು ಆಡಿದಳೆಂದು ಅವಳೇ ಹೇಳಿದಳಂತೆ. ಹಾಗೂ ಈಗಲೂ ಹೇಳುತ್ತಾಳಂತೆ. ಪ್ರಿಯ ವಾಚಕ ಬಂಧುಗಳೇ! ನೋಡಿದಿರಾ, ಆ ಬಾಲಿಕೆಯ ಸಾಹಸವನ್ನು? ಇದರಂತೆಯೇ ಇನ್ನೂ ಹಲವು ಕಡೆಗಳಲ್ಲಿ ನಡೆಯುವ ಭೂತದ ಉಪದ್ರವದ ಗುಟ್ಟನ್ನು ಧೈರ್ಯದಿಂದಲೂ ಶೋಧನೆಮಾಡಿದಲ್ಲಿ ಅದರ ಗುಟ್ಟು ಇದೇ ರೀತಿಯಲ್ಲಿ ರಟ್ಟಾಗುವುದೆಂಬುದರಲಿ ಸಂದೇಹವೇನು?

೦ ೦ ೦ ೦

ನಾನು ಶ್ರೀಯುತ ಶೆಣೈಯವರಿಂದ ಆ ಭೂತದ ವಿಷಯವನ್ನು ಸಂಪೂರ್ಣವಾಗಿ ಆಲಿಸಿಕೊಂಡು ಅಲ್ಲಿಂದ ಮುನ್ನಡೆಯುತ್ತಿದ್ದಾಗ ನನ್ನ ಮತ್ತೊಬ್ಬ ಗೆಳೆಯರು ಸಿಕ್ಕಿದರು. ಅವರು ನನ್ನನ್ನು ಒತ್ತಾಯದಿಂದ ಅವರ ಮನೆಗೆ ಕರೆದುಕೊಂಡು ಹೋದರು. ಅದೀಗ ಅವರ ಮನೆಗೆ ನನ್ನ ಪ್ರಥಮ ಬಾರಿಯ ಸಂದರ್ಶನವಾಗಿತ್ತು. ನಾನು ಅವರ ಹಾಸಿದ ಒಣ್ಣದ ಚಾಪೆಯ ಮೇಲೆ ಕೂತುಕೊಂಡೆನು. ನನ್ನ ಮಿತ್ರರು ಆ ವಿಷಯ ಈ ವಿಷಯ ಮಾತಾಡಿ ಕಡೆಗೆ ಏನೋ ಎರಡು ಕಾಗದದ ತುಂಡುಗಳನ್ನು ನನ್ನ ಕೈಗೆ ಕೊಟ್ಟರು. ಕುತೂಹಲದಿಂದ ಅವುಗಳನ್ನು ನೋಡಿದೆ. ಜಾತಕದ ಪ್ರತಿಗಳಾಗಿದ್ದವು. 'ಇದೇನ?' ಎಂದು ನಾನು ಅವರೊಡನೆ ಕೇಳಿದ್ದೆನು. "ನನ್ನ ತಂಗಿಯ ಜಾತಕಗಳಿವು. ನಿಮ್ಮ ಸ್ನೇಹಿತ ಪರಿವಾರದವರು ಯಾರಾದರಿದ್ದರೆ ಈ ಜಾತಕವನ್ನು ಅವರಿಗೆ ಕೊಟ್ಟು ನನಗೆ ತಿಳಿಸಿದರೆ ಬಹಳ ಉಪಕಾರವಿತ್ತು. ನಾವು ಹಲವು ಕಡೆಗಳಲ್ಲಿ ನೋಡಿದರೂ ನಮ್ಮ ಸ್ಥಿತಿಗತಿಗಳಿಗನುಗುಣವಾಗಿ ವರನೇ ಸಿಕ್ಕುವುದಿಲ್ಲ. ಸಹಸ್ರಗಟ್ಟಲೆ ರೂಪಾಯಿಯನ್ನು ಕೇಳುತ್ತಾರೆ. ಮಾಡುವುದೇನು? ಒಟ್ಟಾರೆ ನಮ್ಮ ಗ್ರಹಚಾರ'' ಮ್ಲಾನವದನರಾದ ಅವರು ಹೇಳಿದರು.

ಇದನ್ನು ಕೇಳಿ ಬೇಸರಪಟ್ಟ ನಾನು "ಹುಡುಗಿಗೆ ಪ್ರಾಯವೆಷ್ಟು?'' ಎಂದು ಕೇಳಿದೆನು.

"ಹತ್ತಕ್ಕೆ ಎರಡರಿಂದ ಗುಣಿಸಬೇಕು'' ಚಿಂತಾತಿಶಯದಿಂದ ನುಡಿದರವರು.

ಇದನ್ನು ಕೇಳಿದ ನಾನೊಮ್ಮೆ ಅವಾಕ್ಕಾದೆನು. ಹುಡುಗಿಗೆ ಇಪ್ಪತ್ತು ವರ್ಷ ಪ್ರಾಯವೆಂದರೆ? ಇದು ಕೇವಲ ವರದಕ್ಷಿಣೆಯ ಕಾಟದಿಂದಲ್ಲವೇ? ಪ್ರಿಯ ವಾಚಕ ಬಂಧುಗಳೇ! ಈ ವರದಕ್ಷಿಣೆಯೆಂಬ ನೀಚ ಪಿಶಾಚವಿಂದು ಸಾಂಕ್ರಮಿಕ ಜಾಡ್ಯದಂತೆ ಎಲ್ಲೆಲ್ಲಿಯೂ ಹರಡಿಕೊಂಡಿರುತ್ತದೆ. ಎಷ್ಟೋ ಪತ್ರಿಕೆಗಳು ಎಷ್ಟೋ ಸಮಯದಿಂದ ಆ ವಿಷಯವಾಗಿ ಬಗೆಬಗೆಯಲ್ಲಿ ಮಥನ ಮಾಡುತ್ತಲಿವೆ. ಸಂಸ್ಕಾರಣ ಶಿರೋಮಣಿಗಳಾದ ಎಷ್ಟೋ ಮಂದಿ ಭಾರತೀಯರು ಎಷ್ಟೋ ಸಭೆಗಳಲ್ಲಿ ಇದನ್ನು ಕುರಿತು ವಾದವಿವಾದ ಮಾಡುತ್ತಲಿದ್ದಾರೆ. ಪಿತೃಪ್ರಾಣೆಯರಾದ ಎಷ್ಟೋ ಮಂದಿ ಕುಲಕನ್ಯೆಯರು ತಮ್ಮ ತಮ್ಮ ಪ್ರಾಣಗಳನ್ನು ಬಲಿಗೊಟ್ಟು ಈ ದುರಾಚಾರದ ವಿರುದ್ಧವಾಗಿ ಆತ್ಮವಿಸರ್ಜನೆಯನ್ನು ಮಾಡಿದ್ದಾರೆ. ಮಧ್ಯವಿತ್ತರಾದ ಎಷ್ಟೋ ಮಂದಿ ಕನ್ಯಾಪಿತೃಗಳು ಸರ್ವಸ್ವವನ್ನೂ ಕಳೆದುಕೊಂಡು ಅಸಹನೀಯ ಕಷ್ಟಗಳನ್ನನುಭವಿಸುತ್ತ ಈ ನೀಚ ಪಿಶಾಚವು ನಾಶವಾಗಲೆಂದು ಮನಸ್ಸಾ ಶಪಿಸುತ್ತಿದ್ದಾರೆ. ಪತ್ರಿಕೆಗಳಿಂದಲೂ, ಸಮಾಜದಿಂದಲೂ ಕುಲಕನ್ಯೆಯರಿಂದಲೂ ಕನ್ಯಾಪಿತೃಗಳಿಂದಲೂ ಏಕಪ್ರಕಾರವಾಗಿ ಎಡೆಬಿಡದೆ ಆಕ್ಷೇಪಿಸಲ್ಪಡುತ್ತಿರುವ ಇದರ ದುಷ್ಪರಿಣಾಮ ಅವರ್ಣನೀಯವಾದುದಲ್ಲವೇ? ಎಂದು ಆಂಗ್ಲವಿದ್ಯೆಯ ಪ್ರಚಾರವಾಯಿತೋ ಅಂದೇ ವರದಕ್ಷಿಣೆಯೂ ಕೂಡ ಪ್ರಚಾರವಾಯಿತೆನ್ನಬಹುದು. ಪುರುಷತ್ವವನ್ನೇ ಮಾರಿ ತಿನ್ನುವ ಈ ಆಂಗ್ಲ ವಿದ್ಯಾಭ್ಯಾಸದ ದೆಸೆಯಿಂದ ವರಗಳ ಬೆಲೆಯು ಈಗೀಗ ವಿಪರೀತವಾಗಿ ಏರಿಹೋಗಿರುವುದೆ. ಪ್ರಿಯ ವಾಚಕರೇ, ವರರಿಗೆ ಇರುತಿಷ ತೆರಬೇಕೆಂದ ಆಜ್ಞೆ ಮಾಡುವುದಾದರೆ ಅಂತಹ ಯುವಕನು ಕಟ್ಟು ಮಾರ್ಕೆಟಿನಲ್ಲಿ ಮಾರುವ ಹೋರಿಗೆ ಸಮಾನನಾಗುವನೆಂಬುದರಲ್ಲಿ ಆಶ್ಚರ್ಯವೇನ?

೦ ೦ ೦ ೦

ಇರಲಿ, ನಾನು ಆ ದಿನ ರಾತ್ರೆ ಕಾರ್ಕಳದಲ್ಲಿಯೇ ವಿಶ್ರಮಿಸಿ ಮರುದಿನ ಪ್ರಾತಃಕಾಲ ಸೀರೆ ಬೈಲೂರಿಗೆ ಬಂದಿಳಿದೆನು. ನಾನಾಗ ಮಿಂದಿರಲಿಲ್ಲ. ಮಿಂದ ತರುವಾಯ ಮೈಯುಜ್ಜಿಕೊಳ್ಳಲು ಬೈರಾಸು ಬೇಕಲ್ಲವೇ? ನೆಟ್ಟಗೆ ಕೇಶವ ಕಿಣಿಯರ ಜವುಳಿ ಅಂಗಡಿಗೆ ಹೋಗಿ ಒಂದು ಬೈರಾಸನ್ನು ತೆಗೆದು ಅದರ ಕ್ರಯವೇನೆಂದು ಕೇಳಿದೆನು. ಮೂರುವರೆ ಆಣೆಯೆಂದರು ಕೇಶವ ಕಿಣಿಯರು. ನನಗೆ ಆಶ್ಚರ್ಯವಾಯಿತು. ಅದೇ ನಮೂನೆಯ ಬೈರಾಸನ್ನು ನಾನು ಉಡುಪಿಯ ಜವುಳಿ ಅಂಗಡಿಯೊಂದರಲ್ಲಿ ನಾಲ್ಕೂವರೆ ಆಣೆಗೆ ಪಡೆದುಕೊಂಡಿದ್ದೆನು. ನನಗೆ ತೋರಿತು, ಪೇಟೆಯ ವ್ಯಾಪಾರಿಗಳು ಮನಬಂದ ತೆರದಲ್ಲಿ ಕ್ರಯವನ್ನು ಹೇಳಿ ಗಿರಾಕಿಗಳೊಡನೆ ಹಣ ಸುಲಿಯುವರೆಂದು. ಪೇಟೆಯ ಸಾಹುಕಾರ ಬಂಧುಗಳೇ ಗ್ರಾಮಸ್ಥರ ವ್ಯಾಪಾರೀ ಧರ್ಮವನ್ನು ನೋಡಿ! ಅವರು ಸಹಜವಾದ ಬೆಲೆಯನ್ನೇ ಹೇಳಿ ಗಿರಾಕಿಗಳನ್ನು ಸಂತೋಷಪಡಿಸಿ ಅವರು ಪುನಃ ತಮ್ಮ ಅಂಗಡಿಗೇನೇ ವ್ಯಾಪಾರಕ್ಕೆ ಬರುವ ತೆರದಲ್ಲಿ ವರ್ತಿಸುತ್ತಾರೆ. ನೀವಾದರೋ, ಒಂದಕ್ಕೆ ಡಬ್ಬಲ್ ಕ್ರಯಹೇಳಿ ಪುನಃ ಆ ಗಿರಾಕಿಗಳು ನಿಮ್ಮ ಅಂಗಡಿಯ ಕಡೆ ಮುಖವೆತ್ತಿ ನೋಡದಂತೆ ವರ್ತಿಸುತ್ತೀರಿ. ಇದು ವ್ಯಾಪಾರಿ ಧರ್ಮವೇ?

೦ ೦ ೦ ೦

ನಾನು ಸ್ನಾನ ಮಾಡಿಕೊಂಡು ನೆಟ್ಟಗೆ ಅಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯ ಕಡೆಗೆ ನಡೆದೆನು. ಶಾಲಾ ಮಂದಿರವು ಸೌಂದರ್ಯಾತಿಶಯದಿಂದ ಶೋಭಿಸುತ್ತಿದ್ದಿತು. ಅದರ ಮುಂಗಡೆಯಲ್ಲಿ ಸುಂದರವಾದ ಹೂದೋಟವು ಕಂಗೊಳಿಸುತ್ತಿದ್ದಿತು, ಶಾಲಾ ಮಂದಿರದ ಶೋಭೆಯನ್ನು ಹೆಚ್ಚಿಸುತ್ತಿದ್ದಿತು. ಅದನ್ನು ನೋಡಿದ ನನಗೆ ನಾನು ಕಲಿತ ನನ್ನ ಹಳೆಯ ಶಾಲೆಯಾದ ಕ್ರಿಶ್ಚಿಯನ್ ಹೈಸ್ಕೂಲಿನ ಮುಂಗಡೆಯಲ್ಲಿರುವ ಹೂದೋಟದ ನೆನಪನ್ನುಂಟುಮಾಡಿತು. ಆಗ ನನ್ನನ್ನು ನೋಡಿದ ಅಧ್ಯಾಪಕ ಬಂಧುಗಳೊಬ್ಬರ ನನ್ನನ್ನು ಅಲ್ಲಿಯ ಕುರ್ಚಿಯ ಮೇಲೆ ಕುಳಿತುಕೊಳ್ಳುವಂತೆ ಹೇಳಿದ ಮೇರೆಗೆ ನಾನು ಮಂಡಿತನಾದೆನು. ಸದ್ಯ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಸಾಕಷ್ಟು ಮಟ್ಟಿಗೆ ಇದ್ದಿತು. ಅಧ್ಯಾಪಕರೂ ಕೂಡ ಯೋಗ್ಯ ರೀತಿಯಲ್ಲಿ ತಮ್ಮ ಕಾರ್ಯವನ್ನು ನೈಯುತ್ತಿದ್ದರು. ಆದರ್ಶನೀಯವೇ ಸರಿ!

ಸಾಯುಂಕಾಲ ನಾನು ಅದೊಂದು ಅಂಗಡಿಯಲ್ಲಿ ಕೂತುಕೊಂಡು ವಾರ್ತಾಪತ್ರಿಕೆಯೊಂದನ್ನು ಓದುತ್ತಲಿದ್ದೆನು. ಆಗ ದೂರದಲ್ಲಿ ಯಾರೋ ಬರುತ್ತಿರುವುದನ್ನು ಕಂಡೆನು. ಹಾಗೂ ಆ ವ್ಯಕ್ತಿಯ ಪರಿಚಯ ಪ್ರಸಂಗವೂ ತಿಳಿಯಿತು. ಆ ಮಹಾಶಯರು ನನ್ನ ಹಳೆಯ ಗೆಳೆಯರಾಗಿದ್ದರು. ಅವರು ಕೆಲ ಸಮಯ ಊಟದ ಸಮಯದಲ್ಲಿದ್ದರು. ಹಾಗೂ ನನಗೂ ಅವರಿಗೂ ಒಳ್ಳೆಯ ಸ್ನೇಹವಿತ್ತು. ನಾನು ನೆನೆಸಿದೆ, ಆ ಮಹಾನುಭಾವರನ್ನು ಕಟ್ಟಿಕೊಂಡು ಬೈಲೂರಿನ ಪ್ರಾಕೃತಿ ಸೌಂದರ್ಯವನ್ನು ನೋಡಿ ಆನಂದಿಸುವೆನೆಂದು. ಎಲ್ಲವೂ ಕನಸಿನೊಳಗೆ ಗಂಡಿರೆಂದಂತಾಯಿತು. ನನ್ನ ಹಳೆಯ ಗೆಳೆಯರು ನನ್ನನ್ನು ನೋಡಿಯೂ ನನ್ನೊಡನೆ ಮಾತನಾಡಲೇ ಇಲ್ಲ. ನಾನಾಗಿಯೇ ಅವರೊಡನೆ ಮಾತಾಡಿದರೆ ಅವರು ಮಾತಾಡುವರೋ, ಇಲ್ಲವೋ ಎಂಬ ಸಂದೇಹ ನನಗೆ. ಒಟ್ಟಾರೆ ನನ್ನ ಗ್ರಹಚಾರವೆನ್ನಬೇಕು. ಆ ಭಾಗ್ಯವು ನನ್ನಲ್ಲಿಲ್ಲದೆ ಹೋಯಿತು. ಮರುದಿನ ನಾನು ಉಡುಪಿಗೆ ಬಂದೆನು. ಇದಿಷ್ಟೆ ನನ್ನ ಸಂಚಾರದಿಂದ ನನಗೆ ದೊರೆತ ಅನುಭವ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ನಕಲಿ ಮದ್ದುಗಳಿಗೆ ಗುರುಯಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ಇಂದಿನ ಅಪ್ರತಿಮ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ,ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ),ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ,ಧಾತುಸ್ರಾವ,ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ,

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N JASANI,** Vithalbhai Patel Road, BOMBAY 4

TEST YOUR EYES

By the Electro Ophthalmoscope



All Varieties of Frames & Lenses.
AT
The Mangalore Trading Association Ltd
Sight Testing Ophthalmic Opticians,
Car Street, MANGALORE

ಶಾಸ್ತ್ರೀಯ ರೀತ್ಯಾ ತಯಾರಿಸಿದ
ಬ್ರೆಡ್ಡ ವ ಬಿಸ್ಕಿಟುಗಳು ಬೇಕಾದರೆ
ಸಿಟಿ ಬಿಸ್ಕಿಟ್ ವರ್ಕ್ಸ್
ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟ
ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನೆಮಾತಾಗಿದೆ ರುಚಿಗೂ ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹು ಆನಂದದಿಂದ ಸವಿಯುವರು. ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ

CITY BISCUIT WORKS,
Flower Market South, Mangalore

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲಿಗೆ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇ

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ
P. O Peridepi (ನೆಲ್ಲೂರು ಜಿ)

'Dil Roz' (Regd)

Dil Roz' is a sure cure for Oriental sores local sores, all kinds of deep-rooted sores skin eruptions, Pimples Eczema, Ringworm Sinus, Fistula auxillary Abscess

There is no need of dressing the wounds, nor are baths prohibited.

Price Rs. 2
Postage extra

TAHIR DIN,
Anarkali, LAHORE.



ಅಮೃತವನ್ನು ಸೇವಿಸಿರಿ.

ನೀವು ಅನಾರೋಗ್ಯದಿಂದ ನಿಮ್ಮನ್ನು ಕಾಪಾಡಿ ಕೊಳ್ಳಬಹುದು ಮತ್ತು ರಾಕ್ಷಸ ಶಕ್ತಿಯನ್ನು ಇದರಿಂದ ಪಡೆಯಬಹುದು

ತಯಾರಿಸುವವರು —
ಕೇಸರಿ ಕುಟೀರಂ, ಎಗ್ಮೋರ್,
ಮದರಾಸು

ಮಂಗಳೂರ ಪ್ರವರ್ತಕರು —
ದಿ. ಪ್ರೊವ್ಯಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

BEHAR CHEMICAL WORKS, BHAGALPUR.

ಗೊನೊಕ್ಯೂರು.

ಕೆಟ್ಟ ಬಂಗಿ ಸಿಕ್ಕ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ರಾಮಬಾಣ ಔಷಧವಾಗಿದೆ ಒಂದೇ ದಿನದ ಔಷಧ ಉಪಯೋಗದಿಂದ ಗುಣ ಕಂಡುಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ—ಧಾತು ದಪ್ಪವಿದ್ದು ಹಳದಿ ಬಣ್ಣವಾಗಿ ಹೋಗುವುದು ಶಕ್ತಿಗ್ರಂಥಿಗಳ ಸಂಬಂಧವಾಗಿ ಆತೀಯಾದ ಗುಳ್ಳೆಗಳು ಬಿಳೋಣ ಮೂತ್ರದಾಗುವಾಗ್ಗೆ ಉರಿಯುವುದು, ಇದರಿಂದ ನಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧ ಸೀಸೆ 1ಕ್ಕೆ ರೂ 2—0—0.

ವ್ಯಾಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ತುಂಬಾ ಉಪಯೋಗಕಾರಿಯಾಗಿವೆ ವಿದ್ಯಾರ್ಥಿಗಳು ತಮ್ಮ ಓದುವಿಕೆಯಲ್ಲಿಯೇ ಆಸಕ್ತರಾಗಿದ್ದು, ವ್ಯಾಯಾಮವನ್ನು ತೆಗೆದುಕೊಳ್ಳದೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಿಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು ಇಂದ್ರಿಯ ಸ್ಖಲನ ಮತ್ತು ಸ್ವಪ್ನಗಳ ದುರ್ಬಲತೆಗೆ ಸಿಲುಕುತ್ತಾರೆ ಅಲ್ಲದೆ ತಮ್ಮ ಹಿರಿಯರ ಕೂಡೆ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣಾವಸ್ಥೆಗೆ ತರುತ್ತಾರೆ, ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಚಟುವಟಿಕೆ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು. ಸೀಸೆ 1ಕ್ಕೆ ರೂ 2-0-0.

ಏಜೆಂಟರು:—ಶ್ಯಾ ಕಂಪೆನಿ,
ಗವರ್ನಮೆಂಟ್ ಕೊಲೀಜ್ ಎದುರು
ಮಂಗಳೂರು.

"An ideal young progressive Life Office of India to Insure with or represent"

The Commonwealth Assurance Co., LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. **ON WHOLE LIFE Rs. 46.**

Next VALUATION YEAR 1937-38.

Join the Agency force on most Liberal Terms, Apply to—

Messrs. GAWANKAR & SONS,

Chief Agents for Mysore state, Coorg, Ceded Districts & S. Kanara
AHMED BUILDINGS, CHICKPET, BANGALORE CITY.

Branches:—Bombay, Calcutta, Delhi, Madras & Nagpur.

Local Representatives:—THE MODERN TRADING CO., Mangalore.

ಸೂತಿಕಾವಾಯು ಅಪಸ್ಮಾರ,
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ದುಃಖಿತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕುದಲ್ಲ ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ಬಡಬಡಿಕೆ ತೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಸೀತ, ಎಚ್ಚರಿಕದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವವು. ಸ್ಮೃತಿ ಇಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು ಶಾಂತಿಯನ್ನು ಕ್ಷಣದಲ್ಲಿ ಪಡೆಯುತ್ತಾನೆ. 10 ದಿನಗಳ ಔಷಧಿ ರೂ. 2-0-0 ಮತ್ತು 30 ದಿನಗಳ ಔಷಧಿ ರೂ. 5, ಅಂಚೆಯು ಬೇರೆಯಾಗಿದೆ.

C. L. Namawala,
Palace Road BARODA

Buy Advertised Goods

ಎಲಿಮೆಂಟರಿ ಶಾಲಾ ಉಪಾಧ್ಯಾಯರ ಭವಿಷ್ಯ

ವಿದ್ಯಾ ಇಲಾಖಾ ಸ್ಪೇತಾರವರ ಭಾಷಣ

ಏಡೆಡ್ ಮತ್ತು ಬೋರ್ಡು ಉಪಾಧ್ಯಾಯರುಗಳಿಗೆ ಸುಧಾರಣೆ

ಕೊಟ್ಟಾಯಂ ತಾಲೂಕಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ರಾದ ಮಿ। ಆರ್. ಎಂ. ಸ್ಪೆತಾಮರು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸ್ಥಾನಮಾನಗಳನ್ನು ಸುಧಾರಿಸಲಿಕ್ಕಾಗಿ ಸರಕಾರವು ಕೈಕೊಳ್ಳಲಿರುವ ಕಾರ್ಯಕ್ರಮ, ಕಾನೂನುಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಅವರ ಭಾಷಣ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ:–

ನಾನು ಇಂದು ಉದ್ದವಾದ ಭಾಷಣವನ್ನು ಮಾಡಲಿಚ್ಛಿಸುವುದಿಲ್ಲ. ಬಹಳ ಸಮಯದಿಂದ ಎಲಿಮೆಂಟರಿ ಶಾಲಾ ಉಪಾಧ್ಯಾಯರು ನರಳುವಂತೆ ಮಾಡಿದ ಅನೇಕಾನೇಕ ಸಂಕಷ್ಟಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸರಕಾರವೂ ಮತ್ತು ನನ್ನ ಇಲಾಖೆಯೂ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸ್ಥಾನಮಾನಗಳನ್ನು ಉತ್ತಮಗೊಳಿಸಲು ಹೃತ್ಪೂರ್ವಕವಾಗಿ ಪ್ರಯತ್ನಿಸಿರುತ್ತಿದೆ ಇನ್ನೂ ಪ್ರಯತ್ನಿಸುತ್ತದೆಂಬುದನ್ನು ಯಾರೂ ಮರೆಯಬಾರದು.

ಅಖಿಲ ಮಲಬಾರ್ ಉಪಾಧ್ಯಾಯರ ಸಮ್ಮೇಳನದಲ್ಲಿ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಕಷ್ಟ ನಿವಾರಣೆಗಾಗಿ ಉಪಾಯಗಳನ್ನು ಹುಡುಕುವ ಯೋಚನೆ ಮಾಡಿದ್ದಾಗಿಯೂ, ಕೆಲವು ಉಗ್ರಗಾಮಿಗಳು ಉಪಾಧ್ಯಾಯರ ಒಂದು ಮುಷ್ಕರವನ್ನು ಏರ್ಪಡಿಸುವ ಯೋಜನೆಯನ್ನು ಕೂಡಾ ಮಾಡಿರುವರಾಗಿ ನಾನು ಕೇಳಿದ್ದೇನೆ ಈ ಸಂದರ್ಭದಲ್ಲಿ ಉಪಾಧ್ಯಾಯರಾದವರು, ಅವರ ವಿಷಯವಾಗಿ ಸರಕಾರವು ಬಹಳ ಸಹಾನುಭೂತಿಯಿಂದಿರುವ ವಿಷಯವನ್ನು ತಿಳಿದಿರಬೇಕು.

ಸರಕಾರವು ಮಾಡಿದ ಎರಡು ಪ್ರಾಮುಖ್ಯ ಸುಧಾರಣೆಗಳಿಗಾಗಿ ನಾವು ಬಹು ಕೃತಜ್ಞರಾಗಿರಬೇಕು. ಅವು ಯಾವುದೆಂದರೆ:–ಹ್ಯಾಯರ್ ಎಲಿಮೆಂಟರಿ ಮತ್ತು ಸೆಕೆಂಡರಿ ಟ್ರೈಂಡ್ ಉಪಾಧ್ಯಾಯರ ಗ್ರೇಂಟನ್ನು ಹೆಚ್ಚಿಸಿದ್ದು ಮತ್ತು ಸುವ್ಯಸ್ತಿತ ಎಲಿಮೆಂಟರಿ ಶಾಲೆಗಳ ಗ್ರೇಂಟನ್ನು ಕಮ್ಮಿಮಾಡಿ ಕೊಡುವ ಅಭ್ಯಾಸವನ್ನು ಸಂಪೂರ್ಣ ತೆಗೆದು ಹಾಕಬೇಕೆಂದೂ ಶಾಲೆಗಳು ಸುವ್ಯವಸ್ಥಿತವಾಗಬೇಕೆಂದು ಒತ್ತಾಯಪಡಿಸುವುದಾದರೂ ಸರಕಾರವು ಟೀಚರ್ ಮೆನೇಜರರುಗಳಿಗೆ ಎಲ್ಲಾ ಸಹಾಯವನ್ನು ಕೊಟ್ಟು, ಪ್ರೋತ್ಸಾಹಿಸುತ್ತದೆ ಈ ಕೆಲವು ಪ್ರಾಮುಖ್ಯ ಸುಧಾರಣೆಗಳನ್ನಲ್ಲದೆ ಸರಕಾರವು ಯಥೇಷ್ಟವಾಗಿ ಶಾಲಾ ಉಪಾಧ್ಯಾಯರಿಗೆ ಒದಗಿರುವ ಅನೇಕ ಸಂಕಷ್ಟಗಳನ್ನು ನಿವಾರಿಸಲೂ ಕಾನೂನನ್ನು ರಚಿಸಲಿದೆ. ಕೆಲಸ ಭದ್ರತೆ, ವೇತನಗಳನ್ನು ಕೊಡುವಾಗ ಉಂಟಾಗುವ ದೀರ್ಘಕಾಲಹೆಂಣ ಪಡೆಯಲಿರುವ ಸಂಬಳದ ಅಭದ್ರತೆ, ಸಿಕ್ಕುವ ಸಂಬಳದಲ್ಲಿ ಕಡಿದ, ಇವೇ ಮುಂತಾದ ದುಷ್ಟ ಕಟ್ಟಲೆಗಳನ್ನು ಹೋಗಲಾಡಿಸಲು ತಕ್ಕ ಕಾನೂನುಗಳಾಗುತ್ತವೆ. ಇದರ ಕುರಿತು ನಾನು ಸರಕಾರಕ್ಕೆ ಸೂಚನೆಯನ್ನು ಕೊಟ್ಟು, ಅನುಮೋದಿಸಲಾಗಿ ಈಗ ಅನುಗುಣವಾದ ಕಾನೂನು ಕ್ರಮಗಳು ರಚನೆಯಾಗುತ್ತಲಿವೆ.

ಉಪಾಧ್ಯಾಯರಿಗೆ ಲೈಸನ್ಸು

ಇನ್ನು ಮುಂದೆ ಏಡೆಡ್ ಶಾಲಾ ಉಪಾಧ್ಯಾಯರಿಗೆ ವಿದ್ಯಾ ಇಲಾಖೆಯಿಂದ ಒಂದು [illegible]

ಸರ್ಟಿಫಿಕೇಟಿಗೂ ಈ ಲ್ಯಾಸನ್ಸಿಗೂ ಯಾವ ಸಂಬಂಧವಿರುವುದಿಲ್ಲ. ಈ ಸರ್ಟಿಫಿಕೇಟಿನ ಮೇಲೆ ಉಪಾಧ್ಯಾಯರ ಕೆಲಸವು ಖಾಯಂ ಅಥವಾ ತಾತ್ಕಾಲಿಕ(ಟೆಂಪರರಿ)ಎಂದು ಕಾಣಿಸಲಾಗುವುದು. ಉಪಾಧ್ಯಾಯನಿಗೆ ಕೊಡಲೊಪ್ಪಿದ ಸಂಬಳದ ಕುರಿತು ಅದರಲ್ಲಿ ಬರೆಯಲ್ಪಡುತ್ತದೆ. ಮೆನೇಜರ ಮತ್ತು ವಿದ್ಯಾ ಇಲಾಖಾ ಅಧಿಕಾರಿಗಳ ಸಹಿಯು ಇವರ ಮೇಲೆ ಹಾಕಲಾಗುವುದು. ಆಗ ಏಡೆಡ್ ಶಾಲಾ ಮೆನೇಜರುಗಳು ಉಪಾಧ್ಯಾಯರ ವೇತನದಲ್ಲಿ ಕಡಿತ ಮಾಡುವಾಗ ಉಪಾಧ್ಯಾಯರಾದವರಿಗೆ ಅದನ್ನು ಪ್ರತಿಪಾದಿಸುವ ಹಕ್ಕು ಬರುತ್ತದೆ ಆ ಮೇಲೆ ಉಪಾಧ್ಯಾಯರು ಮೆನೇಜರರ ಕಡೆಯಿಂದೇನಾದರೂ ಅಕೃತ್ಯ ನಡೆದಲ್ಲಿ ವಿದ್ಯಾ ಇಲಾಖೆಗೆ ಅರ್ಜಿ ಮಾಡಿಕೊಳ್ಳಬಹುದು

ಸರಕಾರದಿಂದ ಅಂಗೀಕೃತವಾದ ಅನೇಕ ಸ್ವತಂತ್ರ ಶಾಲೆಗಳಲ್ಲಿಯೂ, ಸರಕಾರದ ಗ್ರೇಂಟ್ ಸಿಕ್ಕುವ ಏಡೆಡ್ ಶಾಲೆಗಳಲ್ಲಿಯೂ, ವಿದ್ಯಾರ್ಥಿಗಳಿಗೆ ಸಂಬಳವನ್ನು ತೆಗೆದುಕೊಳ್ಳಲಾಗುವುದಿಲ್ಲ; ಇಂತಹ ಶಾಲೆಗಳಲ್ಲಿ ಉಪಾಧ್ಯಾಯರ ವೇತನವಲ್ಲದೆ, ಇತರ ಸಣ್ಣ ಪುಟ್ಟ ಖರ್ಚುಗಳು ಇವೆ ಇದಕ್ಕಾಗಿ ಸರಕಾರದಿಂದ ಆ ಶಾಲೆಗಳಿಗೆ ಸೆಂಕ್ಷನ್ ಆದ ಗ್ರೇಂಟಿನಲ್ಲಿ ಶೇಕಡಾ 10ನ್ನು ಮಾತ್ರ ಈ ತರದ ಖರ್ಚಿಗೆ ಉಪಯೋಗಿಸಬೇಕೆಂದೂ ಉಳಿದ 90ನ್ನು ಉಪಾಧ್ಯಾಯರ ಸಂಬಳಕ್ಕಾಗಿಯೇ ಹಂಚಬೇಕೆಂದೂ ನಿರ್ಬಂಧ ಹಾಕಲಾಗುವುದು ಕೆಲವು ಶಾಲೆಗಳಲ್ಲಿನ ಉಪಾಧ್ಯಾಯರಿಗೆ ಈ ಕ್ರಮದಿಂದ ನಿರ್ಧರಿಸಿದ ವೇತನಕ್ಕಿಂತ ಕಮ್ಮಿ ಸಿಗುವ ಸಂಭವವಿದ್ದರೂ ಕ್ರಮವಾಗಿ ಪ್ರತಿ ತಿಂಗಳಿಗೆ ಯಾವ ಕಡಿತವೂ ಇಲ್ಲದೆ ಸಂಬಳವು ದೊರಕುವ ಅನುಕೂಲತೆಯುಂಟಾಗುತ್ತದೆ ಇದರಿಂದ ಏಡೆಡ್ ಶಾಲಾ ಆಡಳಿತದಲ್ಲಿ ಅನ್ಯಾಯಗಳು ತಪ್ಪುವವು ಉಪಾಧ್ಯಾಯರಿಗೆ ಸರಿಯಾಗಿ ತಿಂಗಳಿಗೆ ಸರಕಾರದ ಗ್ರೇಂಟಿನ ರಾಮಾಶಯಗಿಂತಲೂ ಹೆಚ್ಚಿನ ಸಂಬಳವನ್ನು ಕೊಡುತ್ತಿರುವ ಆಡಳಿತದ ಶಾಲೆಗಳ ಉಪಾಧ್ಯಾಯರಿಗೆ ಈ ಕಾನೂನಿನಿಂದ ಯಾವ ಕಡಿತವೂ ಆಗುವುದಿಲ್ಲ

ನಿರ್ಬಂಧ ಕಾನೂನನ್ನು ರಚಿಸುವಾಗ ಉಪಾಧ್ಯಾಯರ ಸಂಬಳದಲ್ಲಿ ಅನ್ಯಾಯವಾದ ಕಡಿತಗಳಾಗಿರುವ ವಿಷಯವು ಸರಕಾರಕ್ಕೆ ಸರಿಯಾಗಿ ತಿಳಿದಿದೆ. ಈ ಕಾನೂನು ಏಡೆಡ್ ಶಾಲಾ ಉಪಾಧ್ಯಾಯರ ವೇತನವನ್ನು ಹೆಚ್ಚಿಸದೆ ಇರುವುದರಿಂದ ಆಡಳಿತಕ್ಕೆ ಕಡಿತವನ್ನುಂಟುಮಾಡುವ ಸಂದರ್ಭ ಸಿಗಲಾರದು.

ನಿರ್ಧರಿಸಿದ ಸಂಬಳ ಕೊಡಬೇಕು

ಏಡೆಡ್ ಶಾಲಾಡಳಿತವು ಉಪಾಧ್ಯಾಯರಿಗೆ ನಿರ್ಧರಿಸಿದ ಸಂಬಳವನ್ನು ಕೊಡದಿದ್ದಲ್ಲಿ ಶಾಲೆಯ 'ರಿಕಗ್ನಿಶನನ್ನು' ರದ್ದಾಗುವುದು ಇನ್ನು ಮುಂದೆ ಉಪಾಧ್ಯಾಯರುಗಳು ಸಂಬಳ ಕಡಿತವೆಂಬ ಈ ಅನ್ಯಾಯ ಪದ್ಧತಿಗೆ ಬಲಿಬೀಳಬೇಕಾಗಿರುವುದಿಲ್ಲ. ಈ ವಿಷಯಗಳು ಮೆನೇಜರುಗಳ ಅಭಾವವನ್ನು ತಿಳಿಸುವವಾದರೂ ಕೆಲವು ವೇಳೆ ಉಪಾಧ್ಯಾಯರು ಕೂಡಾ ತಮ್ಮ ಕೆಲಸದ ಅಭದ್ರತೆ, ದುಸ್ಥಿತಿಯಿಂದಾಗಿ ಅಸಂಬದ್ಧ ವ್ಯಕ್ತಿಗಳಲ್ಲಿ ಮಗ್ನರಾಗಿರುವುದನ್ನು ಬಿಟ್ಟು, ಆಡಳಿತದೊಂದಿಗೆ ಸಹಕರಿಸಿ, ಸರಕಾರದ ಈ ನವಯೋಜನೆಯನ್ನು ಸಾಂಗಗೊಳಿಸಲು ಪ್ರಯತ್ನಪಡುವರೆಂದು ಆಶಿಸುತ್ತೇನೆ.

ಬೋರ್ಡು ಟೀಚರುಗಳು

ಸರಕಾರವು ಸ್ವತಂತ್ರ ಶಾಲೆಗಳ ವಿಷಯ [illegible]

ರ್ಡು ಉಪಾಧ್ಯಾಯರನ್ನು ದುರ್ಲಕ್ಷಿಸುತ್ತದೆಂದು ತಿಳಕೊಳ್ಳಬಾರದು ಬೋರ್ಡು ಆಡಳಿತೆಯು ಸ್ವತಂತ್ರ ಆಡಳಿತಕ್ಕಿಂತ ಉತ್ತಮವಿರುವುದರಿಂದ ಅದರ ವಿಷಯ ಹೆಚ್ಚು ಸುಧಾರಣೆಗಳ ಅವಶ್ಯಕತೆ ಕಮ್ಮಿ ಆದರೂ ಸಕಾಲದಲ್ಲಿ ಸಂಬಳವು ದೊರಕುವಂತೆ ನಿರ್ಬಂಧವನ್ನು ಬೋರ್ಡು ಆಡಳಿತಗಳ ಮೇಲೂ ಹಾಕಲಾಗುವುದು. ಈ ನಿರ್ಬಂಧವು ಸ್ವತಂತ್ರ ಏಡೆಡ್ ಶಾಲೆಗಳಿಗೂ ಸಂಬಂಧಿಸಿರುತ್ತದೆ.

ಸಹಕಾರಕ್ಕೆ ವಿನಂತಿ

ಭಾಷಣಾಂತ್ಯದಲ್ಲಿ ಸ್ಪೆತಾಮರವರು [illegible] ಧ್ಯಾಯರು ಸಹಕರಿಸಿ, ವಿದ್ಯಾ ಇಲಾಖೆಯ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದೂ ಪ್ರಾಂತ್ಯದಲ್ಲಿನ ಅವಿದ್ಯಾವಂತರನ್ನು ಸುಶಿಕ್ಷಿತರನ್ನಾಗಿ ಮಾಡಿ ದೇಶಸೇವೆ ಮಾಡಬೇಕೆಂದೂ ವಿನಂತಿಸಿಕೊಂಡರು ಭಾಷಣ ಮುಗಿಸುವ ಮುಂಚೆ ಸ್ಪೆತಾಮರು, ಉಪಾಧ್ಯಾಯರಿಗೆ ನ್ಯಾಯವಾಗಿ ಸಲ್ಲಬೇಕಾದ ಅವರ ಸಂಬಳದ ಪ್ರತಿಯೊಂದು ಕಾಸೂ ಅವರವರ ಚೀಲಗಳನ್ನು ಸೇರುವಂತೆ ತನ್ನ ವಿದ್ಯಾ ಇಲಾಖೆಯು ಶ್ರಮವನ್ನು ವಹಿಸಿ ಸಾಧಿಸುತ್ತೆಂಬ ಭರವಸೆಯನ್ನು ಕೊಟ್ಟರು.

ದಕ್ಷಿಣ ಕನ್ನಡ ಜಿಲ್ಲೆಯ

ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶ

ಶಾಲೆಯ ಹೆಸರು	ಪರೀಕ್ಷೆಗೆ ಕೂತವರ ಸಂಖ್ಯೆ	ತೇರ್ಗಡೆ ಹೊಂದಿದವರು	ಶೇಕಡಾ	ಪರೀಕ್ಷೆಗೆ ಕೂತ ಹುಡುಗಿಯರು	ತೇರ್ಗಡೆ ಹೊಂದಿದವರು
ಬಿ. ಇ. ಎಂ. ಹೈಸ್ಕೂಲ್	35	14	40%	3	1
ಕೆನರಾ ಹೈಸ್ಕೂಲ್	101	70	69.9	12	8
ಸೈಂಟ್ ಎಲೋಶಿಯಸ್ ಕಾಲೇಜ್	103	77	74.8		
ಗಣಪತಿ ಹೈಸ್ಕೂಲ್	53	18	34	7	2
ಸೈಂಟ್ ಅನ್ನೆಸ್ ಕಾನ್ವೆಂಟ್	12	11	92		
ಸೈಂಟ್ ಆಗ್ನೆಸ್ ಹೈಸ್ಕೂಲ್	34	30	89		
ಯಹುದುಗಿಯರ ಸಿ. ಟ್ರೈನಿಂಗ್ ಶಾಲೆ	12	10	83		
ಬೋರ್ಡು ಹ್ಯಾಸ್ಕೂಲ್ ಉಡುಪಿ	55	26	38		
ಕ್ರಿಶ್ಚನ್ ಹ್ಯಾಸ್ಕೂಲ್ ಉಡುಪಿ	32	28	87·5		
ಸೆಂಟ್ ಸಿಸಿಲಿಯಾ ಗರ್ಲ್ಸ್‌ಸ್ಕೂಲ್ ಉಡುಪಿ	10	9	90		
ಸೆಂಟ್ ಮಿಲಾಗ್ರಿಸ್ ಹ್ಯಾಸ್ಕೂಲ್ ಕಲ್ಯಾಣಪುರ	21	16	76·19		
ಬೋ. ಹ್ಯಾಸ್ಕೂಲ್ ಕಾಸರಗೋಡು	31	14	45%		
ಬೊ. ಹ್ಯಾಸ್ಕೂಲ್ ಕುಂದಾಪುರ	36	30	83		

The Coronation of their Majesties is now over'
But Remember!
Comfortable *Ideal* *Central*

The Coronation Darbar Restuarant

Boarding & Lodging

Opposite Govt. College, Hampankatta, Mangalore

A Home in the Motherland

Cleanliness and comfort at moderate cost.
A delightful hotel in the centre of the town and nearest to the Rly Station & Bus Station.
Gives best Refreshment & dinner service and modern preparations such as Biryani Fowl Biryani Pulav Khushka, Chops, Cutlets, Roast Bheja Khima, Tomato mutton Roasted Fowl, Omlet, Sambusa, etc. a speciality
Special lodging arrangements to travellers, Students will find all their food requirements
Please Step in Once and Convince Yourself
S B Mohidin, S. M Sayed Ali Saheb (Bhatkal) *Proprietors*

ಕೊರೊನೇಶನ್ ದರ್ಬಾರಿನ ಶುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೊಜಿಂಗ್
ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.
ಸೌಲಭ್ಯ ಸೌಕರ್ಯ ಸುಖದಾಯಕ
ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳು ಸುಲಭ ದರದಲ್ಲಿ ಇನ್ನೆಲ್ಲಿಯೂ ದೊರಕಲಾರದು.
ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸುಗಳಿಗೆ ತೀರಾ ಸಮೀಪವು
ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು
ಮುರ್ಗಿ ಬಿರಿಯಾಣಿ, ಬಿರಿಯಾಣಿ, ಮುರ್ಗಿ ರೋಸ್ಟ್, ಪುಲಾವ್, ಖುಷ್ಕಾ ಚಾಪ್, ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮೊಟೊಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವುವು.
ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದಾವೃತ್ತಿ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ
ಯುಸ್. ಬಿ. ಮೊಹಿದಿನ್,
ಯುಸ್. ಎಮ್. ಸಯ್ಯದ್ ಅಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು



Distributors for South Kanara:—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.
ಆಟೊಮೆಟಿಕ್ ಅಲಾರಂ ಪಿಸ್ತಲ್.

(ಬಂದೂಕು)



ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತಲಿನಂತಿರುವುದು. ಇದರಿಂದ ಹತ್ತು ಸೆಕುಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು. ಇದು ಒಂದು ನಮ್ಮಲ್ಲಿ ಇಟ್ಟರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದವರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತಲ್ ಕೂಡ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲ್ ಹಾಕಿದ ಸ್ಪಾರ್ಕ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತಲು ೧ಕ್ಕೆ ತೋಟೆಗಳ ಸಹಿತ ೭-೮-೦. ಟಪ್ಪಾಲು ಖರ್ಚು ಪ್ರತ್ಯೇಕ.

ಸ್ವಾನ್ ಹೌಸ್,
ನಂ ೩, ಇರುಳಪ್ಪನ ಬೀದಿ, ಮದ್ರಾಸು

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದಿಯನ್ನೂ ಉಂಟುಮಾಡಿ, ನರಗಳ ಪಟ್ಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ದಕ್ಷಿಣ ಕನ್ನಡದ ಏಜಂಟರು — ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರೆ ಒಳ್ಳೆಯ ಪಾತ್ರಗಳು ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಭಾದೆಯು ಇಲ್ಲ

ಅನೇಕ ತರಹ ಮತ್ತು ಪ್ರಮಾಣಗಳವೆ

ಮುಖ್ಯ ಏಜಂಟರು

ಕೆ ರಾಮ ನಾಯಕ್,
ಹಾರ್ಡ್‌ವೇರ್ ಮತ್ತು ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು.

ಆಯುರ್ವೇಧ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ
ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.
ಇವರ
ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ— ಮಕ್ಕಳ ಲಿವರ್ ರೋಗಕ್ಕೆ.
ಗರ್ಭಪಾಲ— ಗರ್ಭಶೂಲೆ, ಗರ್ಭಸ್ರಾವಕ್ಕೆ.
ಚಂದ್ರಮಸ್— ವಾಂತಿಭೇದಿ, ಅತಿಸಾರಕ್ಕೆ.
ಕೃಷ್ಣಾರಕ್— ಶ್ವಾಸಖಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ವೃದ್ಧಿಕಾಸವ— ನಿತ್ರಾಣಕ್ಕೆ.
ಮಹಾಮದನ ಕಾಮೇಶ್ವರಿ ಲೇಹ್ಯ— ನಪುಂಸಕತ್ವ, ಧಾತುಕ್ಷೀಣತೆಗೆ.
ಭುವನಾಂಜನ ಪೈನ್ ಬಾಮ್— ಶಾರೀರಕ ನೋವುಗಳಿಗೆ.
ರಸಬಿಂದು— ಸ್ತ್ರೀ ಸಂಬಂಧ ವ್ಯಾಧಿಗಳಿಗೆ.
ಹಿಮಸಾಗರ ತೈಲ— ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ರೈತರಿಗೆ ರಾಷ್ಟ್ರಪತಿಗಳ ಸಂದೇಶ.

ಸ್ವರಾಜ್ಯ ಸುಖದ ವಿವರಣೆ.

ಕಳೆದ ಚುನಾವಣಾ ಸಂಬಂಧವಾಗಿ ನಮ್ಮ ರಾಷ್ಟ್ರಪತಿಗಳು ನಮ್ಮ ಜಿಲ್ಲೆಯಲ್ಲಿ ಸಂಚರಿಸಿದ್ದಾಗ ಮೂಡಬಿದ್ರೆಯಲ್ಲಿ ಒಕ್ಕಲಿಗರ ಸಹಕಾರ ಸಮಿತಿಯ ಸದಸ್ಯರಾದ ರೈತರು ಅವರಿಗೆ ಸಮರ್ಪಿಸಿದ ಮಾನಪತ್ರಕ್ಕೆ ಉತ್ತರವಾಗಿ ಕೊಟ್ಟ ಭಾಷಣ —

ನನಗೆ ಇಂದು ಕೊಟ್ಟಿರುವ ಮಾನಪತ್ರಗಳ ಪೈಕಿ, ರೈತರ ಮಾನಪತ್ರದಲ್ಲಿ ನಾನು ತುಂಬಾ ಅಭಿರುಚಿಯುಳ್ಳವನಾಗಿದ್ದೇನೆ ಅದರಲ್ಲಿ ಸೂಚಿಸಿರುವ ಅನೇಕ ವಿಷಯಗಳು ಇಲ್ಲಿಗೆ ಮಾತ್ರ ಸಂಬಂಧಿಸಿರದೆ, ಸಮಗ್ರ ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆಗಳಾಗಿವೆ ಭಾರತವು ರೈತರ ದೇಶವೆಂಬುದು ನಿಮಗೆಲ್ಲರಿಗೂ ತಿಳಿದಿರಲಿ. ಭಾರತದ ರೈತರ ಸಮಸ್ಯೆಯೂ, ಅವರ ಕುರಿತು ಏನು ಮಾಡಬೇಕೆಂಬುದೂ ಇಂದು ಮಹತ್ವಾದ ಪ್ರಶ್ನೆಯಾಗಿ ನಮ್ಮೆದುರು ನಿಂತಿರುವುದು. ಅವರ ಭಯಂಕರ ಸಂಕಷ್ಟ ಮತ್ತು ದಾರಿದ್ರ್ಯಗಳನ್ನು ನಿವಾರಿಸುವುದೆಂತು? ಈ ಕುರಿತು ಯೋಚಿಸಿದೊಡನೆಯೇ ರೈತರ ಪ್ರಶ್ನೆಯು ಈ ಸ್ಥಳಕ್ಕೆ ಮಾತ್ರ ಸಂಬಂಧಪಟ್ಟುದಲ್ಲ, ಅದು ಸಮಗ್ರ ಭಾರತದ ಒಂದು ಪ್ರಾಮುಖ್ಯ ಪ್ರಶ್ನೆಯೆಂಬುದು ನಿಮಗೆ ತಿಳಿದಿರಬಹುದು ರೈತರು ಅತ್ಯಂತ ಹೀನಸ್ಥಿತಿಯಲ್ಲಿರುವರೆಂದು ನೀವು ಹೇಳುವುದು ಅಕ್ಷರಶಃ ಸತ್ಯವಾಗಿದೆ. ಇಂಡಿಯಾ ಗವರ್ನ್‌ಮೆಂಟಿನ ಮತ್ತು ಅದರ ಆಳ್ವಿಕೆಯ ಮಹತ್ವಾದ ಹೊರೆಯು ರೈತರ ಮೇಲೆ ಹೊರಿಸಲ್ಪಟ್ಟಿದೆ ಆದರೆ, ನಿಮ್ಮಂತೆಯೆ ಭಾರತೀಯ ಜನತೆಯ ಇನ್ನಿತರ ಜನರು ಕೂಡಾ ಈ ಹೊರೆಯನ್ನು ಹೊತ್ತಿರುವರು ಮಾತ್ರವಲ್ಲದೆ, ಅದರಿಂದುಂಟಾದ ದಾರಿದ್ರ್ಯಕ್ಕೆ ತುತ್ತಾಗಿರುವರೆಂದೂ ನಿಮಗೆ ತಿಳಿದಿರಲಿ ಹೀಗೆ ಈ ದಾರಿದ್ರ್ಯದ ಪ್ರಶ್ನೆಯು ಎಲ್ಲಾ ಭಾರತೀಯರಿಗೆ ಸಂಬಂಧಪಟ್ಟದ್ದಾಗಿರುತ್ತದೆ ಧನಿಕರಾದ ಹಲಕೆಲವು ಜನರನ್ನು ಬಿಟ್ಟು ನೋಡುವುದಿದ್ದರೆ ಈ ಕಠಿಣ ದಾರಿದ್ರ್ಯವನ್ನು ತೊಲಗಿಸಲಾಗುವುದಿಲ್ಲವೋ ಅಲ್ಲಿಯ ತನಕ ನಮಗಾವ ಯೋಗ್ಯ ಕೆಲಸಗಳನ್ನು ಮಾಡುವರೆ ಸಾಧ್ಯವಿಲ್ಲ

ನಿಮ್ಮೀ ಸ್ವಾಗತ ಪತ್ರದಲ್ಲಿ ಕಾಂಗ್ರೆಸು ಸಾಮೂಹಿಕ ಸಂಬಂಧವನ್ನು ಕೂಡಿ ದಾರಿದ್ರ್ಯವನ್ನು ನಿವಾರಿಸಲು ಪ್ರಯತ್ನಿಸುತ್ತಿದೆ ಎಂದು ಸೂಚಿಸಿರುವಿರಿ. ಆದರೆ, ಸಾಮೂಹಿಕ ಸಂಬಂಧ, ದಾರಿದ್ರ್ಯ ನಿವಾರಣೆಯ ಪ್ರಶ್ನೆ, ಇವೆರಡೂ ಪ್ರತ್ಯೇಕವಾಗಿವೆ ಸಾಮೂಹಿಕ ಸಂಬಂಧವೆಂದರೆ, ನಿಮ್ಮೊಡನೆ ನೈಜಸಂಬಂಧವನ್ನು ಬೆಳೆಸಿ ಮತ್ತು ಅದು ಅರಿಸಿಕೊಳ್ಳುವ ವಿಧಾನವನ್ನು ನಿಮ್ಮ ಸಹಾಯದಿಂದ ಕಾರ್ಯರೂಪಕ್ಕೆ ತರಬೇಕೆಂಬುದಾಗಿದೆ ಅದರ ಕುರಿತು ನನ್ನ ಸಂಪೂರ್ಣ ಸಹಾನುಭೂತಿಯಿರುವುದಲ್ಲದೆ, ಕಾಂಗ್ರೆಸು ಕೂಡಾ ಅದೇ ಅಭಿಪ್ರಾಯದಿಂದದು ಅದನ್ನು ಕಾರ್ಯರೂಪಕ್ಕೆ ತರಬೇಕೆನ್ನುತ್ತಿದೆ. ಆದರೆ ದಾರಿದ್ರ್ಯವನ್ನು ನಿವಾರಿಸಲು ಯತ್ನಿಸಬೇಕೆನ್ನುವಾಗ ನಾವು ಬೇರೆಯೇ ವಿಚಾರದ ಕುರಿತು ಮಾತನಾಡುತ್ತೇವೆ. ನಾವು ದಾರಿದ್ರ್ಯ ನಿವಾರಣೆಯ ಹಂಚಿಕೆಯನ್ನು ಮಾಡಬೇಕಾದರೆ, ಅದನ್ನು ಕಾರ್ಯರಂಗಕ್ಕೆ ತರುವ ಶಕ್ತಿಯು ನಮ್ಮಲ್ಲಿರಬೇಕು ನಮ್ಮ ಆಶೆಯನ್ನು ಪರಿಪೂರ್ಣಗೊಳಿಸಲು ನಮ್ಮಲ್ಲಿ ಸಾಮರ್ಥ್ಯವಿರಬೇಕು. ಆ ಸಾಮರ್ಥ್ಯವು ನಮಗೆ ಲಭ್ಯವಾದಾಗ, ನಾವು ಖಂಡಿತವಾಗಿಯೂ ನಮ್ಮ ಆಶೆಗಳ ಪರಿಪೂರ್ಣತೆಗಾಗಿ ಹೋರಾಡಲನುವಾಗುವುದಲ್ಲದೆ, ಅದನ್ನು ನಾವು ಹೊಂದಲೇಬೇಕು. ಇಂದು ನಮ್ಮಲ್ಲಿ ಆ ಸಾಮರ್ಥ್ಯವು ಇಲ್ಲ. ಆದುದರಿಂದ ನೀವು ಆ ಸಾಮರ್ಥ್ಯವನ್ನು ಸಂಪಾದಿಸಬೇಕು. ನಮ್ಮ ದಾರಿಯಲ್ಲಿ ಎರಡು ತೊಡಕುಗಳಿವೆ ನಮ್ಮನ್ನಾಳುವವರು ನಮ್ಮ ಸ್ವಾತಂತ್ರ್ಯಪಥದಲ್ಲಿ ಕಲ್ಲುಮುಳ್ಳುಗಳನ್ನು ಹಾಕಿರುವರು. ತಮ್ಮ ಕಾನೂನುಗಳೆಂಬ ಹಳ್ಳಿಗಳು ನಮ್ಮ ದಾರಿಯಲ್ಲಿ ಮಾಡಲ್ಪಟ್ಟಿವೆ.

ಆದುದರಿಂದ ನಮ್ಮ ದಾರಿದ್ರ್ಯ ಕಷ್ಟಪರಂಪರೆಯನ್ನು ನಿವಾರಿಸಬೇಕಾದರೆ, ನಾವು ಸರಕಾರದವರು ಉಂಟುಮಾಡಿರುವ ಆ ಹಳ್ಳ, ಗೋಡೆ, ಮುಳ್ಳು, ಕಾನೂನು ಮತ್ತು ಹಂಚಿಕೆಗಳನ್ನು ನಿವಾರಿಸಬೇಕು. ಬ್ರಿಟಿಷ ಗವರ್ನ್‌ಮೆಂಟು ಕೈವಶವಾದಿರುವ ಆ ಶಕ್ತಿಯನ್ನು ನಾವು ನಮ್ಮ ಜನರ ಕೈವಶವಾಗುವಂತೆ ಪ್ರಯತ್ನಮಾಡಬೇಕು ಅದುವೇ ಇಂದಿನ ಸ್ವರಾಜ್ಯದ ಸಮಸ್ಯೆ. ಇಂದು ಈ ದೇಶದಲ್ಲಿರುವ ಪ್ರತಿಯೊಂದು ಕಾರ್ಯಗಳು, ಜ್ಯಾರಿಗೆ ತರುವ ಕಾನೂನು ಮೊದಲಾದುವುಗಳೆಲ್ಲವೂ ನಿಮ್ಮೊಡನೆ ಕೇಳದೆ, ನಿಮ್ಮ ಸಹಕಾರವನ್ನು ಅಲ್ಲಗಳೆದು ಮಾಡಲ್ಪಡುತ್ತಿವೆ ಯಾವ ಕಾನೂನನ್ನು ಮಾಡಬೇಕೆಂದು, ಯಾವ ನೌಕರರನ್ನು ನೇಮಿಸಬೇಕೆಂದು ಕೇಳಲ್ಪಡುವುದಿಲ್ಲ ಕಾನೂನುಗಳು, ನೌಕರರ ನೇಮಕ ಇವುಗಳೆಲ್ಲವೂ ನಿಮ್ಮನ್ನು ಲಕ್ಷಿಸದೆ ಮಾಡಲ್ಪಡುತ್ತಿದೆ ಅಂತಹ ಕಾನೂನುಗಳು ನಿಮಗೆ ಬೇಕಿರಲಿ, ಬೇಡವಾಗಿರಲಿ, ನೀವು ಅವುಗಳಿಗೆ ತಲೆಬಾಗಲೇ ಬೇಕು ಇಲ್ಲದಿದ್ದರೆ ಅದರಿಂದುಂಟಾಗುವ ಉಪದ್ರಕ್ಕೊಳಗಾಗಬೇಕು ಪೋಲೀಸರು ನಿಮ್ಮ ಬಳಿ ಬರುವರು. ಮಾತ್ರವಲ್ಲ, ನೀವು ಸೆರೆಹಿಡಿಯಲ್ಪಟ್ಟು ಶಿಕ್ಷಿಸಲ್ಪಡುವಿರಿ, ಇಂಥ ಕಾನೂನುಗಳಿಂದ ನೀವು ಹೆದರಿಬಿಡುವಿರಿ ಮತ್ತು ನಿಮಗೆ ಸಮಾಧಾನವಿಲ್ಲದವುಗಳಾದರೂ ಅವುಗಳಿಗೆ ತಲೆಬಾಗಬೇಕೆಂದೇ ಅಭಿಪ್ರಾಯಪಡುವಿರಿ ಇಂದು ನೀವು ಆಳಲ್ಪಡುವ ರೀತಿಯೇ ಹೀಗಾಗಿದೆ ಆದುದರಿಂದ ನಮ್ಮ ದಾರಿದ್ರ್ಯವನ್ನು ನಾವು ನಿವಾರಿಸಬೇಕಾದರೆ ಏನ ಮಾಡಬೇಕು? ಎಷ್ಟರ ತನಕ ಈಗಿನ ಸರಕಾರೀ ವಿಧಾನವು ನಮ್ಮ ಮೇಲೆ ತನ್ನ ದರ್ಪವನ್ನು ತೋರಿ, ಅದರ ಅಭಿಪ್ರಾಯವನ್ನು ಹೇರಿ, ನಮ್ಮ ಹಿತಗಳನ್ನು ಲಕ್ಷಿಸದೆ ಅದರ ನೌಕರರ, ಅದರ ಹಿತೈಷಿಗಳಾದ ಧನಾಢ್ಯರ, ಜಮೀನ್ದಾರರ, ಉದ್ಯೋಗಿಕರ ಹಿತಕ್ಕಾಗಿ ಹೋರಾಡುತ್ತಿರುವುದೋ, ಅಷ್ಟರ ತನಕ ನಾವು ನಮ್ಮ ದಾರಿದ್ರ್ಯವನ್ನು ಹೋಗಲಾಡಿಸುವುದೆಂತು? ಇಂದು ಸರಕಾರವು ಭಾರತದ ಬಡಜನರಿಗಾಗಿ ನಡೆಸಲ್ಪಡುವುದಿಲ್ಲ. ಅದರೆ ನಮ್ಮ ದೇಶದ ಬಡವರ ಎದೆಯ ಮೇಲೆ ಕುಳಿತು ಆನಂದಿಸುತ್ತಿರುವ ಚಿಕ್ಕದೊಂದು ಪಂಗಡಕ್ಕಾಗಿ ನಡೆಸಲ್ಪಡುತ್ತಿದೆ ಆದುದರಿಂದ ನಮ್ಮ ಹೊರೆಯನ್ನು ಹೋಗಲಾಡಿಸಬೇಕಾದರೆ, ನಾವು ಆ ಸರಕಾರವನ್ನು ಹೋಗಲಾಡಿಸುವಷ್ಟು ಸಾಮರ್ಥ್ಯವುಳ್ಳವರಾಗಬೇಕು ಆ ಸಾಮರ್ಥ್ಯವೆಂದರೆ ಸರಕಾರದ ಶಕ್ತಿಯು ಬಡವರ ಕೈಗೆ ಬರುವಂತೆ ಹುದು ಸ್ವರಾಜ್ಯದ ಪ್ರಶ್ನೆಯೆಂದರೆ ಇದೇ. ಆದ್ದುದರಿಂದ ನಾವೆಲ್ಲರೂ ಆ ಸ್ವರಾಜ್ಯಶಕ್ತಿಯು ಜನರ ಕೈಗೆ ಬರುವಂತೆ ಯತ್ನಿಸಬೇಕು. ಆಗ ತಾನೇ ನಮ್ಮೆಲ್ಲರ ಮೇಲೆ ಹೊರಿಸಲ್ಪಟ್ಟಿರುವ ಆ ಹೊರೆಯನ್ನು ಕಿತ್ತೊಗೆಯಲು ಸಾಧ್ಯವಾಗುವುದು. ದಾರಿದ್ರ್ಯದ ದವಡೆಯಿಂದ ತಪ್ಪಿಸಲು ಶಕ್ಯವಾಗುವುದು. ಸ್ವರಾಜ್ಯವೆಂದರೆ ಆ ದೊಡ್ಡ ಭಾರತೀಯ ನೌಕರರು ಇಂಗ್ಲಿಷ್ ನೌಕರರ ಸ್ಥಾನಕ್ಕೆ ಬಂದು ಆನಂದಿಸುವಾಗ ನಿಮ್ಮ ಸ್ಥಿತಿಯು ಹೀಗೆಯೇ ಇರುವಂತಹದಲ್ಲ ಅದು ಅಂತಹ ಜನರಿಗೆ ಸಿಗುವ ಸ್ವರಾಜ್ಯವಲ್ಲದೆ, ನಿಮಗೆ ಸಿಗುವಂತಹದಲ್ಲ. ಸ್ವರಾಜ್ಯವೆಂದರೆ, ಭಾರತೀಯರು ಈ ದೇಶದಲ್ಲಿ ವಾಸಿಸುತ್ತಿರುವ ಲಕ್ಷೋಪಲಕ್ಷ ಜನರು ಜಾತಿಮತ ಭೇದಗಳ ವ್ಯತ್ಯಾಸವಿಲ್ಲದೆ ಎಲ್ಲರೂ ಸ್ವರಾಜ್ಯದಲ್ಲಿ ಪಾಲುಗಾರರಾಗಿ, ಸ್ವರಾಜ್ಯ ಮತ್ತು ಸರಕಾರವನ್ನು ಅವರೆಲ್ಲರೂ ಹತೋಟಿಯಲ್ಲಿಡುವಂತಾಗಿ, ಈ ದೇಶದ ಸರಕಾರವು ಜನರ ಅಭಿಪ್ರಾಯಕ್ಕನುಸಾರವಾಗಿ ನಡೆಸಲ್ಪಡುವುದು. ನಮಗೆ ಬೇಕಾಗಿರುವ ಸರಕಾರವೆಂದರೆ ಎಲ್ಲಾ ಜನರ ಸರಕಾರ; ಅಲ್ಲದೆ ಹಲಕೆಲವು ಜನರ ಸರಕಾರವಲ್ಲ. ಈ ಸರಕಾರದಲ್ಲಿ, ಈ ಮಹಾರಾಷ್ಟ್ರದ ಸಕಲ ಜನರು ಸಮಭಾಗ ವಹಿಸುವವರಾಗಬೇಕು. ಯಾಕೆಂದರೆ, ಯಾರೊಬ್ಬನೂ ಅದರ ಹೊರಗಿದ್ದು ಒಂದು ಪ್ರತ್ಯೇಕ ಪಂಗಡದ ಸೂರೆಗೊಳಗಾಗಬಾರದು ಆದುದರಿಂದಲೇ ಈ ಸ್ವರಾಜ್ಯವು ಎಲ್ಲಾ ಜನರ ಸ್ವರಾಜ್ಯವಾಗಬೇಕಾಗಿದೆನ್ನುವುದು ಸರಕಾರದ ಶಕ್ತಿಯು ನಿಮ್ಮ ಕೈಗೆ ಬರುವುದೊಂದೇ ತಡ; ಆಗ ನಿಮಗೆ ಬೇಕಾದ ಕಾನೂನನ್ನು ನೀವೇ ಮಾಡಬಹುದು. ನಿಮಗೆ ಬೇಕಾದ ನವುಕರರನ್ನು ನೀವೇ ನೇಮಿಸಬಹುದು ಅವರು ಸರಿಯಾಗಿ ವರ್ತಿಸದಿದ್ದಲ್ಲಿ ಅವರನ್ನು ತೆಗೆದುಹಾಕಿ ಯೋಗ್ಯರಾದವರನ್ನು ನೇಮಿಸಬಹುದು ಆಗ ಶಕ್ತಿಯು ನಿಮ್ಮ ಕೈಗೆ ಬರುವುದಲ್ಲದೆ, ನಿಮ್ಮ ಸಂಕಷ್ಟಗಳ ನಿವಾರಣೆಗೆ ನೀವೇನು ಮಾಡಬೇಕೋ ಹಾಗೆಯೇ ಮಾಡಬಹುದು ದಾರಿದ್ರ್ಯದ ದವಡೆಯಿಂದ ದೂರವಾಗಬಹುದು ಆಗ ಯಾರಿಗೂ ಹೆದರದೆ ನಿಮ್ಮ ಹೊರೆಯನ್ನು ಹೋಗಲಾಡಿಸಬಹುದು. ಜನತೆಯ ಇಂಥ ಸ್ವರಾಜ್ಯಕ್ಕಾಗಿಯೇ ಭಾರತ ರಾಷ್ಟ್ರಸಭೆಯವರಾದ ನಾವು ಇಂದು ದುಡಿದು ಹೋರಾಡುತ್ತಿರುವುದು ಆದುದರಿಂದ ನೀವು ಈ ಕಾಂಗ್ರೆಸ್ಸನ್ನೇ ಬೆಂಬಲಿಸಿಯಬೇಕು ಈ ಸ್ವರಾಜ್ಯಕ್ಕಾಗಿ ಹೋರಾಡಬೇಕೆಂದಿದ್ದರೆ ಅದರ ಶಕ್ತಿಯನ್ನು ಹೆಚ್ಚಿಸಬೇಕು ಯಾಕೆಂದರೆ, ಏಕಾಂಗಿಗಳಾಗಿ, ತಂಡಗಳಾಗಿ ನಮಗೆ ಹೋರಾಡಲು ಶಕ್ಯವಿಲ್ಲ ನಾವು ಅಖಿಲ ಭಾರತ ರಾಷ್ಟ್ರ ಸಭೆಯಂಥ ವ್ಯವಸ್ಥಿತ ಸಂಸ್ಥೆಯೊಡನೆ ಕೂಡಿ ಹೋರಾಡಬೇಕು ನಿಮ್ಮಲ್ಲಿಂದು ರೈತರ ಕೂಟವಿದೆಯೆಂಬುದನ್ನು ತಿಳಿಯಲು ತುಂಬಾ ಆನಂದವಾಗುತ್ತಿದೆ. ರೈತರೆಲ್ಲರೂ ಒಂದಾಗಬೇಕು. ಆದರೆ, ಅವರು ಸಮಗ್ರ ದೇಶದಲ್ಲಿ ಹಬ್ಬಿರುವ ಈ ಕಾಂಗ್ರೆಸ್ಸಿಗೆ ಸಂಬಂಧಪಟ್ಟವರಾಗಿರಬೇಕು. ಸ್ವರಾಜ್ಯಕ್ಕಾಗಿ ನಡೆಯುತ್ತಿರುವ ಈ ರಾಷ್ಟ್ರೀಯ ಹೋರಾಟದಲ್ಲಿ ನಿಮ್ಮಲ್ಲಿಯ ಪ್ರತಿಯೊಬ್ಬರೂ ಭಾಗವಹಿಸಬೇಕು ನೀವು ಹೀಗೇಕೆ ಹೋರಾಡಬೇಕು? ನಿಮ್ಮ ಪ್ರತಿಯೊಂದು ಗ್ರಾಮಗಳಲ್ಲಿಯೂ ಕಾಂಗ್ರೆಸ್ಸಿನ ಶಾಖಾ ಸಮಿತಿಗಳಿರಬೇಕು? ಏಕೆ ಅಂದರೆ, ಆಗ ತಾನೇ ನೀವು ಈ ಮಹಾ ಸಂಸ್ಥೆಯಾದ ಕಾಂಗ್ರೆಸ್ಸಿನೊಡನೆ ನಿಮ್ಮ ಸಂಬಂಧವನ್ನು ಬೆಳೆಸಬಹುದು. ಆಗ ತಾನೇ ನಿಮ್ಮ ಕಷ್ಟಸಂಕಷ್ಟಗಳು ನಮಗೆ ತಿಳಿಯಬಹುದು ಅಲ್ಲದೆ ನಿಮಗೆ ಲೋಕದ ಇನ್ನಿತರ ಭಾಗಗಳಲ್ಲಿ ಏನು ನಡೆಯುತ್ತಿದೆಯೆಂಬುದನ್ನು ತಿಳಿಯಬಹುದಲ್ಲದೆ, ನಾವು ಪರಸ್ಪರ ಮಾತನಾಡಿಕೊಂಡು ನಮ್ಮ ಕಾರ್ಯವಿಧಾನವನ್ನು ನಿಶ್ಚೈಸಬಹುದು. ನಾವು ಈ ರೀತಿಯಲ್ಲಿಯೇ ಕೆಲಸಮಾಡೋಣ. ನಾವು ರೈತರನ್ನೂ ಅಂತು ಜನರನ್ನೂ ಒಟ್ಟುಗೂಡಿಸಲು ಯತ್ನಿಸುತ್ತಿರುವದಲ್ಲದೆ, ಕಾಂಗ್ರೆಸ್ ಮಹತ್ವಾದ ಸಾಮರ್ಥ್ಯವುಳ್ಳ ಸಂಸ್ಥೆಯಾಗಬೇಕೆಂದು ಆಶಿಸುತ್ತೇನೆ ಕಾಂಗ್ರೆಸ್ಸನ್ನು ಇನ್ನಷ್ಟು ಮಹತ್ವಾದ ಸಾಮರ್ಥ್ಯವುಳ್ಳ ಸಂಸ್ಥೆಯನ್ನಾಗಿ ಮಾಡಿ, ಸಾಮೂಹಿಕ ಸಂಬಂಧವನ್ನು ಚೆನ್ನಾಗಿ ಬೆಳೆಸಬೇಕೆಂಬ ಬಲವಾದ ಆಶೆಯು ನಮ್ಮಲ್ಲಿದೆ ನಾವು ಏನನ್ನು ಮಾಡುತ್ತೇವೋ ಅವೆಲ್ಲವನ್ನೂ ನಿಮ್ಮೊಡನೆ ಕೇಳಿದ ಬಳಿಕ ಮಾಡಲ್ಪಡುವುದು. ಆಗ ತಾನೇ ಜನತೆಯ ವ್ಯವಸ್ಥಿತ ಶಕ್ತಿಯು ಬೆಂಬಲವು ದೊರಕಿದಂತಾಗುವುದು ಈ ದೊಡ್ಡ ಕೆಲಸದಲ್ಲಿ, ನಮ್ಮ ಭಯಂಕರ ದಾರಿದ್ರ್ಯ ಮತ್ತು ಹೀನ ದಾಸ್ಯತೆಯ ನಿವಾರಣೆಯ ಯತ್ನದಲ್ಲಿ ನಾವೆಲ್ಲರೂ ಒಟ್ಟುಗೂಡಿ ರಾಷ್ಟ್ರಸಭೆಯ ಮೂಲಕ ಹೋರಾಡಬೇಕು. ಏಕೆಂದರೆ, ನಮ್ಮ ದೇಶದಲ್ಲಿ ವ್ಯವಸ್ಥಿತ ಸಂಸ್ಥೆಯೆಂದರೆ ಅದೊಂದೇ ಅದಕ್ಕೆ ಮಾತ್ರ ನಮ್ಮ ಧ್ಯೇಯವನ್ನು ಸಂಪಾದಿಸಲು ಶಕ್ಯವಿದೆ. ಆದುದರಿಂದ ನಾವು ಕಾಂಗ್ರೆಸ್ಸಿಗೆ ಸೇರಬೇಕು ಈ ಸ್ವರಾಜ್ಯ ಸಮರವು ನಮ್ಮ ದೇಶದ ಎಲ್ಲೆಡೆಗಳಲ್ಲಿಯೂ ಹಬ್ಬಬೇಕು ಕೊನೆಯದಾಗಿ ನೀವೆಲ್ಲರೂ ಮುಂದಿ ಮಹಾಹೋರಾಟಕ್ಕೆ ತಯಾರಾಗಬೇಕು ಪ್ರತಿಯೊಂದು ಗ್ರಾಮಗಳಲ್ಲಿಯೂ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಿ, ನಿಮ್ಮ ಸಂಘಟಿತ ಶಕ್ತಿಯನ್ನು ಹೆಚ್ಚಿಸಬೇಕು

ಮಾಂತ್ರಿಕ ಪೆಟ್ಟಿ.

ಅಮೇರಿಕದಲ್ಲಿ ಆರೆಂಜ್ ಪ್ರಸ್ಟೇಟಿನ ಲೇವಿಸ್ಮಿತ್ ಎಂಬೂರಲ್ಲಿ, ಒಂದು ಕೋಳಿಯು ೩½ ಇಂಚು ಉದ್ದವೂ, ೨½ ಇಂಚು ಅಗಲವೂ ಇದ್ದ, ಒಂದು ಮೊಟ್ಟೆಯನ್ನಿಟ್ಟಿರುವುದು ಅಷ್ಟು ಗಾತ್ರದ ಮೊಟ್ಟೆಯನ್ನು ಎಂದೂ ಕಾಣದ ಜನರು ಮೊಟ್ಟೆಯೊಳಗೆ ಏನೋ ಮೋಡಿ ಮಂತ್ರವಿರಬೇಕೆಂದು ನೆನಸಿ ಅದನ್ನು ಮುಟ್ಟಲು ಅಂಜುವರು

ಕಾಲುಬೇನೆಗಳೂ, ಹುಣ್ಣುಗಳೂ ಇಂದ್ರಜಾಲದಂತೆ ಗುಣಹೊಂದುವವು.
ಜಾಂಬಕು ಎಂದೂ ಕಲೆಗಳನ್ನುಳಿಸುವುದಿಲ್ಲ.

ಬಹಳ ಹೊತ್ತು ನಿಂತು ಕೆಲಸಮಾಡುವುದರಿಂದಲೂ ಕಾಲಿಗೆ ಘರ್ಷಣವಾದರೂ ಉಂಟಾಗುವ ಬೇನೆಗಳೂ, ಹುಣ್ಣುಗಳೂ, ಉಂಟಾಗುತ್ತವೆ ಇವು ಬಹಳವಾದ ವೇದನೆಯನ್ನೂ ತುರಿಸುವಿಕೆಯನ್ನೂ ಉಂಟುಮಾಡುವವು ಇಂತಹ ವೇದನೆಗಳಿಗೆ ಜಾಂಬಕ್ಕೇ ತಕ್ಕ ಔಷಧಿಯೆಂದು ಸಾರಲ್ಪಟ್ಟಿರುತ್ತದೆ

ಈ ಅಮೃತ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಔಷಧಿಯು ನೋವನ್ನು ಹೋಗಲಾಡಿಸಿ ಊತವನ್ನು ಕಡಿಮೆಮಾಡಿ ಕಲೆಗಳುಳಿಯದಂತೆ ಗುಣಪಡಿಸುತ್ತದೆ. ಬಿರುಸಾದ ತುರಿಸುವಿಕೆಗೂ, ತುರಿಕಜ್ಜಿಗೂ, ಗಾಯ, ಸುಟ್ಟಗಾಯ ಮತ್ತು ಕಾಲುವ್ಯಾಧಿಗಳಿಗೂ ಇದು ಸಮಾನ ಕೌಶಲವನ್ನುಂಟುಮಾಡುವ ಗುಣಕಾರಿಯಾಗಿರುತ್ತದೆ.

ಎಲ್ಲಾ ಔಷಧಿವ್ಯಾಪಾರಸ್ಥರು ಜಾಂಬಕನ್ನು ರೂ. 1 ಮತ್ತು ರೂ. 2-4-0ರಂತೆ ಮಾರಾಟಮಾಡುತ್ತಾರೆ.

ಜಾಂಬಕ್
Zam Buk

ಏಜಂಟರು.—ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ. ಮದ್ರಾಸು

ಅನುಕ್ರಮಣಿಕೆ

ಸಂಪಾದಕೀಯ

ಸ್ವಾತಂತ್ರ್ಯಾಭಿಪ್ರಾಯಗಳ

ಯಾದಿಂದ ದೊರೆತ ಅನುಭವ

ಅಮೆರಿಕಾ ಶಾಲಾ ಉಪಾಧ್ಯಾಯರ ಅವಿಷ್ಕಾರ ... ೬

ಗ್ರಹಿಕೆ

ಕ್ಷಕರ ಸಂಕಷ್ಟ ನಿವಾರಣೆ ... ೧೦

ಸ್ಫುಟವಿಚಾರಗಳು ೮

ರ್ತಮಾನ ಸಂಗ್ರಹ

ತಂಗಿ ರಾಷ್ಟ್ರಪತಿಗಳ ಸಂದೇಶ ... ೮

ವಿವಿಧ ಸಮಾಚಾರಗಳು ... ೧೧

ಮಂಗಳೂರು ಸಮಾಚಾರ ... ೧೪

ತಾಲೂಕುಗಳಿಂದ ... ೧೧

ಮುಗಿ ತಿಳಿದಿರುವುದೇ ... ೧೬

ಟುಗಳ ಬೆಲೆಗಾರ ... ೧೩

ತಾ. ೧೧ನೇ ಶುಕ್ರವಾರ ಜೂನ್ ೧೯೩೭

ಸ್ವದೇಶಾಭಿಮಾನಿ

ಶಿಕ್ಷಕರ ಸಂಕಷ್ಟ ನಿವಾರಣೆ

ಕಳೆದ ವಾರ ಮಲಬಾರಿನಲ್ಲಿ ಪ್ರಾಥಮಿಕ ಶಿಕ್ಷಕರ ಪರಿಷತ್ತು ಜರಗಿತು ಆಗ ಅಲ್ಲಿ ವಿದ್ಯಾ ಇಲಾಖಾ ಡೈರೆಕ್ಟರರೇ ಹಾಜರಿದ್ದರು ಶಿಕ್ಷಕರ ನೋಕರಿ ತಲಬು ಮೊದಲಾದುವನ್ನು ಕುರಿತಾಗಿ ಹಲವು ವರ್ಷಗಳಿಂದಲೂ ನಡೆಯುತ್ತಿದ್ದ ಚರ್ಚೆ ಆಕ್ಷೇಪ ದೂರು ಮೊದಲಾದುವನ್ನು ಈ ಸಭೆಯಲ್ಲಿ ಉಪಾಧ್ಯಾಯರಾರೂ ನಿವೇದಿಸಿಕೊಳ್ಳದಿದ್ದರೂ, ಇದುವರೆಗೆ ಉಪಾಧ್ಯಾಯರ ಸಂಕಷ್ಟಗಳನ್ನು ಪ್ರತ್ಯಕ್ಷವಾಗಿ ತಿಳಿದು ವಿಮರ್ಶಿಸದ ಡೈರೆಕ್ಟರರೇ ತಾವಾಗಿ ಅವನ್ನು ಕುರಿತು ಸರಕಾರದ ನಿರ್ಧಾರವು ಹೇಗಿದೆ ಎಂಬುದನ್ನು ಹೊರಗೆಡವಿ ಉಪಕಾರ ಮಾಡಿರುವರು

ಸರಕಾರವು ಉಪಾಧ್ಯಾಯರ ಕಷ್ಟನಿವಾರಣೆಗಾಗಿ ಹಲವು ಉಪಾಯಗಳನ್ನು ಹೂಡಿರುವುದು ಇನ್ನು ಅಲ್ಪಕಾಲದೊಳಗಾಗಿ ಇವು ಜ್ಯಾರಿಗೆ ಬರುವುವು ಈ ವಿಧಾನಗಳು ಲೋಕಲ್ ಬೋರ್ಡು ಮ್ಯುನಿಸಿಪಲ್ ಶಾಲೆಗಳಿಗೆ ಹೇಗೆಯೋ ಹಾಗೆಯೆ ಏಡೆಡ್ ಶಾಲೆಗಳಿಗೆಲ್ಲ ಅನ್ವಯಿಸುವವು ಸರಕಾರವು ಕೈಕೊಂಡಿರುವ ಉಪಾಯಗಳು ಸಮಾನವಾಗಿ ಎಲ್ಲಾ ಶಾಲೆಗಳಿಗೂ ಅನ್ವಯಿಸುವಂತಾದುದು ನಿಜವಾಗಿಯೂ ತೃಪ್ತಿಕರವಾಗಿದೆ

ಉಪಾಧ್ಯಾಯರ ಸಂಕಷ್ಟಗಳನ್ನು ಪ್ರತಿಯೊಂದೂ ಕಡೆ ಸೇರಿದ ಪರಿಷತ್ತುಗಳಲ್ಲಿ ನಿವೇದಿಸಿಕೊಳ್ಳಲಾಗಿದೆ ಅವುಗಳ ವಿಚಾರವಾಗಿ ಡೈರೆಕ್ಟರರೂ ಸರಕಾರವು 'ತುಂಬಾ ತಿಳಿದಂತಿದೆ ಎಂದು ಅವರ ಭಾಷಣದಿಂದ ಗೊತ್ತಾಗುತ್ತಿದೆ ಪರಿಷತ್ತುಗಳಲ್ಲಿ ನಿರ್ಣಯಗಳನ್ನು ಮಾಡಿ ಮೇಲಧಿಕಾರಿಗಳಿಗೆ ತಿಳಿಸುವುದರಿಂದ ಫಲವೇನಿದೆ ಎನ್ನುವಷ್ಟು ತುಂಬಾ ನಿರಾಶರಾದ ಉಪಾಧ್ಯಾಯರಿಗೆ ಈಗ ತಿಳಿದ ಸರಕಾರದ ಇತ್ಯರ್ಥವು ಅಷ್ಟೇ ತೃಪ್ತಿಯನ್ನುಂಟು ಮಾಡುವುದು ಕಳೆದ ವಾರವೇ ಮತ್ತೊಂದು ಅಧಿವೇಶನದಲ್ಲಿ ಅತೃಪ್ತಿ ಹೊಂದಿದ ಉಪಾಧ್ಯಾಯರು ತಮ್ಮ ಹೇಳಿಕೆಗಳಿಗೆ ಅಧಿಕಾರಿಗಳು ಕಿವಿಗೊಡ್ಡುವ ತನಕ ಮುಷ್ಕರ ಹಿಡಿಯಬಹುದೆಂಬ ನಿರ್ಣಯವನ್ನು ಮಾಡಿದ್ದರು. ಉಪಾಧ್ಯಾಯರ ವೃತ್ತಿಗೂ ಮುಷ್ಕರಕ್ಕೂ ಯಾವ ತರದ ಸಂಬಂಧವೂ ಇರಲಾರದು. ಡೈರೆಕ್ಟರರ ಈಗಣ ಭಾಷಣದಿಂದ ಮುಷ್ಕರ ಮೊದಲಾದ ತೀಕ್ಷ್ಣ ಕಾರ್ಯಕ್ರಮಗಳು ಶಿಕ್ಷಕರ ಮನಸ್ಸಿನಿಂದ ತಾನಾಗಿ ದೂರವಾಗುವುವು.

ಉಪಾಧ್ಯಾಯರ ನೋಕರಿಯ ಅವಧಿ ನಿಶ್ಚಿತವಾಗದಿರುವಿಕೆ, ತಲಬು ಬಟವಾಡೆಗೆ ಅತಿ ವಿಳಂಬ, ತಲಬಿನ ಮೊಬಲಗಿನ ಅನಿಶ್ಚಿತತೆ, ತಲಬಿಗೆ ತಗಲುವ ಕತ್ತರಿಯ ಪ್ರಯೋಗಕ್ರಮ ಮೊದಲಾದುವನ್ನು ನಿವಾರಿಸುವುದಕ್ಕಾಗಿ ಸರಕಾರವು ಸಂಪೂರ್ಣವಾಗಿಯೂ ನೂತನವಾದ ನಿಬಂಧನೆಗಳನ್ನು ಇನ್ನು ಜ್ಯಾರಿಗೆ ತರುವುದರಲ್ಲಿದೆ. ಈ ಹೊಸ ನಿಯಮಗಳು ಮಂಜೂರಾಗಿ ಶೀಘ್ರದಲ್ಲೇ ಪ್ರಕಟವಾಗುವುವು.

ಪ್ರತಿಯೊಬ್ಬ ಉಪಾಧ್ಯಾಯನಿಗೂ ಅವನ ವೃತ್ತಿಯ ಕೂಲಂಕಷ ವಿವರಗಳನ್ನುಳ್ಳ ಒಂದೊಂದು ಲೈಸನ್ಸು ಕೊಡಲಾಗುವುದು. ಅದರಲ್ಲಿ ಅವನ ತಲಬು ಸರಿಯಾಗಿ ಸೂಚಿತವಾಗಿದ್ದು, ಅದಕ್ಕೆ ಇಲಾಖಾ ಆಫೀಸರರ ಮತ್ತು ಶಾಲಾ ಮೆನೇಜರರ ಸಹಿಗಳೂ ಇರುವುವು. ಇಲಾಖೆಯು ಈ ವಿಷಯಕ್ಕೆ ನಿಗಾ ಕೊಡುತ್ತಿದೆ ಎಂಬುದು ಶಾಲಾಧಿಕಾರಿಗಳಿಗೆ ವಿದಿತವಾಗಿಲ್ಲದೆ ಇದ್ದುದರಿಂದಲೇ "ತಲಬು ತಲಪಿಸುವ ವಿಚಾರದಲ್ಲಿ ನಾನಾ ಕೃತ್ರಿಮೋಪಾಯಗಳು ತಲೆದೋರಲು ಕಾರಣವಾಗಿದ್ದಿತು ಶಾಲಾಧಿಕಾರಿಗಳಿಗೆ ತಲಬು ಮೊಬಲಗು ಬಡ್ತಿ ಮತ್ತು ಪಾವತಿ ಇವುಗಳ ವಿಷಯವಾಗಿ ಇನ್ನು ಅಸಡ್ಡೆ ಇರಲು ಕಾರಣಗಳಿಲ್ಲದಂತಾಗುವುದು ಸರಕಾರವು ಗ್ರೇಂಟನ್ನು ಹೆಚ್ಚಿಸಿ, ಯೋಗ್ಯ ಶಾಲೆಗಳಿಂದ ಗ್ರೇಂಟನ್ನು ಕತ್ತರಿಸದಂತೆ ನಿಬಂಧನೆ ಮಾಡಿಯೂ, ಅಯೋಗ್ಯ ಶಾಲೆಗಳಿಂದ ಗ್ರೇಂಟನ್ನು ಕತ್ತರಿಸಿ ಯೋಗ್ಯ ಶಾಲೆಗಳಿಗೆ ತುಂಬ ಹೆಚ್ಚಿಗೆಯಾಗಿ ಕೊಡುವ ಕಾರಣ, ಶಾಲಾ ಆಡಳಿತದವರು ಈ ಸೂತ್ರಗಳ ಕಡೆಗೆ ಕಣ್ಣಿಟ್ಟೇ ವರ್ತಿಸಬೇಕಾಗಿದೆ ತಲಬು ಸರಿಯಾಗಿ ಪಾರಖಾವಣೆಯಾಗಿ ಶಿಕ್ಷಕರಿಗೆ ತಲಪದಿರುವಲ್ಲಿ ಶಾಲೆಗಳ ಮಂಜೂರಾತಿಯನ್ನು ರದ್ದುಮಾಡುವಂತೆ ಡೈರೆಕ್ಟರರು ತಾನೇ ನಿಗಾ ಇಡುವರಾಗಿ ತಿಳಿಸಿರುವರು ಮಾತವಲ್ಲದೆ, ಬೋರ್ಡು ಶಾಲೆಗಳ ವಿಷಯವಾಗಿಯೂ ಸಂಬಳ ಬಾಕಿ ಇಟ್ಟ ಶಾಲೆಗಳ ಮಂಜೂರಾತಿಯನ್ನು ರದ್ದು ಮಾಡುವುದಾಗಿ ಭರವಸೆ ಹೇಳಿರುವರು. ಇದೊಂದು ದಂಡನೆಯ ಭಯದಿಂದಲಾದರೂ, ಕಾಲಕ್ಕೆ ಸರಿಯಾಗಿ ಸಂಬಳವು ಶಿಕ್ಷಕರಿಗೆ ಸಲ್ಲುವಂತಾಗುವುದು

ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕೆ ಸರಕಾರವು ವ್ಯಯಿಸುವ ಹಣಕ್ಕೆ ತಕ್ಕದಾಗುವಷ್ಟು ಶಿಕ್ಷಣವು ಶಾಲೆಗಳಲ್ಲಿ ಪ್ರಚಾರ ಹೊಂದುತ್ತಲೂ ಇಲ್ಲ, ಅಕ್ಷರತೆಯು ಬಾಳುತ್ತಲೂ ಇಲ್ಲವೆಂಬ ಟೀಕೆಯನ್ನು ನೂರಾರು ಸಲ ಡೈರೆಕ್ಟರರು ಹೇಳುತ್ತಲೇ ಇರುವರು 'ಜೀವಿತಕ್ಕೆ ಸಾಕಷ್ಟು ಸಕಾಲದಲ್ಲಿ ಒದಗುವ ವೇತನದಿಂದ ಶಿಕ್ಷಕರು ಈ ಬಡ ದೇಶದ ಅಕ್ಷರಹೀನ ಕೋಟಿಯ ಅಭಿವೃದ್ಧಿಗಾಗಿ ದುಡಿಯಬೇಕಾಗಿಬಂದಿದೆ ಪ್ರಾಥಮಿಕ ಶಾಲೆಯಲ್ಲಿ ಈ ಅಕ್ಷರತೆಯ ಪ್ರಚಾರಕ್ಕೆ ಮೊದಲು, ದರಿದ್ರರಾಗಿರುವರಾದರು ಶಿಕ್ಷಕರೇ ಈ ಪ್ರಚಾರ ನಡೆಸಿ, ದೇಶದ ಅಭಿವೃದ್ಧಿಗೆ ಅಗತ್ಯವಾಗಿಯೂ ಸಹಾಯ ಮಾಡಬೇಕಾಗಿರುವ ಸಂದರ್ಭವಿದು ತಮ್ಮ ಯೋಗ್ಯತೆ ಹೆಚ್ಚಿಸಿಕೊಂಡು, ಪ್ರಚಾರ ಕಾರ್ಯದಲ್ಲಿ ಒಂತೆಗೆಯದೆ, ಮುಂದಿನ ತಲಾಂತರದ ಶಿಕ್ಷಕರ ಗೌರವ ಸಂಪತ್ತುಗಳನ್ನು ಕಾಪಾಡಿಕೊಡುವುದಕ್ಕಾದರೂ ಪ್ರಾಥಮಿಕ ಶಿಕ್ಷಕರು ಪೇಚಾಡಲೇ ಬೇಕಾಗಿದೆ ಮುಂದೆ ಶಿಕ್ಷಕರ ವೇತನವಾಗಲು ಹೆಚ್ಚಬಹುದು, ಮಕ್ಕಳ ಹಿರಿಯರಲ್ಲಿ ವಿದ್ಯಾಭ್ಯಾಸದ ಕಡೆಗೂ ಶಿಕ್ಷಕರ ಕಡೆಗೂ ಹೆಚ್ಚಿನ ಮಮತೆ ಬೆಳೆಯಬಹುದು ಆಗ ದೇಶಾಭಿವೃದ್ಧಿಗಾಗಿ ಮುಂದಣ ಶಿಕ್ಷಕರು ಕೆಲಸ ಮಾಡುವುದು ಸುಲಭವಾಗುವುದು. ಹೀಗಿದ್ದರೂ, ಈಗಣ ಬಡತನವೇ ಮೊದಲಾದ ಸಂಕಷ್ಟಗಳಲ್ಲಿದ್ದು ಮುಂದಣವರ ಹಿತದ ದೃಷ್ಟಿಯಿಂದ ಈಗಣವರು ಪರಿಶ್ರಮಮಾಡಲೇ ಬೇಕಾಗಿರುವುದೂ ಒಂದು ಮಹತ್ವದ ಸಂಧಿಯಾಗಿದೆ.'

ಶಿಕ್ಷಕರ ಸದ್ಯದ ಹೀನಾವಸ್ಥೆಗೆ ಶಿಕ್ಷಕರೇ ಬಹಳ ಮಟ್ಟಿಗೆ ಕಾರಣರೆಂದು ಡೈರೆಕ್ಟರರು ಪರಿಷತ್ತಿನಲ್ಲಿ ಕಾರಣಗಳನ್ನು ವಿವರಿಸಿ ತಿಳಿಸಿರುವರು. ಶಾಲೆಗಳಲ್ಲಿ ನಡೆಯುವ ಅಕ್ರಮಗಳಲ್ಲಿ ಶಿಕ್ಷಕರೇ ಭಾಗಿಗಳಾಗಿರುವುದೂ ಇದರದೊಂದು ಕಾರಣ ಶಾಲಾ ರಿಕಾರ್ಡುಗಳನ್ನು ತಿದ್ದಿಯೇ ಇಡುತ್ತ, ವಿಮರ್ಶೆಗೆ ತಕ್ಕಂತೆ ತೋರಿಸುವ ಬದಲು, ಯಥಾರ್ಥ ವ್ಯವಹಾರದಲ್ಲಿದ್ದು ಶಾಲಾ ಕೆಲಸ ನಡೆಸಿದರಾಗದೆ? ಸಲ್ಲದಿದ್ದ ಸಂಬಳಕ್ಕೆ, ಎಷ್ಟೋ ತಿಂಗಳ ತನಕ ಸಹಿ ಹಾಕುತ್ತ ಕೊನೆಗೆ ಶಾಲೆಯಿಂದ ಬಿಡುಗಡೆ ಪಡುವಾಗ, ಅದು ವರೆಗೆ ನಡೆದ ಅಕ್ರಮ ಅನ್ಯಾಯಗಳನ್ನು ಮೇಲಧಿಕಾರಿಗಳಿಗೂ ಊರಿನವರಿಗೂ ಸಾರುತ್ತ ಬರುವುದರಿಂದ ಫಲವಿದೆಯೆ? ಆಕ್ಷೇಪಯೋಗ್ಯವಾದ ಯಾವ ಕ್ರಮವನ್ನು ಶಿಕ್ಷಕರು ಅಂಗೀಕರಿಸಕೂಡದು ಗೌರವವನ್ನು ಕಾಪಾಡಿಕೊಳ್ಳಬೇಕು, ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕು, ಎಂಬಿತ್ಯಾದಿ ಅಭಿಪ್ರಾಯಗಳನ್ನು ಬೋಧಿಸುವ ಭಾಷಣದಿಂದ ಶಿಕ್ಷಕರಿಗೂ ಅವರ ಕರ್ತವ್ಯಪಾಲನೆಯ ಮೂಲಕ ಸರಕಾರದೊಡನೆ ಶಿಕ್ಷಣ ಪ್ರಚಾರ ಕಾರ್ಯದಲ್ಲಿ ಸಹಕರಿಸುವಂತೆ ಡೈರೆಕ್ಟರರ ಆಮಂತ್ರಣವಿದೆ.

ಕೊಂಗ್ರೆಸು – ಸಹಕಾರ

ಕೊಂಗ್ರೆಸೂ ಸರಕಾರವೂ ಇನ್ನೂ ಇನ್ನೂ ಮುಖಕ್ಕೆ ಮುಖ ನೋಡಿಯೇ ಕೂತಿರುವ ವ್ರತ ಹಿಡಿದಿವೆ ಇನ್ನೂ ಹೀಗೆಯೆ ಇರಬಹುದೆ? ಇರಲಾದೀತೆ?

ಗಾಂಧಿಜೀಯವರು ಲೋರ್ಡ ಝೆಟ್ಲೆಂಡರ ಎರಡನೆ ಭಾಷಣವಾದ ತರುವಾಯದಲ್ಲಿ ಸರಕಾರಕ್ಕೂ ಕೊಂಗ್ರೆಸಿಗೂ ಉಂಟಾಗಿರುವ ಅಭಿಪ್ರಾಯಭೇದವನ್ನು ಸೂಕ್ಷ್ಮದಲ್ಲಿ ವಿಚಾರಿಸಿ, ಯಾವುದೊಂದು ಬಗೆಯಲ್ಲೂ ಗೋಪನವನ್ನಿಡದೆ, ಕೊಂಗ್ರೆಸಿನ ಮನೋ ಇಚ್ಛೆಯನ್ನು ಸಾರಿರುವರು ಇದಾಗಿ ಹತ್ತು ದಿನಗಳಾದುವು ಶ್ರೀ ರಾಜಗೋಪಾಲಾಚಾರ್ಯರು ಗಾಂಧಿಜಿಯವರೊಡನೆ ಸದ್ಯಸ್ಥಿತಿಯನ್ನೆಲ್ಲ ವಿಮರ್ಶಿಸಿರಬೇಕು ಜವಾಹರಲಾಲರೂ ವಿಶಾಲ ಭಾರತವನ್ನು ಸಂಚರಿಸಿದಂತೆಯೆ, ಹಿಂದೀ ಜನತೆಯಿರುವ ಪೂರ್ವದಿಬ್ಭಾಗವನ್ನೂ ಸಂದರ್ಶಿಸಿ ಕೊಂಗ್ರೆಸಿನ ಸಂದೇಶವನ್ನು ಅಲ್ಲಿಯೂ ಸಾರಿ ಬಂದಿರುವರು ಸರಕಾರವು ಇಲ್ಲಿನ ಗವರ್ನರರ ಮಂತ್ರಿಮಂಡಲದ ವಿಷಯಕವಾದೊಂದು ವರದಿ ಛಾಪಿಸಿ ಹಂಚಿಸಿರುವುದು, ಮಂತ್ರಿಗಳ ತಮ್ಮ ಹೇಳಿಕೆಯನ್ನು ಮುಂದಿಡುವ ಅವಸರದಲ್ಲಿ ಕೊಂಗ್ರೆಸಿನ ಮುಖಂಡರ ಮೇಲೆ ಹಲವು ಆರೋಪಗಳನ್ನು ಮಾಡಿರುವರು ಹೀಗಿರುವಾಗಲೆ, ಮಾಯುವಾಗಿದ್ದ ಹಿಂದೂ ಮುಸ್ಲಿಮ್ ಗಲಭೆಗಳು ನಿಷ್ಕಾರಣವಾಗಿಯೋ ಅಲ್ಪ ಕಾರಣದಿಂದಲೋ ಅಲ್ಲಲ್ಲಿ ಉಂಟಾಗಿವೆ ಸಮ್ರಾಜರ ಪಟ್ಟಾಭಿಷೇಕವಾದ ಮೇಲೆ ಬ್ರಿಟಿಷ ಮಂತ್ರಿಮಂಡಲದಲ್ಲಿ ಬದಲಾವಣೆಗಳಾದುವು ಇಷ್ಟಾದರೂ, ಇಲ್ಲಿನ ಬಿಕ್ಕಟ್ಟು ಇನ್ನೂ ಹೀಗೆಯೆ ಕಠಿನವಾಗಿಯೇ ಉಳಿಯಬೇಕೆ?

ಈ ಪ್ರಶ್ನೆಯನ್ನೆ ಈ ವಾರ ಪಾರ್ಲಿಮೆಂಟಿನಲ್ಲಿ ಕೇಳಲಾಯಿತು ಉತ್ತರ ಕೊಡಲು ಇಂಡಿಯಾ ಸೆಕ್ರೆಟರಿಯರಾಗಲಿ, ಉಪ ಸೆಕ್ರೆಟರಿಯರಾಗಲಿ ಬದ್ದಿರಲಿಲ್ಲ ಅವರಿಬ್ಬರಿಗೂ ಇತರ ಪ್ರಾಮುಖ್ಯ ವಿಚಾರಗಳಲ್ಲಿ ಮಗ್ನರಾಗಿದ್ದ ದೆಸೆಯಿಂದ ಈ ವಿಷಯ ಪ್ರಶ್ನೆಗಳಾಗುವಾಗ, ಅಲ್ಲಿರಲು ಅವಕಾಶವುಂಟಾಗಲೇ ಇಲ್ಲ ಆದರೂ ಗಾಂಧಿಜೀಯವರ ಅಭಿಪ್ರಾಯವನ್ನು ಒಂದು ಪತ್ರಿಕೆಯಲ್ಲೋದಿದ ನೆನಪು ಅವರಿಗೆ ನನಗೂ ಕೊಂಗ್ರೆಸು ಅಧಿಕಾರ ಸ್ವೀಕರಿಸಬೇಕೆಂದೇ ಆಸೆ. ಕೊಂಗ್ರೆಸಿನವರು ಈ ಸಂದರ್ಭದಲ್ಲಿ ಯಾವ ರೀತಿಯಿಂದ ಮುಂದರಿಸಿದರೆ ಅಧಿಕಾರ ಸ್ವೀಕರಿಸಬಹುದೋ ಎಂದು ಉಪಾಯ ಪರೀಕ್ಷೆ ಮಾಡುತ್ತಿದ್ದೇನೆ. ಗವರ್ನರರಿಗೂ ಮಂತ್ರಿಗಳಿಗೂ ಎಂತಹ ಸಂಬಂಧವಿರಬೇಕೆಂದು ಪಾರ್ಲಿಮೆಂಟಿನ ಅಭಿಪ್ರಾಯವಿದೆಯೋ ಅದನ್ನು ಅನುಸರಿಸಿ ಕೊಂಗ್ರೆಸಿನ ಅಪೇಕ್ಷೆ ನೆರವೇರಿಸಿ ಕೊಡಲು ಸೂಚನೆಗಳಾವುವೂ ತೋರುತ್ತಿಲ್ಲ ಎಂದೇ ಉತ್ತರ ಹೊರಟಿದೆ. ಮತ್ತಿನ ಪ್ರಶ್ನೆಗಳನ್ನು ಸೆಕ್ರೆಟರಿಯವರಿಗೇ ಕೇಳುವ ಸೂಚನೆಯಾಗಿ ಕೊನೆಗೆ, ಇಂಡಿಯಕ್ಕೆ ಪೂರ್ಣ ಸ್ವರಾಜ್ಯವನ್ನು ಕೊಡುವುದಿಲ್ಲವೆ? ಎಂಬುದಕ್ಕೆ ಇಲ್ಲಯ್ಯ ಎಂದು ಸದುತ್ತರ ಮಾತ್ರ ಖಂಡಿತ ದೊರೆವಂತಾಗಿದೆ

'ಕೊಂಗ್ರೆಸಿನ ವಿಷಯವಾಗಿ ಮಾತಾಡುತ್ತಾರೆಯೆ ವಿನಾ, ಕೊಂಗ್ರೆಸಿನೊಡನೆ ಮಾತಾಡುತ್ತಿಲ್ಲ' ಎಂದು ಗಾಂಧಿಜಿಯವರು ಎನ್ನುತ್ತಾರೆ ಝೆಟ್ಲೆಂಡರು ಅಗತ್ಯವಾಗಿಯೂ ಹಿಂದೀಯರ ಸಹಕಾರವು ನಮಗೆ ಅತ್ಯಗತ್ಯವಿದೆ ಎನ್ನುತ್ತಾರೆ ಕೊಂಗ್ರೆಸಿನವರು ಮುಂದೆ ಬಂದು ಅಧಿಕಾರ ಸ್ವೀಕರಿಸುವರಾದರೆ, 'ಕೂಡಲೆ ನಾವು ಅಧಿಕಾರ ತ್ಯಜಿಸುವೆವು' ಎಂದು ತಾತ್ಕಾಲಿಕ ಮಂತ್ರಿಗಳೆನ್ನುತ್ತಾರೆ ಮಂತ್ರಿಗಳು ಕಾರ್ಯಕ್ರಮವನ್ನು ಪ್ರಕಟಿಸಿರುವರೇ ಹೊರತು, ಹಣವಿಲ್ಲ ಬೆಂಬಲವಿಲ್ಲ ಎಂದು ಹೇಳಬೇಕಾಗಿದೆ ಈ ಮಧ್ಯೆ ಕೊಂಗ್ರೆಸಿನವರು ಮುಂದೆ ಬರವ ಮೊದಲು, ತಮ್ಮನ್ನು ನಿವೃತ್ತಗೊಳಿಸಲು ಗವರ್ನರರಿಗೆ ಅಧಿಕಾರವಿದೆಯೆ? ಎಂದು ವಕೀಲರೊಡನೆ ಇವರೇ ಮಂತ್ರಿಗಳು ಅಭಿಪ್ರಾಯ ಪಡೆವುದರಲ್ಲಿದ್ದಾರೆಂಮೂ ಕೇಳಬರುತ್ತಿದೆ

ಮಂತ್ರಿಗಳು ಸೂಚಿಸಿದುದನ್ನು ಅಂಗೀಕರಿಸಲಾರದಿರುವಲ್ಲಿ ಗವರ್ನರರು ಮಂತ್ರಿಗಳನ್ನು ನಿವೃತ್ತಗೊಳಿಸಬಹುದು ಎಂದು ಗಾಂಧಿಜಿಯವರು ಹೇಳುವ ಸೂಚನೆಯೊಂದಿದೆ ಇದನ್ನು ಪಾಲಿಸುವ ಭಾರವನ್ನು ಗವರ್ನರರು ಕೈಕೊಂಡದಾಯಿತು, ಕೂಡಲೆ ಕೊಂಗ್ರೆಸು ಅಧಿಕಾರ ಸ್ವೀಕರಿಸುವುದು ಗವರ್ನರರಿಗೆ ಹಾಗೆ ಮಾಡಲು ಸೂಚನೆ ಕೊಡಬೇಕಾದುದು ಲಂಡನಿನಿಂದಲೋ ಡಿಲ್ಲಿಯಿಂದಲೋ ಎಂದು ತಿಳಿದಿಲ್ಲ ಅವೆರಡು ಕಡೆಗಳಿಂದಲೂ ಸೂಚನೆ ಬಂದಿಲ್ಲ ಬಿಕ್ಕಟ್ಟು ಇನ್ನೂ ಬಿಗಿಯಾಗುತ್ತ ಬಂದಿದೆ ಕೊಂಗ್ರೆಸಿಗೆ ಸೇರದೆ ಇದ್ದು, ಹಿಂದಣ ಸರಕಾರದ ಮಂತ್ರಿಕೂಟದಲ್ಲಿ ಸಂತತವರ ಅಭಿಪ್ರಾಯದಲ್ಲಾದರೂ ಗಾಂಧಿಜಿಯವರ ಸೂಚನೆಯು ಗವರ್ನರರ ಅಂಗೀಕಾರಕ್ಕೆ ಅರ್ಹವಾದುದು ಎಂದ ಇತ್ಯರ್ಥವಾಗಿದೆ ಹೊರತು ಗವರ್ನರರ ಮೇಲೆ ಹಾಕಿನಂತೆ ಹೊರಿಸಲಾದ ಜವಾಬ್ದಾರಿಕೆಯಿರುವುದೂ ಇದರಿಂದ ಕಡಮೆಯಾಗಲಿಲ್ಲ ಎಂದೂ ಅವರೇ ಸೂಚಿಸುತ್ತಾರೆ

ಸರಕಾರಕ್ಕಿಂತಲೂ ಹೆಚ್ಚಾಗಿ, ಬ್ರಿಟಿಷ ಜನಗಳೇ ಇಲ್ಲಿಯೂ ಇಂಗ್ಲೆಂಡಿನಲ್ಲೂ ಈ ಬಿಕ್ಕಟ್ಟಿನ ಮರೆಯುವ ಆಸಕ್ತಿ ತೋರಿಸಿರುವರು ಸರಕಾರವು ಮೌನವಾಗಿ ಮುಷ್ಟಿಬಿಗಿ ಹಿಡಿದು ದೃಢವಾಗಿ ಕುಳಿತುಬಿಟ್ಟರೆ ತನ್ನ ಕರ್ತವ್ಯವಾಯಿತೆಂದ ನಂಬಿರುವಂತಿದೆ ಎಲ್ಲಿನ ತನಕ ಸಾಧ್ಯವೋ ಅಲ್ಲಿನ ತನಕ ಸಹಕರಿಸಲು ಒಪ್ಪಿ ನೋಡೋಣವೆಂದು ಗಾಂಧಿಜಿಯವರು ವಿವರಿಸುತ್ತಿದ್ದರೆ, ಅದೊಂದು ಬಗೆಯಲ್ಲಿ ಶರಣಾಗುವ ಕ್ರಮ ಎಂದೇ ತಿಳಿದುಕೊಳ್ಳುತ್ತಿರುವುದು ಅನ್ಯಾಯವು ಜನತೆಯು ಇನ್ನೆಷ್ಟು ಕಾಲ ಹೀಗೆಯೆ ಕಾಲಹರಣ ಮಾಡುತ್ತಲೂ ತೃಪ್ತವಾದಂತೆ ಇದ್ದೀತು? ಇನ್ನು ಈ ಬಿಕ್ಕಟ್ಟು ನಿವಾರಣೆ ಹೊಂದಲು ಎಷ್ಟು ವಿಳಂಬ ಬೇಳೆಯಬಹುದೋ ಅಷ್ಟಕ್ಕೆ ಜನತೆಯಲ್ಲಿ ಅತೃಪ್ತಿಯೂ ಹೆಚ್ಚುವ ತಾಗುವುದಕ್ಕೆ ಕಾರಣವಾಗುವ ಜವಾಬುದಾರಿಯು ಯಾರ ಮೇಲೆ?

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
Available in 7lb and 14lb packets, at the
Office, C. P. C. Co., Ltd

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಇಟಲಿ ಜರ್ಮನಿ ಸೌಹಾರ್ದ.

"ಶಾಂತಿ ಸ್ಥಾಪನೆಗೆ ಶ್ರೇಷ್ಠದಾರಿ"

ಹಿಟ್ಲರನು ಮುಸ್ಸೊಲಿನಿಯನ್ನು ಸನ್ಮಾನಿಸುವನು.

ಜರ್ಮನಿಯ ಸೇನಾನಾಯಕನಾದ ಜನರಲ್ ವಾನ್‌ಬ್ಲೊಂಬರ್ಗ್ ಇವರೂ ಇಟಲಿಯ ಸರ್ವಾಧಿಕಾರಿ ಮುಸೊಲಿನಿಯೂ ನೇಪಲ್ಸಿನ ಕೊಲ್ಲಿಯಲ್ಲಿ ನಡೆದ ಆಕ್ಷೇಪಣೀಯವಾದ ಒಂದು ನೌಕಾ ಪ್ರದರ್ಶನದಲ್ಲಿ ಭಾಗಿಗಳಾಗಿದ್ದರು. ೫೦ ಮೈಲು ದೂರದ ವರೆಗೂ ಸಾಲಾಗಿ ನಿಲ್ಲಿಸಿರುವ ಸಬ್ ಮೆರಿನುಗಳ ಮಧ್ಯದಿಂದ ಮುಸೋಲಿನಿಯು ಜನರಲ್ ಬ್ಲೊಂಬರ್ಗರಿಂದ ಕೂಡಿದವನಾಗಿ ಯುದ್ಧ ನಾವೆಗಳಿಂದ ಹಿಂಬಾಲಿಸಲ್ಪಟ್ಟವನಾಗಿ ಪ್ರಯಾಣ ಬೆಳೆಸಿದನು. ಸುಮಾರು ೩೦೦ ದೊಡ್ಡ, ಚಿಕ್ಕ ಹಡಗುಗಳು ಅನಂತರ ನಡೆದ ಪ್ರದರ್ಶನದಲ್ಲಿ ಭಾಗವಹಿಸಿದ್ದವು

ರಾಜಕೀಯ ಒಳಗುಟ್ಟಿಲ್ಲ!—ಜನರಲ್ ವಾನ್ ಬ್ಲೊಂಬರ್ಗರನ್ನು ಪತ್ರಿಕಾ ಪ್ರತಿನಿಧಿಗಳು ಸಂದರ್ಶಿಸಿ ಮುಸೊಲಿನಿಗೆ ಭೇಟಿ ಕೊಟ್ಟುದರ ರಾಜಕೀಯ ಒಳಗುಟ್ಟೇನಿರಬಹುದೆಂದು ಕೇಳಿದಾಗ ಅವರು ತಮ್ಮ ಇಟಲಿ ಸಂಚಾರದಲ್ಲಿ ಯಾವ ರಾಜಕೀಯ ಗುಟ್ಟಿಲ್ಲವೆಂದೂ ಹೆರ್ ಹಿಟ್ಲರನು ಪ್ರಪಂಚ ಶಾಂತಿಗಾಗಿ ಹೃತ್ಪೂರ್ವಕ ಶ್ರಮಿಸುವವನಿದ್ದಾನೆಂದೂ, ತಿಳಿಸಿ ಜರ್ಮನ್ ಇಟಲಿ ಸೌಹಾರ್ದವು ಶಾಂತಿ ಬೆಳವಣಿಗೆಗೆ ತುಂಬಾ ಸಹಕಾರಿಯಾಗುವುದೆಂದೂ ತಿಳಿಸಿದರು

ಮುಸೊಲಿಯನಿಗೂ ಅವನ ಅಳಿಯನಿಗೂ ಬಿರುದತಿ—ಜರ್ಮನ್ ಸರಕಾರದ ಅತ್ಯುಚ್ಚ ಗೌರವದ ಬಿರುದುಗಳೆರಡನ್ನು ಹಿಟ್ಲರನು ಮುಸೊಲಿನಿಗೂ ಅವನ ಅಳಿಯನಾದ ಕೌಂಟ್ ಸಿಯಾನೋನಿಗೂ ಕೊಟ್ಟು ಗೌರವಿಸಿರುವನು ಈ ಬಿರುದುಗಳು ವಿದೇಶಿಯ ಮಂಗಿಗೆ ಕೊಡುವುದಕ್ಕಾಗಿಯೇ ಏರ್ಪಡಿಸಲ್ಪಟ್ಟಂತವುಗಳಂತೆ

ಜರ್ಮನ್ ಧ್ಯೇಯ:—ನಾಜೀ ಚಳವಳ ಪ್ರಚಾರ ಮುಖಂಡರಾದ ಡಾ॥ ಗೊಯೆಬಲ್ಸ್‌ರವರು ಒಂದು ಭಾಷಣದಲ್ಲಿ ನಾಜೀಗಳ ಉದ್ದೇಶವು ಜರ್ಮನಿಯ ಜನಸಂಖ್ಯೆಯನ್ನು ೮೦ರಿಂದ ೧೫೦ ಮಿಲಿಯ ವರೆಗೆ ಹೆಚ್ಚಿಸುವುದಕ್ಕಿದೆ ಎಂದು ತಿಳಿಸಿದರು

ಜಪಾನಿನ ಮಂತ್ರಿಮಂಡಲ: ರಾಜಪುತ್ರ ಕೋನೋ ಎಂಬ ಇವರ ನಿರ್ಮಿಸಲಿರುವ ಮಂತ್ರಿಮಂಡಲದ ರಚನೆಯು ಸಂಪೂರ್ಣವಾಗಿರುವುದು. ಚಕ್ರವರ್ತಿಯು ಅದಕ್ಕೆ ಅಧಿಕಾರವನ್ನು ಕೊಟ್ಟಿರು ರಾಷ್ಟ್ರದ ರಕ್ಷಣೆಗಾಗಿ ಬೇಕೆಂದಿರುವ ಯುದ್ಧ ಸಲಕರಣೆಗಳನ್ನು ಒದಗಿಸಿಕೊಟ್ಟು ಈ ನವಮಂತ್ರಿ ಮಂಡಲವು ರಾಷ್ಟ್ರದ ಕೋರಿಕೆಗಳನ್ನು ಸಲ್ಲಿಸುವುದರಲ್ಲಿ ಉತ್ಸಾಹವನ್ನು ತೋರಿಸುತ್ತಿರುವುದು ಅಲ್ಲಿಯ ವೃತ್ತಪತ್ರಿಕೆಗಳಲ್ಲಿ ತೃಪ್ತಿ ಅಭಿಪ್ರಾಯವನ್ನು ಸಾರುವಂತಾಗಿದೆ.

ಮಾಜಿ ಪ್ರಧಾನರು: ಮಾಜಿ ಪ್ರಧಾನರಾದ ಮಿ॥ ಕೊಕಿ ಹಿರೋಟಾ ಇವರು ಜಪಾನಿನ ವಿದೇಶಾಂಗ ಮಂತ್ರಿಗಳಾಗಿ ನೇಮಕ ಹೊಂದಿರುವರು. ಚೀನಾ ರಷ್ಯಾ, ಅಮೇರಿಕಾ ಮತ್ತು ಇಂಗ್ಲೆಂಡ್ ಇವುಗಳೊಳಗೆ ಸ್ನೇಹವನ್ನು ಬೆಳಸಲು ಹಿರೋಟಾರವರು ಪ್ರಯತ್ನಪಡುವರೆಂದು ನಿರೀಕ್ಷಿಸಲಾಗಿದೆ

ಈಗಿನ ಜಪಾನ ಮಂತ್ರಿಮಂಡಳದಲ್ಲಿ ಎಲ್ಲಾ ಪಂಗಡದ ರಾಜಕೀಯ ಅಭಿಪ್ರಾಯದ ಮುಖಂಡರುಗಳನ್ನು ಸೇರಿಸಿರುವುದು ಆಶಾದಾಯಕ ಭವಿಷ್ಯವನ್ನು ಉಂಟುಮಾಡುತ್ತದೆ

ನಾಜೀ ಸರಕಾರದ ಟೀಕೆ: ಕೆಥೋಲಿಕ್ ಪಾದ್ರಿಗಳೊಳಗೂ ಜರ್ಮನಿಯ ನಾಜಿಗಳೊಳಗೂ ಬಹು ಸಮಯದಿಂದ ನಡೆದುಬಂದ ವೈಷಮ್ಯವು ಕಳೆದ ತಾರೀಕಿನಲ್ಲಿ ಪರಮಾವಧಿಯನ್ನು ಮುಟ್ಟಿತು. ಅಂದು ಒಬ್ಬ ಕೆಥೋಲಿಕ್ ಪಾದ್ರಿಯನ್ನು ಮ್ಯೂನಿಚ್ ನಗರದಲ್ಲಿ ಕೈದು ಮಾಡಿರುವರು ಉಪದೇಶ ಕೊಡುವಾಗ ನಾಜೀ ಸರಕಾರವನ್ನು ಟೀಕಿಸಿದುದೇ ಅವನ ಅಪರಾಧವಂತೆ

ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ:—ಕಿರೀಟಧಾರಣ ಉತ್ಸವವು ಪ್ರಾರಂಭವಾಗುವಾಗ ಮೇ ತಿಂಗಳ ಪ್ರಾರಂಭದಲ್ಲಿ ಇಂಗ್ಲೆಂಡಿನಲ್ಲಿ ಒಟ್ಟು ೧೪೫೦೦೦೦ ದ ಂದಿ ನಿರುದ್ಯೋಗಿಗಳಿದ್ದರು ಕಿರೀಟಧಾರಣೋತ್ಸವಗಳು ಮುಗಿದ ಮೇಲೆ ತೆಗೆದ ಖಾನೆಸುಮಾರಿ ಪ್ರಕಾರ, ತಾ ೨೪ಕ್ಕೆ ಅಂತ್ಯವಾಗುವ ಮೇ ತಿಂಗಳಲ್ಲಿ ನಿರುದ್ಯೋಗಿಗಳ ಸಂಖ್ಯೆಯು ೧೫೩೮೬೦೦೦ಕ್ಕೆ ಏರಿರುತ್ತದೆಯಂತೆ

ಲೋಕ ಶಾಂತಿಗಾಗಿ:— ವಿಶ್ವಶಾಂತಿಗಾಗಿ ಅಮೇರಿಕವು ಯಾವ ಜನಾಂಗದೊಡನೆಯಾದರೂ ಸಹಕರಿಸಲು ಸದಾ ಸಿದ್ಧವಿರುವುದೆಂದು ಪ್ರೆ॥ ರೂಸ್‌ವೆಲ್ಟರ್ ಒಂದು ಮಹಿಳಾ ಸಮ್ಮೇಳನಕ್ಕೆ ಕೊಟ್ಟ ಸಂದೇಶದಲ್ಲಿ ತಿಳಿಸಿದರು"

ನಾಜೀ ತರುಣರಿಗೂ ಕೆಥೋಲಿಕರಿಗೂ ಘರ್ಷಣ: ಪೋಲಿನ ಘಟನೆಯು ನಡೆದ ಮುಂಚಿನ ದಿವಸ ಕೆಲವು ಜರ್ಮನ್ ನಾಜೀ ಯುವಕರು ಕೆಥೋಲಿಕ ಇಗರ್ಜಿಗಳ ಎದುರುಗಡೆ ವಿರೋಧ ಪ್ರದರ್ಶನವನ್ನು ನಡೆಸಿದಾಗ, ಅವರೊಳಗೂ ಕೆಥೋಲಿಕ್ ತರುಣರೊಳಗೂ ಕೈಕೈಹತ್ತಿತು

ಹೊರ ದೊಬ್ಬಿದರು ಕೆಥೋಲಿಕ್ ಅನಾಥಾಲಯಗಳಲ್ಲೂ ಆಸ್ಪತ್ರೆಗಳಲ್ಲೂ ಇದ್ದ 'ಬ್ರದರ್ಸ್'ರನ್ನು ನಾಜೀಗಳು ಹೊರದೊಬ್ಬಿರುವರು ಈ ಬ್ರದರ್ಸ್‌ರುಗಳು ಸಾರ್ವಜನಿಕ ಅಗ್ರಹಕ್ಕೆ ಒಳಗಾಗುವ ಕಾರ್ಯಗಳನ್ನು ಮಾಡಿರುವರೆಂದು ಅನಿವಾರ್ಯತೆ ಪ್ರಕಟಣೆಯೊಂದು ಸಾರುತ್ತದೆ ಇಂಥ ಮತ ಪಂಗಡದವರು ಅನ್ಯಾಯಗಳನ್ನು ಮಾಡಿದರೆ ಸಾರ್ವಜನಿಕ ಆಗ್ರಹವು ಇರುವಂತೆ ಮಾಡಬಹುದು"ೆಂದು ಈ ಪ್ರಕಟಣೆಯಲ್ಲಿ ಬರೆದಿರುತ್ತದೆ

'ಅಸಾಧಾರಣ ತ್ಯಾಗಮೂರ್ತಿ, ವೀರ ಪಿತೃವಿನ ಶೂರ ಪುತ್ರ ಭಾರತೀಯರ ಅಗ್ರಗಣ್ಯ ಮುಖಂಡ' ಇಂತಹದೇ ಅನೇಕ ಗುಣವಾಚಕ ಶಬ್ದಾರ್ಥಗಳಿಂದ ಕೂಡಿದ ಮಾನಪತ್ರಗಳನ್ನು ರಾಷ್ಟ್ರಪತಿ ಪಂಡಿತ ಜವಾಹರಲಾಲ ನೆಹರೂ ಇವರಿಗೆ ಬರ್ಮಾ, ಮಲಯಾ, ಪೆನಾಂಗಗಳಲ್ಲಿನ ಭಾರತೀಯರಿಂದ ಕೊಡಲ್ಪಟ್ಟವು ಭಾರತೀಯರ ರಾಷ್ಟ್ರೀಯತೆಯೊಳಗೂ ಬ್ರಿಟಿಷ ಬಾದಶಾಹಿತ್ವದೊಳಗೂ ನಡೆಯುವ ಘೋರ ಹೋರಾಟದ ಕುರಿತು ಅವರು ದೇಶಸ್ಥರಿಗೆ ಸಾರಿದರು ಮೇಲಿನ ವ್ಯಂಗಚಿತ್ರದಲ್ಲಿ ರಾಷ್ಟ್ರಪತಿಗಳ ವ್ಯಕ್ತಿತ್ವವು ಅಖಿಲ ಭಾರತದಲ್ಲಿ ವರ್ಚಸ್ಸುಳ್ಳದೆಂದು ನಿರೂಪಿಸುವಂತಹದ್ದಾಗಿದೆ

ರಾಜಪ್ರಣಯದ ಪರಮಾವಧಿ.

ವಿಂಡ್ಸರ್-ವಾರ್‌ಫೀಲ್ಡ್-ವಿವಾಹ.

ಫ್ರಾನ್ಸಿನಲ್ಲಿ ಸರಳ ಸಮಾರಂಭ

ಬ್ರಿಟಿಷ್ ಚಕ್ರಾಧಿಪತ್ಯದ ಮಾಜಿ ಸಾರ್ವಭೌಮರೂ ಅಷ್ಟಮ ಎಡ್ವರ್ಡರೂ ಆಗಿದ್ದ ಡ್ಯೂಕ್ ಒಫ್ ವಿಂಡ್ಸರರು ತಮ್ಮ ಪ್ರೇಯಸಿಯಾದ ವಾಲಿಸ್ ವಾರ್‌ಫೀಲ್ಡ್‌ರನ್ನು ಮದುವೆಯಾದರು 'ಧರ್ಮ ನ್ಯಾಯದ ಹೆಸರಿನಲ್ಲಿ ನಾವು ನಿಮ್ಮನ್ನು ಸತಿಪತಿಯರಾಗಿ ದಾಂಪತ್ಯ ಬಂಧನದಲ್ಲಿ ಒಟ್ಟುಗೂಡಿದರೆಂದು ಘೋಷಿಸುತ್ತೇವೆ" ಎಂದು ಮೊಂಟೆನ ಮೇಯರರು ಲಗ್ನಸಮಾರಂಭವನ್ನು ಜರಗಿಸಿದರು

ಗಂಭೀರ ಸಮಾರಂಭ:—ವಿಂಡ್ಸರ ದಂಪತಿಗಳ ವಿವಾಹ ಸಮಾರಂಭವು ಸರಳವಾಗಿಯೂ, ಘನಗಂಭೀರವಾಗಿಯೂ ಜರಗಿತು ಆಹ್ವಾನಿಸಲ್ಪಟ್ಟ ಕೆಲವೇ ಮಂದಿಗಳು ಹಾಜರಿದ್ದರು ವಿವಾಹದ ನಂತರ ವಿಂಡ್ಸರರು ಆಸ್ಟ್ರಿಯಾಕ್ಕೆ ಪ್ರಯಾಣ ಬೆಳೆಸಿದರು ೩ ತಿಂಗಳ ಕಾಲ ಇರುವರೆಂದು ತಿಳಿದು ಬಂದಿರುತ್ತದೆ

ಸಿರಿಯಾದಲ್ಲಿ ಮುಷ್ಕರ:—ಜನಾಂಗ ಸಭೆಯು ಸಿರಿಯದ ಮುಂದಿನ ಆಡಳಿತ ಧೋರಣೆಯನ್ನು ನಿರ್ಮಿಸಿದ ಮೇಲೆ ಅತೃಪ್ತಿ ಪಟ್ಟಿರುವ ಸಿರಿಯದ ಜನರು ಈಗಿನ ಧೋರಣೆಯನ್ನು ಹಿಂದಿಸಿ ಅದನ್ನು ಬದಲಾಯಿಸದಿದ್ದಲ್ಲಿ ಮುಷ್ಕರವನ್ನು ಕೈಕೊಳ್ಳುವುದಾಗಿ ತಂತಿ ಬಿಟ್ಟಿರುವರು

ಸ್ಪೈನ ಕಲಹ:—ಕಳೆದ ವಾರ ಸ್ಪೈನಿನ ಸರಕಾರದವರಿಗೂ ಜರ್ಮನ್ ಯುದ್ಧ ನೌಕೆಗಳಿಗೂ ನಡೆದ ಸಂಘಟನೆಯು ಅಂತರ್ರಾಷ್ಟ್ರೀಯರಲ್ಲಿ ಕಳವಳವನ್ನುಂಟುಮಾಡಿರುತ್ತದೆ ಈಗ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಇಟಲಿಗಳು ತಾಟಸ್ಥ್ಯವನ್ನು ತಾಳುವಂತಹ ಒಂದು ಪರಸ್ಪರ ಒಪ್ಪಂದಕ್ಕೆ ಬಂದಿರುವರು

ಇಂಡಿಯಾ ವ್ಯಾಯಸರಾಯರು



ರೈತರ ಹಿತಗಳಿಗಾಗಿ ಬಹಳ ಶ್ರಮವಹಿಸುತ್ತಿರುವ ಇವರು ಹಳ್ಳಿಗಳನ್ನು ಆಗಿಂದಾಗ್ಗೆ ಸಂದರ್ಶಿಸುತ್ತಾರೆ ಗೋವು ಪ್ರದರ್ಶನಗಳನ್ನೂ, ಗ್ರಾಮ ಕೈಗಾರಿಕೆ ಪ್ರದರ್ಶನಗಳನ್ನೂ ಏರ್ಪಡಿಸುವುದನ್ನು ತುಂಬಾ ಪ್ರೋತ್ಸಾಹಿಸುತ್ತಲಿದ್ದಾರೆ ಈಚೆಗೆ ಇವರು ಒಂದು ಹಳ್ಳಿಯಲ್ಲಿ ಒಂದು ಗುಡಿಸಲು ಮನೆಯನ್ನು ಕಟ್ಟಿ ಕೆಲವು ಸಮಯದ ವರೆಗೆ ಹಳ್ಳಿ ಜೀವನವನ್ನು ನಡೆಸಬೇಕೆಂಬ ಯೋಜನೆಯಲ್ಲಿದ್ದಾರೆ. ಈಗಿನ ರಾಜಕೀಯ ಉತ್ಕಟಾವಸ್ಥೆಯು ಪಕ್ಕೆಯಿಂದಾಗಿ ರಾಜೀನಾಮೆ ಕೊಡಲಿದ್ದಾರೆಂದು ಅಹಮ್ಮದಾಬಾದಿನ ಪತ್ರಿಕೆಯೊಂದರಲ್ಲಿ ಪ್ರಕಟವಾದ ವಾರ್ತೆಯು ಸುಳ್ಳೆಂದಾಗಿದೆ.

ವಾರ್ತೆ ಸುಳ್ಳು: ಈ ನಂತರದ ಮೇಲೆ ಬಂದಿರುವ ವಾರ್ತೆಯು ವ್ಹಿಯನ್ನಾದಲ್ಲಿ ಕೆಥೋಲಿಕ್ ಪಾದ್ರಿಗಳ ದಸ್ತಗಿರಿಯಾದ ವಿಷಯವು ಸುಳ್ಳೆಂದೂ, ನಾಜೀ ಯುವಕರು ನಡೆಸಿದ ಗಲಾಟೆಯನ್ನು ಶಾಂತಗೊಳಿಸಲು ಪೋಲೀಸರನ್ನು ಕರೆಯಲಾಯಿತೆಂದು ತಿಳಿಸುತ್ತದೆ.

ವಿಶೇಷ ವಾರ್ತೆಗಳು.

ಪ್ರಭು ಮಂದಿರದಲ್ಲಿ ಲಾರ್ಡ ಲೋಥಿಯರು ಹಾಕಿದ ಪ್ರಶ್ನೆಗೆ ಉತ್ತರವನ್ನೀಯುತ್ತಾ ಲಾರ್ಡ ಜೆಟ್‌ಲ್ಯಾಂಡರು ಹೀಗೆಂದರು:—ಗವರ್ನರರೊಳಗೆ ಮತ್ತು ಅವರ ಮಂತ್ರಿಗಳೊಳಗೆ ತೀಕ್ಷ್ಣವಾದ ಅಭಿಪ್ರಾಯಭೇದವಾದಲ್ಲಿ ಗವರ್ನರರು ಮಂತ್ರಿಮಂಡಲವನ್ನು ಡಿಸ್‌ಮಿಸ್ ಮಾಡಬೇಕು ಅಥವಾ ಅವರನ್ನು ರಾಜೀನಾಮೆ ಕೊಡುವಂತೆ ಕೇಳಬೇಕು ಎಂದು ಗಾಂಧಿಯವರು ಹೇಳುವ ಅಭಿಪ್ರಾಯವು ನನಗೆ ತಿಳಿಯಿತು ಆದರೆ ಈ ಎರಡು ವಿಧಾನಗಳೂ ಪಾರ್ಲಿಮೆಂಟಿನ ಉದ್ದೇಶಗಳಿಗೆ ವ್ಯತಿರಿಕ್ತವಿರುವುದರಿಂದ ಸಾಧ್ಯವಾಗಲಾರದವುಗಳಾಗಿವೆ"

ಲೆಜಿಸ್ಲೇಟಿವ್ ಅಸೆಂಬ್ಲಿಯ ಡೆಪ್ಯೂಟಿ ಪ್ರಸಿಡೆಂಟರಾದ ಶ್ರೀ॥ ಅಖಿಲಚಂದ್ರ ದತ್ತರವರು ಅವರ ಗೌರವಾರ್ಥವಾಗಿ ಕೊಟ್ಟ ಒಂದು ಉಪಹಾರ ಸಮಾರಂಭದಲ್ಲಿ ಭಾಷಣಮಾಡುತ್ತಾ, ಕಾಂಗ್ರೆಸ್ಸಿನ ಕೋರಿಕೆಗಳು ನ್ಯಾಯವಾದುವುಗಳೆಂದೂ ಈಗಿನ ರಾಜಕೀಯ ಪರಿಸ್ಥಿತಿಯನ್ನು ಶಮನಗೊಳಿಸದಿದ್ದಲ್ಲಿ ಪರಿಣಾಮವು ಬಹಳ ವಿಷಮವಾಗಿಯಿದ್ದಿರುತ್ತದೆಂದೂ ಹೇಳಿದರು

ಭಾರತದ ಇಂದಿನ ಶೋಚನೀಯ ರಾಜಕೀಯ ಪರಿಸ್ಥಿತಿಯನ್ನು ತೀವ್ರವಾಗಿ ಅಂತ್ಯಗೊಳಿಸಿ ಕಾಂಗ್ರೆಸ್ ಅಧಿಕಾರ ಸ್ವೀಕರಿಸಿ ಕೆಲಸಮಾಡುವಂತೆ ಮಾಡಬೇಕೆಂದೂ ಮಂತ್ರಿಗಳು ರಾಜೀನಾಮೆ ಕೊಡುವುದಾಗಲೀ ಅಥವಾ ಗವರ್ನರರು ಅವರನ್ನು ಡಿಸ್‌ಮಿಸ್ ಮಾಡುವ ಪ್ರಸಂಗಗಳೇ ಎರಡೂ ಒಂದೇ ಪರಿಣಾಮವುಳ್ಳವಿದ್ದುದರಿಂದ ಅವುಗಳ ನೀತಿ ಹೆಚ್ಚು ಪ್ರಾಮುಖ್ಯತೆಯನ್ನು ಹಾಕುವುದು ಅಗತ್ಯವಿಲ್ಲವೆಂದೂ ಸರ್ ಸಪ್ರೂಗಳು ರಾಯಿಟರ್ ಪ್ರತಿನಿಧಿಗೆ ತಿಳಿಸಿದರು ಈ ಸಂದರ್ಭದಲ್ಲಿ ಅವರು ಗವರ್ನರರು ಮಂತ್ರಿಗಳ ದಿನನಿತ್ಯದ ಕೆಲಸಗಳಲ್ಲಿ ಅಡ್ಡಿಬರುವ ಉದ್ದೇಶವುಳ್ಳವರಾಗಿಲ್ಲವೆಂಬ ಸಂಗತಿಯನ್ನೂ ಸರಕಾರವು ಪ್ರಕಟಪಡಿಸುವುದು ಒಳಿತು ಎಂದರು

ಒಂಗೆಲಾರದ ವೆಡ್ರಿಗ್ ಮತ್ತು ವೆಲೆನ್ಸಿಯಾ ನಗರಗಳ ಮೇಲೆ ವಿಮಾನದಾಳಿ ನಡೆದಿರೆಂಬ ವಾರ್ತೆ ಬಂದಿರುತ್ತದೆ ವೆಲೆನ್ಸಿಯಾ ಬಂದರಿನ ಮೇಲೆ ಬಾಂಬು ಹಾಕಿ ಎರಡು ಬ್ರಿಟಿಷ ಹಡಗುಗಳನ್ನು ಹಾನಿಪಡಿಸಿದರು.

ಜರ್ಮನ್ ವಿದೇಶಾಂಗ ಮಂತ್ರಿಗಳಾದ ಬ್ಯಾರನ್ ವಾನ್ ನ್ಯೂರಿತ್ ಇವರು ಯುಗೊಸ್ಲೊವೇಕಿಯಾದ ಪ್ರಧಾನ ಸಚಿವರಾದ ಡಾ॥ ಸ್ಟೊಯಡಿನೊವಿಚ್‌ರೊಡನೆ ಎರಡು ಘಂಟೆ ಕಾಲ ಮಾತುಕತೆ ನಡೆಸಿದರು ಪರಿಣಾಮವಾಗಿ ಎರಡು ದೇಶಗಳ ಧ್ಯೇಯಗಳೂ ಒಂದೆಯಾಗಿರುತ್ತವಾಗಿಯೂ ಈರ್ವರ ಮಾತುಕತೆಗಳು ಪರಸ್ಪರ ತಿಳುವಳಿಕೆಯನ್ನು ವಿಶಾಲಗೊಳಿಸಿವೆಯೆಂದೂ ಜರ್ಮನ್ ವಿದೇಶಾಂಗ ಮಂತ್ರಿಗಳೆಂದರು

ಪಂಡಿತ ಜವಾಹರಲಾಲ ನೆಹರುಗಳವರು ಪೆನಾಂಗಿನಿಂದ ರಂಗೂನಿಗೆ ಬಂದಿದ್ದು, ಇದೇ ತಾ, ೮ರಲ್ಲಿ ಭಾರತಕ್ಕೆ ಪ್ರಯಾಣ ಬೆಳೆಸಿದರು. ಅವರು ತಾರೀಕು ೧೩ರಲ್ಲಿ ಚಿತಗಾಂಗಿಗೆ ಬಂದು ತಲ್ಪುವರು. ಅಲ್ಲಿ ಅವರಿಗೆ ಅಭೂತ ಸ್ವಾಗತವನ್ನು ಕೊಡಲು ಭಾರೀ ಏರ್ಪಾಡುಗಳಾಗಿವೆ. ರಂಗೂನಿನಲ್ಲಿ ಪಂಡಿತರಿಗೆ ೪೦೦ ರೂಪಾಯಿಗಳನ್ನು ಕಾಂಗ್ರೆಸ್ ಫಂಡಿಗಾಗಿ ಕೊಡಲಾಯಿತು

ಪಶೇರಿಸ್ತಾನದಲ್ಲಿ ಬಾಂಬಿಂಗ್ ನಡೆಯುತ್ತಲೇ ಇದೆ. ದರೋಡೆಯವರು ಮೇಲಿಂದ ಮೇಲೆ ಠಾಣೆಗಳ ಮೇಲೆ ಬಿದ್ದು ಹಾವಳಿಮಾಡುತ್ತಿರುವರು.

ಕಂದಾಯ ವಸೂಲಿ ಸಮಯವಾದುದರಿಂದ, ವಸೂಲಿ ಮಾಡಿದ ಕಂದಾಯದ ಹಣವು ಜಿಲ್ಲೆದಾರನ ಮನೆಯೊಳಗೆ ಇದ್ದೇ ಇರಬೇಕೆಂದು ನಿರೀಕ್ಷಿಸಿ ಕೆಲವು ಮಂದಿ ದರೋಡೆಕಾರರು, ಲಕ್ನೋ ಬಳಿ ೯ ಮೈಲು ದೂರವಿರುವ ಒಂದು ಗ್ರಾಮದ ಜಿಲ್ಲೆದಾರನ ಮನೆಯನ್ನು ನುಗ್ಗಿ ಅವನನ್ನು ಕೊಂದಿಕ್ಕಿ ಹಣವನ್ನು ಒಯ್ದಿರುವರು.

ನೆಲ ಜಲಗಳ ಬಲೆಗಾರ

ಜೇಡರ ಹುಳುಗಳು— ಅವುಗಳ ಚಾತುರ್ಯ

ಕೆಲವು ವೇಳೆ ನಾವು ಮಾಡಲಿಚ್ಛಿಸುವ ಅನೇಕಾನೇಕ ಅತ್ಯದ್ಭುತ ವಸ್ತುಗಳ ವಿಚಾರ ವಾಗಿ ಯೋಚಿಸುತ್ತಿರುತ್ತೇವೆ. ಅನೇಕ ವೇಳೆ ನಮ್ಮ ಕಲ್ಪನಾತರಂಗಗಳಲ್ಲಿ ಅತ್ಯಮೋಘ ವಾದ ಭವಿಷ್ಯವೊಂದರ ವರ್ಣಪೂರಿತ ಚಿತ್ರ ವನ್ನು ನಿರ್ಮಿಸುತ್ತೇವೆ. ಇಂತಹ ಮಾನಸಿಕ ಕಲ್ಪನೆಗಳನ್ನು "ಗಾಳಿಗೋಪುರ"ವೆಂದು ಸಾ ಮಾನ್ಯವಾಗಿ ಕರೆಯುತ್ತಾರೆ—ಅಂದರೆ ಸತ್ಯಾಂಶ ವೆಂಬ ಗಾಳಿಯ ಲಘು ಹೊಡೆತದಿಂದ ಈ ಗಾಳಿ ಗೋಪುರಗಳು ಒಂದು ಕ್ಷಣದೊಳಗೆ ನೆಲಕ್ಕು ರುಳಿ ಧ್ವಂಸವಾಗುತ್ತವೆ ಆದರೆ ಅನಂತ ಕೋಟಿ ಜೀವ ರಾಶಿಯನ್ನೊಳಕೊಂಡ ಈ ಸೃಷ್ಟಿಯಲ್ಲಿ, ನೀರು ಗಾಳಿಯಲ್ಲಿ ಅತ್ಯುತ್ಕೃಷ್ಟ ಗೋಪುರಗಳನ್ನು ಕಟ್ಟುವ ಜೀವಾದಿಗಳು ಇವೆ. ಈ ಗೋಪುರಗಳು ಅತೀ ಸೂಕ್ಷ್ಮವಾದ ರೇಷ್ಮೆ ಯಂತಹ ದಾರಗಳಿಂದ ರಚಿಸಲ್ಪಟ್ಟು, ಶ್ರೇಷ್ಠ ಕಲಾಕೌಶಲ್ಯದ ಚಾತುರ್ಯವನ್ನು ಬೀರು ವಂತಹುಗಳಾಗಿವೆ. ನಿರ್ಗುಳ್ಳೆಯಂತಿರುವ ನಮ್ಮ ಕಲ್ಪನಾ ಕೋಟೆಗಳಂತೆ ಅವುಗಳು ಅಸತ್ಯವಾದುವುಗಳಲ್ಲ. ಭದ್ರವಾದ ಅಡಿ ಸ್ಥಳಗಳಿಲ್ಲದವುಗಳಾದರೂ ಕೆಲವು ವೇಳೆ ಅವು ಗಳು ಬಿರುಸಾದ ಕಡಲಿನ ತೆರೆಗಳನ್ನು ತಡೆಯ ಬಲ್ಲವು. ಈ ತೆರನಾದ ಗಾಳಿ ಗೋಪುರ ಗಳನ್ನು ನಾವು ಸರ್ವಸಾಧಾರಣವಾಗಿ ಹಳೆ ಮನೆಗಳ ಮುರುಕು ಗೋಡೆ ಬದಿಗಳಲ್ಲೂ, ಮಾಡು ಅಂಚಿನಲ್ಲಿಯೂ, ಎರಡು ಮರ ತೋಳು ಗಳ ಮಧ್ಯದಲ್ಲಿ ತೂಗಾಡಿಕೊಂಡಿರುವುದನ್ನು ಕಾಣಬಹುದು ಪ್ರಾತಃಕಾಲ ನಾವು ಹೊರಗೆ ಮೈದಾನುಗಳಲ್ಲಿಯೂ ಸಂಚರಿಸುವಾಗ ಕಲ್ಲು ಗಳ ಸಂದುಗಳಲ್ಲಿಯೂ, ಹುಲ್ಲು ರಾಶಿಗಳ ಮಧ್ಯ ದಲ್ಲಿಯೂ ಕಾಣಬಹುದು ಇವುಗಳ ಮೇಲೆ ಬಿದ್ದಿರುವ ಇಬ್ಬನಿಗಳು ಉದಯಿಸುವ ಸೂ ರ್ಯನ ಕಿರಣಗಳಿಂದ ಪಂಚವರ್ಣಗಳಲ್ಲಿ ಶೋಭಿಸುವ ದೃಶ್ಯವು ಪ್ರಕೃತಿ ಸೌಂದರ್ಯದ ಪರಿಮಾಧಿಯಾಗಿವೆ ಈ ರೀತಿ ಕಂಗೊಳಿಸುವ ಈ ಚಿಕ್ಕ ಗೋಪುರಗಳು ರಜತದಾರಗಳಿಂದ ಕಟ್ಟಲ್ಪಟ್ಟು, ನವರತ್ನಗಳಿಂದ ಅಲಂಕೃತಗೊಳಿಸ ಲ್ಪಟ್ಟಂತಿರುವುದಿಲ್ಲವೇ?

ಹೇಳುತ್ತಿರುವ ವಿಷಯವು ಜೇಡರಹುಳ ದ ವಿಷಯವಿರುತ್ತದೆಂದು ನೀವು ಊಹಿಸದಿರ ಲಿಕ್ಕಿಲ್ಲ ಈ ಜೇಡರ ಹುಳಗಳು ದೃಷ್ಟಿಗೆ ಅಸಹ್ಯವಿದ್ದು ಎಲ್ಲರಿಂದಲೂ ಬಹಿಷ್ಕರಿಸ ಲ್ಪಡುವ ಜೀವಿಯಾಗಿದೆ ಆದರೂ ಇವುಗಳು ಪ್ರಕೃತಿಯಲ್ಲಿ ಕಂಡು ಬರುವ ಅದ್ವಿತೀಯ ಚತುರಶಿಲ್ಪಿಯಾಗಿವೆ ಪ್ರಪಂಚದ ನಿಪುಣ ವಾಯುಯಂತ್ರ ಶಿಲ್ಪಿಗಳೂ ನಿರಾಶೆ ಹೊಂದುವ ಚಮತ್ಕಾರಗಳನ್ನು ಈ ಪುಟ್ಟ ಪ್ರಾಣಿಯು ಅದೇಗೆ ನಿರ್ವಹಿಸುತ್ತದೆ ಬಲ್ಲಿರಾ?

ಜೇಡನು ತನ್ನ ದೇಹದಿಂದ ಒಂದು ತರದ ಅಂಟು ದ್ರಾವಕವನ್ನು ಹೊರ ಸೂಸುತ್ತಿರು ತ್ತಾನೆ. ಗಾಳಿ ಸಂಪರ್ಕವಾದೊಡನೆ ಈ ದ್ರಾವಕವು ಸೂಕ್ಷ್ಮ ದಾರವಾಗುವುದು, ಈ ಸೂಕ್ಷ್ಮ ದಾರವು ಅಷ್ಟೆ ಭಾರದ ಮತ್ತು ಸೂಕ್ಷ್ಮ ವಿರುವ ಉಕ್ಕಿನ ದಾರಕಿಂತಲೂ ಹೆಚ್ಚು ಗಟ್ಟಿ ಯಾಗಿರುತ್ತದಂತೆ ಯಾವುದಾದರೂ ಒಂದು ವಸ್ತುವಿನ ಕೊನೆಯಿಂದ ಪ್ರಾರಂಭಿಸಿ ಇನ್ನೊಂದು ಅನುಕೂಲ ವಸ್ತುವಿನ ಕೊನೆಯನ್ನು ಮುಟ್ಟುವ ವರೆಗೂ ಈ ದಾರವು ಉದ್ದವಾಗುವುದು ಇನ್ನೊಂದು ಕೊನೆಯು ಸಿಕ್ಕಿದೊಡನೆ, ಜೇಡನಿಗೆ ಆ ದಾರವು ಒಂದು ಕಾಲು ಹಾದಿ, ಅಥವಾ ಸಂಕದಂತೆ ಸಹಾಯಕವಾಗುವುದು. ಇದರ ನಂತರ ಬಿಡುವ ಅನೇಕಾನೇಕ ದಾರಗಳು ಒಂದು ಬಲೆಯ ಆಕೃತಿಯಲ್ಲಿ ಪೋಣಿಸಲ್ಪಡು ವವು. ಮೊದಲನೇ ಯತ್ನದಲ್ಲಿಯೇ ಜೇಡನು ತನ್ನ ಸಾಹಸದಲ್ಲಿ ಯಶಸ್ವಿಯಾಗುವನು, ಆದರೆ ಅಪಜಯದಿಂದ ಕಾರ್ಯವಿಮುಖನಾಗುವ ಪ್ರಾಣಿಯು ಜೇಡರ ಹುಳವಲ್ಲ ಒಂದು ಸಾರಿ ಇಪ್ಪತ್ತು ಬಾರಿ, ಇಪ್ಪತ್ತು ಸಾವಿರ ಬಾರಿ— ಆದರೂ ಜೇಡನಿಗೆ ಅದು ಗಣ್ಯವಲ್ಲ ಕಷ್ಟ ಸಹಿಷ್ಣುತೆಯಲ್ಲಿ ಪಾಠವನ್ನು ಮನುಷ್ಯನಾದ ವನು ಜೇಡನಲ್ಲಿ ಪಡೆಯಬೇಕು

ಜೇಡನು ತಯಾರಿಸುವ ನೂಲುಗಳಲ್ಲಿ ಎರಡು ತರದ್ದಿವೆ ಒಂದು ಅಂಟು ಸ್ವಭಾವ ವಿದ್ದು, ಇನ್ನೊಂದು ತರದ್ದಕ್ಕೆ ಅಂಟಿರುವುದಿಲ್ಲ. ಮೊದಲನೇಯದನ್ನು ಬಲೆಯಲ್ಲಿ ಬಿದ್ದ ಬೇಟೆ ಯನ್ನು ಬಂಧಿಸುವುದಕ್ಕೂ, ಎರಡನೇಯದನ್ನು ತನ್ನ ಕೋಟೆಯ ಮೊದಲನೇ ಅಂಕಣವನ್ನು ಕಟ್ಟುವುದಕ್ಕೂ ಉಪಯೋಗಿಸುತ್ತದೆ ಅಂಟಿ ಲ್ಲದ ದಾರದಿಂದ ಕಟ್ಟಿದ ಬಲೆಯ ಮೇಲೆ, ಅಂಟು ದಾರ ಒಂದು ಪದರು ಬರುವುದು ಕೊಳ್ಳಿ ಸ್ವಲ್ಪವಾಗಿ ಈ ದಾರಕ್ಕೆ ಸ್ಪರ್ಶ ವಾಯಿತೆಂದರೆ ಬಲೆಬಿದ್ದ ಹಾಗೆಯೇ ಸರಿ ಬಿದ್ದ ನೊಣವು ತನಗಿಂತಲೂ ಶಕ್ತಿಯುಳ್ಳದ್ದು, ಕಚ್ಚುವ ಸ್ವಭಾವದ್ದೂ ಇದ್ದರೆ, ಜೇಡನು ತನ ಅಂಟುದಾರವನ್ನು ಅದರ ಮೇಲೆ ಒಂದೇ ಸವನೆ ಬಿಡುತ್ತಲಿರುತ್ತದೆ ಕೊಳ್ಳಿಯು ಕಡೆಗೆ ಪೂರ್ಣವಾಗಿ ಬಂಧಿಸಲ್ಪಟ್ಟು, ಬೇಟೆಗಾರನ ಆಹಾರವಾಗುತ್ತದೆ.

ಜೇಡರಲ್ಲಿ ನಾನಾ ತರದ್ದಿರುತ್ತವೆ. ತೋಟದಲ್ಲಿ ಕಾಣ ಸಿಗುವ ಒಂದು ಜಾತಿಯು ನೆಲದಲ್ಲಿ ಸುಮಾರು ಒಂದಡಿ ತೂತು ಮಾಡಿ ಅದರೊಳಗೆ ತನ್ನ ಗೋಪುರವನ್ನು ಕಟ್ಟುತ್ತದೆ. ಇದು ಬಹಳ ಭದ್ರವಾದುದು. ಕಾರಣ ಅಂಟುದಾರದ ಒಂದು ಬಲೆಯ ಮೇಲೆ ಈ ಜೇಡನು ಚಿಕ್ಕಚಿಕ್ಕ ಕಲ್ಲುಗಳನ್ನೂ ಮರಳನ್ನೂ ಹಾಕಿ ಅದರ ಮೇಲೆ ಬಲೆಯ ಇನ್ನೊಂದು ಪದ ರನ್ನು ಪೋಣಿಸುತ್ತದೆ ತಿರುಗಿ ಮರುಳಿನ ಒಂದು ಪದರು ಬರುತ್ತದೆ ಹೀಗೆ ಅನೇಕ ಪದರುಗಳಾದ ಮೇಲೆ ಗೂಡಿನ ಬಾಗದಲ್ಲಿ ಒಂದು ದ್ವಾರವನ್ನು ಮಾಡಿ ಜೇಡನು ತನ್ನ ಕೊಳ್ಳಿಯನ್ನು ನಿರೀಕ್ಷಿಸುತ್ತಲಿರುವನು ಆ ಪಾಯ ಕಾಲದಲ್ಲಿ ಜೇಡನು ಗೂಡನ್ನು ಬಿಟ್ಟು ಅಡಿಯಲ್ಲಿರುವ ಹೊಂಡದಲ್ಲಿ ಹೋಗಿ ಭದ್ರ ವಾಗಿರುತ್ತದೆ ಮರಗಳಲ್ಲಿಯೂ ಪೊದರು ಗಳಲ್ಲಿಯೂ ಜೇಡರ ಹುಳಗಳು ಹಲವು ತರದ ಬಲೆಗಳನ್ನು ಪಸರಿ ತಮ್ಮ ಆಹಾ ರೋಪಾಯಗಳನ್ನು ಸಾಧಿಸುತ್ತಲಿರುತ್ತವೆ

ಸಾಗರಗಳಲ್ಲಿ ಜೇಡರ ಹುಳ ಜಾತಿಯ ಜೀವಿಗಳಿವೆ ಅವುಗಳಿಗೆ ಬಣ್ಣಬಣ್ಣದ ಚಿಪ್ಪು ಗಳಿರುತ್ತವೆ. ಇವುಗಳಲ್ಲಿ ಒಂದು ಜಾತಿ ಯಲ್ಲದೆ ಬೇರೆ ಯಾವುದೂ ಬಲೆಯನ್ನು ಹೆಣೆ ಯಲಾರವು ಈ ಒಂದು ಜಾತಿಯ ಜೇಡ ರಲ್ಲಿ ಬಹು ಜಾಣ್ಮೆಯದು ಇವುಗಳು ಬಂಡೆ ಗಳ ಬದಿಗಳಲ್ಲಿ ತಮ್ಮ ಗೂಡನ್ನು ಕಟ್ಟಿಕೊಂಡಿ ರುತ್ತವೆ ಕಡಲಿನ ಇಳಿತದ ಸಮಯವೇ ಈ ಜೇಡನ ಬೇಟೆಯ ಕಾಲ ಏರಿನ ಹೊತ್ತಿಗೆ ಅದು ಭದ್ರವಾಗಿ ಗೂಡಿನಲ್ಲಿರುವುದು.

ಇನ್ನೊಂದು ಜಾತಿಯ ಕಡಲ ಜೇಡವು ಮಹದಾಶ್ಚರ್ಯದ ಚಮತ್ಕೃತಿಯನ್ನೂ ತೋರಿ ಸುತ್ತದೆ ನೀರಡಿಯಲ್ಲಿರುವ ವನಸ್ಪತಿಯ ಕೊಂಬೆಯ ಮೇಲೆ ದಾರವನ್ನು ಪೋಣಿಸಿ ಚೀಲ ವನ್ನು ತಯಾರಿಸುತ್ತದೆ ಆ ಮೇಲೆ ಮೇಲ್ಭಾಗ ದಲ್ಲಿರುವ ನಿರ್ಗುಳ್ಳೆಗಳನ್ನು ಆ ಚೀಲಗಳಲ್ಲಿ ಚಮತ್ಕಾರದಿಂದ ಸೇರಿಸುತ್ತದೆ. ಗುಳ್ಳೆ ಬಿಡೆ ದೊಡನೆ ಅದರೊಳಗಿನ ಗಾಳಿಯಿಂದ ಚೀಲವು ಉಬ್ಬಿಕೊಳ್ಳುತ್ತದೆ. ಇದರಲ್ಲಿ ರಾಣಿ ಹುಳುವು ಕೂತು ಬೆಚ್ಚಗೆ ತನ್ನ ಸಂಸಾರವನ್ನೂ ಸಾಗಿಸು ವುದು ಈ ಜಾತಿಯಲ್ಲಿ ದೋಣಿಗಾರ ಹುಳ ವೆಂಬದೊಂದಿದೆ ಇದು ಚಿಕ್ಕ ಚಿಕ್ಕ ಎಲೆಗಳ ಮೇಲೆ ಬಲೆಯನ್ನು ಕಟ್ಟಿ, ನೀರ ಮೇಲ್ಭಾಗ ದಲ್ಲಿ ತೇಲುತ್ತದೆ ಕೊಳ್ಳಿಯನ್ನು ಕಂಡ ಕೂಡಲೇ ಚಮತ್ಕಾರವಾಗಿ ನೀರ ಮೇಲೆ ನಡ ಕೊಂಡು ಹೋಗಿ ಹಿಡಿಯುವ ಶಕ್ತಿಯು ಇದ ಕ್ಕಿದೆ ಆದರೆ ಅದು ತನ್ನ ಬಲೆದೋಣಿಯನ್ನು ಬಿಟ್ಟುಬಿಡಲಾರದು

ಜೇಡರ ಹುಳಗಳು ವಿಷಪ್ರಾಣಿಗಳಿವೆ ಅವುಗಳು ಕಟ್ಟುವ ಸುಂದರವಾದ ರೇಷ್ಮೆ ಗೋ ಪುರಗಳು ವಿಷಪದಾರ್ಥದಿಂದುಂಟಾದವುಗಳು ಅಡಿಗೆ ಕೋಣೆಗಳಲ್ಲಿ ಹಳೇ ಮಾಡುಗಳ ಸಂದಿ ನಲ್ಲಿ ಇವುಗಳ ಬಲೆಗಳು ಹೇರಳವಾಗಿರುವು ದರಿಂದ ಅವುಗಳು ಪಾತ್ರಗಳಲ್ಲಿ ಬೀಳದಂತೆ ಎಚ್ಚರಿಕೆಯಿಂದಿರಬೇಕು ಕಾರಣ ಈ ಬಲೆ ಗಳು ಅನಾರೋಗ್ಯವನ್ನುಂಟು ಮಾಡಿ ಕೆಲವು ಸಮಯಗಳಲ್ಲಿ ಪ್ರಾಣವನ್ನು ಕೂಡಾ ತೆಗೆಯ ಬಲ್ಲದು ಹೆಣ್ಣುಳವು ಕಚ್ಚಿದರಂತೂ ಭಯಂಕರ ಅವಸ್ಥೆಯಾಗುವುದು ಆದುದ ರಿಂದ ಮನೆಗಳಲ್ಲಿ ಈ ಹುಳಗಳನ್ನು ಇರಗೊಡು ವುದ ಅಪಾಯಕರ —ನಾಭ.

ಕಾಳ್ಬೆ ವ್ಯಾಧಿ

ಜೋಶಿಮ್ ಪಿಯೆನಾ ಎಂಬವನು ನ್ಯೂಯೋರ್ಕಿನ ರಸ್ತೆಯಲ್ಲಿ ಒಂದು ಮೋಟಾರ್ ಅಪಘಾತಕ್ಕೆ ತುತ್ತಾದನು ಅಂದರೆ ಸಾವು ಇಲ್ಲ ಆದರೆ ಆಗಿನಿಂದ ವಿಚಿತ್ರ ವ್ಯಾಧಿ ತಗಲಿರುತ್ತದೆ ಪೀಟಾರು ಅಪಘಾತ ಆಗಿದಂದಿನಿಂದ ಅವನು ದಿನೇ ದಿನೇ ಕ್ಷೀಣ ನಾಗ ತೊಡಗಿ, ಅವನ ಎತ್ತರ ರವು ೫॥ ಇಂಚು ಕಡಿಮೆಯಾ ಗಿರುತ್ತದೆ ದೇಹಪ್ರಕೃತಿ ಯನ್ನು ವಿಕಾರಗೊಳಿಸುವ ಒಂದು ವಿಚಿತ್ರ ವ್ಯಾಧಿಯಿಂದ ಅವನು ನರಳುತ್ತಿರುವನು. ಅವನ ಭಾರವು ಒಂದೇ ಸವನೆ ೨೫ ರಾತ್ಲು ಇಳಿದಿರುತ್ತದೆ ಆದರೆ, ಅವನ ಬೆನ್ನು ಬಾಗಿರದೆ ನೆಟ್ಟಗಿರುವುದಂತೆ

ಮುದುಕಿಗೆ ಮಗು ಹುಟ್ಟಿತು

ಯುಗೊಸ್ಲೋವೇಕಿಯಾದ ಸೊಪಿನುಜಾಲ್ ಊರಿನ ೬೩ ವರ್ಷದ ಮುದುಕಿಯೊರ್ವಳು ಒಂದು ಹೆಣ್ಣು ಮಗುವನ್ನು ಹೆತ್ತಿರುವಳು ಅವಳಿಗೆ ೩೫ ವರ್ಷದ ಒಬ್ಬ ಮಗನೂ ೧೮ ವರ್ಷದ ಮಗಳೂ ಇರುವ ರಂತೆ ಅವಳ ಗಂಡನಿಗೆ ೫೮ ವರ್ಷ ಪ್ರಾಯ

೦ ೦ ೦

ಮುಂದಿನ ಜುಲಾಯಿ ತಾ ೩ಗನೇ ದಿನ ಒರಿಸ್ಸಾ ಅಸೆಂಬ್ಲಿಯ ಪ್ರಥಮ ಸಭೆ ನಡೆಯುವುದು

—೦—೦—

ಆಟದ ಗೊಂಬೆಗಳಲ್ಲ!
ಮಹಿಳೆಯರಿಗೆ ಪಂಡಿತರ ಭಾಷಣ
ಭಾರತದ ಹೃದಯಂಗಮವಾದ ಪರಿಸ್ಥಿತಿ

"ಸ್ವಧೈರ್ಯ, ಶೀಲ, ಮತ್ತು ಸೌಂದರ್ಯದಿಂದ ಕೂಡಿದ್ದ ಮಹಿಳೆಯರಿಂದು ನಮಗೆ ಬೇಕಾಗಿರುವರು. ಆಟವಾಡುವ ಗೊಂಬೆಗಳಂತಿರುವವರಲ್ಲ" ಹೀಗೆಂದು ಪಂ. ಜ. ನೆಹರು ರವರು ಸಿಂಗಾಪುರದಲ್ಲಿ ನೆರೆದ ಒಂದು ಮಹಿಳಾ ಸಭೆಯಲ್ಲಿ ಕೊಟ್ಟ ಭಾಷಣದಲ್ಲಿ ಹೇಳಿದರು 'ಮಣಭಾರದ ಅಸಹ್ಯ ಆಭರಣಗಳಿಂದಲಂಕೃತರಾದ ಸ್ತ್ರೀಯರನ್ನು ನೋಡಲೂ ಕೂಡ ನನ್ನಿಂದ ಸಾಧ್ಯವಿಲ್ಲ. ಸಹಾಯಶೂನ್ಯ ಪರಿಸ್ಥಿತಿಯಲ್ಲಿದ್ದ ಮಹಿಳೆಯರಿಂದು ರಾಷ್ಟ್ರೀಯ ಜೀವನದಲ್ಲಿ ಉಗ್ರಗಾಮಿಗಳಾಗಿರುವ ಸಂಗತಿಯು ಭಾರತದಲ್ಲಿಂದು ಹೃದಯಂಗಮವಾದ ವಿಷಯವಾಗಿರುತ್ತದೆ 1930ರಲ್ಲಿ ಅವರು ರಣದನ ಕ್ಷೇತ್ರಕ್ಕಿಳಿದರು ಗಂಡಸರು ಸೆರೆಮನೆವಾಸಕ್ಕೆ ಕಳುಹಲ್ಪಟ್ಟಾಗ ಅವರ ಹೆಂಗುಸರು ಅಡಿಗೆ ಮನೆಗಳನ್ನು ಬಿಟ್ಟು ತಮ್ಮ ಪುರುಷರ ಕರ್ತವ್ಯಗಳನ್ನು ಕೈಕೊಂಡರು ಈ ಕರ್ತವ್ಯವನ್ನವರು ಅಮೋಘವಾದ ರೀತಿಯಲ್ಲಿ ನೆರವೇರಿಸಿದರು."

ಮುಂದುವರಿಯುತ್ತಾ ಪಂಡಿತರು 'ದೇಶದ ಮಹಿಳೆಯರ ಸ್ಥಾನಮಾನಗಳಿಂದ ಆಯಾ ದೇಶದ ಶಕ್ತಿಯು ಅಳೆಯಲ್ಪಡುವುದು ಅವಿದ್ಯಾವಂತರೂ, ಹೀನ ಸ್ಥಿತಿಯಲ್ಲಿರುವವರೂ ಆದ ಸ್ತ್ರೀಯರಿಂದ ದೇಶವು ಯಾವ ಪ್ರಯೋಜನಕ್ಕೂ ಬಾರದು ಇದರಿಂದ ಆ ದೇಶದ ಪುರುಷರು ಎಷ್ಟು ಸಮರ್ಥರಿರಲಿ ಅವು ಗಣನೆಗೆ ಬಾರದು' ಎಂದು ತಿಳಿಸಿದರು

ವಿದ್ಯಾರ್ಥಿನಿಗಳು ವಿದೇಶಕ್ಕೆ

ಭಾರತದ ಎಲ್ಲಾ ಕಡೆಗಳಿಂದ ವಿಶ್ವವಿದ್ಯಾಲಯದ ಅನೇಕ ವಿದ್ಯಾರ್ಥಿನಿಯರ ಒಂದು ಕೂಟವು ಕಳೆದ ವಾರ ವಿಲಾಯತಿಗೆ ಪ್ರಯಾಣ ಬೆಳೆಸಿತು. ಲಾಹೋರಿನ ಮಿಸೆಸ್ ದತ್ತಾರರು ಇವರ ನಾಯಕತ್ವವನ್ನು ವಹಿಸಿದರು. ಈ ತರುಣಿಯರ ಕೂಟವು ಇಂಗ್ಲೆಂಡು ಯುರೋಪುಗಳನ್ನೂ ಸಂದರ್ಶಿಸಲಿರುವರು. ದಿನೇ ದಿನೇ ಪ್ರಗತಿ ಹೊಂದುತ್ತಲಿರುವ ಸ್ತ್ರೀ ವಿದ್ಯಾಭ್ಯಾಸದ ಹರಡುವಿಕೆಯು, ಜೊತೆಗೆ ಉಚ್ಚ ಶಿಕ್ಷಣ ವಿದ್ಯಾರ್ಥಿನಿಗಳ ಇಂತಹ ಸಂಚಾರ ಏರ್ಪಾಡುಗಳೂ ಸ್ತ್ರೀವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಂತಾಗಿದೆ

ಈ ನಾರೀ ಕೂಟವು ಇಂಗ್ಲೆಂಡಿನ ಸ್ತ್ರೀ ವಿದ್ಯಾಭ್ಯಾಸದ ಕೇಂದ್ರಗಳನ್ನೂ ಆಸ್ಪತ್ರೆ ಶಿಶು ಸಂರಕ್ಷಣಾ ಕೇಂದ್ರಗಳನ್ನೂ ಸಂದರ್ಶಿಸಿ ಅನುಭವ ಪಡೆಯುವರು. ಇಂಥಾ ಸಂಚಾರ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು ತುಂಬಾ ವಿಹಿತವಿದೆ. ಅದರಲ್ಲಿಯೂ ಶ್ರೀಮತಿ ದತ್ತಾ ಇವರಂತಹ ಮುಂದಾಳುಗಳುಬಹಳ ಯೋಗ್ಯರೆನ್ನಿಸುತ್ತಾರೆ

ರಶ್ಯದಲ್ಲಿ ಸ್ತ್ರೀ ಪ್ರೋತ್ಸಾಹ

ರಶ್ಯದ ಜನಸಂಖ್ಯೆಯು ೧೭೩,೦೦೦,೦೦೦ ದಷ್ಟಿದೆ ವಿಶಾಲವಾದ ಈ ದೇಶದ ಅನೇಕ ಭಾಗಗಳು ಇನ್ನೂ ಅರಣ್ಯವಾಗಿಯೂ, ಮರುಭೂಮಿಗಳಾಗಿಯೂ ಇವೆ ಇವನ್ನೆಲ್ಲ ಕಡಿದು ಸಾಗುವಳಿ ಮಾಡಲು, ರಶ್ಯನ್ ಸರಕಾರವು, ಜನಸಂಖ್ಯೆಯು ರಶ್ಯದಲ್ಲಿ ಹೆಚ್ಚಾಗುವಂತ ನಿರೀಕ್ಷಿಸುತ್ತದೆ ಸ್ತ್ರೀಯರಿಗೆ ಅವರ ಎಲ್ಲಾ ಕಾರ್ಯಕಲಾಪಗಳಲ್ಲೂ ಬಹಳ ಪ್ರೋತ್ಸಾಹವನ್ನು ಕೊಡುತ್ತಾರೆ ರಶ್ಯನ್ ಸ್ತ್ರೀ ಆಟಗಾರರು ಇಂದು ಪ್ರಪಂಚದ ಸ್ತ್ರೀಯರನ್ನು ಮೀರಿಸುತ್ತಾರೆ ವಿಮಾನ ಹಾರಾಟ, ಕಸರತ್ತು ಆಟಗಳು ಇವೇ ಮೊದಲಾದ ಸಾಹಸದ ಕ್ರೀಡೆಗಳಲ್ಲಿ ಅವರು ವಿಶೇಷ ಉತ್ಸಾಹವನ್ನು ತೆಗೆದುಕೊಳ್ಳುತ್ತಾರೆ. ದೇಶದ ಪ್ರತಿಯೊಂದು ಕಡೆಗಳಲ್ಲಿಯೂ, ವ್ಯಾಯಾಮ ಶಾಲೆಗಳನ್ನು ಸ್ಥಾಪಿಸಿರುವರು ಸುಮಾರು ೩ ಲಕ್ಷ ಸ್ತ್ರೀಯರು ಆಗಲೇ ಇಂತಹ ವ್ಯಾಯಾಮ ಶಿಕ್ಷಣ ಶಾಲೆಗಳಲ್ಲಿ ಸದಸ್ಯರಾಗಿ ಸೇರಿರುವರು

ಇಂದು ರಶ್ಯದಲ್ಲಿ ೫೦ ಸಾವಿರ ವಿಮಾನ ಹಾರಾಟದಲ್ಲಿ ತರಬೇತು ಹೊಂದಿದ ಸ್ತ್ರೀಯರು ಇರುವರು ಒಂದು ಲಕ್ಷ ಮಂದಿಗಳು ಆಗಲೇ ಬಂದೂಕು ಹೊಡೆಯುವುದರಲ್ಲಿ ತರಬೇತು ಹೊಂದಿರುವರು ಇನ್ನೂ ಒಂದು ಮಿಲಿಯ ಮಂದಿಗಳು ತರಬೇತು ಹೊಂದುತ್ತಲಿದ್ದಾರೆ. ಈಗ ರಶ್ಯದ ಸೋವಿಯಟ್ ಸರಕಾರವು ಸ್ತ್ರೀಯರಿಗೆ ಕಡ್ಡಾಯವಾದ ಮಿಲಿಟರಿ ಶಿಕ್ಷಣವನ್ನು ಕೊಡಿಸುವರೆ ಯೋಚಿಸುತ್ತಲಿರುವರು

ಮಕ್ಕಳ ಜನನಸಂಖ್ಯೆಯನ್ನು ಹೆಚ್ಚಿಸಲು ರಶ್ಯದಲ್ಲಿ ಭಾರಿ ಪ್ರಯತ್ನಗಳು ನಡೆಯುತ್ತವೆ ರಶ್ಯದಲ್ಲಿ ಇಂದು ಮದುವೆಯೆಂಬುದು ವೈಯಕ್ತಿಕ ವಿಷಯವಲ್ಲ ಅದು ಸಾರ್ವಜನಿಕ ಹಿತದ್ದಾಗಿರುತ್ತದೆ ಮಕ್ಕಳನ್ನು ಪಡೆದು ಬೆಳೆಸುವುದು ಪ್ರತಿಯೋರ್ವ ಸ್ತ್ರೀಯ ಆದ್ಯಕರ್ತವ್ಯವೆಂದು ಸಾರಲ್ಪಡುತ್ತದೆ ತಾಯಂದಿರಿಗೆ ಅಲ್ಲಿನ ಸರಕಾರವು ಸಕಲ ಸಹಾಯವನ್ನೂ ಒದಗಿಸುವುದು ೬ ಮಕ್ಕಳಿದ್ದ ತಾಯಿಗೆ ೫ ವರ್ಷದ ತನಕ ವರ್ಷಕ್ಕೆ ೨೦೦೦ ರುಬೆಲ್ಸ್ (ಸುಮಾರು ೩ ಸಾವಿರ ರೂಪಾಯಿಗಳು) ಗಳು ಸಿಕ್ಕುತ್ತದೆ ೧೦ ಮಕ್ಕಳಿದ್ದ ತಾಯಿಗೆ ನಾಲ್ಕು ವರ್ಷದ ತನಕ ೫ ಸಾವಿರ ರುಬೆಲ್ಸ್(೭॥ ಸಾವಿರ ರೂ) ಗಳು ಸಿಕ್ಕುತ್ತವೆ

ಮಕ್ಕಳ ಶಾಲೆಗಳಿಗಾಗಿಯೂ, ಕ್ರೀಡಾರಂಗಗಳಿಗೂ ವಾಚಕ ಮಂದಿರಗಳಿಗೂ ರಶ್ಯನ್ ಸರಕಾರವು ಸುಮಾರು ೬,೧೭೪,೧೦೦,೦೦೦ (೩೦೦೦ ಕೋಟಿ ರೂಪಾಯಿ) ರುಬೆಲ್ಸ್‌ಗಳನ್ನು ಪ್ರತಿವರ್ಷವೂ ಖರ್ಚು ಮಾಡುವುದು ರಶ್ಯದ ಈ ಸಾಧನೆಯಿಂದ ಕೆಲವೇ ವರ್ಷದೊಳಗೆ, ರಶ್ಯದ ಜನಸಂಖ್ಯೆಯು ಗಣನೆಗೆ ಸಿಗಲಾರದಷ್ಟು ಆಗುವುದೆಂದು ಹೇಳಬಹುದು

ನೋಟೀಸು.

The Prabhakara Bank,
MOODABIDRI.

ದಿ ಪ್ರಭಾಕರ ಬೇಂಕ್, ಮೂಡಬಿದ್ರಿ.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ- ಈ ಕೆಳಗೆ ಕಾಣಿಸಿದ ಹೆಸರಿನವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಸಾಲಗಳ ಬಡ್ಡಿ ಮರುಬಡ್ಡಿ ಸಮೇತ ತಾ 19-6-1937 ರೊಳಗೆ ಬೇಂಕಿಗೆ ಪಾವತಿಮಾಡದೆ ಇದ್ದಲ್ಲಿ, ಅವರು ಈ ಬೇಂಕಿನಲ್ಲಿ ಅಡವಿಟ್ಟಲಾದ ನಗ ವಗೈರೆಗಳನ್ನು ತಾ. 26-6-37ನೇ ಶನಿವಾರ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ವಿಸ್ತಾರ ವಿವರಗಳನ್ನು ಬೇಂಕಿನಿಂದ ತಿಳಕೊಳ್ಳಬಹುದು. ಸದ್ರಿ ಹಣ ಪಡಕೊಂಡವರಿಗೆ ಕ್ರಮವಾಗಿ ರಿಜಿಸ್ಟ್ರಿ ನೋಟೀಸುಗಳನ್ನು ಬಿಡಲಾಗಿದೆ

ಸಾಲದ ನಂಬ್ರ 1316/11-8 34 ಕಾರ್ಕಳ ತಾಲೂಕು ಬೆಳ್ವಾಯಿ ಗ್ರಾಮದ ಬರಕಲ ಪಡಿವು ಸೆಟ್ರ ಅಳಿಯ ಶಿದ್ದು ಶೆಟ್ಟಿ, ಅಸ್ಲು ರೂಪಾಯಿ 165/- ಬಡ್ಡಿ 30-9 0.

ಸಾಲದ ನಂಬ್ರ 1895/21-3-35 ಮೂಡಬಿದ್ರಿ ಪೋಸ್ಟ್‌ಮೇನ್ ಬಿ. ಶೀನವರ ಮಗ ಬಿ ಮಾದೇವ ಅಸ್ಲು ರೂ. 40/ ಬಡ್ಡಿ ರೂ 10-7 3

ಸಾಲದ ನಂಬ್ರ 2164/29-5-35 ಬೆಳ್ವಾಯಿ ಗ್ರಾಮದ ಪೇರೋಡಿ ದಾರಮ್ಮ ಸೆಟ್ಟೀರ ಮಗ ಭುಜಂಗ ಸೆಟ್ಟಿ, ಅಸ್ಲು ರೂ 90/- ಬಡ್ಡಿ ರೂ 15-11-6

Prabhakara Bank, Moodabidri } *Proprietor* **A.V.Prabhu.**

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ! ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಟಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯದ ವ್ಯಾಪಾರವು ಯಾಕೋಹಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಿಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರುಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡವಳಿಗಳಾವುವು? ಅಲ್ಲಿನ ವೇಶ್ಯಾವಾಟಗಳು,ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ. ಮೆದುಳಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು.

ಈ ಪುಸ್ತಕವನ್ನು ಓದಬೇಕು! ಮನೋವೃತಾಳ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು
ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು
ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು?
ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ ೩೦೦ ಪುಟಗಳು.

ಬೆಲೆ ರೂ. ೧-೮-೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು. ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್, ಸ್ಲೇಟ್ ಮಾರ್ಟ್‌ನಲ್ಲಿ ದೊರಕುತ್ತದೆ.

ಟಾಗೂರ್ ಅಂಡ್ ಕೋ. (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ತಾಲೂಕುಗಳಿಂದ.

ಬಂಟ್ವಾಳ:— ಇಲ್ಲಿಯ ಪಂಚಾಯತ ಬೋರ್ಡಿನ ಚುನಾವಣೆಯನ್ನು ಮುಂದೆ ಹಾಕಿರುವರು. ಬೋರ್ಡಿನ ಕೆಲಸಕ್ಕಾಗಿರುವ ಬಂಟವಾಳ ಮತ್ತು ಮೂಡ ಗ್ರಾಮಗಳನ್ನು ವಾರ್ಡುಗಳಾಗಿ ಮಾಡಿದ ಮೇಲೆ ಚುನಾವಣೆ ನಡೆಯುವದಂತೆ. ಬಂಟವಾಳ ಗ್ರಾಮವನ್ನು ಪಾಣೆ, ಮಂಗಳೂರು ಮತ್ತು ಅಜ್ಜಿಬೆಟ್ಟು, ಬಸ್ತಿಪಡ್ಪು, ಜಕ್ರಿಬೆಟ್ಟು, ತುಂಬೆ, ಬಂಟವಾಳ ಪೇಟೆ, ಮೂಡ ಪೇಟೆ ಹೀಗೆ ಎಂಟು ವಾರ್ಡುಗಳಾಗಿಯೂ, ಮೂಡಗ್ರಾಮವನ್ನು ಬಂಡಾರಿಬೆಟ್ಟು, ಕಂಚಿಗಾರ ಕೊಡ್ಲು ಮತ್ತು ಅಗ್ರಹಾರ ಬೈಲು, ಗೂಡಿನ, ಬೋಳಂಗಡಿ ಮಾರ್ಗ, ಮೊಡಂಕಾಪು, ಸಂಗೂರು ಹೀಗೆ ಆರು ವಾರ್ಡುಗಳಾಗಿ ಮಾಡಿ ಚುನಾವಣೆ ಮಾಡಿ ಈ ವಾರ್ಡುಗಳಲ್ಲಿ ಕಾಯಂ ವಾಸ್ತವ್ಯ ಇರುವವರನ್ನೆ ಚುನಾವಣೆ ಮಾಡಿದರೆ ಪಂಚಾಯತ ಸ್ಥಾಪನೆಯ ಕಾರ್ಯವು ಸುಲಭವಾಗುವುದು.

ಬಸ್ತಿಪಡ್ಪು ಸಂಕದ ಕೆಲಸವು ಮುಗಿದು, ಜನರ ಧನಿಗೆ ಬಿಟ್ಟುಕೊಟ್ಟಿರುವರು.

ಬಂಟವಾಳ ಟೆಂಪಲ ಹೈಸ್ಕೂಲಿನಿಂದ ಪರೀಕ್ಷೆಗೆ ಕಳುಹಿಸಿದ ೩೭ ವಿದ್ಯಾರ್ಥಿಗಳಲ್ಲಿ ೨೩ ಮಂದಿ ಪಾಸಾಗಿರುವರು. ಇದರಲ್ಲಿ ಒಂದು ಹುಡುಗಿ ಬಂಟವಾಳದಿಂದ ಎಸ್ ಎಸ್ ಎಲ್ ಸಿ ಪಾಸಾದ ಇದೇ ಮೊದಲನೇ ಹುಡುಗಿ ಕುಮಾರಿ ಶಂಕರಿಬಾಯಿ (ವಾಮನ ಬಾಳಿಗರ ಮಗಳು)

ಪಾಣೆಮಂಗಳೂರು:— ಇಲ್ಲಿಯ ಎಸ್ ವಿ ಎಸ್ ಹಾಯರ್ ಎಲಿಮೆಂಟರಿ ಶಾಲೆಯ ೭ನೇ ದರ್ಜೆಗೆ ಪರ್ಮನೆಂಟ ರಿಕೊಗ್ನಿಶನ್ ಸಿಕ್ಕಿ ೮ನೇ ದರ್ಜೆಯನ್ನು ತೆರೆದಿರುವರು.

ಇದೇ ಶಾಲೆಯ ಸಹಾಯಾರ್ಥವಾಗಿ ಯುವಕ ಸಂಘದವರು ಕವಿ ನ ವಾಸುದೇವರಾಯರು ಬರೆದ "ಪತಿತ ಪರಾವರ್ತನ" ಎಂಬ ನಾಟಕವನ್ನು ನಡಿಸಿದರು.

ಇಲ್ಲಿಯ ಪಂಚಾಯತ ಬೋರ್ಡು ಚುನಾವಣೆಯು ಮುಂದರಿಸಲಾಯಿತು.

ಕೂರಾಡಿ.— ಶಾಂತಿನಿಕೇತನ ಹಾಯರ್ ಎಲಿಮೆಂಟರಿ ಶಾಲಾ 'ದಿನದ ಬೆ' ಬಾಲವೀರ ದಳದವರು ವಾರ್ಷಿಕ ಪರೀಕ್ಷೆಗೆ ಬಂದ ರಾ। ಶ್ರೀ। ಡಿ ಇ ರಾಮಯ್ಯ ನಾಯ್ಕರವರ ಇದಿರಿಗೆ ತಮ್ಮ ಶಿಬಿರಾಗ್ನಿಯನ್ನು ಬೆಳಗಿಸಿ ನೆರೆದ ಪ್ರೇಕ್ಷಕರನ್ನೂ ಹೆತ್ತವರನ್ನೂ ಆನಂದಗೊಳಿಸಿದರು. ಶಾಂತಿನಿಕೇತನ ಬಾಲಕರ ವಾಕ್ಚಾತುರ್ಯ ಸಂಘದ ಸಭೆಯೂ ಮಾನ್ಯ ಡಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ಸೇರಿತು. ತರ್ಕ ವಿಚಾರ — ಉದ್ಯೋಗವೂ ಕೈಗಾರಿಕೆಯೂ.

ನಡೂರು ಎಲಿಮೆಂಟರಿ ಶಾಲಾ ಪರೀಕ್ಷೆಯನ್ನು ಮುಗಿಸಿ, ಶ್ರೀ। ಜೂ ಡಿ ಇ ಎಂ ಪದ್ಮನಾಭಯ್ಯನವರೂ ಸಭೆಗೆ ದಯಮಾಡಿಸಿದ್ದರು.

ಪುತ್ತೂರು:— ಈ ತಾಲೂಕಿನ ಎಲಿಮೆಂಟರೀ ಶಾಲಾ ಉಪಾಧ್ಯಾಯರ ಸಂಘದ ಮಹಾಸಭೆಯು ಇದೇ ಜೂನ್ ತಾ ೧೯ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ಪುತ್ತೂರು ಬೋರ್ಡು ಹಾಯರ್ ಎಲಿಮೆಂಟರೀ ಶಾಲಾ ಕಟ್ಟಡದಲ್ಲಿ ಜರಗುವುದರಿಂದ ತಾಲೂಕಿನ ಉಪಾಧ್ಯಾಯ ಉಪಾಧ್ಯಾಯಿನಿಯರು ದಯಮಾಡಿ ಬರಬೇಕಾಗಿ ವಿನಂತಿ.

ಮೂಲ್ಕಿ:— ಇದೇ ನೇ ತಿಂಗಳ ತಾರೀಕು ೩೦—೫—೩೭ನೇ ಶುಕ್ರವಾರ ಮ। ರಾ। ರಾ। ಕೋಟಿ ಕೇರಿ ಪೂವಪ್ಪನವರು ಮೂಲ್ಕಿ ಬಿಲ್ಲವ ಸಮಾಜಸೇವಾ ಸಂಘಕ್ಕೆ ಉಚಿತವಾಗಿ ಒಪ್ಪಿಸಲು ಕಟ್ಟಿಸಿದ ಕಟ್ಟಡ ಪ್ರವೇಶ ಸಮಾರಂಭವು ಶ್ರೀ। ಡಾಕ್ಟರ್ ಎಂ. ರಾಯಪ್ಪ ಕಾಮತ್ ಎಲ್ ಎಂ ಪಿ ರವರ ಅಧ್ಯಕ್ಷತೆಯಲ್ಲಿ ಯೋಗ್ಯರೀತಿಯಲ್ಲಿ ನೆರವೇರಿತು. ಅಂದು ಅಪರಾಹ್ನ ಗಂಟೆ ೪-೩೦ಕ್ಕೆ ಅಧ್ಯಕ್ಷರನ್ನು ಬ್ಯಾಂಡಿನಿಂದ ಕರಕೊಂಡು ಬಂದು ಅಧ್ಯಕ್ಷರ ಚುನಾವಣೆ ಅವರ ಪೂರ್ವಾರ್ಥ ಭಾಷಣಗಳಾದ ಮೇಲೆ ಅಧ್ಯಕ್ಷರು ಕಟ್ಟಡವನ್ನು ತೆರೆದರು. ಆನಂತರ ಬಾಲಕಿಯರು ಶ್ರೀ ದೇವತಾ ಪ್ರಾರ್ಥನೆ ಮಾಡಿದರು. ರಾ। ಕೆ ಪೂವಪ್ಪನವನು ತಾನು ಕಟ್ಟಡ ಕಟ್ಟಿಸಿದ ಉದ್ದೇಶಗಳನ್ನು ಕುರಿತು ಭಾಷಣಮಾಡಿದರು. ರಾ। ಟಿ ನಾರಾಯಣ ಶೆಟ್ಟಿಯವರು, ರಾ। ಬಿ ಭೋಜರಾಯರು ರಾ। ಉಪೇಂದ್ರ ಪೈ ಬಿ ಎ ರವರು ರಾ। ಬಿ ಅಣ್ಣು ಮಾಸ್ತರವರು, ಕೆ ಮುತ್ತಪ್ಪನವರು ಈ ಸಂಘಕ್ಕೆ ಮಾಡಿದ ಉದಾರ ದಾನ, ಅವರಿಗೆ ಸಾರ್ವಜನಿಕ ಸೇವೆಯಲ್ಲಿದ್ದ ಆತುರ ಇತ್ಯಾದಿಗಳ ಕುರಿತು ಅವರ ಗುಣವನ್ನು ಪ್ರಶಂಸಿಸಿ ಯೋಗ್ಯ ರೀತಿಯಲ್ಲಿ ಮಾತಾಡಿದರು. ರಾ। ಎಂ ಕೆ. ಎಲ್ಲಪ್ಪ ಮಾಸ್ತರರು ನೆರೆದ ಮಹನೀಯರ ಹಾಗೂ ಅಧ್ಯಕ್ಷರ ಉಪಕಾರ ಸ್ಮರಿಸಿ ಧನ್ಯವಾದಗಳನ್ನರ್ಪಿಸಿದ ಬಳಿಕ ಉಪಹಾರಾದಿ ಸತ್ಕಾರಗಳಿಂದ ಸಭೆಯು ಕೊನೆಗೊಂಡಿತು.

ಮಂಗಳೂರು.

ಪ್ರೊ. ಸಿ. ಜೆ ವಾರ್ಕಿಯವರನ್ನು ಮದ್ರಾಸು ವಿಶ್ವವಿದ್ಯಾಲಯದ ಸಿಂಡಿಕೇಟಿನ ಒಬ್ಬ ಸದಸ್ಯರನ್ನಾಗಿ ಆರಿಸಲಾಗಿದೆ.

ಹ್ಯಾಕೋರ್ಟು ಹುಕುಂ ಪ್ರಕಾರ ಮಿ। ಎ ಪಿ ನಜರೇತ್‌ರವರು ಕಡಪ ಜಿಲ್ಲೆ ಮುನ್ಸಿಫರಾಗಿಯೂ, ಶ್ರೀ। ವೈ ಭರತ ಶಾಸ್ತ್ರಿಗಳು ಕಾಸರಗೋಡಿನ ಮುನ್ಸಿಫರಾಗಿಯೂ ವರ್ಗಾಯಿಸಲ್ಪಟ್ಟಿದ್ದರು. ಆದರೆ ಈಗ ಆ ಹುಕುಂ ರದ್ದಾಗಿರುತ್ತದೆ.

ಮಂಗಳೂರಿನ ಎಡಿಶನಲ್ ಮುನ್ಸೀಫರಾಗಿ ಪೆದ್ದಾಪುರದ ಶ್ರೀ। ಪೋಲ ರೆಡ್ಡಿಯವರು ವರ್ಗಾಯಿಸಲ್ಪಟ್ಟಿದ್ದು ಮೊನ್ನೆ ತಾ ೧೫ರಲ್ಲಿ ಅವರು ತಮ್ಮ ಚಾರ್ಜನ್ನು ತೆಗೆದುಕೊಂಡಿರುವರು.

ಹೆಗ್ಗುಂಜೆ ಮಂದರ್ತಿ.— ಇದೇ ತಾರೀಕು ೩—೬—೩೭ನೇ ದಿನ ಬೆಳಿಗ್ಗೆ ಕೊಕ್ಕರ್ಣೆಯಿಂದ ಮಂದಾರ್ತಿಗೆ ಹೋಗುವ ರಸ್ತೆಯ ಸಮೀಪ ಗೋವೆ ಕೊಡ್ಲು ಕುಡುಬಿ ಗುರ್ಕನಾಯ್ಕನ ಹೆಂಡತಿ ಸುಮಾರು ೩೫ ವರ್ಷ ಪ್ರಾಯದ ಬೈರಿಬಾಯಿಯು ತರಗೆಲೆ ತರಲಿಕ್ಕೆ ಹೋದವಳು ಮಧ್ಯಾಹ್ನದ ತನಕ ಮನೆಗೆ ಬಾರದ್ದನ್ನು ಕಂಡು, ಮನೆಹತ್ತಿರ ಕಾಡಿನಲ್ಲಿ ಹುಡುಕಾಡಿದರು, ಸುಮಾರು ಒಂದು ಫರ್ಲಾಂಗ್ ದೂರ ಆವಳ ಹೆಣ ಬಿದ್ದಿತ್ತು. ಕುತ್ತಿಗೆಯಲ್ಲಿ ಹುಲಿಯ ಹಲ್ಲುಗಳ ಗಾಯವಿತ್ತು, ಬಲಕಾಲು ಇಡೀ ತೊಡೆಯ ವರೆಗೂ ಹರಿದು ತಿಂದಿತ್ತು. ಜಾಗೆ ಕೊಂಡು ಗುಡಿಸುವಾಗ ಹುಲಿಯು ಹಾರಿ ತಿಂದಿರಬೇಕೆಂದು ಕಾಣುತ್ತದೆ. ಜನರು ಹಗಲಿನಲ್ಲಿ ಮನೆ ಬಿಡಲಿಕ್ಕೂ ಹೆದರುತ್ತಾರೆ. ಇಂತಹ ನರಭಕ್ಷಕನನ್ನು ಕೊಲ್ಲುವವರು ಮುಂದೆ ಬಂದಾರೇ?

ಪಣಂಬೂರು: ಇಲ್ಲಿನ ಶ್ರೀ ನಂದನೇಶ್ವರ ದೇವರ ಸನ್ನಿಧಿಯಲ್ಲಿ ಊರ ಮಹನೀಯರ ಪ್ರೋತ್ಸಾಹದಿಂದ ಇದೇ ಕಳೆದ ತಾ. ೭—೬—೩೭ನೇ ಸೋಮವಾರ ದಿನ ಮಲ್ಪೆ ಶ್ರೀ ಶಂಕರನಾರಾಯಣ ಸ್ವಾಮಿಗಳು ಭಂಡಾರೀ ಮಹಾತ್ಮೆ ಎಂಬ ಹರಿಕಥಾ ಕಾಲಕ್ಷೇಪವನ್ನು ಬಹು ಸುರಸವಾಗಿ ಜರಗಿಸಿದರು.

ಮರು ದಿನ ತಾ ೮ನೇ ಮಂಗಳವಾರ ತಣ್ಣೀರಭಾವಿ ಬೋರ್ಡು ಶಾಲೆಯಲ್ಲಿ ಪ್ರಹ್ಲಾದ ಚರಿತ್ರೆ ಎಂಬ ಕಥೆಯೂ ಶ್ರೀಯುತರಿಂದಲೇ ಯಶಸ್ವಿಯಾಗಿ ಜರಗಿಸಲ್ಪಟ್ಟಿತು.

ಉಡುಪಿ

(ನಮ್ಮ ಸ್ವಂತ ವಾರ್ತಾದಾರರಿಂದ)

ಡಿ. ಬೋ. ಸದಸ್ಯರ ಅವಗಾಹನೆಗೆ— ಎಷ್ಟು ಸಮಯದಿಂದ ಸಾರ್ವಜನಿಕರು ತಮ್ಮನ್ನು ಕಡವು ಪಾರುಮಾಡ ವುದರಲ್ಲಿ ಕಡವಿನವನಿಗೆ ಬೇರೆ ದೋಣಿಯವನಿಗೆ ಬೇರೆ ಫೀಸು ತೆರಬೇಕಾಗಿಬರುವುದರ ಮಟ್ಟಿನಲ್ಲಿ ಜಿಲ್ಲಾ ಬೋರ್ಡಿನ ಲಕ್ಷ್ಯವನ್ನು ಸೆಳೆದಾಗ್ಯೂ ಫಲಿಸಲಿಲ್ಲ. ಸದ್ಯ ಬರಲಿರುವ ಸಭೆಯಲ್ಲಾದರೂ ಈ ಬಗ್ಗೆ ಗಮನವಿತ್ತು ಈಗಣ ಆರ್ಥಿಕ ಅಡಚಣೆಯ ಪೇಟೆಯಲ್ಲಿ ಸಾಮಾನ್ಯರಿಗೆ ಕರುಣೆತೋರಿಸುವಂತಾದೀತೆ? ಒಂದು ಪಕ್ಷ ಕಡವಿನವನಿಗೆ ಪೂರೈಸುವುದಿಲ್ಲವಂತೆ, ಫ್ಯಾರೀ ಫೀಸನ್ನು ಅಗಕ್ಯವೆಂದಾದ್ದಲ್ಲಿ ಏರಿಸಲೂ ಬಹುದು. ಈಗಿನಂತೆ ಮುಬಾರೆ ಚಾರ್ಜು ತೀರಾ ಅನ್ಯಾಯ. ಅಂತೆಯೇ ಮೋಟಾರುಗಳೂ ಅತ್ತಿತ್ತ ಹೋಗುವಾಗಲೂ ಜಂಗಲಿನ ಮಕ್ಕಳಿಗೂ ಕಡವಿನ ಚಾರ್ಜಿನ ಅರ್ಧದಷ್ಟು ದೋಣಿಯವನಿಗೆ ಮಾಮೂಲಾಗಿ ತೆರುವ ಸಂಪ್ರದಾಯವೂ ಇದೆ. ಅನ್ಯಾಯ!

ಮೋಟಾರು ಅವಘಡ— ಇದೇ ತಾರೀಕು ೪ನೇ ಅಪರಾಹ್ನ ಸಿ ಪಿ ಸಿ ಕಂಪೆನಿಯ ಬಸ್ಸುಸರ್ವಿಸನ್ನು ಉಡುಪಿಯಿಂದ ಉದ್ಯಾವರಕ್ಕೆ ಒಯ್ಯುವಾಗ ಕಿನ್ನಿಮೂಲ್ಕಿ ಸಂದಿನಲ್ಲಿ ಈರ್ವರು ಹುಡುಗರು ಮೋಟಾರು ಬಂದೊಡನೆ ಗಲಿಬಿಲಿಯಿಂದ ಮಾರ್ಗದಲ್ಲಿ ಅತ್ತಿತ್ತ ಆಡ್ಡಾಡಲು ಡ್ರೈವರನು ಎಷ್ಟು ಪ್ರಯತ್ನಿಸಿದಾಗ್ಯೂ ಅವರಲ್ಲೊಬ್ಬ ೮—೧೦ ವರ್ಷ ಪ್ರಾಯದ ಮೊಗವೀರ ಜಾತಿಯ ಹುಡುಗನು ಅಕಸ್ಮಾತ್ತಾಗಿ ಮೋಟಾರಿನಡಿಗೆ ಬಿದ್ದು ಕೂಡಲೇ ಕಾಲವಾದುದು ಅತಿ ಶೋಚನೀಯವಾಗಿದೆ. ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ, ಬಸ್ಸಿನೊಳಗಣ ಪ್ರಯಾಣಿಕರ ಮತ್ತು ಆಗ ಹತ್ತಿರ ಮಾರ್ಗದಲ್ಲಿದ್ದವರ ಹೇಳಿಕೆಯ ಮೇರೆಗೆ ಈ ಅವಘಡ ತೀರ ಅಕಸ್ಮಾತ್ತೆಂದು ತಿಳಿದುಬರುತ್ತದೆ. ಪೇಟೆ ವ ಮೋಟಾರ ಚಲಾವಣೆಯ ಮಾರ್ಗಗಳಲ್ಲಿ ಸಂಚರಿಸುವವರು ಮುಖ್ಯತಃ ಮಕ್ಕಳು ಮಾರ್ಗದಲ್ಲಿ ಜಾಗ್ರತೆಯಿಟ್ಟುಕೊಂಡೇ ಚಲಿಸುತ್ತಿರುವ ಬಗ್ಗೆ ಹೆಚ್ಚಿನ ಜಾಗ್ರತೆಯಿರಲಿ.

ಕಾಸರಗೋಡು ಸರ್ಕಲಿಗೆ ಅಸಿಸ್ಟೆಂಟ್ ಎಕ್ಸೈಜ್ ಇನ್ಸ್‌ಪೆಕ್ಟರರಾಗಿದ್ದ ಶ್ರೀ। ಟಿ. ಗೋಪಾಲನ್ ನಾಯರ್‌ರವರು ಅಮ್ಮೆಂಬಳದುಗು ಸರ್ಕಲಿನ ತಾತ್ಕಾಲಿಕ ಇನ್ಸ್‌ಪೆಕ್ಟರರಾಗಿಯೂ, ಉಡುಪಿ ಸರ್ಕಲಿನ ಎಕ್ಸೈಜ್ ಅಸಿ ಇನ್ಸ್‌ಪೆಕ್ಟರರಾದ ಶ್ರೀ। ಪಿ. ಕೆ ಮಾಧವ ಮೆನನರು ಕಣ್ಣಾನೂರು ಸರ್ಕಲಿನ ಹರಿಗಾಮಿ ಇನ್ಸ್‌ಪೆಕ್ಟರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆಂದು ತಿಳಿದಿದೆ.

ನಮ್ಮ ಜಿಲ್ಲಾ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟ ರಾವ್‌ಬಹದ್ದೂರ್ ಎಂ ವಿ ವೆಲ್ಲೋಡಿ ಬಿ ಎ. ಇವರು ಇದೇ ತಿಂಗಳ ತಾ ೧೮ಕ್ಕೆ ಮಂಗಳೂರಿಗೆ ಬರುವರೆಂದು ತಿಳಿದುಬರುತ್ತದೆ.

ಇಲ್ಲಿಯ ಕೋ ಒಪರೇಟಿವ್ ಸೊಸೈಟಿಗಳ ಡಿ। ರಿಜಿಸ್ಟ್ರಾರರಾದ ಶ್ರೀ। ಕಣ್ಣನ್ ನಾಯರ ರವರು ಕಲ್ಲಿಕೋಟೆಯ ಡಿ ರಿಜಿಸ್ಟ್ರಾರರಾಗಿಯೂ ಹುದ್ದೆಯನ್ನು ನೋಡಿಕೊಳ್ಳುವರು.

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಒಂದು ಲ್ಯಾಂಡ್ ಮಾರ್ಟ್‌ಗೇಜು (ಜಮೀನು ಅಡವಾಸ್ತು ಬೇಂಕು) ಬೇಂಕನ್ನು ಸ್ಥಾಪಿಸುವ ವಿಚಾರದಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸುವ ಬಗ್ಗೆ ವಿಚಾರಣಾ ಕಮಿಟಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಟಿ ರಾಮಲಿಂಗಂ ಚೆಟ್ಟಿಯಾರ್ ಎಂ ಎಲ್ ಸಿ ಯವರು ಕಳೆದ ವಾರ ಮಂಗಳೂರಿಗೆ ದಯಮಾಡಿಸಿದ್ದರು. ಕೋಒಪರೇಟಿವ್ ಸಂಘದ ರಿಜಿಸ್ಟ್ರಾರ್ ಶ್ರೀ। ಕಣ್ಣನ್ ನಾಯರ್ ಶ್ರೀಮತಿ ಕಮಲಾದೇವಿಯವರೇ ಮೊದಲಾದ ಪುರಪ್ರಮುಖರು ಶ್ರೀಯುತ ಚೆಟ್ಟಿಯಾರರನ್ನು ಇದಿರ್ಗೊಂಡು ಸತ್ಕರಿಸಿದರು. ವಿಚಾರಣಾ ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿರುವ ಶ್ರೀ। ಎ ಶ್ರೀನಿವಾಸ ಪೈ ಮತ್ತು ದಿವಾನ್ ಬಹದ್ದೂರ್ ಯು ರಾಮರಾವ್ ಇವರೊಡನೆ ಸಂಭಾಷಣೆ ನಡಿಸಿ ಮಲಬಾರು ಜಿಲ್ಲೆಗೆ ಹೋದರು. ಇಂದು ಸಾಯಂಕಾಲ ಶ್ರೀ। ಚೆಟ್ಟಿಯಾರರು ಪುನಃ ಇಲ್ಲಿಗೆ ಬರುವರೆಂದೂ, ಜಿಲ್ಲೆಯ ಮುಖ್ಯ ಕೇಂದ್ರಗಳನ್ನು ಸಂದರ್ಶಿಸಿ ಬೇಂಕನ್ನು ಸ್ಥಾಪಿಸುವ ವಿಚಾರಗಳನ್ನು ಪರ್ಯಾಲೋಚಿಸುವರೆಂದೂ ತಿಳಿದುಬರುತ್ತದೆ.

ಕೋಳ್ಯೂರಿನ ಶ್ರೀ ಶಂಕರನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಸಭಾ ಇವರು ನಗರದ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಆಗಲೇ ಕೆಲವು ನಾಟಕಗಳನ್ನು ಅಭಿನಯಿಸಿರುವರು. ಯಕ್ಷಗಾನದಲ್ಲಿ ಇದೊಂದು ನವೀನ ಮಾದರಿ ಇರುವುದರಿಂದ ಯಕ್ಷಗಾನ ಪ್ರೇಮಿಗಳೂ, ನಾಟಕೋಪಾಸಕರೂ ತುಂಬಾ ಪ್ರೋತ್ಸಾಹಿಸುತ್ತಲಿರುವರು. ಇವರ ಯಕ್ಷಗಾನ ಹಾಡುಗಾರಿಕೆ ಮೃದಂಗವಾದನ ಅರ್ಥ ಹೇಳುವುದೇ ಮೊದಲಾದ ಅಭಿನಯಗಳು ಯ ಥೋಚಿತ ಉಡುಪು ಅಲಂಕಾರಗಳಿಂದಲೂ ಸೀನರಿ ಶೃಂಗಾರಗಳಿಂದಲೂ ಕೂಡಿರುವುದರಿಂದ ಪ್ರೇಕ್ಷಕರ ಅಭಿರುಚಿಯು ಹೆಚ್ಚುವುದು. ಮನಪೋಷಕ ಸಾಹಿತ್ಯಕಲಾ ಚತುರತೆಯಿಂದ ಕೂಡಿದ್ದು ಕನ್ನಡ ಭಾಷಾಭಿವೃದ್ಧಿಗೆ ತುಂಬಾ ಸಹಾಯಕವಿರುವ ಈ ನಮ್ಮ ನಾಡಿನ ಈ ಒಂದು ಕಲೆಯನ್ನು ಪ್ರೋತ್ಸಾಹಿಸುವುದು ಕರ್ತವ್ಯವಾಗಿರುತ್ತದೆ.

ಶ್ರೀ ವಿವೇಕಾನಂದ ಸಭೆ, ರಾಘವಪ್ರಭು —ಇಲ್ಲಿ ಪ್ರತಿ ಆದಿತ್ಯವಾರ ದಿವಸ ಗೀತೆಯ ಕುರಿತು ಪ್ರವಚನಗಳು ವಾಡಿಕೆ ಪ್ರಕಾರ ನಡೆಯುವಂತೆ ಬರುವ ಆದಿತ್ಯವಾರ ತಾರೀಕು ೧೩ರಲ್ಲು ಬೆಳಿಗ್ಗೆ ಗಂಟೆ ೮ಕ್ಕೆ ವೇದಮೂರ್ತಿ ಶಿವಾನಂದ ಭಟ್ಟರವರು "ಭಕ್ತಿಯೋಗ" ಎಂಬ ವಿಷಯವನ್ನೆತ್ತಿ ಭಾಷಣಮಾಡುವರು. ಬಹು ಜನರು ಬಂದು ಪ್ರೋತ್ಸಾಹಿಸಬೇಕಾಗಿ ಸಭೆಯ ಕಾರ್ಯದರ್ಶಿಯವರ ವಿನಂತಿ.

ಶ್ರೀಮತಿ ಕಮಲಾದೇವಿಯವರು ಧಾರವಾಡದಲ್ಲಿ ನಡೆಯಲಿರುವ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಕಳೆದ ತಾ ೪ರಲ್ಲಿ ಹೋಗಿರುವರೆಂದು ತಿಳಿದುಬರುತ್ತದೆ.

ಇಲ್ಲಿಯ ಶ್ರೀ ಚಿತ್ರಾ ಟಾಕೀಸ್ ಮಂದಿರದಲ್ಲಿ ವಾಡಿಯಾ ಮೂವಿಟೋನ್‌ನವರ "ಮಿಸ್ ಫ್ರಾಂಟೀಯರ್ ಮೈಲ್" ಎಂಬ ಚಿತ್ರದ ಪ್ರದರ್ಶನವು ಪ್ರಾರಂಭವಾಗಿದೆ. ಆಗಲೇ ತುಂಬಾ ಪ್ರೋತ್ಸಾಹವಿದೆ. ಚಿತ್ರವೂ ಬಹಳ ಸ್ವಾರಸ್ಯಪೂರ್ಣವಾಗಿದ್ದು ಈಗಲೇ ಬಹಳ ಜನಪ್ರಿಯತೆಯನ್ನು ಪಡೆದಿದ್ದ ಮಿಸ್ ನಾದಿಯಳ ಪಾತ್ರಗಾರಿಕೆಯಿಂದ ಕೂಡಿದೆ. ವಿಶೇಷವೆಂದರೆ ಈ ಮಿಸ್ ನಾದಿಯಾ ಎಂಬ ನಟಿಯು ತನ್ನ ಅಸಮಾನ ಕೌಶಲ್ಯದಿಂದ ಮಾಡುವ ಸಾಹಸಕೃತ್ಯಗಳು ಇಷ್ಟರವರೆಗೆ ಚಲಚ್ಚಿತ್ರ ಧೀರರೆಂದೆನಿಸಿ ಮೆರೆದ ಅನೇಕಾನೇಕ ಪುರುಷ ನಟರನ್ನು ನಾಚಿಸುವಂತಹದಾಗಿದೆ.

ದಿ. ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್ ಉಡುಪಿ, ಇದರ ಶಾಖೆಯೊಂದು ಇದೇ ತಾ ೪—೬—೩೭ನೇ ದಿನ ಕೇಲಮಿನಲ್ಲಿ ಅತೀ ವಿಜೃಂಭಣೆಯಿಂದ ತೆರೆಯಲ್ಪಟ್ಟಿತು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ.

ಈ ಮೇಲ್ಕಾಣುವ ಮಂಡಳಿಯ ೩೮ನೇ ವಾರ್ಷಿಕ ಮಹಾಸಭೆಯು ಮೇ ತಿಂಗಳ ತಾ, ೨೩ನೇ ಆದಿತ್ಯವಾರ ಅಪರಾಹ್ನ ೨ ಘಂಟೆಗೆ ಮೊಗವೀರ ರಾತ್ರಿ ಶಾಲೆಯ ಸಭಾಸದನದಲ್ಲಿ ರಾ। ಎಚ್. ಕೆ ಎ. ಕುಂದರನ್‌ರ ಅಧ್ಯಕ್ಷತೆಯಲ್ಲಿ ಜರಗಿತು. ದೇವತಾ ಪ್ರಾರ್ಥನೆಯಾದ ಬಳಿಕ ಮಂಡಳಿಯ ದಿವಂಗತ ಮೆಂಬರರ ಮತ್ತು ಆಶ್ರಯದಾತರ ಮರಣದ ಕುರಿತು ದುಃಖ ಸೂಚಕ ಠರಾವನ್ನು ಎಲ್ಲರೂ ಎದ್ದು ಮಂಜೂರು ಮಾಡಲಾಯಿತು. ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆಯ ವ್ಯಯದ ಪಟ್ಟಿಯನ್ನೊಳಗೊಂಡ ಸನ್ ೧೯೩೬ನೇ ಇಸವಿಯ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಸಮಾಜದ ಸುಧಾರಣೆಯ ಕುರಿತು ಕೆಲವು ಠರಾವುಗಳನ್ನು ಮಂಜೂರು ಮಾಡಿ ೧೯೩೭ನೇ ಇಸವಿಯ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿ ಈ ಕೆಳಗಿನ ಹೊಸ ಕಾರ್ಯ ನಿರ್ವಾಹಕ ಸಭೆಯನ್ನು ದೃಢೀಕರಿಸಲಾಯಿತು.

ಅಧ್ಯಕ್ಷರು — ರಾ। ಇ ಟಿ ದೇಪ್ಪಿಯವರು ಉಪಾಧ್ಯಕ್ಷರ ರಾ। ಉಚ್ಚಿಲ ರಾಮರಾಯರು, ಗೌರವ ಕಾರ್ಯದರ್ಶಿಯವರು — ರಾ।ಗಳಾದ ಎಸ್ ಕೆ. ಮೈಂದನ ಆರ್ ಕೆ ಕುಂದರ್ ಮತ್ತು ಆರ್ ಎ ಅಮೀನ ರು. ಗೌರವ ಕೋಶಾಧಿಕಾರಿಯವರು — ರಾ।ಗಳಾದ ಸಿ ಪಿ ಕರ್ಕೇರರು ಮತ್ತು ಡಿ ಎ ಕರ್ಕೇರರು. ರಾತ್ರಿ ಶಾಲೆಯ ಆನರರಿ ಸುಪರಿಂಟೆಂಡೆಂಟರು — ರಾ। ಎಚ್ ಕೆ ಬಂಗೇರರು. ಲೈಬ್ರೇರಿಯನ್‌ರ — ರಾ।ಗಳಾದ ವಿ ಬಿ ಕರ್ಕೇರರ ಮತ್ತು ಎಸ್ ಸಿ. ಬಂಗೇರರು. ಟ್ರಸ್ಟಿಯರು ಮತ್ತು ಪೂರ್ವಾಧ್ಯಕ್ಷ ಮೆಂಬರರು — ರಾ।ಗಳಾದ ಸಿ ಎ ಮಾಸ್ತರರು ಎಸ್ ಬಿ. ಕೋಟಿಂಕಾರರು, ಎಚ್ ಎಸ್ ಮೆಂಡನರು ಕೆ ಬಿ ಕರ್ಕೇರರು ಮತ್ತು ಬಿ ಪಿ ಕರ್ಕೇರರು. ಮೆಂಬರರು ರಾ।ಗಳಾದ ಕೆ ಯು. ಮೆಂಡನರು, ಜಿ ಸಿ ಎಚ್ ಕೆ ಎ ಕುಂದರರವರು ಎಸ್ ಆರ್ ಕುಂದರ್ ಪಿ ಜಿ ಕೋಟ್ಯಾನರು ವೈ ಕೆ ಕೋಟಿಯನರಾದರು ವೈ ಬಿ ಕುಂದರರು ಎಸ್ ಪಿ ಕಾಂಚನರು ಕೆ ಎಸ್ ಬಂಗೇರರು ಮತ್ತು ಆರ್ ಪಿ ಕುಂದರ.

ಮಂಗಳೂರು ಶಾಖೆಯ ಕಮಿಟೀ ಮೆಂಬರರು

ಅಧ್ಯಕ್ಷರ —ರಾ। ಕೆ ಎಮ್ ಕೋಟ್ಯಾನವರು ಮಾನನಾರ್ಥ ಕಾರ್ಯದರ್ಶಿ ಮತ್ತು ಕೋಶಾಧಿಕಾರಿ ರಾ ಎಚ್ ಬಿ ಕೋಟಿಂಕಾರರು ಮೆಂಬರರು ರಾ।ಗಳಾದ ಉಚ್ಚಿಲದ ಸದಿಯನವರು ಕೈಪುಂಜಾಲು ಚೆನ್ನಪ್ಪನವರು, ಹೊಯಿಗೆ ಬಜಾರು ಮೋಹನಪ್ಪ ತಿಂಗಳಾಯರು ಬೊಕ್ಕಪಟ್ಣ ಜಾರಪ್ಪ ಎ ಪುತ್ರನರು ಮತ್ತು ಗುಂಡಿ ದಗ್ಗಪ್ಪ ಎನ್ ಶ್ರೀಯಾನರು. ಸಭೆಯಲ್ಲಿ ಹಾಜರಿದ್ದವರ ಪೈಕಿ ರಾ।ಗಳಾದ ಶಂಭು ಪಿ ಮೂಲೂರು ಕಾರ್ ಮಿಮರ್ಯಾಳ್ ಕೊರಗಪ್ಪ ಎನ್ ಕೆ ಪುತ್ರನ್ ಎನ್ ಎ ಕರ್ಕೇರ ಕುಮಾರ್ ಕುಂದರ್ ವಿ ಎ ಸಾಲಿಯಾನ್ ಹೊಸಕೊಪ್ಪ ಪಕೀರಪ್ಪ, ಯರ್ಮಾಳ್ ಕಾಂತಪ್ಪ ಪುತ್ರನ್ ಮೊದಲಾದವರು ಮಂಡಳಿಯ ವಿವಿಧ ಕಾರ್ಯಕಲಾಪಗಳನ್ನು ಪ್ರಶಂಸಿಸಿ ಮಾತಾಡಿದರು. ಸಭಾಧ್ಯಕ್ಷರು ತಮ್ಮ ಬೋಧಪ್ರದವಾದ ಭಾಷಣದಲ್ಲಿ ಸನ್ ೧೯೩೬ನೇ ಇಸವಿಯ ಕಾರ್ಯಕಲಾಪಗಳನ್ನು ವಿಮರ್ಶಿಸಿ ಮಂಡಳಿಯ ಪುರೋಭಿವೃದ್ಧಿಗಾಗಿ ಹಲವು ಸಲಹೆಗಳನ್ನಿತ್ತರು. ಇದು ಮೊದಲ್ಗೊಂಡು ಅಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದವನ್ನರ್ಪಿಸಿ ಮಂಗಳ ಗೀತ ಹಾಡಿದ ಬಳಿಕ ಸಭೆಯು ಮುಕ್ತಾಯವಾಯಿತು.

ನೋಟೀಸು

ಮ। ರಾ। ರಾ। ನೆಲ್ಲಿಕಾಯಿ ವೆಂಕಟ ಕೃಷ್ಣರಾಯರ ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ್ ಮಿಜಾರ ಗೋವಿಂದ ಪೈಯು ಈ ಮೂಲಕ ತಿಳಿಯಪಡಿಸುವುದೇನೆಂದರೆ— ಇದೇ ತಿಂಗಳ ತಾ 8—6—37ಕ್ಕೆಂದು ಪ್ರಕಟಿಸಿದ ಏಲಂ ಇದೇ ತಿಂಗಳ ತಾರೀಕು 19-6-37ನೇ ಶನಿವಾರ ಗಂಟೆ 6ಕ್ಕೆ ಮುಂದರಿಸಿದೋಣಾಗಿರುತ್ತದೆ.

4 - 6 - '37 **Mizar Govinda Pai**

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಚಾರ್ಮಾಡಿ		ಕಾರ್ಕಳ
ಉಜಿರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)	ಉಡ್ಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೊಯಿಂಟ್ ಮೆನೇಜರರಿಗೆ ಬರೆದು ತಿಳಿಸಿರಿ

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 908

Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses

It pays you to represent this Company

Wanted Agents in unrepresented parts.

Apply to —

Messrs Kochikar Brothers,

Madras Branch Secretaries.

1936

OUR VALUATION YEAR

Take a BOMBAY LIFE Policy now, and share in the profits



Branches at.-	P B. 337, Mount Road, Madras.	Visveshwarapuram Circle, Bangalore City.,	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No 4

ಹಿಂದೂದೇಶದ ವಾರ್ತೆಗಳು.

ಸ್ಯಾಚೂರು ಬಳಿ ಕೃಷ್ಣಾ ನದಿಗೆ ಸೇತುವೆ ಹಾಕಲು ನೈಜಾಮ ಸರಕಾರದವರು ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿರುವರು.

ಆರನೇ ಜಾರ್ಜರ ಕಿರೀಟಧಾರಣ ಉತ್ಸವದ ಸ್ಮಾರಕಾರ್ಥವಾಗಿ ಅಂಡಮಾನದಲ್ಲಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ೪೫ ಮಂದಿ ಬಂಧಿಗಳನ್ನು ಬಿಡುಗಡೆ ಮಾಡುವರಂತೆ.

ನಾಗಪಟ್ಟಣದಿಂದ ಪೆನಾಂಗಿಗೆ ಪ್ರಯಾಣ ಮಾಡುತ್ತಿದ್ದು, ೨೦೦೦ ಪ್ರಯಾಣಿಕರಿದ್ದ ಒಂದು ಪೆಸೆಂಜರು ಹಡಗದಲ್ಲಿ ಕಾಲರಾ ರೋಗವು ಆರಂಭವಾಗಿ, ಪೆನಾಂಗಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದ ೧೧ ಮಂದಿ ಭಾರತೀಯ ಕೂಲಿಗಳು ಮಡಿದರು.

ಮಧ್ಯಪ್ರಾಂತ್ಯಕ್ಕೆ ಸೇರಿದ ಒಂದು ಗ್ರಾಮವು ಕಳೆದ ೨ನೇ ತಾರೀಕಿನಂದು ಬೆಂಕಿಗಾಹುತಿಯಾಯಿತು. ಸಾವಿರಾರು ರೂಪಾಯಿಗಳ ನಷ್ಟವಾಗಿದೆ—ಪ್ರಾಣಹಾನಿಯಾಗಲಿಲ್ಲ.

ಅಲ್ಲಹಾಬಾದ್ ಬಳಿಯಿರುವ ಮಾಂಡ್ ಸಂಸ್ಥಾನದ ಅಧಿಪತಿಗಳು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಉತ್ತರ ಹಿಂದೂಸ್ಥಾನದ ಶಾಖೆಗೆ ೧೦೦೦ ಎಕರೆಯ ಭೂಮಿಯನ್ನು ದಾನಮಾಡಿರುವರು. ಈ ಜಮೀನಿನಲ್ಲಿ ಗ್ರಾಮ ಪುನರುದ್ಧಾರದ ಕೇಂದ್ರವನ್ನು ತೆರೆಯುವರೆಂದು ತಿಳಿದುಬರುತ್ತದೆ.

ಮುಂದರಿದ ಜನಾಂಗಗಳಲ್ಲಿ ನಗ್ನಧಾರಿಗಳ ಸಂಘಗಳಿವೆ. ನಗ್ನ ಸಂಸ್ಕೃತಿಯ ಪ್ರಚಾರವು ಭಾರತದಲ್ಲೇನೂ ಹೊಸದಲ್ಲ. ಉತ್ತರ ಹಿಂದೂದೇಶದ ಅನೇಕ ಪ್ರಾಂತ್ಯಗಳಲ್ಲಿ ಈ ನಗ್ನರೂಪಿಗಳ ನಾಗ್ ಎಂಬ ಪಂಗಡಗಳಿವೆ. ಇವರೊಂದು ತರದ ಸಾಧು ಜನರು, ಮನೆಯ ಒಳಗೂ ಹೊರಗೂ ಇವರು ನಗ್ನರೂಪಿಗಳೆ. ಷಹಜಾನ್‌ಪುರದಲ್ಲಿ ಕಳೆದ ೩ ವಾರಗಳಿಂದ ಈ ಬತ್ತಲೆ ಸಾಧುಗಳ ಸಂಖ್ಯೆಯು ಹೆಚ್ಚುತ್ತಲಿದೆ. ಸ್ವೇಚ್ಛೆಯಾಗಿ ಇವರು ಮಾರ್ಗಗಳಲ್ಲಿ ಸಂಚರಿಸುತ್ತಿರುವರಂತೆ. ಈಗ ಮ್ಯಾಜಿಸ್ಟ್ರೇಟರು ನಿಷೇಧಕಾನೂನನ್ನು ಜ್ಯಾರಿಗೆ ತಂದಿರುವರು.

ಹೊಸಡೆಲ್ಲಿಯ ಕಾಶ್ಮೀರ್ ಗೇಟ್ ಬಡಾವಣೆಯಲ್ಲಿರುವ ಒಬ್ಬ ಆಂಗ್ಲೋ ಇಂಡಿಯನನ ಬಂಗ್ಲೆಯಲ್ಲಿ ಪೋಲೀಸರು ಜಪ್ತಿ ನಡೆಸಿದರು. ಅದರ ಫಲವಾಗಿ ಲೈಸೆನ್ಸ್ ಇಲ್ಲದ ಪಿಸ್ತೂಲ ಒಂದು ಸಿಕ್ಕಿರುತ್ತದೆ. ಕ್ರಾಂತಿಕಾರ ಚಳವಳದವನಿರಬಹುದೆಂದು ಕೆಲವು ಅಧಿಕಾರಿಗಳ ಊಹೆ.

ರಾಜಕುಟುಂಬದ ದುರಾದೃಷ್ಟ! ವಿಧಿ ವಿಲಾಸ—ಶವ ಕೊಳೆಯುತ್ತಿದೆ!

ಮೇ ತಾ. ೯ನೇ ದಿನ ಮರಣಹೊಂದಿದ ಬರ್ಮಾದ ಮಾಜಿ ಅರಸುಮನೆತನದ ಸದಸ್ಯರಾದ ಸೌಯೂನಿನ್ನನ ಮಗಳಾದ ರಾಜಕುಮಾರಿ ಚಂದ್ರಾದೇವಿಯ ಶವಸಂಸ್ಕಾರಗಳನ್ನು ಮಾಡಲಿಕ್ಕೆ ತನಗೆ ಒಂದು ಸಾವಿರ ರೂಪಾಯಿಗಳು ಬೇಕೆಂದು ಸೌಯೂನಿನ್ನನು ಸರಕಾರಕ್ಕೆ ಬರೆದುಕೊಂಡಾಗ, ೨೦೦ ರೂಪಾಯಿಗಳಿಗಿಂತ ಹೆಚ್ಚಿಗೆ ಕೊಡಲಾಗುವುದಿಲ್ಲವೆಂದಾದ ಮೇಲೆ, ಸೌಯೂನಿನ್ನನು ಒಂದು ಸಾವಿರ ರೂಪಾಯಿಗಳು ಸಿಗದೆ ಅವಳ ಶವಸಂಸ್ಕಾರವನ್ನು ಮಾಡುವುದಿಲ್ಲವೆಂಬ ನಿರ್ಧಾರವನ್ನು ಮಾಡಿದ್ದನಷ್ಟೆ. ಆ ಮೇಲೆ ಇಂದಿಗೆ ಸುಮಾರು ಒಂದು ತಿಂಗಳಿಂದಲೂ ರಾಜಕುಮಾರಿಯ ಶವವು ಶವದಪೆಟ್ಟಿಗೆಯಲ್ಲಿ ಕೊಳೆಯುತ್ತಿದೆ. ಪೆಟ್ಟಿಗೆಯು ಕಲ್ಕತ್ತದ ಒಂದು ಬೌದ್ಧ ದೇವಾಲಯದಲ್ಲಿ ಬುದ್ಧನ ವಿಗ್ರಹದಡಿಯಲ್ಲಿ ಇಡಲ್ಪಟ್ಟಿದೆ. ಈ ದುರ್ದಶೆಯನ್ನು ತಿಳಿದ ಸರಕಾರವು ಕಡೆಗೆ ೫೦೦ ರೂಪಾಯಿಗಳನ್ನು ಕೊಟ್ಟಿತು. ಅದೂ ಸಾಲದೆಂದು ರಾಜಕುಮಾರ ಸಯೂನಿನ್ನನು ಅನ್ನುತ್ತಾನೆ. ಒಂದು ಸಾವಿರ ರೂಪಾಯಿಯೇ ತನಗೆ ಬೇಕೆಂದವನು ಛಲಹಿಡಿದಿರುವನು. ಕಲ್ಕತ್ತದ ನಾಗರೀಕರು ವಂತಿಗೆ ಮಾಡಿ ಹಣವನ್ನು ಕೊಡುತ್ತೇವೆಂದರೆ, ಅವನು ಅದು ತನಗೆ ಬೇಡವೆನ್ನುತ್ತಿರುವನು. ರಾಜಕುಟುಂಬಕ್ಕೆ ಒದಗಿದ ಈ ಶೋಚನೀಯ ಅವಸ್ಥೆಯು ಎಲ್ಲರನ್ನೂ ಮರುಕಗೊಳಿಸುವಂತಿದೆ.

ಕಲ್ಕತ್ತದಲ್ಲಿ ಸುಮಾರು ೨೦ ಸಾವಿರ ಟೆಲಿಫೋನುಗಳಿವೆಯಂತೆ. ಕಳೆದ ಮಾರ್ಚ ತಿಂಗಳ ಕೊನೆಗೆ ಅಂತ್ಯವಾದ ಒಂದು ವರ್ಷದಲ್ಲಿ ಈ ಟೆಲಿಫೋನುಗಳು ೨೮॥ ಮಿಲ್ಲಿಯ ಬಾರಿ ಉಪಯೋಗಿಸಲಾಗಿವೆಯೆಂದು ಸರಕಾರವು ಪ್ರಕಟಿಸಿದ ಒಂದು ಲೆಖ್ಖಾಚಾರದ ಪಟ್ಟಿಯಿಂದ ತಿಳಿದುಬರುತ್ತದೆ.

ಅಹಮ್ಮದಾಬಾದಿನ ಬಳಿಯಿರುವ ಹಾರಸ್ಟೋಲ್ ಎಂಬ ಗ್ರಾಮದ ಒಂದು ಛತ್ರದಲ್ಲಿ ಉಳಕೊಂಡ ಸಾಧುಗಳೊಳಗೆ ಜಗಳ ಹತ್ತಿ, ೩ ಮಂದಿಗಳು ಆಸ್ಪತ್ರೆಗೆ ಸೇರುವಂತಾಗಿದೆ. ೪ ಸಾಧುಗಳನ್ನು ಬಂಧಿಸಿರುತ್ತಾರೆ.

ಅಹಮ್ಮದಾಬಾದಿನಲ್ಲಿ ಕಳೆದ ತಾ. ೫ರಲ್ಲಿ ಭಯಂಕರ ಬಿರುಗಾಳಿಯೊಂದು ಬೀಸಿ ತುಂಬಾ ಹಾನಿಯುಂಟುಮಾಡಿತು. ೧೦ ಮಂದಿಗಳಿಗೆ ಘಾಯವಾಗಿದೆ, ಸುಮಾರು ಗುಡಿಸಲು ಮನೆಗಳು ನಾಶಹೊಂದಿವೆ. ಪ್ರಾಣಹಾನಿಯಾಗಲಿಲ್ಲ.

WHENEVER YOU THINK

of saving and safeguarding money
of borrowing or transmitting money
of any other financial requirement,

THINK OF YOUR BANK

a good place to keep your
account and establish your credit,
where your patronage and
deposits are always appreciated,
where you are always sure
of a friendly welcome.

RESOURCES OF A CRORE

ESTD: 1906

CANARA BANK, LIMITED.

ಮನುಷ್ಯನು ಮಾತನಾಡಲು ಕಲಿತುದು ಹೇಗೆ?

ಸಂಜ್ಞಾ ಭಾಷೆಯೇ ಮೂಲ.

ಅಂತರಾಷ್ಟ್ರೀಯ ವ್ಯವಹಾರಗಳಲ್ಲಿ ಉಪಯೋಗಿಸಲ್ಪಡುವಂತಹದೂ, ಸಕಲ ಜನಾಂಗ ಸಾಮಾನ್ಯವಾದುದೂ ಆದ ಒಂದೇ ಭಾಷೆಯನ್ನು ಕಂಡು ಹಿಡಿಯಲು ಭಾಷಾಶಾಸ್ತ್ರವಿಜ್ಞಾನಿಗಳು ಕೆಲವರು ಪ್ರಯತ್ನಪಡುತಿದ್ದಾರೆ. ಮಾನವ ವರ್ಗಕ್ಕೆ ಸರ್ವ ಸಾಮಾನ್ಯವಾದ ಒಂದು ತರದ ಭಾಷೆಯು ಈಗಲೂ ಇದೆಯೆಂದು ಕೆಲವು ವಿಜ್ಞಾನಿಗಳು ಹೇಳುತ್ತಾರೆ. ಈ ಭಾಷೆಗೆ ಸಂಜ್ಞಾ ಭಾಷೆ ಎಂದು ಹೇಳುತ್ತಾರೆ. ಆದರೆ ಈ ಭಾಷೆಯನ್ನು ಇನ್ನೂ ಶಾಸ್ತ್ರೀಯ ರೀತ್ಯಾ ಸುಧಾರಿಸಿ ಪ್ರಚಾರದಲ್ಲಿ ತರಬೇಕಾಗಿದೆ. ಈ ಸಂದರ್ಭದಲ್ಲಿ ಒರ್ವ ಬ್ರಿಟಿಷ್ ವಿಜ್ಞಾನಿಗಳು ಒಂದು ವಿಶ್ವಸಮಿತಿಯನ್ನೇರ್ಪಡಿಸಿ ಈ ಭಾಷೆಯನ್ನು ಸ್ಥಿಮಿತದಲ್ಲಿಟ್ಟುಕೊಳ್ಳುವ ಪ್ರಯತ್ನ ಮಾಡಬೇಕೆಂದೂ, ಚಲಚಿತ್ರ ಪ್ರದರ್ಶನಗಳ ಮೂಲಕ ಈ ಭಾಷೆಯನ್ನು ಜನಪ್ರಿಯಗೊಳಿಸಬೇಕೆಂದೂ ಸೂಚನೆ ಇತ್ತಿರುವರು. ಮನುಷ್ಯನ ಸಂಜ್ಞಾ ಜ್ಞಾನವೇ ಅವನನ್ನು ಮೃಗಗಳಿಂದ ಶ್ರೇಷ್ಠವೆಂದೆಣಿಸಿರುತ್ತದೆಂದು ಈ ವಿಜ್ಞಾನಿಯ ತತ್ವ. ಮನುಷ್ಯನು ಮುಂದುವರಿಯುತ್ತಲೇ ಸಂಜ್ಞೆಗಳನ್ನು ತಾನು ನಿರೂಪಿಸಬೇಕಾದ ಉದ್ದೇಶಗಳಿಗಾಗಿ ಉಪಯೋಗಿಸ ಕಲಿತನು. ಹೀಗೆ ಒಂದು ಉದ್ದೇಶಕ್ಕೆ ಒಂದೊಂದು ಚಿಹ್ನೆಯು ಉಪಯೋಗಿಸುವಂತಾಯಿತು. ಈ ಭಾಷೆಯೇ ಮನುಷ್ಯನು ಆದಿಯಲ್ಲಿ ಕಲಿತ ಭಾಷೆಯಾಗಿರುತ್ತದೆ. ಇದಕ್ಕಿಂತ ಮುಂಚೆ ಕೆಲವು ಅಸ್ಪಷ್ಟ ಶಬ್ದ ಸ್ವರಗಳು ಉಪಯೋಗದಲ್ಲಿದ್ದವಂತೆ. ಈ ಸಂಜ್ಞಾ ಚಿಹ್ನೆಯು ಅದರೊಂದಿಗೆ ಬರುವ ಶಬ್ದವೂ ಕೂಡಿ ನಾವೀಗ ಮಾತನಾಡುವ ಭಾಷೆಯ ನಾಡಿಕೆಯಲ್ಲಿ ಬಂತು. ಆ ನಂತರ ಇವುಗಳ ಶಾಸ್ತ್ರೀಯ ಜನಸರಣೆಯನ್ನು ಮಾಡಲಾಯಿತು. ಪರಿಣಾಮವಾಗಿ ವ್ಯಾಕರಣವನ್ನು ವಿದ್ವಾಂಸರು ರಚಿಸಿದರು.

ಮದುವೆ ಮೂವತ್ತಾರು ಬಾರಿ

ಪೋಲೆಂಡಿನ ಸಾರ್ಡೊ ನಗರದಲ್ಲಿ ಜನ್ ಲ್ಯೂವಿನ್‌ಸ್ಕಿ ಎಂಬವನನ್ನು ಪೋಲೀಸರು ಕೈದು ಮಾಡಿರುವರು. ಲ್ಯೂವಿನ್‌ಸ್ಕಿಯು ಒಬ್ಬ ಮಲ್ಲ ಯುದ್ಧ ನಿಪುಣನು (Boxer). ಇವನ ಮೊದಲನೇ ವಿವಾಹವು ೨೬ ವರ್ಷ ಪ್ರಾಯದಲ್ಲಾಯಿತು. ಈಗವನ ವಯಸ್ಸು ಬರೀ ೩೩ ಅಷ್ಟೆ. ಆದರೇನು? ಮೊದಲನೇ ವಿವಾಹವಾಗಿ ವರ್ಷಗಳು ಏಳು ದಾಟಿದರೂ, ಆ ಸಮಯದೊಳಗೆ ಅವನು ಅದ್ಭುತ ಪ್ರಣಯ ನಾಟಕದ ಪಾತ್ರಧಾರಿಯಾಗಿ ಮೆರೆದನು. ಏಳು ವರ್ಷಗಳಲ್ಲಿ ಅವನು ೩೬ ಮದುವೆಗಳನ್ನು ಮಾಡಿಕೊಂಡಿರುವನು. ಇವನ ಸಾಹಸವು ಪ್ರಪಂಚದ ಸಮಾಜಗಳಲ್ಲಿ ಒಂದು ದಾಖಲೆಯನ್ನು ಮಾಡಿಟ್ಟಂತಿದೆ. ಮಲ್ಲಯುದ್ಧ ಪ್ರದರ್ಶನಕ್ಕಾಗಿ ಊರಿಂದೂರು ತಿರುಗುವಾಗ ಇವನನ್ನು ಮೆಚ್ಚಿಬಂದ ತರುಣಿಯರೊಳಗೊಬ್ಬಳನ್ನವನು ಒಂದು ಊರಿನಲ್ಲಿ ಮದುವೆ ಮಾಡಿಕೊಳ್ಳುವನು. ಅವಳನ್ನಲ್ಲಿಯೆ ಬಿಟ್ಟು ಮುಂದಿನ ಊರಿಗೆ ಹೋದಾಗ ಅಲ್ಲಿಯೂ ಒಂದು ಮದುವೆ. ಹೀಗೆ ಇವನ ಪತ್ನಿಗಳಾದವರಿಗೆ ತಮ್ಮ ಪತಿಯ ನಡತೆಯಲ್ಲಿ ಲೇಶ ಮಾತ್ರ ಸಂದೇಹ ಬರುವಂತಾಗಲಿಲ್ಲ. ಮೂವತ್ತೇಳನೇ ಬಾರಿ ಅವನು ಒರ್ವ ತರುಣಿಯನ್ನು ಲಗ್ನ ಮಾಡಿಕೊಳ್ಳಲಿದ್ದ. ಆದರೆ ಈ ಸಾರಿ ಅವನ ಅದೃಷ್ಟವು ಅಷ್ಟು ಚೆನ್ನಾಗಿರಲಿಲ್ಲ. ಮದುವೆಗೇರ್ಪಾಡಾಗಿ ಲ್ಯೂವಿನ್‌ಸ್ಕಿಯು ದೇವಾಲಯದಲ್ಲಿ ವಧುವಿನ ಆಗಮನವನ್ನು ನಿರೀಕ್ಷಿಸುತಿದ್ದನು. ಅಷ್ಟರಲ್ಲಿ ಪೋಲೀಸರನ್ನು ಕಟ್ಟಿಕೊಂಡು ಬಂದ ವಧುವು ಲ್ಯೂವಿನ್‌ಸ್ಕಿಗೆ ಬಳೆಗಳನ್ನು ತೊಡಿಸಿದಳು. ಈಗ ಅವನನ್ನು ಮಾವನ ಮನೆಗೆ (ಜೈಲಿಗೆ) ಕಳುಹಿಸಿರುವರು.

ನಾಯಿಯೂ ನ್ಯಾಯಾಧೀಶರೂ.

ಲಂಡನಿನ ಚೆನ್‌ಸ್ಟ್ರೀಟ್ ಬಡಾವಣೆಯ ಪೋಲಿಸ್ ಕೋರ್ಟಿನಲ್ಲಿ ಒಂದು ಕೇಸು. ಒಬ್ಬ ಮುದುಕನು ಅವನ ನಾಯಿಯೂ ಈ ವ್ಯವಹಾರದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಬಾಯಿಯಲ್ಲಿ ಹೇಟ್ ಹಿಡಕೊಂಡು ಬೇಡುವಂತೆ ಆ ಬಡವನು ತನ್ನ ನಾಯಿಯನ್ನು ತರಬೇತು ಮಾಡಿದ್ದನು. ಅವನು ಹಿಂದುಗಡೆಯಿಂದ ಬರುತಿದ್ದರೆ ನಾಯಿಯು ಅವನ ಮುಂದೆ ಹೋಗಿ ಮಾರ್ಗಸ್ಥರನ್ನು ಹಿಂಬಾಲಿಸುವುದು. ಅದರ ಬುದ್ಧಿ ಚಾತುರ್ಯಕ್ಕೆ ಮೆಚ್ಚಿದವರು ಧರ್ಮವನ್ನು ಇಕ್ಕುತಿದ್ದರು. ಆದರೆ ಅಲ್ಲಿಯ ಪೋಲಿಸರು ಇದು ನ್ಯಾಯ ವಿರೋಧವೆಂದು ನಾಯಿಯನ್ನೂ ಅದರ ಯಜಮಾನನನ್ನು ಕೋರ್ಟಿನಲ್ಲಿ ಹಾಜರುಪಡಿಸಿದರು. ನ್ಯಾಯಾಧೀಶರಿಗೆ ಏನು ಮಾಡಲೂ ಬಗೆ ಹರಿಯಲಿಲ್ಲ. ಕಾರಣ ಬೇಡುವುದು ಮನುಷ್ಯನಲ್ಲ ನಾಯಿ. ಹಾಗಾದರೆ ನಾಯಿಗೆ ಶಿಕ್ಷೆ ಕೊಡುವುದೆ? ಈಗ ನೀನು ನಿನ್ನ ನಾಯಿಯನ್ನು ಬೇಡುವುದಕ್ಕಾಗಿಯೇ ತರಬೇತು ಮಾಡಿದೆಯಾದರೆ ಅದು ತಪ್ಪು. ಒಂದು ವೇಳೆ ನೀನು ಕೂತಲ್ಲೇ ಕೂತಿದ್ದು, ಮಾರ್ಗಸ್ಥರು ಅದನ್ನು ಕರೆದು ಧರ್ಮ ಮಾಡಿದರೆ ಅದು ಬೇಡುವುದೆಂದಾಗುವುದಿಲ್ಲ. ಅದು ಒಂದು ಬಗೆಯ ಒಳ್ಳೇ ಯೋಚನೆ ಎಂದೇ ಹೇಳಬೇಕು. ನಾನು ನಿನ್ನನ್ನು ಶಿಕ್ಷಿಸಲಾರೆ ಎಂದ ತೀರ್ಮಾನ.

ವಿಜ್ಞಾನ ತತ್ವಗಳು

ಕೆಲವರು ವಿಜ್ಞಾನವನ್ನು ಹೀನಭಾವದಿಂದ ಕಾಣುವರು. ಇದು ತಪ್ಪು. ವಿಜ್ಞಾನದ ಸೂಕ್ಷ್ಮ ತತ್ವಗಳ ಸದೃಶ್ಯವಾಗಿ ಕಂಡುಬಾರದಿದ್ದಲ್ಲಿ ಅವರು ಅವನ್ನು ನಂಬಲಾರರು. ಉಷ್ಣಕ್ಕೆ ವಸ್ತುಗಳ ವಿಕಾಸವಾಗುವವು ಎಂಬ ದೊಂದ ವಿಜ್ಞಾನ ತತ್ವ. ಲೋಹಗಳನ್ನು ದ್ರವಗಳನ್ನು ಬಿಸಿ ಮಾಡುವಾಗ ಅವು ವಿಕಾಸ ಹೊಂದುತ್ತವೆಂದು ದೃಷ್ಟಾಂತವಾಗಿ ನೋಡುತ್ತಿರುತ್ತೇವೆ. ಆದರೆ ನಮ್ಮ ಮನಸ್ಸಿಗೆ ಸಂಬಂಧಪಟ್ಟ ಅನೇಕ ಸಿದ್ಧಾಂತಗಳು ಇವೆ. ಇವುಗಳನ್ನು ತಿಳಿಯಪಡಿಸುವುದು ಬಹು ಕಷ್ಟತರವಾದ ಕೆಲಸ. ಈ ತತ್ವಗಳನ್ನು ಕೆಲವು ವಿಧಾನಗಳಿಂದ ಸಿದ್ಧಾಂತ ಪಡಿಸಬಹುದು. ನಿದರ್ಶನವಾಗಿ ಸೂರ್ಯನ ವಿಚಾರ ತೆಗೆದುಕೊಳ್ಳೋಣ.

ಸೂರ್ಯನು ಭೂಮಿಯಿಂದ ೯೨ಮಿಲಿಯ ಮೈಲಂತರದಲ್ಲಿರುವನು. ಉರಿಯುವ ಒಂದು ಅಗ್ನಿ ಕೇಂದವೇ ಸೂರ್ಯನಿರುವನೆಂದು ಎಲ್ಲರೂ ಬಲ್ಲರು. ಆದರೂ ಒಂದು ಚೂರು ಕಾಗದವನ್ನು ಸುಡಲು ಸೂರ್ಯನಿಂದ ಆಗುವುದಿಲ್ಲ. ಆದರೆ ಭೂತಕನ್ನಡಿಯ ಮೂಲಕ ಸೂರ್ಯನ ಕಿರಣಗಳನ್ನು ಕೇಂದ್ರೀಕರಿಸಿ ಕಾಗದದ ಮೇಲೆ ಬೀಳಪಡಿಸಿದರೆ ಅದು ಸುಟ್ಟು ಹೋಗುವುದು. ಅಂತೆಯೇ ಯಾವುದಾದರೂ ಕಠಿಣ ಸಮಸ್ಯೆಯನ್ನು ಸುಧಾರಿಸಲು ಶ್ರೇಷ್ಠವಾದ ಬುದ್ಧಿಯು ಇದ್ದ ಮಾತ್ರಕ್ಕೆ ಸಾಲದು. ಆದರೆ ಮಾನಸಿಕ ಗಮನವು ಕೇಂದ್ರೀಕರಿಸಲ್ಪಟ್ಟರೆ ಮಾತ್ರವೇ ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಬಹುದು.

ಢಿಲ್ಲಿಯ ಮಜೂರ ಸಂಘದ ಅಧ್ಯಕ್ಷೆಯರಾದ ಶ್ರೀಮತಿ ಚಂದೂಬಿಬೀ ಎಂಬ ಮಜೂರ ಮುಖಂಡಳನ್ನು ಕೈದುಮಾಡಿರುವರು. ಬಹಿರಂಗ ಪತ್ರ ಮುಖೇನ ಕ್ರಾಂತಿಕಾರ ಲೇಖನವೊಂದನ್ನು ಪ್ರಕಟಿಸಿದುದೇ ಇವರ ಕೈದಿಗೆ ಕಾರಣವಂತೆ. ಈಗ ರೂ ೫೦೦ರ ಜಾಮೀನಿನ ಮೇಲೆ ಬಿಟ್ಟಿರುವರು.

ನವರತ್ನ ಎಲಿಕ್ಸಿರ್ ಗೈನೆಕೊ.

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟುದೋಷ ಇನ್ನು ವಿಶೇಷ ಪರಿಣಾಮದಿಂದ ಗುಣಪಡಿಸುವ ಶಕ್ತಿಯುಳ್ಳ ಸಾಮುಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ. ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ. ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಪರಿಹರಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ

ಬೆಲೆ 4 ಔನ್ಸ್ ಬಾಟ್ಲಿಗೆ ರೂ. 0 12 0

8 ,, ,, ,, 1 4 0

ತಯಾರಿಸುವವರು:—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—

- ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
- ವಿ. ವಿ. ಶೆಣೈ ಕಾರ್ಕಳ
- ಡಾ| ಕೆ ಎಲ್ ಐತಾಲ, ಉಡುಪಿ
- ಮೊಡರ್ನ್ ಫಾರ್ಮಸಿ, ಕುಂದಾಪುರ
- ಬಿ ಜಿ ಭಂಡಾರಿ, ಪುತ್ತೂರು
- ಭಕ್ತಾ ಬ್ರದರ್ಸ್, ಕಾಸರಗೋಡು

ಬೊಂಬಾಯಿ ಏಜಂಟರು:-CHAMSI NARSI & CO.,
Chemists, Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in:— Watches, Clocks, Timepieces, Rolled Gold Jewellery & Sporting Materials etc.



Stockists of: West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones

Japan 8 Inch Octegon	Rs	6	0	0
„ 8 „ Regulator	„	6	12	0
„ 10 „ Octegon	,	6	8	0
„ 10 „ Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕರಿಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ಗ್ರೆಮೊಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲುಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‍ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶ್ಶನ್ ಹೈಸ್ಕೂಲ್ ಬಳಿ ಮಂಗಳೂರು.

ವಜ್ರಗಳು!

ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸ್ಯಾಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಶಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಪೆಟಲ್ ಮರ್ಚೆಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of *Please call on or write to:-*

Simon & Co.,
Painters,
Churchgate, Hampankatta No. 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸೈನ್ ಬೋರ್ಡು ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ.

ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಬರಬೇಕು ಇಲ್ಲವೆ ಪತ್ರ ಬರೆಯಬೇಕು.

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ.

ಜಗತ್ಪ್ರಖ್ಯಾತ 'ದಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೇಷ್ಠ ಮಾರಾಟ ಗಟ್ಟಿಯಾದ ಯಂತ್ರಸಹಿತ ಗಳು, ಸರಿಯಾದ ಸಮಯ ತೋರಿಸುವ ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ಐದು ವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಟಪಾಲು ಖರ್ಚು ಮಾಫ್ ನಿಕ್ಕಲಿನ ರಿಸ್ಟು ವಾಚು 1ಕ್ಕೆ ರೂ 2 15-0 ಅದರಲ್ಲಿ ಉತ್ತಮವಾದದ್ದು 3-8-0, ಬಂಗಾರದ ಗಿಲಿಟಿದ್ದದ್ದಕ್ಕೆ ರೂ 4—6—0 ಡೈಮಂಡ ರೂ 5 0 0 ನಿಕ್ಕಲಿನ ಆಯತಾಕಾರದಕ್ಕೆ 6-8 0 ಅದರಲ್ಲಿ ಬಂಗಾರದ ಗಿಲಿಟಿದ್ದುದಕ್ಕೆ 7 8-0 ಲಿವರ್ ಪಾಕೆಟ್ ವಾಚಿಗೆ ಬರಿ ರೂ 1—14—0 ಬಿ. ಟ್ಯಾಂಟೀಸ್ 1ಕ್ಕೆ ಬರಿ ರೂ 1—15—0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕ

M. L. Watch Co., 176, Cross Street CALCUTTA

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH

No 16

Sale Rs. 6—15—0
SMART LEVER MOVEMENT
Strong & Durable at Low Price.



UNIQUE OPPORTUNITY ONLY FOR ONE MONTH.
Available Roman or Arabic Figures
Plain Silver Dial

Guaranteed for 5 Years. Lever Pocket Watch Rs 1—15—9.

No. 12	Chromium	4 Jewels	Rs	8—8—0.
,, 14	,,	7 ,,	,,	10—8—0
,, 15	,,	15 ,,	,,	12—8—0.
,, 17	Rolled Gold	15 ,	,,	16—8 0.

Rs. 1/- Extra for Radium Dial. Postage & Packing Extra.

BAPALAL & CO (s) 116, Abdul Rehman Street, Bombay 3

ಲೇಖನಿಯ ಮಹಾತ್ಮೆ!

ಪರಿಕಿಸಲು ಚಿಕ್ಕ ವಸ್ತುವಾಗಿ ಕಾಣುವುದಾದರೂ ಲೇಖನಿಯ ಮಹಿಮೆಯು ಅಗಾಧವಾದುದಾಗಿದೆ. ಪ್ರಪಂಚದ ಚರಿತ್ರೆಯಲ್ಲಿ ಅನಿರೀಕ್ಷಿತ ಬದಲಾವಣೆಗಳುಂಟಾಗಿವೆ; ಜನಾಂಗದ ವಾಣಿಜ್ಯ ವ್ಯವಹಾರಗಳಿಗೆ ಅಪಾರ ಅನುಕೂಲತೆಗಳಾಗಿವೆ, ಘಟನೆಗಳ ದಾಖಲೆಗಳಾಗಿವೆ; ವರ್ತಮಾನ ವಿಚಾರಗಳು ವಿಶ್ವದ ಒಂದು ಕೊನೆಯಿಂದ ಮತ್ತೊಂದಕ್ಕೆ ಒಯ್ಯಲ್ಪಡುತ್ತವೆ—ಒಂದು ಲೇಖನಿಯಿಂದ. ಹೆಚ್ಚೇಕೆ ಒಂದು ಲೇಖನಿಯಿಂದಾಗಿ ಮಾನವಕೋಟಿಗೆ ಆದ ಸಹಾಯವು ಮನುಷ್ಯನು ಕಂಡುಹಿಡಿದ ಯಾವ ಯಂತ್ರದಿಂದಲೂ ಆಗಲಿಲ್ಲವೆಂದರೆ ತಪ್ಪಾಗದು.

ಪ್ರಪಂಚದ ಪ್ರಗತಿಯು ಲೇಖನಿಯೊಂದಿಲ್ಲದಿರುತ್ತಿದ್ದರೆ ಹೆಚ್ಚುಪಾಲಿಗೆ ಅಸಾಧ್ಯವಾಗುತ್ತಿತ್ತೆನ್ನಬೇಕು. ವಿಜ್ಞಾನದ ವಿಕಾಸದಿಂದಾದ ವಿದ್ಯುತ್‌ಶಕ್ತಿ, ಉಗಿಯಂತ್ರಗಳು ಮತ್ತಿತರ ಯಾಂತ್ರಿಕ ಶೋಧಗಳು ಇಂದು ಮಿಲಿಯಾವಧಿ ಜನರ ಜೀವನದಲ್ಲಿ ಬದಲಾವಣೆಗಳನ್ನು ತಂದಿರುತ್ತವೆ. ಆದರೆ ಲೇಖನಿಯು ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡಿರುತ್ತದೆ. ಇದರ ಪ್ರಭಾವದಿಂದ ಬೆಟ್ಟಗಳು ಬಯಲುಗಳಾಗಿವೆ. ಅರಣ್ಯಗಳು ನಗರಗಳಾಗಿವೆ. ಹೀಗೆ ಅದು ಮಾನವ ಪ್ರಗತಿಗೆ ಒಂದು ದಾರಿಯನ್ನು ತೋರಿಸಿ ಕೊಟ್ಟಿರುತ್ತದೆ. ಯಾವುದೇ ತರದ ತತ್ವ ಸಿದ್ಧಾಂತಗಳಾಗಲೀ, ರಚಿಸಲ್ಪಟ್ಟ ಕಾಯಿದೆ ಕಾನೂನುಗಳಾಗಲೀ ಅವುಗಳು ಲೇಖನಿಯ ತುದಿಯಿಂದ ಹೊರಬಿದ್ದಂತವುಗಳಾಗಿವೆ.

ಹಿಂದಿನ ಕಾಲದಲ್ಲಿ ಲೇಖನಿಯೇ ಸಕಲ ವ್ಯವಹಾರಗಳಲ್ಲಿಯೂ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿತ್ತು. ಆಧುನಿಕ ಪ್ರಪಂಚದಲ್ಲಂತೂ ಅದರ ಪ್ರಾಶಸ್ತ್ಯವು ಇನ್ನೂ ಅಧಿಕವಾಗಿರುತ್ತದೆ. ಈಗ ಹೆಚ್ಚಾಗಿ ಪ್ರಚಾರದಲ್ಲಿರುವ ಟ್ಯಾಪ್‌ರ್ರೈಟರ್ ಎಂಬ ಭಾಷಾಲೇಖನ ಯಂತ್ರಗಳು ಪಂಚ ಮಹಾ ಖಂಡಗಳಲ್ಲಿ ಹೆಚ್ಚಿದರೂ ಅವುಗಳು ಶ್ರಮವನ್ನು ಕಮ್ಮಿಮಾಡುವ ಸಾಧನಗಳಿದ್ದು ಲೇಖನಿಯು ಅಂತವುಗಳೆಲ್ಲವನ್ನೂ ತನ್ನ ಆಶ್ರಯದಲ್ಲಿಟ್ಟುಕೊಂಡಂತಿದೆ. ಅಂದರೆ ಲೇಖನಿಯು ಅವುಗಳ ಒಡೆಯನೆನ್ನಬಹುದು, ಕಾರಣ ಆ ಯಂತ್ರಗಳಿಂದ ಹೊರಬರುವ ಕಾಗದ ಪತ್ರಗಳ ಮೇಲೆ ಲೇಖನಿಯ ಸಹಿ ಇಲ್ಲದಿದ್ದರೆ ಅವುಗಳಿಗೆ ಪ್ರಾಮುಖ್ಯತೆ ಇರಲಾರದು.

ಮಹಾಗಣಪತಿಯ ಆವೇಶದಿಂದ ವೇದವ್ಯಾಸನು ಮಹಾಭಾರತವನ್ನೂ, ವಾಲ್ಮೀಕಿಯು ರಾಮಾಯಣವನ್ನೂ ಇವುಗಳ ನಿರೂಪವನ್ನೊಳಗೊಂಡ ಚತುರ್ವೇದಗಳೂ ಮಹಾ ಮಹಾ ಋಷಿಗಳ ಅಘೋರ ತಪಶ್ಚರ್ಯದ ಪ್ರಭಾವದಿಂದ ಲೇಖನಿಯ ಮುಖಾಂತರ ಉದ್ಭವಿಸಿದಂತವುಗಳಾಗಿವೆ. ಅದ್ವಿತೀಯ ಚಾತುರ್ಯದಿಂದಲೂ ಅಸಹಮಾನ ಕಲ್ಪನಾಶಕ್ತಿಯಿಂದಲೂ, ಮತ್ತು ಅಮರವಾದ ಕೀರ್ತಿಯನ್ನು ಪಡೆದಂತವುಗಳೂ ಆದ ಪ್ರಾಚೀನ ಕಲಾ ಸಂಪತ್ತುಗಳು ಲೇಖನಿಯಿಂದ ಉದ್ಭವಿಸಿದ್ದು ಇಂಥವುಗಳ ಕಲಾ ಪರಿಪೂರ್ಣತೆಯು ಜಗತ್ತಿಗೆ ಬೆರಗನ್ನುಂಟುವಂತಾದ್ದಾಗಿರುತ್ತದೆ. ಮಹಾ ಕವಿ ಕಾಳಿದಾಸನು ತನ್ನ ಅಚ್ಚುಚ್ಚ ಕವಿತಾ ಶಕ್ತಿಯಿಂದ ಅಮೋಘವಾದ ಕಾವ್ಯ ನಾಟಕಗಳನ್ನು ಬರೆದುದಾದರೆ, ಅವನ ಶೋಭಾಯಮಾನವಾದ ಕಲ್ಪನಾಶಕ್ತಿಯನ್ನು ನಾಗರೀಕ ಪ್ರಪಂಚವಿಂದು ಮನ್ನಣೆಯಿಂದ ಸ್ಮರಿಸುವುದಾದರೆ ಅಂತಹ ಅವನ ಆ ಕೃತಿಗಳು ಯಾವುದರ ಮೂಲಕ ಪ್ರಪಂಚಕ್ಕೆ ನಿರೂಪಿಸಲ್ಪಟ್ಟವು? ಅದು ಒಂದು ಚಿಕ್ಕ ಲೇಖನಿಯ ಮೂಲಕ ಓಲೆಗರಿಗಳ ಮೇಲೋ ಮರದ ತೆಳುವಾದ ಪದರುಗಳ ಮೇಲೋ ಬರೆಯಲ್ಪಟ್ಟವುಗಳಲ್ಲವೆ?

ಲೇಖನಿಯು ಸಾರ್ವಭೌಮರುಗಳ ಸೇವಕನಾದರೂ ದರಿದ್ರರ ಗುಲಾಮನಾಗಿಯೂ ಇದೆ. ಶ್ರೀಮಂತನೊಬ್ಬನು ಆಜ್ಞೆಗಳನ್ನು ಕೊಡುವುದಾಗಲೀ ಬ್ಯಾಂಕು ಮೊದಲಾದ ಸಂಸ್ಥೆಗಳೊಂದಿಗೆ ವ್ಯವಹಾರ ನಡೆಸುವಾಗಾಗಲೀ ಲೇಖನಿಯ ಮೂಲಕ ಸಹಿ ಹಾಕುತ್ತಾನೆ. ಈ ಸಂದರ್ಭದಲ್ಲಿ ಅದು ಅವರ ಸೇವಕನಂತಾಯಿತು. ಆದರೆ ಧನಿಗಳು ಕೆಲಸಗಾರರಿಗೆ ಮಜೂರಿ ಕೊಡುವಾಗ ಅವರ ಸಹಿ ತೆಗೆದುಕೊಳ್ಳುವುದು ವಾಡಿಕೆಯಷ್ಟೆ? ಆ ಧನಿಗೆ ತನ್ನ ಕೆಲಸಗಾರರಿಗಿಂತಲೂ ಅವರು ಲೇಖನಿಯ ಮೂಲಕ ಎಳೆಯುವ ಸಹಿಯ ಮೇಲೆ ಹೆಚ್ಚು ನಂಬಿಕೆ ಇದ್ದಂತೆ ತೋರುವುದು. ಈ ಸಂದರ್ಭದಲ್ಲಿ ಲೇಖನಿಯು ಬಡವರ ಸಹಾಯಕನಂತೆಯೂ ಪಾತ್ರವಹಿಸಿದಂತಾಗುತ್ತದೆ. ಪರಿಚಾರಕರೂ, ಶಾಲಾಮಕ್ಕಳೂ ಯಾರಾದರೂ ಈ ಪ್ರಭಾವಶಾಲೀ ಲೇಖನಿಯನ್ನು ಇಚ್ಛಾನುಸಾರ ಉಪಯೋಗಿಸಿಕೊಳ್ಳಬಹುದು. ಪ್ರತಿಯೊಬ್ಬರಿಗೂ ದಿನನಿತ್ಯದ ವ್ಯವಹಾರಗಳಲ್ಲಿ ಲೇಖನಿಯ ಅವಶ್ಯಕತೆ ಇದೆ. ಈ ಉಪಯೋಗವು ಹಲವೊಂದು ರೂಪಗಳಲ್ಲಿರಬಹುದು. ಬೇಡುವವರಿಗೆ ದಾನವಾಗಿ ಕೊಡುವ ಹಣವು ಸಂಸ್ಥೆಗಳಲ್ಲಿ ಲೆಖ್ಖಪುಸ್ತಕಗಳ ಮೇಲೆ ಲೇಖನಿಯಿಂದ ಬರೆದಿಡುತ್ತಾರೆ. ದಾನ ಪಡೆದ ಬಡವನು ಬರೆದಿಡದೆ ಇರಬಹುದು, ಆದರೆ ಕೊಟ್ಟವನಿಗೆ ಬರೆದಿಡದೆ ನಿರ್ವಾಹವಿಲ್ಲ. ಬರೆದಿಡದಿದ್ದರೆ ಅವನ ಆಯವ್ಯಯ ಪಟ್ಟಿಯಲ್ಲಿ ತಪ್ಪು ಕಂಡುಬರಬಹುದು ಹೀಗೆ.

ಜ್ಞಾನಾರ್ಜನೆಗೆ ಲೇಖನಿಯೇ ಮೂಲ. ಶಾಲೆಗಳಲ್ಲಿ ಮಕ್ಕಳಿಗೆ ಅಕ್ಷರಭ್ಯಾಸವನ್ನು ಲೇಖನಿಯ ಮೂಲಕ ಮಾಡಿಸುವರು, ಕಾರಣ ಅಕ್ಷರಭ್ಯಾಸವು ಮಕ್ಕಳಲ್ಲಿ ಬರೆದು ಬರಬೇಕು—ಆಗ ಲೇಖನಿ ಬೇಕೆ ಬೇಕು. ಅಂದರೆ ಲೇಖನಿಯು ಜ್ಞಾನದ ಮೂಲ ಬೆಳೆಯುವ ಜ್ಞಾನದ ಒಡೆಯ, ಬೆಳೆದ ಜ್ಞಾನದ ಗೆಳೆಯನೆಂದರೆ ಹೊಗಳಿಕೆಯಲ್ಲ. ಒಂದು ವೇಳೆ ಲೇಖನಿಯೆಂಬ ವಸ್ತು ಇಲ್ಲದಿರುತಿದ್ದರೆ ಇಂದಿನ ನಾಗರೀಕ ಲೋಕವು ಯಾವ ಅಜ್ಞಾನಾಂಧಕಾರದಲ್ಲಿ ಮುಳುಗುತ್ತಿತ್ತೊ ಹೇಳಲಸಾಧ್ಯ. ಉದಾಹರಣೆಗೆ ಹಿಂದುಳಿದ ಅನಾಗರೀಕ ಜನಾಂಗಿಕರನ್ನು ನೋಡಿದರೆ, ಬರಹ ಬಾರದ ಅವರು ಪಶುಗಳಂತಿರುತ್ತಾರೆ. ಲೇಖನಿಯ ಉಪಯೋಗವು ಅವರಿಗೆ ಇನ್ನೂ ತಿಳಿಯಲಿಲ್ಲ. ಅವರಲ್ಲಿ ಬರಹಜ್ಞಾನವನ್ನುಂಟುಮಾಡಬೇಕಾದರೆ ಅವರ ಕೈಯಲ್ಲಿ ಲೇಖನಿಯನ್ನು ಕೊಡಬೇಕು. ಈ ಮೂಲಕ ಆದ ಬರಹಜ್ಞಾನದಿಂದ ಅವರಲ್ಲಿ ಓದುವ ಶಕ್ತಿಯುಂಟಾಗುವುದು. ಓದುವುದರ ಮೂಲಕ ಜ್ಞಾನವುಂಟಾಗುವುದು, ಜ್ಞಾನದಿಂದ ತಿಳುವಳಿಕೆಯು ವಿಕಾಸವಾಗುವುದು.

ಸರಕಾರದ ಇಲಾಖೆಗಳಲ್ಲಿ ಲೇಖನಿಯ ವರ್ಚಸ್ಸು ಅಸಮಾನವಾದುದು. ಜನಾಂಗಗಳ ಭವಿಷ್ಯವನ್ನು ಮಾರ್ಪಡಿಸುವ ಒಪ್ಪಂದದ ಕರಾರುಗಳು, ವಾಣಿಜ್ಯ ವ್ಯವಹಾರ ಮಾತುಕತೆಗಳು ಲೇಖನಿಯ ಸಹಿಯೊಂದಿಲ್ಲದಿದ್ದರೆ ನಿಷ್ಪ್ರಯೋಜಕವೆಂದೆಣಿಸುವುವು. ಒಂದು ಕ್ಷಣದೊಳಗೆ ರಾಜ್ಯಗಳು ಸಾಮ್ರಾಜ್ಯಗಳು ಕೈ ಬದಲಾಗಿ, ಗುಲಾಮಿ ಜನಾಂಗವು ಗದ್ದುಗೆಯನ್ನೇರುವುದು. ರಾಜವಂಶಗಳು ಮಣ್ಣುಪಾಲಾಗುವುವು. ರಾಜರುಗಳು ದೇಶಭ್ರಷ್ಟರಾಗುವರು. ಸರ್ವಾಧಿಕಾರಿಗಳು ತಮ್ಮ ಅಧೋಗತಿಯನ್ನು ಸೇರುವರು ಒಂದು ಲೇಖನಿಯ ಸಹಿಯಿಂದಾಗಿ. ಕಳೆದ ಕೆಲವು ತಿಂಗಳ ಹಿಂದೆ ಪ್ರೇಯಸಿಗಾಗಿ ಪಟ್ಟ ಪರಿತ್ಯಾಗ ಮಾಡಿದ ಮಾಜಿ ಅರಸ ಎಡ್ವರ್ಡರು ಒಂದಿಷ್ಟು ಶಾಯಿ ಲೇಖನಿಯಿಂದ ತಾವು ಕಿರೀಟವನ್ನು ತಮ್ಮಂದಿರಾದ ಅರಸ ಜಾರ್ಜರಿಗೆ ಬಿಟ್ಟುಕೊಟ್ಟಿರುವೆನೆಂದು ಸಹಿಹಾಕದೆ ಇರುತ್ತಿದ್ದಲ್ಲಿ ಇಂಗ್ಲೆಂಡು ಇಂದು ಘೋರ ಕಲಹದಲ್ಲಿ ಮುಳುಗಿರುತಿತ್ತು.

ನ್ಯಾಯಾಧೀಶರು ತೀರ್ಪು ಪತ್ರದ ಮೇಲೆ ಹಾಕುವ ಸಹಿಯಿಂದ ಕೈದಿಯೊಬ್ಬನ ಜೀವನವು ಒಂದು ಕ್ಷಣದಲ್ಲಿ ಅಂತ್ಯಗೊಳಿಸುವಂತಾಗಬಹುದು, ಇಲ್ಲವೆ ಖೂನಿಕಾರನ ಪ್ರಾಣವು ರಕ್ಷಣೆಯಾಗುವಂತಾಗಬಹುದು. ಅಂತೂ ಲೇಖನಿಯ ಮಹಾತ್ಮೆಯು ಅಗಾಧವಾದುದು.

ಪದ್ಮನ ಪ್ರಭಂಧ.

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ

ಹಾನಿಕರವಾದ ಪದಾರ್ಥಗಳು

ಇದರಲ್ಲಿಲ್ಲವಾದುದರಿಂದ ಇದರ ಧಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ: ಆಣೆ ೮ ಮಾತ್ರ

Manufactured by:—

J. B Dutt & Co., Calcutta,

Sole agent:—

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಶಕ್ತಿಯಿಲ್ಲದಾಗಿ ದುರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳ ಬೆಳೆಯುವುದಕ್ಕೆ ಬೇಕಾದ ರಸಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ... ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ... ಸೇವಿಸತಕ್ಕದ್ದು

ಸಿಗುವ ಸ್ಥಳ —

ಸ್ವಾಮಿ ಮತ್ತು ಕಂಪನಿ,

... ಕಾಲೇಜಿನ ಎದುರು ಮಂಗಳೂರು

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊದಿಮೆ ಮೊದಲಿಂದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ ತುರಿಕೆ, ತುರಿಕಜ್ಜಿ ಹುಳುಕಡ್ಡಿ, ಪಿತ್ತ ಉಪದ್ರವ ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು.)

1.	ಅಧಿಕೃತ ಚಂದಾ ಹಾಕಲು ಅರ್ಪಿಸಿದ ಮೂಲಧನ	ರೂ 3,50,000 – 0 – 0
2.	ಚಂದಾ ಹಾಕಿ ಎತ್ತಿದ ಮೂಲಧನ . .	ರೂ. 2,88,950 – 0 – 0
3.	ಕ್ಷೇಮನಿಧಿಗಳು . .	ರೂ. 3,63,578 – 0 – 0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು:—ಉಡುಪಿ

ಬ್ರಾಂಚುಗಳು:—1. ಮದ್ರಾಸು; 2. ವೆಲ್ಲೂರು, 3. ತಲಚೇರಿ; 4. ರಥಬೀದಿ, ಮಂಗಳೂರು 5. ಬಂದ್ರ, ಮಂಗಳೂರು, 6 ಉಡುಪಿ, 7 ಶಿರ್ವ; 8. ಕುಂದಾಪುರ; 9) ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13 ಮೈಸೂರು, 14 ಮಡಿಕೇರಿ; 15 ವೀರರಾಜೇಂದ್ರಪೇಟೆ

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು "ಸೇಲಂ"ನಲ್ಲಿ ಇಂದು ತಾ **4 – 6 – 1937**ರಲ್ಲಿ ತೆರೆಯೋಣಾಯಿತು

ಅಂದಿನಿಂದ ಅಲ್ಲಿ ಬ್ಯಾಂಕಿಂಗ್ ವ್ಯವಹಾರಗಳನ್ನು ಪ್ರಾರಂಭಿಸಲ್ಪಟ್ಟಿದೆ.

10–6–1937

V R. Kamath, B A LL. B

Manager.

ಲೇಖನಿಯ ಮಹಾತ್ಮೆ!!

ಪರಿಕಿಸಲು ಚಿಕ್ಕ ವಸ್ತುವಾಗಿ ಕಾಣುವುದಾದರೂ ಲೇಖನಿಯ ಮಹಿಮೆಯು ಅಗಾಧವಾದುದಾಗಿದೆ. ಪ್ರಪಂಚದ ಚರಿತ್ರೆಯಲ್ಲಿ ಅನಿರೀಕ್ಷಿತ ಬದಲಾವಣೆಗಳುಂಟಾಗಿವೆ; ಜನಾಂಗದ ವಾಣಿಜ್ಯ ವ್ಯವಹಾರಗಳಿಗೆ ಅಪಾರ ಅನುಕೂಲತೆಗಳಾಗಿವೆ, ಘಟನೆಗಳ ದಾಖಲೆಗಳಾಗಿವೆ; ವರ್ತಮಾನ ವಿಚಾರಗಳು ವಿಶ್ವದ ಒಂದು ಕೊನೆಯಿಂದ ಮತ್ತೊಂದಕ್ಕೆ ಒಯ್ಯಲ್ಪಡುತ್ತವೆ— ಒಂದು ಲೇಖನಿಯಿಂದ. ಹೆಚ್ಚೇಕೆ ಒಂದು ಲೇಖನಿಯಿಂದಾಗಿ ಮಾನವಕೋಟಿಗೆ ಆದ ಸಹಾಯವು ಮನುಷ್ಯನು ಕಂಡುಹಿಡಿದ ಯಾವ ಯಂತ್ರದಿಂದಲೂ ಆಗಲಿಲ್ಲವೆಂದರೆ ತಪ್ಪಾಗದು.

ಪ್ರಪಂಚದ ಪ್ರಗತಿಯು ಲೇಖನಿಯೊಂದಿಲ್ಲದಿರುತ್ತಿದ್ದರೆ ಹೆಚ್ಚುಪಾಲಿಗೆ ಅಸಾಧ್ಯವಾಗುತ್ತಿತ್ತೆನ್ನಬೇಕು. ವಿಜ್ಞಾನದ ವಿಕಾಸದಿಂದಾದ ವಿದ್ಯುಚ್ಛಕ್ತಿ, ಉಗಿಯಂತ್ರಗಳು ಮತ್ತಿತರ ಯಾಂತ್ರಿಕ ಶೋಧೆಗಳು ಇಂದು ಮಿಲಿಯಾವಧಿ ಜನರ ಜೀವನದಲ್ಲಿ ಬದಲಾವಣೆಗಳನ್ನು ತಂದಿರುತ್ತವೆ. ಆದರೆ ಲೇಖನಿಯು ಇನ್ನೂ ಹೆಚ್ಚಿನ ಕಾರ್ಯಗಳನ್ನು ಮಾಡಿರುತ್ತದೆ. ಇದರ ಪ್ರಭಾವದಿಂದ ಬೆಟ್ಟಗಳು ಬಯಲುಗಳಾಗಿವೆ. ಅರಣ್ಯಗಳು ನಗರಗಳಾಗಿವೆ. ಹೀಗೆ ಅದು ಮಾನವ ಪ್ರಗತಿಗೆ ಒಂದು ದಾರಿಯನ್ನು ತೋರಿಸಿ ಕೊಟ್ಟಿರುತ್ತದೆ. ಯಾವುದೇ ತರದ ತತ್ವ ಸಿದ್ಧಾಂತಗಳಾಗಲೀ, ರಚಿಸಲ್ಪಟ್ಟ ಕಾಯಿದೆ ಕಾನೂನುಗಳಾಗಲೀ ಅವುಗಳು ಲೇಖನಿಯ ತುದಿಯಿಂದ ಹೊರಬಿದ್ದಂತವುಗಳಾಗಿದೆ.

ಹಿಂದಿನ ಕಾಲದಲ್ಲಿ ಲೇಖನಿಯೇ ಸಕಲ ವ್ಯವಹಾರಗಳಲ್ಲಿಯೂ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿತ್ತು. ಆಧುನಿಕ ಪ್ರಪಂಚದಲ್ಲಂತೂ ಅದರ ಪ್ರಾಶಸ್ತ್ಯವು ಇನ್ನೂ ಅಧಿಕವಾಗಿರುತ್ತದೆ. ಈಗ ಹೆಚ್ಚಾಗಿ ಪ್ರಚಾರದಲ್ಲಿರುವ ಟ್ಯಾಪ್‌ರೈಟರ್ ಎಂಬ ಭಾಷಾಲೇಖನ ಯಂತ್ರಗಳು ಪಂಚ ಮಹಾ ಖಂಡಗಳಲ್ಲಿ ಹೆಚ್ಚಿದರೂ ಅವುಗಳು ಶ್ರಮವನ್ನು ಕಡಿಮ್ಮೆಮಾಡುವ ಸಾಧನಗಳಿದ್ದು ಲೇಖನಿಯು ಅಂತವುಗಳೆಲ್ಲವನ್ನೂ ತನ್ನ ಆಶ್ರಯದಲ್ಲಿಟ್ಟುಕೊಂಡಂತಿದೆ. ಅಂದರೆ ಲೇಖನಿಯು ಅವುಗಳ ಒಡೆಯನೆನ್ನಬಹುದು, ಕಾರಣ ಆ ಯಂತ್ರಗಳಿಂದ ಹೊರಬರುವ ಕಾಗದ ಪತ್ರಗಳ ಮೇಲೆ ಲೇಖನಿಯ ಸಹಿ ಇಲ್ಲದಿದ್ದರೆ ಅವುಗಳಿಗೆ ಪ್ರಾಮುಖ್ಯತೆ ಇರಲಾರದ.

ಮಹಾಗಣಪತಿಯ ಆವೇಶದಿಂದ ವೇದವ್ಯಾಸನು ಮಹಾಭಾರತವನ್ನೂ, ವಾಲ್ಮೀಕಿಯು ರಾಮಾಯಣವನ್ನೂ, ಇವುಗಳ ನಿರೂಪವನ್ನೊಳಗೊಂಡ ಚತುರ್ವೇದಗಳೂ, ಮಹಾ ಮಹಾ ಋಷಿಗಳ ಅಘೋರ ತಪಶ್ಚರ್ಯದ ಪ್ರಭಾವದಿಂದ ಲೇಖನಿಯ ಮುಖಾಂತರ ಉದ್ಭವಿಸಿದಂತವುಗಳಾಗಿವೆ. ಅದ್ವಿತೀಯ ಚಾತುರ್ಯದಿಂದಲೂ ಅಸಹಮಾನ ಕಲ್ಪನಾಶಕ್ತಿಯಿಂದಲೂ, ಮತ್ತು ಅಮರವಾದ ಕೀರ್ತಿಯನ್ನು ಪಡೆದಂತವುಗಳೂ ಆದ ಪ್ರಾಚೀನ ಕಲಾ ಸಂಪತ್ತುಗಳು ಲೇಖನಿಯಿಂದ ಉದ್ಭವಿಸಿದ್ದು ಇಂಥವುಗಳ ಕಲಾ ಪರಿಪೂರ್ಣತೆಯು ಜಗತ್ತಿಗೆ ಬೆರಗನ್ನುಂಟುಮಾಡುವಂತಾದ್ದಾಗಿರುತ್ತದೆ. ಮಹಾ ಕವಿ ಕಾಳಿದಾಸನು ತನ್ನ ಅತ್ಯುಚ್ಚ ಕವಿತಾ ಶಕ್ತಿಯಿಂದ ಅಮೋಘವಾದ ಕಾವ್ಯ ನಾಟಕಗಳನ್ನು ಬರೆದುದಾದರೆ, ಅವನ ಶೋಭಾಯಮಾನವಾದ ಕಲ್ಪನಾಶಕ್ತಿಯನ್ನು ನಾಗರೀಕ ಪ್ರಪಂಚವಿಂದು ಮನ್ನಣೆಯಿಂದ ಸ್ಮರಿಸುವುದಾದರೆ ಅಂತಹ ಅವನ ಆ ಕೃತಿಗಳು ಯಾವುದರ ಮೂಲಕ ಪ್ರಪಂಚಕ್ಕೆ ನಿರೂಪಿಸಲ್ಪಟ್ಟವು? ಅದು ಒಂದು ಚಿಕ್ಕ ಲೇಖನಿಯ ಮೂಲಕ ಓಲೆಗರಿಗಳ ಮೇಲೋ ಮರದ ತೆಳುವಾದ ಪದರುಗಳ ಮೇಲೋ ಬರೆಯಲ್ಪಟ್ಟವುಗಳಲ್ಲವೆ?

ಲೇಖನಿಯು ಸಾರ್ವಭೌಮರುಗಳ ಸೇವಕನಾದರೂ ದರಿದ್ರರ ಗುಲಾಮನಾಗಿಯೂ ಇದೆ. ಶ್ರೀಮಂತನೊಬ್ಬನು ಆಜ್ಞೆಗಳನ್ನು ಕೊಡುವುದಾಗಲೀ ಬೇಂಕು ಮೊದಲಾದ ಸಂಸ್ಥೆಗಳೊಂದಿಗೆ ವ್ಯವಹಾರ ನಡೆಸುವಾಗಾಗಲೀ ಲೇಖನಿಯ ಮೂಲಕ ಸಹಿ ಹಾಕುತ್ತಾನೆ. ಈ ಸಂದರ್ಭದಲ್ಲಿ ಅದ ಅವರ ಸೇವಕನಂತಾಯಿತು. ಆದರೆ ಧನಿಗಳು ಕೆಲಸಗಾರರಿಗೆ ಮಜೂರಿ ಕೊಡುವಾಗ ಅವರ ಸಹಿ ತೆಗೆದುಕೊಳ್ಳುವುದು ವಾಡಿಕೆಯಷ್ಟೆ! ಆ ಧನಿಗೆ ತನ್ನ ಕೆಲಸಗಾರರಿಗಿಂತಲೂ ಅವರು ಲೇಖನಿಯ ಮೂಲಕ ಎಳೆಯುವ ಸಹಿಯ ಮೇಲೆ ಹೆಚ್ಚು ನಂಬಿಕೆ ಇದ್ದಂತೆ ತೋರುವುದು. ಈ ಸಂದರ್ಭದಲ್ಲಿ ಲೇಖನಿಯು ಬಡವರ ಸಹಾಯಕನಂತೆಯೂ ಪಾತ್ರವಹಿಸಿದಂತಾಗುತ್ತದೆ. ಪರಿಚಾರಕರೂ, ಶಾಲಾಮಕ್ಕಳೂ ಯಾರಾದರೂ ಈ ಪ್ರಭಾವಶಾಲೀ ಲೇಖನಿಯನ್ನು ಇಚ್ಛೆಯನುಸಾರ ಉಪಯೋಗಿಸಿಕೊಳ್ಳಬಹುದು. ಪ್ರತಿಯೊಬ್ಬರಿಗೂ ದಿನನಿತ್ಯದ ವ್ಯವಹಾರಗಳಲ್ಲಿ ಲೇಖನಿಯ ಅವಶ್ಯಕತೆ ಇದೆ. ಈ ಉಪಯೋಗವು ಹಲವೊಂದು ರೂಪಗಳಲ್ಲಿರಬಹುದು. ಬೇಡುವವರಿಗೆ ದಾನವಾಗಿ ಕೊಡುವ ಹಣವು ಸಂಸ್ಥೆಗಳಲ್ಲಿ ಲೆಖ್ಖಪುಸ್ತಕಗಳ ಮೇಲೆ ಲೇಖನಿಯಿಂದ ಬರೆಯಿಡುತ್ತಾರೆ. ದಾನ ಪಡೆದ ಬಡವನು ಬರೆದಿಡದೆ ಇರಬಹುದು, ಆದರೆ ಕೊಟ್ಟವನಿಗೆ ಬರೆದಿಡದೆ ನಿರ್ವಾಹವಿಲ್ಲ. ಬರೆದಿಡದಿದ್ದರೆ ಅವನ ಆಯವ್ಯಯ ಪಟ್ಟಿಯಲ್ಲಿ ತಪ್ಪು ಕಂಡುಬರಬಹುದು ಹೀಗೆ.

ಜ್ಞಾನಾರ್ಜನೆಗೆ ಲೇಖನಿಯೇ ಮೂಲ. ಶಾಲೆಗಳಲ್ಲಿ ಮಕ್ಕಳಿಗೆ ಅಕ್ಷರಭ್ಯಾಸವನ್ನು ಲೇಖನಿಯ ಮೂಲಕ ಮಾಡಿಸುವರು. ಕಾರಣ ಅಕ್ಷರಭ್ಯಾಸವು ಮಕ್ಕಳಲ್ಲಿ ಬರೆದು ಬರಬೇಕು—ಆಗ ಲೇಖನಿ ಬೇಕೆ ಬೇಕು. ಅಂದರೆ ಲೇಖನಿಯು ಜ್ಞಾನದ ಮೂಲ, ಬೆಳೆಯುವ ಜ್ಞಾನದ ಒಡೆಯ, ಬೆಳೆದ ಜ್ಞಾನದ ಗೆಳೆಯ ನೆಂದರೆ ಹೊಗಳಿಕೆಯಲ್ಲ. ಒಂದು ವೇಳೆ ಲೇಖನಿಯೆಂಬ ವಸ್ತು ಇಲ್ಲದಿರುತಿದ್ದರೆ ಇಂದಿನ ನಾಗರೀಕ ಲೋಕವು ಯಾವ ಅಜ್ಞಾನಾಂಧಕಾರದಲ್ಲಿ ಮುಳುಗುತ್ತಿತ್ತೊ ಹೇಳಲಸಾಧ್ಯ. ದರ್ಶನವಾಗಿ ಹಿಂದುಳಿದ ಅನಾಗರೀಕ ಜನಾಂಗಕರನ್ನು ನೋಡಿದರೆ, ಬರಹ ಬಾರದ ಅವರು ಪಶುಗಳಂತಿರುತ್ತಾರೆ. ಲೇಖನಿಯ ಉಪಯೋಗವು ಅವರಿಗೆ ಇನ್ನೂ ತಿಳಿಯಲಿಲ್ಲ. ಅವರಲ್ಲಿ ಬರಹಜ್ಞಾನವನ್ನುಂಟುಮಾಡಬೇಕಾದರೆ ಅವರ ಕೈಯಲ್ಲಿ ಲೇಖನಿಯನ್ನು ಕೊಡಬೇಕು. ಈ ಮೂಲಕ ಆದ ಬರಹಜ್ಞಾನದಿಂದ ಅವರಲ್ಲಿ ಓದುವ ಶಕ್ತಿಯುಂಟಾಗುವುದು. ಓದುವುದರ ಮೂಲಕ ಜ್ಞಾನವುಂಟಾಗುವುದು, ಜ್ಞಾನದಿಂದ ತಿಳುವಳಿಕೆಯು ವಿಕಾಸವಾಗುವುದು.

ಸರಕಾರದ ಇಲಾಖೆಗಳಲ್ಲಿ ಲೇಖನಿಯ ವರ್ಚಸ್ಸು ಅಸಮಾನವಾದುದು. ಜನಾಂಗಗಳ ಭವಿಷ್ಯವನ್ನು ಮಾರ್ಪಡಿಸುವ ಒಪ್ಪಂದದ ಕರಾರುಗಳು, ವಾಣಿಜ್ಯ ವ್ಯವಹಾರ ಮಾತುಕತೆಗಳು ಲೇಖನಿಯ ಸಹಿಯೊಂದಿಲ್ಲದಿದ್ದರೆ ನಿಷ್ಪ್ರಯೋಜಕವೆಂದೆಣಿಸುವುವು. ಒಂದು ಕ್ಷಣದೊಳಗೆ ರಾಜ್ಯಗಳು, ಸಾಮ್ರಾಜ್ಯಗಳು ಕೈ ಬದಲಾಗಿ, ಗುಲಾಮಿ ಜನಾಂಗವು ಗದ್ದುಗೆಯನ್ನೇರುವುದು. ರಾಜರ ಸಿಂಹಾಸನಗಳು ಮಣ್ಣುಪಾಲಾಗುವುವು. ರಾಜರುಗಳು ದೇಶಭ್ರಷ್ಟರಾಗುವರು. ಸವರ್ಣೀಯರುಗಳು ತಮ್ಮ ಅಧೋಗತಿಯನ್ನು ನೋಡುವರು ಒಂದು. ಲೇಖನಿಯ ಸಹಿಯಿಂದಾಗಿ ಕಳೆದ ಕೆಲವು ತಿಂಗಳ ಹಿಂದೆ ಪ್ರೇಯಸಿಗಾಗಿ ಪಟ್ಟ ಪರಿತ್ಯಾಗ ಮಾಡಿದ ರಾಜ ಅಷ್ಟಮ ಎಡ್ವರ್ಡರ ಒಂದಿಷ್ಟು ಶಾಯಿ ಲೇಖನಿಯಿಂದ ತಂದು ಕಿರೀಟವನ್ನು ತಮ್ಮಂದಿರಾದ ಅರಸೇ ಜಾರ್ಜರಿಗೆ ಬಿಟ್ಟುಕೊಟ್ಟಿರುವೆನೆಂದು ಸಹಿ ಹಾಕದೆ ಇರುತ್ತಿದ್ದಲ್ಲಿ ಇಂಗ್ಲೆಂಡು ಇಂದು ಘೋರ ಕಲಹದಲ್ಲಿ ಮುಳುಗಿರುತಿತ್ತು.

ನ್ಯಾಯಾಧೀಶರು ತೀರ್ಪು ಪತ್ರದ ಮೇಲೆ ಹಾಕುವ ಸಹಿಯಿಂದ ಕೈದಿಯೊಬ್ಬನ ಜೀವನವು ಒಂದು ಕ್ಷಣದಲ್ಲಿ ಅಂತ್ಯಗೊಳಿಸುವಂತಾಗಬಹುದು, ಇಲ್ಲವೆ ಖೂನಿಕಾರನ ಪ್ರಾಣವು ರಕ್ಷಣೆಯಾಗುವಂತಾಗಬಹದು. ಅಂತೂ ಲೇಖನಿಯ ಮಹಾತ್ಮೆಯು ಅಗಾಧವಾದುದು.

ಸಧ್ಯನ ಪ್ರಬಂಧ

ನಿರುಪಮಾ ಸೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು! ಅತೀ ಕಮ್ಮಿದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ: ಆಣೆ ೬ ಮಾತ್ರ

Manufactured by:—

J. B Dutt & Co , Calcutta,

Sole agent:—

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರೇಕೃ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯು ತಾಗಿ ಬರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುಬುಗಳ ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯವಾಗುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ನ ತ್ತ ಅಸಹ್ಯವಾದ ಕೆವ್ಮು ಒಳ್ಳೆ ಇವುಗಳನ್ನು ಗ ಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ವ ಧ ರುವುದ ದ ಕ ಳ ಸಪ ತನ ದ ದ ಸೇವಿಸ ತ್ತಿ

ಸಿಗುವ ಸ್ಥಳ —

ಶಾ ಮತ್ತು ಕಂಪನಿ,

ಗ ಪವೆಂಟ್ ಕಾಲೇಜಿನ ಎದುರು ಮಂಗಳೂರು

Regd)

ಅಮೃತಾಂಜನ

ತಲೆನೋವನೆ, ಶಿರೋವೇದನೆ, ಚಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು ಛಾಯಾಗಳು ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ವಕ್ಷವಾತ ಮೊದಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY-MADRAS-CALCUTTA

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು.)

1.	ಅಧಿಕೃತ ಚಂದಾ ಹಾಕಲು ಅರ್ಪಿಸಿದ ಮೂಲಧನ	ರೂ 3,50,000–0–0
2	ಚಂದಾ ಹಾಕಿ ಎತ್ತಿದ ಮೂಲಧನ . . .	ರೂ. 2,88,950–0–0
3	ಕ್ಷೇಮನಿಧಿಗಳು	ರೂ. 3,63,578–0–0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು:— ಉಡುಪಿ

ಬ್ರಾಂಚುಗಳು —1. ಮದ್ರಾಸು; 2. ವೆಲ್ಲೂರು, 3. ತಲಚೇರಿ; 4. ರಥಬೀದಿ, ಮಂಗಳೂರು, 5. ಬಂದ್ರು, ಮಂಗಳೂರು; 6. ಉಡುಪಿ, 7 ಶಿರ್ವ; 8. ಕುಂದಾಪುರ; 9. ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13 ಮೈಸೂರು, 14 ಮಡಿಕೇರಿ; 15 ವೀರರಾಜೇಂದ್ರಪೇಟೆ.

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು "ಸೇಲಂ"ನಲ್ಲಿ ಇಂದು ತಾ. **4–6–1937**ರಲ್ಲಿ ತೆರೆಯಲ್ಪಟ್ಟಾಯಿತು.

ಅಂದಿನಿಂದ ಅಲ್ಲಿ ಬ್ಯಾಂಕಿಂಗ್ ವ್ಯವಹಾರಗಳನ್ನು ಪ್ರಾರಂಭಿಸಲ್ಪಟ್ಟಿದೆ.

10–6–1937

V. R. Kamath, B. A. LL. B

Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market

They are the unique products of our Province.

Many have tried & found satisfied. Buy now and you will also be convinced.

Manufactured by—

The West Coast Soap Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಡೆದಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!

ಬೆಲೆಯಲ್ಲಿಯೂ ಅಧಿಕವಲ್ಲ

ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

ಸುಲಭೋಪಾಯ ... ಹಣ ... [illegible]

ಸುಪ್ರಸಿದ್ಧ ವೈದ್ಯರಾದ ಎಮ್ಸ್. ಕೆ. ರಜಪೂತ್ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು:— ಡಾ। ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೊಳವಾಪೂರು, ಬಾಹೇ ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪–೦–೦. ವಿ. ಪಿ. ಆಣೆ ೮

ವಿಳಾಸ:— ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ. 7–0–0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್.

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ: ಡಾಕ್ಟರ್ ಬಿ ಎಚ್ ಪದ್ಮನಾಭ ಪೈ, ಚಿಕ್ಕಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮ ಪೇಟೆ ಶಂಕರನಾರಾಯಣ 3 ಮೆಸರ್ಸ್ ಕಾಮತ್ ಎಂಡ್ ಕೊ. ಗಿರಿಗಾಂವ ಮುಂಬಯಿ 4 ಕೆ ಶೀನಪ್ಪ ಹೆಗ್ಡೆ ಮರ್ಚಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents —

The Kerala Tea Syndicate,

PONANI—(S. Malabar.)

ನಿಮ್ಮ ಮನೆಯಲ್ಲೇ ಸಿನೆಮಾ.

9×6×8 ಇಂಚುಗಳಷ್ಟು ಅಳತೆಯುಳ್ಳದ್ದು ಅಂದ ಸ್ಟೀಲಿನಿಂದಲೇ ತಯಾರಿಸಲ್ಪಟ್ಟದೆ

ಬಹಳ ಶಕ್ತಿಯ ಭೂತ ಕನ್ನಡಿಗಳಿಂದ ಜೋಡಿಸಲ್ಪಟ್ಟು ಜೊತೆಗೆ 100 ಗಜ (300 ಅಡಿ) ಗಳಷ್ಟು ಉದ್ದದ ಚಲನ ಚಿತ್ರಗಳ ಫಿಲ್ಮ ಕೂಡಾ ಕೊಡಲಾಗುತ್ತದೆ. ಒಂದು ಚಿಕ್ಕ ಟೆಬಲ್ ಲ್ಯಾಂಪಿನ ಪ್ರಕಾಶದಿಂದ ನಿಮ್ಮ ಮನೆಗಳ ಕೋಣೆಗಳಲ್ಲಿ ಸ್ಪಷ್ಟವಾದ ಚಲನಚಿತ್ರಗಳ ಪ್ರದರ್ಶನ ಮಾಡಬಹುದು. ಒಂದು ಯಂತ್ರವನ್ನು ಈಗಲೇ ತರಿಸಿಕೊಳ್ಳಿರಿ ಯಂತ್ರದೊಡನೆ 100 ಗಜ ಫಿಲ್ಮಿಗೂ ಒಂದು ಟೆಬಲ್ ಲ್ಯಾಂಪಿಗೂ ಸಮೇತ ರೂ 7 8—0 ಮಾತ್ರ ಪೋಸ್ಟೇಜ್ ಬೇರೆ ರೂ 1೮ ಬಿಡ್ಡಿಲು ಟಿಕೆಟುಗಳನ್ನಾಗಲೀ, ಪೋಸ್ಟಲ್ ಆರ್ಡರ್ ಮೂಲಕವಾಗಲೀ ಆರ್ಡರಿನೊಂದಿಗೆ ಮುಂಗಡ ಕಳುಹಿಸಬೇಕು



Novelty Stores, P B No 275 Madras

೧ ರೂಪಾಯಿಗೆ ೫೦೦೦ ರೂಪಾಯಿ

ಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರೀಮಿಯಂ ಕಟ್ಟಬೇಕಾಗಿಲ್ಲ, ಮತ್ತೆ ಪ್ರೀಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರು.

Write for full particulars to:

M. S. V. Kamath,

BOLUR, MANGALORE.

Dist. Agent for SOUTH CANARA

Dist. Agent for North Kanara.

~~Mr. I. A. Shaik Khaji Mohalla,~~

ANKOLA.

Edited Printed & Published By A. S. Kamath at the Sharada Press. Car Street. Mangalore

ವಾರ್ಷಿಕ ಚಂದಾ: 2 ರೂಪಾಯಿ NO. M. 5408.

ಸ್ವದೇಶಾಭಿಮಾನಿ

SWADESHABHIMANI

ಬಿಡಿ ಸಂಚಿಕೆಗೆ ಒಂದಾಣೆ.] ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು. [ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಪಡೆತು ಸ್ವರ್ಗದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. ಮಂಗಳೂರು ತಾ. ೧೮ನೇ ಜೂನ್ ೧೯೩೭. (18–6–'37) ಸಂಚಿಕೆ ೨೪



ಜಗಜಟ್ಟಿ ಗಾಮಾರವರ ಕೂಟ: ಗಾಮಾರವರು ಮದ್ರಾಸಿಗೆ ಬಂದಿದ್ದಾಗ ಅವರ ಜೊತೆಯಲ್ಲಿ ಬಂದಿದ್ದ ಕೂಟದವರ ಚಿತ್ರವಿದು. ಗಾಮಾರವರ ತಮ್ಮಂದಿರಾದ ಇಮಾಮ್ ಬಕ್ಸ್‌ರು ಮಧ್ಯದಲ್ಲಿ ನಿಂತಿರುವರು. ಅವರ ಎಡಗಡೆಯಲ್ಲಿ ನಿಂತಿರುವವರೇ ಹಮೀದಾರವರು—ಗಾಮಾರ ದಾಯಾದಿ. ಇತರರೆಲ್ಲರೂ ಏಕಸಮಾನ ದೃಢಕಾಯರು. ಇವರು ಮದ್ರಾಸಿನಲ್ಲಿ ತಮ್ಮ ಕುಸ್ತಿ ಪ್ರದರ್ಶನಗಳನ್ನು ಕೊಟ್ಟರು. ಅಲ್ಲಿಂದ ಬೆಂಗಳೂರಿಗೆ ಹೋದಾಗ ಅಲ್ಲಿ ಅವರಿಗೆ ಕುಸ್ತಿ ಪಂದ್ಯಾಟಗಳನ್ನು ಮಾಡಲು ಸರಕಾರದ ಹುಕುಂ ಸಿಗಲಿಲ್ಲ; ಹಿಂದೂ ಮುಸ್ಲಿಂ ಗಲಾಟೆಯ ಭಯದಿಂದಂತೆ. ಭಾರತಕ್ಕೆ ಗೌರವಪ್ರಾಯರಾದ 'ಗಾಮಾ'ರಂತಹ ಅದ್ವಿತೀಯ ಪ್ರತಿಭಾಶಾಲಿಗಳಲ್ಲಿ ಜಾತೀಯತೆಯ ವ್ಯಸನವು ಹುಟ್ಟಾಗಲಿಕೆ ಕಾರಣವೇ ಕಾಣುವುದಿಲ್ಲ. ಇಂತಹ ಭಾರತಪುತ್ರರು ಜಾತೀಯತೆಯ ಬಿಕ್ಕಟ್ಟನ್ನು ಪರಿಹರಿಸಲು ತುಂಬಾ ಸಹಾಯಕರಾಗಿರುವಾಗ ಹಿಂದೂ ಮುಸ್ಲಿಂ ಗಲಾಟೆಯ ಭಯವು ಸರಕಾರಕ್ಕೆ ಬರುವುದೆಂದರೆ ಖೇದಾಸ್ಪದ ವಿಷಯವಾಗಿದೆ.

ಭಾರತದ ನಾರೀವೃಂದ—ಕೆಲವು ದಿವಸಗಳ ಹಿಂದೆ ಶ್ರೀಮತಿ ದತ್ತಾರವರ ನಾಯಕತ್ವದಲ್ಲಿ ವಿದೇಶಕ್ಕೆ ಪ್ರಯಾಣ ಬೆಳೆಸಿದ ನಾರಿಗಳ ಕೂಟ. ಇವರು ನಮ್ಮ ದೇಶದ ಬೇರೆ ಬೇರೆ ಪ್ರಾಂತ್ಯಗಳ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು. ಬಲಭಾಗದ ಕೊನೆಯಲ್ಲಿ ನಿಂತಿರುವವರೇ ಶ್ರೀಮತಿ ದತ್ತಾರವರು. ಇಂಗ್ಲೆಂಡು ಯುರೋಪಿನ ಪ್ರಾಮುಖ್ಯ ವಿದ್ಯಾಸಂಸ್ಥೆಗಳನ್ನೂ ಮಹಿಳಾಶ್ರಮಗಳನ್ನೂ ಸಂದರ್ಶಿಸಿ ಅನುಭವ ಪಡೆಯುವುದೇ ಈ ಮಂಡಳಿಯ ಉದ್ದೇಶವಾಗಿದೆ. ಇಂತಹ ಸಂಚಾರದಿಂದ ಭಾರತ ಮಹಿಳೆಯರಲ್ಲಿ ವಿದೇಶದ ರೀತಿ ಸುಧಾರಣೆಗಳು ಹರಡಿ ಅವುಗಳು ನಮ್ಮ ದೇಶದಲ್ಲಿ ಅನುಕೂಲವಾಗುವಂತೆ ಅನುಸರಿಸುವುದರಲ್ಲಿಯೂ ಭಾರತದ ಮಹಿಳೆಯರು ಇನ್ನೂ ಹೆಚ್ಚಿನ ಸುಧಾರಣೆ ಸಂಸ್ಕೃತಿ ಹೊಂದುವುದರಲ್ಲಿಯೂ ಸಂದೇಹವಿಲ್ಲ.

Note........8—ನೋಟಗಳು.

ಬಂಗಾಳದಲ್ಲೀಗ ಕ್ರಾಂತಿಕಾರರ ದಂಗೆಗಳಿಲ್ಲ. ಆದರೂ, "ಉಂಟಾಗಬಹುದೆಂಬ ಹೆದರಿಕೆ ಬಹಳ" ಎಂಬ ಭವಿಷ್ಯವಾಣಿಯು ಕೇಳಿಸುತ್ತಿದೆಯಾದುದರಿಂದ, ವಿಚಾರಣೆಯಿಲ್ಲದೆ ಪೊಲಿಸ ನಿರ್ಬಂಧದಲ್ಲಿರುವವರನ್ನೆಲ್ಲ ಬಿಡುಗಡೆ ಮಾಡುವುದಿಲ್ಲ. ಹೊಸ 'ಪ್ರಜಾಪಕ್ಷ'ದ ಮಂತ್ರಿಗಳು ಸಾವಿರ ಕೈದಿಗಳನ್ನು ಬಿಡುಗಡೆ ಮಾಡುವುದಾಗಿ ತಿಳಿಸಿರುವರು. ಆದರೆ ಎಲ್ಲರನ್ನು ಬಿಡುಗಡೆ ಮಾಡಬಾರದೇಕೆ?

o o o o o

ಪೋಲೀಸ ಅಫಿಸು ಬೆದರಿಸುತ್ತಿದೆಯೋ? ಈ ಕೈದಿಗಳನ್ನು ಸಾಕಲು ಹಣಬೇಡವೆ? ಇದಕ್ಕಾಗಿ ಖರ್ಚನ್ನು ಸಂಕ್ಷೇಪ ಮಾಡುವವರಾರು? ಮಂತ್ರಿಗಳು ಹೇಳಿದರೆ ಗವರ್ನರರೂ ಈಗಣ ಶಕ್ತಿನ ಪ್ರಕಾರ ಒಪ್ಪದಿರುವರೇ? ಹಾಗಿರುವಾಗ, ಎಲ್ಲರ ಬಿಡುಗಡೆಗೆ ಮಂತ್ರಿಗಳಿಗೇ ಮನಸ್ಸಿಲ್ಲದಿದ್ದ ಕಾರಣವೆ ಅರೆವಾಸಿಯ ಬಿಡುಗಡೆಯು ಯಾಕೇ? ಅದನ್ನು ಮರೆಯಿಸಲು ಇತರ ನೆವಗಳ ಪರದೆಯೊ?

o o o o

ರಾಜಗೋಪಾಲಾಚಾರ್ಯರು ಮುಖ್ಯ ಮಂತ್ರಿಗಳಾಗಿದ್ದರೆ, ಅವರ ಸಂಚಾರ ಕಾಲದಲ್ಲಿ ಸರಕಾರದ ಜವಾನರುಗಳು ಎಷ್ಟೋ ಮಂದಿ ಅತ್ತಿತ್ತ ಪರಿವಾರವಾಗಿ ಸುಳಿಯುತ್ತಿದ್ದರು. ಆಚಾರ್ಯರ ದಸೆ ಬಹಳ ಸೊಬಗಿನದು. ಅವರು ಮಂತ್ರಿಗಳಾಗುವುದಿಲ್ಲವೆಂದರೂ, ಅವರ ಸಂಚಾರ ಕಾಲದಲ್ಲಿ ಡಿಟೆಕ್ಟಿವ್ ಪೊಲೀಸರು ಸುತ್ತು ಬಳಸಿಯೇ ಇದ್ದರಂತೆ.

o o o o o

ಸಿಮ್ಲಾದಲ್ಲಿನ ಖಾದೀ ಭಂಡಾರದ ಮೇಲಣ ರಾಷ್ಟ್ರಧ್ವಜಗಳನ್ನು ಯುರೋಪಿಯರಿಬ್ಬರು ಕಿತ್ತು ತೆಗೆದರಂತೆ. ನಮ್ಮೂರಿನ ಜನರು ನಮ್ಮ ದೇಶೀಯ ಗೌರವ ಸೂಚಕ ಧ್ವಜಗಳನ್ನು ತೂಗಾಡಿಸಬಾರದೆಂದು ಅವನ್ನು ಕಿತ್ತು ತೆಗೆವ ಪರದೇಶಿಯರು, ಪರದೇಶಕ್ಕೆ ಪ್ರಯಾಣ ಮಾಡುವಷ್ಟು ಉತ್ತಮ ನಡತೆಯನ್ನು ಮರೆವುದೂ ಒಂದು ಧರ್ಮವೆ? ಅವರು ನಮ್ಮಲ್ಲಿಗೆ ಬರಬೇಕೆಂದು ಅವರನ್ನು ಕರೆದವರಾರು? ಇಲ್ಲಿ ಬಂದು ಇಲ್ಲಿನವರು ಸ್ವಗೌರವ ಕಾಪಾಡಿಕೊಳ್ಳಬಾರದೆಂದೂ ಅವರು ಬೋಧಿಸಬೇಕೆ? ಇಲ್ಲಿನ ಅನ್ನ ಬೇಕು ಜನ ಬೇಡ. ಕೂಲಿದುಡಿಯ ಬಂದವರಿಗೆ, ತಮ್ಮ ಪ್ರಾಮುಖ್ಯತೆಯ ಸೋಗು ಏತಕ್ಕೆ?—ಎಂದು 'ಸರ್ಚ್ ಲಾಯಿಟ್' ಪತ್ರಿಕೆ ಬರೆಯುತ್ತಿದೆ.

o o o o

ಅಲ್ವಾರಿನ ಮಹಾರಾಜರ ಆಡಳಿತದಲ್ಲಿನ ಕುಂದುಗಳನ್ನು ಹೋಗಲಾಡಿಸಲು ಅವರನ್ನು ಸ್ವರಾಜ್ಯದಿಂದ ವಿಲಾಯತಿಗೆ ಕಳಿಸಲಾಗಿದ್ದಿತು. ಅಲ್ವಾರಿನ ಬಳಿಯ ಹಳ್ಳಿಯೊಂದರಲ್ಲಿ, ೧೪ ಮಂದಿ ಮರಣವನ್ನೂ ೪೨ ಮಂದಿ ಘಾಯಗಳನ್ನೂ ಹೊಂದುವ ಹಾಗೆ ಪೋಲೀಸರು ಗುಂಡು ಹಾರಿಸಬೇಕಾಗಿ ಇತ್ತೀಚೆಗೆ ವಿದ್ಯಮಾನಗಳುಂಟಾದುವು.- ಇದೇಕೆಂದು ಸರಕಾರವು ಪ್ರಕಟಿಸುತ್ತಾ, ಯಾವ ಕುಂದುಗಳನ್ನು ಹೋಗಲಾಡಿಸಲಾಗಿದೆ ಎಂದು ವಿವರಿಸಬಾರದೇಕೆ?—ಎಂದು ಡೈಲಿ ಹೆರಲ್ಡ್ ಪತ್ರಿಕೆಯು ಟೀಕೆ.

o o o o o

ಮುಖ್ಯ ಮಂತ್ರಿ ರೆಡ್ಡಿ ಸಾಹೇಬರು ಎನ್ನುತ್ತಾರೆ—"ಗವರ್ನರರು ನನ್ನನ್ನು ಕೇಳಿಕೊಂಡಾಗ ನಾನು ಮಂತ್ರಿ ಮಂಡಲ ರಚಿಸಲು ಒಪ್ಪದಿದ್ದಲ್ಲಿ ಅದು ಕೃತಘ್ನತೆಯಾಗುತ್ತಿತ್ತು!! ಗವರ್ನರರ ಕರೆ, ಜನ್ಮಭೂಮಿಯ ಕರೆ,—ಎಂಬೀ ಎರಡು ಕರೆಗಳ ನಡುವೆ ನಿಂತು ಹೀಗಾಯಿತು. ಕೃತಘ್ನತೆ!

o o o o o

ಏದು ಮಂದಿಯ ಬೆಂಬಲವೂ ಇಲ್ಲದೆ, ಅಧಿನಾಯಕನಾಗುವುದರ ಅರ್ಥವೇನು? ಅದಾದ ಬಳಿಕ, ಶಾಸನ ಸಭೆಗಳನ್ನು ಆಗುವಷ್ಟು ಅವಧಿಗೆ ಕೂಡಿಸದಂತೆ ತಡೆವುದೇನು? ಆಗುವಷ್ಟು ದಿನ ಅಧಿಕಾರ ಪಾಲಿಸಿ ನೋಡೋಣ ಎನ್ನುವುದೇನು? ಕೃತಘ್ನತೆಯನ್ನು ಪ್ರದರ್ಶಿಸಿ, ನೌಕರಶಾಹಿಯ ಪಕ್ಷಪಾತವನ್ನು ಮರೆಮಾಡಬೇಕೆ?—ಇವು ಪತ್ರಿಕೆಯ ಪ್ರಶ್ನೆಗಳು.

o o o o o

"ನಮ್ಮ ದೇಶದಲ್ಲಿನ ಗೊಂಬೆಗಳ ಖಾನೇಸುಮಾರಿ ಎತ್ತಿದರೆ, ನೂರರಲ್ಲಿ ೮೦ ಕಾಂಗ್ರೆಸಿನಲ್ಲಿವೆ" ಎಂದು ಬೊಂಬಾಯಿಯ ಮಂತ್ರಿ ಮೇಥಾರವರು ಕೊಲಾಬಾದಲ್ಲಿ ಭಾಷಣ ಮಾಡಿದರು. ಆದರೆ, ಕಾಂಗ್ರೆಸಿಗೆ ಒಂದು ಧ್ಯೇಯವಿದೆ, ಕಾರ್ಯಕ್ರಮವಿದೆ,—ಆ ಆಟ ಮಾಡುವ ಗೊಂಬೆಗಳೇ ಕಾಂಗ್ರೆಸಿನಲ್ಲಿವೆ; ನೂರರಲ್ಲಿ ೮೦ ಅಲ್ಲ,- ನೂರು! ಅನಗತ್ಯವಾದೊಂದು ಮಂತ್ರಿ ಮಂಡಲದಲ್ಲಿ ಸೇರಿದ ಮಂತ್ರಿಗಳು ಧ್ಯೇಯವೂ ಕಾರ್ಯಕ್ರಮವೂ ಇಲ್ಲದ ಗೊಂಬೆಗಳಲ್ಲವೆ?

o o o o o

ಇಂಡಿಯಾದ ಮುಖ್ಯ ಕೈಗಾರಿಕೆ ಯಾವುದು? ಕಚ್ಚಾ ಜವಾನರನ್ನು ಇಲ್ಲಿಗೆ ಆಮದು ಮಾಡಿ, ಆಚ್ಯಾಕರ್ನಲರನ್ನು ರಫ್ತು ಮಾಡುವುದು.

o o o o o

ಅಬಿಸಿನಿಯದ ದೃಷ್ಟಾಂತವನ್ನು ನೋಡಿ, ಬ್ರಿಟಿಷರ ಆಡಳಿತೆ ನಮ್ಮೊ ಸಂಬಂಧವೆನ್ನೊ ಕೊಂಡಾ[illegible] ಎಂದು ರೆಡ್ಡಿ ಸಾಹೇಬರು ಹಿಂದೀಯರಿಗೆ [illegible]ಚಿಸಿರುವರು. ಸ್ವರಾಜ್ಯವನ್ನು ಕೈಕೊಳ್ಳುವ ಯೋಗ್ಯತೆ ಉಂಟಾಗುವಂತೆ ಎರಡು ಶತಮಾನಗಳಿಂದ ಭಾರತೀಯರನ್ನು ತರಬೇತು ಮಾಡುತ್ತಲಿರುವ ಬ್ರಿಟಿಷರನ್ನು,—ಅಬಿಸಿನಿಯದಲ್ಲಿ ಅಂಥ ತರಬೇತು ಮಾಡಲು ಇಷ್ಟರಲ್ಲಿಯೇ ಕೈಹಚ್ಚುತ್ತಲಿರುವ ಇಟೆಲಿಯನರೊಡನೆ ಹೋಲಿಸುವುದೆ?

o o o o

ರೈತರ ಹಿತಕ್ಕಾಗಿ ತಾನು ಮಾಡಿರುವುದರಷ್ಟು ಹಿತವನ್ನು ಕಾಂಗ್ರೆಸು ಮಾಡಬಹುದಾಗಿರುವಲ್ಲಿ, ತನ್ನ ಬಲಗೈಯನ್ನೇ ಕತ್ತರಿಸಿ ಕೊಡುವೆನು ಎಂಬೂ ಅಮಲಾಪುರದಲ್ಲಿ ರೆಡ್ಡಿ ಸಾಹೆಬರು ಭಾಷಣ ಮೂಲಕ ವಾಗ್ದಾನ ಮಾಡಿದರು. ಎಡಗೈಯಿಂದ ಸಹಿ ಹಾಕಲು ಇಷ್ಟರಲ್ಲೇ ಚೆನ್ನಾಗಿ ತಿದ್ದಿಕೊಂಡಿರಬೇಕು. ಇಂಥ ಘೋರ ಪ್ರತಿಜ್ಞೆ ಮಾಡಿಯೂ ಮಂತ್ರಿಗಳಾಗಬೇಕೆ?

o o o o

ಬೊಂಬಾಯಿ ಕಾರ್ಪರೇಶನಿನ ಮುಂದಣ ಅಧಿವೇಶನದಲ್ಲಿ ಒಂದು ಸೂಚನೆಯು ಮುಂದೆ ಬರಲಿದೆ:-ಬೋಯ್ ಸ್ಕೌಟುದಳದ ಮೂಲಪುರುಷರೇ ಹಿಂದೀ ಜನತೆಯಲ್ಲಿ ಗುಣವಿಲ್ಲದ ಅವಲಕ್ಷಣವನ್ನು ಬಹಿರಂಗವಾಗಿ ಆಡಿಗಳಹಿದ ಕಾರಣ, ಶಾಲಾ ಕಮಿಟಿಯವರು ಸ್ಕೌಟ್ ಪದ್ಧತಿಗೆ ನಿಗಾ ಕೊಡುವುದನ್ನು ಮುಗಿಸಿ, ಆತ್ಮಾವಲಂಬನವನ್ನೂ ಜನ ಸೇವಾ ಬುದ್ಧಿಯನ್ನೂ ವಿದ್ಯಾರ್ಥಿಯರಲ್ಲಿ ತಿದ್ದಿ ತರುವುದಕ್ಕಾಗಿ ಇತರ ಉಪಾಯಗಳನ್ನು ಕಂಡುಕೊಂಡು ಆಚರಣೆಗೆ ತರಬೇಕು. ಹೀಗೆ ಹಿಂದೀಯರಲ್ಲಿ ಇಷ್ಟಾದರೂ ಗುಣವುಂಟು ಎಂಬುದನ್ನು ಲಾರ್ಡ್ ಬೇಡನ್ ಪವೆಲ್ಲರು ತಿಳಿದುಕೊಳ್ಳಲಿ ಎಂದೇ ಈ ಸೂಚನೆಯ ಆವಶ್ಯಕತೆ.

o o o o

ನಮ್ಮಲ್ಲಿ ಜಡಿಮಳೆ ಬಂದಾಗ ಶಾಲೆಗಳನ್ನು ಮುಚ್ಚುವಂತೆಯೆ ಬರ್ಲಿನಿನಲ್ಲಿ ಸೆಕೆ ಹೆಚ್ಚಿದಾಗ ಶಾಲೆ ಮುಚ್ಚಲಾಯಿತು. ನಮ್ಮಲ್ಲಿನ ಸಾಮಾನ್ಯವಾದ ಮೇ ತಿಂಗಳ ಸೆಕೆಯನ್ನು ಬರ್ಲಿನಿನಲ್ಲಿ ತಡೆಯಲಾಗಲಿಲ್ಲ. ಲಂಡನಿನಲ್ಲಿ, ನಮ್ಮ ಸೆಕೆ ಕಾಲದ ರಾತ್ರಿಯಷ್ಟು

(೧೧ನೇ ಪುಟಕ್ಕೆ ಮುಂದುವರಿಸಿದೆ.)

ನಿಮ್ಮ ಕುಟುಂಬದವರಿಗೆಲ್ಲ ಒಳ್ಳೇ ಆರೋಗ್ಯ

ನಿಮ್ಮ ಕುಟುಂಬದ ಆರೋಗ್ಯವು ಬಹಳ ಪ್ರಾಮುಖ್ಯವಾದ ವಿಷಯವಾಗಿರುತ್ತದೆ. ಆದ್ದರಿಂದಲೇ ದೇಶದಲ್ಲಿನ ಎಲ್ಲಾ ಮನೆಗಳಲ್ಲಿಯೂ ಶಕ್ತಿವರ್ಧಕ ಆಹಾರ ಪಾನೀಯವಾದ 'ಓವಲ್ಟಿನ್'ನ್ನು ಬಹಳವಾಗಿ ಉಪಯೋಗಿಸುತ್ತಿದ್ದಾರೆ.

ಪ್ರಕೃತಿಯಲ್ಲಿ ಸಿಗಬಹುದಾದ ಶ್ರೇಷ್ಠ ಪೌಷ್ಟಿಕ ಆಹಾರಗಳಾದ ಹಣ್ಣಾದ ಬಾರ್ಲಿ ಸಕ್ಕರೆಯಿಂದಲೂ, ಉತ್ತಮ ಕೆನೆ ಹಾಲಿನಿಂದಲೂ ತಯಾರಿಸಲ್ಪಟ್ಟದ್ದಾಗಿದ್ದು, ಸಂಪೂರ್ಣವೂ ಪರಿಪೂರ್ಣವಾಗಿಯೂ ಆದದ್ದಾಗಿರುತ್ತದೆ. ಇಷ್ಟಲ್ಲದೆ, ಇದರಲ್ಲಿ ಪ್ರಕೃತೀಯವಾದ ವಿಟಮಿನ್‌ಗಳೂ ಇನ್ನಿತರ ಉತ್ತಮ ಆಹಾರಗಳೂ ಸೇರಿವೆ.

'ಓವಲ್ಟಿನ್'ನಲ್ಲಿ ದೇಹಶಕ್ತಿಯನ್ನೂ, ಮಾನಸಿಕ ಚಟುವಟಿಕೆಯನ್ನೂ ಅಭಿವೃದ್ಧಿಗೊಳಿಸಿ ಆದರಿಸತಕ್ಕ ಎಲ್ಲಾ ಪೌಷ್ಟಿಕ ಆಹಾರಗಳೂ ಸೇರಿರುವುದರಿಂದ, ಒಂದು ಕಪ್ 'ಓವಲ್ಟಿನ್'ನ್ನು ದಿನಂಪ್ರತಿ ಸೇವಿಸುವುದೆಂದರೆ, ನಿಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ಒಳ್ಳೇ ಶಕ್ತಿ, ಆರೋಗ್ಯ ಮತ್ತು ಚೈತನ್ಯವನ್ನು ಸೂಚಿಸುತ್ತದೆ. ಇಮಿಟೇಶನುಗಳಿಗೆ ಮೋಸಹೋಗಬೇಡಿರಿ.

ಓವಲ್‌ಟಿನ್

OVALTINE

ಪೌಷ್ಟಿಕ ಆಹಾರ ಪಾನೀಯ

ಮಿದುಳು, ನರ ಮತ್ತು ದೇಹಶಕ್ತಿಯನ್ನು ವೃದ್ಧಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ.

ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ.

OV/447

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 & 2 months 4%

Auction Chit Funds ranging from Rs. 100—0—0 run regularly on systematic lines. Unique Banking facilities to Businessmen and interested Public.

Apply for paticulars— **K. R. GURU,** *Managing Director.*

ಮದ್ರಾಸ್ ಮಂತ್ರಿಮುಖಂಡರ ಸ್ವಾಮಿನಿಷ್ಠೆ ಪ್ರದರ್ಶನ!

ಪತ್ರಿಕಾಭಿಪ್ರಾಯಗಳು. ಮಾತೃಭೂಮಿಯ ಕರೆ.

ಮಧ್ಯಪ್ರಾಂತ್ಯದ ಮಂತ್ರಿಮಂಡಳದಲ್ಲಿ ಅವಿಶ್ವಾಸ.

ಸರ್ ಕೂರ್ಮರೆಡ್ಡಿಯವರ ಸಮಾಧಾನ ಗುಲಾಮಗಿರಿ ಪ್ರದರ್ಶನ ರಚನಾತ್ಮಕ ರಾಜನೀತಿಯ ವಿಚಿತ್ರ ಮಾದರಿ

"ಗವರ್ನರರು ಇಚ್ಛಿಸಿದಂತೆ ಮಂತ್ರಿಮಂಡಳವನ್ನು ರಚಿಸದಿರುವುದು ಅದು ನನ್ನ ಅಭಿಪ್ರಾಯದಲ್ಲಿ ತುಂಬಾ ಕೃತಘ್ನತೆಯಾಗುತ್ತದೆಂದು ನನಗೆ ತೋರಿಬಂತು." ಹೀಗೆಂದು ಸರ್ ಕೆ. ವಿ ರೆಡ್ಡಿಯವರು, ತಾವು ಮಂಡಳವನ್ನು ರಚಿಸಿದ್ದರ ಉದ್ದೇಶವನ್ನು ವಿವರಿಸುತ್ತಲಿರುವಾಗ ಹೇಳಿದರು ಟೀಕಿಸುತ್ತಾ ಅಮೃತ್ ಬಜಾರ್ ಪತ್ರಿಕೆಯು ಈ ಕೆಳಗಿನರ್ಥದಲ್ಲಿ ಸ್ಪಷ್ಟವಾಗಿ ಬರೆದಿರುತ್ತದೆ. 'ಜಸ್ಟಿಸ್ ಪಾರ್ಟಿಯ ದೊಡ್ಡ ಗುರಿಕಾರರಾದ ಇವರ ಸಾರ್ವಜನಿಕ ಜೀವನವನ್ನು ತಿಳಿದವರಿಗೆ ಯಾರಿಗೂ ಇವರ ' ಹೇಳಿಕೆಯಿಂದ ಆಶ್ಚರ್ಯವಾಗದು ಸರ್ ಕೆ ವಿ. ರೆಡ್ಡಿಯವರು ಯಾವಾಗಲೂ ದಬ್ಬಾಳಿಕೆಯ ಮುದ್ದು ಬಾಲಕನಂತಿರುವವರು, ಅಂದಮೇಲೆ ದೇಶಮಾತೆಯ ಮೊರೆಯನ್ನು ತಿರಸ್ಕರಿಸಿ, ಸರಕಾರದ ಮುಖಂಡರ (ಗವರ್ನರರ) ಕರೆಗೆ ಅವರು ಗೌರವವಿತ್ತುದು ತುಂಬಾ ಪ್ರಾಕೃತಿಕವಿದೆ ಆದರೆ ಸರ್ ಕೂರ್ಮರು ಬಹಿರಂಗವಾಗಿ ಈ ತರದ ಗುಲಾಮ ಮನೋವೃತ್ತಿಯನ್ನು ಪ್ರದರ್ಶಿಸಿದ್ದು ತನ್ನ ಆತ್ಮ ಗೌರವಕ್ಕೆ ಭೂಷಣಪ್ರಾಯವಾದುದೆಂದು ತಿಳಿಕೊಂಡಿದ್ದರಲ್ಲಿ ಕಿಂಚಿತ್ ಆಶ್ಚರಿತೋರಲಾರದೆ?'

ಅಸಮಾನರು

"ಅವರು ಹೇಳುವಂತೆ ಸರ್ ಕೆ ವಿ ರೆಡ್ಡಿಯವರು ಕೋಂಗ್ರೆಸ್ಸಿನ ಅರ್ಧಾಂಶದಷ್ಟಾದರೂ ರಚನಾತ್ಮಕ ರಾಜನೀತಿ ಬದ್ಧರಾಗಿರುವರೆ?' ಎಂದು ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯು ಕೇಳುತ್ತದೆ.

'ಬರೀ ಒಬ್ಬ ಸರಕಾರದ ಮುಖಂಡರು ಬಿಡ್ಡಾಸಿಸಿದ ಮಾತ್ರಕ್ಕೆ ಶಾಸನ ಸಭೆಯಲ್ಲಿ ಅರ್ಧ ಡಜನ್ ಪ್ರತಿನಿಧಿಗಳ ಬೆಂಬಲವಿಲ್ಲದವರು ಮಂತ್ರಿಮಂಡಳವನ್ನು ರಚಿಸಿ, ಶಾಸನ ಸಭೆಯನ್ನು ಕರೆಸದೆ ಆದಷ್ಟು ಕಾಲಹರಣ ಮಾಡಿ ಅಧಿಕಾರದಲ್ಲಿರಬಹುದಂತಾ ರಚನಾತ್ಮಕ ರಾಜನೀತಿಯುಳ್ಳ ಒಂದೇ ಒಂದು ದೇಶವಾದರೂ ಪ್ರಪಂಚದಲ್ಲಿದೆ ಎಂದು ಅವರು ತೋರಿಸಿ ಕೊಡಬಲ್ಲರೊ? ಇದಕ್ಕಿಂತಲೂ ರಾಜನೀತಿ ವಿರೋಧವಾದದ್ದು ಹೆಚ್ಚಿನ ಬೇರೇನಾದರೂ ಇದೆಯೋ?

ಪುನಃ ಚುನಾವಣೆಯಾಗಲಿ

ಅವರು ಹೇಳುವಂತೆ ಕೋಂಗ್ರೆಸ್ಸು ಇಂದು ಜನತೆಯ ಅಪನಂಬಿಕೆಗೆ ಪಾತ್ರವಾಗಿರದೆ, ಇದೇ ಮನುಷ್ಯರೇ ಇಂದು ಜನತಾ ಅಭಿಪ್ರಾಯವನ್ನು ಮನ್ನಿಸದಿರುವವರು. ಯಾರಿಗಾದರೂ—ಗವರ್ನರರಿಗಾಗಲೀ ಅಥವಾ ತಾತ್ಕಾಲಿಕ ಮಂತ್ರಿಗಳಿಗಾಗಲೀ ಕೊಂಚ ಸಂಶಯ ಬಂದಲ್ಲಿ ಕೂಡಲೇ ಅದನ್ನು ನಿವಾರಣೆಗೊಳಿಸುವದರಲ್ಲಿ ಹೆಚ್ಚು ತೊಂದರೆಗಳಿಲ್ಲ. ಮಾಡಬೇಕಾಗಿರುವ ಒಂದೇ ಕೆಲಸವೆಂದರೆ ಜನತೆಗೆ ವಿನಂತಿಸಿಕೊಳ್ಳುವುದು—ಪುನಃ ಚುನಾವಣೆ ಮಾಡಬೇಕೆಂದರ್ಥ. ಆದರೆ ಈ ಆರು ಕೋಂಗ್ರೆಸ್ ಪ್ರಾಂತ್ಯಗಳಲ್ಲಿ ಹೀಗೆ ಮಾಡಲು ಯಾರಿಗೆ ತಾನೆ ಧೈರ್ಯವಿದೆ?

ಕರ್ತವ್ಯ ಶಿಕ್ಷಣವಿಲ್ಲದ ದೇಶದಲ್ಲಿ, ದೇಶಹಿತಕ್ಕೆ ದ್ರೋಹವಾಗುವುದೆಂದೇ ಅರ್ಥ —ಸಿ ಇ. ಟೀಚರ್.

ಘಟನೆಯ ಪ್ರಾಮುಖ್ಯತೆ

"ಅಧಿಕಾರಯುಕ್ತವಾದ ಜವಾಬುದಾರಿಕೆಯನ್ನ ಹೊರಬೇಕೆಂಬುದೇ ಕೋಂಗ್ರೆಸಿನ ಪ್ರಾಮುಖ್ಯ ಧ್ಯೇಯವಲ್ಲದೆ ಅಧಿಕಾರವಿಲ್ಲದ ಜವಾಬುದಾರಿಕೆಯಲ್ಲ" ಎಂದು ಪಂ ಜ ನೆಹುರುಗಳು ಒಂದು ಬೇಟಿಯಲ್ಲಿ ತಿಳಿಸಿದರು. ಈಗಿನ ರಾಜಕೀಯ ಉತ್ಕಟಾವಸ್ಥೆಯನ್ನು ಕುರಿತು ನೆಹುರುಗಳು "ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಭಾರತೀಯ ರಾಷ್ಟ್ರೀಯತೆಯೊಳಗೂ, ಅದನ್ನು ಸರ್ವ ಪ್ರಯತ್ನಗಳಿಂದ ತಡೆಗಟ್ಟಬೇಕೆಂಬ ಬ್ರಿಟಿಷ್ ಬಾದಶಾಹಿತ್ವದೊಳಗೂ ಆಗುತ್ತಿರುವ ಘರ್ಷಣ ಘಟನೆಗಳ ಒಂದು ಅಂಶವು—ಇಂದು ಕಂಡು ಬರುತ್ತಿರುವ ರಾಜಕೀಯ ಉತ್ಕಟಾವಸ್ಥೆಯಾಗಿದೆ" ಅಂತ್ಯದಲ್ಲಿ ನೆಹುರುಗಳು ಹೀಗೆನ್ನುತ್ತಾರೆ "ಚುನಾಯಿತ ಶಾಸನ ಸಭಾ ಸದಸ್ಯರುಗಳಿಗೆ ಈ ನವ ರಾಜ ಶಾಸನವು ಅರ್ಪಿಸಿರುವ ಅಧಿಕಾರವು ಬಹಳೇ ಕಿಂಚಿತ್ ಆಗಿರುತ್ತದೆ ಅಷ್ಟಾದರೂ ಅಖಿಲಭಾರತ ಕೋಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ನಿರ್ಧರಿಸಿದಂತೆ ಗವರ್ನರರು ಭರವಸೆಗಳನ್ನು ಕೊಟ್ಟಲ್ಲಿ ಈಗಲೂ ೮ ಪ್ರಾಂತ್ಯಗಳಲ್ಲಿ ಕೋಂಗ್ರೆಸ್ಸು ಮಂತ್ರಿ ಪದವಿಗಳನ್ನು ಸ್ವೀಕರಿಸಲು ಸಿದ್ಧವಿದೆ"

ಮಧ್ಯಪ್ರಾಂತ್ಯದ ಮಂತ್ರಿಮಂಡಳದ ಮೇಲೆ ವಿಶ್ವಾಸವಿಲ್ಲ ಗವರ್ನರರಿಗೆ ಸೂಚನೆ

ಶಾಸನ ಸಭೆಯನ್ನು ಸೇರಿಸಲು ಕೇಳಿಕೆ

ಮಧ್ಯಪ್ರಾಂತ್ಯದ ಶಾಸನಸಭೆಗಳ ೧೧೨ ಸದಸ್ಯರಲ್ಲಿ ೭೦ ಮಂದಿಗಳು ಕೋಂಗ್ರೆಸ್ ಪ್ರತಿನಿಧಿಗಳಿದ್ದಾರೆ ಅಲ್ಲಿಯ ಕೋಂಗ್ರೆಸ್ ಮುಖಂಡರಾದ ಡಾ। ಖಾರೆಯವರು ಅಲ್ಲಿಯ ಗವರ್ನರರಿಗೆ ಒಂದು ಪತ್ರವನ್ನು ಕಳುಹಿಸುತ್ತಾ, ಅವರಿಂದ ಸ್ಥಾಪಿತವಾದ ತಾತ್ಕಾಲಿಕ ಮಂತ್ರಿಮಂಡಳದಲ್ಲಿ ಶಾಸನಸಭೆಯು ಬಹುಸಂಖ್ಯಾಕರಿಗೆ ವಿಶ್ವಾಸವಿಲ್ಲವೆಂದೂ ಗವರ್ನರರು ಅದನ್ನು ರದ್ದುಮಾಡಿ ಶಾಸನಸಭೆಯನ್ನು ಕೂಡಲೇ ಕರೆಯಬೇಕೆಂದೂ ಕೇಳಿಕೊಂಡಿರುವರು. ಗವರ್ನರರಿಗೆ ಅರ್ಪಿಸಿದ ಅವಿಶ್ವಾಸದ ಪತ್ರದಲ್ಲಿ ೪ ಮಂದಿ ಕಾಂಗ್ರೆಸ್ಸೇತರ ಪ್ರತಿನಿಧಿಗಳಿರುವರು. ಅವರಲ್ಲಿಯೂ ಮೂರು ಮಂದಿಗಳು ಮುಸ್ಲಿಮರೂ, ಒಬ್ಬರು ಸ್ವತಂತ್ರ ಪಕ್ಷದವರೂ ಆಗಿರುತ್ತಾರೆ

ಡಾ। ಖಾರೆಯವರು ತಮ್ಮ ಪತ್ರದಲ್ಲಿ ಹೀಗೆ ತಿಳಿಸಿರುವರು. "ರಚನಾತ್ಮಕ ರಾಜನೀತಿಗೆ ವಿರೋಧವಾಗಿಯೂ, ಪಾರ್ಲಿಮೆಂಟಿನ ಅಧಿಕಾರಯುಕ್ತ ಶಾಸನದ ವಿರೋಧವಾಗಿಯೂ ತಾವು ಗವರ್ನರರು ತಾತ್ಕಾಲಿಕ ಮಂತ್ರಿಮಂಡಳವನ್ನು ರಚಿಸಿದ್ದುದನ್ನು ಶಾಸನ ಸಭೆಯ ಬಹುಸಂಖ್ಯಾಕ ಸದಸ್ಯರು ಖಂಡಿಸುತ್ತಾರೆ. ಈಗಿನ ಮಂತ್ರಿಮಂಡಳದಲ್ಲಿರುವ ರಾಘವೇಂದ್ರ ರಾಯರೇ ಮೊದಲಾದ ಮಂತ್ರಿಗಳಿಗೆ ಶಾಸನ ಸಭೆಯ ಬಹುಸಂಖ್ಯಾಕರ ವಿಶ್ವಾಸವಿರುವುದೆಂದು ಹೇಳಲು ಯಾವ ಅಧಿಕಾರವೂ ಇಲ್ಲ. ಆದಪ್ರಯುಕ್ತ ಅವರುಗಳು ಮಧ್ಯಪ್ರಾಂತ್ಯ ಮತ್ತು ಬಿರಾರಿನ ಪರವಾಗಿ ಯಾವ ತರದ ಹೇಳಿಕೆಗಳನ್ನೂ, ಶಾಸನಗಳನ್ನೂ ಆಜ್ಞೆಗಳನ್ನೂ ಹೊರಡಿಸಲು ಯೋಗ್ಯರಲ್ಲವೆಂದು ಈ ಮೂಲಕ ತಿಳಿಸಲಾಗಿದೆ"

ಕೋಂಗ್ರೆಸಿನಲ್ಲಿ ಉಪಪಂಗಡವೆ?

ದೇಶೀಯ ಸಂಸ್ಥಾನಗಳ ಕರ್ತವ್ಯ.

ಕೋಂಗ್ರೆಸಿನೊಳಗೆ ಮತ್ತೊಂದು ಪಂಗಡವೆ?

ಕೋಂಗ್ರೆಸ್ ಮುಖಂಡರೊಳಗೂ ಸರಕಾರದ ಮುಖಂಡರೊಳಗೂ ಬಹುಕಾಲದಿಂದ ನಡೆಯುತ್ತಿರುವ ಹೇಳಿಕೆ ಪ್ರತಿ ಹೇಳಿಕೆಗಳ ಸಮರವೂ, ಮಹಾತ್ಮರ ಈಚೆಗಿನ ಹೇಳಿಕೆಯೂ, ಸರಕಾರದೊಡನೆ ರಾಜಿಮಾಡುವ ಉದ್ದೇಶದ್ದಿರುತ್ತದೆಂದೂ ಇದಕ್ಕೆ ವಿರೋಧವಾಗಿ ಕೋಂಗ್ರೆಸಿನೊಳಗೇನೇ ಮತ್ತೊಂದು ಪಂಗಡವನ್ನು ಸ್ಥಾಪಿಸಬೇಕೆಂದೂ ಕರಾಚಿಯ ಕೆಲವು ಕೋಂಗ್ರೆಸ್‌ವಾಲರು ಪ್ರಯತ್ನಪಡುತ್ತಿರುವುದು ತಿಳಿದುಬರುತ್ತದೆ ಈ ಸಂದರ್ಭದಲ್ಲಿ ಕರಾಚಿಯ ಸ್ವಾಮಿ ಗೋವಿಂದಾನಂದ್ ರವರು 'ನನಗೂ ನನ್ನದೇ ತರದ ಅಭಿಪ್ರಾಯವಿದ್ದವರಿಗೂ ಕೋಂಗ್ರೆಸಿನ ಈ ರಾಜಿ ಪಂಚಾಯಿತಿಗಳ ಮಾತುಕತೆಗಳಿಂದ ಸಾಕಾಗಿ ಹೋಗಿದೆ' ಎಂದಿರುವರಂತೆ ಇವರದು ಉಗ್ರಗಾಮಿಗಳ ಪಂಗಡ—ಹೆಚ್ಚು ಕಮ್ಮಿ ಸೋಶಲಿಸ್ಟ ಪಂಗಡ ತರಹ 'ಸರಕಾರದೊಂದಿಗೆ ರಾಜಿ ಮಾಡಿಕೊಳ್ಳುವ ಅವಶ್ಯಕತೆಯೇ ನನಗೆ ತೋರಿ ಬರುವುದಿಲ್ಲ'ವೆಂದವರು ಇನ್ನೊಂದೆಡೆ ಹೇಳುತ್ತಾರೆ ಎಂ. ಎಸ್ ರಾಯ್‌ರ ಇಂಡಿಪೆಂಡೆಂಟ್ ಇಂಡಿಯಾವು "ಈ ಪಂಗಡ ಸ್ಥಾಪಕನನ್ನುದ್ದೇಶಿಸಿ ಕೋಂಗ್ರೆಸಿನ ಬಲಗೈ ಬಾಗದವರ ಅಂದರೆ ಅಧಿಕಾರ ಸ್ವೀಕರಿಸಬೇಕೆನ್ನುವವರು ಸರಕಾರದೊಡನೆ ರಾಜಿಮಾಡಿಕೊಳ್ಳುವ ತಮ್ಮ ಆಸರದಲ್ಲಿ ಆದ್ಯ ಕರ್ತವ್ಯವನ್ನು ಮರೆತುಬಿಟ್ಟಿರುವರೆಂದು ಗೋವಿಂದಾನಂದಜಿಯವರು ಹೇಳುತ್ತಿರುವ ವಿಷಯವು ನಿಜವಿರಬಹುದು ಆದರೆ ಕೋಂಗ್ರೆಸ್ಸಿನೊಳಗೆ ಇನ್ನೊಂದು ಪಂಗಡವನ್ನೇ ಪರ್ಮಿಸಿ ಮಾಡಿ ನೋಡುವ ಪ್ರಯತ್ನವೇಕೆ? ಮುಂದೆ ಅನುಭವವೇ ಸರಿಯಾದ ಪಾಠವನ್ನು ಕಲಿಸಲಾರದೆ?" ಎಂದು ಪ್ರಶ್ನಿಸುತ್ತದೆ

ಕೋಂಗ್ರೆಸ್ಸಿನೊಳಗೆ ಏರ್ಪಡಿಸಲಿರುವ ಈ ಪಂಗಡದಲ್ಲಿ ಬಾಬು ಸುಭಾಷ್ಚಂದ್ರ ಬೋಸರೂ ಸೇರಿರುವರೆಂದೂ, ಆಗಲೇ ಅವರೊಳಗೂ, ಈ ಪಂಗಡವನ್ನೇರ್ಪಡಿಸುವವರೊಳಗೂ ಪತ್ರವ್ಯವಹಾರ ಕೂಡಾ ನಡೆದಿರುತ್ತದೆಂದೂ ಇನ್ನೊಂದು ಗಾಳಿ ವರ್ತಮಾನವು ಹರಡಿತ್ತು ಡಾಲ್‌ಹೌಸಿಯಲ್ಲಿ ಆರೋಗ್ಯಲಾಭವನ್ನು ಹೊಂದುತ್ತಿದ್ದ ಬೋಸರು ಈ ವರ್ತಮಾನವನ್ನು ಅಲ್ಲಗಳೆದು ತಾನು ಅಂತಹ ಯಾವುದೇ ತರದ ವ್ಯವಹಾರದಲ್ಲಿ ಕೈಹಾಕಲಿಲ್ಲವೆಂತಲೂ, ಆ ಉದ್ದೇಶವೂ ಕೂಡಾ ತನಗಿಲ್ಲವೆಂತಲೂ ಒಬ್ಬ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುವರು.

ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳು

ಉಡುಪಿಯಲ್ಲಿ ನೆರೆದ ದಕ್ಷಿಣ ದೇಶೀಯ ಸಂಸ್ಥಾನಗಳ ಪ್ರಜಾ ಸಮ್ಮೇಳನದಲ್ಲಿ ಶ್ರೀ ಕೆ ಎಸ್ ನಂಬೀಶನರು ಅಧ್ಯಕ್ಷತೆಯನ್ನು ವಹಿಸಿದ್ದರು ಈ ಸಮ್ಮೇಳನದ ಕುರಿತು ಒಂದು ಹೇಳಿಕೆಯನ್ನು ಕೊಡುತ್ತಾ ಶ್ರೀ ನಂಬೀಶನರು ಹಿಂದೂಸ್ಥಾನದ ಜನರ ಸಮಸ್ಯೆಯು ಇಂದು ವಿಕಸನಾವಸ್ಥೆಯಾಗಿದೆ ಎಂದೂ, ಬ್ರಿಟಿಷ್ ಇಂಡಿಯದ ಪ್ರಜೆಗಳಾಗಲಿ ಅಥವಾ ದೇಶೀಯ ಸಂಸ್ಥಾನಗಳ ಪ್ರಜೆಗಳಾಗಲೀ ಅವರಿಂದು ಒಂದೇ ರಣರಂಗದ ಎರಡು ಕೊನೆಗಳಲ್ಲಿದ್ದ ಹಾಗೆ ಇರುವರೆಂದೂ ಸೋಲುಗೆಲುವುಗಳು ಇವರಿಗೂ ಒಂದೇ ಎಂದೂ ತಿಳಿಸಿದರು ಅದೇ ಸಮ್ಮೇಳನದ ಅಧ್ಯಕ್ಷ ಭಾಷಣವನ್ನು ಕೊಡುತ್ತಾ ಶ್ರೀ ನಂಬೀಶನರ ದೇಶೀಯ ಸಂಸ್ಥಾನಗಳ ಪ್ರಜೆಗಳ ಭವಿಷ್ಯತ್ತು, ಒದಗಲಿರುವ ಫೆಡರೇಶನನ್ನು ಮುರಿಯಲಿಕ್ಕೆ ಅವರು ಮಾಡಬೇಕಾದ ತ್ಯಾಗ ಬಲಿದಾನಗಳಲ್ಲಿ ಅಡಗಿದೆ ಬ್ರಿಟಿಷ್ ಇಂಡಿಯಾದ ಜನರಿಗೆ ಇಂಡಿಯಾ ಆಕ್ಟನ್ನು ಮುರಿಯಲು ಎಷ್ಟು ಶಕ್ತಿಯು ಬೇಕಾಗಿದೆಯೋ ಅದರಲ್ಲಿ ಹೆಚ್ಚಿನ ಪಾಲು ದೇಶಿ ಸಂಸ್ಥಾನಿಕರು ತಮ್ಮ ಫೆಡರೇಶನನ್ನು ಮುರಿಯುವುದರಲ್ಲಿರಬೇಕು" ಎಂದು ಸೂಚಿಸಿದರು

The Coronation of their Majesties is now over
But Remember
Comfortable Ideal Central
The Coronation Darbar Restuarant
Boarding & Lodging
Opposite Govt. College, Hampankatta, Mangalore
A Home in the Motherland
Cleanliness and comfort at moderate cost
A delightful hotel in the centre of the town and nearest to the
Rly Station & Bus Station
Gives best Refreshment & dinner service and modern preparations
such as Biryani, Fowl Biryani Pulav Khusi ka Chops Cutlets,
Roast, Bheja, Khima, Tomato mutton Roasted Fowl, Omlet
Sumbusa, etc, a speciality
Special lodging arrangements for travellers Students will find all their food requirements
Please Step in Once and Convince Yourself
S B. Mohidin, S. M. Sayed Ali Saheb (Bhatkal) Proprietors
ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ
ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್
ಬೋರ್ಡಿಂಗ್ ಮತ್ತು ಲೋಜಿಂಗ್
ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟೆ, ಮಂಗಳೂರು.
ಸೌಲಭ್ಯ ಸೌಕರ್ಯ ಸುಖದಾಯಕ
ಶುಚೀಕರವಾದ ಮತ್ತು ರುಚಿಯಾದ ತಿಂಡೀ ಪದಾರ್ಥಗಳು ಸುಲಭ ದರದಲ್ಲಿ, ಇನ್ನೆಲ್ಲಿಯೂ ದೊರಕಲಾರದು.
ಪಟ್ಟಣದ ಮಧ್ಯದಲ್ಲಿದ್ದು ರೈಲ್ವೇ ಸ್ಟೇಶನ್, ಬಸ್ ಆಫೀಸುಗಳಿಗೆ ತೀರಾ ಸಮೀಪವು
ಮನೋಲ್ಲಾಸಕರ ಕಾಫಿ, ತಿಂಡಿ, ಊಟ ಉಪಚಾರಗಳು
ಮುರ್ಗಿ ಬಿರಿಯಾನಿ, ಬಿರಿಯಾನಿ, ಮುರ್ಗಿ ರೋಸ್ಟ್, ಪುಲಾವ್, ಖುಸ್ಕಾ ಚಾಪ್ ಕಟ್ಲೆಟ್ಸ್, ರೋಸ್ಟ್, ಬೇಜ, ಖೀಮ, ಟೊಮಟೊಮಟನ್, ಆಮ್ಲೆಟ್, ಸಂಬೂಸ ಮೊದಲಾದ ಆಹ್ಲಾದಮಯ ಆಧುನಿಕ ತಯಾರಿಯು ನಿಮ್ಮ ಸ್ಮೃತಿಪಟದಲ್ಲಿ ಚಿರಸ್ಮರಣೀಯವಾಗಿ ಉಳಿಯುವುವು.
ವಿದ್ಯಾರ್ಥಿಗಳಿಗಾಗಿ ಉತ್ತಮೋತ್ತಮವಾದ ನವೀನ ಸಿದ್ಧತೆಗಳು, ಪ್ರಯಾಣಿಕರಿಗೆ ಇರಲಿಕ್ಕೆ ತೃಪ್ತಿಕರವಾದ ಏರ್ಪಾಡು ಭಟ್ಕಳಿಯವರ ಭೋಜನಶಾಲೆಯ ಪ್ರಖ್ಯಾತಿಯನ್ನು ಕೇಳಿರುವುದಾದರೆ ಒಂದೊಮ್ಮೆ ಸಂದರ್ಶಿಸಿ ಪರೀಕ್ಷಿಸಿ ಸಂತುಷ್ಟರಾಗಿರಿ
ಯಸ್. ಬಿ. ಮೊಹಿದಿನ್,
ಯಸ್. ಎಮ್. ಸಯ್ಯದ್ ಅಲಿ ಸಾಹೇಬ್, (ಭಟ್ಕಳ) } ವ್ಯವಸ್ಥಾಪಕರು



Distributors for South Kanara —

Raghavendra Ranga Pai, Car Street Mangalore

ಕುಂದಾಪುರ ಪ್ರದರ್ಶಕರು—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.

ಆಟೋಮೆಟಿಕ್ ಆಲಾರಂ ಪಿಸ್ತೋ

(ಬಂದೂಕು)

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕುಂದಗಳಲ್ಲಿ ೧೦ ಗುಂಡುಗಳು ಹಾರಿಸಬಹುದು ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು ಇದು ಒಂದು ನಮ್ಮಲ್ಲಿ ಇಪ್ಪರಿ ನಮ್ಮ ಸಹಾಯಕನಾಗಿರುವುದು ಸಿನಿಮಾದದರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತೂಲ್ ಕೂಡೆ ಕಳುಹಿಸುವೆವು. ಪಿಸ್ತೂಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲೆ ಹಾಕಿದ ಸ್ಟಾರ್ಟ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತೂಲು ೧೨ ತೋಟೆಗಳ ಸಹಿತ ೭–೮–೦ ಟಪ್ಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,

ನಂ ೩ ಇರುಳಪ್ಪನ ಬೀದಿ, ಮದ್ರಾಸು

WHENEVER YOU THINK

of saving and safeguarding money
of borrowing or transmitting money
of any other financial requirement,

THINK OF YOUR BANK

a good place to keep your
account and establish your credit
where your patronage and
deposits are always appreciated
where you are always sure
of a friendly welcome

RESOURCES OF A CRORE

ESTD. 1906

CANARA BANK, LIMITED.

ಕೊಚ್ಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು ತಿಂಡಿ ವಗೈರೆ ಹಾಳಾಗದಂತೆಯೂ ವಿಷಕ್ರಿಮಿಗಳು ಸೇರದಂತೆಯೂ ನಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳು ಸಿಗಲಾರವು.

ಲೋಹ ವಿಷದಿಂದ
(Metal poisoning)
ಉಂಟಾಗುವ ಬಾಧೆಯು ಇಲ್ಲ

ಅನೇಕ ತರಹ ಮತ್ತು
ಪ್ರಮಾಣಗಳಿವೆ

ಮುಖ್ಯ ಏಜಂಟರು

ಕೆ ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟ್ಯತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು

ಗುಡಪಿಪ್ಪಲಿ – ಮಕ್ಕಳ ಲಿವರ್ ರೋಗಕ್ಕೆ
ಗರ್ಭಪಾಲ – ಗರ್ಭಶೂಲೆ, ಗರ್ಭಸ್ರಾವಕ್ಕೆ
ಚಂದ್ರಮಸ್ – ವಾಂತಿಭೇದಿ, ಅತಿಸಾರಕ್ಕೆ
ಕೃಷ್ಣಾರಕ್ – ಶ್ವಾಸಕಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.
ವೃದ್ಧಿಕಾಸವ – ನಿಶ್ತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ – ನಪುಂಸಕತ್ವ, ಧಾತುಕ್ಷೀಣತೆಗೆ
ಭುವನಾಂಜನ ಪೈನ್‌ಬಾಮ್ – ಶಾರೀರಕ ನೋವುಗಳಿಗೆ
ರಸಬಿಂದು – ಸ್ತ್ರೀ ಸಂಬಂಧ ವ್ಯಾಧಿಗಳಿಗೆ

ಹಿಮಸಾಗರ ತೈಲ – ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಈ ವಾರದ ಸಣ್ಣ ಕಥೆ — ವನಿತೆಯ ಶಾಪ!

'ತಿರುವಳ್ಳೂರಿನ ರಥಗಳ ಚಂದ, ತಿರುಪದಮರುದೂರಿನ ರಸ್ತೆಗಳ ಅಂದ' ತಮಿಳಿನಲ್ಲಿ ಈಗಲೂ ಇದು ಮನೆಮಾತಾಗಿದೆ. ತಿರುಪದಮರುದೂರು ಇಂದು ತಂಜಾವೂರ ಜಿಲ್ಲೆಯೊಳಗಿನ ಒಂದು ಹಾಳುಬಿದ್ದ ಚಿಕ್ಕ ಪಟ್ಟಣವಾಗಿದ್ದರೂ, ಪ್ರಭವಶಾಲಿ ಮರಾಠರ ಆಳ್ವಿಕೆಯ ಕಾಲದಲ್ಲಿ ಇದೊಂದು ಸಂಪದ್ ಸಮೃದ್ಧಿಯಿಂದೊಡಗೂಡಿದ್ದು ಶಿಲ್ಪಕಲಾಚಾತುರ್ಯದಿಂದೊಡಗೂಡಿದ ರಮಣೀಯ ದೇವಾಲಯಗಳನ್ನೊಳಗೊಂಡ ಹಿಂದೂಗಳ ಒಂದು ನಗರವಾಗಿ ರಂಜಿಸುತ್ತಿತ್ತು. ತಂಜಾವೂರಿನ ಅರಸರ ವೈಭವ ಕಾಲದಲ್ಲಿ ಅವರ ಕೆಳಗೆ ಸಾಮಂತ ರಾಜನಾಗಿ ತಿರುವಿಡುಮರುದೂರಿನಲ್ಲಿ ಮೇಲ್ವಾಳಿಕೆಯನ್ನು ನೋಡಿಕೊಂಡಿದ್ದ ಒಬ್ಬ ಮರಾಠ ಪಾಳಯಗಾರನ ಕಾಲದಲ್ಲಿ ನಮ್ಮ ಪುಟ್ಟ ಕತೆಯು ಪ್ರಾರಂಭವಾಗುತ್ತದೆ. ಹೆಸರಿನ ಮಾತ್ರಕ್ಕೆ ತಂಜಾವೂರ ಅರಸರ ಕೈಕೆಳಗಿನವನಂತಿದ್ದರೂ ಪ್ರತಿಭಾಶಾಲಿಯಾದ ಆ ಮರಾಠ ಪಾಳೆಯಗಾರನು ಸ್ವತಂತ್ರವಾಗಿಯೇ ಆಳುತ್ತಿದ್ದನು.

ಚರಿತ್ರೆಗಾರರು ವರ್ಣಿಸುವಂತೆ ಆ ಕಾಲವು ಕ್ರೂರ ಶಿಕ್ಷೆಗಳ ಕಾಲವಾಗಿದ್ದು, 'ಕೋಪೋದ್ರಿಕ್ತನಾದ ಅರಸನೊಬ್ಬನ ಎದುರಿನಲ್ಲಿ ಮಾನವ ಶಿರಗಳು ತೆಂಗಿನ ಬುರುಡೆಗಳಂತೆ ಉರುಳುತ್ತಿದ್ದುವು.' ನಮ್ಮ ಕಥೆಯಲ್ಲಿನ ಮರಾಠ ರಾಜನು ನಡು ತಾರುಣ್ಯದ ಸುಂದರ ಯುವಕನಾಗಿದ್ದನು. ಮಹಾಶಕ್ತಿವಂತನಾದ ಅವನು ಅನೇಕ ಸಮರಗಳ ವಿಜಯ ದೊರೆಯಾಗಿದ್ದನು. ಆದರೆ ಸುಂದರನೂ ಶಕ್ತಿವಂತನೂ ಧೈರ್ಯಶಾಲಿಯೂ ಆಗಿದ್ದಂತೆ ಅವನು ಮಹಾ ಕ್ರೂರಿಯೂ ಆಗಿದ್ದನೆಂದು ಚರಿತ್ರೆಯಲ್ಲಿ ಹೇಳಿದೆ. ತಾನು ಉದ್ದೇಶಪಟ್ಟ ಕಾರ್ಯಗಳಲ್ಲಿ ಯಶಸ್ಸು ಕಾಣದಿದ್ದರಂತೂ ಅವನ ಕ್ರೂರತನವು ಮೇರೆ ಮೀರುತ್ತಿತ್ತು. ಆದರೆ ಇತರ ಸಮಯಗಳಲ್ಲಿ ಅವನು ಮಹಾ ಬುದ್ಧಿ ಕುಶಲತೆಯಿಂದ ಆಡಳಿತೆಯನ್ನು ನಿರ್ವಹಿಸಿಕೊಂಡು ಇರುತ್ತಿದ್ದನು. ಕಾದೆಯ ಪದ್ಧತಿಯಂತೆ ಅವನು ಪ್ರಜಾಪ್ರತಿನಿಧಿಗಳ ಸಭೆಯೊಂದನ್ನಿಟ್ಟುಕೊಂಡಿದ್ದನು. ಇವನ ಮಂತ್ರಿಮಂಡಳದಲ್ಲಿ ಬಹು ಮೇಧಾವಿಯಾದ ಕಾಂಚಿ ಪಾಂಡ್ಯನ್ ಒಂಬೊಬ್ಬ ವಿದ್ವಾಂಸನಿದ್ದನು.

ಒಂದು ದಿನ ಪ್ರಾತಃಕಾಲ ರಾಜನ ಸವಾರಿಗೆ ಹೋದವನು ಅರಮನೆಯ ಕಡೆಗೆ ಬರುತ್ತಿದ್ದನು. ಇನ್ನು ಒಂದು ಮೈಲಿನ ಅಂತರವಿದ್ದಿತು. ಬಹಳ ಸುತ್ತಾಡಿದ ತನ್ನ ಕುದುರೆಗಳು ದಣಿದಿದ್ದುದನ್ನು ನೋಡಿ ರಾಜನು ಸಮೀಪದಲ್ಲಿ ರಂಜಿಸುತ್ತಿರುವ ಸರೋವರದ ಕಡೆಗೆ ಬಂದನು. ಪ್ರಾತಃಕಾಲದ ಆ ರಮಣೀಯವಾದ ದೃಶ್ಯವು ರಾಜನಲ್ಲಿ ತುಂಬಾ ಹರುಷವನ್ನುಂಟುಮಾಡಿತು. ಅರಳಿದ ಹೂವುಗಳಿಂದ ಬೀಸುತ್ತಿದ್ದ ಮಂದಮಾರುತವು ಸುವಾಸನೆಯಿಂದ ಕೂಡಿತ್ತು. ಸರೋವರದ ಮಧ್ಯದಲ್ಲಿದ್ದ ಸಣ್ಣ ದೇವ ಮಂದಿರವೊಂದು ಸ್ಫೂರ್ತಿದಾಯಕ ಆಧ್ಯಾತ್ಮಿಕ ನವಚೇತನವನ್ನುಂಟುಮಾಡುತ್ತಿತ್ತು. ಪ್ರಾತಃಕಾಲದ ಸೂರ್ಯನ ಕಿರಣಗಳು ನೀರಿನಲ್ಲಿ ಸ್ಫಟಿಕದಂತೆ ಪ್ರಕಾಶಿಸುತ್ತಿತ್ತು.

ಒಂದೇ ಸವನೆ ಅರಸನ ಭಾವವು ಬದಲಾವಣೆಯಾಯಿತು. ಅವನ ಕಣ್ಣುಗಳು ಸರೋವರದ ಮತ್ತೊಂದು ದಂಡೆಯ ಮೆಟ್ಟಿಲುಗಳನ್ನು ಹತ್ತಿ ನೀರನ್ನು ಕೊಂಡೊಯ್ಯುತ್ತಿದ್ದ ನಾರೀಕೂಟದ ಮೇಲೆ ದೃಷ್ಟಿ ನೆಟ್ಟಿದ್ದುವು. ರಂಗುರಂಗಿನ ಸೀರೆಗಳನ್ನುಟ್ಟ ಆ ತರುಣಿ ಮಂಡಳವು ಯಾರ ಗಮನವನ್ನು ತಪ್ಪುದಂತಹದಲ್ಲ. ಅವರು ದಂಡೆಯನ್ನಿಳಿದು, ತಮ್ಮ ಕೊಡಗಳನ್ನು ತೊಳೆದು ನೀರು ತುಂಬಿಸಿದರು. ಅವರಹಾವಭಾವಗಳು, ಮೇಲಿಂದ ಮೇಲೆ ಕೇಳಿಬರುತ್ತಿರುವ ನಗುವಿನ ನಾದಗಳು ರಾಜನ ಗಮನವನ್ನು ಇನ್ನೂ ಸೆಳೆದುವು. ದೊರೆಯ ವರ್ತನವು ಅವನ ಸೇವಕರನ್ನು ಅಚ್ಚರಿಗೊಳಪಡಿಸಿತು. ರಾಜನು ತನ್ನ ದೃಷ್ಟಿಯನ್ನು ನೆಟ್ಟಿರುವುದು ಚಿನ್ನದ ಪಾತ್ರೆಗಳನ್ನು ತೊಳೆಯುವನಾರಿಗಳ ಮೇಲಲ್ಲ. ರಾಜದೃಷ್ಟಿಯು ಗಂಧರ್ವಸ್ತ್ರೀಯಂತಿರುವ ಓರ್ವ ಪ್ರತ್ಯೇಕ ತರುಣಿಯ ಮೇಲೆ ಬಿದ್ದಿತು. ಅವನು ಆ ಸುಶೋಭಿತೆಯಾದ ನವಯೌವನಭರಿತ ತರುಣಿಯ ಸೌಂದರ್ಯ ಮಧುವನ್ನು ಹೀರುತ್ತಿದ್ದನು. ಅವನ ಹೃದಯವು ಬಲವಾಗಿ ಹೊಡೆಯ ತೊಡಗಿತು. ಅರಮನೆಗೆ ಬಂದ ಅರಸನು ತನ್ನ ಅನುಯಾಯಿಗಳ ಮುಖಂಡನನ್ನು ಕರೆದು 'ನಾವಿಂದು ಸರೋವರದ ಬಳಿ ಇದ್ದಾಗ, ಹಂಸಪಾದೆಯಾದ ನೀಲವರ್ಣದ ಆವರಣವನ್ನುಟ್ಟ ಮೋಹನಾಂಗಿಯೋರ್ವಳನ್ನು ಗಮನಿಸಿರುವೆಯಾ?' ಎಂದು ಕೇಳಿದನು.

'ಹೌದು ಮಹಾ ಪ್ರಭು, ಕಂಡಿರುವೆನು' ಎಂದು ಮನುಷ್ಯನು ಉತ್ತರವಿತ್ತನು.

'ಇದೊ, ರಾಜಧಾನಿಗೆ ಹೋಗಿ ೮ ಗಂಟೆಯ ಕಾಲದೊಳಗೆ ಆ ನವ ಮೋಹನಾಂಗಿಯ ವಿಚಾರವಾದ ಸಕಲ ವೃತ್ತಾಂತವನ್ನು ತಿಳಿದು ನನಗರುಹಬೇಕು' ಎಂದು ರಾಜಾಜ್ಞೆ ಹೊರಟಿತು. ರಾಜನ ಮುಖವು ಗಂಭೀರವಾದ ನಿರ್ಧಾರವನ್ನು ಸೂಚಿಸುತ್ತಿತ್ತು. ರಾಜನ ಆಜ್ಞೆಯ ಮಾತುಗಳು ಸೇವಕರಿಗೆ ಗುಡುಗಿನಂತೆ ಕೇಳಿಸಿದುವು.

ಅಂದಿನ ದರ್ಬಾರಕ್ಕೆ ಅರಸನು ಹಾಜರಿರಲಿಲ್ಲ. ರಾಜಭವನದ ಒಂದು ಭವ್ಯ ಕೊಠಡಿಯಲ್ಲಿ ಅವನು, ನೀಲವರ್ಣದ ನಾರಿಯನ್ನೂ ತನ್ನ ರಮಣಿಯ ವ್ಯಕ್ತಿತ್ವದಿಂದ ಸರೋವರವನ್ನು, ಅವರ ಒಡೆಯನಾದ ರಾಜನನ್ನು ಮುಗ್ಧಗೊಳಿಸಿದ ಆ ತರುಣಿ ಅವಳು ಧರಿಸಿದ ಕೈತುಂಬ ಬಳೆಗಳು ಅವಳ ಕಂಠಹಾರಗಳು ಎಳೆಗಿಡವೊಂದು ಧರಿಸಿರುವ ಹೂವಿನಂತೆ ಅವಳು ತನ್ನ ಸೊಂಟದ ಮೇಲೆ ತಂಗಿಸಿರುವ ಕೊಡ ಇವೆಲ್ಲವುಗಳೂ ರಾಜನ ಮನೋಚಿತ್ರದಲ್ಲಿ ಒಂದು ನಲಿದಾಡ ತೊಡಗಿದುವು.

ರಾಜನ ಯೋಚನೆಯು ತಕ್ಷಣ ಅರಮನೆಯ ದ್ವಾರದಲ್ಲಾದ ಘಂಟಾ ಗಾನದಿಂದ ಅರ್ಧದಲ್ಲಿಯೇ ತಡಿದಂತಾಯಿತು. ದಾಸಿಯೊಬ್ಬಳು ಪ್ರಾಪಿಸಿ ಆ ಪ ... ದರ್ಶನವನ್ನು ತರಹೋದ ದೂತನ ಆಗಮನವನ್ನು ತಿಳಿಸಿದಳು. ಅರಸನ ಅತುರವು ತೀಕ್ಷ್ಣವಾಗಿ ಅವನ ಮುಖಭಾವದಲ್ಲಿ ವಿಚಿತ್ರ ಕಾಂಕ್ಷೆಯು ತರುಹು ಕಾಣಬರುತ್ತಿತ್ತು. ಅವನ ಕಣ್ಣುಗಳಲ್ಲಿ ಎಂದೂ ಕಾಣದ ಹೊಳಪೊಂದು ಪ್ರಕಾಶಿಸ ತೊಡಗಿತು. ದೂತನು ಬಂದು ನಮಸ್ಕರಿಸಿ ಮಹಾ ಪ್ರಭೂ ತಮ್ಮ ಹೃದಯವನ್ನು ಸೂರೆಗೈದ ಆ ನಾರೀರತ್ನವು ಇನ್ನಾರಾಗಿರದೇ ಮಂತ್ರಿಮಂಡಳದ ಸದಸ್ಯನಾದ ಕಾಂಚಿಪಾಂಡ್ಯನ ಮಗಳಿರುವಳು. ಪಾಂಚಾಲಿ ಎಂದು ಅವಳ ಹೆಸರಿರುವುದು. ಮಗುವಿದ್ದಾಗ ಮಾತೆಯು ಮೃತಳಾಗಿದ್ದಳಿಂದ ಕಾಂಚಿ ಪಾಂಡ್ಯನು ಅವಳನ್ನು ತಾಯಿಗಿಂತಲೂ ಹೆಚ್ಚಿನ ಅಕ್ಕರೆಯಿಂದ ಸಾಕಿರುವನು. ಪಾಂಚಾಲಿಯು ಪಾಂಡ್ಯನನ ಜೀವವೇ ಆಗಿರುತ್ತಾಳೆ. ಅವನಿಗೆ ತನ್ನ ಮಗಳು ಕಣ್ಣುಗಳಂತಿದ್ದಾಳೆ' ಎಂದರುಹಿದನು.

ಅರಸನು ಅವಕ್ಕಾದನು. ಅವನ ದೇಹವು ಹಾವಿನ ಕಡಿತದಿಂದ ಮುದುಡಿಕೊಳ್ಳುವಂತೆ ಮುಗ್ಗರಿಸಿತು. ಪಾಂಚಾಲಿಯು ಕಾಂಚಿ ಪಾಂಡ್ಯನ ಮಗಳು!! ಕಾಂಚಿಪಾಂಡ್ಯನು ಹೀನ ಕೃತ್ಯಕ್ಕೆ ಬಗ್ಗದ ಘನಸ್ತಿಕೆಯ ಮನುಷ್ಯ!! ಅರಸನ ಆತ್ಮವು ಅಘೋರ ದುಃಖಕ್ಕೀಡಾಯಿತು. ದುಃಖದಿಂದ ಭಾರವಾದ ಹೃದಯವನ್ನು ಹೊತ್ತುಕೊಂಡು ಅವನು ಅರಮನೆಯ ಗುಪ್ತ ಮಂದಿರವೊಂದನ್ನು ಸೇರಿದನು. ಅಲ್ಲಿ ಕಾವಲಿರಿಸಿದ್ದ ಭೀಕರ ಸ್ವರೂಪದ ಬೇಟೆನಾಯಿಗಳು ತಮ್ಮ ಒಡೆಯನನ್ನು ಸ್ನೇಹಭಾವದಿಂದ ಇದಿರುಗೊಂಡವು, ಆದರೆ ದುಃಖಿತ ರಾಜನಿಗೆ ಅವುಗಳ ಗಮನವಾಗಲಿಲ್ಲ. ಅವನು ಕೊಠಡಿಗಳನ್ನು ಸೇರಿ ಚಿಂತಾಸಾಗರದಲ್ಲಿ ಮುಳುಗುವವನಾದನು.

ಇಷ್ಟುಹೊತ್ತಿಗೆಅರಮನೆಯು ಅಧಿಕಾರವರ್ಗದಲ್ಲಿಯೂ ಪರಿಚಾರಕರಲ್ಲಿಯೂ ಗುಣುಗುಟ್ಟುಗಳಿಗೂ ಪಿಸಿ ಮಾತುಗಳಿಗೂ ಪ್ರಾರಂಭವಾಯಿತು. ವಿಷಯವು ಬಹು ಗುಪ್ತವಾಗಿರಬೇಕೆಂದು ರಾಜಾಜ್ಞೆ. ಆದರೆ ಗುಪ್ತ ವಿಷಯಗಳು ಬಯಲಾಗುವ ರೀತಿಯೇ ಬೇರೆ ಇದೆ. ಅದನ್ನು ಯಾರೂ ಅರಿಯರು. ರಾತ್ರಿಯು ಕಳೆಯಿತು ಪ್ರಾತಃಕಾಲವು ಅದರ ಸ್ಥಾನವನ್ನಾವರಿಸಿತು. ಆದರೆ ಅರಸನು ತನ್ನ ಕೊಠಡಿಯಿಂದ ಹೊರಕ್ಕೆ ಬರಲಾರನು.

ದಣಿದ ಸೂರ್ಯದೇವನು ಸಾಗರಾಭಿಮುಖವಾಗಿ ಧಾವಿಸುತ್ತಿದ್ದನು. ಅರೆಕ್ಷಣದಲ್ಲಿ ಅವನು ತನ್ನ ಗುರಿಯನ್ನು ತಲುಪಿದನು. ಅವನ ಅಸ್ತಮಾನದಿಂದುಂಟಾದ ಶೋಭೆಯು ನಿಶಾದೇವಿಯ ಆಗಮನದಿಂದ ಕಳೆಗುಂದಿತು. ಪ್ರಕೃತಿಯು ಕಗ್ಗತ್ತಲೆಯಿಂದ ಆಚ್ಛಾದಿಸಲ್ಪಟ್ಟಳು. ಈ ಹೊತ್ತಿಗೆ ಅರಮನೆಯಲ್ಲಿ ಅನಿರೀಕ್ಷಿತ ಗೊಂದಲವೊಂದು ಕಾಣಬಂತು. ಅರಸನು ಸಂದರ್ಶನಾ ಭವನಕ್ಕೆ ಬಂದಿದ್ದನು. ಕ್ರೂರ ನಿರ್ಧಾರದ ಭಾವವೊಂದು ಅವನ ಮುಖವನ್ನು ಆವರಿಸಿಕೊಂಡಿತ್ತು. ಅಂಥ ಕಾಮಾಗ್ನಿಯ ವಶ ಸ್ವಭಾವದ ಕೈಯು ಗೌರವ ಮನಸ್ಥಿತಿಗಳಿಗಿಂತಲೂ ಮೇಲಾಯಿತು. ಕಾಂಚಿಪಾಂಡ್ಯನನ್ನು ಕೂಡಲೇ ಆಸ್ಥಾನಕ್ಕೆ ಕರೆತರಿಸಲಾಯಿತು. ರಾಜ ಇಚ್ಛೆಯು ಅವನಿಗೆ ತಿಳುಹಲಾಯಿತು. ರಾಜಾಂತಃಪುರಕ್ಕೆ ಪಾಂಚಾಲಿಯನ್ನು ಸೇರಿಸಬೇಕು. ಅವಳು ಸಿಂಹಾಸನದಪತ್ನಿಯಾಗಬೇಕು. ಅವಳಿಗೆ ರಾಜ ಮರ್ಯಾದೆಯ ಉಚ್ಚಸ್ಥಾನಕೊಡಲಾಗುವುದು.

'ಸೂರ್ಯನು ದಿಗಂತದ ಎರಡನೇ ಸುತ್ತನ್ನು ಪ್ರಾರಂಭಿಸುವುದರೊಳಗೆ ನನಗೆ ಪ್ರತ್ಯುತ್ತರವು ದೊರಕಬೇಕು' ಹೀಗೆಂದು ಅರಸನು ಆಜ್ಞಾಪಿಸಿದನು.

ಮಳೆಗಾಲದ ಬಳಿ ವಲ್ಲಿ ಹೊಡೆದ ಸಿಡಿಲಿಗೆ ಮರಗಟ್ಟಿದ ಗೊಂಬೆಯಂತೆ ಕಾಂಚಿಪಾಂಡ್ಯನು ಸ್ತಂಭಿಭೂತನಾದನು. ತನ್ನನ್ನು ಸಜೀವ ಸುಡುವಂತೆ ಅವನಿಗೆ ಭಾಸವಾಯಿತು. ಘಾಯಗೊಂಡ ಹೆಣ್ಣುಲಿಯಂತೆ ಪಾಂಡ್ಯನು ಅಘೋರ ಚಿಂತೆಯಲ್ಲಿ ಅರಸನ ಸಮ್ಮುಖದಿಂದ ಹೊರಟುಹೋದನು. ಮನೆಗೆ ಮುಟ್ಟಿದಾಗ ರಾತ್ರಿಯು ಬಹಳವಾಗಿತ್ತು. ಏನೂ ಅರಿಯದ ಪಾಂಚಾಲಿಯು ಮನೆಯ ಮುಂದಿನ ತೋಟದಲ್ಲಿ ಹಾಡುತ್ತ ಕೂತಿದ್ದವಳು ತಂದೆಯ ಸ್ವಾಗತಿಸಿಕೊಂಡಳು. ಅವಳನ್ನು ನೋಡಿದ ಮೇಲಂತೂ, ಪಾಂಡ್ಯನ ಹೃದಯದಲ್ಲಿ ಮಹಾ ಸಂಕಟವುಂಟಾಯಿತು. ಅಂದು ಶುಕ್ರವಾರವಾದುದರಿಂದ ಅವನು ತನ್ನ ಮಗಳೊಂದಿಗೆ ಪದ್ಧತಿಯಂತೆ ದೇವಸ್ಥಾನಕ್ಕೆ ಹೋಗಿ ಪೂಜೆಯನ್ನು ಸಲ್ಲಿಸಿದನು. ಪಾಂಚಾಲಿಯು ಶುಭ್ರವಸ್ತ್ರಾಭರಣಾಲಂಕೃತಳಾಗಿದ್ದ ಅವಳ ಅರ್ಧ ಚಂದ್ರಾಕಾರದ ಹಣೆಯಲ್ಲಿ ಸುಶೋಭಿತವಾದ ಕುಂಕುಮವು ಅವಳ ಕಾಂತಿಯನ್ನು ಇಮ್ಮಡಿಸಿತ್ತು. ಹರುಷಚಿತ್ತಳಾಗಿಯೇ ಇದ್ದ ಆ ಸುಕುಮಾರಿಯು ತಂದೆಯ ಹೃದಯ ವೇದನೆಯನ್ನು ಅರಿಯದಾದಳು! ಕಾಂಚಿಪಾಂಡ್ಯನು ಅಂದು ರಾತ್ರಿ ಉಣ್ಣದೆ ಮಲಗುವನು. ಪ್ರಾತಃಕಾಲವಾಗುತ್ತಲೇ ಕಾಂಚನ ಪಾಂಡ್ಯನು ತನ್ನ ವಿಧಿಯು ಸಮೀಪಿಸುತ್ತಿರುವುದೆಂದು ಅರಿತನು. ಸಾಯಂಕಾಲವಾಯಿತು. ಸಾಯಂಕಾಲವು ರಾತ್ರಿಯಿಂದನುಸರಿಸಲ್ಪಟ್ಟಿತು. ಪಾಂಡ್ಯನು ತನ್ನ ಮಗಳನ್ನು ಮನೆಯ ಹಿಂದಿನ ತೋಟಕ್ಕೆ ಕರೆದನು. ಅದೊಂದು ಸುಂದರವಾದ ವಿಹಾರವನ. ಅನೇಕಾನೇಕ ಫಲವೃಕ್ಷಗಳು ಅಲ್ಲಿ ವಿರಾಜಿಸುತ್ತಿದ್ದುವು. ಸುಗಂಧಪೂರಿತ ಪುಷ್ಪಗಳ ಗಿಡಬಳ್ಳಿಗಳಲ್ಲಿ ತನ್ನು ಅಲಂಕಾರವನ್ನು ಬೀರುತ್ತಿದ್ದುವು. ಸುಗಂಧಯುಕ್ತ ತಂಗಾಳಿಯಲ್ಲಿ ಪಸರಿಸಿತ್ತು. ಪಾಂಚಾಲಿಯು ಪ್ರಕೃತಿಯ ಶೋಭೆಯನ್ನು ನೋಡಿ ಮುಗ್ಧಳಾಗಿದ್ದಳು. ಪಾಂಡ್ಯನು ಹೊರೆಯಿಂದ ಭಾರವಾದ ತನ್ನ ಹೃದಯವನ್ನು ತೋರ್ಪಡಿಸದೆ ಮಗಳೊಂದಿಗೆ ಸಂಚರಿಸುತಿದ್ದನು.

ಪ್ರಶಾಂತವಾದ ಆ ತೋಟದಲ್ಲಿ ಸಂಚರಿಸುತ್ತಾ ತಂದೆ ಮಗಳಿರ್ವರೂ ಒಂದು ಆಸನವಿದ್ದೆಡೆಗೆ ಬಂದರು. ಕಾಮಬಾಣವನ್ನು ಧರಿಸಿದ್ದ ಮನ್ಮಥನ ವಿಗ್ರಹವೊಂದು ಅಲ್ಲಿ ಅಲಂಕೃತವಾಗಿತ್ತು. ಹತ್ತಿರದಲ್ಲಿಯೇ ಕಾರಂಜಿಯೊಂದು ನೀರಿನ ಕಣಗಳನ್ನು ಮೇಲಕ್ಕೆ ಹಾರಿಸುತಿದ್ದಿತು. ಅಷ್ಟರಲ್ಲಿ 'ಆಹಾ' ಎಂಬ ಉದ್ಗಾರವು ಕಾಂಚಿ ಪಾಂಡ್ಯನ ಮುಖದಿಂದ ಹೊರಬಿತ್ತು. ಅವನು ಕೈಯಲ್ಲಿ ಹಿಡಕೊಂಡಿದ್ದ ಬಂಗಾರದ ಚಮಚವೊಂದು ಕೈತಪ್ಪಿ ಬಿದ್ದುಹೋಗಿತ್ತು.

ಪಾಂಚಾಲಿಯು ಅದನ್ನು ನೋಡುವಳು 'ಚಿನ್ನದ ಚಮಚೆ' ಎಂದು ಎಂದು ಅವಳೊಂದು ಉದ್ಗಾರವನ್ನು ತೆಗೆದಳು. ಚಮಚವು ಒಂದು ಹೊಂಡದಲ್ಲಿ ಬಿದ್ದಿತ್ತು. ತೋಟಗಾರರು ಯಾವುದೂ ಕೆಲಸಕ್ಕೆ ತಯಾರಿಸಿದ ಹೊಂಡವಿತ್ತದು. 'ಮಗಳೇ ಪಾಂಚಾಲಿ, ಹೊಂಡವನ್ನಿಳಿದು ಚಮಚವನ್ನು ಮೇಲಕ್ಕೆ ತೆಗೆಯುವೇನನ್ನು? ಚಂದ್ರನ ಹಿಟ್ಟಿನಂತಹ ಬೆಳಕಿದೆ ನಾನು ಮುದುಕನು. ಆ ಮೇಲೆ ನಾನು ನಿನಗೆ ಕೈ ಕೊಟ್ಟು ಮೇಲಕ್ಕೆತ್ತುವೆನು. ನಿನಗೆ ಹೆಚ್ಚು ಕಷ್ಟವಿರಲಾರದು'' ಎಂದು ಕಾಂಚಿಪಾಂಡ್ಯನು ಮಗಳನ್ನುದ್ದೇಶಿಸಿ ಹೇಳಿದನು.

'ಅಪ್ಪಾ ಖಂಡಿತವಾಗಿಯೂ ತೆಗೆಯುವೆನು' ತಾರುಣ್ಯದ ಚೈತನ್ಯಕ್ಕೆ ತಕ್ಕುದಾದ ಕೆಲಸವೆಂದು ತಿಳಿದು ಪಾಂಚಾಲಿಯು ತನ್ನ ಸೀರೆಯ ಸೆರಗನ್ನು ಸರಿಪಡಿಸಿ ಹೊಂಡವನ್ನಿಳಿದಳು.

ಕಾಂಚಿ ಪಾಂಡ್ಯನು ಒಂದು ಸಂಕೇತ ಕೊಟ್ಟೊಡನೆ ಏಳು ಮಂದಿ ದಿಂಡಾಳುಗಳು ಹೊಂಡದ ಸುತ್ತಲಿದ್ದ ಮಣ್ಣನ್ನು ಒಂದೇ ಸವನೆ ರಭಸದಲ್ಲಿ ಹೊಂಡದೊಳಗೇನೇ ಹಾಕತೊಡಗಿದರು. ಚಮಚವನ್ನು ಕೈಯಲ್ಲಿ ಹಿಡಿದು ಪಾಂಚಾಲಿಯು ಅದನ್ನು ಮೇಲಕ್ಕೆ ಬಿಸುಡುವವಳಾದಳು. ಆದರೆ ಕೆಸರು ಮಣ್ಣಿನ ಪ್ರವಾಹವು ಅವಳ ಮೇಲೆ ಬೀಳುವಂತೆ ಅವಳಿಗೆ ತಿಳಿಯಿತ.

'ಅಪ್ಪಾ, ಎಲ್ಲಿರುವೆಯಪ್ಪಾ ಈ ತೋಟಗಾರರನ್ನು ನಿಲ್ಲಿಸು. ನಾನಿಲ್ಲಿರುವೆನೆಂದು ತಿಳಿಯದೆ ಅವರು ಮಣ್ಣನ್ನು ಹೊಂಡದೊಳಗೆ ಹಾಕುತ್ತಲಿರುವರು. ಅವರಿಗೆ ಹೇಳಪ್ಪಾ' ಎಂದು ಕೂಗಿಕೊಂಡಳು. ಚಂದ್ರಶಿಲೆಯಲ್ಲಿ ಕೆತ್ತಿರುವ ವಿಗ್ರಹದಂತೆ ನಿಂತಿರುವ ತಂದೆಯು ಮೂರ್ತಿಯನ್ನವಳು ಕಂಡಳು, ತೋಟಗಾರರು ಮಣ್ಣನ್ನೆಸೆಯುತಿದ್ದರು. ಆದರೆ ಅವನು ಏನೊಂದು ಮಾತಾಡುತ್ತಿರಲಿಲ್ಲ. 'ಅಪ್ಪಾ, ಅಯ್ಯೋ ಅಪ್ಪಾ' ಎಂದು ಇನ್ನೊಂದು ಸಾರಿ ಅವಳು ಕೂಗಿಕೊಂಡಳು. ಆದರೂ ಪ್ರತ್ಯುತ್ತರವಿಲ್ಲ. ತಂದೆಯ ಘೋರ ಉದ್ದೇಶವು ಅವಳಿಗೆ ತಿಳಿಯಿತು. ಅವಳು ಸಜೀವವಾಗಿ ಹೂಳಲ್ಪಡಬೇಕು. ಕೂಗಿಕೊಂಡಳು, ಬೊಬ್ಬಿಟ್ಟಳು, ಮೊರೆಯಿಟ್ಟಳು — ನಿಷ್ಪ್ರಯೋಜನ. ಅವಳ ಆರ್ತಧ್ವನಿಯು ಗಾಳಿಯಲ್ಲಿ ಲೀನವಾಗಿ, ನಿಶ್ಶಬ್ದವಾಯಿತ. ಮಣ್ಣು ಅವಳ ಮೇಲೆ ಭರದಿಂದ ಬೀಳುತ್ತಿತ್ತು.

''ಕೇಳೈ ಪಿ, ಪಾಷಾಣ ಹೃದಯನೇ ಕೇಳು. ಇನ್ನು ಮುಂದೆ ನಿನ್ನ ಕುಟುಂಬದಲ್ಲಾಗುವ ಒಂದು ಹೆಣ್ಣು ಕೂಸು ಕೂಡಾ ಸುಖಸಂತೋಷದಿಂದ ಬಾಳದಿರಲಿ'' ಪಾಂಚಾಲಿಯು ಶಾಪವಿತ್ತಳು. ಅವಳಿನ್ನೇನು ಮಾಡಬಲ್ಲಳು. ಅವಳ ಸೌಂದರ್ಯವು ಅವಳನ್ನೀ ಸ್ಥಿತಿಗೆ ತಂದುಬಿಟ್ಟಿತು.

ಕಾಂಚಿಪಾಂಡ್ಯನು ಶಾಪವನ್ನು ಕೇಳಿದನು. ಸಂತಾಪದಿಂದ ಮುಖವನ್ನು ತಗ್ಗಿಸಿದನು. ಪಾಂಚಾಲಿಯ ಆ ಶಾಪದ ಫಲವು ಇಂದೂ ನಡೆಯುತ್ತಲೇ ಇದೆ ಎಂದು ಚರಿತ್ರೆಗಾರನು ತಿಳಿಸುತ್ತಾನೆ.

ಪದ್ಮನ ಅನುವಾದ.

ಸುಖಸಂಗಮಶಾಸ್ತ್ರ ಎಂಬ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಅಂದವಾಗಿ ಪ್ರಿಂಟಾಗಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಫ್ರಾನ್ಸ್ ದೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಹನಿಗೆಯ ಸುಖವಿಲಾಸಗಳು ಎಲ್ಲಾ ದೇಶದ ವೇಶ್ಯಾಸ್ತ್ರೀಯರ ಹಾಗೂ ಸ್ತ್ರೀಪುರುಷರ ಅನೇಕ ಪ್ರೀತಿಸುವ ರಹಸ್ಯಗಳು ಬೇರೆಗೆ ಫೋಟೋಗಳ ಸಹಿತ ಕೊಟ್ಟಿದೆ. ಮಲಗುವ ಮನೆಯಲ್ಲಿ ಸ್ತ್ರೀಪುರುಷರ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೩ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೂಡಲೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು, ಕ್ರಯ ರೂ. 1

ಇದರ ಸಂಗಡ ೧೨ ಫ್ರೆಂಚ್ ಲವಿಂಗ್ ಕಲರ್ ಬೆಡ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಅಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್.

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೇ ಹಾಗಾದರೆ,
ಶಾರದಾ ಛಾಪಖಾನೆ ಮಂಗಳೂರು,
ಇಲ್ಲಿಗೆ ಬನ್ನಿರಿ–ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಶಿರೇಲಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

ESTBD- 1931.

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್,
ಮತ್ತು ಉಭಯ ಸಂಗೀತವಿದ್ಯಾವಿಶಾರದ.

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5-ಅಂಕಗಳ ನ್ಯಕ್ಕ **)ಭಕ್ತಶಿಖಾಮಣಿ ದಾಮಾಜಿಪಂತ(** ಸಂಗೀತ ನಾಟಕ.

ಬರೆದವರು:—ಶ್ರೀ ಜಿ. ಎನ್. ಲಕ್ಷ್ಮಣ ಪೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ; ಸೂರ್ಯನೊಳಗಿಲ್ಲ; ।
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮುನಿವರಾ!" ।

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟಬಾಣಿನ ಮನೋಹರವಾದ ೩೬ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ,ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ:—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯಾರ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಜ್ಯೇಷ್ಠ ಶು| ೧೧ ಶನಿವಾರದಿಂದ, ಜ್ಯೇಷ್ಠ ಬ| ೧ ಶುಕ್ರವಾರದ ವರೇಗಿನ ಪಂಚಾಂಗ.(೧೯೩೭ನೇಯ ಮಿಥುನ (ಕಾರ್ತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ದಿನ	ಇತರ
19	ಶನಿ	೧೧	೪೦	ಸ್ವಾತಿ	೫೫	೫	
20	ರವಿ	೧೨	೪೪	ವಿಶಾಖ	೬೦	೬	
21	ಸೋ.	೧೩	೪೯	ವಿಶಾಖ	೧	೭	
22	ಕುಜ†	೧೪	೫೫	ಅನುರಾಧ	೭	೮	
23	ಬುಧ	೧೫	೫೮	ಜ್ಯೇಷ್ಠ	೧೩	೯	
24	ಗುರು	೧	೬೦	ಮೂಲ	೧೯	೧೦	
25	ಶುಕ್ರ	೧	೨	ಪೂ. ಷಾ.	೨೪	೧೧	

THE
BANK OF MANGALORE LTD.,
MANGALORE.

ESTD. 1931.

Branches:-
Panemangalore, Mudabidri & Padubidri.

Chairman:—**Philip J. Chandran, Esq.,**
Retd. Dt. Registrar of Joint Stock Companies.

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.
Saving Bank deposit 3½% on daily balances
All kinds of banking business transacted.
U. R. PAI, N. U. PAI, *Managing Directors.*

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ ರೂ. ಆ.	ವರೆಗೆ ರೂ. ಆ.
ರಾಶಿ ಅಕ್ಕಿ ...	3— 8	4— 0
ಮುಸ್ಕಿ ...	3—10	4— 4
ಗುಡ್ಡ ...	3—10	4— 0
ಊರ ಅಪ್ಪರ್ ಬೆಳ್ತಿಗೆ ...	4— 0	4—12
ರಂಗೂನು ಬೆ. ಗೋ. ೧ಕ್ಕೆ...	6 — 8	7— 0
ಎಲ್ಲೂರು ಬೆ. ಮು. ೧ಕ್ಕೆ...	3—14	4— 0
ಗೋದಿ ಗೋಣಿ ೧ಕ್ಕೆ ...	11— 0	13— 0
ತೊಗರಿ ಗೋಣಿ ೧ಕ್ಕೆ ...	9 — 8	12— 8
ಹುರುಳಿ ಗೋಣಿ ೧ಕ್ಕೆ ...	5— 4	5 — 6
ಕಡಲೆ ಗೋಣಿ ೧ಕ್ಕೆ ...	8 —14	12 — 8
ತೊಗರಿಬೇಳೆ ಗೋಣಿ೧ಕ್ಕೆ...	11— 0	19— 0
ಉದ್ದು ಗೋಣಿ ೧ಕ್ಕೆ ...	9— 0	9 — 8
ಹೆಸರು ಗೋಣಿ ೧ಕ್ಕೆ ...	7—12	8— 8
ಊರುಬೆಲ್ಲ ಖಂಡಿ ೧ಕ್ಕೆ ...	27— 8	32— 8
ಉಪ್ಪು ಗೋಣಿ ೧ಕ್ಕೆ ...	4—10	5—14
ಕೊಬ್ಬರಿ ಖಂಡಿ ೧ಕ್ಕೆ ...	75— 0	84— 0
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ...	20 — 0	20— 8
ಎಳ್ಳಿಂಡಿ ಖಂಡಿ ೧ಕ್ಕೆ ...	27 — 8	31 — 4
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ...	5— 8	6— 4
ಎಳ್ಳೆಣ್ಣೆ ಮುಡಿ ೧ಕ್ಕೆ ...	7— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6— 5	7— 5
ಮೋರಿಸ ಸಕ್ಕರೆ ಮು. ೧ಕ್ಕೆ...	3— 0	3 — 0
ಮೆಣಸು ...	4— 8	6— 0
ಸಾಸಿವೆ ಮುಡಿ ೧ಕ್ಕೆ ...	5 — 4	5— 6
ಕಾಳುಮೆಣಸು ಖ. ೧ಕ್ಕೆ ...	97 — 8	100— 0
ಯೋಲಕ್ಕಿಬೀಜ ಮುಡಿ೧ಕ್ಕೆ...	80— 0	85— 0
ಗೇರುಬೀಜ ಮು. ೧ಕ್ಕೆ ...	3 —14	4— 2
ಕಬ್ಬಿಣ ಖಂಡಿ ೧ಕ್ಕೆ ...	51— 0	51— 4
ತಾಂಬ್ರತಗಡು ಮು. ೧ಕ್ಕೆ...	14— 12	15— 0
ತಾಂಬ್ರಪಾತ್ರಗಳು ಮು. ೧ಕ್ಕೆ	17— 0	17— 8
ಊರಬೆಣ್ಣೆ ಸೇರು ೧ಕ್ಕೆ ...	13— 8	15— 0
ಹಿತ್ತಾಳೆ ತಗಡು ಮು. ೧ಕ್ಕೆ...	12— 0	12— 8
ಸತುವು ೧ಕ್ಕೆ ...	22— 7	22— 8
ಹುಣಸೆ ಹುಳಿ ಖಂಡಿ ೧ಕ್ಕೆ	40— 0	45— 0
ನೇಟಿವ್ ಕಾಫಿ ಖಂಡಿ ೧ಕ್ಕೆ	145— 0	150— 0
ಪ್ಲಾಂಟರ್ ಕಾಫಿ ಖಂಡಿ ೧ಕ್ಕೆ...	190— 0	200— 0
ಮಡಿಕೇರಿ ಏಲಕ್ಕಿ ...	57— 0	60 — 0

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ –

ನಿಮ್ಮಲ್ಲಿ ಆಗುವ ಯಾವತ್ತೂ ಹಮ್ಮಕವ್ಯ ಷೋಡಶ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ.

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಟ್ಟು ವೈದಿಕರಿಂದ ತರಿಸಿಕೊಳ್ಳುವರೆ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವರೆ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ.

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹಮ್ಮಕವ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿ ಪಡಿಯತಕ್ಕದ್ದು. ತಿಳಿದಿರುವುದು.

ಉದರವೇದನೆಯಿಂದ ಜೀವನದ ಸಾರವೇ ಮಾಸಿಹೋಗುವಂತಾಯಿತು.

ಆದರೆ ಈಗ ಸಂತೋಷವೇ ನನ್ನ ಸಾಮ್ರಾಜ್ಯವಾಗಿದೆ

ನಿಮಗೂ ಆಗಾಗ ಹೊಟ್ಟೆಶೂಲೆಯಾಗುತ್ತಿದೆಯೆ? ಒಂದಿಷ್ಟು ಆಹಾರವನ್ನು ಸೇವಿಸಿದೊಡನೆ ಅದು ನಿಮ್ಮ ಜೀವದನ್ನೆ ಉಕ್ಕಿ ಬರುವಂತೆ ಮಾಡುತ್ತಿದೆಯೇ? ಹಾಗಾದರೆ ಮಿ| ಜೆ. ಡಬ್ಲ್ಯು. ಎಂಬವರು ಬರೆದ ಕಾಗದವನ್ನು ಓದಿರಿ–ಅಂದರೆ ನಿಮ್ಮ ನೋವನ್ನು ಹೇಗೆ ಖಂಡಿತವಾಗಿಯೂ ಶಮನಗೊಳಿಸಬಹುದೆಂಬುದನ್ನು ತಿಳಿಯುವಿರಿ.

"ಈಗ ನನ್ನ ಹೊಟ್ಟೆನೋವು ಸಂಪೂರ್ಣ ಗುಣವಾದುದರಿಂದ ಸರಿಯಾಗಿ ಆಹಾರವನ್ನು ಸೇವಿಸಲು ಸಾಧ್ಯವಾಗುವುದರಿಂದ ನನ್ನ ಧನ್ಯವಾದಗಳನ್ನು ಅವರಿಗೆ ಕಳುಹಿಸದೆ ನನ್ನ ಮನಸ್ಸಮಾಧಾನವಾಗಲಿಲ್ಲ. ನಾನು ಮೊದಲು ಎಲ್ಲಾ ನಮೂನೆಯ ಔಷಧಿಗಳನ್ನು ಸೇವಿಸಿ ಏನೊಂದೂ ಗುಣಲಾಭವನ್ನು ಪಡೆಯದೆ ಬಹಳ ವ್ಯಸನಪಟ್ಟೆನು. ಒಂದು ದಿನ ರಾತ್ರಿ ನನ್ನ ನೋವು ಬಹಳ ವಿಪರೀತವಾದುದರಿಂದ ನನ್ನ ತಂಗಿಯು, ತನ್ನ ಸ್ನೇಹಿತಳೊಬ್ಬಳು ಇಂತಹ ಹೊಟ್ಟೆನೋವಿನ ಸಮಯದಲ್ಲಿ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಿ ಗುಣಲಾಭವನ್ನು ಹೊಂದಿರುವಳು, ಅದನ್ನು ನೀನೂ ಉಪಯೋಗಿಸೆಂದು ಹೇಳಿದ್ದರಿಂದ ನಾನದನ್ನು ತರಿಸಿದೆ. ಮೊದಲು ನನಗೆ ಅದರಲ್ಲೂ ವಿಶ್ವಾಸವಿರಲಿಲ್ಲ. ಆದರೆ ಈಗ ನನಗೆ ಸಂಪೂರ್ಣ ಗುಣ ಸಿಕ್ಕಿರುವುದರಿಂದ ನಾನೆಲ್ಲರಿಗೂ ಅದನ್ನು ಶಿಫಾರಸು ಮಾಡುತ್ತೇನೆ.

ಮಿ| ಜೆ. ಡಬ್ಲ್ಯು. ಅವರಿಗೆ ಸಿಕ್ಕಿದ ಲಾಭವು ನಿಮಗೂ ಸಿಕ್ಕಬೇಕಾದರೆ ಈ ಔಷಧವನ್ನೇ ಉಪಯೋಗಿಸಿರಿ. ಆದರೆ–

ಎಂಬ ಸಹಿಯ ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡಕೊಳ್ಳಿರಿ. ಇಂತಹ ನಮೂನೆಯ ಕಡಿಮೆ ದರದ ಪರಕೀಯ ಮ್ಹಾಲನ್ನು ಪಡೆದು ಮೋಸಹೋಗಬೇಡಿ. ಇದು ಚಿಲ್ಲರೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ.



S. No. 53.

THE
Shivaji Chemical Works,
HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ಮಾದಿಕೆಯನ್ನು ಮರೆಯಬೇಡಿರಿ.

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು.

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ, ನೂಲಿನಂತಹ ಹುಳ, ಯಾವ ತರಹದ ಕ್ರಿಮಿಯೇ ಆಗಲಿ ಬಿದ್ದುಹೋಗುವುವು. ಇದರ ಸೇವನೆ, ಸಕ್ಕರೆ ಬಿಸಿನೀರು. (ಹರಳೆಣ್ಣೆ ಬೇಡ)

ಕ್ರಯ ಪ್ಯಾಕೆಟ್ 1ಕ್ಕೆ	0	1	0
ಸುಖವಿರೇಚನ ಗುಳಿಗೆ	0	0	6
ಪಿತ್ತಶಾಂತಿ ಪೌಡರ್ ಪ್ಯಾಕೆಟ್ 1ಕ್ಕೆ	0	1	0

ಇದರ ಸೇವನೆಯಿಂದ ಎಲ್ಲಾ ತರದ ಪಿತ್ತವು ಶಾಂತಿಯಾಗುವುದು. ಕಫ ಮಿಶ್ರಣ ಸೀಸೆ 1ಕ್ಕೆ 0 8 0

ಸಿಗುವ ಸ್ಥಳ:– ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು

ಬೇಸಿಗೆಯಲ್ಲಿ

ಟೀ ಯು

ಅತ್ಯಾವಶ್ಯಕ.



ಬಿಸಿಲಿನ ಬೇಗೆಯು ಅತಿಯಾಗಿರುವುದು ನೀವೂ ಸೊಕ್ಕಿ ಸೊಪ್ಪಾಗಿರುವಿರಿ. ಟೀ ಯಿಂದ ಪಡೆಯ ಬಹುದಾದ ಶಕ್ತಿಯನ್ನು ಪಡೆಯಲು ಇದೇ ಸಕಾಲ ಬೇಸಿಗೆಯಲ್ಲಿ ಟೀ ಯೇ ಸರ್ವೋತ್ಕೃಷ್ಟವಾದ ಪಾನ. ಅದು ನಿಮ್ಮ ದೇಹದಲ್ಲಿ ತಂಪನ್ನುಂಟುಮಾಡಿ ನರಗಳಿಗೆ ತ್ರಾಣವನ್ನು ಕೊಡುವುದು

ಇಂಡಿಯಾದ ಟೀ ಯು ತಂಪನ್ನೂ ತೃಪ್ತಿಯನ್ನೂ ಕೊಡುವುದು.

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಕುದಿಸಿ ಶುಚಿಯಾಗಿರುವ ಮಣ್ಣಿನ(ಪಿಂಗಾಣಿ) ಪಾತ್ರೆಯೊಂದನ್ನು ಬೆಚ್ಚಗೆ ಮಾಡಿರಿ ಟೀ ಕುಡಿಯುವವರ ಸಂಖ್ಯೆಗೆ ತಕ್ಕಂತೆ ತಲೆಗೆ ಒಂದು ಚಮಚ ಮತ್ತು ಪಾತ್ರೆಗಾಗಿ ಒಂದು ಚಮಚ ಉತ್ತಮವಾದ ಇಂಡಿಯಾದ ಟೀ ಸೊಪ್ಪನ್ನು ಹಾಕಿರಿ ನೀರು ಕುದಿಯ ಲಾರಂಭಿಸಿದರೆ ತಕ್ಷಣ ಟೀ ಸೊಪ್ಪಿನ ಮೇಲೆ ಸುರಿಯಿರಿ ಐದು ನಿಮಿಷಗಳ ನಂತರ ಬಟ್ಟಲುಗಳಲ್ಲಿ ಸುರಿದು ಹಾಲು ಸಕ್ಕರೆ ಬೆರಸಿ ಕುಡಿಯಿಂ

I K 49

ಸಾದರ ಸ್ವೀಕಾರ

ಮೊಗವೀರ ವ್ಯವಸ್ಥಾಪಕ ಮಂಡಳಿ, ಬೊಂಬಾಯಿ. ಇವರ ೩೪ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ

'ಭಕ್ತ ಬಜನ್ಮಾವಳಿ'—ಕೀರ್ತನೆಗಳ ಪುಸ್ತಕ ಕ್ರೌನ್ ೧೬ ಸೈಜು, ಕೆನರಾ ಛಾಪಖಾನೆ ಮಂಗಳೂರು ಇಲ್ಲಿ ಮುದ್ರಿತವಾದುದು ಪ್ರಕಾಶಕರು—ಬ್ರಹ್ಮ ಸಮಾಜ ಮಂಗಳೂರು. ಬೆಲೆ ೬ ಆಣೆ

ಗ್ರಾಮೋದ್ಯೋಗ ಆಂದೋಲನ (ತತ್ವ ವಿವೇಚನೆ) ಕ್ರೌನ್ ೧೬ನೇ ಆಕಾರ ಲೇಖಕರು ಪಾಟೀಲ ಕಲ್ಲನ ಗೌಡ ಬಿ ಎ ಇವರು ಸೇವಾ ಪುಷ್ಪ ಗ್ರಂಥಮಾಲೆಯ ೪ನೇ ಅರಳು. ಮುದ್ರಕರು—ಮಾಧವ ನಾರಾಯಣ ಮಂಗಳವೇಡಕರ ಕಲಾ ಸಿಂಧು ಮುದ್ರಣಾಲಯ, ರೈಟರ್ ಓಣಿ ಧಾರವಾಡ ಪ್ರಕಾಶಕರು ಪಾಟೀಲ್ ಕಲ್ಲನ ಗೌಡರು, ಲೋಕ ಸೇವಾ ಸಂಘ, ಕದಸ (ಪೋ ಹಂಸಬಾವಿ)

ಮಳೆಗಾಲಕ್ಕೆ ಮಾತ್ರ!

ಗ್ಯಾರಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತ ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು—ಹಣ್ಣುಗಳು—ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2-8-0 ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡಿಯಲಾಗದು

ವಿಳಾಸ—

The Royal Seed Co,
Florists & Seedsmen, 27 Ilpay Thope
ULSOOR, BANGALORE

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ   ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ!

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಲೆ ಇದ್ದಾಗ್ಯೂ ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ನಿರ್ಧರಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಆವಶ್ಯಕವಾಗಿದ್ದಿತು

ಈ ಪುಸ್ತಕವನ್ನು ಓದಬೇಕು!   ಮನೋವೈಶಾಲ್ಯವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ 'ವ್ಯಾಪಾರವಾದ ಸ್ತ್ರೀಕಾಯದ ವ್ಯಾಪಾರವು ಯಾಕೋಹ್ಯಾಮ, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ಮಕಾವ್, ಜಬೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರುಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡೆವಳಿಗಳಾವುವು? ಅಲ್ಲಿನ ವೇಶ್ಯಾವಾಟಿಗಳು,ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ ಮೊದಲಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು	ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು	ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು?	ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

❋ —

ಉತ್ತಮವಾದ ಹೊಳಪು ಕಾಗದ: ೩೦೦ ಪುಟಗಳು.

ಬೆಲೆ ರೂ. ೧-೪-೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು. ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್, ಸ್ಟ್ರೀಟ್ ಮಾರ್ಟ್‌ನಲ್ಲಿ ದೊರಕುತ್ತದೆ.

ಟಾಗೂರ್ ಅಂಡ್ ಕೋ, (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ಕರ್ನಾಟಕದ ಸಾಹಸ! **ಸೇವೆ ಮತ್ತು ಗೆಲುವು** ಕರ್ನಾಟಕದ ಕೀರ್ತಿ!!

ಸೇವೆಯೇ

ಮೈಸೂರು ಇನ್ಶ್ಯೂರೆನ್ಸ್ ಕಂಪೆನಿಯ

ಪರಮ ಧ್ಯೇಯ

ಸೇವೆಯೇ ಅದರ ಗೆಲುವಿನ ಗುಟ್ಟು

ಪ್ರಾಂತಕ್ಕೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿಗಿರುವ ಉತ್ಸಾಹವೇ

"ಮೈಸೂರು" ಅಭ್ಯುದಯದ ಜೀವಾಳ.

ಕಂಪನಿಯು ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ನಿರತವಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ, ಅವರಿಂದ ಸೇವೆಗಾಗಿ ಹೆಚ್ಚಿನ ಕರೆ ಬರಲೆಂದು ಆಗ್ರಹಪೂರ್ವಕವಾಗಿ ಬೇಡುವುದು

ಅದು ಬಾಳಿರುವುದು ಸೇವೆಯಿಂದ;
ಬಾಳುವುದು ಸೇವೆಗಾಗಿಯೇ.

ಇಂದಿನ ಕೆಲವು ಅಂಶಗಳು–ಅಂಕಿಗಳು.

ಅಧಿಕೃತ ಷೇರು ಬಂಡವಾಳ ರೂ. ೫,೦೦,೦೦೦	ಇಂಡಿಯಾ ಸರಕಾರದ ರೇವಣಾತಿಯ ಬೆಲೆ ರೂ ೨೫,೦೦೦
ಹೊರಹಾಕಿದ ಬಂಡವಾಳ ರೂ. ೨,೦೦,೦೦೦	ಜೀವ ವಿಮಾ ನಿಧಿ ರೂ ೧೬,೨೨೧-೪-೪
ಚಂದಾ ಆದ ಬಂಡವಾಳ ರೂ ೧,೪೯,೬೦೦	ಸಾಧಿಸಿದ ಉದ್ಯಮ ರೂ ೧೦,೬೭,೪೫೩
ತೆತ್ತ ಬಂಡವಾಳ ರೂ ೬೫,೦೦೦	ಪೂರ್ಣವಾದ ಉದ್ಯಮ ರೂ ೭,೬೫,೩೪೫
ಷೇರುದಾರರ ಮೇಲಣ ನಿಧಿ ರೂ. ೮೪,೯೦೦	ಪ್ರಿಮಿಯಂ ಆದಾಯ ರೂ. ೫೫,೨೦೦

ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ

ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.

೧ ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೨೨೦ರಷ್ಟು ಏರಿದೆ ೨ ಹೊಸ ಉದ್ಯಮವು ಶೇಕಡ ೬೫ರಷ್ಟು, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟು ಏರಿದೆ. ೩ ಷೇರುಗಳು ಸಂಬೆಲೆಗೆ ಮಾರಾಟವಾಗುತ್ತಿವೆ ೪ ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು ೫ ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೇ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ ೬ ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠ ತರಗತಿಯನ್ನು ಸೂಚಿಸುತ್ತಲಿದೆ ಹಾಗೂ ಅದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ.

ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

"ಮೈಸೂರು" ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ ಕರ್ನಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆಯನ್ನು ಹಿಡಿದು—ಈ ಅನುಭವ ಬೆಂಬಲದಿಂದ—ಕರ್ನಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ್ ಇಂಡಿಯ, ಬರ್ಮಾ ಮತ್ತು ಸಿಲೋನುಗಳಲ್ಲೂ ವಿಜಯಿಯೆನಿಸಲು ಮುಂದಡಿಯಿಟ್ಟಿದೆ.

ಬೇಕು! ಕರ್ನಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನುಗಳ ಎಲ್ಲ ಪ್ರಾಂತ್ಯಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು ಸಂಬಳದ ಮತ್ತು ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿಗೆ ಅವರು ಕೊಡುವ ಉದ್ಯಮದ ಭರವಸೆಯನ್ನೂ, ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು

ಹೆಚ್ಚು ವಿವರಗಳಿಗೆ:—

ಜನರಲ್ ಮ್ಯಾನೇಜರ್,

ಮೈಸೂರು ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ನಾಗೇಶ್ವರ ಬಿಲ್ಡಿಂಗ್ಸ್" ಶ್ರೀ ನರಸಿಂಹರಾಜಾ ರೋಡ್ ಬೆಂಗಳೂರು ಸಿಟಿ.

ಮುಸಲ್ಮಾನರು ಕಾಂಗ್ರೆಸ್ಸಿಗೇಕೆ ಸೇರಬಾರದು?

ಸರ್ ಸೈಯ್ಯದ್ ವಜೀರ್ ಹಸನ್‌ರವರ ಬಿನ್ನಹ.

ಮುಸ್ಲಿಮ್ ಯುವಕರಿಗೊಂದು ಕರೆ.

(ಅನುವಾದಕ --ಕೆ ಹೈದರ್)

ಲಕ್ನೊ ಚೀಫ್ ಕೋರ್ಟಿನ ನಿವೃತ್ತ ಚೀಫ್ ಜಡ್ಜರೂ, ಅಖಿಲಭಾರತ ಮುಸ್ಲಿಮ್ ಲೀಗಿನ ನಿವೃತ್ತ ಅಧ್ಯಕ್ಷರಾದ ಸರ್ ಸೈಯ್ಯದ್ ವಜೀರ್ ಹಸನ್ನರವರು ಮುಸಲ್ಮಾನ ಜನತೆಯೊಡನೆ ಕಾಂಗ್ರೆಸ್ ರಾಜಕೀಯ ಸಂಬಂಧವನ್ನು ಬೆಳೆಸುವ ಪ್ರಯತ್ನವನ್ನು ಸಮರ್ಥಿಸಿ, ಮುಸಲ್ಮಾನರೊಡನೆ ಈ ಕೆಳಗಿನಂತೆ ವಿನಂತಿ ಮಾಡಿಕೊಂಡಿರುತ್ತಾರೆ.—

ಕಾಂಗ್ರೆಸು ಮುಸಲ್ಮಾನ ಜನತೆಯೊಡನೆ ಸಂಬಂಧವನ್ನು ಬೆಳೆಸಬೇಕೆಂದು ದೃಢ ನಿರ್ಣಯವನ್ನು ಮಾಡಿರುವುದಿದ್ದರೂ ಭಾರತದ ಕೆಲವು ಮಂದಿ ಪ್ರಮುಖ ಮುಸಲ್ಮಾನರು ಅದಕ್ಕೆ ವಿರೋಧವಾಗಿ ಚಳವಳಿವನ್ನು ಮಾಡಿರುವರೆಂಬ ವಿಚಾರವನ್ನು ನಾವು ಲಕ್ಷ್ಯದಲ್ಲಿಡಬೇಕಾಗುತ್ತದೆ

ಯೋಗ್ಯ ಮತ್ತು ಶಾಂತ ರೀತಿಗಳಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದುವುದು ಅಖಿಲ ಭಾರತ ರಾಷ್ಟ್ರಸಭೆಯ ಧ್ಯೇಯವಾಗಿದೆ ಮುಸ್ಲಿಮ್ ಜನತೆಯೊಡನೆ ಸಂಪರ್ಕವನ್ನು ಬೆಳೆಸುವ ಚಳವಳವು ಮೇಲಿನ ಧ್ಯೇಯ ಸಂಪಾದನೆಗಾಗಿ ಮಾಡಲ್ಪಟ್ಟ ಒಂದ ಯತ್ನವೆಂದೂ ಅದು ಯೋಗ್ಯ ಮತ್ತು ಶಾಂತವಾದುದೆಂದೂ ಎಲ್ಲರೂ ಒಪ್ಪುವಂತಹ ವಿಚಾರವಾಗಿದೆ ಈ ಚಳವಳವೆಂದರೆ ಸಂಪೂರ್ಣ ಸ್ವಾತಂತ್ರ್ಯ ಸಂಪಾದನೆಗಾಗಿ ಮಾಡುವ ಘಟನಾತ್ಮಕ ಯತ್ನವಾಗಿರದೆ ಅದರ ಪ್ರಾರಂಭವೂ ಪರಿಣಾಮವೂ ಅತ್ಯಂತ ಮಹತ್ವದ್ದಾಗಿದೆ ಜನತೆಯನ್ನು ದಾರಿದ್ರ್ಯದ ದವಡೆಯಿಂದ ತಪ್ಪಿಸಿ, ಅಳರಸರ ಅಂತೂ ಅವರ ಅಧೀನಕ್ಕೊಳಗಾದವರ ಪ್ರಬಲ ಶಕ್ತಿಯ ಮೂಲಕ ದಾಸ್ಯತೆಯ ಕೂಪಕ್ಕೆ ತಳ್ಳಲ್ಪಟ್ಟ ಬಡಜನತೆಯನ್ನು ಮೇಲೆತ್ತಿ ಉದ್ಧರಿಸುವುದೇ ಈ ಚಳವಳದ ಮೂಲಕಾರಣವಾಗಿದೆಯೆಂಬುದು ನಿಸ್ಸಂದೇಹವಾಗಿದೆ

ನಾನು ೧೯೩೬ರಲ್ಲಿ ಮುಂಬಯಿಯಲ್ಲಿ ಜರಗಿದ ಅಖಿಲ ಭಾರತ ಮುಸ್ಲಿಮ್ ಲೀಗಿನ ಅಧಿವೇಶನದ ನನ್ನ ಭಾಷಣದಲ್ಲಿ ಈ ಕೆಳಗಿನಂತೆ ಹೇಳಿರುವೆನು ಇಂದಿನ ನಮ್ಮ ಪರಿಸ್ಥಿತಿಯು ೭೦ ಮಿಲಿಯ ಮುಸಲ್ಮಾನರ ಸಮಾಜಿಕ ಅಧಃಪತನದ ಕುರಿತು ಕಠಿಣವಾಗಿ ಆಲೋಚಿಸುವಂತೆ ಮಾಡುವುದಲ್ಲದೆ ಭಯಂಕರ ದಾರಿದ್ರ್ಯ, ದಾಸ್ಯತೆ ಮೊದಲಾದ ವುಗಳಿಂದ ಅವರನ್ನು ದೂರಗೊಳಿಸಿ, ಅವರಿಗೆ ಸುಧಾರಿತ ಜೀವನದ ಮೂಲತಿರುಳನ್ನಿತ್ತು ಸ್ವತಂತ್ರ ರಾಷ್ಟ್ರದ ಸ್ವತಂತ್ರ ಜನತೆಯನ್ನಾಗಿ ಮಾಡುವಂತೆ ನಿರ್ಧರಿಸುವುದು. ಇಂದು ನಮ್ಮ ಜನತೆಯ ಏಳಿಗೆಗಾಗಿ ಸಂಘಟಿತ ಯತ್ನವನ್ನು ಮಾಡುವ ಕರ್ತವ್ಯ ಭಾರವು ಪ್ರತಿಯೊಬ್ಬ ವಿದ್ಯಾವಂತನ, ಬಂಡವಲುಗಾರರ ಮತ್ತು ಭೂಮ್ಯಾಲಿಕರ ಮೇಲೆ ಹೊಂದಿಕೊಂಡಿದೆ, ನಮ್ಮೆದುರು ಈಗ ನಿಂತಿರುವ ಏಕಮಾತ್ರ ಪ್ರಶ್ನೆಯೆಂದರೆ ಈ ಕರ್ತವ್ಯವನ್ನು ಯಾವ ರೀತಿಯಲ್ಲಿ ಪಾಲಿಸುವುದು, ಅದಕ್ಕೆ ವಿರೋಧವಾಗಿ ಬರುವ ತಡೆಗಟ್ಟುಗಳನ್ನು ಹೇಗೆ ನಿವಾರಿಸುವುದು, ಮತ್ತು ಆ ದಾರಿಯಲ್ಲಿ ಪ್ರಗತಿಯನ್ನು ಹೇಗೆ ಹೊಂದುವುದು ಇವೇ ಮೊದಲಾದುವುಗಳಾಗಿವೆ ಈಗ ಜ್ಯಾರಿಯಲ್ಲಿರುವ ನಮ್ಮ ದೇಶದ ಸರಕಾರದ ವಿಧಾನವು ನಮ್ಮ ಧ್ಯೇಯ ಸಂಪಾದನೆಗೆ ಅಪೂರ್ಣವಾಗಿರುವುದಲ್ಲದೆ, ಅದು ಹಾನಿಕಾರಕವಾದುದಾಗಿರುವುದು. ಕಾಂಗ್ರೆಸ್ಸಿನ ಆಶೆಯು ಸಂಪೂರ್ಣ ಉದಾತ್ತವಾಗಿರುವುದು. ರಾಜಕೀಯ ಅಂತೂ ಸಾಮಾಜಿಕ ಏಳಿಗೆಯ ಈ ಯೋಗ್ಯಧ್ಯೇಯವು ಎಷ್ಟೋ ಜನಾಂಗಗಳನ್ನು ಕರ್ತವ್ಯಪಾಲನೆಗೆ ಹುರಿದುಂಬಿಸಿರುವುದಲ್ಲದೆ, ಇನ್ನು ಮುಂದೆ ಕೂಡಾ ಎಷ್ಟೋ ಜನಾಂಗಗಳನ್ನು ಎಡರು ತೊಡರುಗಳ ಲಕ್ಷ್ಯವಿಲ್ಲದೆ ಮುನ್ನಡೆಯುವಂತೆ ಮಾಡುವುದು.

ನಾನು ಮೇಲೆ ವಿವರಿಸಿರುವ ವಿಚಾರದಿಂದ, ಈ ಚಳವಳವನ್ನು ಅದೇಕೆ ಯಾರಾದರೂ ವಿರೋಧಿಸಬೇಕೆಂಬ ಪ್ರಶ್ನೆಯು ಹುಟ್ಟುತ್ತದೆ. ಇದಕ್ಕೆ ಉತ್ತರವು ಸ್ವಯಂವ್ಯಕ್ತ, ಯಾರು ಭಾರತವು ಸ್ವತಂತ್ರ ರಾಷ್ಟ್ರವಾಗಬಾರದೆಂದು ಇಚ್ಛಿಸುವರೋ, ಇಲ್ಲವೆ ಅದರ ದಾರಿದ್ರ್ಯ ನಿವಾರಣೆಯು ಬೇಗನೆ ಆಗಬಾರದೆಂದು ಆಶಿಸುವರೋ ಅಂಥವರೇ ಇದನ್ನು ವಿರೋಧಿಸುವವರು

ಯೋಚಿಸುವುದಿದ್ದರೆ ಈ ಚಳವಳದ ಯೋಗ್ಯತತ್ವಗಳಿಗೆ ವಿರೋಧಿಸಲು ಕಾರಣವೇ ಇಲ್ಲ ಸ್ವಾತಂತ್ರ್ಯ ಪ್ರೇಮವು ಎಲ್ಲಾ ವ್ಯಕ್ತಿಗಳ ಎಲ್ಲಾ ಜನಾಂಗ ಜಾತಿ ಮತ ಧರ್ಮಗಳ ಅತ್ಯಂತ ಯೋಗ್ಯವಾದ ಅಭಿಲಾಷೆಯಾಗಿರುವುದು ಆದರೆ ದುರದೃಷ್ಟವಶಾತ್ ಮನುಷ್ಯ ಜೀವಿಗೆ ದುರಭಿಲಾಷೆಗಳಿರುವುವಲ್ಲದೆ, ಅವುಗಳಲ್ಲಿ ಸ್ವಾರ್ಥಾಭಿಲಾಷೆ, ವ್ಯಕ್ತಿಪರ, ಸ್ವಜಾತಿ, ಸ್ವಪಂಗಡಗಳ ಹಿತಸಂಬಂಧವನ್ನು ರಕ್ಷಿಸುವುದೇ ಅತ್ಯಂತ ಪ್ರಬಲವಾಗಿದೆ ನಮ್ಮ ಜನ್ಮಭೂಮಿಯಲ್ಲಿ ಈಗ ನಡೆಯುತ್ತಿರುವ ಸಮರವು ಮಾನವ ಸ್ವಭಾವದ ಪ್ರತಿವಿರೋಧಕ ಶಕ್ತಿಗಳೊಳಗೆ ನಡೆಯುವಂತಹದಾಗಿದೆ ಆದರೆ ವಿಜಯವು ಯಾವ ಕಡೆಗಿದೆಯೆಂಬುದನ್ನು ಕಾಣದವನು ನಿಜವಾಗಿಯೂ ಒಬ್ಬ ಅಂಧವ್ಯಕ್ತಿಯಾಗಿರಲೇ ಬೇಕು

ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸಿನ ಧ್ಯೇಯ.

ಮುಸ್ಲಿಮ್ ಲೀಗಿನ ಧ್ಯೇಯಗಳ ಸದ್ಯದಲ್ಲಿಯೋ ಬದಲಾವಣೆಯಾಗುವುದರಲ್ಲಿದೆ ಮುಸ್ಲಿಮ್ ಲೀಗಿನ ನಿಬಂಧನೆಗಳನ್ನು ಪುನರಾವರ್ತಿಸಲು ನೇಮಿಸಲ್ಪಟ್ಟ ಉಪಸಮಿತಿಯು ಈ ಕೆಳಗಿನ ಧ್ಯೇಯವನ್ನು ಅಂಗೀಕರಿಸಿಕೊಳ್ಳಬಹುದೆಂದ ಸೂಚಿಸಿದೆಯೆಂದು ತಿಳಿದುಬಂದಿದೆ "ಎಲ್ಲಾ ಶಾಂತ ಮತ್ತು ಯೋಗ್ಯ ರೀತಿಗಳಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಪ್ರಜಾಸತ್ತಾತ್ಮಕ ಸರಕಾರದ ಮೂಲಕ ತಂದೊದ್ಗಿ ಅದರಲ್ಲಿ ಘಟನಾತ್ಮಕ ಹಕ್ಕುಗಳಿಂದ ಮುಸಲ್ಮಾನರ ಹಿತ ಸಂಬಂಧಗಳನ್ನು ರಕ್ಷಿಸುವುದು"

ಮೇಲೆ ಸೂಚಿಸಿದ ಧ್ಯೇಯದ ಉತ್ತರಾರ್ಧವನ್ನು ಬಿಟ್ಟು ಪೂರ್ವಾರ್ಧವನ್ನು ನೋಡುವುದಿದ್ದರೆ, ಮುಸ್ಲಿಮ್ ಜನತಾ ಸಂಪರ್ಕವನ್ನು ಬೆಳೆಸಲು ಬದ್ಧಕಂಕಣವಾಗಿ ಹೊರಟಿರುವ ಕಾಂಗ್ರೆಸಿಗೆ ಪ್ರತಿಕೂಲವಾಗಿ, ಮುಸ್ಲಿಮ್ ಲೀಗಿನ ಯಾವ ಸದಸ್ಯನಾದರೂ ನಡೆದರೆ ಅಂಥವನ ನಡತೆಯು ಮುಸ್ಲಿಮ್ ಲೀಗಿನ ಘಟನೆಗನುಸಾರವಾಗಿ ಯೋಗ್ಯವಾದುದೆಂದು ಯಾರಾದರೂ ಹೇಳುವರೇ? ನನಗಂತೂ ಯಾರೂ ಕಾಣಿಸುವುದಿಲ್ಲ ಮುಸ್ಲಿಮ್ ಲೀಗಿನ ಧ್ಯೇಯವಂತಿರಲಿ, ಅಕ್ಷರಶಃ ಅದಕ್ಕನುಸಾರವಾಗಿ ವಿಧೇಯತೆಯಿಂದ ನಂಬಿ ಹಾಗೆಯೆ ವರ್ತಿಸುವ ಮುಸ್ಲಿಮ್ ಲೀಗಿನ ಸದಸ್ಯರು ಖಂಡಿತವಾಗಿಯೂ ಅದೇ ತರದ ಧ್ಯೇಯವನ್ನಿಟ್ಟುಕೊಂಡಿರುವಂತಹ ಕಾಂಗ್ರೆಸಿಗೆ ಸೇರದಿರುವಂತಾಗಲಾರದು. ಲೀಗಿನ ಧ್ಯೇಯದಲ್ಲಿ ಸೂಚಿಸಿರುವಂತೆ "ಶಾಂತ ಮತ್ತು ಯೋಗ್ಯ ವಿಧಾನಗಳಿಂದ" ನಾವು ಆಶಿಸುವ ಗುರಿಯನ್ನು ಕಾಂಗ್ರೆಸಿಗೆ ಸೇರುವ ಮೂಲಕ ಪಡೆಯಬಹುದು. ಮುಸ್ಲಿಮ್ ಜನತೆಯೊಡನೆ ರಾಜಕೀಯ ಸಂಪರ್ಕವನ್ನು ಬೆಳೆಸಿ, ಸ್ವಾತಂತ್ರ್ಯವನ್ನು ಶೀಘ್ರದಲ್ಲಿಯೇ ಗಳಿಸಬೇಕೆಂಬ ಕಾಂಗ್ರೆಸಿನ ಪ್ರಗತಿಪರ ಯತ್ನಕ್ಕೆ ಕಂದೊಡ್ಡುವ ಯಾವುದೇ ಪ್ರತಿಕೂಲ ಯತ್ನವಿದ್ದರೂ ಅದು ಮುಸ್ಲಿಮ್ ಲೀಗಿಗೆ ವಿರೋಧವಾಗಿ ವರ್ತಿಸಿದಂತೆಯೇ ಸರಿಯೆಂದ [illegible]

ರಾಷ್ಟ್ರೀಯ ಗೌರವ ಮತ್ತು ಸ್ವಾಭಿಮಾನ

ಮುಸ್ಲಿಮ್ ಲೀಗಿನ ಧ್ಯೇಯದ ಅಂತಿಮ ಮುಂದಿನ ಧ್ಯೇಯದ ಎರಡನೆ ಭಾಗದ ಕುರಿತು ಯೋಚಿಸುವುದಿದ್ದರೆ [illegible] ಮುಸಲ್ಮಾನರಿಗಾಗಿ ಭದ್ರತೆ" ಮತ್ತು ಅವರ ಹಿತಸಂಬಂಧಗಳ ರಕ್ಷಣೆ ಮತ್ತು [illegible] ಇರಲಿ,— ಇವುಗಳು ಘಟನೆಯ [illegible] ಅಂಶವಾಗಿರತಕ್ಕದ್ದೆಂದು

ಸರ್ ಸೈಯ್ಯದ್ ವಜೀರ್ ಹಸನ್‌ರವರು

ಯೋಚಿಸಲ್ಪಟ್ಟಿವುಗಳಾಗಿವೆ [illegible] ಮುಸಲ್ಮಾನರ ಹಿತಸಂಬಂಧಗಳ ರಕ್ಷಣೆಯ ಈ ಪ್ರಶ್ನೆಯು — ಭಾರತೀಯರು ಅಥವಾ ಬ್ರಿಟಿಷ ಪಾರ್ಲಿಮೆಂಟಿನವರು ಹೊಣೆಗಾರಿಕೆಯುಳ್ಳ ಸರಕಾರಕ್ಕನುಸಾರವಾಗಿ ಮಾಡುವ ಘಟನಾತ್ಮಕ ರಚನೆಯ ಮೊದಲೇ ಲೀಗಿನವರಿಂದ ನಿಶ್ಚಿತವಾಗಿಯೂ ಆಲೋಚಿಸಲ್ಪಡುವ ವಿಷಯವಾಗಿಲ್ಲ ಇದಕ್ಕೆ ಪ್ರತಿಕೂಲವಾಗಿ ಭಾವಿಸುವುದು ನಿಜವಾಗಿಯೂ ಹೇಯವಾದುದೇ ಸರಿ ಹೀಗೆನ್ನುವುದರ ಸಾಂಕೇತವೇನೆಂದರೆ ವಿಜಯ ಪ್ರಾಪ್ತಿಯಾದಲ್ಲಿ ನಮಗೆಷ್ಟು ಪಾಲು ಸಿಕ್ಕೀತೆಂಬ ವಿಚಾರವು ಎಷ್ಟರ ತನಕ ನಿಶ್ಚಯವಾಗುವುದಿಲ್ಲವೋ ಅಷ್ಟರ ತನಕ ನಾವು ಸ್ವಾತಂತ್ರ್ಯ ಸಮರದಲಿ ಭಾಗವಹಿಸುವುದಿಲ್ಲವೆಂದು ಹೇಳಿದಂತೆಯೇ ಸರಿ

ಯಾವ ಪ್ರಾಂತ್ಯಗಳಲ್ಲಿ ಮುಸಲ್ಮಾನರು ಅಲ್ಪಸಂಖ್ಯಾತರಾಗಿರುವರೋ ಅಂಥ ಕಡೆಗಳಲ್ಲಿ ಈ ಪ್ರಶ್ನೆಯು ನಿರ್ಣಯವನ್ನು ಹೀಗೆ ಮಾಡಬಹುದು ೧ ಎಷ್ಟರ ತನಕ ೧೯೩೫ರ ಇಂಡಿಯಾ ಆಕ್ಟಿನಲ್ಲಡಕವಾಗಿರುವ ಘಟನೆಯನ್ನು ಅದರ ಯೋಗ್ಯತೆಗನುಸಾರವಾಗಿ ಕಾರ್ಯರೂಪಕ್ಕೆ ತರಲು ಮುಸ್ಲಿಮ್ ಲೀಗ್ ಪ್ರಯತ್ನಿಸುತ್ತದೋ ಅಷ್ಟರ ತನಕ ಈ ಪ್ರಶ್ನೆಯ ನಿರ್ಣಯದ ವಿಚಾರವೇ ಅನವಶ್ಯಕವು ಒಂದು ವೇಳೆಗೆ ಯಾವುದಾದರೊಂದು ವಿಚಾರವು ಉಳಿದಿರುವುದಿದ್ದರೆ ಅದರ ಕುರಿತು ನಿರ್ಧರಿಸಲಿರುವ ಇನ್ನೊಂದು ಪಕ್ಷವು ಬ್ರಿಟಿಷ್ ಪಾರ್ಲಿಮೆಂಟಲ್ಲದೆ ಕಾಂಗ್ರೆಸಲ್ಲ ೨ ಈ ವಿಚಾರದ ನಿರ್ಣಯವು ಒಂದು ಹೊಸ ಘಟನೆಗನುಸಾರವಾಗಿರಬೇಕಾದರೆ ಈ ಘಟನೆಯನ್ನು ತಯಾರಿಸಲು ನಿಮಗೆ ರಾಷ್ಟ್ರೀಯ ಸರಕಾರದ ಹಕ್ಕಿದೆಯೋ ಅಥವಾ ಬ್ರಿಟಿಷ ಪಾರ್ಲಿಮೆಂಟಿನದೋ ಎಂದು ನಾನು ಕೇಳುತ್ತೇನೆ ಸ್ವಾತಂತ್ರ್ಯವು ಪ್ರತೀ ಭಾರತೀಯ ಸಜನ್ಮಸಿದ್ಧ ಹಕ್ಕು ಅಂದ ಮೇಲೆ ಭಾರತೀಯ ಮುಸಲ್ಮಾನರು ಅದನ್ನು ಅಸಡ್ಡೆಯಿಂದ ಕಾದು ಕುಳಿತಿರುವುದ ಯಥಾ ಯೋಗ್ಯವಾದುದಲ್ಲ ಈಗ ನಾವು ಕಾಂಗ್ರೆಸ್ಸಿಗೆ ಸೇರುವ ಮೊದಲೇ ಜಾತಿಯತೆಯ ಭದ್ರತೆಗಳನ್ನು ಕೇಳುವುದು ಉಚಿತವಲ್ಲ ಒಂದು ವೇಳೆ ಕಾಂಗ್ರೆಸ್ಸು ಮುಸಲ್ಮಾನರ ಹಿತಗಳನ್ನು ತಿರಸ್ಕರಿಸಿದ್ದಾಗ ಆಗ ನೋಡಿಕೊಳ್ಳಬಹುದು

ಮುಸ್ಲಿಮ್ ಯುವಕರಲ್ಲಿ ಬಿನ್ನಹ

ಕೊನೆಯದಾಗಿ ನಮ್ಮ ದೇಶದ ಮುಸಲ್ಮಾನ ಯುವಕರಲ್ಲಿ ನನ್ನದೊಂದು ಬಿನ್ನಹ ನೀವು ರಾಷ್ಟ್ರೀಯ ಸ್ವಾತಂತ್ರ್ಯದ ನಿಜವಾದ ಅರ್ಥವನ್ನು ತಿಳಿದಿರುವಿರಿ, ಮಾತ್ರವಲ್ಲ ಸಮಗ್ರ ರಾಷ್ಟ್ರದ ದಾಸ್ಯತೆಯ ನಿಜವಾದ ಸ್ವರೂಪವನ್ನು ಕೂಡಾ ನೀವು ತಿಳಿದಿರುವಿರಿ ನಿಮ್ಮ ಪ್ರಾಯವೂ, ನಿಮ್ಮ ಶಕ್ತಿಯೂ ಸಮಸ್ತ ಹೊಣೆಗಾರಿಕೆಯನ್ನು ಬೇಗನೆ ವಹಿಸಲು ಶಕ್ತಿಯುಳ್ಳದು. ಆದುದರಿಂದ ನಾನು ನಿಮ್ಮೊಡನೆ ಪ್ರಾರ್ಥಿಸುವುದೇನೆಂದರೆ ಒಬ್ಬೊಬ್ಬರಲ್ಲಿ ಗುಂಪು ಗುಂಪಾಗಿ ಕೂಡಿಕೊಂಡು ನೀವು ಈ ರಾಷ್ಟ್ರೀಯ ವಿಭಾಗಗಳಲ್ಲಿ ಕೈಹಾಕಿ, ನಿಮ್ಮ ಹೊಣೆಗಾರಿಕೆಯನ್ನು ನಿಮ್ಮಲ್ಲಿಯೇ ಹಂಚಿಕೊಳ್ಳಬೇಕು.. ನಿಮ್ಮ ದೇಶಾಭಿಮಾನದ ಜ್ಯೋತಿಯು ಸದಾಸರ್ವದಾ ಬೆಳಗುವಂತೆ ನೀವು ಯತ್ನಿಸಬೇಕು.

ಘಾಯ, ನೋವುಗಳಿಗೆ ಅತ್ಯುತ್ತಮ ಪ್ರಥಮ ಚಿಕಿತ್ಸೆ. ಜಾಂಬಕ್ಕು ಕಲೆಗಳುಳಿಯದಂತೆ ಗುಣಪಡಿಸುತ್ತದೆ.

ಘಾಯ [illegible] ಘಾಯಗಳನ್ನು ಹಾಗೆಯೇ ಬಿಟ್ಟರೆ ದೇಹದೊಳಗಿನ ರಕ್ತವು ವಿಷವಾಗಿ ಮಾರ್ಪಡುವ ಸಂಭವವಿದೆ ಯಾವಾಗಲೂ ನಿಮ್ಮ ಘಾಯಗಳನ್ನು ಮಹತ್ವದ ಔಷಧಿಯಾದ ಜಾಂಬಕ್ಕಿನಿಂದ ಗುಣಪಡಿಸಿಕೊಳ್ಳಿರಿ ಇದೇ ಅತ್ಯುತ್ತಮವಾದ ಪ್ರಥಮ ಚಿಕಿತ್ಸೆ. ಎಲ್ಲೆಲ್ಲೂ [illegible] ಚಿಕಿತ್ಸೆಗಾರರಿಂದಲೂ

ಇದರ ಅತ್ಯದ್ಭುತ ಗುಣಶಕ್ತಿಯು ಕಂಡಾಹಿಲ್ಪಟ್ಟಿದೆ ಘಾಯಗಳನ್ನು ಕಲೆಗಳುಳಿಯದಂತೆ ಗುಣಪಡಿಸುತ್ತದೆ

ಎಲ್ಲಾ ಔಷಧಿ ಷಾಪುಗಳಲ್ಲಿಯೂ ಜಾಂಬಕ್ಕು ರೂ -1 ಮತ್ತು ರೂ 2-4-0ರಂತೆ ಮಾರಲ್ಪಡುತ್ತದೆ

ಏಜಂಟ್ಸ್ — ಮೆಸರ್ಸ್ ದಾಧಾ ಎಂಡ್ ಕೋ,
ಟಿ. ಟಿ. ಮದ್ರಾಸು.

ಜಾಂಬಕ್

Zam Buk

ಅನುಕ್ರಮಣಿಕೆ

ಕೊರತೆ	೨
ಕಾಂಗ್ರೆಸ್ಸಿನೊಳಗೆ ಇನ್ನೆಂದು ಜಗಳವೆ?	೩
ಕಾಲ್ಪನಿಕ ಕತೆ	೫
ಗ್ರಹಣ	
ಮುಂದೇನು?	೧೦
ಸ್ಫುಟವಿಚಾರಗಳು	
ವರ್ತಮಾನ ಸಂಗ್ರಹ	
ಮುಸಲ್ಮಾನರು ಕಾಂಗ್ರೆಸ್ಸಿಗೇಕೆ ಸೇರಬಾರದು?	೯
ವಿವಿಧ ಸಮಾಚಾರಗಳು	೧೧
ಡಿಸ್ಟ್ರಿಕ್ಟ್ ಬೋರ್ಡುಗಳು	೧೨
ಊರುಗಳೊಳಗಿನ ಸಮಾಚಾರ	೧೪
ತಾಲೂಕುಗಳಿಂದ	"
ಇದನ್ನು ಗಮನಿಸುವಿರೊ?	೧೬

ತಾ. ೧೮ನೇ ಶುಕ್ರವಾರ ಜೂನ್ ೧೯೩೭

ಸ್ವದೇಶಾಭಿಮಾನಿ

ಮುಂದೇನು?

ಪಾರ್ಲಿಮೆಂಟಿನಲ್ಲಿ ಲೇಬರ್ ಪಕ್ಷದ ಮುಂದಾಳುಗಳಾಗಿರುವ ಲೇನ್ಸಬರಿಯವರು ಇಲ್ಲಿನ ಬಿಕ್ಕಟ್ಟನ್ನು ಕುರಿತಾಗಿ ಭಾಷಣ ಮಾಡುತ್ತ, ಇತ್ತಂಡಗಳೂ ತೀರ ಹತ್ತಿರಕ್ಕೆ ಬಂದಿರುವ ಈ ಸುಸಂದರ್ಭದಲ್ಲಿಯೆ, ವೈಸ್ರಾಯರು ಕೊಂಗ್ರೆಸ್ ಮುಖಂಡರನ್ನು ಕರೆಯಿಸಿಕೊಂಡು, ಮುಂದಿನ ರಾಜ್ಯಭಾರ ನಿರ್ವಹಣವನ್ನು ಕುರಿತಾಗಿ ಪ್ರಸ್ತಾಪಿಸಿ, ಈ ಸಮಸ್ಯೆಯನ್ನು ಇತ್ಯರ್ಥಗೊಳಿಸುವಂತೆ ಪಾರ್ಲಿಮೆಂಟಿನ ಸೂಚನೆಯಾಗುವಂತೆ ಬಹಳವಾಗಿ ಹೇಳಿಕೊಂಡರು. ಕೊಂಗ್ರೆಸಿಗೂ ಸರಕಾರಕ್ಕೂ ಈಗ ಹೆಚ್ಚಿನ ಅಭಿಪ್ರಾಯ ಭೇದವೇನೂ ಇಲ್ಲವೆಂಬಂತೆ ಕಾಣುತ್ತಿದೆಯೆಂದೂ, ಅಧಿಕಮತದ ಬೆಂಬಲವುಳ್ಳವರನ್ನು ಮಂತ್ರಿಗಳನ್ನಾಗಿ ಇರಿಸಿಕೊಳ್ಳದೆ ಪ್ರಜಾಸತ್ತೆ ಸ್ವರಾಜ್ಯಗಳೆರಡೂ ವ್ಯರ್ಥವಾಗುವ ಕಾರಣ, ಹೊಸ ರಾಜ್ಯಭಾರದ ಯೋಜನೆಯು ಪ್ರಾರಂಭದಲ್ಲೇ ನಿಷ್ಫಲವಾಗಿ ಪರಿಣಮಿಸುವುದೆಂದೂ ಅವರು ಎಚ್ಚರಿಸಿ ಆಕ್ಷೇಪಿಸಿದರು. ಹೀಗೆಯೆ ಕಾಲಹರಣ ಮಾಡುವುದರಿಂದ ಬ್ರಿಟಿಷರಲ್ಲಿ ಹಿಂದೀಯರಿಗೆ ಸ್ವರಾಜ್ಯ ಕೊಡಬೇಕಾಗಿರುವ ಅಭಿಪ್ರಾಯದಲ್ಲಿ ಸರ್ವರೂ ಸಂದೇಹವನ್ನು ಕಾಣುವರೆಂದೂ ಅವರು ಪಶ್ಚಾತ್ತಾಪ ಹೊಂದಿದರು.

ಸರಕಾರದ ಕಡೆಯಿಂದ ಲೋರ್ಡ ಸ್ಟೇನ್ಲಿಯವರು (ಹೊಸ ಉಪಸೆಕ್ರೆಟರಿಯವರು) ಉತ್ತರ ಕೊಡುತ್ತ, ಈ ವಿಷಯವಾಗಿ ಬಹಳ ಸೂಕ್ಷ್ಮವಾದ ಚರ್ಚೆಯು ನಡೆಯುತ್ತಿರುವುದು ಅಗತ್ಯವೆಂದೂ, ಅದು ಮುಗಿಯುವ ಮೊದಲೇ ಗವರ್ನರುಗಳು ಸಭೆಗಳನ್ನು ಕರೆಯಬೇಕಾಗಿ ಒತ್ತಾಯಪಡಿಸುವುದರಿಂದ ಹೆಚ್ಚಿನ ಕೆಡುಕುಂಟಾಗುವುದೆಂದೂ, ಅದರ ಬದಲು, ಗವರ್ನರರು ಕೊಂಗ್ರೆಸ್ ಮುಖಂಡರೊಡನೆ ಪರಾಮರ್ಶಿಸುತ್ತಿರುವುದು ಉತ್ತಮವೆಂದೂ, ಇದರಿಂದ ಸ್ವಲ್ಪ ವಿಳಂಬವಾದರೂ ಉತ್ತಮ ಪರಿಣಾಮವೇ ಉಂಟಾಗುವುದೆಂದೂ ತಮ್ಮ ಅಭಿಪ್ರಾಯ ಸೂಚಿಸಿದರು. ಕೊಂಗ್ರೆಸಿನ ಅಪೇಕ್ಷೆಯನ್ನು ಆಗುವಷ್ಟು ಹೆಚ್ಚಾಗಿ ಸಲ್ಲಿಸಲು ಸರಕಾರವು ತೀರ ಸಿದ್ಧರಾಗಿಯೆ ಇರುವರೆಂದೂ, ಆದರೆ ಪ್ರತಿ ಪ್ರಾಂತ್ಯದಲ್ಲಿಯೂ ಗವರ್ನರರು ಮತ್ತು ಕೊಂಗ್ರೆಸ್ ಮುಖಂಡರುಗಳೊಳಗೆ ಮಾತುಕತೆ ನಡೆಯುತ್ತಿರುವುದೇ ಉತ್ತಮವೆಂದೂ ಕೂಡಿಸಿ ಹೇಳಿದರು.

ಪಾರ್ಲಿಮೆಂಟಿನಲ್ಲಿ ಲೋರ್ಡ್ ಸ್ಟೇನ್ಲಿಯವರು ಈ ಹುದ್ದೆಗೆ ಬಂದ ತರುವಾಯ, ಇದೇ ಅವರ ಪ್ರಥಮ ಭಾಷಣ. ಭಾಷಣದಲ್ಲಿ, ಕರಣೀಕತೆನಿಕ್ಕೆ ಉಪಕರಣವಾಗಿರುವ ಮಾಯಾಜಾಲವನ್ನು ಹರಡಬಲ್ಲ ಉತ್ತಮ ಚಾತುರ್ಯವಿದೆ. ಸದ್ಯದಲ್ಲಿ ಹೆಚ್ಚಿನವರಿಗೆ ಇಂಡಿಯಾ ಎಂದರೇ ತಿಳಿಯದ ಕಾಲದಲ್ಲಿ, ಈ ರೀತಿಯಾಗಿ ಭಾಷಣ ಮಾಡುವುದು ತುಂಬ ಉಪಯುಕ್ತವಾಗಿದೆ. ನಾಜೂಕಾಗಿ ನಡೆಯಬೇಕೆಂಬ ಈ ತರ್ಕವು ಎಲ್ಲಿ ನಡೆಯುತ್ತಿದೆಯೋ ತಿಳಿದಿಲ್ಲ. ನಮಗೆ ಇವೆರಡು ತಿಂಗಳುಗಳಿಂದಲೂ ಒಬ್ಬರದೊಂದು ಭಾಷಣ, ಏಳು ಸಾವಿರ ಮೈಲು ಅಂತರದಲ್ಲಿ, ಮತ್ತೊಬ್ಬರದೊಂದು ಪ್ರತಿ ಭಾಷಣ. ಹೀಗಾಗಿಯೆ ವಾದ ಪ್ರತಿವಾದಗಳು ಬೆಳೆಯುತ್ತಿರುವುದೇ ಓದಲು ಸಿಗುತ್ತಲಿದೆ. ಇದಲ್ಲದೆ, ಹಲವು ಹೇಳಿಕೆಗಳೂ ಇವುಗಳನ್ನು ಖಂಡಿಸುವ ಇತರ ಹೇಳಿಕೆಗಳೂ ಕೇಳಬರುತ್ತಲಿವೆ. ಈ ರೀತಿಯಾಗಿ ಬಹು ಕೋಮಲ ಸೂಕ್ಷ್ಮ ನಾಜೂಕು ಸಮಜಾಯಿಸುವಿಕೆ ನಡೆಯುತ್ತಲಿರುವುದೇ? ಕೊಂಗ್ರೆಸಿನ ಖಂಡಿತ ವಚನ, ಲೇನ್ಸಬರಿಯವರ ಖಂಡಿತ ಸ್ಪಷ್ಟ ಸೂಚನೆ ಇವುಗಳಂತೆ ಸೆಕ್ರೆಟರಿ ಅಂಡರ್ ಸೆಕ್ರೆಟರಿಯವರ ಘೋಷಣಗಳಲ್ಲಿ ಸ್ಪಷ್ಟತೆ ತೋರದಿರುವುದು ರಾಜತಂತ್ರದ ಪರಾಕ್ರಮವಲ್ಲವೆ?

ಗವರ್ನರರುಗಳು ಅಲ್ಲಲ್ಲಿನ ಪ್ರಾಂತಿಕ ಕೊಂಗ್ರೆಸ್ ಮುಂದಾಳುಗಳೊಡನೆ ಪರಾಮರ್ಶಿಸುವುದೇ ಉತ್ತಮೋಪಾಯವೆನ್ನುವಾಗ, ಈ ಪರಾಮರ್ಶೆ ನಡೆಯಲು ಯಾವ ಸೌಕರ್ಯವೂ ಸಲಕರಣೆಗಳೂ ಇಲ್ಲವೆನ್ನುವಂತೆ ಇಲ್ಲಿ ತೋರುತ್ತಿರುವುದೇಕೆ? ಮಹಾನುಭಾವ ಗವರ್ನರರುಗಳು ಆಯಾ ಪ್ರಾಂತ್ಯಗಳಲ್ಲಿ ನಾನಾ ಭಾಷಣಗಳನ್ನು ನಾನಾ ಬಗೆಯಾಗಿ ಮಾಡುತ್ತ, ಪರಿಸ್ಥಿತಿಯಲ್ಲಿ ಕಾಠಿನ್ಯವನ್ನೂ ಘಟಿಸಿ ತೋರುತ್ತಿರುವುದುಂಟು. ಕೊಂಗ್ರೆಸಿನ ಹೇಳಿಕೆ, ಒಂದು ವಿಷಯದಿಂದ ಮತ್ತೊಂದಕ್ಕೆ ಮಾರ್ಪಡುತ್ತ ಆಲೋಚನಾಭಾರದ ತೂಕವು ಒಂದು ಸಂಗತಿಯಿಂದ ಮತ್ತೊಂದಕ್ಕೆ ಒಲಿದಂತೆ ತೋರುವುದಾಗಿ ಸರಕಾರದ ಮುತ್ಸದ್ದಿಗಳ ಪ್ರಾತಿನಿಧ್ಯದ ವ್ಯಕ್ತವಾದ ಆಕ್ಷೇಪಗಳೂ ಉಂಟು. ಪ್ರಾಂತಿಕ ಗವರ್ನರರು ಪ್ರಾ. ಕೊ. ಮುಖಂಡರನ್ನು ಕಂಡು ಮಾತೆತ್ತಿಲ್ಲ. 'ಡಿಸ್ಮಿಸ್ಸ್'–'ರಾಜೀನಾಮೆಯೋ' ಎಂಬ ತರ್ಕ ಇನ್ನೂ ಉಳಿದಿದೆ. ಎರಡೂ ಸಮಾನವೆಂದಾಡುವ ಸೆಕ್ರೆಟರಿಯವರು, ಹಾಗಿದ್ದಲ್ಲಿ 'ಡಿಸ್ಮಿಸ'ಗೆ ಒಪ್ಪಬಾರದೇಕೆ ಎಂದು ಕೇಳುವ ಕೊಂಗ್ರೆಸಿಗೆ ಉತ್ತರವಾಗಿ ಇಂಗ್ಲೆಂಡಿನಲ್ಲಿ 'ಅವೆರಡೂ ಪದ್ಧತಿಗಳು ಹಾಗೆ ಇರಲಿ; ಅಗತ್ಯ ಕಂಡಂತೆ ಮುಂದೆ ವರ್ತಿಸಬಹುದಲ್ಲದೆ, ಈಗಲೆ ಅದನ್ನು ನಿಷ್ಕರ್ಷೆಯಾಗಿ ಹೇಳುವುದು ಉತ್ತಮ ರೀತಿಯಲ್ಲ' ಎಂದು ಸಾರುವರು. ಗವರ್ನರರು ಈ ವಿಚಾರವಾಗಿ ಕೊಂಗ್ರೆಸು ಮುಂದಾಳುಗಳೊಡನೆ ಸಂಭಾಷಿಸಿ ನಿಷ್ಕರ್ಷೆ ಮಾಡಬಾರದೇ?

ಮುಂದಣ ತಿಂಗಳ ಮೊದಲನೆಯ ವಾರದಲ್ಲಿ ಕೊಂಗ್ರೆಸಿನ ಕಾರ್ಯಕಾರೀ ಮಂಡಲವು ಸೇರುವುದು. ಅಲ್ಲಿ ಈ ವಿಷಯದ ಇತ್ಯರ್ಥವಾಗಬಹುದು, ಆದೇನೆಂದು ಕೂಲಂಕಷ ತಿಳಿದ ಬಳಿಕ ಗವರ್ನರರು ಸಂಭಾಷಣೆಗೆ ತೊಡಗಬಹುದು ಎಂದು ಪ್ರೆಸ್ಟಿಜ್ ಪಕ್ಷದ ಅಭಿಪ್ರಾಯವಿದೆ. ಈ ಬಗೆಯ ಅಭಿಪ್ರಾಯಗಳಿಂದ ಫಲವಿಲ್ಲ. ಜನಸೇವೆಗಾಗಿ ಮುಂದೆ ಬಂದವರು, ಸರಕಾರ ಮುಂದರಿಯಲೆಂದು ತಲೆಕೊಟ್ಟವರು, ಮುಖ್ಯ ಪಕ್ಷದವರು ಹಿಂತೆಗೆದರೆಂದೂ, ಎರಡನೆ ಪಕ್ಷದವರಾಗಿ ಸೊಂಟಕಟ್ಟಿದವರು ಎಂಬಿತ್ಯಾದಿಯಾಗಿ ಅಲ್ಲಲ್ಲಿನ ತಾತ್ಕಾಲಿಕ ಮಂತ್ರಿಗಳು ತಮ್ಮ ಹಿರಿಯತನವನ್ನು ಕೊಂಡಾಡಿಕೊಳ್ಳುತ್ತಿರುವ ಪ್ರಸಂಗದಲ್ಲಿ, ಯಾರ ಪ್ರೆಸ್ಟಿಜಗೂ ಹಾನಿಯಿಲ್ಲವಷ್ಟೆ. ಇನ್ನೇಕೆ, ಗವರ್ನರರಾಗಲಿ ಕೊಂಗ್ರೆಸಾಗಲಿ ಈ ಪರಾಮರ್ಶೆ ಮಾಡಲು ವಿಳಂಬಿಸಬಾರದೆಂದು ಸೆಕ್ರೆಟರಿಯವರು ಸೂಚಿಸುವುದರಿಂದ ತಪ್ಪಾಗುವ ಬೆದರಿಕೆಯುಂಟೆ?

ಸ್ಫುಟವಿಚಾರಗಳು

ಖಜಾನಾ ಮಂತ್ರಿಗಳು.

ಮುಂಬಯಿಯಲ್ಲಿ ಸೇರಿದರು. ಇತರ ವಿಷಯಗಳಲ್ಲಿ ಮುಖ್ಯವಾಗಿ ಮುಂದಣ ಚುನಾವಣೆಗಳಲ್ಲಿ ಕೊಂಗ್ರೆಸನ್ನು ಸೋಲಿಸುವುದಕ್ಕೆ ಸುಮಾರು 50 ಕೋಟಿಗಳ ಖರ್ಚು ಮಾಡಬೇಕಾದೀತೆಂದು ಅಂದಾಜು ಹಾಕಿದರೆಂದು ತಿಳಿದು ಬರುತ್ತದೆ. ಈ ವ್ಯರ್ಥ ಲೆಕ್ಕ ಗುಣಿಸಿ ಕೂಡಿಸುವುದರಲ್ಲಿ ಕಾಲಹರಣ ಮಾಡುವುದಕ್ಕಿಂತಲೂ ಹೆಚ್ಚಿನ ಉಪಯೋಗದ ಬೇರೆ ಉದ್ಯೋಗವು ಇವರಿಗೆ ಇದ್ದಿಲ್ಲವೆ? ಹಣವನ್ನು ಉತ್ಪನ್ನ ಮಾಡುವ ನಾಲ್ಕು ಉಪಾಯಗಳಲ್ಲಿ ಮೂರು ಉಪಾಯಗಳು ಸಾಗಲಾರವೆಂದು ಶ್ರೀ ಮೇಥಾ (ಮುಂಬಾಯಿ ಮಂತ್ರಿಯವರು) ನಿರ್ಧರಿಸಿ, ಹೊಸ ತೆರಿಗೆಗಳನ್ನು ವಿಧಿಸುವ ನಾಲ್ಕನೆಯ ಉಪಾಯವನ್ನು ಸೂಚಿಸಿದರು. ಆದರೆ, ಎಷ್ಟು ಹೊರಿಸಬಹುದೋ ಅಷ್ಟು ಮಟ್ಟಿಗೆ ತೆರಿಗೆ ವಿಧಿಸಲಾಗಿರುವುದನ್ನು ತಿಳಿದು ಎಲ್ಲರೂ ನಿರುಪಾಯರಾದರು. ಖಜಾನೆಗೆ ಹಣವೇ ದೊರೆಯದಿರುವಾಗ, ಮಂತ್ರಿಗಳಾಗಿ ಬಾಳುವುದೆಂತು? ಅಧಿಕಮತವು ದೊರೆಯದೆ ಮಂತ್ರಿಗಳಾಗುವುದು ಕಷ್ಟ. ಹಾಗೆ ಅಧಿಕ ಮತವು ದೊರೆವಂತೆ ವೋಟರರನ್ನು ಒಲಿಸಿಕೊಳ್ಳುವುದು ಸುಲಭವಲ್ಲ. ಎಷ್ಟು ಹಣ ವ್ಯಯಿಸಿದರೆ ತಾನೆ ವೋಟರರನ್ನು ಒಲಿಸಿಕೊಳ್ಳಬಹುದೆಂಬುದನ್ನು ಕುರಿತಾಗಿಯೆ ಗುಣಿಸಿ 50 ಕೋಟಿ ರೂಪಾಯಿಯ ಮೊಬಲಗನ್ನು ಕಂಡುಹಿಡಿದರು. ವೋಟರರು ಕೊಂಗ್ರೆಸಿನ ಕಡೆಗೆ ತೋರಿಸಿರುವ ವಾತ್ಸಲ್ಯದ ಬೆಲೆ ಕನಿಷ್ಠ ಪಕ್ಷಕ್ಕೆ ಇಷ್ಟಾದರೂ ಆಗಬಹುದೆಂದು ಮಂತ್ರಿಗಳೇ ಅವರಿಗೆ ತಿಳಿಯ ಹೇಳಿದಂತಾಯಿತು. ಈ ವಾತ್ಸಲ್ಯವು ಬೆಳೆದಷ್ಟಕ್ಕೆ ಅದರ ಮೌಲ್ಯವೂ ಹೆಚ್ಚುವುದು. ಸ್ವರಾಜ್ಯ ದೊರೆತರೆ, ಇದು ವರೆಗೆ ಈ ದೇಶದಿಂದ ಹೊರ ದೇಶಗಳಿಗೆ ಹೋದ ಹಣಕ್ಕಿಂತ ಹೆಚ್ಚಿನ ಮೌಲ್ಯವೇ ಈ ವಾತ್ಸಲ್ಯಕ್ಕೆ ಬರುವುದು: ಅದು ಸುಮಾರು 500 ಕೋಟಿ ರೂಪಾಯಿಗಳಷ್ಟು ಪ್ರತಿ ವರ್ಷಕ್ಕೂ ಆಗುವುದೆಂದು ಅಂದಾಜು.

ಪಂಡಿತ ಮಂಡಲದಲ್ಲಿ ಶಾಸ್ತ್ರೀಯರ ಬೋಧನೆ.

'ಪಂಡಿತರು ಹಳೆಯವರಾಗಿರದೆ, ತಮ್ಮ ದುಸ್ತನ್ನೂ ಶಿಸ್ತನ್ನೂ ಸುಧಾರಿಸಿಕೊಳ್ಳಬೇಕೆಂದು ಮಾನ್ಯ ಶ್ರೀನಿವಾಸ ಶಾಸ್ತ್ರಿಯವರ ಬೋಧನೆ.' ಪಂಡಿತರು ತಲೆಗೆ ಕ್ರಾಪನ್ನು ಇಟ್ಟುಕೊಂಡು ಕ್ರಿಕೆಟ್ ಫ್ಲಾಟ್ ಪೋಲ್‌ಗಳನ್ನಾಡುತ್ತಲಿದ್ದು, ಹೊಸ ರೀತಿಗಿಂತ ಅಂತರಂಗ ಆಚರಣೆಗೆ ತಮ್ಮ ಮತವಿಚಾರಗಳನ್ನು ಇಟ್ಟುಕೊಂಡರೆ ಅನ್ಯಾಯವಾಗದು. ಅವರು ಅಧುನಿಕತೆಯಿಂದ ದೂರವಾಗಿ, ಹೊಸ ಮಂತ್ರಾಕ್ಷರಗಳನ್ನರಿತು ಬರಬೇಕು' ಎಂದು ಸೂಚನೆಗಳು. ಪಂಡಿತರಲ್ಲಿ ಇಂತಹ ಸ್ಪೋರ್ಟ್ಸಗಳಾದರೆ, ಅವರು ಮತ್ತೆ ಪಂಡಿತರಾಗಿಯೂ ಉಳಿದಾರೆ? ಪಂಡಿತರನ್ನು ನಗುವವರಿರಲಿ, ಹಾಗಿದ್ದರೂ ಪಂಡಿತರು ಪಂಡಿತರೇ; ಅವರ ಸ್ಥಾನಮಾನಗಳನ್ನು ಆಕ್ರಮಿಸಲು ಇತರರು ಶಕ್ತರಾಗಿಲ್ಲ. ರಾಮಾಯಣ ಮಹಾಭಾರತಗಳು ಕಟ್ಟುಕಥೆಗಳೆಂದೂ ಶ್ರಾದ್ಧವು ಹಳೆಯ ಧರ್ಮಾಂಧತೆಯೆಂದೂ ನಂಬುತ್ತ, ಕ್ರಿಕೆಟ್ ಆಡುತ್ತಿರುವ ಕ್ರಾಪುದಾರಿಯಾಗಿರುವ ಪಂಡಿತನೊಬ್ಬನು, ಪಂಡಿತನೆನಿಸದೆ ಸಂಸ್ಕೃತ ಅಸಿಸ್ಟೆಂಟನೆಂದು ಶಾಲೆಗಳಲ್ಲಿ ಸ್ಥಾನ ಹೊಂದುವನು. ಪಂಡಿತಗಿರಿಯನ್ನು ಹತ್ತುವುದಕ್ಕೆ ಬೇಕಾಗುವ ಕಾಲ ಮತ್ತು ಪ್ರಯತ್ನಗಳ ಬೆಲೆಯನ್ನಾದರೂ ಈ ಸ್ಥಾನಮಾನಗಳು ಹಿಂತೆರಲಾರವು, ಗಳಿಸಿಕೊಡಲಾರವು. ಪಂಡಿತರಾದವರು ಹಣವನ್ನು ಗಣನೆಗೆ ತರುತ್ತಿಲ್ಲವಾದರೂ ಹಣಕ್ಕೆ ಬೆಲೆ ಕಟ್ಟುವ ಸಮಾಜದಲ್ಲಿ ಅವರಿರುವ ಪ್ರಯುಕ್ತ, ಈ ರೀತಿಯಾಗಿ ತೃಣಸಮಾನರಾಗಬೇಕೆ? ಸೆಲೂನು, ಧೋಬೀಖಾನೆಗಳಿಗೆ ಅವರಿಂದ ಹಣ ಸಲ್ಲುತ್ತಿಲ್ಲ; ಸಿಗರೇಟ್ ಮದ್ಯಗಳೂ ಅವರನ್ನು ಮೋಹಿಸಿಲ್ಲ. ಅವರ ಜ್ಞಾನವು ಪುರಾತನವಾಗಿದೆ ನಿಜ; ಆದುದರಿಂದಲೆ ಅಷ್ಟು ವ್ಯಯಿಸದೆ ಅವರು ಅದನ್ನು ಕಡೆದೂ ಸಾಮಾನ್ಯವೇತನದಲ್ಲಿ ಜೀವಿಸಿಯೂ, ಪುರಾತನ ಅಗಾಧ ಜ್ಞಾನದ ನಿಧಿಗಳಾಗಿ ಬಾಳುತ್ತಾರೆ. ಅವರಿಂದ ಉಪಕಾರ ಪಡೆಯಬೇಕೆನ್ನುವವರಿಗೆ ನಿರ್ದಾಕ್ಷಿಣ್ಯವಾಗಿ ಉಪಕಾರ ಮಾಡುತ್ತಿರುತ್ತಾರೆ. ಶಾಸ್ತ್ರಿಯವರು, ಅವರು ಹೀಗೆಯೆ ಜ್ಞಾನ ಭಾಂಡಾಗಾರಗಳಾಗಬೇಕೆಂದೂ, ಅದರೆ ಅವರಿಗೆ ಒಪ್ಪಕೊಡಬೇಕೆಂದೂ ಎಣಿಸಿದಂತಿದೆ. ಇದು ಸಾಧ್ಯವಾಗದು, ಹೊಸ ಪಾಲೀಶಿನಿಂದ ಮಿರುಗುಕೊಡಲು ಪ್ರಯತ್ನಿಸಿ, ಅವರ ಭಂಡಾರವನ್ನು ದುರ್ಬಲಗೊಳಿಸಬಹುದು; ಅಥವಾ ಇತರ ವಿರುಗಿನ ಒಡವೆಗಳಿಂದ ಅವರ ಮೌಲ್ಯವನ್ನು ಇಳಿಸಬಹುದು. ಪಂಡಿತರು ಪಂಡಿತರಾಗಿಯೆ ಇರುವಷ್ಟಕ್ಕೆ ಅವರ ಗೌರವಕ್ಕೆ ಕುಂದಿಲ್ಲ.

ತೀರ್ವೆ ಇಳಿಸುವುದು.

ರೈತಬಾರಿ ಒಪ್ಪಿಗೆಯ ಹಿಡುವಳಿಗಾರರಲ್ಲಿ ಸೇಕಡಾ ... ರೂಪಾಯಿ ಹತ್ತಕ್ಕಿಂತ ಕಡಿಮೆ ಕಂದಾಯ ತೆರುವವರು; ಸೇಕಡಾ ... ನೂರಾಯಿ ೧೦ಂಕ್ಕೆ ಮಿಕ್ಕಿ ತೀರ್ವೆ ಕೊಡುವವರು. ಹೀಗಿರುವುದರಿಂದ, ರೂಪಾಯಿ ... ಸಾಲ್ಯಾಣಯಷ್ಟು ತೀರ್ವೆ ಇಳಿಸಿದರೂ, ಇದರಿಂದ ರೈತರಿಗೆ ಹೆಚ್ಚಿನ ಉಳಿತಾಯವೇನೂ ಆಗದು. ಈ ರಿಯಾಯಿತಿಯ ಕ್ರಮವು ವ್ಯರ್ಥವಾಗಿದೆ. ಚಿಕ್ಕ ಚಿಕ್ಕ ತುಂಡು ಹಿಡುವಳಿಗಳ ಮೇಲೆ ತೀರ್ವೆ ವಿಧಿಸಿ. ಇರದೆನ್ನುವವರಿದ್ದಾರೆ. ನೂರರಲ್ಲಿ ೭೩ ಹಿಡುವಳಿಗಳು ಈ ತರಗತಿಗೆ ಸೇರಿರುವುವು. ಹೀಗಾಗಿ, ಒಟ್ಟು ತೀರ್ವೆಯಲ್ಲಿ ಹೆಚ್ಚಿನ ಅಂಶವು ಇಂತಹ ಹಿಡುವಳಿಗಳಿಂದಲೇ ಕೂಡಿ ಬರುವುದಾಗಿದೆ; ಇದು ಸಮವಾಗುವುದು. ಹಿಂದೂಗಳ ಅವಿಭಕ್ತ ಕುಟುಂಬ ಕ್ರಮದಂತೆ ದೊಡ್ಡ ಜಮೀನುದಾರಿಗಳು ಹೀಗೆ ತುಂಡರಿಸಿ ಬರುವ ಪ್ರಯುಕ್ತ ಎಲ್ಲವೂ ತುಂಡುಭೂಮಿಗಳಾಗಿ, ಕೊನೆಗೆ ಯಾರ ಮೇಲೆಯೂ ತೀರ್ವೆ ವಿಧಿಸಲು ಎಡೆ ದೊರೆಯದು. ಹಿಡುವಳಿಗಳನ್ನು ತುಂಡರಿಸಬಾರದಾಗಿ ಎಷ್ಟು ಬೋಧಿಸಿದರೂ ಕೇಳುವವರಿಲ್ಲ. ಇದರಿಂದ ನಷ್ಟವಾಗುತ್ತ ಬರುವ ತೀರ್ವೆಯ ಮೊಬಲಗನ್ನು ಕೃಷಿಯ ಉತ್ಪನ್ನಗಳ ಮೇಲೆ ಲಾಭದಾಯ ವಿಧಿಸಿ ಭರ್ತಿಮಾಡಿಕೊಳ್ಳಬೇಕಾದೀತು. ಹೀಗೆ ಎಂತು ಮುಂದರಿಸಿದರೂ ಸರಕಾರಕ್ಕೂ ರೈತರಿಗೂ ತೃಪ್ತಿ ಇರಲಾರದಂತಿದೆ.

USE
KALYANPUR SUGAR

IT IS THE PUREST & THE SWEETEST
IT IS A UNIQUE PRODUCT OF OUR
OWN DISTRICT.

available in 7lb and 14lb packets, at the
Office, C. P. C. Co., Ltd.

ಕಲ್ಯಾಣಪುರ ಸಕ್ಕರೆಯನ್ನೇ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.

ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಸರಕಾರವು ಒಪ್ಪಂದಕ್ಕೆ ತಯಾರಿದೆ.

ಗವರ್ನರರು ಕಾಂಗ್ರೆಸ್ ಮುಖಂಡರನ್ನು ಕರೆಸುವರು

ಶಾಸನಸಭೆಗಳನ್ನು ಕರೆಯಲಾಗುವುದು

ಹೌಸ್ ಆಫ್ ಕಾಮನ್ಸಿನಲ್ಲಿ ಮಿ। ಲ್ಯಾನ್ಸ್ ಬರಿಯವರು ಒಂದು ಸೂಚನೆಯನ್ನು ತರುತ್ತಾ, ತಾತ್ಕಾಲಿಕ ಮಂತ್ರಿಮಂಡಲಗಳು ಸ್ಥಾಪಿತವಾದ ಪ್ರಾಂತ್ಯಗಳಲ್ಲಿ ಶಾಸನ ಸಭೆಗಳನ್ನು ಕರೆಯಲು ಬ್ರಿಟಿಷರು ಸರ್ವ ಪ್ರಯತ್ನ ಮಾಡಬೇಕೆಂದು ಪ್ರಶ್ನಿಸಿದರು. ಇದಕ್ಕೆ ಉತ್ತರವೀಯುತ್ತಾ ಅಂಡರ್ ಸೆಕ್ರೆಟರಿ ಆಫ್ ಸ್ಟೇಟರಾಗಿ ನೇಮಿತರಾದ ಲಾರ್ಡ್ ಸ್ಟ್ಯಾನ್ಲಿಯವರು "ಸಂದರ್ಭಗಳನ್ನು ಪರ್ಯಾಲೋಚಿಸಿ ಶಾಸನಸಭೆಗಳನ್ನು ಕರೆಯುವುದು ಗವರ್ನರರ ಅಧೀನದಲ್ಲಿದೆ" ಎಂದು ತಿಳಿಸಿದರು.

ವೆಡ್ ವುಡ್ ಬೆನ್ನರವರ ಪ್ರಶ್ನೆಗೆ ಉತ್ತರವೀಯುತ್ತಾ ಲಾರ್ಡ್ ಸ್ಟ್ಯಾನ್ಲಿಯವರು "ಶಾಸನ ಸಭೆಗಳನ್ನು ಕರೆಯುವ [illegible] ವೈಸರಾಯರು ಗವರ್ನರರೊಂದಿಗೆ ಸ್ನೇಹಭಾವ ನಡೆಸುತ್ತಿರುವರು" ಎಂದು ತಿಳಿಸಿದರು.

ಗವರ್ನರರ ವರ್ತನೆಯ ಮೇಲೆ ನಿರವಸೆ:—ನಂತರ ಮಿ। ಲ್ಯಾನ್ಸ್‌ಬರಿಯವರು ಇನ್ನೊಂದು ಸೂಚನೆಯನ್ನು ತರುತ್ತಾ, ಬಹು ಸಂಖ್ಯೆಯ [illegible] ಪ್ರತಿನಿಧಿಸಿ ಅವರ ಸೂಚನೆಗಳನ್ನು ಕೇಳದೆ ಗವರ್ನರರು ತಾವೇ ಆಡಳಿತವನ್ನು ನೋಡಬೇಕೆಂದು ಯಾವ ಪಾರ್ಲಿಮೆಂಟ್ ಸದಸ್ಯರೂ ಇಚ್ಛಿಸಲ್ಲ. ಇಂದಿಯ ಜವಾಬ್ದಾರಿ ಸರಕಾರವನ್ನು ಕೊಡುವ ಉದ್ದೇಶವು ಈಗಿನ ಸರಕಾರದ ಧೋರಣೆಯಿಂದಾಗಿ ವ್ಯರ್ಥವಾಗಿದೆ. ಗವರ್ನರರು ನ್ಯಾಯ ನೀತಿಗಳನ್ನು [illegible] ವಿಶೇಷಾಧಿಕಾರಗಳನ್ನು ಉಪಯೋಗಿಸಿಕೊಳ್ಳುವುದಿಲ್ಲವೆಂದು ಕಾಂಗ್ರೆಸ್ಸಿಗೆ ಸರಿಯಾಗಿ ತಿಳಿಸಬೇಕಾಗಿತ್ತು" ಎಂದು ಕೇಳಿದರು.

ಗಾಂಧಿಯವರ ಮುಂದಾಳತ್ವ:—ಮಿ। ಲ್ಯಾನ್ಸ್‌ಬರಿಯವರು ಗಾಂಧಿಯವರ ಮುಂದಾಳತ್ವವನ್ನು ಅವರ ಸ್ಪಷ್ಟವಾದ ಧ್ಯೇಯಗಳನ್ನು ಶ್ಲಾಘಿಸಿದರು ಮತ್ತು ಕಾಂಗ್ರೆಸ್ಸು ಅಧಿಕಾರ [illegible] ಸುವಂತೆ ಮಾಡುವ ಗಾಂಧಿಜಿಯವರ ಆಕಾಂಕ್ಷೆಯನ್ನು ಅವರ ಭಾಷಣದಿಂದ ತಿಳಿದು ಬರುವುದನ್ನು ಸೂಚಿಸಿದರು. ಗವರ್ನರರ ಮಂತ್ರಿಗಳೊಳಗೆ ಅಭಿಪ್ರಾಯಭೇದ ಬಂದಾಗ ಗವರ್ನರರು ಮಂತ್ರಿಗಳನ್ನು ಡಿಸ್‌ಮಿಸ್ ಮಾಡುವುದು ತುಂಬಾ [illegible] ಸೂಚನೆ ಎಂದೂ ಹೇಳಿದರು. ಈ ವಿಷಯದ ಅಭಿಪ್ರಾಯ ಬೇಧವು ಸರಕಾರ ಮತ್ತು ಕಾಂಗ್ರೆಸ್ಸಿನ ಮಧ್ಯದಲ್ಲಿ ನಿಲ್ಲಿಸಲ್ಪಟ್ಟ ಸ್ಪರ್ಧಾ-ಬೇಧಾಸ್ಪದವಾದ ವಿಷಯವಾಗಿದೆ.

ಕಾಂಗ್ರೆಸ್ಸಿನ ವಿಚಾರ ಕಾಂಗ್ರೆಸ್ಸಿನೊಂದಿಗೆ ಮಾತಾಡಬೇಕು.

ಲ್ಯಾನ್ಸ್‌ಬರಿಯವರು ಮಾತಾಡುತ್ತಾ, ಸರಕಾರವು ಕಾಂಗ್ರೆಸ್ಸಿನ ವಿಚಾರ ಮಾತನಾಡುತ್ತದೆ. ಆದರೆ ಕಾಂಗ್ರೆಸ್ಸಿನೊಡನೆ ಮಾತನಾಡುವುದಿಲ್ಲ ಎಂದು ಗಾಂಧಿಜಿಯವರು ಹೇಳಿದ ಮಾತುಗಳು ಸಂಪೂರ್ಣ ಸತ್ಯವಾದುವು. ಹೇಗೆಂದರೆ "ಭಾರತದ ರಾಜಕೀಯ ಪ್ರವೀಣರಿಗೆಲ್ಲ ಬ್ರಿಟಿಷ ಸರಕಾರದ ಮೇಲೆ ಭರವಸೆ ಇಲ್ಲ. ಅವರಲ್ಲಿನ ಈ ಭಾವನೆಯನ್ನು ಹೋಗಲಾಡಿಸಿ, ನವರಾಜ್ಯಶಾಸನವು ಉಪಯುಕ್ತವಾಗಿ ಕೆಲಸಮಾಡುವಂತೆ ಮಾಡಬೇಕೆಂದು ನಾನು ಆಶಿಸುತ್ತೇನೆ. ಕಾಂಗ್ರೆಸ್ಸಿಗೆ ಈ ರಿಯಾಯಿತಿಯನ್ನು ತೋರಿಸುವುದು ನ್ಯಾಯವನ್ನು ಮೀರಿದುದಲ್ಲ" ಎಂದು ಲ್ಯಾನ್ಸ್‌ಬರಿಯವರು ಮುಗಿಸಿದರು.

ಸರಕಾರವು ತುಂಬಾ ಆತುರವುಳ್ಳದ್ದಾಗಿದೆ

"ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಬೇಕೆಂದು ಬ್ರಿಟಿಷ ಪಾರ್ಲಿಮೆಂಟ್ ತುಂಬಾ ಆತುರಪಡುತ್ತದೆ. ಶಾಸನ ಸಭೆಗಳನ್ನು ಬೇಗನೇ ಕರೆದಾಗ, ಕಾಂಗ್ರೆಸ್ ಅಧಿಕಾರ ಸ್ವೀಕರಿಸುತ್ತದೆಂದು ನಾವೆಲ್ಲರೂ ಹಾರೈಸುತ್ತೇವೆ. ಶಾಸನ ಸಭೆಗಳನ್ನು ಕೂಡಿಸಿ ಕಾಂಗ್ರೆಸು ಅಧಿಕಾರವನ್ನು ಸ್ವೀಕರಿಸುವಂತೆ ಮಾಡಲು ತುಂಬಾ ಚರ್ಚೆಯೂ ಆಲೋಚನೆಯೂ ಬೇಕಾಗಿದೆ. ಶಾಸನಸಭೆಗಳನ್ನು ಕರೆಯುವ ಮೊದಲು ಗವರ್ನರರು ಕಾಂಗ್ರೆಸ್ ಮುಖಂಡರೊಡನೆ ಒಂದು ತರದ ಒಪ್ಪಂದಮಾಡಿಕೊಳ್ಳಬೇಕಾಗಿದೆ. ಆದುದರಿಂದ ಶಾಸನ ಸಭೆಗಳನ್ನು ಕರೆಯುವ ಮೊದಲೇ ಗವರ್ನರರು ಕಾಂಗ್ರೆಸ್ಸಿನೊಡನೆ ಸಂಪೂರ್ಣ ಮಾತುಕತೆಗಳನ್ನು ನಡೆಸಬೇಕಾಗಿದೆ" ಹೀಗೆಂದು ಲಾರ್ಡ್ ಸ್ಟ್ಯಾನ್ಲಿಯವರು ಕಾಮನ್ಸ್ ಸಭೆಯಲ್ಲಿ ಸರಕಾರದ ಒಪ್ಪಂದ ಉದ್ದೇಶವನ್ನು ತಿಳಿಸಿದರು.

ಒಪ್ಪಂದಕ್ಕೆ ಸಂತೋಷ— ಸರಕಾರದೇ ಮುಂದೆ ಬಂದು ಕಾಂಗ್ರೆಸ್ಸನ್ನು ಎದುರುಗೊಳ್ಳಬೇಕೆಂದು ಲ್ಯಾನ್ಸ್‌ಬರಿಯವರ ಸೂಚನೆಗೆ ಉತ್ತರವೀಯುತ್ತಾ ಲಾರ್ಡ್ ಸ್ಟ್ಯಾನ್ಲಿಯವರು ಸರಕಾರಕ್ಕೆ ಆ ಸೂಚನೆಯಲ್ಲಿ ತುಂಬಾ ಸಂತೋಷವಿದೆ ಎಂದರು.

ಕಾಂಗ್ರೆಸ್ ಮುಂದಾಳುಗಳ ಭೇಟಿ: ವಂದಿಸುತ್ತಾ ಸ್ಟ್ಯಾನ್ಲಿಯವರು ಹೀಗೆಂದರು. ಕಾಂಗ್ರೆಸ್ಸಿನ ಆಧ್ಯಮುಖಂಡರನ್ನೆ ಸರಕಾರವು ಕರೆಸಿ ಮಾತುಕತೆಗಳನ್ನು ನಡೆಸಬೇಕೆಂದು ಲ್ಯಾನ್ಸ್‌ಬರಿಯವರ ಅಭಿಪ್ರಾಯ. ಆದರೆ ಆಯಾ ಪ್ರಾಂತ್ಯಗಳಲ್ಲಿನ ಗವರ್ನರರೇ ಅಲ್ಲಿನ ಕಾಂಗ್ರೆಸ್ ಮುಖಂಡರನ್ನು ನೋಡುವುದೇ ಸರಿಯಾದ ದಾರಿ ಎಂದು ಲಾರ್ಡ್ ಜೆಟ್ಲೆಂಡರು [illegible] ಮಂತ್ರಿಗಳ ಕೆಲಸವನ್ನು ಸದಾ ವಿಮರ್ಶಿಸುವುದೇ ಗವರ್ನರರ ಕೆಲಸವಲ್ಲ. [illegible] ಮಂತ್ರಿಗಳ ಅಗಲಿ ಒಮ್ಮೊಂದಿಗೆ ಸಹಕರಿಸಿ ಸ್ನೇಹ ಬೆಳೆಸುವುದೇ ಗವರ್ನರರ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಉದ್ದೇಶದಿಂದ ಎಲ್ಲರೂ ನವರಾಜ ಶಾಸನವನ್ನು ಕಾರ್ಯದ ಪಕ್ಕೆ ತಂದರೆ ಪ್ರಾರಂಭ ಖಂಡಿತವಾಗಿ ದೊರಕುವುದು.

ಮಹಾತ್ಮಜಿಯವರು

ಈ ವರ್ಷದ ಲೋಕೀಯ ಉತ್ಸವ [illegible] ಸಮ್ಮೇಳನ ಗಳು ಕಾಂಗ್ರೆಸ್ ಅಧಿಕಾರ ಸ್ವೀಕರಿಸಿ ಆತ ಕಾರ್ಯ [illegible] ಮಹಾತ್ಮರು [illegible] ದ್ದೇಶ ವಿಷ್ಣು ಎಂದ ಬೇಡಿಕೆಯು ಸರಕಾರ ಕಾಂಗ್ರೆಸ್ಸಿನೊಳಗಿನ ಬಿಕ್ಕಟ್ಟನ್ನು ಬಿಡಿಸಿಕೊಳ್ಳುವಂತಹದಿದ್ದರೂ, ಲಾರ್ಡ್ ಜೆಟ್ಲೆಂಡರು ಹೌಸ್ ಆಫ್ ಕಾಮನ್ಸಿನಲ್ಲಿ ಮಾಡಿದ ಹೇಳಿಕೆ ಗವರ್ನರ್ ಮಂತ್ರಿಗಳ ಮಧ್ಯೆ ಬಿಕ್ಕಟ್ಟು ಬಂದರೆ ಗವರ್ನರರು ಮಂತ್ರಿಗಳಿಗೆ ರಾಜೀನಾಮೆ ಕೊಡುವಂತೆ ಕೇಳಿಕೊಳ್ಳುವುದು ಕೂಡಾ ನವರಾಜ ಶಾಸನಕ್ಕೆ ವಿರೋಧವಾದದ್ದೆಂದು ತಿಳಿಸಿ, ಮಹಾತ್ಮರ ಕಲ್ಪನೆಯನ್ನು ನಿರಾಕರಿಸಿದರು. ಮಹಾತ್ಮರ ಕಲ್ಪನೆಯ ಈ ಹೇಳಿಕೆಗಳನ್ನು ಕೂಡಾ ಸರಕಾರವು ನಿರಾಕರಿಸಿದ್ದರಿಂದ ಬ್ರಿಟಿಷ ಆಡಳಿತದ ಅಂತಸ್ಯ ಉದ್ದೇಶವನ್ನು ಪರೀಕ್ಷಿಸುವ ಭಾರತದೊಳಗಿನ ವೃತ್ತಪತ್ರಿಕೆಗಳು ಬಿರುಸಾದ ಟೀಕೆಗಳ ಮುಖಾಂತರ ಬಯಲಿಗೆಳೆವವು.

ಇಟಲಿ ಸಾಮ್ರಾಜ್ಯ ಜಾಹೀರಾಯಿತು [illegible] ಇಟಲಿಯು ಈ ವರ್ಷ ೩೨ ಯುದ್ಧದ ಹಡಗುಗಳನ್ನು ಕಟ್ಟುವುದಂತೆ. ಕಳೆದ ವರ್ಷ ಸುಮಾರು ೩೦ ವಿವಿಧ ತರದ ಯುದ್ಧನಾವೆಗಳು ಇಟಲಿಯಲ್ಲಿ ಕಟ್ಟಲಾಗಿದ್ದುವು. ತನ್ನ ಧೋರಣೆಗೆ ಎಂದಾದರೂ ಪ್ರತಿಕೂಲ ಬರಬಹುದೆಂದು ಅರಿತೇ ಇದ್ದ ಇಟಲಿಯು ತನ್ನ ಭದ್ರತೆಯನ್ನು ನೋಡುವುದು ಸ್ವಾಭಾವಿಕವಾದುದು. ಮುಸೋಲಿನಿಗಾದರೂ ಇದರ ಪ್ರಾಮುಖ್ಯತೆ ತಿಳಿದೇ ಇದೆ. ಈಗಾಗಲೇ ಅಬಿಸೀನಿಯದ ಪ್ರಕರಣವು ಮುಗಿದಂತಾಗಲಿಲ್ಲ. ಜ್ವಾಲಾಮುಖಿ ಒಡೆದಂತೆ ಅದು ಯಾವ ಕಾರಣದಿಂದಾದರೂ ಹೊರಗೆ ಬಂದೇ ಬರುತ್ತದೆ. ಅಫ್ರಿಕಾದಲ್ಲಿ ವಸಾಹತುಗಳಿದ್ದ ಅನೇಕ ಪರಕೀಯ ಜನಾಂಗಗಳೊಳಗೆ ವೈರವನ್ನು ಬೆಳೆಯುತ್ತಲೇ ಇದೆ ಎಂದು ರಾಜನೀತಿ ಪ್ರವೀಣರು ಅಭಿಪ್ರಾಯಪಡುತ್ತಾರೆ.

ಬ್ರಿಟನಿಗೆ ಅಬಿಸೀನಿಯದಲಿ ರಿಯಾಯಿತಿಗಳಿಲ್ಲ.

ಇಟಲಿಯ ಯುದ್ಧಸನ್ನಾಹ.

ಜರ್ಮನಿಯಲ್ಲಿ ರಬ್ಬರಿಗೆ ತೆರಿಗೆ ಹೆಚ್ಚು.

ಇಟಲಿಯನ್ ಮತ್ತು ಬ್ರಿಟಿಷ್ ಸರಕಾರದೊಳಗೆ ಬಹುಕಾಲದಿಂದ ನಡೆಯುತ್ತಿದ್ದ ಮಾತುಕತೆಗಳು ನೆನ್ನೆ ತಾ ೧೫ರಲ್ಲಿ ಮುಕ್ತಾಯಗೊಂಡವು. ಮಾತುಕತೆಗಳ ವಿಷಯವು ಬ್ರಿಟಿಷ್ ಮಿಶನರಿಗಳ ಕುರಿತಾಗಿದೆ. ಬ್ರಿಟಿಷ್ ಮಿಶನರಿಗಳು ಅಬಿಸೀನಿಯದಲ್ಲಿ ಯಾವುದೇ ತರದ ಪ್ರಚಾರ ಕಾರ್ಯವನ್ನು ಮಾಡಲು ಬಿಡಲ್ಪಡುವುದಿಲ್ಲವೆಂಬ ಇಟಲಿಯ ನಿರ್ಧಾರವು ಇಂಗ್ಲೆಂಡನ್ನು ಎಚ್ಚರಗೊಳಿಸಿದೆ. ಬ್ರಿಟಿಷ್ ಕ್ರೈಸ್ತ ಮಿಶನರಿಗಳು ಅಬಿಸೀನಿಯಾದಲ್ಲಿ ಮುಂಚಿನಿಂದಲೂ ವಿದ್ಯಾಪ್ರಚಾರ, ವೈದ್ಯ ಪ್ರಚಾರ ಕಾರ್ಯವನ್ನು ನಡೆಯಿಸುತ್ತಲಿದ್ದರು. ಕೆಲವು ದಿವಸಗಳ ಹಿಂದೆ ಇಟಲಿ ಸರಕಾರವು ಮಿಶನರಿಗಳನ್ನು ಅಬಿಸೀನಿಯದಿಂದ ಹೊರ ಹಾಕಿತು. ಅಬಿಸೀನಿಯಾದಲ್ಲಿ ಮುಖ್ಯವಾಗಿ ಬ್ರಿಟಿಷ ಮಿಶನರಿಗಳು ಶಾಲೆಗಳನ್ನು ಸ್ಥಾಪಿಸಿ ವಿದ್ಯಾಪ್ರಚಾರ ಮಾಡುವುದರಲ್ಲಿ ಇಟಲಿ ಸರಕಾರಕ್ಕೆ ಒಪ್ಪಿಗೆ ಇಲ್ಲ. ಕಾರಣ ಇಂಗ್ಲಿಷ್ ಶಾಲೆಗಳಲ್ಲಿ ಇಟಲಿಗೆ ವಿರೋಧ ಅಭಿಪ್ರಾಯಗಳನ್ನು ಈ ಮಿಶನರಿಗಳು ಉಂಟುಮಾಡಬಹುದೆಂದು ಇಟಲಿಯ ಆಕ್ಷೇಪ.

ಜರ್ಮನಿ:—ಇಲ್ಲಿಗೆ ಆಮದಾಗುವ ರಬ್ಬರಿನ ಮೇಲೆ ಇದ್ದ ತೆರಿಗೆಯನ್ನು ಮೂರು ಪಾಲಿಗೆ ಏರಿಸಿರುತ್ತಾರೆ. "ಸಿಂಥೆಟಿಕ ರಬ್ಬರ್" ಎಂಬ ಸಾಯನಿಕ ರೀತಿಯಿಂದ ಒಂದು ತರದ ಕೃತಕ ರಬ್ಬರು ಜರ್ಮನಿಯಲ್ಲಿ ತಯಾರಾಗುತ್ತದೆ. ಇದನ್ನೆ ಪ್ರಚಾರಗೊಳಿಸಲು ಜರ್ಮನಿಯು ಹೊಸ ಉಪಾಯವಿದು. ತೆರಿಗೆ ಹೆಚ್ಚಿದ ಕಾರಣದಿಂದ ಹೊರಗಿನಿಂದ ಬಂದ ರಬ್ಬರಿನ ಬೆಲೆಯು ಹೆಚ್ಚಿ, ಆದ ಮಾರಾಟಕ್ಕೆ ಅನುಕೂಲವಾಗದೆ ತಾನಾಗಿ ನಿಂತು ಹೋಗುತ್ತದೆಂದು ಹಿಟ್ಲರನಿಗೆ ತಿಳಿದೇ ಇದೆ. [illegible] ಎಲ್ಲಾ ತರದ ಆವಶ್ಯ ಪದಾರ್ಥಗಳನ್ನು ಜರ್ಮನಿಯಲ್ಲಿಯೇ ತಯಾರಿಸುವ ಒಂದು [illegible] ಮುಖ್ಯಾಂಗವೆಂದು [illegible] ಜನಾಂಗಗಳ ಮೇಲೆ ಹೊಂದಿಕೊಂಡ [illegible] ಅವಶ್ಯಕತೆ ಇಲ್ಲವಿದ್ದ [illegible] ರಬ್ಬರಿನ [illegible] ಎನ್ನುವ ವಂದೆ ಪತ್ರಿಕೆ ಕಲ್ಪಿಸಿದ್ದಲ್ಲ. ಅತ ರ ಪದಾರ್ಥಗಳ ಎಲ್ಲವೂ ಜರ್ಮನಿಯಲ್ಲಿಯೇ ಸಿಕ್ಕುವಂತಾಗುವಂತೆ ವಿಜ್ಞಾನಿಗಳು ಬಹಳ ಪರಿಶ್ರಮದಿಂದ ವೈಜ್ಞಾನಿಕ ಮಂದಿರಗಳಲ್ಲಿ ರಾತ್ರಿ ಹಗಲು ಶೋಧನೆಗಳಲ್ಲಿ ಮಗ್ನರಾಗಿದ್ದಾರೆ. ಜರ್ಮನಿಯಲ್ಲಿ ಯುದ್ಧ ಸಾಮಗ್ರಿಗಳನ್ನು ತಯಾರಿಸುವಂಗಿ ಕಾರ್ಖಾನೆಗಳಿಗೆ ತೆರಿಗೆ ತುಂಬಾ ಕಮ್ಮಿ ಮಾಡಿರುತ್ತಾರೆ. ಮುಂದಿನ ಘೋರ ಯುದ್ಧಕ್ಕೆ ಬೇಕಾಗುವ ಪದಾರ್ಥ ಸಾಮಗ್ರಿಗಳನ್ನು ಜರ್ಮನಿಯು ತಯಾರಿಸಿ ಶೇಖರಿಸುವುದರಲ್ಲಿ ನಿರತವಾಗಿರುತ್ತದೆ.

ಈಡನ್ನರ ಸೂಚನೆ:—ಇಟಲಿಯ ವರ್ತನೆಯು ತುಂಬಾ ಅಧರ್ಮಕೃತ್ಯವಾದುದಲ್ಲದೆ ಆಕ್ರಮ ತತ್ವದಿಂದ ಪರದೇಶಾಂಗ ಮಂತ್ರಿಗಳಾದ ಎಂಟನಿ ಈಡನ್ನರು ಪಾರ್ಲಿಮೆಂಟಿನಲ್ಲಿ ಹೇಳಿದರು. ಇಟಲಿಯು ತನ್ನ ವಸಾಹತಿನಲ್ಲಿ ಬ್ರಿಟಿಷ್ ಮಿಶನರಿಗೆ ಅನುಮತಿ ಕೊಡದಿದ್ದರಿಂದ, ಇಟಲಿಯನ್ ಮಿಶನರಿಗಳಿಗೂ ಬ್ರಿಟಿಷ್ ವಸಾಹತುಗಳಲ್ಲಿ ಪ್ರಚಾರ ಕಾರ್ಯಕ್ಕೆ ಅನುಮತಿ ಕೊಡಬೇಕಾದರೆ ಹೀಗೆಯೇ ಮಾಡಲಾಗುವುದೆಂದೂ ಈಡನ್ನರು ತಿಳಿಸಿದರು.

ಐರ್ಲೆಂಡಿನ ನವರಾಜ ಶಾಸನ—ಐರ್ಲೆಂಡಿಗೆ ಕೊಡಲ್ಪಡುವ ನವರಾಜ ಶಾಸನವನ್ನು ಅಲ್ಲಿಯ ಕೌನ್ಸಿಲಿನಲ್ಲಿ ೩೩ ವೋಟುಗಳಿಂದ ಅನುಮೋದಿಸಲಾಯಿತು. ವಿರೋಧ ಪಕ್ಷದ ಮಿ। ಕೊಸ್ಗ್ರೇವ್ ನವರಾಜ ಶಾಸನವನ್ನು ಎಲ್ಲರೂ ಏಕಮುಖದಿಂದ ತಿರಸ್ಕರಿಸಬೇಕೆಂದು ಸೂಚಿಸಿದರು. ಡಿ ವೆಲೆರರು ಐರ್ಲೆಂಡ್ ಎಂಬ ಇಂಗ್ಲಿಷ್ ಹೆಸರನ್ನು ಬದಲಾಯಿಸುವುದನ್ನು ಇಲ್ಲವೆಂತಲೂ ಏಯರ್ ಎಂದು ದೇಶಭಾಷೆಯಲ್ಲಿ ಕರೆಯಲ್ಪಡಬೇಕೆಂದೂ ತಿಳಿಸಿದರು.

ಬರುವ ಜುಲೈ ತಿಂಗಳ ೧ರಲ್ಲಿ ಐರ್ಲೆಂಡಿನ ಚುನಾವಣೆಯು ನಡೆಯುವುದು.

ಜಪಾನಿಗೆ ವಿರೋಧ ದಂಗೆ:—ಮಂಚೂಕೋ ಪ್ರಾಂತ್ಯದ ಜಪಾನಿನ ವಶದಲ್ಲಿದ್ದ ಉತ್ತರ್ ಚೆಹಾರ್ ಎಂಬ ಚಿಕ್ಕ ಪ್ರಾಂತ್ಯವು ಮಂಚೂಕೋ ಸರಕಾರ ವಶವಿದ್ದಿತು. ಇಲ್ಲಿ ಕಳೆದ ತಾ ೧೪ರಲ್ಲಿ ಕೆಲವು ಚೀನಿಯರು ಜಪಾನಿಗೆ ವಿರೋಧವಾಗಿ ದಂಗೆ ಎದ್ದು ಅನೇಕ ಹಳ್ಳಿಗಳನ್ನು ವಶಪಡಿಸಿಕೊಂಡರು. ಜಪಾನರು ತಮ್ಮ ಸೇನೆಯನ್ನು ಪುನಃ ಕಳುಹಿಸಿಕೊಂಡು ದಂಗೆಯನ್ನು ತಡೆದರು. ದಂಗೆಕಾರರ ಕಡೆಯವರು ಕೆಲವರು ದ್ರೋಹ ಮಾಡಿದ ಪರಿಣಾಮವಾಗಿ ದಂಗೆಯು ಅಡಗಿಸಲಾಯಿತು.

ದಂಗೆಕಾರರ ವಶವಾಗುತ್ತಿರುವ ಬಿಲ್ಬಾವೋ ಪಟ್ಟಣವನ್ನು ಸರ್ವ ಪ್ರಯತ್ನಗಳಿಂದ ರಕ್ಷಿಸಬೇಕೆಂದು ಬಾಸ್ಕ್ ಪ್ರಭುತ್ವದವರು ನಿಶ್ಚಯಿಸಿದ್ದಾರೆ. ಕಳೆದ ವಾರ ದಂಗೆಕಾರರ ವಿಮಾನ ದಾಳಿಯಿಂದ ರಣಾಂಗದ ಕೆಲವು ಭಾಗಗಳು ಶತ್ರುವಶವಾಗಿದೆ. ಆದರೆ ಸಂಪೂರ್ಣ ವಿಜಯವು ದಂಗೆಕಾರರಿಗೆ ಆಗಲಿಲ್ಲವೆಂದು ಸರಕಾರದ ವರ್ತಮಾನವೊಂದು ತಿಳಿಸುತ್ತದೆ.

ಡಾ। ಪಿ. ಸುಬ್ಬರಾಯನ್‌ರವರು: ಲಂಡನ್ನಿನಲ್ಲಿ ನಡೆಯಲಿರುವ ಬ್ರಿಟಿಷ್-ಭಾರತೀಯ ವಾಣಿಜ್ಯ ವ್ಯವಹಾರದ ಮಾತುಕತೆಗಳಲ್ಲಿ ನಾನ್ ಅಫೀಶಿಯಲ ಪ್ರತಿನಿಧಿಯಾಗಿ ಭಾಗವಹಿಸಲು ಕರೆದ. ಭಾರತ ಇಂಗ್ಲೆಂಡಿಗೆ ಪ್ರಯಾಣಬೆಳೆಸಿದರು. ಇವರು ಮದ್ರಾಸು ಸರಕಾರದ ಮಾಜಿ ಮಂತ್ರಿಗಳಲ್ಲೊಬ್ಬರಾಗಿದ್ದರು. ಅಲ್ಲದೆ ಭಾರತ ಕ್ರಿಕೆಟ್ ಸಮಿತಿಯ ಒಬ್ಬ ಸದಸ್ಯರೂ ಆಗಿರುತ್ತಾರೆ. ಈಚೆಗೆ ಇಂಡಿಪೆಂಡೆಂಟ್ ಅಥವಾ ಸ್ವತಂತ್ರ

ಪಕ್ಷವನ್ನು ಸ್ಥಾಪಿಸಿ ಅದರ ಮುಖಂಡರಾಗಿದ್ದ ಸುಬ್ಬರಾಯನರು ಕಡೆಗೆ ಕಾಂಗ್ರೆಸ್ ಪಕ್ಷವನ್ನು ಸೇರಿ ಚುನಾಯಿತರಾದರು. ಶ್ರೀ। ರಾಜಗೋಪಾಲಾಚಾರ್ಯರು ಪ್ರಚಾರ ಕಾರ್ಯಕ್ಕೆ ಮಂಗಳೂರಿಗೆ ಬಂದಿದ್ದಾಗ ಸುಬ್ಬರಾಯನರವರು ಅವರ ಜೊತೆಯಲ್ಲಿದ್ದರು. ಸುಬ್ಬರಾಯನರ ಧರ್ಮಪತ್ನಿಯವರನ್ನು ಜಿಲ್ಲೆಯ ಸಾರಸ್ವತ ಮಹಿಳೆ, ದಂಪತಿಗಳಿಬ್ಬರೂ ಮುಂದರದ ಸಮಾಜ ಸುಧಾರಕರು. ಸತೀ ಸುಬ್ಬರಾಯನ್ನರು ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಭಾರತ ಮಹಿಳಾ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಹೋಗಿದ್ದರು.

(೨ನೇ ಪುಟದಿಂದ ಮುಂದುವರಿಸಿಯದೆ)

ಉಷ್ಣತೆಯನ್ನು ತಡೆಯಲಾಗಲಿಲ್ಲ. ಶೀತ ಪ್ರದೇಶಗಳಿಂದ ಮೃಗಾಲಯಕ್ಕೆ ತಂದ ಜಂತುಗಳನ್ನು ಹಿಮಗಡ್ಡೆಗಳಲ್ಲಿ ಕೂಡಿಸಿಟ್ಟ ಕೋಣೆಗಳಲ್ಲಿ ಭದ್ರವಾಗಿಡಲಾಯಿತು. ಇಡೀ ಯುರೋಪ್ ಖಂಡವು ೮೦ರಿಂದ ೯೮ ಡಿಗ್ರಿಗಳ ಉಷ್ಣತೆಯಲ್ಲಿ ನರಳುತ್ತಿದೆ. ಗುಂಟೂರಿನಲ್ಲಿ ಈ ತಿಂಗಳಲ್ಲಿ [illegible] ಡಿಗ್ರಿಗಳ ಉಷ್ಣತೆಯಿತ್ತು. ಈ ಹವಾಮಾನವು ಯುರೋಪಿನಲ್ಲಿದ್ದರೆ, ಇನ್ನೊಂದು ಮಹಾಯುದ್ಧದ ಅಗತ್ಯವೇ ಇಲ್ಲದೆಯೂ, ಯುದ್ಧಸನ್ನಾಹದ ತಯಾರಿಕೆಯು ಇಲ್ಲದೆಯೂ ಕೂಡಲೆ ನೆಮ್ಮದಿಯಾಗುತ್ತಿತ್ತು. ಸ್ಪೈಯಿನಿನಲ್ಲಿ ಯುದ್ಧವು ಒಂದೇ ಕ್ಷಣದಲ್ಲಿ ಮುಗಿಯುತ್ತಿತ್ತು.

೦ ೦ ೦ ೦

ಲೀಗ್ ಆಫ್ ನೇಶನ್ಸ್ ಆಫೀಸಿನಿಂದ ಈ ಉಷ್ಣತೆ ತಡೆಯುವುದಕ್ಕೆ ಸೂರ್ಯನಿಗೆ ನೋಟೀಸು ಕೊಡಲು ಒಂದು ಸಭೆ ಕರೆಯಬೇಕಾಗಿದೆ. ನಮ್ಮ ಬ್ರಿಟಿಷ ಮಂತ್ರಿ ಈಡನ್ ಸಾಹೇಬರು ಕೂಡಲೆ ಕಲೆಕ್ಟಿವ್ ಸೆಕ್ಯುರಿಟಿ ಸಾಮೂಹಿಕ ಭದ್ರತೆಯ ಸೂತ್ರವನ್ನು ಜ್ಯಾರಿಗೆ ತರಲು ನಿರ್ಣಯ ಮಾಡುತ್ತಾರೆ.

ಅನುಕ್ರಮಣಿಕೆ

[illegible] ೨
ಕಾಂಗ್ರೆಸ್ಸಿನೊಳಗೆ ಇನ್ನೊಂದು ಸಂಸ್ಥೆಯೆ? ೪
[illegible] ೫
ಅಗ್ರಲೇಖ
ಮುಂದೇನು? ೧೦
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ಮುಸಲ್ಮಾನರು ಕಾಂಗ್ರೆಸ್ಸಿನ [illegible] ೯
ವಿವಿಧ ಸಮಾಚಾರಗಳು ೧೧
ವಿಂಡ್ಸರ್ ದಂಪತಿಗಳು ೧೩
ಮಂಗಳೂರು ಸಮಾಚಾರ ೧೪
ತಾಲೂಕುಗಳಿಂದ ೧೫
ಇದನ್ನು ಗಮನಿಸುವರೋ ೧೬

ತಾ. ೧೮ನೇ ಶುಕ್ರವಾರ ಜೂನ್ ೧೯೩೭

ಸ್ವದೇಶಾಭಿಮಾನಿ.

ಮುಂದೇನು?

ಪಾರ್ಲಿಮೆಂಟಿನಲ್ಲಿ ಲೇಬರ್ ಪಕ್ಷದ ಮುಂದಾಳುಗಳಾಗಿರುವ ಲೇನ್ಸಬರಿಯವರು ಇಲ್ಲಿನ ಬಿಕ್ಕಟ್ಟನ್ನು ಕುರಿತಾಗಿ ಭಾಷಣ ಮಾಡುತ್ತ, ಇತ್ತಂಡಗಳೂ ತೀರ ಹತ್ತಿರಕ್ಕೆ ಬಂದಿರುವ ಈ ಸುಸಂದರ್ಭದಲ್ಲಿಯೇ, ವೈಸ್ರಾಯರು ಕೊಂಗ್ರೆಸ್ ಮುಖಂಡರನ್ನು ಕರೆಯಿಸಿಕೊಂಡು, ಮುಂದಿನ ರಾಜ್ಯಭಾರ ನಿರ್ವಹಣವನ್ನು ಕುರಿತಾಗಿ ಪ್ರಸ್ತಾಪಿಸಿ, ಈ ಸಮಸ್ಯೆಯನ್ನು ಇತ್ಯರ್ಥಿಸುವಂತೆ ಪಾರ್ಲಿಮೆಂಟಿನ ಸೂಚನೆಯಾಗುವಂತೆ ಬಹಳವಾಗಿ ಹೇಳಿಕೊಂಡರು. ಕೊಂಗ್ರೆಸಿಗೂ ಸರಕಾರಕ್ಕೂ ಈಗ ಹೆಚ್ಚಿನ ಅಭಿಪ್ರಾಯ ಭೇದವೇನೂ ಇಲ್ಲವೆಂಬಂತೆ ಕಾಣುತ್ತಿದೆಯೆಂದೂ, ಅಧಿಕಮತದ ಬೆಂಬಲವುಳ್ಳವರನ್ನು ಮಂತ್ರಿಗಳನ್ನಾಗಿ ಇರಿಸಿಕೊಳ್ಳದೆ ಪ್ರಜಾಸತ್ತೆ ಸ್ವರಾಜ್ಯಗಳೆರಡೂ ವ್ಯರ್ಥವಾಗುವ ಕಾರಣ, ಹೊಸ ರಾಜ್ಯಭಾರದ ಯೋಜನೆಯು ಪ್ರಾರಂಭದಲ್ಲೇ ನಿಷ್ಫಲವಾಗಿ ಪರಿಣಮಿಸುವುದೆಂದೂ ಅವರು ಎಚ್ಚರಿಸಿ ಆಕ್ಷೇಪಿಸಿದರು. ಹೀಗೆಯೆ ಕಾಲಹರಣ ಮಾಡುವುದರಿಂದ ಬ್ರಿಟಿಷರಲ್ಲಿ ಹಿಂದೀಯರಿಗೆ ಸ್ವರಾಜ್ಯ ಕೊಡಬೇಕಾಗಿರುವ ಅಭಿಪ್ರಾಯದಲ್ಲಿ ಸರ್ವರೂ ಸಂದೇಹವನ್ನು ಕಾಣುವರೆಂದೂ ಅವರು ಪಶ್ಚಾತ್ತಾಪ ಹೊಂದಿದರು.

ಸರಕಾರದ ಕಡೆಯಿಂದ ಲೋರ್ಡ ಸ್ಟೆನ್ಲಿಯವರು(ಹೊಸ ಉಪಸೆಕ್ರೆಟರಿಯವರು)ಉತ್ತರ ಕೊಡುತ್ತ, ಈ ವಿಷಯವಾಗಿ ಬಹಳ ಸೂಕ್ಷ್ಮವಾದ ಚರ್ಚೆಯು ನಡೆಯುತ್ತಿರುವುದು ಅಗತ್ಯವೆಂದೂ, ಅದು ಮುಗಿಯುವ ಮೊದಲೇ ಗವರ್ನರುಗಳು ಸಭೆಗಳನ್ನು ಕರೆಯಬೇಕಾಗಿ ಒತ್ತಾಯಪಡಿಸುವುದರಿಂದ ಹೆಚ್ಚಿನ ಕೆಡುಕುಂಟಾಗುವುದೆಂದೂ, ಅದರ ಬದಲು, ಗವರ್ನರರು ಕೊಂಗ್ರೆಸ್ ಮುಖಂಡರೊಡನೆ ಪರಾಮರ್ಶಿಸುತ್ತಿರುವುದು ಉತ್ತಮವೆಂದೂ, ಇದರಿಂದ ಸ್ವಲ್ಪ ವಿಳಂಬವಾದರೂ ಉತ್ತಮ ಪರಿಣಾಮವೇ ಉಂಟಾಗುವುದೆಂದೂ ತಮ್ಮ ಅಭಿಪ್ರಾಯ ಸೂಚಿಸಿದರು. ಕೊಂಗ್ರೆಸಿನ ಅಪೇಕ್ಷೆಯನ್ನು ಆಗುವಷ್ಟು ಹೆಚ್ಚಾಗಿ ಸಲ್ಲಿಸಲು ಸರಕಾರವು ತೀರ ಸಿದ್ಧರಾಗಿಯೆ ಇರುವರೆಂದೂ, ಆದರೆ ಪ್ರತಿ ಪ್ರಾಂತ್ಯದಲ್ಲಿಯೂ ಗವರ್ನರರು ಮತ್ತು ಕೊಂಗ್ರೆಸ್ ಮುಖಂಡರುಗಳೊಳಗೆ ಮಾತುಕತೆ ನಡೆಯುತ್ತಿರುವುದೇ ಉತ್ತಮವೆಂದೂ ಕೂಡಿಸಿಹೇಳಿದರು.

ಪಾರ್ಲಿಮೆಂಟಿನಲ್ಲಿ ಲೋರ್ಡ್ ಸ್ಟೆನ್ಲಿಯವರು ಈ ಹುದ್ದೆಗೆ ಬಂದ ತರುವಾಯ, ಇದೇ ಅವರ ಪ್ರಥಮ ಭಾಷಣ. ಭಾಷಣದಲ್ಲಿ, ಕರ್ಣನೇಕತೆನೆಕ್ಕಿಳುವಕರಣವಾಗಿರುವ ಮುಖ್ಯೊಜಾಲವನ್ನು ಹರಡಬಲ್ಲ ಉತ್ತಮ ಚಾತುರ್ಯವಿದೆ. ಸದ್ಯದಲ್ಲಿ ಹೆಚ್ಚಿನವರಿಗೆ ಇಂಡಿಯಾ ಎಂಥದ್ದೇ ತಿಳಿಯದ ಕಾಲದಲ್ಲಿ, ಈ ರೀತಿಯಾಗಿ ಭಾಷಣ ಮಾಡುವುದು ತುಂಬ ಉಪಯುಕ್ತವಾಗಿದೆ ನಾಜೂಕಾಗಿ ನಡೆಯಬೇಕೆಂಬ ಈ ತರ್ಕವು ಎಲ್ಲಿ ನಡೆಯುತ್ತಿದೆಯೋ ತಿಳಿದಿಲ್ಲ. ನಮಗೆ ಇವೆರಡು ತಿಂಗಳುಗಳಿಂದಲೂ ಒಬ್ಬರದೊಂದು ಭಾಷಣ, ಏಳು ಸಾವಿರ ಮೈಲು ಅಂತರದಲ್ಲಿ, ಮತ್ತೊಬ್ಬರದೊಂದು ಪ್ರತಿ ಭಾಷಣ ಹೀಗಾಗಿಯೆ ವಾದ ಪ್ರತಿವಾದಗಳು ಬೆಳೆಯುತ್ತಿರುವುದೇ ಓದಲು ಸಿಗುತ್ತಲಿದೆ. ಇದಲ್ಲದೆ, ಹಲವು ಹೇಳಿಕೆಗಳೂ ಇವುಗಳನ್ನು ಖಂಡಿಸುವ ಇತರ ಹೇಳಿಕೆಗಳೂ ಕೇಳಬರುತ್ತಲಿವೆ. ಈ ರೀತಿಯಾಗಿ ಬಹು ಕೋಮಲ ಸೂಕ್ಷ್ಮ ನಾಜೋಕು ಸಮಜಾಯಿಸುವಿಕೆ ನಡೆಯುತ್ತಲಿರುವುದೇ? ಕೊಂಗ್ರೆಸಿನ ಖಂಡಿತ ವಚನ, ಲೇನ್ಸಬರಿಯವರ ಖಂಡಿತ ಸ್ಪಷ್ಟ ಸೂಚನೆ ಇವುಗಳಂತೆ ಸೆಕ್ರೆಟರಿ ಅಂಡರ್ ಸೆಕ್ರೆಟರಿಯವರ ಭಾಷಣಗಳಲ್ಲಿ ಸ್ಪಷ್ಟತೆ ತೋರದಿರುವುದು ರಾಜತಂತ್ರದ ಪರಾಕ್ರಮವಲ್ಲವೆ?

ಗವರ್ನರರುಗಳು ಅಲ್ಲಲ್ಲಿನ ಪ್ರಾಂತಿಕ ಕೊಂಗ್ರೆಸ್ ಮುಂದಾಳುಗಳೊಡನೆ ಪರಾಮರ್ಶಿಸುವುದೇ ಉತ್ತಮೋಪಾಯವೆನ್ನುವಾಗ, ಈ ಪರಾಮರ್ಶೆ ನಡೆಯಲು ಯಾವ ಸೌಕರ್ಯವೂ ಸಲಕರಣೆಗಳೂ ಇಲ್ಲವೆನ್ನುವಂತೆ ಇಲ್ಲಿ ತೋರುತ್ತಿರುವುದೇಕೆ? ಮಹಾನುಭಾವ ಗವರ್ನರರುಗಳು ಆಯಾ ಪ್ರಾಂತ್ಯಗಳಲ್ಲಿ ನಾನಾ ಭಾಷಣಗಳನ್ನು ನಾನಾ ಬಗೆಯಾಗಿ ಮಾಡುತ್ತ, ಪರಿಸ್ಥಿತಿಯಲ್ಲಿ ಕಾಠಿಣ್ಯವನ್ನು ಘಟಿಸಿ ತೋರುತ್ತಿರುವುದುಂಟು. ಕೊಂಗ್ರೆಸಿನ ಹೇಳಿಕೆ, ಒಂದು ವಿಷಯದಿಂದ ಮತ್ತೊಂದಕ್ಕೆ ಮಾರ್ಗದೃಷ್ಟ ಆಲೋಚನಾಧಾರದ ತೂಕವು ಒಂದು. ಸಗತಿಯಿಂದ ಮತ್ತೊಂದಕ್ಕೆ ಒಲಿದಂತೆ ತೋರುವುದಾಗಿ ಸರಕಾರದ ಮುಕ್ಯಧಿಗಳ ಮಾತಿನಿಂದ ವ್ಯಕ್ತವಾದ ಆಕ್ಷೇಪಗಳೂ ಉಂಟು. ಪ್ರಾಂತಿಕ ಗವರ್ನರರು ಪ್ರಾ. ಕೊ. ಮುಖಂಡರನ್ನು ಕಂಡು ಮಾತಿತ್ತಿಲ್ಲ. 'ಡಿಸ್ಮಿಸ್ಸೊ'- ರಾಜೀನಾಮೆಯೋ' ಎಂಬ ತರ್ಕ ಇನ್ನೂ ಉಳಿದಿದ ಎರಡೂ ಸಮಾನವೆಂದಾಡುವ ಸೆಕ್ರೆಟರಿಯವರು ಹಾಗಿದ್ದಲ್ಲಿ 'ಡಿಸ್ಮಿಸ'ಗೆ ಒಪ್ಪಬಾರದೇಕೆ ಎಂದು ಕೇಳುವ ಕೊಂಗ್ರೆಸಿಗೆ ಉತ್ತರವಾಗಿ ಇಂಗ್ಲೆಂಡಿನಲ್ಲಿ 'ಅವೆರಡೂ ಪದ್ಧತಿಗಳು ಹಾಗೆ ಇರಲಿ, ಅಗತ್ಯ ಕಂಡಂತೆ ಮುಂದೆ ವರ್ತಿಸಬಹುದಲ್ಲದೆ, ಈಗಲೆ ಅದನ್ನು ನಿಸಂಟಾಗಿ ಹೇಳುವುದು ಉತ್ತಮ ರೀತಿಯಲ್ಲ' ಎಂದು [illegible] ಗವರ್ನರರು ಈ ವಿಚಾರವಾಗಿ ಕೊಂಗ್ರೆಸ [illegible] ಳುಗಳೊಡನೆ ಸಂಭಾಷಿಸಿ [illegible] ಬಾರದೇ?

ಮುಂದಣ ತಿಂಗಳ ಮೊದಲನೆಯ ವಾರದಲ್ಲಿ ಕೊಂಗ್ರೆಸಿನ ಕಾರ್ಯಕಾರೀ ಮಂಡಲವು ಸೇರುವುದು. ಅಲ್ಲಿ ಈ ವಿಷಯದ ಇತ್ಯರ್ಥವಾಗಬಹುದು, ಅದೇನೆಂದು ತಿಳಿಯುವ ತನಕ ಬಳಿಕ ಗವರ್ನರರು ಸಂಭಾಷಣೆಗೆ ತೊಡಗಬಹುದು ಎಂದ 'ಪ್ರೆಸ್ಟಿಜ್' ಪಕ್ಷದ ಅಭಿಪ್ರಾಯವಿದೆ. ಈ ಬಗೆಯ ಅಭಿಪ್ರಾಯಗಳಿಂದ ಫಲವಿಲ್ಲ. ಜನಸೇವೆಗಾಗಿ ಮುಂದೆ ಬಂದವರು, ಸರಕಾರ ಮುಂದರಿಯಲೆಂದು ತಲೆಕೊಟ್ಟವರು, ಮುಖ್ಯ ಪಕ್ಷದವರು ಹಿಂತೆಗೆದರೆಂದು. ಎರಡನೆ ಪಕ್ಷದವರಾಗಿ ಸೊಂಟಕಟ್ಟಿದವರು 'ಎಂಬಿತ್ಯಾದಿಯಾಗಿ ಅಲ್ಲಲ್ಲಿನ ತಾತ್ಕಾಲಿಕ ಮಂತ್ರಿಗಳು ತಮ್ಮ ಹಿರಿಯತನವನ್ನು ಕೊಂಡಾಡಿಕೊಳ್ಳುತ್ತಿರುವ ಪ್ರಸಂಗದಲ್ಲಿ, ಯಾರ ಪ್ರೆಸ್ಟಿಜಿಗೂ ಹಾನಿಯಿಲ್ಲವಷ್ಟೆ. ಇನ್ನೇಕೆ, ಗವರ್ನರರಾಗಲಿ ಕೊಂಗ್ರೆಸಾಗಲಿ ಈ ಪರಾಮರ್ಶೆ ಮಾಡಲು ವಿಳಂಬಿಸಬಾರದೆಂದು ಸೆಕ್ರೆಟರಿಯವರು ಸೂಚಿಸುವುದರಿಂದ ತಪ್ಪಾಗುವ ಬೆದರಿಕೆಯುಂಟೆ?

ಸ್ಫುಟವಿಚಾರಗಳು

ಖಜಾನಾ ಮಂತ್ರಿಗಳು

ಮುಂಬಾಯಿಯಲ್ಲಿ ಸೇರಿದರು ಇತರ ವಿಷಯಗಳಲ್ಲಿ ಮುಖ್ಯವಾಗಿ ಮುಂದಣ ಚುನಾವಣೆಗಳಲ್ಲಿ ಕೊಂಗ್ರೆಸನ್ನು ಸೋಲಿಸುವುದಕ್ಕೆ ಸುಮಾರು 50 ಕೋಟಿಗಳ ಖರ್ಚು ಮಾಡಬೇಕಾದೀತೆಂದು ಅಂದಾಜ ಹಾಕಿದರೆಂದು ತಿಳಿದು ಬರುತ್ತದೆ. ಈ ವ್ಯರ್ಥ ಲೆಕ್ಕ ಗುಣಿಸಿ ಕೂಡಿಸುವುದರಲ್ಲಿ ಕಾಲಹರಣ ಮಾಡುವುದಕ್ಕಿಂತಲೂ ಹೆಚ್ಚಿನ ಉಪಯೋಗದ ಬೇರೆ ಉದ್ಯೋಗವು ಇವರಿಗೆ ಇದ್ದಿಲ್ಲವೆ? ಹಣವನ್ನು ಉತ್ಪನ್ನ ಮಾಡುವ ನಾಲ್ಕು ಉಪಾಯಗಳಲ್ಲಿ ಮೂರು ಉಪಾಯಗಳು ನಾಗಲಾರವೆಂದು ಶ್ರೀ ಮೋಧಾ (ಮುಂಬಾಯಿ ಮಂತ್ರಿಯವರು) ಸಿದ್ಧರಿಸಿ, ಹೊಸ ತೆರಿಗೆಗಳನ್ನು ವಿಧಿಸುವ ನಾಲ್ಕನೆಯ ಉಪಾಯವನ್ನು ಸೂಚಿಸಿದರು. ಆದರೆ, ಎಷ್ಟು ಹೊರಿಸಬಹುದೋ ಅಷ್ಟು ಒಟ್ಟಿಗೆ ತೆರಿಗೆ ವಿಧಿಸಲಾಗಿರುವುದನ್ನು ತಿಳಿದು ಎಲ್ಲ [illegible] ಯುಂಟಾದರು. ಖರ್ಚಿಗೆ ಹಣವೇ ದೊರೆಯದ [illegible] ವಾಗ, ಮಂತ್ರಿಗಳಾಗಿ ಬಾಳುವುದೆಂತ? ಅಧಿಕಮತವು ದೊರೆಯದೆ ಮಂತ್ರಿಗಳಾಗ [illegible] ಕಷ್ಟ. ಹಾಗೆ ಅಧಿಕ ಮತ ದೊರೆವಂತೆ ವೋಟರರನ್ನು ಒಲಿಸಿಕೊಳ್ಳುವುದು ಸುಲಭವಲ್ಲ. ಎಷ್ಟು ಹಣ ವ್ಯಯಿಸಿದರೆ ತಾನೆ ವೋಟರರನ್ನು ಒಲಿಸಿಕೊಳ್ಳಬಹುದೆಂಬುದನ್ನು [illegible] ಗುಣಿಸಿ 50 ಕೋಟಿ ರೂಪಾಯಿಯ [illegible] ಗನ್ನು ಕಂಡುಹಿಡಿದರು. ವೋಟರ [illegible] ಸಿನ ಕಡೆಗೆ ತೋರಿಸಿರುವ ವಾತ್ಸಲ್ಯದ [illegible] ಕಷ್ಟ ಪಕ್ಕಕ್ಕೆ ಇಷ್ಟಾದರೆ [illegible] ದು ಮಂತ್ರಿಗಳೇ ಅವರಿಗೆ [illegible] ಹೇಳಿದಂತಾಯಿತು. ಈ ವ್ಯಕ್ತಿಗಳ [illegible] ಅವರ ಸೌಖ್ಯವೂ ಹೆಚ್ಚುವುದು [illegible] ತರ, ಇದುವರೆಗೆ ಈ ದೇಶದ [illegible] ಗಳಿಗೆ ಹೋದ ಹಣಕ್ಕಿಂತ [illegible] ಈ ಪಕ್ಷಪಾತಕ್ಕೆ ಒಪ್ಪುವುದು. ಅದು [illegible] 500 ಕೋಟಿ ರೂಪಾಯಿಗಳಷ್ಟು ಪ್ರತಿ [illegible] ಕ್ಕೆ ಆಗ ಪುದೆಂದ [illegible]

ಪಂಡಿತ ಮಂಡಲದಲಿ ಶಾಸ್ತ್ರೀಯರ ಬೋಧನೆ

ಪಂಡಿತರು ಹಳೆಯವರ ಕಿರಿದೆ, ತಮ್ಮ ದ ಸ್ಥಾನವನ್ನು ಶಿಷ್ಯರಿಗೆ ಸ್ಥಾಪಿಸಿಕೊಳ್ಳಬೇಕೆಂದ ಮಾನ್ಯ ಶ್ರೀನಿವಾಸ [illegible] ವರ ವೇದನೆ. ಪಂಡಿತರು ತಲೆಗೆ [illegible] ಇಟ್ಟುಕೊಂಡ ಕ್ರಿಕೆಟ್ [illegible] ಗಳನ್ನಾಡುತ್ತಲಿದ್ದು, ಹೊರ ರೀತಿಗಿಂತ ಅಂತರಂಗ [illegible] ತಮ್ಮ ನವವಿಚಾರಗಳನ್ನು ಇಟ್ಟುಕೊಂಡರೆ [illegible] ವಾದವ ಅವರು [illegible] ದೂರ [illegible] ಎಂದ ಸೂಚನೆಗಳು ಪಂಡಿತರಲಿ ಇಂತಹ [illegible] ಗಳವರ ಅವರ ಮತ್ತೆ ಪಂಡಿತರಾಗಿಯೂ ಉಳಿದಾರೆ? ಪಂಡಿತರ [illegible] ನಗುವವರಿಲ್ಲಿ, ಹಾಗಿದ್ದರೂ ಪಂಡಿತರ ಪಂಡಿತರೇ ಅವರ ಸ್ಥಾನಮಾನಗಳನ್ನು ಆಕಮಿಸಲು ಇತರರು ಶಕ್ತರಾಗಿಲ್ಲ [illegible] ಭಾರತಗಳು ಕಟ್ಟುಕಥಗಳೆಂದೂ ಚಿತ್ರಶ್ರಾದ್ಧವು ಹಳೆಯ ಧರ್ಮಾಂಧತೆಯೆಂದೂ ನಂಬುತ್ತ ಕ್ರಿಕೆಟ್ ಆಡುತ್ತಿರುವ ಕ್ರೋಪ್‌ದಾರಿಯಾಗಿರುವ ಪಂಡಿತನೊಬ್ಬನು, ಪಂಡಿತನೆನಿಸದೆ ಸಂಸ್ಕೃತ ಅಸಿಸ್ಟಾಂಟನೆಂದು ಶಾಲೆಗಳಲ್ಲಿ ಸ್ಥಾನ ಹೊಂದುವನು. ಪಂಡಿತಗಿರಿಯನ್ನು ಹತ್ತುವುದಕ್ಕೆ ಬೇಕಾಗುವ ಕಾಲ ಮತ್ತು ಪ್ರಯತ್ನಗಳ ಬೆಲೆಯನ್ನಾದರೂ ಈ ಸ್ಥಾನಮಾನಗಳು ಹಿಂತೆರಲಾರವು, ಗಳಿಸಿಕೊಡಲಾರವು. ಪಂಡಿತರಾದವರು ಹಣವನ್ನು ಗಣನೆಗೆ ತರುತ್ತಿಲ್ಲವಾದರೂ ಹಣಕ್ಕೆ ಬೆಲೆ ಕಟ್ಟುವ ಸಮಾಜದಲ್ಲಿ ಅವರಿರುವ ಪ್ರಯುಕ್ತ, ಈ ರೀತಿಯಾಗಿ ತೃಣಸಮಾನರಾಗಬೇಕೆ? ಸೆಲೂನು, ಧೋಭೀಖಾನೆಗಳಿಗೆ ಅವರಿಂದ ಹಣ ಸಲ್ಲುತ್ತಿಲ್ಲ, ಸಿಗರೇಟ್ ಮದ್ಯಗಳೂ ಅವರನ್ನು ಮೋಹಿಸಿಲ್ಲ. ಅವರ ಜ್ಞಾನವು ಪುರಾತನವಾಗಿದೆ ನಿಜ, ಆದುದರಿಂದಲೆ ಅಷ್ಟು ವ್ಯಯಿಸದೆ ಅವರು ಅದನ್ನು ಕಡೆದೂ ಸಾಮಾನ್ಯವೇತನದಲ್ಲಿ ಜೀವಿಸಿಯೂ, ಪುರಾತನ ಅಗಾಧ ಜ್ಞಾನದ ನಿಧಿಗಳಾಗಿ ಬಾಳುತ್ತಾರೆ. ಅವರಿಂದ ಉಪಕಾರ ಪಡೆಯುವವರನ್ನವರಿಗೆ ನಿದಾಕ್ಷಿಣ್ಯವಾಗಿ ಉಪಕಾರ ಮಾಡುತ್ತಿರುತ್ತಾರೆ. ಶಾಸ್ತ್ರಿಯವರು, ಅವರು ಹೀಗಿದ್ದು ಜ್ಞಾನ ಭಾಂಡಾಗಾರಗಳಾಗಬೇಕೆಂದೂ, ಅದರ ಅವರಿಗೆ ಒಪ್ಪಕೊಡಬೇಕೆಂದೂ ಎಣಿಸಿದಂತಿದೆ. ಇದ ಸಾಧ್ಯವಾಗದ, ಹೊಸ ಪಾಲಿಸಿಯಿಂದ ಮಿರುಗುಕೂಡಲು ಪ್ರಯತ್ನಿಸಿ, ಅವರ ಭಂಡಾರವನ್ನು ದುರ್ಬಲಿಸಬಹುದು, ಅಥವಾ ಇತರ ವಿರಗಿನ ಒಡವೆಗಳಿಂದ ಅವರ ಸೌಖ್ಯವನ್ನು ಇಳಿಸಬಹುದು. ಪಂಡಿತರು ಪಂಡಿತರಾಗಿಯೆ ಇರುವಷ್ಟಕ್ಕೆ ಅವರ ಗೌರವಕ್ಕೆ ಕುಂದಿಲ್ಲ.

ತೀರ್ವೆ ಇಳಿಸುವುದು

ರೈತರಿಗೆ ಒಪ್ಪಿಸಿನ ಹಿಡುವಳಿಗಾರರಲ್ಲಿ ಸೇಂದಿ [illegible], ರೂಪಾಯಿ ಹತ್ತಕ್ಕಿಂತ ಕಡಿಮೆ ಕಂದಾಯ ತೆರುವವರ, ಸೇಕಡಾ [illegible] ಕ್ಕೆ ಮಿಕ್ಕಿ ತೀರ್ವೆ [illegible] ಹೀಗಿರುವುದರಿಂದ, ರೂಪಾಯಿ [illegible] ತೀರ್ವೆ ಇಳಿಸಿ [illegible] ಆದರಿಂದ ರೈತರಿಗೆ ಹೆಚ್ಚಿನ ಉಳಿತಾಯ [illegible] ಈ ರಿಯಾಯಿತಿಯ ಕ್ರಮವು ವ್ಯರ್ಥ [illegible] ಚಿಕ್ಕ ತುಂಡ ಹಿಡುವಳಿಗಳ ಮೇಲೆ ತೀರ್ವೆ ವಿಧಿಸ [illegible] ದವರ [illegible] ಹಿಡುವಳಿಗಳು ಈ ತರಗತಿಗೆ [illegible] ಹೀಗಾಗಿ, ಒಟ್ಟು ತೀರ್ವೆ [illegible] ಹೆಚ್ಚಿನ ಅಂಶವು ಇಂತಹ ಹಿಡುವಳಿಗಳಿಂದಲೇ ಕೂಡಿ ಬರುವುದಾಗಿದೆ, ಇದರ [illegible] ಹಿಂದೂಗಳ ಅವಿಭಕ್ತ ಕುಟುಂಬ ಕ್ರಮದಂತೆ ದೊಡ್ಡ ಜಮೀನುದಾರಿಗಳು ಹೀಗ ತುಂಡರಿಸಿ ಬರುವ ಪ್ರಯುಕ್ತ ಎಲ್ಲವೂ ತುಂಡುಭೂಮಿಗಳಾಗಿ, ಕೊನೆಗೆ [illegible] ತೀರ್ವೆ ವಿಧಿಸಲು ಎಡೆ ದೊರೆಯದು. ಹಿಡುವಳಿಗಳನ್ನು ತುಂಡರಿಸಬಾರದಾಗಿ ಎಷ್ಟು ಬೋಧಿಸಿದರೂ ಕೇಳುವವರಿಲ್ಲ. ಇದರಿಂದ ಮಾಯವಾಗುತ್ತ ಬರುವ ತೀರ್ವೆಯ [illegible] ಕೃಷಿಯ ಉತ್ಪನ್ನಗಳ ಮೇಲೆ ಲಾಭಾದಾಯ ವಿಧಿಸಿ ಭರ್ತಿಮಾಡಿಕೊಳ್ಳಬೇಕಾದೀತ. ಹೀಗೆ ಎಂತು ಮುಂದರಿಸಿದರೂ ಸರಕಾರಕ್ಕೂ ರೈತರಿಗೂ ತೃಪ್ತಿ ಇರಲಾರದಂತೆ.

USE
KALYANPUR SUGAR
IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.
available in 7lb and 14lb packets, at the
Office, C. P. C. Co., Ltd.
ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ
ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.
ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಸರಕಾರವು ಒಪ್ಪಂದಕ್ಕೆ ತಯಾರಿದೆ.

ಗವರ್ನರರು ಕಾಂಗ್ರೆಸ್ ಮುಖಂಡರನ್ನು ಕರೆಸುವರು.

ಶಾಸನಸಭೆಗಳನ್ನು ಕರೆಯಲಾಗುವುದು

ಹೌಸ್ ಆಫ್ ಕಾಮನ್ಸಿನಲ್ಲಿ ಮಿ। ಲ್ಯಾನ್ಸ್ಬರಿಯವರು ಒಂದು ಸೂಚನೆಯನ್ನು ತರುತ್ತಾ, ಅಲ್ಪಸಂಖ್ಯಾತ ಮಂತ್ರಿಮಂಡಲಗಳು ಸ್ಥಾಪಿತವಾದ ಪ್ರಾಂತ್ಯಗಳಲ್ಲಿ ಶಾಸನ ಸಭೆಗಳನ್ನು ಕರೆಯಲು ವೈಸ್‌ರಾಯರು ಸರ್ವ ಪ್ರಯತ್ನ ಮಾಡಬಾರದೇಕೆ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರವೀಯುತ್ತಾ, ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟರಾಗಿ ನೇಮಿತರಾದ ಲಾರ್ಡ್ ಜೆಟ್ಲೆಂಡರು "ಸಂದರ್ಭಗಳನ್ನು ಪರ್ಯಾಲೋಚಿಸಿ ಶಾಸನಸಭೆಗಳನ್ನು ಕರೆಯುವುದು ಗವರ್ನರರ ಅಧೀನದಲ್ಲಿದೆ" ಎಂದು ತಿಳಿಸಿದರು.

ವೆಜ ವುಡ್ ಬೆನ್ನರವರ ಪ್ರಶ್ನೆಗೆ ಉತ್ತರನೀಯುತ್ತಾ ಲಾರ್ಡ್ ಜೆಟ್ಲೆಂಡರು 'ಶಾಸನ ಸಭೆಗಳನ್ನು ಕರೆಯುವ ವಿಚಾರದಲ್ಲಿ ವೈಸ್‌ರಾಯರು ಗವರ್ನರರೊಂದಿಗೆ ವ್ಯವಹಾರ ನಡೆಸುತ್ತಿರುವರು" ಎಂದು ತಿಳಿಸಿದರು.

ಗವರ್ನರರ ವರ್ತನೆಯ ಮೇಲೆ ಭರವಸೆ: — ನಂತರ ಮಿ। ಲ್ಯಾನ್ಸ್ಬರಿಯವರು ಇನ್ನೊಂದು ಸೂಚನೆಯನ್ನು ತರುತ್ತಾ, ಒಂದು ಸಂಖ್ಯಾತರ ಒಟ್ಟುಗೂಡಿಸಿ ಅವರ ಸೂಚನೆಗಳನ್ನು ಕೇಳದೆ ಗವರ್ನರರು ತಾವೇ ಅಧಿಕಾರವನ್ನು ನೋಡಬೇಕೆಂದು ಯಾವ ಪಾರ್ಲಿಮೆಂಟ್ ಸದಸ್ಯರೂ ಅಪೇಕ್ಷಿಸುವುದಿಲ್ಲ. ಇಂಡಿಯಾಕ್ಕೆ ಜವಾಬ್ದಾರಿ ಸರಕಾರವನ್ನು ಕೊಡುವ ಉದ್ದೇಶವು ಈಗಿನ ಸರಕಾರದ ಧ್ಯೇಯಗಳಲ್ಲೊಂದಾಗಿದೆ. ಗವರ್ನರರು ನ್ಯಾಯ ನೀತಿಗಳನ್ನು ತಪ್ಪಿ ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲವೆಂದು ಕಾಂಗ್ರೆಸ್ಸಿಗೆ ಸರಿಯಾಗಿ ತಿಳಿಸಬೇಕು. ಹೆಚ್ಚು ಹೇಳಬಾರದು" ಎಂದು ಕೇಳಿದರು.

ಗಾಂಧಿಯವರ ಮುಂದಾಳುತ್ವ — ಮಿ। ಲ್ಯಾನ್ಸ್ಬರಿಯವರು ಗಾಂಧೀಜಿಯವರ ಮುಂದಾಳುತ್ವವನ್ನೂ ಅವರ ಸ್ಪಷ್ಟವಾದ ಧ್ಯೇಯಗಳನ್ನೂ ಶ್ಲಾಘಿಸಿದರು. ಮತ್ತು ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸುವಂತೆ ಮಾಡುವ ಗಾಂಧೀಜಿಯವರ ಆಕಾಂಕ್ಷೆಯನ್ನು ಅವರ ಭಾಷಣದಿಂದ ತಿಳಿದು ಬರುವುದನ್ನು ಸೂಚಿಸಿದರು. ಗವರ್ನರರ ಮಂತ್ರಿಗಳೊಳಗೆ ಅಭಿಪ್ರಾಯಭೇದ ಬಂದಾಗ ಗವರ್ನರರು ಮಂತ್ರಿಗಳನ್ನು ಡಿಸ್‌ಮಿಸ್ ಮಾಡುವುದು ತುಂಬಾ ಒಳ್ಳೆ ಸೂಚನೆ ಎಂದೂ ಹೇಳಿದರು. ಈ ಚಿಕ್ಕ ಅಭಿಪ್ರಾಯ ಭೇದವು ಸರಕಾರ ಮತ್ತು ಕಾಂಗ್ರೆಸ್ಸಿನ ಮಧ್ಯದಲ್ಲಿ ಎದ್ದು ನಿಂತಿರುವುದು ಖೇದಾಸ್ಪದವಾದ ವಿಷಯವೆಂದರು.

ಕಾಂಗ್ರೆಸ್ಸಿನ ವಿಚಾರ ಕಾಂಗ್ರೆಸ್ಸಿನೊಂದಿಗೆ ಮಾತಾಡಬೇಕು

ಲ್ಯಾನ್ಸ್ಬರಿಯವರು ಮುಂದುವರಿಯುತ್ತಾ "ಸರಕಾರವು ಕಾಂಗ್ರೆಸ್ಸಿನ ವಿಚಾರ ಮಾತನಾಡುತ್ತದೆ. ಆದರೆ ಕಾಂಗ್ರೆಸ್ಸಿನೊಡನೆ ಮಾತನಾಡುವುದಿಲ್ಲ'ವೆಂದು ಗಾಂಧಿಜಿಯವರು ಹೇಳಿದ ಮಾತುಗಳು ಸಂಪೂರ್ಣ ಸತ್ಯವಾದುವುಗಳೆಂದರು. "ಭಾರತದ ರಾಜಕೀಯ ಪ್ರವೀಣರಿಗೆಲ್ಲ ಬ್ರಿಟಿಷ ಸರಕಾರದ ಮೇಲೆ ಭರವಸೆ ಇಲ್ಲ. ಅವರಲ್ಲಿನ ಈ ಭಾವನೆಯನ್ನು ಹೋಗಲಾಡಿಸಿ ನವರಾಜಶಾಸನವು ಉಪಯುಕ್ತವಾಗಿ ಕೆಲಸಮಾಡುವಂತೆ ಮಾಡಬೇಕೆಂದು ನಾನು ಆಶಿಸುತ್ತೇನೆ. ಕಾಂಗ್ರೆಸ್ಸಿಗೆ ಈ ರಿಯಾಯಿತಿಯನ್ನು ತೋರಿಸುವುದು ನ್ಯಾಯವನ್ನು ಮೀರಿಯಲಿಕ್ಕಿಲ್ಲ" ಎಂದೂ ಲ್ಯಾನ್ಸ್ಬರಿಯವರು ಮುಗಿಸಿದರು.

ಸರಕಾರವು ತುಂಬಾ ಆತುರವುಳ್ಳದ್ದಾಗಿದೆ

'ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಬೇಕೆಂದು ಬ್ರಿಟಿಷ ಪಾರ್ಲಿಮೆಂಟ್ ತುಂಬಾ ಆತುರಪಡುತ್ತಿದೆ. ಶಾಸನ ಸಭೆಗಳನ್ನು ಬೇಗನೇ ಕರೆದಾಗ, ಕಾಂಗ್ರೆಸ್ ಅಧಿಕಾರ ಸ್ವೀಕರಿಸುತ್ತದೆಂದು ನಾವೆಲ್ಲರೂ ಹಾರೈಸುತ್ತೇವೆ. ಶಾಸನ ಸಭೆಗಳನ್ನು ಕೂಡಿಸಿ ಕಾಂಗ್ರೆಸು ಅಧಿಕಾರವನ್ನು ಸ್ವೀಕರಿಸುವಂತೆ ಮಾಡಲು ತುಂಬಾ ಚರ್ಚೆಯೂ ಆಲೋಚನೆಯೂ ಬೇಕಾಗಿದೆ. ಶಾಸನಸಭೆಗಳನ್ನು ಕರೆಯುವ ಮೊದಲು ಗವರ್ನರರು ಕಾಂಗ್ರೆಸ್ ಮುಖಂಡರೊಡನೆ ಒಂದು ತರದ ಒಪ್ಪಂದಮಾಡಿಕೊಳ್ಳಬೇಕಾಗಿದೆ. ಆದುದರಿಂದ ಶಾಸನ ಸಭೆಗಳನ್ನು ಕರೆಯುವ ಮೊದಲು ಗವರ್ನರರು ಕಾಂಗ್ರೆಸ್ಸಿನೊಡನೆ ಸಂಪೂರ್ಣ ಮಾತುಕತೆಗಳನ್ನು ನಡೆಸಬೇಕಾಗಿದೆ" ಹೀಗೆಂದು ಲಾರ್ಡ್ ಸ್ಟೇನ್ಲಿಯವರು ಕಾಮನ್ಸ್ ಸಭೆಯಲ್ಲಿ ಸರಕಾರದ ಒಪ್ಪಂದ ಉದ್ದೇಶವನ್ನು ತಿಳಿಸಿದರು.

ಒಪ್ಪಂದಕ್ಕೆ ಸಂತೋಷ— ಸರಕಾರವೇ ಮುಂದೆ ಬಂದ ಕಾಂಗ್ರೆಸ್ಸನ್ನು ಎದುರುಗೊಳ್ಳಬೇಕೆಂದು ಲ್ಯಾನ್ಸ್ಬರಿಯವರ ಸೂಚನೆಗೆ ಉತ್ತರವೀಯುತ್ತಾ ಲಾರ್ಡ್ ಸ್ಟೇನ್ಲಿಯವರು ಸರಕಾರಕ್ಕೆ ಆ ಸೂಚನೆಯಲ್ಲಿ ತುಂಬಾ ಸಂತೋಷವಿದೆ ಎಂದರು.

ಕಾಂಗ್ರೆಸ್ ಮುಂದಾಳುಗಳ ಭೇಟಿ: ಮುಂದರಿಯುತ್ತಾ ಸ್ಟೇನ್ಲಿಯವರು ಹೀಗೆಂದರು — ಕಾಂಗ್ರೆಸ್ಸಿನ ಅಧ್ಯಕ್ಷರೊಡನೆ ಸರಕಾರವು ಕರೆಸಿ ಮಾತುಕತೆಗಳನ್ನು ಮಾಡಬೇಕೆಂದು ಲ್ಯಾನ್ಸ್ಬರಿಯವರ ಅಭಿಪ್ರಾಯ. ಆದರೆ ಆಯಾ ಪ್ರಾಂತ್ಯಗಳಲ್ಲಿನ ಗವರ್ನರರುಗಳು ಅಲ್ಲಿನ ಕಾಂಗ್ರೆಸ್ ಮುಖಂಡರನ್ನು ನೋಡುವುದೇ ಸರಿಯಾದ ದಾರಿ ಎಂದು ಲಾರ್ಡ್ ಜೆಟ್ಲೆಂಡರು ಅಭಿಪ್ರಾಯಪಟ್ಟದ್ದಾರೆ. ಮಂತ್ರಿಗಳ ಕೆಲಸವನ್ನು ಸದಾ ವಿಮರ್ಶಿಸುವುದೇ ಗವರ್ನರರ ಕೆಲಸವಲ್ಲ. ಮಂತ್ರಿಗಳೊಡನೆ ಸಹಕರಿಸಿ ಸ್ನೇಹ ಬೆಳೆಸುವುದೇ ಗವರ್ನರರ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಉದ್ದೇಶದಿಂದ ಎಲ್ಲರೂ ನವರಾಜ ಶಾಸನದ ಕಾರ್ಯರೂಪಕ್ಕೆ ಸಂಪೂರ್ಣ ಯತ್ನ ಮಾಡಿದರೆ ಬೇಗ ಸಾಗುವುದು.

ಮಹಾತ್ಮಾಜಿಯವರು

ಈಗ ರಾಜಕೀಯ ಉತ್ಕಟ ಸಮಸ್ಯೆಯನ್ನು ಬಿಡಿಸಲು ಕಾಂಗ್ರೆಸ್ ಅಧಿಕಾರ ಸ್ವೀಕರಿಸ ಬೇಕೆಂದು ಶ್ರಮಪಡುತ್ತಿರುವ ಮಹಾತ್ಮರು, ... ವಿಷಯದಲ್ಲಿ ಸರಕಾರ ಕಾಂಗ್ರೆಸ್ಸಿನೊಳಗಿನ ಬಿಕ್ಕಟ್ಟನ್ನು ನಿವಾರಿಸುವಂತಹದಿದ್ದರೂ, ಲಾರ್ಡ್ ಜೆಟ್ಲೆಂಡರು ಹೌಸ್ ಆಫ್ ಕಾಮನ್ಸಿನಲ್ಲಿ ...... ಮಂತ್ರಿಗಳೊಳಗೆ ಬಿಕ್ಕಟ್ಟು ಬಂದರೆ, ಗವರ್ನರರು ಮಂತ್ರಿಗಳಿಗೆ ರಾಜಿನಾಮೆ ಕೊಡುವಂತೆ ಕೇಳಿಕೊಳ್ಳುವುದು ನವರಾಜ ಶಾಸನಕ್ಕೆ ವಿರೋಧವಾದದ್ದೆಂದು ತಿಳಿಸಿ, ಮಹಾತ್ಮರ ಸಲಹೆಯನ್ನು ನಿರಾಕರಿಸಿದರು. ಮಹಾತ್ಮರ ಕಷ್ಟ ಬಿಡದ ಈ ಹೇಳಿಕೆಗಳಿಗೆ ಕೂಡಾ ಸರಕಾರವು ನಿರಾಕರಿಸಿದೊಡನೆ ಬ್ರಿಟಿಷ ಆಡಳಿತದ ಅಂತರ್ಯ ಉದ್ದೇಶವನ್ನು ವರ್ಣಿಸಿ ಭಾರತದೊಳಗಿದ ವ್ಯಕ್ತಿವರ್ಗಕೆಗಳು ಜನಸಾಮಾನ್ಯರಿಗೆ ಸುಮ್ಮನೆ ಬಯಲಿಗೆಳೆದವು.

ಇಟೆಲಿ ಸಾಮ್ರಾಜ್ಯಕ್ಕಾಗಿ ಹಾತೊರೆಯುತ್ತಿರುವ ಇಟೆಲಿಯು ಈ ವರ್ಷ ತನ್ನ ಯುದ್ಧದ ಪಡೆಗಳನ್ನು ಕಟ್ಟುತ್ತಿರುವಂತೆ ಕಳೆದ ವರ್ಷ ಸುಮಾರು ೬೦ ವಿವಿಧ ತರದ ಯುದ್ಧನಾವೆಗಳು ಇಟೆಲಿಯಲ್ಲಿ ಕಟ್ಟಲಾಗಿದ್ದುವು. ತನ್ನ ಧೋರಣೆಗೆ ಎಂದಾದರೂ ಪ್ರತಿಕೂಲ ಬರಬಹುದೆಂದು ಅಂಜಿ ಇದ್ದ ಇಟೆಲಿಯು ತನ್ನ ಭದ್ರತೋಪಾಯವನ್ನು ನೋಡುವುದು ಸ್ವಾಭಾವಿಕವಾದುದು. ಮುಸೋಲಿನಿಗಾದರೂ ಇದರ ಪ್ರಾಮುಖ್ಯತೆ ತಿಳಿದೇ ಇದೆ. ಈಗಾಗಲೇ ಅಬಿಸಿನಿಯದ ಪ್ರಕರಣವು ಮುಗಿದಂತಾಗಲಿಲ್ಲ. ಜ್ವಾಲಾಮುಖಿ ಒಡೆದಂತೆ ಅದು ಯಾವ ಕಾರಣದಿಂದಾದರೂ ಹೊರಗೆ ಬಂದೇ ಬರುತ್ತದೆ. ಆಫ್ರಿಕಾದಲ್ಲಿ ವಸಾಹತುಗಳಿದ್ದ ಅನೇಕ ಐರೋಪ್ಯ ಜನಾಂಗಗಳೊಳಗೆ ವೈರವನ್ನುತ್ತೆ ಬೆಳೆಯುತ್ತಲೇ ಇದೆ ಎಂದು ರಾಜನೀತಿ ಪ್ರವೀಣರು ಅಭಿಪ್ರಾಯಪಡುತ್ತಾರೆ.

ಬ್ರಿಟನಿಗೆ ಅಬಿಸೀನಿಯದಲ್ಲಿ ರಿಯಾಯಿತಿಗಳಿಲ್ಲ.

ಇಟೆಲಿಯ ಯುದ್ಧಸನ್ನಾಹ.

ಜರ್ಮನಿಯಲ್ಲಿ ರಬ್ಬರಿನ ಕೊರತೆ ಹೆಚ್ಚು.

ಇಟೆಲಿಯನ್ ಮತ್ತು ಬ್ರಿಟಿಷ್ ಸರಕಾರದೊಳಗೆ ಬಹುಕಾಲದಿಂದ ನಡೆಯುತ್ತಿದ್ದ ಮಾತುಕತೆಗಳು ಮೊನ್ನೆ ತಾ ೧೪ರಲ್ಲಿ ಮುಕ್ತಾಯಗೊಂಡವು. ಮಾತುಕತೆಗಳ ವಿಷಯವು ಬ್ರಿಟಿಷ್ ಮಿಶನರಿಗಳ ಕುರಿತಾಗಿದೆ. ಬ್ರಿಟಿಷ್ ಮಿಶನರಿಗಳು ಅಬಿಸೀನಿಯದಲ್ಲಿ ಯಾವುದೇ ತರದ ಪ್ರಚಾರ ಕಾರ್ಯವನ್ನು ಮಾಡಲು ಬಿಡಲ್ಪಡುವುದಿಲ್ಲವೆಂಬ ಇಟೆಲಿಯ ನಿರ್ಧಾರವು ಇಂಗ್ಲೆಂಡನ್ನು ಎಚ್ಚರಗೊಳಿಸಿದೆ. ಬ್ರಿಟಿಷ್ ಕ್ರೈಸ್ತ ಮಿಶನರಿಗಳು ಅಬಿಸೀನಿಯಾದಲ್ಲಿ ಮುಂಚಿನಿಂದಲೂ ವಿದ್ಯಾಪ್ರಚಾರ, ಮತ ಪ್ರಚಾರ ಕಾರ್ಯವನ್ನು ನಡೆಯುತ್ತಲಿದ್ದರು. ಕೆಲವು ದಿವಸಗಳ ಹಿಂದೆ ಇಟೆಲಿ ಸರಕಾರವು ಮಿಶನರಿಗಳನ್ನು ಅಬಿಸೀನಿಯಾದಿಂದ ಹೊರಗಟ್ಟಿತು. ಅಬಿಸೀನಿಯಾದಲ್ಲಿ ಮುಖ್ಯವಾಗಿ ಬ್ರಿಟಿಷ ಮಿಶನರಿಗಳು ಶಾಲೆಗಳನ್ನು ಸ್ಥಾಪಿಸಿ ವಿದ್ಯಾಪ್ರಚಾರ ಮಾಡುವುದರಲ್ಲಿ ಇಟೆಲಿ ಸರಕಾರಕ್ಕೆ ಒಪ್ಪಿಗೆ ಇಲ್ಲ. ಕಾರಣ ಇಂಗ್ಲಿಷ್ ಶಾಲೆಗಳಲ್ಲಿ ಇಟೆಲಿಗೆ ವಿರೋಧ ಭಾವನೆಗಳನ್ನು ಈ ಮಿಶನರಿಗಳು ಉಂಟುಮಾಡಬಹುದೆಂದು ಇಟೆಲಿಯ ಆಕ್ಷೇಪ.

ಜರ್ಮನಿ:— ಇಲ್ಲಿಗೆ ಆಮದು ಮಾಡುವ ರಬ್ಬರಿನ ಕೊರತೆ ಇನ್ನೂ ತೀರಿಲ್ಲ. ಮೂರು ವಾರಗಳ ಹಿಂದೆ "ಸಿಂತೆಟಿಕ ರಬ್ಬರ್" ಎಂಬ ರಸಾಯನಿಕ ರೀತಿಯಿಂದ ಒಂದು ತರದ ಕೃತಕ ರಬ್ಬರು ಜರ್ಮನಿಯಲ್ಲಿ ತಯಾರಾಗುತ್ತಿದೆ. ಇದನ್ನೇ ಪ್ರಚಾರಗೊಳಿಸಲು ಸರ್ಕಾರವು ಹೊಸ ಕಾನೂನು ಮಾಡಿದೆ. ತೆರಿಗೆ ಹೆಚ್ಚಿದ ಕಾರಣದಿಂದ ಹೊರಗಿನಿಂದ ಬಂದ ರಬ್ಬರಿನ ಬೆಲೆಯು ಹೆಚ್ಚಿ ಅದರ ಮಾರಾಟವು ಅಸಾಧ್ಯವಾದಾಗ ತಾನಾಗಿ ...... ರಬ್ಬರನ್ನು ಉಪಯೋಗಿಸುವ ...... ಜರ್ಮನಿಯು ಬೇರೆ ದೇಶಗಳಿಂದ ತರುವ ಆಹಾರ ಪದಾರ್ಥ ...... ಕತ್ತರಿಸುವ ಒಂದು ...... ಜರ್ಮನಿಯ ...... ಜನಾಂಗಗಳ ಜೊತೆ ಹೋಲಿಕೆ ...... ಜನಸಂಖ್ಯೆ ...... ಅವರ ಆಹಾರ ಪದಾರ್ಥಗಳು ಎಲ್ಲವೂ ಜರ್ಮನಿಯ ...... ಇದ್ದ ಬಹಳ ಪರಿಶ್ರಮದಿಂದ ...... ಮಂದಿರಗಳಲ್ಲಿ ರಾತ್ರಿ ಹಗಲು ಶೋಧನೆಗಳಲ್ಲಿ ತೊಡಗಿದ್ದಾರೆ. ಜರ್ಮನಿಯಲ್ಲಿ ಯುದ್ಧ ಸಾಮಗ್ರಿಗಳನ್ನು ಶೇಖರಿಸುವದರಿಂದ ಜನರಿಗೆ ತೆರಿಗೆ ತುಂಬಾ ಕಷ್ಟ ಮಾಡಿರುತ್ತದೆ. ಮುಂದಿನ ಯುದ್ಧಕ್ಕೆ ಬೇಕಾಗುವ ಯುದ್ಧ ಸಾಮಗ್ರಿಗಳನ್ನು ಜರ್ಮನಿಯು ತಯಾರಿಸಿ, ಶೇಖರಿಸುವುದರಲ್ಲಿ ಬಹಳ ಮಗ್ನವಾಗಿರುತ್ತದೆ.

ಈಡನ್ನರ ಸೂಚನೆ. — ಇಟೆಲಿಯು ಪರರ ನೆಮ್ಮದಿಗೆ ಭಂಗ ತರುತ್ತಿದೆಯೆಂದೂ ಆಕ್ರಮಣ ತತ್ವದೆಂದೂ ವಿದೇಶಾಂಗ ಮಂತ್ರಿಗಳಾದ ಎಂಟನಿ ಈಡನ್ನರು ಪಾರ್ಲಿಮೆಂಟಿನಲ್ಲಿ ಹೇಳಿದರು. ಇಟೆಲಿಯು ತನ್ನ ವಶ ಹಡಗುಗಳನ್ನು ಬ್ರಿಟಿಷ್ ಮಿಶನರಿಗಳಿಗೆ ಅನುಮತಿ ಕೊಡದಿದ್ದುದರಿಂದ, ಇಟೆಲಿಯನ್ ಜನಾಂಗಗಳಿಗೂ ಬ್ರಿಟಿಷ್ ವಸಾಹತುಗಳಲ್ಲಿ ಪ್ರತಿಕಾರ್ಯಕ್ಕೆ ಅನುಮತಿ ಕೊಡಬೇಕಾದರೆ ಹಾಗೆಯೇ ಮಾಡಲಾಗುವುದೆಂದೂ ಈಡನ್ನರು ತಿಳಿಸಿದರು.

ಐರ್ಲೆಂಡಿನ ನವರಾಜ ಶಾಸನ — ಐರ್ಲೆಂಡಿಗೆ ಕೊಡಲಾದ ನವರಾಜ ಶಾಸನವನ್ನು ಅಲ್ಲಿಯ ಕೌನ್ಸಿಲಿನಲ್ಲಿ ೬೨ ವೋಟುಗಳಿಂದ ಅನುಮೋದಿಸಲಾಯಿತು. ವಿರೋಧ ಪಕ್ಷದ ಮಿ। ಕೊಸ್ಗ್ರೇವರು ನವರಾಜ ಶಾಸನವನ್ನು ಎಲ್ಲರೂ ಏಕಮತದಿಂದ ತಿರಸ್ಕರಿಸಬೇಕೆಂದು ಹೇಳಿದರು. ಡಿ ವೆಲೆರರು ಐರ್ಲೆಂಡ್ ಎಂಬ ಇಂಗ್ಲಿಷ್ ಹೆಸರನ್ನು ಬದಲಾಯಿಸುವುದಕ್ಕಿಲ್ಲವೆಂತಲೂ ಏಯರ್ ಎಂದು ದೇಶಭಾಷೆಯಲ್ಲಿ ಕರೆಯಲ್ಪಡಬೇಕೆಂದೂ ತಿಳಿಸಿದರು.

ಬರುವ ಜುಲೈ ತಿಂಗಳ ೧ರಲ್ಲಿ ಐರ್ಲೆಂಡಿನ ಚುನಾವಣೆಯು ನಡೆಯುವುದು.

ಜಪಾನಿಗೆ ವಿರೋಧ ದಂಗೆ:— ಮಂಚುಕೊ ಪ್ರಾಂತ್ಯವು ಜಪಾನಿನ ವಶದಲ್ಲಿದೆ. ಉತ್ತರ ಚಹಾರ್ ಎಂಬ ಚೀನಾ ಪ್ರಾಂತ್ಯವು ಮಂಚುಕೊ ಸರಕಾರ ವಶವಿದ್ದಿತು. ಇಲ್ಲಿ ಕಳೆದ ತಾ. ೧೩ರಲ್ಲಿ ಕೆಲವು ಚೀನಿಯರು ಜಪಾನಿಗೆ ವಿರೋಧವಾಗಿ ದಂಗೆ ಎಬ್ಬಿಸಿ ಅನೇಕ ಹಳ್ಳಿಗಳನ್ನು ವಶಪಡಿಸಿಕೊಂಡರು. ಜಪಾನರು ತಮ್ಮ ಸೇನೆಯನ್ನು ಪ್ರಯೋಗಿಸಿ ದಂಗೆಯನ್ನು ತಡೆದರು. ದಂಗೆಕಾರರ ಕಡೆಯವರು ಕೆಲವರು ದ್ರೋಹ ಮಾಡಿದ ಪರಿಣಾಮವಾಗಿ ದಂಗೆಯು ಅನಾಗಿಕವಾಯಿತು.

ದಂಗೆಕಾರರ ವಶವಾಗುತ್ತಿರುವ ಚಿಲ್ಬಾವೊ ಪಟ್ಟಣವನ್ನು ಸರ್ವ ಪ್ರಯತ್ನಗಳಿಂದ ರಕ್ಷಿಸಬೇಕೆಂದು ಬೆಸ್ಕ್ ಪ್ರಭುತ್ವದವರು ನಿಶ್ಚಯಿಸಿದ್ದಾರೆ. ಕಳೆದ ವಾರ ದಂಗೆಕಾರರ ವಿಮಾನ ದಾಳಿಯಿಂದ ರಣರಂಗದ ಕೆಲವು ಭಾಗಗಳು ಜಖ್ಖವಾಗಿದೆ. ಆದರೆ ಸಂಪೂರ್ಣ ವಿಜಯವು ದಂಗೆಕಾರರಿಗೆ ಆಗಲಿಲ್ಲವೆಂದು ಸರಕಾರದ ವರ್ತಮಾನ ಪತ್ರವೊಂದು ತಿಳಿಸುತ್ತದೆ.

ಡಾ। ಪಿ. ಸುಬ್ಬರಾಯನ್‌ರವರು: ಲಂಡನಿನಲ್ಲಿ ನಡೆಯಲಿರುವ ಬ್ರಿಟಿಷ್-ಭಾರತೀಯ ವಾಣಿಜ್ಯ ವ್ಯಾಪಾರದ ಮಾತುಕತೆಗಳಲ್ಲಿ ನಾನ್ ಅಫಿಸಿಯಲ್ ಪ್ರತಿನಿಧಿಯಾಗಿ ಭಾಗವಹಿಸಲು ಕಳೆದ ವಾರ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಇವರು ಮದ್ರಾಸು ಸರಕಾರದ ಮಾಜಿ ಮಂತ್ರಿಗಳಲ್ಲೊಬ್ಬರಾಗಿದ್ದರು. ಅಲ್ಲದೆ ಭಾರತ ಕ್ರಿಕೆಟ್ ಸಮಿತಿಯ ಒಬ್ಬ ಸದಸ್ಯರೂ ಆಗಿರುತ್ತಾರೆ. ಈಚೆಗೆ ಇಂಡಿಪೆಂಡೆಂಟ್ ಅಥವಾ ಸ್ವತಂತ್ರ

ಪಕ್ಷವನ್ನು ಸ್ಥಾಪಿಸಿ ಅದರ ಮುಖಂಡರಾಗಿದ್ದ ಸುಬ್ಬರಾಯನರು ಕಡೆಗೆ ಕಾಂಗ್ರೆಸ್ ಪಕ್ಷವನ್ನು ಸೇರಿ ಚುನಾಯಿತರಾದರು. ಶ್ರೀ ರಾಜಗೋಪಾಲಾಚಾರ್ಯರು ಪ್ರಚಾರಕ್ಕಾಗಿ ಕಾರ್ಯಕ್ಕೆ ಮಂಗಳೂರಿಗೆ ಬಂದಿದ್ದಾಗ ಸುಬ್ಬರಾಯನ್‌ರವರು ಅವರ ಜೊತೆಯಲ್ಲಿದ್ದರು. ಸುಬ್ಬರಾಯನರ ಧರ್ಮಪತ್ನಿಯವರು ನಮ್ಮ ಜಿಲ್ಲೆಯ ಸಾರಸ್ವತ ಮಹಿಳೆ, ದಂಪತಿಗಳಿಬ್ಬರೂ ಮುಂದರಿದ ಸಮಾಜ ಸುಧಾರಕರು. ಸುಬ್ಬರಾಯನ್ನರು ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಭಾರತ ಮಹಿಳಾ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಹೋಗಿದ್ದರು.

(೨ನೇ ಪುಟದಿಂದ ಮುಂದುವರಿದುದು)

ಉಷ್ಣತೆಯನ್ನು ತಡೆಯಲಾಗಲಿಲ್ಲ. ಶೀತ ಪ್ರದೇಶಗಳಿಂದ ಮೃಗಾಲಯಕ್ಕೆ ತಂದ ಜಂತುಗಳನ್ನು ಹಿಮಗಡ್ಡೆಗಳಲ್ಲಿ ಕೂಡಿಸಿಟ್ಟ ಕೋಣೆಗಳಲ್ಲಿ ಭದ್ರಮಾಡಲಾಯಿತು. ಇಡೀ ಯುರೋಪ್ ಖಂಡವು ೮೦ರಿಂದ ೯೦ ಡಿಗ್ರಿಗಳ ಉಷ್ಣತೆಯಲ್ಲಿ ನರಳುತ್ತಿದೆ. ಗುಂಟೂರಿನಲ್ಲಿ ಈ ತಿಂಗಳಲ್ಲಿ ೧೧೬ ಡಿಗ್ರಿಗಳ ಉಷ್ಣತೆಯಿತ್ತು. ಈ ಹವಾಮಾನವು ಯುರೋಪಿನಲ್ಲಿದ್ದರೆ ಇನ್ನೊಂದು ಮಹಾಯುದ್ಧದ ಆವಶ್ಯಕತೆ ಇಲ್ಲದೆಯೂ, ಯುದ್ಧಸನ್ನಾಹದ ತಯಾರಿಕೆಯಿಲ್ಲದೆಯೂ ಕೂಡಲೆ ನೆಮ್ಮದಿಯಾಗುತ್ತಿತ್ತು. ಸ್ಪೈಯಿನಿನಲ್ಲಿ ಯುದ್ಧವು ಒಂದೇ ಕ್ಷಣದಲ್ಲಿ ಮುಗಿಯುತ್ತಿತ್ತು.

० ० ० ०

ಲೀಗ್ ಒಫ್ ನೇಶನ್ಸ್ ಜಿನೀವಾದಿಂದ ಈ ಉಷ್ಣತೆ ತಡೆಯುವುದಕ್ಕೆ ಸಹಕರಿಸಿಗೆ ಸೂಚಿಸಲು ಕೂಡಲು ಒಂದು ಸಭೆ ಕರೆಯಬೇಕಾಗಿದೆ. ನಮ್ಮ ಬ್ರಿಟಿಷ ಮಂತ್ರಿ ಈಡನ್ ಸಾಹೇಬರು ಕೂಡಲೆ ಕಲೆಕ್ಟಿವ್ ಸೆಕ್ಯುರಿಟಿ ಸಾಮುದಾಯಿಕ ಭದ್ರತೆಯ ಸೂತ್ರವನ್ನು ಜ್ವಾರಿಗೆ ತರಲು ನಿರ್ಣಯ ಮಾಡುತ್ತಿದ್ದರು.

ವಿಂಡ್ಸರ್ ದಂಪತಿಗಳು.

ವಿಂಡ್ಸರ್ ದಂಪತಿಗಳು ಬಹುಕಾಲದ ವರೆಗೆ ವಿವಾಹ ವಿಚಾರವನ್ನೆತ್ತದೆ, ಸಾರ್ವಜನಿಕ ಜೀವನವನ್ನು ಜನತಾಸಂಪರ್ಕದಲ್ಲಿ ಕಳೆದು ಬಹು ಜನಪ್ರಿಯರಾಗಿ, ಆ ಮೇಲೆ (ಪಂಚಮ ಜಾರ್ಜರ ನಿಧನದ ಮೇಲೆ) ಬ್ರಿಟಿಷ ಸಿಂಹಾಸನಾರೂಢರಾಗಿ ಸುಮಾರು ೯ ತಿಂಗಳ ತನಕ ರಾಜ್ಯಭಾರಮಾಡಿ, ಎಂದಿಗಿಂತಲೂ ಹೆಚ್ಚಿನ ಪ್ರಜೆಗಳ ಪ್ರೀತಿ ವಿಶ್ವಾಸಕ್ಕೆ ಕಾರಣಭೂತರಾದರು. ಮಜೂರ ವರ್ಗದವರ ಹಿತಗಳಿಗಾಗಿ ತಮ್ಮ ಸಹಾನುಭೂತಿಯನ್ನು ಸದಾ ತೋರ್ಪಡಿಸುತ್ತಲೂ, ಕೆಲವು ವೇಳೆ ಬ್ರಿಟಿಷ ಮುತ್ಸದ್ದಿಗಳನ್ನು ಕಳವಳಕ್ಕೊಳಪಡಿಸುತ್ತಲೂ ತುಂಬಾ ಸಂಚಾರಪ್ರಿಯರಾಗಿ ಮೆರೆದರು. ಇವರ ಸರಳ ಸ್ವಭಾವವೂ ಮನೋವಿಶಾಲತೆಯೂ ವಂಚನೆಯಿಂದಲೂ ಬ್ರಿಟಿಷ ರಾಜನೀತಿಜ್ಞರನ್ನು ಯೋಚನೆಗೊಳಪಡಿಸಿತ್ತು. 'ಇವರ ಕಾಲದಲ್ಲಿಯೇ ಇಂಗ್ಲೆಂಡಿನ ರಾಜಮನೆತನವೂ ಅಂತ್ಯವಾಗುವುದೆಂದೂ ಇಂಗ್ಲೆಂಡು ರಿಪಬ್ಲಿಕ್ ಆಗುವುದೆಂದೂ ಒಬ್ಬರು ಪ್ರವಾದಿಸಿದ್ದರು. ದಿವಂಗತ ಏಳನೇ ಎಡ್ವರ್ಡರು ತಮ್ಮ ದೊಡ್ಡಮಗನ ಮನೋವರ್ತನೆಯನ್ನು ತಿಳಿದಿದ್ದರೋ ಏನೋ, ಅವರ ಮಾತುಗಳು ಹೆಚ್ಚು ಕಡಿಮೆ ನಡೆದೇ ಹೋದುವು. 'ನನ್ನ ಮತ್ತು ನನ್ನ ಮಗನ (ಐದನೇ ಜಾರ್ಜ) ವಿಷಯವಾಗಿ ಧೈರ್ಯ ಹೇಳಬಲ್ಲೆನು. ಅದರ ಮುಂದೆ ಹೇಗೋ ನನಗೆ ತಿಳಿಯದು' ಹೀಗೆಂದು ಅವರು ಹೇಳಿದ್ದರು. 'ಅಷ್ಟಮ ಎಡ್ವರ್ಡರು ಸಂದರ್ಭಗಳ ಒತ್ತಾಯದಿಂದ ಪಟ್ಟವನ್ನು ಸ್ವೀಕರಿಸಿದರು. ಇಲ್ಲವೇ ಅವರ ಯೋಚನೆಯೇ ಬೇರೆ ಇತ್ತು' ಹೀಗೆಂದು ಅವರನ್ನು ಚೆನ್ನಾಗಿ ಬಲ್ಲವರೊಬ್ಬರು ಹೇಳಿದ್ದರು. ಅಂತೂ ಒಂದು ಸಮಯಕ್ಕೆ ಬ್ರಿಟಿಷ ಸಾಮ್ರಾಜ್ಯದ ಸಾಮ್ರಾಟರಾಗಿದ್ದವರು ಇಂದು ಆಸ್ಟ್ರಿಯದ ಒಂದು ಪ್ರಶಾಂತ ಭವನದಲ್ಲಿ ತಮ್ಮ ಪ್ರೇಯಸಿಯೊಂದಿಗೆ ವಾಸಿಸುತ್ತಿದ್ದಾರೆ. ಅಂತ್ಯದ ವರೇಗೂ ಪ್ರಣಯಿಯನ್ನೆ ಅನುಸರಿಸುವ ಅವರ ನಿರ್ಧಾರವು ಇದೇ ತಾ (ಜೂನ್) ೩ರಂದು ಫಲಿತಾಂಶವನ್ನು ಕಂಡಿತು.

ಕೆಲವು ಸಮಯದ ಹಿಂದೆ ಸಿಂಪ್ಸನ್ ಮಹಿಳೆಯೆಂದು ಪ್ರಪಂಚ ಖ್ಯಾತಿಯನ್ನು ಪಡೆದ ಮಿಸ್ ವಾಲಿಸ್ ವಾರ್‌ಫೀಲ್ಡಳನ್ನು ವಿಂಡ್ಸರ್ ಪ್ರಭುಗಳು ವಿವಾಹಮಾಡಿಕೊಂಡರು. ಅವರ ಮನಸ್ಸಿಗೆ ಈಗಲಾದರೂ ಸ್ವಲ್ಪ ಶಾಂತಿ ದೊರಕಿದಂತಾಯಿತು. ಮೇಲಿನ ಚಿತ್ರವು ವಿಂಡ್ಸರ್ ದಂಪತಿಗಳು ಎಂಜಸ್‌ಫೇಲ್ಡ್ ಅರಮನೆಯ ತೋಟದಲ್ಲಿ ವಿಹರಿಸುತ್ತಿದ್ದಾಗ ತೆಗೆದ ದೃಶ್ಯ. ಯಾವ ಚಿಂತೆಯನ್ನೂ ತೋರ್ಪಡಿಸದ ವಿಂಡ್ಸರರ ಭಾವವನ್ನೂ, ಅತ್ಯಪೂರ್ವ ಘಟನೆಗಳಿಗೆ ಕಾರಣಭೂತಳಾಗಿದ್ದೇನೆಂಬ ಅರಿವೂ ಇಲ್ಲದೆ ಪ್ರಶಾಂತಭಾವದಿಂದ ನಗುತ್ತಿರುವ ಸಿಂಪ್ಸನಳನ್ನೂ ಇಲ್ಲಿ ಕಾಣಬಹುದು.

ಮೃತರೂಢನ ವಾಸ.

ಮರಣದ ಮುಂಚೆಯೇ ಸಮಾಧಿಯಲ್ಲಿ ವಾಸಿಸುವನು.

ಜಾಕಿ ಎಫೆಂಡಿ ಒಕಾಶಾ ಎಂಬ ಶ್ರೀಮಂತ ಅರಬಿಯೊಬ್ಬನು ೪೦ ಸಾವಿರ ಪವನು ವ್ಯಯಿಸಿ ಒಂದು ಅಂದವಾದ ಗೋರಿಯನ್ನು ಕಟ್ಟಿರುವನು. ಈ ಗೋರಿಯು ಕೈರೊ ನಗರದ ಒಂದು ಸ್ಮಶಾನದ ಭೂಮಿಯಲ್ಲಿರುವುದು. ಇದರೊಳಗೆ ವಾಸಿಸಲು ಆ ಅರಬಿಯು ತುಂಬಾ ಸಂತೋಷಪಡುತ್ತಾನೆ. ಗೋರಿಯು ಅತ್ಯಾಧುನಿಕ ಶಿಲ್ಪಿಕಲಾ ಚಾತುರ್ಯದಿಂದ ಕೂಡಿದ್ದಾಗಿದ್ದು ವಿದ್ಯುಚ್ಛಕ್ತಿಯ ದೀಪಗಳಿಂದ ರಂಜಿಸುತ್ತದೆ. ಅದರಲ್ಲಿ ಆರು ಪ್ರತ್ಯೇಕ ಸಮಾಧಿ ಕೋಣೆಗಳಿವೆ. ಒಂದರಲ್ಲಿ ಅರಬಿಯು ಮರಣನಂತರ ಹೂಳಲ್ಪಡುವನು. ಇನ್ನೈದರಲ್ಲಿ ಅವನ ಆಪ್ತರೈವರನ್ನು ಧಫನ್ ಮಾಡಬೇಕೆಂದು ಅವನು ಒಂದು ಶಾಸನದಲ್ಲಿ ಬರೆದಿಟ್ಟಿರುವನು.

ಜಾಕಿಯು ಆಗಿಂದಾಗ್ಗೆ ತನ್ನ ಸ್ನೇಹಿತರನ್ನೂ ಆ ಗೋರಿಯೊಳಗೆ ಆಮಂತ್ರಿಸುವನು— ಉಪಹಾರ ಕೂಟಗಳನ್ನೇರ್ಪಡಿಸುವನು. ಸಾಯುವ ವರೇಗೆ ಕಾದುಕೊಂಡಿರುವುದು ಅವನಿಗೆ ರುಚಿಸದು. ಅವನ ಸಮಾಧಿಯ ಮೇಲೆ ಹಾಕಲ್ಪಡುವ ರತ್ನಕಂಬಳಿಯೊಂದಕ್ಕೆ ೫೦೦ ಪವನು ಬೆಲೆಯಿದೆಯಂತೆ. ಅಂತಹ ಆರು ಕಂಬಳಿಯನ್ನವನು ಶೇಖರಿಸಿಟ್ಟಿರುವನು.

ಕೈರೊ ನಗರದಲ್ಲಿ ಜಾಕಿಯು ಒಬ್ಬ ಪ್ರಖ್ಯಾತ ನಟನಾಗಿದ್ದನಂತೆ. ಅಲ್ಲದೆ ಅವನ ಸ್ವಂತವಾದ ಒಂದು ನಾಟಕ ಮಂದಿರ ಇದೆಯಂತೆ. ನಟನಾಗಿ ತುಂಬಾ ಯಶಸ್ಸು ಸಂಪಾದಿಸಿ ಜಾಕಿಯು ಅಪಾರ ದ್ರವ್ಯವನ್ನು ಸೇಕರಿಸಿದ್ದನು. ಆ ಮೇಲೆ ಅವನು ನಾಟಕ ಕೆಲಸವನ್ನು ಬಿಟ್ಟು ತತ್ವಜ್ಞಾನಿಯಾದನು. 'ಮೃಗಗಳಿಂದ ಶ್ರೇಷ್ಠನೆನಿಸಿಕೊಳುವ ಮನುಷ್ಯನಿಗೆ ಆತ್ಮಶಾಂತಿ ಸಿಗಬೇಕಾದರೆ, ಇದೇ ರೀತಿಯಲ್ಲಿ ಅವನು ಮೃತರ ಮಧ್ಯದಲ್ಲಿರಬೇಕು. ಯಾಕೆಂದರೆ ಮೃತಪಟ್ಟವರು ಯಾರೂ ಇನ್ನೊಬ್ಬರನ್ನು ದೂರಿ ಮಾತನಾಡರು'' ಎಂದು ಅವನು ಆಗಿಂದಾಗ್ಗೆ ತನ್ನ ಸ್ನೇಹಿತರಿಗೆ ಹೇಳುತ್ತಿರುವನಂತೆ.

೧೯೩೬

ಕಳೆದ ವರ್ಷದ ವಿಶೇಷ ಘಟನೆಗಳು

೧೯೩೬ನೇ ವರ್ಷವು ಕಳೆದು ಸುಮಾರು ಅರ್ಧ ಸಂವತ್ಸರವಾದರೂ ಈ ವರ್ಷದಲ್ಲಿ ಅತಿ ವಿಶೇಷತೆಯುಳ್ಳ ಘಟನೆಗಳು ನಡೆದಿರುತ್ತವೆ ಎಂದು ನಾವು ಮರೆಯಬಾರದು. ರಾಜ್ಯಗಳು ಕೈಬದಲಾದುವು, ರಾಜರುಗಳು ಪದಚ್ಯುತರಾದರು. ಜನಾಂಗಗಳ ಹೋರಾಟವು ಉಗ್ರವಾಗಲು ಪ್ರಾರಂಭವಾಗಿದೆ. ೧೯೩೬ ಎಂಬೀ ಸಂಖ್ಯೆಗಳಲ್ಲಿನ ಮಧ್ಯದ ಎರಡನ್ನೂ ಕೂಡಿಸಿ (೯+೩) ದರೆ ೧೨ ಆಗುವುದಿಲ್ಲವೆ? ೧೨ ಘಟನೆಗಳನ್ನೂ ಈ ಕೆಳಗೆ ಕೊಡಲಾಗಿದೆ.

೧೯೩೬ರಲ್ಲಿ ಅಬಿಸೀನಿಯಾವು ಇಟೇಲಿಯಿಂದ ನುಂಗಲ್ಪಟ್ಟಿತು.

೧೯೩೬ರಲ್ಲಿ ಪಂಡಿತ ಜವಾಹರಲಾಲರು ಮೂರನೇ ಸಲಕ್ಕೆ ರಾಷ್ಟ್ರಸಭೆಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

೧೯೩೬ರಲ್ಲಿ ಪಂಚಮ ಜಾರ್ಜರು ನಿಧನ ಹೊಂದಿದರು.

೧೯೩೬ರಲ್ಲಿ ನಮ್ಮ ದೇಶದ ವ್ಯಾಸರಾಯರು ಬದಲಾದರು.

೧೯೩೬ರಲ್ಲಿ ಮದ್ರಾಸಿನ ಎಸ್ ಎಸ್ ಎಲ್ ಸಿ ಪರೀಕ್ಷೆಯ ಪ್ರಶ್ನಾಪತ್ರಗಳು ರಟ್ಟಾದುವು.

೧೯೩೬ರಲ್ಲಿ ಪೆಲೆಸ್ಟೈನದ ಅರಬರು ಯೆಹೂದಿಗಳನ್ನು ತಮ್ಮ ದೇಶದಿಂದೋಡಿಸಲು ದಂಗೆ ಎದ್ದರು.

೧೯೩೬ರಲ್ಲಿ ಇಂದೂ ನಡೆಯುತ್ತಿರುವ ಸ್ಪೈನಿನ ಕಲಹವು ಪ್ರಾರಂಭವಾಯಿತು.

೧೯೩೬ರಲ್ಲಿ ಟರ್ಕಿಯ ಸರ್ವಾಧಿಕಾರಿಯು ಡಾರ್ಡನೆಲ್ಸ ದ್ವೀಪವನ್ನು ವಶಮಾಡಿಕೊಂಡನು— ಟರ್ಕಿಯ ಭವಿಷ್ಯವು ಸ್ವಲ್ಪ ಭದ್ರವಾಯಿತು.

೧೯೩೬ರಲ್ಲಿ ಜಪಾನ್-ರಶ್ಯಾ ಘರ್ಷಣ ಪ್ರಾರಂಭವಾಗಿದ್ದಿತು.

೧೯೩೬ರಲ್ಲಿ ಅಷ್ಟಮ ಎಡ್ವರ್ಡರು ತನ್ನ ಪ್ರೇಯಸಿಗಾಗಿ ಪಟ್ಟ ಪರಿತ್ಯಾಗ ಮಾಡಿದ ಪ್ರಕರಣವುಂಟಾಯಿತು.

೧೯೩೬ರಲ್ಲಿ ಒಂದೇ ವರ್ಷದಲ್ಲಿ ಬ್ರಿಟಿಷ್ ಸಿಂಹಾಸನದಲ್ಲಿ ೩ ಆಂಗ್ಲ ದೊರೆಗಳು ಬಂದಂತಾಗಿದೆ. ಪಂಚಮ ಜಾರ್ಜರು, ಅವರ ಮರಣಾನಂತರ ಅಷ್ಟಮ ಎಡ್ವರ್ಡರು—ಅವರು ಪದಚ್ಯುತರಾದ ಮೇಲೆ ಆರನೇ ಜಾರ್ಜರು.

೧೯೩೬ರಲ್ಲಿ ಪ್ರಸಿದ್ಧ ಕಾಂಗ್ರೆಸ್ ವ್ಯಕ್ತಿಗಳಾದ ಶ್ರೀ ಎಂ ಎನ್ ರಾಯ್‌ರವರು ಬಂಧವಿಮುಕ್ತರಾದರು.

ಹಿಂದೂ ದೇಶ.

ಅಸ್ಸಾಮಿನ ಬ್ರಹ್ಮಪುತ್ರ ನದಿಯ ಪ್ರವಾಹವು ಏರುತ್ತಾ ಇದೆ. ದಂಡೆಯ ಸಮೀಪದ ಹಳ್ಳಿಗಳು ತುಂಬಾ ಅಪಾಯಕರ ಪರಿಸ್ಥಿತಿಯಲ್ಲಿವೆ.

ಮಧ್ಯಪ್ರಾಂತ್ಯದ ಮಾಜೀ ಗವರ್ನರರೂ, ಈಗಿನ ತಾತ್ಕಾಲಿಕ ಮಂತ್ರಿಮಂಡಳದ ಮುಖಂಡರೂ ಆಗಿರುವ ಈ ರಾಘವೇಂದ್ರರಾಯರು ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದ್ದಲ್ಲಿ ತಾನು ಅವರೊಂದಿಗೆ ಸಹಕರಿಸುವೆನೆಂಬರ್ಥವನ್ನು ಒಂದು ಭಾಷಣದಲ್ಲಿ ಹೇಳಿದರು. ಅದೇ ಸಮಯದಲ್ಲಿ ಅವರು ಕಾಂಗ್ರೆಸ್ಸಿನ ಧೋರಣೆಯನ್ನೂ ಖಂಡಿಸಿರುವರು.

ಅಜ್ಮೀರದ ಗ[illegible] ಕಾಲೇಜಿನ ಇಂಗ್ಲಿಷ ಸಾಹಿತ್ಯದ ಹಿರಿಯ ಪಂಡಿತರೂ ಅಖಿಲ ಭಾರತ ವಿದ್ಯಾ ಸಂಘಗಳ ಫೆಡರೇಶನ್‌ನ ಅಧ್ಯಕ್ಷರೂ ಆದ ಪ್ರೊ॥ ಎ. ಶೇಷಾದ್ರಿ, ಎಂ ಎ ಇವರು ಇಂಡಿಯಾ ಸರಕಾರದ ಪ್ರತಿನಿಧಿಗಳಾಗಿ ಆಗಸ್ಟ ತಿಂಗಳ ೩ನೇ ತಾರೀಕಿನಿಂದ ತಾ ೭ರ ತನಕ ಜಪಾನಿನ ಟೋಕಿಯೋ ನಗರದಲ್ಲಿ ಸೇರಲಿರುವ ಅಖಿಲ ಪ್ರಪಂಚ ವಿದ್ಯಾಂಗ ಸಮ್ಮೇಳನದಲ್ಲಿ ಭಾಗವಹಿಸಲಿರುವರು. ಭಾರತ ರೆಡ್‌ಕ್ರಾಸ್ ಸೊಸಾಯಿಟಿಯ ಪರವಾಗಿ, ಅದೇ ನಗರದಲ್ಲಿ ನಡೆಯುವ ಜೂನಿಯರ್ ರೆಡ್‌ಕ್ರಾಸ್ ಕಾನ್ಫರೆನ್ಸಿನಲ್ಲಿಯೂ ಭಾಗವಹಿಸರೆಂದೂ ತಿಳಿದು ಬಂದಿದೆ. ಪ್ರೊ॥ ಶೇಷಾದ್ರಿಯವರು ಜೂನ್ ೨೭ನೇ ತಾರೀಕಿನಂದು ಕೊಲೊಂಬೊದಿಂದ ಜಪಾನಿಗೆ ಪ್ರಯಾಣಮಾಡುವವರಿದ್ದಾರೆ.

ರಾವಲ್‌ಪಿಂಡಿ ಜಿಲ್ಲೆಯಲ್ಲಿ ಜಾನುವಾರುಗಳ ಕಳ್ಳತನವು ಹೆಚ್ಚುತ್ತದೆ. ಈ ಕಳ್ಳರು ಜಾನುವಾರುಗಳನ್ನು ಕದ್ದು ಕಟುಕರಿಗೆ ಮಾರಾಟಮಾಡುವ ಹೊಸ ವ್ಯಾಪಾರವನ್ನು ಪ್ರಾರಂಭಿಸಿರುವರು. ಆಗಲೇ ಅಲ್ಲಿನ ಪೋಲೀಸರು ಅನೇಕರನ್ನು ಸೆರೆಹಿಡಿದಿರುವರು.

ನಮ್ಮ ದೇಶದ ವಸ್ತುಪ್ರದರ್ಶನ ಮಂದಿರ ಅಥವಾ ಮ್ಯೂಜಿಯಮುಗಳಿಗಾಗಿ ವರ್ಷ ಒಂದಕ್ಕೆ ೭ ಲಕ್ಷ ರೂಪಾಯಿ ಖರ್ಚಾಗುತ್ತದೆಂದು ತಿಳಿದು ಬರುತ್ತದೆ. ಇಂಡಿಯಾದಲ್ಲಿ ಒಟ್ಟು ೧೦೫ ಮ್ಯೂಜಿಯಮುಗಳಿವೆ. ಅಂದರೆ ಪ್ರತಿ ೩೪ ಲಕ್ಷ ಜನಗಳಿಗೆ ಒಂದು ಮ್ಯೂಜಿಯಮಿನಂತಿದೆ. ಸ್ವಿಡನ್ ದೇಶದಲ್ಲಿ ಜನಸಂಖ್ಯೆ ೬೦ ಲಕ್ಷವಿದ್ದರೂ, ಅಲ್ಲಿ ೧೬೦ ಮ್ಯೂಜಿಯಮುಗಳಿವೆ.

ರಾತ್ರಿ ಹೊತ್ತಿನ ಶೀತವನ್ನು ತಪ್ಪಿಸಿರಿ.

ರಾತ್ರಿ ಹೊತ್ತಿನ ಶೀತಲ ಹವೆಗೆ ಹೊರಗೆ ಹೋದರೆ ನೀವು ಶೀತ ನೆಗಡಿಗಳನ್ನು ಆಮಂತ್ರಿಸಿದಂತಾಗುತ್ತದೆ. ಆಕಸ್ಮಾತ್ತಾಗಿ ಈ ಶೀತ ನೆಗಡಿಗಳು ಒಂದೇ ಸಮನೆ ವಿಷಮ ಜ್ವರ ನಿಮೋನಿಯಾಕ್ಕೆ ಪರಿವರ್ತಿಸಬಹುದು. ಸ್ನೇಹಿತರುಗಳ ಮನೆಗಳಿಂದ ರಾತ್ರಿ ಹೊತ್ತು ಮನೆಗೆ ಬರಬೇಕಾದ ಸಂದರ್ಭದಲ್ಲಿ, ಸುವಾಸನೆಯುಳ್ಳ ವಿಷಹಾರಿ ಪೆಪ್ಸ್ ಗುಳಿಗೆಗಳನ್ನು ಮಾತ್ರ ನಿಮ್ಮ ಸಂಗಡ ತರಲು ಮರೆಯದಿರಿ. ಪೆಪ್ಸ್‌ನಲ್ಲಿರುವ ಸುವಾಸನೆಯುಕ್ತ ಔಷಧಿಸಾರವು ರೋಗಾಣುಗಳನ್ನು ನಾಶಪಡಿಸುತ್ತದೆ. ಅಲ್ಲದೆ, ಅದರ ಉಷ್ಣವುಳ್ಳ ಕ್ರಿಯಾಶಕ್ತಿಯು ಗಂಟಲು, ಎದೆ, ಶ್ವಾಸಕೋಶಗಳಿಗೆ ಅಮೂಲ್ಯವಾದ ರಕ್ಷಣೆಯನ್ನು ಕೊಡುತ್ತದೆ. ಪೆಪ್ಸ್ ಗುಳಿಗೆಗಳು ಸೀಲುಮಾಡಲ್ಪಟ್ಟ ಬಾಟ್ಲಗಳಲ್ಲಿ ರೂ 1ರಂತೆ ಮಾರಲ್ಪಡುತ್ತದೆ.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಏಜಂಟರು — ಮೆಸರ್ಸ್ ಬಾಥಾ ಎಂಡ್ ಕೊ., ಪಿ. ಟಿ. ಮದ್ರಾಸು

ಪೆಪ್ಸ್ PEPS

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

ಜಿಲ್ಲೆಯೊಳಗೆ

ಚಾರ್ಮಾಡಿ		ಕಾರ್ಕಳ
ಉಜ್ರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)	ಉಡ್ಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ

ಜಿಲ್ಲೆಯ ಹೊರಗೆ

ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೊಯಿಂಟ್ ಮೆನೇಜರರಿಗೆ ಬರೆದು ತಿಳಿಸಿರಿ

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908

Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums.
4 Attractive Bonuses

It pays you to represent this Company.
Wanted Agents in unrepresented parts

Apply to:—

Messrs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at:-	P. B. 337, Mount Road, Madras.	Visveshwarapuram Circle, Bangalore City.	Soumyalayam Puthiyara, Calicut.	Car Street, Mangalore.	Udipi, S. India.	Charni Road, Bombay No. 4

ಮಂಗಳೂರು

ಸಹಾಯಾರ್ಥ.

ಶ್ರೀ ಸೀರೇಕ್ಷ್ಮಾಲ್ಯ ಆರ್ಯ ಭಜನೆಮಂಡಳಿಯ ಮೆಂಬರರಿಂದಲೂ, ಇತರರಿಂದಲೂ ಕೂಡಿದ ಶ್ರೀ ಸೀರೇಕ್ಷ್ಮಾಲ್ಯ ಆರ್ಯ ಸಂಗೀತ ನಾಟಕ ಸಭೆಯವರು, ಅದೇ ಸೀರೇಕ್ಷ್ಮಾಲ್ಯ ಆರ್ಯ ಭಜನೆ ಮಂಡಳಿಯ ಸಹಾಯಾರ್ಥವಾಗಿ ತಾ. ೬-೬-೪೭ರಲ್ಲಿ "ಜನಮುಲ್" ಎಂಬ ತುಳು ನಾಟಕವನ್ನು ಬಿಜಾಯಿಯೇ ಸೆಲೆಂದರಿ ಶಾಲೆಯಲ್ಲಿ ಯಶಸ್ವಿಯಾಗಿ ಆಡಿ ತೋರಿಸಿರುವರು, ಈ ನಾಟಕಕ್ಕೆ ಖುದ್ದಾ ವಸೂಲು ಬಂದ ರೂ. ೫೯. ಖರ್ಚು ೬೩-೮-೧ ಎಂಬುದಾಗಿ ನಾಟಕಸಭೆಯವರು ಸರ್ವಜನರಿಗೆ ಈ ಮೂಲಕ ತಿಳಿಯಪಡಿಸುತ್ತಾರೆ, ಇದರಲ್ಲಿ ಹೆಚ್ಚಿನ ಲಾಭವನ್ನು ಪಡೆಯಬಹುದಿತ್ತು. ಆದರೆ, ಮಂಡಳಿಯ ಅಂತಃಕಲಹದಿಂದ ಭಜನೆ ಮಂಡಳಿಯ ಹಲವು ಕಲಹಪ್ರಿಯರುಗಳು ಈ ನಾಟಕವನ್ನು ಸ್ವಂತ ಪ್ರಯೋಜನಕ್ಕೆ ಆಡುತ್ತಾರೆಂದು ಆಕ್ಷೇಪಕರ ಪ್ರಕಟನೆಯನ್ನು ನಗರವಾಸಿಗಳಿಗೆ ಪ್ರಕಟಿಸಿದ್ದರೂ, ಅದಕ್ಕೆ ಗಮನಿಸದೆ, ಅದಷ್ಟು ಜನರು ಈ ನಾಟಕಕ್ಕೆ ಹೆಚ್ಚಿನ ನಷ್ಟವು ಸಂಭವಿಸದ ಹಾಗೆ ಪ್ರೋತ್ಸಾಹಕೊಟ್ಟದ್ದಕ್ಕಾಗಿ ಈ ನಾಟಕಸಭೆಯವರು ಅಭಿವಂದಿಸುತ್ತಾರೆ

ನಗರದ ಮಾರ್ಗ

ಕಳೆದ ವಾರ ಸುಮಾರಾಗಿ ಬರುತ್ತಿದ್ದ ಮಳೆಯು ಈ ವಾರದಲ್ಲಿ ಮಳೆಗಾಲವು ಸಂಪೂರ್ಣ ಕಳವುರಿಂದಂತೆ ತಿಳಿಯುವ ಹಾಗೆ ಮಳೆಯು ಬರಲಾರಂಭಿಸಿದೆ ಇಷ್ಟರವರೆಗೆ ಬಂದ ಮಳೆಯು ೧೨ ಇಂಚುಗಳಿಗೆ ಮಿಕ್ಕಿರಬಹುದು. ನಮ್ಮ ನಗರದ ಕೆಲವು ಮಣ್ಣಿನ ಮಾರ್ಗಗಳು ಮಳೆ ನೀರಿನ ಮಳಲಿನಿಂದ ಕೆಸರಿನ ಗದ್ದೆಗಳಂತಾಗಿ ಸವಾರಿ ವಾಹನಗಳಿಗೂ ಮನುಷ್ಯರಿಗೂ ತುಂಬಾ ತೊಂದರೆಯನ್ನುಂಟುಮಾಡುತ್ತವೆ. ಬೇಸಿಗೆಗಾಲದಲ್ಲಿ ಮನೆಗಳ ಹಿತ್ತಲುಗಳಲ್ಲಿಯೊ, ಚರಂಡಿಗಳಲ್ಲಿಯೊ ದಾಸ್ತಾನಾಗಿರುವ ಕಸಕಡ್ಡಿಗಳು ಅಗಲೇ ಮಾರ್ಗಗಳಲ್ಲಿ ಅಲ್ಲಲ್ಲಿ ಬಂದು ನಿಂತಿರುತ್ತವೆ ಇವುಗಳಿಂದುಂಟಾಗುವ ದುರ್ವಾಸನೆಯು ಕೆಲವು ಕಡೆಗಳಲ್ಲಿ ತುಂಬಾ ಅಸಹ್ಯವಾಗಿರುತ್ತದೆ. ಮಳೆಗಾಲದಲ್ಲಿ ನಾವುಗಳು ಶುಚಿಯಾದ ನಗರವೊಂದರಲ್ಲಿ ವಾಸಿಸುತ್ತೇವೆಂದು ಧೈರ್ಯವಾಗಿ ಹೇಳಬರುವುದಿಲ್ಲ ವಾಹನಗಳಲ್ಲಿ ಸದಾ ಚಲಿಸುವವರಿಗೆ ಇದರ ಅನುಭವವಾಗಲಾರದೇನೊ ನಿಜ ಆದರೂ ಶಾಸನಗಾರರು ನಮ್ಮ ನಗರದಲ್ಲಿ ಎಷ್ಟು ಮಂದಿಗಳಿರಬಹುದು? ಜವಾಬುದಾರಿ ಅಧಿಕಾರಿಗಳು ತಕ್ಕ ವ್ಯವಸ್ಥೆಯನ್ನೇರ್ಪಡಿಸುವರೆಂದು ಹಾರೈಸಲಾಗಿದೆ

ಸಿಟಿ ಬಸ್ಸು ಸರ್ವಿಸು:—ಅಗಲೇ ತುಂಬಾ ಜನ ಪ್ರಿಯತೆಯನ್ನು ಪಡೆಯುತ್ತಲಿದೆ, ಮಳೆಗಾಲದ ಆರಂಭದಲ್ಲಿ ಪ್ರಾರಂಭಿಸಿದ್ದು ಬಡಾವಣೆಗಳ ವಾಸಸ್ಥರಿಗೆ ಸಕಾಲದಲ್ಲಿ ಸಹಾಯವನ್ನು ಒದಗಿಸಿಕೊಟ್ಟಂತಾಗಿದೆ ಈಗ ಚಲಾವಣೆಯಲ್ಲಿರುವುದು ನಾಲ್ಕೇ ವಾಹನಗಳಾದುದರಿಂದ ನಿರೀಕ್ಷಿಸಿದಂತೆ ಪ್ರಯಾಣಿಕರಿಗೆ ವಾಹನಾನುಕೂಲತೆ ಸಿಗುವುದು ಸ್ವಲ್ಪ ಆಯಾಸವಾಗುತ್ತದೆ ಈ ಮಳೆಗಾಲದಲ್ಲಿ ಸರ್ವಿಸಿನ ಒಂದು "ಸ್ಪೇರ್ ಹಿಯರ್"ನಲ್ಲಿ ಕಾದು ಕೊಂಡಿರುವ ಕೆಲಸಕ್ಕೆ ಎಷ್ಟು ಸಹಿಷ್ಣುತೆಬೇಕೆಂಬ ಸಂಗತಿಯು ಸರ್ವಿಸ್ಸಿನ ಮಾಲಿಕರಿಗಾದರೂ ತಿಳಿಯದೆ ಇರಲಾರದು ಒಟ್ಟಿನಮೇಲೆ ಈಗಿನ ಕೊರತೆಯೆಂದರೆ ಬಸ್ಸುಗಳ ಸಂಖ್ಯೆ ಹೆಚ್ಚಿಸಿ, ದರಗಳನ್ನು ಕೊಂಚ ಕಮ್ಮಿ ಮಾಡಿ, ಸರಿಯಾಗಿ ತಮ್ಮ ಸಮಯ ಕಾಯುವುದರೊಳಗೆ ಸವಾರಿ ಸಿಕ್ಕುವಂತಾಗುವ ಏರ್ಪಡಿಸುವ ಅವಶ್ಯಕತೆ ಈ ಸಂದರ್ಭದಲ್ಲಿ ದರಗಳ ವಿಚಾರವೇನೆಂದರೆ, ಪ್ರಾರಂಭದಲ್ಲಿ ಬೆಂಟಲೆಂಡ್ ಪೇಟೆಯಿಂದ ರಥಬೀದಿಗೆ ಆಧಾಣೆ ಇದ್ದು ಕೆಲವು ಸಮಯದಲ್ಲೇ ಅದು ಒಂದಾಣೆಗೆ ಏರಿಸಲಾಯಿತೆಂದು ಕೇಳುತ್ತೇವೆ ನಗರದ ಗಡಿಗಳೊಳಗೆ ಅಂದರೆ ಕೆಲವು ಬಡಾವಣೆಗಳ ಅಂತ್ಯದ ವರೆಗೆ ಆಧಾಣೆ ದರವು ಸರಿಯೆಂದೂ ಒಂದು ಬಡಾವಣೆಯಿಂದ ಇನ್ನೊಂದಕ್ಕಾದರೆ ಒಂದಾಣೆ ಸರಿಯೆಂದೂ ಸಾರ್ವಜನಿಕರ ಒಂದು ಭಾಗವು ಅಭಿಪ್ರಾಯಪಡುತ್ತದೆಂದು ಒಂದು ಬಾಕಿ ದರ ಕಮ್ಮಿಯಾದರೆ ಪ್ರಯಾಣಿಕರ ಸಂಖ್ಯೆಯೂ ಏರಬಹುದೆಂದೂ ಒಂದು ಅಪೇಕ್ಷೆ

ಪ್ರೊ| ಎಸ್. ಜಿ. ರಂಗರವರ ಆಗಮನ

ಇದೇ ತಾ ೧೬ನೇ ಗುರುವಾರ ಸಾಯಂಕಾಲ ಆಂಧ್ರದೇಶದ ಕೃಷಿಕ ಚಳವಳದ ಮುಂದಾಳುಗಳೂ ಸುಪ್ರಸಿದ್ಧ ಕಾಂಗ್ರೆಸ್ ಕೆಲಸಗಾರರೂ ಆದ ಪ್ರೊಫೆಸರ್ ಎನ್ ಜಿ. ರಂಗ ಇವರು ಮಂಗಳೂರಿಗೆ ಬಂದಿದ್ದು, ತಾ. ೧೮ರಲ್ಲು ಮೂಡಬಿದ್ರೆ, ಕಾರ್ಕಳ ಮತ್ತು ಉಡುಪಿ ಈ ಸ್ಥಳಗಳನ್ನು ಸಂದರ್ಶಿಸಿ ತಾ ೧೯ಕ್ಕೆ ಕಾರವಾರಿಗೆ ಹೋಗುವರು ತಾ ೧೬ನೇ ಸಂಜೆ ಘಂಟೆ ೫ ೩ಂಕ್ಕೆ ಸ್ಥಳೀಯ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಸಭಾಸದನದಲ್ಲಿ ಶ್ರೀಯುತರ ಭಾಷಣವಾಯಿತು.

ಡ್ರೈವರ್ ಸಂಕುತೆಟ್ಟಿಯ ಕುರಿತು ಸರಕಾರದ ಹುಕುಂ.

ಕೆಲವು ಸಮಯದ ಹಿಂದೆ ಪೋಲಿಸ್ ಲಾಕಪ್ಪಿನಲ್ಲಿ ಮೃತಿಯಟ್ಟಿದ ಸಂಕುತೆಟ್ಟಿಯ ಶವ ಪರೀಕ್ಷೆಯು ಜಿಲ್ಲಾ ಮೆಡಿಕಲ್ ಆಫೀಸರರಿಂದ ನಡೆಯಿತಷ್ಟೆ. ಈ ವಿಚಾರವಾಗಿ ಯಾವುದೇ ತರದ ಅಭಿಪ್ರಾಯವಾಗಲೀ ವರದಿಯನ್ನಾಗಲೀ ಬಹಿರಂಗಪಡಿಸಬಾರದೆಂದು ಸರಕಾರದ ಹುಕುಂ ಬಂದಿರುವ ಮೇರೆಗೆ ಮೆಡಿಕಲ್ ಆಫೀಸರರು ಯಾವ ತರದ ವರದಿಯನ್ನೂ ಪತ್ರಿಕಾ ಪ್ರತಿನಿಧಿಗಳಿಗೆ ಕೊಡಲೊಪ್ಪಲಿಲ್ಲವೆಂದೂ, ಸಂಕುತೆಟ್ಟಿಯ ಪ್ರಕರಣವು ಅಲ್ಲಿಗೆ ಮುಗಿದಂತಾಯಿತೆಂದೂ ಸಾರ್ವಜನಿಕರು ಅವಶ್ಯವಾಗಿ ತಿಳಕೊಳ್ಳಬೇಕಾಗಿದೆ, ಬಹುಶ್ಯ ಚೆಲ್ಲಿದ ಹಾಲಿಗಾಗಿ ಅಳುವುದೇಕೆಂಬ ತತ್ವಜ್ಞಾನವನ್ನೂ ಸರಕಾರವು ಅನುಸರಿಸಿದೆಯೆಂದು ಭಾವಿಸಬೇಕಾಗಿ ಬಂದಿದೆ ಚೆಲ್ಲಿದ್ದನ್ನು ಮನ್ನಿಸಬಹುದು ಆದರೆ ಸಂಗತಿಯನ್ನು ಸ್ಮರಣೆಯಿಂದ ಅಳಿಸಿಬಿಡುವುದು ಯಾರಿಗಾದರೂ ಕಷ್ಟಸಾಧ್ಯವೇ ಸರಿ,

ದ. ಕ. ಜಿಲ್ಲಾ ಹಿಂದೀ ಪ್ರಚಾರ ಸಂಘದ ಮೀಟಿಂಗು.

ದಕ್ಷಿಣ ಕನ್ನಡ ಜಿಲ್ಲಾ ಹಿಂದೀ ಪ್ರಚಾರ ಸಂಘದ ಜನರಲ್ ಬಾಡೀ ಮೀಟಿಂಗು ಇದೇ ತಾ ೨೦-೬-೪೭ನೆ ಆದಿತ್ಯವಾರ ಗಂಟೆ ೫ಕ್ಕೆ ಶ್ರೀ ರಘುನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ ಜರಗಲಿರುವುದರಿಂದ ಸದರಿ ಸಂಘದ ಸದಸ್ಯರೂ, ಜಿಲ್ಲೆಯ ಹಿಂದೀ ಕಾರ್ಯಕರ್ತರುಗಳೂ, ಹಿಂದೀ ಪ್ರೇಮಿಗಳೂ ದಯವಿಟ್ಟು ಚಿತ್ತೈಸಬೇಕಾಗಿ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಮಂಗಳೂರು ಇಲೆಕ್ಟ್ರಿ ಸಪ್ಲ್ಯಾ ಕಂಪೆನಿ:

ಬೇಸಿಗೆ ಕಾಲದ ವಿಪರೀತ ಸೆಕೆಯಿಂದಾಗಿ ನಮ್ಮ ನಗರದಲ್ಲಿ ವಿದ್ಯುಚ್ಛಕ್ತಿಯ ಏರ್ಪಾಡಿರುವುದರಿಂದಲೂ ಮತ್ತು ವಿದ್ಯುಚ್ಛಕ್ತಿಯ ಸಂಸ್ಥೆಯವರು ಯುನಿಟಿಗೆ ೦—೨ ೬ ಪ್ರಕಾರ ರಿಯಾಯಿತಿ ದರದ ಅನುಕೂಲತೆಯ ಭರವಸೆ ಕೊಟ್ಟದ್ದರಿಂದಲೂ ಅನೇಕ ನಾಗರಿಕರು ಇಲೆಕ್ಟ್ರಿಕ್ ಫ್ಯಾನಿನ ಏರ್ಪಾಡನ್ನು ಮಾಡಿಕೊಂಡಿದ್ದರು ಇದಕ್ಕಾಗಿ ಪ್ರತ್ಯೇಕ ಮೀಟರನ್ನು ಜೋಡಿಸಿಯೂ ಇದ್ದರು ಈಗ ಮುಂಚಿನಂತೆ ರಿಯಾಯಿತಿ ದರಗಳನ್ನು ಕೊಡಲಾಗ ವುದಿಲ್ಲವೆಂದು ಮಂಗಳೂರು ಇಲೆಕ್ಟ್ರಿಕ್ ಕಂಪೆನಿಯ ಒಂದು ಸರ್ಕ್ಯುಲಾರು ತಿಳಿಸುತ್ತದೆ. ಇದರಿಂದಾಗಿ ಅನೇಕರಿಗೆ ಅನೇಕ ವಿಧದ ಅನಾನುಕೂಲತೆಗಳಾಗಿರುವ ವಿಷಯವು ಇಲೆಕ್ಟ್ರಿಕ್ ಕಂಪೆನಿಗಾದರೂ ತಿಳಿಯದೆ ಇರಲಾರದು ಪ್ರತ್ಯೇಕ ಮೀಟರುಗಳು ಜೋಡಿಸಿಕೊಂಡವರಿಗೆ ಈಗದನ್ನು ಉಪಯೋಗಿಸದೆ ಇದ್ದರೆ ವೃಥಾ ನಷ್ಟ ಉಪಯೋಗಿಸಿದರೆ ಲಾಭವಿಲ್ಲ — ಈ ಪರಿಸ್ಥಿತಿಯಾಗಿದೆ ಬಹುಶ ಸೆಕೆಕಾಲದಲ್ಲಿ ಗಾಳಿಯಂತ್ರಗಳನ್ನು ಅನುಕೂಲವಿದ್ದವರು ಇಡಿಸದೆ ಇಲೆಕ್ಟ್ರಿಕ್ಕಿನವೆಂಬ ಭರವಸೆಯಿಂದಲೇ ಇಲೆಕ್ಟ್ರಿಕ್ ಕಂಪೆನಿಯ ಈ ಏರ್ಪಾಡು ಇರಬಹುದು ಅಂತೂ ಸಾರ್ವಜನಿಕರಲ್ಲಿ ಕೊಂಚ ಅತೃಪ್ತಿಯುಂಟಾಗಿರುವುದೆಂದು ತಿಳಿದುಬರುತ್ತದೆ ಸಮಾಧಾನಕರವಾದ ತಕ್ಕ ಏರ್ಪಾಡುಗಳನ್ನು ಇಲೆಕ್ಟ್ರಿಕ್ ಕಂಪೆನಿಯವರು ಮಾಡದೆ ಇರಲಾರರೆಂದು ಹಾರೈಸಲಾಗಿದೆ

ಚಿಕ್ಕ ಚಿಕ್ಕ ಅಂಗಡಿಕಾರರು ಒಂದೊಂದು ಲ್ಯಾಟ್ ಇಡಿಸಿಕೊಂಡು ವಾರಕ್ಕೆ ಎಂಟಾಣೆಯಂತೆ ಕೊಡುವಂತಾಗುವ ಒಂದು ಹೊಸ ಏರ್ಪಾಡನ್ನು ಇಲೆಕ್ಟ್ರಿಕ್ ಕಂಪೆನಿಯವರು ಮಾಡಿದ್ದಾರೆ ಈ ಎಂಟಾಣೆ ವಸೂಲಿಗಾಗಿ ಇಷ್ಟರತನಕ ಕಂಪೆನಿಯ ಕೆಲಸಗಾರನೊಬ್ಬನು ಬರುತ್ತಿದ್ದನು ಈಗ ಲ್ಯಾಟ್ ಹಾಕಿಸಿಕೊಂಡವರು ಕಂಪೆನಿ ಆಫೀಸಿಗೆ ಹೋಗಿ ಅದನ್ನು ತಲ್ಪಿಸಬೇಕೆಂದಾಗಿದೆ ಇದರ ಉದ್ದೇಶವೇನೆಂದು ತಿಳಿಯಬಂದಿಲ್ಲ ಅಂತೂ ಇದರಿಂದ ಹೆಚ್ಚಿನ ಅನಾನುಕೂಲತೆಯಾಗುವುದಿಲ್ಲವೆಂದು ಕೆಲವರ ಅಭಿಪ್ರಾಯ

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡ್ಪಿ ಲಿಮಿಟೆಡ್ ಇದು ಸೆಂಟ್ರಲ್ ಬೇಂಕ್ ಆಫ್ ಇಂಡಿಯಾ ಮತ್ತು ಕ್ಲಿಯರಿಂಗ್ ಹೌಸ್ ಮದ್ರಾಸು ಈ ಸಂಸ್ಥೆಗಳ ಮೆಂಬರ್ ಆಗಿದೆಯೆಂದು ತಿಳಿದುಬರುತ್ತದೆ

ದ. ಕ. ಜಿಲ್ಲಾ ಭೂಮಾಲಿಕರ ಸಂಘದ ಸಭೆ.

ಕಳೆದ ತಾ. ೬ನೇ ಭಾನುವಾರ ಬೆಳಗ್ಗೆ ೧೦ ಗಂಟೆಗೆ ದ ಕ. ಜಿಲ್ಲಾ ಭೂಮಾಲಿಕರ ಸಂಘದ ವರ್ಷಾವಧಿ ಸಾಧಾರಣ ಸಭೆಯು ಶ್ರೀ ಕೆ ಆರ್ ಕಾರಂತರ ಆಫೀಸಿನಲ್ಲಿ ನಡೆಯಿತು ಅನೇಕ ಮಂದಿ ಸದಸ್ಯರುಗಳು ಸಭೆಯಲ್ಲಿ ಹಾಜರಿದ್ದರು ಶ್ರೀಯುತರುಗಳಾದ ಯಂ ಶಿವರಾಯರು, ಯಂ ಉಮೇಶರಾಯರು, ಯಂ. ಶಂಕರನಾರಾಯಣ ರಾಯರು, ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಎಂ ಎಲ್. ಎ ಇವರು, ಜಿನರಾಜಹೆಗ್ಗಡೆ ಬೈಲೂರು ವಾಸುದೇವರಾಯರು, ಹಲ್ಲನಾಡು ಸೂರಪ್ಪಯ್ಯನವರು, ಎ ಬಿ ಶೆಟ್ಟಿ ಇವರೇ ಮೊದಲಾದವರು ನೆರೆದ ಸದಸ್ಯರಲ್ಲಿ ಕೆಲವರು ಶ್ರೀ ಎ ಬಿ ಶೆಟ್ಟಿಯವರು ಅಧ್ಯಕ್ಷತೆಯನ್ನು ವಹಿಸಿದರು ಕಾರ್ಯದರ್ಶಿ ಶ್ರೀ ಕಾರಂತರು ಗತವರ್ಷದ ವರದಿಯನ್ನು ಸಭೆಯ ಮುಂದಿಟ್ಟರು, ಲೆಕ್ಕ ಪತ್ರಗಳೂ ಹಾಜರು ಮಾಡಲ್ಪಟ್ಟವು, ಅವುಗಳು ಮಂಜೂರುಮಾಡಲ್ಪಟ್ಟವು, ಅಧಿಕ ಕೋರ್ಟುಗಳಿಗೆ ಸಗಲಿದ ಕೊಳೆರೋಗ ವಿಚಾರವನ್ನು ಇಲ್ಲಿಗೆ ಚಿತ್ತೈಸಿದ ರೆವಿನ್ಯೂ ಮತ್ತು ಲಾ ಮೆಂಬರರಲ್ಲಿ ಅರಿಕೆಮಾಡಿಕೊಳ್ಳಲು ಸಂಘದಧಿಕಾರಿಗಳು ಪಟ್ಟ ಶ್ರಮದ ಕುರಿತು ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿತು, ಈ ವರ್ಷದ ಕಾರ್ಯಕಾರೀ ಮಂಡಳದ ಸದಸ್ಯರನ್ನೂ ಇದೇ ಸಭೆಯಲ್ಲಿ ಚುನಾಯಿಸಲಾಯಿತು. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಅಧ್ಯಕ್ಷರಾಗಿಯೂ, ಶ್ರೀ ಜಿನರಾಜ ಹೆಗ್ಗಡೆ ಮತ್ತು ಶ್ರೀ ಶಂಕರನಾರಾಯಣರಾವ್ ಇವರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು ಶ್ರೀ ಜಿನರಾಜ ಹೆಗ್ಗಡೆಯವರು ಕೋಶಾಧಿಕಾರಿಗಳಾಗಿಯೂ ನೇಮಕ ಹೊಂದಿದರು

ಶ್ರೀ ರಾಮಲಿಂಗಂ ಚೆಟ್ಟಿಯಾರರು

ಮದ್ರಾಸು ನ್ಯಾಯವಿಧಾಯಕ ಸಭೆಯ ಸದಸ್ಯರೂ, ಲೆಂಡ್ ಮೋರ್ಗೇಜ್ ಬೇಂಕ್ ಮದ್ರಾಸ್ ಇದರ ಅಧ್ಯಕ್ಷರೂ ಆಗಿರುವ ಶ್ರೀ ರಾಮಲಿಂಗಂ ಚೆಟ್ಟಿಯಾರ್, ಬಿ ಎ , ಬಿ ಎಲ್ ಇವರು ಮಲಬಾರ್, ಉಡುಪಿ ಪುತ್ತೂರು ಮೊದಲಾದ ಕಡೆ ಸಂಚಾರ ಮಾಡಿ ಪುನಃ ಮಂಗಳೂರಿಗೆ ಬರದರು ಇಲ್ಲಿ ಮೊನ್ನೆ ತಾ ೧೬ನೇ ಸೋಮವಾರ ಕೊಓಪರೇಟಿವ್ ಸೊಸೈಟಿಗಳ ಡೆಪ್ಯುಟಿ ರಿಜಿಸ್ತ್ರರರಾದ ಶ್ರೀ ಕಣ್ಣನ್ ನಾಯರರಿಂದ ಒಂದು ಸತ್ಕಾರ ಕೂಟವೂ ಅದೇ ಸಾಯಂಕಾಲ ಮತ್ತೆ ಶ್ರೀಮತಿ ಕಮಲಾದೇವಿಯವರಿಂದ ಧಾರೇಶ್ವರ ಗಾರ್ಡನ್‌ನಲ್ಲಿ ಒಂದು ಉಪಹಾರ ಕೂಟವೂ ಏರ್ಪಡಿಸಲಾಯಿತು ಎರಡು ಸಮಾರಂಭಕ್ಕೂ ಅನೇಕ ಮಂದಿ ಪ್ರಮುಖ ಗೃಹಸ್ಥರೂ ಪತ್ರಿಕಾ ಪ್ರತಿನಿಧಿಗಳೂ ಆಮಂತ್ರಿಸಲ್ಪಟ್ಟಿದ್ದರು ಸಮಾರಂಭದ ಕಾರ್ಯಕ್ರಮಗಳು ಬಹು ಸ್ವಾರಸ್ಯವಾಗಿದ್ದವು.

ಕುಮಾರಿ ಉಲಿನ್ ಸಾಲ್ಡಾನಾ

ಈ ಬಾಲೆಯು ೧೨ ವರ್ಷ ವಯಸ್ಸಿನವಳು ಹುಡುಗ ಹುಡುಗಿಯರಿಗೆ ಮಾದರಿಯಂತೆ ಇವಳು ಈ ಚಿಕ್ಕ ಪ್ರಾಯದಲ್ಲಿ ಧರ್ಮಪುರಿಯ ಹ್ಯಾಸ್ಕೂಲಿನ ಎಸ್ ಎಸ್ ಎಲ್ ಸಿ (ಮೆಟ್ರಿಕ್) ಪರೀಕ್ಷೆಯಲ್ಲಿ ಉತ್ತೀರ್ಣಳಾಗಿರುವಳು ಇವಳ ಕುಟುಂಬವು ಧರ್ಮಪುರಿಯಲ್ಲಿ ರುವುದಾದರೂ ಈ ಬಾಲೆಯು ನಮ್ಮ ಜಿಲ್ಲೆಯವಳಿದ್ದಾಳೆಂದು ತಿಳಿದುಬಂದಿದೆ ಸ್ತ್ರೀ ಶಿಕ್ಷಣಕ್ಕೆ ತುಂಬಾ ಮುಂದರಿದ ನಮ್ಮ ಜಿಲ್ಲೆಯ ಮಹಿಳೆಯರು ಅಗಲೇ ಭಾರತದ ಅನೇಕ ಕಡೆಗಳಲ್ಲಿ ತಮ್ಮ ಕೀರ್ತಿಯನ್ನು ಬೀರಿರುವರು ಅಂದಮೇಲೆ ಕುಮಾರಿ ಸಾಲ್ಡಾನಳು ನಮ್ಮ ಜಿಲ್ಲೆಗೆ ಗೌರವವನ್ನು ತಂದಿರುವಳು ಮಾತ್ರವಲ್ಲದೆ, ಇವಳ ಆದರ್ಶವು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹುರಿಪನ್ನುಂಟುಮಾಡುವುದಿದೆ ಎಂದು ಬೇರೆ ಹೇಳುವ ಅವಶ್ಯವಿಲ್ಲ

ನಮ್ಮ ಜಿಲ್ಲೆಯ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರಾಗಿದ್ದ ಶ್ರೀ ಯು ಕಣ್ಣಪ್ಪ ಎಂ ಎ, ಎಲ್ ಟಿ ಇವರನ್ನು ಕೊಯಮುತ್ತೂರಿಗೂ ತಂಜಾವೂರಿನ ಡಿ ಇ ಓ. ಗಳಾಗಿದ್ದ ಶ್ರೀ ಕೆ ಪಿ ರಾಮಮೆನೋನ ಎಂ. ಎ ಎಲ್ ಟಿ ಇವರನ್ನು ನಮ್ಮ ಜಿಲ್ಲೆಯ ಡಿ ಇ ಓ. ಗಳಾಗಿಯೂ ವರ್ಗಾಯಿಸಲ್ಪಟ್ಟಿರುವರು

ಮದ್ರಾಸು ಸಿಟಿ ಸಿವಿಲ್ ಕೋರ್ಟಿನ ಹಂಗಾಮಿ ಜಡ್ಜರಾಗಿ ಇದೇ ಮೇ ತಾ ೫ರಿಂದ ಜುಲಾಯಿ ತಾ ೫ರ ವರೆಗೆ, ಎಡ್ವೋಕೇಟರಾದ ಮಿ। ಜೆ ಎ ಪಿಂಟೊ ಇವರು ಪುನಃ ನೇಮಕಲ್ಪಟ್ಟಿದ್ದಾರೆ ಇವರು ನಮ್ಮ ಜಿಲ್ಲೆಯವರು

ಮಿ। ರಾ। ಎಚ್ ಎಸ್ ತಾಗಟೆ ಇವರು ಪ್ರಿನ್ಸಿಪಲ್ ಮುನ್ಸಿಫರಾಗಿ ಬರುವ ಡಿಸೆಂಬರದ ವರೆಗೆ ಸೆಂಕ್ಷನ್ ಆದ ಹೊಸ ಕೋರ್ಟನ್ನು ಪ್ರಾರಂಭಿಸಿದರು

ನಮ್ಮ ಜಿಲ್ಲೆಯ ಪೋಲೀಸ್ ಸುಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟ ಮಿ। ಜೆ ಎಫ್. ಹ್ಯಾರಿಸನ್ ಇವರು ತಮ್ಮ ಹುದ್ದೆಯ ಚಾರ್ಜನ್ನು ವಹಿಸಿದರೆಂದು ತಿಳಿದುಬರುತ್ತದೆ

ತಾಲೂಕುಗಳಿಂದ

ಹಿರಿಯಡ್ಕ:— ಇಲ್ಲಿಯ ಆರ್ಯಸಮಾಜದಿಂದ ತೆರೆಯಲ್ಪಟ್ಟ ಹಿಂದೀ ಕೇಂದ್ರದಿಂದ ಇದೇ ೧೯೪೭ನೇ ಇಸವಿ ಫೆಬ್ರವರಿ ತಾ ೧೪ರಲ್ಲಿ ಜರಗಿದ ಪರೀಕ್ಷೆಯಲ್ಲಿ ಪ್ರಾಥಮಿಕದಲ್ಲಿ ಕುಳಿತಿದ್ದ ೩ ಮಂದಿಯೂ, ಮಾಧ್ಯಮಿಕದಲ್ಲಿ ಕುಳಿತಿದ್ದ ೩ ಮಂದಿಯೂ ಉತ್ತೀರ್ಣರಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ಯೋಗ್ಯತಾ ಪತ್ರಗಳನ್ನು ಹಂಚುವ ಸಮಾರಂಭವು ಇದೇ ತಾ. ೧೨ನೇ ಶನಿವಾರ ಅಪರಾಹ್ನ ಗಂಟೆ ೬.೩೦ಕ್ಕೆ ಸರಿಯಾಗಿ ಶ್ರೀಯುತ ಮಾಂಬೆಟ್ಟು ವಿಟ್ಠಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು ಪ್ರಶ್ನತ, ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರಭಾಷಾ ವರ್ಗದಲ್ಲಿ ೧೪ ಮಂದಿ ಕಲಿಯುತ್ತಿರುವರು

ಬ್ರಹ್ಮಾವರ.— ಎಮೆಚ್ಯೂರ್ಸ್ ಕರ್ನಾಟಕ ಸಂಗೀತ ನಾಟಕ ಸಭಾ ಇವರು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕಳೆದ ತಾ. ೨೮-೬-೪೭ನೇ ಶನಿವಾರ ರಾತ್ರಿ ಅಭಿನಯಿಸಿದ ರಾಷ್ಟ್ರವೀರ ನಾಟಕದಲ್ಲಿ ಟಿಕೇಟು ವಿಕ್ರಯದಿಂದ ಉತ್ಪತ್ತಿಯಾದ ರೂ ೯೫ ಕಳೆದು ಬಾಕಿ ಉಳಿತಾಯವಾದ ಖರ್ಚ್ನಾ ರೂ ೫೦ನ್ನು ಸಂಘದ ಹೊಸ ಡ್ರೆಸ್ ಸಲುವಾಗಿ ವಿನಿಯೋಗಿಸಿದೆ ಆ ದಿನ ರಾತ್ರಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಶ್ರೀಯುತ ಅರೂರು ಲಕ್ಷ್ಮೀನಾರಾಯಣರಾವ್ ಮುನ್ಸಿಪಲ್ ಚೆಯರ್ಮೆನ್ ಇವರಿಗೂ ಸಂಘಕ್ಕೆ ಪ್ರೋತ್ಸಾಹ ಕೊಟ್ಟ ಉಡುಪಿ ಮತ್ತು ಸ್ಥಳೀಯ ಮಹಾಜನರಿಗೂ ೬ ರೂಪಾಯಿ ಬೆಲೆಬಾಳುವ ಜರಿ ಡ್ರೆಸ್ಸನ್ನು ಧರ್ಮಾರ್ಥವಾಗಿ ಕೊಟ್ಟ ಮಾಬುಕಳದ ಹಂಚಿನ ಕಾರ್ಖಾನೆಯ ಮಾಲಿಕರಾದ ಶ್ರೀಯುತ ತೆಂಕಮನೆ ಮಹಾಬಲೇಶ್ವರ ಶೆಟ್ಟಿಗೂ ಸಂಘವು ತುಂಬಾ ಧನ್ಯವಾದಗಳನ್ನು ಸಮರ್ಪಿಸುತ್ತದೆಂದು ಸಂಘದ ಕಾರ್ಯದರ್ಶಿಯರಾದ ಶ್ರೀಯುತ ಕಾಪೆಟ್ಟುಕಾರ ಸರ್ವೋತ್ತಮ ಪೈಗಳು ತಿಳಿಸುತ್ತಾರೆ

ಉಡುಪಿ

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಿದ್ದುಪಡಿ — ಸ್ಯೆಂಟ್ ಸಿಸಿಲಿಯಾ ಗರ್ಲ್ಸ್ ಹ್ಯಸ್ಕೂಲಿನಿಂದ ಇದೇ ಎಸ್. ಎಸ್ ಎಲ್ ಸಿ ಪರೀಕ್ಷೆಯಲ್ಲಿ ತಾ ೧೨ರಲ್ಲು ೯ ಮಂದಿ ತೇರ್ಗಡೆಹೊಂದಿರುವರೆಂದು ತಿದ್ದಿಕೊಳ್ಳತಕ್ಕದ್ದು

ಉಡುಪಿ ಸಹಕಾರ ಸಂಘದ (೧೯೩೩ ೧೯೪೭) ರಜತಮಹೋತ್ಸವ ಸಮಾರಂಭಕ್ಕೆ ಎನರೇಬಲ್ ಶ್ರೀ ವಿ ರಾಮದಾಸ ಪಂತಲು ಮೆಂಬರ್ ಕೌನ್ಸಿಲ್ ಆಫ್ ಸ್ಟೇಟ್ ಇವರು ಅಧ್ಯಕ್ಷರಾಗಲು ಒಪ್ಪಿರುತ್ತಾರೆ ಆ ಕಾಲಕ್ಕೆ ಸಹಕಾರ ಸಂಘಗಳ ರಿಜಿಸ್ತ್ರರರಾದ ರಾವ್ ಬಹದ್ದೂರ್ ಎಂ ಗಿರಿಯಪ್ಪನವರು ಹಾಜರಿರುವರಾಗಿಯೂ ತಿಳಿಸಿರುತ್ತಾರೆ ಸಮಾರಂಭವು ಜುಲಾಯಿ ಅಂತ್ಯದಲ್ಲಿ ಜರಗಬಹುದಾಗಿದೆ

ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ವಿ ಆರ್ ಫೆರ್ನಾಂಡೀಸರ ಪತ್ನಿಯಾದ ಶ್ರೀ ಎಚ್ ಲಿಯೋನಿಸಾ ಎಂ ಫೆರ್ನಾಂಡಿಸರವರು ನಾಲ್ಕನೆಯ ಸಲ ಬೆಂಚ್ ಮೆಜಿಸ್ಟ್ರೇಟರಾಗಿ ನೇಮಕಹೊಂದಿರುತ್ತಾರೆ

ತಾ ೧೦-೧೧ರಲ್ಲು ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ ಪದ್ಮನಾಭ ಪೋತಿ, ಬಿ ಎ ಯವರು ಅಮೋಘರೀತಿಯಲ್ಲಿ ಮಾನಸಿಕ ವಿದ್ಯುಚ್ಛಕ್ತಿ ಪ್ರದರ್ಶನವನ್ನು ಜರಗಿಸಿದರು

ಶ್ರೀ ರಾಮಲಿಂಗಂ ಚೆಟ್ಟಿಯಾರ್ ಎಂ ಎಲ್ ಸಿ ಇವರು ತಾ ೧೩ಕ್ಕೆ ಇಲ್ಲಿಗೆ ಬಂದಿದ್ದು ಲೇಂಡ್ ಮೊರ್ಗೇಜು ಬೇಂಕನ್ನು ಸ್ಥಾಪಿಸುವ ಅಭಿಮತಗಳನ್ನು ಪಡೆದು ಹೋದರು ಇವರೊಂದಿಗೆ ಶ್ರೀಮತಿ ಕಮಲಾದೇವಿಯವರೂ ಚಿತ್ತೈಸಿದ್ದರು

ಅಖಿಲ ಭಾರತ ರೈತರ ಪರಿಷತ್ತಿನ ಅಧ್ಯಕ್ಷರಾದ ಪ್ರೊ ಎಸ್ ಜಿ ರಂಗ, ಎಂ ಎಲ್ ಎ ರವರು ಇದೇ ತಾ ೧೮ನೇ ಸಾಯಂಕಾಲ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾರ್ವಜನಿಕ ಭಾಷಣ ಮಾಡಲಿರುವರು ರೈತರ ಸಂಘಗಳನ್ನು ಸ್ಥಾಪಿಸಿ ರೈತರೊಳಗೆಲ್ಲ ಸಂಘಶಕ್ತಿ ಅಭಿವೃದ್ಧಿಯನ್ನು ಬೆಳೆಸುವುದೇ ಇವರ ಉದ್ದೇಶ ಅವರು ಇಲ್ಲಿಂದ ಮುಂದೆ ಉತ್ತರ ಕನ್ನಡ, ಧಾರವಾಡ ಕಡೆಗಳಿಗೆಲ್ಲ ಶ್ರೀಮತಿ ಕಮಲಾದೇವಿಯವರೊಡನೆ ಪ್ರವಾಸಮಾಡುವರು ರೈತರೂ ಮಹಾಜನರೂ ಸದರಿ ಸಭೆಗೆ ಬಹುಸಂಖ್ಯೆಯಿಂದ ಚಿತ್ತೈಸಬೇಕಾಗಿ ವಿನಂತಿಸಲಾಗುತ್ತದೆ

ತಾ. ೨೦ಕ್ಕೆ ಸ್ಥಳೀಯ ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು ಜರಗಿತು. ವಿಷಯಗಳು ಸರ್ವಸಾಧಾರಣವಾಗಿದ್ದುವು.

ನವರತ್ನ ಎಲಿಕ್ಸಿರ್ ಗೈನೆಕೊ.

ಇಂದಿನ ಗರ್ಭದೋಷಕ್ಕೆ ಉತ್ತಮ ಟಾನಿಕ್

ಎಲ್ಲಾ ತರದ ಮುಟ್ಟುದೋಷಗಳನ್ನು ವಿಶೇಷ ಪರಿಣಾಮದಿಂದ ಗುಣಪಡಿಸುವ ಶಕ್ತಿಯುಳ್ಳ ಸಾಮಗ್ರಿಗಳಿಂದ ಈ ಔಷಧಿಯು ತಯಾರಿಸಲ್ಪಟ್ಟಿರುತ್ತದೆ. ಋತುಕಾಲದ ಮುಂಚಿನ ಮತ್ತು ನಂತರದ ಅಜೀರ್ಣ, ಹೊಟ್ಟೆನೋವುಗಳ ಬಾಧೆಯನ್ನು ಇದು ಹೋಗಲಾಡಿಸುತ್ತದೆ. ಅಲ್ಲದೆ ಸ್ತ್ರೀಯರ ಎಲ್ಲಾ ಸಂಕಷ್ಟಗಳನ್ನು ಸರಿಪಡಿಸಿ ಗರ್ಭಧಾರಣೆಗೆ ತುಂಬಾ ಅನುಕೂಲವನ್ನು ಕಲ್ಪಿಸುತ್ತದೆ

ಬೆಲೆ 4 ಔನ್ಸ್ ಬಾಟ್ಲಿಗೆ ರೂ 0 12 0
8 ,, ,, ,, 1 4 0

ತಯಾರಿಸುವವರು:—

ನವರತ್ನಾ ಫಾರ್ಮಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:—
ಪೊಪ್ಯುಲರ್ ಸ್ಟೋರ್ಸ್ ಮಂಗಳೂರು
ವಿ ವಿ. ಶೆಣೈ ಕಾರ್ಕಳ.
ಡಾ| ಕೆ. ಎಲ್ ಐತಾಲ, ಉಡುಪಿ
ಮೊಡರ್ನ್ ಫಾರ್ಮಸಿ, ಕುಂದಾಪುರ
ಬಿ ಜಿ ಭಂಡಾರಿ, ಪುತ್ತೂರು
ಭಟ್ಟ್ ಬ್ರದರ್ಸ್, ಕಾಸರಗೋಡು.

ಬೊಂಬಾಯಿ ಏಜಂಟರು: CHAMSI NARSI & CO.,
Chemists, Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in—
Watches, Clocks, Timepieces, Rolled Gold Jewellery & Sporting Materials etc,



Stockists of:
West End, Zenith Meridian, Swiss Watches of latest designs & tastes

Repairers – Watches, Clocks, Timepieces and Gramophones.

Japan 8 Inch	Octegon	Rs	6	0	0
„ 8 „	Regulator	„	6	12	0
, 10 ,	Octegon	,	6	8	0
„ 10 „	Regulator	„	7	8	0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಹಾಗೂ ಬೇಕಂಗೆ ಸದಾ ಸಿದ್ಧವಿರುವುವು. ವಾಚು, ಗಡಿಯಾರ, ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲುಪ್ತಕಾಲಕ್ಕೆ ಒದಗಿಸಿ ಕೊಡುವೆವು.

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ ಮಂಗಳೂರು.

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗೈರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ವಾಜಬಿ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ, ಎಕ್ಸ್ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಟ್ಟಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಏಜೆಂಟ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of
Please call on or Write to:—

Simon & Co,
Painters,
Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ, ಸ್ಯಾನ್ ಬೋರ್ಡು ಇತ್ಯಾದಿಗಳನ್ನೂ
ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ
ಹೆಚ್ಚಿನ ಮಾಹಿತಿ ಬಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ. ಒಂದು ವಾರದ ಪರೀಕ್ಷೆ, ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ವಾಪಸ್



ಶ್ರೇಷ್ಠ ಮಾದರಿ ಗಟ್ಟಿಯಾದ [illegible] ಗಳು, ಸರಿಯಾಗಿ ಸಮಯ ತೋರಿಸುವ ಗಡಿಯಾರಗಳು [illegible] ವರ್ಷದ ಗ್ಯಾರಂಟಿ 3 ವಾಚ ಗಳನ್ನು ಒಂದೇ ಸಾರಿ ತರಿಸುವವರಿಗೆ [illegible] ನಿಕ್ಕೆಲ ರಿಸ್ಟು ವಾಚು 1ಕ್ಕೆ ರೂ 2–15–0 ಅದರಲ್ಲಿ ಉತ್ತಮವಾದನ್ನು 3–8–0, ಬಂಗಾರದ ಗಿಲಿಟಿದ್ದದಕ್ಕೆ ರೂ 4—8—0 ರೇಡಿಯಂ ರೂ 5–0 0 ನಿಕ್ಕೆಲ ಆಯತಾಕಾರದಕ್ಕೆ 6–8–0 ಅದರಲ್ಲಿ ಬಂಗಾರದ ಗಿಲಿಟಿದ್ದದಕ್ಕೆ 7–8–0 ಲಿವರ್ ಪಾಕೆಟ್ ವಾಚಿಗೆ ಬರೇ ರೂ 1–14–0 ವಿ, ಟ್ಯಾಂಪೀಸ್ 1ಕ್ಕೆ ಬರೇ ರೂ 1–15–0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು:—
M. L. Watch Co., 176 Cross Street CALCUTTA

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH
No 16

Sale Rs. 6–15–0
SMART LEVER MOVEMENT
Strong & Durable at Low Price.



UNIQUE OPPORTUNITY ONLY FOR ONE MONTH.
Available Roman or Arabic Figures.
Plain Silver Dial

Guaranteed for 5 Years. Lever Pocket Watch Rs 1–15–0
No. 12. Chromium 4 Jewels Rs 8–6–0
„ 14 „ 7 „ „ 10–8–0
„ 15, „ 15 „ „ 12–8–0
„ 17. Rolled Gold 15, „ 16–8 0.
Rs. 1/- Extra for Radium Dial. Postage & Packing Extra
BAPALAL & CO. (s) 116, Abdul Rehman Street, Bombay 3.

ಇದನ್ನು ಗಮನಿಸಿರುವರೂ?

ಕಿರೀಟಧಾರಣೆಯ ತಣುಕುಮಿಣುಕು.

ಕಿರೀಟಧಾರಣೆಯ ಸಮಾರಂಭವಾಗಿ ಆರನೇ ಜಾರ್ಜರು ವೆಸ್ಟ್ ಮಿನಿಸ್ಟರ್ ಅಬ್ಬಿಯಿಂದ ಹೊರಬರುವಾಗ ಅಲ್ಲಿಯ ದಾಖಲೆ ಪುಸ್ತಕದಲ್ಲಿ ಕ್ರಮದಂತೆ, ಸಹಿಮಾಡುತ್ತಿದ್ದಾಗ ಅವರ ಕೈಗೆ ಶಾಯಿ ತಾಕಿದಾಗ ಅವರು ಶಾಲಾ ಮಕ್ಕಳಂತೆ ಕೈಯನ್ನು ಬಟ್ಟೆಗೆ ಒರಸಿಕೊಂಡರಂತೆ.

ಕಿರೀಟಧಾರಣ ಮೆರವಣಿಗೆಯ ಜವಾಬುದಾರಿಕೆಯಲ್ಲಿದ್ದ ಡ್ಯೂಕ್ ಆಫ್ ನಾರ್ ಫೋಕ್ ಇವರು ತನ್ನ ಕಣ್ಣು, ತಲೆಗಳಿಂದ ಕೆಲವು ಸಂಜ್ಞೆಗಳನ್ನೂ ಮಾಡಿ ಅದಕ್ಕೆ ಸರಿಯಾಗಿ ನಡೆಯುವಂತೆ ಮುಂಚಿತವಾಗಿ ಏರ್ಪಡಿಸಿದ್ದರಂತೆ

ಕಿರೀಟಧಾರಣ ಸಮಾರಂಭವಾಗುತ್ತಿದ್ದಹಾಗೆ ರಾಜಕುಮಾರಿಯರೀರ್ವರೂ ತುಂಬಾ ಆತುರದಿಂದ ದಿಟ್ಟಿಸುತ್ತಿದ್ದು, ಕೂತಲ್ಲಿಯೇ ತಮ್ಮ ಕಾಲುಗಳನ್ನು ಅಲ್ಲಾಡಿಸುತ್ತಿದ್ದರಂತೆ

ಇಂತಹ ಅನೇಕ ಚಿಕ್ಕ ಚಿಕ್ಕ ದೃಶ್ಯಗಳು ಗೊಮೆಂಟ್ ಬ್ರಿಟಿಷ್ ನ್ಯೂಸ್‌ನವರು ತೆಗೆದ ಚಲಚ್ಚಿತ್ರದಲ್ಲಿ ಕಂಡುಬಂದಿವೆ ಇವನ್ನು ಕಂಡ ಕೆಂಟರಬರಿಯ ಆರ್ಚ ಬಿಶೋಪರು ನಾಚಿಕೆಯಿಂದ ಕಣ್ಣೀರಿಳಿಸಿದರಂತೆ

ಮರಗಳನ್ನು ನಡುವುದು

ಮರವನ್ನು ನಡುವುದನ್ನು ಹಿಂದೀಯ ರಾಜರುಗಳು, ಒಂದು ಧಾರ್ಮಿಕ ಪದ್ಧತಿಯಾಗಿ ಭಾವಿಸುತಿದ್ದರು ಮರವನ್ನು ನಟ್ಟರೆ ದೇವರ ಆಶೀರ್ವಾದಗಳಿಗೆ ಪಾತ್ರರಾಗುವರೆಂಬ ನಂಬುವಿಕೆಯು ಅವರಲ್ಲಿತ್ತು ಮಾರ್ಗದ ಇಕ್ಕಡೆಗಳಲ್ಲೂ ಅವರು ಮರಗಳನ್ನು ನಡಿಸಿ ಅವುಗಳ ಕುರಿತು, ಜಾಗ್ರತೆಯನ್ನು ತೆಗೆದು ಸಾಕುವವರಾದರು ದೇವಾಲಯಗಳ ಎದುರು, ಅಶ್ವತ್ಥ ಮರವನ್ನು ನಡುವುದು ಅವರ ಕ್ರಮವಾಗಿತ್ತು ಸೆಕೆಪ್ರದೇಶವಾದ ನಮ್ಮ ಈ ದೇಶದಲ್ಲಿ ನೆರಳನ್ನು ಕೊಡುವ ಮರದಿಂದ ತುಂಬಾ ಉಪಕಾರವಿದೆ ಎಲ್ಲಾ ಜೀವಿತ ವಸ್ತುಗಳಿಗೆ ಅದರಡಿಯಲ್ಲಿ ವಿಶ್ರಾಂತಿಯು ದೊರಕುವುದು ಅವುಗಳ ಎಲೆಗಳಿಂದ ಗೊಬ್ಬರವು ದೊರಕುತ್ತದೆ ಅವುಗಳ ದೆಸೆಯಿಂದ ಭೂಮಿಯೊಳಗೆ ನೀರಿನ ಪಸೆ ನಿಲ್ಲಲು ಅವಕಾಶ ದೊರಕುತ್ತದೆ

ಇಂದಿನ ಜನಾಂಗವು ಅತೀ ಉತ್ತಮವೆನಿಸುವ ಮರಗಳನ್ನು ನಡುವ ಈ ಪದ್ಧತಿಯನ್ನು ಮರೆತು ಬಿಟ್ಟಂತೆ ಕಾಣುತ್ತದೆ ಈ ಕಾರಣದಿಂದಲೆ ಮರಗಳ ಮಹತ್ವದ ಕುರಿತು ನಮ್ಮಲ್ಲಿ ಮತ್ತೊಮ್ಮೆ ಜ್ಞಾನೋದಯವಾಗುತ್ತವಂತೆ ನಮ್ಮ ಪ್ರಸಿದ್ಧ ಕವಿಗಳಾದ ರವೀಂದ್ರರು ತಮ್ಮ ಶಾಂತನಿಕೇತನವನ್ನು ಮರಗಳಡಿಯಲ್ಲಿ ನಡೆಸುತ್ತಿದ್ದಾರೆ

ಈ ಪುರಾತನ ಅಭ್ಯಾಸವನ್ನು ನಾವು ಮರೆತು ಬಿಡುತ್ತಿರುವಾಗ, ಪ್ರಗತಿ ಹೊಂದಿದ ದೇಶವಾದ ಅಮೇರಿಕವು ಮರಗಳ ಮಹತ್ವವನ್ನು ತಿಳಿದುಕೊಂಡಿರುತ್ತದೆ ಮರಗಳಲ್ಲಿ ದೇಶದ ಅಭಿವೃದ್ಧಿಯಿರುವುದೆಂದೂ, ಅವುಗಳನ್ನು ನಾಶಗೊಳಿಸಿದರೆ, ಅನರ್ಥಗಳು ಉಂಟಾಗುವುವೆಂದೂ ಅವರು ತಿಳಕೊಂಡಿರುವರು ಮೊನ್ನೆ ಈಚೆಗೆ ಅಮೇರಿಕಾದ ಸಂಯುಕ್ತ ರಾಜ್ಯಗಳಲ್ಲಿನ ಉತ್ತರ ದಿಕ್ಕುಗಳಲ್ಲಿ ಕಠಿಣ ತರದ ನೀರಿನ ಅಭಾವು ಉಂಟಾಗಿತ್ತು ಅದರಿಂದ ಆ ರಾಷ್ಟ್ರಗಳಿಗೆ ಮಿಲಿಯಗಟ್ಲೆ ಡೊಲರಿನ ನಷ್ಟವು ಸಂಭವಿಸಿತು ನೆಲವು ನೀರಿಲ್ಲದೆ ಮರಳು ಕಾಡಿನಂತಾಯಿತು ಬೆಳೆ ಮತ್ತು ಹಸುಗಳು ನಾಶವಾದುವು ಸಾಗುವಳಿಗೆ ತಕ್ಕುದೆನಿಸುವ ಪ್ರದೇಶವೆಲ್ಲವೂ ಮರಳು ಕಾಡೆನಿಸಿಕೊಂಡಿತು ಈ ತರದ ನೀರಿನ ಕ್ಷಾಮವನ್ನು ನಿವಾರಿಸುವ ಉಪಾಯಗಳನ್ನು ಕಂಡು ಹಿಡಿಯುವರೆ ವಿಚಾರಣಾ ಸಮಿತಿಗಳು ರಚನೆಯಾದವು ಕಾಡುಗಳನ್ನು ಕಡಿದುದರಿಂದ, ಮರಗಳನ್ನು ಕಡಿಸಿದ್ದುದು ನೀರಿನ ಕ್ಷಾಮಕ್ಕೆ ಕೆಲವು ಮುಖ್ಯವಾದ ಕಾರಣಗಳೆಂದು ಈ ಸಮಿತಿಯ ಶೋಧೆಯಾಯಿತು ಮರಗಳಿಂದ ನೀರಿನ ಪಸೆಯು ನೆಲದಲ್ಲಿ ನಿಲ್ಲುವುದಲ್ಲದೆ, ಅವುಗಳು, ಮಳೆಗಳಿಗೆ ಕಾರಣಪ್ರಾಯವಾದುವುಗಳೆಂದು ಕಂಡುಹಿಡಿಲ್ಪಟ್ಟಿದೆ ಕಾಡುಗಳನ್ನು ಕಡಿದು ಅವುಗಳನ್ನು ಬೇಸಾಯಕ್ಕಾಗಿ ಉಪಯೋಗಿಸುವುದರಿಂದ ನೆಲದ ನೀರು ಒಟ್ಟು ಕೂಡಿಸಿ ಇಡುವ ಶಕ್ತಿಯು ಕಡಿಮೆಯಾಗುತ್ತದೆ ಅಲ್ಲದೆ ಮರಗಳಿಲ್ಲದಿರುವುದರಿಂದ ಮೋಡಗಳಿಗೆ ಅಡ್ಡಿಗಳಿಲ್ಲದೆ, ಅವು ಹರಿದು ಹೋಗಿ, ಮಳೆಯು ಕಡಿಮೆಯಾಗುವುವು ಅದರಿಂದ ನೀರಿನ ಕ್ಷಾಮವು ಉಂಟಾಗದಂತೆ ಅಲ್ಲಲ್ಲಿ ಮರಗಳ ಕಾಡುಗಳನ್ನು ರಚಿಸಬೇಕೆಂದಾಗಿದೆ ಹೀಗೆ ಮರಗಳನ್ನು ಸಾಲಿನಲ್ಲಿ ನಡುವ ಕೆಲಸವು ಈಗ ಅಲ್ಲಿ ಸಾಗುತ್ತಿದೆ

ಅಮೇರಿಕಾದಿಂದ ಕಂಡ ಹಿಡಿಯಲಾದ ಈ ಸತ್ಯದಿಂದ ಇತರ ದೇಶಗಳಿಗೂ ಉಪಕಾರವಾಗುವಂತಿದೆ ಅದರಲ್ಲೂ ಸಾಗುವಳಿ ಪ್ರದೇಶವಾಗಿರುವ ಹಿಂದೂದೇಶಕ್ಕೆ ಇದರಿಂದ ಇನ್ನಷ್ಟು ಉಪಕಾರವಾಗುವುದು. ಅಮೇರಿಕಾನರು ಕಲಿತ ಈ ಪಾಠವು ನಮ್ಮ ಸರಕಾರವೂ, ದೇಶದ ಜನರೂ ಕಲಿಯಬೇಕು ಹವಾಗುಣವು ಒಳ್ಳೆದಾಗಿದ್ದರೆ ಮತ್ತು ನೀರು ಸರಿಯಾಗಿದ್ದು ಬೆಳೆಯು ಸರಿಯಾದರೆ ಮಾತ್ರ ನಮ್ಮ ಸ್ಥಿತಿಯು ನೆಟ್ಟಗಿರುವುದು. ಕಟ್ಟಿಗೆಗೆ ಕ್ರಯ ದೊರಕುತ್ತದೆಂದು ಕಾಡುಗಳನ್ನೂ ಮರಗಳನ್ನೂ ಕಡಿಯಬಾರದು ಮುಖ್ಯವೆನಿಸುವ ಕಾಡುಗಳನ್ನೇ ರಕ್ಷಿಸುವ ಕುರಿತು ಸರಕಾರವು ಹೆಚ್ಚಿನ ಸಿಗಾ ಕೊಡಬೇಕು ಕಟ್ಟಿಗೆಯನ್ನು ತಯಾರಿಸುವ ಕುರಿತ ಒಳ್ಳೆ ಕ್ರಮಗಳನ್ನು ಮಾಡಿ, ಹಳೆ ಮರಗಳನ್ನು ಕಡಿಯುತ್ತಿರುವಾಗ ಹೊಸ ಮರಗಳು ಅಲ್ಲಿರುವಂತೆ ಕಾಯಿದೆಗಳಾಗಬೇಕು ಅಡವಿಗಳನ್ನು ಸಾಗುವಳಿ ಪ್ರದೇಶಗಳನ್ನು ಮಾಡಲು ಕೊಡುತ್ತಿರುವಾಗ ಒಳ್ಳೆ ಜಾಗ್ರತೆಯನ್ನು ತೆಗೆದುಕೊಳ್ಳಬೇಕು ಕಟ್ಟಿಗೆ ತಯಾರಿಸುವ ಕುರಿತು ಮತ್ತು ಖಾಸಗಿ ಮರಗಳನ್ನು ಕಡಿಯುವ ಕುರಿತು ಸರಕಾರದ ಕಾಯಿದೆಗಳಾಗಬೇಕು

ಇದ್ದ ಕಾಡುಗಳನ್ನು ರಕ್ಷಿಸುವುದಲ್ಲದೆ ಹೊಸ ಕಾಡುಗಳನ್ನು ರಚಿಸುವ ಕುರಿತು, ಹೆಚ್ಚಿನ ಆಲೋಚನೆಯು ನಡೆಯಬೇಕು ಅದರಿಂದ ದೇಶದ ಹವಾಗುಣವನ್ನು ಬಹು ಮಟ್ಟಿಗೆ ಬದಲಾಯಿಸಬಹುದು ಮರಗಳ ಬೇಗನೆ ಬೆಳೆಯುವಂತೆಯೂ ಅವುಗಳ ಬಹಳ ಎತ್ತರಕ್ಕೆ ಬೆಳೆಯುವಂತಾಗಬೇಕು ಮರಗಳನ್ನು ನಡುವ ಕುರಿತು, ವಿಶೇಷ ಜ್ಞಾನವನ್ನು ಹೊಂದಿದವರ ಸಹಾಯದಿಂದ ಈ ಕಾರ್ಯವು ನಡೆಯಬೇಕು

ಅದಷ್ಟು ಮರಗಳನ್ನು ನಡುವಂತೆ ನಮ್ಮ ಹಳ್ಳಿಗಳಲ್ಲಿ ಪ್ರಚಾರಕಾರ್ಯವು ನಡೆಯಬೇಕು ಅವುಗಳಿಂದ ನೆರಳು ದೊರಕುವುದು ಹೆಚ್ಚಾದ ಗೆಲ್ಲುಗಳನ್ನು ಕಡಿದು ಕಟ್ಟಿಗೆ ತಯಾರಿಸಬಹುದು ಫಲ ಕೊಡುವ ಮರಗಳಾದರೆ ಅವುಗಳಿಂದ ಒಳ್ಳೆ ಆಹಾರವು ದೊರಕುವುದು. ಎಲ್ಲಿ ಯಾವ ತರದ ಮರಗಳನ್ನು ನಡಬೇಕು ಎಂಬುದರ ಕುರಿತು ಸರಿಯಾದ ಅನುಭವ ಅವರಿಗೆ ಕೊಡಬೇಕು

ಮರಗಳನ್ನು ನಡುವಂತಾದ್ದು ಒಂದು ಧಾರ್ಮಿಕ ಕ್ರಮವಾಗಿ ಮಾಡುವ ನಮ್ಮ ಹಿರಿಯರು, ನಿಜವಾಗಿಯೂ ಬುದ್ಧಿವಂತರು

ತಪ್ಪಿಸಿಕೊಂಡ ಹಾವು ನ್ಯೂಯೋರ್ಕನ್ನು ನಡುಗಿಸಿತು

ನ್ಯೂಯೋರ್ಕಿನ ಜನರಲ್ಲಿ ಭಯಕಳವಳಗಳು ತುಂಬಿಕೊಂಡಿವೆ ಅನೇಕ ಹೆಂಗಸರು ಆಗಲೇ ನಗರದಲ್ಲಿನ ತಮ್ಮ ವಾಸಸ್ಥಳಗಳನ್ನು ಬಿಟ್ಟು ದೂರದ ಜಿಲ್ಲೆಗಳನ್ನು ಸೇರಿರುವರು ಕೆಲವರಿಗೆ ಹಿಸ್ಟಿರಿಯಾ ತಗಲಿರುತ್ತದೆ, ಡಾಕ್ಟರರು ಹೆದರಿದ ಹೆಂಗಸರನ್ನು ಎಷ್ಟು ಸಂತೈಸ ನೋಡಿದರೂ ಸಾಧ್ಯವಾಗದಾಗಿದೆ ಇಷ್ಟಕ್ಕೆಲ್ಲಾ ಕಾರಣಭೂತವಾದುದೊಂದು ೬ ಅಡಿ ಉದ್ದದ ಹೆಬ್ಬಾವು ಈ ಹಾವು ಒಬ್ಬ ಪ್ರಾಣಿಶಾಸ್ತ್ರಜ್ಞನ ಕೊಠಡಿಯಲ್ಲಿದ್ದುದು ಅಲ್ಲಿಂದ ಹೇಗೋ ತಪ್ಪಿಸಿಕೊಂಡು ಹೊರಟಿತ್ತು ಈಗದನ್ನು ನೂರಾರು ಪೋಲೀಸರು ಹಿಡಿಯಲು ಹೊಂಚು ಹಾಕುತ್ತಿರುವರು ಅದರ ಮಾಲಿಕನಾದ ಆ ಪ್ರಾಣಿಶಾಸ್ತ್ರಜ್ಞನು ತನ್ನ ಹಾವು ಬಹು ಸಾಧುವಾದ ಪ್ರಾಣಿಯೆಂದು ಹೆದರಿದವರಿಗೆ ಎಷ್ಟು ಹೇಳಿಕೊಂಡರೂ ಸಮಾಧಾನಹೊಂದುವವರೇ ಕಂಡುಬರುವುದಿಲ್ಲ ಅಲ್ಲಿಯ ಹೆಂಗಸರಿಗೆ ಎಷ್ಟರಮಟ್ಟಿನ ಹೆದರಿಕೆ ಹಿಡಿದಿದೆ ಎಂದರೆ ಕೆಲವರು ತಮ್ಮ ಸ್ವಂತ ನೆರಳನ್ನು ನೋಡಿ ಹೆದರುವವರಿದ್ದಾರೆ ಕೆಲವರು ತಮ್ಮ ಮನೆಗಳ ಕಿಟಿಕಿ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿರುವರು ಇನ್ನೂ ಹಾವಿನ ಪತ್ತೆಯಾಗಲಿಲ್ಲ ಹೆಂಗಸರು ನಿರಂತರ ಭಯದಿಂದ ದಿನ ದೂಡಬೇಕಾಗಿ ಬಂದಿದೆ

ಬಂಗಾಳ ಭೂಕಂಪಾಯದ ಪರಿಸ್ಥಿತಿಯನ್ನು ಮತ್ತು ಇನ್ನಿತರ ಸಂಬಂಧಪಟ್ಟ ವಿಷಯಗಳನ್ನೂ ಪರಿಶೋಧಿಸಲು ಬಂಗಾಳ ಸರಕಾರವು ಒಂದು ವಿಚಾರಣಾ ಸಮಿತಿಯನ್ನು ಏರ್ಪಡಿಸುವುದ

ಂ ಂ ಂ

ಕಲ್ಕತ್ತಾ ಹೈಕೋರ್ಟಿನ ಮಾಜಿ ಜಡ್ಜರಾದ ಶ್ರೀ. ಎಸ್. ಸಿ. ಮುಲ್ಲಿಕ್ ಇವರ ಮನೆಯಲ್ಲಿ ಕಳ್ಳರು ನುಗ್ಗಿ, ಸಾಧಾರಣ ೨೦ ಸಾವಿರ ರೂಪಾಯಿಗಳ ನಗನಾಣ್ಯಗಳನ್ನು ಅಪಹರಿಸಿರುವರು

ಂ ಂ

ಶ್ರೀ. ಜಿತನಾಥ ಬೆನರ್ಜಿ ಎಂಬವರು ಎಂಬ ಕಲ್ಕತ್ತೆಯ ಒಬ್ಬ ಪ್ರಸಿದ್ಧ ವಕೀಲರು ಕೋರ್ಟಿನಲ್ಲಿ ತಮ್ಮ ಕಕ್ಷಿಗಾರರ ಕಡೆಯಿಂದ ವಾದ ನಡೆಸುತ್ತಿದ್ದಾಗ ಬ್ಯಾನರ್ಜಿಯವರು ಅಕಸ್ಮಾತ್ ಬಿದ್ದರು ಬಿದ್ದವರೇ ನೊರಳಾಡಿದರು ಮತ್ತೆ ಏಳಲಿಲ್ಲ ಹಾರ್ಟ್‌ಫೆಲ್ ಎಂದು ವರದಿಯಾಗಿದೆ



TEST YOUR EYES

By the Electro Ophthalmoscope



All Varieties of Frames & Lenses.

At

The Mangalore Trading Association Ltd.

Sight Testing Ophthalmic Opticians,

Car Street, MANGALORE.

ಲೋಧ್ರ

ಸ್ತ್ರೀಯರ ಸಮಸ್ತವಾದ ರೋಗಗಳಿಗೂ ವ್ಯಾಧಿಗಳಿಗೂ ದಿವ್ಯೌಷಧ

ತಯಾರಿಸುವವರು:

ಕೇಸರಿ ಕುಟೀರಂ

ಎಗ್ಮೋರ್ ಮದ್ರಾಸು.

ಮಂಗಳೂರು ಪ್ರವರ್ತಕರು

ದಿ ಪೊಪ್ಯುಲರ್ ಸ್ಟೋರ್ಸ್

ರಥಬೀದಿ, ಮಂಗಳೂರು.

"An ideal young progressive Life Office of India to Insure with or represent"

The Commonwealth Assurance Co., LTD., POONA.

TRIENNIAL BONUS! ON ENDOWMENT Rs. 37½. TRIENNIAL BONUS!! ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to:–

Messrs. GAWANKAR & SONS,

Chief Agents for Mysore state, Coorg, Ceded Districts & S. Kanara

AHMED BUILDINGS, CHICKPET, BANGALORE CITY.

Branches:–Bombay, Calcutta, Delhi, Madras & Nagpur.

Local Representatives:—THE MODERN TRADING CO., Mangalore.

Buy Advertised Goods

ಸೂತಿಕಾವಾಯು ಅಪಸ್ಮಾರ,

10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,

"ವಾಯುಮುಕ್ತಾ"

ಈ ಔಷಧವು ಪೇಟೇಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ದುಃಖರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕದ್ದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಎದೆಬಡಿತ, ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೀಡೆಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ತ್ರೀಯರಲ್ಲಿರುವಿಕೆ, ಅಪಸ್ಮಾರ, ಒದ್ದಾಟ 10 ನಿಮಿಷಗಳಲ್ಲಿ ದೂರವಾಗುತ್ತದೆ ಮತ್ತು ರೋಗಿಯು ಶಾಂತಿಯನ್ನೂ ತೃಪ್ತಿಯನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 3-0-0 ಮತ್ತು 30 ದಿನಗಳ ಔಷಧಿಗೆ ರೂ. 5,

ಪೋಸ್ಟೇಜು ಅಲಾಯಿದಾ.

G. L. Namawala,

Palace Road, BARODA.

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಪ್ಪ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ.

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಉತ್ತಮ ಬ್ರೆಡ್ಡ ವ ಬಿಸ್ಕಿಟುಗಳು ಎಲ್ಲರ ಮನೆತಾಣವಾಗಿವೆ. ರುಚಿಗೂ, ಆರೋಗ್ಯಕ್ಕೂ ಯೋಗ್ಯ. ಮಕ್ಕಳು ಭಕ್ಷ್ಯ ಆನಂದದಿಂದ ಸವಿಯುವರು ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡೆಯಿರಿ.

CITY BISCUIT WORKS,

Flower Market South, Mangalore.

ಮದನಕಾಮೇಶ್ವರಿ ಲೇಹ್ಯ.

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ್ ಸಮಾಜ, ಪೆರಡೇಪಿ.

P O Peradepi (ಸೌತ್ ಕೆನರ)

'Dil Roz' (Regd)

'Dil Roz' is a sure cure for Oriental sores local sores, all kinds of deep-rooted sores skin eruptions, Pimples, Eczema, Ringworm, Sinus, Fistula auxillary Abscess

There is no need of dressing the wounds nor are baths prohibited

Price Rs. 2.

Postage extra

TAHIR DIN

Anarkali, LAHORE

BEHAR CHEMICAL WORKS, BHAGALPUR.

ಗೊನೊಕ್ಯೂರು.

ಕೆಟ್ಟ ಚಾಳಿಗೆ ಸಿಕ್ಕಿ ಮೇಹವ್ಯಾಧಿಯನ್ನು ಸಂಪಾದಿಸಿಕೊಂಡವರಿಗೆ ಇದು ದಿವ್ಯವಾದ ಔಷಧವಾಗಿದೆ. ಒಂದೇ ದಿನದ ಔಷಧಿ ಉಪಯೋಗದಿಂದ ಗುಣ ಕಂಡುಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ–ಧಾತು ದಪ್ಪವಿದ್ದು ಹರಿದು ಒಳ್ಳೆ ಜಾಗ ಹೋಗುವುದು. ಶಕ್ತಿಗ್ರಂಥಿಗಳ ಸಂಬಂಧವಾಗಿ ಆಗುವ ಗುಳ್ಳೆಗಳು ಎಲ್ಲ ಮೂತ್ರವಾಗಿ ಬಿಡುವುವು, ಇದರಿಂದ ಸಪುಂಸಕತ್ವ ಮೊದಲಾದ ಪ್ರಮೇಹದ ಮೇಲೆ ಗೊನೊಕ್ಯೂರು ಖಾತ್ರಿಯಾದ ಔಷಧಿ. ಸೀಸೆ 1ಕ್ಕೆ ರೂ. 2—0—0

ವ್ಯಾಟ್ಯಾಲಿಟಿ ಪಿಲ್ಸ್.

ವಿದ್ಯಾರ್ಥಿಗಳಿಗೂ, ಹೆಚ್ಚಿಗೆ ಮೆದುಳಿನ ಶಕ್ತಿ ಉಪಯೋಗಿಸುವವರಿಗೂ ಈ ಮಾತ್ರೆಗಳು ಘನ ಉಪಯೋಗಕಾರಿಯಾಗಿವೆ. ವಿದ್ಯಾರ್ಥಿಗಳು ಚಿಕ್ಕ ಪ್ರಾಯದಲ್ಲಿಯೇ ಅಸಭ್ಯರಾಗಿದ್ದು, ತಾರುಣ್ಯವನ್ನು ಕೆಡಿಸಿಕೊಳ್ಳುವೆ, ಜಿತೇಂದ್ರಿಯತ್ವವನ್ನು ಕಳೆದುಕೊಂಡು ಸ್ವಭಾವಿಕ ಕೆಲಸಗಳಿಗೆ ಕೈಹಚ್ಚಿ ಜ್ಞಾಪಕ ಶಕ್ತಿಯನ್ನು ಕಳೆದುಕೊಂಡು, ಇಂದ್ರಿಯ ಸ್ಖಲನ ಮತ್ತು ನರಗಳ ದುರ್ಬಲತೆಗೆ ಸಿಲುಕುತ್ತಾರೆ, ಅಲ್ಲದೆ ಅವರು ಹಿಂಜರಿ ಕೂಡ ಹೇಳಲು ನಾಚಿಕೆಯಿಂದ ರೋಗವನ್ನು ಉಲ್ಬಣವಾಗುವದಕ್ಕೆ ಗೆ ತರುತ್ತಾರೆ. ಅಂಥವರು ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ ಶರೀರವು ಪುಷ್ಟಿಯಾಗಿ ನರಗಳಿಗೆ ಬಲಿಷ್ಟ ಬಂದು, ಕಳೆಗುಂದಿದ ಮುಖಕ್ಕೆ ವರ್ಚಸ್ಸು ಬರುವುದು—ಸೀಸೆ 1ಕ್ಕೆ ರೂ. 2–0–0.

ಏಜೆಂಟರ: ಷಾ ಕಂಪೆನಿ,

ಗವರ್ನಮೆಂಟ್ ಕಾಲೇಜ್ ಎದುರು

ಮಂಗಳೂರು.

ಹಾಸಿಗೆಯಿಂದೇಳುವಾಗಲೇ ತಲೆನೋವು ಇರುತ್ತಿತ್ತು

ಈಗ ಪ್ರತಿ ಪ್ರಾತಃಕಾಲವೂ ಆತನು ಚುರುಕಾಗಿಯೂ, ಚೈತನ್ಯಯುಕ್ತನಾಗಿಯೂ ಇರುವನು

ಕ್ರುಶನ್ ಲವಣವು ಅವನಿಗೆ ತುಂಬಾ ಸಹಾಯ ಕೊಡುವಂತಾಗಿದೆ

ಈ ಮನುಷ್ಯನು ಪ್ರತಿ ಪ್ರಾತಃಕಾಲ ತಲೆನೋವಿನಿಂದಲೇ ಏಳುತ್ತಿದ್ದನು. ಇದರಿಂದವನು ಖಿನ್ನ ವದನನಾಗಿದ್ದು, ನಿರುತ್ಸಾಹಿಯಾಗಿರುತ್ತಿದ್ದನು, ಆ ಮೇಲೆ ಆವನು ಕ್ರುಶನ್ ಲವಣವನ್ನು ಉಪಯೋಗಿಸಿದನು. ಪರಿಣಾಮವಾಗಿ ಜೀವನವು ಅವನಿಗೆ ಹರುಷವಾಯಿತು. ಅವನ ಪತ್ರವನ್ನು ಈ ಕೆಳಗೆ ಓದಿರಿ.

"ಬೆಳಗ್ಗೆ ಹಾಸಿಗೆಯಿಂದ ಏಳುತ್ತಲೇ ಅಸಹ್ಯ ತಲೆನೋವು ನನ್ನನ್ನು ಅಂಟಿಕೊಂಡೇ ಇರುತ್ತಿತ್ತು. ಒಂದು ವರ್ಷದ ಕೆಳಗಿನಿಂದ ನಾನು ಕ್ರುಶನ್ ಲವಣವನ್ನು ಕ್ರಮವಾಗಿ ತೆಗೆದುಕೊಳ್ಳುವ ಅಭ್ಯಾಸ ಮಾಡಿಕೊಂಡೆ. ಈಗ ನಾನು ಏಳುವಾಗ ಚುರುಕಾಗಿಯೂ ಚೈತನ್ಯಭರಿತನಾಗಿಯೂ ಇರುವೆನು. ಮತ್ತು ನನ್ನ ದಿನನಿತ್ಯದ ಕೆಲಸಗಳನ್ನು ಸರಿಯಾಗಿ ಸುಲಭದಿಂದ ಮಾಡಬಲ್ಲೆನು. ಕ್ರುಶನ್ ಲವಣವು ನನಗೆ ತುಂಬಾ ಸಹಕಾರಿಯಾಗಿರುತ್ತದೆ. ಅದನ್ನು ತೆಗೆದುಕೊಂಡ ನಂತರ ನಾನು ತುಂಬಾ ಆರೋಗ್ಯಯಾಗಿದ್ದೇನೆ. ಅಗ್ನಿಮಾಂದ್ಯ ತಲೆನೋವುಗಳನ್ನು ಹೋಗಲಾಡಿಸಿ ಚೈತನ್ಯ ಭರಿತ ನವಜೀವನವನ್ನು ಪಡೆಯಲಿಚ್ಛಿಸುವವರಿಗೆ ಕ್ರುಶನ್ ಲವಣವನ್ನು ನಾನು ತುಂಬಾ ಶಿಫಾರಸು ಮಾಡಬಯಸುತ್ತೇನೆ. ನನ್ನ ಜೀವನಾಂತ್ಯದವರೆಗೂ ಕ್ರುಶನ್‌ಲವಣದ ಪ್ರಯೋಗವನ್ನು ಮುಂದುವರಿಸಲು ನಿರ್ಧರಿಸಿದ್ದೇನೆ"

ಇ ಪಿ

ಹೊಟ್ಟೆಯೊಳಗಾಗುವ ಅವ್ಯವಸ್ಥೆಯೇ ತಲೆನೋವಿನ ಕಾರಣವಾಗಿರುತ್ತದೆ. ರಕ್ತವನ್ನು ವಿಷಪ್ರಾಯವಾಗಿ ಮಾಡುವ ಆಹಾರ ಶೇಷಗಳು ಹೊಟ್ಟೆಯಲ್ಲಿ ಕೊಳೆಯುತ್ತಿರುತ್ತವೆ. ಈ ವಿಷವನ್ನು ತೆಗೆದುಹಾಕಿರಿ—ಅವುಗಳು ಇನ್ನೊಮ್ಮೆ ಒಟ್ಟುಗೂಡದಂತೆ ನೋಡಿರಿ ಅಂದರೆ ನಿಮಗೆ ಸುಖವಾಗಬಹುದು ಹೀಗೆಯೇ ಕ್ರುಶನ್ ಲವಣವು ಹೊಟ್ಟೆಯೊಳಗೆ ಕೆಲಸ ಮಾಡಿ ತ್ವರೆಯಾಗಿ ಗುಣವನ್ನು ಕೊಡುತ್ತದೆ. ಪ್ರಕೃತಿಯವಾಗಿ ಹೊಟ್ಟೆಯೊಳಗಿನ ಕಲ್ಮಷಗಳು ತೊಳೆಯಲ್ಪಟ್ಟು ವಿಷಧಾತುಗಳು ಸಂಪೂರ್ಣವಾಗಿ ಹೊರಹಾಕಲ್ಪಡುವುವು.

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗ್ನೋಲಿಕಟ್ಟಾ ಬಜಾರ್, ಮಂಗಳೂರು.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಅದ್ಭುತವು ಔಷಧ ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳೆತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಗದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ, ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ. ಪಿ. ಖರ್ಚು ಬೇರೆ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr D. N. JASANI**, Vithalbhai Patel Road, BOMBAY 4



ಸನ್‌ಲೈಟು ಸೋಪನ್ನು ಉಪಯೋಗಿಸುವುದರಿಂದ ಬಟ್ಟೆಗಳು ಏಕೆ ಬಹಳ ಬಾಳಿಕೆಬರುತ್ತವೆ.



ನೀವು ಸನ್‌ಲೈಟು ಸೋಪನ್ನು ಉಪಯೋಗಿಸಿದಾಗ ಅದರ ಹೇರಳವಾದ ನೊರೆಯು ನಿಮ್ಮ ಬಟ್ಟೆಯ ಕೊಳೆಯನ್ನು ಹೆಚ್ಚಿಗೆ ಒಗೆಯದನೇ ಚೆನ್ನಾಗಿ ಹೋಗಿಸುತ್ತದೆ ಸನ್‌ಲೈಟು ಬಟ್ಟೆಯ ಬಣ್ಣವನ್ನು ಕಾಪಾಡುವುದಲ್ಲದೆ, ಅದರ ಮೃದುವಾದ ಕೆಲಸಗಳು ಬಟ್ಟೆಯನ್ನು ಬಹುಕಾಲ ಬಾಳಿಕೆ ಬರುವಂತೆ ಮಾಡುತ್ತವೆ.

ಮೇಲಿನಚಿತ್ರವು ಫೋಟೋತೆಗೆದು ದೊಡ್ಡದುಮಾಡಿ, ಕೀಳು ಸೋಪುಗಳನ್ನು ಉಪಯೋಗಿಸಿ ಬಟ್ಟೆಗಳನ್ನು ಒಗೆಯುವುದರಿಂದ ಅವು ಯಾವರೀತಿ ಇವೆ ಎಂಬುದನ್ನು ತೋರಿಸುತ್ತದೆ. ನೀವು ಕಿತ್ತುಹೋಗಿರುವ ದಾರದ ಎಳೆಗಳನ್ನು ನೋಡಬಹುದು.

ಕೆಳಗಿನಚಿತ್ರವು ಸನ್‌ಲೈಟು ಸೋಪಿನಲ್ಲಿ ಸರಿಯಾಗಿ ಒಗೆದ ಬಟ್ಟೆಯ ರೀತಿಯನ್ನು ಫೋಟೋತೆಗೆದು ದೊಡ್ಡದುಮಾಡಿ ತೆಗೆದುಕೊಂಡದ್ದು. ನೀವು ಬಟ್ಟೆಯ ಎಳೆಗಳು ಹೊಸದರಂತೆಯೇ ಇರುವುದನ್ನು ನೋಡಬಹುದು. ದಾರದ ಎಳೆಗಳು ಮೊದಲಿನಂತೆಯೇ ಬಲವಾಗಿ ಇವೆ.

ಸನ್‌ಲೈಟು ಸೋಪು

SUNLIGHT SOAP



ಇಂಡಿಯಾದಲ್ಲೇ ವನಸ್ಪತಿಗಳ ಶುದ್ಧವಾದ ಎಣ್ಣೆಯಿಂದಲೇ ತಯಾರಿಸಿದುದು.

LEVER BROTHERS (INDIA) LIMITED

KANARESE

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು!

ಅತೀ ಕಮ್ಮಿ ದರ!



ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ, ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ,

ಹಾನಿಕರವಾದ ಪದಾರ್ಥಗಳು

ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ

ಬಾಟ್ಲಿ ಒಂದರ ಬೆಲೆ: ಆಣೆ 8 ಮಾತ್ರ.

Manufactured by:—

J. B. Dutt & Co., Calcutta,

Sole agent:—

ಪೊಪ್ಯುಲರ್ ಸ್ಟೋರ್ಸ್ ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು

ಕೊಡುತ್ತದೆ

ಡೋಂಗರೇ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ಸಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ

ಸಿಗುವ ಸ್ಥಳ —

ಷಾ ಮತ್ತು ಕಂಪೆನಿ.

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

AMRUTANJAN DEPOTS BOMBAY, MADRAS, CALCUTTA

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲಿ ದೊರೆಯುವುದು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು.)

Member Reserve Bank of India

1.	ಅಧಿಕೃತ ಚಂದಾ ಹಾಕಲು ಅರ್ಪಿಸಿದ ಮೂಲಧನ	ರೂ 3,50,000 - 0 — 0
2.	ಚಂದಾ ಹಾಕಿ ಎತ್ತಿದ ಮೂಲಧನ	ರೂ. 2,88,950 — 0 — 0
3.	ಕ್ಷೇಮನಿಧಿಗಳು . . .	ರೂ 3,63,578 - 0 - 0

ವ್ಯವಹಾರದಲ್ಲಿದ್ದ ಜಮಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

Member Clearing House Madras.

ಹೆಡ್ ಆಫೀಸು:—ಉಡುಪಿ.

ಬ್ರಾಂಚುಗಳು.—1. ಮದ್ರಾಸು; 2. ವೆಲ್ಲೂರು; 3. ತಲಚೇರಿ; 4. ರಥಬೀದಿ, ಮಂಗಳೂರು, 5. ಬಂದ್ರ, ಮಂಗಳೂರು; 6. ಉಡುಪಿ; 7. ಶಿರ್ವ; 8. ಕುಂದಾಪುರ; 9. ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13. ಮೈಸೂರು, 14 ಮಡಿಕೇರಿ; 15 ವೀರರಾಜೇಂದ್ರಪೇಟೆ.

ನೋಟೀಸು

ಈ ಬ್ಯಾಂಕಿನ ಒಂದು ಶಾಖೆಯು "ಸ್ಲೇಲಂ"ನಲ್ಲಿ ಇಂದು ತಾ. 4—6—1937ರಲ್ಲಿ ತೆರೆಯಲ್ಪಟ್ಟಿತು.

ಅಂದಿನಿಂದ ಅಲ್ಲಿ ಬ್ಯಾಂಕಿಂಗ್ ವ್ಯವಹಾರಗಳನ್ನು ಪ್ರಾರಂಭಿಸಲ್ಪಟ್ಟಿದೆ.

10—6—1937

V. R. Kamath, B.A. LL. B

Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied Buy now and you will also be convinced

Manufactured by –

The West Coast Soap Factory

ನಮ್ಮ 515 ಕೆಂಪು 365 ಮತ್ತು 232

ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ

Sole Agents

Panchmal Krishnaya Shenoy & Son,

Bunder MANGALORE

ಗುಣಬಾರದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಷ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ...ಹ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಇಲ್ಲವೇ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯ ಎವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು, ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುಗಮವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ... ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ದಯವಿಟ್ಟು ಸರ್ಟಿಫಿಕೇಟು ಡಾ॥ ಬಿ. ಎ. ವೈದ್ಯ, ಎಲ್ ಸಿ ಪಿ ಎಸ್ ಕೇಳವಾದಿದು, ಇವರೇ ಈ ಚೂರ್ಣದಿಂದ ಯಾವ ತರದ... ಯುವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯು ಕ್ರಯ ರೂ ೪—೦— ವಿ ಪಿ ಅಣೆ ೮

ವಿಳಾಸ —ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ ಸಾಲಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ, ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2 8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡ ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ ಬಾಟ್ಲಿ 1ಕ್ಕೆ ರೂ 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳಃ ಡಾಕ್ಟರ ಬಿ ಎಚ್ ಪದ್ಮನಾಭ ಪೈ, ಚಿಕ್ಕಮಂಗಳೂರು 2 ಶ್ರೀರಾಮ ಸ್ಟೇಶನರಿ ಹೌಸ್ ಶ್ರೀರಾಮಪೇಟೆ, ಕಾಸರಗೋಡು 3 ಮೆಸರ್ಸ್ ಕಾಮತ್ ಎಂಡ್ ಕೋ, ಗಿರಿಗಾಂ ಮುಂಬಾಯಿ 4 ಕೆ ಶ್ರೀ ದಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents—

The Kerala Tea Syndicate,

PONANI—(S. Malabar.)

ನಿಮ್ಮ ಮನೆಯಲ್ಲೇ ಸಿನಿಮಾ.

೨×೬×೬ ಇಂಚುಗಳಷ್ಟು ಅಳತೆಯುಳ್ಳದ್ದು ಅಖಂಡ ಸ್ಟೀಲಿನಿಂದ ತಯಾರಿಸಲ್ಪಟ್ಟಿದೆ

ಬಹಳ ಶಕ್ತಿಯು ಭೂತ ಕನ್ನಡಿಗಳಿಂದ ಜೋಡಿಸಲ್ಪಟ್ಟು ಜೊತೆಗೆ 100 ಗಜ (300 ಅಡಿ) ಗಳಷ್ಟು ಉದ್ದದ ಚಲನ ಚಿತ್ರಗಳ ಫಿಲ್ಮ ಕೂಡಾ ಕೊಡಲಾಗುತ್ತದೆ ಒಂದು ಚಿಕ್ಕ ಬಟನ್ ಲ್ಯಾಂಪಿನ ಪ್ರಕಾಶದಿಂದ ನಿಮ್ಮ ಮನೆಗಳ ಕೋಣೆಗಳಲ್ಲಿ ಸ್ಪಷ್ಟವಾದ ಚಲನಚಿತ್ರಗಳ ಪ್ರದರ್ಶನ ಮಾಡಬಹುದು ಒಂದು ಯಂತ್ರವನ್ನು ಈಗಲೇ ತರಿಸಿಕೊಳ್ಳಿರಿ ಯಂತ್ರದೊಡನೆ 100 ಗಜ ಫಿಲ್ಮಿಗೂ ಒಂದು ಬೆಟರಿ ಲೈಟಿಗೂ ಸಮೇತ ರೂ 7 8—0 ಮಾತ್ರ ರೂ 1ರ ಟಿಪಾಲ ಚೀಟುಗಳನ್ನಾಗಲೀ ಪೋಸ್ಟಲ್ ಆರ್ಡರ್ ಮೂಲಕವಾಗಲೀ ಅಡ್ವಾನ್ಸಾಗಿ ಕಳುಹಿಸಬೇಕು

Novelty Stores, I B No 275 Madras



೧ ರೂಪಾಯಿಗೆ ೫೦೦೦ ರೂಪಾಯಿಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರೀಮಿಯಂ ಕಟ್ಟಬೇಕಾಗಿಲ್ಲ, ಮತ್ತೆ ಪ್ರೀಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆತ್ ರೋಡ್, ಲಾಹೋರು.

Write for full particulars to:

M. S. V. Kamath,

BOLUR, MANGALORE.

Dist Agent for SOUTH CANARA

Dist. Agent for North Kanara

Mr. **I. A. Shaik Khaji Mohalla,**

ANKOLA.

Edited Printed & Published By A. S. Kamath at the Sharada Press, Car Sreet, Mangalore

egd. No. M. 3406.

ಸ್ವದೇಶಾಭಿಮಾನಿ

SWADESHABHIMANI

[ESTABLISHED 1906

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲಸುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನಾ । ವಾರಿತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೧. ಮಂಗಳೂರು ತಾ. ೨೫ನೇ ಜೂನ್ ೧೯೩೭. (25-6-'37) ಸಂಚಿಕೆ

ಮೈಸೂರಿನ ಶ್ರೀಮನ್ಮಹಾರಾಜರವರು

ಇದೇ ತಿಂಗಳ ತಾ. ೧೯ನೇ ಶನಿವಾರ ಇವರ ೫೪ನೇ ವರ್ಧಂತ್ಯುತ್ಸವವು ಬಹು ವಿಜೃಂಭಣೆಯಿಂದ ಜರಗಿತು-ಇವರ ೩೩ ವರ್ಷಗಳ ಆಳ್ವಿಕೆಯಿಂದ ಮೈಸೂರಿನ ಕೀರ್ತಿಯು ದಶದಿಕ್ಕುಗಳಿಗೂ ಹರಡಿದೆ.

Note...... ನೋಟಗಳು.

ಆಕ್ಟನ್ನು ನಂಬಿದರು ಮನ ದ ಯ ದ ಪಾರ್ಲಿಮೆಂಟಿಗೆ ಆಕ್ಟಿನೊಳಗೆ ನಿಂತು ಕಳಿದಲ್ಲಿ ಆರ್ಟಿಕಲ್ಲಿನಂತಹವರು ಒಂದೊಂದು ಹೊರಗುಂಡನ್ನೆಸೆದರು. ಒಂದೊಂದು ಸಲ ಅದು ಸ್ವದೇಶೀಯರ ಕಡೆಗಾಗಿ ಎಷ್ಟು ಸಲ ಸರಕಾರಕ್ಕೆ ವಿರುದ್ಧವಾಗಿ ಸಿಡಿಯುವುದುಂಟು. ಈ ಗುಂಡಿನಿಂದ ಇತರ ಭಯಂಕರ ಬಾಧೆಯೇನೂ ಇಲ್ಲವಾದರೂ, ಮಂತ್ರಿಗಳಿಗೆ ಸಕ್ರೆಟರಿಗಳಿಗೆ ಸಾಕೋಸಾಕಾಗುತ್ತದೆ.

o o o o

ಆಕ್ಟಿನೊಳಗೆ ಅಡಗಿದ್ದುದನ್ನು ಹೊರಗೆಡ ವಲು ಅಷ್ಟು ಕಠಿನ ಪ್ರಯತ್ನಗಳ ಆಗತ್ಯವೇ ಇಲ್ಲ. 'ಸ್ವರಾಜ್ಯ'ವಿದೆ ಆದರೆ, ಅದರ ತಿರು ಳನ್ನು ತೋರಿಸಿರಿ ಎಂದರಾಯಿತು. ಗಾಂಧಿಜಿ ಯವರು ಕೇಳಿದನ್ನು ಎಲ್ಲವೂ ತಿರುಳೇ ಎಂದರು ನಿನ್ನೆಯ ವರೆಗೆ, ಆದರೆ, ಅದೆಲ್ಲ ಪೊಳ್ಳು ಎಂದಾಯಿತು, ಕೊನೆಗೆ.

o o o o

ಅದು ವರೆಗೆ ವೈಸ್ರಾಯರು ಮೌನವ್ರತ ಆಚರಿಸಿಯೇ ಇದ್ದರು ಲಂಡನಿನಿಂದ ಡಿಲ್ಲಿಗೆ ಆಕ್ಟನ್ನು ಜ್ಯಾರಿಗೆ ತರುವ ವಿಷಯ ಯಾವ ಸಂಬಂಧವೂ ಇಲ್ಲ, ಸೂಚನೆಯೂ ಇಲ್ಲ. ಎಲ್ಲವೂ ಆಯಾ ಪ್ರಾಂತ್ಯದ ಅಧಿಕಾರಿ ಗವರ್ನ ರರ ಇಂಗಿತವೇ ಎಂದು ನಿನ್ನೆಯ ತನಕ ಸಾರು ತಿದ್ದವರು,—ಇಂಡಿಯಾ ಕರಣೀಕರು, ಮುಖ್ಯ ಮಂತ್ರಿಗಳು, ಉಪಕರಣೀಕರು, ಸ್ವಲ್ಪ ಬಾಯಿ ತೆರೆಯುತ್ತಿದ್ದಂತೆಯೆ, ಇನ್ನು ವೈಸ್ರಾಯರು ಸ್ವಲ್ಪ ಅಭಿಪ್ರಾಯ ಹೇಳಿದರೆ, ಪ್ರಾಂತ್ಯದ ಗವ ರ್ನರುಗಳೂ ವ್ಯಾಖ್ಯೆ ಬರೆಯುವರು ಎಂದರು ಸರಿ ವೈಸ್ರಾಯರ ಭಾಷಣ, ಹೇಳಿಕೆ ಹೊರ ಟಿತು

o o o o

ಇನ್ನೂರು ವರ್ಷ ಆಳಿದ್ದೇವೆ ನಾವು ತಪ್ಪು ಮಾಡಿದ್ದಿರಬಹುದು ಯೋಗ್ಯ ಸಂದ ರ್ಭದ ಉಪಯೋಗ ಮಾಡಿಕೊಳ್ಳದೆ ಇದ್ದಿರ ಬಹುದು ಆದರೆ ನಮ್ಮಲ್ಲಿ ವಿಶ್ವಾಸವನ್ನಿಡಿ ಪೂರ್ವ ಪಶ್ಚಿಮಗಳು ಒಂದಾಗಿ ಶಾಂತವಾಗಿ ಕೂಡೋಣ ಎನ್ನುತ್ತೇವೆ ಆಗದೆ? ಪ್ರಯತ್ನಿಸಿ ನೋಡೋಣ ಎನ್ನುವರು ವೈಸ್ರಾಯರು ಯಥಾರ್ಥವಚನ

o o o o o

ಕೊಂಗ್ರೆಸ್ ಏನೆನ್ನುವುದು? ಅದಕ್ಕೆ ಬೆಂಬಲವೇನೂ ಇಲ್ಲವೆಂದು ಜೋರರು ಹಿಂದೆ ಹಿಯ್ಯಾಳಿಸಿದ್ದು ಇಂದೆಲ್ಲಿಗೆ ಉಳಿಯಿತು? ಕೊಂಗ್ರೆಸು ಎಂದು ಹೆಸರೆತ್ತದೆ, ಅದನ್ನೆ ಕುಂತು ಸಮಾಧಾನ ಹೇಳುತ್ತೇವೆಂದು ಹೇಳದೆ ಸಮಾ ಧಾನ ಮಾಡಲು ಯತ್ನಿಸಿ, ಹೆಸರೆತ್ತಿದರೆ ಯಾವ ದೇವರ ನಾಮ ಎತ್ತಿದ ಅಪರಾಧವಾಗುವುದೋ ಎಂಬಂತೆ ಪಾರ್ಲಿಮೆಂಟಿನಲ್ಲಿ ಬಹು ಭಾಷಣ ಗಳನ್ನು ಮಾಡಿದ ಮಹಾಧಿಕಾರಿಗಳು ಇರು ವರು ಅವರ ರೀತಿಯನ್ನು ಇಲ್ಲಿನ ಅಧಿಕಾರಿ ಗಳೂ ಬಹು ಮಟ್ಟಿಗೆ ಅವರು ಐ ಸಿ ಎಸ್ ನವರಾದಾಗ ಅಂಗೀಕರಿಸಿದ್ದಾರೆ ಗವರ್ನ ರರೂ ವೈಸ್ರಾಯರೂ ಅಂಗೀಕರಿಸಿಲ್ಲ ಇದೂ ವಿಹಿತವೆ

o o o o o

ಆಕ್ಟನ್ನು ಮುರಿದು,—ಪರಕೀಯರ ಪಕ್ಷ ವಾದುದರಿಂದ—ಹೊಸ ಆಕ್ಟನ್ನು ಸ್ವದೇಶೀಯರೇ ರಚಿಸಬೇಕೆನ್ನುತ್ತೇವೆ ಎಂಬ ಕೊಂಗ್ರೆಸಿನ ಮಾತು ಉಳಿದೇ ಇದೆ ಆ ಮಾತಿಗೆ ಭಂಗ ಬಂದಂತಿಲ್ಲ. ಆಕ್ಟನ್ನು ಅನುಸರಿಸಿ ಕೆಲಸ ಮಾಡಲು ಪ್ರಾಣವನ್ನಾದರೂ ಒಪ್ಪಿಸಿಯೇವು ಎನ್ನುವರು ಮಹಾತ್ಮಾಜಿಯವರು. ಅದು ಹೇಗೆ?

o o o o o

ಆಕ್ಟನ್ನು ಅಂಗೀಕರಿಸಿ ಕೆಲಸ ಮಾಡು ವಾಗಲೇ, ಅದರೊಳಗಣ ಹುಳುಕನ್ನು ಸರ್ವ ರಿಗೂ ನಿಚ್ಚಳವಾಗಿ ತೋರುವಂತೆ ಪಾರ್ಲಿ ಮೆಂಟಿನಲ್ಲಿ ಇಂಡಿಯಾದ ಹೆಸರು ಕೂಡ ತಿಳಿಯ ದವರು ಇಂಡಿಯಾ ಆಕ್ಟನ್ನು ಒಮ್ಮೆ ಓದಿ ನೋಡುವಂತಾಗಿ, ಹೊಸ ಹೊಸ ಅಭಿಪ್ರಾಯ ಗಳು ಹೊರಬೀಳುವಂತಾಯಿತು.

ಆಕ್ಟು ಸರಿಯಾಗಿಲ್ಲ. ನಾವು ಕೊಡ ಬೇಕಾಗಿದ್ದುದನ್ನು ಕೊಡಬೇಕೆಂದುದನ್ನು ಈ ಆಕ್ಟು ಕೊಟ್ಟಿಲ್ಲ ಎಂದೇ ಪಾರ್ಲಿಮೆಂಟಿನ ಸಭ ಸ್ಯರೂ ತಿಳಿದು ಕಾಂಗ್ರೆಸಿಗೆ ತಿಳಿಸಿ; ಆಕ್ಟನ್ನು ತಿದ್ದುವ ಹಾಗೆ ಬೇಡಿದರೆ ಎಂಬರ್ಥದ ಸೂ ಚನೆ ಕಳುಹುವಂತಾಗಿದೆ. ಅಗಲೆ, ವೈಸ್ರಾ ಯರು ಏನೂ ಮಾಡಲು ಆಕ್ಟಿನಲ್ಲಿ ಉಪಾಯ ವಿಲ್ಲ ಎಂದ ಟೈಮ್ಸ್ ಪತ್ರಿಕೆಯ ವೈಸ್ರಾಯರು ಈಗ ನಿಜ ಸ್ಥಿತಿಯನ್ನು ವಿವರಿಸಿ ಸರಕಾರಕ್ಕೂ ಕೊಂಗ್ರೆಸಿಗೂ ಉಂಟಾಗಿರುವ ಈ ವಿವಾದ ವನ್ನು ಮುಗಿಸಲು ಅನುಕೂಲ ಎಂದು ಬರೆ ದಿದೆ!

o o o o

ಟೈಮ್ಸ್ ಎಂಬುದು ಬ್ರಿಟಿಷ ಸರಕಾರದ ದರ್ಶನದ ಪಾತ್ರ ಉದಾಹರಣೆಯಾಯಿತು ಇನ್ನು ಬ್ರಿಟಿಷ ಜನತೆಯೂ ಅದನ್ನೆ ನಿರೀಕ್ಷಿಸಿ ಕೂತಿತು

o o o o o

ಐ ಸಿ ಎಸ್ ಗವರ್ನರರು ಯಾವಾ ಗಲೂ ತಾವು ಮುಂದೆ, ದೇಶವಾಸಿಗಳ ಲಕ್ಷಣ ಗಳನ್ನು ದೇಶದ ಹವೆಯನ್ನು ಚೆನ್ನಾಗಿ ಬಲ್ಲ ವರು ಎಂದು ಎಂತಹ ಸಂದರ್ಭಗಳಲ್ಲೂ ವೈಸ ರಾಯರು ಗವರ್ನರರುಗಳಿಗಿಂತ ಮೊದಲೇ ಕೆಲವು ಗೋಪನಗಳನ್ನು ಬಹಿರಂಗಪಡಿಸು ವವರು ಬಿಹಾರದಲ್ಲಿ ಕೆಲವು ಮಾತುಗಳಲ್ಲಿ ಸದ್ಯಸ್ಥಿತಿಯ ಇತ್ಯರ್ಥವನ್ನು ಅಲ್ಲಿಯ ಗವರ್ನ ರರು ಸೂಚಿಸುವರೆ ಮುಂದೆ ಬಂದುದು ಏಷ್ಟ ಕ್ಕಾಗಿಯೆ

o o o o

ಅಲ್ಲಲ್ಲಿಯ ಗವರ್ನರರು ಅಲ್ಲಲ್ಲಿ ಭಾಷಣ ಮಾಡಿ ಮಾಡುವ ಇತ್ಯರ್ಥಗಳು ಆಯಾ ಗವರ್ನರರ ಕಾಲಕ್ಕೆ ಮಾತ್ರ ಜ್ಯಾರಿ ಯಲ್ಲಿರುವುವು ಆಯಾ ಪ್ರಾಂತ್ಯಗಳಿಗೆ ಮಾತ್ರ ಅನ್ವಯಿಸುವುವು ಆದುದರಿಂದ ಎಲ್ಲಾ ಪ್ರಾಂತ್ಯಗಳಿಗೂ ಯಾವ ಕಾಲಕ್ಕೂ ಅನ್ವಯಿ ಸುವ ಬಗೆಯ ಇತ್ಯರ್ಥ ಸೂಚಿಸಲು ವೈಸ್ರಾ ಯರೇ ಬೇಕು ಅದಕ್ಕಾಗಿ ವೈಸ್ರಾಯರ ಹೇಳಿಕೆ ಅಗತ್ಯ ಹೊರಡಬೇಕಾಯಿತು

o o o o o

ಅವರು ಬ್ರಿಟಿಷ ಸರಕಾರಕ್ಕೆ ಹೊಣೆ, ಅವರ ಮಾತು ಬ್ರಿಟಿಷ ಸರಕಾರದ ಮಾತು ಇದನ್ನಿನ್ನು ತಿಳಿದ ಬಳಿಕ, ತಾತ್ಕಾಲಿಕ ಮಂತ್ರಿ ಗಳು ಬೇಗನೆ ಸಭೆಗಳನ್ನು ಕೂಡಿಸಲು ಗವರ್ನ ರರಿಗೆ ಸೂಚಿಸಿ, ಸರಕಾರವು ಯೋಗ್ಯ ಪ್ರತಿನಿಧಿ ಗಳ ಕೈಗೆ ಸರಾಗವಾಗಿ ಕೈವರ್ತಿಸಿಕೊಡ ಬರು ವಂತೆ ಅನುಕೂಲಿಸಲು ಯತ್ನಿಸಬೇಕು

o o o o

ಈ ಮಧ್ಯೆ, ವೈಸರಾಯರ ಅಭಿಮತವೂ ಲಂಡನಿನ ಅಭಿಮತವೂ ಒಂದಾಗಿರಲಿಲ್ಲವೆಂದೂ ಅದಕ್ಕಾಗಿಯೆ ಅವರು ಇದುವರೆಗೆ ಮೌನವಾ ಗಿದ್ದರೆಂದೂ ವಾರ್ತೆ ತ್ತು. ಕೆಲವರು, ಅವರು ರಾಜೀನಾಮೆ ಕೊಡುವರಂತೆ ಎಂದಿದ್ದರು ರಾಜೀನಾಮೆಯ ಮಾತಿರಲಿ ವೈಸ್ರಾಯರ ಅಭಿಪ್ರಾಯವು ಕರಣೀಕರ ಅಭಿಪ್ರಾಯದಂತಿ ರಲಿಲ್ಲ ಎಂಬುದಕ್ಕೇ ಅವರನ್ನು ನಾವು ಅಭಿ ನಂದಿಸಬೇಕು. ನ್ಯಾಯದೃಷ್ಟಿಯಿಂದ ಕಂಡರೆ ವೈಸ್ರಾಯರು ದೃಢವಾಗಿಯೂ ನಿಷ್ಪಕ್ಷ ಕಡೆಗೆ ಒಲಿದಿರುವರೆಂದೇ ಎನ್ನಬೇಕು. ಇಂಡಿಯದ ಜನಾಭಿಪ್ರಾಯದ ಸಕ್ಷತೆಯನ್ನು ತಾವೂ ಕರ ಣೀಕರಿಗೆ ಬೆದರದೆ ತಿಳಿಸುವಷ್ಟು ಧೀರತೆಯುಳ್ಳ ವೈಸ್ರಾಯರು ಹೆಚ್ಚು ಮಂದಿ ಇದ್ದಿಲ್ಲ.

o o o o o

ಲೋರ್ಡ ಲಿನ್ಲಿತ್ಗೋರವರು ಇಂಡಿಯದ ಕನ್ನಡಕವನ್ನಿಟ್ಟುಕೊಂಡಿರುವರು, ಲಂಡನಿನದಲ್ಲ ಎಂದು ಇದರಿಂದ ನಿಜವಾಗಿಯೂ ತಿಳಿದು ಬರುವುದು.

ಲಂಡನಿನಲ್ಲಿ ಮಸೀದಿ.

ಲಂಡನ್ ಪಟ್ಟಣದ ವೆಸ್ಟ್‌ಕೆನ್‌ಸಿಂಗ್ಟನ್ ಎಂಬಲ್ಲಿ ಮಹಮ್ಮದೀಯರಿಗೊಂದು ಮಸೀ ದಿಯನ್ನು ಕಟ್ಟಲು ನಿಶ್ಚಯಿಸಿರುತ್ತದೆ ಎರಡು ವಾರಗಳ ಹಿಂದೆ ಹೈದರಾಬಾದ್ ಸಂಸ್ಥಾನದ ಅರಸರಾದ ನೈಜಾಂರವರ ಪುತ್ರರಾಳ ಬೀರಾ ರಿನ ರಾಜ ಕುವರರು ಈ ಮಸೀದಿಯ ತಂಕು ಸ್ಥಾಪನೆಯನ್ನು ಮಾಡಿದರು.

'ಓವಲ್‌ಟಿನ್' ಪುಷ್ಟವಾದ ದೇಹವನ್ನೂ ಚಟುವಟಿಕೆ ವುಳ್ಳ ಮನಸ್ಸನ್ನೂ ಉಂಟು ಮಾಡುತ್ತದೆ

ಮಲಗುವ ವೇಳೆಯಲ್ಲಿಯೂ, ಊಟದ ಸಮಯದಲ್ಲೂ ಓವಲ್‌ಟಿನ್ನನ್ನು ನಿಮ್ಮ ಮಕ್ಕಳ ದಿನನಿತ್ಯದ ಪಾನೀಯವನ್ನಾಗಿ ಮಾಡಿದರೆ ಗಟ್ಟಿ ಮತ್ತು ಆರೋಗ್ಯವುಳ್ಳ ದೇಹವನ್ನೂ, ನರಗಳನ್ನೂ ಮತ್ತು ಚುರುಕಾದ ಮಾನಸಿಕ ಶಕ್ತಿಯನ್ನೂ ಬೆಳೆಸಲಿಕ್ಕೆ ಬೇಕಾಗುವ ಪೌಷ್ಟಿಕ ಪದಾರ್ಥಗಳು ಅದರಿಂದ ದೊರೆಯು ತ್ತದೆಂದು ಖಂಡಿತವಾದ ಮಾತು

ಶ್ರೇಷ್ಠವಾದ ಪಕ್ವ ಬಾರ್ಲಿ ಸತ್ವದಿಂದಲೂ, ಹಸಿಯಾದ ದನದ ಕೆನೆಹಾಲಿನಿಂದಲೂ ಶಾಸ್ತ್ರೀಯವಾಗಿ ತಯಾರು ಮಾಡ ಲ್ಪಟ್ಟದ್ದರಿಂದ 'ಓವಲ್ಟಿನ' ಕಮ್ಮಿ ವೆಚ್ಚದಲ್ಲಿ ಹೆಚ್ಚಿನ ಆರೋಗ್ಯ ಪುಷ್ಟಿಯನ್ನು ಕೊಡುತ್ತದೆ ನೀವು ಕೊಂಡುಕೊಳ್ಳ ಬಹುದಾದ ಆಹಾರಗಳಲ್ಲೆಲ್ಲಾ ಇದು ಸರ್ವಶ್ರೇಷ್ಠವಾದ ಏಕಮಾತ್ರ ಆಹಾರವಾಗಿರುತ್ತದೆ

ಶ್ರೇಷ್ಠತೆಯಲ್ಲಿಯೂ ಬೆಲೆಯಲ್ಲಿಯೂ ಓವಲ್ಟಿನ್ ಏಕ ಮಾತ್ರವಾಗಿ ನಿಲ್ಲುತ್ತದೆ ಆದರೆ ಮನೆಯಲ್ಲಿ ಉಪಯೋ ಗಿಸುವ ಸಕ್ಕರಂತೆಯಂತಹ ಅಗ್ಗವಾದ ವಸ್ತುಗಳ ಓವಲ್ಟಿನ್ ನಲ್ಲಿಲ್ಲ ನಿಮ್ಮ ಮಕ್ಕಳ ಆರೋಗ್ಯಹಿತಕ್ಕಾಗಿ ಓವಲ್ಟಿನ್ನನ್ನೇ ಉಪಯೋಗಿಸಿರಿ ನಕಲಿಗಳಿಗೆ ಮೋಸಹೋಗದಿರಿ

OVALTINE

'ಓವಲ್‌ಟಿನ್' ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ

ಏಜಂಟ್ಸ್— ಜೇಮ್ಸ್ ರ್ಯಾಟ್, 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ.

ಮೈಸೂರು ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಮೈಸೂರು ಸಂಸ್ಥೆಗಳಿಂದ ಮಹಾತ್ಮ್ಯಕ್ಕೆ ಸ್ವಾಭಾವಿಕವಾದ ಒಂದು ಭರವಸೆಯು ಉತ್ಪನ್ನವಾಗುತ್ತದೆ. ಇದಕ್ಕೆ ಅನೇಕ ಕಾರಣಗಳುಂಟು. ಮೈಸೂರಿನಲ್ಲಿ ಸ್ಥಾಪಿತವಾದ ಸಂಸ್ಥೆಗಳು ಇಂದು ಅಪಾರ ಅಭಿವೃದ್ಧಿಯನ್ನು ಪಡೆದದ್ದು ಹೆಚ್ಚಿನವು ಅಂತರಾಷ್ಟ್ರೀಯ ವ್ಯವಹಾರಗಳನ್ನೂ ಕೈಕೊಳ್ಳುತ್ತಲಿವೆ. ಸಂಸ್ಥೆಗಳ ಅಭಿವೃದ್ಧಿ ಎಂದರೆ ಅದು ವಿಶಾಲ ಜನಪ್ರಿಯತೆಯಿಂದಲೇ ಎಂದರ್ಥ. ಜನಪ್ರಿಯತೆ, ಪ್ರೋತ್ಸಾಹಗಳಿಂದಲೇ ಅಭಿವೃದ್ಧಿಯುಂಟು ಮೈಸೂರು ತನ್ನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಾದರಿಯನ್ನು ನಿರ್ಮಿಸಿಕೊಡುವ ಧ್ಯೇಯವನ್ನೆ ಸದಾ ಮುಂದರಿಸುತ್ತಿರುವುದು. ಮೈಸೂರಿನಲ್ಲಿ ಕೈಗಾರಿಕೆ, ಬ್ಯಾಂಕಿಂಗ್ ಇವೇ ಮೊದಲಾದ ದೇಶ ಅಭಿವೃದ್ಧಿಯ ಅನೇಕ ಸಾಹಸಗಳು ಕೈಕೊಳ್ಳಲ್ಪಟ್ಟು ಇವು ಬಹು ರಭಸದಿಂದ ಪ್ರಗತಿ ಹೊಂದುತ್ತಿರುವಾಗ, ಮೈಸೂರಿನವರಿಗೆ ತಮ್ಮದೇ ಆದ ಒಂದು ಜೀವವಿಮಾ ಸಂಸ್ಥೆಯು ಸ್ಥಾಪಿಸುವ ಅವಶ್ಯಕತೆ ತೋರಿ ಬಂದೊಡನೆ ಇಂದಿಗೆ ನಾಲ್ಕು ವರ್ಷಗಳ ಕೆಳಗೆ ಈ ಮೈಸೂರು ಇನ್ಸೂರೆನ್ಸ್ ಕಂಪೆನಿಯು ಜನ್ಮವೆತ್ತಿತು

ಮೈಸೂರು ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಎಂಬೀ ಸಂಸ್ಥೆಯು ಕೂಡಾ ಒಂದು ಪುಟ್ಟ ಮಾದರಿ ಜೀವವಿಮಾ ಸಂಸ್ಥೆಯಾಗಿದೆ ಎಂದು ಬೇರೆ ಹೇಳುವ ಅವಶ್ಯವೇ ಇಲ್ಲ ಆದರೆ ಈ ಸಂಸ್ಥೆಯು ಮೊದಲನೇ ವರ್ಷದಲ್ಲಿಯೇ ಇದು ಅಂಗೀಕರಿಸಿಕೊಂಡ ಮೊತ್ತದ ಉದ್ಯಮವನ್ನು ನೋಡಿದರೆ ಅದು ವಿಷಯವು ತುಂಬಾ ಶ್ಲಾಘನೀಯವಾದುದು ಆರಂಭ ವರ್ಷದಲ್ಲಿಯೇ ಇದಕ್ಕೆ 6,24,621 ರೂ ಗಳ 686 ದರಖಾಸ್ತುಗಳು ಬಂದಿದ್ದು ಅವುಗಳಲ್ಲಿ 847,242 ರೂಗಳ ಮೊತ್ತದವುಗಳಿಗೆ ಪಾಲಿಸಿ ಪತ್ರಗಳನ್ನು ಕೊಡಲಾಯಿತು ಎರಡನೇ ವರ್ಷದಲ್ಲಿ ಕಂಪೆನಿಗೆ 6,39,000 ರೂ. ಗಳ ಮೊತ್ತದ ದರಖಾಸ್ತುಗಳು ಬಂದಿದ್ದು 5,00,400 ರೂಗಳ ಮೊತ್ತದವುಗಳಿಗೆ ಪಾಲಿಸಿ ಪತ್ರಗಳು ಕೊಡಲ್ಪಟ್ಟವು ಇಲ್ಲಿ ಒಂದು ವಿಷಯವನ್ನು ಗಮನಿಸಬೇಕಾಗಿದೆ ಮೊದಲನೇ ವರ್ಷ ಬಂದದರ ದರಖಾಸ್ತುಗಳ ಸಂಖ್ಯೆ 626ಕ್ಕಿಂತ ಎರಡನೇ ವರ್ಷ ಬಂದ ದರಖಾಸ್ತುಗಳ ಸಂಖ್ಯೆಯು 492 ಕಮ್ಮಿಯಾಗಿದೆ. ಆದರೆ ಎರಡನೆ ವರ್ಷದಲ್ಲಿ ದರಖಾಸ್ತುಗಳ ಸಂಖ್ಯೆಯು 492 ಆದರೂ ಅವುಗಳ ವಿಮಾ ಮೊಕ್ತವು ಮಾತ್ರ 6,39,000 ರೂ ಆಗಿರುತ್ತದೆ ಇದೇ ಪ್ರಕಾರ ಅಂಗೀಕರಿಸಲ್ಪಟ್ಟು ಪಾಲಿಸಿ ಪತ್ರಗಳು ಕೊಡಲಾದ ದರಖಾಸ್ತುಗಳ ಮೊತ್ತದ ಸಂಖ್ಯೆಯು 5,00,400 ರೂಗಳಾಗಿರುತ್ತದೆ ಹೀಗೆ ಮೊದಲನೇ ವರುಷದ ವಿಮಾ ಮೌಲ್ಯದ ದಾವಾಶಯಕ್ಕೆ ಹೋಲಿಸಿದರೆ 2ನೇ ವರ್ಷದ ವಿಮಾ ಮೌಲ್ಯವು ಸುಮಾರು 1½ ಪಾಲಿಗೆ ಹೆಚ್ಚಿರುತ್ತದೆ ಇದರಿಂದ ಕಂಪೆನಿಯಲ್ಲಿ ಜನರಿಗೆ ತುಂಬಾ ಭರವಸೆಯುಂಟಾಗಿದ್ದು ಹೆಚ್ಚಿನ ವಿಮಾ ಮೌಲ್ಯದ ಪಾಲಿಸಿಗಳನ್ನು ಜನರು ಪಡೆಯಲೆಳಸುವರೆಂಬ ವಿಷಯವು ಸ್ಪಷ್ಟವಾಗುತ್ತದೆ. ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕಾಗಿದೆ. ಮೊದಲನೇ ವರ್ಷಕ್ಕಿಂತ ಹೆಚ್ಚು ಮೌಲ್ಯವುಳ್ಳ ಕಮ್ಮಿ ಸಂಖ್ಯೆಯ ದರಖಾಸ್ತುಗಳು ಬಂದರೂ ಅವುಗಳಲ್ಲಿ ಕಂಪೆನಿಯು ಯೋಗ್ಯವಾದುವುಗಳನ್ನೆ ಆರಿಸಿ ಪಾಲಿಸಿ ಪತ್ರಗಳನ್ನು ಕೊಟ್ಟಿರುವುದೇ ವಿನಹ ಉದ್ಯಮದ ಸಂಖ್ಯೆಯನ್ನು ಹೆಚ್ಚು ಮಾಡುವ ಉದ್ದೇಶದಿಂದ ಎಲ್ಲದಕ್ಕೂ ವಿಮಾಪತ್ರಗಳನ್ನು ಕೊಡಲಿಲ್ಲ; ಅದು ಆಡಳಿತಗಾರರ ಜಾಗರೂಕತೆಯನ್ನೂ ದೂರದರ್ಶಿತ್ವವನ್ನು ಸೂಚಿಸುವ ವಿಷಯವಾಗಿದೆ. ಮೂರನೇ ವರ್ಷದಲ್ಲಿ 10,67,455 ರೂ.ಗಳ 1189 ದರಖಾಸ್ತುಗಳು ಬಂದಿದ್ದು ಅವುಗಳಲ್ಲಿ 765,845 ರೂಗಳಷ್ಟಕ್ಕೆ ಪಾಲಿಸಿ ಪತ್ರಗಳನ್ನು ಕಂಪೆನಿಯು ಕೊಟ್ಟಿದೆ. ಮೂರನೇ ವರ್ಷದ ಕಂಪೆನಿಯ ಉದ್ಯಮವು ನಿಜವಾಗಿಯೂ ಸ್ತುತ್ಯಾರ್ಹವಾದುದಾಗಿದೆ. ಇಷ್ಟು ಅವಧಿಯಲ್ಲಿ ಇಷ್ಟು ಉದ್ಯಮವನ್ನು ಮಾಡಿದ ವಿಮಾಕಂಪೆನಿಗಳು ನಮ್ಮ ದೇಶದಲ್ಲಿ ತುಂಬಾ ಕಮ್ಮಿ. ಈ ಕೆಲವು ಸಂಖ್ಯೆಗಳಿಂದ ಕಂಪೆನಿಯು ಜಾಗರೂಕತೆಯಿಂದ ದೃಢವಾಗಿ ಮುಂದುವರಿಯುತ್ತದೆಂದೂ, ಜನತೆಗೆ ಈ ಕಂಪೆನಿಯ ಭದ್ರತೆಯ ವಿಚಾರ ಚೆನ್ನಾಗಿ ಭರವಸೆಯಾಗಿದೆಯೆಂದೂ ಪರಿಣಾಮವಾಗಿ ಇದೇ ವರ್ಷಾಂತ್ಯಕ್ಕೆ ಕಂಪೆನಿಯವರು ಎಂದಿಗಿಂತಲೂ ಹೆಚ್ಚು ಉದ್ಯಮದ ವರದಿಯನ್ನು ಜನತೆಯ ಮುಂದಿಡುವರೆಂದೂ ಹಾರೈಸುತ್ತೇವೆ

ಮೈಸೂರ್ ಇನ್ಸೂರೆನ್ಸ್ ಕಂಪನಿಯ ಆಡಳಿತ ಮಂಡಳಿಯವರಲ್ಲಿ ಹೆಚ್ಚಿನವರು ರಚನಾತ್ಮಕ ಸರಕಾರದ ಜವಾಬುದಾರಿ ಹುದ್ದೆಗಳಲ್ಲಿರುವರೆಂದು ತಿಳಿಸಲು ಸಂತೋಷಿಸುತ್ತೇವೆ ಕಂಪೆನಿಯ ಆಡಳಿತವನ್ನು ಸುಗಮವಾಗಿ ನಡೆಸುವುದರಲ್ಲಿ ನಿಜವಾದ ಜವಾಬುದಾರಿಯನ್ನಿಟ್ಟು ಹೇಗೆ ಕೆಲಸ ಮಾಡಬೇಕೊ ಹಾಗೆ ಇವರು ಮಾಡಲು ಯಥಾ ಯೋಗ್ಯರೇ ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ ನಿರ್ದೇಶಕ ಮಂಡಳಿಯ ಅಧ್ಯಕ್ಷರರಾದ ಶ್ರೀಮಾನ್ ಎ ವೆಂಕಟಪ್ಪನವರು ಮೈಸೂರು ಪ್ರಜಾ ಪ್ರಾತಿನಿಧ್ಯ ಸಭೆಯ ಸದಸ್ಯರೂ, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಮಾಜಿ ಪ್ರೆಸಿಡೆಂಟರಾಗಿಯೂ, ಕೆಲಸ ಮಾಡಿಕೊಂಡಿದ್ದು ತುಂಬಾ ಅನುಭವಶಾಲಿಗಳಾಗಿದ್ದಾರೆ "ಸರಸ್ವತಿ" ಮಾಸ ಪತ್ರಿಕೆಯ ಸಂಪಾದಕಿಯರೂ, ಬೆಂಗಳೂರು ಮುನಿಸಿಪಲ್ ಸದಸ್ಯರೂ, ಆನರರಿ ಮೆಜಿಸ್ಟ್ರೇಟರೂ ಆಗಿರುವ ಶ್ರೀಮತಿ ಆರ್ ಕಲ್ಯಾಣಮ್ಮನವರೂ ಕಂಪೆನಿಯ ಓರ್ವ ಡೈರೆಕ್ಟರಾಗಿರುವರು 'ವಿಮಾ ವಾಣಿಜ್ಯ'ದ ಮೆನೇಜಿಂಗ್ ಎಡಿಟರರೂ, ಪ್ರಸಿದ್ಧ ವ್ಯಾಪಾರಿಗಳೂ ಆದ ಶ್ರೀಮಾನ್ ದೊಡ್ಡ ವೀರಪ್ಪನವರು ಮತ್ತು ಎಲ್ ಎ. ಪಿಳ್ಳನ್ನಾರವರೂ ಡೈರೆಕ್ಟರುಗಳಾಗಿರುತ್ತಾರೆ ಹಜರತ್ ಜೆ ಎಂ ಇಮಾಮ್ ಸಾಹೇಬ್, ಮೆಂಬರ್ ಯುನಿವರ್ಸಿಟಿ ಸೆನೆಟ್, ಎಂ ಆರ್ ಎ ಎಂ ಎಲ್ ಸಿ, ಅಡ್ವೊಕೇಟ್ ಪ್ರೆಸಿಡೆಂಟ್, ಚಿತ್ತಲ್‌ದುರ್ಗ ಡಿಸ್ಟ್ರಿಕ್ಟ್ ಮುನ್ಸಿಪಾಲಿಟಿ, ಇವರನ್ನು ಕಂಪನಿಯು ಡೈರೆಕ್ಟರ್ ಮಂಡಳಿಯಲ್ಲಿ ಸೇರಿಸಿರುತ್ತದೆ ಒಟ್ಟಿನ ಮೇಲೆ ಕಂಪೆನಿಯು ಒಂದು ಕಾಸ್ಮಪೊಲಿಟನ್ ಸಂಸ್ಥೆಯೆಂದು ಹೇಳಬಹುದು

ಈ ಕಂಪೆನಿಯಲ್ಲಿ ಸ್ತ್ರೀಯರೂ ಸುಲಭವಾಗಿ ವಿಮೆಯನ್ನಿಳಿಸುವ ಏರ್ಪಾಡಿರುತ್ತದೆ ಅಲ್ಲದೆ ಡಾಕ್ಟರರ ಪರೀಕ್ಷೆ ಇಲ್ಲದೆ ವಿಮಾಪತ್ರಗಳನ್ನು ಕೊಡುವ ಏರ್ಪಾಡನ್ನೂ ಮಾಡಿರುತ್ತಾರೆ.

ಇತ್ತೀಚೆಗೆ ಮೈಸೂರು ಇನ್ಸೂರೆನ್ಸ್ ಕಂಪೆನಿಯವರು ೨೫,೦೦೦ ರೂ. ಗಳನ್ನು ಗವರ್ನಮೆಂಟ್ ಸೆಕ್ಯೂರಿಟಿಗಳ ರೀವಣಾತಿಯಲ್ಲಿಟ್ಟು ಬ್ರಿಟಿಷ್ ಇಂಡಿಯಾದಲ್ಲಿಯೂ ತಮ್ಮ ಉದ್ಯಮ ವ್ಯವಹಾರಗಳನ್ನು ಮಾಡಲೇರ್ಪಡಿಸುವುದು ಅವರ ಉದ್ಯೋಗ-ವಿಶಾಲತೆಯ ಧೋರಣೆಯನ್ನು ತಿಳಿಸುತ್ತದೆ. ಸ್ವದೇಶದಲ್ಲಿ ಪಡೆದ ಪ್ರೋತ್ಸಾಹವು ಇವರನ್ನು ಈ ಪ್ರಗತಿಮಯ ಉದ್ಯಮಕ್ಕೆ ಕೈಹಾಕಲು ಹುರುಪು ಕೊಟ್ಟಿರುವುದು. ಆಗಲೇ ನೈಜಾಮ ಸಂಸ್ಥಾನದಲ್ಲಿ ಇವರ ಕೇಂದ್ರವೊಂದು ತೆರೆದಿದೆಯೆಂದು ತಿಳಿಯುತ್ತೇವೆ-ಬಹು ಸಂತೋಷಕರ ವಿಷಯ. ಈ ಸಂಸ್ಥೆಯವರು ತಮ್ಮ ಉದ್ದೇಶಗಳಲ್ಲಿ ಯಶಸ್ಸನ್ನು ಪಡೆದು, ಜನತಾ ಹಿತಸಾಧಕರಾಗಿ, ದೇಶದ ಪ್ರಗತಿಯನ್ನು ಸುಲಭವಾಗಿ ಮಾಡಿ ಅಭಿವೃದ್ಧಿಯನ್ನು ಪಡೆಯುವರೆಂದು ಮನಃಪೂರ್ವಕವಾಗಿ ಆಶಿಸುತ್ತೇವೆ.

ಸರ್. ಕೆ. ವಿ. ರೆಡ್ಡಿಯವರ ಹಳೇ ಹಾದಿ

ಜಸ್ಟಿಸ್ ಪಾರ್ಟಿಯ ಕನಿಕರಾವಸ್ಥೆ

ಉದ್ಧಾರಕರ್ತರ ಲಕ್ಷಣ

ಸರ್. ಕೆ. ವಿ. ರೆಡ್ಡಿಯವರ ಹಳೇ ಹಾದಿ.

'ಕಾಂಗ್ರೆಸು ಅಧಿಕಾರ ಸ್ವೀಕರಿಸುವವರೇಗೆ ಸಾರ್ವಭೌಮ ಸರಕಾರವು ಮುಂದುವರಿಯುವಂತೆ ತಾನು ಮಂತ್ರಿಪದವಿಯನ್ನು ನೋಡಿಕೊಂಡಿರುತ್ತೇನೆಂದು ಸಾರಿದ ಸರ್. ಕೆ ವಿ ರೆಡ್ಡಿಯವರ ಉದ್ದೇಶವು ಈಗ ಬೇರೆಯೇ ಆಗಿದೆ ಎಂದು ಅವರು ಈಚೆಗೆ ತಮ್ಮ ಪ್ರಚಾರವನ್ನು ಕೈಕೊಂಡಿದ್ದರಿಂದ ತಿಳಿದುಬರುತ್ತದೆ" ಹೀಗೆಂದು ಸಂಡೇ ಟೈಮ್ಸ್ ಪತ್ರಿಕೆಯು ಒಂದು ಲೇಖನದಲ್ಲಿ ಬರೆದಿರುತ್ತದೆ ಅದರ ಸಾರಾಂಶವು ಈ ಕೆಳಗಿನಂತಿದೆ "ಬ್ರಾಹ್ಮಣ ಮತ್ತು ಬ್ರಾಹ್ಮಣೇತರರೊಳಗೆ ಬೇಧವನ್ನುಂಟುಮಾಡಲು ಸರ್. ಕೆ ವಿ. ರೆಡ್ಡಿಯವರು ಪ್ರಯತ್ನಪಡುತ್ತಿರುವಂತೆ ಅವರ ಇತ್ತೀಚೆಗಿನ ಭಾಷಣದಿಂದ ಗೊತ್ತಾಗುತ್ತದೆ ಕಾಂಗ್ರೆಸಿನ ದಾರಿಯನ್ನು ಸುಲಭಮಾಡ ನೋಡುವ ರೆಡ್ಡಿಯವರು ಈಗೇಕೆ ಈ ಹಳೇ ಹಾದಿಯನ್ನು ಹಾತ ಕೋರುವುದು? ಸಾರ್ವಭೌಮ ಸರಕಾರವು ಜಾತಿಯ ವೈಶಮ್ಯದಿಂದಲೇ ಮುಂದು ನಡೆಯಬೇಕೆಂದು ಅವರ ದೃಢ ಉದ್ದೇಶವಿರುವಂತೆ ಕಂಡು ಬರುತ್ತದೆ

ಉದ್ಧಾರಕರ್ತರ ಲಕ್ಷಣ.

"ಸರ್ ರೆಡ್ಡಿಯವರ ಯುಕ್ತವಾದ ಕೂಟಗಾರರಾದ ಇನ್ನೂ ಕೆಲವರ "ಬ್ರಾಹ್ಮಣತ್ವವು ಮಡಿಯಲಿ" ಎಂಬೀ ಕೂಗು ಕೇಳಿದ ಮಾತ್ರಕ್ಕೆ ಅವರನ್ನು ಬ್ರಾಹ್ಮಣೇತರರೆಲ್ಲರೂ ತಮ್ಮ ಉದ್ಧಾರ ಕರ್ತರಾಗಿ ತಿಳಕೊಳ್ಳುವರೆಂದು ಭಾವಿಸಿರುವರೊ? ಇದರಲ್ಲಿ ಏನಾದರೂ ಒಂದಿಷ್ಟು ಅರ್ಥವಿದೆಯೇ? ಒಂದು ಕಾಲದಲ್ಲಿ ಈ ಬ್ರಾಹ್ಮಣೇತರರು ಇವರ ಅಭಿಪ್ರಾಯವನ್ನು ತೆಗೆದುಕೊಳ್ಳುತಿದ್ದರು ಇದರಿಂದ ಜಸ್ಟಿಸ್ ಪಾರ್ಟಿಯವರು ಒಂದಲ್ಲ, ಎರಡಲ್ಲ, ಮೂರು ಸರ್ತಿಯೂ ಮಂತ್ರಿ ಮಂಡಳವನ್ನು ರಚಿಸುವವರಾದರು ಆದರೆ ಇಷ್ಟು ಸರ್ತಿಯು ಅವರನ್ನು ನಂಬಿಕೊಂಡಿದ್ದವರು ಕ್ರೂರವಾಗಿ ನಿರಾಕರಿಸಲ್ಪಟ್ಟರು ಈ ಜಸ್ಟಿಸ್ ಪಕ್ಷದವರ ಮುಖಂಡರಿಗೆ ಕೊಡಲ್ಪಟ್ಟ ಅಧಿಕಾರಗಳು ಹಿಂದುಳಿದ ವರ್ಗದವರ ಹಿತಕ್ಕಾಗಿ ಉಪಯೋಗಿಸಲ್ಪಡದಾದವು ಆದರೆ ಜಸ್ಟಿಸ್ ಮುಖಂಡರು ತಮ್ಮ ಸ್ವಾರ್ಥಸಾಧನೆಗಾಗಿ ಆ ಅಧಿಕಾರವನ್ನು ತುಂಬಾ ಉಪಯೋಗಿಸಿಕೊಂಡರು ತಮ್ಮ ಮಕ್ಕಳಿಗೆ, ಅಳಿಯಂದಿರಿಗೆ, ಸಮ್ಬಂಧಿಕರಿಗೆ ಅವರಲ್ಲಿ ಯೋಗ್ಯತೆ ಇಲ್ಲದಿದ್ದರೂ, ಕೆಲಸವನ್ನು ಮಾಡಿಸಿಕೊಟ್ಟರು.

"ಹೀಗೆ ನ್ಯಾಯಕ್ಕೊಂದು ಹೊಡೆದ್ದಾದರೂ ಕಾರಣ ಕೊಟ್ಟ ಜಸ್ಟಿಸ್ ಮುಖಂಡರ ತಪ್ಪು ಕಾರ್ಯನಿರ್ವಾಹದಲ್ಲಿ ಸೋತರು ಪರಿಣಾಮವಾಗಿ ಕಳೆದ ಚುನಾವಣೆಗಳಲ್ಲಿ ಅವರು ಭಾರಿ ಸೋಲನ್ನು ಅನುಭವಿಸಿದರು. ಸಾಮಾನ್ಯ ಪ್ರಾಂತದವರು ಈ ಜಸ್ಟಿಸ್ ಮುಖಂಡರು [illegible] ಕರವಾದ ಸ್ವಾರ್ಥ ಸಾಧಕರೆಂದೂ [illegible] ಜನತೆಗೆ ಏನೂ ಹಿತವಾಗಲಿಲ್ಲವೆಂದೂ [illegible] ತಿಳಿದುಕೊಂಡರು [illegible] ಜಸ್ಟಿಸ್ ಪಾರ್ಟಿಯ [illegible] ಹೇಗೆ [illegible] ವಿಷಯವು ರೆಡ್ಡಿಯವರಿಗೆ ತಿಳಿದಿಲ್ಲವೆ

([illegible] ಪುಟಕ್ಕೆ [illegible])

ಜಿಂಜರ್ ರೋಜರ್ಸ್.



ಇವಳು ಯಾವಾಗಲೂ ಸ್ವತಃ ಲೋಕಸುಂದರಿ ಯಾಗಿದ್ದಾಳೆ

ಲಕ್ಸ್ ಟಾಯಿಲೆಟ್ ಸಾಬೂನು

LUX TOILET SOAP



ಇಂಡಿಯಾದಲ್ಲೇ [illegible] ತಯಾರಿಸಿದ್ದು

LEVER BROTHERS (INDIA) LIMITED
KANARESE

ಉಚಿತ



Distributors for South Kanara.—

Raghavendra Ranga Pai, Car Street Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಬಹಳ ಕಡಿಮೆಯಾದ ಕ್ರಯ.
ಆಟೋಮೆಟಿಕ್ ಅಲಾರಂ ಪಿಸ್ತಲ್

ಇದು ನೋಡುವುದಕ್ಕೆ ಆಕಾರದಲ್ಲಿ ಅಸಲು ಪಿಸ್ತೂಲಿನಂತಿರುವುದು ಇದರಿಂದ ಹತ್ತು ಸೆಕೆಂಡುಗಳಲ್ಲಿ ೧೦ ಗುಂಡುಗಳು ಹಾರಿಸಬಹುದು. ಗುಂಡು ಹಾರುವಾಗ ಅತಿ ಭಯಂಕರ ಶಬ್ದ ಕೊಡುವುದು ಇದು ಒಂದು ನಮ್ಮಲ್ಲಿ ಇದ್ದರೆ ನಮ್ಮ ಸಹಾಯಕನಾಗಿರುವುದು. ಸಿನಿಮಾದದರು ಡ್ರಾಮಾದವರು ಉಪಯೋಗಿಸುವುದು ನೀವು ನೋಡಿರಬಹುದು. ಇದನ್ನು ಉಪಯೋಗಿಸುವ ಕ್ರಮದ ಕಾಗದ ಪಿಸ್ತಲ್ ಕೂಡೆ ಕಳುಹಿಸುವೆವು. ಪಿಸ್ತಲ್ ಒಂದು ಆರ್ಡರು ಮಾಡುವವರಿಗೆ ೩ ಬೆಲೆ ಹಾಕಿದ ಸ್ಪಾರ್ಕ್ ಲೈಟ್ ಒಂದು ಇನಾಂ ಸೇರಿಸಿ ಕಳುಹಿಸುವೆವು. ಪಿಸ್ತೂಲು ೧೨ ತೋಟೆಗಳ ಸಹಿತ ೭–೮–೦ ಟಪ್ಪಾಲು ಖರ್ಚು ಪ್ರತ್ಯೇಕ

ಸ್ವಾನ್ ಹೌಸ್,
ನಂ. ೩, ಇರುಳಪ್ಪನ ಬೀದಿ, ಮದ್ರಾಸು

WHENEVER YOU THINK

of saving and safeguarding money
of borrowing or transmitting money
of any other financial requirement,

THINK OF YOUR BANK

a good place to keep your
account and establish your credit,
where your patronage and
deposits are always appreciated,
where you are always sure
of a friendly welcome

RESOURCES OF A CRORE

ESTD: 1906

CANARA BANK, LIMITED.

ಕೊಚಿನ್ ಸರ್ಕಾರದ ಭರಣಿಗಳು

ಉಪ್ಪಿನಕಾಯಿ, ಮೊಸರು, ಹಾಲು, ಮದ್ದು, ತಿಂಡಿ ವಗೈರೆ ಹಾಳಾಗದಂತೆಯೂ, ವಿಷಕ್ರಿಮಿಗಳು ಸೇರದಂತೆಯೂ ತಮ್ಮ ಭರಣಿಗಳಿಗಿಂತ ಇತರ ಒಳ್ಳೆಯ ಪಾತ್ರಗಳು ಸಿಗಲಾರವು

ಲೋಹ ವಿಷದಿಂದ
(Metal poisoning)
ಉಂಟಾಗುವ ಭಾದೆಯು ಇಲ್ಲ

ಅನೇಕ ತರಹ ಮತ್ತು
ಪ್ರಮಾಣಗಳಿವೆ

ಮುಖ್ಯ ಏಜಂಟರು

ಕೆ. ರಾಮ ನಾಯಕ್,
ಹಾರ್ಡ್‌ವೇರ್ ಮತ್ತು
ಜನರಲ್ ಮರ್ಚೆಂಟ್,
ಕೋರ್ಟು ರಸ್ತೆ, ಕಾಸರಗೋಡು ಮತ್ತು ಬಂದರ್ ರಸ್ತೆ ಮಂಗಳೂರು.

ಆಯುರ್ವೇದ ರೀತ್ಯಾ ರತ್ನಪ್ರಾಯವಾದ ಔಷಧಗಳಿಗಾಗಿ ಸಮಗ್ರ ಕರ್ನಾಟಕದಲ್ಲಿ ಪ್ರಖ್ಯಾತಿಪಟ್ಟ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಇವರ

ಅತ್ಯಮೂಲ್ಯವಾದ ಔಷಧಗಳನ್ನೇ ಸೇವಿಸಿ ಕಷ್ಟನಷ್ಟಗಳನ್ನು ನೀಗಿ ಆರೋಗ್ಯವಂತರಾಗಿರಿ.

ಈ ಸಂಗತಿಗಳೇ ನಮ್ಮ ಔಷಧಗಳ ವೈಶಿಷ್ಟತೆಯನ್ನು ಸಾರುವವಲ್ಲವೆ?

100 ವರ್ಷಗಳ ಅನುಭವ

ಶಾಸ್ತ್ರೀಯ ರೀತ್ಯಾ ತಯಾರಿ.

ಅತ್ಯಂತ ಗುಣಕಾರಿ.

ಸ್ವರ್ಣ ರಜತ ಪದಕಗಳನ್ನು ಪಡೆದ ದಿವ್ಯೌಷಧ

ಅತ್ಯಂತ ಬೆಲೆ ಕಡಿಮೆ.

ಭುವನೇಂದ್ರ ನವರತ್ನಗಳು.

ಗುಡಪಿಪ್ಪಲಿ—ಮಕ್ಕಳ ಲಿವರ್ ರೋಗಕ್ಕೆ

ಗರ್ಭಪಾಲ—ಗರ್ಭಶೂಲಿ, ಗರ್ಭಸ್ರಾವಕ್ಕೆ

ಚಂದ್ರಮಸ್—ವಾಂತಿಭೇದಿ, ಅತಿಸಾರಕ್ಕೆ

ಕೃಷ್ಣಾರಕ್—ಶ್ವಾಸಖಾಸ, ದುರ್ಬಲತೆ, ನೇತ್ರ ವ ಚರ್ಮವ್ಯಾಧಿಗಳಿಗೆ.

ವೃದ್ಧಿಕಾಸವ—ನಿತ್ರಾಣಕ್ಕೆ.

ಮಹಾಮದನ ಕಾಮೇಶ್ವರಿ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಭುವನಾಂಜನ ಪೈನ್ ಬಾಮ್—ಶಾರೀರಕ ನೋವುಗಳಿಗೆ.

ರಸಬಿಂದು—ಸ್ತ್ರೀ ಸಂಬಂಧ ವ್ಯಾಧಿಗಳಿಗೆ.

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಮೇಲಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ಬಲಶಾಲಿ ಭಾರತೀಯರು

ಕೆಲವು ಆಧುನಿಕ ರಕ್ಕಸರು

ಭಾರತದಲ್ಲಿ ಇಂದು ನಾವು ಪಡೆಯುತ್ತಿರುವ ವಿದ್ಯಾಭ್ಯಾಸದ ಕೆಲವು ದುಷ್ಪರಿಣಾಮಗಳಿಂದಾಗಿ ಬೆಳೆಯುತ್ತಿರುವ ನಮ್ಮ ಭಾವಿಜನಾಂಗವು ನಾಗರಿಕವೆನಿಸಿದ ಪಾಶ್ಚಾತ್ಯದ ಕಡೆಗೆನೇ ತನ್ನ ಗಮನವನ್ನು ತಿರುಗಿಸುವಂತಾಗಿದೆ ನಮ್ಮ ದಿನನಿತ್ಯದ ಜೀವನದ ಚಿಕ್ಕ ಚಿಕ್ಕ ಘಟನೆಗಳಲ್ಲಿಯೂ ನಾವು ಪಾಶ್ಚಾತ್ಯರ ಮಾದರಿಯನ್ನು ಹೋಲಿಸಿ ವಿಷಯಗಳನ್ನು ವಿಮರ್ಶಿಸುತ್ತಲಿರುತ್ತೇವೆ. ನಮ್ಮ ಸಂಸ್ಕೃತಿ ನಮ್ಮ ಆಧ್ಯಾತ್ಮಿಕ ನಾಗರೀಕತೆಗಳು ನಮ್ಮ ಮನೋಭಾವದಲ್ಲಿ ಮೂಡುವುದಿಲ್ಲ ಅವಕ್ಕೆ ನಮ್ಮಲ್ಲಿ ಅದರ ಅಭಿಮಾನಗಳಿಲ್ಲ ಕಾರಣವು ಬೇರೇನಿರದೆ ನಾವು ಕಲಿಯುತ್ತಿರುವ ವಿದ್ಯೆಯೇ ಆಗಿರುತ್ತದೆ ವಿಶ್ವಕವಿ ರವೀಂದ್ರನಾಥ ಠಾಕೂರರವರು ಭಾರತ ವಿದ್ಯಾರ್ಥಿಗಳ ಈ ವಿಚಿತ್ರ ಮಾನಸಿಕ ಪರಿಸ್ಥಿತಿಯ ಒಂದು ನಿದರ್ಶನವನ್ನು ಕುರಿತು ತಮ್ಮ ಸ್ವಂತ ಅನುಭವವನ್ನು ತಮ್ಮ ಚಿಕ್ಕ ಪ್ರಬಂಧ ಒಂದರಲ್ಲಿ ತಿಳಿಸುತ್ತಾರೆ ಅಲಹಾಬಾದಿನ ಒಂದು ಹೈಸ್ಕೂಲನ್ನು ಸಂದರ್ಶಿಸುತಿದ್ದಾಗ ಅವರು ಒಬ್ಬ ವಿದ್ಯಾರ್ಥಿಯನ್ನು ಕುರಿತು ಒಂದು ನದಿಯ ಹೆಸರು ಕೇಳಿದರು ಠಾಕೂರರ ಆಶ್ಚರ್ಯಕ್ಕೆ ವಿದ್ಯಾರ್ಥಿಯು ಇಂಗ್ಲೆಂಡಿನ ಥೇಮ್ಸ್ ನದಿಯ ಹೆಸರನ್ನು ಹೇಳಿಬಿಟ್ಟನಂತೆ ವಿಚಾರಿಸಲಾಗಿ ಆ ವಿದ್ಯಾರ್ಥಿಯು ಸಂಯುಕ್ತ ಪ್ರಾಂತ್ಯದ ಎರಡು ಪ್ರಖ್ಯಾತ ನದಿಗಳ ತೀರದಲ್ಲಿರುವ ಒಂದು ಚಿಕ್ಕ ಪಟ್ಟಣದಲಿ ಹುಟ್ಟಿ ಬೆಳದವನಂತೆ

ಹೀಗೆ ನಮ್ಮಲ್ಲಿ ವ್ಯಾಯಾಮಪ್ರಿಯರು ಕೂಡಾ ಪಾಶ್ಚಾತ್ಯರ ಬಾವ ಚಿತ್ರಗಳನ್ನಿಟ್ಟುಕೊಂಡು ಆಶ್ಚರ್ಯಪಡತ್ತಲೊ ಅವರ ಶಕ್ತಿ ಸಾಮರ್ಥ್ಯ ಪ್ರದರ್ಶನಗಳ ಕುರಿತು ಒಕೆದ ಪುಸ್ತಕಗಳನ್ನು ಓದಿ ಕೌತುಕಪಟ್ಟುಕೊಳ್ಳುವುದರಲ್ಲೊ ಹೆಮ್ಮೆ ಪಡುತ್ತಾರೆ ಇವರ ಮಾತುಕತೆಗಳಲ್ಲಿ ಯಾವನೊಬ್ಬ ಭಾರತೀಯನ ವಿಚಾರ ಬಂದರೆ ಆಗಲೂ ಪಾಶ್ಚಾತ್ಯ ದೇಶಿಗರನ್ನು ಸರಿಹೋಲಿಸಿ ಅವನ ಶಕ್ತಿ ಸಾಮರ್ಥ್ಯವನ್ನು ತೂಕ ಮಾಡುತ್ತಾರೆ ನಮ್ಮ ಮಾನಸಿಕ ಪರಿವರ್ತನೆಯು ಎಷ್ಟರ ಮಟ್ಟಿಗೆ ಪಾಶ್ಚಾತ್ಯರ ಕಡೆಗೆ ಒಲಿದಿರುತ್ತದೆ ಎಂದರೆ ಶ್ರೇಷ್ಠತೆಯಲ್ಲಿ ಅವರನ್ನು ಸರಿಗಟ್ಟುವ ಯೋಗ್ಯತೆಯವರು ನಮ್ಮ ದೇಶದಲ್ಲಿಯೇ ಇಲ್ಲವೆಂದು ನಮ್ಮಲ್ಲಿ ಹೆಚ್ಚಿನವರ ದೃಢಭಿಪ್ರಾಯ ಶ್ರೇಷ್ಠ ಪುರುಷರ ಯೋಗ್ಯ ಮನುಷ್ಯ, ನಿಪುಣರ, ಎಲ್ಲಾ ದೇಶಗಳಲ್ಲಿಯೂ ಹುಟ್ಟುತ್ತಾರೆ ಆದುದರಿಂದ ಪಾಶ್ಚಾತ್ಯರಲ್ಲಿ ನಾವು ಇಡುವ ನಂಬಿಗೆಯನ್ನು ಸರ್ವರಲ್ಲಿಯೂ ಇಡಲು ಅಡ್ಡಿಯಿಲ್ಲ ಎಂಬೀ ಪಾಠವು ಚಿಕ್ಕಂದಿನಿಂದಲೂ ನಮಗೆ ಸರಿಯಾಗಿ ಕಲಿಸಲ್ಪಡುವುದಿಲ್ಲ ಈಗಲಾದರೂ ನಮ್ಮ ಶಿಕ್ಷಕರು ತಮ್ಮ ಜವಾಬುದಾರಿಕೆಯಲ್ಲಿರುವ ಜನಾಂಗವನ್ನು ನಮ್ಮ ದೇಶದ ಪರಿಸ್ಥಿತಿಯಲ್ಲಿ ನಮ್ಮ ರಾಷ್ಟ್ರ ಮುಖಂಡರಲ್ಲಿ, ನಮ್ಮ ರಾಷ್ಟ್ರ ವೀರರಲ್ಲಿ ಹೆಮ್ಮೆ ಪಡುವಂತೆ ಪ್ರಯತ್ನಿಸಬಾರದೇಕೆ? ಆದರೆ ಈಗಿನ ಶಿಕ್ಷಕರು ಕೂಡ ಅವರಿಗೆ ದೊರೆತ ಶಿಕ್ಷಣ ದುಷ್ಪರಿಣಾಮವಾಗಿ ನಮ್ಮ ಅನೇಕಾನೇಕ ವೀರ ಬಾಂಧವರ ಪರಿಚಯವಿಲ್ಲದವರಾಗಿದ್ದಾರೆ ಆದರೂ ಕಿಂಚಿತ ಶ್ರಮದಿಂದ ಈ ವಿಷಯಗಳನ್ನು ಅವರು ತಿಳಕೊಂಡು ದೇಶಹಿತ ಸಾಧನೆ ಮಾಡುವರಾಗಿ ಸ್ವದೇಶಾಭಿಮಾನಿಯಾದ ಪ್ರತಿಯೋರ್ವನ ಹಾರೈಕೆ

ಕಲಿಯುಗದ ಭೀಮ ರಾಮಮೂರ್ತಿ

ಈ ಚಿಕ್ಕ ಲೇಖನದಲ್ಲಿ ಕೆಲವೇ ಮಂದಿ ವೀರ ಭಾರತ ಪುತ್ರರ ಶಕ್ತಿಸಾಮರ್ಥ್ಯಗಳ ವಿವರವನ್ನು ಕೊಡಲಾಗಿದೆ ಅಂಥ ಪರಾಕ್ರಮಶಾಲಿಗಳ ಕೆಲವರ ಜೀವನವನ್ನು ಸೂಕ್ಷ್ಮವಾಗಿ ತಿಳಕೊಂಡವರು ಈ ಮಹಾಮೂರ್ತಿಗಳು ಮಾನವ ಶಕ್ತಿಯ ಒಂದು ದಾಖಲೆಯನ್ನು ಮಾಡಿಡಲು ಜನ್ಮವೆತ್ತಿದರೊ, ಇಲ್ಲವೆ ಭೀಮ ಮಾರುತಿ ಮೊದಲಾದ ಪುರಾಣ ವ್ಯಕ್ತಿಗಳು ಕಟ್ಟುಕತೆಯವ ಮನುಷ್ಯರಲ್ಲವೆಂದು ಪ್ರಪಂಚಕ್ಕೆ ಸಾರಲು ಹುಟ್ಟಿದವರೊ, ಅಥವಾ ಸದಾ ಪಾಶ್ಚಾತ್ಯರನ್ನೆ ಹೊಗಳಿಕೊಂಡಿರುವ ನಮ್ಮಲ್ಲನೇಕರ ಕಣ್ಣುಗಳನ್ನು ತೆರೆಯಲು ಅವತಾರವೆತ್ತಿದರೊ ಎಂದು ಭಾಸವಾಗುತ್ತದೆ ಈ ಶಕ್ತಿವಂತರಲ್ಲಿ ಹಿರಿದೆನಿಸಿದವರಾದ ಪ್ರೊ। ರಾಮಮೂರ್ತಿ, ದೇವಿ ಚೌಧುರಿ, ಸಹದೇವ್ ಬಾಬಾಸಿಷಾ, ಭಗತ್‌ರಾಯ್ ಇವರುಗಳು ತುಂಬಾ ಅಗ್ರಗಣ್ಯರು ಇವರಲ್ಲಿಯೂ ಪ್ರಪಂಚ ವಿಖ್ಯಾತಿಪಡೆದು ತಮ್ಮ ಅತ್ಯದ್ಭುತಶಕ್ತಿ ಸಾಮರ್ಥ್ಯಗಳಿಂದ ವಿಶ್ವವನ್ನು ಕೌತುಕದಲ್ಲಿ ಮುಳುಗಿಸಿದ ರಾಮಮೂರ್ತಿಯವರನ್ನು ಬಿಟ್ಟರೆ, ಇತರರ ಪ್ರಖ್ಯಾತಿಯು ಅವರವರ ಪ್ರಾಂತ್ಯದ ಮೇರೆಯೊಳಗೆ ಮಾತ್ರವಿದೆ ಇವರೆಲ್ಲರ ಹೆಸರುಗಳನ್ನು ನಮ್ಮಲ್ಲಿ ಎಷ್ಟು ಮಂದಿಗಳು ಕೇಳಿರುವರು?

ಕಲಿಯುಗದ ಭೀಮನೆಂದು ಬಿರುದು ಪಡೆದ ಪ್ರೊ। ರಾಮಮೂರ್ತಿಯವರ ಹೆಸರು ಕೇಳದವರೆ ಇಲ್ಲವೆನ್ನಬಹುದು ಈಗವರು ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ವ್ಯಾಯಾಮ ಶಿಕ್ಷರಾಗಿದ್ದಾರೆ 65 ವರ್ಷದ ಮುದುಕರಾದರೂ ಈಗಲೂ ತರುಣ ಚಟುವಟಿಕೆಯನ್ನೂ, ಚೈತನ್ಯವನ್ನೂ, ತೋರಿಸುತ್ತಾರೆ ತರುಣ ಭಾರತೀಯರ ದೇಹಶಕ್ತಿಯ ಪುನರುಜ್ಜೀವನಕ್ಕಾಗಿ ಕೆಲಸಮಾಡಿದ ವಿಭೂತಿಗಳವರು ಶಕ್ತಿಸಾಹಸ ಧೈರ್ಯದ ಕ್ಷೇತ್ರದಲ್ಲಿ ಇವರ ಸಮಾನರಿನ್ನೊಬ್ಬರಿಲ್ಲ

ಪ್ರಪಂಚದಲ್ಲಿ ಮೊದಲನೆ ಸರ್ತಿ ಆನೆಯನ್ನು ಎದೆಯ ಮೇಲೆ ನಿಲ್ಲಿಸಿಕೊಂಡ ಶಕ್ತಿಶಾಲಿಗಳು ರಾಮಮೂರ್ತಿಯವರು ಇದಲ್ಲದೆ ರಾಮಮೂರ್ತಿಯವರು ಮಾಡಿದ ಅನೇಕ ಶಕ್ತಿ ಕಾರ್ಯಗಳನ್ನು ಈಗ ಜೀವಿಸಿರುವ ಯಾವನೊಬ್ಬ ಬಲಶಾಲಿಯೂ ಕನಸ್ಸಿನಲ್ಲಿ ಕೂಡ ಎಣಿಸಲಾರನು ಆನೆಗಳನ್ನು ಎದೆ ಮೇಲೆ ನಿಲ್ಲಿಸಿಕೊಳ್ಳುವುದನ್ನು ಆ ಮೇಲೆ ಕೆಲವು ಮಂದಿಗಳು ಪ್ರಯತ್ನಿಸಿದರು ಆದರೆ ಮೂರ್ತಿಗಳಷ್ಟು ದೀರ್ಘಕಾಲ ಯಾರೂ ಎದೆಯ ಮೇಲೆ ಆನೆಯನ್ನು [illegible] ಹೊರಲಾರದಾಯಿತು ಅವರ ಇನ್ನೊಂದ ಮಹತ್ಕಾರ್ಯವೆಂದರೆ 8000 ರಾತ್ತಲುಗಳ ಭಾರದ ಕಲ್ಲನ್ನು ಎದೆಯ ಮೇಲೆ ಇಟ್ಟುಕೊಳ್ಳುವುದ ನೆಲದ ಮೇಲೆ ಮಲಗಿ ಅವರು ತಮ್ಮ ವಿಶಾಲವಾದ ಎದೆಭಾಗದ ಮೇಲೆ ಈ ಅಗಾಧ ಭಾರದ ಕಲ್ಲನ್ನಿರಿಸಿ ಅದರ ಮೇಲೆ [illegible] ಕಲ್ಲುಗಳನ್ನು ಇರಿಸುವರು ಬಲಶಾಲಿಗಳಾದ ಇಬ್ಬರು ಹಾರೆಗಳ ಬಲವಾದ ಏಟುಗಳಿಂದ ಮೇಲಿನ [illegible] ಕಲ್ಲುಗಳನ್ನು ಹೊಡೆಯುವರು ಆ ಮೇಲೆ ರಾಮಮೂರ್ತಿಯವರು ಎದೆಯಮೇಲೆ ಇಟ್ಟಿದ್ದ ಪರ್ವತಾಕೃತಿಯ ಕಲ್ಲನ್ನು ಕ್ಷಣದೊಳಗೆ ಕೆಳಕ್ಕುರುಳಿಸಿ ಎದ್ದು ನಿಲ್ಲುತ್ತಿದ್ದರು ಇಷ್ಟು ಭಾರದ ಕಲ್ಲನ್ನು ಎದೆಯಿಂದ ನೆಲಕುರುಳಿಸಿಯೂ,ಅದು ಪುನಃ ಎದೆಯ ಮೇಲೇರಿ ಬಾರದಂತೆ ತಡೆದು ನಿಲ್ಲಿಸುವ ಅವರ ಶಕ್ತಿಯೂ ಮಾನವ ಕಲ್ಪನೆಗೆ ಮಿಕ್ಕಿದುದಾಗಿದೆ

ಮೂರ್ತಿಯವರು ಎದೆಯ ಮೇಲಿಟ್ಟುಕೊಳ್ಳುತ್ತಿದ್ದ ಕಲ್ಲನ್ನು ಇಂಗ್ಲೆಂಡಿನಲ್ಲಿ ಸರಕಾರಿ ಅಧಿಕಾರಿಗಳು ತೂಕಮಾಡಿ ಪರೀಕ್ಷಿಸಿದರು 8 ಸಾವಿರ ರಾತ್ತಲುಗಳಿಗೆ ಒಂದು ಗುರುಗಂಜಿ ತೂಕದಷ್ಟು ಕಮ್ಮಿಯಿಲ್ಲವೆಂದು ವಿಷದವಾಯಿತು ಇಂಗ್ಲೆಂಡಿನಲ್ಲಿ ರಾಮಮೂರ್ತಿಯವರು ಹೆಚ್ಚು ಸಮಯವಿರಲಿಲ್ಲ,ಕಾರಣ ಆನೆಯನ್ನು ಎದೆಯ ಮೇಲೆ ನಿಲ್ಲಿಸುವಾಗ ಅವರಿಗೊಂದು ಚಿಕ್ಕ ಅಪಘಡ ಸಂಭವಿಸಿತ್ತು ಆದರೆ ಅವರು ಅಲ್ಲಿದ್ದ ಅಲ್ಪ ಅವಧಿಯಲ್ಲಿ ಅವರ ಕಾರ್ಯಗಳನ್ನು ನೋಡಿದ ಯೂರೋಪಿಯನರೆಲ್ಲ, ಮೂರ್ತಿಯವರು ನಿಸ್ಸಂದೇಹವಾಗಿ ಬಲಿಷ್ಠರಲ್ಲಿ ರಾಜನೆಂದು ಒಪ್ಪಿದರು ಪುರಾಣಗಳಲ್ಲಿಯೂ ಚರಿತ್ರೆಗಳಲ್ಲಿಯೂ ಬಲಶಾಲಿಗಳ ಉಲ್ಲೇಖವಿದೆ ಆದರೆ ರಾಮಮೂರ್ತಿಯವರು ನಮ್ಮ ಈ ಕಾಲದಲ್ಲಿ ಸಾಧ್ಯವಾಗಿ ಮಾನವ ಶಕ್ತಿಯ ಶ್ರೇಷ್ಠತೆಯನ್ನು ಪ್ರಪಂಚಕ್ಕೆ ಬೀರಿದರು ಅವರು ಹಟಯೋಗವನ್ನು ಅಭ್ಯಾಸಿಸಿದ್ದರು ಹಟಸಾಧನೆಯಿಂದ ಎಂತಹ ಕೆಲಸವನ್ನಾದರೂ ಮಾಡಬಹುದೆಂಬ ಸಿದ್ಧಾಂತವನ್ನು ಅವರು ತಮ್ಮ ಅಮೋಘ ಶಕ್ತಿಸಾಮರ್ಥ್ಯದಿಂದ ಪ್ರದರ್ಶಿಸಿದರು

ದೇವಿ ಚೌಧುರಿ

ಪ್ರಾಚೀನ ದೇವಸ್ಥಾನಗಳ ಅಂಗಳದಲ್ಲಿ ಈಗಲೂ ಕೆಲವು ಕಡೆಗಳಲ್ಲಿ ಕೆಲವು ಕಲ್ಲುಗಳಿರುತ್ತವೆ ಜಾತ್ರೆ ಉತ್ಸವಗಳ ಸಮಯಗಳಲ್ಲಿ ಬಲಿಷ್ಠ ಯುವಕರು ಇವುಗಳನ್ನು ಎತ್ತಿ ತಮ್ಮ ಶಕ್ತಿ ಪ್ರಯತ್ನ ಮಾಡುತ್ತಾರೆ ಪೂರ್ವಜರು ಅಂಥ ಕಲ್ಲುಗಳನ್ನು ದೇವಸ್ಥಾನದಂತಹ ಪೂಜ್ಯ ಸ್ಥಳಗಳಲ್ಲಿ ಇರಿಸುವುದರಲ್ಲಿ ಒಂದು ಉದ್ದೇಶವಿತ್ತು ವ್ಯಾಯಾಮ [illegible] ಸಮಾಜದವರೆಲ್ಲರೂ ಅಭ್ಯಾಸಿಸಬೇಕೆಂಬುದೇ ಈ ಉದ್ದೇಶ ಕಾಶಿಯ ಹತಿರ [illegible] ಪುರ [illegible] ಒಂದು [illegible] ದೇವಸ್ಥಾನದಲ್ಲಿ ಇಂತಹದೊಂದು ಕಲ್ಲಿದೆ ಅದರ ಭಾರ 1200 ರಾತ್ತಲುಗಳು (2 ಖಂಡಿ ೮ ಮಣ) ದೇವಿ ಚೌಧುರಿ ಎಂಬೊಬ್ಬ 40 ವರ್ಷ ಪ್ರಾಯದ [illegible] ಮಾತ್ರ ಆ ಕಲ್ಲನ್ನು ಎತ್ತಬಲ್ಲನು [illegible] ಪ್ರಖ್ಯಾತ [illegible] ಕಾರ್ಡೆನ್‌ಫ್ಲ್ಯಾಂಡ್ ಎಂಬ ಆಂಗ್ಲೇಯರೊಬ್ಬರು ದೇವಿ ಚೌಧುರಿಯ ಈ ಅದ್ಭುತ ಸಾಮರ್ಥ್ಯವನ್ನು ನೋಡುವುದಕ್ಕಾಗಿಯೇ ಅಲ್ಲಿಗೆ ಬಂದಿದ್ದ, ಚೌಧುರಿಯು ಅವರೆದುರಿಗೆ ಆ ಕಲ್ಲನ್ನು ಮಲಗಿಕೊಂಡು ಚಾಚಿದ ಕೈಗಳಿಂದ ಮೇಲಕ್ಕೆ ಎತ್ತಿ ತೋರಿಸಿ ಆಶ್ಚರ್ಯಗೊಳಿಸಿದನು ಚೌಧುರಿಯ ಮಗನಾದ ಸಹದೇವ್ ಎಂಬವನು ಈ ಕೆಲಸದಲ್ಲಿ ತುಂಬಾ ಪ್ರವೀಣನಿದ್ದನು. ಅವನು ತಂದೆಗಿಂತಲೂ ಸುಲಭವಾಗಿ ಆ ಕಲ್ಲನ್ನು ಎತ್ತುತಿದ್ದ, ಇನ್ನೂ ಅನೇಕ ಶಕ್ತಿ ಕೆಲಸಗಳನ್ನು ಮಾಡುತ್ತಿದ್ದನು ಈಗ ಇರ್ವರೂ ಮಡಿದಿರುವರು, ಆ ಕಲ್ಲು ಮಿರ್ಜಾಪುರದಲ್ಲಿ ಈಗಲೂ ಇದೆ ಆದರೆ ನೋಡುವಾಗ ಮಾನವ ಕೈಗಳಿಂದ ಅದನ್ನು ಎತ್ತಬಹುದೆಂಬ ಕಲ್ಪನೆ ಕೂಡಾ ಆಗುವುದಿಲ್ಲವಂತೆ ಈಗ ರಘುನಾಥ ಸಾಹೇ ಎಂಬವನು ಪುನಃ ಆ ಕಲ್ಲನ್ನು ಎತ್ತುವ ಪ್ರಯತ್ನದಲ್ಲಿ ಯಶಸ್ವಿಯಾಗಿರುವನಂತೆ

ಬಾಬಾಸಿಷಾ

ಇವನು ಒಬ್ಬ ಬಂಗಾಳಿ—ಕುಸ್ತಿಯವನು ಇವನ ದೇಹ ಪ್ರಕೃತಿಯನ್ನು ನೋಡಿ ಪ್ರೊ। ರಾಮಮೂರ್ತಿಯವರು ಇವನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡರು ರಾಮಮೂರ್ತಿಯವರ ಅನೇಕ ಕೆಲಸಗಳನ್ನು ಅವನು ಮಾಡುತ್ತಿದ್ದನು ಎದೆಯ ಮೇಲೆ ಎರಡು ಆನೆಗಳನ್ನು ಏಕಕಾಲದಲ್ಲಿ ಹೊತ್ತು ಪ್ರಪಂಚ ದಾಖಲೆ ಮಾಡಿಇಟ್ಟ, ಭಾರತ ತರುಣನಿವನು ಆದರೆ ದುರ್ದೈವಶಾತ್ ಈ ಅದ್ಭುತ ಕಾರ್ಯ ಮಾಡಿದ ಒಂದು ವಾರದೊಳಗೆ ಈ ರಾಕ್ಷಸ ಪರಾಕ್ರಮಿಯು ಮೃತಪಟ್ಟ ಸಂಗತಿಯು ವಿಷಾದಕರವಾಗಿದೆ

ಇನ್ನೊಬ್ಬ ರಕ್ಕಸ

ಶಕ್ತಿ ಪ್ರಪಂಚದಲ್ಲಿ ಭಗತ್‌ರಾಯ್ ಎಂಬವನ ಹೆಸರನ್ನು ಯಾರೂ ಕೇಳಿರಲಿಲ್ಲ ಇವನೂ ಒಬ್ಬ ಬಂಗಾಳಿ ತರುಣನು ಆನೆಯನ್ನು ಎದೆಯ ಮೇಲೆ ನಿಲ್ಲಿಸಿಕೊಳ್ಳುವುದರಲ್ಲಿ ಇವನು ತುಂಬಾ ಪ್ರವೀಣನು ಇವನಲ್ಲಿ ಒಂದು ವಿಶೇಷವಿತ್ತು ಆನೆಯು ಸಂಪೂರ್ಣವಾಗಿ ಇವನ ಎದೆಯ ಮೇಲೆ [illegible] ಇವನು ತನ್ನ ಪ್ರೇಕ್ಷಕರನ್ನುದ್ದೇಶಿಸಿ [illegible] ಗಳ ತನಕ ಭಾಷಣ ಮಾಡುತ್ತಿದ್ದನಂತೆ ಈ ತೆರದ ವಿದ್ಯೆಯನ್ನು ಯಾರೂ ಮಾಡಿ ತೋರಿಸಲಿಲ್ಲ ಆನೆಯನ್ನು ಕೆಳಕ್ಕಿಳಿಸಿದ ಮೇಲೆ ಅವನ ಒಂದಿಷ್ಟು ಶ್ರಮಪಟ್ಟಂತೆ ಕೂಡ ಕಾಣುತ್ತಿರಲಿಲ್ಲ ಭಗತ್‌ರಾಯನು ಇದಲ್ಲದೆ ಅನೇಕ ಇತರ ಕೆಲಸಗಳನ್ನು ಮಾಡುತ್ತಿದ್ದನು ಎರಡು [illegible] ಗಳನ್ನು [illegible] ಸುವುದು ಎದೆಯ ಮೇಲೆ ಕಲ್ಲಿಟ್ಟುಕೊಳ್ಳುವುದು.

“ಪದ್ಮ”

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ
ಗೋನೋಕಿಲರ್ (ರಿಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

GONO KILLER ORIGINAL

ಇಂದಿನ ಅಪ್ರತಿಮ ಔಷಧ ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೋನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ ಗೋನೋಕಿಲ್ಲರ್ಸ್ ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ,ಸರ್ವ ಪ್ರಕಾರದ ಪ್ರಮೇಹ(ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ,ಧಾತು ಸ್ರಾವ,ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರೋಆಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ಬೇರೆ

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

Sole Manufacturer **Dr. D. N JASANI,** Vithalbhai Patel Road, BOMBAY 4

ವಿವಾಹಿತ ಸ್ತ್ರೀ ಪುರುಷರ ಪ್ರೇಮ ರಹಸ್ಯಗಳು—ಕ್ರಯ ರೂ. 1—0—0.

ಕನ್ನಡ ಭಾಷೆಯಲ್ಲಿ ಚಂದವಾಗಿ ಪ್ರಕಟಿಸಿದೆ. ಇದರಲ್ಲಿ ಸ್ತ್ರೀಪುರುಷರ ಪ್ರೀತಿಯ ರಹಸ್ಯಗಳು, ಪ್ಯಾರಿಸ್ ವೇಶ್ಯಾಸ್ತ್ರೀಯರ ಪ್ರೀತಿಯ ಮರ್ಮಗಳು, ಪಾಸಿಗೆಯ ಸುಖವಿಲಾಸಗಳು, ಎಲ್ಲಾ ದೇಶದ ವೇಶ್ಯಾ ಸ್ತ್ರೀಯರ ಮತ್ತು ಸ್ತ್ರೀಪುರುಷರ ಅನೇಕ ರಹಸ್ಯಗಳು ಬೇರೆಗಳ ಫೋಟೋಗಳ ಸಹಿತ ಇದೆ. ಮಲಗುವ ಮನೆಯಲ್ಲಿ ಸ್ವಭಾವಗಳ ವಿನೋದಗಳು, ವೇಶ್ಯಾ ಕನ್ಯೆಗಳು ಮೋಹಿಸುವ ಉಪಾಯಗಳು, ಮಲಗುವ ಮನೆಯ ಪ್ರೀತಿಯ ೩೩ ಫೋಟೋಗಳನ್ನು ನೋಡುತ್ತಾ ಓದುತ್ತಾ ಕೊನೆ ಪುಸ್ತಕ ಮುಗಿಯುವ ವರೆಗೂ ಶೃಂಗಾರವಾಗಿರುವುದು. ಕ್ರಯ ರೂ. 1

ಇದರ ಸಂಗಡ ೧೩ ಫೈಂಟ್ ಲವಂಗ್ ಕಲರ್ ರೂಂ ಫೋಟೋಗಳನ್ನು ಬಹುಮಾನವಾಗಿ ಕಳುಹಿಸಲ್ಪಡುತ್ತೆ.

ಭವಾನಿ ಆಂಡ್ ಕಂಪೆನಿ,
ಪೋಸ್ಟು ಬೋಕ್ಸ್ ನಂ. 287 ಮದರಾಸ್.

ವಿವಾಹ, ಉಪನಯನ, ಲಗ್ನ ಪತ್ರಿಕೆಗಳನ್ನು ಅಂದವಾಗಿ ಮುದ್ರಿಸಿ ಕೊಡಬೇಕೆ? ಹಾಗಾದರೆ,

ಶಾರದಾ ಛಾಪಖಾನೆ ಮಂಗಳೂರು,

ಇಲ್ಲಿಗೆ ಬನ್ನಿರಿ—ಅಥವಾ ಬರೆಯಿರಿ.

ಹಾರ್ಮೋನಿಯಮ್, ತಬಲಾ ಮತ್ತು ಹಾಡುಗಾರಿಕೆಯನ್ನು ಕಲಿಯಬೇಕೆನ್ನುವವರಿಗೆ ಸುಸಂದರ್ಭ!

ಲಲಿತಕಲಾದರ್ಶಕ ಸಂಗೀತ ಶಾಲೆ,

ಪಿರೇರಾ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

ESTED- 1931.

12 ವರ್ಷದೊಳಗಿನ ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ಶಿಕ್ಷಣಕೊಡಲ್ಪಡುವುದು.

ಮಾಸ್ಟರ್ ಎಚ್. ನಾರಾಯಣರಾವ್,
ತಬಲಾ ವಿದ್ವಾನ್, ಹಾರ್ಮೋನಿಯಮ್ ಎಕ್ಸ್‌ಪರ್ಟ್, ಮತ್ತು ಉಭಯ ಸಂಗೀತವಿದ್ಯಾವಿಶಾರದ,

ಒಂದು ಪ್ರತಿಯನ್ನು ಕೊಂಡುಕೊಳ್ಳಲು ಮರೆಯಬೇಡಿರಿ!

5 ಅಂಕಗಳುಳ್ಳ) **ಭಕ್ತಶಿಖಾಮಣಿ ದಾಮಾಜಿಪಂತ** (ಸಂಗೀತ ನಾಟಕ.

ಬರೆದವರು:—ಶ್ರೀ ಬಿ. ಎನ್. ಲಕ್ಷ್ಮಣ ಶೈ, ವಿದ್ವಾನ್.

ಪರಮಾತ್ಮನು ನಾರದ ಮಹರ್ಷಿಯವರೊಡನೆ ಅಪ್ಪಣೆಗೊಡಿಸಿದ—

"ವೈಕುಂಠದಲ್ಲಿ ವಾಸಿಸುವುದಿಲ್ಲವು ನಾನು। ಯೋಗಿ ಹೃದಯದೊಳಿಲ್ಲ। ಸೂರ್ಯನೊಳಗಿಲ್ಲ। ॥
ಎನ್ನ ಭಕ್ತರು ಎಲ್ಲಿ ಹಾಡುತಿಹರೋ ಅಲ್ಲಿ । ನೆಲೆಗೊಳ್ಳುವೆನು ನಾನು, ನಾರದ ಮಹರ್ಷಿವರ!" ॥

ಎಂಬ ವಾಕ್ಯದ ಸಾರ್ಥಕತೆಯನ್ನು ಈ ನಾಟಕವನ್ನೋದಿ ನೀವು ಮನಗಾಣುವಿರಿ! ಮರಾಟ ಚಾಲಿನ ಮನೋಹರವಾದ ೩೫ ಗೀತಗಳಿವೆ. ಕಥಾನಿರೂಪಣದ ಚಮತ್ಕಾರ, ಭಾಷೆಯ ಲಾಲಿತ್ಯ, ಸಂಗೀತದ ಬೆಡಗು—ಎಲ್ಲವನ್ನೂ ಈ ನಾಟಕ ಪುಸ್ತಕದಲ್ಲಿ ಕಾಣುವಿರಿ! ಬೆಲೆ:—12 ಆಣೆ.

ಪುಸ್ತಕದ ಪ್ರತಿಗಳು ಸಿಗುವ ಸ್ಥಳ:-1. ಎಲ್ಯಾರ್ಡ್ ಪಬ್ಲಿಷಿಂಗ್ ಹೌಸ್, ಸ್ಟರಕ್ ರೋಡ್, ಮಂಗಳೂರು. 2. ಹರಿಹರ ಪುಸ್ತಕಾಲಯ, ಪುತ್ತೂರು.

ಶಾಲಿವಾಹನ ಶಕ ೧೮೫೯ನೆಯ ಧಾತು ಸಂವತ್ಸರದ ಜ್ಯೇಷ್ಠ ಬ| ೨ ಶನಿವಾರದಿಂದ, ಜ್ಯೇಷ್ಠ ಬ| ೮ ಶುಕ್ರವಾರದ ವರೇಗಿನ ಪಂಚಾಂಗ. (೧೯೩೭ನೇಯ ಮಿಥುನ (ಕಾರ್ತೆಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
26	ಶನಿ	೨	೪	ಉ. ಷಾ.	೨೭	೧೨	
27	ರವಿ	೩	೫	ಶ್ರವಣ	೨೯	೧೩	
28	ಸೋ.	೪	೫	ಧನಿಷ್ಠ	೩೦	೧೪	
29	ಮಂಗ	೫	೩	ಶತಭಿಷ	೩೦	೧೫	
30	ಬುಧ	೬	೫೬	ಪೂ. ಭಾ.	೨೬	೧೬	
1	ಗುರು	೭	೫೨	ಉ. ಭಾ.	೨೭	೧೭	
2	ಶುಕ್ರ	೮	೪೭	ರೇವತಿ	೨೪	೧೮	

THE

BANK OF MANGALORE LTD.,

MANGALORE.

ESTD. 1931.

Branches:-
Panemangalore, Mudabidri & Padubidri.

Chairman:—**Philip J. Chandran, Esq.,**
Retd. Dt. Registrar of Joint Stock Companies.

On & from 1st of January 1937,
Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.
Saving Bank deposit 3½% on daily balances
All kinds of banking business transacted.

U. R. PAI, N. U. PAI, *Managing Directors.*

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	3— 8	4— 0
ಮುಸ್ಕಿ ...	3—10	4— 4
ಗುಜ್ಜು ...	3—10	4— 0
ಊರ ಅವ್ವಲ್ ಬೆಳ್ತಿಗೆ ...	4— 0	4—12
ರಂಗೂನು ಬೆ. ಗೋ. ಗಳ್ಳೆ...	6 — 8	7— 0
ಎಲ್ಲರು ಬೆ. ಮು. ಗಳ್ಳೆ...	3—14	4— 0
ಗೋದಿ ಗೋಣಿ ಗಳ್ಳೆ ...	11— 0	13— 0
ತೊಗರಿ ಗೋಣಿ ಗಳ್ಳೆ ...	9 — 8	12— 8
ಹುರುಳಿ ಗೋಣಿ ಗಳ್ಳೆ ...	5— 4	5 — 6
ಕಡಲೆ ಗೋಣಿ ಗಳ್ಳೆ ...	8 —14	12 — 8
ತೊಗರಿಬೇಳೆ ಗೋಣಿಗಳ್ಳೆ...	11— 0	19— 0
ಉದ್ದು ಗೋಣಿ ಗಳ್ಳೆ ...	9— 0	9 — 8
ಹೆಸರು ಗೋಣಿ ಗಳ್ಳೆ ...	7—12	8— 8
ಊರುಬೆಲ್ಲ ಖಂಡಿ ಗಳ್ಳೆ ...	27— 8	32— 8
ಉಪ್ಪು ಗೋಣಿ ಗಳ್ಳೆ ...	4—10	5—14
ಕೊಬ್ರಿ ಖಂಡಿ ಗಳ್ಳೆ ...	75— 0	84— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ...	20 — 0	20— 8
ಎಳ್ಳಿಂಡಿ ಖಂಡಿ ಗಳ್ಳೆ ...	27 — 8	31 — 4
ಕೊಬ್ರಿ ಎಣ್ಣೆ ಮಣ ಗಳ್ಳೆ...	5— 8	6— 4
ಎಳ್ಳೆಣ್ಣೆ ಮಣ ಗಳ್ಳೆ ...	7— 0	7— 0.
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳೆ...	6— 5	7— 5
ಮೋರಿಸ ಸಕ್ಕರೆ ಮು. ಗಳ್ಳೆ...	3— 0	3 — 0
ಮೆಣಸು ...	4— 8	6— 0
ಸಾಸಿವೆ ಮುಡಿ ಗಳ್ಳೆ ...	5 — 4	5— 8
ಕಾಳುಮೆಣಸು ಖ. ಗಳ್ಳೆ ...	97 — 8	100 - 0
ಯೇಲಕ್ಕಿ ಬೀಜ ಮಣಗಳ್ಳೆ...	80— 0	85— 0
ಗೇರುಬೀಜ ಮು. ಗಳ್ಳೆ ...	3 —14	4 — 2
ಕಚ್ಚಿನ ಖಂಡಿ ಗಳ್ಳೆ ...	51— 0	51— 4
ತಾಂಬ್ರತಗಡು ಮ. ಗಳ್ಳೆ...	14— 12	15— 0
ತಾಂಬ್ರಪಾತ್ರಗಳು ಮ. ಗಳ್ಳೆ	17— 0	17— 8
ಚೀನಿಬೆಳ್ಳಿ ಸೇರು ಗಳ್ಳೆ ...	13— 8	15 — 0
ಹಿತ್ತಾಳೆ ತಗಡು ಮ. ಗಳ್ಳೆ...	12— 0	12— 8
ಪವನು ಗಳ್ಳೆ ...	22— 7	22— 8
ಹುಣಸೆ ಹುಳಿ ಖಂಡಿ ಗಳ್ಳೆ	40— 0	45— 0
ನೇಟಿವ್ ಕಾಫಿ ಖಂಡಿ ಗಳ್ಳೆ	145— 0	150— 0
ಫಿಟೇರಿ ಕಾಫಿ ಖಂಡಿ ಗಳ್ಳೆ...	190— 0	200— 0
ಮಡ್ರೇಸಿ ಬಿಲಕ್ಕಿ ...	57— 0	60 —

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮದ್ ಸುಕೃತೀಂದ್ರ ತೀರ್ಥ ಸ್ವಾಮಿಯವರು ಯಾವತ್ತೂ ತಮ್ಮ ಶಿಷ್ಯವರ್ಗದವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಿಮ್ಮಲ್ಲಿ ಆಗುವ ಯಾವತ್ತೂ ಹಸ್ತಕನ್ಯ ಷೋಡಶ ಕರ್ಮಗಳಲ್ಲಿ ಈ ವರೆಗೆ ದಾನ ದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ಪುರೋಹಿತರೇ ವಸೂಲುಮಾಡಿ ಮಠಕ್ಕೆ ಒಪ್ಪಿಸುವಂತಾದ್ದು ಪ್ರಾಚೀನಾರಭ್ಯ ನಡೆಕೊಂಡು ಬಂದಿರುವದು ತಿಳುವಳಿಕೆಗೆ ಇರಬಹುದಷ್ಟೆ.

ಸದ್ರಿ ಮಠಮರ್ಯಾದೆ ಹಣವು ಪ್ರತೀ ಒಬ್ಬ ವೈದಿಕರಿಂದ ತರಿಸಿಕೊಳ್ಳುವದಿ ಕಷ್ಟಸಾಧ್ಯವೆಂದು ಗ್ರಹಿಸಿ ಒಂದೇ ಕಡೆಯಲ್ಲಿ ಸದ್ರಿ ಹಣವು ಜಮೆಯಾಗಿ ವರ್ಷಂಪ್ರತಿ ನಾವು ತರಿಸಿಕೊಳ್ಳುವದಿ ಸುಲಭವಾಗುವ ಹಾಗೆ ಆಯಾಯಾ ಪೇಟೆಯ ದೇವಸ್ಥಾನದ ಅಧಿಕಾರಿಗಳಿಗೆ ನಿಮ್ಮಿಂದ ಮಠಮರ್ಯಾದೆ ಕಾಣಿಕೆಯನ್ನು ಪಡಕೊಂಡು ಸಂಸ್ಥಾನದ ಕಡೆಯಿಂದ, ರಶೀದಿ ಕೊಡಬೇಕಾಗಿ ತಿಳಿಸಿರುತ್ತೇವೆ.

ಆದ್ದರಿಂದ ನೀವು ಇನ್ನು ಮುಂದೆ ನಿಮ್ಮಲ್ಲಿ ಆಗುವ ಯಾವತ್ತೂ ಹಸ್ತಕನ್ಯ ಷೋಡಶ ಕರ್ಮಗಳಲ್ಲಿ ದಾನದಕ್ಷಿಣೆ ವಗೈರೆ ಮಠಮರ್ಯಾದೆ ಕಾಣಿಕೆಯನ್ನು ನೀವೇ ಸ್ವತಹಾ ಯಾ ನಿಮ್ಮ ನಿಮ್ಮ ಪುರೋಹಿತರ ಮುಖಾಂತರ ನಿಮ್ಮ ಪೇಟೆಯ ದೇವಸ್ಥಾನದ ಅಧಿಕಾರಿಗಳ ವಶಾ ಕೊಟ್ಟು ಪಾವ್ತಿ ಪಡಿಯತಕ್ಕದ್ದು. ತಿಳಿದಿರುವುದು.

ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಿಂದ ಹೊಟ್ಟೆಯ ಶಸ್ತ್ರಚಿಕಿತ್ಸೆಯ ಕಷ್ಟವು ತಪ್ಪಿಸಿದಂತಾಯಿತು.

ಎಂ. ಬಿ. ಎಂಬೊಬ್ಬರು ಹೀಗೆ ಬರೆಯುತ್ತಾರೆ:—ಫೆಬ್ರವರಿಯ ಮೊದಲನೇ ವಾರದ ಸುಮಾರಿಗೆ ನಾನು ಅಸ್ವಸ್ಥಬಿದ್ದೆ. ನಾನು ಬಹಳ ಕ್ಷೀಣನಾಗಿ, ನಡೆಯಲು ಬಲು ಕಷ್ಟವಾಗುತ್ತಿತ್ತು. ಅಲ್ಲದೆ ಹೊಟ್ಟೆಯೊಳಗಿನ ಕಠಿಣ ನೋವಿನಿಂದಾಗಿ ನನಗೆ ಊಟ ಮಾಡಲಾಗುತ್ತಿರಲಿಲ್ಲ.

ಒಂದು ವಾರದ ವರೆಗೆ ಹೀಗೆ ನಡೆದು ಆ ಮೇಲೆ ನನಗೆ ವಾಂತಿ ಶುರುವಾಯಿತು: ನನಗೆ ನೀರು ಕೂಡಾ ಕುಡಿಯಲಿಕ್ಕೆ ಆಗುತ್ತಿರಲಿಲ್ಲ: ನಾನು ಒಬ್ಬ ಡಾಕ್ಟರರನ್ನು ವಿಚಾರಿಸಲು ಅವರು ನನಗೆ ಜಠರದಲ್ಲಿ ಹುಣ್ಣುಗಳಾಗಿವೆಯೆಂದು ನನ್ನ ಹೆಂಡತಿಯೊಡನೆ ಹೇಳಿದರು. ನನಗೆ ಏನನ್ನೂ ತಿನ್ನಲಿಕ್ಕೆ ಆಗುತ್ತಿರಲಿಲ್ಲ. ಕಡೆಗೆ ಹಾಲು ಕೂಡಾ ತೆಗೆದುಕೊಳ್ಳುವುದನ್ನು ನಿಲ್ಲಿಸಿದೆ. ನನ್ನನ್ನು ಆಸ್ಪತ್ರೆಗೆ ಕಳುಹಿಸಬೇಕೆಂದು ಡಾಕ್ಟರರು ಹೇಳಿದರು.

ನಾನು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ತೆಗೆದುಕೊಳ್ಳಲು ಶುರುಮಾಡಿದೆ. ಎರಡು ದಿನಗಳಲ್ಲಿ ನನ್ನ ವಾಕರಿಕೆಯು ನಿಂತುಹೋಯಿತು. ಇದು ನನಗೆ ದೈವಪ್ರಸಾದವಾಯಿತು. ನಾನು ಬಹಳ ಗುಣಮುಖನಾಗುತ್ತೇನೆಂದು ಡಾಕ್ಟರರು ಹೇಳಿದರು. ಅದನ್ನು ಮುಂದುವರಿಸುತ್ತಾ ಬಂದಲ್ಲಿ ಆಸ್ಪತ್ರೆಯ ಆವಶ್ಯಕತೆ ಇಲ್ಲವೆಂದರು! ಡಾಕ್ಟರರು ಹೇಳಿದಂತೆ ಮೆಕ್ಲೀನ್ ಪೌಡರಿನ ಪ್ರಯೋಗವನ್ನು ಮುಂದುವರಿಸುತ್ತಾ ಬಂದ ಹಾಗೆ ನನಗೆ ಒಂದಿಷ್ಟು ಆಹಾರ ತೆಗೆದುಕೊಳ್ಳುವಂತಾಯಿತು. ಆದರೆ ಊಟಮಾಡಿದ ಮೇಲೆ ಸ್ವಲ್ಪ ಹೊಟ್ಟೆನೋವಾಗಲೂ ಆಗುತ್ತಿತ್ತು. ಒಂದು ವಾರದ ಮೇಲೆ ನನಗೆ ಹಾಸಿಗೆಯಿಂದ ಎದ್ದು ತಿರುಗಾಡಲನುಕೂಲವಾಯಿತು. ನನ್ನ ತೂಕವು ಬಹಳ ಇಳಿದಿತ್ತು. ಹೇಗಾದರೂ ವಾರವಾರಕ್ಕೆ ನಾನು ಗುಣಮುಖನಾಗುತ್ತಾ ಬರುವ ಹಾಗೆ ಹೊಟ್ಟೆನೋವು ಕಡಿಮೆಯಾಗುತ್ತಾ ಬಂತು. ನನಗೀಗ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳಲಿಕ್ಕಾಗುತ್ತಿದೆ.

ಈ ಹೊತ್ತಿಗೆ ನಾನು ಸಂಪೂರ್ಣ ಗುಣಹೊಂದಿದೆ. ನನ್ನ ತೂಕವು ಹೆಚ್ಚಿತು. ನನಗೀಗ ಯಾವ ನೋವೂ ಇಲ್ಲ. ಮನಸ್ಸಿಗೆ ಬಂದುದನ್ನು ತಿನ್ನುವೆನು. ಈ ರೋಗದಿಂದ ಸಾಯುಗುತ್ತೇನೆಂದು ನೆನಸಿದ್ದ ನನಗೆ ಈಗ ಬಹಳ ಆಶ್ಚರ್ಯವಾಗುತ್ತದೆ. ಇದೆಲ್ಲಕ್ಕೂ ನಾನು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿಗೆ ಋಣಿಯಾಗಿರುತ್ತೇನೆ. ಅದನ್ನು ಸಾವಿರಾರು ಬಾರಿ ವಂದಿಸುತ್ತೇನೆ.' ಎಂ. ಬಿ. ಯವರು ಮಾಡಿದ ಹಾಗೆ ನೀವೂ ಮೆಕ್‌ಲೀನ್ ಪೌಡರಿನಿಂದ ನಿಮ್ಮ ಹೊಟ್ಟೆಶೂಲೆಯನ್ನು ಪರಿಹರಿಸಿ ನಿಮ್ಮ ನರಳುವಿಕೆಯ ಗುಣಹೊಂದಬೇಕಾದ

ಎಂಬ ಸಹಿಯು ಕೆಂಪು ಮುದ್ರೆಯುಳ್ಳ ಸೀಸೆಯನ್ನೇ ಪಡಕೊಳ್ಳಿರಿ. ಇಂತಹ ನಮೂನೆಯು ಕಡಿಮೆ ದರದ ಪರಕೀಯ ಪುಡಿಯನ್ನು ಪಡೆದು ಮೋಸಹೋಗಬೇಡಿ, ಇದು ಬಿಲ್ಲೆಯಾಗಿ ಮಾರುವುದಿಲ್ಲ. ಸೀಸೆಗಳಲ್ಲೂ ಪೊಟ್ಟಣಗಳಲ್ಲೂ ಮಾರಲ್ಪಡುತ್ತದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯಿರಿ.

S. No. 61.

NOTICE.

the Court of the District Munsiff of Mangalore.

Small Cause Suit No 879/1936.

Between

The Canara Industrial and Banking Syndicate Limited–Plaintiff

and

1. K. Bhaskar Pai, son of Kouchady Ganapathi Pai, residing in Car Street opposite Taj Mahal in Mangalore town, 2 M Narasinga Rao, son of M Purushothuma Rao, Retired Postal Official, residing at Hosdrug, Kasargod taluk

Is hereby given that the above suit will come on for hearing at 11 A M on 28–6–1937 before the above court, the defendants may appear in person or by pleader on or before the said date and contest the suit, failing which they will be declared exparte and the suit will be heard and decided in their absence

Mangalore 23—6–37 **B. Vaikunta Baliga,** Vakil for Plaintiff

THE

Shivaji Chemical Works, HUBLI.

ಬೇಸಿಗೆಯ ಕಾಲದಲ್ಲಿ ಹೊಟ್ಟೆಯನ್ನು ಶುದ್ಧವಾಗಿರಿಸುವ ವಾಡಿಕೆಯನ್ನು ಮರೆಯಬೇಡಿರಿ

ಬಹುಕಾಲದಿಂದ ಶಿವಾಜಿ ರಸಾಯನಿಕ ವೈದ್ಯಶಾಲೆಯಲ್ಲಿ ತಯಾರಾದ 'ಜಂತುಪುಡಿ' ಎಂಬ ಹೊಟ್ಟೆಹುಳುವಿನ ಔಷಧಿಯನ್ನು ಗೃಹ ಉಪಯೋಗವಾಗಿ ಸಕಲರೂ ಉಪಯೋಗಿಸುತ್ತಿರುವರು

ಇದರ ಉಪಯೋಗದಿಂದ ಹೊಟ್ಟೆಯೊಳಗಿನ ದೊಡ್ಡ ಕ್ರಿಮಿ, ಕೊಕ್ಕೆ ಹುಳ ನೂಲಿನಂತಹ ಹುಳ, ಯಾವ ತರಹ ಕ್ರಿಮಿಯೇ ಆಗಲಿ ಬಿದ್ದುಹೋಗುವುದು ಇದರ ಸೇವನೆ, ಸಕ್ಕರೆ ಬಿಸ್ಕೀಟು (ಪಥ್ಯ ಬೇಡ)

ಪುಡಿ ಪ್ಯಾಕೆಟ್ 1ಕ್ಕೆ	0	1	0
ಸುಕಪಿಸೇವನ ಗುಳಿಗೆ	0	0	6
ಚಿತ್ರದಾಂತ ಪೌಡರ್ ಪ್ಯಾಕೆಟ್ 1ಕ್ಕೆ	0	1	0
ಇದರ ಸೇವನೆಯಿಂದ ಎಲ್ಲಾ ತರದ ಹಿತ್ತವು ವಾಸಿಯಾಗುವುದು ಕಪ ಮಿಶ್ರಣ ಸೀಸೆ 1ಕ್ಕೆ	0	8	0

ಸಿಗುವ ಸ್ಥಳ ಷಾ ಕಂಪೆನಿ,

ಗವರ್ನಮೆಂಟ್ ಕೋಲೇಜಿನ ಎದುರು ಮಂಗಳೂರು

ಸರ್. ಕೆ. ವಿ. ರೆಡ್ಡಿಯವರ ಹಳೇ ಹಾದಿ

(೩ನೇ ಪುಟದಿಂದ ಮುಂದುವರಿಸಿದುದು)

"ಈ ವಿಷಯವು ಅವರಿಗೆ ತಿಳಿಯದಿದ್ದಲ್ಲಿ ರೆಡ್ಡಿಯವರು ತಮ್ಮ ಪಂಗಡದ ರಾಜಕೀಯ ಮುಖ್ಯಸ್ಥರುಗಳ ಮತ್ತು ಸರಕಾರದ ಹುದ್ದೆಗಳಲ್ಲಿದ್ದ ಅವರ ಮಕ್ಕಳ, ಅಳಿಯಂದಿರ, ಸಂಬಂಧಿಕರುಗಳ ಒಂದು ಪಟ್ಟಿಯನ್ನು ಮಾಡಿದರೆ ಆಗ ಅವರಿಗೆ ಚೆನ್ನಾಗಿ ತಿಳಿಯಬಹುದು

ಜಸ್ಟಿಸ್ ಪಾರ್ಟಿಯ ಕನಿಕರಾವಸ್ಥೆ

"ಸರ್ ರೆಡ್ಡಿಯವರು ಕೊಂಗ್ರೆಸನ್ನು ದೂರಿ ಮಾತಾಡುವ ವಿಷಯಗಳು ನಿಜವೆಂದು ಇಟ್ಟುಕೊಳ್ಳೋಣ (ಆದರೆ ಅವು ನಿಜವಾದುವುಗಳಲ್ಲ) ಎರಡು ವಿಷಯಗಳನ್ನು ಮಾತ್ರ ಅವರು ಅಲ್ಲಗಳೆಯಲಾಗಲಿಕ್ಕಿಲ್ಲ. ಮೊದಲನೇಯದಾಗಿ ಈ ಚುನಾಯಿತರಾದ ಅಸೆಂಬ್ಲಿ ಮೆಂಬರುಗಳು ಬಹುಸಂಖ್ಯಾಕ ಬ್ರಾಹ್ಮಣೇತರ ವೋಟುದಾರರಿಂದಲೇ ಚುನಾಯಿತರಾಗಿರುವ ವಿಷಯ; ಇನ್ನು ಮುಂದೆ ಯಾವದಾದರೂ ಸರಕಾರೀ ಕೆಲಸಗಳಾಗುವುದಾದರೆ ಅದು ಮಂತ್ರಿಗಳಾದವರ ಆಪ್ತರಿಗೂ, ಹತ್ತಿರದ ಸಂಬಂಧಿಕರಿಗೂ ಆಗುವುದಿಲ್ಲ ಮತ್ತು ಎಲ್ಲವೂ ಯೋಗ್ಯತೆಯ ಮೇಲೆ ಹೊಂದಿಕೊಂಡಿರುತ್ತದೆ ಎಂಬದು ಎರಡನೆ ವಿಷಯ ಆದುದರಿಂದ ಸರ್. ರೆಡ್ಡಿಯವರು ತಮ್ಮ ಕುಂಬಳಕಾಯಿಯನ್ನು ಬಿಟ್ಟು, ಇತರರ ಸಾಸಿವೆ ಕಾಳನ್ನು ಹುಡುಕುವುದರಲ್ಲಿ ಪ್ರಯುಕ್ತವಟ್ಟರೆ ಅವರು ಸಾರ್ವಜನಿಕ ಅಪಹಾಸ್ಯಕ್ಕೆ ಗುರಿಯಾಗುವರೆಂಬ ವಿಷಯವನ್ನು ಅವರು ಮರೆಯಬಾರದು

ದಿನೇ ದಿನೇ ಹಗಲೂ ರಾತ್ರಿ ಉಷ್ಣವು ಹೆಚ್ಚುತ್ತಿರುವುದು. ನೀವೂ ಆಯಾಸವನ್ನು ಹೊಂದುತ್ತಿರುವಿರಿ. ಇಂತಹ ವೇಳೆಯಲ್ಲಿ ಆಗಾಗ್ಯೆ ಒಂದು ಬಟ್ಟಲು ಬಿಸಿ ಬಿಸಿ ಟೀ ಕುಡಿಯುವುದೇ ಉಪಾಯ. ಕೆಲಸ ಮಾಡುವ ಕಾಲದಲ್ಲಿ ಟೀ ಕುಡಿದಲ್ಲಿ ಆಯಾಸವನ್ನು ಪರಿಹರಿಸುವುದು. ಮಲಗುವ ಮುಂಚೆ ಕುಡಿದಲ್ಲಿ ಸುಖನಿದ್ರೆಯನ್ನು ಕೊಡುವುದು.

ಭಾರತೀಯ ಚಹವು

ತಂಪನ್ನೂ ಆನಂದವನ್ನೂ ಕೊಡುವುದು

ಟೀ ತಯಾರಿಸುವ ವಿಧಾನ

ಶುದ್ಧವಾದ ನೀರನ್ನು ಬಿಸಿ ಮಾಡಿರಿ ಶುಭ್ರವಾದ ಒಂದು ಪಿಂಗಾಣೀ ಮಣ್ಣಿನ ಪಾತ್ರೆಯನ್ನು ಬೆಚ್ಚಗೆ ಮಾಡಿರಿ ಟೀ ಕುಡಿಯುವವರ ಸಂಖ್ಯೆಗೆ ಅನುಸರಿಸಿ ತಲಾ ಒಂದು ಚಮಚದಂತೆಯೂ ಪಾತ್ರೆಗಾಗಿ ಒಂದು ಚಮಚವೂ ಉತ್ತಮ ಇಂಡಿಯಾ ಟೀ ಸೊಪ್ಪನ್ನು ಹಾಕಿರಿ ನೀರು ಕುದಿದ ನಂತರ ಅದರ ಮೇಲೆ ಸುರಿಯಿರಿ ಐದು ನಿಮಿಷಗಳ ನಂತರ ಶೋಧಿಸಿ ಹಾಲು ಸಕ್ಕರೆ ಬೆರಸಿ ಕುಡಿಯಿರಿ

I K 49

ಧೋತಿ ಉಡಬಹುದು

ಬಂಗಾಳದ ಜನಪ್ರಿಯ ಉಡುಪಾದ ದೋತಿಯನ್ನು ಸರಕಾರದ ಸಮಾರಂಭಗಳಲ್ಲಿ ಉಡಬಹುದೆಂದಾಗುತ್ತದೆ ಬಂಗಾಳದ ಮಂತ್ರಿಮಂಡಳದಲ್ಲಿ ಹಣಕಾಸಿನ ಸಚಿವರಾದ ಆನರೆಬಲ್ ನಳಿನಿರಂಜನ್ ಸರ್ಕಾರರವರು ಮಂತ್ರಿ ಮಂಡಳದ ಒಂದು ಸಭೆಯಲ್ಲಿ ಬಂದು ಸೂಚನೆಯನ್ನು ತರುತ್ತಾ ಬಂಗಾಳಿ ರಾಷ್ಟ್ರೀಯ ಉಡುಪಾದ ಧೋತಿಯನ್ನು ಸರಕಾರದ ಸಮಾರಂಭಗಳಲ್ಲಿ ಉಡಲಪೇಕ್ಷಿಸುವವರು ಉಟ್ಟುಕೊಳ್ಳಬಹುದೇ ಎಂದು ಪ್ರಶ್ನಿಸಿದಾಗ ಗವರ್ನರರು ಆ ದೋತಿ ಉಡುಪಿನ ಸಂಪೂರ್ಣ ವಿವರಗಳನ್ನು ಕೊಟ್ಟಲ್ಲಿ ತಾವು ಅದನ್ನು ಪರ್ಯಾಲೋಚಿಸುವವನಾಗಿ ಭರವಸೆ ಇತ್ತಿರುವರು. ಉಡುಪು ಸುಸಜ್ಜಿತವಾಗಿದ್ದಲ್ಲಿ ಗವರ್ನರರ ಆಕ್ಷೇಪವಿರಲಾರದೆಂದು ತಿಳಿದುಬಂದಿದೆ

USE
KALYANPUR SUGAR

IT IS THE PUREST & THE SWEETEST
IT IS A UNIQUE PRODUCT OF OUR OWN DISTRICT.

available in 7lb and 14lb packets, at the

Office, C. P. C. Co., Ltd.

ಕಲ್ಯಾಣಪುರ ಸಕ್ಕರೆಯನ್ನೆ ಉಪಯೋಗಿಸಿರಿ

ಅದು ಅತ್ಯಂತ ಶುದ್ಧವೂ ಸಿಹಿಯೂ ಆಗಿದೆ.

ಅದು ನಮ್ಮ ಜಿಲ್ಲೆಯ ಅಪೂರ್ವ ತಯಾರಿಯಾಗಿದೆ.

ಕರ್ನಾಟಕದ ಸಾಹಸ! **ಕರ್ನಾಟಕದ ಕೀರ್ತಿ!!**

ಸೇವೆ ಮತ್ತು ಗೆಲುವು

ಸೇವೆಯೇ

ಮೈಸೂರು ಇನ್‌ಶ್ಯೂರೆನ್ಸ್ ಕಂಪೆನಿಯ

ಪರಮ ಧ್ಯೇಯ

ಸೇವೆಯೇ ಅದರ ಗೆಲುವಿನ ಗುಟ್ಟು

ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿಗಿರುವ ಉತ್ಸಾಹವೇ

"ಮೈಸೂರು" ಅಭ್ಯುದಯದ ಜೀವಾಳ.

ಕಂಪೆನಿಯು ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ನಿರತವಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ, ಅವರಿಂದ ಸೇವೆಗಾಗಿ ಹೆಚ್ಚಿನ ಕರೆ ಬರಲೆಂದು ಆಗ್ರಹಪೂರ್ವಕವಾಗಿ ಬೇಡುವುದು.

ಅದು ಬಾಳಿರುವುದು ಸೇವೆಯಿಂದ;
ಬಾಳುವುದು ಸೇವೆಗಾಗಿಯೇ.

ಇಂದಿನ ಕೆಲವು ಅಂಶಗಳು-ಅಂಕಿಗಳು.

ಅಧಿಕೃತ ಷೇರು ಬಂಡವಾಳ ರೂ. ೩,೦೦,೦೦೦	ಇಂಡಿಯಾ ಸರಕಾರದ ರೇವಣಾತಿಯ ಬೆಲೆ ರೂ ೨೫,೦೦೦
ಹೊರಹಾಕಿದ ಬಂಡವಾಳ ರೂ. ೨,೦೦,೦೦೦	ಜೀವ ವಿಮಾ ನಿಧಿ ರೂ. ೧೬,೨೨೧-೪-೪
ಚಂದಾ ಆದ ಬಂಡವಾಳ ರೂ. ೧,೪೯,೬೦೦	ಸಾಧಿಸಿದ ಉದ್ಯಮ ರೂ ೧೦,೬೭,೪೫೩
ತೆತ್ತ ಬಂಡವಾಳ ರೂ. ೬೫,೦೦೦	ಪೂರ್ಣವಾದ ಉದ್ಯಮ ರೂ. ೭,೬೫,೩೪೫
ಷೇರುದಾರರ ಮೇಲಣ ನಿಧಿ ರೂ. ೮೪,೯೦೦	ಪ್ರಿಮಿಯಂ ಆದಾಯ ರೂ. ೫೫,೨೦೦

ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ.

ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.

೧. ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೨೨೦ರಷ್ಟು ಏರಿದೆ ೨. ಹೊಸ ಉದ್ಯಮವು ಶೇಕಡ ೬೫ರಷ್ಟು, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟು ಏರಿದೆ. ೩. ಷೇರುಗಳು ಸಂಬೆಲೆಗೆ ಮಾರಾಟವಾಗುತ್ತಿವೆ ೪ ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು. ೫. ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೇ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ ೬ ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠ ತರಗತಿಯನ್ನು ಸೂಚಿಸುತ್ತಲಿದೆ. ಹಾಗೂ ಅದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ

ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

"ಮೈಸೂರು" ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ ಕರ್ನಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆಯನ್ನು ಹಿಡಿದು—ಈ ಅನುಭವ ಬೆಂಬಲದಿಂದ—ಕರ್ನಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ್ ಇಂಡಿಯ, ಬರ್ಮಾ ಮತ್ತು ಸಿಲೋನುಗಳಲ್ಲೂ ವಿಜಯಿಯೆನಿಸಲು ಮುಂದಡಿಯಿಟ್ಟಿದೆ.

ಬೇಕು! ಕರ್ನಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನುಗಳ ಎಲ್ಲ ಪ್ರಾಂತ್ಯಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು. ಸಂಬಳದ ಮತ್ತು ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿಗೆ ಅವರು ಕೊಡುವ ಉದ್ಯಮದ ಭರವಸೆಯನ್ನೂ ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು

ಹೆಚ್ಚು ವಿವರಗಳಿಗೆ:—

ಜನರಲ್ ಮ್ಯಾನೇಜರ್,

ಮೈಸೂರು ಇನ್‌ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ನಾಗೇಶ್ವರ ಬಿಲ್ಡಿಂಗ್ಸ್" ಶ್ರೀ ನರಸಿಂಹರಾಜಾ ರೋಡ್ ಬೆಂಗಳೂರು ಸಿಟಿ.

ರಾಜಕೀಯ ಪರಿಸ್ಥಿತಿಯ ಕುರಿತು ವ್ಯಾಸ್‌ರಾಯರ ಹೇಳಿಕೆ.

ಗವರ್ನರರೂ ಮತ್ತು ಮಂತ್ರಿಗಳೂ.

ಉತ್ಕಟಾವಸ್ಥೆಯ ದೂರಿ.

ಕಾರಣಗಳನ್ನು ಪ್ರಕಟಿಸಲು ಮಂತ್ರಿಗಳಿಗೆ ಸ್ವಾತಂತ್ರ್ಯ
ಡಿಸ್‌ಮಿಸ್ ಮತ್ತು ರಾಜಿನಾಮೆಯ ಪ್ರಶ್ನೆ

[illegible]ವಾಗಿ ಪ್ರಕಟವಾಗಿದ್ದಂತೆ, ವ್ಯಾಸರಾಯರು ದೇಶದ ರಾಜಕೀಯ ಉತ್ಕಟಾವಸ್ಥೆಯ ಮೇಲೆ ಉದ್ದವಾದ ಹೇಳಿಕೆಯೊಂದನ್ನು ಪ್ರಕಟಣೆಗೆ ಕೊಟ್ಟಿರುವರು ಇದಕ್ಕೆ ಮುಂಚಿತವಾಗಿ ಅಂದರೆ ತಾ. ೨೧ರಲ್ಲಿ ವ್ಯಾಸರಾಯರು ರೇಡಿಯೋ ಮೂಲಕ ಒಂದು ಸಂದೇಶವನ್ನು ಕೊಡುತ್ತಾ, ತಾವು ಕೊಡಲಿರುವ ಈ ಹೇಳಿಕೆಯನ್ನು ಸಾರ್ವಜನಿಕರು ಸಹಾನುಭೂತಿಯಿಂದ ಪರ್ಯಾಲೋಚಿಸಬೇಕಾಗಿ ವಿನಂತಿಸಿಕೊಂಡರು. ಅನಂತರ ಮಂಗಳವಾರ ತಾ ೨೨ರಲ್ಲಿ ಪ್ರಕಟಣೆಗೆ ಕೊಟ್ಟ ಅವರ ಹೇಳಿಕೆಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ

“ನಾನು ವೈಸ್ರಾಯ್ ಪದವಿಯನ್ನು ಸ್ವೀಕರಿಸಿದಂದು ಕೊಟ್ಟ ಭಾಷಣದಲ್ಲಿ, ಮುಂದೆ ಬರಲಿರುವ ನವ ರಾಜಶಾಸನವು ತೊಂದರೆಗಳಿಲ್ಲದೆ ಪ್ರಾರಂಭವಾಗುವುದಿಲ್ಲವೆಂದು ಹೇಳಿದ ವಿಷಯವು ನಿಮ್ಮ ಸ್ಮೃತಿಪಟದಿಂದ ಮರೆತು ಹೋಗಿರಲಿಕ್ಕಿಲ್ಲ ಅಂತೆಯೇ ತೊಂದರೆಗಳು ಬಂದೇ ಬಂದುವು ಈ ತೊಂದರೆಗಳನ್ನು ಪರಿಹರಿಸಲಾಗುವಂತೆ ನಾನೀ ಹೇಳಿಕೆಯನ್ನು ಕೊಡಲಿದ್ದೇನೆ. ನನ್ನ ಅಧಿಕಾರಕ್ಕೆ ತಕ್ಕುದಾದ ಭಾಷಾ ಶೈಲಿಯಲ್ಲಿ ಈ ಹೇಳಿಕೆಯನ್ನು ಕೊಟ್ಟಿರುವೆನಾದರೂ, ಈ ತೊಂದರೆಗಳಲ್ಲಿ ನನ್ನ ಸಹಾನುಭೂತಿಗಳಿಲ್ಲವೆಂದು ಯಾರೂ ತಪ್ಪು ತಿಳಿಯಬಾರದು ಪ್ರಾಮುಖ್ಯ ವಿಷಯಗಳನ್ನು ಪ್ರಾಮುಖ್ಯತೆಯಿಲ್ಲದಂತವುಗಳ ಹಾಗಾಗಲೀ ಅಥವಾ ಅವು ಚಿಕ್ಕ ವಿಷಯಗಳಾಗಿವೆ ಎಂದಾಗಲೀ ನಾನು ತಿಳಕೊಂಡು ಈ ಹೇಳಿಕೆಯನ್ನು ಕೊಟ್ಟಿಲ್ಲ ಈ ವಿಷಯವನ್ನು ಎಲ್ಲರೂ ತುಂಬಾ ಗಮನಿಸಬೇಕು

ಈಗಿನ ಉತ್ಕಟಾವಸ್ಥೆಯಿಂದ ನೀವೆಲ್ಲರೂ ತುಂಬಾ ನೊಂದಿರುವಿರೆಂಬ ವಿಷಯವು ನನಗೆ ತಿಳಿದಿದೆ ಪ್ರಾಂತ್ಯದೊಳಗಿನ ಬಹುಜನ ಚುನಾಯಿತ ಪಂಗಡವು ಮಂತ್ರಿಪದವಿಗಳನ್ನು ತಿರಸ್ಕರಿಸಿದಾಗ ಉಂಟಾದ ಉತ್ಕಟಾವಸ್ಥೆಯ ಮೇಲೆ ರಚನಾತ್ಮಕ / ರಾಜಕೀಯ ತತ್ವವನ್ನೂ ಮತ್ತು ನ್ಯಾಯಶಾಸ್ತ್ರದ ಸಿದ್ಧಾಂತಗಳನ್ನೂ ಒಳಗೊಂಡ ಅಭಿಪ್ರಾಯವನ್ನಿತ್ತರೆ ನಿಮ್ಮೆಲ್ಲನೇಕರಲ್ಲಿ ಅಹಿತವನ್ನುಂಟುಮಾಡಬಹುದೆಂದು ನಾನು ಇಷ್ಟು ಸಮಯದ ವರೆಗೆ ಸುಮ್ಮನಿದ್ದೆನು ಅಲ್ಲದೆ ಪ್ರಾಂತ್ಯಗಳ ಗವರ್ನರರು ತಮ್ಮ ವೈಯಕ್ತಿಕ ವಿಮರ್ಶೆ, ತೀರ್ಮಾನಗಳನ್ನು ಮಾಡುವ ವಿಷಯದಲ್ಲಿ ವೈಸರಾಯನಾದವನಿಗೆ ಅವುಗಳನ್ನು ನಿಯಮಿತದಲ್ಲಿಡಲು ಅಧಿಕಾರವಿದ್ದಂತೆ, ವೈಸರಾಯನಾದವನಿಗೂ ಸೆಕ್ರೆಟರಿ ಒಫ್ ಸ್ಟೇಟ್ ಎಂಬ ಮೇಲಾಧಿಕಾರಿಯು ಇರುತ್ತಾನೆ ನವ ರಾಜಶಾಸನದ ಧ್ಯೇಯ ಉದ್ದೇಶ್ಯಗಳನ್ನು ವಿವರಿಸಿದ ಮೇಲೆ ಒಂದು ಪ್ರಾಂತ್ಯದ ಬಹು ಸಂಖ್ಯಾತ ಪಂಗಡವು ಮಂತ್ರಿಪದವಿಯನ್ನು ಸ್ವೀಕರಿಸದೆ ಉಂಟಾಗುವ ಉತ್ಕಟಾವಸ್ಥೆಯನ್ನು ಚರ್ಚಿಸುವ ಕೆಲಸವು ಆಯಾ ಪ್ರಾಂತ್ಯದ ಗವರ್ನರ್ ಮತ್ತು ಬಹು ಸಂಖ್ಯಾಕ ಪಕ್ಷದ ಮುಖಂಡರದೇ ಆಗಿರುತ್ತದೆ ಈಗ ಹೇಗಾದರೂ ಸಾಮಾನ್ಯ ಮನುಷ್ಯನಿಗೂ ಹಿತವಾಗುವಂತೆ ಮಾತನಾಡಬೇಕಾದ ಸಂದರ್ಭವು ಬಂದದ್ದರಿಂದ ನಾನು ಈ ಅಧಿಕಾರ ಸ್ವೀಕಾರದ ವಿಚಾರವಾಗಿ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಗವರ್ನರರ ಅಭಿಪ್ರಾಯಗಳ ಮೇಲೆಯೇ ಸ್ಪಷ್ಟವಾದ ಒಂದು ಅಭಿಪ್ರಾಯದನ್ನು ಕೊಡಲು ಬಯಸುತ್ತೇನೆ.

ಸಾರ್ವಜನಿಕ ಚರ್ಚೆಯ ಉಪಯುಕ್ತತೆ

ಈಗಿನ ಪರಿಸ್ಥಿತಿಯನ್ನು ರಚನಾತ್ಮಕ ರಾಜನೀತಿಯ ಕ್ರಮದಲ್ಲಿ ವಿವರಿಸುವ ಮೊದಲು ನಾನು, ಈ ಪರಿಸ್ಥಿತಿಯ ಮೇಲೆ ಉಂಟಾದ ಸಾರ್ವಜನಿಕ ಚರ್ಚೆಯು ಬಹಳ ಅಮೂಲ್ಯವಾಗಿ ಪರಿಣಮಿಸಿದೆ ಎಂದು ತಿಳಿಸಬಯಸುತ್ತೇನೆ ಗವರ್ನರರಿಗೂ ಮಂತ್ರಿಗಳಿಗೂ ಮತ್ತು ಸರಕಾರಕ್ಕೂ ಇರುವ ಸಂಬಂಧವನ್ನು ಮಂತ್ರಿಗಳ ಅನುದಿನದ ಕೆಲಸಗಳಲ್ಲಿ ಗವರ್ನರರ ಅಡ್ಡಿಯ ವಿಚಾರವನ್ನೂ ಸರಿಯಾಗಿ ತಿಳಕೊಳ್ಳಲು ಈ ಕಳೆದ ಮೂರು ತಿಂಗಳಿಂದಾಗುವ ಚರ್ಚೆಯಿಂದ ಸರಿಯಾದ ತಿಳಕೊಳ್ಳಲು ಅನುಕೂಲವಾಯಿತು ಪಾರ್ಲಿಮೆಂಟಿನಲ್ಲಿಯೂ ಪತ್ರಿಕೆಗಳಲ್ಲಿಯೂ ಮತ್ತು ಸಾರ್ವಜನಿಕ ಸಭೆಗಳಲ್ಲಿಯೂ ಉಂಟಾದ ತೀಕ್ಷ್ಣವಾದ ಚರ್ಚೆಯಿಂದಾಗಿ ಸರಕಾರವೂ, ಗವರ್ನರರೂ ಮತ್ತು ಮಂತ್ರಿಗಳಾದವರೂ ಒಂದು ತಿಳುವಳಿಕೆಗೆ ಬರುವಂತೆ ಸಹಾಯವಾಗಿದೆ ಅಲ್ಲದೆ ನವ ರಾಜಶಾಸನದಲ್ಲಿ ಗವರ್ನರರು ತಮ್ಮ ಮಂತ್ರಿಗಳೊಡನೆ ಯಾವ ರೀತಿಯಲ್ಲಿ ವ್ಯವಹರಿಸಬೇಕು, ಯಾವ ರೀತಿಯಲ್ಲಿ ಮಂತ್ರಿಗಳು ಆಡಳಿತೆ ನಡೆಸಬೇಕು, ಸರಕಾರವು ಮುಂದೆ ಹೇಗೆ ಸಾಗಬೇಕು ಎಂಬೀ ವಿಷಯಗಳಲ್ಲಿ ಅನೇಕರಿಗೆ ಇದ್ದ ಸಂದೇಹಗಳು ಈ ಮೂರು ತಿಂಗಳಿಂದಾಗುವ ಕಠಿಣ ಚರ್ಚೆಯಿಂದ ದೂರವಾಗಿರುತ್ತದೆ

ಬಹುಸಂಖ್ಯಾತರ ಮಂತ್ರಿಪದವಿ ತಿರಸ್ಕಾರ

ಮೂರು ತಿಂಗಳ ಹಿಂದೆ, ಆರು ಪ್ರಾಂತ್ಯಗಳ ಶಾಸನಸಭೆಗಳಲ್ಲಿ ಬಹುಸಂಖ್ಯಾತ ಪಂಗಡವಿದ್ದ (ಕಾಂಗ್ರೆಸ್) ಪಕ್ಷದವರು ಮಂತ್ರಿಪದವಿಯನ್ನು ತಿರಸ್ಕರಿಸಿದರು ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲವೆಂದು ಭರವಸೆ ಕೊಡದೆ ತಾವು ಅಧಿಕಾರ ಸ್ವೀಕರಿಸುವುದು ವಿಚಾರಪರವಲ್ಲವೆಂದು ಆ ಪಕ್ಷವು ಭಾವಿಸಿತು ಆದರೆ, ಈ ಮೂರು ತಿಂಗಳ ಅಲ್ಪ ಅವಧಿಯ ಅನುಭವವನ್ನೂ, ಸ್ಥಾಪಿತವಾದ ತಾತ್ಕಾಲಿಕ ಮಂತ್ರಿಗಳ ದಿನನಿತ್ಯದ ಕೆಲಸಗಳು ಸುಗಮವಾಗಿ ನಡೆಯುವುದನ್ನೂ ನೋಡುವಾಗ, ಗವರ್ನರರು ಮಂತ್ರಿಗಳ ಅನುನಿತ್ಯದ ಕೆಲಸಗಳಲ್ಲಿ ಅಡ್ಡಿಬರಲು ಸಮಯ ಕಾಯುತ್ತಲಿರುವರೆಂದೂ, ಚಿಕ್ಕ ವಿಷಯವನ್ನೆತ್ತಿ ಗವರ್ನರರು ತಮ್ಮ ವಿಶೇಷಾಧಿಕಾರವನ್ನುಪಯೋಗಿಸಿಕೊಳ್ಳುವರೆಂದೂ ತಿಳಕೊಂಡವರ ಭಾವನೆಗಳು ಅನಾಧಾರವಾದುವುಗಳೆಂದೂ ಸ್ಪಷ್ಟವಾಗುತ್ತದೆ ಈ ಭಾವನೆಗಳು ಸ್ವಾಭಾವಿಕವಾದುವುಗಳಾಗಿರುವುದರಿಂದ ಅವುಗಳಲ್ಲಿ ನಾನು ಸಹಾನುಭೂತಿಪಡುತ್ತೇನೆ ಆದರೆ ಹಾಗೆ ಭಾವಿಸುವುದರಲ್ಲಿ ಯಾವ ನ್ಯಾಯವೂ ಇಲ್ಲ

ಗವರ್ನರರು ಮಂತ್ರಿಗಳ ಸೂಚನೆಯ ಮೇಲೆ ಹೊಂದಿಕೊಂಡಿರಬೇಕು.

ನವರಾದ ಶಾಸನವನ್ನು ಘಟಿಸಿದವರಲ್ಲಿ ನಾನೂ ಒಬ್ಬನಾಗಿರುವೆನಾದ ಕಾರಣ, ಪಾರ್ಲಿಮೆಂಟಿನ ಉದ್ದೇಶ್ಯಗಳನ್ನು ನಾನು ಚೆನ್ನಾಗಿ ಬಲ್ಲೆನು. ಜನಚುನಾಯಿತ ಮಂತ್ರಿಗಳಲ್ಲಿ ನಿಜವಾದ ಅಧಿಕಾರವನ್ನು ಕೊಟ್ಟು ಅವರು ತಮ್ಮ ಅಂಕೆಯಲ್ಲಿರುವ ಗವರ್ನರರ ಮತ್ತು ಹುದ್ದೆಗಳ ಸಹಾಯದಿಂದ ಪ್ರಾಂತ್ಯದ ಹಿತಸಾಧನೆಯನ್ನು ಮಾಡುವವರಾಗಬೇಕೆಂದೇ ಪಾರ್ಲಿಮೆಂಟು ಈ ನವರಾಜಶಾಸನವನ್ನು ಜ್ಯಾರಿ ಮಾಡುವಾಗ ಉದ್ದೇಶಪಟ್ಟುಕೊಂಡಿರುತ್ತದೆ. ಆದುದರಿಂದ ಪ್ರಾಂತೀಕ ಜವಾಬ್ದಾರಿ ಆಡಳಿತದಲ್ಲಿ, ಮೈನಾರಿಟಿ, ಸರಕಾರದ ಇಲಾಖೆಗಳನ್ನೊಳಗೊಂಡ ಎಲ್ಲ ವಿಷಯಗಳಲ್ಲಿಯೂ ಗವರ್ನರರು ಮಂತ್ರಿಗಳ ಸೂಚನೆಗಳಿಂದಲೇ ಕಾರ್ಯವನ್ನು ನಡೆಸಬೇಕೆಂದು ಪಾರ್ಲಿಮೆಂಟಿನ ಉದ್ದೇಶ್ಯವಿದೆ ಈ ಮಂತ್ರಿಗಳು ಪಾರ್ಲಿಮೆಂಟಿಗೆ ಜವಾಬ್ದಾರರಿರದೆ ಶಾಸನಸಭೆಗೆ ಜವಾಬ್ದಾರರಿರುತ್ತಾರೆ.

ಗವರ್ನರರ ವಿಶೇಷಾಧಿಕಾರಗಳ ಮೇರೆ

ಈಗ ಬಹು ಚರ್ಚೆಗೆ ಒಳಪಟ್ಟಿರುವ ವಿಷಯವು ಗವರ್ನರರ ವಿಶೇಷಾಧಿಕಾರದ್ದಿರುತ್ತದೆ ಕೆಲವು ‘ವಿಶಿಷ್ಟ ಹಿತಗಳಿ’ಗಾಗಿ ಪಾರ್ಲಿಮೆಂಟಿನವರು ಈ ವಿಶೇಷಾಧಿಕಾರಗಳನ್ನು ಗವರ್ನರರಿಗೆ ಕೊಟ್ಟಿರುತ್ತಾರೆ ಈ ‘ವಿಶಿಷ್ಟ ಹಿತಗಳು’ ಅಲ್ಪ ಸಂಖ್ಯಾಕರಿಗೂ ಸರಕಾರ ಇಲಾಖಾ ಹುದ್ದೇದಾರರ ಸ್ಥಾನಮಾನಗಳಿಗೂ ಸಮ್ಮಂಧಪಟ್ಟಂತಹದ್ದಿರುತ್ತದೆ ಇವುಗಳ ರಕ್ಷಣೆಯು ಅಗತ್ಯವೆಂದು ಪಾರ್ಲಿಮೆಂಟಿನವರು ಮನಗಂಡಿದ್ದು, ಈ ‘ವಿಶಿಷ್ಟ ಹಿತಗಳಿಗೆ’ ತೊಂದರೆಗಳುಂಟಾಗಿ ಪ್ರಾಂತ್ಯದ ಶಾಂತಿ ವ್ಯವಸ್ಥೆಗಳು ಕ್ರಮತಪ್ಪುವಂತಾದರೆ ಮಾತ್ರ ಗವರ್ನರರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸಲು ಅಧಿಕೃತರಾಗಿದ್ದಾರೆ

ಗವರ್ನರರು ತಮ್ಮ ಇಚ್ಛೆಗನುಸಾರವಾಗಿ ಮಂತ್ರಿಗಳಾದವರ ದಿನನಿತ್ಯದ ಕೆಲಸಗಳಲ್ಲಿ ಅಡ್ಡಿಬರಲು ಹಕ್ಕುಳ್ಳವರಾಗಿದ್ದಾರೆಂದು ಕೆಲವರು ಅಭಿಪ್ರಾಯಪಟ್ಟರೆ ಅದು ತಪ್ಪು ಗವರ್ನರರ ಇಚ್ಛಾನುಸಾರ ಮಂತ್ರಿಗಳ ದಿನನಿತ್ಯದ ಕೆಲಸಗಳಲ್ಲಿ ಅಡ್ಡಿಬರಲು ಹಕ್ಕುಳ್ಳವರಾಗಿಲ್ಲ ಗವರ್ನರರಿಗೆ ಕೊಟ್ಟಿರುವ ವಿಶೇಷಾಧಿಕಾರಗಳು ಬಹಳೇ ಚಿಕ್ಕ ಅಂತರದೊಳಗಿರುತ್ತವೆ. ಇತರ ಎಲ್ಲಾ ವಿಷಯಗಳಲ್ಲಿ ಗವರ್ನರರು ಮಂತ್ರಿಗಳ ಸೂಚನೆಗಳಲ್ಲಿ ಅರ್ಧ ತೃಪ್ತಿಪಟ್ಟುಕೊಂಡರೂ ಕೂಡಾ, ಅವರ (ಮಂತ್ರಿಗಳ) ಸೂಚನೆಗಳನ್ನು ತೆಗೆದುಕೊಳ್ಳಲೇ ಬೇಕು ಗವರ್ನರರು ತಮ್ಮ ವೈಯಕ್ತಿಕ ತೀರ್ಪನ್ನು ಯೋಚಿಸಬೇಕಾದ ಸಂದರ್ಭಗಳಲ್ಲಿಯೂ ಕೂಡಾ ಅವರು ಮಂತ್ರಿಗಳ ಸೂಚನೆಯನ್ನು ಕಡೆಯ ವರೆಗೂ ತೆಗೆದುಕೊಳ್ಳಬೇಕಾಗಿದೆ ಮಂತ್ರಿಗಳು ಗವರ್ನರರ ವಿಶೇಷಾಧಿಕಾರಗಳ ಮೇರೆಯೊಳಗೆ ಕೂಡಾ ಗವರ್ನರರಿಗೆ ಸಲಹೆ ಸೂಚನೆಗಳನ್ನು ಕೊಡುವವರಾಗಬೇಕು

ಬಹಿರಂಗ ಪ್ರಕಟಣೆ

ಗವರ್ನರರಿಗೆ ಕೊಡಲ್ಪಟ್ಟ ಈ ತೀರ ಕಡಿಮೆ ಅಂತರದ ವಿಶೇಷಾಧಿಕಾರದೊಳಗೆ ಅವರು ತಮ್ಮ ಕಾರ್ಯನಿರ್ವಹಣೆಯಲ್ಲಿ ಪಾರ್ಲಿಮೆಂಟಿಗೆ ಜವಾಬ್ದಾರರಿದ್ದಾರೆ. ಅಂದರೆ ಪಾರ್ಲಿಮೆಂಟು ಅವರು ಕೈಕೊಳ್ಳುವ ಕೆಲಸಗಳ ಮೇಲೆ ಮೇಲ್ತನಿಖೆಯನ್ನು ನಡೆಸುತ್ತಿರುತ್ತದೆ. ಗವರ್ನರರು ಮಂತ್ರಿಗಳ ಸೂಚನೆಗಳನ್ನು ತೆಗೆದುಕೊಳ್ಳಲು ಅಶಕ್ತರಾದರೆ, ಆಗ ಎಲ್ಲಾ ಜವಾಬ್ದಾರಿಯು ಅವರದೇ (ಗವರ್ನರರದ್ದೇ) ಆಗಿರುತ್ತದೆ. ಈ ಸಂದರ್ಭದಲ್ಲಿ ಮಂತ್ರಿಗಳಾದವರು ಗವರ್ನರರು ಕೈಕೊಳ್ಳಲಿರುವ ಕಾರ್ಯಕ್ರಮದಲ್ಲಿ ತಮ್ಮ ಸಹಕಾರವಿಲ್ಲವೆಂದೂ, ಅದಕ್ಕೆ ತಮ್ಮ ಒಪ್ಪಿಗೆಯಿಲ್ಲವೆಂದೂ, ತಾವು ಸರಿಯಾದ ಸೂಚನೆಯನ್ನು ಕೊಟ್ಟಿರುವೆವೆಂದೂ ಬಹಿರಂಗವಾಗಿ ಸಾರ್ವಜನಿಕರಲ್ಲಿ ಸಾರಲು ಸ್ವಾತಂತ್ರ್ಯವುಳ್ಳವರಿದ್ದಾರೆ. ಇದೇ ಸಂದರ್ಭದಲ್ಲಿ ಗವರ್ನರರು ಕೂಡಾ ತಮ್ಮ ಮಂತ್ರಿಗಳ ಸಹಕಾರವನ್ನು ಸದಾ ಸಂಪಾದಿಸಲು ಪ್ರಯತ್ನಪಡಬೇಕೆಂದೂ ಅವರ ಸೂಚನೆಗಳನ್ನು ಚೆನ್ನಾಗಿ ಪರ್ಯಾಲೋಚಿಸಬೇಕೆಂದೂ ಪಾರ್ಲಿಮೆಂಟು ಬಯಸುತ್ತದೆ. ಗವರ್ನರರು ತಮ್ಮ ವಿಶೇಷಾಧಿಕಾರಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ಆಜ್ಞೆಯನ್ನು ಹೊರಡಿಸುವಾಗಾಗಲಿ, ಅಥವಾ ಪ್ರತ್ಯೇಕ ಒಂದು ಕಾರ್ಯಕ್ರಮವನ್ನು ಅನುಸರಿಸುವಾಗಾಗಲೀ, ಆ ಕೆಲಸವನ್ನು ಕೈಕೊಳ್ಳುವುದರಲ್ಲಿ ತಮ್ಮ ಅಭಿಪ್ರಾಯವನ್ನು ಸರಿಯಾಗಿ ಮಂತ್ರಿಗಳಿಗೆ ತಿಳಿಯಪಡಿಸಬೇಕು ಮತ್ತು ಮಂತ್ರಿಗಳು ಆ ಸಮಯದಲ್ಲಿ ಕೊಡುವ ಸೂಚನೆಗಳು ಗವರ್ನರರಿಗೆ ಸರಿಯೆಂದು ಕಂಡುಬಂದಲ್ಲಿ, ಅವರು ತನ್ನ ತೀರ್ಪನ್ನು ಆದಷ್ಟುಮಟ್ಟಿಗೆ ಬದಲಾಯಿಸಿಕೊಳ್ಳಬಹುದು. ಆದರೆ, ಗವರ್ನರರು ಮಂತ್ರಿಗಳ ಸೂಚನೆಯನ್ನು ಕೇಳುವಾಗ ನಿಜವಾದ ಮನಸ್ಸಿನಿಂದ ಕೇಳಬೇಕು ಇನ್ನೊಂದು ವಿಷಯವೇನೆಂದರೆ ಗವರ್ನರರು ತಾವು ಅನುಸರಿಸಲಿರುವ ಕಾರ್ಯಕ್ರಮವು ನೂರಕ್ಕೆ ನೂರು ನ್ಯಾಯಸಮ್ಮತವಾದುದೆಂದು ತಮ್ಮ ಮಂತ್ರಿಗಳಿಗೆ ತಿಳಿಯಪಡಿಸಲು ತಮ್ಮ ಶಕ್ತಿಯಿದ್ದಷ್ಟು ಪ್ರಯತ್ನಪಡಬೇಕು ಇದರ ಮೇಲೆ ಅವರು ತಮ್ಮ ಮಂತ್ರಿಗಳನ್ನು ತಮ್ಮ ಅಭಿಪ್ರಾಯದ ಕಡೆಗೆ ತಿರುಗಿಸುವುದು ಅಸಾಧ್ಯವೆಂದು ಕಂಡಲ್ಲಿ ಆ ಮೇಲೆ ಅವರು ತಮ್ಮ ಆಜ್ಞೆಯನ್ನು ಹೊರಡಿಸಬಹುದು, ಇಲ್ಲಿಯೂ ಅವರು ತಮ್ಮ ಮಂತ್ರಿಗಳ ಸಹಕಾರವನ್ನು ಪಡೆಯಲಿಕ್ಕಾಗದಕ್ಕಾಗಿ ವ್ಯಥೆಯನ್ನು ಸೂಚಿಸಬೇಕಾಗಿದೆ

ರಾಜಿನಾಮೆ ಅಥವಾ ಡಿಸ್‌ಮಿಸ್ಸಿನ ಪ್ರಶ್ನೆ

ಗವರ್ನರರ ವಿಶೇಷಾಧಿಕಾರಗಳ ಒಂದು ನಿರ್ದಿಷ್ಟ ಮೇರೆಯೊಳಗಿರುವಂತವುಗಳಾಗಿದ್ದು ಅವನ್ನು ಉಪಯೋಗಿಸಬೇಕಾದ ಸಂದರ್ಭಗಳು ಪ್ರಾಮುಖ್ಯತೆಯಲ್ಲಿ ಬಹಳ ಹೆಚ್ಚಳವಿಲ್ಲಯಾಗುತ್ತದೆ ಸಮಸ್ಯೆಗಳು ಚಿಕ್ಕದಾಗಿದ್ದರೂ ದೊಡ್ಡದಾಗಿದ್ದರೂ ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಬೇಕೆನ್ನುವಿರಾ? ಒಂದು ವಿಶೇಷ ಸಂದರ್ಭದಲ್ಲಿ ಗವರ್ನರರೊಬ್ಬರು ಮಂತ್ರಿಗಳ ಸೂಚನೆಯನ್ನು ತೆಗೆದುಕೊಳ್ಳಲು ಅಶಕ್ತರಾಗಿ, ತಮ್ಮ ಅಭಿಪ್ರಾಯವನ್ನು ಮಂತ್ರಿಗಳಿಗೆ ಸರ್ವ ವಿಧಗಳಿಂದ ತಿಳಿಸಲು ಪ್ರಯತ್ನಪಟ್ಟು ಸಾಧ್ಯವಾಗದೆ ಹೋದಲ್ಲಿ ಆ ಗವರ್ನರರು ಮಂತ್ರಿಮಂಡಳವನ್ನು ಡಿಸ್‌ಮಿಸ್ ಮಾಡಬೇಕೆ ಅಥವಾ ಮಂತ್ರಿಗಳಾದವರು ಅಂತರಂಗ ಬಹಿರಂಗಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ನಾವೆ ಕೊಡಬೇಕೆ? ಈ ವಿಷಯಗಳು ಈಗ ತುಂಬಾ ಚರ್ಚಿಸಲ್ಪಡುತ್ತವೆ ಇವು ಕಾರ್ಯಾನುಭವದ ಪ್ರಶ್ನೆಗಳಾಗಿವೆ

ತೀಕ್ಷ್ಣ ಭೇದಾಭಿಪ್ರಾಯ.

ಮಂತ್ರಿಗಳು ಕೆಲಸಕ್ಕೆ ರಾಜಿನಾಮೆ ಮಾಡುವುದಾಗಲೀ ಅಥವಾ ಗವರ್ನರರು ಅವರನ್ನು ಡಿಸ್‌ಮಿಸ್ ಮಾಡುವ ಈ ವಿಚಾರವನ್ನಾಗಲೀ ಚರ್ಚಿಸುವ ಬಗೆ ಒಂದು ತರದ ಸಮ ಭಾರವನ್ನಿಟ್ಟುಕೊಳ್ಳುವುದು ಒಳಿತಿದೆ ಈ ಸಂದರ್ಭದಲ್ಲಿ ಗವರ್ನರ್ ಮತ್ತು ಅವರ ಮಂತ್ರಿಗಳೊಳಗೆ ಬರಬಹುದಾದ ತೀಕ್ಷ್ಣ ಭೇದಾಭಿಪ್ರಾಯದಿಂದ ಮಾತ್ರವೇ ಅವರು ಬೇರ್ಪಡಬೇಕಾದ ಸಂದರ್ಭವುಂಟಾಗಬಹುದೆಂದು ಮಹಾತ್ಮಾ ಗಾಂಧಿಯವರು ಹೇಳಿದ ಸೂಚನೆಯನ್ನು ನಾನು ಒಪ್ಪುತ್ತೇನೆ. ಅಂದರೆ, ಗವರ್ನರರು ಮತ್ತು ಅವರ ಮಂತ್ರಿಗಳು ಬೇರೆಯಾಗಬೇಕಾದರೆ ಅಂತಹ ‘ತೀಕ್ಷ್ಣವಾದ’ ಭೇದಾಭಿಪ್ರಾಯವು ಬರಬೇಕು. ಹೀಗೆ ಭೇದಾ

(೧೧ನೇ ಪುಟಕ್ಕೆ ಮುಂದರಿಸಿಯದೆ.)

ಕರ್ನಾಟಕದ ಸಾಹಸ! **ಕರ್ನಾಟಕದ ಕೀರ್ತಿ!!**

ಸೇವೆ ಮತ್ತು ಗೆಲುವು

ಸೇವೆಯೇ

ಮೈಸೂರು ಇನ್ಶ್ಯೂರೆನ್ಸ್ ಕಂಪನಿಯ

ಪರಮ ಧ್ಯೇಯ

ಸೇವೆಯೇ ಅದರ ಗೆಲುವಿನ ಗುಟ್ಟು

ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು, ಆಡಳಿತ ಮಂಡಳಿಗಿರುವ ಉತ್ಸಾಹವೇ

"ಮೈಸೂರು" ಅಭ್ಯುದಯದ ಜೀವಾಳ.

ಕಂಪನಿಯು ಸೇವೆಗಾಗಿಯೇ ನಿರಂತರವೂ ನೂತನ ಮಾರ್ಗಗಳನ್ನು ಹುಡುಕುವುದರಲ್ಲಿಯೂ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಳ್ಳುವುದರಲ್ಲಿಯೂ ನಿರತವಾಗಿದೆ. ಕಂಪೆನಿಯು ನಾಡಿಗರೆಲ್ಲರ ಸಹಾನುಭೂತಿಯನ್ನು ಕೋರಿ, ಅವರಿಂದ ಸೇವೆಗಾಗಿ ಹೆಚ್ಚಿನ ಕರೆ ಬರಲೆಂದು ಅಗ್ರಹಪೂರ್ವಕವಾಗಿ ಬೇಡುವುದು.

ಅದು ಬಾಳಿರುವುದು ಸೇವೆಯಿಂದ;
ಬಾಳುವುದು ಸೇವೆಗಾಗಿಯೇ.

ಇಂದಿನ ಕೆಲವು ಅಂಶಗಳು–ಅಂಕಿಗಳು.

ಅಧಿಕೃತ ಷೇರು ಬಂಡವಾಳ ರೂ ೩,೦೦,೦೦೦	ಇಂಡಿಯಾ ಸರಕಾರದ ರೇವಣಾತಿಯ ಬೆಲೆ ರೂ ೨೫,೦೦೦
ಹೊರಹಾಕಿದ ಬಂಡವಾಳ ರೂ. ೨,೦೦,೦೦೦	ಜೀವ ವಿಮಾ ನಿಧಿ ರೂ ೧೬,೨೨೧-೪-೪
ಚಂದಾ ಆದ ಬಂಡವಾಳ ರೂ ೧,೪೯,೬೦೦	ಸಾಧಿಸಿದ ಉದ್ಯಮ ರೂ ೧೦,೬೭,೮೫೩
ತೆತ್ತ ಬಂಡವಾಳ ರೂ. ೬೫,೦೦೦	ಪೂರ್ಣವಾದ ಉದ್ಯಮ ರೂ. ೭,೬೫,೩೮೫
ಷೇರುದಾರರ ಮೇಲಣ ನಿಧಿ ರೂ. ೮೪,೯೦೦	ಪ್ರಿಮಿಯಂ ಆದಾಯ ರೂ. ೫೫,೨೦೦

ಆಸ್ತಿ ರೂ. ೧ ಲಕ್ಷಕ್ಕೆ ಮೀರಿದೆ.

ಮೂರನೇ ವರ್ಷದ ಡೈರೆಕ್ಟರುಗಳ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.

೧ ಕಳೆದ ವರ್ಷಕ್ಕಿಂತ ಜೀವವಿಮಾ ನಿಧಿಯು ಶೇಕಡ ೨೨೦ರಷ್ಟು ಏರಿದೆ ೨ ಹೊಸ ಉದ್ಯಮವು ಶೇಕಡ ೬೫ರಷ್ಟೂ, ಪೂರ್ಣವಾದ ಉದ್ಯಮವು ಶೇಕಡ ೫೩ರಷ್ಟೂ ಏರಿದೆ ೩ ಷೇರುಗಳು ಸಂಬೆಲೆಗೆ ಮಾರಾಟವಾಗುತ್ತಿವೆ ೪. ಹೆಚ್ಚಿಸಿರುವ ಷೇರು ಬಂಡವಾಳಕ್ಕೆ ಚಂದಾ ಕೊಡಲು ಸಾರ್ವಜನಿಕರು ನಾನು ತಾನೆಂದು ಮುಂದೆ ಬಂದಿರುವರು ೫ ಉದ್ಯಮವು ಅಧಿಕವಾಗುತ್ತಿರುವ ಸಮಯದಲ್ಲಿಯೇ ಖರ್ಚಿನ ಪ್ರಮಾಣವು ತಗ್ಗುತ್ತಲಿದೆ ೬ ರದ್ದಾದ ಉದ್ಯಮದ ಪ್ರಮಾಣವು ತೀರ ಕಡಿಮೆಯಿದ್ದು, ಸಾಧಿಸಿರುವ ಉದ್ಯಮದ ಶ್ರೇಷ್ಠ ತರಗತಿಯನ್ನು ಸೂಚಿಸುತ್ತಲಿದೆ ಹಾಗೂ ಅದರ ಶ್ರೇಷ್ಠತೆಯನ್ನು ಕಂಪೆನಿಯು ಇದುವರೆಗೆ ಭರಿಸಬೇಕಾಗಿ ಬಂದ ಕ್ಲೈಮುಗಳು ಸ್ಥಿರೀಕರಿಸುತ್ತವೆ

ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

"ಮೈಸೂರು' ಆದರ್ಶ ಸಂಸ್ಥಾನದ ಆದರ್ಶ ಜೀವವಿಮಾ ಸಂಸ್ಥೆಯೆನಿಸಿ, ಮೈಸೂರು ದೇಶದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಮೈಸೂರು ಸಂಸ್ಥಾನದಲ್ಲಿ ಮಾತ್ರ ಕಾರ್ಯ ನಡೆಯಿಸುತ್ತಿದ್ದಾಗ್ಯೂ ಪ್ರಥಮ ವರ್ಷದಲ್ಲಿಯೇ ಇಡೀ ಕರ್ನಾಟಕಕ್ಕೇ ಅಭೂತಪೂರ್ವವಾದ ಉದ್ಯಮವನ್ನು ಸಾಧಿಸಿದೆ. ಈ ಕೀರ್ತಿ ಪತಾಕೆಯನ್ನು ಹಿಡಿದು—ಈ ಅನುಭವ ಬೆಂಬಲದಿಂದ—ಕರ್ನಾಟಕದ ಇತರ ಭಾಗಗಳಲ್ಲೂ, ಬ್ರಿಟಿಷ್ ಇಂಡಿಯ, ಬರ್ಮಾ ಮತ್ತು ಸಿಲೋನುಗಳಲ್ಲೂ ವಿಜಯಿಯೆನಿಸಲು ಮುಂದಡಿಯಿಟ್ಟಿದೆ.

ಬೇಕು! ಕರ್ನಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯ ಬರ್ಮಾ ಸಿಲೋನುಗಳ ಎಲ್ಲ ಪ್ರಾಂತ್ಯಗಳಲ್ಲೂ ಏಜಂಟರುಗಳೂ, ಸ್ಪೆಷಲ್ ಏಜಂಟರುಗಳೂ, ಆರ್ಗನೈಜರುಗಳೂ ಬೇಕು ಸಂಬಳದ ಮೇಲ್ತ ಕಮಿಷನ್ ಅಥವಾ ಇವೆರಡರ ಮೇಲೂ ಕೆಲಸಮಾಡಲವಕಾಶವುಂಟು ಪ್ರತಿನಿಧಿಗಳಾಗಲಿಚ್ಛಿಸುವವರು ಕಂಪೆನಿ ಅವರು ಕೊಡುವ ಉದ್ಯಮದ ಭರವಸೆಯನ್ನೂ ಮತ್ತು ಅವರ ಕಾರ್ಯಕ್ಷೇತ್ರಗಳನ್ನೂ ತಿಳಿಸುವುದು

ಹೆಚ್ಚು ವಿವರಗಳಿಗೆ:—

ಜನರಲ್ ಮ್ಯಾನೇಜರ್,

ಮೈಸೂರು ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

"ನಾಗೇಶ್ವರ ಬಿಲ್ಡಿಂಗ್ಸ್" ಶ್ರೀ ನರಸಿಂಹರಾಜಾ ರೋಡ್ ಬೆಂಗಳೂರು ಸಿಟಿ.

ರಾಜಕೀಯ ಪರಿಸ್ಥಿತಿಯ ಕುರಿತು ಶ್ರೀ ವ್ಯಾಸರಾಯರ ಹೇಳಿಕೆ.

ಗವರ್ನರರೂ ಮತ್ತು ಮಂತ್ರಿಗಳೂ.

ಉತ್ಕಟಾವಸ್ಥೆಯ ದಾರಿ.

ಕಾರಣಗಳನ್ನು ಪ್ರಕಟಿಸಲು ಮಂತ್ರಿಗಳಿಗೆ ಸ್ವಾತಂತ್ರ್ಯ ಡಿಸ್‌ಮಿಸ್ ಮತ್ತು ರಾಜಿನಾಮೆಯ ಪ್ರಶ್ನೆ.

ಮಾಹಿತಿಕವಾಗಿ ಪ್ರಕಟವಾಗಿದ್ದಂತೆ, ವ್ಯಾಸರಾಯರು ದೇಶದ ರಾಜಕೀಯ ಉತ್ಕಟಾವಸ್ಥೆಯ ಮೇಲೆ ಉದ್ಭವವಾದ ಹೇಳಿಕೆಯೊಂದನ್ನು ಪ್ರಕಟಣೆಗೆ ಕೊಟ್ಟಿರುವರು ಇದಕ್ಕೆ ಮುಂಚಿತವಾಗಿ ಅಂದರೆ ತಾ. ೨೧ರಲ್ಲಿ ವ್ಯಾಸರಾಯರು ರೇಡಿಯೋ ಮೂಲಕ ಒಂದು ಸಂದೇಶವನ್ನು ಕೊಡುತ್ತಾ, ತಾವು ಕೊಡಲಿರುವ ಈ ಹೇಳಿಕೆಯನ್ನು ಸಾರ್ವಜನಿಕರು ಸಹಾನುಭೂತಿಯಿಂದ ಪರ್ಯಾಲೋಚಿಸಬೇಕಾಗಿ ವಿನಂತಿಸಿಕೊಂಡರು. ಅನಂತರ ಮಂಗಳವಾರ ತಾ ೨೨ರಲ್ಲಿ ಪ್ರಕಟಣೆಗೆ ಕೊಟ್ಟ ಅವರ ಹೇಳಿಕೆಯ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ

"ನಾನು ವೈಸ್ರಾಯ್ ಪದವಿಯನ್ನು ಸ್ವೀಕರಿಸಿದಂದು ಕೊಟ್ಟ ಭಾಷಣದಲ್ಲಿ, ಮುಂದೆ ಬರಲಿರುವ ನವ ರಾಜಶಾಸನವು ತೊಂದರೆಗಳಿಲ್ಲದೆ ಪ್ರಾರಂಭವಾಗುವುದಿಲ್ಲವೆಂದು ಹೇಳಿದ ವಿಷಯವು ನಿಮ್ಮ ಸ್ಮೃತಿಪಟದಿಂದ ಮರೆತು ಹೋಗಿರಲಿಕ್ಕಿಲ್ಲ ಅಂತೆಯೇ ತೊಂದರೆಗಳು ಬಂದೇ ಬಂದುವು ಈ ತೊಂದರೆಗಳನ್ನು ಪರಿಹರಿಸಲಾಗುವಂತೆ ನಾನೀ ಹೇಳಿಕೆಯನ್ನು ಕೊಡಲಿದ್ದೇನೆ ನನ್ನ ಅಧಿಕಾರಕ್ಕೆ ತಕ್ಕುದಾದ ಭಾಷಾ ಶೈಲಿಯಲ್ಲಿ ಈ ಹೇಳಿಕೆಯನ್ನು ಕೊಟ್ಟಿರುವೆನಾದರೂ, ಈ ತೊಂದರೆಗಳಲ್ಲಿ ನನ್ನ ಸಹಾನುಭೂತಿಗಳಿಲ್ಲವೆಂದು ಯಾರೂ ತಪ್ಪು ತಿಳಿಯಬಾರದು ಪ್ರಾಮುಖ್ಯ ವಿಷಯಗಳನ್ನು ಪ್ರಾಮುಖ್ಯತೆಯಿಲ್ಲದಂತವುಗಳ ಹಾಗಾಗಲೀ ಅಥವಾ ಅವು ಚಿಕ್ಕ ವಿಷಯಗಳಾಗಿವೆ ಎಂದಾಗಲೀ ನಾನು ತಿಳಕೊಂಡು ಈ ಹೇಳಿಕೆಯನ್ನು ಕೊಟ್ಟಿಲ್ಲ ಈ ವಿಷಯವನ್ನು ಎಲ್ಲರೂ ತುಂಬಾ ಗಮನಿಸಬೇಕು

ಈಗಿನ ಉತ್ಕಟಾವಸ್ಥೆಯಿಂದ ನೀವೆಲ್ಲರೂ ತುಂಬಾ ನೊಂದಿರುವಿರೆಂಬ ವಿಷಯವು ನನಗೆ ತಿಳಿದಿದೆ ಪ್ರಾಂತ್ಯದೊಳಗಿನ ಬಹುಜನ ಚುನಾಯಿತ ಪಂಗಡವು ಮಂತ್ರಿಪದವಿಗಳನ್ನು ತಿರಸ್ಕರಿಸಿದಾಗ ಉಂಟಾದ ಉತ್ಕಟಾವಸ್ಥೆಯ ಮೇಲೆ ರಚನಾತ್ಮಕ ರಾಜಕೀಯ ತತ್ವವನ್ನೂ ಮತ್ತು ನ್ಯಾಯಶಾಸ್ತ್ರದ ಸಿದ್ಧಾಂತಗಳನ್ನೂ ಒಳಗೊಂಡ ಅಭಿಪ್ರಾಯವನ್ನಿತ್ತರೆ, ನಿಮ್ಮಲ್ಲನೇಕರಲ್ಲಿ ಅಹಿತವನ್ನುಂಟುಮಾಡಬಹುದೆಂದು ನಾನು ಇಷ್ಟು ಸಮಯದ ವರೆಗೆ ಸುಮ್ಮನಿದ್ದೆನು ಅಲ್ಲದೆ ಪ್ರಾಂತ್ಯಗಳ ಗವರ್ನರರು ತಮ್ಮ ವೈಯಕ್ತಿಕ ವಿಮರ್ಶೆ, ತೀರ್ಮಾನಗಳನ್ನು ಮಾಡುವ ವಿಷಯದಲ್ಲಿ ವ್ಯಾಸರಾಯನಾದವನಿಗೆ ಅವುಗಳನ್ನು ಸ್ವಾಮಿತದಲ್ಲಿಡಲು ಅಧಿಕಾರವಿದ್ದಂತೆ, ವ್ಯಾಸರಾಯನಾದವನಿಗೂ ಸೆಕ್ರೆಟರಿ ಒಫ್ ಸ್ಟೇಟ್ ಎಂಬ ಮೇಲಾಧಿಕಾರಿಯು ಇರುತ್ತಾನೆ ನವ ರಾಜಶಾಸನದ ಧ್ಯೇಯ ಉದ್ದಿಶ್ಯಗಳನ್ನು ವಿವರಿಸಿದ ಮೇಲೆ ಒಂದು ಪ್ರಾಂತ್ಯದ ಬಹು ಸಂಖ್ಯಾತ ಪಂಗಡವು ಮಂತ್ರಿಪದವಿಯನ್ನು ಸ್ವೀಕರಿಸದೆ ಉಂಟಾಗುವ ಉತ್ಕಟಾವಸ್ಥೆಯನ್ನು ಚರ್ಚಿಸುವ ಕೆಲಸವು ಆಯಾ ಪ್ರಾಂತ್ಯದ ಗವರ್ನರ್ ಮತ್ತು ಬಹು ಸಂಖ್ಯಾತ ಪಕ್ಷದ ಮುಖಂಡರದೇ ಆಗಿರುತ್ತದೆ ಈಗ ಹೇಗಾದರೂ ಸಾಮಾನ್ಯ ಮನುಷ್ಯನಿಗೂ ಹಿತವಾಗುವಂತೆ ನೂತನವಾದ ಬೇಕಾದ ಸಂದರ್ಭವು ಬಂದದ್ದರಿಂದ ನಾನು ಈ ಅಧಿಕಾರ ಸ್ವೀಕಾರದ ವಿಚಾರವಾಗಿ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಗವರ್ನರರ ಅಭಿಪ್ರಾಯಗಳ ಮೇಲೆಯೇ ಸ್ಪಷ್ಟವಾದ ಒಂದು ಅಭಿಪ್ರಾಯದನ್ನು ಕೊಡಲು ಬಯಸುತ್ತೇನೆ

ಸಾರ್ವಜನಿಕ ಚರ್ಚೆಯ ಉಪಯುಕ್ತತೆ

ಈಗಿನ ಪರಿಸ್ಥಿತಿಯನ್ನು ರಚನಾತ್ಮಕ ರಾಜನೀತಿಯ ಕ್ರಮದಲ್ಲಿ ವಿವರಿಸುವ ಮೊದಲು ನಾನು, ಈ ಪರಿಸ್ಥಿತಿಯ ಮೇಲೆ ಉಂಟಾದ ಸಾರ್ವಜನಿಕ ಚರ್ಚೆಯು ಬಹಳ ಅಮೂಲ್ಯವಾಗಿ ಪರಿಣಮಿಸಿದೆ ಎಂದು ತಿಳಿಸಬಯಸುತ್ತೇನೆ. ಗವರ್ನರರಿಗೂ ಮಂತ್ರಿಗಳಿಗೂ ಮತ್ತು ಸರಕಾರಕ್ಕೂ ಇರುವ ಸಂಬಂಧವನ್ನು ಮಂತ್ರಿಗಳ ಅನುದಿನದ ಕೆಲಸಗಳಲ್ಲಿ ಗವರ್ನರರ ಅಡ್ಡಿಯ ವಿಚಾರವನ್ನೂ ಸರಿಯಾಗಿ ತಿಳಕೊಳ್ಳಲು ಈ ಕಳೆದ ಮೂರು ತಿಂಗಳಿಂದಾಗುವ ಚರ್ಚೆಯಿಂದ ಸರಿಯಾದ ತಿಳಕೊಳ್ಳಲು ಅನುಕೂಲವಾಯಿತು ಪಾರ್ಲಿಮೆಂಟಿನಲ್ಲಿಯೂ ಪತ್ರಿಕೆಗಳಲ್ಲಿಯೂ ಮತ್ತು ಸಾರ್ವಜನಿಕ ಸಭೆಗಳಲ್ಲಿಯೂ ಉಂಟಾದ ತೀಕ್ಷ್ಣವಾದ ಚರ್ಚೆಯಿಂದಾಗಿ ಸರಕಾರವೂ, ಗವರ್ನರರೂ ಮತ್ತು ಮಂತ್ರಿಗಳಾದವರೂ ಒಂದು ತಿಳುವಳಿಕೆಗೆ ಬರುವಂತೆ ಸಹಾಯವಾಗಿದೆ ಅಲ್ಲದೆ ನವ ರಾಜಶಾಸನದಲ್ಲಿ ಗವರ್ನರರು ತಮ್ಮ ಮಂತ್ರಿಗಳೊಡನೆ ಯಾವ ರೀತಿಯಲ್ಲಿ ವ್ಯವಹರಿಸಬೇಕು, ಯಾವ ರೀತಿಯಲ್ಲಿ ಮಂತ್ರಿಗಳು ಆಡಳಿತೆ ನಡೆಸಬೇಕು, ಸರಕಾರವು ಮುಂದೆ ಹೇಗೆ ಸಾಗಬೇಕು ಎಂಬೀ ವಿಷಯಗಳಲ್ಲಿ ಅನೇಕರಿಗೆ ಇದ್ದ ಸಂದೇಹಗಳು ಈ ಮೂರು ತಿಂಗಳಿಂದಾಗುವ ಕಠಿಣ ಚರ್ಚೆಯಿಂದ ದೂರವಾಗಿರುತ್ತದೆ

ಬಹುಸಂಖ್ಯಾತರ ಮಂತ್ರಿಪದವಿ ತಿರಸ್ಕಾರ.

ಮೂರು ತಿಂಗಳ ಹಿಂದೆ, ಆರು ಪ್ರಾಂತ್ಯಗಳ ಶಾಸನಸಭೆಗಳಲ್ಲಿ ಬಹುಸಂಖ್ಯಾತ ಪಂಗಡವಿದ್ದ (ಕಾಂಗ್ರೆಸ್) ಪಕ್ಷದವರು ಮಂತ್ರಿಪದವಿಯನ್ನು ತಿರಸ್ಕರಿಸಿದರು. ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸುವುದಿಲ್ಲವೆಂದು ಭರವಸೆ ಕೊಡದೆ ತಾವು ಅಧಿಕಾರ ಸ್ವೀಕರಿಸುವುದು ವಿಚಾರಪರವಲ್ಲವೆಂದು ಆ ಪಕ್ಷವು ಭಾವಿಸಿತು ಆದರೆ, ಈ ಮೂರು ತಿಂಗಳ ಅಲ್ಪ ಅವಧಿಯ ಅನುಭವವನ್ನೂ, ಸ್ಥಾಪಿತವಾದ ತಾತ್ಕಾಲಿಕ ಮಂತ್ರಿಗಳ ದಿನನಿತ್ಯದ ಕೆಲಸಗಳು ಸುಗಮವಾಗಿ ನಡೆಯುವುದನ್ನೂ ನೋಡುವಾಗ, ಗವರ್ನರರು ಮಂತ್ರಿಗಳ ಅನುನಿತ್ಯದ ಕೆಲಸಗಳಲ್ಲಿ ಅಡ್ಡಿಬರಲು ಸಮಯ ಕಾಯುತ್ತಲಿರುವರೆಂದೂ, ಚಿಕ್ಕ ವಿಷಯವನ್ನೆತ್ತಿ ಗವರ್ನರರು ತಮ್ಮ ವಿಶೇಷಾಧಿಕಾರವನ್ನುಪಯೋಗಿಸಿಕೊಳ್ಳುವರೆಂದೂ ತಿಳಕೊಂಡವರ ಭಾವನೆಗಳು ಅನಾಧಾರವಾದುವುಗಳೆಂದೂ ಸ್ಪಷ್ಟವಾಗುತ್ತದೆ ಈ ಭಾವನೆಗಳು ಸ್ವಾಭಾವಿಕವಾದುವುಗಳಾಗಿರುವುದರಿಂದ ಅವುಗಳಲ್ಲಿ ನಾನು ಸಹಾನುಭೂತಿಪಡುತ್ತೇನೆ ಆದರೆ ಹಾಗೆ ಭಾವಿಸುವುದರಲ್ಲಿ ಯಾವ ನ್ಯಾಯವೂ ಇಲ್ಲ

ಗವರ್ನರರು ಮಂತ್ರಿಗಳ ಸೂಚನೆಯ ಮೇಲೆ ಹೊಂದಿಕೊಂಡಿರಬೇಕು.

ನವರಾಜ ಶಾಸನವನ್ನು ರಚಿಸಿದವರಲ್ಲಿ ನಾನೂ ಒಬ್ಬನಾಗಿರುವೆನಾದ ಕಾರಣ, ಪಾರ್ಲಿಮೆಂಟಿನ ಉದ್ದಿಶ್ಯಗಳನ್ನು ನಾನು ಚೆನ್ನಾಗಿ ಬಲ್ಲೆನು. ಜನಚುನಾಯಿತ ಮಂತ್ರಿಗಳಲ್ಲಿ ನಿಜವಾದ ಅಧಿಕಾರವನ್ನು ಕೊಟ್ಟು ಅವರು ತಮ್ಮ ಅಂಕೆಯಲ್ಲಿರುವ ಗವರ್ನರರ ಮತ್ತು ಹುದ್ದೆಗಳ ಸಹಾಯದಿಂದ ಪ್ರಾಂತ್ಯದ ಹಿತಸಾಧನೆಯನ್ನು ಮಾಡುವವರಾಗಬೇಕೆಂದೇ ಪಾರ್ಲಿಮೆಂಟು ಈ ನವರಾಜಶಾಸನವನ್ನು ಜ್ಯಾರಿ ಮಾಡುವಾಗ ಉದ್ದೇಶವಿಟ್ಟುಕೊಂಡಿರುತ್ತದೆ. ಆದುದರಿಂದ ಪ್ರಾಂತೀಯ ಜವಾಬ್ದಾರಿ ಆಡಳಿತದಲ್ಲಿ, ಮೈನಾರಿಟಿ, ಸರಕಾರದ ಇಲಾಖೆಗಳನ್ನೊಳಗೊಂಡ ಎಲ್ಲ ವಿಷಯಗಳಲ್ಲಿಯೂ ಗವರ್ನರರು ಮಂತ್ರಿಗಳ ಸೂಚನೆಗಳಿಂದಲೇ ಕಾರ್ಯವನ್ನು ನಡೆಸಬೇಕೆಂದು ಪಾರ್ಲಿಮೆಂಟಿನ ಉದ್ದಿಶ್ಯವಿದೆ ಈ ಮಂತ್ರಿಗಳು ಪಾರ್ಲಿಮೆಂಟಿಗೆ ಜವಾಬ್ದಾರರಿರದೆ ಶಾಸನಸಭೆಗೆ ಜವಾಬ್ದಾರರಿರುತ್ತಾರೆ.

ಗವರ್ನರರ ವಿಶೇಷಾಧಿಕಾರಗಳ ಮೇರೆ

ಈಗ ಬಹು ಚರ್ಚೆಗೆ ಒಳಪಟ್ಟಿರುವ ವಿಷಯವು ಗವರ್ನರರ ವಿಶೇಷಾಧಿಕಾರದ್ದಿರುತ್ತದೆ ಕೆಲವು 'ವಿಶಿಷ್ಟ ಹಿತಗಳಿ'ಗಾಗಿ ಪಾರ್ಲಿಮೆಂಟಿನವರು ಈ ವಿಶೇಷಾಧಿಕಾರಗಳನ್ನು ಗವರ್ನರರಿಗೆ ಕೊಟ್ಟಿರುತ್ತಾರೆ ಈ 'ವಿಶಿಷ್ಟ ಹಿತಗಳು' ಅಲ್ಪ ಸಂಖ್ಯಾತರಿಗೂ ಸರಕಾರ ಇಲಾಖಾ ಹುದ್ದೇದಾರರ ಸ್ಥಾನಮಾನಗಳಿಗೂ ಸಮ್ಬಂಧಪಟ್ಟಂತಹದ್ದಿರುತ್ತದೆ ಇವುಗಳ ರಕ್ಷಣೆಯು ಅಗತ್ಯವೆಂದು ಪಾರ್ಲಿಮೆಂಟಿನವರು ಮನಗಂಡಿದ್ದು, ಈ 'ವಿಶಿಷ್ಟ ಹಿತಗಳಿಗೆ' ತೊಂದರೆಗಳುಂಟಾಗಿ ಪ್ರಾಂತ್ಯದ ಶಾಂತಿ ವ್ಯವಸ್ಥೆಗಳು ಕ್ರಮತಪ್ಪುವಂತಾದರೆ ಮಾತ್ರ ಗವರ್ನರರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸಲು ಅಧಿಕೃತರಾಗಿದ್ದಾರೆ

ಗವರ್ನರರು ತಮ್ಮ ಇಚ್ಛೆಗನುಸಾರವಾಗಿ ಮಂತ್ರಿಗಳಾದವರ ದಿನನಿತ್ಯದ ಕೆಲಸಗಳಲ್ಲಿ ಅಡ್ಡಿಬರಲು ಹಕ್ಕುಳ್ಳವರಾಗಿದ್ದಾರೆಂದು ಕೆಲವರು ಅಭಿಪ್ರಾಯಪಟ್ಟರೆ ಅದು ತಪ್ಪು ಗವರ್ನರರ ಇಚ್ಛಾನುಸಾರ ಮಂತ್ರಿಗಳ ದಿನನಿತ್ಯದ ಕೆಲಸಗಳಲ್ಲಿ ಅಡ್ಡಿಬರಲು ಹಕ್ಕುಳ್ಳವರಾಗಿಲ್ಲ ಗವರ್ನರರಿಗೆ ಕೊಟ್ಟಿರುವ ವಿಶೇಷಾಧಿಕಾರಗಳು ಬಹಳೇ ಚಿಕ್ಕ ಅಂತರದೊಳಗಿರುತ್ತವೆ. ಇತರ ಎಲ್ಲಾ ವಿಷಯಗಳಲ್ಲಿ ಗವರ್ನರರು ಮಂತ್ರಿಗಳ ಸೂಚನೆಗಳಲ್ಲಿ ಅರ್ಧ ತೃಪ್ತಿಪಟ್ಟುಕೊಂಡರೂ ಕೂಡಾ, ಅವರ (ಮಂತ್ರಿಗಳ) ಸೂಚನೆಗಳನ್ನು ತೆಗೆದುಕೊಳ್ಳಲೇ ಬೇಕು ಗವರ್ನರರು ತಮ್ಮ ವೈಯಕ್ತಿಕ ತೀರ್ಪನ್ನು ಯೋಚಿಸಬೇಕಾದ ಸಂದರ್ಭಗಳಲ್ಲಿಯೂ ಕೂಡಾ ಅವರು ಮಂತ್ರಿಗಳ ಸೂಚನೆಯನ್ನು ಕಡೆಯ ವರೆಗೂ ತೆಗೆದುಕೊಳ್ಳಬೇಕಾಗಿದೆ ಮಂತ್ರಿಗಳು ಗವರ್ನರರ ವಿಶೇಷಾಧಿಕಾರಗಳ ಮೇರೆಯೊಳಗೆ ಕೂಡಾ ಗವರ್ನರರಿಗೆ ಸಲಹೆ ಸೂಚನೆಗಳನ್ನು ಕೊಡುವವರಾಗಬೇಕು

ಬಹಿರಂಗ ಪ್ರಕಟಣೆ

ಗವರ್ನರರಿಗೆ ಕೊಡಲ್ಪಟ್ಟ ಈ ತೀರ ಕಡಿಮೆ ಅಂತರದ ವಿಶೇಷಾಧಿಕಾರದೊಳಗೆ ಅವರು ತಮ್ಮ ಕಾರ್ಯನಿರ್ವಹಣೆಯಲ್ಲಿ ಪಾರ್ಲಿಮೆಂಟಿಗೆ ಜವಾಬ್ದಾರರಿದ್ದಾರೆ ಅಂದರೆ ಪಾರ್ಲಿಮೆಂಟು ಅವರು ಕೈಕೊಳ್ಳುವ ಕೆಲಸಗಳ ಮೇಲೆ ಮೇಲ್ವಿಚಾರಣೆಯನ್ನು ನಡೆಸುತ್ತಿರುತ್ತದೆ ಗವರ್ನರರು ಮಂತ್ರಿಗಳ ಸೂಚನೆಗಳನ್ನು ತೆಗೆದುಕೊಳ್ಳಲು ಅಶಕ್ತರಾದರೆ, ಆಗ ಎಲ್ಲಾ ಜವಾಬ್ದಾರಿಯು ಅವರದೇ (ಗವರ್ನರರದ್ದೇ) ಆಗಿರುತ್ತದೆ. ಈ ಸಂದರ್ಭದಲ್ಲಿ ಮಂತ್ರಿಗಳಾದವರು ಗವರ್ನರರು ಕೈಕೊಳ್ಳಲಿರುವ ಕಾರ್ಯಕ್ರಮದಲ್ಲಿ ತಮ್ಮ ಸಹಕಾರವಿಲ್ಲವೆಂದೂ, ಅದಕ್ಕೆ ತಮ್ಮ ಒಪ್ಪಿಗೆಯಿಲ್ಲವೆಂದೂ, ತಾವು ಸರಿಯಾದ ಸೂಚನೆಯನ್ನು ಕೊಟ್ಟಿರುವೆವೆಂದೂ ಬಹಿರಂಗವಾಗಿ ಸಾರ್ವಜನಿಕರಲ್ಲಿ ಸಾರಲು ಸ್ವಾತಂತ್ರ್ಯವುಳ್ಳವರಿದ್ದಾರೆ. ಇದೇ ಸಂದರ್ಭದಲ್ಲಿ ಗವರ್ನರರು ಕೂಡಾ ತಮ್ಮ ಮಂತ್ರಿಗಳ ಸಹಕಾರವನ್ನು ಸದಾ ಸಂಪಾದಿಸಲು ಪ್ರಯತ್ನಪಡಬೇಕೆಂದೂ ಅವರ ಸೂಚನೆಗಳನ್ನು ಚೆನ್ನಾಗಿ ಪರ್ಯಾಲೋಚಿಸಬೇಕೆಂದೂ ಪಾರ್ಲಿಮೆಂಟು ಆಶಿಸುತ್ತದೆ. ಗವರ್ನರರು ತಮ್ಮ ವಿಶೇಷಾಧಿಕಾರಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ಆಜ್ಞೆಯನ್ನು ಹೊರಡಿಸುವಾಗಾಗಲಿ, ಅಥವಾ ಪ್ರತ್ಯೇಕ ಒಂದು ಕಾರ್ಯಕ್ರಮವನ್ನು ಅನುಸರಿಸುವಾಗಾಗಲೀ, ಆ ಕೆಲಸವನ್ನು ಕೈಕೊಳ್ಳುವುದರಲ್ಲಿ ತಮ್ಮ ಅಭಿಪ್ರಾಯವನ್ನು ಸರಿಯಾಗಿ ಮಂತ್ರಿಗಳಿಗೆ ತಿಳಿಯಪಡಿಸಬೇಕು. ಮತ್ತು ಮಂತ್ರಿಗಳು ಆ ಸಮಯದಲ್ಲಿ ಕೊಡುವ ಸೂಚನೆಗಳು ಗವರ್ನರರಿಗೆ ಸರಿಯೆಂದು ಕಂಡುಬಂದಲ್ಲಿ, ಅವರು ತನ್ನ ತೀರ್ಪನ್ನು ಅದಷ್ಟುಮಟ್ಟಿಗೆ ಬದಲಾಯಿಸಿಕೊಳ್ಳಬಹುದು ಆದರೆ, ಗವರ್ನರರು ಮಂತ್ರಿಗಳ ಸೂಚನೆಯನ್ನು ಕೇಳುವಾಗ ನಿಜವಾದ ಮನಸ್ಸಿನಿಂದ ಕೇಳಬೇಕು ಇನ್ನೊಂದು ವಿಷಯವೇನೆಂದರೆ ಗವರ್ನರರು ತಾವು ಅನುಸರಿಸಲಿರುವ ಕಾರ್ಯಕ್ರಮವು ನೂರಕ್ಕೆ ನೂರು ನ್ಯಾಯಸಮ್ಮತವಾದುದೆಂದು ತಮ್ಮ ಮಂತ್ರಿಗಳಿಗೆ ತಿಳಿಯಪಡಿಸಲು ತಮ್ಮ ಶಕ್ತಿಯುದ್ದನ್ನು ಪ್ರಯತ್ನಪಡಬೇಕು ಇದರ ಮೇಲೆ ಅವರು ತಮ್ಮ ಮಂತ್ರಿಗಳನ್ನು ತಮ್ಮ ಅಭಿಪ್ರಾಯದ ಕಡೆಗೆ ತಿರಿಗಿಸುವುದು ಅಸಾಧ್ಯವೆಂದು ಕಂಡಲ್ಲಿ ಆ ಮೇಲೆ ಅವರು ತಮ್ಮ ಆಜ್ಞೆಯನ್ನು ಹೊರಡಿಸಬಹುದು, ಇಲ್ಲಿಯೂ ಅವರು ತಮ್ಮ ಮಂತ್ರಿಗಳ ಸಹಕಾರವನ್ನು ಪಡೆಯಲಿಕ್ಕಾಗಿದಕ್ಕಾಗಿ ವ್ಯಥೆಯನ್ನು ಸೂಚಿಸಬೇಕಾಗಿದೆ

ರಾಜಿನಾಮೆ ಅಥವಾ ಡಿಸ್‌ಮಿಸ್ಸಿನ ಪ್ರಶ್ನೆ

ಗವರ್ನರರ ವಿಶೇಷಾಧಿಕಾರಗಳ ಒಂದು ನಿರ್ದಿಷ್ಟ ಮೇರೆಯೊಳಗಿರುವಂತವುಗಳಾಗಿದ್ದು ಅವನ್ನು ಉಪಯೋಗಿಸಬೇಕಾದ ಸ್ಸಂದರ್ಭಗಳು ಪ್ರಾಮುಖ್ಯತೆಯಲ್ಲಿ ಬಹಳ ಹೆಚ್ಚುಕಮ್ಮಿಯಾಗುತ್ತದೆ ಸಮಸ್ಯೆಗಳು ಚಿಕ್ಕದಾಗಿದ್ದರೂ ದೊಡ್ಡದಾಗಿದ್ದರೂ ಗವರ್ನರರು ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಬೇಕೆನ್ನುವಿರಾ? ಒಂದು ವಿಶೇಷ ಸಂದರ್ಭದಲ್ಲಿ ಗವರ್ನರರೊಬ್ಬರು ಮಂತ್ರಿಗಳ ಸೂಚನೆಯನ್ನು ತೆಗೆದುಕೊಳ್ಳಲು ಸಕ್ತರಾಗಿ, ತಮ್ಮ ಅಭಿಪ್ರಾಯವನ್ನು ಮಂತ್ರಿಗಳಿಗೆ ಸರ್ವ ವಿಧಗಳಿಂದ ತಿಳಿಸಲು ಪ್ರಯತ್ನಪಟ್ಟು ಸಾಧ್ಯವಾಗದೆ ಹೋದಲ್ಲಿ ಆ ಗವರ್ನರರು ಮಂತ್ರಿಮಂಡಳವನ್ನು ಡಿಸ್‌ಮಿಸ್ ಮಾಡಬೇಕೆ ಅಥವಾ ಮಂತ್ರಿಗಳಾದವರು ಅಂತರಂಗ ಬಹಿರಂಗಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ನಾವೆ ಕೊಡಬೇಕೆ? ಈ ವಿಷಯಗಳು ಈಗ ತುಂಬಾ ಚರ್ಚಿಸಲ್ಪಡುತ್ತವೆ ಇವು ಕಾರ್ಯಾನುಭವದ ಪ್ರಶ್ನೆಗಳಾಗಿವೆ

ತೀಕ್ಷ್ಣ ಭೇದಾಭಿಪ್ರಾಯ.

ಮಂತ್ರಿಗಳು ಕೆಲಸಕ್ಕೆ ರಾಜಿನಾಮೆ ಮಾಡುವುದಾಗಲೀ ಅಥವಾ ಗವರ್ನರರು ಅವರನ್ನು ಡಿಸ್‌ಮಿಸ್ ಮಾಡುವ ಈ ವಿಚಾರವನ್ನಾಗಲೀ ಚರ್ಚಿಸುವ ಬಗೆ ಒಂದು ತರದ ಸಮ ಭಾರವನ್ನಿಟ್ಟುಕೊಳ್ಳುವುದು ಹಿತಕರ. ಈ ಸಂದರ್ಭದಲ್ಲಿ ಗವರ್ನರ್ ಮತ್ತು ಅವರ ಮಂತ್ರಿಗಳೊಳಗೆ ಬರಬಹುದಾದ ತೀಕ್ಷ್ಣ ಭೇದಾಭಿಪ್ರಾಯದಿಂದ ಮಾತ್ರವೇ ಅವರು ಬೇರ್ಪಡಬೇಕಾದ ಸಂದರ್ಭವುಂಟಾಗಬಹುದೆಂದು ಮಹಾತ್ಮಾ ಗಾಂಧಿಯವರು ಹೇಳಿದ ಸೂಚನೆಯನ್ನು ನಾನು ಒಪ್ಪುತ್ತೇನೆ. ಅಂದರೆ, ಗವರ್ನರರು ಮತ್ತು ಅವರ ಮಂತ್ರಿಗಳು ಬೇರೆಯಾಗಬೇಕಾದರೆ ಅಂತಹ 'ತೀಕ್ಷ್ಣವಾದ' ಭೇದಾಭಿಪ್ರಾಯವು ಬರಬೇಕು. ಹೀಗೆ ಭೇದಾ

(೧೧ನೇ ಪುಟಕ್ಕೆ ಮುಂದರಿಸಿಯದೆ.)

ಪರಿವಿಡಿ.

[illegible]	೨
ಸರ್. ಪಿ. ಸಿ. ರೆಡ್ಡಿಯವರ ಹೇಳಿಕೆ	೩
ಬಲ್ಗೇರಿಯ ಭಾರತೀಯರು	೪
ಪತ್ರಿಕೆ	
ಶ್ರೀಮಾನ್ ವೈಸರಾಯರ ಭಾಷಣ	೧೦
ಸ್ಫುಟವಿಚಾರಗಳು	
ಅಭಿಮಾನ ಸಂಗ್ರಹ	
ರಾಜಕೀಯ ಪರಿಸ್ಥಿತಿಯ ಕುರಿತು ವೈಸರಾಯರ ಹೇಳಿಕೆ	೯
ವಿವಿಧ ಸಮಾಚಾರಗಳು	೧೧
ಹಿಂದೂದೇಶದ ವಾರ್ತೆಗಳು	೧೩
ಬೆಂಗಳೂರು ಸಮಾಚಾರ	೧೪
ತಾಲೂಕುಗಳಿಂದ	"
ಶ್ರೀ ಎಸ್. ಜಿ. ರಂಗಧರರ ಭಾಷಣ	೧೬

ತಾ. ೨೫ನೇ ಶುಕ್ರವಾರ ಜೂನ್ ೧೯೩೭

ಸ್ವದೇಶಾಭಿಮಾನಿ.

ಶ್ರೀಮಾನ್ ವೈಸ್ರಾಯರ ಭಾಷಣ

ಮುಂದಾಗಿ ಸೂಚನೆ ಕೊಟ್ಟು, ವೈಸ್ರಾಯರು ತಾ. 21ರಲ್ಲಿ ತಮ್ಮ ಹೇಳಿಕೆಯನ್ನು ಪ್ರಕಟಿಸಿದರು. ತಮ್ಮ ಹೇಳಿಕೆಯನ್ನು ಓದಿಕೊಳ್ಳುವಾಗ ಜನರ ಮನಸ್ಸಿನಲ್ಲಿ ಯಾವ ಭಾವನೆಗಳಿದ್ದು ಅದರೊಳಗಣ ಮುಖ್ಯ ತತ್ವಗಳ ಕಡೆಗೆ ಗಮನ ಕೊಡಬೇಕೋ ಆ ಸೂಚನೆಯನ್ನು ಹಿಂದಣ ರಾತ್ರಿಯಲ್ಲಿ ರೇಡಿಯೋ ಮೂಲಕ ಪ್ರತ್ಯೇಕ ತಿಳಿಸಲಾಗಿದ್ದಿತು. ಅಂತೂ ಮೌನವಾಗಿ ಮೂರು ತಿಂಗಳು ದಾಟಿದರೂ ಈಗ ಮನೋಭಿಪ್ರಾಯ ತಿಳಿಸಲು ವೈಸ್ರಾಯರು ತೊಡಗಿದ್ದುದು ತುಂಬಾ ಕಾಲೋಚಿತವೇ. ಇನ್ನೂ ವಿಳಂಬಿಸಿ ಫಲವಿರಲಿಲ್ಲ.

ಅವರ ಹೇಳಿಕೆಯಲ್ಲಿ ಕಾಂಗ್ರೆಸಿಗೆ ತಿಳಿಯಬೇಕಾಗಿರುವ ಮುಖ್ಯಾಂಶವಿಷ್ಟು:—ಕಳೆದ ಮೂರು ತಿಂಗಳ ಅನುಭವದಿಂದ, ಮಂತ್ರಿಗಳು ಕಾರ್ಯನಿರ್ವಹಿಸುವಾಗ ಗವರ್ನರರುಗಳು ಅಲ್ಲಿ ಅತಂಕಿಸಲು ಅವಕಾಶ ಹುಡುಕಬಹುದೆಂಬ ಹೆದರಿಕೆಗಾಗಲಿ, ದೈನಂದಿನ ಕಾರ್ಯನಿರ್ವಹಣ ಕಾಲದಲ್ಲಿ ತಮ್ಮ ಜವಾಬ್ದಾರಿಯ ಮಾತ್ರಕ್ಕೆ ಮಂತ್ರಿಗಳನ್ನು ವಿನಾಕಾರಣವಾಗಿ ಆತಂಕಿಸಲು ಗವರ್ನರರು ತವಕಗೊಳ್ಳಬಹುದೆಂಬ ಸಂದೇಹಕ್ಕಾಗಲಿ ಕಾರಣಗಳೇನೂ ತೋರಿಬಂದುದಿಲ್ಲ. ಆಕ್ಟಿನಲ್ಲಿ ನಮೂದಿಸಿರುವಂತೆ, ಪ್ರಾಂತಿಕ ಸ್ವರಾಜ್ಯವೆಂಬುದರ ಆಚರಣೆಯಲ್ಲಿ ಮಂತ್ರಿಗಳ ಸೂಚನೆಯಂತೆ ಗವರ್ನರರು ಸಾಮಾನ್ಯವಾಗಿ ನಡೆದುಕೊಳ್ಳುವರು. ಮಂತ್ರಿಗಳು ತಮ್ಮ ನ್ಯಾಯ ಸಭೆಗಳಿಗೆ ಜವಾಬ್ದಾರರಲ್ಲದೆ ಪಾರ್ಲಿಮೆಂಟಿಗೆ ಅಲ್ಲ. ಮಂತ್ರಿಗಳನ್ನು ತನ್ನ ವಶವಿರಿಸಿಕೊಳ್ಳುವುದೇ ಗವರ್ನರರ ಕಾರ್ಯೋದ್ದೇಶವಾಗುವುದು. ಮಂತ್ರಿಗಳಿಗೆ ಬಿಟ್ಟುಕೊಟ್ಟಿರುವ ಅಧಿಕಾರಗಳಲ್ಲೆಲ್ಲ ಅವರ ಸೂಚನೆಯಂತೆ ಮಾತ್ರ ಗವರ್ನರರು ಅವಶ್ಯವಾಗಿಯೂ ನಡೆದುಕೊಳ್ಳಲೇಬೇಕು. ಮಂತ್ರಿಗಳನ್ನು ಡಿಸ್‌ಮಿಸ್‌ಮಾಡುವ ಮತ್ತು ಮಂತ್ರಿಗಳೇ ತಾವಾಗಿ ರಾಜೀನಾಮೆ ಕೊಡುವ ವಿಚಾರದ ಚರ್ಚೆಯನ್ನು ಕುರಿತು ಆಲೋಚಿಸಿದ್ದಲ್ಲಿ, ಹೆಚ್ಚಿನ ಮತವು ರಾಜೀನಾಮೆ ಕೊಡುವುದೇ ಸರಿಯೆಂದು ಸೂಚನೆ ದೊರೆಯುವುದು. ಕೆಲಸಂದರ್ಭಗಳಲ್ಲಿ ಗವರ್ನರರು ಮಂತ್ರಿಗಳ ರಾಜೀನಾಮೆಯನ್ನು ಕೇಳಿ ಪಡೆಯಬೇಕೆಂಬುದಕ್ಕೆ ಆಕ್ಟಿನಲ್ಲಿ ಯಾವ ಸೂಚನೆಗಳೂ ಇಲ್ಲ; ಅಂತಹ ಸಂದರ್ಭಗಳಲ್ಲಿ ಅವರು ರಾಜೀನಾಮೆಗಳನ್ನು ಅಂಗೀಕರಿಸಲೂ ಅಸಮರ್ಥರು. ಮಂತ್ರಿಗಳು ಇಚ್ಛೆಯುದ್ದಾಗ ರಾಜೀನಾಮೆ ಕೊಡಬಹುದು; ಗವರ್ನರರು ಇಚ್ಛೆಯುದ್ದಾಗ ಮಂತ್ರಿಗಳನ್ನು ನಿವೃತ್ತಗೊಳಿಸಬಹುದು. ಆದರೆ ಗವರ್ನರರು ನಿವೃತ್ತಗೊಳಿಸಬಹುದಾಗಿರುವಲ್ಲಿ ಮಂತ್ರಿಗಳಿಂದ ರಾಜೀನಾಮೆ ಪಡೆಯಬೇಕೆಂದಾಗಲಿ ಆಕ್ಟಿನಲ್ಲಿ ಅವಕಾಶಕೊಟ್ಟುದಿಲ್ಲದ ಕಾರಣ, ಮಂತ್ರಿಗಳೇ ತಾವಾಗಿ ರಾಜೀನಾಮೆ ಕೊಟ್ಟು ಹೊರಬೇಕಾಗಿರುವ ಜವಾಬ್ದಾರಿಯನ್ನು ಗವರ್ನರರು ತಮ್ಮ ಮೇಲೆ ಹೊರಲಾಗುವಂತೇನೂ ಆಕ್ಟಿನಲ್ಲಿ ನಿಯಮಗಳಿಲ್ಲ.

ಕಾಂಗ್ರೆಸಿನ ಕಾರ್ಯಕಾರೀ ಮಂಡಲವು ಈ ಹೇಳಿಕೆಯನ್ನೋದಿ ಯಾವ ಅಭಿಪ್ರಾಯ ನಡಬಹುದೋ, ಅದನ್ನು ಮುಂದಣ ವಾರದಲ್ಲಿ ನಡೆವ ಮಂಡಲದ ಅಧಿವೇಶನದಲ್ಲಾಗುವ ತೀರ್ಮಾನದ ಮೊದಲು ಯಾರಿಂದಲೂ ನಿಶ್ಚಿತವಾಗಿ ಹೇಳಬರುವಂತಿಲ್ಲ. ಸದಸ್ಯರಾರೂ ಎಂತಹ ಅಭಿಪ್ರಾಯವನ್ನು ಕೊಡರು; ಕೊಟ್ಟರೂ ಅದನ್ನೆ ಮಂಡಲವೂ ಅಂಗೀಕರಿಸಬಹುದಾಗಿ ಹೇಳಲು ಯಾರಿಗೂ ಧೈರ್ಯ ಬಾರದು.

ಮನಸ್ಸು ತುಂಬ ವಿಚಲನಗೊಂಡು, ಸಂಪೂರ್ಣವಾಗಿಯೂ ಸಹಾನುಭೂತಿಯನ್ನು ಪ್ರದರ್ಶಿಸಿ, ಒಂದು ಬಿಕ್ಕಟನ್ನು ಸುದಾರಿಸುವುದಕ್ಕಾಗಿ ಉದ್ವೇಗಗೊಂಡು, ವೈಸ್ರಾಯರು ಈ ಹೇಳಿಕೆಯನ್ನು ಬರೆದಿರುವರೆಂದು ತಿಳಿಯುವುದು ಸುಲಭವಾಗಿದೆ. ಎಂತಹ ಕಠಿನ ಟೀಕಾಕಾರರಾದರೂ ಈ ವಿಷಯವನ್ನು ಒಪ್ಪಿಕೊಂಡು ಅವರನ್ನು ಅದಕ್ಕಾಗಿ ಅಭಿನಂದಿಸಬೇಕಾಗಿದೆ. ಆರು ಸಾವಿರ ಶಬ್ದಗಳನ್ನು ಉಪಯೋಗಿಸುವುದು ಬಹಳ ಹೆಚ್ಚೆಂದು ಯಾರೂ ಹೇಳದಂತೆ ಯಾರೂ ಆಕ್ಷೇಪವೆತ್ತುವ ಮೊದಲೇ ಇಷ್ಟು ವಿಸ್ತಾರವಾಗಿ ವಿವರಿಸದೆ ಎಲ್ಲ ಮತದಾರರಿಗೆ ಸ್ವಾಭಿಪ್ರಾಯವು ವ್ಯಕ್ತವಾಗದೆಂದು ಅವರೆನ್ನುತ್ತಾರೆ. ಕಠಿನ ತತ್ವಗಳನ್ನು ವಿವಾದಿಸದೆ, ಆ ಎಡೆಗಳಲ್ಲಿ ತಮ್ಮ ಹೃದಯವೇದನೆಯನ್ನು ವ್ಯಕ್ತಗೊಳಿಸಿದ್ದಾರೆ.

ಕಳೆದ ಹದಿನೆಂಟು ವರ್ಷಗಳಲ್ಲಿ ಈ ದೇಶವನ್ನಾಳಿದ ವೈಸ್ರಾಯರ ಕಾಲದಲ್ಲಿ ಸೆಕ್ರೆಟರಿಯರಾಗಲಿ ವೈಸ್ರಾಯರಾಗಲಿ ಸಹಾನುಭೂತಿಯಲ್ಲಿ ಹಿಂದೆಗೆದ ಸಂಭವಗಳು ಅಪೂರ್ವವೆನ್ನುವುದನ್ನು ಹೇಳುವಾಗ, ಅಂತಹ ಸಂಭವಗಳನ್ನೆ ಆಧರಿಸಿ, ಇನ್ನೂ ಹಾಗೆ ಸಾಗುವುದೆನ್ನುವುದು ಮಾತ್ರ ಕುರುಡು ನಂಬುಗೆಗೂ ಯೋಗ್ಯವಾದುದಲ್ಲ. ಸಾಮ್ರಾಜ್ಯರಕ್ಷಣೆಯ ಅಡಚಣೆಗಳಲ್ಲಿ ಯಾವಾಗ ಎಂತಹ ಸಂದರ್ಭಗಳು ಉಂಟಾಗಬಹುದೋ, ಆಗ ಇಂತಹ ಕಾರ್ಯಕ್ರಮವನ್ನು ಅವಶ್ಯವಾಗಿಯೂ ವೈಸ್ರಾಯರೇ ಮೊದಲಾದವರು ಅಂಗೀಕರಿಸಬೇಕಾಗುವುದೋ,—ಅದನ್ನು ಈಗಲೆ ನಿರ್ಧಾರವಾಗಿ ಹೇಳಲು ಯಾರಿಗೂ ಬರುವಂತಿಲ್ಲವಷ್ಟೆ.

ಯಾರ ಮನಸ್ಸಿಗೂ ವೇದನೆಯುಂಟಾಗದ ರೀತಿಯಲ್ಲಿ ವಾಕ್ಯಗಳನ್ನು ಉಪಯೋಗಿಸಿ ಕಾಂಗ್ರೆಸಿನ ಮುಖಂಡರ ಹೇಳಿಕೆಯಲ್ಲಿ ಅನ್ಯಾರ್ಥಗಳನ್ನು ಕಲ್ಪಿಸಿಕೊಳ್ಳದೆ, ಅವರ ಹೇಳಿಕೆಯಲ್ಲಿರುವ ಸಂಶಯ ಸಂದೇಹಗಳಿಗೂ ಕಾರಣಗಳಿಲ್ಲದೆ ಇಲ್ಲವೆಂಬುದನ್ನು ಒಪ್ಪಿಕೊಂಡುದು ಅವರ ಸೌಹಾರ್ದ. ಮುಖಂಡರ ಹೇಳಿಕೆಯ ಮೂಲದಲ್ಲಿ ತಪ್ಪು ತಿಳವಳಿಕೆಯಿದೆ ಎಂದು ವೈಸ್ರಾಯರು ಹೇಳುತ್ತಾರೆ; ಆದರೆ, ಈ ತಪ್ಪಿಗೆ ಕಾರಣವಿಲ್ಲವೆಂಬುದಕ್ಕೆ ಕೆಲವೆಡೆಗಳಲ್ಲಿ ಮೂರು ತಿಂಗಳ ಅಲ್ಪಾವಧಿಯಲ್ಲೇ ಆದಕೂ ಜರುಗಿದ ರಾಜ್ಯಭಾರದಲ್ಲಿ ಮಂತ್ರಿಗಳಾರಿಗೂ ಆತಂಕವುಂಟಾಗದಿದ್ದುದರ ದೃಷ್ಟಾಂತ ಕೊಡುವರು. ಕೊನೆಗೆ ಅದೆಂತೂ ಇರಲಿ. ಏನೇ ಉಂಟಾಗಲಿ. ಕೊನೆಗಂತೂ ನಾನಿರುವೆನಷ್ಟೆ. ಬೇಕಾದ ಅತೃಪ್ತಿ ನಿರಾಶೆಗಳೇ ಉಂಟಾಗಲೊಲ್ಲವೇಕೆ? ಪಾರ್ಲಿಮೆಂಟಿನ ಕ್ರಮ ಜವಾಬ್ದಾರಿ ರಾಜ್ಯಭಾರ ಕ್ರಮಗಳು ಇಲ್ಲಿ ಖಂಡಿತವಾಗಿಯೂ ಸ್ಥಾಪನೆ ಹೊಂದುವಂತೆ ನಾನೇ ಪೇಚಾಡುವೆನು ಎಂದು ಭರವಸೆ ಹೇಳುತ್ತಾರೆ. ಈ ಮಾತುಗಳಿಂದ, ಮಂತ್ರಿಗಳಲ್ಲಿ ಅತೃಪ್ತಿ ನಿರಾಶೆಗಳು ಉಂಟಾಗಬಹುದೆಂಬ ಅಂಜಿಕೆಯೂ ಅವರಿಗೆ ಇದೆ ಎಂಬುದು ನಮಗೂ ತಿಳಿಯುವಂತಾಗಿದೆ. ಆದರೆ, 'ಜವಾಬ್ದಾರವಾದ ಸರಕಾರ' ಎಂಬ ಮಾತುಗಳಲ್ಲಿ 'ಡೊಮಿನಿಯನ್' 'ಸ್ಟೇಟಸ್'ನ ಧ್ವನಿ ಹುಟ್ಟುವಂತೆ ವೈಸರಾಯರಾದರೂ ಜನತೆಗೆ ಸೂಚಿಸಿರುವುದು ಸ್ತುತ್ಯವಾಗಿದೆ. ಎಂದರೆ, ಜನತೆಯ ಮನಸ್ಸಿನಲ್ಲಿ ಹುಟ್ಟಿರುವ ಪೂರ್ಣ ಸ್ವರಾಜ್ಯದ ಆ ಕಾಂಕ್ಷೆಗೆ ಈ ಮಾತುಗಳು ಪೋಷಕವಾಗಿಯೆ ಇವೆ ಹೊರತು, ಈ ವಿಷಯವಾಗಿರುವ ಭಿನ್ನಾಭಿಪ್ರಾಯಗಳಿಗೆ ವೈಸ್ರಾಯರು ತಿಳಿದೋ ತಿಳಿಯದೆಯೋ ಅವಕಾಶಕೊಟ್ಟುದಿಲ್ಲ. ಹೇಳಿಕೆಯಲ್ಲಿನ ಈ ಅಂಶವು ಜನತೆಗೆ ತೃಪ್ತಿಕರವಾಗಿದೆ. ರಾಷ್ಟ್ರೀಯ ಭಾವನೆಯು ಇದರಿಂದ ಹೆಚ್ಚುವಂತಾಗುವುದು.

ಇರಲಿ. ಇಷ್ಟು ಮಾತುಗಳು ವೈಸ್ರಾಯರ ಹೃದಯದೊಳಗಣ ವ್ಯಥೆ ಆಸೆ ಸಹಾನುಭೂತಿ ಮೊದಲಾದುವನ್ನು ಸೂಚಿಸುವುವು. ಆದರೆ ಮುಂದೆ? ಸದ್ಯಸ್ಥಿತಿಯನ್ನು ಕುರಿತಾಗಿ ಮಾತೆತ್ತುವಾಗ, ಅವರು ಇತರ ಉಚ್ಚಾಧಿಕಾರಿಗಳಷ್ಟೆ ಅಸ್ಪಷ್ಟರು, ಅವ್ಯಕ್ತರು!

ತಾತ್ಕಾಲಿಕ ಮಂತ್ರಿಮಂಡಲಗಳ ವಿಧೇಯತೆಯ ಪ್ರಶಂಸೆಯೇನೂ ಇಲ್ಲವಾದರೂ, ಅವುಗಳ ದೃಷ್ಟಾಂತವನ್ನು ಎತ್ತಿ ತೋರಿಸಿ, ಇತರ ಬೆಂಬಲವುಳ್ಳ ಪ್ರತಿನಿಧಿಗಳಿಗೂ ಗವರ್ನರರು ಎಂದೂ ಸಾಮಾನ್ಯವಾಗಿ ಆತಂಕಿಸರು ಎನ್ನುವುದರಲ್ಲಿ ಅರ್ಥ ವಿಶೇಷವಿರಲಾರದು. ಗವರ್ನರರೇ ನೇಮಕ ಮಾಡಿದ್ದು, ಅವರೇ ಮಾಡಿಕೊಟ್ಟ ಬಜೇಟಿನಂತೆ ಕಾರ್ಯನಿರ್ವಾಹನಮಾಡುವ ನಿರಾಲಂಬ ಮಂತ್ರಿಗಳು ವಿಧೇಯವಾಗದೆ ಅಥವಾ ಅವರ ಮೇಲಿರುವ ಗವರ್ನರರು ಅವರನ್ನು ಆಧಾರಕೊಡದೆ, ಇತ್ತಂಡಗಳೂ ಬಹುಕಾಲ ಬಾಳಬಹುದೆ? ಇಂತಹ ಮಂತ್ರಿಗಳು ಸಭೆಕೂಡಿಸಿ, ಅಲ್ಲಿ ಪ್ರಶ್ನೋತ್ತರಗಳು ಇನ್ನೂ ನಡೆದಿಲ್ಲ; ಸೂಚನೆ ಆಕ್ಷೇಪಗಳು ಇನ್ನೂ ಮುಂದೆ ಬಂದಿಲ್ಲ; ಯಾವುದೊಂದು ಹೊಸ ಸುಧಾರಣೆಗೆ ಕೈಯಿಕ್ಕಿದುದಿಲ್ಲ.

ಹೀಗಾಗಿ ಜೆಟ್ಲೆಂಡರ ಹೇಳಿಕೆಗಿಂತ ಇದು ಬಹಳ ಸಾಧುವಾಗಿರುವುದಾದರೂ, ಅಲ್ಲಿಂದ ಮುಂದೆ ಯಾವ ತೆರದಲ್ಲಿ ಬಿಕ್ಕಟ್ಟಿನ ಇತ್ಯರ್ಥ ಮಾಡಲು ಸಹಾಯಕವಾದೀತೋ ತಿಳಿಯದು. ವೈಸ್ರಾಯರು ಸಂಧಾನಸೂಚಕ ವಾಕ್ಯಗಳನ್ನೂ ಅಭಿಪ್ರಾಯಗಳನ್ನು ಹೊರಡಿಸಿರುವರು ನಿಜ. ಕಾಂಗ್ರೆಸ್ ಮುಖಂಡರು ತಮ್ಮ ಕೇಳಿಕೆಯೆಲ್ಲವೂ ಈ ಹೇಳಿಕೆಯಿಂದ ಸಮಾಧಾನ ಹೊಂದಿದೆ ಎಂದೆನ್ನಲು ಒಪ್ಪದಿರಬಹುದು; ಹಾಗಿದ್ದರೂ ವೈಸ್ರಾಯರಲ್ಲಿ ಯಾರೂ ಅನ್ಯಾಯವನ್ನೆಣಿಸರು. ಆಕ್ಟಿನಲ್ಲಿರುವ ಕಿರುಕುಳಗಳೇ ಅಂತಹವು. ಅದನ್ನು ತಿದ್ದುವುದು ಅಗತ್ಯವೆಂದು ಎಲ್ಲರಿಗೂ ತೋರದಿರದು. ಎಷ್ಟು ಬೇಗನೆ ಎಷ್ಟು ಸುಲಭವಾಗಿ ಅದನ್ನು ತಿದ್ದಬಹುದು ಎಂಬುದನ್ನು ಎಲ್ಲರೂ ಆಲೋಚಿಸಬೇಕಾಗಿದೆ. ಅಧಿಕಾರವನ್ನು ಸ್ವೀಕರಿಸಿ, ಕಾರ್ಯನಿರ್ವಹಣದಲ್ಲಿ ಮೊದಲನೆಯ ಆತಂಕವುಂಟಾಗುತ್ತಲೇ ಮಂತ್ರಿಗಳು ಅಧಿಕಾರವನ್ನು ತ್ಯಜಿಸಿ, ತಾವು ತ್ಯಜಿಸುವುದಕ್ಕೆ ಸಂಪೂರ್ಣ ಕಾರಣಗಳಾವುವೋ ಅವನ್ನು ಸ್ಪಷ್ಟವಾಗಿ ಪ್ರಕಟಿಸುವಂತೆ, ಕಾಂಗ್ರೆಸು ನಿರ್ಧರಿಸಿದರೆ, ಆಕ್ಟಿನಲ್ಲಿರುವ ಹುಳುಕುಗಳು ಹೊರಬಿದ್ದು, ಅವನ್ನು ನಿವಾರಿಸಲು ಪ್ರಯತ್ನ ನಡೆಸಲು ಅನುಕೂಲವಾದೀತು. ತಾತ್ಕಾಲಿಕರೂ ಕಾಲ ತಿಳಿದು ಮಾಯವಾಗುವಂತಾಗುವುದು. ಚುನಾವಣೆಯ ಕಾಲದಲ್ಲಿ ಜನತೆಗೆ ವಾಗ್ದಾನ ಮಾಡಿದುದನ್ನು ಪೂರಯಿಸಲು ಸಾಧ್ಯವೇ ಇಲ್ಲವೇ ಎಂಬುದನ್ನು ಕಾಂಗ್ರೆಸ್ಸು ಪ್ರಯತ್ನಿಸಿ ರುಜುಮಾಡಬಹುದು. ಆಗ ಬ್ರಿಟನ್ನಿಗೂ ತನ್ನ ತಪ್ಪು ತಿಳಿಯುವಂತಾದೀತು. ಕಾಂಗ್ರೆಸ್ಸೂ ಅಪವಾದ ಹೊರಲಾರದು.

ಕಾಂಗ್ರೆಸ್ಸು ಹಾಗೆ ಅಧಿಕಾರ ಸ್ವೀಕರಿಸಿ ನಡೆದರೆ, ಕಾಂಗ್ರೆಸ್ಸಿನ ಬಹುಮತವಿಲ್ಲದ ಇತರ ಪ್ರಾಂತ್ಯಗಳ ಮಂತ್ರಿಮಂಡಳಗಳೂ ಇದೇ ಮಾದರಿಯಿಂದ ತಾವೂ ಸ್ವರಾಜ್ಯಸಾಧನೆಗೆ ಮುಂದರಿಯಲು ಕಲಿಸಿಕೊಡುವಂತಾಗುವುದು. ಆಗ, ಮತಾಧಿಕ್ಯದ ಬಲವು ಎಲ್ಲ ಪ್ರಾಂತ್ಯಗಳಲ್ಲೂ ಎಂದೇ ಬಗೆಯಾಗಿ ಕಾಂಗ್ರೆಸ್ಸಿನ ನಿಶ್ಚಿತದಂತೆ ತಿರುಗುವುದು. ಹೀಗೆ ದೇಶದಲ್ಲೆಲ್ಲ ತೀವ್ರವಾಗಿಯೂ ಸುಲಭವಾಗಿಯೂ ಆಕ್ಟಿನ ತಿದ್ದುಪಡಿಯಾಗಿ ಭಾರತೀಯರ ಇಚ್ಛೆಯಂತೆಯೆ ರಾಜ್ಯಭಾರದ ಕ್ರಮಗಳ ಸೂಚನೆಗಳನ್ನೂ ಮುಂತರಬಹುದು. ಅದೆಲ್ಲ ತಪ್ಪು, ಈ ಹೇಳಿಕೆಯ ತೀಕ್ಷ್ಣವೂ ಸೂಕ್ಷ್ಮವೂ ಆಗಿರುವ ವಿಮರ್ಶೆಯೆ ಕಾಂಗ್ರೆಸ್ಸಿನ ಸದ್ಯದ ಕರ್ತವ್ಯವಾಗಿದೆ ಇಲ್ಲದಿಷ್ಟಲ್ಲಿ, ಎಲ್ಲ ರಾಜ್ಯಸೂತ್ರಗಳನ್ನೂ ಗವರ್ನರರೇ ತಮ್ಮ ಕೈಯಲ್ಲಿ ಹಿಡಿದುಕೊಂಡಲ್ಲಿ ಮುಂದೆ ಎಂತಹ ತಿದ್ದುಪಡಿಗಳಿಗೂ ಅವಕಾಶವು ದೂರವೆಂದೂ ವೈಸ್ರಾಯರೆನ್ನುತ್ತಾರೆ.

ಸ್ಫುಟವಿಚಾರಗಳು.

ಸ್ವಾತಂತ್ರ್ಯ ಪ್ರಿಯತೆಯ ವ್ಯಥೆ

ಎಷ್ಟರದೆಂದು ಬಿಲ್ಬಾವೊ ಪ್ರಾಂತ್ಯದಿಂದ ದೂರವಾಗಿ ಇಂಗ್ಲೆಂಡಿನಲ್ಲಿ ಆಶ್ರಯ ಹೊಂದಿ ಹೊಂದಿರುವ ಸ್ಪೇಯಿನಿನ ಮಕ್ಕಳೇ ಜಗತ್ತಿಗೆ ಪ್ರದರ್ಶಿಸುವಂತಾಗಿದೆ. ಈ ಮಕ್ಕಳಲ್ಲಿ ೫೦ ಮಂದಿ ಇಂಗ್ಲೆಂಡಿನಲ್ಲಿ ಒಂದೇ ಕಡೆ ಸುರಕ್ಷಿತವಾಗಿದ್ದರಾದರೂ, ತಮ್ಮ ಊರು ಶತ್ರುವಶವಾಯಿತೆಂಬ ವಾರ್ತೆ ಬರುತ್ತಲೆ, ರಕ್ಷಣೆಯನ್ನು ಬಿಟ್ಟು ಹತ್ತಿರದ ಕಾಡಿಗೆ ತೆರಳಿ, ಉನ್ಮಾದರಂತೆ ವ್ಯಾಕುಲ ಕೋಪಗಳಿಂದ ನೊಂದರಂತೆ. ಪೋಲಿಸರೇ ಅವರನ್ನು ಸಮಾಧಾನಮಾಡಿ ಹಿಂತಿರುಗಿ ಕರೆದು ತರಬೇಕಾಯಿತು. ಹೀಗಿದ್ದರೂ ನೂರು ಮತ್ತು ಮಂದಿ ಇನ್ನೂ ಸಿಕ್ಕಿಲ್ಲ. ಊರು ಪರವಶವಾದ ದುಃಖ, ತಾವು ಆಗ ಊರಿಗಾಗಿ ಯಾವ ಪ್ರಯತ್ನವನ್ನೂ ಮಾಡಲಾರದಾಯಿತೆಂಬ ನೋವು, ಇಲ್ಲಿ ಆಶ್ರಯ ಹೊಂದಿ ಬಾಳುವುದು ನಾಚುಗೆಯೆಂಬ ವ್ಯಥೆ, ಇಷ್ಟೆ ಅವರ ವಿಚಿತ್ರ ವರ್ತನೆಗೆ ಕಾರಣವಾಯಿತು.

ಬಹು ಪ್ರಖ್ಯಾತಿಪಟ್ಟದ್ದು-ಪ್ರಪಂಚದ ಅದ್ವಿತೀಯ ನವಶೋಧೆ.

ಬಿಮುಲಾ ಮಾತ್ರೆಗಳು

ಬಿಮುಲಾ ಪಿಲ್ಸ್ ಅಥವಾ ಮಾತ್ರೆಗಳೆಂಬ ಹೆಸರನ್ನು ಕೇಳಿದ ಕೂಡಲೇ ಬಹು ಕಾಲದ ಬಾಧ್ಯಗಳೂ, ರೋಗಗಳೂ ಹೆದರಿ ನಡುಗುತ್ತವೆ. ವೈದ್ಯಕೀಯ ಚಾತುರ್ಯವನ್ನು ತಬ್ಬಿಬ್ಬಾಗಿ ಮಾಡಿದ ನಾನಾ ತರದ ಹಳೇ ವ್ಯಾಧಿಗಳನ್ನು ಬಿಮುಲಾ ಮಾತ್ರೆಗಳು ಗುಣಪಡಿಸಿ ಅತ್ಯಾಶ್ಚರ್ಯವನ್ನುಂಟುಮಾಡಿದೆ. ಧರ್ಮಾರ್ಥ ಕಳುಹಿಸುವ ಹಸ್ತಪುಸ್ತಕಗಳಿಗೂ, ಸೂಚನೆಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Kaviraj S. C. Mukerjie, B. A. S.

Ayurvedic Institution Kalighat P. O. Calcutta.

ಯೋಗ್ಯ ಸಭ್ಯಸ್ಥರಾದ ಏಜೆಂಟರುಗಳು ಬೇಕಾಗಿದ್ದಾರೆ. ಏಜನ್ಸಿ ರೂಲ್ಸುಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಬಿಲ್ಬಾವೊ ಪಟ್ಟಣವು ದಂಗೆಗಾರರ ವಶವಾಯಿತು.

ಜರ್ಮನ್ ನಾವೆಯ ಮೇಲೆ ಗುಂಡಿನ ಹತ್ಯಾರ

ದಂಗೆಗಾರರಿಗೆ ಮುಸಲೋನಿಯ ಸಂದೇಶ.

ನಾನ್ ಇಂಟರ್‌ವೆನ್ಶನ್ ಸಮಿತಿಯು ನಿಷ್ಪ್ರಯೋಜನ:— ಸ್ಪೈನಿನ ಅಂತಃ ಕಲಹದಲ್ಲಿ ಹೊರಗಿನ ಯಾವ ಜನಾಂಗದವರೂ ಭಾಗ ವಹಿಸದಂತೆ ನೋಡಿಕೊಳ್ಳಲು ರಚನೆಯಾದ ನಾನ್ ಇಂಟರ್‌ವೆನ್ಶನ್ ಅಥವಾ ತಾಟಸ್ಥ್ಯ ಸಮಿತಿಯ ಒಂದು ಸಭೆಯು ಕೆಲವು ದಿವಸಗಳ ಹಿಂದೆ ಲಂಡನಿನಲ್ಲಿ ಸೇರಿ ನಾಗ ಅಧ್ಯಕ್ಷತೆ ವಹಿಸಿದ್ದ ಲಾರ್ಡ್ ಪ್ಲ್ಯಮತ್‌ರು ಈ ಸಮಿತಿಯಿಂದ ಯಾವ ಪ್ರಯೋಜನವೂ ಆಗಲಿಲ್ಲ ವೆಂದು ತಿಳಿಸಿದರು. ಸ್ಪೈನಿನೊಳಗೆ ಹೊರಗಿನವರಿಂದ ಯಾವ ಸಹಾಯವೂ ಸಿಗದಂತೆ ನೋಡಲು ಸಮಿತಿಯು ತರು ಬೇಕಾದ ಏರ್ಪಾಡು ಮಾಡಿದ್ದರೂ ಇತ್ತಂಡದವ ರಿಗೂ ಶಸ್ತ್ರಾಸ್ತ್ರಗಳೂ, ಸೈನಿಕರೂ ಸಿಗುತ್ತಲಿದ್ದಾರೆ. ಇದರ ಗುಟ್ಟು ಇನ್ನೂ ತಿಳಿದಿಲ್ಲ.

ಮುಂದಿನ ಕಾರ್ಯ:— ತಾಟಸ್ಥ್ಯ ಸಮಿತಿಯು ಸ್ಥಾಪನೆ ಮಾಡಿದಕ್ಕೆ ಸಾರ್ಥಕವೆನಿಸಬೇಕಾದರೆ ಅದರ ಪ್ರಯತ್ನದಿಂದಾದರೂ ಸ್ಪೈನಿನ ಕಲಹದ ಇತ್ತಂಡದವರಿಗೂ ಹೊರಗಿನವರಾರೂ ಸಹಾಯ ಮಾಡದಂತೆ ನೋಡಬೇಕೆಂದು ನಿರ್ಧರಿಸಲಾಯಿತು.

ಬಿಲ್ಬಾವೊ ಪಟ್ಟಣವು ದಂಗೆಗಾರರ ವಶವಾಯಿತು: ಬಹುಕಾಲದಿಂದಲೂ ದಂಗೆಗಾರರ ದಾಳಿಗೆ ಒಳಗಾಗಿದ್ದ ಬಿಲ್ಬಾವೋ ನಗರವು ಈಗ ದಂಗೆಗಾರರ ಕೈವಶವಾಯಿತು. ದೇಶ ಪ್ರಭುತ್ವದವರು ಅದರ ರಕ್ಷಣೆಗಾಗಿ ಸರ್ವಪ್ರಯತ್ನಗಳನ್ನು ಮಾಡಿದರೂ ಅವು ಸಫಲಕಾರಿಯಾಗಲಿಲ್ಲ. ಜನರಲ್ ಫ್ರೆಂಕೋವು ಬಿಲ್ಬಾವೊ ನಗರವನ್ನು ಪ್ರವೇಶಿಸಿದಾಗ, ಪಟ್ಟಣ ನಗರವಾಸಿಗಳು ದೂರದ ಗುಡ್ಡಬೆಟ್ಟಗಳಿಗೆ ಓಡಿಹೋಗಿದ್ದರು. ಚಿಕ್ಕ ಮಕ್ಕಳ ಗೋಳು ಕೇಳತೀರದು. ಅಂತೂ ನಗರ ಸಂಸ್ಥೆಗಳ ಬೀಗದ ಕೈಯು ಫ್ರೆಂಕೋವಿನ ವಶ ಕೊಡಲಾಯಿತು. ಅಳಿದುಳಿದ ಕೆಲವು ಸಂಸ್ಥೆಗಳು ದಂಗೆಕಾರರ ಧ್ವಜವನ್ನು ಹಾರಿಸಿ ಫ್ರೆಂಕೋವಿಗೆ ಸ್ವಾಗತವಿತ್ತವು.

ಜರ್ಮನ್ ನಾವೆಯ ಮೇಲೆ ಗುಂಡಿನ ಹತ್ಯಾರ— ಲಿಪ್ಜಿಗ್ ಎಂಬ ಜರ್ಮನ್ ಯುದ್ಧ ನಾವೆಯ ಮೇಲೆ ಸ್ಪೈಯಿನ್ ಸರಕಾರದ ಸಬ್ ಮೇರಿನ್ ಗಳು ಟಾರ್ಪೆಡೊ ಮೂಲಕ ಘಾತಮಾಡಿದರೆಂದು ಜರ್ಮನಿಯು ನಾನ್‌ಇಂಟರ್‌ವೆನ್ಶನ್ ಸಮಿತಿಗೆ ದೂರು ಇಟ್ಟಿರುತ್ತದೆ. ಜರ್ಮನಿಯು ಈ ಆಕ್ಷೇಪಣೆಯನ್ನು ಸ್ಪೈನ್ ಸರಕಾರದವರು ಅಲ್ಲಗಳೆದಿರುವರು. ಜರ್ಮನ್ ಪತ್ರಿಕೆಗಳು ಈ ಘಟನೆಯ ಉಗ್ರತೆಯನ್ನು ಒತ್ತಿ ಸಾರು ತ್ತಿವೆ. ಇಟಲಿ, ಫ್ರಾನ್ಸು ಮತ್ತು ಇಂಗ್ಲೆಂಡಿನ ಪ್ರತಿನಿಧಿಗಳು ಪರಿಸ್ಥಿತಿಯನ್ನು ವಿಮರ್ಶಿಸುತ್ತಲಿದ್ದಾರೆ.

ಸ್ಪೈನಿನ ದಂಗೆಗಾರರಿಗೆ ಮುಸಲೋನಿಯ ಸಂದೇಶ: ದಂಗೆಕಾರರು ಬಿಲ್ಬಾವೋ ಪ್ರಾಂತ್ಯದಲ್ಲಿ ಸರಕಾರದ ಚಕ್ರವ್ಯೂಹವನ್ನು ಭೇದಿಸಿ ಮುಂದುವರಿದು ಆ ಪ್ರಾಂತ್ಯದ ಪಟ್ಟಣ ಪ್ರದೇಶಗಳನ್ನು ವಶಮಾಡಿಕೊಂಡರು. ಈ ಕುರಿತು ಮುಸೋಲೊನಿಯು ದಂಗೆಗಾರರ ನಾಯಕನಾದ ಜನರಲ್ ಫ್ರೆಂಕೋವಿಗೆ ಒಂದು ಸಂದೇಶವನ್ನು ಕಳುಹಿಸುತ್ತಾ, ಅವರ ಯಶಸ್ಸನ್ನು ತುಂಬಾ ಶ್ಲಾಘಿಸಿರುವನು.

ಫ್ರೆಂಕೋವಿನ ಬಿಲ್ಬಾವೊ ವಿಜಯವನ್ನು ಶ್ಲಾಘಿಸಿ ಹರ್ ಹಿಟ್ಲರನೂ ದಂಗೆಗಾರರ ನಾಯಕನಿಗೆ ಒಂದು ತಂತಿ ಸಂದೇಶವನ್ನು ಕಳುಹಿಸುವನು.

ಫ್ರೆಂಚ್ ಮಂತ್ರಿಮಂಡಲದ ರಾಜಿನಾಮೆ: ಫ್ರಾನ್ಸಿನ ಪ್ರಧಾನ ಮಂತ್ರಿಗಳಾದ ಬ್ಲುಮ್ ಸಾಹೇಬರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಅವರು ಶಾಸನಸಭೆಯ ಮುಂದೆ ತಂದ ಫೈನಾನ್ಸ್ ಪವರ್ಸ್ ಬಿಲ್ಲು ೧೯೬ ವೋಟುಗಳಿಂದ ಬಿದ್ದುಹೋಯಿತು. ಈ ಬಿಲ್ಲಿನಲ್ಲಿ ಸಂಶಯಾಸ್ಪದವಾದ ಕೆಲವು ವಿಷಯಗಳಿದುವು. ದರಿಂದ ಅವುಗಳು ಪ್ರಜಾಪ್ರತಿನಿಧಿಗಳಿಗೆ ಹಿತವನ್ನುಂಟು ಮಾಡದಿರುವುದೇ ಬ್ಲುಮ್‌ರ ಸೋಲಿಗೆ ಕಾರಣವಾಯಿತು. ಅಲ್ಲಿ ಇನ್ನೂ ನವ ಮಂತ್ರಿಮಂಡಳದ ರಚನೆಯಾಗಲಿಲ್ಲ. ಸೋಶಲಿಸ್ಟ್ ಮುಖಂಡರಾದ ಚೊಟೆಂಪ್ಸರಿಗೆ ಮಂತ್ರಿ ಮಂಡಳವನ್ನು ರಚಿಸಲು ಪ್ರೆಸಿಡೆಂಟ್ ಲಿಬರ್ನರು ಕೇಳಿಕೊಂಡಿರುವರು. ಇವರು ಸ್ವಲ್ಪ ಉಗ್ರಗಾಮಿ ಪಂಗಡದವರಾಗಿರುವುದರಿಂದ ಆಶಾದಾಯಕ ಫಲಿತಾಂಶವು ತಂದುಕೊಡುವುದಿಲ್ಲವಂತೆ.

ಅಬಿಸೀನಿಯದಲ್ಲಿ ಇಟಲೀಯ ಸಾಮ್ರಾಜ್ಯ: ಅಬಿಸೀನಿಯಾದಲ್ಲಿ ಆಗಲೇ ಮಳೆಗಾಲವು ಪ್ರಾರಂಭಿಸಿರುತ್ತದೆ. ಇದರಿಂದಾಗಿ ಅಲ್ಲಿ ಕಟ್ಟಡ, ರಸ್ತೆ ಕಾರ್ಖಾನೆಗಳನ್ನು ಕಟ್ಟುವ ಕೆಲಸವು ಸದ್ಯಕ್ಕೆ ನಿಲ್ಲಿಸಬೇಕಾಗಿ ಬಂದಿದೆ. ಅಲ್ಲಿ ಭಾರೀ ಸುಧಾರಣೆಗಳನ್ನು ಮಾಡಲು ಮುಸಲೋನಿಯ ಉದ್ದೇಶವಿದೆಯಂತೆ. ಅಬಿಸೀನಿಯಾ ಯುದ್ಧಾಂತ್ಯದಲ್ಲಿ ಒಂದು ಲಕ್ಷ ಇಟಲಿಯನರು ಅಲ್ಲಿ ಮಾರ್ಗ ಕಟ್ಟುವ ಕೆಲಸವನ್ನು ಆರಂಭಿಸಿದ್ದರು. ಅವರಿಗೆ ನಿಲ್ಲಲು ಅಲ್ಲಿ ತಕ್ಕುದಾದ ಮನೆಮಠಗಳಿಲ್ಲದುದರಿಂದ ಅವರನ್ನು ಪುನಃ ಹಿಂದಕ್ಕೆ ಕರೆಯಲಾಗಿತ್ತು. ಈಗ ಅಲ್ಲಿ ಕಟ್ಟಡಗಳನ್ನು ಕಟ್ಟಿಸುವ ಕೆಲಸವು ಬಹು ರಭಸದಿಂದ ನಡೆಯುತ್ತಿದೆ. ಈಗಿನ ಯೋಜನೆ ಮೇರೆಗೆ ಕೆಲಸವು ಸಂಪೂರ್ಣವಾದರೆ, ಅಬಿಸೀನಿಯಾವು ಇಟಲಿಯ ಒಂದು ಅಪೇಕ್ಷಿತ ಸಾಮ್ರಾಜ್ಯಭಾಗವಾಗಿ ಶೋಭಿಸುವುದೆಂದು ಇಟಲಿಯ ಹೊಗಳಿಕೆ. ಅಲ್ಲಿಯ ಜನರನ್ನು ಅಭಿವೃದ್ಧಿಪಡಿಸುವರೆ ಇಟಲಿಯು ಬ್ರಿಟಿಷ ಮಾದರಿಯನ್ನು ಅನುಸರಿಸುವುದಿಲ್ಲವಂತೆ. ಇಟಲಿ ಸೈನ್ಯಭಾಗಗಳು ಕೆಲವು ಇನ್ನೂ ಕೆಲವು ಕಡೆಗಳಲ್ಲಿನ ಗಲಾಟೆಯುನ್ನಡಗಿಸುವುದರಲ್ಲಿ ಮಗ್ನರಾಗಿದ್ದಾರೆ.

ಅಬಿಸೀನಿಯಾದಲ್ಲಿ ಕೃಷಿ, ಕೈಗಾರಿಕೆಗಳ ಅಭಿವೃದ್ಧಿ ಮಾಡಲಾಗುವುದು. ಕಾಫಿ, ಹತ್ತಿ, ಚರ್ಮ ಇವುಗಳನ್ನು ಹೆಚ್ಚು ಅಳತೆಯ ಮೇಲೆ ತಯಾರಿಸಲಾಗುವುದು. ಅಲ್ಲಿನ ಖನಿಜ ಪದಾರ್ಥಗಳನ್ನು ತೆಗೆಯಲು ಆಗಲೇ ದೊಡ್ಡ ದೊಡ್ಡ ಸಂಸ್ಥೆಗಳು ಭಂಡವಾಳ ಸೇರಿಸಿರುತ್ತವೆ.

ಶ್ರೀ ಅಖಿಲಚಂದ್ರ ದತ್ತರು, ಸೆಂಟ್ರಲ್ ಅಸೆಂಬ್ಲಿಯ ಡಿಪ್ಯುಟಿ ಪ್ರೆಸಿಡೆಂಟರು. ಇವರೀಗ ಲಂಡನಿನಲ್ಲಿರುವರು. ಅಲ್ಲಿ ಕಾಂಗ್ರೆಸ್ಸಿನ ಕೇಳಿಕೆಗಳನ್ನು ವಿವರಿಸಿ ಅವುಗಳು ನ್ಯಾಯವಾದುವುಗಳೆಂದು ಹೇಳಿದರು.

LATEST

ಹಿಮಾಲಯದ ನಂಗಾಪ್ರಭಾತಿನ ಆರೋಹಣ ಕೂಟದ ೧೦ ಪ ಂದಿಗಳು ಮಡಿದಿರುವರು. ಮಡಿದವರ ಶವಗಳು ಇನ್ನೂ ಸಿಕ್ಕಿಲ್ಲ. ಜರ್ಮನಿಯಿಂದ ಇಲ್ಲಿಗೆ ಬಂದಿದ್ದ ಇವರು ಹಿಮಾಲಯ ಶಿಖರವನ್ನು ಮುಟ್ಟುವ ಸಾಹಸದಲ್ಲಿ ಯಶಸ್ವಿಗಳಾಗದಿದ್ದುದು ವಿಷಾದಕರ. ಈಗ ಜರ್ಮನಿಯಿಂದ ಇನ್ನೂ ಕೆಲವರು ಪ್ರಮುಖರು ಬರಲಿದ್ದಾರೆ ಎಂದು ತಿಳಿದುಬರುತ್ತದೆ.

ಫ್ರಾನ್ಸಿನ ನವ ಪ್ರಧಾನರಾಗಿ ಮಿ। ಚೊಟೆಂಪ್ಸ್ ನೇಮಕಹೊಂದಿರುವರು.

ಜರ್ಮನಿಯ ಲಿಪ್ಜಿಗ್ ಯುದ್ಧನಾವೆಯ ಮೇಲೆ ಹತ್ಯಾರುಮಾಡಿದ ಪ್ರಸಂಗವು ತುಂಬಾ ಉಗ್ರರೂಪಕ್ಕೆ ಬಂದಿರುತ್ತದೆ. ಜರ್ಮನಿಯನ್ನು ಶಾಂತಪಡಿಸಲೋಡಿದ ಇಂಗ್ಲೆಂಡ್ ಮತ್ತು ಫ್ರಾನ್ಸಿನ ಪ್ರಯತ್ನಗಳು ಪ್ರಯೋಜನಕಾರಿಯಾಗಿಲ್ಲವೆಂದು ತಿಳಿದುಬರುತ್ತದೆ.

ರಷ್ಯನ್ ವೈಮಾನಿಕರ ವಿಜಯ— ಭೂಗೋಲದ ಉತ್ತರ ಧ್ರುವದ ಮೇಲ್ಭಾಗದಿಂದ ಹಾರಲು ಪ್ರಯತ್ನಪಟ್ಟ ಮೂರು ಮಂದಿ ರಷ್ಯನ್ ವೈಮಾನಿಕರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿರುವರು. ಕಳೆದ ಶುಕ್ರವಾರ ಮಧ್ಯಾಹ್ನ ಅವರು ಮೊಸ್ಕೋ ನಗರದಿಂದ ಹಾರಿದವರು, ಉತ್ತರಧ್ರುವವನ್ನು ದಾಟಿ ಉತ್ತರ ಅಮೇರಿಕದ ವೆನ್‌ಕೂವರ್ ದ್ವೀಪದಲ್ಲಿ ಬಂದಿಳಿದರು. ಉತ್ತರ ಧ್ರುವವನ್ನು ದಾಟಿ ಹೋಗುವ ಒಂದು ವಿಮಾನಮಾರ್ಗವನ್ನು ಕಂಡುಹಿಡಿಯುವುದೇ ಅವರ ಉದ್ದೇಶವಿದೆ.

(೧೧ನೇ ಪುಟದಿಂದ ಮುಂದುವರಿದುದು)

ಭಿಪ್ರಾಯವು ಬಂದಾಗ ಗವರ್ನರರು ಮಂತ್ರಿಗಳ ಸೂಚನೆಗಳಿಗೆ ವಿರೋಧವಾಗಿ ನಡೆಯುವುದಾದರೆ, ಮಂತ್ರಿಗಳಿಗೆ ಆ ವಿಷಯದಲ್ಲಿ ಯಾವ ಜವಾಬ್ದಾರಿಯೂ ಇಲ್ಲ. ಗವರ್ನರರು ಪಾರ್ಲಿಮೆಂಟಿಗೆ ತಕ್ಕ ಜವಾಬುಕೊಡಬೇಕಾಗುತ್ತದೆ. ಈ ಸಮಯದಲ್ಲಿ ಇತ್ತಂಡದವರೂ ಸಮಸ್ಯೆಗಳನ್ನು ಚೆನ್ನಾಗಿ ಪರ್ಯಾಲೋಚಿಸಿದ ಮೇಲೆ ಗವರ್ನರರು ತಮ್ಮ ಅಭಿಪ್ರಾಯವನ್ನು ತನ್ನ ಶಕ್ತಿಯಿದ್ದಷ್ಟು ತಿಳಿಸುವ ಪ್ರಯತ್ನಪಟ್ಟ ಮೇಲೆ ಇನ್ನೂ ಮಂತ್ರಿಗಳು ಯಾವ ತಿಳುವಳಿಕೆಗೆ ಬಾರದಿದ್ದಲ್ಲಿ, ಗವರ್ನರರಿಗೆ ಸಮಸ್ಯೆಯನ್ನು ನಿವಾರಿಸಲು ಬೇರೆ ದಾರಿಯೇ ಇಲ್ಲವೆಂದಾಗ ಅವರು ತಮ್ಮ ವೈಯಕ್ತಿಕ ತೀರ್ಮಾನ್ನೇ ಜ್ಯಾರಿಗೆ ತರಬೇಕಾದಾಗ ಮಂತ್ರಿಗಳು ಗವರ್ನರರ ಆ ಧೋರಣೆಗೆ ಒಪ್ಪದೆಯಿದ್ದಲ್ಲಿ, ಅವರು ಒಂದೋ ರಾಜಿನಾಮೆ ಕೊಡಬೇಕು ಇಲ್ಲವೇ ಅವರು ಡಿಸ್‌ಮಿಸ್ ಮಾಡಲ್ಪಡಬೇಕು. ಆದರೆ ರಾಜಿನಾಮೆ ಕೊಡುವುದು ಮಂತ್ರಿಗಳಾದವರ ಸ್ವಗೌರವಕ್ಕೆ ತಕ್ಕುದಾದುದು. ಮಂತ್ರಿಗಳನ್ನು ಡಿಸ್‌ಮಿಸ್ ಮಾಡಲ್ಪಡುವುದೆಂದರೆ ಅದು ಮಂತ್ರಿಗಳ ಸ್ವಗೌರವಕ್ಕೆ ಕುಂದಕವನ್ನು ಉಂಟುಮಾಡಬಹುದು. ಮಂತ್ರಿಗಳೊಡನೆ ರಾಜಿನಾಮೆ ಕೊಡುವರೆ ಗವರ್ನರರು ಕೇಳಬೇಕು ಎಂದು ಕೆಲವರು ಸೂಚಿಸಿರುವರು. ಇದು ಇಂಡಿಯಾ ಆಕ್ಟಿನ ಮೇರೆಗೆ ಸಾಧ್ಯವಿಲ್ಲ. ರಾಜಿನಾಮೆ ಕೊಡುವುದಾಗಲೀ, ಡಿಸ್‌ಮಿಸ್ ಮಾಡುವುದಾಗಲೀ ಎರಡೂ ಸಾಧ್ಯವಾದ ಮಾರ್ಗಗಳು. ರಾಜಿನಾಮೆ ಕೊಡುವುದು ಮಂತ್ರಿಗಳಿಗೆ ಸೇರಿದುದು, ಡಿಸ್‌ಮಿಸ್ ಮಾಡುವುದು ಗವರ್ನರರಿಗೆ ಸೇರಿದ್ದು. ಈ ವಿಷಯಗಳು ಕಠಿಣವಾದ ಸಮಸ್ಯೆಗಳಲ್ಲಿ ಮಾತ್ರ ಜ್ಯಾರಿಗೆ ಬರುವಂಥವುಗಳು, ಆದರೆ ಅಂತಹ ಕಠಿಣ ಸಮಸ್ಯೆಗಳು ಸಾಧಾರಣ ಸಂದರ್ಭಗಳಲ್ಲಿ ಬರುವುದಿಲ್ಲವೆಂದು ನಾನು ತಿಳಿದಿದ್ದೇನೆ. ಗವರ್ನರರು ತಮ್ಮ ಮಂತ್ರಿಗಳೊಳಗೆ ಭೇದಾಭಿಪ್ರಾಯ ಬಾರದಂತೆ ಸಕಲ ಪ್ರಯತ್ನಗಳನ್ನು ಮಾಡುವರೆಂದು ನಾನು ಅವರ ಕಡೆಯಿಂದ ಭರವಸೆಯೀಯುತ್ತೇನೆ.

ಅಲ್ಪ ಸಂಖ್ಯಾತ ಹಿತಗಳಿಗೆ ತೊಡಕು ಮಾಡುವುದು ಹೆಡ್ಡತನ

ಪ್ರಾಂತ್ಯಗಳಲ್ಲಿನ ಬಹು ಸಂಖ್ಯಾಕ ಪಂಗಡದ ಮಂತ್ರಿಗಳು ಕೂಡಾ ಅಲ್ಪ ಸಂಖ್ಯಾತರ ಹಿತಗಳಿಗೆ ಅಡ್ಡಿಯನ್ನುಂಟುಮಾಡುವುದು ಹೆಡ್ಡತನವೆಂದೂ, ಹಾಗೆ ಯಾರೂ ಮಾಡಬಯಸುವುದಿಲ್ಲವೆಂದು ಬಹಿರಂಗವಾಗಿ ಹೇಳಿದ ಮೇಲೆ ಗವರ್ನರ ಮತ್ತು ಮಂತ್ರಿಗಳೊಳಗೆ ಭೇದಾಭಿಪ್ರಾಯ ಬರುವ ಯಾವ ಕಾರಣವೂ ಇರುವುದಿಲ್ಲ. ಕೆಲವು ನಿರ್ದಿಷ್ಟ ವಿಷಯಗಳನ್ನು ಬಿಟ್ಟರೆ ಎಲ್ಲಾ ಜವಾಬುದಾರಿಯು ಮಂತ್ರಿಗಳ ಮೇಲೆಯೇ ಹೊಂದಿಕೊಂಡಿರುತ್ತದೆ. ಗವರ್ನರರ ಮಂತ್ರಿಗಳ ಸೂಚನೆ ಮೇರೆಗೇನೇ ನಡಕೊಳ್ಳಬೇಕು. ಗವರ್ನರರು ಪದೇ ಪದೇ ಮಂತ್ರಿಗಳ ಕೆಲಸಗಳಲ್ಲಿ ಅಡ್ಡಿಬರುವ ಅಧಿಕಾರವುಳ್ಳವರಾಗಿದ್ದಾರೆ ಎಂಬ ಭಾವನೆಗೆ ಯಾವ ಆಧಾರವೂ ಇಲ್ಲ. ಗವರ್ನರರು ತಮ್ಮ ವಿಶೇಷಾಧಿಕಾರಕ್ಕೆ ಸಂಬಂಧಪಟ್ಟ ಯಾವ ತೀರ್ಮಾನವನ್ನಾದರೂ ಕೈಕೊಳ್ಳಬೇಕಾದರೆ ಅವರು ತಮ್ಮ ಮಂತ್ರಿಗಳಿಗೆ ಆ ತೀರ್ಮಾನವನ್ನು ಮನಗಾಣುವಂತೆ ತಿಳಿಸಲು ಶತಪ್ರಯತ್ನ ಮಾಡುವವರಾಗುತ್ತಾರೆ. ಇದೇ ವಿಷಯದಲ್ಲಿ ಅವರು (ಗವರ್ನರರು) ಮಂತ್ರಿಗಳ ಸೂಚನೆಗಳನ್ನೂ ಸರಿಯಾಗಿ ತಿಳಕೊಳ್ಳಲು ಪ್ರಯತ್ನ ಮಾಡುವರು. ಇಂತಹ ವಿಷಯಗಳಲ್ಲಿ ಗವರ್ನರರು ಮಂತ್ರಿಗಳೊಳಗೆ ಭೇದಾಭಿಪ್ರಾಯ ಹುಟ್ಟದಂತೆ ಸಕಲ ಪ್ರಯತ್ನಗಳನ್ನು ಮಾಡುವವರಾಗುವರೆಂದು ನಾನು ಸಾರ್ವಭೌಮ ಸರಕಾರದ ಪ್ರತಿನಿಧಿಯಾಗಿ ಗವರ್ನರರ ಕಡೆಯಿಂದ ಭರವಸೆಗಳನ್ನು ಕೊಡುತ್ತೇನೆ.

ಗವರ್ನರರ ಭರವಸೆ

ಯಾವುದೇ ತರದ ಭರವಸೆಗಳನ್ನು ಕೊಡುವುದರಿಂದಾಗಲೀ ಅಥವಾ ಕರಾರು ಮಾಡಿಕೊಳ್ಳುವುದರಿಂದಾಗಲೀ ನಮ್ಮ ಉದ್ದೇಶಗಳು ಪೂರ್ತಿಯಾಗವು. ಒಂದು ಚಿಕ್ಕ ವಿಶಯದಲ್ಲಿ ಮಂತ್ರಿ ಗವರ್ನರರೊಳಗೆ ಭೇದ ಬಂದಾಗ ಒಪ್ಪಂದ ಮಾಡಿಕೊಂಡ ಪ್ರಕಾರ ಅವರು ದೂರವಾಗಬೇಕಾಗುವುದು. ಇಲ್ಲಿ ಪರಸ್ಪರ ತಿಳುವಳಿಕೆ, ಸ್ನೇಹ ಭಾವಗಳಿಗೆ ಎಡೆಯಿರುವುದಿಲ್ಲ. ತಿಳುವಳಿಕೆ ಮೈತ್ರಿಯಿಂದಾಗ ದೊಡ್ಡ ದೊಡ್ಡ ವಿಷಯಗಳನ್ನೂ ಕಠಿಣ ಸಮಸ್ಯೆಗಳನ್ನೂ ಪರಿಹರಿಸಿಕೊಳ್ಳಬಹುದು. ಗವರ್ನರರಿಂದ ಮಂತ್ರಿಗಳಿಗಾಗುವ ಅಡ್ಡಿಯಿಂದಲ್ಲೂ ಅದರ ಪರಿಣಾಮವಾಗಿ ಆಗುವ ಅಡಳಿತೆ ತೊಂದರೆಗಳಿಂದಲೂ ತುಂಬಾ ವಿಶಾಧಕರ ಪರಿಸ್ಥಿತಿಯುಂಟಾಗುತ್ತದೆ. ಪಾರ್ಲಿಮೆಂಟು ಇಂತಹ ಪರಿಸ್ಥಿತಿಗಳಿಗೆ ಶಾಸನದಲ್ಲಿ ಕಾನೂನುಗಳನ್ನು ರಚಿಸಿರುವುದಾದರೂ, ಅಂತಹ ಘಟನೆಗಳು ಬರಬೇಕೆಂದು ಪಾರ್ಲಿಮೆಂಟು ಎಂದಿಗೂ ಆಶಿಸುವುದಿಲ್ಲ. ಆದುದರಿಂದ ಗವರ್ನರರು ಇಂತಹ ಘಟನೆಗಳನ್ನು ಸದಾ ತಪ್ಪಿಸುವ ಪ್ರಯತ್ನದಲ್ಲಿ ಉದ್ದೇಶವಿಟ್ಟುಕೊಂಡಿರಬೇಕು. ಈ ನವರಾಜ ಶಾಸನವು ಪರಿಪೂರ್ಣ ಜವಾಬುದಾರಿ ಆಡಳಿತವನ್ನು ಕೊಡುವುದಿಲ್ಲವೆಂದು ಅನೇಕರು ಭಾವಿಸಿರುವರು. ಆ ಭಾವನೆಯು ಶ್ಲಾಘನೀಯವಿದೆ ಆದರೂ ದೇಶದ ಹಿತವುಳ್ಳ ಪ್ರತಿ ಒಬ್ಬರಿಗೂ ನಾನು ವಿನಂತಿಸಿಕೊಳ್ಳುವುದೇನೆಂದರೆ ದೇಶಹಿತದ ದೃಷ್ಟಿಯಿಂದ ಎಲ್ಲರೂ ಸಹಕಾರ ಕೊಟ್ಟು ಈ ನವರಾಜ ಶಾಸನವು ಸರಿಯಾಗಿ ಮುನ್ನಡೆಯುವಂತೆ ಪ್ರಯತ್ನಪಡಬೇಕಾಗಿಯೂ ನಮ್ಮ ಹಾರೈಕೆಗಳನ್ನು ಪೂರ್ತಿಗೊಳಿಸಬೇಕಾಗಿಯೂ ಹೃತ್ಪೂರ್ವಕವಾಗಿ ಕೋರುತ್ತೇನೆ. ಯಾವ ನಿರಾಶೆಗಳೇ ಬರಲಿ ಅವುಗಳನ್ನು ಪರಿಹರಿಸಲು ನನ್ನ ಶಕ್ತಿ ಮೀರಿ ಪ್ರಯತ್ನ ಪಡುವೆನೆಂದು ಭರವಸೆ ಕೊಡುತ್ತೇನೆ. ಆದುದರಿಂದ ಮುಖಂಡರಾದವರು ರಚನಾತ್ಮಕ ಕಾರ್ಯಕ್ರಮವನ್ನು ಅನುಸರಿಸುವುದು ಭಾರತ ಹಿತಕ್ಕೆ ಒಳಿತೆಂದು ತಿಳಿಕೊಂಡು ಸಹಕಾರ ಸಹಾನುಭೂತಿಯಿಂದ ಕೆಲಸ ಮಾಡುವರೆಂದೇ ನನ್ನ ಹೃತ್ಪೂರ್ವಕ ಕಾಂಕ್ಷೆ.

ಜೆಕೊಸ್ಲೊವಾಕಿಯಾ ಈಗ ಫ್ರಾನ್ಸಿನ ಪಕ್ಷವನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿರುತ್ತದೆಂದೂ ಒಂದು ವಾರ್ತೆ. ಸ್ಪೈನ್ ಸರಕಾರದ ಒಂದು ರೇವು ಪಟ್ಟಣವನ್ನು ಮುತ್ತಿಗೆ ಹಾಕುವುದೇ ಈ ಪ್ರತೀಕಾರದ ಉದ್ದೇಶ. ಈ ಉದ್ದೇಶದಲ್ಲಿ ಜರ್ಮನಿಗೆ ಇಟಲಿಯ ಸಹಾಯವಿದೆಯಂತೆ.

ನೋಟೀಸು

ಪುತ್ತೂರು ಡಿ ಮುನ್ಸೀಫ ಕೋರ್ಟಿನಲ್ಲಿ.

ಕ್ರಮ ನಂಬ್ರ 84/1937

ಕುರಿಯ ಕೃಷ್ಣಭಟ್ಟ ವಾದಿ

ಕೇಶವ ಭಟ್ಟ ಕೂಡಾ ಪ್ರತಿವಾದಿಗಳು

1ನೇ ಪ್ರತಿವಾದಿ ಕೇಶವ ಭಟ್ಟ ಮುಂಡ್ಯಾರು ತಿಮ್ಮಣ್ಣ ಭಟ್ಟರ ಮಗ ಕನ್ನಾನ ಗ್ರಾಮ, ಹಾಲಿ ಉತ್ತರ ಕನ್ನಡ ಜಿಲ್ಲಾ ಹೊನ್ನಾವರ ತಾಲೂಕು ಸಂಕೊಳ್ಳಿ ಜರಗದ್ದೆ ಎಂಬಲ್ಲಿ. 6ನೇ ಪ್ರತಿವಾದಿ ಗಣಪತಿ ಭಟ್ಟ, ತಿಮ್ಮಣ್ಣ ಭಟ್ಟರ ಮಗ, ಕಾಸರಗೋಡು ತಾಲೂಕು ಬಾಕೂರು ಗ್ರಾಮದ ಸ್ವರಾಂತಕೂರು—ಇವರಿಗೆ—

ವಾದಿಗೆ ಬರಬೇಕಾದ ಅಸಲು ಬಡ್ಡಿ ವಸೂಲು ಬಗ್ಗೆ ಕೂಡಾ ಮಾಡಿದ ಮೇಲ್ಕಂಡ ದಾವೆಯು ತಾರೀಕು 2-7-1937ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ, ಸದ್ರಿ ಮುನ್ಸೀಫ್ ಕೋರ್ಟಿನ ಮುಂದೆ ಹಾಜರಾಗಿ ಉಜುರುಪಡಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ನಂಬ್ರ ತೀರ್ಮಾನಿಸಲ್ಪಡುವುದೆಂತಲೂ ಈ ಮೂಲಕ ತಿಳಿಯಪಡಿಸಲಾಗಿದೆ.

ಪುತ್ತೂರು, 24-6-'37

B. Chidananda Rao, Pleader for Plaintiff

ಹಿಂದೂದೇಶದ ವಾರ್ತೆಗಳು.

ಲಾರ್ಡ್ ಬೇಡನ್ ಪವೆಲ್ಲರು ಭಾರತದ ವಿಷಯ ನಿಂದಾಸ್ಪದ ಮಾತುಗಳನ್ನೊಳಗೊಂಡ ಅಭಿಪ್ರಾಯವನ್ನು ಸೂಚಿಸಿದುದನ್ನು ಖಂಡಿಸಿ ಧಾರವಾಡದ ಮ್ಯುನಿಸಿಪಾಲಿಟಿಯವರು ಒಂದು ಠರಾವನ್ನು ಪಾಸ್ ಮಾಡುತ್ತಾ ಪೊವೆಲ್ಲರು ತಮ್ಮ ಮಾತುಗಳನ್ನು ಹಿಂದಕ್ಕೆ ತಗೆದುಕೊಳ್ಳದಿದ್ದರೆ ಸ್ಕೌಟ್ ಚಳವಳಕ್ಕೆ ಯಾರೂ ಸೇರಕೂಡದೆಂದು ನಿರ್ಧರಿಸಿದರು.

ಲಾಹೋರ್ ಮ್ಯುನಿಸಿಪಾಲಿಟಿಯ ಆಡಳಿತೆಯವರು ಮನೆಕಂದಾಯವನ್ನು ಹೆಚ್ಚಿಸಿದುದನ್ನು ಪ್ರತಿಭಟಿಸುವುದಕೋಸ್ಕರ ಲಾಹೋರ್ ನಗರವಾಸಿಗಳು ಅರ್ಧ ದಿನದ ಹರತಾಳವನ್ನು ಆಚರಿಸಿದರು

ಪವಿತ್ರ ಗ್ರಂಥವಾದ ಕುರಾನಿಗೆ ಅಗೌರವವನ್ನು ತೋರಿಸಿದನೆಂಬ ಅಪವಾದದ ಮೇಲೆ ಪೂಂಚ್ ಎಂಬ ದೇಶಿ ಸಂಸ್ಥಾನದ ಒಬ್ಬ ಜೈಲ್ ಸುಪರಿಂಟೆಂಡೆಂಟನಿಗೆ ಸಸ್‌ಪೆಂಡ್ ಮಾಡಲಾಗಿದೆ. ಇವನು ಸಿಖ್ ಮತದವನಿರುತ್ತಾನೆಂದು ತಿಳಿದಿರುತ್ತದೆ.

ಕಾಶ್ಮೀರದ ರಾಜಧಾನಿಯಾದ ಶ್ರೀನಗರದಲ್ಲಿ ಒಂದು ಚಿಕ್ಕ ಗಲಾಟೆಯಾಯಿತು ಸ್ಥಳೀಯ ಪತ್ರಿಕೆಯೊಂದರಲ್ಲಿ "ಮುಸಲ್ಮಾನರು ಮಹಮ್ಮದ್ ಪೈಗಂಬರರನ್ನು ಹೇಗೆ ಗೌರವಿಸುವರೋ ಅಷ್ಟೆ ಗೌರವದಿಂದ ಹಿಂದೂಗಳು ಗೋವುಗಳನ್ನು ಪೂಜಿಸುತ್ತಾರೆ" ಹೀಗೆಂದು ಬರೆದವರ ಮೇಲೆ ಅಲ್ಲಿಯ ಮುಸಲ್ಮಾನರಲ್ಲಿ ಆಗ್ರಹವನ್ನುಂಟು ಮಾಡಿತು ಒಂದು ಮೆರವಣಿಗೆಯನ್ನೇರ್ಪಡಿಸಿ ಮುಸಲ್ಮಾನರು ಆ ಪತ್ರಿಕೆಯ ಸಂಪಾದಕನನ್ನು ಖಂಡಿಸಿ ಹಾಡುಗಳನ್ನಾಡುತ್ತಾ ಪಟ್ಟಣದಲ್ಲಿ ಮೆರವಣಿಗೆ ಮಾಡಿದರು. ಈ ಮಧ್ಯೆ ಒಬ್ಬ ಸಿಖ್ಖನಿಗೂ ಮುಸಲ್ಮಾನನಿಗೂ ವಾಗ್ವಾದವುಂಟಾಗಿ ಇರ್ವರೂ ಹೊಡೆದಾಡಿದರು ಗಲಾಟೆಯು ವಿಪರೀತಕ್ಕೆ ಮುಟ್ಟಿತು. ಕಲ್ಲು ಎಸೆಯಾಟವು ಪ್ರಾರಂಭವಾಯಿತು ಸಕಾಲದಲ್ಲಿ ಪೋಲಿಸರ ಆಗಮನವು ಪರಿಸ್ಥಿತಿಯನ್ನು ಶಾಂತಗೊಳಿಸಿತು ಮುಸಲ್ಮಾನರು ಆ ಮೇಲೆ ಜುಮ್ಮಾ ಮಸೀದಿಗೆ ತೆರಳಿ ಮಧ್ಯ ರಾತ್ರಿಯ ವರೇಗೆ ಸಭೆ ಏರ್ಪಡಿಸಿದರು. ಆ ಮೇಲೆ ಹೆಚ್ಚು ಗಲಾಟೆ ಏನೂ ನಡೆಯಲಿಲ್ಲ

ಕಳೆದ ತಾ ೧೪ರಲ್ಲಿ ಲಕ್ನೋ ಪ್ರಾಂತ್ಯದಲ್ಲಿ ಬಿರುಗಾಳಿಯ ಪ್ರಭಾವವು ಬಿರುಸಾಗಿತ್ತು. ಪರಿಣಾಮವಾಗಿ ಅನೇಕ ಮರಗಳು ತಂತಿ ಕಂಭಗಳೂ ನೆಲಕ್ಕುರುಳಿರುತ್ತವೆ ಒಂದು ಮನೆಯಲ್ಲಿ ಮಲಗಿದ್ದ ಹೆಂಗುಸಿನ ಮೇಲೆ ಹತ್ತಿರದ ಮರವೊಂದು ಬಿದ್ದು ಅವಳು ಮಡಿದಳು ಅವಳ ಜೊತೆಯಲ್ಲಿ ಮಲಗಿದ್ದ ಮಗುವಿಗೂ ಪೆಟ್ಟಾಗಿರುವುದಂತೆ

ಪಂಜಾಬಿನ ಗುಜ್ರತ್ ಎಂಬೊಂದು ಕಡೆಯಲ್ಲಿ ಸಿಖ್ ಮತಸ್ಥರ ಒಂದು ಹಬ್ಬ ಸಮಾರಂಭವು ಕೂಡಲಿಕ್ಕಿತು ಅದಕ್ಕಾಗಿ ಅನೇಕ ಸಿಖ್‌ರು ಹತ್ತಿರದ ಹಳ್ಳಿಹಳ್ಳಿಗಳಿಂದ ಆ ಸ್ಥಳಕ್ಕೆ ಹೋಗುವವರಾದರು. ಆಲಾ ಎಂಬ ಸ್ಥಳದಲ್ಲಿ ಈ ಹಬ್ಬವು ನಡೆಯಲೇರ್ಪಟ್ಟಿತ್ತು. ಹುರಿಯಾ ಎಂಬ ರೈಲ್ವೆ ಸ್ಟೇಶನಿನಲ್ಲಿ ಸಿಖ್ಖರು ರೈಲು ಬಂಡಿಯನ್ನು ಕಾಯುತ್ತಲಿದ್ದಾಗ ಸುಸಜ್ಜಿತ ನೂರೈವತ್ತು ಮುಸ್ಲಿಮರು ಲಾಥಿ ಕತ್ತಿಗಳಿಂದ ಸಿಖ್‌ರ ಮೇಲೆ ಬಿದ್ದರು. ಪರಿಣಾಮವಾಗಿ ನಾಲ್ವರಿಗೆ ಕಠಿಣ ಜಖಂ ಆಗಿದೆ. ಕೂಡಲೇ ಗುಜ್ರತ್‌ನ ಪೋಲಿಸ್ ಸುಪರಿಂಟೆಂಡೆಂಟರಿಗೆ ತಂತಿ ಕಳುಹಿಸಲಾಯಿತು. ಪೋಲಿಸ್ ಪಡೆಯೊಂದಿಗೆ ಅವರು ಗಲಾಟೆ ಸ್ಥಳಕ್ಕೆ ಬಂದರು ಗಲಾಟೆಯು ಸದಕ್ಕೆ ಶಾಂತವಾಗಿದೆ

ಕಳೆದ ತಾ. ೨೦ರ ಪ್ರಾತಃಕಾಲದಿಂದ ಅನಿರೀಕ್ಷಿತವಾಗಿ ಬಂದ ಮಳೆಯಿಂದ ಬೊಂಬಾಯಲ್ಲಿ ತುಂಬಾ ಅನಾಹುತವುಂಟಾಗಿದೆ. ಮಳೆಯ ರಭಸವು ವಿಪರೀತವಿತ್ತು. ರೈಲು, ಟ್ರೇಂ ಮೋಟಾರು ವಾಹನಗಳ ಚಲಾವಣೆಯು ಅಸಾಧ್ಯವಾಯಿತು. ಮಳೆಗೆ ಸಿಕ್ಕಿಬಿದ್ದ ಇಬ್ಬರು ಚಳಿ ಹಿಡಿದು ಮೃತಪಟ್ಟಿರುವರು ಒಂದು ಮನೆಯು ಕುಸಿದುಬಿದ್ದು ಇನ್ನೊಬ್ಬನು ಮಡಿದಿರುವನು. ಹೀಗೆ ಮೂರು ಮಂದಿಗಳ ಮರಣವಾಗಿದೆ.

ಅಮೃತಸಾರಿನ ಸಿಖ್ ಮುಸ್ಲಿಮರೊಳಗಿನ ಗಲಾಟೆಯು ಶಾಂತವಾಗಿದೆ ಪೋಲೀಸಿನವರ ಬಿರುಸಾದ ಉಸ್ತುವಾರಿ ಇದೆ ಈ ಮಧ್ಯೆ ಒಂದು ಚಿಕ್ಕ ಘಟನೆಯು ನಡೆಯಿತು. ಒಬ್ಬ ಸಿಖ್ ತರುಣನು ಕುದುರೆಗಾಡಿಯನ್ನು ಓಡಿಸುತ್ತಿದ್ದನು. ಕುದುರೆಯು ಹತೋಟಿ ತಪ್ಪಿ ಸಿಕ್ಕಾಬಟ್ಟೆ ಓಡತೊಡಗಿತು ಮಾರ್ಗದಲ್ಲಿದ್ದ ಮೂವರು ಮುಸ್ಲಿಂ ಮಕ್ಕಳ ಮೇಲೆ ಚಕ್ರವು ಹೋಗಿ ಎರಡು ಹುಡುಗರು ಸತ್ತರು, ಒಬ್ಬ ಹುಡುಗಿಯು ಅಸ್ಪತ್ರೆಯಲ್ಲಿದ್ದಾಳೆ. ಗಾಡಿ ತರುಣನನ್ನು ಕೈದುಮಾಡಲಾಗಿದೆ

ನಾಯಿಗೆ ಬಿಡುಗಡೆಯಾಯಿತು.

ಅಮೇರಿಕದ ನ್ಯೂಯಾರ್ಕ್ ಪ್ರಾಂತ್ಯದ ಒಂದು ಹಳ್ಳಿಯ ಕೋರ್ಟಿನಲ್ಲಿ ಒಂದು ದಿನ ಒಂದು ನಾಯಿಯು ಎಳೆ ತರಲ್ಪಟ್ಟಿತು ೯ ವರ್ಷದ ಒಬ್ಬ ಹುಡುಗನು ಪ್ರತಿವಾದಿ ಅವನಿಗೆ ಆ ನಾಯಿಯು ಕಚ್ಚಿ ಘಾಯ ಮಾಡಿತ್ತಂತೆ ಹಳ್ಳಿಯ ಕೋರ್ಟಿನಲ್ಲಿ ಅದರ ವಿಚಾರಣೆ ವಿಚಾರಣೆಯಾಗುತ್ತಿದ್ದ ಹಾಗೆ ನಾಯಿಯು ಬಾಯಿ ತೆರೆದು ನಾಲಿಗೆಯನ್ನು ಹೊರಗೆ ಜೋಲು ಬಿಟ್ಟು ಬಹು ನಮ್ರತೆಯಿಂದ ಕೋರ್ಟಿನ ವಕೀಲರನ್ನು ನೋಡುತಿತ್ತು ಈ ಭಾವದಲ್ಲಿ ಅದು ನಗುವಂತೆ ಕಂಡು ಬರುತ್ತಿತ್ತಂತೆ ನ್ಯಾಯಾಧೀಶರಿಗೆ ನಾಯಿಯು ಹುಡುಗನನ್ನು ಕಚ್ಚಿದಕ್ಕೆ ಪಶ್ಚಾತಾಪಪಟ್ಟುಕೊಳ್ಳುವಂತೆ ಕಂಡಿತು. ಎದುರು ವಾದಿ ಹುಡುಗನು ಅಳುತ್ತಲಿದ್ದು ಆ ನಾಯಿಯು ನಿಜವಾಗಿಯೂ ತನ್ನನ್ನು ಕಚ್ಚಿತ್ತೆಂದು ಹಲವು ಬಾರಿ ಹೇಳಿದನು ನ್ಯಾಯಾಧೀಶರು ನಾಯಿಯನ್ನು ನಿರಪರಾಧಿ ಎಂದು ಬಿಟ್ಟರು ವ್ಯವಹರಣೆಯನ್ನು ನೋಡ ಬಂದ ೪೦೦ ಮಂದಿ ಹಳ್ಳಿಗರು ನಾಯಿಯ ಬೆನ್ನು ಚಪ್ಪರಿಸಿದಾಗ ಅದು ಎಲ್ಲರ ಕಾಲುಗಳಿಗೂ ಮುತ್ತಿಟ್ಟಿತಂತೆ

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟ ರಸ್ತೆ ಮಾರ್ಜಿನ ಪ ಸದ್ರಿ ಬೋರ್ಡಿನವರ ಅಧಿಕಾರಕ್ಕೆ ಒಳಪಟ್ಟ ಇತರ ಸ್ಥಳಗಳಲ್ಲಿ ಇರುವ ಸಕಲ ಧೂಪದ ಫಲಗಳನ್ನು ತೆಗೆಯುವ ಸಂಪೂರ್ಣ ಹಕ್ಕುಗಳನ್ನು ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್, ಕಂಪೆನಿಯವರು ೧೯೩೭-೩೮ನೇ ವರ್ಷಕ್ಕೆ ಪ ತದನಂತರ ಮೂರು ವರ್ಷಗಳ ಪರಿಯಂತರ ಶರ್ತಕ್ಕೆ ಒಳಪಟ್ಟು ಪಡಕೊಂಡಿರುತ್ತಾರೆ ಆ ಕಾರಣ ಸದ್ರಿ ಕಂಪೆನಿಯವರ ಬರಹ ಮೂಲಕ ಅನುಮತಿ ವಿನಹ ಧೂಪದ ಫಲಗಳನ್ನು ತೆಗೆಯಕೂಡದು ಇದಕ್ಕೆ ವಿರೋಧವಾಗಿ ತೆಗೆದ್ದಲ್ಲಿ ತಕ್ಷೀರು ಆಗುತ್ತದೆ. ತಿಳಿದಿರಲಿ. ಇತರ ಮಾಹಿತಿ ಬಗ್ಗೆ—ಮೆನೇಜರ್, ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್, ಕಲ್ಯಾಣಪುರ—ಇವರಿಗೆ ಬರೆದುಕೊಳ್ಳತಕ್ಕದ್ದು

(*Sd*) **H. Bhasker Kamath**, B A
Kalyanpur, MANAGER.
20-6-'37.

ಇಂಗ್ಲಾಂಡಿನಲ್ಲಿ ಶಿಶುಹತ್ಯೆಗಳು.

ಇಂಗ್ಲೆಂಡಿನ ಆರೋಗ್ಯ ಖಾ... ಪ್ರಕಟಿಸಿರುವ ಒಂದು ವರದಿಯ ಪ್ರಕಾರ ಅಲ್ಲಿ ಶಿಶುಹತ್ಯೆಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿದೆ ಎಂದು ತಿಳಿದುಬರುತ್ತದೆ. ಶಿಶುಗಳು ಹುಟ್ಟುವ ಮೊದಲೇ ಕೊಲ್ಲಲ್ಪಡುವವು. ಇದರ ಪರಿಣಾಮವಾಗಿ ಮದುವೆಯಾದ ಹೆಂಗುಸರು ಹೆಚ್ಚು ಸಂಖ್ಯೆಯಲ್ಲಿ ಮಡಿಯುತ್ತಾರೆ ಆ ವರದಿಯಲ್ಲಿ ಹೀಗೆ ಬರೆಯುತ್ತದೆ. "ಇಂಗ್ಲೆಂಡಿನಲ್ಲಾಗುತ್ತಿರುವ ಈ ಶಿಶುಹತ್ಯದ ಕಾರ್ಯಗಳು ದಿನೇ ದಿನೇ ಹೆಚ್ಚುತ್ತಲಿವೆ. ಎಲ್ಲಾ ಸಮಾಜದ ಹೆಂಗಸರಿಂದಲೂ ಈ ದುಷ್ಕೃತ್ಯವು ನಡಿಸಲ್ಪಡುತ್ತದೆ ಗರ್ಭದಲ್ಲಿನ ಶಿಶುವನ್ನು ಅಸ್ವಾಭಾವಿಕವಾಗಿ ಸಾಯಿಸುವುದು ದೇಹಕ್ಕೆ ತುಂಬಾ ಕೆಡುಕು. ಇಂಗ್ಲೆಂಡಿನಲ್ಲಿ ಸಾಯುವ ಮಹಿಳೆಯರಲ್ಲಿ ಶೇಕಡಾ ೧೪ರಷ್ಟು ಮಂದಿಗಳು ಈ ದುಷ್ಕೃತ್ಯದಿಂದಾಗಿ ಆಗುವ ಕೆಡುಕಿನಿಂದಾಗಿರುತ್ತದೆ ಅವಿವಾಹಿತ ತರುಣಿಯರಿಗಿಂತಲೂ ವಿವಾಹವಾದ ಹೆಂಗುಸರೇ ಹೆಚ್ಚಾಗಿ ಈ ಕೆಟ್ಟ ಅಭ್ಯಾಸವನ್ನು ಕೈಕೊಂಡಿರುತ್ತಾರೆಂದು ತಿಳಿದು ಬರುತ್ತದೆ ಈ ದುಷ್ಕೃತ್ಯದ ಪರಿಣಾಮಗಳ ಕೆಡುಕನ್ನು ಇಲ್ಲಿನ ಸ್ತ್ರೀಯರು ಚೆನ್ನಾಗಿ ಮನಗೊಂಡಂತೆ ಕಾಣುವುದಿಲ್ಲ ಈ ಕೆಡುಕುಗಳನ್ನು ಸಾರುವ ಪ್ರಚಾರಕಾರ್ಯವು ಬೇಗನೇ ಪ್ರಾರಂಭವಾಗಬೇಕು ಕೃತಕ ಉಪಾಯಗಳಿಂದ ಮದುವೆಯ ಮುಂಚೆ ಗರ್ಭಿಣಿಯಾದವರು ಈ ಶಿಶುಹತ್ಯವನ್ನು ಮಾಡಲು ಪ್ರಯತ್ನಪಡುವಾಗ ಪೋಲೀಸ್ ಅಧಿಕಾರಿಗಳಿಗೆ ಸಿಕ್ಕಿ, ಶಿಕ್ಷೆಗೊಳಗಾಗಿರುವರು ಇದರ ನಂತರ ಆ ಪ್ರಾಂತ್ಯದಲ್ಲಿ ಇಂಥ ಕೃತ್ಯಗಳು ಕೆಲವು ಸಮಯದ ವರೆಗೆ ಸ್ವಲ್ಪ ಕಡಿಮೆಯಾಗಿರುತ್ತದೆ ಶಿಶುಹತ್ಯವನ್ನು ಮಾಡುವಂತಹ ಉಪಾಯಗಳು ಅನೇಕವಿದ್ದು ಅನೇಕ ಕಡೆಗಳಲ್ಲಿ ಇವುಗಳು ಬಹು ಜನಪ್ರಿಯತೆಯನ್ನು ಪಡೆದಿರುತ್ತವೆ ಈ ಕೃತ್ರಿಮ ಉಪಾಯಗಳನ್ನು ಮೂರು ವಿಭಾಗವಾಗಿ ವಿಂಗಡಿಸಬಹುದು. ೧ ಔಷಧಿ ಪ್ರಯೋಗ ೨ ಜಡಶಾರೀರಿಕ ವ್ಯಾಯಾಮ, ೩ ಅಕ್ರಮ ಶಸ್ತ್ರ ಚಿಕಿತ್ಸೆ

ದನಗಳ ವಿಚಾರ.

ಸಾಮಾನ್ಯವಾಗಿ ದನಗಳನ್ನು ಸಾಕುವುದು ಹಣವನ್ನು ಗಳಿಸುವುದಕ್ಕೆ. ಪುಷ್ಟವಾದ ಒಳ್ಳೆ ವರ್ಗದ ದನಗಳು ಹೆಚ್ಚು ಹಾಲನ್ನು ಕೊಡುತ್ತವೆ. ಸಾಕಿದವನಿಗೆ ಅದೇ ಬಹು ಆಸ್ತಿಯೇ ಎನ್ನಬಹುದು ಹಿಂದೂಗಳಿಗೆ ದನವೆಂದರೆ, ಆಶಿಸಿದನ್ನು ಕೊಡುವವಳು, ಒಂದು ದೇವತೆ,—ಕಾಮಧೇನು ಸರಿಯಾಗಿ ಹಾಲು ಕೊಡದ ದನಗಳು ಸಾಕುವವರಿಗೆ ಒಂದು ಬಾಧೆ—ಅವುಗಳನ್ನು ಬೈಯುತ್ತಾರೆ ಹೊಡೆಯುತ್ತಾರೆ, ಒದೆಯುತ್ತಾರೆ,—ಈ ಸಮಯದಲ್ಲಿ ಯಾರೂ ಅದರ ದೈವೀಕ ಭಾವವನ್ನು ಗಣನೆಗೆ ತರಲಾರರು ಕಲ್ಪವೃಕ್ಷವು ಎಷ್ಟು ಪ್ರಯೋಜನಕಾರಿಯೋ ಕಾಮಧೇನುವಾದರೂ ಅಷ್ಟೆ ಪ್ರಯೋಜನಕಾರಿಯಾಗಿದೆ. ದನದೊಂದಿಗೆ ಮನುಷ್ಯನನ್ನು ಹೋಲಿಸಿದರೆ, ಅವನೊಂದು ನಿಷ್ಪ್ರಯೋಜನವಾದ ಕನಿಷ್ಟ ಪ್ರಾಣಿ ಮನುಷ್ಯನಿಗೆ ಕೃತಜ್ಞತೆ ಬೇರೆ ಇಲ್ಲ ಬಹು ಕಾಲದಿಂದ ಹಾಲು ಕೊಡುತ್ತಿರುವ ದನವು ಒಂದು ದಿನ ಹಾಲು ಕೊಡದೆ ಇದ್ದಲ್ಲಿ ತುಂಬಾ ಕಷ್ಟಕ್ಕೆ ಗುರಿಯಾಗಬೇಕಾದೀತು

ದನಗಳು ತುಂಬಾ ಪ್ರಯೋಜನಕಾರಿಗಳಾಗಿರುವಂತೆ, ಮಹಾ ಬುದ್ಧಿ ಶಕ್ತಿಯುಳ್ಳ ಪ್ರಾಣಿ ಎಂದೂ ಪಶು ಶಾಸ್ತ್ರಜ್ಞರು ತಿಳಿಸುತ್ತಾರೆ ಅವುಗಳನ್ನು ಪ್ರೀತಿಯಿಂದ ಕಂಡಷ್ಟಕ್ಕೆ ಅವಕ್ಕೆ ಬಹಳ ಸಂತೋಷ ದನಗಳು ಬೆಕ್ಕಿನೊಂದಿಗೆ ಸ್ನೇಹ ಬೆಳೆಸಲು ತುಂಬಾ ಇಷ್ಟಪಡುತ್ತವಂತೆ ಆದರೆ ನಾಯಿಯನ್ನು ಕಂಡರೆ ಅವಕ್ಕೆ ಆಗುವುದಿಲ್ಲ ಪರಿಚಿತ ಮನುಷ್ಯರನ್ನೂ ಸ್ಥಳಗಳನ್ನೂ ದನವು ತುಂಬಾ ಪ್ರೀತಿಸುತ್ತದೆ ತುಂಬಾ ಗಲಾಟೆಯು ಮತ್ತು ವಿಪರೀತ ಉಷ್ಣದ ಸ್ಥಳಗಳು ದನಗಳಿಗೆ ಹಿತವೆನಿಸುವುದಿಲ್ಲ ಒಂದು ಸಾರಿ ಹಾನಿ ಮಾಡಿದವರ ಗುರುತನ್ನು ಅವುಗಳು ವರ್ಷಗಳಲ್ಲಿಯಾದರೂ ಮರೆಯುವುದಿಲ್ಲವಂತೆ

ದನಗಳಲ್ಲಿ ವಿವಿಧ ಸೌಂದರ್ಯವುಳ್ಳವುಗಳಿವೆಯಂತೆ. ಅವುಗಳ ದೇಹ ಪ್ರಕೃತಿಯಲ್ಲಿ ಸ್ತ್ರೀ ಭಾವವು ತುಂಬಿಕೊಂಡಿರುವುದಾಗಿಯೂ ಕೆಲವು ದನಗಳು ವಿಶೇಷ ದೇಹ ಸೌಂದರ್ಯವುಳ್ಳವುಗಳೆಂದೂ ಬಲ್ಲವರು ತಿಳಿಸಿರುತ್ತಾರೆ ದನಗಳಲ್ಲಿಯೂ ಪದ್ಮಿನಿ, ರಾಕ್ಷಸಿ, ಅಶ್ವಿನಿ, ಮತ್ತು ವೇದಿನಿ, ಎಂಬೀ ತರದ ಸೌಂದರ್ಯವರ್ಗಗಳಿವೆಯಂತೆ ಪದ್ಮಿನಿ ವರ್ಗದವುಗಳು ತುಂಬಾ ಆಕರ್ಷಕ ದೇಹ ಪ್ರಕೃತಿಯುಳ್ಳವುಗಳೆಂದೂ, ರಾಕ್ಷಸಿ ವರ್ಗದವುಗಳು ವಿಕಾರವಾಗಿರುತ್ತವೆಂದೂ, ಮತ್ತಿತರ ಎರಡು ವರ್ಗದವುಗಳು ಸರ್ವ ಸಾಮಾನ್ಯದವುಗಳಾಗಿರುತ್ತವೆಂದೂ ತಿಳಿದು ಬರುತ್ತದೆ.

ಚರ್ಮವ್ಯಾಧಿಗಳಿಗೆ
ಪ್ರಪಂಚದಲ್ಲಿ ಶ್ರೇಷ್ಠವಾದ
ಗುಣಕಾರಿ.

ಎಲ್ಲಾ ತರದ ಘಾಯ,
ಹುಳಕಡ್ಡಿ ಹುಣ್ಣುಗಳನ್ನು
ಗುಣಪಡಿಸುತ್ತದೆ

ಚರ್ಮ ವ್ಯಾಧಿಗಳಿಗೂ ಮತ್ತು ಘಾಯಗಳಿಗೂ ಸಾಂಬಕ್ಕು ಪ್ರಪಂಚದಲ್ಲಿ ಸರ್ವಶ್ರೇಷ್ಠವಾದ ಗುಣಕಾರಿಯಾಗಿರುತ್ತದೆ ಈ ಅದ್ಭುತ ಔಷಧಿಯನ್ನು ಘಾಯ, ತರಿತ, ಸುಟ್ಟಗಾಯ, ಉರಿಯುವಿಕೆ ಆದ ಜಾಗಗಳಲ್ಲಿ ತಿಕ್ಕಿ ಬಿಟ್ಟರೆ ಅದು ಇಂದ್ರಜಾಲದಂತೆ ಗುಣಪಡಿಸುತ್ತದೆ ಸಾಂಬಕ್ಕು ನೋವನ್ನು ಹೋಗಿಸಿ ಊದುವಿಕೆಯನ್ನು ಕಮ್ಮಿ ಮಾಡಿ, ಚರ್ಮದ ಅಪಾರ್ಥಿಯನ್ನು ಕಲೆಗಳಿಲ್ಲದಂತೆ ಹೋಗಲಾಡಿಸುತ್ತದೆ ಅಲ್ಲದೆ ಮಡಿಮ ಕಜ್ಜಿ ತುರಿಮೇಯುವುದು, ಹುಣ್ಣು, ಕಾಲು ಬೇನೆ, ತರಿತ, ಮೊಳೆ ಇವುಗಳನ್ನು ಗುಣಪಡಿಸುತ್ತದೆ.

ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ಸಾಂಬಕ್ಕು ೧ ೧ ಮತ್ತು ರೂ 2-4-0ರಂತೆ ಸಿಗುತ್ತದೆ

ಸಾಂಬಕ್ಕಿನಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರಣವಿಲ್ಲ.

ಏಜಂಟರು.—ಮೆಸರ್ಸ್ ದಾಧಾ ಎಂಡ್ ಕೊ., ಪಿ. ಟಿ ಮದ್ರಾಸು

ಸಾಂಬಕ್

Zam Buk

The Combined Booking Agency

AND

The Joint Booking Office

ಪ್ರಯಾಣಿಕರ ಸೌಕರ್ಯವೇ ನಮ್ಮ ಧ್ಯೇಯ.

ಪ್ರಯಾಣಿಕರ ಬಗ್ಗೆ ಒದಗಿಸಿರುವ ವಿಶ್ರಾಂತಿ ಗೃಹಗಳ ಪಟ್ಟಿಯನ್ನು ನೋಡಿರಿ.

	ಜಿಲ್ಲೆಯೊಳಗೆ	
ಧರ್ಮಸ್ಥಳ		ಕಾರ್ಕಳ
ಉಜಿರೆ	(ಶ್ರೀ ಧರ್ಮಸ್ಥಳ ಯಾತ್ರಿಕರ ಬಗ್ಗೆ)	ಉಡುಪಿ
ಮಂಗಳೂರು		ಕುಂದಾಪುರ
ಪುತ್ತೂರು		ಮೂಡಬಿದ್ರೆ
ಮುಲ್ಕಿ		ಗಂಗೊಳ್ಳಿ
	ಜಿಲ್ಲೆಯ ಹೊರಗೆ	
ಮಡಿಕೇರಿ		ಮೈಸೂರು
ಸಕಲೇಶಪುರ		ಚಿಕ್ಕಮಗಳೂರು
	ಮೂಡಗೆರೆ	

ಪ್ರಯಾಣಿಕರ ಪ್ರೋತ್ಸಾಹದೊಡನೆ ಇನ್ನೂ ಇದೇ ರೀತಿಯಲ್ಲಿ ಹಲವು ವಿಶ್ರಾಂತಿಗೃಹಗಳು ನಿರ್ಮಿಸಲ್ಪಡುವುವು.

ನೀವು ಕಂಡ ಕೊರತೆಗಳನ್ನೂ ನಿಮಗೆ ಬೇಕಾಗುವ ಹೆಚ್ಚಿನ ಸೌಕರ್ಯಗಳನ್ನೂ ಜೊಯಿಂಟ್ ಮೆನೇಜರರಿಗೆ ಬರೆದು ತಿಳಿಸಿರಿ

ಸ್ವದೇಶಾಭಿಮಾನಿ ಪತ್ರಿಕೆಗೆ ಚಂದಾದಾರರಾಗಿರಿ

THE BOMBAY LIFE ASSURANCE CO., LTD.

Estd 1908

Church Gate Street, Fort - - BOMBAY.

SPECIAL FEATURES.

1 Rebate on yearly payment of policies
2 Rebate for larger assurances
3 Accident Risk covered on small extra premiums
4 Attractive Bonuses

It pays you to represent this Company

Wanted Agents in unrepresented parts

Apply to —

Messrs Kochikar Brothers,

Madras Branch Secretaries.

—1936—

OUR VALUATION YEAR

Take a BOMBAY LIFE Policy now, and share in the profits



Branches at:-	P. B. 387, Mount Road, Madras.	Visveshwarapuram Circle, Bangalore City.	Soumyalayam Puthiyara, Calicut	Car Street, Mangalore.	Udipi, S. India.	Charni Road, Bombay No 4

ಮಂಗಳೂರು.

ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ

ಈ ಕಾರ್ಯಕಾರೀ ಮಂಡಳಿ ಮತ್ತು ಮ್ಯುನಿಸಿಪಲ್ ಚುನಾವಣಾ ಸಂಬಂಧವಾಗಿ ಸೇರಿಸಿಕೊಂಡ ಸದಸ್ಯರ ಸಭೆಯು ತಾ ೧೬-೬-೩೭ನೇ ಬುಧವಾರ ಸಾಯಂಕಾಲ ಗಂಟೆ ೬-೩೦ಕ್ಕೆ ಕಾಂಗ್ರೆಸ್ ಕಚೇರಿಯಲ್ಲಿ ಜರಗಿತು

ಮುಂಬರುವ ಮ್ಯುನಿಸಿಪಲ್ ಚುನಾವಣೆಗೆ ಕಾಂಗ್ರೆಸ ಕಡೆಯಿಂದ ಉಮೇದ್ವಾರರಾಗಲು ಬಯಸುವವರು ಜುಲೈ ತಿಂಗಳ ತಾ. ೧೫ರೊಳಗೆ ತಮ್ಮ ಅರ್ಜಿಗಳನ್ನು ರೂಪಾಯಿ ೨೫ರ ಠೇವಣಾತಿಯೊಡನೆ ಟೌನ್ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿ, ಅಥವಾ ಅಧ್ಯಕ್ಷರಿಗೆ ಕಳುಹಿಸಬೇಕಾಗಿಯೂ, ಇದರ ಜೊತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಸಿಗುವ ಪ್ರತಿಜ್ಞಾಪತ್ರಕ್ಕೆ ಕೂಡಾ ಸಹಿಮಾಡಬೇಕೆಂಬ ನಿರ್ಣಯವು ಮಂಜೂರಾಗಿರುವುದು ಕಾಂಗ್ರೆಸ್ ಉಮೇದ್ವಾರರಾಗ ಆರಿಸಲ್ಪಡದವರ ಠೇವಣಾತಿ ಹಣವು ಹಿಂದೆ ಕೊಡಲ್ಪಡುವುದು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಫಾಸಿ ಶಿಕ್ಷೆ.

ಕಳೆದ ತಾ ೧೮-೬-'೩೭ನೇ ಶುಕ್ರವಾರ ಮಂಗಳೂರು ಸೆಶ್ಶನ್ಸ್ ಜಡ್ಜರಾದ ಮ ರಾ ವೆಂಕಟ ರಾಮಯ್ಯನವರು ಒಂದು ಖೂನಿ ಮೊಕದ್ದಮೆಯಲ್ಲಿ ತೀರ್ಪನ್ನು ಕೊಡುತ್ತಾ ಕೊಡ್ಸಿಲ ದೇವಪ್ಪ ಗೌಡ, ಬಾಬು ಯಾನೆ ಅಂಬುಞ, ಮತ್ತು ಚಮನ್ನಾರು ಕೂಸಪ್ಪ ಗೌಡ ಎಂಬೀ ಮೂವರನ್ನು ಫಾಸಿ ಶಿಕ್ಷೆಗೆ ಗುರಿಪಡಿಸಿದರು

ಮೇಲ್ಕಂಡ ಖೂನಿ ಕಕ್ಷಿಯ ಪೂರ್ವ ವೃತ್ತಾಂತ ಈ ಕೆಳಗಿನಂತಿದೆ — ಪುತ್ತೂರು ತಾಲೂಕು ಐವರ್ನಾಡು ಗ್ರಾಮದ ಬಾಂಜೀಕೋಡು ಎಂಬಲ್ಲಿರುವ ಒಂದು ಅಡಿಕೆ ತೋಟದ ಸ್ವಾಧೀನತೆಯ ವಿಷಯದಲ್ಲಿ ಇಸುಬು ಬ್ಯಾರಿ ಮತ್ತು ಇಬ್ರಾಹಿನ ಎಂಬವರೊಳಗೆ ಬಹಳ ಸಮಯದಿಂದ ವಿವಾದವಿತ್ತು ಸದರೀ ಗ್ರಾಮದ ಶಾನುಭಾಗರಾದ ರಾಮಚಂದ್ರರಾಯರು ಇಸುಬು ಬ್ಯಾರಿಯ ಕಡೆಯಿಂದ ಸಹಾಯಕರಾಗಿದ್ದರಂತೆ ಹಾಗೆಯೇ ಅದೇ ಗ್ರಾಮದ ಪಟೇಲರಾದ ರಾಮಣ್ಣ ಗೌಡರು ಇಬ್ರಾಹಿನ ಬ್ಯಾರಿಯ ಕಡೆಯವರಾಗಿದ್ದರು ಹೀಗೆ ಪಟೇಲರು ಶಾನುಭಾಗರೊಳಗೂ ಅವರು ಕಕ್ಷಿ ವಹಿಸಿರುವವರೊಳಗೂ ವೈಷಮ್ಯವು ಬಹು ದಿವಸಗಳಿಂದ ಬೆಳೆಯುತ್ತಲಿತ್ತು ಹೀಗಿರಲು ಕಳೆದ ೧೯೩೬ನೇ ಇಸವಿ ಅಕ್ಟೋಬರ್ ೧೯ರಲ್ಲು ಇಸುಬು ಬ್ಯಾರಿಯು ತನ್ನ ಸಂಗಡಿಗರೊಡನೆ ವಿವಾದಕ್ಕೆ ಒಳಪಟ್ಟ ತೋಟಕ್ಕೆ ಪ್ರವೇಶಿಸಲು ಎದುರಿನ ಕಡೆಯವರಾದ ಇಬ್ರಾಹಿನ ಮತ್ತು ಆತನ ಸಂಗಡಿಗರು ಇವರನ್ನು ಚೆನ್ನಾಗಿ ಹೊಡೆದು ಹಾಕಿದರು ಈ ವಾರ್ತೆಯು ಇಸುಬು ಬ್ಯಾರಿಯ ಕಡೆಯವರಾದ ಶಾನುಭಾಗ ರಾಮಚಂದ್ರರಾಯರಿಗೆ ತಲಪಲು, ಅವರು ರಾಮರಾಯರೆಂಬ ತಮ್ಮ ಅಣ್ಣನನ್ನೂ ಗುಂಡಣ್ಣಯ್ಯ ಎಂಬ ಬಾವನೆಂಟನನ್ನೂ ಜೊತೆಗೆ ಕರಕೊಂಡು ಗಲಾಟೆ ನಡೆದ ಸ್ಥಳದಭಿಮುಖವಾಗಿ ಹೋಗುವವರಾದರು ಅಲ್ಲಿ ಅಕಸ್ಮಾತ್ ಅವರು ಗುಂಡಿನ ಹೊಡೆತಕ್ಕೆ ತುತ್ತಾದರು ಪರಿಣಾಮವಾಗಿ ಅಣ್ಣ ತಮ್ಮಂದಿರಾದ ರಾಮರಾಯರೂ ಮತ್ತು ರಾಮಚಂದ್ರರಾಯರೂ ಮೃತರಾದರು ಅವರ ಜತೆಯಲ್ಲಿದ್ದ ಇನ್ನೊಬ್ಬರಿಗೆ ಜಖಂ ಆಯಿತು ಈ ಭಯಂಕರ ಖೂನಿಗೆ ಸಮ್ಮಂಧಿಸಲ್ಪಟ್ಟ ಮೇಲೆ ಶಿಕ್ಷೆಗುರಿಮಾಡಿಸಲ್ಪಟ್ಟ ಕೊಡ್ಸಿಲ ದೇವಪ್ಪ ಗೌಡ ವಗೈರ ಹನ್ನೊಂದು ಜನರ ಮೇಲೆ ಆರೋಪವು ವಿಧಿಸಲ್ಪಟ್ಟು ಕೋರ್ಟಿನಲ್ಲಿ ಚಲಾಯಿಯಾಗುತ್ತಿತ್ತು ಶಿಕ್ಷೆಗೆ ಗುರಿಯಾದ ಮೂರು ಮಂದಿಗಳಲ್ಲದೆ ಬಾಕಿಯವರನ್ನು ನಿರಪರಾಧಿಗಳೆಂದು ಬಿಡಲಾಗಿದೆ ಆಪಾದಿತರ ಕಡೆಯಿಂದ ಮ ರಾ ಗಳಾದ ರಾ ಬ ನಾರ್ಣಪ್ಪ ಸುವರ್ಣ, ಉಗ್ಗಪ್ಪ ಶೆಟ್ಟಿ ವೆಂಕಟ್ರಮಣ ಗೌಡ ವಗೈರರೂ ಸರಕಾರ ಕಡೆಯಿಂದ ಗವರ್ನಮೆಂಟು ಪ್ರೊಸಿಕ್ಯೂಟರಾದ ಕಾರ್ಕಳ ಸದಾಶಿವರಾಯರೂ ವಕಾಲತು ನಡೆಸಿದರು

ಮುನಿಸಿಪಲ್ ಮೀಟಿಂಗು.

ನಂದಿ ಗುಡ್ಡೆಯಲ್ಲಿ ಮುನಿಸಿಪಲ್ ಬಾವಿಯೊಂದನ್ನು ತೋಡುತಿದ್ದಾಗ ಮಣ್ಣು ಜರಿದು ಇಬ್ಬರು ಸಜೀವ ಹೂಳಲ್ಪಟ್ಟರಷ್ಟೆ ಈ ಸಮ್ಮಂಧ ಮೃತರ ಕಡೆಯವರು ಏನಾದರೂ ಆಶಾನಾರ್ತವನ್ನು ತಮಗೆ ಕೊಡಬೇಕೆಂದು ವಿನಂತಿಸಿಕೊಂಡು ಬರೆದ ಅರ್ಜಿಯೊಂದು ಕಳೆದ ತಾ. ೧೪ರಲ್ಲಿ ಸೇರಿದ ಮುನಿಸಿಪಲ್ ಮೀಟಿಂಗಿನಲ್ಲಿ ಬರಲಾಗಿ, ಆ ವಿಷಯವನ್ನು ಸಮಾಲೋಚಿಸಲು ಶ್ರೀ ಶಿವರಾವ್, ಶ್ರೀ ಬಾಳಿಗ ಇವರಿಂದ ಕೂಡಿದ ಒಂದು ಸಮಿತಿಯು ಅವಗಾಹನೆಗೆ ಇಡಲಾಯಿತು

ಇಲ್ಲಿಯ ಸಿಟಿ ಬಸ್ಸ್ ಸರ್ವಿಸಿನ ಲೈಸೆನ್ಸ್‌ದಾರರಿಗೆ ಕುರಿತು ಕೆಲವು ಕೌನ್ಸಿಲರುಗಳು ಬಹಳವಾಗಿ ಆಕ್ಷೇಪಿಸಿ ಮಾತಾಡಿದ ಮೇಲೆ ಶ್ರೀಯುತರುಗಳಾದ ಕಾರಂತ್, ಶ್ರೀಶಾ, ಮುಬಾಡೊ, ಪುಟ್ಟಣ್ಣ, ವ್ಯಾಸ್ ಬೆಯರ್‌ಮನ್, ಡಾ। ಆಡಪ್ಪಾ ಮತ್ತು ಡಾ। ಉಪೇಂದ್ರ ಪೈ ಇವರಿಂದ ಕೂಡಿದ ಒಂದು ಸಮಿತಿ ಏರ್ಪಟ್ಟು ಅವರು ಈ ಸಿಟಿ ಸರ್ವಿಸಿನ ಕುರಿತು ವಿಷಯಗಳನ್ನು ಪರಿಶೀಲಿಸಿ ವರದಿ ಮಾಡಬೇಕೆಂದಾಯಿತು

ಮುನ್ಸಿಪಲ್ ಕೌನ್ಸಿಲಿನಲ್ಲಿ ಸಿಟಿ ಸರ್ವಿಸಿನ ಕುರಿತು ಎಲ್ಲಾ ವಿಧದ ಆಕ್ಷೇಪಗಳು ಬರಲಾದವು. ಹೆಚ್ಚು ಬಾಡಿಗೆ ಹಣವನ್ನು ಪಡೆಯಲಿಕ್ಕಾಗಿ ಪ್ರಯಾಣಿಕರನ್ನು ಕದ್ರಿಗೆ ಹೋಗಬೇಕಾದರೆ ಪೆಂಟ್‌ಲೆಂಡ್ ಪೇಟೆ ಮಾರ್ಗವಾಗಿ ಒಯ್ಯುವುದೇ ಮೊದಲಾದವುಗಳು ಈ ಆಕ್ಷೇಪಗಳಲ್ಲಿ ಕೆಲವು ಹೀಗೇಕೆ ಮಾಡಿದರೆಂದೂ ಹೇಗೆ ಮಾಡಬಹುದೆಂದೂ ಹೆಚ್ಚಿನವರಿಗೆ ತಿಳಿದಿಲ್ಲ ಅಂತೂ ಕೆಲವು ಕಡೆಗಳಲ್ಲಿ ಈ ತರದ ವರ್ತಮಾನಗಳು ಹುಟ್ಟಿವೆ ನಿಜಾಂಶವು ಸ್ಪಷ್ಟವಾಗಿಲ್ಲ ಅಂತೂ ಯಾವುದೇ ತರದ ಆಕ್ಷೇಪಾಸ್ಪದ ಕೆಲಸಗಳಿಗೆ ಸಿಟಿ ಸರ್ವಿಸಿನ ಅಧಿಕಾರದಾರರು ಎಡೆಗೊಡದೆ ಹಿಂದೆ ಸೂಚಿಸಿದಂತೆ ತಮ್ಮ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸಿ ತೃಪ್ತಿಕರವಾದ ವಾಹನದ ಏರ್ಪಾಟನ್ನು ನಾಗರೀಕರಿಗೆ ಪೂರೈಸಿ ಕೊಡುವರೆಂದು ಹಾರೈಸಲಾಗಿದೆ

ಮಳೆ.

ಮಂಗಳೂರಿನಲ್ಲಿ ಮಳೆಯು ಚೆನ್ನಾಗಿ ಬರಲಾರಂಭಿಸಿದೆ ಅಸುಪಾಸಿನ ಗದ್ದೆ ಹೊಲಗಳಲ್ಲಿ ನೇಜಿ ಹೂಡುವ ಕೆಲಸವು ಪ್ರಾರಂಭವಾಗಿ ಮುಕ್ತಾಯವಾಗುತ್ತ ಬಂದಿದೆ

ಹರಿಜನ ವಿದ್ಯಾರ್ಥಿಗಳ ತೇರ್ಗಡೆ

ಈ ಸಾರಿ ಕೆನರಾ ಹೈಸ್ಕೂಲಿನಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪಾಸಾದವರ ಪೈಕಿ ಇಬ್ಬರು ಹರಿಜನ ವಿದ್ಯಾರ್ಥಿಗಳೂ ಇದ್ದರೆಂದು ತಿಳಿದುಬರುತ್ತದೆ

ವಿವೇಕಾನಂದ ಸಭಾ, ರಾಘವಾಶ್ರಮ

ಬರುವ ಆದಿತ್ಯವಾರ ತಾ ೨೭ನೇ ಬೆಳಗ್ಗೆ ೮ ಗಂಟೆಗೆ ವೇದಮೂರ್ತಿ ಚಿಂತಾಮಣಿ ಭಟ್ಟರವರು "ಕರ್ಮಯೋಗ" ಎಂಬ ವಿಷಯವನ್ನು ಕುರಿತು ಭಾಷಣ ಮಾಡುವರು ಎಲ್ಲರಿಗೂ ಸುಸ್ವಾಗತವಿದೆಯೆಂದೂ ಈಗ ಮಳೆಗಾಲ ಪ್ರಾರಂಭವಾದುದರಿಂದ ಇನ್ನುಮುಂದಾದರೂ ಅಧಿಕ ಜನರು ತಮ್ಮ ಅಧಿಕ ಬುದ್ಧಿಯಿಂದ ಅಧಿಕವಾಗಿ ಸಭೆಗಳಿಗೆ ಬರಬೇಕಾಗಿ ಸಭೆಯ ಅಧಿಕಾರಿಗಳು ಹಾರೈಸುತ್ತಾರೆಂತ ಕಾರ್ಯದರ್ಶಿಯ ಸೂಚನೆ

ಮತದಾರರ ಪಟ್ಟಿ.

ಮದ್ರಾಸ ಪ್ರಾಂತದ ಅಸೆಂಬ್ಲಿಯ ಸದಸ್ಯರನ್ನು ಚುನಾಯಿಸುವರೆ ವೋಟಿನ ಹಕ್ಕುಳ್ಳವರ ಪಟ್ಟಿಯು ಪ್ರತಿ ವರ್ಷವೂ ಆವರ್ತಿಸಲಾಗುತ್ತಿದೆ ಚುನಾವಣೆ ಸಮಯದಲ್ಲಿ ಈ ಪಟ್ಟಿಯಲ್ಲಿ ದಾಖಲೆಮಾಡಿಕೊಳ್ಳುವವರು ವೋಟು ಕೊಡಲು ಹಕ್ಕುಳ್ಳವರಾಗುತ್ತಾರೆ ನಮ್ಮ ದೇಶಕ್ಕೆ ಕೊಡಲ್ಪಟ್ಟ ನವರಾಜಶಾಸನದ ಪ್ರಕಾರ ಪ್ರತಿಯೊಬ್ಬ ಓದುಬರಹ ಬಲ್ಲವನು ಈ ವೋಟಿನ ಹಕ್ಕುಳ್ಳವನಾಗಲು ಯೋಗ್ಯನಿರುತ್ತಾನೆ ಕಳೆದ ವರ್ಷ ಮೊದಲನೇ ಸಾರಿ ಸರಕಾರದವರು ಓದುಬರಹ ಬಲ್ಲವರನ್ನು ಮತದಾರರ ಈ ಪಟ್ಟಿಯಲ್ಲಿ ದಾಖಲು ಮಾಡಿಕೊಂಡರು ನಮ್ಮ ಜಿಲ್ಲೆಯ ಜನಸಂಖ್ಯೆಗೆ ಸರಿಹೋಲಿಸಿದರೆ ಮತದಾನದ ಹಕ್ಕುಳ್ಳವರೆಂದು ದಾಖಲುಮಾಡಿಸಿಕೊಂಡವರ ಸಂಖ್ಯೆಯು ಬಹಳ ಕಮ್ಮಿಯಾಗಿರುತ್ತದೆ ಅನೇಕ ಮಂದಿಗಳು ಅಸಡ್ಡೆಯಿಂದಲೊ ಇನ್ನಾವ ಕಾರಣದಿಂದ್ಲೊ ತಮ್ಮ ಹೆಸರುಗಳನ್ನು ವೋಟರರ ಪಟ್ಟಿಯಲ್ಲಿ ದಾಖಲುಮಾಡಿಕೊಳ್ಳಲು ಶಕ್ತರಾಗಲಿಲ್ಲ. ಹೀಗೆ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳುವವರು ಇದೇ ಬರುವ ತಿಂಗಳ ೨ನೇ ತಾರೀಕಿನೊಳಗೆ ತಮ್ಮ ಹೆಸರುಗಳನ್ನು ದಾಖಲುಮಾಡಿಸುವರೆ ತಮ್ಮ ಅರ್ಜಿಗಳನ್ನು ಮುನ್ಸಿಪಾಲಿಟಿ ಆಫೀಸಿಗೆ ೪ ಗಂಟೆಯೊಳಗೆ ರಜಿಸ್ಟ್ರೇಶನ್ ಆಫೀಸರರಿಗೆ ಮುಟ್ಟಿಸಬಹುದು

ತಾಲೂಕುಗಳಿಂದ.

ಮೂಡಬಿದ್ರಿ:— ಇದೇ ತಾ. ೧೮-೬-೩೭ನೇ ಶುಕ್ರವಾರ ಪ್ರಾತಃಕಾಲ ೮ ಗಂಟೆಗೆ ಪ್ರಮುಖ ಕಾಂಗ್ರೆಸ ಕೆಲಸಗಾರರೂ, ಕೃಷಿಕ ಚಳವಳದ ಮುಂದಾಳುಗಳೂ ಆದ ಆಂಧ್ರದೇಶದ ಪ್ರೊಫೆಸರ್ ಎನ್ ಜಿ ರಂಗರವರು ಶ್ರೀಮತಿ ಕಮಲಾದೇವಿ ಮತ್ತು ಹಿರಿಯಣ್ಣ ರಾಮರಾಯ ಮಲ್ಯರೊಡನೆ ಆಗಮಿಸಿ ಸಾರ್ವಜನಿಕ ಧರ್ಮಾರ್ಥ ವಾಚನಾಲಯದಲ್ಲಿ ಸಭೆ ಜರಗಿಸಿ, ಈಗ ಜ್ಯಾರಿಯಲ್ಲಿರುವ ರಿಸೆಟ್ಲ್‌ಮೆಂಟ್ ಕಂದಾಯ ಮತ್ತು ತೆರಿಗೆ ವಿಧಿಸುವ ರೀತಿಯಿಂದಾಗಿ ಕೃಷಿಕರಿಗೆ ಮತ್ತು ಭೂಮಾಲಿಕರಿಗೆ ಒದಗಿರುವ ಸಂಕಷ್ಟವನ್ನು ಇವುಗಳ ನಿವಾರಣೋಪಾಯಗಳ ಬಗ್ಗೆ ಅಖಿಲಭಾರತ ಕೃಷಿಕರ ಸಂಘವು ಕೈಕೊಂಡಿರುವ ಕಾರ್ಯಕ್ರಮವನ್ನೂ ವಿಶದೀಕರಿಸಿದರು ಆ ಕಾರ್ಯಕ್ರಮವು ಯಶಸ್ವಿ ಪಡಿಸಲು ಪ್ರತೀ ಊರಿನ ಕೃಷಿಕರು ಮತ್ತು ಭೂಮಾಲಿಕರು ಸಹಕರಿಸಿ ಹೇಗೆ ವರ್ತಿಸಬೇಕೆಂದೂ ಸೂಚಿಸಿದರು. ಪ್ರಜಾಪ್ರತಿನಿಧಿಗಳುಳ್ಳ ರಾಷ್ಟ್ರೀಯ ಸರಕಾರವು ಸೆಟ್ಲ್‌ಮೆಂಟ್ ಪದ್ಧತಿ, ತೆರಿಗೆ ವಿಧಿಸುವ ರೀತಿ, ಸಂರಕ್ಷಿಸಲ್ಪಟ್ಟ ಕಾಡುಗಳ ವ್ಯವಸ್ಥೆ ಮತ್ತು ಇತರ ಆರ್ಥಿಕ ಸುಧಾರಣೆಯನ್ನು ಮಾಡಲು ಕೈಗೊಳ್ಳುವ ಧೋರಣೆಯನ್ನು ವಿವರಿಸಿದರು ನಮಗೆ ಬೇಕಾದ ಸುವ್ಯವಸ್ಥೆಯನ್ನು ಮಾಡಲು ಸಂಪೂರ್ಣ ಸ್ವಾತಂತ್ರ್ಯ ದೊರಕದ ವಿನಹ ಸಾಧ್ಯವಿಲ್ಲ ಆದುದರಿಂದ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸಿಗೆ ನಾವೆಲ್ಲರೂ ಬೆಂಬಲವನ್ನು ಕೊಡಬೇಕು ಎಂದರು

ಕಾಪು:— ಈ ಕೇಂದ್ರದ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾರೀಕು ೧೯ರಲ್ಲು ಕಾಪು ಶಾಲೆಯಲ್ಲಿ ಬೆಳಗ್ಗೆ ೯ ಗಂಟೆಗೆ ಸದರಿ ಶಾಲೆಯ ಸಹಾಯಕ ಅಧ್ಯಾಪಕರಾದ ಶ್ರೀಯುತ ಎನ್ ಶ್ಯಾಮರಾಯ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರ ಸಂಖ್ಯೆಯು ತೃಪ್ತಿಕರವಾಗಿತ್ತು ಅಧ್ಯಕ್ಷರ ಚುನಾವಣೆಯು ಮುಗಿದ ನಂತರ ಪಾಡೂರು ಶಾಲೆಯ ಮುಖ್ಯೋಪಾಧ್ಯಾಯರು ಹಿಂದೂಸ್ಥಾನದ ಹಳ್ಳಿಯ ವಿದ್ಯಾಭ್ಯಾಸದ ಸುಧಾರಣೆಯ ಕುರಿತು ದೀರ್ಘ ಕಾಲದ ಒಂದು ಭಾಷಣವನ್ನು ಮಾಡಿದರು ಇವರು ತಮ್ಮ ಭಾಷಣದಲ್ಲಿ ವಿದ್ಯೆಯನ್ನು ಪ್ರತಿಯೊಬ್ಬರೂ ಕಲಿಯುವಂತೆ ಪ್ರೋತ್ಸಾಹಿಸಬೇಕು ಮಾತ್ರವಲ್ಲದೆ ಅದಕ್ಕೆ ಅಗತ್ಯವಿರುವ ಧನಸಹಾಯವನ್ನು ಮಾಡಬೇಕೆಂದರು ಮಕ್ಕಳಿಗೆ ಕೊಡುವ ವಿದ್ಯೆಯೂ ಅದು ಅವರ ಮುಂದಿನ ಜೀವಮಾನಕ್ಕೆ ಅನುಕೂಲವಾಗಿರಬೇಕೆಂದು ಅನೇಕ ದೃಷ್ಟಾಂತಗಳನ್ನು ಕೊಟ್ಟು ಒತ್ತಿ ಹೇಳಿದರು ಇವರ ಭಾಷಣದ ನಂತರ ಮೂಳೂರು ಶಾಲೆಯ ಮುಖ್ಯೋಪಾಧ್ಯಾಯರು ವಿದ್ಯಾಭ್ಯಾಸದ ಕುರಿತು ಭಾಷಣಕೊಟ್ಟರು ನೆರೆದಿದ್ದ ಉಪಾಧ್ಯಾಯಿನಿಯರ ಪೈಕಿ ಕಾಪು ಹುಡುಗಿಯರ ಶಾಲೆಯ ಸಹಾಯಕ ಉಪಾಧ್ಯಾಯಿನಿಯರೊಬ್ಬರು ಹುಡುಗಿಯರಿಗೆ ಹುಡುಗರಂತೆಯೇ ಹೈಸ್ಕೂಲು ಕಾಲೇಜುಗಳ ವಿದ್ಯೆಯು ಅಗತ್ಯವೆಂದೂ ಅನೇಕ ಕಾರಣಗಳನ್ನು ಕೊಟ್ಟು ವಿವರಿಸಿದರು ಅಧ್ಯಕ್ಷರ ಭಾಷಣದ ನಂತರ ಕಾರ್ಯದರ್ಶಿಯರಾದ ಶ್ರೀಯುತ ದೇಜುಶೆಟ್ರು ಅಧ್ಯಕ್ಷರಿಗೂ, ಸಭಿಕರಿಗೂ ಧನ್ಯವಾದಗಳನ್ನು ಅರ್ಪಿಸಿದ ಮೇಲೆ ಸಭೆಯು ರಾಷ್ಟ್ರೀಯ ಗೀತದೊಡನೆ ಕೊನೆಗೊಂಡಿತು

ಎರ್ಮಾಳ, ಪಡುಬಿದ್ರೆ — ಇಲ್ಲಿ ಕಳೆದ ಎಂಟು ದಿನಗಳಿಂದ ಬಯಲುಗಳಲ್ಲಿ ನೆರೆಯು ತುಂಬಿದ್ದು ಗದ್ದೆಗಳನ್ನು ನೆಡುವುದಕ್ಕೆ ತುಂಬಾ ಅನಾನುಕೂಲವಾಗಿದೆ ಮತ್ತು ಅಗೆ ದಿನವು ಕಳೆಯಾದುದರಿಂದ ಅಗೆಗಳನ್ನು ತಕ್ಕ ಕಾಲದಲ್ಲಿ ನಡದಿದ್ದರೆ ಅವು ಸರಿಯಾಗಿ ಫಲಿಸುವುದಿಲ್ಲ ಇಷ್ಟುಮಾತ್ರವಲ್ಲದೆ ಈ ವರ್ಷ ಮೇಘರಾಜನು ತನ್ನ ಉತ್ಪತ್ತಿಯನ್ನು ಕಡೆಗೆ ಮಾಡಿದ್ದರಿಂದ ಒಂದು ಸಲ ಹಾಕಿದ ಅಗೆಯು ಸುಟ್ಟು ಹೋಗಿ ಕೆಲವರು ಅಗೆಯಿಲ್ಲದೆ ನೆಡುವುದಕ್ಕೆ ಬಹಳ ತೊಂದರೆಯಲ್ಲಿದ್ದಾರೆ

ಮೂಲ್ಕಿ:— ಇಲ್ಲಿ ಶ್ರೀಯುತ ವ ಲ್ಲೆ ರಾಮ ಕರು ಕೆಲವು ದಿವಸಗಳಿಂದ ಹರಿಕಥಾ ಕಾಲಕ್ಷೇಪವನ್ನು ನಡಿಸಿ ಎಲ್ಲರ ಪ್ರಸಂಶೆಗೆ ಪಾತ್ರರಾಗಿರುವ ಈಗಿನ ವಿದ್ಯಮಾನಕ್ಕೆ ಒಪ್ಪುವ ಮತ್ತು ಪುರಾಣೋಕ್ತಿಗಳ ಸತ್ಯಾಂಶಗಳನ್ನು ವಿವರಿಸಿ ಪ್ರೌಢವಿವಾಹದ ಸಮರ್ಥನೆ ಬಾಲ್ಯವಿವಾಹದ ಖಂಡನೆ ಸ್ತ್ರೀ ಸ್ವಾತಂತ್ರ್ಯ ಸ್ವದೇಶೀ ಪ್ರೋತ್ಸಾಹ ಇವೇ ಮೊದಲಾದ ಉಪಯುಕ್ತ ಸಲಹೆಗಳನ್ನು ಜನತೆಗೆ ಬೋಧಿಸುವ ಉದ್ದೇಶಗಳನ್ನು ಇಟ್ಟುಕೊಂಡಿರುವರು ಗೊಡ್ಡು ಪುರಾಣಗಳನ್ನು ಬಾಯ್ಪಾಠ ಮಾಡಿ ಅರ್ಥವಾಗದ ಪದ್ಯಗಳನ್ನು ಬೋಧಿಸಿ ಈಗಿನ ಜನತೆಯ ಬೇಸರಕ್ಕೆ ಕಾರಣವಾಗುತ್ತಿರುವ ಹರಿದಾಸರುಗಳಿಗೆ ಶ್ರೀಯುತ ಶಾಮುಗರು ಮೇಲ್ಪಂಕ್ತಿಯಾಗಿ ಆಧುನಿಕ ರೀತಿಯ ಹರಿಕಥಾ ಕಾಲಕ್ಷೇಪ ನಡಿಸುತ್ತಿರುವುದು ತುಂಬಾ ಅಭಿಮಾನವೇ ಸರಿ ಮುಂದಕ್ಕೂ ಶ್ರೀಯುತರು ಇದಕ್ಕಿಂತ ಮಿಕ್ಕಿದ ಕನ್ನಡ ಸೇವೆಯನ್ನು ಮಾಡುತ್ತಿರಲೆಂದು ಹಾರೈಕೆ

ಸ್ಥಳೀಯ ಹೈಸ್ಕೂಲಿನಿಂದ ಕಳೆದ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ನಿಂತ ೨೬ ವಿದ್ಯಾರ್ಥಿಗಳಲ್ಲಿ ೨೦ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದುದು ತುಂಬಾ ಸಂತೋಷವೇ ಸರಿ ಮೂಲ್ಕಿಯ ಪ್ರಥಮ ವರ್ಷದ ಪರೀಕ್ಷೆಯಲ್ಲಿ ಈ ರೀತಿಯ ಫಲಿತಾಂಶಕ್ಕೆ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀಯುತ ಕೆ ಕೃಷ್ಣರಾವ್ ಬಿ ಎ ಎಲ್ ಟಿ ಇವರೇ ಕಾರಣರು ದುರಾದೃಷ್ಟವಶಾತ್ ಸದರಿಯವರಿಗೆ ಈಗ ಪುತ್ತೂರಿಗೆ ವರ್ಗವಾಗಿದೆ

ಸ್ಥಳೀಯ ಅದ್ವಿಮಾಹಸೀಯ ಬ ಹೈಸ್ಕೂಲ ಬಗ್ಗೆ ಒಂದು ಸೋಡಿ ತೆಗೆದಿದ್ದು ಆ ಬಾಬ್ತು ನಿರೀಕ್ಷಿಸಿದುದಕ್ಕಿಂತ ಮಿಕ್ಕಿದ ಹಣವು ಉಳಿದಿರುತ್ತದೆ ಹೈಸ್ಕೂಲಿನಲ್ಲಿಯೂ ಬೇಕಾದ ವಿದ್ಯಾರ್ಥಿಗಳ ಸಂಗ್ರಹವೂ ಇದೆ ಸ್ಥಳೀಯ ಎಲಿಮೆಂಟರಿ ಕ್ಲಾಸುಗಳಲ್ಲಿ ಹಾಯರ್ ಎಲಿಮೆಂಟರೀ ಕ್ಲಾಸುಗಳಿಗೆ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಯೂ ಇದೆ ಆದುದರಿಂದ ಸ್ಥಳೀಯ ಮುಖಂಡರು ಆದಷ್ಟು ಪ್ರಯತ್ನಪಟ್ಟು ಮೂಲ್ಕಿಗೆ ಹಾಯರ್ ಎಲಿಮೆಂಟರೀ ಕ್ಲಾಸುಗಳನ್ನು ಮತ್ತೆ ತೆರೆಯುವಂತೆ ಪ್ರಯತ್ನಮಾಡಿ ಬಡ ವಿದ್ಯಾರ್ಥಿಗಳ ಕಡೆಗೆ ದಯೆಯನ್ನು ತೋರಿಸುವರಾಗಿ ಕೋರಲಾಗಿದೆ

ಉಡುಪಿ
(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ ೧೮ನೇ ಸಾಯಂಕಾಲ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ಶ್ರೀ ಎನ್ ಜಿ ರಂಗಾ ಎಂ. ಎಲ್ ಎ ರವರು ಸಾರ್ವಜನಿಕ ಭಾಷಣವಿತ್ತರು. ಜರ್ಮನಿ, ಫ್ರಾನ್ಸ್, ರಷ್ಯ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಕೃಷಿಕರ ಚಳವಳದಿಂದುಂಟಾದ ಸುಧಾರಣೆ ಸುಪರಿಣಾಮಗಳ ಕುರಿತು ಪ್ರಸ್ತಾಪಿಸಿದರು ಹಿಂದೆ ನಮ್ಮ ಜಿಲ್ಲೆಯಲ್ಲಿ ಸರ್ ಥೋಮಸ್ ಮನ್ರೊವಿನ ಕಾಲದ ನಮ್ಮ ರೈತರು ಸರಕಾರದೊಡನೆ ತಮ್ಮ ಅಹವಾಲೆಗಳನ್ನು ಸಾರ್ವತ್ರಿಕವಾಗಿ ಮುಂದೊತ್ತಿದುದರಿಂದ ಹೊಂದಿದ ಲಾಭಗಳನ್ನು ತಾನು ಈಗಾಗಲೇ ತಿಳಿದಿರುವ ಸಂಗತಿಯನ್ನು ಹೇಳುತ್ತ ಹಿಂದೂದೇಶದ ಕೆಲ ಪ್ರಾಂತ್ಯಗಳಲ್ಲಿ ರೈತರ ಚಳವಳದಿಂದ ತವಗೊದಗಿದ ಸಂಕಷ್ಟಗಳನ್ನು ನೀಗಿಸಿಕೊಂಡ ವಿಷಯವನ್ನು ವೇದ್ಯಗೊಳಿಸಿದರು ಇದೀಗ ೫೦ ವರ್ಷಗಳಿಂದ ಕಾಂಗ್ರೆಸ್ ಅಖಿಲ ಭಾರತದ ಸ್ವಾತಂತ್ರ್ಯದ ಉದ್ಧಾರದ ಬಗ್ಗೆ ಸೆಣಸಾಡುತ್ತಿದ್ದರೂ ಅದರಲ್ಲಿ ಭಂಡವಾಳಗಾರರೂ ಮಧ್ಯಮತರಗತಿಯವರೂ ಸೇರಿರುತ್ತ ಕೃಷಿಕರ ಹಾಗೂ ಮಜೂರರ ಹಿತಗಳನ್ನು ಸಾಕಷ್ಟು ಯೋಗ್ಯ ರೀತಿಯಲ್ಲಿ ಮುಂದೊತ್ತುವ ಭರವಸೆಯು ಸಾಕಷ್ಟು ಇಲ್ಲವಾಗಿ ಕೃಷಿಕರೂ ಮಜೂರರೂ ಸಾಂಘಿಕ ರೀತಿಯಲ್ಲಿ ಒಟ್ಟುಗೂಡಿ ಕಾಂಗ್ರೆಸ್ಸಿನ ಮೂಲಕವೇ ತಮ್ಮ ಹಿತಸಾಧನೆಮಾಡುವುದರ ಆವಶ್ಯಕತೆಯನ್ನು ವಿವರಿಸಿದರು ಕಾಯಕಷ್ಟ ಮಾಡಿ ದುಡಿದು ದೇಶದ ಸಂಪತ್ತಿಯನ್ನು ಅಭಿವೃದ್ಧಿಗೊಳಿಸುವ ಇವರಿಗೇ ರಾಜ್ಯದ ಸರ್ವ ಹಕ್ಕುಗಳು ಇರತಕ್ಕದು ನ್ಯಾಯವೆಂದರು ಇದರಲ್ಲಿ ಜಾಗೃತಿಯನ್ನು ಯಾರಲ್ಲಿ ಹೇಗೆ ಮಾಡುತ್ತಿರಬಹುದು, ಕಾರ್ಯಕ್ರಮಗಳ ಮಟ್ಟಿಗೆ ಮಾಹಿತಿ ದ . ಒಟ್ಟಾಗಿ ಕೃಷಿಕರೂ ಮಜೂರರೂ ಚೇತರಿಸಿಕೊಂಡು ಯೋಗ್ಯ ರೀತಿಯಲ್ಲಿ ಕಾರ್ಯವೆಸಗಿದರೆ ಇದರ ಮೂಲಕವೆ ಸ್ವರಾಜ್ಯಸ್ವಾತಂತ್ರ್ಯವನ್ನು ಸಂಪಾದಿಸಬಹುದು ಎಂದರು

ನೋಟೀಸು

ಕೆನರಾ ಬೇಂಕ್ ಲಿಮಿಟೆಡ್, ಪುತ್ತೂರು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬೇಂಕಿನಿಂದ ಆಭರಣಗಳ ಆಧಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲಿ ಸರಿಯಾಗಿ ಮುದ್ದತಿಗೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಅವಧಿಗೆ ಕ್ರಮವಾಗಿ ಬಿಟ್ಟ ರಜಿಸ್ಟ್ರಿ ನೋಟೀಸು ಮೂಲಕ ತಿಳಿಸಿದಂತೆಯೂ ಕೆಲವು ವ್ಯಕ್ತಪಟ್ಟವರಾಗಿ ತಿರುಗಿಬಂದಿರುವುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ — ಸದರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸಲು ಬಡ್ಡಿ ರಜಿಸ್ಟ್ರಿ ನೋಟೀಸು ವಗೈರೆ ಖರ್ಚು ವ ಈ ನೋಟೀಸು ಖರ್ಚು ಸಹ ಕೂಡಿಸಿ ಇದೇ ಬರುವ ಜುಲಾಯಿ ತಿಂಗಳ ೪ರ ಒಳಗೆ ಸದರಿಯವರು ಖಾತ ವ್ಯಕ್ತಪಟ್ಟ ಸಾಲಗಾರರ ನ್ಯಾಯವಾದ ಹಕ್ಕುದಾರರು ಬೇಂಕಿಗೆ ತಂದು ಸಲ್ಲಿಸಿ ಅಡವಿಟ್ಟ ಸದರಿ ನಗಗಳನ್ನು ಬಿಡಿಸಿಕೊಂಡು ಹೋಗದೇ ಬಾಕಿಯುಳ್ಳಪಕ್ಷದಲ್ಲಿ ಅಡವಿಟ್ಟ ನಗಗಳನ್ನು ತಾ ೧೦-7-37ರಲ್ಲು ಮಧ್ಯಾಹ್ನ ಗಂಟೆ 2ಕ್ಕೆ ಯು ಅದರ ನ ಕ ಬೇಂಕಿನವರಿಗೆ ಯುಕ್ತತೋರುವ ಬೇರೆ ತಾರೀಕಿನಲ್ಲಿ ಪುನಹ ಯಾವ ತರದ ನೋಟೀಸು ವಗೈರೆ ಕೊಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು

S L 62 34 ದೇವಪ್ಪ ಗೌಡ ರಾಮಣ್ಣ ಗೌಡರ ಮಗ ಬಿಡ್ನೂರು ಪುತ್ತೂರು ಪೋಸ್ಟು ಅಸ್ಲು ರೂಪಾಯಿ 10

L 143/35 ನಾರಾಯಣ ರೈ, ಕೊರಗಪ್ಪ ರೈಗಳವ ಅಳಿಯ ಬೆಳ್ಳಿಪಾಡಿ ಅಡೂರು ಪೋಸ್ಟು ಅಸ್ಲು ರೂಪಾಯಿ 30

L 288/36 ಅಮ್ಮುಶೆಟ್ಟಿ ಉಮ್ಮಣ್ಣ ಶೆಟ್ಟಿ ಮೊ... ತನ್ನೀರುಪಂತ ಗ್ರಾಮ ಉಪ್ಪಿನಂಗಡಿ ಪೋಸ್ಟು ಅಸ್ಲು ರೂ 100

L 814/36 ಚೋಳಯಣ್ಣ ಯಾನೆ ಸಂಕಪ್ಪ ಗೌಡ ದೇರಣ್ಣಗೌಡರ ಮಗ ಶಿರಾಡಿ... ಗ್ರಾಮ ಸ...ಪೋಸ್ಟು, ಅಸ್ಲು ರೂಪಾಯಿ 25

Canara Bank Ltd)
Puttur 21 6 37)
M. Anantha Bhandary,
ಏಜಂಟ್

ನವರತ್ನಾ 'ಚ್ಯವನಪ್ರಾಶಾವ ಲೇಹ'

ಹಸಿವನ್ನು ತೀವ್ರಗೊಳಿಸಿ, ಪಚನಶಕ್ತಿಯನ್ನು ಹೆಚ್ಚಿಸಿ, ದೇಹದಾರ್ಢ್ಯ ವನ್ನುಂಟುಮಾಡಿ, ರಕ್ತವನ್ನು ಶೋಧಿಸಿ, ದೇಹಪೋಷಕ ಸಾರ ವನ್ನು ವರ್ಧಿಸಿ, ನವಚೈತನ್ಯವನ್ನೂ ಹುರುಪನ್ನೂ ಉಂಟು ಮಾಡುವ ಸರ್ವಸಾಮಾನ್ಯವಾದ ಬಲವರ್ಧಕ ಲೇಹ ವಿದು. ಕೆಮ್ಮು, ಖಾಸ ಶ್ವಾಸ, ಉಬ್ಬಸ, ಶೀತಾದಿಗಳ ಬಾಧೆ, ಇವುಗಳಿದ್ದವರಿಗೂ ಇದು ಉತ್ತಮವಾದ ಔಷಧ.

ರಾತಲು 1ಕ್ಕೆ ರೂ 2—6—0. ½ ರಾತಲು 1—4—0. ¼ ರಾತಲು 0-12-0.

ನವರತ್ನಾ 'ಬ್ರಹ್ಮೀ ತೈಲ' ನವರತ್ನಾ

(ಸುಗಂಧರಹಿತ)

ಇದನ್ನು ತಲೆಗೆ ಚೆನ್ನಾಗಿ ತಿಕ್ಕಿಕೊಳ್ಳುವುದರಿಂದ ಮಿದುಳಿನ ಮೇಲೆ ಶಮನಕಾರಿಯಾದ ಪರಿಣಾಮವನ್ನುಂಟುಮಾಡುವುದು. ಅದಲ್ಲದೆ ಇದರ ವಿಶಿಷ್ಟ ಕ್ರಿಯೆಯೊಂದರಿಂದ ಇದು ಅನೇಕ ಬಗೆಯ ಚರ್ಮವ್ಯಾಧಿಗಳ ಮೇಲೂ ಪರಿಣಾಮಕಾರಿಯೆನಿಸಿದೆ. ಫೈಲೇರಿಯಾ, ಎರಕದ ನೀರು ಇತ್ಯಾದಿಗಳ ಸಂಬಂಧವಾಗಿ ಬಾತುಕೊಳ್ಳುವ ಭಾಗಗಳ ಮೇಲೆ ಇದನ್ನು ಲೇಪಿಸುವದರಲ್ಲಿ ಉಪಕಾರಿಯಾಗಿದೆ. ತೈಲಾಭ್ಯಂಗಕ್ಕೂ ಒಳ್ಳೆದು.

ಕ್ರಯ 16 oz 3-0-0; 8 oz 1-10-0; 4 oz 0-14-0

ತಯಾರಿಸುವವರು:—

ನವರತ್ನಾ ಫಾರ್ಮೆಸಿ, ಕೊಚ್ಚಿನ್.

ನಮ್ಮ ಜಿಲ್ಲೆಯಲ್ಲಿ ಈ ಕೆಳಗಿನವರಲ್ಲಿ ಸಿಗುತ್ತದೆ:-

ಪಾಪುಲರ್ ಸ್ಟೋರ್ಸ್, ಮಂಗಳೂರು — ವಿ. ವಿ. ಶೆಣೈ ಕಾರ್ಕಳ.
ಕೆ. ಎಲ್. ಐತಾಳ, ಉಡುಪಿ — ಮೊಡರ್ನ್ ಫಾರ್ಮೆಸಿ, ಕುಂದಾಪುರ.
ಬಿ. ಜಿ ಬಂಡಾರಿ, ಪುತ್ತೂರು — ಕರ್ನಾಟಕ ಸ್ಟೋರ್ಸ್ ಬಾರಕೂರ,
ಡಾ। ರಾಮ ಗುರುಕುಲ ಬ್ರಹ್ಮಾವರ.

ಬೊಂಬಾಯಿ ಏಜಂಟರು:-CHAMSI NARSI & CO.,
Chemists Princess Street, BOMBAY

KANARA WATCH WORKS

WATCH MAKERS & GENERAL MERCHANTS,
Hampankatta MANGALORE

Dealers in — Watches, Clocks, Timepieces, Rolled Gold Jewellery & Sporting Materials etc.



Stockists of West End, Zenith Meridian, Swiss Watches of latest designs & tastes

Repairers — Watches, Clocks, Timepieces and Gramophones

Japan 8 Inch Octegon Rs 6 0 0
„ 8 „ Regulator „ 6 12 0
„ 10 „ Octegon „ 6 8 0
„ 10 „ Regulator „ 7 8 0

ಇವುಗಳು ಆಧುನಿಕ ಯಂತ್ರ ಸಾಮಾಗ್ರಿಗಳಿಂದ ತಯಾರಿಸಲ್ಪಟ್ಟು ಈಗಾಗಲೇ ಬೇಕಾದರಿಗೆ ಸದಾ ಸಿದ್ಧವಿರುವುವು.— ವಾಚು, ಗಡಿಯಾರ, ಗ್ರಾಮಾಫೋನು ರಿಪೇರಿಗಳನ್ನು ಗ್ರಾಹಕರ ಮೆಚ್ಚುಗೆಗೆ ಸರಿಯಾಗಿ ಕ್ಲಪ್ತಕಾಲಕ್ಕೆ ಒದಗಿಸಿ ಕೊಡುವೆವು

ಹೆಚ್ಚಿನ ಮಾಹಿತಿಗೆ ಒಮ್ಮೆ ಬಂದು ಪರೀಕ್ಷಿಸಿರಿ ಯಾ ಪತ್ರವ್ಯವಹಾರ ಮಾಡಿರಿ.

ಕೆನರಾ ವಾಚ್ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

DIAMONDS! DIAMONDS!
BEST BRILLIANCY

K. R. K. SHET,

Near Mission High School,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದು ಬರುವವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಿಶನ್ ಹೈಸ್ಕೂಲ್ ಬಳಿ ಮಂಗಳೂರು

ವಜ್ರಗಳು!
ಮುತ್ತುಗಳು!

ನಮ್ಮಲ್ಲಿ ಲೇಟೆಸ್ಟ ಕಟ್ಟಿನ, ಸುಪಿರಿಯರ ಟಿಂಟ್ಟಿನ ಕಲೆ ವಗ್ಯೆರೆ ಯಾವ ದೋಷಗಳೂ ಇಲ್ಲದ, ಅನೇಕ ವರ್ಷಗಳ ಅನುಭವಸ್ಥರಿಂದ ಆರಿಸಲ್ಪಟ್ಟ ಒಳ್ಳೇ ವಜ್ರಗಳು ನ್ಯಾಯವಾದ ಕ್ರಯಕ್ಕೆ ಸಿಗುತ್ತವೆ.

ಒಳ್ಳೇ ಕಲರಿನ, ಚಲೋ ಶೇಪಿನ, ಉತ್ತಮವಾದ ಜಾತಿ ಮುತ್ತುಗಳು ಎಲ್ಲಾ ಸೈಜುಗಳಲ್ಲಿಯೂ ಮಾಫಕ ಕ್ರಯಕ್ಕೆ ಯಾವಾಗಲೂ ಸಿಗುತ್ತವೆ

ಅನೇಕ ಶಿಫಾರಸ ಪತ್ರಗಳನ್ನು ಪಡೆದಿರುವ ಎಕ್ಸ್‌ಪರ್ಟ ಕೆಲಸಗಾರರಿಂದ, ಎಲ್ಲರ ಮನಸ್ಸನ್ನು ಆಕರ್ಷಿಸುವಂತೆ ಲೇಟೆಸ್ಟ ಫೆಶನಿನ ನಗಗಳನ್ನು ತಯಾರಿಸಿ ಕೊಡಲಾಗುವುದು.

ನಮ್ಮ ಶೋಪನ್ನು ಒಮ್ಮೆ ಸಂದರ್ಶಿಸಿದಲ್ಲಿ ನಿಮಗೆ ಖಾತ್ರಿಯಾಗುವುದು.

ಕೊಚ್ಚಿಕಾರ ವಾಸುದೇವ ಪೈ,
ಸರಾಫ ಮತ್ತು ಮೆಟಲ್ ಮರ್ಚೆಂಟ್ಸ್,
ಬಡಗುಪೇಟೆ, ಉಡುಪಿ.

ಪೈಂಟರ್ಸ್

P A I N T E R S

Whenever you require the service of *Please call on or write to:-*

Simon & Co.,
Painters,
Churchgate, Hampankatta No 13, MANGALORE

ಬಗೆಬಗೆಯ ಪೈಂಟಿಂಗ್ ಕೆಲಸಗಳನ್ನೂ ಸ್ಯಾನ್ ಬೋರ್ಡುಗ ಇತ್ಯಾದಿಗಳನ್ನೂ ನಮ್ಮಲ್ಲಿ ಮಾಡಿಸಿ ತೃಪ್ತಿಪಡಿರಿ

ಹೆಚ್ಚಿನ ಮಾಹಿತಿ ಒಗ್ಗೆ ಮೇಲಿನ ವಿಳಾಸಕ್ಕೆ ಸ್ವತಃ ಯಾ ಬರೆದು ತಿಳಕೊಳ್ಳಬಹುದು

ಈ ಸುಸಂದರ್ಭವನ್ನು ಕಳಕೊಳ್ಳಬೇಡಿರಿ

ಜಗತ್ಪ್ರಖ್ಯಾತ 'ಡಾಸನ್' ವಾಚುಗಳು ಕಮ್ಮಿ ಬೆಲೆಗೆ ಮಾರಾಟಕ್ಕಿವೆ. ಸ್ವಲ್ಪ ಅವಧಿಯ ವರೆಗೆ ಮಾತ್ರ 5 ವರ್ಷಗಳ ಅಖಂಡ ಗ್ಯಾರಂಟಿ ಒಂದು ವಾರದ ಪರೀಕ್ಷೆ ನಂತರ ತೃಪ್ತಿ ಕಾಣದಲ್ಲಿ ತಿರುಗಿ ಕಳುಹಿಸಿದರೆ ಹಣ ಪರತ್



ಶ್ರೇಷ್ಠ ನಮೂನೆ ಗಟ್ಟಿಯಾದ ಯಂತ್ರಸಾಮಗ್ರಿಗಳು ಸರಿಯಾದ ಸಮಯ ತೋರಿಸುವ ಗಡಿಯಾರಗಳು ಅತಿ ಕಮ್ಮಿ ಬೆಲೆಗಳು ಮೂರು ವರ್ಷದ ಗ್ಯಾರಂಟಿ 3 ವಾಚುಗಳನ್ನು ಒಂದೇ ಸಾರಿ ತರಿಸುವವರಿಗೆ ಸಿಲ್ವರ ಫಿನಿಶ್ ಡಿ ಫ್ರೀ ನಿಕ್ಕಲಿನ ಉರುಟು ವಾಚು 1ಕ್ಕೆ ರೂ 2-15-0 ಅದರಲ್ಲಿ ಉತ್ತಮವಾದದ್ದು 3-8-0 ಬಂಗಾರದ ಗಿಲೀಟಿದ್ದದಕ್ಕೆ ರೂ 4-8-0 ರೇಡಿಯಂ ರೂ 5 0 0 ನಿಕ್ಕಲಿನ ಆಯತಾಕಾರದಕ್ಕೆ 6-8-0 ಅದರಲ್ಲಿ ಬಂಗಾರದ ಗಿಲೀಟಿದ್ದುದಕ್ಕೆ 7-8-0 ಲಿವರ್ ಪಾಕೆಟ್ ವಾಚಿಗೆ ಬರೆ ರೂ 1-14-0 ಟೈಂಪೀಸ್ 1ಕ್ಕೆ ಬರೆ ರೂ 1-15-0 ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿಯೇ ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

M. L. Watch Co., 170, Cross Street CALCUTTA

Most Reliable New Model 1937.

GENUINE SWISS WATCHES OFFERED AT HALF PRICE
CHROMIUM CASE RECTANGULAR LEVER WRIST WATCH
No 16

Sale Rs 6-15-0.
SMART LEVER MOVEMENT
Strong & Durable at Low Price.



UNIQUE OPPORTUNITY ONLY FOR ONE MONTH
Available Roman or Arabic Figures
Plain Silver Dial

Guaranteed for 5 Years — Lever Pocket Watch Rs 1-15-9

No 12 Chromium 4 Jewels Rs 8-8-0
„ 14 „ 7 „ „ 10-8-0
„ 15 „ 15 „ „ 12-8-0
„ 17 Rolled Gold 15 „ „ 16-8-0

Rs. 1/- Extra for Radium Dial — Postage & Packing Extra.

BAPALAL & CO. (6) 116, Abdul Rehman Street, Bombay 3.

ಬೀಡಿ ಕೆಲಸಗಾರರಿಗೆ
ಪ್ರೊ|| ಎನ್. ಜಿ. ರಂಗರವರ ಭಾಷಣ.

ಪ್ರೊ|| ಎನ್. ಜಿ. ರಂಗ್ಗ, ಎಮ್. ಎಲ್. ಎ., ಅಧ್ಯಕ್ಷ, ಅಖಿಲ ಭಾರತ ರೈತರ ಸಂಘ,— ಇವರು ತಾ. ೧೭ನೇ ಗುರುವಾರ ಕಾಂಗ್ರೆಸ್ ಕಛೇರಿಯಲ್ಲಿ, ಮಂಗಳೂರು ಬೀಡಿ ಲೇಬರ್ ಯೂನಿಯನಿನ ಸದಸ್ಯರಿಗೆ ಮಾಡಿದ ಭಾಷಣದಲ್ಲಿ ಹೀಗೆಂದರು:—

ಗೆಳೆಯರೇ,

ಬೀಡಿ ಕೆಲಸಗಾರರಾದ ನಿಮ್ಮ ಸಂಘವೊಂದು ಸ್ಥಾಪಿಸಲ್ಪಟ್ಟಿದೆಯೆಂದು ತಿಳಿಯಲು ನಾನು ತುಂಬಾ ಸಂತೋಷಿಸುತ್ತೇನೆ. ನಿಮ್ಮ ಸಂಘವು ಸ್ಥಾಪನೆಯಾಗಿ ಆರು ತಿಂಗಳುಗಳು ಕಳೆಯದಿದ್ದರೂ, ನಿಮ್ಮೂರಿನ ಕೆಲಸಗಾರರ ಸಂಖ್ಯೆಯ ನಾಲ್ಕರಲ್ಲಿ ಒಂದಂಶ ಜನರು ಈ ಸಂಘಕ್ಕೆ ಸೇರಿರುವುದು ನಿಮ್ಮ ಸಂಘದ ಪ್ರಗತಿಯನ್ನು ಸೂಚಿಸುತ್ತದೆ ಇಂದು ನಿಮ್ಮ ಸ್ಥಿತಿಯನ್ನು ಯಂತ್ರಗಳುಳ್ಳ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವವರೊಡನೆ ಹೋಲಿಸಿದರೆ, ನೀವು ಎಷ್ಟೊಂದು ಹೀನ ಸ್ಥಿತಿಯಲ್ಲಿರುವಿರೆಂದು ವಿಶದವಾಗುತ್ತದೆ ಯಂತ್ರಗಳಿರುವ ಫ್ಯಾಕ್ಟರಿಗಳಲ್ಲಿ ಜನರನ್ನು ಒಂದು ದಿವಸದಲ್ಲಿ ೧೦ ಗಂಟೆಗಿಂತ ಹೆಚ್ಚು ಕೆಲಸ ಮಾಡಿಸಲು ಫ್ಯಾಕ್ಟರಿ ಅಧಿಕಾರಿಗಳಿಗೆ ಹಕ್ಕಿಲ್ಲ ಫ್ಯಾಕ್ಟರಿ ಆಕ್ಟಿನ ಪ್ರಕಾರ ಅವರು ಅನೇಕ ಸೌಲಭ್ಯತೆಗಳನ್ನು ಅನುಭವಿಸುತ್ತಾರೆ ಕೂಲಿಗಾರರಿಗೆ ಜುಲ್ಮಾನೆ ಮಾಡಿದ್ದಲ್ಲಿ ಆ ಬಗ್ಗೆ ಅಪೀಲು ಮಾಡುವ ಹಕ್ಕು ಕೂಲಿಗಾರರಿಗಿದೆ ಜುಲ್ಮಾನೆ ಹಣವು ಬಿಟ್ಟುಗೂಡಿಸಲ್ಪಟ್ಟು ಕೂಲಿಗಾರರ ಹಿತಕ್ಕಾಗಿಯೇ ಉಪಯೋಗಿಸಲ್ಪಡಬೇಕು ಹೆಂಗಸರಿಗೆ ಹೆರಿಗೆ ಕಾಲದಲ್ಲಿ ಸೌಲಭ್ಯತೆ ಇವೇ ಮೊದಲಾದ ಅನೇಕ ಉಪಯೋಗಗಳು ಕೂಲಿಗಾರರಿಗೆ ಅಂತಹ ಫ್ಯಾಕ್ಟರಿಗಳಲ್ಲಿ ಸಿಗುತ್ತವೆ ಆದರೆ ನಿಮಗೆ ಅಂತಹ ಯಾವ ಸೌಲಭ್ಯತೆಗಳೂ ಇಲ್ಲ ಕಾರಣ–ನಿಮ್ಮ ಕೆಲಸವು ಫ್ಯಾಕ್ಟರಿ ಆಕ್ಟಿನಲ್ಲಿ ಒಳಪಟ್ಟಿರುವುದಿಲ್ಲ ಇಂಗ್ಲೆಂಡಿನಲ್ಲಿ–ಕೂಲಿಗಾರರಿಗೆ ನಿರುದ್ಯೋಗ ವಿಮೆ,–ಅವರಿಗೆ ಕೆಲಸವನ್ನು ಹುಡುಕಿ ಕೊಡುವ ಸಂಸ್ಥೆ, ಪ್ರಾಯಸ್ಥರಾದಾಗ ಸುಮಾರು ೪೫ ರೂಪಾಯಿಯಷ್ಟು ತಿಂಗಳೊಂದರ ಪೆನ್ಶನ್, ಕೂಲಿಗಾರರ ಸಂಘಗಳನ್ನು ಸ್ಥಾಪಿಸಲು ಸ್ವಾತಂತ್ರ್ಯ, ಅವರದೇ ರಾಜಕೀಯ ಪಕ್ಷವನ್ನು ಸ್ಥಾಪಿಸಿ, ರಾಜಕೀಯ ನಿಧಿಗೆ ಧನಸಂಗ್ರಹ ಮಾಡುವಿಕೆ, ಮತ್ತು ಮುಷ್ಕರ ಕಾಲದಲ್ಲಿ ಪಿಕೆಟ್ ಮಾಡುವ ಸ್ವಾತಂತ್ರ್ಯ–ಇವೆಲ್ಲವೂ ಇವೆ ಆದರೆ ನಮ್ಮ ದೇಶದ ಕೂಲಿಗಾರರ ಮುಂದಾಳುಗಳು ಕೂಲಿಗಾರರನ್ನು ಒಟ್ಟುಗೂಡಿಸಿ, ಅವರ ಸಂಸ್ಥೆಗಳನ್ನು ಸ್ಥಾಪಿಸಲು ಎಡೆಯಿಲ್ಲ ಒಂದು ವೇಳೆ ಅವರು ಬಹಳ ಕಷ್ಟಪಟ್ಟು ಸ್ಥಾಪಿಸಿದ್ದಲ್ಲಿ ಅವರ ಮೇಲೆ ಇಲ್ಲಸಲ್ಲದ ಆರೋಪಣೆಗಳು ಹೊರಿಸಲ್ಪಡುತ್ತವೆ ಈ ದೇಶದ ಮತ್ತು ಬೇರೆ ದೇಶದ ಕೂಲಿಗಾರರಲ್ಲಿರುವ ವ್ಯತ್ಯಾಸವನ್ನು ನೀವೀಗ ಕಾಣಬಹುದು ನಮಗೆ ಇಂತಹ ಪರಿಸ್ಥಿತಿ ಬಂದೊದಗಲು ಕಾರಣವೇನು? ನಮಗೆ ಸ್ವಾತಂತ್ರ್ಯವಿಲ್ಲ ನಮಗೆ ಸ್ವಾತಂತ್ರ್ಯವು ಸಿಕ್ಕಿತೆನ್ನುವ, ಆದರೆ ನಮ್ಮ ಕಷ್ಟಗಳು ತೀರುವಂತಿಲ್ಲ ಬಿಳಿ ಜನರಿಂದ ಕಪ್ಪು ಜನರಿಗೆ ಅಧಿಕಾರ ಹೋದೊಡನೆ ನಿಮ್ಮ ಸ್ಥಿತಿಯು ಒಳ್ಳೇದಾಗಬಹುದೆಂದು ಭಾವಿಸಬೇಡಿ ನಿಮ್ಮ ಸ್ಥಿತಿಯು ಸುಧಾರಿಸಬೇಕಾದರೆ ನೀವು ನಿಮ್ಮದೇ ಸರಕಾರವನ್ನು ಸ್ಥಾಪಿಸಬೇಕು ಸರಕಾರವು ಕೂಲಿಗಾರರ ಕುರಿತು ಯಾವ ಅಭಿರುಚಿಯನ್ನೂ ತೆಗೆದುಕೊಳ್ಳುವುದಿಲ್ಲ ಕಾರಣ, ಕೂಲಿಗಾರರಿಗೆ ಸಹಾಯಮಾಡಿದ್ದಲ್ಲಿ ಅವರ ಏಜಂಟರ ಹಿತಸಂಬಂಧಗಳಿಗೆ ಧಕ್ಕೆ ಬರುವದು ಎಂದು ಸರಕಾರಕ್ಕೆ ತಿಳಿದೇ ಇದೆ ನಿಮ್ಮಂತೆಯೇ ಬೀಡಿ ಫ್ಯಾಕ್ಟರಿಯ ಮಾಲೀಕರಿಗೂ ಸಂಪೂರ್ಣ ಸ್ವಾತಂತ್ರ್ಯವಿಲ್ಲ ಪರದೇಶದ ಸಿಗರೇಟು ಚುಟ್ಟಾಗಳು ನಮ್ಮ ದೇಶಕ್ಕೆ ಹೇರಳವಾಗಿ ಬರುತ್ತವೆ ಇದು ಹೀಗೆಯೇ ನಡೆಯುತ್ತ ಬಂದರೆ ನಿಮ್ಮ ಮಾಲೀಕರ ಆರ್ಥಿಕ ಸ್ಥಿತಿಯು ಕೆಟ್ಟುಹೋಗುವುದಲ್ಲದೆ, ಅವರು ಸರಕಾರದ ಬಳಿಗೆ ರಕ್ಷಣೆಗಾಗಿ ಓಡುವರು ಪರಿಸ್ಥಿತಿಯು ಹೀಗೆಯೇ ನಡೆಯಲು ನೀವು ಬಿಡುವುದೇಕೆ? ನಿಮ್ಮ ಮಾಲೀಕರ ಸ್ಥಿತಿಯು ಅಂತಿರಲಿ ಅವರ ಸ್ಥಾನಕ್ಕೆ ಬೇರಾರಾದರೂ ಬಂದರೆ ನಿಮ್ಮ ಸ್ಥಿತಿಯು ವ್ಯತ್ಯಾಸವಾಗುವಂತಿಲ್ಲ ಆದುದರಿಂದ ಬ್ರಿಟಿಷರನ್ನು ಇಲ್ಲಿಂದ ಓಡಿಸಿದೊಡನೆಯೇ ನಮಗೆ ಸ್ವಾತಂತ್ರ್ಯ ಸಿಗುವುದೆಂದು ನೀವು ತಪ್ಪಭಿಪ್ರಾಯಪಡಬಾರದು ನಾವು 'ಭಾರತ ರಾಜ'ನ ಸ್ಥಾಪನೆಗೆ ಯತ್ನಿಸುವುದಲ್ಲದೆ, 'ಕೆಲಸಗಾರರ ರಾಜ' ಸ್ಥಾಪನೆಯಾಗುವಂತೆ ಯತ್ನಿಸುವಂತೆ ಯತ್ನಿಸಬೇಕು ನಮಗೆ ಸಿಗುವ ಸ್ವಾತಂತ್ರ್ಯವು ಕ್ಷಣಿಕವಾಗಿರಬಾರದು ಅದು ಶಾಸ್ವತವಾಗಿರಬೇಕು ಅಂತಹ ಸ್ವಾತಂತ್ರ್ಯವು ನಮಗೆ ಸಿಗಬೇಕಾದರೆ ನಾವು ಬ್ರಿಟಿಷರ ಏಜಂಟರಾಗಿರುವ ನಮ್ಮೂರ ಧನಿಕ ವರ್ಗವನ್ನು ಹೋಗಲಾಡಿಸಿ, ಶಕ್ತಿಯು ಕೂಲಿಗಾರರ ಸ್ವಾಧೀನವಾಗುವಂತೆ ಯತ್ನಿಸಬೇಕು ಆಗ ತಾನೇ ನಮಗೆ ಪ್ರಜಾಸತ್ತಾತ್ಮಕ ಸರಕಾರವು ಸಿಕ್ಕಿತೆನ್ನಬಹುದು ನಮ್ಮಲ್ಲಿ ನೂರರಲ್ಲಿ ೧೦ಕ್ಕಿಂತ ಮಿಕ್ಕ ಧನಿಕರಿಲ್ಲ, ಇವರ ಈಗಿನ ಸ್ಥಿತಿಯು ವ್ಯತ್ಯಾಸವಾದರೆ ಅದಕ್ಕೆ ಯಾರೂ ಬೇಸರಿಸಬೇಕಾಗಿಲ್ಲ. ಈಗ ನೂರರಲ್ಲಿ ೯೦ ಮಂದಿಯಂತ ಜನರು ಧನಿಕವರ್ಗದವರಿಂದ ಪೀಡಿಸಲ್ಪಡುತ್ತಿದ್ದಾರೆ. ಅದುದರಿಂದ ಅವರ ಅಧಃಪತನಕ್ಕಾಗಿ ಮರುಗಬೇಕಾದ ಆವಶ್ಯಕತೆಯೇ ಇಲ್ಲ

ಇವತ್ತು ಕೂಲಿಗಾರರ, ರೈತರ ಒಂದು ದೇಶವಿದೆ. ಅಲ್ಲಿ ನಿರುದ್ಯೋಗವಿಲ್ಲ ನಮ್ಮ ದೇಶದಲ್ಲಿ ಇಂದು ೫ ಕೋಟಿ ಜನರು ಬಳಲುತ್ತಿರುವಾಗ, ಅಲ್ಲಿ ಎಲ್ಲರೂ ಸುಖಶಾಂತಿಯಿಂದಿದ್ದಾರೆ ನಾವಿಲ್ಲಿ ಗ್ರಾಮ ಕೈಗಾರಿಕೆಗಳ ಕುರಿತು ಮಾತಾಡುವಾಗ ಅವರು ತಮ್ಮ ಸಂಘಶಕ್ತಿಯಿಂದ ಮಹತ್ತಾದ ಕೆಲಸಗಳನ್ನು ಮಾಡುತ್ತಿದ್ದಾರೆ ಬ್ರಿಟಿಷ ಸರಕಾರವು ನಮ್ಮ ದೇಶವನ್ನಾಳಲು ಪ್ರಾರಂಭವಾಗಿ ೧೫೦ ವರ್ಷಗಳು ಕಳೆದರೂ ನಮ್ಮಲ್ಲಿ ವಿದ್ಯಾವಂತರಿರುವುದು ನೂರರಲ್ಲಿ ೮ ಜನ ಮಾತ್ರ ಮೊದಲ ಅಲ್ಲಿ ನೂರರಲ್ಲಿ ಹತ್ತರಂತೆ ವಿದ್ಯಾವಂತರಿದ್ದರು ಈಗ ಆ ದೇಶದಲ್ಲಿ ಎಲ್ಲರೂ ವಿದ್ಯಾವಂತರೇ ಆ ದೇಶವು ಬೇರಾವುದೂ ಅಲ್ಲ ರಷ್ಯಾ ದೇಶ ಅಲ್ಲಿಯ ಜನರು ಝಾರನೆಂಬ ಕ್ರೂರ ಅರಸನ ನಿರಂಕುಶ ಪ್ರಭುತ್ವದ ದರ್ಪ, ದಬ್ಬಾಳಿಕೆಗಳನ್ನು ಸಹಿಸದೆ ಸಂಘಟಿತರಾಗಿ ದಂಗೆಯೆದ್ದರು ತಮ್ಮ ಸಂಘಶಕ್ತಿಯಿಂದ ಸಮಗ್ರ ಸಾಮ್ರಾಜ್ಯವನ್ನೇ ಕೆಲಸಗಾರರು ಸ್ವಾಧೀನಪಡಿಸಿಕೊಂಡು ಇವತ್ತು ಸುಖಸಮೃದ್ಧಿಯಿಂದ ಮೆರೆಯುತ್ತಿದ್ದಾರೆ ಆದುದರಿಂದ ನಿಮ್ಮಲ್ಲಿ ಪ್ರತಿಯೊಬ್ಬರೂ ನಿಮ್ಮ ಯೂನಿಯನಿನ ಸದಸ್ಯರ ಸಂಖ್ಯೆಯು ಹೆಚ್ಚುವಂತೆ ನಿಮ್ಮ ಶಕ್ತಿಯು ವರ್ಧಿಸುವಂತೆ ಪ್ರತಿಯೊಬ್ಬರನ್ನೂ ಸದಸ್ಯರನ್ನಾಗಿ ಮಾಡಬೇಕು ನಿಮ್ಮ ನಿರಕ್ಷರತೆಯನ್ನು ಹೋಗಲಾಡಿಸಬೇಕು. ನಿಮ್ಮ ಏಳಿಗೆಯನ್ನು ಬಯಸಬೇಕು ನಿಮ್ಮ ಉನ್ನತೆಯು ನಿಮ್ಮಿಂದಲೇ ಆಗಬೇಕು.

ಶ್ರೀ|| ರಂಗರಾವ್ ತಲಚೇರಿಕರರವರು ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಯೂನಿಯನಿನ ಕಾರ್ಯದರ್ಶಿಯರಾದ ಶ್ರೀ|| ಕೆ ಹೈದರ್‌ರವರು ಭಾಷಣಕರ್ತರಿಗೆ ಧನ್ಯವಾದಗಳನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು.

ಕರ್ಣಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ

ಕಾಂಗ್ರೆಸ ಸಭಾಸದರು.

ಕಾಂಗ್ರೆಸ ಸಭಾಸದರನ್ನು ಮಾಡುವ ಕಾರ್ಯವು ನಡೆದು ೩ ತಿಂಗಳುಗಳಾದವು ಆದರೂ ಪ್ರಾಂತ್ಯದಲ್ಲಿ ಎಷ್ಟು ಸಭಾಸದರಾಗಿದ್ದಾರೆ ಎಂಬುದು ತಿಳಿದಿಲ್ಲ ಕನಿಷ್ಟ ತಿಂಗಳಿಗೆ ಒಮ್ಮೆಯಾದರೂ ಈ ಕಾರ್ಯವು ಹೇಗೆ ನಡೆದಿದೆ ಎಂಬುದನ್ನು ಜನತೆಯ ಎದುರಿಗೆ ಇಡಬೇಕೆಂದು ನಿಶ್ಚಯಮಾಡಿದ್ದೇವೆ ಆದುದರಿಂದ ಇಲ್ಲಿಯ ವರೆಗೆ ಆದ ಕಾಂಗ್ರೆಸ್ ಕಮಿಟಿ ಸಭಾಸದರ ಸಂಖ್ಯೆಯನ್ನು ತಾಲೂಕವಾರ ಹಾಕಿ ಬರೆದು ನಮ್ಮ ಕಚೇರಿಗೆ ಕಳುಹಿಸಬೇಕು ನಾವು ಜುಲೈ ೧ನೇ ತಾರೀಕಿಗೆ ಈ ವಿಷಯವಾಗಿ ಮೊದಲನೇ ಪ್ರಕಟನೆಯನ್ನು ತೆಗೆಯುತ್ತೇವೆ

ಅದೇ ಪ್ರಕಾರ ಈಗಿನ ಮಂತ್ರಿಮಂಡಳದ ಮೇಲೆ ಅವಿಶ್ವಾಸದ ಗೊತ್ತುವಳಿಯನ್ನು ನಮ್ಮ ಜಿಲ್ಲೆಯ ಎಷ್ಟು ಹಳ್ಳಿಗಳಲ್ಲಿ ಪಾಸು ಮಾಡಿಸಿರುವಿರಿ ಯಾರು ಯಾರು ಜಿಲ್ಲೆಯಲ್ಲಿ ಸಂಚರಿಸಿದರು ಎಂಬ ಸಂಗತಿಗಳನ್ನು ತಿಳಿಸಬೇಕು ಮತ್ತು ನಿಮ್ಮ ಜಿಲ್ಲೆಯ ಎಷ್ಟು ಹಳ್ಳಿಗಳಲ್ಲಿ ರೈತಪರಿಷತ್ತಗಳು ಜರುಗಿದವು ಅದರ ವರದಿಯನ್ನು ಕಳಹಿಸಿಕೊಡಬೇಕು

ಈ ಎಲ್ಲಾ ವಿಷಯಗಳನ್ನು ಕುರಿತು ತಾವು ಅಖಿಲ ಭಾರತ ಕಾಂಗ್ರೆಸ ಕಮಿಟಿಗೆ ವರದಿಯನ್ನು ಕಳುಹಿಸಬೇಕಾಗಿದೆ ತಮ್ಮ

ರಾ ಶ್ರೀ ಹುಕ್ಕೇರಿಕರ,
ಗೌ ಕಾರ್ಯದರ್ಶಿ

ಧಾರವಾಡ ೧೫ ೬ ೩೭

ಜಾಪ್ಪಾದಲ್ಲಿ ೧೫ ಮಂದಿ ವಿದ್ಯಾರ್ಥಿಗಳನ್ನು ಸೆರೆಮನೆಗೆ ಕಳುಹಿಸಲಾಗಿದೆ ಎಪ್ರಿಲ್ ೧ನೇ ತಾರೀಕಿನ ದಿನ ನವರಾಜಶಾಸನ ವಿರೋಧ ಮೆರವಣಿಗೆಗಳಲ್ಲಿ ಭಾಗವಹಿಸಿದರೆಂಬುದೆ ಅವರ ಮೇಲಿನ ಆರೋಪ

೦ ೦ ೦

ಮೇ ದಿನಾಚರಣೆ ಎಂದು ಕರಪತ್ರಗಳನ್ನು ಹಂಚಿದರೆಂಬ ಆಪಾದನೆಯ ಮೇಲೆ ಜ್ಞಾನ್ಸಿಯ ಸೋಶಲಿಷ್ಟ ಮುಂದಾಳುಗಳಾದ ಶ್ರೀ ದುರ್ವತ್‌ರಾವ್ ಎಂಬವರನ್ನು ೩ ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಿರುವರು

೦ ೦ ೦

ರಂಗೂನ್ ಪ್ರಾಂತ್ಯದಲ್ಲಿ ಸರಕಾರದ ಬಹಿಷ್ಕಾರಕ್ಕೆ ಒಳಗಾಗಿದ್ದ ಸಂಸ್ಥೆಗಳಲ್ಲಿ ೧೧೭ ಸಂಸ್ಥೆಗಳನ್ನು ಆ ಬಹಿಷ್ಕಾರದಿಂದ ಮುಕ್ತಮಾಡಬೇಕೆಂದು ಬರ್ಮದ ಗವರ್ನರರು ನಿರ್ಧರಿಸಿರುವರು.

TEST YOUR EYES

By the Electro Ophthalmoscope





All Varieties of Frames & Lenses.

AT

The Mangalore Trading Association Ltd

Sight Testing Ophthalmic Opticians

Car Street, MANGALORE

ಶಾಸ್ತ್ರೀಯ ರೀತ್ಯಾ ತಯಾರಿಸಿದ ಬ್ರೆಡ್ಡ್ ವ ಬಿಸ್ಕಿಟುಗಳು ಬೇಕಾದರೆ

ಸಿಟಿ ಬಿಸ್ಕಿಟ್ ವರ್ಕ್ಸ್

ಸೋಮಯ್ಯ ಕರಣೀಕ ರಸ್ತೆ, ಹೂಮಾರ್ಕೆಟು ಮಂಗಳೂರು ಇಲ್ಲಿಗೆ ಬನ್ನಿರಿ

ಹಲವು ವರ್ಷಗಳ ಅನುಭವದಿಂದ ತಯಾರಾಗುವ ನಮ್ಮ ಯಾವತ್ತು ಬ್ರೆಡ್ಡು ವ ಬಿಸ್ಕಿಟುಗಳು ಎಲ್ಲರ ಮನಸೆಳೆಯುವಂತಿವೆ ರುಚಿಗೂ, ಆರೋಗ್ಯಕ್ಕೂ ಯೋಗ್ಯ ಮಕ್ಕಳು ಬಹಳ ಆನಂದದಿಂದ ಸವಿಯುವರು ನೀವೂ ಇಂದಿನಿಂದಲೇ ಉಪಯೋಗಿಸಿ ಖಾತ್ರಿಪಡಿಸಿರಿ

CITY BISCUIT WORKS,

Flower Market, South, Mangalore

ಮದನಕಾಮೇಶ್ವರಿ ಲೇಹ್ಯ

ಅತ್ಯಂತ ಬಲಕಾರಿ.

ಮೇಹರೋಗ, ಶರೀರ ದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರ ಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4 0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ ಎ. ಅಂಡ್ ಕೋ,
ಆಯುರ್ವೇದಿಕ ಸಮಾಜ ಪೆಂಡೇಪಿ
P O Peridepi (ನೆಲ್ಲೂರು ಡಿ)

'Dil Roz' (Regd)

Dil Roz' is a sure cure for [illegible] all kinds [illegible] skin eruptions, Pimples Eczema, Ringworm Sinus Fistula Axillary Abscess [illegible]

Price Rs 2
Postage extra

TAHIR DIN
Amritsar LAHORE

ಲೋಧ್ರ

ಸ್ತ್ರೀಯರ ಸಮಸ್ತವಾದ ರೋಗಗಳಿಗೂ ವ್ಯಾಧಿಗಳಿಗೂ ದಿವ್ಯೌಷಧ

ತಯಾರಿಸುವವರು:
ಕೇಸರಿ ಕುಟೀರಂ
ಎಗ್ಮೋರ್ ಮದ್ರಾಸು

ಮಂಗಳೂರು ಪ್ರವರ್ತಕರ
ದಿ ಪೊಪ್ಯುಲರ್ ಸ್ಟೋರ್ಸ್
ರಥಬೀದಿ, ಮಂಗಳೂರು

BEHAR CHEMICAL WORKS, BHAGALPUR.

ಗೊನೊಕ್ಯೂರು.

[illegible] ಔಷಧವು [illegible] ಒಂದೇ ದಿನದ ಔಷಧ ಉಪಯೋಗದಿಂದ ಗುಣ ಕಂಡು ಬರುವುದು ಸ್ವಲ್ಪ ದಿನದ ಉಪಯೋಗದಿಂದ ಪೂರ್ಣ ಗುಣವಾಗುವುದು

ಇದರ ಗುಣ—ಧಾತು ದಪ್ಪವಿದ್ದು [illegible] ಶಕ್ತಿಗ್ರಂಥಿಗಳ ಸಂಬಂಧವಾಗಿ [illegible] ಗೊನೊಕ್ಯೂರು ಖಾತ್ರಿಯಾದ ಔಷಧಿ ಸೀಸೆ 1ಕ್ಕೆ ರೂ 2—0—0

ವ್ಯಾಟ್ಯಾಲಿಟಿ ಪಿಲ್ಸ್

ವಿದ್ಯಾರ್ಥಿಗಳಿಗೂ [illegible] ಈ ಮಾತ್ರೆಗಳು [illegible] ಶಕ್ತಿಯನ್ನು ಕಳೆದುಕೊಂಡು ಇಂದ್ರಿಯ [illegible] ಈ ವ್ಯಾಟ್ಯಾಲಿಟಿ ಮಾತ್ರೆಗಳನ್ನು ಉಪಯೋಗಿಸಿದರೆ [illegible] ಸೀಸೆ 1ಕ್ಕೆ ರೂ 2-0-0

ಏಜೆಂಟರು.—ಷಾ ಕಂಪೆನಿ,
ಗವರ್ನಮೆಂಟ್ ಕಾಲೇಜ್ ಎದುರು.
ಮಂಗಳೂರು.

"An ideal young progressive Life Office of India to Insure with or represent"

The Commonwealth Assurance Co., LTD., POONA.

TRIENNIAL BONUS! TRIENNIAL BONUS!!

ON ENDOWMENT Rs. 37½. ON WHOLE LIFE Rs. 45.

Next VALUATION YEAR 1937-38.

Join the Agency force on most Liberal Terms, Apply to

Messrs. GAWANKAR & SONS,

Chief Agents for Mysore state, Coorg, Ceded Districts & S Kanara

AHMED BUILDINGS, CHICKPET, BANGALORE CITY.

Branches—Bombay, Calcutta, Delhi, Madras & Nagpur.

Local Representatives:—THE MODERN TRADING CO., Mangalore.

ಸೂತಿಕಾವಾಯು ಅಪಸ್ಮಾರ, 10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು, "ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ [illegible] ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ [illegible] ಹಿಸ್ಟಿರಿಯವನ್ನು ಭೂತ ಯಾ ಪ್ರೇತಬಾಧೆಯೆಂದು [illegible] ಇದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ ಬಡಬಡಿಕೆ [illegible] ತಲೆ, ಎದೆಬಿಗಿತ ಅಪಸ್ಮಾರ, ಹುಚ್ಚುತನ ಮೊದಲಾದ [illegible] 24 ತಾಸುಗಳಲ್ಲಿ ನಿಲ್ಲುವವು. [illegible] ಬಡಬಡಿಕೆ, ಅಪಸ್ಮಾರ, ಒದ್ದಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ ಮತ್ತು ರೋಗಿಯು [illegible] ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ 2-0-0 ಮತ್ತು 30 ದಿನಗಳ ಔಷಧಿಗೆ ರೂ. 5, ಪೋಸ್ಟೇಜು ಅಲಾಯಿದಾ

C. L. Namawala,
Palace Road, BARODA.

Buy Advertised Goods

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. P. ನಂಬ್ರ 126/1937.

1 ಸರಸ್ವತಿ ಅಮ್ಮ ಬೆಲ್ಲರಾಮಚಂದ್ರ ಭಟ್ರ ವಿಧವೆ. 2 ಕೃಷ್ಣ 8 ಲಕ್ಷ್ಮಿನಾರಾಯಣ ಸದ್ರಿ ರಾಮಚಂದ್ರಭಟ್ರ ಪ್ರಾಯನರ ಮಕ್ಕಳು ಕ್ಷೇಮಚಿಂತಕರು 1ನೇ ಅರ್ಜಿದಾರಳು ಕಾಸರಗೋಡು ತಾಲೂಕು ಪಡ್ರೆ–ಗ್ರಾಮ ಅರ್ಜಿದಾರರು.

1ನೇ ಅರ್ಜಿದಾರಳ ಗಂಡ ಮತ್ತು 2–8 ನೇ ಅರ್ಜಿದಾರರ ತಂದೆ ತಾರೀಕು 10-2-36 ರಲ್ಲಿ ಪಡ್ರೆ ಗ್ರಾಮದಲ್ಲಿ ಮೃತಪಟ್ಟ ಬೆಲ್ಲ ರಾಮಚಂದ್ರ ಭಟ್ರ ಅರ್ಜಿಯಲ್ಲಿ ವಿವರಿಸಿದ ಐವಜಿನ ಕುರಿತು ತನಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 6-7-87ರಲ್ಲಿ ಮೇಲ್ಕಂಡ ಕೋರ್ಟ ನಲ್ಲಿ ತನ್ನಿ ಬಗ್ಗೆ ಇಡೋಣಾಗಿಯದೆ.

ಕಾಸರಗೋಡು, 16- 6–37 — B, Amrita Rao, *Vakil for Pets.*

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. ನಂಬ್ರ 121/1937

ಬಿ ಪಾತುಮ್ಮ ಕೂಡಾ — ಅರ್ಜಿದಾರರು

ಮತ್ತು

ಐಸಮ್ಮ ಸಹಾ — ರೆಸ್‌ಪೊಂಡೆಂಟರು

ಇವರೊಳಗೆ

ಉದ್ಯಾವರ ಗ್ರಾಮದ ಪರೇಲರಾಗಿದ್ದ ಮೃತಪಟ್ಟ ಮೊಯಿದಿಂ ಕುಂಞಿಬ್ಯಾರಿಯು ಮಂಗಳೂರು ಸಿಟಿ ಕೆನರಾ ಬೇಂಕಿನಲ್ಲಿ ನಂಬ್ರ 646/1935ನೇ ಲೋನ್ ಮೇರೆಗೆ ಅಡವಿಟ್ಟ 1ನೇ ಅರ್ಜಿದಾರಳ ಬಾಬ್ತು ನಗಗಳನ್ನು ಬಿಡಿಸಿಕೊಳ್ಳುವರೆ ಅಳಯ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಅರ್ಜಿಯು ತಾರೀಕು 2-7-87ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟದೆ. ಆ ಕುರಿತು ಆಕ್ಷೇಪಿಸುವವರು ಅವರ ಆಕ್ಷೇಪವನ್ನು ಸದರೀ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಬಹುದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾಸರಗೋಡು, 16–6–73. — C. Rama Rao, ಅರ್ಜಿದಾರನ ಕಡೆ ವಕೀಲ್

ಮಳೆಗಾಲಕ್ಕೆ ಮಾತ್ರ!

ಗ್ಯಾರೆಂಟಿಯಾದ ಹೂವಿನ ಮತ್ತು ತರಕಾರಿ ಬೀಜಗಳು, ಕಸಿ ಹಣ್ಣಿನ ಗಿಡಗಳು ಮಾರಲ್ಪಡುತ್ತೆ. ಬೆಂಗಳೂರಿನಲ್ಲಿರುವ ಇಂಗ್ಲೀಷ್ ಮತ್ತು ನಾಟಿ ತರಕಾರಿಗಳು–ಹಣ್ಣುಗಳು–ಮಾರ್ಕೆಟ್ ರೇಟಿಗೆ ಸಪ್ಲೈ ಮಾಡಿ 1-0-0 ಒಂದಕ್ಕೆ 0-2-0 ಆಣೆ ಕಮಿಶನ್ ಪಡೆಯುತ್ತೇವೆ ರಸಪುರಿ ಮಾವಿನ ಹಣ್ಣುಗಳು 100ಕ್ಕೆ 2 – 8-0. ಅಡ್ವಾನ್ಸ್ ಇಲ್ಲದೆ ಆರ್ಡರ್ ಪಡಿಯಲಾಗದು

ವಿಳಾಸ —

The Royal Seed Co,
Floiists & Seedsmen, 27 llpaj Thope
ULSOOR, BANGALORE

HOUNSA



ಹಂಸಾ ಸ್ನೋ ಮತ್ತು ಬ್ರಿಲ್ಲಿಂಟ್ಯಾನ್,

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳಿಕಟ್ಟಾ ಬಜಾರ್, ಮಂಗಳೂರು

The Coronation of their Majesties is now over!
But Remember!

Comfortable ***Ideal*** ***Central***

The Coronation Darbar Restuarant

Boarding & Lodging

Opposite Govt, College, Hampankatta, Mangalore

A Home in the Motherland

Cleanliness and comfort at moderate cost

A delightful hotel in the centre of the town and nearest to the Rly Station & Bus Station

Gives best Refreshment & dinner service and modern preparations such as Biryani, Fowl Biryani, Pulav Khushka, Chops, Cutlets, Roast, Bheja, Khima, Tomato mutton, Roasted Fowl, Omlet, Sumbusa, etc, a speciality

Special lodging arrangements for travellers, Students will find all their food requirements

Please Step in Once and Convince Yourself

S B Mohidin, S. M Sayed Ali Saheb (Bhatkali) *Proprietors*

ಕೊರೊನೇಶನ್ ದರ್ಬಾರಿನ ಸುದಿನ ಸಂದರ್ಭದಲ್ಲಿ ನೂತನವಾಗಿ ತೆರೆಯಲ್ಪಟ್ಟಿರುವ

ಕೊರೊನೇಶನ್ ದರ್ಬಾರ್ ರೆಸ್ಟೋರೆಂಟ್

ಬೋರ್ಡಿಂಗ್ ಮತ್ತು ಲೊಜಿಂಗ್

ಗವರ್ನಮೆಂಟ್ ಕೊಲೇಜಿನ ಎದುರು, ಹಂಪನಕಟ್ಟ, ಮಂಗಳೂರು.

ಸೌಲಭ್ಯ ಸೌಕರ್ಯ ಸುಖದಾಯಕ

[illegible]

ಯಸ್. ಬಿ. ಮೊಹಿದಿನ್,
ಯಸ್. ಎಮ್. ಸಯ್ಯದ್ ಅಲಿ ಸಾಹೇಬ್, (ಭಟ್ಕಳ) — ವ್ಯವಸ್ಥಾಪಕರ

ಕನ್ನಡ ಸಾಹಿತ್ಯದಲ್ಲೊಂದು ನೂತನ ವಿಜ್ಞಾನ'. ನೈತಿಕ ದಿಗ್ದರ್ಶಕರಿಗೊಂದು ಅಮೂಲ್ಯ ಕೈಪಿಡಿ'

ಈ ತೆರನಾದ ಪುಸ್ತಕಗಳು ಜಗತ್ತಿನ ಪ್ರಮುಖ ಭಾಷೆಗಳೆಲ್ಲದರಲ್ಲೂ ಸಾವಿರಗಟ್ಟಲೆ ಇದ್ದಾಗ್ಯೂ

ಕನ್ನಡದಲ್ಲಿ ಇದೇ ಪ್ರಥಮ ಪುಸ್ತಕ

ಸಂಕ್ಷಿಪ್ತ ವಿಷಯಸೂಚಿ

ಜಿನೀವಾ ಅಂತರರಾಷ್ಟ್ರೀಯ ಸಮಿತಿಯವರು ಕಂಡುಹಿಡಿಯಲು ಯತ್ನಿಸುತ್ತಿರುವ ಜಗತ್ತಿನ ಪ್ರಥಮ ವ್ಯಾಪಾರವಾದ ಸ್ತ್ರೀಕಾಯಕ ವ್ಯಾಪಾರವು ಯಾಕೋಹಾಮು, ಟೋಕಿಯೋ, ಸಿಂಗಪುರ, ಪೋರ್ಟ್‌ಸೆಡ್, ದುಕಾವ್, ಜಿಭೂಟಿ ನಗರಗಳಲ್ಲೂ ಚೀನಾ, ರಷ್ಯಾ ದೇಶಗಳಲ್ಲೂ ಹೇಗೆ ನಡೆಯುತ್ತಿವೆ? ಅಲ್ಲಿನ ವೇಶ್ಯೆಯರುಹೇಗಿರುತ್ತಾರೆ? ಎಲ್ಲಿಂದ ಬರುತ್ತಾರೆ? ಅವರಿಗೆ ಕೊಡುವ ಶಿಕ್ಷಣವಾವುದು? ಅವರು ಹೇಗೆ ನಡೆದುಕೊಳ್ಳುತ್ತಾರೆ? ಅಲ್ಲಿನ ವಿಟರ ನಡವಳಿಗಳಾವುವು? ಅಲ್ಲಿನ ವೇಶ್ಯಾವಾಟಗಳು,ಅವರ ಮನೆಗಳು, ಅವರ ಒಲವು, ಒಯ್ಯಾರ, ಬಿನ್ನಾಣ, ಸೋಗು ಇವುಗಳ ಬಗೆಯಾವುದು? ವೇಶ್ಯಾವೃತ್ತಿಯಲ್ಲಿ ನಡೆಸುತ್ತಿರುವವರು ಯಾರು? ಜಪಾನಿನಲ್ಲಿನ ಸರಕಾರದವರು ಈ ವೃತ್ತಿಯನ್ನು ಹೇಗೆ ಸಹಕರಿಸುತ್ತಿದ್ದಾರೆ? ಅಲ್ಲಿನ ಪ್ರಜೆಗಳು ಈ ವೃತ್ತಿಯನ್ನು ಯಾಕೆ ಅಗತ್ಯವೆನ್ನುತ್ತಾರೆ?

ವೇಶ್ಯಾವೃತ್ತಿಗೆ ಹುಡುಗಿಯರನ್ನು ಸಾಗಿಸಿಕೊಂಡು ಬರುವುದು ಹೇಗೆ? ಚೀನಾದಲ್ಲಿ ದೋಣಿಗಳಮೇಲಿರುವ ವೇಶ್ಯಾಮಂದಿರಗಳು ಹೇಗೆ ನಡೆಯುತ್ತಿವೆ?

ರಷ್ಯಾದಲ್ಲಿ ಈ ವೃತ್ತಿಯು ಎಷ್ಟು ಘೋರವಾಗಿದೆ? ಇತ್ಯಾದಿ, ಇತ್ಯಾದಿ.

ಅನೇಕ ವೇಶ್ಯೆಯರ ಜೀವನಚರಿತ್ರೆಗಳನ್ನೊಳಗೊಂಡಿದೆ.

ಈ ಪುಸ್ತಕದಲ್ಲಿ ಉಲ್ಲೇಖಿತವಾಗಿರುವುದು ಕೇವಲ ವಾಸ್ತವಾಂಶಗಳು ಮಾತ್ರ ಮದುವಿನ ಕೆಲಸವಾದ ಊಹಾಪೋಹೆಗಳಿಗೆ ಎಳ್ಳಷ್ಟಾದರೂ ಎಡೆಗೊಟ್ಟಿಲ್ಲ.

ಮಾನವನ ನೈತಿಕಾಚರಣೆಯ ಉಚ್ಚನೀಚಗಳನ್ನು ವರ್ಣಿಸುವ ಈ ವಿಜ್ಞಾನಕ್ಕೊಂದು ಕೈಪಿಡಿಯು ಅವಶ್ಯಕವಾಗಿದ್ದಿತು.

ಈ ಪುಸ್ತಕವನ್ನು ಓದಬೇಕು! ಮನೋಲ್ಲಾಸವನ್ನು ಪಡೆಯಬೇಕು!

ಪಾಪಪೂರಿತ ಪಟ್ಟಣಗಳು

ಈ ಪುಸ್ತಕವು—

ಮಾನವ ಜೀವನದಲ್ಲಿ ಅಡಿಯಿಡುವವರಿಗೆ ಬೇಕು — ಜೀವನ ರಹಸ್ಯವನ್ನು ತಿಳಿಯುವವರಿಗೆ ಬೇಕು
ಸಂಸಾರ ನೌಕೆಯನ್ನು ನಡೆಸುವವರಿಗೆ ಬೇಕು — ಮಕ್ಕಳಿಗೆ ತಿಳಿವಳಿಕೆ ಹೇಳುವವರಿಗೆ ಬೇಕು
ಅವರಿಗೆ ಇವರಿಗೆ ಎನ್ನುವುದೇನು? — ಎಲ್ಲರಿಗೂ ಬೇಕು

ಜಗತ್ತಿನ ಅನಾದಿ ವ್ಯಾಪಾರಗಳಲ್ಲಿ ಮೊದಲನೆಯದಾದ ವ್ಯಾಪಾರವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯಲು ಕನ್ನಡದಲ್ಲಿ ಇರುವುದಿದೊಂದೇ ಸಾಧನ

*

ಉತ್ತಮವಾದ ಹೊಳಪು ಕಾಗದ; ೨೦೦ ಪುಟಗಳು.

ಬೆಲೆ ರೂ. ೧-೮-೦

(ಪೋಸ್ಟೇಜು ಅಲಾಹಿದಾ)

ಬೆಂಗಳೂರಿನ ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ ದೊರಕುವುದು ಮೈಸೂರಿನಲ್ಲಿ ಲ್ಯಾನ್ಸ್‌ಡೌನ್ ಬಜಾರ್ ಸ್ಟೀಟಾ ಮಾರ್ಟ್‌ನಲ್ಲಿ ದೊರಕುತ್ತದೆ

ಟಾಗೂರ್ ಅಂಡ್ ಕೋ. (ಬ್ರಾಂಚ್)

ಕೋಟೆ, ಬೆಂಗಳೂರು ಸಿಟಿ.

ನಿರುಪಮಾ ಸ್ನೋ

ಸ್ನೋಗಳಲ್ಲಿ ಶ್ರೇಷ್ಠವಾದುದು!

ಎಲ್ಲಾ ಕಾಲದ ಹವಾಗುಣಗಳಲ್ಲಿಯೂ

ಚರ್ಮವನ್ನು ಕಾಪಾಡುತ್ತದೆ.

ಉತ್ತಮ ಗುಣವುಳ್ಳದ್ದು! ಅತೀ ಕಮ್ಮಿ ದರ!

ಚರ್ಮವನ್ನು ಆರೋಗ್ಯವಾಗಿರಿಸಿ, ಬಿಸಿಲು ಗಾಳಿಗಳಿಂದ ಕಾಪಾಡಿ, ಮೃದುವಾಗಿಯೂ, ಸ್ವಚ್ಛವಾಗಿಯೂ ಇರಿಸುತ್ತದೆ.

ಹಾನಿಕರವಾದ ಪದಾರ್ಥಗಳು ಇದರಲ್ಲಿಲ್ಲವಾದುದರಿಂದ ಇದರ ದಿನನಿತ್ಯದ ಪ್ರಯೋಗವು ಚರ್ಮವನ್ನು ಶುಚಿಯಾಗಿಡುತ್ತದೆ.

ಇದರಿಂದ ನಿಮ್ಮ ಮುಖವನ್ನು ಸುಲಕ್ಷಣವಾಗಿರಿಸಿರಿ.

ಬಾಟ್ಲಿ ಒಂದರ ಬೆಲೆ: ಆಣೆ 8 ಮಾತ್ರ.

Manufactured by:—

J. B. Dutt & Co., Calcutta,

Sole agent:—

ಪೊಪ್ಯುಲರ್ ಸ್ಟೋರ್ಸ ಮಂಗಳೂರು.

ಡೋಂಗರೇ ಇವರ ಬಾಲಾಮೃತ

ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

ಡೋಂಗರ್‌ಕ್ಸ ಬಾಲಾಮೃತ

ಏನು ಅದೆ?

(೧) ಡೋಂಗರೇ ಇವರ ಬಾಲಾಮೃತವು ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುವ ಔಷಧವು.

(೨) ಡೋಂಗರೇ ಇವರ ಬಾಲಾಮೃತವು ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ ಮಕ್ಕಳಿಗೆ ಆರೋಗ್ಯವನ್ನು ಕೊಡುತ್ತದೆ.

(೩) ಡೋಂಗರೇ ಇವರ ಬಾಲಾಮೃತವು ಮಕ್ಕಳ ಎಲುವುಗಳು ಬೆಳೆಯುವುದಕ್ಕೆ ಬೇಕಾದ ವಸ್ತುಗಳನ್ನು ಪೂರೈಸುತ್ತದೆ.

(೪) ಡೋಂಗರೇ ಇವರ ಬಾಲಾಮೃತವು ಪಚನಶಕ್ತಿಗೆ ಸಹಾಯ ಮಾಡುತ್ತದೆ.

(೫) ಡೋಂಗರೇ ಇವರ ಬಾಲಾಮೃತವು ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸುತ್ತದೆ.

(೬) ಡೋಂಗರೇ ಇವರ ಬಾಲಾಮೃತವು ಮಧುರವಿರುವುದರಿಂದ ಮಕ್ಕಳು ಸಹ ಆನಂದದಿಂದ ಸೇವಿಸುತ್ತಾರೆ.

ಸಿಗುವ ಸ್ಥಳ:—

ಸಾ ಮತ್ತು ಕಂಪೆನಿ,

ಗವರ್ನಮೆಂಟ್ ಕಾಲೇಜಿನ ಎದುರು, ಮಂಗಳೂರು.

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ಕುರುಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

(ಬ್ರಿಟಿಷ್ ಇಂಡಿಯಾದಲ್ಲಿ ವ್ಯವಹಾರ ಸನ್ನದು ಹೊಂದಿದುದು.)

1.	ಅಧಿಕೃತ ಚಂದಾ ಪಾಲುಗಳು ಅರ್ಪಿಸಿದ ಮೂಲಧನ	ರೂ. 3,50,000—0—0
2.	ಚಂದಾ ಹಾಕಿ ಎತ್ತಿದ ಮೂಲಧನ	ರೂ. 2,88,950—0—0
3.	ಕ್ಷೇಮನಿಧಿಗಳು	ರೂ. 3,63,578—0—0

ವ್ಯವಹಾರದಲ್ಲಿದ್ದ ಜುಮ್ಲಾ ಮೊತ್ತವು ಅರ್ಧ ಕೋಟಿಗೂ ಮಿಕ್ಕಿಯದೆ.

ಹೆಡ್ ಆಫೀಸು—ಉಡುಪಿ.

ಶಾಖೆಗಳು-1. ಮದ್ರಾಸು; 2. ಬೆಲ್ಲಾರಿ; 3. ತಲಚೇರಿ; 4. ರಥಬೀದಿ, ಮಂಗಳೂರು; 5. ಬಂದ್ರ, ಮಂಗಳೂರು; 6. ಉಡುಪಿ; 7. ಶಿರ್ವ; 8. ಕುಂದಾಪುರ; 9. ಬೈಂದೂರು; 10. ಸಾಗರ; 11. ಶಿವಮೊಗ್ಗ; 12. ಸಕಲೇಶಪುರ; 13. ಮೈಸೂರು; 14. ಮಡಿಕೇರಿ; 15. ವೀರರಾಜೇಂದ್ರಪೇಟೆ; 16 ಸೇಲಂ

Member Reserve Bank of India

21—6—1937

V. R. Kamath, B.A. LL.B.
Manager.

Best Cheap Durable

Use only 515 Red 365 & 232 White bar soap & be satisfied.

They are the best and foremost in the Market.

They are the unique products of our Province.

Many have tried & found satisfied. Buy now and you will also be convinced.

Manufactured by:—

The West Coast Soap Factory

ನಮ್ಮ 515 ಕೆಂಪು 365 ಮತ್ತು 232 ಬಿಳಿ ಬಾರ್ ಸೋಪುಗಳು,

ಇಡೀ ದೇಶದಲ್ಲೆಲ್ಲಾ ಪ್ರಖ್ಯಾತಿಪಟ್ಟಿವೆ.

ಸಾವಿರಾರು ಜನರು ಅವುಗಳನ್ನು ಉಪಯೋಗಿಸಿ ಖಾತ್ರಿ ಪಡೆದಿರುವರು. ಅವುಗಳನ್ನು ಉಪಯೋಗಿಸುವುದೆಂದರೆ ನಮಗೆಲ್ಲರಿಗೂ ಒಂದು ಗೌರವ. ಅವುಗಳು ೩೦ ವರ್ಷಗಳ ಅನುಭವಸರಿಂದ ತಯಾರಿಸಲ್ಪಡುವುವು.

ಬಾಳುವಿಕೆಗೆ ಅತೀ ಉತ್ತಮವಾದುದು!
ಬೆಲೆಯಲ್ಲಿಯೂ ಅಧಿಕವಲ್ಲ.
ಇಂದೇ ಉಪಯೋಗಿಸಿ ಖಾತ್ರಿ ಪಡೆಯಿರಿ.

Sole Agents.

Panchmal Krishnaya Shenoy & Son,
Bunder, MANGALORE

ಗುಣಕಾರಿದಿದ್ದರೆ ಹಣ ವಾಪಾಸು!

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರೆ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟುಗುಡಿಕೆಯು ನೇಮದಂತೆ ಸುರುವಿರುವುದು, ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಬೇಕಾದರೆ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು:- ಡಾ॥ ಬಿ. ಎ. ವೈದ್ಯ ಎಲ್. ಸಿ. ಪಿ. ಎಸ್. ಕೊಲ್ಹಾಪೂರ [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ: ರೂ. ೪-೦-೦, ವಿ. ಪಿ. ಆಣೆ ೮.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S. M. C.

೧೮೭೬ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಗಳು

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಪದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ. ಬಾಟ್ಲಿ 1ಕ್ಕೆ ರೂ. 1—8—0.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್

ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ-ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕ ಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಗಾಂ ಮುಂಬಾಯಿ. 4. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ಹೊಸ ಮಾಲು ಇಂದೆ ಬಂದದ್ದು!



ಕಣನ್ ದೇವನ್ ಚಹಾ ಪೊಟ್ಟಣಗಳು!

ವ್ಯಾಪಾರಸ್ಥರಿಗೆ ಉತ್ತಮ ಸಂಧಿ.

Sole Agents:—

The Kerala Tea Syndicate,

PONANI—(S. Malabar.)

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 6% 1 Year 5% For 6 months 4% 3 & 2 months 3½%

Auction Chit Funds ranging from Rs 100—0—0 run regularly on systematic lines. Unique Banking facilities to Businessmen and interested Public.

Apply for paticulars— **K. R. GURU,** *Managing Director.*

೧ ರೂಪಾಯಿಗೆ ೫೦೦೦ ರೂಪಾಯಿಗಳನ್ನು ಪಡೆಯಬೇಕಾದರೆ,

ಮತ್ತು

೫೦೦೦ ರೂಪಾಯಿಗಳ ತನಕ ಉಚಿತ ಜೀವವಿಮೆ ಪಡೆಯಬೇಕಾದರೆ

ಹಿಂದೂಸ್ಥಾನ್ ಬಾಂಡ್

ನ್ನು ಕೊಂಡುಕೊಳ್ಳಿ.

ಪುನಃ ಪ್ರಿಮಿಯಂ ಕಟ್ಟಬೇಕಾಗಿಲ್ಲ; ಮತ್ತೆ ಪ್ರೀಮಿಯಂ ಕೇಳುವುದಿಲ್ಲ

ಎಲ್ಲಾ ಕಡೆಯಲ್ಲೂ ಏಜಂಟರು ಬೇಕಾಗಿದ್ದಾರೆ.

ಸಂಪೂರ್ಣ ವಿವರಗಳಿಗೆ (ಇಂಗ್ಲೀಷಿನಲ್ಲಿ) ಪತ್ರವ್ಯವಹಾರ ನಡೆಸಿರಿ.

ದಿ ಹಿಂದೂಸ್ಥಾನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ನಿಸ್ಬೆಟ್ ರೋಡ್, ಲಾಹೋರು.

Write for full particulars to:

M. S. V. Kamath,
BOLUR, MANGALORE.
Dist. Agent for SOUTH CANARA.

Dist. Agent for North Kanara:
Mr. **I. A. Shaik Khaji Mohalla,**
ANKOLA.